ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತ ರತ್ನಮಾಲಾ
ದ್ವಿತೀಯ ರತ್ನವು ೧೭/[illegible] ಸಂಚಿಕೆಯು

★

ಶ್ರೀಮನ್ನಿಗಮಾನ್ತ ಮಹಾದೇಶಿಕಪ್ರಣೀತ

# ಶ್ರೀಮದ್ರಹಸ್ಯತ್ರಯಸಾರೇ

## ಚರಮಶ್ಲೋಕಾಧಿಕಾರ ಏಕೋನತ್ರಿಂಶಃ

## ಪೂರ್ವಾರ್ಧವು

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್‌ಪೆಕ್ಟರು
ಸಿ. ಯಂ. ವಿಜಯರಾಘವಾಚಾರ್ಯರಿಂದ
ರಚಿಸಲ್ಪಟ್ಟ

**ಆಚಾರ್ಯ ಹೃದಯಾನ್ವೇಷಿಣೀ**

ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೂ
ಶ್ರುತಿ ಸ್ಮೃತೀತಿಹಾಸಪುರಾಣಾದಿ ಪ್ರಮಾಣಗಳೊಂದಿಗೆ ಉಪಪಾದನೆಯೂ

★

೧೯೫೫

ಕ್ರಯ ರೂ. ೩—೦—೦

UNIVERSAL
LIBRARY

OU_200951

UNIVERSAL
LIBRARY

OSMANIA UNIVERSITY LIBRARY

Call No K181.444 V69R Vol I. Accession No K4549

Author [illegible] C.M.

Title [illegible] 1955


This book should be returned on or before the date last marked below

ಶ್ರೀಯೈನಮಃ

ಶ್ರೀನಿವಾಸಾಯನಮಃ

ಶ್ರೀಮತೇ ರಾಮಾನುಜಾಯನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯನಮಃ



# ಶ್ರೀಮದ್ರಹಸ್ಯತ್ರಯಸಾರೇ

## ಚರಮಶ್ಲೋಕಾಧಿಕಾರ ಏಕೋನತ್ರಿಂಶಃ

---

**ಯ ಉಪನಿಷದಾಮನ್ತೇ ಯಸ್ಮಾದನಂತ ದಯಾಂಬುದೇಃ ।**
**ಸ್ಫುಟಿತ ಜನತಾಶೋಕಃ ಶ್ಲೋಕಸ್ಸ್ವಯಂ ಸಮಜಾಯತ ॥**

---

ಹಿಂದೆ ಪ್ರಪದನಾನುಷ್ಠಾನಪರವಾದ ಮನ್ತ್ರರತ್ನದಲ್ಲಿ ತೋರಿ ಬರುವ ಸಮಸ್ತಾರ್ಥಗಳನ್ನೂ ತಿಳಿಸಿ, ಅದರಲ್ಲಿ ಮುಖ್ಯವಾಗಿ ಶ್ರೀಯಃಪತಿಯೇ ಪ್ರಾಪಕನೂ ಮತ್ತು ಪ್ರಾಪ್ಯನೂ ಎಂಬರ್ಥವನ್ನು ಬಹುಸ್ವಾರಸ್ಯವಾಗಿ ಉಪಪಾದಿಸಿ ಹೇಳಿದರು. ಈ ಮೂರನೆಯ ರಹಸ್ಯವಲ್ಲಾದರೋ, ಅಂತಹ ಮನ್ತ್ರರತ್ನದಿಂದ ತನ್ನನ್ನು ಶರಣ ಹೊಂದು ಎಂದು ವಿಧಿಸಿ, ಅದರಿಂದುಂಟಾಗುವ ಫಲವನ್ನು ವಿಸ್ತರಿಸಿ ಹೇಳುವದರಿಂದ, ಪ್ರಥಮತಃ ಅಂತಹ ಹಿತೋಕ್ತಿಯನ್ನು ಪರಮಕೃಪಾವಾತ್ಸಲ್ಯೌದಾರ್ಯಾದಿಗಳಿಂದ ಉಪದೇಶಿಸಿದ ಲೀಲಾ ಸಾರಥಿಯಾದ ಶ್ರೀಕೃಷ್ಣಭಗವಾನ್ತರವನ್ನು ಸ್ತುತಿಸುವವರಾಗಿ, ಚರಮಶ್ಲೋಕವೆಂದು ಪ್ರಸಿದ್ಧಿಹೊಂದಿದ ವಾಕ್ಯನಲ್ಲಿ ಗರ್ಭಿತವಾದ ಸ್ವಾರಸ್ಯಾರ್ಥಗಳನ್ನೆಲ್ಲಾ ಪುನಃ ಪುನಃ ವಿಚಾರಮಾಡಿದವರಾಗಿ, **“ ವೇದೋತ್ತಂಸ ವಿಹಾರ ಸಾರಥಿಗಿರಾ ಗುಂಭೇನವಿಸ್ರಂಭಿತಃ ”** ಎಂಬಲ್ಲಿ ಹೇಳಿರುವ ಅವಸ್ಥೆಯನ್ನು ಹೊಂದಿದವರಾಗಿ “ **ಏಕಸ್ಸ್ವಾದು ನ ಭುಂಜೀತ** ” ಎಂಬ ನ್ಯಾಯಾನುಸಾರವಾಗಿ ಅದರಲ್ಲಡಗಿರುವ ವಿಶೇಷಾರ್ಥಗಳನ್ನೆಲ್ಲಾ ತಿಳಿಸಲು ಉದ್ಯುಕ್ತರಾಗಿ, ಅದರ ಸಾರಭೂತ ಸಙ್ಗ್ರಹಾರ್ಥವನ್ನು ಈ ಶ್ಲೋಕದ ಮೂಲಕ ಅನುಗ್ರಹಿಸಿರುತ್ತಾರೆ.

ಇದು "**ಗೀತಾಸೂಪ ನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ**" ಎಂದು ಪ್ರತಿಯೊಂದು ಅಧ್ಯಾಯಾಂತ್ಯದಲ್ಲೂ ಹೇಳಿರುವ ಹಾಗೆ, ಅವೋಘ ಗ್ರಂಥದ ಕೊನೆಯ ಶ್ಲೋಕವಾಗಿ ಚರಮಶ್ಲೋಕವೆಂದು ಕರೆಯಿಸಿಕೊಳ್ಳುತ್ತದೆ. ಅನೇಕ ರಹಸ್ಯಾರ್ಥಗಳು ಇದರಲ್ಲಿರುವದರಿಂದ ಇದು ವಿಶೇಷ ಮಾಹಾತ್ಮ್ಯಯುಳ್ಳದ್ದಾಗಿ ಪ್ರತಿದಿನವೂ ಸಂಧ್ಯಾವಂದನ ಕಾಲಗಳಲ್ಲಿ ಜಪಯೋಗ್ಯವಾದ ಮನ್ತ್ರವು.

ಆಗಲಿ, ಬೌದ್ಧಾವತಾರಿಯ ಉಪದೇಶದ ಹಾಗೆ, ಅರ್ಜುನನನ್ನು ಯುದ್ಧ ಪ್ರೋತ್ಸಾಹಕ್ಕಾಗಿ ವಂಚಿಸಿ ಹೇಳಿದಮಾತಲ್ಲವೇ? ಅಂತಹ ವಾಕ್ಯ ರಹಸ್ಯ ಹೇಗಾದೀತು? ಅದಕ್ಕೆ ಮಾಹಾತ್ಮ್ಯ ಹೇಗೆ? ಎಂದರೆ ಇಲ್ಲಿ ವಂಚಿಸಬೇಕಾದ ಪ್ರಕರಣವು ಈಷದಪಿ ಇಲ್ಲವು. ಅರ್ಜುನನು "ಕಾರ್ಪಣ್ಯದೋಷೋಪಹತಸ್ವಭಾವನಾಗಿ" "ಪೃಚ್ಛಾಮಿತ್ವಾಂ ಧರ್ಮಸಂಮೂಢಚೇತಾಃ" ಎಂದು ಹೇಳಿ, "ಯಚ್ಛ್ರೇಯಸ್ಸ್ಯಾತ್ ನಿಶ್ಚಿತಂ ಬ್ರೂಹಿ ತನ್ಮೇ ಶಿಷ್ಯಸ್ತೇಹಂ ಶಾಧಿಮಾಂ ತ್ವಾಂ ಪ್ರಪನ್ನಮ್" ಎಂದು ಶರಣಾಗತಿಯನ್ನನುಷ್ಠಿಸಿ ದೈನ್ಯದಿಂದ ಧರ್ಮವು ಯಾವುದು ಎಂದು ತಿಳಿಯದೆ ಶೋಕಾಕುಲನಾಗಿರುವ ಸಂದರ್ಭದಲ್ಲಿ, "**ಮಮಪ್ರಾಣಾಹಿ ಪಾಂಡವಾಃ**" ಎಂದು ಪ್ರತಿಜ್ಞೆ ಮಾಡಿರುವಾಗಲೂ ತನ್ನ ಪ್ರಿಯಭಕ್ತನನ್ನು ವಂಚಿಸುವನೇ? ಪರಮಕೃಪಾಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಿಗಳಿಂದ ಪ್ರೇರಿತನಾಗಿ ಭಗವಂತನು ಉಪದೇಶಿಸಿರುವದು ಪರಮಯಥಾರ್ಥವು, ಅದನ್ನು ಅರ್ಜುನನೇ ಒಪ್ಪಿಕೊಂಡಿರುತ್ತಾನೆ— "**ಸರ್ವಮೇತದೃತಂಮನ್ಯೇ**" (ಗೀ ೧೦, ೧೪) ಎಂಬಲ್ಲಿ, "**ಸರ್ವಗುಹ್ಯತಮಂ ಭೂಯಶ್ಶೃಣುಮೇ ಪರಮಂ ವಚಃ। ಇಷ್ಟೋಸಿಮೇ**" (ಗೀ ೮. ೬) ಎಂಬಲ್ಲೂ "**ಯ ಇದಂ ಪರಮಂಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ**" (ಅ. ೪) ಎಂಬಲ್ಲೂ ಹೇಳಿರುವ ಪರಮಗುಹ್ಯವಾದ ಉಪದೇಶವೆಂಬುದು ನಿಸ್ಸಂದೇಹವು

ಮೋಕ್ಷಪ್ರಾಪ್ತಿಗೆ ಹೇತುವಾದ ಸಾಧನಗಳು ಎರಡು (೧) ಉಪಾಸನರೂಪವಾದ ಭಕ್ತಿಯೋಗವು, ಇದಕ್ಕೆ ಅಧಿಕಾರಿಗಳು, ಶಕ್ತರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವೇ ಇದೇ ಸಾಧನನೆಂದು ೬೫ ನೆಯ ಶ್ಲೋಕದಲ್ಲಿ ಹೇಳಿ ಮುಗಿಸಿದರು ಆಗಲೂ ಕೂಡ ಅರ್ಜುನನು ತಾನು ಉಪಾಸನಕ್ಕೆ ಅಶಕ್ತನು ಎಂದು ಶೋಕಿಸುತ್ತಿರುವದನ್ನು ಕಂಡು ಕೃಪಾಸಾಗರನು ಎರಡನೆಯ ಸುಲಭೋಪಾಯವನ್ನು ಉಪದೇಶಿಸಿರುತ್ತಾನೆ (೨) ಇದು ಶರಣಾಗತಿಯು ಇದಕ್ಕೆ ಅಧಿಕಾರಿಗಳು ಸರ್ವರೂ, ಉಪಾಸನಕ್ಕೆ ಯೋಗ್ಯತೆಯಿಲ್ಲದ ಬ್ರಾಹ್ಮಣಾದಿಗಳೂ, ಸ್ತ್ರೀಯರೂ, ಶೂದ್ರರೂ, ಚಂಡಾಲರೂ, ಹೀಗೆ ಸರ್ವರೂ. ಇದು ಮುಂದಿನ ಶ್ಲೋಕವಾದ ೬೬ ರಲ್ಲಿ ಹೇಳಲ್ಪಟ್ಟಿತು ಆದುದರಿಂದ ೬೫, ೬೬ ನೆಯ ಶ್ಲೋಕಗಳಲ್ಲಿ ಕ್ರಮವಾಗಿ ಎರಡು ವಿಧ ಮೋಕ್ಷೋಪಾಯಗಳೂ ವಿಧಿಸಲ್ಪಟ್ಟವು.

ತಮಿಹ ವಿಧಿನಾ ಕೃಷ್ಣಂ ಧರ್ಮಂ ಪ್ರಪದ್ಯ ಸನಾತನಮ್ ।
ಶಮಿತ ದುರಿತಾ ಶ್ಯಬ್ಧ್ವಾತಜ್ಞತ್ವತ ಸ್ಸುಖ ಮಾಸ್ಮಹೇ ॥೬೮॥

ಹೀಗೆ ಅರ್ಜುನನಿಗೆ ಮೊದಲು ಉಪಾಸನರೂಪ ಭಕ್ತಿಯೋಗವನ್ನುಪದೇಶಿಸಿ ಅನಂತರ ಅವನು ತನಗೆ ಅದು ಸಾಧ್ಯವಿಲ್ಲವೆಂದು ಶೋಕಿಸಿದ ನಂತರ, ಸುಲಭೋಪಾಯವಾದ ಭರನ್ಯಾಸವನ್ನು ಉಪದೇಶಿಸಿದ ತೆರದಿ, ಶ್ರೀಕೃಷ್ಣಭಗವಾನರವರು ಉದ್ಧವರಿಗೂ ಉಪದೇಶಮಾಡಿರುತ್ತಾರೆ ಇದನ್ನು ಏಕಾದಶಸ್ಕಂಧ ಭಾಗವತದಲ್ಲಿ ಕಾಣಬಹುದು ಇಲ್ಲಿಯು ಹಾಗೆಯೆ ಅಲ್ಲೂ ಪ್ರಥಮತಃ ಕರ್ಮಯೋಗಸಹಕೃತವಾದ ಭಕ್ತಿಯೋಗವೇ ಉಪಾಯವಾದರೆ, ಹೀಗೆ ಮೋಕ್ಷವನ್ನು ಹೊಂದತಕ್ಕವರು ಅತಿ ವಿರಳರು ಶ್ರೀಕೃಷ್ಣನು ಅಕಾರಣದಿಂದ ಕರುಣಾಸಾಗರನು ಹೇಗೆ? ಎಂದು ಚಿನ್ತಿಸುತ್ತಿರುವಾಗ, ಶ್ರೀಕೃಷ್ಣಭಗವಾನರವರು ಉದ್ಧವರನ್ನು ಕುರಿತು "**ಅಥ ತತ್ಪರಮಂಗುಹ್ಯಂ ಶೃಣುಮೇ ಯದುನಂದನ । ಸುಗೋಪ್ಯಮಪಿವಕ್ಷ್ಯಾಮಿ ತ್ವಂಮೇ ಭೃತ್ಯಸ್ಸುಹೃತ್ಸಖಾ**" ಓ ಉದ್ಧವರೇ ನೀವು ನನ್ನ ಭೃತ್ಯರಾಗಿಯೂ ಸುಹೃತ್ತಾಗಿಯೂ ಸಖರಾಗಿಯೂ ಇರುವದರಿಂದ, ಪರಮರಹಸ್ಯವಾದ ಉಪದೇಶವಾದರೂ, ಹೇಳುತ್ತೇನೆ ಕೇಳು ಎಂದು ಶರಣಾಗತಿಶಾಸ್ತ್ರವನ್ನು ಲಘುವಾದ ಮಾರ್ಗವಾಗಿ ಸರ್ವಾಧಿಕಾರವುಳ್ಳದಾದುದರಿಂದ ಉಪದೇಶಿಸಿರುತ್ತಾರೆ ಮಹಾಭಾಗವತಶ್ರೇಷ್ಠನನ್ನಾಶ್ರಯಿಸಿ ತನ್ಮೂಲಕ ಶರಣಾಗತಿಯನ್ನನುಷ್ಠಿಸುವದೇ ಪರಮಗುಹ್ಯವಾದ ಉಪಾಯವು ಇದಕ್ಕೆ ಅಧಿಕಾರಿಗಳು ಯಾರು ಎಂದರೆ **ವೈಶ್ಯಾ ಶೂದ್ರಾ ಸ್ತ್ರಿಯೋಽನ್ತ್ಯಜಾಃ** ಎಂದು ಹೇಳಿ, ಇಂತಹ ಅನೇಕರು ಮೋಕ್ಷಹೊಂದಿರುತ್ತಾರೆಂದು ಅವರುಗಳ ಹೆಸರುಗಳನ್ನೆಲ್ಲಾ ತಿಳಿಸಿರುತ್ತಾರೆ ಈ ಚರಮಶ್ಲೋಕಾರ್ಥವನ್ನೇ ಅಲ್ಲಿಯೂ ಅನುವಾದ ಮಾಡಿ ಹೇಳಿರುತ್ತಾರೆ, ಹೇಗೆಂದರೆ — "**ತಸ್ಮಾತ್ತ್ವಮುದ್ಧವೋಽತ್ಸೃಜ್ಯ ಚೋದನಾಂ ಪ್ರತಿಚೋದನಾಂ**" ಎಂದಾರಂಭಿಸಿ "**ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ । ಯಾಹಿ ಸರ್ವಾತ್ಮಭಾವೇನ ಯಾಸ್ಯಸಿಹ್ಯಕುತೋಽಭಯಮ್**" ಎಂದು ಹೀಗೆ ಎರಡಕ್ಕೂ ಐಕಂರ್ಥ್ಯವಿರುತ್ತದೆ ಆದುದರಿಂದ ಈ ಚರಮಶ್ಲೋಕವು ಪರಮರಹಸ್ಯವು, ಅಶಕ್ತರಾದ ಸರ್ವರಿಗೂ ವಿಧಿಸಿದ ಲಘೂಪಾಯವಾಗಿರುತ್ತದೆ (ಭಾಗ ೧೧, ೧೨, ೧೪, ೧೫)

**ಅರ್ಥವು**—ಯಃ-ಯಾವ ಪ್ರಸಿದ್ಧನಾದ ಶ್ರೀಮನ್ನಾರಾಯಣನು, **ಉಪನಿಷದಾಮನ್ತೇ**–ಉಪನಿಷತ್ತುಗಳ ಸಮೀಪದಲ್ಲಿ ಎಂದರೆ ಉಪನಿಷತ್ತುಗಳಲ್ಲಿ, **ವರ್ತತೇ**–**ಇರುವನೋ ಎಂದರೆ** ಪ್ರತಿಪಾದ್ಯನೋ ಎಂದು **ಇಟ್ಟುಕೊಳ್ಳಬೇಕು,** ಉಪನಿಷತು

ಗಳಲ್ಲಿ ಪರಮಪುರುಷನ ಉಪಬ್ರಹ್ಮಣವಿರುವದೇನೋ ಸತ್ಯವು, ಶ್ರೀಕೃಷ್ಣನೇ ಪರಮ ಪುರುಷನೆಂಬುದು ಎಲ್ಲಿ ಹೇಳಲ್ಪಟ್ಟಿರುತ್ತದೆ? ಎಂದರೆ "**ಬ್ರಹ್ಮಣ್ಯೋ ದೇವಕೀ ಪುತ್ರೋ ಬ್ರಹ್ಮಣ್ಯೋ ಮಧುಸೂದನೋಮ್**" ಎಂದು ನಾರಾಯಣೋಪ ನಿಷತ್ತಿನಲ್ಲಿ ಹೇಳಲ್ಪಟ್ಟಿರುತ್ತದೆ ಋಗ್ವೇದದಲ್ಲೂ ರಾಮಕೃಷ್ಣಾವತಾರಗಳ ವಿಷಯ ವಿರುತ್ತದ, **ಯಸ್ಮಾತ್**-ಯಾವ ಪ್ರಸಿದ್ಧನಾದ. **ಅನಂತದಯಾಂಬುಧೇಃ**-ಅಪಾರದಯಾಸಾಗರನಾದ ಶ್ರೀಕೃಷ್ಣಭಗವಾನನಿಂದ, **ತ್ರುಟಿತಜನತಾಶೋಕಃ**-ಕತ್ತರಿಸಲ್ಪಟ್ಟ ಎಂದರೆ ಹೋಗಲಾಡಿಸಲ್ಪಟ್ಟ, ಪ್ರಪನ್ನರಾಗಬೇಕೆಂಬ ಜನಸಮೂಹದ ಶೋಕವುಳ್ಳ **ಶ್ಲೋಕಃ**-ಕರುಣಾರಸಪ್ರವಾಹದಿಂದ ಉತ್ಪನ್ನವಾದ ಈ ಗೀತಾ ಚರಮ ಶ್ಲೋಕವು, **ಸ್ವಯಂ**-ತಾನಾಗಿಯೇ ಉಂಟಾಯಿತೋ, ಪರಮಪುರುಷನ ಕೃಪೆಯೇ ಈ ಚರಮಶ್ಲೋಕರೂಪದಲ್ಲಿ ಉದ್ಭವಿಸಿತು ಎಂಬ ತಾತ್ಪರ್ಯವು, **ತಂ**-ಅಂತಹ ಉಪ ನಿಷತ್ಪ್ರತಿಪಾದ್ಯನಾಗಿಯೂ, ಕರುಣಾಪೂರಿತನಾಗರನೂ ಆದ, "**ಕೃಷ್ಣಂ ಧರ್ಮಂ ಸನಾತನಂ**" ಎಂಬಲ್ಲಿ ಹೇಳಿರುವ ಹಾಗೆ, **ವೇದವಿತ್ತು**ಗಳೂ ಅಧ್ಯಾತ್ಮಶಾಸ್ತ್ರಜ್ಞರೂ, ಅನಾದಿಯಾಗಿ, ಯಜ್ಞರೂಪಿಯಾಗಿ ಧರ್ಮೋಪಾಯನಾಗಿರುವ ಶ್ರೀಕೃಷ್ಣನನ್ನೇ **ವಿಧಿನಾ**- ಚರಮಶ್ಲೋಕದಲ್ಲಿರುವ '**ಶರಣಂವ್ರಜ**" ಎಂಬ ವಿಧಿವಾಕ್ಯದಿಂದ, ಅಥವಾ **ವಿಧಿನಾ** – ನನ್ನ ಸಂಕೃತಪಿತೇಷದಿಂದ, ಅಥವಾ **ವಿಧಿನಾ** – ಹೇಗೆ ಪ್ರಪದನವನ್ನು ಅನುಷ್ಠಿಸಬೇಕೋ ಅಂತಹ ವಿಧಿ ಮೂಲಕವಾಗಿ, **ಪ್ರಪದ್ಯ** - ಗುರುವಿನ ಜೀನ, **ಅವರು** ಹೇಳಿಕೊಟ್ಟ **ದ್ವಯ** ಮಂತ್ರವನ್ನು ಉಚ್ಚರಿಸಿ, ದಂಡವತ್ಪ್ರಣಾಮಪೂರ್ವಕ ಶರಣಾಗತಿಯನ್ನನುಷ್ಠಿಸಿ, **ಶಮಿತಪರಿತಾಃ** - ಹೋಗಲ್ಪಟ್ಟ ಪಾಪಗಳನ್ನುಳ್ಳವ ರಾಗಿಯೂ, **ಶಂಕಾತಂಕತ್ಯಜಃ** - ಫಲಸಿದ್ಧಿಯಾಗುತ್ತದೋ ಇಲ್ಲವೋ ಎಂಬ ಸಂದೇಹವನ್ನೂ, ನರಕಾದಿಪ್ರಾಪ್ತಿ ಪುನಸ್ಸಂಸಾರ ಮೊದಲಾದ ಭೀತಿಯನ್ನೂ, ತ್ಯಜಿಸಿ ದವರಾಗಿ, **ಸುಖಿನಸ್ಸ್ಮಹೇ**-ನಿರತಿಶಯಸುಖವನ್ನು ಹೊಂದುವೆವು, **ನಿರ್ಭರೋ ನಿರ್ಭಯೋಽಸ್ಮಿ** - ಎಂಬಲ್ಲಿ ಹೇಳಿರುವ ಹಾಗೆ ಇದ್ದುಕೊಂಡು ದೇಹಾವಸಾನಾನಂತರ ಸಂಪೂರ್ಣ ಬ್ರಹ್ಮಾನುಭವಾನಂದವನ್ನು ಹೊಂದುವೆವು

**ತಾತ್ಪರ್ಯ**—ತಾವು ಮುಂದೆ ಉಪಪಾದಿಸಿ ಹೇಳುವದು ಲೀಲಾಸಾರಥಿಯ **ದಿವ್ಯಸೂಕ್ತಿಗಳ** ನಿಗಮನವಾಗಿ ವಿಶೇಷಾರ್ಥಗರ್ಭಿತವಾದ ಮಂತ್ರರಹಸ್ಯವಾಗಿ, ಅಂತಹಸೂಕ್ತಿಯನ್ನು ಒಂದು ಮಂಗಳ ಶ್ಲೋಕದ ಮೂಲಕ ಕೊಂಡಾಡುವದು ಆವಶ್ಯಕವಾಗಿ, ಈ ಮಂಗಳ ಶ್ಲೋಕವನ್ನು ಅನುಗ್ರಹಿಸಿರುತ್ತಾರೆ. ಈ ಚರಮ ಶ್ಲೋಕವು ತುಂಬಾ ಪ್ರಸಿದ್ಧವಾದ ಮಹಾತ್ಮ್ಯೆಯುಳ್ಳದೆಂದು ತೋರಿಸುವದಕ್ಕಾ ಗಿಯೂ, ಅದನ್ನು ಅನುಗ್ರಹಿಸಿದವನು ಅಂತಹ ಮಹಾತ್ಮ್ಯೆಯುಳ್ಳವನೆಂದೂ ತಿಳಿಸು ವದಕ್ಕಾಗಿಯೂ, "**ಯ ಉಪನಿಷದಾಮುನ್ತೇ**" ಎಂಬ ಪ್ರಯೋಗವು." **ವೇದೋ**

ತ್ತಂಸವಿಹಾರ ಸಾರಥಿಯು" ಯಾರೋ, ಅವನು ಅಂತಹ ಪರಮಪುರುಷನು, ವೇದಾಂತಗಳಲ್ಲೆಲ್ಲಾ ಕೊಂಡಾಡಲ್ಪಟ್ಟವನ ದಿವ್ಯಸೂಕ್ತಿಯು. ಹೀಗೆ ಉಪನಿಷತ್ತುಗಳ ಆದಿ, ಮಧ್ಯ, ಅಂತ್ಯಗಳಲ್ಲೆಲ್ಲಾ ಕೊಂಡಾಡಲ್ಪಟ್ಟಿರುವಾಗ **ಅನ್ತೇ** ಎಂದು ಮಾತ್ರ ಹೇಳಲು ಕಾರಣವೇನು? ಆರಂಭದಲ್ಲಿ ಉಪಕ್ರಮಿಸಲ್ಪಟ್ಟಿದ್ದುದು ಉಪಸಂಹಾರದಲ್ಲಿ ಸ್ಥಾಪಿಸಲ್ಪಡುವದರಿಂದ ಹಾಗೆ ಪ್ರಯೋಗವು. ಅಥವಾ **ಅನ್ತೇ** ಎಂದರೆ **ಸಮೀಪೇ** ಎಂಬರ್ಥವು. ಅನ್ತೇ ಎಂದರೆ ಕೊನೆಯಲ್ಲಿ ಎಂದಾಗಲಿ ಅರ್ಥವಾಗಬಹುದು. **ಗೀತೆಯು** ಉಪನಿಷತ್ತುಗಳ ಸಾರಭೂತಾರ್ಥವನ್ನೇ ಉಪದೇಶಿಸುವದರಿಂದ ಉಪನಿಷತ್ತೆಂದೇ ಭಾವಿಸಲ್ಪಟ್ಟಿರುತ್ತದೆ. "**ಶ್ರೀಮದ್ಗೀತಾಸೂಪನಿಷತ್ಸು**" ಇಂತಹ **ಉಪನಿಷತ್ತಿನ** ಅನ್ತೇ ಕೊನೆಯಲ್ಲಿ ಈ ಚರಮಶ್ಲೋಕದಲ್ಲಿ ಸರ್ವೇಶ್ವರನು, ಕರುಣಾಸಾಗರನ ಬಳಿ ನಿನ್ನ ಕೃತ್ಯವು ಕಾಣಿಸುವುದೆಂಬುದಕ್ಕಾಗಿ **ಅನ್ತೇ** ಎಂಬ ಪ್ರಯೋಗವು. ಅದೂ ಅಲ್ಲದೆ ಉಪನಿಷತ್ತುಗಳ ಅಂತ್ಯದಲ್ಲೇ, ಶರಣಾಗತಿಯನ್ನು ಕೊಡುವ **ಉಪಾಯ**ವಾದ ನ್ಯಾಸದ ಫಲವಿದೆಯೆಂಬುದರ ಸೂಚನೆಗಾಗಿ ಅನ್ತೇ ಎಂಬ ಪ್ರಯೋಗವು. ಛಾಂದೋಗ್ಯದ ಅನ್ತ್ಯದಲ್ಲಿ "**ಸಖಲ್ವೇವಂ ವರ್ತಯನ್ ಯಾವದಾಯುಷಂ ನಚಪುನರಾವರ್ತತೇ**" ಎಂದೂ ತೈತ್ತಿರೀಯ ನಾರಾಯಣೀಯಾಂತ್ಯದಲ್ಲೂ "**ತಸ್ಮಾನ್ನ್ಯಾಸಮೇಷಾಂ ತಪಸಾ ಮತಿರಿಕ್ತಮಾಹುಃ**" ಎಂದು ನ್ಯಾಸವು ಸರ್ವೋತ್ಕೃಷ್ಟವಾದ ಉಪಾಯವೆಂದು ಹೇಳಿ, ಓಂ ಇತ್ಯಾತ್ಮಾನಂಯುಂಜೀತ" ಎಂದು ವಿಧಿಸಿ ಅದರ ಫಲವಾಗಿ 'ತಸ್ಯೈವಂ ವಿದುಷೋ ಮಹಿಮಾನ ಮಾಪ್ನೋತಿ" ಎಂದು ಅನ್ತ್ಯದಲ್ಲಿ ಹೇಳಲ್ಪಟ್ಟಿರುತ್ತದೆ. ಹಾಗೆಯೇ ಶ್ವೇತಾಶ್ವತರದಲ್ಲೂ '**ತಮೇವಂ ವಿದಿತ್ವಾತಿಮೃತ್ಯುಮೇತಿ, ನಾನ್ಯಃ ಪನ್ಥಾವಿದ್ಯತೇ ಽಯನಾಯ**" ಎಂದು ಹೇಳಲ್ಪಟ್ಟಿರುತ್ತದೆ. ವಿದಿತ್ವಾ ಎಂಬುದು ಎರಡು ಉಪಾಯಗಳಿಗೂ ಅನ್ವಯಿಸುತ್ತದೆ. ಅಲ್ಲಲ್ಲಿ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಗಳು ಹೇಳಿರುವ ಹಾಗೆ, ಈ ಗೀತೋಪನಿಷತ್ತಿನ ಕೊನೆಯಲ್ಲಿಯೂ ಅನಿಷ್ಟನಿವೃತ್ತಿಯೂ ಇಷ್ಟಪ್ರಾಪ್ತಿಯೂ ಈ ಚರಮಶ್ಲೋಕದಲ್ಲಿ ಬೋಧಿತವು. ಆದರೆ ಪಂಚ ವ್ಯಾಖ್ಯಾತೃಗಳೂ ಅನ್ತೇ ಎಂದರೆ ಸಮೀಪವೆಂದೇ ಅರ್ಥಮಾಡಿರುವದರಿಂದ ಅದೇ ನಮಗೆ ಪರಮಗ್ರಾಹ್ಯವು.

**ಅನಂತದಯಾಂಬುಧೇಃ** — ಅಂಬುಧಿಯು ಸಮುದ್ರವು, ಪಾರವುಳ್ಳದ್ದು, ಅಂತವುಳ್ಳದ್ದು. ಶ್ರಿಯಃಪತಿಯ ದಯೆ ಎಂಬ, ಸಾಗರಕ್ಕಾದರೋ ಅಂತವೇ ಇಲ್ಲವೆಂದು ಹೇಳುವುದಕ್ಕಾಗಿ ಅನಂತದಯಾಂಬುಧೇಃ ಎಂಬ ಪ್ರಯೋಗವು, ಪಾಂಡವಾದಿಗಳಿಗೂ, ಪ್ರಹ್ಲಾದಾದಿಗಳಿಗೂ, ಗಜೇಂದ್ರಾದಿ ಪ್ರಪನ್ನರುಗಳಿಗೂ ತೋರಿಸಿದ ಕೃಪಾಪ್ರವಾಹವನ್ನು ಸ್ಮರಿಸಿದರೆ ದಯಾಂಬುಧಿಯು ಅನಂತವೆಂಬುದು ವ್ಯಕ್ತಪಡುತ್ತದೆ. ಈ ಶ್ಲೋಕವು ತ್ರುಟಿತ ಜನತಾ ಶೋಕವುಳ್ಳದೆಂಬುದರಿಂದ ಚರಮ

ಶ್ಲೋಕವು ಅರ್ಜುನನಿಗೆ ಮಾತ್ರವೇ ಮಾಡಿದ ಉಪದೇಶವೆಂಬ ಅಭಿಪ್ರಾಯವು ನಿರಸ್ತವು ಆತನನ್ನು ವ್ಯಾಜೀಕರಿಸಿ, ತನ್ನನ್ನು ಆಶ್ರಯಿಸಬೇಕೆಂದಿರುವ ಸಮಸ್ತ ಜನ ಸವ ಊಹದ ಶೋಕನಿವಾರಣಕ್ಕಾಗಿಯಾದುದರಿಂದಲೇ ದಯಾಸಾಗರವು ಅನಂತ ವಾದುದು ಜನತಾ ಶಬ್ದಪ್ರಯೋಗದಿಂದ ಸರ್ವಾಧಿಕಾರತ್ವವು ಶರಣಾಗತಿಗೆ ಹೇಳ ಲ್ಪಟ್ಟಿತು ತ್ರುಟಿತಶೋಕವೆಂಬ ಪ್ರಯೋಗದಿಂದ ಶರಣಾಗತಿಗೆ ಕಾರ್ಪಣ್ಯವು ಒಂದು ಮುಖ್ಯವಾದ ಅಂಗವು ಎಂದು ಶರಣಾಗತ್ಯನುಷ್ಠಾನಾನಂತರ ಶೋಕವು ತೊಲಗಿ ಹೃಷ್ಟಮನಸ್ಕನಾಗುವನೆಂಬುದು ಉಪದಿಷ್ಟವು. ಈ ಗೀತೆಯಲ್ಲಿ ಉಪಾಯ ವಾಗಿ ಹೇಳಲ್ಪಟ್ಟಿರುವದು ಉಪಾಸನವಮಾತ್ರವೇ ಎಂದು ಕೆಲವರ ಅಭಿಪ್ರಾಯವು, ಏಕೆಂದರೆ "**ನಾನ್ಯಃ ಪನ್ಥಾ ವಿದ್ಯತೇ ಅಯನಾಯ**" ಪುರುಷಸೂಕ್ತದಲ್ಲಿ ಹೇಳಿರು ತ್ತದ ಎನ್ನುವರು ಈ ಗೀತೆಯಲ್ಲಿ ಎರಡು ಉಪಾಯಗಳು ಅನೇಕ ಕಡೆಗಳಲ್ಲೂ ಇಲ್ಲೂ ಉಪಪಾದಿತವು, ಗೀತಾ ೬೫ನೆಯ ಶ್ಲೋಕದಲ್ಲಿ ಉಪಾಸನವು ಹೇಳಲ್ಪಟ್ಟಿತು. ಈ ೬೬ ನೆಯ ಶ್ಲೋಕದಲ್ಲ ಶರಣಾಗತಿಯು ಉಪದೇಶಿಸಲ್ಪಟ್ಟಿತು **ಕಾರ್ಪಣ್ಯ ದೋಷೋಪಹತಸ್ವಭಾವಃ**" ಎಂಬಲ್ಲೂ "**ದೈವೀಹ್ಯೇಷಾಗುಣಮಯೀಮಮ ಮಾಯಾ ದುರತ್ಯಯಾ**" ಎಂಬಲ್ಲೂ (ಗೀ ೭, ೧೪), '**ನಮಾಂದುಷ್ಕೃ ತಿನೋ ಮೂಢಾಃ ಪ್ರಪದ್ಯನ್ತೇ ನರಾಧಮಾಃ**" ಎಂಬಲ್ಲೂ (ಗೀ ೭, ೧೫) "**ಮಾಂಹಿ ಪಾರ್ಥವ್ಯಪಾಶ್ರಿತ್ಯಯೇಽಪಿಸ್ಯುಃಪಾಪಯೋನಯಃ । ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿಯಾನ್ತಿ ಪರಾಂಗತಿಮ್**" (ಗೀ ೯, ೩೩), ಎಂಬಲ್ಲೂ, "**ತಸ್ಮಾತ್ಪ್ರಣಮ್ಯಪ್ರಣಿಧಾಯಕಾಯಂ ಪ್ರಸಾದಯೇತ್ವಾಮಹ ಮೀಶಮೀಡ್ಯಮ್**" (ಗೀ ೧೧, ೪೪) ಎಂಬಲ್ಲೂ, **ತಮೇವಶರಣಂಗಚ್ಛ ಸರ್ವಭಾವೇನಭಾರತ**" (ಗೀ ೧೮, ೬೨) ಎಂಬಲ್ಲೂ, ಈ ಶರಣಾಗತಿಯೇ ಹೇಳ ಲ್ಪಟ್ಟಿರುವದು ಹಾಗೆಯೇ ಭಾಗವತದಲ್ಲೂ "**ತೇವೈವಿದನ್ತ್ಯತಿತರನ್ತಿಚದೇವ ಮಾಯಾಂ ಸ್ತ್ರೀ ಶೂದ್ರ ಹೂಣ ಶಬರಾ ಅಪಿಪಾಪಜೀವಾಃ । ಅತ್ಯದ್ಭುತ ಕ್ರಮ ಪರಾಯಣ ಶೀಲಶಿಕ್ಷಾ ಸ್ತಿರ್ಯಗ್ಜನಾ ಅಪಿ ಕಿಮು ಶ್ರುತಿಧಾರಣಾ ಯೇ**" (ಭಾಗ ) ಶರಣಾಗತಿಗೆ ಸರ್ವಾಧಿಕಾರತ್ವವೂ, ಉಪಾಯಗಳು ಎರಡು ಎಂಬುದೂ, ಬೋಧಿತವು "**ಭಕ್ತ್ಯಾಪರಮಯಾವಾಪಿ ಪ್ರಪತ್ತ್ಯಾವಾ ಮಹಾಮುನೇ । ಪ್ರಾಪ್ಯೋಽಹಂನಾನ್ಯಥಾಪ್ರಾಪ್ಯೋ ಮಮಕೈಙ್ಕರ್ಯ ಲಿಪ್ಸುಭಿಃ** ಎಂಬಲ್ಲಿ ಹೇಳಿ ರುವ ಹಾಗೆ ಉಪಾಸನವೂ ಪ್ರಪತ್ತಿಯೂ ಎರಡೂ ಉಪಾಯಗಳು

**ಸ್ವಯಂ ಸಮುಜಾಯತ**— ಇಲ್ಲಿ **ಸ್ವಯಂ** ಎಂಬ ಪ್ರಯೋಗವು ಹೇಗೆ ನ್ಯಾಯವು? ಅರ್ಜುನನು **ಶಾಧಿ ಮಾಂ ತ್ವಾಂ ಪ್ರಪನ್ನಮ್** ಎಂದು ಶರಣಾಗತಿ ಯನ್ನನುಷ್ಠಿಸಿ ಪ್ರಾರ್ಥಿಸಿದ ನಂತರವಲ್ಲವೇ ಈ ಉಪದೇಶವೆಲ್ಲಾ ಉತ್ಪನ್ನವಾದುದು?

**ಧರ್ಮಸಂಮೂಢಚೇತನಾಗಿ** ಬಂಧು ಹನನವು ಹೇಗೆ ಧರ್ಮವಾದೀತು ಎಂಬ ಸಂದೇಹ ದಿಂದ, ಧರ್ಮವು ಯಾವುದು ಎಂದಲ್ಲವೇ ಪ್ರಾರ್ಥಿಸಿದನು ? ಹೀಗಿರುವಾಗ **ಸ್ವಯಂ ಸಮುಜಾಯತ** ಎಂದು ಹೇಳಲು ಹೇಗಾಗುತ್ತದೆ ? ಎಂದಾಕ್ಷೇಪತಂದರೆ, ಸಮಾಧಾನವು ಹೇಗೆಂದರೆ – ಅರ್ಜುನನು ಯುದ್ಧಮಾಡುವುದಕ್ಕಾಗಿಯೇ ಉತ್ಸಾಹದಿಂದಲೇ ಬಂದು, **"ಸೇನಯೋರುಭಯೋರ್ಮಧ್ಯೇ ರಥಂಸ್ಥಾಪಯ ಮಾಧವ"** ಎಂದು ಶ್ರೀಕೃಷ್ಣನನ್ನು ಕುರಿತು ಪ್ರಾರ್ಥಿಸಿರುತ್ತಾನೆ. ಇಂತಹ ಸಂದರ್ಭದಲ್ಲಿ ಏಕಾಏಕೀ ದುಃಖಾಕ್ರಾಂತನಾಗಿ ಯುದ್ಧಮಾಡುವದಿಲ್ಲವೆಂದು ಹೇಳಿ, ಗಾಂಡೀವವನ್ನು ತೊರೆಯಬೇಕಾದರೆ, ನಾವು ಊಹಿಸಬೇಕಾದುದು, ಶ್ರೀಕೃಷ್ಣಭಗವಾನರವರೇ ಇಂತಹ ಧರ್ಮೋಪದೇಶವು ಎಲ್ಲಾ ಜನರಿಗೂ ಅನುಕೂಲಿಸಲಿ ಎಂಬ ಕೃಪೌದಾರ್ಯಭಾವಗಳಿಂದ ಅರ್ಜುನನಿಗೆ ಪ್ರೇರಿಸಿ ದುಃಖಾಕ್ರಾಂತನಾಗುವ ಹಾಗೆ **ಸ್ವಯಂ** ತಾವೇ ಮಾಡಿರುತ್ತಾರೆ. ಅವತಾರರಹಸ್ಯದಲ್ಲಿ ಹೇಳಿಗುವ ಹಾಗೆ, ಸಾಧುಪರಿತ್ರಾಣ, ದುಷ್ಟನಿಗ್ರಹ, ಧರ್ಮಸಂಸ್ಥಾಪನರೂಪವಾದ ಮೂರು ಮಹತ್ತಾದ ಉದ್ದೇಶಗಳೂ ನಡೆಯುವ ಹಾಗೆ ಅರ್ಜುನನಿಗೆ ವಿಷಾದ ಉಂಟುಮಾಡಿರುತ್ತಾರೆ. ಆದುದರಿಂದ **ಸ್ವಯಂ ಸಮುಜಾಯತ** ಎಂಬ ಪ್ರಯೋಗವು ಸಾರಸ್ಯಯುತನಾದುದು. ಇಂತಹ ನಿರ್ಹೇತುಕ ಕರುಣೆಯಿಂದ ಪ್ರೇರಿತನಾಗಿ ಮಹತ್ಕಾರ್ಯವನ್ನು ನಡೆಸಿರುವದನ್ನು ಇತರ ಅವತಾರ ಕಾಲಗಳಲ್ಲೂ ಕಾಣಬಹುದು ರಾಮಾವತಾರಿಯಾದಾಗಲೂ, ಯೌವರಾಜ್ಯಪಟ್ಟಾಭಿಷಿಕ್ತನಾಗಿ ಅಯೋಧ್ಯೆಯಲ್ಲೇ ಸುಮ್ಮನೆ ನೆಲಸಿರುವದು ಇಷ್ಟವಿಲ್ಲದೆ, ಎಲ್ಲೋ ಒಂದು ಮೂಲೆಯಲ್ಲಿದ್ದ ಮಂಥರೆಗೆ ಪ್ರೇರಕನಾಗಿ, ಕೈಕೇಯಿಯ ಪರಿಶುದ್ಧಮನಸ್ಸನ್ನು ಕಲುಷಿತವಾಗುವ ಹಾಗೆ ಮಾಡಿ, ಋಷಿಗಳ ಸಂತ್ರಾಣಕ್ಕಾಗಿಯೂ, ರಾಕ್ಷಸ ವಧೆಗಾಗಿಯೂ, ಶರಣಾಗತ ಧರ್ಮೋಪದೇಶಕ್ಕಾಗಿಯೂ **"ರಾಜ್ಯೋವಾ ವನವಾಸೋವಾ ವನವಾಸೋಮಹೋದಯಃ"** ಎಂದು ಹೇಳಿ, ಅರಣ್ಯಕ್ಕೆ **ಸ್ವಯಂ** ತೆರಳಿರುತ್ತಾನೆ. ಹೀಗೆ ಶ್ರೀಕೃಷ್ಣಭಗವಾನರನರು **ಸ್ವಯಂ** ಅರ್ಜುನನಿಗೆ ವಿಷಾದವನ್ನುಂಟುಮಾಡಿ ತತ್ಪರಿಹಾರಾರ್ಥವಾಗಿ ಈ ಅನೋಘೋಪದೇಶವನ್ನು ಕೈಕೊಂಡು, ಶ್ರೀರಾಮಚಂದ್ರನು ಅಲ್ಲಿ **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋದದಾಮ್ಯೇತದ್ವ್ರತಂಮಮ"** ಎಂದು ಅಭಯಪ್ರದಾನಮಾಡಿದ ಹಾಗೆ. ಇಲ್ಲೂ **"ಸರ್ವಧರ್ಮಾನ್ ಪರಿತ್ಯಜ್ಯಮಾಮೇಕಂ ಶರಣಂವ್ರಜ"** ಎಂದು ಹೇಳಿ ಅಭಯಪ್ರಧಾನವನ್ನು ಮಾಡಿರುತ್ತಾನೆ

ಈ ಶ್ಲೋಕದ ಪೂರ್ವಾರ್ಧದಿಂದ ಎಲ್ಲರಿಗೂ ಅನುಕೂಲಿಸುವಹಾಗೆ ಲಘುವಾದ ಸಾಧ್ಯೋಪಾಯವು ವಿಧಿಸಲ್ಪಟ್ಟಿತು ಎಂದು ತಿಳಿಸುವದಕ್ಕಾಗಿ ವಿಧಿನಾ ಎಂಬ ಪ್ರಯೋಗವು. ವ್ರಜ ಎಂಬುದು ವಿಧಿವಾಕ್ಯವೆಂಬ ಭಾವವು. ಉತ್ತರಾರ್ಧದಿಂದ ಸಿದ್ಧೋ

ಪಾಯನೂ, ಪ್ರಾಪ್ಯನೂ ಆದ ತಾನೇ ಎಂದು ತಿಳಿಸುತ್ತಾರೆ ಇದನ್ನು **ಕೃಷ್ಣಂ ಧರ್ಮಂ ಸನಾತನಮ್** ಎಂಬ ಶಾನ್ತಿಪರ್ವ ವಾಕ್ಯಪ್ರಯೋಗದಿಂದ ಗ್ರಹಿಸಬಹುದು ಆ ಶ್ಲೋಕವು ಯಾವುದೆಂದರೆ–' **ಯೇಚ ವೇದವಿದೋ ವಿಪ್ರಾ ಯೇ ಚಾಧ್ಯಾತ್ಮವಿದೋ ಜನಾಃ । ತೇ ವದನ್ತಿ ಮಹಾತ್ಮಾನಂ ಕೃಷ್ಣಂ ಧರ್ಮಂ ಸನಾತನಮ್**" ಶ್ರೀಕೃಷ್ಣ ಭಗವಾನರವರನ್ನು ಧರ್ಮಂ ಎಂದು ಹೇಳುವದರ ಅಭಿಪ್ರಾಯವೇನೆಂದರೆ– ಉಪಾಸನಾದಿ ಧರ್ಮಗಳು ಹೇಗೆ ಫಲಕ್ಕೆ ಹೇತುವೋ, ಹಾಗೆಯೇ ಶ್ರೀಕೃಷ್ಣನೂ ಕೂಡ ಫಲವನ್ನು ಆಶ್ರಿತರಿಗೆ ತಾನೇ ಸಾಧಿಸಿಕೊಡುವ ಸಿದ್ಧೋಪಾಯನು ಎಂಬ ಭಾವವು. ಆದುದರಿಂದ "**ಧರ್ಮೋವಿಗ್ರಹವಾನ್**" (ದಶಾವತಾರಸ್ತೋತ್ರ) ಎಂಬ ಪ್ರಯೋಗವನ್ನು ಕಾಣಬಹುದು. ಧರ್ಮರಕ್ಷಣಾರ್ಥವಾಗಿಯೇ ಅವತಾರಗಳು ೨೨೩ ನೆಯ ಪುಟವನ್ನು ನೋಡಿ. ಧರ್ಮಪರಿಪಾಲನಮಾಡುವನು ಎಂದು ಯಾವಾಗ ಆಯಿತೋ, ಆಗ ತಾನೂ ಧರ್ಮಾತಿಕ್ರಮವನ್ನು ಎಂದಿಗೂ ಮಾಡುವದಿಲ್ಲವು, "**ನಾಹಂಕಾಮಾನ್ನ ಸಂರಂಭಾನ್ನ ದ್ವೇಷಾನ್ನಾರ್ಥಕಾರಣಾತ್ । ನಹೇತುಮಾಮಾಲ್ಲೋಭಾದ್ವಾ ಧರ್ಮಂಜಹ್ಯಾಂಕಥಂಚನ**" ಹೀಗೆ ಧರ್ಮಾತಿಕ್ರಮಣವನ್ನು ಮಾಡುವದಿಲ್ಲವೆಂದು ದುರ್ಯೋಧನನ ಸಭೆಯಲ್ಲಿ ಸ್ವಾಮಿಯ ಪ್ರತಿಜ್ಞೆಯು - ಲೋಕರಾಜರುಗಳೇ ತನ್ನ ಕಾನೂನನ್ನು ತಾವೇ ಅತಿಕ್ರಮಣಮಾಡದಿರುವಾಗ ರಾಜಾಧಿರಾಜನು ಅವತಾರಕಾಲಗಳಲ್ಲಿ ಅತಿಕ್ರಮಿಸುವನೇ ?

**ಶಮಿತದುರಿತಾಃ**—" **ಮೋಕ್ಷಯಿಷ್ಯಾಮಿ** " ಎಂಬ ಪದದ ಅಭಿಪ್ರಾಯವು ಸೂಚಿತವು ಈ ಪ್ರಪದನವು ಸಮಸ್ತಪಾಪಗಳನ್ನೂ ಹೋಗಲಾಡಿಸುತ್ತದೆಂದು ಅಪರಾಧ ಪರಿಹಾರಾಧಿಕಾರದಲ್ಲಿ ಉಪದೇಶಿಸಲ್ಪಟ್ಟಿತು. ಅಲ್ಲಿ ಅಧಿಕಾರಾಂತ್ಯಶ್ಲೋಕದಲ್ಲಿ ಪ್ರಪದನದಿಂದ ಪ್ರಾರಬ್ಧೇತರ ಸರ್ವಪಾಪಗಳು ಕಳೆಯುತ್ತವೆಂದೂ, ಪ್ರಾರಬ್ಧವು ದೇಹಾವಸಾನದಲ್ಲಿ ಕಳೆಯುತ್ತದೆಂದೂ ಹೇಳಲ್ಪಟ್ಟಿತು ಕ್ಲೇಶವನ್ನುಂಟುಮಾಡುವ ಪ್ರಾರಬ್ಧಾಂಶವಿದ್ದರೆ ಪ್ರಪದನಕಾಲದಲ್ಲೇ ಇವುಗಳ ಉಪಶಮನವನ್ನು ಪ್ರಾರ್ಥಿಸಿದರೂ ಅಥವಾ ಇವುಗಳ ನಿವಾರಣೆಗಾಗಿ ಪುನಃ ಪ್ರಪದನವನ್ನು ಅನುಷ್ಠಿಸಿದರೂ ಇವುಗಳೂ ತೊಲಗುವುವೆಂದು ಪ್ರಭಾವರಕ್ಷಾಧಿಕಾರದಲ್ಲಿ ಉಪಪಾದಿತವು ಈ ಅಭಿಪ್ರಾಯವೇ " ತಮೇವ ಶರಣಂಗಚ್ಛ " (ಗೀ. ೧೮, ೬೨) ಎಂಬಲ್ಲಿ ಉಪಪಾದಿತವು

**ಶಂಕಾತಂಕತ್ಯಜಃ** ಎಂಬುದರಿಂದ " **ನಿರ್ಭರೋನಿರ್ಭರೋಽಸ್ಮಿ**" ಎಂದು ನ್ಯಾಸವಿಂಶತಿಯಲ್ಲೂ, ಕೃತಕೃತ್ಯಾಧಿಕಾರದ ೧೧೫–೪೨ನೆಯ ಪುಟಗಳಲ್ಲಿ ಉಪದಿಷ್ಟವಾದ ಮಹಾ ವಿಶ್ವಾಸವು ಹೇಳಲ್ಪಟ್ಟಿತು. ಬಹು ಶ್ರಮಸಾಧ್ಯವಾದ ಕರ್ಮಯೋಗಾದಿಗಳಿಂದ ಅನುಗೃಹೀತವಾದ ತೈಲಧಾರಾವದವಿಚ್ಛಿನ್ನ ಪರಮೈಕಾನ್ತ ಭಕ್ತಿಯಿಂದ ಮಾಡಿದ ಉಪಾಸನದ್ವಾರಾ ಲಭಿಸುವ ಮುಕ್ತಿಯು ಈಕ್ಷಣಕಾಲದಲ್ಲಿ ಅನುಷ್ಠಿಸಿದ

ಭರನ್ಯಾಸದಿಂದ ಲಭಿಸೀತೇ ? ಅಥವಾ ಗಣನೆಮಾಡಲು ಕೂಡ ಸಾಧ್ಯವಿಲ್ಲದ ಜನ್ಮ ಸಂತತಿಗಳಲ್ಲಿ ಮಾಡಿದ ಅಪರಾಧಗಳೆಲ್ಲಾ ಈ ಕ್ಷಣಕಾಲದಲ್ಲಿ ಮಾಡಿದ ಪ್ರಪದನದಿಂದ ಕಳೆಯುತ್ತದೆಯೇ ? ಎಂಬುದು ಇನ್ನೊಂದು ಶಂಕೆಯು ಲೀಲಾಸಾರಥಿಯ ಈ ಅಮೋಘೋಕ್ತಿಯಲ್ಲೂ, "ಸಕೃದೇವ" ಎಂಬ ರಾಮವಾಕ್ಯದಲ್ಲೂ ಮತ್ತು ಹಾಗೆಯೇ (1) "**ರಾಮೋದ್ವಿರ್ನಾಭಿಭಾಷತೇ**" (2) **ಅಪ್ಯಹಂ ಜೀವಿತಂ ಜಹ್ಯಾಂತ್ವಾಂವಾ ಸೀತೇ ಸಲಕ್ಷ್ಮಣಾಂ । ನಹಿಪ್ರತಿಜ್ಞಾಂ ಸಂಶ್ರುತ್ಯಬ್ರಾಹ್ಮಣೇಭ್ಯೋ ವಿಶೇಷತಃ** ಮತ್ತು (3) **ಪತೇದ್ದ್ಯೌರ್ಹಿಮವಾನ್ ಶೀರ್ಯೇತ್ಪೃಥಿವೀ ಶಕಲೀಭವೇತ್ । ಶುಷ್ಯೇತ್ತೋಯನಿಧಿಃ ಕೃಷ್ಣೇನಮೇಮೋಘಂ ವಚೋಭವೇತ್**" ಇತ್ಯಾದಿ ಸೂಕ್ತಿಗಳು ನಿರ್ಭರತ್ವವನ್ನೂ ನಿರ್ಭಯತ್ವವನ್ನೂ ಉಂಟುಮಾಡದೇ ಇರಲಾರವು. ಇವುಗಳ ಅರ್ಥವೇನೆಂದರೆ ಶ್ರೀರಾಮನು ಆಶ್ರಿತರ ವಿಷಯದಲ್ಲಿ ಸತ್ಯಸಙ್ಕಲ್ಪನಾದುದರಿಂದ ಎರಡು ಮಾತುಗಳನ್ನು ಆಡುವದಿಲ್ಲವು. ಎರಡನೆಯದರ ಅರ್ಥವು—ಶ್ರೀರಾಮಪ್ರಭುವು ಸೀತೆಯನ್ನು ಕುರಿತು ಋಷಿಗಳಿಗೆ ಮಾಡಿದ ಅಭಯಪ್ರದಾನದ ಆಕ್ಷೇಪಕ್ಕಾಗಿ ಉತ್ತರವನ್ನೀಯುತ್ತಾರೆ. ಓ ಸೀತೆಯೇ ಪ್ರಾಣವನ್ನಾದರೂ ಬಿಟ್ಟೇನು, ನಿನ್ನನ್ನೂ ಲಕ್ಷ್ಮಣನನ್ನೂ ತ್ಯಜಿಸೇನು ; ಆದರೆ ಆಶ್ರಿತರನ್ನು ರಕ್ಷಿಸುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದನಂತರ ಅದನ್ನು ಬಿಡಲಾರೆನು , ಅದರಲ್ಲೂ ಬ್ರಹ್ಮವಿತ್ತುಗಳಲ್ಲಿ ಮಾಡಿದುದು ಇನ್ನೂ ವಿಶೇಷವಾದುದು, ಮೂರನೆಯ ಪ್ರಮಾಣವು ಶ್ರೀಕೃಷ್ಣಭಗವಾನರವರು ಆರ್ತಳಾಗಿ ಶರಣಾಗತಿಯನ್ನ ನುಷ್ಠಿಸಿದ ದ್ರೌಪದಿಗೆ ಹೇಳುವ ದಿವ್ಯಸೂಕ್ತಿಯು ಓ ದ್ರೌಪದಿಯೇ ಸ್ವರ್ಗಲೋಕವಾದರೂ ಬೀಳಬಹುದು , ಹಿಮವತ್ಪರ್ವತವು ಸೀಳಿಹೋಗಬಹುದು , ಭೂಮಿಯು ಚೂರುಚೂರಾಗಬಹುದು , ಸಮುದ್ರವಾದರೂ ಬತ್ತಿಹೋಗಬಹುದು. ನಾನು ಆಡಿದ ಮಾತು ಎಂದಿಗೂ ವ್ಯರ್ಥವಾಗಲಾರದು. ದುರಳರಾದ ದುರ್ಯೋಧನ ದುಶ್ಯಾಸನರು ಮಡಿಯುವರು, ನಿನ್ನ ಪತಿಗಳು ಪಟ್ಟಾಭಿಷಿಕ್ತರಾಗುವರು ಎಂದು ಸಮಾಧಾನಪಡಿಸಿದ ಅಮೋಘೋಕ್ತಿಯು , ಆದುದರಿಂದಲೇ **ಶಂಕಾತಂಕತ್ಯಜಃ** ಎಂಬ ಪ್ರಯೋಗವು.

ಇದು ಚರಮಶ್ಲೋಕಾಧಿಕಾರದ ಉಪಪಾದನೆಗೆ ಮಙ್ಗಳಶ್ಲೋಕವಾದುದರಿಂದ, ಸಿದ್ಧೋಪಾಯನಾಗಿ ಶ್ರಿಯಃಪತಿಯು ಮೋಕ್ಷಾರ್ಥಿಗಳಿಗೆ ತಾನೇ ಮಾರ್ಗದರ್ಶಿಯಾಗಿ ಹಿತಾಚರಣೆಯನ್ನು ಮಾಡಿಸುವೆನೆಂದರ್ಥವು **ಅನಂತದಯಾಂಬುಧೇಸ್ತ್ರುಟಿತಜಗತಾಶೋಕೆ** ಇತ್ಯಾದಿಯಿಂದ ವ್ಯಕ್ತವು **ಶರಣಂವ್ರಜ** ಎಂಬರ್ಥವನ್ನು **ವಿಧಿನಾಪ್ರಪದ್ಯ** ಇತ್ಯಾದಿ ಪದಗಳಿಂದ ಸೂಚಿಸಿರುತ್ತಾರೆ. **ಶಮಿತದುರಿತಾಃ** ಎಂಬುದರಿಂದ **ಸರ್ವಪಾಪೇಭ್ಯಃ**, ಎಂಬುದರ, **ಅನಂತದಯಾಂಬುಧೇಃ** ಎಂಬುದ

ರಿಂದ **ಮಾಮೇಕಂ** ಎಂಬುದರ ಅರ್ಥವನ್ನೂ, **ಸುಖಮಾಸ್ಮಹೇ** ಎಂಬುದರಿಂದ **ಮೋಕ್ಷಯಿಷ್ಯಾಮಿ** ಮಾಶುಚಃ ಎಂಬುದರ ಅರ್ಥವನ್ನೂ, **ಶಙ್ಕಾತಙ್ಕತ್ಯಜಃ** ಎಂಬುದರಿಂದ ಮಾಶುಚಃ ಎಂಬ ಪದದ ಅರ್ಥವನ್ನೂ ಸೂಚಿಸಿರುತ್ತಾರೆ.

**ದೇವತಾಯಾಗುರೋಶ್ಚೈವ ಮನ್ತ್ರಸ್ಯಾಪಿಪ್ರಕೀರ್ತನಾತ್ । ಐಹಿಕಾ ಮುಷ್ಮಿಕೀಸಿದ್ಧಿ ರ್ದ್ವಿಜಸ್ಯಾಸ್ತಿನಸಂಶಯಃ** ಎಂಬಲ್ಲಿ ದ್ವಿಜನಿಗೆ ದೇವತೆ ಗುರು ಮನ್ತ್ರ ಇವುಗಳ ಸ್ತುತಿಯಿಂದ ಐಹಿಕಾ ಮುಷ್ಮಿಕ ಸಿದ್ಧಿಯಲ್ಲಿ ಸಂಶಯವಿಲ್ಲವೆಂದು ಹೇಳಿರುವ ಹಾಗೆ ವಾಚಕರಿಗೆ ಸರ್ವಸಿದ್ಧಿಪ್ರಾಪ್ತರೂಪ ಮಙ್ಗಳವು ಉಂಟಾಗಲೆಂದು ಈ ಶ್ಲೋಕಮೂಲಕ ಮಙ್ಗಳಾಚರಣೆಯನ್ನು ಅನುಷ್ಠಿಸಿರುತ್ತಾರೆ— **ಸುಖಮಾಸ್ಮಹೇ** ಎಂಬ ಪ್ರಯೋಗದಿಂದ, ಈಗ ತಾವು ಮುಂದೆ ರಚಿಸುವ ಚರಮಶ್ಲೋಕದ ರಹಸ್ಯಾರ್ಥಗಳ ಉಪಪಾದನೆಯಿಂದ, ತಾವೂ ತಮ್ಮ ಶಿಷ್ಯಗೋಷ್ಠಿಯೂ ಇತರರೂ ಸಹ ಈ ಲೀಲಾಸಾರಥಿಯ ಚರಮಶ್ಲೋಕದ ಹಿತೋಕ್ತಿಯನ್ನು ಪರಿಶೀಲಿಸಿದವರಾಗಿ ಅದರ ಮಾಹಾತ್ಮ್ಯೆಯನ್ನು ಗ್ರಹಿಸಿ, ತದನುಗುಣವಾಗಿ ಅನುಷ್ಠಿಸಿ, ಶಂಕಾತಂಕತ್ಯಜರಾಗಿ, ಅನಂತದಯಾಂಬುಧಿಯ ಕೃಪೆಯನ್ನು ಸಂಪಾದಿಸಿದವರಾಗಿ ಆತನನ್ನು ಹೋಗಿ ಸೇರಿ, ನಿರತಿಶಯಾನಂದವನ್ನು ಹೊಂದಬೇಕೆಂಬ ಆಶಯದಿಂದ ಮಾಡಿದ ಮಂಗಳಾಚರಣೆಯು

ಇಲ್ಲಿ **ಸುಖಮಾಸ್ಮಹೇ** ಎಂಬ ಬಹುವಚನವನ್ನು ಗ್ರಂಥಕರ್ತರ ಬಹುವಚನವೆಂದು ಭಾವಿಸಿ ಅವರಿಗೆ ಮಾತ್ರವೇ ಅನ್ವಯಿಸಿದರೆ ಸ್ವಾರಸ್ಯವಿಲ್ಲವು. ಶ್ರೀ ದೇಶಿಕರವರ ಆಶಯವು ತುಂಬಾ ಉದಾರವಾದುದು. ಶ್ರಿಯಃಪತಿಯನ್ನು ಆಶ್ರಯಿಸುವರೆಲ್ಲರಿಗೂ ಆತನು ಕರುಣಿಸಲಿ, ಮಙ್ಗಳ ಉಂಟಾಗಲಿ ಎಂಬುದೇ ಅವರ ಆಶಯವು. ಶ್ರೀ ಪರಾಶರರು ವಿಷ್ಣುಪುರಾಣಾಂತ್ಯದಲ್ಲಿ " **ಪ್ರದಿಶತು ಭಗವಾನಶೇಷ ಪುಂಸಾಂ ಹರಿರಪಜನ್ಮಜರಾದಿಕಾಂ ಸಮೃದ್ಧಿಮ್** ಎಂದು ಹಾಗೆಯೇ ಸರ್ವರಿಗೂ ಮಙ್ಗಳವನ್ನು ಕೋರಿರುತ್ತಾರೆ. ಶ್ರೀದೇಶಿಕರವರೂ ಇದನ್ನೇ ಮನಸ್ಸಿನಲ್ಲಿಟ್ಟು ತಮ್ಮ ಸಙ್ಕಲ್ಪ ಸೂರ್ಯೋದಯದಲ್ಲೂ " **ಅಪಜನ್ಮಜರಾದಿಕಾಂ ಸಮೃದ್ಧಿಂ ಕೃಪಯಾ ಸಮ್ಮುಖಯನ್ನಶೇಷಪುಂಸಾಮ್** " ಎಂದು ಪ್ರಯೋಗಿಸಿರುತ್ತಾರೆ. ಅಥವಾ ಭರನ್ಯಾಸನಿಷ್ಠನಿಗೆ ಸೇರಿದವರೆಲ್ಲರಿಗೂ ಆತನು ಮಾಡಿದ ಶರಣಾಗತಿಯಿಂದ ಸರ್ವೇಶ್ವರನು ಅನುಗ್ರಹಿಸುವನೆಂಬ ಶಾಸ್ತ್ರಾರ್ಥವನ್ನು ಸೂಚಿಸುವದಕ್ಕಾಗಿಯೂ **ಸುಖಮಾಸ್ಮಹೇ** ಎಂಬ ಬಹುವಚನ ಪ್ರಯೋಗವು ತಮ್ಮ ಗ್ರಂಥಾವಲೋಕನದಿಂದುಂಟಾದ ಜ್ಞಾನ ಮೂಲಕ ಪರಮಭಗವತರನ್ನಾಶ್ರಯಿಸಿ ಭರನ್ಯಾಸವನ್ನು ಅನುಷ್ಠಿಸಿದವರೂ ತಮ್ಮವರೇ ಆಗಿ **ಸುಖಮಾಸ್ಮಹೇ** ಎಂಬ ಪ್ರಾರ್ಥನೆಯಾಗಿ ಭಾವಿಸಬಹುದು.

ಮೂ॥ ದುರ್ವಿಜ್ಞಾನೈ ರ್ನಿಯಮಗಹನೈ ರ್ದೂರ ವಿಶ್ರಾಂತಿದೇಶೈಃ ।
ಬಾಲಾನರ್ಹೈ ರ್ಬಹುಭಿರಯನೈ ಶ್ಶೋಚತಾಂ ನ ಸ್ಸಪನ್ನಾಃ ।
ನಿಷ್ಪ್ರತ್ಯೂಹಂ ನಿಜಪದಮಸೌ ನೇತು ಕಾಮಸ್ಸ್ವಭೂಮ್ನಾ ।
ಸತ್ಪಾಥೇಯಂ ಕಿಮಪಿ ವಿದಧೇ ಸ್ಸಾರಥಿ ಸ್ಸರ್ವನೇತಾ ॥೬೯॥

ಶ್ರೀಕೃಪಾಂಬೋಧಿಯು ಈ ಅಮೋಘವಾದ ರಹಸ್ಯವನ್ನು ದಯಪಾಲಿಸಿದ ಮಹೋಪಕಾರಕ್ಕೆ ಒಂದು ಶ್ಲೋಕದ ಸ್ತುತಿಯು ಸಾಲದೆಂದು ಭಾವಿಸಿ, ಇನ್ನೊಂದು ಶ್ಲೋಕದಿಂದ ಸ್ವಾಮಿಯ ಕೃಪಾಪ್ರಭಾವವನ್ನು ಸ್ತುತಿಸಿ ಸ್ವಲ್ಪಮಟ್ಟಿಗೆ ಮನಸ್ತೃಪ್ತಿಯನ್ನು ಹೊಂದಿದ ಹಾಗೆ ತೋರುತ್ತದೆ ಮಧುರವಾದುದರ ಆಸ್ವಾದನವು ಒಂದು ಸಲದಲ್ಲೇ ತೃಪ್ತಿಯನ್ನು ಹೊಂದಲಾರದು

**ಅರ್ಥವು**—ಅರ್ಜುನನು ಮೊದಲಿನಿಂದಲೂ ಮನಸ್ಸಿನ ಐಕಾಂತ್ಯವು ತನಗೆ ಸಾಧ್ಯವಿಲ್ಲವೆಂದು "**ಚಂಚಲಂಹಿ ಮನಃಕೃಷ್ಣ**" ಇತ್ಯಾದಿಗಳಿಂದ ತೋರ್ಪಡಿಸಿ, ೧೧ನೆಯ ಅಧ್ಯಾಯಾಂತ್ಯದಲ್ಲೂ "**ಭಕ್ತ್ಯಾತ್ವನನ್ಯಯಾ**" ಎಂದಾರಂಭಿಸಿ "**ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ**" ಎಂದು ಮುಗಿಸಿ, ನೀನು ಐಕಾನ್ತ್ಯಾತ್ಯನ್ತಿಕ ಭಕ್ತಿಯಿಂದ ನನ್ನನ್ನು ಉಪಾಸಿಸು ಎಂದು ಹೇಳಲು, ಆದು ತನಗೆ ಸಾಧ್ಯವಿಲ್ಲವೆಂದು ಭಾವಿಸಿ ೧೨ನೆಯ ಶ್ಲೋಕದ ಆದಿಯಲ್ಲಿ ಜ್ಞಾನಿಯಾಗಿ ಉಪಾಸಿಸುವದು ತನಗೆ ಸಾಧ್ಯವಿಲ್ಲದುದರಿಂದ ಜಿಜ್ಞಾಸುವಾಗಿಯಾದರೂ ಉಪಾಸಿಸಲೇ ಎಂದು ಪ್ರಶ್ನಿಸುದುದಕ್ಕೆ, ಮೊದಲನೆಯ ಜ್ಞಾನಿಯು ದಹರ ವಿದ್ಯಾದಿಗಳಿಂದ ಉಪಾಸನೆಯು ಸುಲಭವೆಂದೂ ಎರಡನೆಯದಾದ ಜಿಜ್ಞಾಸುವಿನ ಪಂಚಾಗ್ನಿ ವಿದ್ಯಾದಿಗಳಲ್ಲೇ ಕ್ಲೇಶವು ಅಧಿಕವೆಂದೂ ಹೇಳಿ, ಅರ್ಜುನನಿಗೆ ಮನಸ್ಸಿನ ಐಕಾಂತ್ಯಗಳಿಗೆ ಸಾಧನಗಳನ್ನು ಹೇಳಿ "**ಮಯ್ಯೇವ ಮನ ಆಧತ್ಸ್ವ**" ಎಂದು ಹೇಳಿದರು. ಹೀಗೆ ಉಪಾಸನ ಮಾರ್ಗವನ್ನೇ ಕೊಂಡಾಡಿ ಸರ್ವಗುಹ್ಯತಮವಾದ ಹಿತೋಪದೇಶವನ್ನೇ ಇನ್ನೊಂದು ಸಲ, "**ಸರ್ವಗುಹ್ಯತಮಂ ಭೂಯಃ ಶೃಣುಮೇ ಪರಮಂವಚಃ । ಇಷ್ಟೋಸಿ ಮೇ ದೃಢಮಿತಿ ತತೋವಕ್ಷ್ಯಾಮಿತೇ ಹಿತಮ್**" ॥ ೬೪ ॥ ಎಂದು ಕೊಂಡಾಡಿ ಅದರ ಮುಂದಿನ ೬೫ನೆಯ ಶ್ಲೋಕದಲ್ಲಿ "**ಮನ್ಮನಾಭವ ಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು ಮಾಮೇವೈಷ್ಯಸಿ**" ಎಂದು ಮುಗಿಸಿಬಿಟ್ಟರು ಹೀಗಾಗಲು, ತನಗೆ ಉಪಾಸನವು ಸಾಧ್ಯವೇ ಇಲ್ಲವೆಂದು ಅನಂತರ ಶೋಕಿಸುತ್ತಾನೆ. ಇದನ್ನು ಕಂಡು "ಅನಂತದಯಾಂಬೋಧಿಯು" ಕಷ್ಟವಿಲ್ಲದೆ ಸುಕರವಾದ ಸಕೃತ್ಕರ್ತವ್ಯವಾದ ಶರಣಾಗತಿರೂಪ ಲಘೂಪಾಯವನ್ನು ಅದರ

ಮುಂದಿನ ೬೬ನೆಯ ಶ್ಲೋಕದಿಂದ ತಿಳಿಸಿ, **ಮಾಶುಚಃ** - ಶೋಕಿಸಬೇಡವೆಂದು ಸಮಾಧಾನಮಾಡಿರುತ್ತಾರೆ—ಆದುದರಿಂದಲೇ ಈ ಅಭಿಪ್ರಾಯಗಳನ್ನೆಲ್ಲಾ ತಿಳಿಸಿ ಕೊಂಡಾಡುತ್ತಾರೆ.—

**ದುರ್ವಿಜ್ಞಾನೈಃ**—ತಿಳಿಯಲು ಅಶಕ್ಯಗಳಾದ, ಇವೆಲ್ಲಾ **ಬಹುಭಿರಯುನ್ಯೈಃ** ಎಂಬುದಕ್ಕೆ ವಿಶೇಷಣಗಳು, ಈ ಭಕ್ತಿಯೋಗವು ಮತ್ತು ಅದಕ್ಕೆ ಅಂಗಗಳಾದ ಕರ್ಮಯೋಗ ಜ್ಞಾನಯೋಗ ಪ್ರವೃತ್ತಿಗಳನ್ನು ತಿಳಿಯುವದೇ ಕಷ್ಟವಾದ ನಂತರ, ಇನ್ನು ಅನುಷ್ಠಿಸುವದು ಕಷ್ಟವೆಂದು ಹೇಳಲೇ ಕೆಲಸವಿಲ್ಲವೆಂದೂ ಹೇಳುತ್ತಾರೆ ಇದರಿಂದಲೂ ಶೋಕವು. **ನಿಯಮಗಹನೈಃ** - ಅವುಗಳನ್ನೆಲ್ಲಾ ಶಾಸ್ತ್ರದಲ್ಲಿ ಹೇಳಿರುವ ಹಾಗೆ ಅನುಷ್ಠಿಸುವದು ಕಷ್ಟತರವಾಗಿರುವ, ಅನುಷ್ಠಿಸುವದಕ್ಕೆ ಶಕ್ತಿಯಿಲ್ಲದ ಎಂಬ ಭಾವವು, **ದೂರ ವಿಶ್ರಾನ್ತದೇಶೈಃ** - ಆದುದರಿಂದ ಮುಮುಕ್ಷುವಿಗೆ ಆ ಮಾರ್ಗದಿಂದ ಹೋಗಿ ಸೇರಿ ವಿಶ್ರಾನ್ತಿಯನ್ನು ಹೊಂದುವ ದೇಶವು ದಿವ್ಯ ವೈಕುಂಠ ಲೋಕವು, ದುಷ್ಕರತ್ವ ಅಶಕ್ತ್ಯತ್ವಗಳಿಂದ ಅತಿದೂರವಾಗಿವುಳ್ಳ, **ಬಾಲಾನರ್ಹೈಃ** - ಬಾಲರಂತೆ ಅಶಕ್ತರಾದವರಿಗೆ ಸಾಧ್ಯವಲ್ಲದೆ, **ಬಹುಭಿರಯುನ್ಯೈಃ** - ಕರ್ಮಯೋಗಾನುಷ್ಠಾನಗಳೇನೂ ಜ್ಞಾನಯೋಗವೇನು, ಇಂದ್ರಿಯಗಳ ನಿಗ್ರಹವೇನು ಆಹಾರಾದಿ ನಿಷ್ಠೆಗಳೇನು, ಭಕ್ತಿಯೋಗದ ಉಪಾಸನವೇನು ಇಂತಹ ವ್ಯವಹಿತಾವ್ಯವಹಿತಾನೇಕ ಸಾಧನಗಳಿಂದ, **ಶೋಚತಾಂ** - ದುಃಖಿಸುತ್ತಿರುವ, **ನಃ** - ಅರ್ಜುನ ಮಾತ್ರವಲ್ಲದೆ ನಮಗೂ ಸಹ, **ಸುಪನ್ಥಾಃ** - ಆ ಕಷ್ಟಸಾಧ್ಯವಾದ ಭಕ್ತಿಯೋಗಮಾರ್ಗಕ್ಕೆ ಬದಲಾಗಿ ಸುಕರವಾಗಿ, ಲಘುವಾಗಿ ಸರ್ವಾಧಿಕಾರವುಳ್ಳ ಈ ಸಮೀಚೀನವಾದ ಭರನ್ಯಾಸವನ್ನು, **ಸರ್ವನೇತಾ** - ಸರ್ವರಿಗೂ ಪ್ರೇರಕನಾಗಿ ಆ ಕಾರಣದಿಂದ ಮುಮುಕ್ಷುವಿಗೆ ಸಿದ್ಧೋಪಾಯನಾಗಿ ದಿವ್ಯವೈಕುಂಠಕ್ಕೆ ಕರೆದುಕೊಂಡು ಹೋಗುವ, **ಅಸೌಸಾರಥಿಃ** - ಈ ಲೀಲಾಸಾರಥಿಯಾದ ಶ್ರೀಕೃಷ್ಣನು, **ನಿಷ್ಪ್ರತ್ಯೂಹಂ** - ಭಕ್ತಿಯೋಗದ ಹಾಗೆ ಏನೊಂದು ವಿಘ್ನವಿಲ್ಲದಿರೋಣವು ಹೇಗೋ ಹಾಗೆ, ಇದು ಕ್ರಿಯಾವಿಶೇಷಣವು, **ನಿಜಪದಂ** - ತನ್ನ ಸ್ಥಾನವಾದ ದಿವ್ಯ ವೈಕುಂಠವನ್ನು ಕುರಿತು, **ನೇತುಕಾಮಃ** - ಕರೆದುಕೊಂಡು ಹೋಗಬೇಕೆಂಬ ಸಙ್ಕಲ್ಪಯುಕ್ತವಾಗಿ, **ಸ್ವಭೂಮ್ನಾ** - ತನ್ನ ಮಹಾತ್ಮ್ಯಯಿಂದಲೇ, **ಕಿಮಪಿ** - ಇತರೋಪಾಯದ ಹಾಗೆ ಯಾವ ಕ್ಲೇಶಗಳೂ ಇಲ್ಲದೆ ವಿಲಕ್ಷಣವಾಗಿರುವ, **ಸತ್ಪಾಥೇಯಂ** - ಅರ್ಚಿರಾದಿ ಮಾರ್ಗವಾಗಿ ವೈಕುಂಠವನ್ನು ಕುರಿತು ಹೋಗಬೇಕೆಂದಿರುವವನಿಗೆ ಶ್ರಮಪರಿಹಾರಮಾಡುವ ದಧ್ಯೋದನ ರೂಪದಲ್ಲಿರುವ, ಈ ಭರನ್ಯಾಸವನ್ನು, **ವಿದಧೇ** - ಚರಮಶ್ಲೋಕರೂಪವಾಗಿ ವಿಧಿಸಿದನು. ಬಹು ದೂರದೇಶವನ್ನು ಕುರಿತು ಹೋಗುವವನಿಗೆ ಮಧ್ಯದಲ್ಲಿ ಅಡಿಗೆ ಮೊದಲಾದವುಗಳನ್ನು ಮಾಡಿ

ಕ್ಕೊಳ್ಳಲು ತೊಂದರೆಯುಳ್ಳವರು ಮಾರ್ಗಾಯಾಸ ಪರಿಹಾರಾರ್ಥವಾಗಿ ದಧ್ಯೋದನವನ್ನು ಕಟ್ಟಿಕೊಂಡು ಹೋಗಿ ಆಯಾಸಪರಿಹಾರವನ್ನು ಹೇಗೆ ಮಾಡಿಕ್ಕೊಳ್ಳುವರೋ ಹಾಗೆ, ಈ ಸಂಸಾರದಲ್ಲಿ ಅಲೆದು ಅಲೆದು ತಲೆಸುತ್ತುತ್ತಾ ಇರುವವರಿಗೆ ಇನ್ನು ಬಹುದೂರವಿರುವ ದಿವ್ಯ ವೈಕುಂಠಕ್ಕೆ ಹೋಗಿ ಸೇರುವದಕ್ಕೆ ಒಳ್ಳೇ ಆಯಾಸ ಪರಿಹಾರರೂಪ ಪಾಥೇಯವು ಈ ಭರನ್ಯಾಸವೆಂದು ಲೀಲಾಸಾರಥಿಯು ಈ ಚರಮ ಶ್ಲೋಕದ ಮೂಲಕ ವಿಧಿಸಿರುತ್ತಾರೆಂಬ ಭಾವವು. ಅನೇಕಕಾರಣಗಳಿಂದ ಭಕ್ತಿಯೋಗವು ಸುದುಷ್ಕರವು. ಇದನ್ನು ಅನುಷ್ಠಿಸಲು ತನಗೆ ಬೇಕಾದ ಅಧಿಕಾರ, ಜ್ಞಾನ, ಶಕ್ತಿ ಒಂದೂ ಇಲ್ಲವೇ ಎಂದು ಬಹುವಿಧವಾಗಿ ಶೋಕಿಸುತ್ತಿರುವ ನಮ್ಮಂತಹ ಅಶಕ್ತರಿಗೆ ಪರಮಕೃಪಾಳುವಾದ ಲೀಲಾಸಾರಥಿಯು ಆ ದುಷ್ಕರವಾದ ಭಕ್ತಿ ಮಾರ್ಗದ ಸ್ಥಾನದಲ್ಲಿ ತಾನೇ ನಿಂತು, ಅದು ನಿರ್ವಹಿಸುವ ಕೊಡುವ ಫಲವಾದ ದಿವ್ಯ ವೈಕುಂಠಪ್ರಾಪ್ತಿಯನ್ನು ನಡೆಸಿಕೊಡುವನು. ಸರ್ವಭರವನ್ನೂ ನನ್ನಲ್ಲಿಟ್ಟು ಬಿಟ್ಟು ನೀನು ನಿರ್ಭರನಾಗಿಯೂ ನಿರ್ಭಯನಾಗಿಯೂ, ಹೃಷ್ಟಮನಸ್ಕನಾಗಿಯೂ ಇರು, ನೀನು ಹೀಗೆ ಆಕಿಂಚನ್ಯದಿಂದ ಶೋಕಿಸಬೇಡವೆಂದು ಪರಮಕೃಪಯಾ ಅಮೋಘವಾದ ಈ ಚರಮಶ್ಲೋಕದ ಮೂಲಕ ಭರನ್ಯಾಸವನ್ನು ಶ್ರೀಕೃಷ್ಣಭಗವಾನರವರು ವಿಧಿಸಿದರಲ್ಲವೇ ಎಂದು ಕೊಂಡಾಡಿರುತ್ತಾರೆ—

**ತಾತ್ಪರ್ಯ**—ಹಿಂದೆ ಅಧಿಕಾರಿ ವಿಭಾಗಾಧಿಕಾರದಲ್ಲೂ, ಉಪಾಯ ವಿಭಾಗಾಧಿಕಾರದಲ್ಲೂ ಉಪಪಾದಿಸಿರುವದನ್ನು ಮನಸ್ಸಿನಲ್ಲಿಟ್ಟು ಭಕ್ತ್ಯುಪಾಯದ ದುಷ್ಕರತ್ವವನ್ನೂ, ಅದಕ್ಕಿಂತ ಭರನ್ಯಾಸಕ್ಕಿರುವ ಸುಕರತ್ವಮಹಿಮೆಗಳನ್ನು ಪುನಃ ಇಲ್ಲಿ ಅನುವದಿಸಿ, ಇಂತಹ ಸುಲಭವಾದ ಅಮೋಘೋಪಾಯವನ್ನು ಶ್ರೀಕೃಷ್ಣಭಗವಾನರವರು ಲೀಲಾಸಾರಥಿಯಾಗಿ ಚರಮಶ್ಲೋಕದ ಮೂಲಕ ವಿಧಿಸಿದರಲ್ಲಾ ಎಂಬ ಕೃತಜ್ಞತೆಯನ್ನು ಈ ಶ್ಲೋಕದ ಮೂಲಕ ಸೂಚಿಸುತ್ತಾರೆ—ಭಕ್ತಿಯೋಗವು ಹೇಗೆ ಸುದುಷ್ಕರವಾದುದೆಂಬುದನ್ನು ಐದು ವಿಶೇಷಣಗಳಿಂದ ಉಪಪಾದಿಸುತ್ತಾರೆ—

**ದುರ್ವಿಜ್ಞಾನೈಃ**— ಒಂದುವೇಳೆ ಉಪಾಸನಕ್ಕೆ ಅಧಿಕಾರವಿದ್ದರೂ, ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳನ್ನು ಅನುಷ್ಠಿಸಲು ಬೇಕಾದ ಜ್ಞಾನಗಳು ಬೇಕು, ಆತ್ಮಯಾಥಾತ್ಮ್ಯಜ್ಞಾನ, ಆತ್ಮಸಮತ್ವಜ್ಞಾನ, ಫಲಾಭಿಸಂಧಿರಹಿತಾನುಷ್ಠಾನ ಮೊದಲಾದವುಗಳ ಜ್ಞಾನವು, ಅನಂತರ ಪರಮಾತ್ಮಯಾಥಾತ್ಮ್ಯಜ್ಞಾನವು, ಹೀಗೆ ಇವೆಲ್ಲಾ ಈ ಉಪಾಸನಕ್ಕೆ ಬೇಕು. ಇವುಗಳು ಯಾವುವೂ ಇಲ್ಲವೇ ಎಂಬುದು ಶೋಕಕ್ಕೆ ಕಾರಣವು. **ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ** ಎಂದು ಹೇಳಲ್ಪಟ್ಟಿರುತ್ತದೆ. ಆ ಕರ್ಮಾನುಷ್ಠಾನಕ್ಕೂ ಶಾಸ್ತ್ರಜ್ಞಾನವು ಅವಶ್ಯಕವು, ಅದುದರಿಂದ ಶೋಕವು. ಭರನ್ಯಾಸಕ್ಕೆ ಇವು ಬೇಕಾಗಿಲ್ಲವು

**ನಿಯಮಗಹನೈಃ** - ಜ್ಞಾನಮಾತ್ರವೇ ಬೇಕಾದುದು ಅಲ್ಲದೆ ಭಕ್ತಿಯೋಗಕ್ಕೆ ಅನುಷ್ಠಾನವೂ ಆವಶ್ಯಕವು ಅವು ಶಾಸ್ತ್ರನಿಯಮವನ್ನು ಅನುಸರಿಸಿದಂತವುಗಳಾಗಿಯೂ ಇರತಕ್ಕದ್ದು ನಿತ್ಯನೈಮಿತ್ತಿಕಗಳನ್ನು ಅಜ್ಞವಾಗಿ ಶಾಸ್ತ್ರನಿಯಮಾನುಸಾರ ಅನುಷ್ಠಿಸಲೇಬೇಕು, ಈ ಕಾರಣದಿಂದಲೂ ಶೋಕವು ಭರನ್ಯಾಸಕ್ಕಾದರೋ ಸ್ವವರ್ಣಾನುಸಾರವಾಗಿ ಬೇರೇ ವಿಧಿಯಿಂದ ಅವು ಅನುಷ್ಠೇಯಗಳಾದರೂ, ಅವು ಅಂಗವಲ್ಲವು. ಆದುದರಿಂದ ಭರನ್ಯಾಸವು ಸುಕರವು

**ದೂರವಿಶ್ರಾಂತದೇಶ್ಯಃ** --ಫಲದೆಶೆಯು ಉಪಾಸನರೂಪೋಪಾಯಕ್ಕೆ ಬಹು ದೂರವಾಗಿರುವದರಿಂದ ಶೋಕವು, ಏಕೆಂದರೆ ಪ್ರಾರಬ್ಧ ಕಳೆದ ನಂತರವೇ ಉಪಾಸನೆಯಿಂದ ಮೋಕ್ಷವಾದುದರಿಂದ, ಈ ದೇಹಾವಸಾನದಲ್ಲೇ ಫಲವೆಂದು ಹೇಳಲು ಸಾಧ್ಯವಿಲ್ಲವು. ಬೇರೆ ಜನ್ಮಾನುಭವವೂ ಉಂಟಾಗಬಹುದು. ಹೀಗೆ ವಿಳಂಬದಿಂದ ಫಲವು. ಅದೂ ಅಲ್ಲದೆ ಭಕ್ತಿಯೋಗವು ದೇಹಾವಸಾನದವರೆಗೂ ನಿತ್ಯವೂ ಅನುಷ್ಠಿಸತಕ್ಕದ್ದಾಗಿರುತ್ತದೆ ಇದರಿಂದಲೂ ಶೋಕವು, ಭರನ್ಯಾಸವು ದೇಹಾವಸಾನದಲ್ಲೇ ಫಲವನ್ನು ನಿಸ್ಸಂಶಯವಾಗಿ ಕೊಡುವಂತಾದ್ದು ಆದುದರಿಂದ ವಿಳಂಬವಿಲ್ಲದ ಫಲಉಳ್ಳದ್ದು

**ಬಾಲಾನರ್ಹೈಃ**— ಬಾಲರಿಗೆ ಅನರ್ಹವೇ ಎಂಬದಾಗಿಯೂ ಶೋಕವು, ಬಾಲರು ಯಾರು ಎಂದರೆ ಶಾಸ್ತ್ರಜ್ಞಾನ ವಿವೇಕಜನ್ಯ ಜ್ಞಾನವಿಲ್ಲದವರು ಅವರಿಗೆ ಈ ಉಪಾಸನವು ಅಸಾಧ್ಯವಾದ ಮಾರ್ಗವು ಭರನ್ಯಾಸವಾದರೋ ಸರ್ವರೂ ಅಂತಹ ಜ್ಞಾನವಿಲ್ಲದಿದ್ದರೂ ಅನುಷ್ಠಿಸಬಹುದಾದುದು

**ಬಹುಭಿಃ ಅಯನೈಃ**—ಅನೇಕ ಅಂಗಗಳಿಂದ ಕರ್ಮಯೋಗ ಜ್ಞಾನಯೋಗ ಪ್ರಕ್ರಿಯಗಳಿಂದ ಕೂಡಿದುದ ಆದುದರಿಂದ ಶೋಕವು. ಹೀಗೆ ನಾನಾಕಾರಣಗಳಿಂದ ಭಕ್ತಿಯೋಗಾನುಷ್ಠಾನಕ್ಕೆ ತಾವು ಅಸಮರ್ಥರೆಂದು **ಶೋಚತಾಂ** - ಶೋಚಿಸುವ ನಮ್ಮವರಿಗೆಲ್ಲಾ ಈ ಚರಮಶ್ಲೋಕವು ಶೋಕವನ್ನು ಹೋಗಲಾಡಿಸಿ ಸುಲಭ ಮಾರ್ಗವು ಯಾವುದು ಎಂಬುದನ್ನು ಪ್ರದರ್ಶಿಸುತ್ತದೆಂಬ ಭಾವವು ಈ ಕರ್ಮಯೋಗಾದಿ ಸದ್ವಾರಾಕಾದ್ವಾರಕಗಳಾದ "**ಉಪಾಯಾ ನೈವ ಸಿದ್ಧ್ಯನ್ತಿ**" ಏಕೆಂದರೆ "**ಹ್ಯಪಾಯಬಹುಳಾಸ್ತಥಾ**" ಬಹುಗಳಾದ ವಿಘ್ನಗಳು ಕಷ್ಟಗಳು ಇರುವುದರಿಂದ, ಆದುದರಿಂದ **ಶೋಚತಾಂ** ಎಂಬ ಪ್ರಯೋಗವು. ಹಿಂದೆ "**ಭಕ್ತ್ಯಾದಾಶಕ್ತ್ಯಭಾವಃ**" ಎಂಬ ಶ್ಲೋಕದಲ್ಲಿ ಉಪಪಾದಿತವು ೯೪೧ ನೆಯ ಪುಟ ನೋಡಿ ಅಶಕ್ತಿಯಮೂಲಕ ಶೋಕವು ಹೇಳಲ್ಪಟ್ಟಿರುತ್ತದೆ ಶ್ರೀಯಾಮುನಮುನಿಗಳೂ ಹಾಗೆಯೇ "**ನಧರ್ಮನಿಷ್ಠೋಽಸ್ಮಿ ನಚಾತ್ಮವೇದೀ ನಭಕ್ತಿಮಾನ್ ತ್ವಚ್ಚರಣಾರವಿಂದೇ**" ಎಂದು ಹೇಳಿ, ಕರ್ಮಯೋಗಕ್ಕೆ ತಾವು ಅಶಕ್ತರೆಂದೂ, ಒಂದುವೇಳೆ

ಕಷ್ಟಪಟ್ಟು ಅದನ್ನು ಅನುಷ್ಠಿಸಿದರೆ ಜ್ಞಾನಯೋಗಕ್ಕೆ ಅಶಕ್ತರೆಂದೂ, ಒಂದುವೇಳೆ ಅದನ್ನೂ ಸಾಧಿಸಿದರೂ ಭಕ್ತಿಯೋಗಕ್ಕಂತೂ ಸುತರಾಂ ಶಕ್ತಿಯಿಲ್ಲವೆಂದು ಶೋಕಿಸಿ, ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ. ಇಂತಹ ಚರಮಶ್ಲೋಕದ ಅಭಿಪ್ರಾಯವನ್ನು ಬಹುಸುಲಭವಾಗಿಯೂ ಸ್ವಾರಸ್ಯವಾಗಿಯೂ, ಬರೆದು ತಮ್ಮ ಕಾರಿಕೆಯಿಂದ ಉಪದೇಶಿಸಿರುತ್ತಾರೆ—

**ಸುದುಷ್ಕರೇಣ ಶೋಚೇದ್ಯೋ ಯೇನ ಯೇನೇಷ್ಟಹೇತುನಾ ।**
**ಸ ಸ ಚಾಹ ಮೇವೇತಿ ಚರಮಶ್ಲೋಕೇ ಸಙ್ಗ್ರಹಃ ॥**

ಯಾವಯಾವ ಮನೋರಥವನ್ನು ಮನಸ್ಸಿನಲ್ಲಿಟ್ಟು ಅದಕ್ಕಾಗಿ ಏರ್ಪಟ್ಟ ಉಪಾಯವು **ಬಹುಕಷ್ಟವೇ** ಎಂದು ಯಾವ ಯಾವನು ನನ್ನನ್ನು ಆಶ್ರಯಿಸಿ ಶೋಕಿಸುವನೋ ಅವರೆಲ್ಲರಿಗೂ ಫಲದಾಯಕನು ಸಿದ್ಧೋಪಾಯನಾದ ನಾನೇ ಎಂಬುದು ಚರಮಶ್ಲೋಕದ ಸಙ್ಗ್ರಹಾರ್ಥವೆಂದು ಹೇಳಿರುತ್ತಾರೆ. ಅದುದರಿಂದಲೇ ಮುಂದೆ—

**ನ ಸ್ಸುಪನ್ಥಾಃ**—ನಮಗೆ ಒಳ್ಳೇ ಸಾಧನವಾದ ಶ್ರೀಕೃಷ್ಣನೇ "**ಕೃಷ್ಣಂ ಧರ್ಮಂ ಸನಾತನಮ್**" ಎಂಬಲ್ಲಿ ಹೇಳಿರುವ ಹಾಗೆ, ಸಿದ್ಧೋಪಾಯನು. ಅಶಕ್ತರಿಗೆ ಫಲವನ್ನು ಸಾಧಿಸಿಕೊಡುವವನು. ಕಲ್ಲು ಮುಳ್ಳುಗಳಿದ್ದುಕೊಂಡು, ಹುಲಿ ಕರಡಿ ಮೊದಲಾದವು ತುಂಬಿರುವ ಮಾರ್ಗವನ್ನು ತಪ್ಪಿಸಿ ಒಳ್ಳೇ ಸುಲಭವಾಗಿ ಕಷ್ಟಗಳಿಲ್ಲದೆ ಇರುವ ಮಾರ್ಗದಲ್ಲಿ ಕರೆದುಕೊಂಡು ಹೋಗುವೆನೆಂದು ಕಂಕಣಬದ್ಧನಾಗಿರುವ ಸಿದ್ಧೋಪಾಯನು— ಅಂತಹ ಮಾರ್ಗದಲ್ಲಿ ಹೋಗಲು ಬಾಲರು ಅಂಜುವರು, ಆದುದರಿಂದಲೇ ಹಿಂದೆ **ಬಾಲಾನರ್ಹೈಃ** ಎಂದು ಹೇಳಲ್ಪಟ್ಟಿತು. ಆಗಲಿ ಉಪಾಸನಮಾರ್ಗದಲ್ಲಿ ಕಲ್ಲು ಮುಳ್ಳು ಸರ್ಪ ಹುಲಿ ಕರಡಿಗಳಾವುವು ? ಎಂದರೆ ಅನೇಕ ವಿಘ್ನಗಳುಂಟು ಆ ಮಾರ್ಗದಲ್ಲಿ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳು ಸಿದ್ಧಿಸುವುದು ಬಲುಕಷ್ಟವು. ಅದೂ ಅಲ್ಲದೆ, ಇಂದ್ರಿಯಗಳ ಮತ್ತು ಮನಸ್ಸಿನ ಹಾವಳಿಗಿಂತ ಹೆಚ್ಚು ಭಯವು ಬೇರೇ ಇಲ್ಲವು. ಆದದರಿಂದಲೇ ಇಂತಹ ಸುಲಭ ಮಾರ್ಗವನ್ನು ತೋರಿಸುವನಾದುದರಿಂದ **ಸುಪಂಥಾಃ** ಎಂದು ಹೇಳಲ್ಪಟ್ಟನು. ಸರ್ವಭರವನ್ನೂ ತಾನೇ ವಹಿಸಿಕೊಂಡು, ಆ ಉಪಾಸನಸ್ಥಾನದಲ್ಲಿ ತಾನೇ ನಿಂತು, ಅದು ಸಾಧಿಸಿಕೊಡುವ ಫಲವನ್ನು ತಾನೇ ಕೃಪಯಾ ಅನುಗ್ರಹಿಸುವವನು. ಅದನ್ನು ಹೇಗೆ ಸಾಧಿಸಿಕೊಡುವನು ಎಂದರೆ ?

**ನಿಷ್ಪ್ರತ್ಯೂಹಂ ಯಥಾತಥಾ**—ನಿರ್ವಿಘ್ನವಾಗಿ, ದೇಹಾವಸಾನದಲ್ಲಿ ಪ್ರಾರಬ್ಧವು ಅನಭ್ಯುಪಗತವಾಗಿ ಇದ್ದರೂ ಅದನ್ನು ಕೂಡ ಹೋಗಲಾಡಿಸುವಂತಾವನು ತಾನು ಎಂದು, ಈ ಕ್ರಿಯಾವಿಶೇಷಣವು ತಿಳಿಸುತ್ತದೆ. "**ಸಾಧ್ಯಭಕ್ತಿಸ್ತು**

**ಸಾಹಸ್ರೀ ಪ್ರಾರಬ್ಧಸ್ಯಾಪಿಭೂಯಸೀ**" ಎಂದು ಹೇಳಲ್ಪಟ್ಟಿರುವದರಿಂದ, ಯಾರಾದರೂ ತನ್ನನ್ನು ಸಿದ್ಧೋಪಾಯನನ್ನಾಗಿ ವರಿಸಿದರೆ ಸಾಕು, ಅವರಿಗೆ ತನ್ನ ದಿವ್ಯಸ್ಥಾನವಾದ ವೈಕುಂಠವನ್ನು ಕೊಡಬೇಕೆಂದು ಬದ್ಧಕಂಕಣನಾಗಿದ್ದಾನೆಂದು ತಿಳಿಸುವದಕ್ಕಾಗಿ **ನಿಜಪದಂನೇತುಕಾಮಃ** ಎಂಬ ಪ್ರಯೋಗವು "**ಸಕೃದೇವ ಪ್ರಪನ್ನಾಯ ತವಾಸ್ಮೀತಿಚ ಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ**" ಹೀಗೇಗ ನಾನು "**ನೇತುಕಾಮ**"ನೆಂಬ ಭಾವವು ಆಗಲಿ ನಿರಪರಾಧಿಯನ್ನೇನೋ ನೀನು **ನೇತುಕಾಮ**ನು, ಮಹಾಪರಾಧಿಗಳಾಗಿ ಅಪರಾಧ ಚಕ್ರವರ್ತಿಗಳೆಂದು ಹೇಳಿಸಿಕೊಂಡಿರುವವರಿಗೂ ನೀನು **ನೇತಕಾಮನೋ ?** ಎಂದರೆ ಅಂತವರಿಗೂ ಕೂಡ ಅನುಕೂಲಿಸುವ ಒಂದು ಒಳ್ಳೇ **ಪಾಥೇಯ**ವನ್ನು **ಸ್ವಭೂಮ್ನಾ** ತನ್ನ ಮಹಿಮೆಯಿಂದಲೇ **ವಿದಧೇ** - ವಿಧಿಸಿರುತ್ತಾನೆಂದು ಹೇಳಲ್ಪಟ್ಟಿರುತ್ತದೆ. ಆ ಪಥ್ಯರೂಪವಾದ ಸತ್ಪಾಹಾರವು ಯಾವುದೆಂದರೆ ಭರನ್ಯಾಸವು ಇದು ಚರಮ ಶ್ಲೋಕರೂಪದಲ್ಲಿ ವಿಧಿಸಲ್ಪಟ್ಟಿರುತ್ತದೆ ಇದು ವಿಲಕ್ಷಣವಾದುದು ಎಂದು **ಕಿಮಪಿ** ಶಬ್ದಪ್ರಯೋಗವು, ಇದು ಎಂತಹ ಪಾಪಿಯನ್ನಾದರೂ "**ನಿಜಪದ**ವನ್ನು ಹೊಂದಿಸಬಲ್ಲದೋ? ಎಂದರೆ **ಸ್ವಭೂಮ್ನಾ** - ತನ್ನ ಅಘಟಿತಘಟನಾದಿ ಮಾಹಾತ್ಮ್ಯಗಳಿಂದಲೇ, **ವಿದಧೇ** - ವಿಧಿಸಲ್ಪಟ್ಟಿರುತ್ತದೆ ಅದಕ್ಕೆ ಎಂದರೆ ನನ್ನ ಪಾದದಲ್ಲಿ ದ್ವಯಮನ್ತ್ರಪೂರ್ವಕ ಅನುಷ್ಠಿಸುವ ಶರಣಾಗತಿಗೆ ಸರ್ವರಕ್ಷಣ ರೂಪಪ್ರಭಾವವುಂಟು ಅದನ್ನು ಪ್ರಭಾವರಕ್ಷಾಧಿಕಾರದಲ್ಲಿ ಕಾಣಬಹುದು (ಅಲ್ಲಿನ ಸಙ್ಗ್ರಹ ಶ್ಲೋಕವನ್ನು ನೋಡಿ) ಲೀಲಾಸಾರಥಿಯಾಗಿ ಈ ಚರಮಶ್ಲೋಕದಲ್ಲಿ ವಿಧಿಸಿರುವ ಉಪಾಯವು, **ಸತ್ಪಾಥೇಯವು** - ಅರ್ಚಿರಾದಿ ಮಾರ್ಗದಲ್ಲಿ ಹೋಗಲು ಹಿತಕರವಾದುದು ಈ ಉಪಾಯವು ಸತ್ತಾದುದು ಹೇಗೆಂದರೆ, ಸರ್ವಾಧಿಕಾರತ್ವವೂ, ಸರ್ವಾನಿಷ್ಟವನ್ನೂ ಹೋಗಲಾಡಿಸುವ ಸಾಮರ್ಥ್ಯವೂ, ಸರ್ವಪುರುಷಾರ್ಥಪ್ರದತ್ವವೂ, ಸುಕರತ್ವವೂ, ಸಕೃತ್ಕರ್ತವ್ಯವೂ, ಅವಿಳಂಬಿತ ಫಲಪ್ರದತ್ವವೂ, ಪ್ರತಿಬಂಧಕರಾಹಿತ್ಯವೂ ಇವು ಗಳೆಲ್ಲಾ ಇರುವದರಿಂದ ಸತ್ತಾದ ಪಾಥೇಯವು. ಮತ್ತು ತೈತ್ತರೀಯ ಶ್ರುತಿಯಲ್ಲಿ ಇದರ ಮಹಾತ್ಮ್ಯೆಯು ಸರ್ವೋತ್ಕೃಷ್ಟವೆಂಬ, "**ತಸ್ಮಾನ್ನ್ಯಾಸ ಮೇಷಾಂ ತಪಸಾಮತಿರಿಕ್ತಮಾಹುಃ**" ಎಂದು ಹೇಳಲ್ಪಟ್ಟಿರುತ್ತದೆ

**ಯದ್ಯೇನ ಕಾಮಕಾಮೇನ ನ ಸಾಧ್ಯಂ ಸಾಧನಾನ್ತರೈಃ ।**
**ಮುಮುಕ್ಷುಣಾ ಯತ್ಸಾಂಖ್ಯೇನ ಯೋಗೇನ ನಚಭಕ್ತಿತಃ ।**
**ಪ್ರಾಪ್ಯತೇ ಪರಮಂಧಾಮ ಯತೋ ನಾವರ್ತತೇಯತಿಃ ।**
**ತೇನತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ ॥** ಮತ್ತು

ಮೂ॥ ಒಣ್ಡೊಡಿಯಾಳ್ ತಿರುಮಗಳುನ್ದಾನು ಮಾಕಿ,
ಯೊರುನಿನೈವಾಲೀನ್ರವುಯಿರೆಲ್ಲಾ ಮುಯ್ಯ ।
ವಣ್ಡುವರೈನಗರ್ವಾಳ ವಸುದೇವರ್ಕಾಯ್,
ಮನ್ನವರ್ಕ್ಕು ತ್ತೇರ್ಪ್ಪಾಕನಾಕಿ ನಿನ್ರ ॥

" ಸತ್ಕರ್ಮನಿರತಾ ಶ್ಶುದ್ಧಾಸ್ಸಾಂಖ್ಯಯೋಗ ವಿದಸ್ತಥಾ ।
ನಾರ್ಹನ್ತಿ ಶರಣಸ್ಥಸ್ಯಕಲಾಂ ಕೋಟಿತಮಿಾಮಪಿ ॥ '
ಎಂಬೀ ಪ್ರಮಾಣಗಳು **ಸತ್ಪಾಥೇಯಂ** ಎಂಬುದನ್ನು ಬೋಧಿಸುತ್ತವೆ

ಪರಮಾತ್ಮನು ಹೃಷೀಕೇಶನಾಗಿ ನಮ್ಮನ್ನು ಪೂರ್ವಕರ್ಮಾನುಸಾರವಾಗಿ ಪ್ರವೃತ್ತಿಗಳಲ್ಲಿ ನಿಯಮಿಸುವವನಾದುದರಿಂದ, **ಸರ್ವನೇತಾ** ಎಂದರೆ ಪ್ರೇರಿತಾ ಎಂದು ಹೇಳಲ್ಪಟ್ಟಿತು ಆದುದರಿಂದ ಅರ್ಜುನನಿಗೆ **ಲೀಲಾಸಾರಥಿ** ಎಂದು ಹೇಳಲ್ಪಟ್ಟಿರುತ್ತದೆ ಶ್ರೀಕೃಷ್ಣಭಗವಾನ್ ಸಾರಥಿಯಾಗಿ ಯುದ್ಧಪ್ರೋತ್ಸಾಹಮಾಡಿದವನು. ಪ್ರೇರಿತಾವಾಗಿಯೇ "**ದ್ವಾಸುಪರ್ಣಾ ಸಯುಜಾಸಖಾವಾ**" (ಮುಂ) ಎಂದು ಶ್ರುತಿಯಲ್ಲಿ ಹೇಳಿರುವ ಹಾಗೂ, " **ವಿಶ್ವಸ್ಯಾಯತನಂಮಹತ್** " ಎಂದು ಹೇಳಿರುವ ಹಾಗೂ, ನಮ್ಮ ಹೃದಯ ಗುಹೆಯಲ್ಲಿ ನಮಗೆ ನಿಯಾಮಕನಾಗಿರುತ್ತಾನೆಂದು "**ಸರ್ವನೇತಾ**". ಈ ಅರ್ಥವನ್ನು ಪ್ರಣವದಲ್ಲೂ ಕಾಣಬಹುದು ಪ್ರಣವದ ಅಕಾರದಲ್ಲಿ ಶ್ರೀ ಮಹಾವಿಷ್ಣುವು **ಸರ್ವನೇತಾವಾಗಿ** ಇದ್ದಾನೆ. ಆತನಿಗೆ ಶೇಷಭೂತನಾಗಿ ಅಕಿಂಚನನಾಗಿರುವ ಮಕಾರವಾಚ್ಯ ಜೀವನು ಅನಂತರ ಹೇಳಲ್ಪಟ್ಟಿರುತ್ತಾನೆ. ಆದುದರಿಂದ ನಮ್ಮ ಹೃದಯ ಗುಹೆಯಲ್ಲಿರುವದೂ **ಲೀಲಾಸಾರಥಿಯು** ಹಾಗೆಯೇ. ಈ ಲೀಲಾಸಾರಥಿಯಾಗಿರುವ ದೆಶೆಯಲ್ಲಿ ತಾನು ಹೇಗೆ ಏನೂಮಾಡದೇ ಇರುತ್ತಾನೋ, ಹಾಗೆಯೇ ನಮ್ಮ ಹೃದಯ ಗುಹೆಯಲ್ಲೂ **ಅನಶ್ನನ್ ಅನ್ಯೋ ಅಭಿಚಾಕಶೀತಿ** ಅರ್ಜುನ ಸಾರಥಿಯಾಗಿ ಹೇಗೆ ಅರ್ಜುನನಿಗೆ ಆತನ ಪ್ರಾರ್ಥನೆಯ ಪ್ರಕಾರ ಯುದ್ಧಪ್ರೋತ್ಸಾಹನದಲ್ಲಿ ಮಾತ್ರ ಪ್ರವೃತ್ತಿಯೋ, ಹಾಗೆಯೇ ನಾವೂ ನಮ್ಮ ಎಲ್ಲಾ ಪ್ರವೃತ್ತಿಗಳಲ್ಲೂ ಆತನನ್ನು ಪ್ರಾರ್ಥಿಸಿದರೆ ಸರಿಯಾದ ಮಾರ್ಗದಲ್ಲಿ ಹೋಗುವ ಹಾಗೆ ಪ್ರೇರಿಸುವನು. ಇದೀಗ ಸ್ವಾಮಿಯ ನಿರ್ಹೇತುಕ ಕೃಪಾಪ್ರಭಾವವು ಈ ಅಭಿಪ್ರಾಯಗಳೆಲ್ಲಾ **ಸಾರಥಿಸ್ಸರ್ವನೇತಾ** ಎಂಬ ಪ್ರಯೋಗದಲ್ಲಿ ಅಡಗಿವೆ.

ಇಲ್ಲಿ **ಸರ್ವನೇತಾ** ಎಂಬ ಪ್ರಯೋಗದಿಂದ, **ಸರ್ವಸ್ಯಶರಣಂ ಸುಹೃತ್** ಎಂಬ ಉಪನಿಷದ್ವಾಕ್ಯವನ್ನು ಅನುಸರಿಸಿ ಮಹರ್ಷಿಯು " **ಸರ್ವಲೋಕಶರಣ್ಯಾಯ**

**ರಾಘವಾಯ ಮಹಾತ್ಮನೇ । ನಿವೇದಯತಮಾಂ ಕ್ಷಿಪ್ರಂ** " ಎಂಬ ಪ್ರಯೋಗದಿಂದ ರಾಕ್ಷಸನಾದ ವಿಭೀಷಣನು ಶರಣಾಗತಿಯನ್ನನುಷ್ಠಿಸಲು ಬಂದಿರುವದರಿಂದ ಈ ತನ್ನ ಆತ್ಮಾವನ್ನು ಸಮರ್ಪಿಸಿರುತ್ತೇನೆಂಬ ಅರ್ಥವು ಉಪಪಾದಿಸಲ್ಪಟ್ಟು, ಇದರಿಂದ ಸ್ತ್ರೀ ಶೂದ್ರಾದಿ ಜನ್ಮದಲ್ಲಿರುವ ಸರ್ವರಿಗೂ ಶರಣಾಗತಿಯು ಹೇಳಲ್ಪಡಲಿಲ್ಲವೆಂದೂ, ಅವರಿಗೆಲ್ಲಾ ಮೋಕ್ಷವೇ ಇಲ್ಲವೆಂಬ ವಾದವು ನಿರಾಕೃತವು, " **ಪಾಪಜೀವಾಃ ಖಗಾ ಮೃಗಾಃ** '' ಇವುಗಳಿಗೂ, " **ಅಪಿಸ್ತ್ರಿಯಸ್ತಥಾ ಶೂದ್ರಾಃ ತೇ ಪಿಯಾನ್ತಿ ಪರಾಂಗತಿಮ್** '' ಎಂಬ ಮಹರ್ಷಿಗಳ ಉಪಬ್ರಹ್ಮಣಗಳಿಗೂ, ಆವಾದವು ವಿರೋಧವು. ಹಿಂದೆ ಪ್ರಪತ್ತಿಯೋಗ್ಯಾಧಿಕಾರದ ೯೩೭ - ೯೪೦ ಪುಟಗಳನ್ನು ನೋಡಿ.

ನಮ್ಮ ಪ್ರಾರಬ್ಧಕರ್ಮವು ಸ್ವಲ್ಪ ಕ್ರೂರವಾಗಿ ಈಸುಕರಮಾರ್ಗವನ್ನು ಅವಲಂಬಿಸಲು ಬೇಕಾದ ಜ್ಞಾನವಿಲ್ಲದ ಪಕ್ಷದಲ್ಲಿ, ಅಂತಹ ಪ್ರಾರಬ್ಧಕರ್ಮದ ನಾಶದೊಂದಿಗೆ ಸರಿಯಾದ ಮಾರ್ಗದಲ್ಲಿ ಪ್ರವರ್ತಿಸುವ ಹಾಗೆ ಆತನನ್ನು ಪ್ರಾರ್ಥಿಸಿ " **ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ** '' ಎಂಬಲ್ಲಿನ ಹಾಗೆ ಶರಣಹೊಂದಿದರೆ, ಭಗವಂತನು ಪ್ರೀತನಾಗಿ ಪ್ರಾರಬ್ಧನಿವೃತ್ತಿಯನ್ನುಂಟುಮಾಡುವನೆಂದು ಆ ಶ್ಲೋಕದ " **ಮತ್ಪ್ರಸಾದಾತ್ಪರಾಂಶಾನ್ತಿಂ** " (ಗೀ. ೧೮-೬೨) ಎಂಬುದರಿಂದ ಉಪದೇಶಿಸಿರುತ್ತಾರೆ ಅನಂತರ ಪ್ರಾರಬ್ಧ ಮೂಲಕವಾಗಿ ದುಃಖಕ್ಕೆ ಕಾರಣವಿಲ್ಲವು

**ಅರ್ಥವು**—ಮೇಲೆ ಸಙ್ಗ್ರಹವಾಗಿ ಹೇಳಿದ ಅರ್ಥಗಳನ್ನೇ ಸ್ತ್ರೀಶೂದ್ರಾದಿಗಳಿಗೆ ತಿಳಿಯುವ ಹಾಗೆ ಒಂದು ತಮಿಳ್‌ಪಾಶುರದಿಂದ ಸಙ್ಗ್ರಹಿಸಿ ಹೇಳುತ್ತಾರೆ. ಈ ಚರಮಶ್ಲೋಕದಲ್ಲಿ, ದ್ವಯಮನ್ತ್ರೋಕ್ತವಾದ ಲಕ್ಷ್ಮಿಯ ಅನ್ವಯವು ಉಪಾಯೋಪೇಯಗಳಲ್ಲಿ ತೋರಿ ಬರುವದಿಲ್ಲವು. " **ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ । ರಕ್ಷಕಸ್ಸರ್ವಸಿದ್ಧಾನ್ತೇ ವೇದಾಂತೇಷುಚ ಗೀಯತೇ** " ಎಂದು ಲಕ್ಷ್ಮೀ ತನ್ತ್ರದಲ್ಲಿ ಉಪಪಾದಿಸಲ್ಪಟ್ಟ ಹಾಗೆ, ಲಕ್ಷ್ಮಿಯು ಸರ್ವರಕ್ಷಕತ್ವದಲ್ಲಿ ಮಾತ್ರವಲ್ಲದೇ ಚೇತನರ ಸೃಷ್ಟಿ, ಸ್ಥಿತಿ ಪಾಲನಾದಿ ಸಮಸ್ತಪ್ರವೃತ್ತಿಗಳಲ್ಲೂ ಭಗವಂತನಿಗೆ ಸಹಧರ್ಮಚಾರಿಣಿಯು ಎಂಬ ಸಿದ್ಧಾನ್ತಾಭಿಪ್ರಾಯವೂ ಸಹ ಚರಮಶ್ಲೋಕದಲ್ಲಿ ದ್ಯೋತಿತವೆಂದೂ, ಆದುದರಿಂದ ಮೂಲಮನ್ತ್ರದ್ವಯ ಚರಮಶ್ಲೋಕಗಳ ಉಪದೇಶದಲ್ಲಿ ಐಕಕಂಠ್ಯ ಉಂಟೆಂಬುದನ್ನು ಸ್ಥಾಪಿಸುತ್ತಾರೆ. ದ್ವಯದಲ್ಲಿ ಶ್ರೀಮಚ್ಛಬ್ದವು ಮನ್ತ್ರಾದಿಯಲ್ಲೇ ಇರುವದರಿಂದ, ಮಾಮೇಕಂ ಎಂಬಲ್ಲಿ ತೋರಿ ಬರುವ ಅರ್ಥವನ್ನು ಸ್ಮರಿಸಿ ಹೇಳುತ್ತಾರೆ—ಮುಂದೆ ಕಾರಿಕೆಗಳಿಂದಲೂ ಇದನ್ನೇ ಸ್ಥಾಪಿಸುತ್ತಾರೆ— ಇದೂ ಅಲ್ಲದೆ ಈ ವಿಭೂತಿಯು ಲೀಲಾ ವಿಭೂತಿಯೆಂದು ಹೇಳಿ, ಇಲ್ಲಿಂದ ಚೇತನನನ್ನು ಬೇರೆ ಕಡೆಗೆ ದಿವ್ಯವೈಕುಂಠಕ್ಕೆ ಕರೆದುಕೊಳ್ಳುವದು ತನ್ನ ಲೀಲೆಗೆ ಕುಂದುಕವಲ್ಲವೋ ಎಂದರೆ ಇಲ್ಲಿದ್ದವನನ್ನು ತನ್ನ ವೈಕುಂಠಕ್ಕೆ ಕರೆದು

**ತಣ್ತುಳವ ಮಲರ್ ಮಾರ್ಪನ್ತಾನೇ ಶೊನ್ನ**
**ತನಿತ್ತರುಮನ್ತಾನೆ ಮಕ್ಕಾಯ್ ತ್ತನ್ನೈಯೆನ್ರು ।**
**ಜ್ಕಣ್ಡುಕಳಿತ್ತಡಿ ಶೂಡ ವಿಲಕ್ಕಾಯ್ ನಿನ್ರ**
**ಕಣ್ಪುದೈಯಲ್ ವಿಳಿಯಾಟ್ಟೈಕ್ಕಳಿಕ್ಕನ್ರಾನೇ ॥**

ಕೊಳ್ಳಲು ಅರ್ಹನೆಂದು ಭಾವಿಸಿ ಹೇಯದೇಹ ತಪ್ಪಿಸಿ ಕರೆದುಕೊಳ್ಳುವದೂ ಕೂಡ ಒಂದು ಕಣ್ಣುಮುಚ್ಚಾಲೆ ಆಟದ ಹಾಗೆಯೇ ಲೀಲೆಯೇ ಎಂದು ಉಪಪಾದಿಸುತ್ತಾರೆ.

**ಒಣ್ತೊಡಿಯಾಳ್** - ಸುಂದರವಾಗಿರುವ ಹಸ್ತಾಭರಣಗಳನ್ನುಳ್ಳ, ಇದು ಸರ್ವಾಭರಣಭೂಷಿತಳಾಗಿರುವದಕ್ಕೂ ಉಪಲಕ್ಷಣವು, **ತಿರುಮಗಳುಮ್** - "ನಾರೀಣಾಂ ಉತ್ತಮಾವಧೂಃ" ಎಂದು ಹೇಳಿರುವ ಸರ್ವೋತ್ಕೃಷ್ಟಸ್ತ್ರೀಯಾದ ಲಕ್ಷ್ಮಿಯೂ, **ತಾನುಮಾಗಿ** - ನಾರಾಯಣನಾದ ತಾನು ಒಟ್ಟಿಗೆ ಸೇರಿ, ದ್ವಾಚ **ಸದೈಕಶೇಷೀ** - ಒಂದಾದ ಶೇಷಿತ್ವವನ್ನು ವಹಿಸಿ ಎಂಬರ್ಥವು, **ಒರುನಿನೈವಾಲೀನ್ರ** - ಪರಸ್ಪರ ವಿರೋಧವಿಲ್ಲದ ಏಕಸಙ್ಕಲ್ಪದಿಂದ ಸೃಷ್ಟಿಸಿದ, **ಉಯರೆಲ್ಲಾಮ್** - ಚೇತನರೆಲ್ಲಾ, **ಉಯ್ಯ**-ಹೇಗೆ ಉಜ್ಜೀವನವನ್ನು ಹೊಂದಬಹುದೋ ಹಾಗೆ, **ವಣ್** - ಉತ್ಕೃಷ್ಟವಾದ, **ತುವರೈನಗರ್** - ದ್ವಾರಕಾ ನಗರವೆಲ್ಲಾ ಎಂದರೆ ಅಲ್ಲಿರುವರೆಲ್ಲಾ, **ವಾಳ** - ಸರ್ವೋತ್ಕೃಷ್ಟದೆಶೆಯನ್ನು ಹೊಂದ ವ ಹಾಗೆ, **ವಶುದೇವರ್ಕ್ಕಾಯ್** - ವಸುದೇವನಿಗೆ ಪುತ್ರನಾಗಿ ಅವತರಿಸಿ, ಅನಂತರ, **ಮನ್ನವರ್ಕ್ಕು** - ರಾಜರುಗಳಾದ ಪಾಂಡವರಿಗೆ ಹಿತಮಾಡುವದಕ್ಕಾಗಿ, **ತೇರ್ಪ್ಪಾಕನಾಗಿ ನಿನ್ರ** - ಅರ್ಜುನನಿಗೆ ಲೀಲಾಸಾರಥಿಯಾಗಿ ನಿಂತ, **ತಣ್ ತುಳವ ಮಲರ್ ಮಾರ್ಪ್ಪ** - ಶೀತಳವಾದ ತುಳಸೀ ಪುಷ್ಪಗಳ ಹಾರದಿಂದ ಅಲಂಕರಿಸಲ್ಪಟ್ಟ ವಕ್ಷಸ್ಥಳವನ್ನುಳ್ಳವನಾದ ಶ್ರೀ ಕೃಷ್ಣಭಗವಾನರವರೇ, **ತಾನೇ ಶೊನ್ನ** - ಈ ಅಮೋಘ ಶ್ಲೋಕವನ್ನು ಹೇಳು ಎಂದು ಯಾರೊಬ್ಬರಿಂದಲೂ ಕೇಳಿಸಿಕೊಳ್ಳದೆ ತಾನೇ ನಿರ್ಹೇತುಕ ಪರಮಕೃಪಯಾ ಪ್ರೇರಿತನಾಗಿ ಹೇಳಿದ, ತನಿ - ಅದ್ವಿತೀಯನಾದ, **ತರುಮ್**- ಎಂದರೆ ಧರ್ಮಂ, "ಕೃಷ್ಣಂ ಧರ್ಮಂ ಸನಾತನಮ್" ಎಂದು ಹೇಳಿರುವ ಹಾಗೆ ಸಿದ್ಧೋಪಾಯನು, **ತಾನೆಮಕ್ಕಾಯ್** - ನಮಗೆ ದುಸ್ತರವಾದ ಭಕ್ತಿಸ್ಥಾನದಲ್ಲಿ ತಾನೇ ಸಿದ್ಧೋಪಾಯನಾಗಿ ನಿಂತವನಾಗಿ ಎಂಬರ್ಥವು, ತನ್ನೈ - ಶ್ರಿಯಃಪತಿಯಾದ ತನ್ನನ್ನು, **ಎನ್ರುಮ್** - ಸದಾ, **ಕಣ್ಡು** - ಸ್ವಾಮಿ ಅನುಗ್ರಹಿಸುವ ಅಪ್ರಾಕೃತ ದಿವ್ಯ ಚಕ್ಷುಸ್ಸಿನಿಂದ ಸಾಕ್ಷಾತ್ಕರಿಸಿಕೊಂಡು, **ಕಳಿತ್ತು** - ಪರಮಾನಂದಭರಿತರಾಗಿ, **ಅಡಿ ಶೂಡ** - ಶ್ರಿಯಃಪತಿಯ ಪಾದಾರವಿಂದಗಳನ್ನು ಶಿರಸ್ಸಿನಲ್ಲಿ ಧರಿಸಲು, ವಿಲ

**ಕ್ಕಾಯ್** ನಿನ್ರ ಪ್ರತಿಬಂಧಕವಾಗಿರುವ **ಕಣ್ಪುದೈಯಲ್ ವಿಳಿಯಾಟ್ಟು**-ಕಣ್ಣು ಮುಚ್ಚಾಲೆ ಎನ್ನುವ ಆಟವನ್ನು, **ಕಳಿಕ್ಕಿನ್ರಾನೇ** - ಹೋಗಲಾಡಿಸ ವನಲ್ಲವೇ !

ಈ ಶ್ಲೋಕತಾತ್ಪರ್ಯವು ಸಙ್ಗ್ರಹವಾಗಿ ಏನೆಂದರೆ— ಸರ್ವಾಭರಣಭೂಷಿತೆಯಾದ ಲಕ್ಷ್ಮಿಯೂ ಕೃಷ್ಣಾವತಾರಿಯಾದ ನೀನೂ ಸೇರಿ, ಏಕಸಙ್ಕಲ್ಪದಿಂದ ಚೇತನರಿಗೆ ಅವರವರ ಕರ್ಮಾನುಸಾರ ಕರಣ ಕಳೇಬರ ಪ್ರದಾನಮೂಲಕ ಸೃಷ್ಟ್ಯಾದಿ ಕ್ರಮಗಳನ್ನೆಲ್ಲಾ ನಡೆಸುವವರಾಗಿ, ಪರಮಕೃಪಯಾ ದ್ವಾರಕಾನಗರವಾಸಿಗಳಾಗಿರುವ ಸಾಧುಗಳ ಪರಿತ್ರಾಣಕ್ಕಾಗಿ ನೀನು ವಸುದೇವನ ಪುತ್ರನಾಗಿ ಅವತರಿಸಿ, ಅವಳೂ ಸಹ ನಿನಗೆ ಸಹಧರ್ಮಚಾರಿಯಾಗಿ ರುಕ್ಮಿಣಿಯಾಗಿ ಅವತರಿಸಿ, ಪರಮಸಾಧುಗಳಾದ ಪಾಂಡವರನ್ನು ಉದ್ಧಾರಮಾಡುವದಕ್ಕಾಗಿ, ಅರ್ಜುನನಿಗೆ ಲೀಲಾ ಸಾರಥಿಯಾಗಿ ನಿಂತು, ಕೋಮಲವಾದ ತುಳಸೀ ಪುಷ್ಪಗಳ ಮಾಲೆಯನ್ನು ಧರಿಸಿ ತಾನು ಅಂತಹ ಕೋಮಲಹೃದಯನೆಂದು ತೋರಿ, ಆತನನ್ನು ವ್ಯಾಜೀಕರಿಸಿ ನಮ್ಮಗಳನ್ನು ಉದ್ಧಾರ ಮಾಡುವದಕ್ಕಾಗಿ ನೀನೇ ನಿರ್ಹೇತುಕ ಕೃಪೆಯಿಂದ ಹೇಳಿದ ಚರಮಶ್ಲೋಕದ ಮೂಲಕ ವಿಧಿಸಿರುವದೇನೆಂದರೆ—ನಾನೇ ಸಿದ್ಧೋಪಾಯನು, ದುಷ್ಕರವಾದ ಭಕ್ತಿಯೋಗಸ್ಥಾನದಲ್ಲಿ ನಾನೇ ನಿಂತು ಆಶ್ರಿತರ ಸರ್ವಭರವನ್ನು ವಹಿಸಿ, ಅವರಿಗೆ ಪ್ರಾಪ್ತವಾಗಿದ್ದ ಪ್ರಕೃತಿಸಂಬಂಧವನ್ನು ಹೋಗಲಾಡಿಸಿ, ಅಪ್ರಾಕೃತ ದೇಹವನ್ನು ಕೊಟ್ಟು, ನಮ್ಮಿಬ್ಬರನ್ನೂ ಯಾವಾಗಲೂ ಸಾಕ್ಷಾತ್ಕರಿಸಿಕೊಂಡು, ಆನಂದಿಸುವ ಮತ್ತು ನಮ್ಮಿಬ್ಬರ ಚರಣಾರವಿಂದಗಳನ್ನು ಶಿರಸಾ ಧರಿಸಿ ಸರ್ವವಿಧಕೈಂಕರ್ಯಗಳನ್ನು ಮಾಡುವ ಮಹತ್ಪದವಿಯನ್ನು ನಾನೇ ಸಾಧಿಸಿಕೊಡುವೆನೆಂದು ಹೇಳಿರುತ್ತೀಯೇ ಎಂಬುದು.

**ಒಂಡೊಡಿಯಾಳ್ ತಿರುಮಗಳುಮ್ ತಾನುಮಾಗಿ** - ಎಂಬುದರಿಂದ **ಆನೀದವಾದಗ್ಂ ಸ್ವಧಯಾತದೇಕಂ** ಎಂಬ ಋಗ್ವೇದ ಶ್ರುತ್ಯರ್ಥವೇ **ಮಾಮೇಕಂ** ಎಂಬಲ್ಲಿ ಹೇಳಲ್ಪಟ್ಟಿತೆಂಬ ಅಭಿಪ್ರಾಯವುದ್ಯೋತಿತವು ಹಾಗೆಯೇ ಈ ಶ್ರುತ್ಯರ್ಥವು ಶ್ರೀವ್ಯಾಸಮಹರ್ಷಿಯಿಂದ, ಮೋಕ್ಷಧರ್ಮದಲ್ಲಿ

**" ತಮ ಏವಾಭವತ್ಸರ್ವಂ ನ ಪ್ರಜ್ಞಾಯತ ಕಿಂಚನ ।**
**ಯೋನಿರೂಪ ಇತಿ ಪ್ರೋಕ್ತಃ ತಂ ಪ್ರಧಾನಂ ಪ್ರಚಕ್ಷತೇ ।**
**ವಿದ್ಯಾಸಹಾಯವಾರ್ ದೇವೋ ವಿಷ್ವಕ್ಸೇನೋ ಹರಿಃ ಪ್ರಭುಃ "**

ಎಂದೂ ಮತ್ತು **" ಕೃತ್ವಾ ಮತ್ಸ್ಥಾನಿ ಭೂತಾನಿ ಚರಾಣಿ ಸ್ಥಾವರಾಣಿಚ**
**ಏಕಾಕೀ ವಿದ್ಯಯಾಸಾರ್ಧಂ ವಿಹರಿಷ್ಯೇ ದ್ವಿಜೋತ್ತಮ**
**ತತೋ ಭೂಯೋ ಜಗತ್ಸೃಷ್ಟಿಂ ಕರಿಷ್ಯಾಮೀಹ ವಿದ್ಯಯಾ"**

ಎಂದೂ ಹೇಳಲ್ಪಟ್ಟಿರುವದರಿಂದ **ಮಾಮೇಕಮ್** ಎಂದರೆ ಲಕ್ಷ್ಮ್ಯಾಸಹ **ಏಕಮ್** ಎಂಬರ್ಥವು. ಮೇಲಿನ ಪ್ರಮಾಣಗಳಲ್ಲಿ ವಿದ್ಯಾ ಶಬ್ದವು ಶ್ರುತಿಯ **ಸ್ವಧಾ** ಶಬ್ದದ ಹಾಗೆ ಲಕ್ಷ್ಮಿಯನ್ನು ಬೋಧಿಸುತ್ತದೆ ಪಾದ್ಮಪುರಾಣದಲ್ಲಿ ಶ್ರೀವ್ಯಾಸರೇ **ಮಾಮೇಕಮ್** ಎಂಬುದಕ್ಕೆ ಅರ್ಥವನ್ನು ತಾವೇ ಉಪದೇಶಿಸಿರುತ್ತಾರೆ - ಹೇಗೆಂದರೆ—

**ಮಾಮೇಕಂ ಚ ಶ್ರಿಯಾಯುಕ್ತಂ ಭಕ್ತಿಯುಕ್ತೋನರೋತ್ತಮಃ ।**
**ದ್ವಯೇನ ಮನ್ತ್ರರತ್ನೇನ ಮತ್ಪ್ರಿಯೇಣ ಭಜೇತ್ಸದಾ ।**
**ಅಚಿರಾತ್ ಮತ್ಪ್ರಸಾದೇನ ಮಲ್ಲೋಕಂಚ ಸಗಚ್ಛತಿ ॥**

ಇಲ್ಲಿ ಮಾಮೇಕಂ ಎಂಬುದಕ್ಕೆ ಶ್ರಿಯಾಯುಕ್ತಂ ಏಕಂ ಎಂಬುದೇ ಅರ್ಥವೆಂದೇ ಭಾವಿಸತಕ್ಕದ್ದು ದಾಸನು ಬರೆದ ಶ್ರೀಸ್ತುತಿಯ ವ್ಯಾಖ್ಯಾನ ೫೮ನೆಯ ಮತ್ತು ೭೮ನೆಯ ಪುಟಗಳನ್ನು ನೋಡಿ. ಶ್ರೀ ಪರಾಶರರು " **ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃಶ್ರೀರನಪಾಯಿನೀ** " ಎಂದು ಲಕ್ಷ್ಮಿಯು ಸ್ವಾಮಿಗೆ ಅಪೃಥಕ್ಸಿದ್ಧ ವಿಶೇಷಣವಾದದರಿಂದ ವಿಶೇಷಣದೊಂದಿಗೆ ಯಾವಾಗಲೂ ಇರುವ ವಿಶೇಷ್ಯವೆಂದು **ಮಾಮೇಕಂ** ಎಂದು ಚರಮಶ್ಲೋಕದಲ್ಲಿ ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟೇ ಶ್ರೀಮದಾಚಾರ್ಯರು **ಒಂಡೊಡಿಯಾಳ್ ತಿರುಮಗಳುಂ ತಾನುಮಾಕಿ** ಎಂಬ ಸಾರವತ್ತಾದ ಪ್ರಯೋಗವು. **ಅನನ್ಯಾಹಿ ಮಯಾ ಸೀತಾ ಭಾಸ್ಕರೇಣ ಪ್ರಭಾಯಥಾ** ಎಂಬ ಮಹರ್ಷಿಯ ಪ್ರಯೋಗವೂ ಈ ಅಪೃಥಕ್ಸಿದ್ಧವಿಶೇಷಣವಾಗಿರುವದರಿಂದ ಸನ್ನಿಯೋಗ ಶಿಷ್ಟನ್ಯಾಯವನ್ನು ಸಮರ್ಥಿಸುತ್ತದೆ. ಶ್ರೀ ನಮ್ಮಾಳ್ವಾರ್ರವರೂ **ಅಗಲಗಿಲ್ಲೇನಿಱೈಯುಂ ಎನ್ರು ಅಲರ್ ಮೇಲ್ ಮಙ್ಗೈ** ಎಂದೂ ಪ್ರಯೋಗಿಸಿರುತ್ತಾರೆ

ಇಬ್ಬರು ಸೇರಿಯೇ ಸೃಷ್ಟಿಯೇವಿನಾ ಲಕ್ಷ್ಮಿ ಇಲ್ಲದೆ ತಾನೊಬ್ಬನೇ ಎಂದಿಗೂ ಸೃಷ್ಟಿಸ್ಥಿತಿ ಚೇತನರಕ್ಷಣೆ ಲಯಗಳನ್ನೂ, ತನ್ನ ಅವತಾರ ಕ್ರಮಗಳನ್ನೂ, ದಿವ್ಯಚೇಷ್ಟಿತಗಳನ್ನೂ ಯಾವುದನ್ನೂ, **ಬಹುಸ್ಯಾಂ** ಎಂದು ಸಙ್ಕಲ್ಪಿಸಿ ನಡೆಸುವದಿಲ್ಲವು. ಈ ಅಭಿಪ್ರಾಯವನ್ನು ಬಹು ನಿಪುಣತರವಾಗಿ "**ಪಶ್ಯನ್ತೀಷು**" ಎಂಬ ಶ್ರೀ ಸ್ತುತಿಯ ೭ನೆಯ ಶ್ಲೋಕದಲ್ಲಿ ಉಪಪಾದಿತವು ೫೫-೬೦ನೆಯ ಪುಟಗಳನ್ನು ನೋಡಿ. ಶ್ರೀ ಪರಾಶರಭಟ್ಟರು ಅನೇಕ ಕಡೆಗಳಲ್ಲಿ ಲಕ್ಷ್ಮಿಗೂ ಸೃಷ್ಟ್ಯಾದಿ ಪ್ರವೃತ್ತಿಗಳಲ್ಲಿ ಅನ್ವಯ ಉಂಟೆಂದು ಹೇಳಿರುತ್ತಾರೆ ಶ್ರೀ ಸ್ತುತಿಯ ೬ನೆಯ ಪುಟವನ್ನು ನೋಡಿ. ಶ್ರೀ ಯತಿವರ್ಯರು "**ಬ್ರಹ್ಮಣಿ ಶ್ರೀನಿವಾಸೇ**" ಎಂಬ ಪ್ರಯೋಗದಿಂದಲೂ ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ ಆದುದರಿಂದಲೇ **ಒರುನಿನ್ನೈ ನಾಲೀನ್ರ** ಎಂಬ ಪ್ರಯೋಗವು. ಇಬ್ಬರಿಗೂ ಪರಸ್ಪರ ವಿಘಾತವಿಲ್ಲದೆ ಒಂದೇ ವಿಧವಾದ ಸಙ್ಕಲ್ಪವು. ಇದನ್ನೇ ಆಂಜನೇಯನು "**ಅಸ್ಯಾದೇವ್ಯಾ ಮನಸ್ತಸ್ಮಿನ್ ತಸ್ಯಚಾಸ್ಯಾಂ ಪ್ರತಿ**

**ಷ್ಟಿತಮ್''** ಎಂದೂ, ಶ್ರೀ ಕೂರೇಶರೂ **ಯಸ್ಯಾವೀಕ್ಷ್ಯಮುಖಂ ತದಿಂಗಿತ ಪರಾಧೀನೋ ವಿಧತ್ತೇಽಖಿಲಮ್** ಎಂದೂ, ವರ್ಣಿಸಿರುತ್ತಾರೆ

ಸಾರಸಙ್ಗ್ರಹವ್ಯಾಖ್ಯಾತಾ,"**ಮಾಯಾವಾ ಏಷಾ ನಾರಸಿಂಹೀ ಸರ್ವಮಿದಂ ಸೃಜತಿ, ಸರ್ವಮಿದಂ ರಕ್ಷತಿ, ಸರ್ವಮಿದಂ ಸಂಹರಸಿ ವಿರಾಡಸಿ ಬೃಹತೀ ಶ್ರೀ ರಸೀಸ್ಸ್ವಪತ್ನೀ ಧರ್ಮಪತ್ನೀ**"ಇತ್ಯಾದಿ ಪ್ರಮಾಣಗಳನ್ನು ಲಕ್ಷ್ಮಿಗೆ ಜಗತ್ಕಾರಣತ್ವ ಪಾಲನಾದಿಗಳಲ್ಲೂ ಪತಿಯೊಂದಿಗೆ ಅನ್ವಯ ಉಂಟೆಂಬುದಕ್ಕೆ ಉದಾಹರಿಸಿರುತ್ತಾರೆ.

ಸರ್ವೇಶ್ವರನೂ ಲಕ್ಷ್ಮಿಯೂ ಅವತರಿಸುವ ಸ್ಥಳಗಳೂ ಮತ್ತು ಅವರುಗಳು ವಸಿಸಿದ ಸ್ಥಳಗಳೂ, ತುಂಬಾ ಶ್ರೇಷ್ಠವಾದುವಾಗಿ ಅನೇಕ ಭಾಗವತೋತ್ತಮರುಗಳಿಂದ ಭೂಯಿಷ್ಠವಾಗಿರುವದಾಗಿ ಶ್ರೇಷ್ಠವಾದವುಗಳೆಂದು ತಿಳಿಸುವದಕ್ಕಾಗಿ **ವಣ್ ತುವರೈನಗರ್** ಎಂಬ ಪ್ರಯೋಗವು. **ತುವರೈನಗರ್** ಎಂದು ದ್ವಾರಿಕೆಯನ್ನು ಹೇಳಿದುದು, ಅಲ್ಲಿ ಬಹುಕಾಲ ಶ್ರೀಕೃಷ್ಣ ಭಗವಾನರವರು ವಾಸಮಾಡಿದರೆಂಬ ಅಭಿಪ್ರಾಯದಿಂದಾದರೂ, ಅದನ್ನು ಹೇಳಿದುದು ಯಮುನಾತೀರ, ಮಧುರಾಪುರಿ ಬೃಂದಾವನ ಮುಂತಾದ ಪುಣ್ಯ ಸ್ಥಳಗಳಿಗೂ, ರಾಮಾವತಾರದಲ್ಲಿ ಅಯೋಧ್ಯೆ, ಚಿತ್ರಕೂಟ, ಮೊದಲಾದವುಗಳಿಗೂ ಉಪಲಕ್ಷಣವೆಂದು ಭಾವಿಸತಕ್ಕದ್ದು. ಆಗಲಿ, ಮಧುರಾಪುರಿಯಲ್ಲಿ ಜನಿಸಿ ಅದು ಜನ್ಮಭೂಮಿಯಾಗಿದ್ದರೂ, ಅದನ್ನು ಹೇಳದೆ ದ್ವಾರಿಕೆಯನ್ನು ಇಲ್ಲಿ ಹೇಳಿದುದು ಹೇಗೆ? ಎಂದರೆ ಮಧುರೆಯು ಅವರಿಗೆ ಶತ್ರುಗಳ ಪುರವು. ದ್ವಾರಿಕೆಯಲ್ಲೇ ಇದ್ದುಕೊಂಡು ಸಲ್ಲಾಪಗಳತಿಗಳನ್ನು ನಡೆಸಿದುದರಿಂದ **ವಣ್ತುವರ್ನಗರ್** ಎಂಬ ಪ್ರಯೋಗವು. ಆದುದರಿಂದ ಶ್ರೀ ದೇಶಿಕರವರೂ **ವಣ್ಡುವರಾಪತಿಮನ್ನನಾಯ್** ಎಂದು ಇತರ **ದಿವ್ಯಸೂಕ್ತಿ**ಗಳನ್ನನುಸರಿಸಿ ಪ್ರಯೋಗಿಸಿರುತ್ತಾರೆ. ಸರ್ವೇಶ್ವರನು ಅವತರಿಸಿದ ವಸಿಸಿದ ಸ್ಥಳಗಳೆಲ್ಲಾ ಮಹಾ ಪುಣ್ಯಕ್ಷೇತ್ರಗಳು, ಅಲ್ಲಿ ವಾಸಮಾಡುವವರಿಗೆ ಪಾಪ ಬುದ್ಧಿಯುಂಟಾಗುವದಿಲ್ಲವು. ಇದ್ದ ಪಾಪಗಳು ಕಳೆಯುವುವು. **ಸುಭಗಃ ಚಿತ್ರಕೂಟೋಽಸೌ ಗಿರಿ ರಾಜೋಪಮೋಗಿರಿಃ । ಯಸ್ಮಿನ್ ವಸತಿ ಕಾಕುತ್ಸ್ಥಃ** ಎಂದು ಚಿತ್ರಕೂಟಕ್ಕೆ ಮಹಿಮೆಯು. "**ಮಙ್ಗಳಾನಿ ಸಮಾಧತ್ತೇ**" ಎಂಬ ಪ್ರಯೋಗವೂ ಇದೆ

ವಸುದೇವ ದೇವಕಿ ಮತ್ತು ದಶರಥ ಕೌಸಲ್ಯಾದಿಗಳಿಗೆ ಪುತ್ರನಾಗಿ ಅವತರಿಸಬೇಕಾದರೂ ಹಾಗೆಯೇ ಲಕ್ಷ್ಮಿಯೂ ಭೀಷ್ಮಕನಿಗೂ ಜನಕಮಹಾರಾಯನಿಗೂ ಪುತ್ರಿಯಾಗಿ ಅವತರಿಸಬೇಕು. ಆಗ ಅವರುಗಳ ಭಾಗ್ಯೋದಯವನ್ನು ಕೊಂಡಾಡುವದಕ್ಕಾಗಿ **ವಸುದೇವರ್ಕ್ಕಾಯ್** ಎಂಬ ಪ್ರಯೋಗವು

ಅವತಾರದ ಮುಖ್ಯೋದ್ದೇಶವು ಸಾಧುಪರಿತ್ರಾಣವೆಂಬುದನ್ನು ಸೂಚಿಸುವದಕ್ಕಾಗಿ **ಮನ್ನವರ್ಕು ತೇರ್ ಪಾಕನಿನ್ರ** ಎಂದು ಹೇಳಲ್ಪಟ್ಟಿರುತ್ತದೆ. ಸರ್ವೇಶ್ವ

ರನು ಪೂರ್ಣ ಕಾಮನು. ಅರ್ಜುನಾದಿಗಳಿಂದ ಆಗತಕ್ಕದ್ದೇನೂ ಇಲ್ಲವು. ಆದರೂ ಲೋಕ ಹಿತವನ್ನು ಮಾಡಬೇಕೆಂಬ ಕಂಕಣಬದ್ಧನಾಗಿ ಆಶ್ರಿತ ಪರಿಪಾಲನೆ ಮುಂತಾದವುಗಳಿಗಾಗಿಯೇ ವರ್ತ ಏವಚ ಕರ್ಮಣಿ (ಗೀ ೩-೨೨) ಯಾವಾಗಲೂ ದಿವ್ಯ ಚೇಷ್ಟಿತೆಗಳನ್ನೆಸಗುವೆನೆಂದು ಹೇಳಿಕೊಂಡು, ಪಾಂಡವಾದಿಗಳಿಗೆ ಹಿತವನ್ನು ಮಾಡುವದಕ್ಕಾಗಿ ಕೊನೆಗೆ ಲೀಲಾಸಾರಥ್ಯವನ್ನು ವಹಿಸಿದುದರ ಭಾವವೇನೆಂದರೆ? ಹೀಗೆಯೇ ತಾನು ಸರ್ವಚೇತನರ ಹೃದಯದಲ್ಲಿದ್ದುಕೊಂಡು ಸಾರಥ್ಯವನ್ನು ವಹಿಸಿ, ರಥದಲ್ಲಿ ಅಧಿರೂಢನಾಗಿರುವ ಜೀವಾತ್ಮನನ್ನು ಕಾಪಾಡತಕ್ಕವನೆಂದು ತೋರಿಸಿ, ತನ್ನ ಸೌಲಭ್ಯ, ಸೌಶೀಲ್ಯ, ಕೃಪಾವಾತ್ಸಲ್ಯಾದಿಗಳನ್ನು ತೇರ್‌ಪಾಗ ನಿನ್ರ ಎಂಬ ಪ್ರಯೋಗದಿಂದ ಸ್ವಾಮಿಯು ಪ್ರಕಟಿಸಿದನೆಂಬ ಭಾವವು ಸೂಚಿತವು. ಹೀಗೆ ಇಲ್ಲಿ ಪಾಂಡವರಿಗೆ ಸಾರಥ್ಯವನ್ನುಮಾಡಿ ತನ್ನ ಕರುಣೆಯನ್ನು ತೋರಿದುದು, ಗೋಪಿಕಾ ಸ್ತ್ರೀಯರು ಮೊದಲಾದವರಿಗೆ ತನ್ನ ಅಂಗಸ್ಪರ್ಶ ಮೊದಲಾದವುಗಳಿಂದ ಅವರಿಗೆ ಆನಂದವನ್ನುಂಟುಮಾಡಿ ಕಾಪಾಡಿದುದಕ್ಕೂ ಉಪಲಕ್ಷಣವು. ಹಾಗೆ ಕಾಪಾಡುವಾಗ ಅವರುಗಳಿಗೆಲ್ಲಾ ವಿರೋಧಿಗಳಾದ ವಿನಾಶಾಯಚ ದುಷ್ಕೃತಾಂ ಎಂಬಲ್ಲಿ ತೋರುವ ಅನೇಕ ಕಂಸಾದಿ ರಾಕ್ಷಸರ ನಿಗ್ರಹವೂ, ಮತ್ತು ದುರ್ಯೋಧನಾದಿ ದುಷ್ಟರುಗಳ ನಾಶವೂ ಸೂಚಿತವು.

ಅವತಾರದ ಮೂರನೆಯ ಉದ್ದೇಶವು ಧರ್ಮ ಸಂಸ್ಥಾಪನೆಯು. ಅದಕ್ಕಾಗಿ ಅರ್ಜುನನನ್ನು ವ್ಯಾಜಮಾಡಿಕೊಂಡು, ನಮಗೆಲ್ಲಾ ಬೇಕಾಗಿರುವ ಮೋಕ್ಷ ಪ್ರಾಪಕ ಎರಡು ವಿಧಗಳಾದ ಉಪಾಯಾನುಷ್ಠಾನಗಳನ್ನು ತಿಳಿಸಿ, ಕಡೆಗೆ ಉಪಾಸನಕ್ಕೆ ಅಧಿಕಾರವಿಲ್ಲದೆ ಅಶಕ್ತರ ವಿಷಯದಲ್ಲಿ ತನ್ನ ಪರಮಕೃಪಾ ಪ್ರಭಾವವನ್ನು ಪ್ರಕಟಿಸಿ, ಸರ್ವರಿಗೂ ಅಧಿಕಾರವಿರುವ ಸುಲಭವಾಗಿ ಸಕೃದನುಷ್ಠೇಯವಾದ ಭರನ್ಯಾಸವನ್ನು ಎಲ್ಲರಿಗೂ ಈ ಚರಮಶ್ಲೋಕದ ಮೂಲಕ ವಿಧಿಸಿದವನು ಏನು ಮಹಾನುಭಾವನೋ ಶ್ರೀ ಕೃಷ್ಣನು! ಅಂತವನಲ್ಲವೇ ನಮ್ಮ ಸರ್ವ ಶ್ರೇಯಸ್ಸಿಗೂ ಸಾಧನವಾಗಿ, ಕೃಷ್ಣಂ ಧರ್ಮಂ ಸನಾತನಂ ಎಂದು ಹೇಳಿರುವ ಹಾಗೆ ಸಿದ್ಧೋಪಾಯನಾಗಿ ನಿಂತಿರುವನು ಎಂದು ಸ್ತುತಿಸಿರುತ್ತಾರೆ. ಇಲ್ಲಿ, ಈನ್ರ ಉಯ್‌ರೆಲ್ಲಾಮ್ ಎಂಬುದರಿಂದ ಸೃಷ್ಟಿಸಲ್ಪಟ್ಟ ಚೇತನರು, ಉಯ್ಯ-ಉಜ್ಜೀವಿಸೋಣ ಹೇಗೊ ಹಾಗೆ ಎಂದು ಹೇಳಲ್ಪಟ್ಟಿತು. ಚೇತನರಿಗೆ ಸೃಷ್ಟಿಕ್ರಮವೆಂದರೇನೆಂದು ಕೇಳಬಹುದು ಇಲ್ಲದಿರುವ ಚೇತನರು ಉಂಟಾದರು ಎಂಬರ್ಥವಲ್ಲವು ಚೇತನರಿಗೆ ಅವರ ಪೂರ್ವ ಕರ್ಮಾನುಸಾರ ಕರಣ ಕಳೇಬರಗಳನ್ನುಂಟುಮಾಡಿ ನಾಮರೂಪ ಉಂಟಾಗುವ ಹಾಗೂ ಪುರುಷವಚಸ್ತ್ವ ಉಂಟಾಗುವ ಹಾಗೂ ಮಾಡುವದೇ ಸೃಷ್ಟಿಯು.

ಆಗಲಿ, ಇದು ಲೀಲಾ ವಿಭೂತಿ ಎಂದು ಹೇಳಲ್ಪಟ್ಟಿತಲ್ಲಾ, ಹೀಗೆ ತನ್ನನ್ನು

ಆಶ್ರಯಿಸಿದವರನ್ನೆಲ್ಲಾ ನಿತ್ಯವಿಭೂತಿಗೆ ಯೋಗ್ಯರೆಂದು ಸೇರಿಸಿಬಿಟ್ಟರೆ, ತನ್ನ ಲೀಲೆಗೆ ಕಾಲಾಂತರದಲ್ಲಿ ನ್ಯೂನತೆಯುಂಟಾಗುವದಿಲ್ಲವೇ? ಎಂದರೆ ಇಲ್ಲವೆಂದು ತಿಳಿಸುವದಕ್ಕಾಗಿ ಹೀಗೆ ಮಾಡುವದೂ ಸಹ ಲೀಲೆಯಾಗಿ ಭೋಗ್ಯವೇ ಎನ್ನುತ್ತಾರೆ – ಹೇಗೆಂದರೆ **ಇದು ಕಣ್ಪುತ್ತೈಯಲ್ ವಿಳಿಯಾಟ್ಟುಕ್ಕಳಿಕ್ಕಿನ್ರಾನೇ.** ಇದುವರೆಗೂ ಚೇತನರಿಗೆ ಕಣ್ಣನ್ನು ವಂಚಿಸಿಬಿಟ್ಟಿದ್ದನು. ಪ್ರಕೃತಿಯಿಂದ ಜ್ಞಾನತಿರೋಹಿತತ್ವವನ್ನು ಉಂಟುಮಾಡಿದ್ದನು ಕಣ್ಣು ಕಟ್ಟಿ ಬಿಟ್ಟಿದ್ದವನು ಹೇಗೆ ಭ್ರಮದಿಂದ ಕುಣಿದಾಡಿ ಹಳ್ಳಗಳಲ್ಲಿ ಬೀಳುವದು, ಹೀಗೆ ಸೃಷ್ಟಿ ಮೊದಲುಗೊಂಡು ಇದುವರೆಗೂ ಕಣ್ಣು, ಕರ್ಮವಾಸನಾ ಎಂಬ ವಸ್ತ್ರದಿಂದ ಬಿಗಿಯಲ್ಪಟ್ಟಿತ್ತು. ಈಗ ತನ್ನನ್ನು ಆಶ್ರಯಿಸಿದುದರಿಂದ ಕರ್ಮವಾಸನಾ ವಸ್ತ್ರವು ತೆಗೆಯಲ್ಪಟ್ಟು **ದಿವ್ಯಂದದಾಮಿತೇ ಚಕ್ಷುಃ** ಎಂದು ಗೀತೆಯಲ್ಲಿ ಹೇಳಿರುವ ಹಾಗೆ, ಅಪ್ರಾಕೃತ ಶರೀರದೊಂದಿಗೆ ಅಪ್ರಾಕೃತ ಚಕ್ಷುಸ್ಸನ್ನು ಕೊಡುವುದರ ಮೂಲಕ ಕಣ್ಣನ್ನು ಶ್ರೀ ಕೃಷ್ಣ ಭಗವಾನ್ ತೆರೆಯುವರು ಈ ಅಪ್ರಾಕೃತ ಚಕ್ಷುಸ್ಸು ಬಂದ ನಂತರ ಪುನಃ ಕಣ್ಣನ್ನು ಕಟ್ಟುವ ಆಟವಿಲ್ಲವು, ಅಂತವನಿಗೆ ಪುನರ್ಜನ್ಮವಿಲ್ಲವು, ಅಲ್ಲಿಗೆ ಕಣ್ಣುಕಟ್ಟಿದ್ದ ಆಟವು ಮುಗಿಯುವದರಿಂದ **ಕಳಿಕ್ಕಿನ್ರಾನೇ** ಎಂಬ ಪ್ರಯೋಗವು. ಹೀಗೆ ಬದ್ಧ ಜೀವನನ್ನು ಮುಕ್ತ ಜೀವನನ್ನಾಗಿ ಮಾಡುವದೂ ಸಹ ಲೀಲೆಯಾಗಿ, ಆತನಿಗೆ ಭೋಗ್ಯವಾದುದೇ ಎಂಬ ಭಾವವೂ ಸೂಚಿತವು. ಬದ್ಧ ಜೀವನಿಗೆ ಆತನ ಕರ್ಮಾನುಸಾರ ಪುನಃ ಪುನಃ ಕರಣ ಕಳೇಬರಗಳನ್ನಿತ್ತು ಹೊಸ ಜನ್ಮಗಳನ್ನಿತ್ತು ಕಣ್ಣುಮುಚ್ಚುತ್ತಿದ್ದನು ಅದನ್ನು ಈಗ ಈ ಚರಮಶ್ಲೋಕದಲ್ಲಿ ವಿಧಿಸಿರುವ ಸುಲಭವಾದ ಅಮೋಘೋಪಾಯದಿಂದ ಕಣ್ಣುಮುಚ್ಚುವ ಆಟದಿಂದ ಬಿಡಿಸಿ, ಯಾವಾಗಲೂ ಕಣ್ಣು ತೆರೆದುಕೊಂಡು ಪರಿಪೂರ್ಣ ಬ್ರಹ್ಮನಾದ ತನ್ನನ್ನು ಸದಾ ಸಾಕ್ಷಾತ್ಕರಿಸುತ್ತಾ ಆನಂದಿಸುತ್ತಾ—ಆತನ ಪಾದವನ್ನು ಶಿರಸ್ಸಿನಲ್ಲಿ ಧರಿಸಿ ನಿತ್ಯ ಕೈಂಕರ್ಯವನ್ನು ಮಾಡುವ ಭಾಗ್ಯವನ್ನು ಹೊಂದಿಸುವನು ಎಂಬುದು ಶ್ಲೋಕ ತಾತ್ಪರ್ಯವು. ಇದಕ್ಕೆ, ತುಂಬಾ ಸುಲಭೋಪಾಯವು ಈ ಚರಮಶ್ಲೋಕದ ಮೂಲಕ ವಿಧಿಸಲ್ಪಟ್ಟಿತು ಎಂಬ ಮುಖ್ಯ ತಾತ್ಪರ್ಯವು. ಇದು ಹಿಂದೆಯೂ ಹೇಳಲ್ಪಟ್ಟಿರುತ್ತದೆ. ಎಲ್ಲಿ? ಎಂದರೆ **ದೈವೀ ಹ್ಯೇಷಾ ಗುಣಮಯೀ ಮಮಮಾಯಾ ದುರತ್ಯಯಾ। ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂತರನ್ತಿತೇ** (ಗೀ ೭-೧೪) ಎಂಬಲ್ಲಿ ಇಲ್ಲಿ **ಮಾಯಾ** ಎಂದರೆ ಪ್ರಕೃತಿಯು ಇದು ಚೇತನನ ಜ್ಞಾನ ಚಕ್ಷುಸ್ಸನ್ನು ಮುಚ್ಚಿಬಿಡುತ್ತದೆಂಬ ಅಭಿಪ್ರಾಯವು.

ಇಲ್ಲಿ ಒಂದು ಸಂದೇಹವು ತೋರಬಹುದು, ಏನೆಂದರೆ? ಹೀಗೆ ಲೀಲಾ ವಿಭೂತಿಯಿಂದ ಜೀವಾತ್ಮರು ನಿತ್ಯ ವಿಭೂತಿಗೆ ಹೊರಟು ಹೋದರೆ, ಲೀಲಾ ವಿಭೂತಿಗೆ ನ್ಯೂನತೆಯೋ ಎಂದರೆ, ಸಮಾಧಾನವನ್ನು ಹೇಳಬಹುದು.

**ಏವಂಸಙ್ಗ್ರಹೇಣ ದರ್ಶಿತ ಶ್ಲೋಕಾರ್ಥಂ ವಿಸ್ತರೇಣವಕ್ತುಮ್, ಕೃಷ್ಣಾವತಾರಸ್ಯ ಚರಮಶ್ಲೋಕಾರ್ಥ ಏವ ನಃ ಪರಮಪ್ರಯೋಜನ ಮಿತ್ಯಾಹ**

**(೧) "ಏಷ ನಾರಾಯಣ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ**
**ನಾಗಪರ್ಯಙ್ಕ ಮುತ್ಸೃಜ್ಯ ಹ್ಯಾಗತೋ ಮಧುರಾಂಪುರೀಮ್" ಎಙ್ಕ್ರ**

ಈ ಲೀಲಾ ವಿಭೂತಿಗಳಲ್ಲಿರುವ ಬದ್ಧಾತ್ಮವರ್ಗವನ್ನು ಎಣಿಸಲು ಕೂಡ ಸಾಧ್ಯವಿಲ್ಲದುದಾಗಿ ಅನಂತಾನಂತವಾಗಿರುತ್ತದೆಂದು ಹೇಳಲ್ಪಟ್ಟಿರುತ್ತದೆ ಈ ಭೂಲೋಕದಲ್ಲಿ ಮಾತ್ರವೇ ಇರುವ ಪ್ರಾಣಿಗಳನ್ನು ಲೆಕ್ಕಮಾಡಲು ಸಾಧ್ಯವೇ? ಆದುದರಿಂದ ಅಂತಹ ಲೋಪವು ಲೀಲಾವಿಭೂತಿಗೆ ಉಂಟಾಗಬಹುದೆಂಬ ಶಂಕೆಯೇ ಕೂಡುವದಿಲ್ಲವು.

ಹೀಗೆ ಸಙ್ಗ್ರಹವಾಗಿ **ಹೇಳಿದುದನ್ನು** ವಿಸ್ತರಿಸಿ **ಹೇಳುವದಕ್ಕಾಗಿ, ಕೃಷ್ಣಾವತಾರಿಯ ಚರಮಶ್ಲೋಕಾರ್ಥವೇ ನಮಗೆ ಹಿತತಮವಾದುದೆನ್ನುತ್ತಾರೆ.**

---

ಚರಮಶ್ಲೋಕವನ್ನು ಅನುಗ್ರಹಿಸಿದ ಕ್ರಮವನ್ನು "ಏಷನಾರಾಯಣಃ" ಎಂದು ಆರಂಭಿಸಿ, "ಅರುಳಿಚ್ಚೆಯ್‌ಗಿರಾನ್" ಎಂದು ಪೂರ್ತೈಸಿದ ಒಂದು ಮಹಾವಾಕ್ಯದ ಮೂಲಕ ತಿಳಿಸುತ್ತಾರೆ

(೧) ಈ ಶ್ಲೋಕವು ಹಿಂದೆ ಉದಾಹೃತವು, ೩೩೬ನೆಯ ಪುಟವನ್ನು ನೋಡಿ. "**ಶ್ರೀಮಾನ್**-ಲಕ್ಷ್ಮೀಯುಕ್ತನಾದ, **ಏಷನಾರಾಯಣಃ** ಈ ನಾರಾಯಣನು, **ಕ್ಷೀರಾರ್ಣವ ನಿಕೇತನಃ** ಕ್ಷೀರಾಬ್ಧಿವಾಸಿಯಾಗಿದ್ದವನು, ಅಲ್ಲಿನ **ನಾಗಪರ್ಯಙ್ಕ ಮುತ್ಸೃಜ್ಯ**-ಶೇಷನೆಂಬ ಮಂಚವನ್ನು ಬಿಟ್ಟು, **ಮಧುರಾಪುರೀಮ್** ಅವತರಿಸವದಕ್ಕಾಗಿ ಮಧುರಾಪಟ್ಟಣಕ್ಕೆ, **ಆಗತಃ** ಏನಾದರೂ ಬಂದಿರುತ್ತಾನೋ, **ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಥಿತಃ** ಎಂಬ ಶ್ರುತಿ ವಾಕ್ಯವನ್ನು ಅನುಸರಿಸಿ, ನಾರಾಯಣನೇ ಪರಬ್ರಹ್ಮವೆಂದು ತಿಳಿಸುವದಕ್ಕಾಗಿ ಏಷನಾರಾಯಣ ಎಂದು ಶ್ರೀಕೃಷ್ಣನನ್ನು ಕುರಿತ ಪ್ರಯೋಗವು; ಶ್ರೀ ಯಾಮುನ ಮುನಿಗಳು **ನಾರಾಯಣಃ ಪರಂಬ್ರಹ್ಮ ಗೀತಾಶಾಸ್ತ್ರೇ ಸಮೀರಿತಃ** ಎಂಬುದು ಇಲ್ಲಿ ಅನುಸಂಧೇಯವು. ಶ್ರೀಯತಿವರ್ಯರೂ ಇದನ್ನನುಸರಿಸಿಯೇ **ಪರಂಬ್ರಹ್ಮ ಪುರುಷೋತ್ತಮೋ ನಾರಾಯಣಃ** ಎಂದು ಗೀತಾವತಾರಿಕೆಯಲ್ಲಿ ಪ್ರಯೋಗಿಸಿರುತ್ತಾರೆ. ಈ ನಾ

---

(೧) **ಹರಿವಂಶ, ೫೪-೫೦.**

**ಪಡಿಯೇ ಶ್ರಿಯಃ ಪತಿಯಾನ ಸರ್ವೇಶ್ವರನ್, ಸಾಧುಪರಿತ್ರಾಣ, ದುಷ್ಕೃದ್ವಿನಾಶ ಧರ್ಮಸಂಸ್ಥಾಪನ ಙ್ಗಳುಕ್ಕಾಗ, ವಣ್ತುವರಾಪತಿ ಮನ್ನನಾಯ್,**

ಯಣನು ಯಾರು ಎಂದರೆ ಸರಸ್ವತೀಪತಿ, ಉಮಾಪತಿ,ಶಚೀಪತಿಗಳು ಯಾರೂ ಅಲ್ಲವೆಂದೂ ಶ್ರಿಯಃ ಪತಿಯೇ ಎಂದು **ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ** ಎಂದು ಶ್ರುತಿಯು ಹೇಳಿರುವ ಹಾಗೆ ಇಲ್ಲಿ **ಶ್ರೀಮಾನ್** ಎಂಬ ಪ್ರಯೋಗವು, **ಶ್ರೀಮಾನ್** ಎಂದರೆ ಲಕ್ಷ್ಮಿಯುಕ್ತನಾದ ಎಂಬರ್ಥವು, **ನಾಗಪರ್ಯಙ್ಕ ಮುತ್ಸೃಜ್ಯ** ಎಂಬುದರಿಂದ ನಾವು ಗ್ರಹಿಸತಕ್ಕ ಅಂಶವೇನೆಂದರೆ, ಕ್ಷೀರಾಬ್ಧಿಯನ್ನು ಬಿಟ್ಟು, ಈ ಮಧುರೆಗೆ ಬಂದುಬಿಟ್ಟನು, ಅಲ್ಲಿ ಇಲ್ಲವೆಂಬರ್ಥವಲ್ಲವು. ಈಗ ಅವತಾರಕ್ಕೆ **ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ** ಎಂಬಲ್ಲಿ ಹೇಳಿರುವ ಹಾಗೆ ಕಾಲವು ಒದಗಿತು, ಅದಕ್ಕಾಗಿ ಮಧುರೆಯಲ್ಲಿ ಅವತರಿಸಬೇಕೆಂದು ಸಙ್ಕಲ್ಪಿಸಿದರು ಎಂದು ಇಷ್ಟುಮಾತ್ರವನ್ನು ಹೇಳುವದರಲ್ಲಿ ತಾತ್ಪರ್ಯವು. ಎಲ್ಲಾ ಸ್ಥಳದಲ್ಲೂ ಸ್ವಾಮಿಯು ಇದ್ದೇ ಇರುತ್ತಾನೆ ಸಙ್ಕಲ್ಪಿಸಿದ ಸ್ಥಳದಲ್ಲಿ ರೂಪವನ್ನು ತಾಳುವನು. ಹಾಗೆ ಉತ್ಪ್ರೇಕ್ಷೆ ಮಾತ್ರವೇ.

ಆಗತೋ **ಮಧುರಾಂಪುರೀಮ್** ಎಂದು ಹೇಳಿದುದರಿಂದ, ವಸುದೇವದೇವಕಿಯರಿಗೆ ತನ್ನ ಪರತ್ವವನ್ನು ಸೂಚಿಸುವ ರೂಪವನ್ನು ಪ್ರದರ್ಶಿಸುವದು ಆವಶ್ಯಕವಾದುದರಿಂದ, ಶತ್ರುವಾದ ಕಂಸನ ಪುರಿಯಲ್ಲೇ ಅವತರಿಸಿ, ಅಂತಹ ಶತ್ರುನಾಶಕ್ಕಾಗಿಯೇ ತನ್ನ ಅವತಾರವೆಂದು ತೋರ್ಪಡಿಸಿ, ಆ ಉದ್ದೇಶ್ಯವು ನೆರವೇರಿದ ಒಡನೆಯೇ, ಮನುಷ್ಯಾವತಾರಿಯಾಗಿ ನಂದಗೋಕುಲಕ್ಕೆ ತೆರಳಿದರು ಆದರೆ ತಾವು ಇನ್ನೂ ಬಾಲ್ಯಾವಸ್ಥೆಯಾದುದರಿಂದ ಅಲ್ಲಿ ಇರುವದೂ ಕೂಡ ಸರಿಯಿಲ್ಲವೆಂದು ಪ್ರೇರಿಸಿ ತಿಳಿಸಿ ದ್ವಾರಕಾನಾಥನಾಗಿ ಸಮುದ್ರ ಮಧ್ಯದಲ್ಲಿ ವಾಸಮಾಡಿದರೆಂಬುವದು, ಮುಂದೆ **ವಣ್ತುವರ ಪತಿಮನ್ನನಾಯ್** ಎಂಬ ಪ್ರಯೋಗವಿರುವದರಿಂದ ಗ್ರಹಿಸತಕ್ಕದ್ದಾಗಿರುತ್ತದೆ. **ಎಙ್ಗರಪಡಿಯೇ**-ಎಂದು ಹೇಳಿರುವ ಹಾಗೆ, **ಶ್ರಿಯಃ ಪತಿಯಾದ ಸರ್ವೇಶ್ವರನು, ಸಾಧುಪರಿತ್ರಾಣ, ದುಷ್ಕೃದ್ವಿನಾಶ, ಧರ್ಮಸಂಸ್ಥಾಪನ**ಗಳಿಗಾಗಿ, ಇವು ಮೂರೂ **ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಮ್, ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ** ಎಂದು (ಗೀ. ೪- ) ಹೇಳಿರುವ ಹಾಗೆ, ಈ ಮೂರಾದ ಅವತಾರೋದ್ದೇಶಗಳಾಗಿವೆ. ಇದರಲ್ಲಿ ಸಾಧುಪರಿತ್ರಾಣವು ಮುಖ್ಯವಾದುದು, ಇದು ದುಷ್ಕೃತ ವಿನಾಶವಿಲ್ಲದಿದ್ದ ಪಕ್ಷದಲ್ಲಿ ಆಗದೇ ಹೋದರೆ, ಅದನ್ನೂ ಎರಡನೆಯ ಉದ್ದೇಶವಾಗಿಯೂ, ಅಂತಹ ಅವತಾರ ಸುಸಮಯವನ್ನೇ ಯಾದೃಚ್ಛಿಕವಾಗಿ ಧರ್ಮಸಂಸ್ಥಾಪನೆಗೆ ಕಾಲವಾಗಿ ಭಾವಿಸುವನು; ಇವು ಮೂರೂ ಈ ಯುದ್ಧಸಮಯದಲ್ಲಿ ಬಹು ಅನುಕೂಲವಾಗಿ ಒದಗಿರು

**ವನ್ದವತರಿತ್ತರುಳಿ ಸರ್ವಸುಲಭನಾಯ್, (೨) ದ್ರೌಪದ್ಯಾಸಹಿತಾ ಸ್ಸರ್ವೇ ನಮಶ್ಚಕ್ರುರ್ಜನಾರ್ದನಮ್ ಎಜ್ಗರಪಡಿಯೇ, ಶರಣಾಗತರಾನ ಪಾಂಡವರ್ ಗಳುಕ್ಕು ಇನ್ನಾರ್ ದೂತನೆನನಿನ್ರು, ಅರ್ಜುನನೈ ರಥಿಯಾಕ್ಕಿ, ತಾನ್ ಸಾರಥಿ**

---

ವದರಿಂದ ಇವು ಮೂರೂ ಇಲ್ಲಿ ಹೇಳಲ್ಪಟ್ಟಿತು, "ಮಮ ಪ್ರಾಣಾಹಿ ಪಾಂಡವಾಃ" ಎಂದು ಶ್ರೀಕೃಷ್ಣ ಭಗವಾನರವರೇ ಹೇಳಿಕೊಂಡಿರುವದರಿಂದ ಅಂತಹ ಸಾಧುಗಳಾದ ಪಾಂಡವರ ಪರಿತ್ರಾಣವೇ ಮುಖ್ಯೋದ್ದೇಶವಾಯಿತು, ಇದು ದುರ್ಯೋಧನ, ದುಶ್ಶಾಸನ, ಶಕುನಿ, ಕರ್ಣಾದಿಗಳ ಕೊಂದ ಹೊರತು ಸಾಧ್ಯವಿಲ್ಲವು, ಈಗ ತನ್ನ ಜ್ಞಾತಿಗಳನ್ನೂ ಗುರುಗಳಾಗಿಯೂ ಬ್ರಾಹ್ಮಣರಾಗಿಯೂ ಇರುವ ಭೀಷ್ಮ ದ್ರೋಣಾದಿಗಳನ್ನು ಕೊಲ್ಲುವದು ಹೇಗೆ ಎಂಬ ಧರ್ಮಸಂಕಟದಲ್ಲಿರುವ ಅರ್ಜುನನಿಗೆ ಧರ್ಮೋಪದೇಶವನ್ನು ಮಾಡಬೇಕಾಗಿ ಬಂದ ವ್ಯಾಜದ ಮೂಲಕ ಧರ್ಮ ಸಂಸ್ಥಾಪನೆಯೂ, ಹೀಗೆ ಮೂರಾದ ಅವತಾರೋದ್ದೇಶಗಳಿಗೂ ಸುಸಮಯ ಒದಗಿದುದರಿಂದ ಈ ಮೂರು ಉದ್ದೇಶಗಳಿಗಾಗಿ, **ವಣ್ದುವರಾಪತಿ ಮನ್ನನಾಯ್**-ವಣ್ ಎಂದರೆ ಶ್ಲಾಘ್ಯವಾದ, **ತುವರಾಪತಿ ಮನ್ನನಾಯ್**ವನ್ದು-ದ್ವಾರಕಿಗೆ ರಾಜನಾಗಿ ಬಂದು, **ಅವತರಿತ್ತರುಳಿ**-ಮಥುರೆಯಲ್ಲಿ ಅವತರಿಸಿ ಕೃಪಯಿಂದ, **ಸರ್ವಸುಲಭನಾಯ್**-ಆ ಕಾಲದ ಸಮಸ್ತರೂ ಈ ಪ್ರಾಕೃತ ಚಕ್ಷುಸ್ಸಿನಿಂದಲೇ ನೋಡುವ ಹಾಗೆ ಸೌಲಭ್ಯವನ್ನು ತೋರಿಸಿ, **ದ್ರೌಪದ್ಯಾಸಹಿತಾಸ್ಸರ್ವೇ ನಮಶ್ಚಕ್ರುರ್ಜನಾರ್ದನಮ್**-ವನವಾಸ ಕಾಲದಲ್ಲಿ ಮಾರ್ಕಂಡೇಯರು ಶ್ರೀಕೃಷ್ಣನ ಪುಂಡರೀಕ ನಯನದ ಸೊಬಗನ್ನು ನೋಡಿ, ಈತನು ಪರತತ್ವವೆಂಬುದರಲ್ಲಿ ಸಂದೇಹವಿಲ್ಲವು, ಈತನನ್ನು ಶರಣ ಹೊಂದಿರಿ, ಎಂದು ಹೇಳಿದ ಮಹರ್ಷಿಯ ಆಜ್ಞಾನುಸಾರ ದ್ರೌಪದಿಯೊಂದಿಗೆ ಪಂಚ ಪಾಂಡವರು ಶ್ರೀಕೃಷ್ಣನ ಪಾದಕ್ಕೆರಗಿ ಶರಣಾಗತಿಯನ್ನು ಅನುಷ್ಠಿಸಿದರು ನೆಯ ಪುಟವನ್ನು ನೋಡಿ **ಎಜ್ಗಿರಪಡಿಯೇ**-ಎಂದು ಹೇಳಿರುವ ಹಾಗೆ, **ಶರಣಾಗತರಾದ ಪಾಂಡವರುಗಳಿಗೆ, ಇನ್ನರ್ ದೂತನೆನನಿನ್ರು**-ಪಾಂಡವರ ದೂತನೆಂದು ನಿಂತು, ತನ್ನ ಭಕ್ತರಿಗೆ ದೌತ್ಯವನ್ನೂ ಮಾಡತಕ್ಕವನೆಂದು ಹೇಳಿರುವದರಿಂದ ಸ್ವಾಮಿಯ ಸೌಶೀಲ್ಯದ ಪರಾಕಾಷ್ಠೆಯು ಇಲ್ಲಿ ದ್ಯೋತಿತವು, **ಅರ್ಜುನನೈ ರಥಿಯಾಕ್ಕಿ**-ಆತ್ಮಾನಂ ರಥಿನಂ ವಿದ್ಧಿ ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಅರ್ಜುನನ್ನು ರಥದಲ್ಲಿ ಕೂರಿಸಿ, ಮಹಾಧೀರನಾಗಿ ಯುದ್ಧವನ್ನು ಮಾಡುವಹಾಗೆ ಮಾಡಿ, **ತಾನ್ಸಾರಥಿಯಾಯ್**-ಶ್ರೀಕೃಷ್ಣನಾದ ತಾನು ಆತನಿಗೆ ಸಾರಥಿಯಾಗಿ, ತಾನು

---

(೨) ಭಾರ. ವನ. ೧೮೨-೫೬.

**ಯಾಯ್, ಅವನುಕ್ಕು ವಿಧೇಯನಾಯ್, ನಿನ್ರವಳಿವಿಲೇ ಇವ್ವರ್ಜುನನ್ ತನ್ನೈ ನಿಮಿತ್ತಮಾತ್ರ ಮಾಗಕ್ಕೊಂಡು ಸರ್ವೇಶ್ವರ್ನ ತನ್ಪ್ರತಿಪಕ್ಷಙ್ಗಳೈ ನಿರಸಿಕ್ಕ ನಿನ್ರ ನಿಲೈಯೈ ಕ್ಕಂಡು ಬಂಧುವಿನಾಶಮ್ ಸಿದ್ಧಮೆನ್ರು ನಿಶ್ಚಯಿತ್ತು, ಅಸ್ಥಾನ ಸ್ನೇಹತ್ತಾಲ್ ಪಿರನ್ದ ಶೋಕತ್ತಾಲುಮ್, ಅಸ್ಥಾನ ಕೃಪೆಯಾಲುಮ್, ಆಚಾರ್ಯಾದಿಗಳ್ ಯುದ್ಧೋನ್ಮುಖರ್ಯೈಯಾಗಿಲುಮ್,**

---

ಯುದ್ಧವೇನನ್ನೂ ಮಾಡದೆ ಸುಮ್ಮನೆ ಇರುವ ಸಾರಥಿಯುನ್ನಾಗಿ, ಇದರಿಂದ ತಾನು ಜೀವಾತ್ಮನ ಸತ್ತಾಸ್ಥಿತಿ ನಿಯಮನಾದಿಗಳಿಗೆ ಕಾರಣನೆಂದು ಹೇಳಿದಂತಾಯಿತು, **ಅವನಕ್ಕು ವಿಧೇಯನಾಗಿ**-ಅರ್ಜುನನು ಹೇಳಿದ ಹಾಗೆ ರಥವನ್ನು ನಡೆಸುವವನಾಗಿ, **ಉಭಯೋಸ್ಸೇನಯೋರ್ಮಧ್ಯೇ ರಥಂ ಸ್ಥಾಪಯ** ಮಾಧವ ಎಂದರೆ ವಿಧೇಯನಾಗಿ ಹಾಗೆ ಮಾಡುವವನಾಗಿ, **ನಿನ್ರ ವಳವಿಲೇ**-ನಿಂತಿರುವ ಅವಸ್ಥೆಯಲ್ಲಿ, **ಇವ್ವರ್ಜುನನ್ ತನ್ನೈನಿಮಿತ್ತಮಾತ್ರ ಮಾಗಕ್ಕೊಂಡು**-ಈ ಅರ್ಜುನನ್ನೇ **ನಿಮಿತ್ತಮಾತ್ರಂ ಭವಸವ್ಯಸಾಚಿನ್** ಎಂದು ತಾನೇ ಯುದ್ಧಮಾಡದೆಯೇ ಸರ್ವವೂ ಅನುಕೂಲವಾಗಿ ನಡೆದು ಹೋಗುವ ನನ್ನ ಸಙ್ಕಲ್ಪದಿಂದಲೇ ಮಾಡುವೆನು, ನೀನು ಮಾತ್ರ ನಿಮಿತ್ತಮಾತ್ರಕ್ಕೆ ಯುದ್ಧಮಾಡುವವನ ಹಾಗೆ ಇರು ಎಂದು ಹೇಳಿರುವ ಹಾಗೆ, ಅರ್ಜುನನಾದ ತನ್ನನ್ನು ನಿಮಿತ್ತಮಾತ್ರವಾಗಿ ಮಾಡಿಕೊಂಡು, **ಸರ್ವೇಶ್ವರನು, ತನ್ಪ್ರತಿಪಕ್ಷಙ್ಗಳೈ**-ತನಗೆ ಶತ್ರುಗಳಾದ ದುರ್ಯೋಧನಾದಿಗಳನ್ನು, **ನಿರಸಿಕ್ಕ ನಿಲೈಯೈಕ್ಕಣ್ಡು**-ನೆಲಿಸಿರುವ ದೆಶೆಯನ್ನು ಕಂಡು, **ಬಂಧುವಿನಾಶಮ್ ಸಿದ್ಧಮೆನ್ರು ನಿಶ್ಚಯಿತ್ತು**-ಬಂಧುಗಳಾದ ದುರ್ಯೋಧನಾದಿಗಳ ನಾಶವು ಸ್ವಾಮಿ ಸಙ್ಕಲ್ಪರೀತ್ಯಾ ಸಿದ್ಧವಾದುದೆಂದು ತಿಳಿದು, **ಅಸ್ಥಾನ ಸ್ನೇಹತ್ತಾಲೇ**-**ಅಸ್ಥಾನ ಸ್ನೇಹ ಕಾರುಣ್ಯ ಧರ್ಮಾಧರ್ಮಧಿಯಾಕುಲಮ್ ಪಾರ್ಥಂ** (ಗೀತಾರ್ಥ ಸಂಗ್ರಹ. ೫) ಎಂದು ಶ್ರೀ ಯಾಮುನ ಮುನಿಗಳು ಹೇಳಿರುವ ಹಾಗೆ, ಅಯೋಗ್ಯಸ್ಥಾನವಾದ ದುರ್ಯೋಧನಾದಿಗಳಲ್ಲಿ ತೋರಿದ ಸ್ನೇಹದಿಂದ, **ಪಿರನ್ದ ಶೋಕತ್ತಾಲುಮ್**-ಹುಟ್ಟಿದ ದುಃಖದಿಂದಲೂ, **ಅಸ್ಥಾನಕೃಪೆಯಾಲುಮ್**-ಅಯೋಗ್ಯರಲ್ಲಿ ತೋರಿದ ಕೃಪೆಯಿಂದಲೂ, **ಆಚಾರ್ಯಾದಿಗಳ್**-ಆಚಾರ್ಯರುಗಳಾದ ಭೀಷ್ಮದ್ರೋಣರು, **ಯುದ್ಧೋನ್ಮುಖರ್ಯೈಯಾಗಿಲುಮ್**-ಅವರುಗಳೇ ಯುದ್ಧಕ್ಕಾಗಿ ಎದುರಿಗೆ ನಿಂತಿದ್ದರೂ, **ಅವರ್ಗಳ್ ವಧತ್ತಾಲೇ**-ಅವರುಗಳ ವಧೆಯಿಂದ, **ಪಾಪಮ್ವರಗಿರದೆನ್ರು**-ಪಾಪವು ಪ್ರಾಪ್ತವಾಗುತ್ತದೆಂದು, **ಭಯತ್ತಾಲುಮ್**-ಭಯದಿಂದಲೂ, **ಕಲಙ್ಗಿ**-ಮನಸ್ಸು ಕಳವಳಗೊಂಡು, ಎದುಹಿತಮೆನ್ರು **ತಿಳಿಯವೇಣುಮೆನ್ರು ಪಾರ್ತ್ತು**-ಯುದ್ಧಮಾಡದಿರುವದೇ ಅಥವಾ ಯುದ್ಧಮಾಡುವದೇ **ಹಿತವಾದುದೆಂದು ತಿಳಿಯ**

**ಅವರ್‌ಗಳ ವಧತ್ತಾಲೇ ಪಾಪಮ್ ವರುಗಿರದೆಙ್ಗಿರ ಭಯತ್ತಾಲುಮ್, ಕಲಙ್ಗಿ ಎದುಹಿತವೆನ್ನು ತೆಳಿಯುವೇಣುಮೆನ್ನು ಪಾರ್‍ತ್ತ (೩) "ಯಚ್ಛ್ರೇಯಸ್ಸ್ಯಾನ್ನಿಶ್ಚಿತಂ ಬ್ರೂಹಿತನ್ಮೇ ಶಿಷ್ಯಸ್ತೇಽಹಂಶಾಧಿ ಮಾಂತ್ವಾಂ ಪ್ರಪನ್ನಮ್" ಎನ್ರು ವಿಣ್ಣಪ್ಪಂ ಶೆಯ್ಯ, ಅವನುಡೈಯ ಶೋಕತ್ತೈ ನಿವರ್‍ತ್ತಿಪ್ಪಿಕ್ಕೈಕ್ಕಾಹ ದೇಹಾದಿವ್ಯತಿರಿಕ್ತಮಾಯ್, ಪರಶೇಷತ್ತೈಕರಸಮಾನ ನಿತ್ಯಾತ್ಮ**

---

**ಬೇಕೆಂದಾಲೋಚಿಸಿ, ಯಚ್ಛ್ರೇಯಸ್ಯಾನ್ನಿಶ್ಚಿತಂ ಬ್ರೂಹಿತನ್ಮೇ ಶಿಷ್ಯಸ್ತೇಽಹಂ ಶಾಧಿಮಾಂತ್ವಾಂ ಪ್ರಪನ್ನಮ್** ಯುದ್ಧಮಾಡುವದು ಶ್ರೇಯಸ್ಕರವೇ, ಮಾಡದಿರುವದು ಶ್ರೇಯಸ್ಕರವೇ ಎಂಬ ವಿಷಯದಲ್ಲಿ ಸರ್ವಜ್ಞನಾದ ಶರಣಾಗತವತ್ಸಲನಾದ ನೀನು ನನಗೆ ಹಿತವೆಂದು ನಿಶ್ಚಯಿಸಿರುವದನ್ನು ಶರಣಾಗತನಾದ ನಿನ್ನ ಶಿಷ್ಯನಿಗೆ ಶಿಕ್ಷಿಸಿ ಎಂದರೆ ಉಪದೇಶಿಸಿ ಕಾಪಾಡತಕ್ಕದ್ದು ಎನ್ನು-ಎಂಬದಾಗಿ, **ವಿಣ್ಣಪ್ಪಂ ಶೆಯ್ಯ**-ಅರ್ಜುನನು ಅರಿಕೆಮಾಡಿಕೊಳ್ಳಲಾಗಿ, ಈ ಶ್ಲೋಕದಿಂದ ಮುಖ್ಯವಾಗಿ ಗ್ರಹಿಸತಕ್ಕದ್ದೇನೆಂದರೆ, ಅಧಿಕಾರಿಯಾದವನು ಪರಮರಹಸ್ಯಾರ್ಥಗಳನ್ನು ಆಚಾರ್ಯ ಶ್ರೇಷ್ಠನನ್ನು ಆಶ್ರಯಿಸಿ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡಿ ಪ್ರಾರ್ಥಿಸಿದರೇನೇ ಉಪದೇಶಿಸತಕ್ಕದ್ದೇವಿನಾ, ಅನಧಿಕಾರಿಗೂ ಪ್ರಾರ್ಥಿಸದೇ ಇರುವವನಿಗೂ ಲೆಕ್ಚರಿನ ಹಾಗೆ ಉಪದೇಶಿಸತಕ್ಕದ್ದಲ್ಲವೆಂಬುದು ನಿರೂಪಿತವು. **ಅವನುಡೈಯ ಶೋಕತ್ತೈ**-ಆ ಅರ್ಜುನನ ವಿಷಾದವನ್ನು, **ನಿವರ್‍ತ್ತಿಪ್ಪಿಕ್ಕೈಕ್ಕಾಹ**-ನಿವರ್ತಿಸುವದಕ್ಕಾಗಿ, **ದೇಹಾದಿವ್ಯತಿರಕ್ತಮಾಯ್**-ದೇಹ, ಆದಿಶಬ್ದದಿಂದ ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿಗಳಿಗಿಂತಲೂ ಬೇರೆಯಾಗಿರುವ, **ಪರಶೇಷತ್ತೈಕರಸಮಾನ**-ಪ್ರಣವದಲ್ಲಿ ನಿಪುಣತರವಾಗಿ ಉಪಪಾದಿತವಾಗಿರುವ ಪರಬ್ರಹ್ಮನಿಗೆ ಶೇಷಭೂತನಾಗಿ ಆತನಿಗೆ ಕೈಂಕರ್ಯವನ್ನೆಸಗುವದೇ ಪರಮಾನಂದವಾಗಿರುವ, **ನಿತ್ಯಾತ್ಮಸ್ವರೂಪತ್ತೈಯುಮ್**-ನಿತ್ಯನಾಗಿರುವ ಜೀವಾತ್ಮನ ಯಥಾರ್ಥವಾದ ಸ್ವರೂಪವನ್ನೂ, **ಇಸ್ಸ್ವರೂಪಂ ತೆಳಿನ್ದವನುಕ್ಕು**-ಈ ಜೀವಾತ್ಮನ ಸ್ವರೂಪದ ಜ್ಞಾನವಿರುವವನಿಗೇ, **ಪರಮ ಪುರುಷಾರ್ಥಲಾಭತ್ತುಕ್ಕು**-ಮೋಕ್ಷಪ್ರಾಪ್ತಿಗೆ, **ಪರಂಪರಯಾ ಕಾರಣಙ್ಗಳಾನ**-ಪರಂಪರಯಾ ಸಾಧನಗಳಾದ, **ಕರ್ಮಯೋಗ ಜ್ಞಾನಯೋಗಗಳನ್ನೂ, ಸಾಕ್ಷಾದುಪಾಯಮಾಹ ಚೋದಿತಮಾನ**-ಸಾಕ್ಷಾತ್ತಾಗಿ ಉಪಾಯವಾಗ ವಿಧಿಸಲ್ಪಟ್ಟ, **ಭಕ್ತಿಯೋಗತ್ತೈಯುಮ್**-ಭಕ್ತಿಯೋಗವನ್ನೂ, **ಸಪರಿಕರಮಾಗ ಉಪದೇಶಿಕ್ಕ**-ಅವುಗಳಿಗೆ ಬೇಕಾದ ಸಹಕಾರಿಗಳಾದ ಜ್ಞಾನ ಮೊದಲಾದವುಗಳೊಂದಿಗೆ ಉಪದೇಶಿಸಲಾಗಿ,

---

(೩) ಗೀ. ೨-೭.

ಸ್ವರೂಪತ್ತೈಯುಮ್, ಇಸ್ಸ್ವರೂಪಮ್ ತೆಳಿನ್ದವನುಕ್ಕು ಪರಮಪುರು ಷಾರ್ಥ ಲಾಭತ್ತುಕ್ಕು ಪರಂಪರಯಾ ಕಾರಣಙ್ಗಳಾನ ಕರ್ಮಯೋಗ ಜ್ಞಾನ ಯೋಗಙ್ಗಳೈಯುಮ್, ಸಾಕ್ಷಾದುಪಾಯಮಾಹ ಚೋದಿತಮಾನ ಭಕ್ತಿ ಯೋಗತ್ತೈಯುಮ್, ಸಪರಿಕರಮಾಗ ಉಪದೇಶಿಕ್ಕ, ಇಪ್ಪರಮ ಪುರು ಷಾರ್ಥತ್ತೈ ಕಡುಗಪೆರವೇಣು ಮೆಙ್ಗರ ತ್ವರೈಯುಣ್ಡೇಯಾಗಿಲುಮ್, ಸಪರಿಕರಮಾನ ಇವ್ವುಪಾಯತ್ತಿನುಡೈಯ ದುಷ್ಕರತ್ತೈಯಿನಾಲುಮ್, ಇವ್ವುಪಾಯಾನುಷ್ಠಾನತ್ತುಕ್ಕು ಅಪೇಕ್ಷಿತ ಜ್ಞಾನಶಕ್ತಿಯುಂಡೇಯಾಗಿ ಲುಮ್, ಅನೇಕಾವಧಾನತ್ತೋಡೆ ಕೂಡ ಚಿರಕಾಲ ಸಾಧ್ಯಮಾನ ಉಪಾಯ ಸ್ವಭಾವತ್ತಾಲೇ ಅಭಿಮತಮ್ ಕಡುಗ ತ್ತಲೈಕ್ಕಟ್ಟಾದಪಡಿ ಯಿರುಕ್ಕೈಯಾ ಲುಮ್, ನಿರತಿಶಯ ಶೋಕಾವಿಷ್ಟನಾನ ಅರ್ಜುನನೈ ವ್ಯಾಜಮಾಗಕ್ಕೊಂಡು ಪರಮಕಾರುಣಿಕನಾನ ಗೀತೋಪನಿಷದಾಚಾರ್ಯ (೪) "ಭಕ್ತ್ಯಾ ಪರಮ

---

ಇಪ್ಪರಮ ಪುರುಷಾರ್ಥತ್ತೈ-ಈ ಸರ್ವೋತ್ಕೃಷ್ಟವಾದ ಮೋಕ್ಷರೂಪ ಫಲವನ್ನು, ಕಡುಗ ಪೆರವೇಣು ಮೆನ್ಗಿರ-ಶೀಘ್ರದಲ್ಲೇ ಹೊಂದಬೇಕೆಂಬ, ತ್ವರೈಯುಂಡೇ ಯಾಗಿಲುಮ್-ಶ್ರದ್ಧೆಯು ಉಂಟಾದರೂ, ಸಪರಿಕರಮಾನ ಇವ್ವುಪಾಯತ್ತಿ ನುಡೈಯ-ಅನೇಕ ಸಹಕಾರಿಗಳಿಂದ ಕೂಡಿದ ಈ ಭಕ್ತಿಯೋಗವಾದ ಉಪಾಯದ, ದುಷ್ಕರತ್ತೈಯಿನಾಲುಮ್ - ಅನುಷ್ಠಾನವು ತುಂಬಾ ಕಷ್ಟಸಾಧ್ಯವಾದುದರಿಂದ, ಅಪೇಕ್ಷಿತ ಜ್ಞಾನಶಕ್ತಿಯುಣ್ಡೇಯಾಗಿಲುಮ್-ಒಂದುವೇಳೆ ಬೇಕಾದ ಜ್ಞಾನ ಸಾಮರ್ಥ್ಯವಿರುವವರ ಮೂಲಕ ಅಧಿಕಾರವಿದ್ದರೂ, ಅನೇಕವಿಧಾನತ್ತೋಡೆ- ತುಂಬಾ ವಿಳಂಬದಿಂದ, ಚಿರಕಾಲ ಸಾಧ್ಯಮಾನ-ಬಹುಕಾಲದ ಅಭ್ಯಾಸದಿಂದ ಬೇರೇ ಜನ್ಮವೇ ಉಂಟಾದರೂ ಉಂಟಾಗಿ ಸಾಧ್ಯವಾಗುವ, ಉಪಾಯ ಸ್ವಭಾವ ತ್ತಾಲೇ-ಈ ಭಕ್ತಿಯೋಗದ ಸ್ವಭಾವದಿಂದ, ಅಭಿಮತಮ್ ಕಡುಗತ್ತಲೈಕಟ್ಟಾದ ಪಡಿ-ಅದರಿಂದ ಇಷ್ಟವು ಒಡನೆ ಉಂಟಾಗದ ಹಾಗೆ, ಇರುಕ್ಕೈಯಾಲುಮ್-ಇರು ವುದರಿಂದಲೂ, ನಿರತಿಶಯ ಶೋಕಾವಿಷ್ಟನಾನ ಅರ್ಜುನನೈ ವ್ಯಾಜಮಾಗ ಕ್ಕೊಂಡು-ಕೊನೆಗಾಣದ ಶೋಕದಿಂದ ತುಂಬಿದ ಅರ್ಜುನನನ್ನು ವ್ಯಾಜಮಾಡಿ ಕೊಂಡು, ಪರಮಕಾರುಣಿಕನಾನ ಗೀತೋಪನಿಷದಾಚಾರ್ಯ-ಸರ್ವೋತ್ಕೃಷ್ಟ ಕರುಣಾನಿಧಿಯಾಗಿ ಗೀತೋಪದೇಶವನ್ನು ಮಾಡಿದ ಆಚಾರ್ಯನಾದ ಶ್ರೀಕೃಷ್ಣ ಭಗ ವಾನವರು (೪) "ಪರಮಯಾ ಭಕ್ತ್ಯಾಪಿ-ಭಗವಂತನನ್ನು ಅಗಲಿರಲು ಸಾಧ್ಯವೇ

---

(೪) ಭಾರತ.

ಯಾವಾಪಿ ಪ್ರಪತ್ತ್ಯಾವಾ ಮಹಾಮತೇ। ಪ್ರಾಪ್ಯೋಽಹಂ ನಾನ್ಯಥಾ ಪ್ರಾಪ್ಯೋ ಮಮಕೈಂಕರ್ಯಲಿಪ್ಸುಭಿಃ" ಎನ್ರುತಾನ್ ವಿಕಲ್ಪಿತ್ತು ವಿಧಿತ್ತ ಉಪಾಯಙ್ಗಳಿಲ್, (೫) "ತಾವದಾರ್ತಿಸ್ತಥಾವಾಂಛಾ ತಾವನ್ಮೋಹಸ್ತಥಾಸುಖಮ್" ಎಙ್ಗರಪಡಿಯೇ ತನ್ತಿರುವಡಿಗಳೈಪ್ಪೆರುಗೈಕ್ಕುಮ್, ಮತ್ತುಮ್ ಅಭಿಮತಮಾನವೈ ಎಲ್ಲಾತ್ತುಕ್ಕುಮ್ ಪೊದುವಾನ ಸಾಧನಮಾಯ್ ಆನುಕೂಲ್ಯ

---

ಇಲ್ಲವೆಂದಾಗುವ ಸರ್ವೋತ್ಕೃಷ್ಟ ಭಕ್ತಿಯುಳ್ಳ ಉಪಾಸನದ ಚರಮಾವಸ್ಥೆಯಿಂದಲಾಗಲಿ, **ಪ್ರಪತ್ತ್ಯಾವಾ**-ಭರನ್ಯಾಸದಿಂದಲಾಗಲಿ, **ಮಮಕೈಙ್ಕರ್ಯಲಿಪ್ಸುಭಿಃ**-ಮೋಕ್ಷದೆಶೆಯಲ್ಲಿ ನನ್ನ ನಿತ್ಯ ಕೈಙ್ಕರ್ಯವನ್ನು ಅಪೇಕ್ಷಿಸುವವರಿಗೆ, **ಅಹಂಪ್ರಾಪ್ಯಃ**-ನಾನು ಪ್ರಾಪ್ಯನಾಗುವೆನು, **ನಾನ್ಯಥಾ**-ಇವೆರಡಲ್ಲದೆ ಬೇರೇ ಉಪಾಯಗಳಿಂದ, **ನಾನ್ಯಥಾ ಪ್ರಾಪ್ಯಃ**-ಎಂದಿಗೂ ಪ್ರಾಪ್ಯನಾಗುವದಿಲ್ಲವು, **ಎನ್ರುತಾನ್ ವಿಕಲ್ಪಿತ್ತು ವಿಧಿತ್ತ ಉಪಾಯಙ್ಗಳ್**-ಎಂಬದಾಗಿ ಗೀತಾಚಾರ್ಯನಾದ ತಾನು ವಿಕಲ್ಪಿಸಿ ವಿಧಿಸಿದ ಎರಡು ಉಪಾಯಗಳಲ್ಲಿ, (೫)"**ತಾವದಾರ್ತಿಸ್ತಥಾವಾಂಛಾ**" ಎಂಬೀಶ್ಲೋಕದಲ್ಲಿ (೮೪ನೇ ಪುಟ ನೋಡಿ) ಹೇಳಿರುವ ಹಾಗೆ. ಈ ಶ್ಲೋಕಾರ್ಥವೇನೆಂದರೆ ಎಲ್ಲಿಯವರೆವಿಗೆ ಪಾಪಹರನಾದ ನಿನ್ನನ್ನು ಶರಣಾಗತಿಯ ಮೂಲಕ ಆಶ್ರಯಿಸುವದಿಲ್ಲವೋ ಅದುವರಿಗೇನೇ ಐಶ್ವರ್ಯ ಭ್ರಷ್ಟನಿಗೆ ಆರ್ತಿಯುಂಟು, ಅಲ್ಲಿವರಿಗೇನೆ ಹೊಸದಾಗಿ ಐಶ್ವರ್ಯವು ಇಹಲೋಕದ್ದಾಗಲಿ, ಸ್ವರ್ಗಭೋಗದ್ದಾಗಲಿ ಬೇಕೆಂಬ ಆಶೆಯುಂಟು, ಅಲ್ಲಿವರಿಗೇನೇ ಕೈವಲ್ಯಬೇಕೆಂಬ ಎಂದರೆ ಪ್ರಕೃತಿವಿಯುಕ್ತ ಆತ್ಮಪ್ರಾಪ್ತಿ ಬೇಕೆಂಬ, ಮೋಹಬುದ್ಧಿಯುಂಟು; ಅಲ್ಲಿವರಿಗೇನೇ ತನಗೆ ಮೋಕ್ಷಸುಖವಿಲ್ಲವೇ ಎಂಬ ದುಃಖ ಉಂಟು. ಶರಣಾಗತಿಯನ್ನನುಷ್ಠಿಸಿದರೆ, ಆರ್ತಿ, ವಾಂಛಾ, ಮೋಹ, ಅಸುಖ ಎಲ್ಲವೂ ತೊಲಗುತ್ತವೆಂಬ ಭಾವವು. **ತನ್ ತಿರುವಡಿಗಳೈಪೆರೆಗೈಕ್ಕು**-ತನ್ನ ಪಾದ ಕಮಲಗಳನ್ನು ಕುರಿತು ಬಂದು ಸೇರುವದಕ್ಕೆ ಎಂದರೆ ಮೋಕ್ಷಪ್ರಾಪ್ತಿಗೆ, ಮತ್ತು, **ಅಭಿಮತಮಾನವೈ ಎಲ್ಲಾತ್ತುಕ್ಕುಮ್**-ತನಗೆ ಯಾವುದನ್ನು ಹೊಂದುವದರಲ್ಲಿ ಅಭಿಮತವೋ ಅವೆಲ್ಲಕ್ಕೂ, **ಪೊದುವಾನ**-ಅವೆಲ್ಲಕ್ಕೂ ಸಮವಾದ, **ಸಾಧನಮಾಯ್**-ಉಪಾಯವಾಗಿ, **ಆನುಕೂಲ್ಯಸಙ್ಕಲ್ಪಾದಿ ವ್ಯತಿರಿಕ್ತ ಪರಿಕರ ನಿರಪೇಕ್ಷಮಾಯ್**-ಆನುಕೂಲ್ಯ ಸಙ್ಕಲ್ಪ, ಆದಿ ಶಬ್ದದಿಂದ, ಪ್ರಾತಿಕೂಲ್ಯವರ್ಜನ ವಿಶ್ವಾಸ, ಗೋಪ್ತೃತ್ವವರಣ, ಕಾರ್ಪಣ್ಯಗಳೆಂಬ ಐದು ಪರಿಕರಗಳಲ್ಲದೆ, ಇನ್ನು ಯಾವ ಪರಿಕರಗಳು ಬೇಡವಾಗಿರುವ, **ಲಘುತರಮಾಯ್**-ಭಕ್ತಿಯೋಗಕ್ಕಿಂತ ಸುಲಭವಾಗಿ, **ಕ್ಷಣಮಾತ್ರ ಸಾಧ್ಯಮಾನ**-ಶ್ರೀಮದಾ

---

(೫) ವಿ. ಪು. ೧-೯-೭೩.

**ಸಙ್ಕಲ್ಪಾದಿ ವ್ಯತಿರಿಕ್ತ ಪರಿಕರ ನಿರಪೇಕ್ಷಮಾಯ್, ಲಘುತರಮಾಯ್, ಕ್ಷಣಮಾತ್ರ ಸಾಧ್ಯಮಾನ ರಹಸ್ಯತಮೋಪಾಯತ್ತೈ, ಶ್ರೋತವ್ಯ ಶೇಷ ಮಿಲ್ಲಾದಪಡಿ ಉಪದೇಶ ಪರ್ಯವಸಾನಮಾನ ಚರಮ ಶ್ಲೋಕತ್ತಾಲ್ ಸಕಲ ಲೋಕ ರಕ್ಷಾರ್ಥಮಾಗ ಅರುಳಿಚ್ಚೆಯ್‌ಗಿರಾರ್.**

---

ಚಾರ್ಯರು ತನ್ನನ್ನು ಆಶ್ರಯಿಸಲು ಬಂದ ಶಿಷ್ಯನಿಗೆ ದ್ವಯವನ್ನು ಉಚ್ಚರಿಸುವ ಹಾಗೆ ಉಪದೇಶಿಸಿ, ಆತನ ಭರವನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸುವ ಅಲ್ಪಕಾಲದಲ್ಲಿ ಮಾತ್ರವೇ ಸಾಧ್ಯವಾಗಿ, **ರಹಸ್ಯತಮೋಪಾಯತ್ತೈ**-ರಹಸ್ಯತಮವಾದ ಈ ಭರ ನ್ಯಾಸ ರೂಪೋಪಾಯವನ್ನು, **ಶ್ರೋತವ್ಯಶೇಷ ಮಿಲ್ಲಾದಪಡಿ**-ಅದಕ್ಕಾಗಿ ಇನ್ನು ಮುಂದೆ ಕೇಳಿ ತಿಳಿಯಬೇಕಾದುದು ಯಾವುದೂ ಇಲ್ಲದ ಹಾಗೆ, **ಉಪದೇಶಪರ್ಯವ ಸಾನಮಾನ**-ಮೋಕ್ಷಸಾಧನ ಉಪದೇಶವನ್ನು ಪೂರ್ತಿಮಾಡುವ, **ಚರಮ ಶ್ಲೋಕ ತ್ತಾಲ್**-"ಸರ್ವಧರ್ಮಾನ್" ಎಂಬೀ ಕೊನೆಯ ಶ್ಲೋಕವಾದುದರಿಂದ ಚರಮಶ್ಲೋಕ ವೆಂದು ಪ್ರಖ್ಯಾತಿಹೊಂದಿದ ವಾಕ್ಯದಿಂದ ಸಕಲಲೋಕದ ಸಂರಕ್ಷಣೆಗಾಗಿ, **ಅರುಳಿ ಚ್ಚೆಯ್‌ಗಿರಾರ್**-ಕೃಪಯಾ ಉಪದೇಶಿಸುತ್ತಾರೆ. ಇದಕ್ಕೆ ಕರ್ತೃಪದವು ಗೀತೋಪ ನಿಷದಾಚಾರ್ಯನ್ ಎಂದು ಹಿಂದೆ ಇರುತ್ತದೆ.

ಇಲ್ಲಿ "**ತಾವದಾರ್ತಿಸ್ತಥಾವಾಂಛಾ**" ಎಂಬ ಶ್ಲೋಕವು, "**ಚತುರ್ವಿಧಾಭಜನ್ತೇ ಮಾಂ**" ಎಂಬ ಗೀತಾ ಶ್ಲೋಕದಲ್ಲಿ ಎರಡು ವಿಧೋಪಾಯಗಳಾದ ಭಕ್ತಿ ಪ್ರಪತ್ತಿ ಗಳಿಗೂ ಅನ್ವಯಿಸುತ್ತದೆ ಎಂಬುದು **ಯಾವನ್ನಯಾತಿಶರಣಂ** ಎಂಬ ಪ್ರಯೋಗ ದಿಂದ ವ್ಯಕ್ತವು, ಆದುದರಿಂದ ಭಜನ್ತೇ ಎಂಬ ಪ್ರಯೋಗವು, ಈ ಅಭಿಪ್ರಾಯವೇ ಶ್ರೀ ದೇಶಿಕರವರಿಗೂ ಉಪಾದೇಯವಾದುದರಿಂದಲೇ "ತಾವದಾರ್ತಿ" ಎಂಬ ಶ್ಲೋಕ ವನ್ನು ಪ್ರಮಾಣವಾಗಿ ಉದಾಹರಿಸಿರುತ್ತಾರೆ.

ಇದು ಚರಮಶ್ಲೋಕಾಧಿಕಾರಕ್ಕೆ ಅವತಾರಿಕೆಯಾಗಿ ಒಂದು ಮಹಾವಾಕ್ಯವು. ಶ್ರೀ ಭಾಷ್ಯಕಾರರು ಶ್ರೀ ಗೀತಾಭಾಷ್ಯಕ್ಕೆ ಅವತಾರಿಕೆಯಾಗಿ ಅನುಗ್ರಹಿಸಿದ ಮಹಾ ವಾಕ್ಯವನ್ನೇ ಅನುಕರಿಸಿರುತ್ತದೆ. ಈ ವಾಕ್ಯದಲ್ಲಿ ಪರಮಭಕ್ತರಾದ ಪಾಂಡವರಿಗೆ ಶ್ರೀಕೃಷ್ಣ ಭಗವಾನ್ ದೌತ್ಯವನ್ನು ಮಾಡಿದರೆಂದು ಹೇಳಲ್ಪಟ್ಟಿರುತ್ತದೆ ಈ ಆಶ್ರಿ ತರು ಯಾವಾಗ ತಮ್ಮ ಶೇಷಭಾವವನ್ನು "**ದಾಸಭೂತಾ ಸ್ಸ್ವತಸ್ಸರ್ವೇ**" ಇತ್ಯಾದಿ ಪ್ರಮಾಣಗಳಿಂದಲೂ, ಪ್ರಣವಾರ್ಥ ಜ್ಞಾನದಿಂದಲೂ, ಸದ್ಗುರು ಉಪದೇಶ ದಿಂದಲೂ, ಚನ್ನಾಗಿ ತಿಳಿದು "**ತವಾಹಮಸ್ಮಿ**" ಎಂದು ಹೇಳಿಕೊಳ್ಳುತ್ತಾರೋ, ಆಗ ಸ್ವಾಮಿಯೂಸಹ "**ತವಾಹಮ್**" ಎಂದೂ "**ಅಹಂಭಕ್ತ ಪರಾಧೀನಃ**" ಎಂದೂ

ಹೇಳಿಕೊಳ್ಳುವನು. ಆದುದರಿಂದ ಸರ್ವೇಶ್ವರನು ತನ್ನ ಆಶ್ರಿತರಿಗೆ ದೂತ ವೃತ್ತಿಯನ್ನು ಎಸೆಗಲು ಸಿದ್ಧನೆಂಬುದು, ಆತನ ಸೌಲಭ್ಯ ಸೌಶೀಲ್ಯಾದಿಗಳನ್ನು ಪ್ರದರ್ಶಿಸುವದಕ್ಕಾಗಿ **ಇನ್ನಾರ್‌ದೂತನೆನನಿನ್ರು** ಎಂಬ ಪ್ರಯೋಗವು. ಈ ದೌತ್ಯವು ಮುಖ್ಯವಾಗಿ ಏತಕ್ಕೆಂದರೆ ದ್ರೌಪದಿಯು ಮಹಾ ಪಾಪಿಗಳಿಂದುಂಟಾದ ಮಾನಭಂಗ ವಿಷಯದಲ್ಲಿ ತಾವು ಮಾಡಿದ ಶತೃನಾಶ ಸಙ್ಕಲ್ಪಾವಸರದಲ್ಲಿ "**ಪತೇದ್ದ್ಯೌರ್ಹಿಮವಾನ್ ಶೀರ್ಯೇತ್ ಪೃಥಿವೀ ಶಕಲೀಭವೇತ್। ಶುಷ್ಯೇತ್ತೋಯನಿಧಿಃ ಕೃಷ್ಣೇ ನ ಮೇ ಮೋಘಂ ವಚೋ ಭವೇತ್**" ಎಂದು ಸ್ವರ್ಗಲೋಕವು ತಲೆಕೆಳಗಾಗಿ ಬಿದ್ದರೂ ಬೀಳಬಹುದು, ಹಿಮವತ್ಪರ್ವತವು ಶೀಳಿ ಹೋದರೂ ಹೋಗಬಹುದು, ಪೃಥಿವಿಯು ತುಂಡು ತುಂಡಾದರೂ ಆಗಬಹುದು, ಸಮುದ್ರವು ಶೋಷಿಸಿಯಾದರೂ ಹೋಗಬಹುದು, ಓ ದ್ರೌಪದಿಯೇ ನನ್ನ ಮಾತು ಎಂದರೆ ಸಙ್ಕಲ್ಪವು ಎಂದಿಗೂ ವ್ಯರ್ಥವಾಗಲಾರದೆಂದು ಹೇಳಿಕೊಂಡುದರಿಂದ, ಇನ್ನು ಯಾರಾದರೂ ಹೋದರೆ ಎಲ್ಲಿ ಸಂಧಿಯಾಗುತ್ತದೋ ಎಂದು ಭಾವಿಸಿ, ಸಂಧಿಯಾಗದ ಹಾಗೆ ತಾನೇ ತನ್ನ ಭಕ್ತರಿಗಾಗಿ ಹೋಗಿ ಬಂದಿರುತ್ತಾರೆ **ಅರ್ಜುನನೈ ರಥಿಯಾಕ್ಕಿ ತಾನ್ ಸಾರಥಿಯಾಯ್** ಎಂಬ ಪ್ರಯೋಗದಿಂದ, ಪ್ರಣವಾರ್ಥವನ್ನೂ, ವಶೀಕರಣ ಪ್ರತ್ಯರ್ಥವನ್ನೂ ಬೋಧಿಸಿರುತ್ತಾರೆ ಶೇಷಿಯಾಗಿಯೂ ರಕ್ಷಕನಾಗಿಯೂ ಇರುವ ಪರಮಪುರುಷನೂ, ಅವನ ಇಷ್ಟಾನುಸಾರ ಕೈಙ್ಕರ್ಯವನ್ನೆಸಗುವ ದಾಸಭೂತನಾಗಿ ಶೇಷನಾದ ಚೇತನನು ಹಿಂದೆಯೂ, ಸಾರಥಿಯಾದ ಶ್ರೀಕೃಷ್ಣನು ಮುಂದೆಯೂ, ರಥಿಯಾದ ಅರ್ಜುನನು ಹಿಂದೆಯೂ, ಇರುವ ಸ್ಥಿತಿಯು ಉಪದಿಷ್ಟವು

ಈ ಭಾವವನ್ನೇ "**ಅಗ್ರತಃ ಪ್ರಯಯೌ ರಾಮಸ್ಸೀತಾ ಮಧ್ಯೇ ಸುಮಧ್ಯಮಾ ಪೃಷ್ಠತಸ್ತು ಧನುಷ್ಪಾಣಿಃ ಲಕ್ಷ್ಮಣೋನುಜಗಾಮಹ**" ಎಂಬ ಮಹರ್ಷಿವಾಕ್ಯದಲ್ಲಿ ಕಾಣಬಹುದು ಹಾಗೆಯೇ "**ವಿಶ್ವಸ್ಯಾಯತನಂಮಹತ್**" ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ನಮ್ಮ ಹೃದಯವು ಪರಮಪುರುಷನಿಗೆ ದೇವಾಲಯವು ಆತನ ಹತ್ತಿರವಲ್ಲೇ ಆತನಿಗೆ ದಾಸಭೂತನಾದ ಜೀವಾತ್ಮನು ಇದ್ದಾನೆ. ಜೀವಾತ್ಮನೇ ರಥಿಯು, ಪರಮಪುರುಷನೇ ಈತನಿಗೆ ಸಾರಥಿಯು. ಆತನು, ಅರ್ಜುನ ರಥದಲ್ಲಿದ್ದಹಾಗೆ. ಏನೂ ಮಾಡುವದಿಲ್ಲವು- ಅರ್ಜುನನು ಕೇಳಿ ತಿಳಿದಹಾಗೆ ನಾವೂ ನಮ್ಮ ಹೃದಯ ಗುಹೆಯಲ್ಲಿರುವ ಪರಮಪುರುಷನನ್ನು ನಮ್ಮ ಪ್ರವೃತ್ತಿಗಳಲ್ಲೆಲ್ಲಾ ಕೇಳಿ ತಿಳಿದರೆ, ಆತನು ಅರ್ಜುನನಿಗೆ ಪ್ರೇರಿಸಿದ ಹಾಗೆಯೇ ಸರಿಯಾದ ಮಾರ್ಗದಲ್ಲಿ ಪ್ರೇರಿಸುವನು. ಹಾಗೆ ಆತನನ್ನು ಕೇಳಿ ತಿಳಿಯದಿದ್ದರೆ, ಕುಮಾರ್ಗದಲ್ಲಿ ಕರ್ಮವಾಸನಾನುಗುಣವಾಗಿ ಪ್ರವೃತ್ತಿಯುಂಟಾಗು

ತ್ತದೆ ಎಂಬ ಭಾವವನ್ನು ಇಲ್ಲಿ ಗ್ರಹಿಸಬಹುದು ಪ್ರತಿಯೊಬ್ಬರೂ ಅರ್ಜುನನಿಗೆ ಶ್ರೀಕೃಷ್ಣನು ಸಾರಥಿಯಾದ ಹಾಗೆ, ನಮಗೂ ಸಾರಥಿಯಾಗಿಯೇ ಇದ್ದಾನೆಂದು ಭಾವಿಸಿ ಆತನನ್ನು ಪ್ರಾರ್ಥಿಸಿದರೆ, ಸರಿಯಾದ ಬುದ್ಧಿಯನ್ನು ಕೊಡುವನು ಆದುದರಿಂದಲೇ ಶ್ರುತಿಯು "**ಆತ್ಮಾನಂ ರಥಿನಂವಿದ್ಧಿ ಶರೀರಂ ರಥಮೇವಚ, ಬುದ್ಧಿಂತು ಸಾರಥಿಂ ವಿದ್ಧಿ** " (ಕಠ ೧, ೩, ೩) ಎಂದು ಹೇಳಲ್ಪಟ್ಟಿತು. ಈ ಬುದ್ಧಿಯು ಪರಮಪುರುಷನ ಪಾದಕ್ಕೆರಗಿ ಕೇಳಿ ತಿಳಿಯುವದರಿಂದ ಉಂಟಾಗುತ್ತದೆ- ಇದಕ್ಕೆ ವಿವೇಕಜನ್ಯ ಜ್ಞಾನವೆನ್ನುವರು

ಆದುದರಿಂದ "**ತಾನೇಸಾರಥಿಯಾಯ್ ಅವನುಕ್ಕು ವಿಧೇಯನಾಯ್ ನಿನ್ರನಿಳವಿಲೇ**" ಎಂಬ ಪ್ರಯೋಗವು ಸಾರ್ವತ್ರಿಕವಾಗಿಯೂ ಯಥಾರ್ಥವಾದುದು "**ದ್ವಾಸುಪರ್ಣಾ**" ಶ್ರುತಿಯ ಉಪದೇಶವೇ ಮುಖ್ಯವಾಗಿ ಇದು. ಹೀಗೆ ಮಾಡಿದರೇನೇ ನಾವೂ ಸಹ **ನಮ್ಮ** ಪ್ರತಿಪಕ್ಷಗಳಾದ **ಅರಿಷಡ್ವರ್ಗಾದಿಗಳನ್ನು** ನಿರಸನವಾಡಬಹುದೆಂಬುವೂ ಸೂಚಿತವು - ಅರ್ಜುನನಿಗೆ "**ಅಸ್ಥಾನ ಸ್ನೇಹತ್ತಾಲೇ ಪಿರನ್ದ**ಮೋಹ ಮತ್ತು ಕೃಪೆ" ಎಂದು ಹೇಳಲು ಕಾರಣವೇನೆಂಬುದು ಗೀತೆಯಲ್ಲಿ ಸುಸ್ಪಷ್ಟವು ಹೀಗೆ ಹೇಳಿರುವದು ಶ್ರೀಯಾಮುನಮುನಿಗಳ "**ಅಸ್ಥಾನ ಸ್ನೇಹಕಾರುಣ್ಯ ಧರ್ಮಾಧರ್ಮಧಿಯಾಕುಲಮ್ । ಪಾರ್ಥಂ ಪ್ರಪನ್ನಮುದ್ದಿಶ್ಯ ಶಾಸ್ತ್ರಾವತರಣಂ ಕೃತಮ್**" ಎಂಬ ಗೀತಾರ್ಥಸಙ್ಗ್ರಹ ಶ್ಲೋಕವನ್ನು ಮನಸ್ಸಿನಲ್ಲಿಟ್ಟು ಮಾಡಿದ ಪ್ರಯೋಗವಾಗುತ್ತದೆ ಈ ಶ್ಲೋಕಾರ್ಥಕ್ಕೆ ದಾಸನು ಬರೆದಿರುವ ಭಗವದ್ಗೀತೆ ಪ್ರಥಮಷಟ್ಕದ ಆರನೆಯ ಪುಟವನ್ನು ನೋಡಿ ಗೀತಾಚಾರ್ಯರೂ ಹಾಗೆಯೇ "**ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ**" ಎಂಬಲ್ಲಿ ಹೇಳಿರುತ್ತಾರೆ

ಇಲ್ಲಿ **ಅಸ್ಥಾನಸ್ನೇಹ, ಅಸ್ಥಾನಕೃಪೆ** ಎಂಬ ಪ್ರಯೋಗಗಳಿಂದ ಲೋಕಕಂಟಕರಾಗಿಯೂ ಆತತಾಯಿಗಳಾಗಿಯೂ, ದ್ರೌಪದಿಗೆ ಮಾಡಿದ ಅವಮರ್ಯಾದೆಯಿಂದ ಪರಮನೀಚರಾಗಿಯೂ ಇರುವವರಲ್ಲಿ ಸ್ನೇಹವೂ ಕೃಪೆಯೂ ಯೋಗ್ಯವಲ್ಲವೆಂದು ತೋರಿಸುವದಕ್ಕಾಗಿ ಹಾಗೆ ಪ್ರಯೋಗವು ಅಂತವರು ವಧಾರ್ಹರೆಂದು ಸ್ವಾಮಿಯೇ ಸ್ತ್ರೀಯಾದ ತಾಟಕಿಯನ್ನೂ ಮಾವನಾದ ಕಂಸನನ್ನೂ, ಮತ್ತು ಅನೇಕ ಇತರ ಅಪರಾಧಿಗಳನ್ನೂ ಕೊಂದು ಪ್ರದರ್ಶಿಸಿರುತ್ತಾರೆ

**ಪರಶೇಷತ್ವೈಕರಸಮಾನ** ಎಂಬುದರಿಂದ ಜೀವಾತ್ಮನಿಗೆ ಸ್ವರೂಪ ಸತ್ತಾದಿಗಳೆಲ್ಲಾ ಪರಮಪುರುಷಾಯತ್ತವೆಂದು ತಿಳಿಸುವುದಕ್ಕಾಗಿ ಹಾಗೆ ಪ್ರಯೋಗವು. ಇಲ್ಲಿ ರಸವೆಂದರೆ ಸ್ವರೂಪವು. ಪಾರತನ್ತ್ರ್ಯವೇ ಸ್ವರೂಪವೆಂದು

" **ಪಾರತನ್ತ್ರ್ಯಂ ಪರೆ ಪುಂಸಿ ಪ್ರಾಪ್ಯನಿರ್ಗತ ಬಂಧನಃ । ಸ್ವಾತಂತ್ರ್ಯ ಮತುಲಂ ಪ್ರಾಪ್ಯ ತೇನೈವ ಸಹ ಮೋದತೇ**" ಎಂಬ ವಿಷ್ಣು ಧರ್ಮಶ್ಲೋಕದಿಂದ ಗ್ರಹಿಸಬಹುದು ೮೪ನೆಯ ಪುಟನೋಡಿ

**ದೇಹಾದಿವ್ಯತಿರಿಕ್ತವಾಯ್ ಪರಶೇಷತ್ವೈಕರಸವಾನ ನಿತ್ಯಾತ್ಮಸ್ವರೂಪತ್ತೈಯುಮ್**— ದೇಹವು ಅನಿತ್ಯವು ಆತ್ಮಾನಿತ್ಯವೆಂಬುದು ಗೀತಾಚಾರ್ಯರ ಉಪದೇಶಾರಂಭದ ಪ್ರಥಮಶ್ಲೋಕವಾದ " **ನತ್ವೇವಾಹಂ ಜಾತುನಾಸಂ** " ಎಂಬಲ್ಲಿ " **ನಿತ್ಯೋ ನಿತ್ಯಾನಾಂ ಚೇತನ ಶ್ಚೇತನಾನಾಂ** " ಎಂಬ ಶ್ರುತ್ಯುಪಪಾದನೆಯಾಗಿ ವ್ಯಕ್ತವು ಮುಂದೆಯೂ " **ಅವಿನಾಶಿತುತದ್ವಿದ್ಧಿ** " ಎಂಬಲ್ಲೂ " **ಅಚ್ಛೇದ್ಯೋಹಮ್** " ಎಂಬಲ್ಲೂ " **ಅಜೋನಿತ್ಯಃ ಶಾಶ್ವತೋಯಂ ಪುರಾಣಃ । ನಹನ್ಯತೇ** ಹನ್ಯ**ಮಾನೇ ಶರೀರೇ** " (ಗೀ. ೨-೨೦) ಎಂಬಲ್ಲೂ ಸಹ ಈ ನಿತ್ಯತ್ವವೇ ಉಪಪಾದಿತವು ದೇಹವು ಅನಿತ್ಯವೆಂಬುದು ಇಲ್ಲೂ " **ಅನ್ತವನ್ತ** ಇ**ಮೇ ದೇಹಾಃ** " (ಗೀ. ೨-೧೮) ಎಂಬ, " **ವಾಸಾಂಸಿ ಜೀರ್ಣಾನಿ** " (ಗೀ ೨-೨೨) ಎಂಬಿವೇ ಮೊದಲಾದವುಗಳಲ್ಲಿ ಹೇಳಲ್ಪಟ್ಟಿವೆ ಆದುದರಿಂದ ಶ್ರೀ ದೇಶಿಕರವರು ನ್ಯಾಯ ಸಿದ್ಧಾಂಜನದಲ್ಲಿ " **ದೇಹೇನ್ದ್ರಿಯ ಮನಃಪ್ರಾಣಧೀಭ್ಯೋऽನ್ಯೋऽನನ್ಯಸಾಧನಃ** " ದೇಹ, ಇಂದ್ರಿಯ, ಮನಸ್ಸು, ಪ್ರಾಣ ಬುದ್ಧಿ ಇವುಗಳೆಲ್ಲಕ್ಕಿಂತಲೂ ಆತ್ಮಾ ಬೇರೆ ಎಂದೂ, ಆದುದರಿಂದ, " **ನಿತ್ಯೋ ವ್ಯಾಪೀ ಪ್ರತಿಕ್ಷೇತ್ರಂ-ಆತ್ಮಾಭಿನ್ನ ಸ್ವತಸ್ಸುಖೀ** " ನಿತ್ಯನು, ಸರ್ವ ಅಚಿತ್ತನ್ನೂ ವ್ಯಾಪಿಸುವ ಶಕ್ತಿಯುಳ್ಳವನು, ಪ್ರತಿಕ್ಷೇತ್ರದಲ್ಲಿಯೂ ಇರುವ ಆತ್ಮರು ಬೇರೆ ಬೇರೆ ಎಂದೂ ಹೀಗೆಲ್ಲಾ ಹೇಳಿರುತ್ತಾರೆ

ಈ **ಜೀವಾತ್ಮನು ಪರಶೇಷತ್ವೈಕಸ್ವರೂಪ**ನೆಂದು ಹೇಳಿರುತ್ತಾರೆ ಈ ಅರ್ಥವು ಪ್ರಣವದಲ್ಲಿ ವ್ಯಕ್ತವು " **ದಾಸಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ** " ಎಂಬ ಪ್ರಮಾಣವೂ ಇರುತ್ತದೆ

ಗೀತಾಶಾಸ್ತ್ರಾವತರಣಕ್ಕೆ ಕಾರಣವೇನೆಂಬುದನ್ನು ಇಲ್ಲಿ ತಿಳಿಸುತ್ತಾರೆ. ಅಧರ್ಮಗಳನ್ನು ನಿಗ್ರಹಿಸುವದು ಕ್ಷತ್ರಿಯನಿಗೆ ಮುಖ್ಯವಾಗಿರುವಾಗ, ಅಂತಹ ತನ್ನ ಇತಿಕರ್ತವ್ಯವನ್ನು, ಪ್ರತಿಕಕ್ಷಿಗಳು ತನಗೆ ಗುರುಗಳೂ ಅನುಬಂಧಿಗಳೂ ಆದುದರಿಂದ, ಅಧರ್ಮವೆಂದು ಭಾವಿಸಿ, ತನಗೆ ಸರಿಯಾದ ಜ್ಞಾನವಿಲ್ಲವು, ಸರ್ವ ಶ್ರೇಯಸ್ಸಿಗೂ ಸಾಧನವಾಗಿರುವ ಸರಿಯಾದ ಜ್ಞಾನವನ್ನುಪದೇಶಿಸು ಎಂದು ಅರ್ಜುನನು ಶರಣಾಗತಿಯನ್ನನುಷ್ಠಿಸಿ ಪ್ರಾರ್ಥಿಸಿದುದರಿಂದ, ಶಿಷ್ಯನಾದ ಅರ್ಜುನನು ಪ್ರಾಜ್ಞನಾಗಿ ಪ್ರಾರ್ಥಿಸಿದುದರಿಂದ ಹೇಳಲೇಬೇಕಾಯಿತು, ಪರಮಶ್ರೇಯಸ್ಸನ್ನೂ ಹೊಂದುವ ಸಾಧನಗಳನ್ನೆಲ್ಲಾ ಸಮಗ್ರವಾಗಿ ಹೇಳಬೇಕಾಗಿ ಬಂತು.

ಇದರಿಂದ ಸಚ್ಛಿಷ್ಯನು ಯೋಗ್ಯನು ಅರ್ಹನೆಂದು ತೋರಿ ಆತನು ಅಪೇಕ್ಷಿಸಿದ ರೇನೇ ಪರಮರಹಸ್ಯವನ್ನು ಉಪದೇಶಿಸತಕ್ಕದ್ದೆಂಬುದುದ್ಯೋತಿತವು ಮತ್ತು ಯೋಗ್ಯನಾದ ಸಚ್ಛಿಷ್ಯನು ಪ್ರಾರ್ಥಿಸಿದರೂ, ಗುರುವಾದವರು ಹೇಳದೇ ಹೋದರೂ ಗುರುವಿಗೆ ಪ್ರತ್ಯವಾಯವು. ಸಚ್ಛಿಷ್ಯನಾದ ಅರ್ಜುನನು ಪ್ರಾರ್ಥಿಸಿ, ತದನಂತರ ಇವರು ಉಪದೇಶಿಸಿದುದೂ ಎರಡೂ ಸಮಂಜಸವಾಯಿತೆಂಬುದನ್ನು ಇಲ್ಲಿ ಗ್ರಹಿಸ ಬಹುದು

ಹೀಗೆ ಪ್ರಾರ್ಥಿಸಿದುದರಿಂದ ತತ್ವ, ಹಿತ ಪುರುಷಾರ್ಥಗಳನ್ನು ಯಥಾರ್ಥ ವಾಗಿ ಬೋಧಿಸಬೇಕಾಗಿ ಬಂತು ಚೇತನನ ಸ್ವರೂಪ ಸ್ವಭಾವ ಇತಿ ಕರ್ತವ್ಯತಾ ರೂಪ ಪ್ರವೃತ್ತಿ ಮೊದಲಿನ ಆರು ಅಧ್ಯಾಯಗಳಲ್ಲೂ, ೧೩, ೧೪, ೧೫ನೆಯ ಅಧ್ಯಾಯಗಳಲ್ಲೂ ಹೇಳಿದರು . ಅಚೇತನ ಸ್ವರೂಪ ಸ್ವಭಾವಗಳನ್ನೂ ೭, ೧೩, ೧೪, ೧೫, ೧೬, ೧೭ನೆಯ ಅಧ್ಯಾಯಗಳಲ್ಲೂ ಹೇಳಿದರು.

ಉಪಾಯಗಳು ಎರಡು ಎಂದು ೭ನೆಯ ಅಧ್ಯಾಯದಲ್ಲಿ ೧೪ ಮತ್ತು ೧೫ ನೆಯ ಶ್ಲೋಕಗಳಲ್ಲೂ, ಹಾಗೆಯೇ ೧೮ನೆಯ ಅಧ್ಯಾಯದ ೬೫ ಮತ್ತು ೬೬ನೆಯ ಶ್ಲೋಕಗಳಲ್ಲೂ ಹೇಳಲ್ಪಟ್ಟವು.

ಪುರುಷಾರ್ಥಗಳು ೮ನೆಯ ಅಧ್ಯಾಯದಲ್ಲಿ ಉಪಪಾದಿತವು.

ಗೀತಾಶಾಸ್ತ್ರವು ಏನನ್ನು ಉಪದೇಶಿಸಿತು ಎಂಬುದನ್ನು ಸಙ್ಗ್ರಹವಾಗಿ "**ಅವನುಡೈಯ ಶೋಕತ್ತೈ ನಿವರ್ತ್ತಿಪ್ಪಿಕ್ಕೈಕ್ಕಾಹ**" ಎಂದಾರಂಭಿಸಿ **ಅರುಳಿ ಚ್ಚೆಯ್‌ಗಿರಾರ್** ಎಂದು ಪೂರೈಸಿ ಹೇಳಿರುತ್ತಾರೆ ಶ್ರೀಭಗವದ್ಗೀತೆಯು ಉಪಾ ಸನರೂಪ ಒಂದೇ ಉಪಾಯವನ್ನು ಬೋಧಿಸಿತು ಎಂಬ ಕೆಲವರ ವಾದವು ಸರಿ ಯಲ್ಲವೆಂದು ತಿಳಿಸುವದಕ್ಕಾಗಿ ಎರಡು ಉಪಾಯಗಳಾದ ಭಕ್ತಿಯೋಗವೂ ಭರ ನ್ಯಾಸವೂ, ಎಲ್ಲಾ ಅಧಿಕಾರಿಗಳಿಗೂ ಉಪಯುಕ್ತವಾಗುವ ಹಾಗೆ ಉಪದೇಶಿಸ ಲ್ಪಟ್ಟವೆಂದು ಈ ಮಹಾವಾಕ್ಯದಿಂದ ತಿಳಿಸಿರುತ್ತಾರೆ ಅದಕ್ಕಾಗಿಯೇ "**ಭಕ್ತ್ಯಾ ಪರಮಯಾ ವಾಪಿ ಪ್ರಪತ್ತ್ಯಾ ವಾ ಮಹಾಮತೇ**" ಎಂಬ ಪ್ರಮಾಣವನ್ನು ಉದಾಹರಿಸುತ್ತಾರೆ. ಭಗವದ್ಗೀತೆಯ ಅನೇಕ ಸ್ಥಳಗಳಲ್ಲಿ ಪ್ರಪದನವು ಹೇಳಲ್ಪಟ್ಟಿರುತ್ತದೆ. ಪ್ರಥಮತಃ ಇಲ್ಲಿ ಶ್ರೀ ದೇಶಿಕರವರು ಉದಾಹರಿಸಿರುವ "**ಯಚ್ಛ್ರೇಯಸ್ಸ್ಯಾನ್ನಿಶ್ಚಿತಂ ಬ್ರೂಹಿತನ್ಮೇ ಶಿಷ್ಯಸ್ತೇ ಹಂ ಶಾಧಿಮಾಂ ತ್ವಾಂ ಪ್ರಪನ್ನಮ್**" ಎಂಬಲ್ಲೇ ಶ್ರೇಯಸ್ಸನ್ನು ಸಾಧಿಸಿಕೊಡುವ ಜ್ಞಾನಕ್ಕಾ ಗಿಯೇ ಶರಣಾಗತಿಯನ್ನು ಅನುಷ್ಠಿಸಿರುತ್ತಾನೆ. "**ದೈವೀಹ್ಯೇಷಾಗುಣಮಯೀ ಮಮ ಮಾಯಾದುರತ್ಯಯಾ । ಮಾಮೇವ ಯೇ ಪ್ರಪದ್ಯನ್ತೇ ಮಾಯಾ**

**ಮೇತಾಂತರನ್ತಿತೇ** '' (೭, ೧೩) '' **ನಮಾಂದುಷ್ಕೃತಿನೋ ಮೂಢಾಃ ಪ್ರಪದ್ಯನ್ತೇನರಾಧಮಾಃ** '' (೭, ೧೫) ಎಂಬೀ ಶ್ಲೋಕಗಳಲ್ಲಿ **ಪ್ರಪದ್ಯನ್ತೇ** ಎಂಬ ಪ್ರಯೋಗವಿರುತ್ತದೆ ನಾಲ್ಕು ಜನರು **ನಪ್ರಪದ್ಯನ್ತೇ** ಎಂದು ಹೇಳಿ ಮುಂದಿನ ಶ್ಲೋಕದಲ್ಲಿ '' **ಚತುರ್ವಿಧಾಭಜನ್ತೇಮಾಂ** '' ಎಂದು ಹೇಳಿರುವುದರಿಂದ, **ಪ್ರಪದ್ಯನ್ತೇ** ಎಂಬ ಅರ್ಥವೂ ಸಹ ಇದರಲ್ಲಿ ಅಂತರ್ಗತವಾಗುವದಕ್ಕಾಗಿ **ಭಜನ್ತೇ** ಎಂಬ ಪ್ರಯೋಗವು ಅನಂತರ '' **ಮಾಂಹಿಪಾರ್ಥವ್ಯಪಾಶ್ರಿತ್ಯಯೇಪಿಸ್ಯುಃ ಪಾಪಯೋನಯಃ । ಸ್ತ್ರಿಯೋವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾನ್ತಿ ಪರಾಂ ಗತಿಮ್** '' ಎಂದಿರುವದರಿಂದ ಭಾಗವತಾಶ್ರಯವೂ ಭಾಗವತನು ಮಾಡುವ ಶರಣಾಗತಿಯಿಂದ ಮುಕ್ತಿಯೂ, ಎಂಬುದು ವ್ಯಕ್ತವು. '' **ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ** '' (ಗೀ ೧೮ ) ಎಂಬಲ್ಲೂ ಚರಮಶ್ಲೋಕದಲ್ಲೂ ಸುವ್ಯಕ್ತವು ಗೀತೆಯಲ್ಲಿ ಉಪದೇಶಿಸಿರುವ ಕ್ರಮವನ್ನೇ ಅನುಸರಿಸಿ ಉದ್ಧವರಿಗೆ ಭಾಗವತ ೧೧ನೆಯ ಸ್ಕಂಧದಲ್ಲಿ ಮೊದಲು ಉಪಾಸನಕ್ಕೆ ತ್ರಿವರ್ಣದವರಿಗೆ ಅಧಿಕಾರವುಳ್ಳ ಅಙ್ಗಗಳಾದ ಕರ್ಮಯೋಗದ ಜ್ಞಾನಗಳನ್ನು ಅನಂತರ ಅಂಗಿಯಾದ ಪರಮಾತ್ಮ ಸಾಕ್ಷಾತ್ಕಾರಮಾಡುವ ಉಪಾಸನವನ್ನು ತಿಳಿಸಿ, ಅನಂತರ ಎಲ್ಲರಿಗೂ ಅಧಿಕಾರವಿರುವ ಎರಡನೆಯ ಉಪಾಯವಾದ ಭಾಗವತ ಸಂಶ್ರಯಣ ಮೂಲಕ ಶರಣಾಗತಿಯನ್ನು ಹೇಳಿ, ಕೊನೆಗೆ ಇಲ್ಲಿ ಚರಮಶ್ಲೋಕವನ್ನು ಹೇಳಿದ ಹಾಗೆ ಅದನ್ನೇ ಉಪಪಾದಿಸಿ '' **ತಸ್ಮಾತ್ತ್ವಂ ಉದ್ಧವೋತ್ಸೃಜ್ಯ ಚೋದನಂ ಪ್ರತಿಚೋದನಾಂ । ಪ್ರವೃತ್ತಿಂಚ ನಿವೃತ್ತಿಂಚ ಶ್ರೋತವ್ಯಂ ಶ್ರುತ ಮೇವ ಚ । ಮಾ ಮೇಕ ಮೇವ ಶರಣ ಮಾತ್ಮಾನಂ ಸರ್ವದೇಹಿನಾಮ್ । ಯಾಹಿ ಸರ್ವಾತ್ಮಭಾವೇನ ಯಾಸ್ಯಸಿಹ್ಯಕುತೋಭಯಮ್** '' ಎಂಬಲ್ಲಿ ಚರಮಶ್ಲೋಕಾರ್ಥವನ್ನೇ ಉಪದೇಶಿಸಿರುತ್ತಾರೆ ಆದುದರಿಂದ ಎರಡು ಉಪಾಯಗಳೂ ಗೀತೆಯಲ್ಲಿ ಹೇಳಲ್ಪಟ್ಟವೆಂಬುದರಲ್ಲಿ ಸಂದೇಹವಿಲ್ಲವು. ಆದುದರಿಂದ ಅಪಾರ ಜ್ಞಾನನಿಧಿಗಳಾದ ಶ್ರೀಯಾಮುನಮುನಿಗಳು ಗೀತಾಸಙ್ಗ್ರಹದ ಪ್ರಥಮಶ್ಲೋಕದಲ್ಲಿ ಈ ಎರಡು ಉಪಾಯಗಳೂ ಗೀತೆಯಲ್ಲಿ ಹೇಳಲ್ಪಟ್ಟವೆ ಎಂದು ''**ಸ್ವಧರ್ಮ ಜ್ಞಾನ ವೈರಾಗ್ಯಸಾಧ್ಯ ಭಕ್ತ್ಯೇಕಗೋಚರಃ**'' ಎಂಬಲ್ಲಿ ತಿಳಿಸಿರುತ್ತಾರೆ ಎರಡಕ್ಕೂ ಹೇಗೆ ಅನ್ವಯಿಸುತ್ತದೆ ಎಂಬ ಉಪಪಾದನೆಗೆ ದಾಸನು ಬರೆದಿರುವ ಭಗವದ್ಗೀತೆಯ ವ್ಯಾಖ್ಯಾನದ ೫೭-೫೮ನೆಯ ಪುಟಗಳನ್ನು ಪರಾಂಬರಿಸಿ ಆದುದರಿಂದಲೇ **ಗೀತೋಪನಿಷದಾಚಾರ್ಯ**ರ್ '' **ಭಕ್ತ್ಯಾಪರಮಯಾವಾಪಿ ಪ್ರಪತ್ತ್ಯಾವಾಮಹಾಮತೇ** '' '' **ಎನ್ನು ತಾನ್ ವಿಕಲ್ಪಿತ್ತ** '' ಎಂದು ಪ್ರಯೋಗಿಸಿರುತ್ತಾರೆ ಇದನ್ನನುಸರಿಸಿಯೇ **ಶ್ರೀ ಯತಿ**

ವರ್ಯರು ಈ ಚರಮಶ್ಲೋಕದ ಭಾಷ್ಯದಲ್ಲಿ ಎರಡು ಉಪಾಯಗಳಿಗೂ ಅನ್ವಯಿಸುವ ಹಾಗೆ ಎರಡು ವಿಧವಾಗಿ ಅರ್ಥಮಾಡಿರುತ್ತಾರೆ ಅಥವಾ ಹಿಂದಿನ ೬೫ನೆಯ ಶ್ಲೋಕವು ಉಪಾಸನಪರವೆಂದೂ, ಈ ೬೬ನೆಯ ಶ್ಲೋಕವು ಪ್ರಪತ್ತಿಪರವೆಂದೂ ಭಾವಿಸಬಹುದು

ಈ ಮಹಾವಾಕ್ಯದಲ್ಲಿ ಭಕ್ತಿಯೋಗವು ಸಾಕ್ಷಾದುಪಾಯವೆಂದೂ, ಕರ್ಮಯೋಗ ಜ್ಞಾನಯೋಗಗಳು ಮತ್ತು ಅವತಾರರಹಸ್ಯಗಳು ಆ ಉಪಾಯಕ್ಕೆ ಸಾಧನಗಳೆಂದೂ ವಿಶದವಾಗಿ ತಿಳಿಸಿರುತ್ತಾರೆ "**ಪರಮಪುರುಷಾರ್ಥಲಾಭತ್ತುಕ್ಕು ಪರಂಪರೆಯಾ**" ಕಾರಣಗಳೆಂದೂ, ಸಾಕ್ಷಾದುಪಾಯವು ಭಕ್ತಿಯೋಗವೆಂದೂ ಸುವ್ಯಕ್ತವಾಗಿ ತಿಳಿಸಿರುತ್ತಾರೆ ಸಾಕ್ಷಾದುಪಾಯಗಳು ಮೋಕ್ಷಪ್ರಾಪ್ತಿಗೆ ಎರಡೇ ಎಂದು "**ಪ್ರಪನ್ನಾದನ್ಯೇಷಾಂ ನ ದಿಶತಿಮುಕುಂದೋ ನಿಜಪದಮ್ । ಪ್ರಪನ್ನಶ್ಚದ್ವೇಧಾ**" ಎಂಬಲ್ಲಿ (೮೪೮ನೆಯ ಪುಟ) ವ್ಯಕ್ತವಾಗಿ ತಿಳಿಸಿರುತ್ತಾರೆ-ಗೀತೆಯಲ್ಲಿ "**ನಾಹಂವೇದೈ**" (ಗೀ ೧೧, ೫೩) ಎಂಬಲ್ಲೂ ಕೇವಲ ಕರ್ಮಯೋಗವೇ ಮುಕ್ತಿಯನ್ನು ಕೊಡುವದಿಲ್ಲವೆಂದು ಹೇಳಲ್ಪಟ್ಟಿರುತ್ತದೆ. ಶ್ರೀಭಾಷ್ಯಕಾರರವರು "**ಸರ್ವಾಸೂಪನಿಷತ್ಸು ಮೋಕ್ಷಸಾಧನತಯಾ ವಿಹಿತಂ ವೇದನ ಮುಪಾಸನ ಮಿತ್ಯುಕ್ತಮ್**" ಎಂದೂ ಇದೇ "**ಭಕ್ತಿಶಬ್ದೇನಾಭಿಧೀಯತೇ**" ಎಂದೂ, ಇದಕ್ಕೆ "**ಸಾಧನಾನಿಯಜ್ಞಾದೀನಿಕರ್ಮಾಣಿ**" ಎಂದೂ ಶ್ರೀಭಾಷ್ಯದಲ್ಲಿ ಹೇಳಿರುತ್ತಾರೆ ಹಾಗೆಯೇ ಗೀತಾಭಾಷ್ಯಾವತಾರಿಕೆಯಲ್ಲಿ "**ಜ್ಞಾನಕರ್ಮಾನುಗೃಹೀತಂ ಭಕ್ತಿ ಯೋಗ ಮವತಾರಯಾಮಾಸ**" ಎಂದು ಅಪ್ಪಣೆಕೊಟ್ಟಿರುತ್ತಾರೆ

ಶ್ರೀ ಶ್ರುತಪ್ರಕಾಶಿಕಾಚಾರ್ಯರು "**ನಾಹಂವೇದೈ ರಿತ್ಯಾದಿನಾ ತದ್ಭಕ್ತಿವ್ಯತಿರಿಕ್ತೋಪಾಯನಿಷೇಧ ಉಕ್ತಃ**" ಎಂದೂ, "**ಕರ್ಮಣಃ ಉಪಾಯ ಹೇತುತ್ವಸ್ಯ ಕಂಠೋಕ್ತಿಃ**" ಎಂದೂ ಹೇಳಿರುತ್ತಾರೆ "**ಕಷಾಯೇ ಕರ್ಮಭಿಃ ಪಕ್ವೇ ತತೋಜ್ಞಾನಂ ಪ್ರವರ್ತತೇ**" ಎಂಬ ಸ್ಮೃತಿಯು ಕರ್ಮಯೋಗದಿಂದ ಪಾಪಗಳು ತೊಲಗಿದನಂತರ ಪರಮಾತ್ಮಸಾಕ್ಷಾತ್ಕಾರ ಉಂಟಾಗುವ ಭಕ್ತಿಯೋಗದಲ್ಲಿ ಪ್ರವೃತ್ತಿಯುಂಟಾಗುತ್ತದೆಯೆಂದು ಹೇಳಿರುತ್ತದೆ ಆದುದರಿಂದ ಶ್ರೀ ನಿಗಮಾನ್ತದೇಶಿಕರವರೂ ಇದನ್ನೆಲ್ಲಾ ಪರಿಶೀಲಿಸಿ ನ್ಯಾಯಸಿದ್ಧಾಂಜನದಲ್ಲಿ "**ಕರ್ಮಾಪಿ ನಕೇವಲಂ ಜ್ಞಾನಸಮುಚ್ಚಿತಂವಾ ಮುಕ್ತಿಹೇತುಃ**" ಎಂದು ಸಿದ್ಧಾನ್ತಿಸಿ, ಬರೀಕರ್ಮಯೋಗವಾಗಲಿ, ಅಥವಾ ಜ್ಞಾನಯೋಗದಿಂದ ಸೇರಿದುದಾಗಲಿ ಮುಕ್ತಿಗೆ ಹೇತುವಾಗುವುದಿಲ್ಲವೆಂದು ಉಪದೇಶಿಸಿರುತ್ತಾರೆ. ಹೀಗೆಲ್ಲಾ ಇದ್ದರೂ ಅನೇಕರಿಗೆ ಕೇವಲ ಕರ್ಮಯೋಗವೇ ಸಾಕ್ಷಾದುಪಾಯವೆಂಬ ಭ್ರಮೆಯು

ತಪ್ಪಲಿಲ್ಲವು. ಈ ಮಹಾವಾಕ್ಯವಾಗಲಿ ಅವರ ಸಂಶಯವನ್ನು ಭೇದಿಸಲ ಎಂಬುದು ದಾಸನ ಆಶಯವು. ದಕ್ಷಿಣ ದೇಶದಲ್ಲೆಲ್ಲಾ 'ಘನವಿದ್ವಾಂಸರೆಂಬುವ ರೊಬ್ಬರೂ ಕೂಡ ಕೇವಲ ಕರ್ಮಯೋಗನಿಷ್ಠನೂ, ಜ್ಞಾನಿಯಾದ ಭಕ್ತನ ಹಾ ಮೋಕ್ಷವನ್ನೇ ಹೊಂದುವನೆಂದೂ ಹೀಗೆ ಕರ್ಮಯೋಗನಿಷ್ಠನಾಗಲೇ ಅಥವ ಜ್ಞಾನಿಯಾಗಿ ನಿನ್ನನ್ನು ಉಪಾಸಿಸಲೇ ಎಂದು ಗೀತಾ ೧೨ನೆಯ ಅಧ್ಯಾಯ ಪ್ರಥಮಶ್ಲೋಕದಲ್ಲಿ ಅರ್ಜುನನು ಶ್ರೀಕೃಷ್ಣಭಗವಾನರವರನ್ನು ಕುರಿತು ಪ್ರಶ್ನಿಸಿ ನೆಂದು ಅಭಿಪ್ರಾಯಪಟ್ಟರು ಹೀಗೆ ಅನೇಕರಿಗೆ ಕರ್ಮಯೋಗವೇ ಅವ್ಯವಹಿ ವಾದ ಉಪಾಯವೆಂಬ ಅಭಿಪ್ರಾಯವು ನೆಲಗೊಂಡಿದೆ. ಕರ್ಮಯೋಗವು **ವ್ಯ ಹಿತ ಉಪಾಯವೇವಿನಾ** ಎಂದರೆ ಉಪಾಯಕ್ಕೆ ಸಾಧನವೇ ವಿನಾ ಸಾಕ್ಷಾತ್ತಾ ಸಾಧನವಲ್ಲವೆಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿಡತಕ್ಕದ್ದಾಗಿರುತ್ತದೆ. ಶ್ರೀ ಯಾಮುನಮುನಿಗಳ ಸ್ತೋತ್ರರತ್ನದ ಭಾಷ್ಯದಲ್ಲಿ ಶ್ರೀನಿಗಮಾಂತದೇಶಿ ರವರು ೨೨ನೆಯ ಶ್ಲೋಕ ವ್ಯಾಖ್ಯಾನದಲ್ಲಿ ವಿಶದವಾಗಿ ಹೇಳಿರುತ್ತಾರೇನೆಂದರೆ— " **ಅತ್ರಾಯಂಕ್ರಮಃ ಶಾಸ್ತ್ರಾರ್ಥ ತತ್ವಜ್ಞಾನತಃ ಕರ್ಮಯೋಗಃ ; ತೇ ಜಿತಸ್ವಾಂತಸ್ಯ ಪರಿಶುದ್ಧಾತ್ಮ ಭಾವನಾರೂಪೋ ಜ್ಞಾನಯೋಗಃ ; ತದ್ವಾ ರಾವಾ, ಸಾಕ್ಷಾತ್ಕರ್ಮಯೋಗೇನೈವವಾ ಆತ್ಮಾವಲೋಕನಂ, ತೇನಲಬ್ಧಾ ಧಿಕಾರಸ್ಯ ಭಕ್ತಿಯೋಗಃ ; ತತಸ್ತತ್ಪ್ರಾಪ್ತಿರಿತಿ** " ಇಲ್ಲಿ ಕ್ರಮವು ಬಹು ನಿಪುಣ ತರವಾಗಿ ಸ್ಥಾಪಿಸಲ್ಪಟ್ಟಿರುತ್ತದೆ ಹೀಗೆ ಕರ್ಮಯೋಗದಿಂದಾಗಲಿ, ಅಥವ ಕರ್ಮಯೋಗ ಜ್ಞಾನಯೋಗಗಳಿಂದಾಗಲಿ ಸಾಧಿಸಲ್ಪಟ್ಟ ಭಕ್ತಿಯೋಗಕ್ಕೆ ಅ ಕಾರಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವೇ. ಇತರರಿಗೆಲ್ಲಾ ಉಪಾಸನ ಅಧಿಕಾರವಿಲ್ಲವಾದುದರಿಂದ ಪ್ರಪದನದಲ್ಲೇ ಅಧಿಕಾರವೆಂದು ಮುಂದೆ ತಿಳಿಸು ಸಂದರ್ಭದಲ್ಲಿ ಯಾರು ಯಾರು ಈ ಪ್ರಪದನಕ್ಕೆ ಅಧಿಕಾರಿಗಳೆಂಬುದು ಹಿಂ ಹೇಳಿದುದನ್ನೇ ಸಂಗ್ರಹಿಸಿ ಹೇಳುತ್ತಾರೆ—

೧ **ಕ್ಕಡುಗ ಪೆರವೇಣುಮೆನ್ನಿರ ತ್ವರೆವು**ಳ್ಳವನು—ಉಪಾಸನಕ್ಕೆ ಅ ಕಾರಿಯಾದವನಿಗೆ ಈ ಉಪಾಸನಾನುಷ್ಠಾನದಿಂದ ದೇಹಾವಸಾನದಲ್ಲೇ ಮೋ ಸಿದ್ಧವೆಂಬುವ ಕ್ಲಿಪ್ತವಿಲ್ಲವು ಪ್ರಾರಬ್ಧವು ಕಳೆದ ನಂತರವೇ ಮೋಕ್ಷವಾದು ರಿಂದ, ಹೀಗೆ ವಿಳಂಬವನ್ನು ಸಹಿಸಿದವರು ಉಪಾಸನಾಧಿಕಾರಿಗಳಾಗಿದ್ದರೂ ಪ್ರಪದನವನ್ನೇ ಅವಲಂಬಿಸಬಹುದೆಂದು ಇಲ್ಲಿ ತಿಳಿಸಿರುತ್ತಾರೆ

೨. " ಕರ್ಮಯೋಗಾದಿ ಪರಿಕರಗಳ ಅನುಷ್ಠಾನದ ದುಷ್ಕರತೆ ' ಯಿಂದಲೂ ಅಧಿಕಾರಿಯು ಸುಕರವಾಗಿ ಸಕೃದನುಷ್ಠೇಯವಾಗಿರುವ ಭರನ್ಯಾ ಸವನ್ನು ಅನುಷ್ಠಿಸಬಹುದು. ಅದೂ ಅಲ್ಲದೆ ಉಪಾಸನವು " **ಚಿರಕಾಲ ಸಾಧ**

**ವಾದುದು** " ಆದುದರಿಂದಲೂ ಅಧಿಕಾರಿಯು ಭರನ್ಯಾಸವನ್ನು ಕೈಕೊಳ್ಳ ಬಹುದು. ಹೀಗೆಯೇ ಪ್ರಪತ್ತಿಯೋಗ್ಯಾಧಿಕಾರದಲ್ಲಿ ನಾಲ್ಕುವಿಧ ಅಶಕ್ತತೆಯಲ್ಲಿ ಯಾವುದಾದರೂ ಒಂದು ಇದ್ದರೂ ಕೂಡ ಪ್ರಪದನವನ್ನು ಅನುಷ್ಠಿಸಬಹುದೆಂದು " **ಭಕ್ತ್ಯಾದೌ ಶಕ್ತ್ಯಭಾವಃ** " ಎಂಬ ಶ್ಲೋಕದಲ್ಲಿ ಉಪಪಾದಿತವು ೯೪೧, ೯೪೫ನೆಯ ಪುಟಗಳನ್ನು ನೋಡಿ

ಮೇಲೆ ಹೇಳಿದ ಎರಡು ವಿಧ ಕಾರಣಗಳಿಂದಲೂ ಅರ್ಜುನನು ಶೋಕಾವಿಷ್ಟನಾಗಿದ್ದನೆಂದು " **ನಿರತಿಶಯಶೋಕಾವಿಷ್ಟನಾನ ಅರ್ಜುನನ್ನೆ ವ್ಯಾಜ ಮಾಗಕೊಂಡು** " ಎಂಬ ಪ್ರಯೋಗದಿಂದ ತೋರಿಬರುತ್ತದೆ. ಹಾಗೆ ಶೋಕಾವಿಷ್ಟನಾಗಿದ್ದನೆಂಬುದನ್ನು ಗ್ರಹಿಸಲು ಪ್ರಮಾಣವೆಲ್ಲಿದೆ ಎಂದು ಕೇಳಬಹುದು. ಮೇಲೆ ಎರಡನೆಯ ಅಧ್ಯಾಯದಲ್ಲಿ ಗುರುಗಳನ್ನೂ ಬಂಧುಗಳನ್ನೂ ಕೊಲ್ಲಲಾರೆ ಎಂದುಂಟಾಗಿದ್ದ ಶೋಕವು ಇಲ್ಲಿ ಹೇಳಲ್ಪಡಲಿಲ್ಲವು. ಆ ಶೋಕವು, ಮೇಲೆ **ಅವನುಡ್ಯೆಯ ಶೋಕತ್ತೈ ನಿವರ್ತ್ತಿಪ್ಪಿಕ್ಕಿಕ್ಕಾಕ** ಎಂಬಲ್ಲಿ ಉಪಪಾದಿಸಿದ್ದಾರೆ. ಈ ಶೋಕವಾದರೋ ಅದಕ್ಕಿಂತ ಬೇರೆಯಾದುದು ಈಗಿನ ಶೋಕವಾದರೋ ಭಕ್ತಿಯೋಗದ ವಿಳಂಬ ಮತ್ತು ದುಷ್ಕರತೆಯಿಂದುಂಟಾದುದು ಇದು ಚರಮ ಶ್ಲೋಕದಲ್ಲೇ ಅಲ್ಲಿರುವ **ಮಾಶುಚಃ** ಎಂಬುದರಿಂದಲೇ ವ್ಯಕ್ತವು ಶ್ರೀಕೃಷ್ಣ ಭಗವಾನರವರು ಅರ್ಜುನನಿಗೆ ಅಳಬೇಡವೆಂದು ಹೇಳಬೇಕಾದರೆ, ಆತನು ಶೋಕಾವಿಷ್ಟನಾಗಿದ್ದನೆಂಬುದು ವ್ಯಕ್ತವಲ್ಲವೋ ? ಏತಕ್ಕಾಗಿ ಅಳುತ್ತಿದ್ದನು ಎಂದರೆ ಅದೂ ಶ್ರೀಕೃಷ್ಣ ಭಗವಾನರವರ ಉಕ್ತಿಯಿಂದಲೇ ವ್ಯಕ್ತವು. " **ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ** " ಅಳಬೇಡವೆಂದರೆ, ಈ ಉಪಾಸನದಿಂದ ಸರ್ವಪಾಪಗಳೂ ನಾಶವಾಗಬಹುದು ಆದರೆ ಅದು ದುಷ್ಕರವೇ ? ಅದನ್ನನುಷ್ಠಿಸಲು ತನಗೆ ಶಕ್ತಿಯಿಲ್ಲವಲ್ಲಾ, ಪಾಪಗಳು ಪರಿಹರವಾಗುವ ಬಗೆ ಹೇಗೆ ? ಎಂದು ಶೋಕಿಸುತ್ತಿದ್ದನೆಂಬುದು ವ್ಯಕ್ತವು. ಭಕ್ತಿಯೋಗದ ದುಷ್ಕರತೆಯಿಂದ ಶೋಕಾಂಕುರವು ಯಾವಾಗ ಉಂಟಾಯಿತೆಂದರೆ ೧೧ನೆಯ ಅಧ್ಯಾಯಾಂತ್ಯದಲ್ಲಿ " **ನಾಹಂ ವೇದೈಃ** " ಎಂಬ ಶ್ಲೋಕದಿಂದ ಕೇವಲ ಕರ್ಮಯೋಗದಿಂದ ತಾನು ಪ್ರಾಪ್ಯನಲ್ಲವೆಂದೂ, **ಅನನ್ಯಭಕ್ತ್ಯಾ** ಪ್ರಾಪ್ಯನೆಂದೇ ಹೇಳಿ, **ಮನ್ಮನಾಭವ** ಎಂದು ಯಾವಾಗ ಹೇಳಿದನೋ ಆಗಲೇ ಉಂಟಾಗಿ, ಐಕಾಂತ್ಯದಿಂದ ಮನಸ್ಸಿಡಲು ಸಾಧ್ಯವಿಲ್ಲವೆಂದು ಭಾವಿಸಿ, ಹೀಗೆ ನಿನ್ನನ್ನು ಉಪಾಸಿಸತಕ್ಕದ್ದೇ ಇಲ್ಲವೇ ಜಿಜ್ಞಾಸುವಾಗಿ ನಿನ್ನನ್ನು ಉಪಾಸಿಸಲೇ ಎಂದು ೧೨ನೆಯ ಅಧ್ಯಾಯದಲ್ಲಿ ಕೇಳಿದುದಕ್ಕೆ ಶ್ರೀಕೃಷ್ಣಭಗವಾನರವರು ಜಿಜ್ಞಾಸುವಾಗಿ ಅಕ್ಷರ ಮವ್ಯಕ್ತವನ್ನು ಉಪಾಸಿಸುವದು ಕ್ಲೇಶತರವೆಂದೂ, ಹೇಳಿ, ನನ್ನನ್ನೇ ಜ್ಞಾನಿಯಾಗಿ ಉಪಾಸಿಸು,

ಅದಕ್ಕಾಗಿ "**ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ**" ಎಂದು ಯಾವಾಗ ಹೇಳಿಬಿಟ್ಟರೋ ಆಗ ಅದರ ದುಷ್ಕರತೆಯಿಂದ ಶೋಕವು ಚನ್ನಾಗಿಯೇ ಬೇರನ್ನು ಬಿಟ್ಟಿತೆಂದು ಭಾವಿಸಬಹುದು. ಇದು ದುಷ್ಕರವೆಂಬ ದನ್ನು ಶ್ರೀಕೃಷ್ಣಭಗವಾನರವರೇ ಒಪ್ಪಿಕೊಂಡು ಅರ್ಜುನನಿಗೆ "**ಸುದುರ್ದರ್ಶ ಮಿದಂರೂಪಂ**" (ಗೀ ೧೧, ೫೨) ಎಂಬಲ್ಲಿ ಹೇಳಿರುತ್ತಾರೆ. ಈ ಶೋಕ ವನ್ನೇ ಶ್ರೀಯತಿವರ್ಯರು ಈ ಚರಮಶ್ಲೋಕದ ಭಾಷ್ಯದಲ್ಲಿ ಬಹು ವ್ಯಕ್ತವಾಗಿ ಹೇಳಿರುತ್ತಾರೆ. "**ಭಕ್ತಿಯೋಗ ಸ್ತದಾರಂಭ ವಿರೋಧಿ ಪಾಪಾನಾಮಾನ ನ್ತ್ಯಾತ್ ತತ್ಪ್ರಾಯಶ್ಚಿತ್ತರೂಪೈ ರ್ಧರ್ಮೈಃ ಪರಿಮಿತಕಾಲಕೃತೈಸ್ತೇಷಾಂ ದುಸ್ತರತಯಾ ಆತ್ಮನೋ ಭಕ್ತಿಯೋಗಾನರ್ಹತಾ ಮಾಲೋಚ್ಯ ಶೋಚ ತೋಽರ್ಜುನಸ್ಯ ಶೋಕ ಮಪನುದನ್ ಶ್ರೀಭಗವಾನುವಾಚ।**" ಭಕ್ತಿಯೋ ಗದ ದುಸ್ತರತ್ವದಿಂದ ತನಗೆ ಅದನ್ನು ಉಪಕ್ರಮಿಸಲು ಯೋಗ್ಯತೆ ಇಲ್ಲವೇ ಎಂದು ಶೋಕಿಸುತ್ತಿದ್ದ ಅರ್ಜುನನನ್ನು ಕಂಡು ಶ್ರೀಕೃಷ್ಣಭಗವಾನರವರು ಹೇಳು ತ್ತಾರೆ ಎಂದು ವ್ಯಾಖ್ಯಾನವಿರುತ್ತದೆ. ಈ ಸಂದರ್ಭದಲ್ಲಿ ಶ್ರೀ ಗೀತಿಕವರ್ಯರು "ಮಾಶುಚಃ" ಎಂದು ಭಗವಂತನು ಹೇಳಿದ ಈ ಶೋಕವು "**ನಪ್ರಥ ಮೋತ್ಪನ್ನಾ ಸ್ಥಾನಸ್ನೇಹಮೂಲ**" ವಾದ ಶೋಕವಲ್ಲವೆಂದು ಹೇಳಿ, ಹಾಗಾ ದರೆ ಈ ಶೋಕಕ್ಕೆ ಕಾರಣವು ಏನೆಂದರೆ ಹೇಳುತ್ತಾರೆ—**ದೀರ್ಘಕಾಲ ನೈರಂತ ರ್ಯಾದರ ಸೇವನೀಯೋಪಾಯ ದೌಷ್ಕರ್ಯಾತ್। ಫಲವಿಳಂಬಾದ್ವಾ**" ದೀರ್ಘಕಾಲ ಬಹುಕಷ್ಟದಿಂದ ನಿರ್ವಹಿಸುವ ದುಷ್ಕರತ್ವದಿಂದಲೂ, ಫಲವಿಳಂಬ ದಿಂದಾಗಲಿ ಶೋಕವೆಂದು ತಿಳಿಸಿರುತ್ತಾರೆ.

ಆದುದರಿಂದ '**ಪರಮ ಕಾರುಣಿಕನಾದ ಗೀತೋಪನಿಷದಾಚಾರ್ಯ**'ನು ಎರಡು ಉಪಾಯಗಳಿಗೂ ಅನುಕೂಲಿಸುವ ಹಾಗೆ ಚರಮಶ್ಲೋಕವನ್ನು ವಿಧಿ ಸಿರುತ್ತಾರೆ. ಇದನ್ನೇ ಈ ಅಧಿಕಾರದಲ್ಲಿ ಉಪದೇಶಿಸಲು ಉಪಕ್ರಮಿಸಿರುತ್ತಾರೆ. ಆರ್ತಿ, ಶೋಕ, ವಾಂಛಾ, ಮೋಹ ಮೊದಲಾದವೆಲ್ಲಾ, ಶ್ರೀಕೃಷ್ಣಭಗವಾನರವರ ಪಾದಕಮಲವನ್ನು ಹೀಗೆ ಆಶ್ರಯಿಸುವದಕ್ಕೆ ಪೂರ್ವಭಾವಿಯಾಗಿ ಉಂಟೇಪಿನಾ ಯಾವಾಗ ಆತನ ಪಾದಕಮಲದಲ್ಲಿ ತನ್ನ ಭರವನ್ನಿಟ್ಟು ಶರಣಾಗತನಾದನೋ, ಆಗ ಎಲ್ಲವೂ ಸೂರ್ಯೋದಯವಾದರೆ ನಕ್ಷತ್ರಮುಸ್ನೂ ನಿವರ್ತಿಸುವ ಹಾಗೆ ನಿವರ್ತಿ ಸುತ್ತವೆ ಎಂದು ಹೇಳಿರುತ್ತಾರೆ. ಆದುದರಿಂದ ಈ ಚರಮಶ್ಲೋಕದಲ್ಲಿ ವಿಧಿ ಸಿರುವ "**ಮಾಮೇಕಂಶರಣಂವ್ರಜ**" ಎಂಬುದರಿಂದ ತೋರಿಬರುವದೇನೆಂ ಬುದನ್ನು ಸಙ್ಗ್ರಹವಾಗಿ ತಿಳಿಸುತ್ತಾರೆ. (೧) "**ಅಭಿಮತನಾನ ಎಲ್ಲಾ ತ್ತುಕ್ಕುಮ್ ಪೊದುವಾನ ಸಾಧನಮಾಯ್**" ಈತನು ಯಾವ ಯಾವ ಅಭಿ

ಮತಗಳನ್ನು ಮನಸ್ಸಿನಲ್ಲಿಟ್ಟು, ಅವು ಇಲ್ಲವೇ ಎಂದು ಶೋಕಿಸಿ ಶರಣಾಗತಿಯನ್ನನುಷ್ಠಿಸಿದರೆ ಅವೆಲ್ಲವೂ ಲಭಿಸುತ್ತವೆಂದು

**' ಸಾದುಷ್ಕರೇಣ ಶೋಚೇದ್ಯೋ ಯೇನ ಯೇನೇಷ್ಟ ಹೇತುನಾ ।**
**ಸ ಸ ತಸ್ಯಾಹಮೇವೇತಿ ಚರಮಶ್ಲೋಕ ಸಙ್ಗ್ರಹಃ ॥ "**

ಎಂಬುದರಿಂದ ಮುಂದೆ ತಿಳಿಸಿರುತ್ತಾರೆ ಯಾವ ಯಾವ ಇಷ್ಟವನ್ನು ಮನಸ್ಸಿನಲ್ಲಿಟ್ಟು, ಅಯ್ಯೋ ಅದನ್ನು ಪಡೆಯುವುದು ಕಷ್ಟವೇ ಎಂದು ಯಾರು ಯಾರು ಶೋಕಿಸುವರೋ, ಅಂತಂತಾವರ ಇಷ್ಟವನ್ನು ನಲ್ಲಿಸುವವನು ನಾನೆಯೇ ಎಂಬುದು ಚರಮಶ್ಲೋಕದ ಸಙ್ಗ್ರಹಾಭಿಪ್ರಾಯವೆಂದು ಮುಂದೆ ಹೇಳಲ್ಪಡುತ್ತದೆ ಈ ಅಭಿಪ್ರಾಯವೇ ಅಹಿರ್ಬುಧ್ನ್ಯ ಸಂಹಿತೆಯಲ್ಲೂ ಉಪದಿಷ್ಟವು

(೨) ಈ ಭರನ್ಯಾಸಕ್ಕೆ ಬೇಕಾದ ಪಂಚಾಂಗಗಳಲ್ಲದೆ ಮಿಕ್ಕ ಯಾವುದೂ ಬೇಕಾಗಿಲ್ಲವೆಂದು " **ಅನುಕೂಲ್ಯಸಙ್ಕಲ್ಪಾದಿ ವ್ಯತಿರಿಕ್ತ ಪರಿಕರ ನಿರಪೇಕ್ಷ ಮೂಾಯ್** " ಎಂಬುದರಿಂದ ತಿಳಿಸಿರುತ್ತಾರೆ ಉಪಾಸನನಾದ ಉಪಾಯಾನ್ತರಕ್ಕೆ ನಿತ್ಯನೈಮಿತ್ತಿಕಾನುಷ್ಠಾನಗಳ ಸಾಪೇಕ್ಷ್ಯವುಂಟು ಇದಕ್ಕಾದರೋ ಅವುಗಳು ಅಂಗತ್ವೇನ ಬೇಕಾಗಿಲ್ಲವು, ಬೇರೇ ಪ್ರಮಾಣವಿಧಿಯಿಂದ ಇವುಗಳ ಆವಶ್ಯಕತೆ ಏನೋ ಉಂಟು ಆದರೆ ಈ ಉಪಾಯಕ್ಕೆ ಅಂಗವಾಗಿ ಆವಶ್ಯಕವಲ್ಲವೆಂಬ ಭಾವವು

(೩) ಉಪಾಸನನಾದರೋ ಗುರುತರವಾದ ಉಪಾಯವು, ಅಂತಹ ಕಷ್ಟವಿಲ್ಲದುದರಿಂದ ಇದನ್ನ **ಲಘುತರಮೂಾಯ್** ಎಂದು ಹೇಳಿದರು ಮತ್ತು ಉಪಾಸನವನ್ನು ಜನ್ಮಾನ್ತರಪರಂಪರೆಗಳ ಅನುಷ್ಠಾನತಕ್ಕದ್ದಾಗಿರುತ್ತದೆ ಈ ಭರನ್ಯಾಸನಾದರೋ ಹಾಗಲ್ಲದೆ **ಕ್ಷಣಮಾತ್ರ ಸಾಧ್ಯ**ವೆಂದು ಹೇಳಿರುತ್ತಾರೆ ಶಿಕಾರ್ಯರು ಧ್ಯಾನಮುದ್ರೆಯನ್ನು ಉಜ್ಜ್ವಲಿಸುವ ಹಾಗೆ ಮಾಡಿ ಈ ವಿಷ್ಯನ ವಿಷಯಗಳಲ್ಲ ಕ್ಷಣತ್ತೋರಿನಬೇಕೆಂದು ಕರುಣಾಸಾಗರನನ್ನು ಪ್ರಾರ್ಥಿಸುವ ಅಲ್ಪಕಾಲವೇ ಇದಕ್ಕೆ ಬೇಕಾದುದರಿಂದ ಹಾಗೆ ಪ್ರಯೋಗವು ಇಲ್ಲಿ ಶರಣಾಗತಿಯು **ರಹಸ್ಯತಮೋಪಾಯ**ವೆಂದು ಹೇಳಲ್ಪಟ್ಟಿತು ಭಕ್ತಿ ಯೋಗವಾದ ಉಪಾಸನಕ್ಕಿಂತ ಉತ್ಕೃಷ್ಟವಾದುದೆಂದು **ತಮ** ಎಂಬ ಶಬ್ದವು ಹಾಗೆಯೇ ಲಕ್ಷ್ಮೀತಂತ್ರ ವಾಕ್ಯವಾದ " **ಸತ್ಕರ್ಮನಿರತಾಃ** " ಎಂಬಲ್ಲೂ (೨೨ನೆಯ ಪುಟವನ್ನು ನೋಡಿ) ಹೇಳಿರುತ್ತದೆ ಯಾವ ಕಾರಣಗಳಿಂದ **ರಹಸ್ಯತಮೋಪಾಯ**ವೆಂಬುವನ್ನು ೯೩೪ನೆಯ ಪುಟದಲ್ಲಿ ಕಾಣಬಹುದು

ಈ ಚರಮಶ್ಲೋಕದಲ್ಲಿ ಈ ರಹಸ್ಯತಮವಾದ ಉಪಾಯದ ವಿಷಯದಲ್ಲಿ ಕೇಳಿ ತಿಳಿಯಬೇಕಾದ ಸರ್ವಾಂಶಗಳೂ ಅಡಗಿವೆ ಎಂದು ಹೇಳಿ, ಅವುಗಳನ್ನು

ತಾವು ಉಪಪಾದಿಸಿ ಬೋಧಿಸುವೆನೆಂದು ಈ ಪ್ರತಿಜ್ಞಾರೂಪ ಮಹಾವಾಕ್ಯವನ್ನು ಆರಂಭದಲ್ಲಿ ಅನುಗ್ರಹಿಸಿರುತ್ತಾರೆ. ಇಲ್ಲಿ **ಶ್ರೋತವ್ಯಶೇಷವಿಲ್ಲಾದಪಡಿ** ಎಂಬ ಪ್ರಯೋಗದಿಂದ (1) ಭಕ್ತಿಯೋಗದ ಹಾಗೆ ಇತರಾಪೇಕ್ಷೆಗಳೊಂದೂ ಇಲ್ಲದ ಹಾಗೆ ಎಂದಾಗಲಿ, ಅಥವಾ (2) ಇದಕ್ಕಿಂತಲೂ ಮೋಕ್ಷಾರ್ಥಿಗೆ ಶ್ರೇಷ್ಠವಾದ ಸುಲಭೋಪಾಯವಿಲ್ಲದ ಹಾಗೆ ಎಂದಾಗಲಿ, ಅಥವಾ (3) ಅರ್ಜುನನಿಗೆ ಬೇಕಾದುದು ಒಂದು ಸುಲಭೋಪಾಯವು, ಅದನ್ನು ಕೇಳಿ ತಿಳಿದನಂತರ ಬೇರೆ ಇನ್ನು ಕೇಳಿ ತಿಳಿಯಬೇಕಾದುದು ಯಾವುದೂ ಇಲ್ಲವೆಂದಾಗಲಿ ಅರ್ಥವು.

ಇದಕ್ಕೆ ಚರಮಶ್ಲೋಕವೆಂಬ ಹೆಸರು ಏತಕ್ಕೆ ಎಂದರೆ, ಗ್ರಂಥದ ಕೊನೆಯಲ್ಲಿ ಹೇಳಲ್ಪಟ್ಟಿದುದರಿಂದಾಗಲಿ, ಅಥವಾ ಅಹಿರ್ಬುಧ್ನ್ಯ ಸಂಹಿತೆಯಲ್ಲಿ "**ಯದ್ಯೇನ ಕಾಮಕಾಮೇನ ನಸಾಧ್ಯಂ ಸಾಧನಾಂತರೈಃ**" ಇತರ ಉಪಾಯಗಳಿಂದೆಲ್ಲಾ ಸಾಧಿಸಲು ಅಶಕ್ಯವಾದುದನ್ನೆಲ್ಲಾ ಸಾಧಿಸಿಕೊಡುವ ಪಶ್ಚಾತ್ತನ ಮಹಿಮೆಯುಳ್ಳ ಕೊನೆಯ ಉಪಾಯವನ್ನು ವಿಧಿಸಿರುವುದರಿಂದಾಗಲಿ, ಅಥವಾ "**ತಸ್ಮಾನ್ನ್ಯಾಸ ಮೇಷಾಂತಪಸಾ ಮತಿರಿಕ್ತಮಾಹುಃ**" (ಶ್ರು) ಎಂಬಲ್ಲಿಯೂ "**ಸತ್ಕರ್ಮ ನಿರತಾಶ್ಶುದ್ಧಾ ಸ್ಸಾಂಖ್ಯಯೋಗವಿದಸ್ತಥಾ। ನಾರ್ಹಂತಿ ಶರಣಸ್ಥಸ್ಯ ಕಲಾಂ ಕೋಟಿತಮಾಮಪಿ**" ಎಂಬಲ್ಲಿಯೂ ಹೇಳಿರುವ ಹಾಗೆ, ಸರ್ವೋತ್ಕೃಷ್ಟವಾದ ಉಪಾಯವೆಂದು ಕೊನೆಯಲ್ಲಿ ಹೇಳಿರುವದರಿಂದಾಗಲಿ, ಚರಮಶ್ಲೋಕವೆಂದು ಹೇಳಲ್ಪಡುತ್ತದೆ. ಅಥವಾ ಚರಮ ಪದಿಯಲ್ಲಿ ಆಚಾರ್ಯರು ಸಚ್ಛಿಷ್ಯರಿಗೆ ಇದನ್ನು ಉಪದೇಶಿಸುವದರಿಂದಲಾಗಲಿ ಚರಮಶ್ಲೋಕವೆಂಬ ವ್ಯವಹಾರವು.

ಈ ಚರಮಶ್ಲೋಕದಲ್ಲಿ ಹೇಳಿರುವದು ಭಕ್ತಿಯೋಗದ ಹಾಗೆ ಕಷ್ಟತರವಾದ ಉಪಾಯಕ್ಕೆ ಶಕ್ತಿಯಿಲ್ಲದವರಿಗೆ ಸ್ವತಂತ್ರವಾದ ಸುಲಭವಾದ ಮೋಕ್ಷದಾಯಿಕವಾದ ಪ್ರಪತ್ತಿ ಎಂದು ಅಭಿಪ್ರಾಯಪಟ್ಟಿರುವದಕ್ಕಿಂತ ಭಕ್ತಿಯೋಗದ ಅಂಗವಾದ ಶರಣಾಗತಿಯು ಇಲ್ಲಿ ಹೇಳಲ್ಪಟ್ಟಿತೆಂಬ ಅಭಿಪ್ರಾಯವು ಏಕೆಕೂಡದು? ಎಂದರೆ ಅಂಗಶರಣಾಗತಿಯು ಹಿಂದೆಯೇ "**ಮಾಯಾಮೇತಾಂತರಂತಿತೇ**" ಎಂಬಲ್ಲಿಯೂ, **ಮನ್ಮನಾಭವ**" ಎಂಬ ಶ್ಲೋಕದಲ್ಲೇ "**ಮಾಂ ನಮಸ್ಕುರು**" ಎಂಬಲ್ಲೇ, ಹೇಳಿರುವಾಗ ಪುನಃ ಹೇಳುವುದು ಪುನರುಕ್ತಿಯಾಗುವುದಿಲ್ಲವೋ? "**ಸರ್ವಗುಹ್ಯತಮಂ**" ಎಂದು ಶ್ಲಾಘಿಸಿ, **ಭೂಯಃ** – ಇನ್ನೊಂದು ಸಲ ಭಕ್ತಿಯೋಗವನ್ನು "**ಮನ್ಮನಾಭವ**" ಎಂದು ಹಿಂದೆ ಉಪದೇಶಿಸಿದುದನ್ನೇ ಆತನ ಸ್ಮೃತಿಪಥಕ್ಕೆ ತರುತ್ತಾರೆ. ಆದರೂ ಅರ್ಜುನನಿಗೆ ದುಷ್ಕರವೆಂದೂ ವಿಳಂಬಯುಕ್ತವೆಂದೂ, ಶೋಕಾಧಿಕ್ಯವಿದ್ದುದರಿಂದ ಆತನ ಶೋಕನಿವಾರಣಾರ್ಥವಾಗಿ **ಮಾಶುಚಃ** ಎಂದು ಸಮಾಧಾನಮಾಡಿ ಹೇಳಿರುವದರಿಂದ ಸುಲಭವಾಗಿ ಸುಕರ

**ಶ್ರುತಿಸಿದ್ಧವಾದ ಇನ್ನರ್ಥಕ್ಕೆ ಶರಣ್ಯನಾದ ಸರ್ವೇಶ್ವರನೇ ತಾನೇ ಉಪದೇಶಿಕ್ಕವಿದುತಾನೇ (೧) "ಸಂತ್ಯಜ್ಯ ವಿಧಿನಾನಿತ್ಯಂ ಷಡ್ವಿಧಾಂ ಶರಣಾಗತಿಮ್। ಆಚಾರ್ಯಾನುಜ್ಞಯಾ ಚೈವ ಚಾಪಸ್ತ್ರದೃಷ್ಟೇನ ವರ್ತ್ಮನಾ" । ಎನ್ರು ಶ್ರೀ ವಿಷ್ಣುತತ್ವಾದಿಗಳಿಲ್ಸೊನ್ನ ಆಚಾರ್ಯಾನುಜ್ಞೈಯುವಾಯಿತ್ತು.**

ನಾಗಿ ಸಕೃದನುಷ್ಠೇಯವಾದ ಭರನ್ಯಾಸವನ್ನು ಸಕಲಾಶಕ್ತರರಕ್ಷಣಾರ್ಥವಾಗಿ ತನ್ನಣೆ ಕೂಡಿಸಿರುತ್ತಾರೆ ಆದುದರಿಂದ ಇದು ಸಾಕ್ಷಾದುಪಾಯವು ಅಂಗ ಶರಣಾಗತಿಯಲ್ಲವು ಇದನ್ನು ಕೇಳಿ ತಿಳಿದ ಒಡನೆಯೇ ಅರ್ಜುನನು "**ನಷ್ಟೋ ಮೋಹಃಸ್ಮೃತಿರ್ಲಬ್ಧಾ**" ಎಂದು ಹೇಳಿಕೊಂಡಿರುತ್ತಾನೆ ಮುಂದೆ ಹಾಗೆ ಉಪಾಯವೆಂಬುದಕ್ಕೆ ಶ್ರುತ್ಯಾದಿ ಪ್ರಮಾಣಗಳುಂಟು ಎಂದು ಹೇಳುತ್ತಾರೆ

ಈ ಭರನ್ಯಾಸವು **ರಹಸ್ಯತಮವಾದ** ಉಪಾಯವೆಂದು, **ಶರಣಂವ್ರಜೇತ್** ಎಂದು ಇರಬೇಕಲ್ಲಾ? **ಶರಣಂವ್ರಜ** ಎಂದು ವಿಧಿ ಹೇಗೆ? ಎಂದರೆ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ— '**ಯೋಬ್ರಹ್ಮಾಣಂ ವಿದಧಾತಿ ಪೂರ್ವಂ**" ಇತ್ಯಾದಿ ಶ್ರುತಿಯಿಂದ ಶಾಸ್ತ್ರವಿಹಿತವಾಗಿ ವಿಧಿಸಲ್ಪಟ್ಟಿರುವದರಿಂದಲೂ ಭಗವಂತನೇ ಉಪದೇಶಕನಾಗಿ ಲೋಕಗುರುವಾದುದರಿಂದ **ವಿಧಿಯು** ನ್ಯಾಯವಾದುದೇ ಎಂಬ ತಾತ್ಪರದಿಂದ ಹೇಳುತ್ತಾರೆ-- ಹಿಂದಿನ ಮಹಾವಾಕ್ಯದಲ್ಲಿ ಈ ಚರಮ ಶ್ಲೋಕವನ್ನು ಅರ್ಜುನನನ್ನು ವ್ಯಾಜೀಕರಿಸಿ ಲೋಕಹಿತಾರ್ಥಕ್ಕಾಗಿ ಶರಣಾಗತಿಯೆಂಬ ಸುಲಭೋಪಾಯವನ್ನು ವಿಧಿಸಿದರು ಎಂದು ಹೇಳಲ್ಪಟ್ಟಿತು ಆದರೆ ಇಂತಹ ಮುಕ್ತಿಯನ್ನು ಹೊಂದಿಸುವ ವಿದ್ಯೆಯು ಆಚಾರ್ಯೋಪದಿಷ್ಟವಾಗಬೇಕೆಂಬ ನಿಯಮವಿರುವದರಿಂದಲೂ, "**ನ ಪ್ರಸೀದತಿ ವೈವಿದ್ಯಾ ವಿನಾ ಸದುಪದೇಶತಃ**" ಗುರುಮೂಲಕವಾಗಿ ಸದುಪದೇಶದ ಸಂಸ್ಕಾರವಿಲ್ಲದೆ ಬ್ರಹ್ಮವಿದ್ಯೆಯು ಕಾರ್ಯಕಾರಿಯಾಗುವದಿಲ್ಲವೆಂದು ಹೇಳಿದೆಯಲ್ಲಾ ಎಂಬಾಕ್ಷೇಪತಂದರೆ, ಈ ಗೀತಾಚಾರ್ಯನೂ ಲೋಕಗುರುವಾಗಿರುವದರಿಂದ ಆತನ ಉಪದೇಶವು ಪರಮಾಚಾರ್ಯರ ಉಪದೇಶಕ್ಕಿಂತ ಹೆಚ್ಚು ಮಹಿಮೆಯುಳ್ಳದಾದುದರಿಂದ, ಆಚಾರ್ಯಾನುಜ್ಞೆಯೂ ಕೂಡ ಉಂಟಾಯಿತೆಂದು ಹೇಳುತ್ತಾರೆ ಬೇಕಾದ ಸಂಸ್ಕಾರ ಉಂಟಾಯಿತೆಂದು ಹೇಳಿದ ಮಾತೇವಿನಾ, ಬೇರೆ ಆಚಾರ್ಯರ ಉಪದೇಶ ಬೇಡವೇ ಬೇಡವೆಂದು ನಿಷೇಧಿಸಲ್ಪಟ್ಟಿತೆಂದು ಭಾವಿಸತಕ್ಕದ್ದಲ್ಲವು. ---

(೧) ವಿಷ್ಣುತತ್ವ.

**ಶ್ರುತಿಸಿದ್ಧಮಾನ ಇನ್ವರ್ಥತ್ತೈ** – ಶ್ರುತಿಗಳಲ್ಲಿ ಸಿದ್ಧಾಂತಿಸಿ ಹೇಳಲ್ಪಟ್ಟ ಈ ಭರಸಮರ್ಪಣರೂಪವಾದ ಅಭಿಪ್ರಾಯವನ್ನು, ಶರಣಾಗತಿಯೂ ಒಂದು ಸಾಕ್ಷಾತ್ತಾದ ಮುಕ್ತಿಯನ್ನೂ ಕೊಡುವ ಉಪಾಯವೆಂಬುದನ್ನು, ಯಾವ ಶ್ರುತಿಗಳಲ್ಲಿ ಈ ಉಪಾಯವು ವ್ಯಕ್ತವಾಗಿ ಹೇಳಿರುತ್ತದೆ? ಎಂದರೆ "**ಮುಮುಕ್ಷುರ್ವೈ ಶರಣಮಹಂಪ್ರಪದ್ಯೇ**" ಎಂದು ಶ್ವೇತಾಶ್ವತರದಲ್ಲೂ, "**ಪ್ರಣವೋಧನುಶ್ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯಮುಚ್ಯತೇ । ಅಪ್ರಮತ್ತೇನ ವೇದ್ಧವ್ಯಂ**" ಎಂದು ಮುಂಡಕದಲ್ಲೂ, ಪ್ರಯಮನ್ತ್ರವು ಕರದಲ್ಲೂ, "**ತಸ್ಮಾನ್ನ್ಯಾಸಮೇಷಾಂ ತಪಸಾ ಮತಿರಿಕ್ತ ಮಾಹುಃ** । ಎಂದು ಹೇಳಿ, **ಓಮಿತ್ಯಾತ್ಮಾನಂಯುಂಜೀತ**" ಎಂದು ತೈತ್ತರೀಯದಲ್ಲೂ ಹೇಳಿರುವುದರಿಂದ, **ಶ್ರುತಿಸಿದ್ಧಮಾನ ಇನ್ವರ್ಥ**ವನ್ನು ಎಂದು ಹೇಳಿದರು **ಶರಣ್ಯನಾದ ಸರ್ವೇಶ್ವರನು ತಾನೇ, ಉಪದೇಶಿಕ್ಕ** – ಹೀಗೆ ಉಪದೇಶಿಸಲಾಗಿ, **ಇದುತಾನೇ** – ಈ ಉಪದೇಶವೇ, "**ಸಂತ್ಯಜ್ಯ ವಿಧಿನಾ**" **ಎನ್ರು** – ಎಂಬದಾಗಿ **ಶ್ರೀವಿಷ್ಣುತತ್ವಾದಿಗಳಿಲ್ ಚೊನ್ನ** – ಶ್ರೀವಿಷ್ಣುತತ್ವ ಮೊದಲಾದವುಗಳಲ್ಲಿ ಹೇಳಲ್ಪಟ್ಟ **ಆಚಾರ್ಯಾನುಜ್ಞೈಯುಮಾಯಿತ್ತು** – ಸದಾಚಾರ್ಯರ ಅನುಜ್ಞೆಯೂ ಉಂಟಾದ ಹಾಗೆ ಭಾವಿಸತಕ್ಕದ್ದು. ಏಕೆಂದರೆ **ಮಾಮೇಕಂಶರಣಂವ್ರಜ** ಎಂದು ಲೋಕಗುರುವಾಗಿಯೂ, ಶಾಸ್ತ್ರವನ್ನುಪದೇಶಿಸುವ ಗೀತಾಚಾರ್ಯನಾಗಿಯೂ ಹೇಳಿದುದರಿಂದ ಆಚಾರ್ಯಾನುಜ್ಞೆಯು ಸಿದ್ಧಿಸಿತು ಎಂದು ಭಾವಿಸಬಹುದೆಂಬ ತಾತ್ಪರ್ಯವು.

ಈ "**ಸಂತ್ಯಜ್ಯವಿಧಿನಾ**" ಎಂಬ ಶ್ಲೋಕಕ್ಕೆ ನಾನಾವಿಧವಾಗಿ ಅರ್ಥಗಳನ್ನು ಮಾಡಿರುತ್ತಾರೆ ಯಾವುದೊಂದು ವಿರೋಧವೂ ಇಲ್ಲದಹಾಗೆ ಅರ್ಥವು ಹೇಗೆಂದರೆ—**ಸಂತ್ಯಜ್ಯವಿಧಿನಾನಿತ್ಯಂ** ಎಂಬಲ್ಲಿ **ವಿಧಿನಾ ನಿತ್ಯಂ** ಎಂದು ಪದಚ್ಛೇದಮಾಡಿ ಅರ್ಥಹೇಳಲು ಹೋದರೆ ತೊಂದರೆಯುಂಟು. ಆದರೆ ಚರಮಶ್ಲೋಕಾರ್ಥವೆಲ್ಲವನ್ನೂ ಸಙ್ಗ್ರಹವಾಗಿ ಈ ಶ್ಲೋಕವು ಉಪಪಾದಿಸಿತು, ಎಂದರೆ ಆಗ **ನಿತ್ಯಂ** ಎಂದು ಇಟ್ಟುಕೊಳ್ಳಬಹುದು. **ವಿಧಿನಾ ಅನಿತ್ಯಂ ಎಂದಿಟ್ಟು**ಕೊಂಡರೆ ಅರ್ಥವು ಸುಲಭವು **ಅನಿತ್ಯಂ** – ಅಶಾಶ್ವತ ಫಲಗಳನ್ನು ಕೊಡುವ ಕಾಮ್ಯಕರ್ಮಗಳನ್ನೂ, ಯಾವಾಗ ಕಾಮ್ಯಕರ್ಮಗಳೇ ನಿಷೇಧಿಸಲ್ಪಟ್ಟವೋ ಆಗ ನಿಷಿದ್ಧಕರ್ಮಗಳೂ ಈ ಅನಿತ್ಯಶಬ್ದದಿಂದಲೇ ಬೋಧಿತವು, ಇಂತಹ ನಿಷಿದ್ಧಕಾಮ್ಯಕರ್ಮಗಳನ್ನೆಲ್ಲಾ, **ಅನಿತ್ಯಂ** ಎಂಬುದು ಜಾತ್ಯೇಕವಚನವು, **ವಿಧಿನಾ**–ಈ ಚರಮಶ್ಲೋಕದಲ್ಲಿ "**ಶರಣಂವ್ರಜ**" ಎಂದು ಹೇಳಿರುವ ವಿಧಿಯಿಂದ, **ಸಂತ್ಯಜ್ಯ** – ಸವಾಸನವಾಗಿ ಚನ್ನಾಗಿ ಬಿಟ್ಟುಬಿಟ್ಟು, **ಷಡ್ವಿಧಾಂ ಶರಣಾಗತಿಮ್** – ಆ ವಿಧಿವಾಕ್ಯವಾದ ಚರಮಶ್ಲೋಕದಲ್ಲೇ ಅಂಗಾಂಗಿಗಳ ಸಮುಚ್ಚಯದಿಂದ ಆರು ಅಂಶ

**ಸರ್ವಧರ್ಮಾನಿತ್ಯಾದಿ - ಇನ್ದಶ್ಲೋಕತ್ತುಕ್ಕು ಶಙ್ಕಾದಿ ಕುದೃಷ್ಟಿಗಳ್ ಶೊಲ್ಲುಂ ಪೊರುಳ್‌ಗಳೆಲ್ಲಾಮ್ ತಾತ್ಪರ್ಯ ಚನ್ದ್ರಿಕೈಯಿಲುಮ್, ನಿಕ್ಷೇಪ ರಕ್ಷೈಯಿಲುದ್ -ಪರಕ್ಕದೂಷಿತ್ತೋಮ್**

---

ಗಳನ್ನು ಶರಣಾಗತಿಯನ್ನು, **ಆಚಾರ್ಯಾನುಜ್ಞಯಾ**– ಸದಾಚಾರ್ಯರ ಮೂಲಕವಾಗಿಯೇ, **ಶಾಸ್ತ್ರದೃಷ್ಟೇನವರ್ತ್ಮನಾ**–ಶಾಣ್ಡಿಲ್ಯಾದಿ **ಸ್ಮೃ**ತಿಗಳಾದ ಶಾಸ್ತ್ರಗಳಲ್ಲಿ ಹೇಳಿರುವ ಕ್ರಮದಿಂದ, **ಕುರ್ಯಾತ್** - ಮಾಡತಕ್ಕದ್ದೆಂಬುದು ಶ್ಲೋಕಾರ್ಥವು

ಸಾರದೀಪಿಕೆಯವರು ನಿತ್ಯಂ ಎಂಬುದಕ್ಕೆ ಅರ್ಥವನ್ನು ಬರೆಯಲಿಲ್ಲವು, **ಸಂತ್ಯಜ್ಯವಿಧಿನಾ** ಎಂಬುದಕ್ಕೆ "**ಪೂರ್ವೋಕ್ತಙ್ಗಳಾನ ಉಪಾಯಾಂತರಙ್ಗಳೈ ಸಾತ್ವಿಕತ್ಯಾಗರೂಪೇಣವಿಟ್ಟಪ್ರಪಡಿ**" ಎಂದು ಅರ್ಥವನ್ನು ಮಾಡಿರುತ್ತಾರೆ ಸಾತ್ವಿಕತ್ಯಾಗ ಹೇಳುವದು, ಕರ್ಮಾನುಷ್ಠಾನಮಾಡಿ, ಅದರಿಂದ ಉಂಟಾಗುವ ಫಲತ್ಯಾಗಕ್ಕಾಗಿ. ಉಪಾಯಾನ್ತರಗಳು ಇಲ್ಲಿ ಬೇಕಾಗಿಯೇ ಇಲ್ಲವು ಅವು ಸ್ವರೂಪತಃ ತ್ಯಾಗಮಾಡತಕ್ಕವು ಸಾರಾಸ್ವಾದಿನಿಯವರು "**ನಿತ್ಯಂ—ಶರಣಾಗತ್ಯನುಷ್ಠಾನಕಾಲೇ ಸರ್ವದಾ, ಸಂತ್ಯಜ್ಯ-ಸರ್ವಧರ್ಮಾನ್ ಸರ್ವಕಾಮಾನ್ ಐಹಿಕಾಮುಷ್ಮಿಕಾನಪೀತಿ ಪೂರ್ವಾಧೋಕ್ತಾನ್ ಸಂತ್ಯಜ್ಯ, ವಿಧಿನಾ** – ವಿಧಿಸಿದ್ಧ ಸಾತ್ವಿಕತ್ಯಾಗಪೂರ್ವಕಂ ಎಂದು ಅರ್ಥಮಾಡಿರುತ್ತಾರೆ ಸಾರಪ್ರಕಾಶಿಕೆಯವರು, **ಅನಿತ್ಯಂ** ಎಂದು ಪದಮಾಡಿ, **ಅನಿತ್ಯಂ** – ಅಲ್ಪಾಸ್ಥಿರಫಲಂ, **ವಿಧಿನಾ** ಎಂದರೆ ಸಾಧನದಿಂದ (ಇಲ್ಲಿ ಶರಣಾಗತಿಯು) **ಸಂತ್ಯಜ್ಯ** – ಬಿಟ್ಟು ಎಂದು ಒಂದರ್ಥವನ್ನೂ, ಅಥವಾ, **ನಿತ್ಯಂ** ಎಂದು ಪದಮಾಡಿ, ನಿತ್ಯನೈಮಿತ್ತಿಕಗಳು ಉಪಾಯಾನ್ತರವಾದ ಉಪಾಸನಕ್ಕೆ ಅಙ್ಗವಾದುದರಿಂದ, ನಿತ್ಯವೂ ಅದರೊಂದಿಗೆ ಅನುಷ್ಠಿಸತಕ್ಕ ಕರ್ಮವು ಎಂದರೆ ಭಕ್ತಿಯೋಗವು, ಅದನ್ನು **ವಿಧಿನಾ** – ಭಕ್ತಿಯೋಗ ನಿರಪೇಕ್ಷವಾದ ಈ ಚರಮಶ್ಲೋಕವಿಧಿಯಿಂದ, **ಸಂತ್ಯಜ್ಯ** – **ಸಂ**ಪೂರ್ಣವಾಗಿ ತ್ಯಾಗಮಾಡಿ, ಎಂದು ಹೀಗೆ ಎರಡರ್ಥವನ್ನು ಕೊಟ್ಟಿರುತ್ತಾರೆ ಈ ಎರಡು ಅರ್ಥಗಳೂ ಗ್ರಾಹ್ಯಗಳೇ, ಸಾರಪ್ರಕಾಶಿಕೆಯವರು "**ತ್ರೈವರ್ಗಿಕಾಂ ಸ್ತ್ಯಜೇದ್ಧೀಮಾನ್**" ಎಂಬಲ್ಲಿ ಹೇಳಿರುವ ಹಾಗೆ ತ್ರಿವರ್ಗಿಕರಿಗೆ ಬೇಕಾದ ಮನೋರಥಗಳನ್ನು ಸಾಧಿಸಿಕೊಡುವವುಗಳನ್ನೆಲ್ಲಾ, **ಸಂತ್ಯಜ್ಯ** – ಸ್ವರೂಪತಃ ತ್ಯಾಗಮಾಡಿ ಎಂದು ವ್ಯಾಖ್ಯಾನಮಾಡಿರುತ್ತಾರೆ

ಮುಂದೆ ಚರಮಶ್ಲೋಕದಲ್ಲಿರುವ ಪ್ರತಿಪದಗಳಿಗೂ ವಿಸ್ತಾರವಾಗಿ ಅರ್ಥಗಳನ್ನು ಬರೆಯುವ ಸಙ್ಕಲ್ಪದಿಂದ, **ಸರ್ವಧರ್ಮಾನ್ ಇತ್ಯಾದಿ** ಎಂಬ ಪ್ರಯೋಗವು.

**ಇನ್ದಶ್ಲೋಕತ್ತುಕ್ಕು** – ಈ ಅಮೋಘವಾದ ಶ್ಲೋಕಕ್ಕೆ **ಶಙ್ಕರಾದಿ ಕುದೃಷ್ಟಿಗಳ್** – ಶ್ರೀಮಚ್ಛಂಕರಾಚಾರ್ಯರೇ ಮೊದಲಾದ, ಶ್ರುತಿವಾಕ್ಯಗಳಿಗೆ ಸರ್ವಸಮಂಜಸಗಳಾದ ಅರ್ಥಗಳನ್ನು ಹೇಳದಿರುವವರು, **ಚೊಲ್ಲುಮ್ ಪೊರುಳುಗಳೆಲ್ಲಾಮ್** – ಹೇಳುವ ಅರ್ಥಗಳನ್ನೆಲ್ಲಾ, **ತಾತ್ಪರ್ಯಚನ್ದ್ರಿಕೈಯಿಲುಮ್** – ಶ್ರೀಯತಿವರ್ಯರ **ಗೀತಾಭಾಷ್ಯದ** ತಾತ್ಪರ್ಯಗಳನ್ನು ಬೆಳದಿಂಗಳ ಹಾಗೆ ವ್ಯಕ್ತವಡಿಸುವದರಿಂದ, ತಾತ್ಪರ್ಯಚನ್ದ್ರಿಕೆ ಎಂದು ವ್ಯವಹರಿಸಲ್ಪಟ್ಟಿರುವ ತಮ್ಮ ಗ್ರಂಥದಲ್ಲೂ ಮತ್ತು **ನಿಕ್ಷೇಪರಕ್ಷೆ** ಎಂಬ ಆತ್ಮನಿಕ್ಷೇಪವನ್ನು ಸಮರ್ಥಿಸುವ ಗ್ರಂಥದಲ್ಲೂ, **ಪರಕ್ಕೆದೂಷಿತ್ತೋಮ್** – ಶಾಸ್ತ್ರಪ್ರಮಾಣಗಳ ಮೂಲಕವಾಗಿಯೂ, ಪೂರ್ವಾಪರವಿರೋಧಗಳಿಂದಲೂ ವಾದದಿಂದಲೂ ಸಮಂಜಸವಲ್ಲವೆಂದು ತೋರಿಸಿದೆವು ಎಂಬರ್ಥವು ಸಙ್ಗ್ರಹವಾಗಿ ಹೇಗೆಂದರೆ ? **ಸರ್ವಧರ್ಮಾನ್ ಪರಿತ್ಯಜ್ಯ** ವೆಂಬುದರಿಂದ ನಿತ್ಯನೈಮಿತ್ತಿಕ ಮೊದಲಾದ ಸಮಸ್ತಕರ್ಮಗಳನ್ನು ಸೇರಿಸಿ ಅವುಗಳ ಪರಿತ್ಯಾಗವನ್ನು ಹೇಳಿ, ಕೇವಲ **ಜ್ಞಾನಾನ್ಮೋಕ್ಷಃ** ಎಂಬ ಅಭಿಪ್ರಾಯವನ್ನು ಹೇಳಿದುದು ಸರಿಯಲ್ಲವೆಂಬ ಭಾವವು ಇದು ನಿತ್ಯನೈಮಿತ್ತಿಕಗಳನ್ನು ಮಾಡಿಯೇತೀರಬೇಕೆಂಬ ಅನೇಕ ಪ್ರಮಾಣಗಳಿಗೆ ವಿರುದ್ಧವು ಪೂರ್ವಾಪರವಿದ್ಧವು. " **ಕುರುಕರ್ಮೈವ ತಸ್ಮಾತ್ತ್ವಮ್** " ಎಂಬುದಕ್ಕೂ, " **ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯ ಮೇವ ತತ್** " ಎಂಬುದಕ್ಕೂ " **ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ** " ಎಂಬುದಕ್ಕೂ, " **ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ। ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದ ಮುತ್ತಮಂ** " (೧೮-೫೬) ಎಂಬುದಕ್ಕೂ ವಿರುದ್ಧವಾಗುತ್ತದೆ 55ನೆಯ ಶ್ಲೋಕದಲ್ಲಿ ಇದಕ್ಕೆ ವಿರುದ್ಧವಾಗಿ 66ನೆಯ ಶ್ಲೋಕದಲ್ಲಿ " **ಸರ್ವಧರ್ಮಾನ್ಪರಿತ್ಯಜ್ಯ** " ಎಂದು ಎಲ್ಲಿಯಾದರೂ ಹೇಳುತ್ತಾರೆಯೇ ? ಆದುದರಿಂದ ಇವುಗಳಿಗೆ ಪರಸ್ಪರವಿರೋಧವಿಲ್ಲದ ಹಾಗೆ ಅನ್ವಯಿಸಿ ಅರ್ಥ ಹೇಳುವುದೇ ಸಮಂಜಸವಾಗುತ್ತದೆ. ಸರ್ವಧರ್ಮಗಳ ತ್ಯಾಗವು ತಾಮಸವೆಂದು ಹಿಂದೆಯೇಹೇಳಿ, ಆ ತಾಮಸತ್ಯಾಗವನ್ನೇ ವಿಧಿಸುತ್ತಾರೆಯೇ ? ಆದುದರಿಂದ ಸಾತ್ವಿಕ ತ್ಯಾಗಾರ್ಥವನ್ನೇ ಇಲ್ಲಿ ಹೇಳಬೇಕೇ ವಿನಾ ಅನ್ಯಥಾ ಇಲ್ಲವು ಆದುದರಿಂದ ಪ್ರಥಮಯೋಜನೆಯಲ್ಲಿ ಸಾತ್ವಿಕತ್ಯಾಗಾರ್ಥವನ್ನೇ ಶ್ರೀಯತಿವರ್ಯರು ಉಪಪಾದಿಸಿರುತ್ತಾರೆ ಅದೂ ಅಲ್ಲದೆ ಉಪಾಸನದ ಮೂಲಕ ಪರಮಾತ್ಮ ಸಾಕ್ಷಾತ್ಕಾರವು ಬರೀಜ್ಞಾನಮಾತ್ರವೇ ಹೇಗೋ ತಿಳಿಯದು ? ಮನಸ್ಸಿನ ವ್ಯಾಪಾರರೂಪವಾದುದಲ್ಲವೇ ಆ ಜ್ಞಾನವು ? ಮನಸ್ಸಿನ ಪ್ರವೃತ್ತಿರೂಪ ಕರ್ಮವಿಲ್ಲದೆ ಜ್ಞಾನವು ಹೇಗೆ ಉಂಟಾದೀತು ? ಮನಸ್ಸು ಪರಮಾತ್ಮನಲ್ಲೇ ಸ್ಥಿರವಾಗಿ ನಿಲ್ಲಿಸಿದರಲ್ಲವೇ ಪರಮಾತ್ಮ ಸಾಕ್ಷಾತ್ಕಾರ ಜ್ಞಾನ

ಉಂಟಾದೀತು. ಆದುದರಿಂದ **ಸರ್ವಧರ್ಮಪರಿತ್ಯಜ್ಯ** ಎಂಬ ಅವರ ವ್ಯಾಖ್ಯಾನವು ಸಮಂಜಸವಾಗುವದಿಲ್ಲವೆಂಬ ಭಾವವು

ಆಮೇಲೆ **ಮಾಮೇಕಂ** ಎಂಬುದಕ್ಕೂ ಅವರ ಅರ್ಥವು ಸರಿಹೋಗುವದಿಲ್ಲವು. ಏಕೆಂದರೆ **ಮಾಂ ಏಕಂ ಸರ್ವಾತ್ಮಾನಂ ಸಮಂ ಸರ್ವಭೂತಸ್ಥಿತಂ ಈಶ್ವರಂ "ಅಹಮೇವ" ಇತ್ಯೇಕಂ ಶರಣಂವ್ರಜ** ಇಲ್ಲಿ ಮೂಲದಲ್ಲಿ ಇಲ್ಲದ **ಅಹಮೇವ** ಎಂಬುದನ್ನು ಸೇರಿಸಿ ಪರಮಾತ್ಮನೂ ತಾನೂ ಒಂದೇ ಎಂಬ ಭಾವದಿಂದ ಶರಣವನ್ನು ಹೊಂದು, ಎಂದು ಅರ್ಥಮಾಡಿದ್ದಾರೆ. ಒಬ್ಬನು ಸರ್ವಶಕ್ತನಾಗಿಯೂ ಇನ್ನೊಬ್ಬನು ಅಶಕ್ತನಾಗಿಯೂ ಇದ್ದ ಪಕ್ಷದಲ್ಲಿ ಒಂದು ಪ್ರಯೋಜನಕ್ಕಾಗಿ ಅಶಕ್ತನು ಶಕ್ತನಲ್ಲಿ ಶರಣಾಗತಿಯನ್ನು ಮಾಡುವನು ಪ್ರಾಜ್ಞನಾದ ವಿಭೀಷಣನು ಸರ್ವಶಕ್ತನಾದ ಶ್ರೀರಾಮಚಂದ್ರನಿಗೆ ಶರಣಾಗತನಾದನು ಆತ್ಮಾ ಒಂದೇ ಯಾದರೆ ಯಾರು ಯಾರಿಗೆ ಶರಣಾಗತನು ? ರಕ್ಷಿಸು ಎಂದು ಒಬ್ಬನು ಪ್ರಾರ್ಥಿಸಬೇಕು. ಶಕ್ತನಾದವನು ಆತನನ್ನು ರಕ್ಷಿಸಬೇಕಲ್ಲವೇ ? **ಮಾಮೇಕಂ** ಎಬರ್ಥಕ್ಕೂ **ಶರಣಂವ್ರಜ** ಎಂಬರ್ಥಕ್ಕೂ ಪರಸ್ಪರವಿರೋಧ ಉಂಟಾಗುವ ಹಾಗೆ ಮಾಡಬಹುದೇ ? ಸಮಭಾವಕ್ಕಾಗಲಿ ಐಕ್ಯಕ್ಕಾಗಲಿ ಶರಣಾಗತಿಯು ಕೂಡುವದಿಲ್ಲವು ಇದರ ತಾತ್ಪರ್ಯವನ್ನು "**ನಮತ್ತಃ ಅನ್ಯತ್ ಅಸ್ತೀತ್ಯವಧಾರಯ ಇತ್ಯರ್ಥಃ**" ಎಂದು ವಿವರಿಸಿರುತ್ತಾರೆ ಈ ತಾತ್ಪರ್ಯವು ಹೇಗೆ ಉಂಟಾಯಿತೋ ತಿಳಿಯದು ಶ್ರೀಕೃಷ್ಣಭಗವಾನರವರು ತಮ್ಮ ವಿಭೂತಿಯನ್ನೆಲ್ಲಾ ವಿಸ್ತರಿಸಿ ಹೇಳಿ, ಅನಂತರ ವಿಶ್ವರೂಪವನ್ನು ತೋರಿಸಿದುದೆಲ್ಲಾ ಇದರಿಂದ ವ್ಯರ್ಥವೆಂದು ಏರ್ಪಟ್ಟಿತು ಇಂತಹ ಪರಸ್ಪರ ವಿರುದ್ಧ ಉಂಟಾಗುವದರಿಂದ ಸಾಮಂಜಸ್ಯವೇ ಇಲ್ಲವು ಪರಮಾತ್ಮೋಪಾಸನಕಾಲದಲ್ಲಿ "**ಅಹಂ ಬ್ರಹ್ಮಾಸ್ಮಿ**" ಎಂದೇ ಉಪಾಸಿಸತಕ್ಕದ್ದೆಂದು ಹೇಳಿದೆಯಲ್ಲಾ ? ಎಂದರೆ, ನಾವೂ ಅದನ್ನೂ ಒಪ್ಪುವೆವು ಆಗ ಅದರ ಅರ್ಥವೇನೆಂದರೆ ನಾನು ಮಚ್ಛರೀರಕ ಪರಬ್ರಹ್ಮನೇ ಆಗಿದ್ದೇನೆ, ನಾನು ಪರಮಾತ್ಮನಿಗೆ ಶರೀರವು, ಪರಮಾತ್ಮನು ನನಗೆ ಆತ್ಮಾ, ಆದುದರಿಂದ ಪರಬ್ರಹ್ಮನು ಮಚ್ಛರೀರಕನೆಂಬ ಭಾವದಿಂದ ಉಪಾಸಿಸತಕ್ಕದ್ದೆಂಬುದು ಮುಖ್ಯತಾತ್ಪರ್ಯವು. ಸ್ವರೂಪತಃ ನಾನೂ ಪರಬ್ರಹ್ಮನೇ ಎಂಬರ್ಥವಲ್ಲವು

ಹೀಗೆ ಶಾಸ್ತ್ರವಿರೋಧ, ಪೂರ್ವಾಪರ ವಿರೋಧ, ಲೋಕವಿರೋಧ ಮೊದಲಾದವುಗಳಿಂದ ಅಭಿಪ್ರಾಯಗಳು ಸಮಂಜಸವಾದುವಲ್ಲವು ಎಂದು ಆ ಅಭಿಪ್ರಾಯಗಳನ್ನು ನಿರಾಕರಿಸಿರುತ್ತಾರೆ ಹಾಗೆ ಶಾಂಕರಾದಿಗಳ ಅರ್ಥವೂ ಸರಿಯಲ್ಲವೆಂದು ತಿಳಿಸಿ ತಮ್ಮ ಅರ್ಥಗಳಲ್ಲಿಯಾದರೋ ವಾಚಕರು ಸಂಪೂರ್ಣ

**ಇಙ್ಗು ಸಾರಮಾನ ಅರ್ಥಙ್ಗಳೈ ಸತ್ಸಂಪ್ರದಾಯ ಸಿದ್ಧಮಾನವಾಗಿಯೇ ಶೊಲ್ಲುಗಿರೋಮ್.**

**ಶ್ಲೋಕಸ್ಯ ವಾಕ್ಯಾರ್ಥಮಾಹ**

**ಇದಿಲ್ ಪೂರ್ವಾರ್ಧಮ್ ಉಪಾಯ ವಿಧಾಯಕಮ್ ಉತ್ತರಾರ್ಧಮ್ ಫಲನಿರ್ದೇಶಾದಿ ಮುಖತ್ತಾಲೇ ವಿಧಿಶೇಷಮ್. ಆಗೈಯಾಲ್ ಇಶ್ಲೋಕಂ ಉಪಾಯ ವಿಧಾನ ಪ್ರಧಾನಮ್.**

---

ನಂಬಿಕೆಯನ್ನಿಡಬಹುದು ಎಂದು ಹೇಳುತ್ತಾರೆ ಏಕೆಂದರೆ ತಮ್ಮ ಅರ್ಥಗಳಾದರೋ ಸಾರತಮಮಾದುವು, ಪರಸ್ಪರ ವಿರೋಧವಿಲ್ಲದೆ, ವ್ಯಾಸಾದಿಗಳೇ ಈ ಚರಮಶ್ಲೋಕಕ್ಕೆ ವ್ಯಾಖ್ಯಾನವನ್ನು ಮಾಡಿರುವದನ್ನನುಸರಿಸಿಯೂ, ಇವುಗಳಿಗೆ ಐಕಕಂಠ್ಯವನ್ನು ಅನುಸರಿಸಿಯೇ ತಮ್ಮ ಆಚಾರ್ಯರುಗಳೂ ಅಂತಹ ಸಾರತಮಾರ್ಥವನ್ನೇ ಹೇಳಿರುವದರಿಂದ ಪರಮಗ್ರಾಹ್ಯವೆಂದು ಹೇಳಿ, ಅದರ ಅರ್ಥಗಳನ್ನುಪಪಾದಿಸಲು ಆರಂಭಿಸುತ್ತಾರೆ **ಇಙ್ಗು** – ಈ ಚರಮಶ್ಲೋಕಾಧಿಕಾರದಲ್ಲಿ, **ಸಾರಮಾನ ಅರ್ಥಂಗಳೈ** – ತಾವೇ ತಾತ್ಪರ್ಯಚಂದ್ರಿಕೆ, ನಿಕ್ಷೇಪರಕ್ಷೆಗಳಲ್ಲೂ ವಿಸ್ತರಿಸದೇ ಇರುವ, ಮತ್ತೂ ವೇದಾಂತ ಸಮ್ಮತವಾಗಿ ಸಾರವಾದ ಅರ್ಥಗಳನ್ನು, **ಸತ್ಸಂಪ್ರದಾಯ ಸಿದ್ಧಮಾನ** – ಪೂರ್ವಾಚಾರ್ಯರುಗಳಿಗೆ ಅಭಿಮತವಾಗಿ ಅವರಿಂದ ಉಪದೇಶಿಸಲ್ಪಟ್ಟ ಹಾಗೆ, **ಶೊಲ್ಲುಗಿರೋಮ್** – ಹೇಳುವೆವು ಎಂದು ಪ್ರತಿಜ್ಞಾವಾಕ್ಯವನ್ನು ದಯಪಾಲಿಸಿರುತ್ತಾರೆ **ಸ್ವಾರಸ್ಯವಿದೆ** ಎಂದು ತಾವು ಕಲ್ಪಿಸಿ ಹೇಳುವದಿಲ್ಲವು. ಆಳ್ವಾರಾಚಾರ್ಯರುಗಳು ಅನುಮೋದಿಸಿರಬೇಕು, ಅಂತಹ ಅರ್ಥಗಳನ್ನೇ ಹೇಳುವೆವು ವೇದಾಂತ ಸಿದ್ಧವಾಗಿಯೂ ಸತ್ಸಂಪ್ರದಾಯ ಸಿದ್ಧವಾಗಿಯೂ ಇರುವ ಅರ್ಥಗಳನ್ನೇ ಸಪ್ರಮಾಣವಾಗಿ ಹೇಳುವೆವು ಎಂಬ ತಾತ್ಪರ್ಯವು,

**ಶ್ಲೋಕದಲ್ಲಿ ತೋರುವ ಪ್ರಧಾನಾರ್ಥವನ್ನು ಹೇಳುತ್ತಾರೆ**

**ಇದಿಲ್** – ಈ ಚರಮಶ್ಲೋಕದಲ್ಲಿ, **ಪೂರ್ವಾರ್ಧಮ್, ಉಪಾಯ ವಿಧಾಯಕಮ್** – ಉಪಾಯವನ್ನು ವಿಧಿಸುವಂಥಾದ್ದು **ಉತ್ತರಾರ್ಧಮ್, ಫಲನಿರ್ದೇಶಾದಿ ಮುಖತ್ತಾಲೇ** '– ಆ ಉಪಾಯಾನುಷ್ಠಾನದಿಂದುಂಟಾಗುವ ಫಲವೇ ಮೊದಲಾದವುಗಳನ್ನು ತಿಳಿಸುವದ್ವಾರಾ, **ವಿಧಿಶೇಷಮ್** – ಇಲ್ಲಿ **ಆದಿ** ಪದವು **ಮಾಶುಚಃ** ಎಂಬ ಪದದಿಂದ ತೋರಿಬರುವ ಅಧಿಕಾರಿ ವಿಶೇಷವನ್ನೂ ಸೂಚಿಸುತ್ತದೆ, **ವಿಧಿಶೇಷಮ್** ಎಂಬುವರಿಂದ **ಶರಣಂವ್ರಜ** ಎಂಬ ವಿಧಿಗೆ ಸಂಬಂಧಿಸಿದ ವಾಕ್ಯಶೇಷವೆಂಬ ಭಾವವು ಇದರಿಂದೇನು ಪ್ರಯೋಜನವು,

**" ಸರ್ವಧರ್ಮಾನ್ " ಶಬ್ದಾರ್ಥವಾಹ**

**" ಧರ್ಮ "ಮಾವದು ? ಶಾಸ್ತ್ರಮೋ ಕೊಂಡರಿಯವೇಣ್ಡಿರುಕ್ಕುಮ್ ಪುರುಷಾರ್ಥ ಸಾಧನಮ್. " ಧರ್ಮಾನ್ " ಎಙ್ಗಿರ ಬಹುವಚನತ್ತಾಲೆ ಅಭಿಮತಸಾಧನಮಾಕ ಶಾಸ್ತ್ರಚೋದಿತಙ್ಗಳಾನ ಧರ್ಮಂಗಳುಡೈಯ ಬಾಹುಳ್ಯತ್ತೈ ಚೊಲ್ಲುಗಿರದು.**

ಅದಕ್ಕಧಿಕಾರಿಯಾರು ಇತ್ಯಾದಿಗಳಾದ ಉಪಾಯ ವಿಧಿಗೆ ಸಂಬಂಧಿಸಿದ ಅರ್ಥಗಳನ್ನೇ ಈ ಉತ್ತರಾರ್ಧವು ಹೇಳುವದರಿಂದ **ವಿಧಿಶೇಷಮ್** ಎಂಬ ಪ್ರಯೋಗವು **ಆಗೈಯಾಲ್** – ಆ ಕಾರಣದಿಂದ, **ಇಶ್ಲೋಕಮ್** – ಈ ಚರಮಶ್ಲೋಕವು, **ಉಪಾಯ ವಿಧಾನ ಪ್ರಧಾನಮ್**–ಉಪಾಯವನ್ನು ವಿಧಿಸುವದನ್ನೇ ಪ್ರಧಾನವಾಗಿ ಉಳ್ಳದು ಮುಖ್ಯವಾಗಿ ಉಪಾಯವೇ ವಿಧಿಸಲ್ಪಟ್ಟಿರುತ್ತದೆಂಬ ತಾತ್ಪರ್ಯವು

**ಸರ್ವಧರ್ಮಾನ್ ಎಂಬ ಶಬ್ದದ ಅರ್ಥವನ್ನು ಉಪಪಾದಿಸುತ್ತಾರೆ.**

ಇಲ್ಲಿ ಸರ್ವವೆಂಬ ಪದವೂ, ಧರ್ಮಪದವೂ, ಬಹುವಚನವೂ ಇರುವದರಿಂದ ಅವುಗಳ ಅರ್ಥಗಳನ್ನು ಹೇಳಲುಪಕ್ರಮಿಸಿ ಮೊದಲು ಧರ್ಮಶಬ್ದಾರ್ಥವನ್ನು ಹೇಳುತ್ತಾರೆ-- " **ಧರ್ಮ**"**ಮಾವದು ?** – ಧರ್ಮವೆಂದರೇನು ? **ಶಾಸ್ತ್ರಮೋ ಕೊಂಡರಿಯವೇಣ್ಡಿರುಕ್ಕುಮ್** – ಉಪನಿಷತ್ತುಗಳೂ ಅವುಗಳ ಉಪಬೃಹ್ಮಣಗಳೂ ಇವುಗಳ ಮೂಲಕವಾಗಿ ತಿಳಿಯಬೇಕಾಗಿರುವ, **ಪುರುಷಾರ್ಥಸಾಧನಮ್** – ಪುರುಷನ ಅಪೇಕ್ಷಿತಾರ್ಥಕ್ಕೆ ಸಾಧನಭೂತವಾದುದು. ಇಲ್ಲಿ **ಶಾಸ್ತ್ರಮೋ ಕೊಂಡು** ಎಂಬಲ್ಲಿರುವ ಅವಧಾರಣವು ಪ್ರತ್ಯಕ್ಷಾನುಮಾನ ಪ್ರಮಾಣದಿಂದುಂಟಾಗುವುಗಳನ್ನು ವ್ಯಾವರ್ತಿಸುತ್ತದೆ ಆದುದರಿಂದ ಧರ್ಮವು ಅಲೌಕಿಕಶ್ರೇಯಸ್ಸನ್ನು ಸಾಧಿಸಿ ಕೊಡುವ ಕರಣವು ಶ್ರುತಿ ಮತ್ತು ಅವುಗಳ ಉಪಬೃಹ್ಮಣಗಳಾದ ಸ್ಮೃತೀತಿಹಾಸಾದಿಗಳಿಂದ ತಿಳಿಯಬಹುದಾದ ಪುರುಷಾರ್ಥ ಸಾಧನವು ಧರ್ಮವೆಂದು ಲಕ್ಷಣ ಹೇಳಿದುದರಿಂದ ಅಲೌಕಿಕ ಶ್ರೇಯಸ್ಸಾಧನವೆಂದು ಅರ್ಥ ಮಾಡಿರುತ್ತಾರೆ ಆದುದರಿಂದ ಲೌಕಿಕ ಭೋಜನಾದಿಗಳು ಧರ್ಮವಾಗುವದಿಲ್ಲವು " **ಧರ್ಮಾನ್** " **ಎಙ್ಗಿರ ಬಹುವಚನತ್ತಾಲೇ** – ಧರ್ಮಾನ್ ಎಂಬ ಬಹುವಚನದಿಂದ, **ಶಾಸ್ತ್ರಚೋದಿತಙ್ಗಳಾನ** – ಶಾಸ್ತ್ರಗಳಲ್ಲಿ ಪ್ರೇರಿಸಲ್ಪಟ್ಟ, **ಧರ್ಮಙ್ಗಳುಡೈಯ ಬಾಹುಳ್ಯತ್ತೈ ಚೊಲ್ಲುಗಿರದು** – ಧರ್ಮಗಳ ಬಾಹುಳ್ಯವನ್ನು ಹೇಳುತ್ತದೆ ಈ ಚೋದನವು ಶಾಸ್ತ್ರದಲ್ಲಿರುವ ವಿಧಿನಿಷೇಧ ವಾಕ್ಯಗಳ ಮೂಲಕವೆಂದು ಭಾವಿಸತಕ್ಕದ್ದು ಆದುದರಿಂದಲೇ **ಸರ್ವಧರ್ಮಾನ್** ಎಂಬ ವ್ಯಾಖ್ಯಾನದಲ್ಲಿ ಭಾಗವತದಲ್ಲಿ " **ತಸ್ಮಾತ್ತ್ವಂ ಉದ್ಧವೋತ್ಸೃಜ್ಯ ಚೋದನಾಂ ಪ್ರತಿ**

**ಸರ್ವಶಬ್ದತ್ತಾಲೇ ಸಪರಿಕರಮಾನ ನಿಲೈಯೈ ವಿವಕ್ಷಿಕ್ಕಿರದು. ಧರ್ಮ ಪರಿಕರಙ್ಗಳೈಯುಮ್ ಧರ್ಮಮೆನ್ರು ಸೊಲ್ಲಕ್ಕುರೈಯಿಲ್ಲೈ ಇಸರ್ವಶಬ್ದತ್ತೈ ವಿಶೇಷಣ ಪ್ರತಿಸಂಬಂಧಿಯಾಗ ಯೋಜಿಕ್ಕುಮ್ಪೋದು ಅಙ್ಗಿಗಳಾನ ನಾನಾಧರ್ಮಙ್ಗಳಿನುಡೈಯ ಕಾರ್ತ್ಸ್ನ್ಯತ್ತೈಚ್ ಚೊಲ್ಲುಗಿರದು.**

**ಚೋದನಾಮ್**" ಎಂದಾರಂಭಿಸಿ ಹೇಳಲ್ಪಟ್ಟಿರುತ್ತದೆ ಭಕ್ತಿಯೋಗವೆಂದು ಹೇಳಿಸಿಕೊಳ್ಳುವ ಬ್ರಹ್ಮವಿದ್ಯೆಯು ದಹರಾದಿ ೩೨ ವಿಧಗಳಾದುದರಿಂದ ಬಹು ವಚನವು ನ್ಯಾಯವಾದುದೆಂಬ ಭಾವವು ತೋರಿಬರುತ್ತದೆ ಈ ಶ್ಲೋಕಕ್ಕೆ ಶ್ರೀಯತಿವರ್ಯರು ಎರಡು ವಿಧವಾಗಿ ವ್ಯಾಖ್ಯಾನಮಾಡಿರುತ್ತಾರೆ ಶ್ರೀ ನಿಗ ಮಾನ್ತದೇಶಿಕರವರು ಅವರ ಪ್ರಥಮ ಯೋಜನೆಯನ್ನು ಮನಸ್ಸಿನಲ್ಲಿಟ್ಟು ಅರ್ಥ ಗಳನ್ನು ಉಪಪಾದಿಸುತ್ತಾರೆ ಶ್ರೀಯತಿವರ್ಯರು ಭಕ್ತಿಯೋಗ ಭರನ್ಯಾಸಗ ಳೆರಡು ಉಪಾಯಗಳಿಗೂ ಅನುಕೂಲಿಸುವ ಹಾಗೆ ಎರಡು ವಿಧವಾಗಿ ಅರ್ಥ ಗಳನ್ನು ದಯಪಾಲಿಸಿರುತ್ತಾರೆ

**ಸರ್ವಶಬ್ದತ್ತಾಲೇ** – ಸರ್ವಶಬ್ದದಿಂದ, **ಸಪರಿಕರಮಾನ** ಪರಿಕರಗಳಿಂದ ಕೂಡಿದ, ಅಂಗಗಳಿಂದ ಕೂಡಿದ, ನಿಲೈಯೈ- ಧರ್ಮಗಳ ಸ್ಥಿತಿಯನ್ನು **ವಿವಕ್ಷಿಕ್ಕಿರದು** – ಹೇಳುವದು **ಸರ್ವಧರ್ಮಾನ್** ಎಂದರೆ ಸಮಸ್ತಗಳಾದ ಧರ್ಮಗಳನ್ನು ಎಂದು ಕರ್ಮಧಾರಯ ಸಮಾಸವನ್ನು ತಾನೇ ಹೇಳತಕ್ಕದ್ದು ಹಾಗಾದರೆ ಆ ಸರ್ವಶಬ್ದದಿಂದ ಹೇಳಲ್ಪಟ್ಟ ಅಂಗಗಳೂ ಕೂಡ ಧರ್ಮಶಬ್ದವಾಚ್ಯಗಳೇ? ಎಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ,—**ಧರ್ಮಪರಿಕರಙ್ಗಳೈಯುಮ್** - ಧರ್ಮ ಗಳ ಅಂಗಗಳನ್ನೂ, **ಧರ್ಮಮೆನ್ರುಶೊಲ್ಲಕ್ಕುರೈಯಿಲ್ಲೈ** – ಧರ್ಮವೆಂದು ಹೇಳು ವದರಲ್ಲೇನೂ ದೋಷವಿಲ್ಲವು ಆ ಅಂಗಿಯೂ ಕೂಡ ಪ್ರವೃತ್ತಿರೂಪವಾಗಿರ ಬೇಕು. ಒಂದು ಯಜ್ಞಕ್ಕೆ ದರ್ಭೆ ಸಮಿತ್ತು ಮೊದಲಾದವುಗಳೂ ಅಂಗಗಳೇ, ಅಂತಹ ಅಂಗಗಳು ಇಲ್ಲಿ ಹೇಳಲ್ಪಡಲಿಲ್ಲವು, ಆ ದರ್ಭೆ ಸಮಿತ್ತುಗಳ ಪ್ರಯೋಗ ಗಳು ಅಂಗಗಳಾಗಿ ಸರ್ವಶಬ್ದದಲ್ಲಿ ಅಂತರ್ಗತವಾಗಬಹುದು ಆದುದರಿಂದ ಸರ್ವಶಬ್ದವು ಪರಿಕರ ರೂಪಧರ್ಮಗಳನ್ನು ಬೋಧಿಸುತ್ತದೆ, ಧರ್ಮಶಬ್ದಕ್ಕೆ ಸಾಧಕ ವಾದ ಧರ್ಮಗಳೂ ಈ ಸರ್ವಶಬ್ದದಿಂದ ಹೇಳಲ್ಪಟ್ಟಿತೆಂಬ ತಾತ್ಪರ್ಯವು ಧರ್ಮಾನ್ ಎಂಬ ಬಹುವಚನದಿಂದಲೇ ಪರಿಕರಗಳೂ ಬೋಧಿತವಾಗುವಾಗ ಸರ್ವಶಬ್ದವು ವ್ಯರ್ಥವಲ್ಲವೋ? ಎಂದರೆ ಧರ್ಮಾನ್ ಎಂಬುದಕ್ಕೆ ಬಹು ಧರ್ಮಗಳು ಎಂಬರ್ಥವಾಗಿ ಪುರುಷಾರ್ಥಸಾಧನವಾದ ಧರ್ಮದ ಪರಿಕರಗಳೆಂಬ ಅರ್ಥವು ಅವಶ್ಯಕವಾದುದರಿಂದ **ಸರ್ವಾನ್ ಧರ್ಮಾನ್** ಎಂಬ ಅಭಿಪ್ರಾಯದಿಂದ ಸರ್ವಶಬ್ದವೆಂದು ಭಾವಿಸತಕ್ಕದ್ದು.

**ಸಾಂಗಾದ್ವೈದಿಕಕರ್ಮಣಃ ಫಲಾವಶ್ಯಂಭಾವಃ** – ವೈದಿಕಕರ್ಮಗಳಿಗೆ ಸರ್ವಾಂಗಗಳ ಸಮುಚ್ಚಯವಿದ್ದರೇನೇ ಫಲದ ಅವಶ್ಯಂಭಾವವು ಎಂಬ ಅಭಿಪ್ರಾಯವು ಆಗಲಿ ಸರ್ವಶಬ್ದದಿಂದಲೂ ಬಹುತ್ವವೂ, ಧರ್ಮಾ್ ಎಂಬಲ್ಲೂ ಬಹುತ್ವವೂ ಹೀಗೆ ಎರಡುಕಡೆಯಲ್ಲೂ ಬಹುತ್ವಭಾವವು ಆಗಲೂ ನಿರರ್ಥಕವಾದುದಲ್ಲವೋ ? ಎಂದರೆ, ಪುರುಷಾರ್ಥಸಾಧನವಾದ ಉಪಾಯಕ್ಕೆ ಅನೇಕ ಪರಿಕರರೂಪಧರ್ಮಗಳಿರಬಹುದಾದುದರಿಂದ ಸರ್ವಶಬ್ದವು ಸಾರ್ಥಕ್ಯವನ್ನು ಹೊಂದಿತು ಎಂದು ಹೇಳಿದರು ಹಾಗಾದರೆ ಧರ್ಮಾ್ ಎಂಬಲ್ಲಿರುವ ಬಹುವಚನವು, ಸರ್ವಶಬ್ದದಿಂದುಂಟಾದ ಬಹುವಚನವೇಯೋ ಅಥವಾ ವಿಶೇಷಾರ್ಥವೇನಾದರೂ ಉಂಟೋ ? ಎಂಬ ವಿಷಯದಲ್ಲಿ, ಮೋಕ್ಷವನ್ನು ಸಾಧಿಸಿಕೊಡುವ ಬ್ರಹ್ಮವಿದ್ಯೆಗಳು ಪ್ರವರ್ತನವಿದ್ಯಾ, ಶಾಂಡಿಲ್ಯವಿದ್ಯಾ, ದಹರವಿದ್ಯಾ, ಮಧುವಿದ್ಯಾ, ಪಂಚಾಗ್ನಿವಿದ್ಯಾ ಹೀಗೆ ೩೨ ವಿದ್ಯೆಗಳು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವದರಿಂದ ಅವುಗಳ ಬಹುತ್ವವನ್ನು ಬೋಧಿಸುದದಕ್ಕಾಗಿ ಧರ್ಮಶಬ್ದಕ್ಕೆ ಬಹುವಚನವು ಇಲ್ಲಿರುವ ಬಹುವಚನಕ್ಕೆ "**ವಸಂತಾಯಕಪಿಂಜಲಾನಾಲಭೇತ**" ಎಲ್ಲಾ ಕಪಿಂಜಲಪಕ್ಷಿಗಳ ಆಲಂಬನವೆಂಬುದು ಸಾಧ್ಯವಿಲ್ಲವಾಗಿ ಬಹುವಚನಕ್ಕಾಗಿ ಮೂರಾದರೂ ಇರಬೇಕೆಂದು ಈ ಕಪಿಂಜಲನ್ಯಾಯದಿಂದ ವಿಧಿಸಲ್ಪಟ್ಟಿತೆಂದರೆ, ಬ್ರಹ್ಮವಿದ್ಯೆಗಳು **ನಾನಾ,** ಅನೇಕವಾಗಿರುವಾಗ ಯಾವ ಮೂರು ಎಂಬುವ ನಿರ್ಧಾರಣೆಯಿಲ್ಲದೆ ಅವ್ಯವಸ್ಥೆಗೆ ಕಾರಣವಾಗುವದಲ್ಲದೆ, ಮೂರಲ್ಲದೆ ಇತರವುಗಳನ್ನು ಅನುಷ್ಠಿಸಬೇಕೆಂದು ಏರ್ಪಡುವದರಿಂದ ಅಸಾಮಂಜಸ್ಯವುಂಟಾಗುತ್ತದ ಆದುದರಿಂದ ಧರ್ಮಶಬ್ದಕ್ಕೆ ಬ್ರಹ್ಮವಿದ್ಯೆ ಎಂದೇ ಅರ್ಥವು, ಬಹುವಚನದಿಂದ ೩೨ ಬ್ರಹ್ಮವಿದ್ಯೆಗಳೂ ಹೇಳಲ್ಪಟ್ಟವು ಇವುಗಳನ್ನೆಲ್ಲಾ ನಿನಗೆ ಅಧಿಕಾರವಿದ್ದರೂ, ಅಶಕ್ತತೆಯಿಂದ ನೀನು ಅಕಿಂಚನನಾಗಿರುವದರಿಂದ, ಆ ಎಲ್ಲಾ ಬ್ರಹ್ಮವಿದ್ಯೆಗಳನ್ನೆಲ್ಲಾ ಸಪರಿಕರವಾಗಿ ತ್ಯಾಗಮಾಡಿ ಎಂಬರ್ಥವು. "**ಸಕೃದೇವ ಪ್ರಸನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ**" ಎಂಬಲ್ಲಿ ಹೇಳಿರುವ ಹಾಗೆ ಅನ್ಯಾಪೇಕ್ಷೆಯು ಇಲ್ಲವು.

ಆಗಲಿ **ಸರ್ವಧರ್ಮಾ್** ಎಂಬಲ್ಲಿ ಸರ್ವಶಬ್ದಕ್ಕೆ ಹೀಗೆ ಸಂಕುಚಿತಾರ್ಥವನ್ನು ಹೇಳಬಹುದೋ ? ಎಂದರೆ ಹಾಗೆಯೇ ಅನೇಕ ಸಂದರ್ಭಗಳಲ್ಲಿ ಸರ್ವಶಬ್ದಕ್ಕೆ ಸಂಕುಚಿತಾರ್ಥವು ಎಲ್ಲರೂ ದಯಮಾಡಿ ಒಳಗೆ ಬರಬೇಕು ಎಂದರೆ ಊರಲ್ಲಿರುವರೆಲ್ಲರೂ ಎಂಬರ್ಥವು ಆಗದೆ, ಬಂದಿರುವರೆಲ್ಲರೂ ಎಂದು ಮಾತ್ರ ಹೇಗೆ ಅರ್ಥವೋ, ಹಾಗೆಯೇ ಇಲ್ಲೂ ಉಪಾಯಾಂತರ ತತ್ಪರಿಕರಗಳನ್ನೂ ಎಂಬು ಸಂಕೋಚಿಸಿಯೇ ಅರ್ಥವನ್ನು ಹೇಳತಕ್ಕದ್ದೆಂಬುದು ಏರ್ಪಟ್ಟಿತು. ಇದರಿಂದ

ಇತರ ಪ್ರಮಾಣಗಳಿಂದ ವಿಧಿಸಲ್ಪಟ್ಟ ಧರ್ಮಗಳಾದ ನಿತ್ಯನೈಮಿತ್ತಿಕಾದಿಗಳು ತ್ಯಾಜ್ಯಗಳಲ್ಲವೆಂಬುದೂ ಏರ್ಪಟ್ಟಿತು ಹಾಗೆಯೇ ದೇಹಯಾತ್ರೆಗೆ ಬೇಕಾದ ಪ್ರವೃತ್ತಿಗಳೂ ಮತ್ತು ತನ್ನ ಬಂಧುಗಳ ಮತ್ತು ದೇಶದ ಏಳಿಗೆಗಾಗಲಿ ಮಾಡ ತಕ್ಕ ಇತಿ ಕರ್ತವ್ಯಗಳೂ ತ್ಯಾಜ್ಯಗಳಲ್ಲವು "**ತತ್ಕುರುಷ್ವಮದರ್ಪಣಂ**" ಎಂದು ಹೇಳಿರುವ ಹಾಗೆ ಮಾಡಿದರೆ ಪ್ರತ್ಯವಾಯವಾಗಿ ಬಂಧಕವಾಗಿ ಆಗುವ ದಿಲ್ಲವಾದುದರಿಂದ ಅವುಗಳೂ ತ್ಯಾಜ್ಯಗಳಲ್ಲವು ಆದರೆ ಇವು ಯಾವುವುಗಳ ಅಪೇಕ್ಷೆಯೂ ಸಕೃದನುಷ್ಠೇಯವಾದ ಭರನ್ಯಾಸಕ್ಕಿಲ್ಲವು ಆತನೊಬ್ಬನನ್ನು ಮಾತ್ರ ಆಶ್ರಯಿಸುವ ಭರನ್ಯಾಸಕ್ಕೆ ಪ್ರತಿದ್ವಂದ್ವಿಯಾದ ಇತರೋಪಾಯಗಳ ಸಪರಿಕರತ್ಯಾಗವೇ ಇಲ್ಲಿ ವಿವಕ್ಷಿತವು. ಹೀಗೆ ಪರಿಕರಗಳ ಬಾಹುಳ್ಯ, ಮತ್ತು ಧರ್ಮಗಳ ಬಾಹುಳ್ಯವಿರುವದರಿಂದ ಎರಡು ಪದಗಳಿಂದ ತೋರಿಬರುವ ಕಾತ್ಸ್ನ್ಯರ್ವವೂ ( ಸಮಸ್ತವೂ ) ಇಲ್ಲಿ ಬೋಧಿತಬೇಕಾಗಿರುವದರಿಂದ ಹಾಗೆ ಪ್ರಯೋಗವೆಂದು ಮುಂದಿನ ವಾಕ್ಯದಿಂದ ಉಪದೇಶಿಸುತ್ತಾರೆ —

**ಇಸ್ಸರ್ವಶಬ್ದತ್ತ್ಯೈ** – ಈ ಸರ್ವಶಬ್ದವನ್ನು, **ಏಕಶಬ್ದ ಪ್ರತಿಸಂಬಂಧಿಯಾಕ ಯೋಜಿಕ್ಕುಂಪೋದು** – ಮುಂದೆ ಪ್ರಪದನದ ಸುಕರತ್ವವನ್ನು ಹೇಳುವ ಸಂದ ರ್ಭದಲ್ಲಿ, ಉಪಾಯಾಂತರದ ಧರ್ಮಗಳ ಬಾಹುಳ್ಯಕ್ಕೆ ಪ್ರತಿದ್ವಂದಿಯಾಗಿ, **ಮಾಮೇಕಂಶರಣಂವ್ರಜ** ಎಂಬಲ್ಲಿನ ಏಕಶಬ್ದಕ್ಕೆ ಮಾಹಾತ್ಮ್ಯೆಯನ್ನು ತೋರಿಸಿ, ಈ ಉಪಾಯಕ್ಕಿರುವ ವೈಲಕ್ಷಣ್ಯವನ್ನು ತೋರಿಸುವ ಯೋಜನೆಯಲ್ಲಿ **ಅಙ್ಗಿಗಳಾನ ನಾನಾಧರ್ಮಙ್ಗಳಿನುಡೈಯ** – ಅಂಗಿಗಳಾದ ನಾನಾವಿಧ ಬ್ರಹ್ಮ ವಿದ್ಯಾರೂಪ ಧರ್ಮಗಳ, **ಕಾತ್ಸ್ನ್ಯರ್ತ್ತೈ** – ಸಮಸ್ತವನ್ನೂ, **ಚೊಲ್ಲುಗಿಱದು** – ಹೇಳುತ್ತದೆ. ಸರ್ವಶಬ್ದವು ಪುರುಷಾರ್ಥಸಾಧನ ಧರ್ಮಕ್ಕೆ ಪರಿಕರಗಳನ್ನು ಬೋಧಿ ಸುತ್ತದೆ ಎಂದು ಮೊದಲು ಅಭಿಪ್ರಾಯಪಟ್ಟರು- ಧರ್ಮಶಬ್ದ ಬಹುವಚನದಿಂ ದಲೇ, ಧರ್ಮವೂ ಧರ್ಮದ ಪರಿಕರ ಧರ್ಮಗಳೂ ಬೋಧಿತವೆಂದರೆ, ಆಗ ಹೇಳುತ್ತಾ ರೇನೆಂದರೆ, ಬ್ರಹ್ಮವಿದ್ಯೆಯು ಒಂದಲ್ಲವು, ಮೂವತ್ತೆರಡು ವಿದ್ಯೆಗಳಿವೆ, ಆದುದ ರಿಂದ ಇವೆಲ್ಲವನ್ನೂ ಸಂಪೂರ್ಣವಾಗಿ ಬೋಧಿಸಬೇಕಾಗಿರುವದರಿಂದಾಗಲಿ ಸರ್ವ ಶಬ್ದದ ಪ್ರಯೋಗವೆಂದು ಭಾವಿಸಬಹುದೆಂದು ಹೇಳಿ, ಭರನ್ಯಾಸದಲ್ಲಾದರೋ ಇಂತಹ ಕಲಾಪ ಬಾಹುಳ್ಯವೇನೂ ಇಲ್ಲದೆ ಏಕತ್ವವುಂಟು ಅದೇನೆಂದರೆ **ಮಾಮೇಕಂ ಶರಣಂವ್ರಜ ;** ಇದರಿಂದ ಈ ಲಘೂಪಾಯದ ವೈಲಕ್ಷಣ್ಯವು ಹೇಳಲ್ಪಟ್ಟಿತು.

ಧರ್ಮಶಬ್ದವು ಏಕವಚನವಾಗಿರಲು ಮಾರ್ಗವಿಲ್ಲವು. ಒಂದು ಬ್ರಹ್ಮವಿದ್ಯಾ ರೂಪಸಾಧನೆಗೇನೆ ಅನೇಕ ಪರಿಕರರೂಪವಾದ ಅಂಗಗಳಿರಬಹುದು. ಅದರಿಂದ

**ಇಪ್ಪಡಿ ಪೊದುವಿಲೇ ಶೊನ್ನಾಲುಮ್, ಇಙ್ಙ ಪ್ರಕರಣ ವಶತ್ತಾಲೇ ಮೋಕ್ಷಾರ್ಥವಾಗ ಶಾಸ್ತ್ರವಿಹಿತಙ್ಗಳಾಯ್, ಸಪರಿಕರಙ್ಗಳಾಯ್, ನಾನಾಪ್ರಕಾರಙ್ಗಳಾನ ಉಪಾಸನಙ್ಗಳೈ ಯೆಲ್ಲಾಮ್ ಶೊಲ್ಲುಗೈಯಿಲೇ ತಾತ್ಪರ್ಯಮ್.**

ಧರ್ಮಶಬ್ದಕ್ಕೆ ಬಹುವಚನವೆಂದರೆ, ಒಂದುವಿಧ ಬ್ರಹ್ಮವಿದ್ಯೆದ ತ್ಯಾಗವು ಉಪಪಾದಿಸಲ್ಪಟ್ಟು ಮಿಕ್ಕ ವಿದ್ಯೆಗಳ ತ್ಯಾಗವು ಹೇಳಲ್ಪಡದೇ ಇರುವದರಿಂದ, ಭರನ್ಯಾಸಕ್ಕೆ ಬೇಕಾದ ಆಕಿಂಚನ್ಯರೂಪವಾದ ಅಂಗಕ್ಕೇ ಭಂಗಬರುತ್ತದೆ. ಅಂಗಗಳ ಬಹುತ್ವವೂ ಅಂಗಿಗಳ ಬಹುತ್ವವೂ ಎರಡೂ ಬೋಧಿತವಾಗಿ ಅವುಗಳ ತ್ಯಾಗವನ್ನು ಹೇಳಬೇಕಾಗಿರುವದರಿಂದ, **ಸರ್ವಧರ್ಮಾ**ಕ್ಷ ಎಂಬ ಪ್ರಯೋಗವೆಂದು ಉಪಪಾದಿಸಿದರು. ಇಲ್ಲಿ **ಧರ್ಮಾ**ಕ್ಷ ಎಂದು ಸಾಮಾನ್ಯವಾಗಿ ಹೇಳಿದ್ದರೂ, ಪ್ರಕರಣ ಬಲಾತ್ ಮೋಕ್ಷಸಾಧನವಾದ ಸಪರಿಕರ ಬ್ರಹ್ಮವಿದ್ಯೆಗಳೇ ಎಂದು ವಿಶೇಷಿಸಿ ಅರ್ಥವನ್ನು ಹೇಳುವದು ಉಚಿತವು. ಇದರಿಂದ ಸರ್ವಶಬ್ದವು ಪರಿಕರ ಬಾಹುಳ್ಯವನ್ನು ಬೋಧಿಸುವದಕ್ಕಾಗಿಯೂ ಧರ್ಮಶಬ್ದದ ಬಹುವಚನವು ಅಂಗಿ ಬಾಹುಳ್ಯವನ್ನು ಬೋಧಿಸುವದಕ್ಕಾಗಿಯೂ, ಎರಡೂ ಆವಶ್ಯಕವಾದವುಗಳೇ. ಆದುದರಿಂದ ಮುಂದಿನ ವಾಕ್ಯದಿಂದ "**ಸರ್ವಧರ್ಮಾ**ಕ್ಷ" ಎಂಬುದರಿಂದ ತೋರಿ ಬರುವ ಅರ್ಥವನ್ನು ಒಟ್ಟುಕೂಡಿಸಿ ಹೇಳುತ್ತಾರೆ—

**ಇಪ್ಪಡಿ** – ಹೀಗೆ, **ಪೊದುವಿಲೇ ಶೊನ್ನಾಲುಮ್** – ಸಾಮಾನ್ಯವಾಗಿ, **ಸರ್ವಧರ್ಮಾ**ಕ್ಷ ಎಂದು ಹೇಳಿದ್ದರೂ, **ಇಙ್ಙ ಪ್ರಕರಣವಶತ್ತಾಲೇ** – ಈ ಚರಮ ಶ್ಲೋಕವು ಗೀತೆಯಲ್ಲಿ ಹೇಳಲ್ಪಟ್ಟ ಪ್ರಕರಣಕ್ಕೆ ಅನುಗುಣವಾಗಿ, **ಮೋಕ್ಷಾರ್ಥವಾಗ** – ಮೋಕ್ಷಕ್ಕಾಗಿ, **ಶಾಸ್ತ್ರವಿಹಿತಙ್ಗಳಾಯ್** – ಶಾಸ್ತ್ರದಲ್ಲಿ ಹೇಳಿರುವುವುಗಳಾಗಿ, **ಸಪರಿಕರಙ್ಗಳಾಯ್** – ಪರಿಕರಗಳೊಂದಿಗೆ ಸೇರಿದ, **ನಾನಾಪ್ರಕಾರಙ್ಗಳಾನ** – ದಹರ, ಶಾಂಡಿಲ್ಯ, ಭೂಮ, ಮಧು, ಅಕ್ಷಿ ಮೊದಲಾದ ನಾನಾ ವಿಧಗಳಾದ, **ಉಪಾಸನಙ್ಗಳೈಯೆಲ್ಲಾಮ್** – ಉಪಾಸನಗಳೆಲ್ಲವನ್ನೂ, **ಶೊಲ್ಲುಗೈಯಿಲೇ** – ಹೇಳುವದರಲ್ಲಿ, ತಾತ್ಪರ್ಯವು.

## ಇತರ ಅಭಿಪ್ರಾಯಗಳನ್ನು ನಿರಾಕರಿಸುತ್ತಾರೆ.

ಹಿಂದೆ **ಸರ್ವಧರ್ಮಾ**ಕ್ಷ ಎಂಬುದರಿಂದ ಮೋಕ್ಷಾರ್ಥಗಳಾದ ಶಾಸ್ತ್ರವಿಹಿತಗಳಾದ ಸಪರಿಕರಗಳಾದ ನಾನಾವಿಧ ಉಪಾಸನಗಳೆಲ್ಲಾ ಹೇಳಲ್ಪಟ್ಟವೆಂದು ಉಪದೇಶಿಸಿದರು. ಮುಂದೆ ಇತರರು ಹೇಳುವ ಅಭಿಪ್ರಾಯಗಳನ್ನು ನಿರಾಕರಿಸುತ್ತಾರೆ. ಈ **ಸರ್ವಧರ್ಮಾ**ಕ್ಷ ಎಂಬುದರಿಂದ ಕೆಲವರು, ಪುರುಷೋತ್ತಮತ್ವಜ್ಞಾನ ಮೊದಲಾದವುಗಳೂ, ಇನ್ನು ಕೆಲವರು, ಉಪಾಸನದ ಶೀಘ್ರನಿಷ್ಪತ್ತಿಗೆ ಹೇತು

**ಇತರಾಭಿಪ್ರಾಯಾರ್ಥ ನಿರಾಕರಣಂ**

**ಪುರುಷೋತ್ತಮತ್ವಜ್ಞಾನಂ ಸರ್ವವಿದ್ಯೈಗಳುಕ್ಕುಮ್ ಉಪಕಾರಮಾನ ತತ್ತ್ವಜ್ಞಾನಮಾತ್ರಮಾಗವುಮ್, ಅವತಾರರಹಸ್ಯಚಿನ್ತನಮ್ ಅನುಷ್ಠಿಕ್ಕ ಉಪಾಸನಾದಿಗಳುಡೈಯ ಶೀಘ್ರ ನಿಷ್ಪತ್ತಿಹೇತುವಾಗವುಮ್, ದೇಶವಾಸಾದಿಗಳ್ ಉಪಾಯವಿರೋಧಿ ಪಾಪಕ್ಷಯ ಹೇತುಕ್ಕಳಾಯ್‌ಕ್ಕೊಂಡು**

ವಾದ ಅವತಾರ ರಹಸ್ಯಚಿನ್ತನವೂ, ದೇಶವಿಶೇಷ ವಾಸಾದಿಗಳೂ ಹೇಳಲ್ಪಟ್ಟಿವೆಂದು ಭಾವಿಸುವರು ಇವೂ ಸರಿಯಲ್ಲವೆಂದು ತಿಳಿಸುತ್ತಾರೆ—

(೧) **ಪುರುಷೋತ್ತಮತ್ವಜ್ಞಾನಮ್** – ಸರ್ವೇಶ್ವರನು ಸರ್ವಪುರುಷರುಗಳಿಗಿಂತಲೂ ಎಂದರೆ ಬದ್ಧಮುಕ್ತ ನಿತ್ಯರುಗಳಿಗಿಂತಲೂ ವಿಲಕ್ಷಣನು ಶ್ರೇಷ್ಠನೆಂಬ ಜ್ಞಾನವು, **ಸರ್ವವಿದ್ಯೈಗಳುಕ್ಕುಮ್** – ಸಮಸ್ತವೆಂದರೆ ೩೨ ಬ್ರಹ್ಮವಿದ್ಯೆಗಳಿಗೂ, **ಉಪಕಾರಕಮಾನ** – ಪ್ರಯೋಜನಕರವಾದ, **ತತ್ತ್ವಜ್ಞಾನಮಾತ್ರ ಮಾಗವುಮ್** – ಈ ಸರ್ವಧರ್ಮಾನ್ ಎಂಬುದರಿಂದ ತತ್ತ್ವಜ್ಞಾನ ಮಾತ್ರವನ್ನು ಹೇಳಿತೆಂಬ ಭಾವವೂ, (೨) **ಅವತಾರರಹಸ್ಯಚಿನ್ತನಮ್** – ಅವತಾರ ರಹಸ್ಯದ ಚಿನ್ತನವನ್ನು, **ಅನುಷ್ಠಿಕ್ಕ**–ಅನುಷ್ಠಿಸಲಾಗಿ, **ಉಪಾಸನಾದಿಗಳುಡೈಯ** – ಉಪಾಸನವೂ ಮತ್ತು ಅದಕ್ಕೆ ಸಂಬಂಧಪಟ್ಟ ಪರಿಕರಗಳ, **ಶೀಘ್ರ ನಿಷ್ಪತ್ತಿಹೇತುವಾಗುವುಮ್** - ಶೀಘ್ರವಾಗಿ ಪರಿಪಕ್ವದೆಶೆಯನ್ನು ಹೊಂದಲು ಕಾರಣಭೂತವಾಗುತ್ತದೆಂಬ ಭಾವವೂ, (೩) **ದೇಶವಾಸಾದಿಗಳ್** – ಪುಣ್ಯಕ್ಷೇತ್ರಗಳಲ್ಲಿ ವಾಸವೇ ಅಥವಾ ಪುಣ್ಯ ತೀರ್ಥಗಳಲ್ಲಿ ಅವಗಾಹನೆಯೇ ಮೊದಲಾದವು, **ಉಪಾಯ ವಿರೋಧಿ ಪಾಪಕ್ಷಯ ಹೇತುಕ್ಕಳಾಯ್‌ಕ್ಕೊಂಡು** – ಉಪಾಯವಾದ ಉಪಾಸನೆಗೆ ವಿರೋಧಿಗಳಾದ ಪಾಪಗಳ ನಾಶಕ್ಕೆ ಕಾರಣವಾಗಿದ್ದುಕೊಂಡು, **ಶ್ರೀ ಗೀತಾಭಾಷ್ಯಾದಿಗಳಿಲೇ ಸಮರ್ಥಿಕ್ಕೈಯಾಲೇ** – ಶ್ರೀ ಗೀತಾಭಾಷ್ಯಾದಿಗಳಲ್ಲಿ ಸಮರ್ಥಿಸಿ ಹೇಳಿರುವದರಿಂದ, **ಇವತ್ತೈ** – ಇವುಗಳನ್ನು, **ಸಾಕ್ಷಾದುಪಾಯಙ್ಗಳಾಕ್ಕಿ** – ಸಾಕ್ಷಾದುಪಾಯಗಳೆಂದು ಭಾವಿಸಿ, **ಅಙ್ಗಬಹುತ್ವವಿಷಯಮಾನ ಬಹುವಚನತ್ತಾಲೇ**–" ಸರ್ವಧರ್ಮಾನ್ " ಎಂಬಲ್ಲಿ ತೋರುವ ಅಂಗಿಬಹುತ್ವವಿಷಯವಾದ ಬಹುವಚನದಿಂದ, **ವಿವಕ್ಷಿಕ್ಕಿರದೆನ್ಗೈ** – ಹೇಳಲ್ಪಡುತ್ತವೆ ಎಂಬ ಅಭಿಪ್ರಾಯವೂ, **ಉಚಿತಮನ್ರು** – ಸರಿಯಾದುದಲ್ಲವು. ಸಾಕ್ಷಾದುಪಾಯವು ಈ ಸಂದರ್ಭದಲ್ಲಿ ಯಾವುದಾದರು ಒಂದು ಬ್ರಹ್ಮವಿದ್ಯೆಯಲ್ಲಿ ಹೇಳಿರುವ ಹಾಗೆ ಸಪರಿಕರವಾದ ಉಪಾಸನೆಯು, ಹೀಗಿರುವಾಗ ಪುರುಷೋತ್ತಮ ವಿದ್ಯಾಜ್ಞಾನವೂ, ಅವತಾರ ರಹಸ್ಯಚಿನ್ತನವೂ, ಪುಣ್ಯಕ್ಷೇತ್ರ

K 4544

**ಉಪಾಯ ನಿಷ್ಪಾದಕಙ್ಗಳಾಗವುಮ್, ಶ್ರೀಗೀತಾಭಾಷ್ಯಾದಿಗಳಿಲೇ ಸಮರ್ಥಿಕ್ಕೈಯಾಲೇ ಇವತ್ತೈ ಸಾಕ್ಷಾದುಪಾಯಙ್ಗಳಾಕ್ಕಿ (ಸಾಕ್ಷಾನ್ಮೋಕ್ಷೋಪಾಯಙ್ಗಳಾಕ್ಕಿ) ಅಙ್ಗಬಹುತ್ವ ವಿಷಯಮಾನ ಬಹುವಚನತ್ತಾಲೇ ವಿವಕ್ಷಿಕ್ಕಿರದೆನ್ಗೈ ಉಚಿತಮನ್ರು.**

ವಾಸಾದಿಗಳೂ ಇವೇ ಮೊದಲಾದವು ಹೇಳಲ್ಪಟ್ಟವೆಂದು ಭಾವಿಸೋಣವು ಸರಿಯಲ್ಲವೆಂದು ಹೇಳಿದರು ಈ ಅಭಿಪ್ರಾಯವನ್ನು ಹೇಳುವವರು ಎರಡು ವಿಧವಾಗಿ ತಪ್ಪು ಅಭಿಪ್ರಾಯವನ್ನು ಹೇಳಿದಂತಾಯಿತು ಏಕೆಂದರೆ, (೧) ಸರ್ವಧರ್ಮಾ್ ಎಂಬುದರಿಂದ ಅವುಗಳೇ ಮುಖ್ಯವಾಗಿ ಹೇಳಲ್ಪಡಲಿಲ್ಲವು (೨) ಅವು ಸಾಕ್ಷಾದುಪಾಯುಗಳೂ ಅಲ್ಲವು ಪುರುಷೋತ್ತಮ ಜ್ಞಾನ ವಿಷಯವು ಗೀತೆಯ ೧೫ನೆಯ ಅಧ್ಯಾಯದಲ್ಲಿ ೧೬ ರಿಂದ ೧೯ರ ವರೆಗೂ ನಾಲ್ಕು ಶ್ಲೋಕಗಳಿಂದ ಹೇಳಲ್ಪಟ್ಟವು "**ದ್ವಾವಿಮೌ ಪುರುಷೌ ಲೋಕೇ**" ಎಂದಾರಂಭಿಸಿ **ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ**" ಎಂದು ಮುಗಿಸಿ ಹೇಳಿರುತ್ತದೆ ಇವಕ್ಕೆ ಶ್ರೀ ಯತಿವರ್ಯರ ಕೊನೆಯ ಶ್ಲೋಕವ್ಯಾಖ್ಯಾನದಲ್ಲಿ ಹೇಳಿರುವದೇನೆಂದರೆ —"**ಸ ಸರ್ವವಿತ್ ಮತ್ಪ್ರಾಪ್ತ್ಯುಪಾಯತಯಾ ಯದ್ವೇದಿತವ್ಯಂ ತತ್ಸರ್ವಂ ವೇದ ಭಜತಿ ಮಾಂ ಸರ್ವಭಾವೇನ. ಯೇಚ ಮತ್ಪ್ರಾಪ್ತ್ಯುಪಾಯತಯಾ ಮದ್ಭಜನ ಪ್ರಕಾರಾ ನಿರ್ದಿಷ್ಟಾಃ, ತೈಶ್ಚ ಸರ್ವೈರ್ಭಜನಪ್ರಕಾರೈಃ ಮಾಂ ಭಜತೇ ಸರ್ವೈರ್ಮದ್ವಿಷಯೈ ರ್ವೇದನೈರ್ಮಮ ಯಾ ಪ್ರೀತಿಸ್ಸಾಚ ಮಮ ಸರ್ವೈರ್ಮದ್ವಿಷಯೈ ರ್ಭಜನೈ ರುಭಯವಿಧಾಪಿ ಪ್ರೀತಿಃ ಅನೇನವೇದನೇನ ಮಮಜಾಯತೇ**" ಎಂದು ಹೇಳಿ, ಮುಂದಿನ ಶ್ಲೋಕಾವತಾರಿಕೆಯಲ್ಲಿ "**ಇತ್ಯೇತತ್ಪುರುಷೋತ್ತಮತ್ವವೇದನಂ ಸ್ತೌತಿ**" ಎಂದೂ ಹೇಳಿ, ಅನಂತರ—ಆ ಶ್ಲೋಕಭಾಷ್ಯದಲ್ಲಿ "**ಪುರುಷೋತ್ತಮ ವಿಷಯಂ ಜ್ಞಾನಂ ಶಾಸ್ತ್ರಜನ್ಯಮೇವ ಏತತ್ಸರ್ವಂ ಕರೋತಿ, ನತು ಸಾಕ್ಷಾತ್ಕಾರರೂಪ ಮಿತ್ಯುಚ್ಯತೇ**" ಎಂದು ವ್ಯಕ್ತವಾಗಿ ಹೇಳಿರುವದರಿಂದ ಈ ಪುರುಷೋತ್ತಮತ್ವಜ್ಞಾನವು ಸಮಸ್ತ ಬ್ರಹ್ಮವಿದ್ಯೆಗಳಲ್ಲೂ ಬೇಕಾದುದು ಅದು ಸಾಕ್ಷಾದುಪಾಯವಲ್ಲವೆಂದು ವ್ಯಕ್ತವಾಗಿ ಹೇಳಿರುತ್ತಾರೆ **ರ್ವೇದನೈರ್ಮಮ ಯಾ ಪ್ರೀತಿ ರ್ಯಾಚ ಮಮ** ಸರ್ವೈರ್ಮದ್ವಿಷಯೈ ಎಂಬದಾಗಿ ಆದುದರಿಂದ ಅದು **ಸರ್ವಧರ್ಮಾ್** ಎಂಬ ಪದದಲ್ಲಿ ಹೇಳಲ್ಪಟ್ಟಿತೆಂಬ ಅಭಿಪ್ರಾಯವು ಸರಿಯಲ್ಲವು.

ಹಾಗೆಯೇ ಅವತಾರರಹಸ್ಯಜ್ಞಾನವನ್ನು ೪ನೆಯ ಅಧ್ಯಾಯದ ೫ನೆಯ ಶ್ಲೋಕದಿಂದಾರಂಭಿಸಿ ಹೇಳಿದ ಐದು ಶ್ಲೋಕಗಳಿಂದ ಅರ್ಜುನನಿಗೆ ಶ್ರೀಕೃಷ್ಣ

ಭಗವಾನವರು ಉಪದೇಶಿಸಿರುತ್ತಾರೆ. ಈ ಅವತಾರ ರಹಸ್ಯಜ್ಞಾನದ ಫಲವನ್ನು **"ಏವಂ ಯೋ ವೇತ್ತಿ ತತ್ತ್ವತಃ । ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ"** ಎಂದು ಹೇಳಿರುವವರಿಂದ, ಅವತಾರ ರಹಸ್ಯಜ್ಞಾನವೇ ಸಾಕ್ಷಾದುಪಾಯವೇ? ಅಂತವನಿಗೆ ಪುನರ್ಜನ್ಮವಿಲ್ಲವು, ಓ ಅರ್ಜುನನೇ ಅವನು ನನ್ನನ್ನೇ ಹೊಂದುವನು ಎಂದು ಉಪದೇಶಿಸಿರುವುದರಿಂದ ಕೆಲವರು ಹಾಗೆ ಅಭಿಪ್ರಾಯಪಡುವರು. ಈ ಅಭಿಪ್ರಾಯವೂ ಸರಿಯಾದುದಲ್ಲವು. [illegible]ತಿವರ್ಯರು ಈ ಶ್ಲೋಕಭಾಷ್ಯದಲ್ಲಿ **"ಮಮ ಜನ್ಮ ಚೇಷ್ಟಿತಂ ಚ [illegible] ತತ್ತ್ವತೋ ಯೋ ವೇತ್ತಿ ಸ ವರ್ತಮಾನಂ ದೇಹಂ ಪರಿತ್ಯಜ್ಯ ಪುನರ್ಜನ್ಮ ನೈತಿ. ಮಾಮೇವ ಪ್ರಾಪ್ನೋತಿ - ಮದೀಯ ದಿವ್ಯಜನ್ಮ ಚೇಷ್ಟಿತ ಯಾಥಾತ್ಮ್ಯ ವಿಜ್ಞಾನೇನ ವಿಧ್ವಸ್ತ ಸಮಸ್ತ ಮತ್ಸಮಾಶ್ರಯಣ ವಿರೋಧಿ ಪಾಪ್ಮಾ ಅಸ್ಮಿನ್ನೇವ ಜನ್ಮನಿ ಯಥೋದಿತ ಪ್ರಕಾರೇಣ ಮಾಮಾಶ್ರಿತ್ಯ ಮದೇಕಪ್ರಿಯೋ ಮದೇಕ ಚಿತ್ತೋ ಮಾಮೇವ ಪ್ರಾಪ್ನೋತಿ"** ಎಂದು ಹೇಳಿರುವುದರಿಂದ ಅವತಾರ ರಹಸ್ಯಜ್ಞಾನದ ಫಲವೇನೆಂದರೆ [illegible] ಸಾಧನನಿಗೆ ಪ್ರತಿಬಂಧಕಗಳಾದ ಪಾಪಗಳು ತೊಲಗುವವು. ಅಷ್ಟುಮಾತ್ರವೇ. ಇದರಿಂದ ಆದೇ ಸಾಕ್ಷಾದುಪಾಯುವಲ್ಲವು. ಹಾಗೆ ಪಾಪಗಳು ತೊಲಗುವುದರಿಂದ ಕ್ರಮೇಣ ಉಪಾಯಾರಂಭ ಪ್ರವೃತ್ತಿಗಳೂ ಸಫಲವಾಗಿ ಮೋಕ್ಷವೂ ಲಭಿಸುತ್ತದೆ. ಆದುದರಿಂದ **ಸರ್ವಧರ್ಮಾನ್** ಎಂಬಲ್ಲಿ ಅವತಾರರಹಸ್ಯಜ್ಞಾನವನ್ನು [illegible] ಹೇಳಲ್ಪಟ್ಟಿತೆಂಬ ಭಾವವು ಅಸಂಗತವಾದುದು. ಹೀಗೆಂದರೆ ಇದು ಸಾಕ್ಷಾದುಪಾಯವಲ್ಲವು.

ಮೂರನೆಯ ಅಭಿಪ್ರಾಯವಾದ ಪುಣ್ಯಕ್ಷೇತ್ರವಾಸವು ಸರ್ವಧರ್ಮ ಎಂಬಲ್ಲಿ ಹೇಳಲ್ಪಟ್ಟಿತೆಂಬುದೂ ಸರಿಯಲ್ಲವು **"[illegible] ಪರಾ[illegible] ನೃಣಾಂ [illegible] ವರ್ತ್ಯ [illegible] । [illegible] ಸಂಪ್ರಾಪ್ಯ ಯಾತಿ ನಾರಾಯಣಾಲಯಂ ॥"** (ಶ್ರೀ ಸಾತ್ತ್ವ ಸಂ ೭-೨೦) ಈ ಶ್ಲೋಕವು ಓಂದೆ ಸ್ಥಾನವಿಶೇಷಾಧಿಕಾರದಲ್ಲಿ ಉದಾಹೃತವು [illegible]-[illegible]ನೆಯ ಪುಟಗಳನ್ನು ನೋಡಿ. ಪುನಃ ಪ್ರಭಾವರಕ್ಷಾಧಿಕಾರದಲ್ಲೂ ಉದಾಹೃತವು. ಇಲ್ಲಿಯೂ ಕ್ಷೇತ್ರವಾಸವು ಸಾಕ್ಷಾದುಪಾಯವೆಂದು ಹೇಳಲ್ಪಡಲಿಲ್ಲ. ಅದು ಮನಸ್ಸಿನ ದೋಷಗಳು ತೊಲಗುವುದರ ಮೂಲಕ ಅದರ ಪರಿಶುದ್ಧತೆಗೆ ಸಹಕಾರಿ ಎಂದು ಹೇಳಲ್ಪಟ್ಟಿರುತ್ತದೆ. **"ಕುತೋಽಪ ಸ್ವ [illegible]ರೋಽಪಿ ಪಾಪ ನಾ[illegible] । ಮಮ ಲೋಕ ಮವಾಪ್ನೋತಿ ನ ಪುನರ್ಗರ್ಭಮೃಚ್ಛತಿ"** ಎಂಬುದು ಅನುಸಂಧೇಯವು. ಇಲ್ಲಿಯೂ ಉಪಾಯಾನುಷ್ಠಾನಕ್ಕೆ ಸಹಕಾರಿಯಾಗಿ ಕ್ರಮೇಣ **ಅಪುನರಾವೃತ್ತಿಯು ಲಭಿಸುತ್ತದೆ ಎಂಬುದರಲ್ಲಿ ತಾತ್ಪರ್ಯವು** ಆದುದರಿಂದ

(೧) **"ನಾನಾ ಶಬ್ದಾದಿ ಭೇದಾತ್" ಎಙ್ಗಿಱಪಡಿಯೇ ಇನ್ನೈಯೊಳಿಯುಮ್, ಸದ್ವಿದ್ಯಾದಹರ ವಿದ್ಯಾದಿ ಭೇದತ್ತಾಲೇ ಅಂಗಿ ಬಹುತ್ವಂ ಕ್ಕಿಡೈಕ್ಕೈಯಾಲ್ ಇಬ್ಬಹುವಚನಂ ಸಾರ್ಥಮ್ ಅಂಗಿಬಹುತ್ವತ್ತೈಯುಮ್ ಪರಿಕರ ಬಹುತ್ವತ್ತೈಯುಮ್ ಕೂಡ ವಿವಕ್ಷಿತ್ತಾಲುಮ್ ವಿರೋಧಮಿಲ್ಲೈ.**

ಬರೀ ಕ್ಷೇತ್ರವಾಸವೇ ಮೋಕ್ಷಕ್ಕೆ ಹೇತುವಾಗುವದಿಲ್ಲವು. ಆದುದರಿಂದಲೇ ಶ್ರೀದೇಶಿಕರವರು "**ದೇಶವಾಸಾದಿಗಳ್ ಉಪಾಯ ವಿರೋಧಿ ಪಾಪಕ್ಷಯ ಹೇತುಕ್ಕಳ್**" ಎಂಬ ಪ್ರಯೋಗವು ಇಲ್ಲಿ ಆದಿ ಶಬ್ದವು, ಅಲ್ಲಿ ಜನ್ಮ ಮರಣಗಳೂ ಮತ್ತು ಪುಣ್ಯಕ್ಷೇತ್ರದಲ್ಲಿ ದೀಪಾರೋಪಣ, ಕೈಙ್ಕರ್ಯ ಮೊದಲಾದವೂ ಇದರಲ್ಲೇ ಸೇರಿದವು ಎಂದು ಸೂಚಿಸುತ್ತದೆ

ಧರ್ಮ ಶಬ್ದಕ್ಕೆ "**ಅಲೌಕಿಕ ಶ್ರೇಯಸ್ಸಾಧನತ್ವ**" ವೆಂಬ ಅರ್ಥವಾದುದರಿಂದ ಇವು ಯಾವುವೂ ಆಗಲಾರದೆಂಬ ಭಾವವು ತೋರಿಬರುತ್ತದೆ

ಆದುದರಿಂದ ಇವು ಮೂರೇ ಮುಖ್ಯವಾಗಿ ಹೇಳಲ್ಪಟ್ಟವೆಂಬ ಅಭಿಪ್ರಾಯವು ಸರಿಯಲ್ಲವು; ಏಕೆಂದರೆ ಅವು ಉಪಾಸನಕ್ಕೆ ಸಹಕಾರಿಗಳಾಗಬಹುದು. ಆದರೂ ಅವುಗಳು ಇಲ್ಲಿ ವಿವಕ್ಷಿತಗಳಲ್ಲವು ವಿವಕ್ಷಿತುಗಳು ಯಾವುವೆಂಬುದನ್ನು ತಿಳಿಸುತ್ತಾರೆ,—"**ನಾನಾಶಬ್ದಾದಿ ಭೇದಾತ್**" **ಎಙ್ಗಿಱಪಡಿಯೇ** - ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವ ಹಾಗೆ, **ಇನ್ನೈಯೊಳಿಯುಮ್ಪುಮ್**-ಇವುಗಳು ಎಂದರೆ ಪುರುಷೋತ್ತಮತ್ವಾದಿಗಳು ಇಲ್ಲದಿದ್ದರೂ, ಸದ್ವಿದ್ಯಾ ದಹರ ವಿದ್ಯಗಳೇ ಮೊದಲಾದ ಭೇದದಿಂದ, **ಅಂಗಿಬಹುತ್ವಂ**-ಅಂಗಿಗಳಾದ ಬ್ರಹ್ಮವಿದ್ಯೆಗಳ ಬಾಹುಳ್ಯವು ಇದ್ದ, **ಕಿಡೈಕ್ಕೈಯಾಲೇ** - ಇರುವದರಿಂದ ಇಬ್ಬಹುವಚನಮ್-"ಧರ್ಮಾಃ" ಎಂಬಲ್ಲಿರುವ ಈ ಬಹುವಚನವು, **ಸಾರ್ಥಮ್** - ಸಾರ್ಥವತ್ತಾದುದು ಎಂದರೆ ಪ್ರಯೋಜನವುಳ್ಳದ್ದಾಯಿತು. "**ನಾನಾಶಬ್ದಾದಿ ಭೇದಾತ್**" ಎಂಬ ಬ್ರಹ್ಮಸೂತ್ರದ ತಾತ್ಪರ್ಯವೇನೆಂದರೆ :—ಎಲ್ಲಾ ಬ್ರಹ್ಮವಿದ್ಯೆಯೂ ಪರಬ್ರಹ್ಮ ಪ್ರಾಪ್ತಿಯುಳ್ಳದ್ದಾಗಿರುವದರಿಂದ, ಸದ್ವಿದ್ಯಾ, ದಹರವಿದ್ಯಾ, ಶಾಂಡಿಲ್ಯವಿದ್ಯಾ ಭೂಮವಿದ್ಯಾದಿ ಬೇರೆ ಬೇರೇ ಹೆಸರುಗಳಿದ್ದರೂ. ಎಲ್ಲಾದರಲ್ಲೂ ಉಪಾಸನವೂ, ಫಲವೂ ಒಂದೇಯಾಗಿರುವದರಿಂದ, ಬ್ರಹ್ಮವಿದ್ಯೆಯೆಲ್ಲಾ ಸೇರಿ ಒಂದೇ ಎಂಬುದು ಪೂರ್ವಪಕ್ಷವು : ಈ ಸೂತ್ರದಲ್ಲಿ ಇದನ್ನು ಖಂಡಿಸಿ ಸಿದ್ಧಾನ್ತವನ್ನು ಹೇಳುತ್ತಾರೆ. **ನಾನಾ** - ಬ್ರಹ್ಮವಿದ್ಯೆಗಳು ನಾನಾವಿಧವು ಏಕೆಂದರೆ **ಶಬ್ದಾದಿಭೇದಾತ್** -

(೧) ಬ್ರ ಸೂ. ೩. 3. 56.

**ಯಜೇತ** ಎಂಬುದರಿಂದ ಯಾಗವೂ, **ದದ್ಯಾತ್** ಎಂಬುದರಿಂದ ದಾನವೂ, **ಜುಹುಯಾತ್** ಎಂಬುದರಿಂದ ಹೋಮವೂ ಹೇಗೆ ಇವು ಬೇರೆಬೇರೆ ಧರ್ಮಗಳೋ ಹಾಗೆಯೇ ಈ ಬ್ರಹ್ಮವಿದ್ಯೆಗಳನ್ನು ಬೋಧಿಸುವ ಶಬ್ದಭೇದದಿಂದಲೂ, ನಾಮಭೇದದಿಂದಲೂ, **ನಾನಾ** – ಭಿನ್ನಗಳಾದವು. ಈ ಸೂತ್ರವು ಹಿಂದೆ ಉಪಾಯ ವಿಭಾಗಾಧಿಕಾರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ ಶ್ರೀಯತಿವರ್ಯರ ಅಭಿಪ್ರಾಯವನ್ನನುಸರಿಸಿ ಶ್ರೀ ದೇಶಿಕೇಂದ್ರರು ಈ ಸೂತ್ರವನ್ನು ಭರನ್ಯಾಸಕ್ಕೂ ಅನ್ವಯಿಸಿರುತ್ತಾರೆ ದಹರಾದಿ ಅನೇಕ ಬ್ರಹ್ಮವಿದ್ಯೆಗಳೂ ಮತ್ತು ನ್ಯಾಸವಿದ್ಯೆಯೂ ಬೇರೆ ಬೇರೆ ಯಾವವೆಂದೂ. ಏಕೆಂದರೆ ಉಪಾಸೀತ ಶರಣಂವ್ರಜ ಇತ್ಯಾದಿ ಭಿನ್ನಶಬ್ದಗಳಿಂದ ಎಂದು ಹೇಳಿ ಈ ಅಭಿಪ್ರಾಯವನ್ನೇ ನ್ಯಾಸವಿಂಶತಿಯಲ್ಲಿ ಶ್ರೀ ದೇಶಿಕರವರು " **ನಾನಾಶಬ್ದಾದಿ ಭೇದಾತ್** " ಎಂಬ ಶ್ಲೋಕದಲ್ಲಿ ಉಪಪಾದಿಸುತ್ತಾರೆ. ೯೦ನೆಯ ಪುಟ ನೋಡಿ

ಆದುದರಿಂದ **ಧರ್ಮಾ**ಃ ಎಂಬ ಬಹುವಚನವು ಬ್ರಹ್ಮವಿದ್ಯೆಗಳಾದ ಅಂಗಿಗಳ ಬಾಹುಳ್ಯವನ್ನು ಸೂಚಿಸುತ್ತದೆಂಬೇ ಒಪ್ಪತಕ್ಕದ್ದು ಎಂದು ಮುಂದಿನ ವಾಕ್ಯದಲ್ಲಿ ನಿಗಮನಮಾಡಿ ಹೇಳಿ, ಅಂಗಿಗಳಿಗೆ ಸಂಬಂಧಪಟ್ಟ ಎಲ್ಲಾ ಅಙ್ಗಗಳೂ ಕೂಡ ಸೂಚಿತವೆಂದು ಹೇಳುವಪಕ್ಷದಲ್ಲಿ ಶಾಸ್ತ್ರವಿರೋಧವೇನೂ ಇಲ್ಲವೆಂದು ಹೇಳುತ್ತಾರೆ —**ಅಂಗಿ ಬಹುತ್ವಸ್ತ್ರೈಯಮ್** – ಇದಿ ಬ್ರಹ್ಮವಿದ್ಯಾರೂಪಗಳಾದ ಅಂಗಿಗಳ ಬಹುತ್ವವನ್ನು **ಪರಿಕರ ಬಹುತ್ವಸ್ಯಾಪಿ ಕೂಡ** - ಅವುಗಳಿಗೆ ಸಂಬಂಧಿಸಿದ ಅಂಗಗಳ ಬಹುತ್ವವನ್ನೂ ಕೂಡ, **ವಿವಕ್ಷಿತತ್ವೇಽಪಿ** – ಬೋಧಿಸುತ್ತದೆಂದು ಹೇಳಿದ ಪಕ್ಷದಲ್ಲಿ, **ವಿರೋಧಮಿಲ್ಲೈ** – ಶಾಸ್ತ್ರವಿರುದ್ಧವಾದ ಅಭಿಪ್ರಾಯವೇನೂ ಇಲ್ಲವು. ಅಸಾಮಂಜಸ್ಯವು ಯಾವಾಗ ಇಲ್ಲವೋ ಆಗ ಸಮಂಜಸವೇ ಎಂಬ ಭಾವವು. ಪುರುಷೋತ್ತಮತ್ವಾದಿಗಳಾದರೋ ಈ ನಾನಾ ಅಂಗಿಗಳಿಗೆ ಸಾಕ್ಷಾತ್ತಾದ ಅಂಗಗಳಲ್ಲವಾದುದರಿಂದ ಇಲ್ಲಿ **ಸರ್ವಧರ್ಮಾ**ಃ ಎಂಬಲ್ಲಿ ಮುಖ್ಯವಾಗಿ ಹೇಳಲಿಲ್ಲವೆಂಬುದು ತಾತ್ಪರ್ಯವು

ಮುಖ್ಯವಾಗಿ ಅಂಗಾಂಗಿಗಳ ಸಮುಚ್ಚಯವನ್ನು ಹೇಳುವುದರಲ್ಲೇ ಉದ್ದೇಶ್ಯವಾದುದರಿಂದ ಪ್ರಕರಣಾನುಗುಣವಾಗಿ ಅರ್ಥವಾಡುವದೀಗ ಸಮಂಜಸವೆಂಬ ಭಾವವೂ ಸೂಚಿತವು. ಆದರೂ ಪುರುಷೋತ್ತಮತ್ವ ಜ್ಞಾನ ಪುಣ್ಯಕ್ಷೇತ್ರ ವಾಸಗಳೂ ಕೂಡ ಸ್ವಲ್ಪಮಟ್ಟಿಗೆ ಸಹಕಾರಿಗಳಲ್ಲವೋ ಎಂದರೆ, ಧರ್ಮಾಃ ಎಂಬ ಬಹುವಚನದಿಂದ ಅಂಗಾಂಗಿಗಳ ಸಮುಚ್ಚಯವೆಂದು ಭಾವಿಸಿ, ಇವುಗಳೂ ಕೂಡ ಆ ಅಂಗಗಳಲ್ಲೇ ಅಂತರ್ಗತಗಳೆಂದು ಭಾವಿಸಿದರೆ ಏನೊಂದೂ ವಿರೋಧವಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ

ಪರಿತ್ಯಜ್ಯ ಶಬ್ದಸ್ಯಾರ್ಥಃ ; ತತ್ರತ್ಯಾಗಶಬ್ದಾರ್ಥಃ

ಪರಿತ್ಯಜ್ಯ ಎಙ್ಗಿರವಿಡತ್ತಿಲ್ ತ್ಯಾಗಮಾವದು ? (೧) "ಅನಯಾಚ ಪ್ರಪತ್ತ್ಯಾಗತು ಮಾಕಿಂಚನ್ಯೈಕಪೂರ್ವಕಮ್" ಇತ್ಯಾದಿಗಳಿಲ್ ಪಡಿಯೇ ಅಕಿಂಚನನಾನ ತನ್ನಿಲೈಯೈ ಕಂಡು ಉಪಾಯಾನ್ತರಙ್ಗಳಿಲ್ ಪಿರಂದ ನೈರಾಶ್ಯಮ್.

**ಪರಿತ್ಯಜ್ಯ ಎಂಬ ಪದದ ಅರ್ಥವು-ಅದರಲ್ಲಿರುವ ತ್ಯಾಗ ಶಬ್ದಾರ್ಥವು.**

"ಪರಿತ್ಯಜ್ಯ", ಎಙ್ಗಿರವಿಡತ್ತಿಲ್ - ಎಂದು ಹೇಳಿರುವುದರಲ್ಲಿ, **ತ್ಯಾಗ ಮಾವದು ?**- ತ್ಯಾಗವೆಂದರೇನು? ಪರಿತ್ಯಜ್ಯವೆಂದರೆ ಪರಿತ್ಯಾಗವನ್ನು ಮಾಡಿ ಎಂದರ್ಥವಾಗುತ್ತದೆ, ಅಲ್ಲಿರುವ ತ್ಯಾಗಶಬ್ದಕ್ಕೆ ಏನು ಅರ್ಥವು? ಎಂದರೆ ಹೇಳುತ್ತಾರೆ ಆ ಶಬ್ದದಲ್ಲಿ ಮೂರು ಅಂಶಗಳಿವೆ.—(೧) ಪರಿ ಎಂಬ ಉಪಸರ್ಗವು (೨) ಧಾತುವು (೩) ಲ್ಯಪ್ಪ್ರತ್ಯಯವು. ಮೊದಲು ಧಾತ್ವರ್ಥವನ್ನು ಉಪಪಾದಿಸುತ್ತಾರೆ.—(೧) " **ಅನಯಾ ಪ್ರಪತ್ತ್ಯಾಚ** – ಈ ಪ್ರಪತ್ತಿಯಮೂಲಕವಾಗಿಯೇ, **ಅಕಿಂಚನ್ಯೈಕಪೂರ್ವಕಮ್** – ಉಪಾಯಾನ್ತರವನ್ನು ಅವಲಂಬಿಸಲು ತಾನು ಅಸಮರ್ಥನಾದುದರಿಂದ, ಅಕಿಂಚನ್ಯಪೂರ್ವಕರಾಗಿ, **ಮಾಂ** – ನನ್ನನ್ನು ಆಶ್ರಯಿಸತಕ್ಕದೆಂಬ ಭಾವವು" **ಇತ್ಯಾದಿಗಳಿಲ್ ಪಡಿಯೇ**–ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಅಕಿಂಚನನಾನ ತನ್ನಿಲೈಕಂಡು** – ಅಸಮರ್ಥನಾಗಿರುವ ತನ್ನ ದೆಶೆಯನ್ನು ಕಂಡು, **ಉಪಾಯಾನ್ತರಙ್ಗಳಿಲ್** – ಉಪಾಸನವಾದ ಬೇರೆ ಉಪಾಯದಲ್ಲಿ ಎಂದರೆ ಉಪಾಯದಲ್ಲಿರುವ ಅಶಕ್ತತೆಯಿಂದ ಎಂಬ ಭಾವವು, **ಪಿರಂದ** – ಹುಟ್ಟಿದ, **ನೈರಾಶ್ಯಮ್** – ಅದನ್ನವಲಂಬಿಸಬೇಕೆಂಬ ಆಶೆಯನ್ನು ತೊರೆಯುವಿಕೆಯು ಸಾರ ವಿವರಣೆಯುವರು. **ಈ ತ್ಯಾಗ** ಶಬ್ದವನ್ನು ನಾಲ್ಕು ವಿಧವಾಗಿ ವಿಕಲ್ಪಿಸಿ, ಅವು ಯಾವುವೂ ಈ ಪ್ರಪದನ ವಿಷಯವಾದ ಯೋಜನೆಯಲ್ಲಿ ಆಗುವದಿಲ್ಲವೆಂದು ಉಪಪಾದಿಸುತ್ತಾರೆ. ಈ ತ್ಯಾಗವೇನು (೧) ಫಲಸಂಗ ಕರ್ತೃತ್ವಗಳ ತ್ಯಾಗವೇ ಅಥವಾ (೨) ಸ್ವರೂಪ ತ್ಯಾಗವೇ (೩) ಪ್ರಪತ್ತ್ಯಂಗವಲ್ಲದಿದುರಿಂದ ಅದರ ತ್ಯಾಗವೇ, ಅಥವಾ (೪) ಅಂಗತ್ವ ಬುದ್ಧಿ ತ್ಯಾಗವೇ? ಎಂದರೆ ಇವು ಒಂದೂ ಅಲ್ಲವು. (೧) ಗೀತಾಭಾಷ್ಯದಲ್ಲಿ ಉಪಾಸನ ಪರವಾಗಿ ಫಲಸಂಗ ಕರ್ತೃತ್ವತ್ಯಾಗವೆಂದು ಅರ್ಥಮಾಡಿರುವದರಿಂದ ಮೊದಲಿನ ವಿಕಲ್ಪವು ಕೂಡುವದಿಲ್ಲವು, (೨) ಅಶಕ್ತನಾದವನಿಗೆ ಆ ಉಪಾ

**ಆಶೈಯಾಲೇ ಪತ್ತಾನಾಲ್ ಆಶೈಯ್ಯೈವಿಡುಗೈ ತ್ಯಾಗಮೆನ್ನ ಉಚಿತ ಮಿರೆ. ಅದಿಲ್ "ಪರಿ" ಎಙ್ಗಿರ ಉಪಸರ್ಗತ್ತಾಲೇ (2) "ಅನಾಗತಾನಂತಕಾಲ ಸಮೀಕ್ಷಯಾಪ್ಯ ದೃಷ್ಟಸಂತಾರೋಪಾಯಃ" (3) ತ್ವತ್ಪಾದಕಮಲಾದನ್ಯನ್ನಮೇ ಜನ್ಮಾಂತರೇಷ್ವಪಿ" ಇತ್ಯಾದಿಗಳಿಲ್ ಪಡಿಯೇ,**

ಸನ ಸಂಬಂಧವೇ ಅಪ್ರಸ್ತುತವಾದುದರಿಂದ ಅದರ ಸ್ವರೂಪತ್ಯಾಗವೆಂಬರ್ಥವು ಸರಿಹೋಗುವದಿಲ್ಲವು. ಪ್ರಾರಂಭವಾಡುವುದಕ್ಕೆ ಅಶಕ್ತತೆ ಇರುವಾಗ,, ಇನ್ನು ತ್ಯಾಗವೆಲ್ಲಿಯದು ? ಆದುದರಿಂದ ಅನುವಾದವೆಂದಾಗಲಿ. ವಿಧಿ ಎಂದಾಗಲಿ ಭಾವಿಸುವದಕ್ಕೆ ಸಾಧ್ಯವೇ ಇಲ್ಲವು (೩) ಬೇರೆ ಉಪಾಯವಾದ ಉಪಾಸನೆಯ ಅಂಗಗಳು ಈ ಭರನ್ಯಾಸಕ್ಕೆ ಅಂಗವಾಗಲಾರದಾದುದರಿಂದ ಅದರ ತ್ಯಾಗವೆಂದರೆ ಅಸಂಗತವಾದುದಾಗುತ್ತದೆ. (೪)ನೆಯ ವಿಕಲ್ಪವೂ ಸರಿಯಲ್ಲವು. ಏಕೆಂದರೆ ಪ್ರಪತ್ತಿಗೆ ಹೇಳಿರುವ ಅಂಗಗಳಲ್ಲದೆ, ಬೇರೆ ಅಂಗಗಳಾಗಿ ಯಾವುವು ಇಲ್ಲವು. ಆದುದರಿಂದಲೇ ತ್ಯಾಗವು ನೈರಾಶ್ಯವು. ಬೇರೆ ಉಪಾಯವಾದ ಉಪಾಸನೆಯು ನನಗೆ ಫಲ ಸಾದಿಸಿಕೊಟ್ಟೀತೆಂಬ ಆಶೆಯನ್ನು ತೊರೆಯುವದೇ ತ್ಯಾಗವೆಂಬ ಭಾವವು ಅದು ಹೇಗೆಂಬುದನ್ನು ತಿಳಿಸುತ್ತಾರೆ—ತ್ಯಾಗ ಶಬ್ದಕ್ಕೆ ಸಾಧಾರಣವಾಗಿ ಅರ್ಥವು ಸ್ವೀಕರಿಸಿದ್ದನ್ನು ಬಿಟ್ಟುಬಿಡುವದು ಎಂಬುದು ಹೀಗೆ ಅರ್ಥ ಮಾಡಿದರೆ ಮೊದಲು ಉಪಾಸನವನ್ನು ಆರಂಭಿಸಿದ್ದುದನ್ನು ಬಿಟ್ಟು ಎಂಬ ಅಪಾರ್ಥ ಉಂಟಾಗುತ್ತದೆ ಹಾಗೆ ಅರ್ಥವಲ್ಲವೆಂಬ ಭಾವದಿಂದ ಹೇಳುತ್ತಾರೆ.—

**ಆಶೆಯಾಲೇಪತ್ತಾನಾಲ್** - ಆಶೆಯ ಮೂಲಕವಾಗಿ ಬಂದು ಪರಿಗೃಹೀತವಾಗುವಂತಾದ್ದಾದರೆ, **ಆಶೆಯ್ಯೈವಿಡುಗೈ**-ಆಗ ಆಶೆಯನ್ನು ಬಿಡಬಹುದು, ಅದು **ತ್ಯಾಗಮೆನ್ನ ಉಚಿತಮಿರೇ**-ಅದರ ತ್ಯಾಗವೆಂದು ಹೇಳುವದು ಸರಿಯು, ಉಪಾಯಾಂತರವಾದ ಉಪಾಸನವು ನನಗೆ ಫಲವನ್ನು ಸಾಧಿಸಿಕೊಡುತ್ತದೆ ಎಂಬುದರ ಆಶೆಯನ್ನು ಬಿಡುವುದೇ ತ್ಯಾಗ ಶಬ್ದಾರ್ಥವು. **ಅದಿಲ್** – ಆ ಪರಿತ್ಯಜ್ಯ ಎಂಬ ಪದದಲ್ಲಿರುವ, **ಪರಿ ಎಙ್ಗಿರ ಉಪಸರ್ಗತ್ತಾಲೇ** – ಪರಿ ಎಂಬ ಉಪಸರ್ಗದಿಂದ, (2) **ಅನಾಗತಾನಂತಕಾಲ ಸಮೀಕ್ಷಯಾಪಿ** – ಮುಂದೆ ಬಹು ಕಾಲಾನಂತರದಲ್ಲೂ ಕೂಡ ನಿರೀಕ್ಷಿಸಿದರೂ, **ಅದೃಷ್ಟಸಂತಾರೋಪಾಯಃ**-ಉಪಾಯಾಂತರವಾದ ಭಕ್ತಿಯೋಗವ ಮೂಲಕ ಸಂಸಾರವನ್ನು ದಾಟುವ ಉಪಾಯವನ್ನು ಕಾಣದವನಾಗಿ, ಎಂದರೆ ಭಕ್ತಿಯೋಗದಲ್ಲಿ ಅಶಕ್ತನಾದುದ

(2) ಶ್ರೀರಂಗಗದ್ಯಂ. (3) ಜಿತನ್ತಾಸ್ತೋತ್ರಮ್.

**ಅತ್ಯಂತಾಕಿಂಚನನುಕ್ಕು ಸರ್ವಕಾಲತ್ತಿಲುಮ್ ಸರ್ವಪ್ರಕಾರತ್ತಾಲುಮ್ ಯೋಗ್ಯತೈ ಯಿಲ್ಲಾವೈ ತೆಳಿಗೈಯಾಲೇಪಿರನ್ದ ನೈರಾಶ್ಯಾತಿಶಯುಮ್ ಶೊಲ್ಲಪ್ಪಡುಗಿರದು.**

**ಪರಿತ್ಯಜ್ಯ ಪದಸ್ಯ ಅನುವಾದಾರ್ಥಮಾಹ**

**ಸರ್ವಪ್ರಕಾರತ್ತಾಲುಮ್ ತ್ಯಾಗಮಾವದು? ಪೂರ್ಣಾನುಷ್ಠಾನ ಶಕ್ತಿ ಇಲ್ಲಾದಪೋದು ಯಥಾಶಕ್ತ್ಯನುಷ್ಠಾನಮ್ ಪಣ್ಣಿಗಿರೋಮೆನ್ರುಮ್,**

---

ರಿಂದ ಇನ್ನು ಮುಂದಕ್ಕೂ ಎಷ್ಟುಕಾಲ ನಿರೀಕ್ಷಿಸಿದರೂ ತನಗೆ ಸಂಸಾರವನ್ನು ದಾಟುವ ಉಪಾಯವು ಕಾಣದೆ ಎಂಬರ್ಥವು. ಮತ್ತು (3) **ತ್ವತ್ಪಾದಕಮಲಾದನ್ಯತ್** – ನಿನ್ನ ಪಾದಕಮಲಗಳಿಗಿಂತ ಬೇರೆ ಎಂದರೆ ಪಾದಕಮಲದಲ್ಲಿ ಮಾಡುವ ಶರಣಾಗತಿಯಲ್ಲದ, ಬೇ ಯಾವುದೂ **ಜನ್ಮಾಂತರೇಷು** – ಬೇರೆ ಜನ್ಮದಲ್ಲೀಯಾಗಲಿ, **ಮೇ** – ಅಕಿಂಚನನಾದ ನನಗೆ, **ನ** – ಇಲ್ಲವು. ನನಗೆ ಸ್ವಾಮಿ ಪಾದಕಮಲವಲ್ಲದೆ ಬೇರೆ ಗತಿಯಿಲ್ಲವೆಂಬ ಭಾವವು, '' **ಇತ್ಯಾದಿಗಳಿಲ್ ಪಡಿಯೇ** – ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಅತ್ಯಂತಾಕಿಂಚನನುಕ್ಕು** – ಭಕ್ತಿಯೋಗವನ್ನೂ ತತ್ಪರಿಕರಗಳನ್ನೂ ಅನುಷ್ಠಿಸಲು ಅತ್ಯನ್ತಾಶಕ್ತನಾಗಿ ಅಕಿಂಚನನಾಗಿರುವವನಿಗೆ, ಸರ್ವಕಾಲದಲ್ಲೂ, ಸರ್ವಪ್ರಕಾರವಲ್ಲೂ, **ಯೋಗ್ಯತೈ** ಇಲ್ಲದಿರೋಣವು, **ತೆಳಿಗೈಯಾಲೇ**–ತೋರಿಬಂದುದರಿಂದ, **ಪಿರನ್ದ**– ಉಂಟಾದ, **ನೈರಾಶ್ಯಾತಿಶಯುಮ್** – ನೈರಾಶ್ಯಾಧಿಕ್ಯವು ಎಂದರೆ ಭಕ್ತಿಯೋಗದಲ್ಲಿ ತನಗೆ ಸುತರಾಂ ಆಶೆಯಿಲ್ಲದಿರೋಣದರ ಆಧಿಕ್ಯವು, **ಶೊಲ್ಲಪ್ಪಡುಗಿರದು** – ಹೇಳಲ್ಪಡುತ್ತದೆ. ಪರಿತ್ಯಜ್ಯ ಎಂಬಲ್ಲಿರುವ ತ್ಯಾಗವು ಭಕ್ತಿಯೋಗದಲ್ಲಿ ಆಶೆಯನ್ನು ತೊರೆಯೋಣವನ್ನು ಸೂಚಿಸುತ್ತದೆಂದೂ, **ಪರಿ** ಎಂಬ ಉಪಸರ್ಗದಿಂದ ಅತ್ಯಂತವಾಗಿ ಆಶೆಯನ್ನು ತೊರೆಯೋಣವನ್ನು ಸೂಚಿಸುತ್ತದೆಂದೂ ತಿಳಿಸಿದರು **ತ್ಯಾಗ** ಶಬ್ದದಿಂದಲೇ ಭಕ್ತಿಯೋಗವೇನು ತತ್ಪರಿಕರಗಳ ಅನುಷ್ಠಾನವೇನು ಇವುಗಳೆಲ್ಲವೂ ಹೇಳಲ್ಪಟ್ಟರೆ, **ಪರಿ** ಎಂಬ ಉಪಸರ್ಗಕ್ಕೆ ಯಾವ ಅರ್ಥವೆಂದರೆ, ಮುಂದೆ ಅನಂತಕಾಲ ನಿರೀಕ್ಷಿಸಿದರೂ, ಎಂದಿಗೂ ತನಗೆ ಯೋಗ್ಯತೆಯುಂಟಾಗುವದಿಲ್ಲ ಎಂಬ ಅತ್ಯನ್ತ ನೈರಾಶ್ಯವನ್ನು ಈ ಉಪಸರ್ಗವು ಬೋಧಿಸುತ್ತದೆಂದು ಹೇಳಿದರು. ಈ ನೈರಾಶ್ಯಾತಿಶಯ ಶಬ್ದದಿಂದ ಸಂಪೂರ್ಣವಾದ ಸರ್ವಪ್ರಕಾರ ತ್ಯಾಗವು ಪರಿತ್ಯಜ್ಯವೆಂಬುದರಿಂದ ಹೇಳಲ್ಪಟ್ಟರೆ, ಈ ಸರ್ವಪ್ರಕಾರ **ತ್ಯಾಗಕ್ಕೆ** ಏನು ಅರ್ಥವೆಂದರೆ, ಉಪಪಾದಿಸುತ್ತಾರೆ—

**ಆದುಕ್ಕು ಯೋಗ್ಯತೈ ಇಲ್ಲಾದ ದಶೈಯಿಲೇ ವೇರೇಶಿಲ ಅನುಕಲ್ಪಙ್ಗಳೈಯಾದಲ್, ಉಪಾಯೋಪಾಯಙ್ಗಳೈಯಾದಲ್, ಅನುಷ್ಠಿಕ್ಕಿರೋಮೆನ್ರು, ತನಕ್ಕು ದುಷ್ಕರಙ್ಗಳೈಕ್ಕಣಿಕ್ಕುಮ್ ದುರಾಶೈಯತ್ತಿರುಕ್ಕೈ.**

**ಪರಿತ್ಯಜ್ಯ ಎಂಬ ಪದಕ್ಕೆ ಅನುವಾದಾರ್ಥವನ್ನು ಹೇಳುತ್ತಾರೆ—**

**ಸರ್ವಪ್ರಕಾರತ್ತಾಲುಮ್ ತ್ಯಾಗಮಾವದು ?** ಸರ್ವಪ್ರಕಾರದಿಂದಲೂ ಆ ನಾನಾವಿಧ ಬ್ರಹ್ಮವಿದ್ಯೆಗಳನ್ನು ಸಪರಿಕರವಾಗಿ ಬಿಡೋಣವೆಂದರೇನು? **ಪೂರ್ಣಾನುಷ್ಠಾನಮ್ ಶಕ್ತಿಯಿಲ್ಲಾದಪ್ಪೋದು** – ಸಂಪೂರ್ಣವಾಗಿ ಆ ಬ್ರಹ್ಮವಿದ್ಯೆಗಳಲ್ಲಿ ಯಾವುದಾದರೂ ಒಂದನ್ನು ಅನುಷ್ಠಿಸುವ ಶಕ್ತಿಯಿಲ್ಲದಿರುವಾಗ, **ಯಥಾಶಕ್ತ್ಯನುಷ್ಠಾನಮ್ ಪಣ್ಣಕ್ಕಡವೋಮೆನ್ರುಮ್**–ತನಗೆ ಶಕ್ತಿ ಇರುವಷ್ಟನ್ನಾದರೂ ಅನುಷ್ಠಿಸುವೆವೆಂದಾಗಲಿ, ಅಥವಾ **ಅದುಕ್ಕು ಯೋಗ್ಯತೈ ಇಲ್ಲಾದ** – ಆ ಉಪಾಸನಕ್ಕೆ ಯೋಗ್ಯತೆ ಇಲ್ಲದಿರುವ, **ದಶೈಯಿಲ್** – ಅವಸ್ಥೆಯಲ್ಲಿ, **ವೇರೇಶಿಲ ಅನುಕಲ್ಪಙ್ಗಳೈಯಾದಲ್** – ಸಾಕ್ಷಾತ್ತಾಗಿ ಅವನ್ನೇ ಅನುಷ್ಠಿಸಲು ಆಗದೆ ಇರುವವರಿಂದ ಅವಕ್ಕೆ ಬದಲಾಗಿ ಇನ್ನು ಯಾವುದನ್ನಾಗಲಿ, **ಉಪಾಯೋಪಾಯಙ್ಗಳೈಯಾದಲ್** – ಉಪಾಯದ ಸಾಧನಗಳನ್ನಾಗಲಿ. **ಅನುಷ್ಠಿಕ್ಕಿರೋಂ** – ಅನುಷ್ಠಿಸುವೆವು, **ಎನ್ರು** – ಎಂಬದಾಗಿ **ತನಕ್ಕು** – ತನಗೆ, **ದುಷ್ಕರಙ್ಗಳೈ** – ಅಸಾಧ್ಯವಾದವುಗಳನ್ನು. **ಕಣಿಕ್ಕುಮ್** – ಇಚ್ಛಿಸುವ, **ದುರಾಶೈ**– ಕೆಟ್ಟ ಆಶೆಯನ್ನು, **ಅತ್ತಿರುಕ್ಕೈ** – ಬಿಟ್ಟಿರೋಣವು.

ಸರ್ವಪ್ರಕಾರದಿಂದಲೂ ಬಿಡುವದು ಎಂದರೆ ಉಪಾಯಾನ್ತರವಾದ ಭಕ್ತಿಯೋಗದಲ್ಲಿ ಸರ್ವವಿಧವಾದ ಸಂಬಂಧವನ್ನೂ ತ್ಯಾಗಮಾಡಬೇಕೆಂದು ಹೇಳಲ್ಪಟ್ಟಿತು. ಸರಿಯಾಗಿ ಅದನ್ನು ಅನುಷ್ಠಿಸಲು ಶಕ್ತಿ ಇಲ್ಲವೆಂದು ಭಾವಿಸಿ ಶರಣಾಗತಿಯನ್ನನುಷ್ಠಿಸುವೆನೆಂದೂ, ಯಥಾಶಕ್ತಿ ಉಪಾಯಾನ್ತರವನ್ನೂ ಅನುಷ್ಠಿಸುವೆನೆಂದೂ ಹೋಗಕೂಡದು, **ಸ್ನಾನಂ ಸಪ್ತವಿಧಂ** ಎಂದು ಹೇಳಿರುವ ಹಾಗೆ ಅವಗಾಹನ ಸ್ನಾನಮಾಡಲು ಶಕ್ತಿಯಿಲ್ಲದವನು ಅನುಕಲ್ಪವಾದ ಮಂತ್ರಸ್ನಾನವನ್ನು ಅನುಷ್ಠಿಸುವ ಹಾಗೆ, ಭಕ್ತಿಯೋಗಕ್ಕೆ ಬದಲಾಗಿ ಬೇರೆ ಇನ್ನೊಂದನ್ನು ಅನುಷ್ಠಿಸುವೆನೆಂದು ಹೋಗಕೂಡದು, ಅಥವಾ ಭಕ್ತಿಯೋಗದ ಸಾಧನಗಳನ್ನಾದರೂ ಅನುಷ್ಠಿಸುವೆನೆಂದೂ ಹೋಗಕೂಡದು, ಇಂತಹ ಅನುಷ್ಠಾನಗಳಲ್ಲಿ ಯಾವುದನ್ನಾಗಲಿ ಮಾಡುವೆನೆಂಬ ದುರಾಶೆಯನ್ನು ತ್ಯಾಗಮಾಡತಕ್ಕದು. **ಇಂತಹ ಪರಿತ್ಯಾಗವೀಗ ಸರ್ವಪ್ರಕಾರ ತ್ಯಾಗವೆಂದು ಉಪದೇಶಿಸಿದರು.**

**ಅನುವಾದಾರ್ಥ ಪ್ರಯೋಜನಮಾಹ**
**ಇವ್ವನುವಾದತ್ತುಕ್ಕು ಅಧಿಕಾರವಿಶೇಷತ್ತೈ ಕ್ಕಾಟ್ಟುಗೈ ಪ್ರಯೋಜನಮ್.**

ಹೀಗೆ ಪರಿತ್ಯಜ್ಯವೆಂಬಲ್ಲಿರುವ **ತ್ಯಾಗ** ಶಬ್ದಕ್ಕೂ **ಪರಿ** ಎಂಬ ಉಪಸರ್ಗಕ್ಕೂ ಅರ್ಥವನ್ನು ಹೇಳಿ, ಮುಂದೆ ಲ್ಯಪ್ ಪ್ರತ್ಯಯದ ಅರ್ಥವನ್ನು ವಿವರಿಸಿ ಹೇಳುತ್ತಾರೆ— ಲ್ಯಪ್ ಪ್ರತ್ಯಯದ ಪ್ರಯೋಗವು ಹೇಗೆಂದರೆ—ಒಬ್ಬ ಅಧಿಕಾರಿಯು ಎರಡು ಕಾರ್ಯಗಳನ್ನು ಮಾಡಿದರೆ ಅದರಲ್ಲಿ ಒಂದು ಪೂರ್ವಕಾಲಿಕವಾಗಿರುವದಕ್ಕೆ ಲ್ಯಪ್ಸಾದ ಕ್ತ್ವಾಪ್ರತ್ಯಯವು ಬರುತ್ತದೆ ಇಲ್ಲಿ ತ್ಯಕ್ತ್ವಾ ಎಂಬುದಕ್ಕೆ ಪರಿ ಎಂಬ ಉಪಸರ್ಗ ಬಂದಿರುವದರಿಂದ ಪರಿತ್ಯಜ್ಯ ಎಂದಾಗಿರುತ್ತದೆ. ಹಾಗೆಯೇ **ಭುಕ್ತ್ವಾ** ಎಂಬುದಕ್ಕೆ **ಪರಿ** ಎಂಬ ಉಪಸರ್ಗ ಸೇರಿಸಿದರೆ **ಪರಿಭುಜ್ಯ**ವೆಂದಾಗುತ್ತದೆ, ಈ ಲ್ಯಪ್ಪು ಅನುವಾದಾರ್ಥದಲ್ಲೂ, ವಿಧ್ಯರ್ಥದಲ್ಲೂ ಪ್ರಯೋಗಿಸುವದುಂಟು. ಹೇಗೆಂದರೆ,— "**ಭುಕ್ತ್ವಾ ಚಾಂದ್ರಾಯಣಂ ಚರೇತ್**" ದೋಷಯುಕ್ತ ಊಟಮಾಡಿದುದಾದರೆ ಆ ದೋಷಕ್ಕಾಗಿ ಚಾಂದ್ರಾಯಣ ವ್ರತವನ್ನು ಆಚರಿಸತಕ್ಕದ್ದು. ಇಲ್ಲಿ ಭುಕ್ತ್ವಾ ಎಂಬಲ್ಲಿ ಅನುವಾದಾರ್ಥವು. **ಸ್ನಾತ್ವಾ ಭುಂಜೀತ** – ಸ್ನಾನಮಾಡಿಯೇ ಊಟಮಾಡತಕ್ಕದ್ದು, **ಪಕ್ಷಾಳ್ಯಾಚಮೇತ** – ಕಾಲು ತೊಳಕೊಂಡೇ ಆಚಮನಮಾಡತಕ್ಕದ್ದು; **ದರ್ಭಾನದ್ಭಿಸ್ಸಂಸ್ಪೃಶ್ಯ ಅಗ್ನೌ ಪ್ರಹರತಿ** – ದರ್ಭೆಗಳನ್ನು ನೀರಿನಿಂದ ಮುಟ್ಟಿ ಅಗ್ನಿಯಲ್ಲಿ ಹೋಮ ಮಾಡತಕ್ಕದ್ದು, ಇತ್ಯಾದಿ ಸ್ಥಳಗಳಲ್ಲಿ, **ಸ್ನಾತ್ವಾ, ಪ್ರಕ್ಷಾಳ್ಯ, ಸಂಸ್ಪೃಶ್ಯ** ಎಂಬ ಪದಗಳಲ್ಲಿನ ಲ್ಯಪ್ಪು ವಿಧಿಪರವು, ಏಕೆಂದರೆ ಸ್ನಾನಮಾಡಿಯೇ, ಕಾಲು ತೊಳಕೊಂಡೇ, ನೀರನ್ನು ಮುಟ್ಟಿಯೇ ಎಂಬ ಕ್ರಿಯೆಗಳಿಂದ, ಸ್ನಾನಮಾಡದೆ, ಕಾಲು ತೊಳೆಯದೆ, ನೀರನ್ನು ಮುಟ್ಟದೆ, ನಡೆಸತಕ್ಕದ್ದಲ್ಲವೆಂಬ ವಿಧಿಯು ಏರ್ಪಡುತ್ತದೆ. ಇಲ್ಲಿ ಇರುವ ಪರಿತ್ಯಜ್ಯ ಎಂಬಲ್ಲಿರುವ ಲ್ಯಪ್ಪು ಅನುವಾದವೇ? ಅಥವಾ ವಿಧಿಯೇ? ಅಥವಾ ಎರಡು ವಿಧವಾಗಿಯೂ ಭಾವಿಸಬಹುದೇ? ಎಂಬ ಸಂದರ್ಭಗಳನ್ನು ಚರ್ಚಿಸಿ, ಅಂತಹ ಭಾವನೆಗಳಿಂದುಂಟಾಗುವ ಪ್ರಯೋಜನಗಳನ್ನು ತಿಳಿಸುತ್ತಾರೆ—

**ಅನುವಾದಾರ್ಥದಿಂದ ಉಂಟಾಗುವ ಪ್ರಯೋಜನವು**

**ಪರಿತ್ಯಜ್ಯ** ಎಂಬುದಕ್ಕೆ ಸಪರಿಕರಗಳಾದ ನಾನಾ ಬ್ರಹ್ಮವಿದ್ಯೆಗಳ ದುಷ್ಕರತೆಯಿಂದ ಸರ್ವಪ್ರಕಾರದಿಂದಲೂ ಪರಿತ್ಯಾಗಮಾಡಿ ಎಂದು ಹೀಗೆ ಅನುವಾದ ರೂಪಾರ್ಥವನ್ನು ಲ್ಯಪ್ಪಿಗೆ ಹೇಳಿದುದರಿಂದ ಉಂಟಾಗುವ ಪ್ರಯೋಜನವೇನು? ಎಂದರೆ ತಿಳಿಸುತ್ತಾರೆ— **ಇವ್ವನುವಾದತ್ತುಕ್ಕು** :– ಪರಿತ್ಯಜ್ಯ ಎಂಬಲ್ಲಿರುವ

**ಅದಿಲ್**, “ **ಪರಿ** ” **ಎಙ್ಗಿರ ಉಪಸರ್ಗತ್ತಾಲ್ ಅಧಿಕಾರ ಪೌಷ್ಕಲ್ಯತ್ತೈ ವಿವಕ್ಷಿಕ್ಕಿರದು.**

(೧) “ **ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಮ್** ” **ಎಙ್ಗಿರ ವಿಡತ್ತಿಲ್ ಪ್ರಾಪ್ಯ ಎಙ್ಗಿರದು ವಿಧಿಯನ್ರಿಕ್ಕೇ, “ಪ್ರಾಪ್ಯೈವ ವರ್ತಮಾನಸ್ತ್ವಂ” ಎನ್ರು ವ್ಯಾಖ್ಯಾತಮಾನಾರ್‌ಪ್ಪೋಲೆ, ಇಙ್ಗುಮ್ “ ಪರಿತ್ಯಜ್ಯ ಸ್ಥಿತಸ್ತ್ವಮ್ ” ಎನ್ರು ವಿವಕ್ಷಿಕ್ಕಕ್ಕಡವದು.**

---

ಲಿಪಿಗೆ ಮೇಲೆ ಹೇಳಿದ ರೀತಿಯಲ್ಲಿ ಅನುವಾದಾರ್ಥವನ್ನು ಹೇಳುವಪಕ್ಷೇ, **ಅಧಿಕಾರ ವಿಶೇಷತ್ತೈ** – ಭರನ್ಯಾಸಕ್ಕೆ ಆಕಿಂಚನ್ಯಾಗಿ ರೂಪವಾದ ಅಧಿಕಾರ ವಿಶೇಷವನ್ನು, **ಕಾಟ್ಟುಗೈ** – ಪ್ರವರ್ತಿಸೋಣವು, ಪ್ರಯೋಜನವು. ಅನುವಾದಾರ್ಥವನ್ನು ಬೋಧಿಸುವ ಲಿಪ್ ಪ್ರತ್ಯಯದಿಂದ ಆಕಿಂಚನ್ಯರೂಪವಾದ ಭರನ್ಯಾಸಾಧಿಕಾರ ವಿಶೇಷವು ಬೋಧಿತವೆಂದು ಹೇಳಿದರು. ಆ ಆಕಿಂಚನ್ಯರೂಪ ಅಧಿಕಾರವು ಅಶಕ್ಯಾನುಸಂಧಾನದಿಂದುಂಟಾದ ಸ್ವರೂಪ್ಯವಿಷಯೇ ಎಂಬರೆ, ತ್ಯಾಗ ಶಬ್ದದಿಂದಲೇ ಉಂಟಾಗುವಾಗ, **ಪರಿ** ಎಂಬ ಉಪಸರ್ಗವು ಆಗ ನಿರರ್ಥಕವಾಗುವದಿಲ್ಲವೋ ಎಂದರೆ, ಆಗ **ಪರಿ** ಎಂಬ ಉಪಸರ್ಗದಿಂದ ಅಧಿಕಾರ ಪೌಷ್ಕಲ್ಯವು ಹೇಳಲ್ಪಟ್ಟು, ಅತ್ಯಂತಾ ಕಿಂಚನತ್ವವು ಬೋಧಿತವೆಂದು ಭಾವಿಸಬಹುದು ಎಂದು ಮುಂದೆ ಉಪದೇಶಿಸುತ್ತಾರೆ— **ಅದಿಲ್** – ಆ ಸಂದರ್ಭದಲ್ಲಿ ಎಂದರೆ ಅನುವಾದ ಮೂಲಕ ಅಧಿಕಾರ ವಿಶೇಷವನ್ನು ಬೋಧಿಸುವ ಪ್ರಸಂಗದಲ್ಲಿ, ‘ಪರಿ’ ಎಙ್ಗಿರ **ಉಪಸರ್ಗತ್ತಾಲ್** – ಪರಿ ಎಂಬ ಉಪಸರ್ಗವು, ಅಧಿಕಾರಪೌಷ್ಕಲ್ಯತ್ತೈ – ಆ ಆಕಿಂಚನ್ಯಾಧಿಕಾರದ ಸಂಪೂರ್ಣತೆಯನ್ನು, ವಿವಕ್ಷಿಕ್ಕಿರದು – ತೋರಿಸುತ್ತದೆ. ಆಗಲೂ **ಪರಿ** ಎಂಬ ಉಪಸರ್ಗವು ವ್ಯರ್ಥವಲ್ಲವು ಸಂಪೂರ್ಣವಾದ ಆಕಿಂಚನ್ಯವನ್ನು ಬೋಧಿಸುತ್ತದೆಂದು ತಿಳಿಸಿದರು. ಮುಂದೆ ಅನುವಾದಕ್ಕೆ ಒಂದು ಉದಾಹರಣೆಯನ್ನು ಕೊಟ್ಟು, ಇಂತಹ ಪ್ರಯೋಗದಲ್ಲಿ ಅರ್ಥವು ಹೇಗೆ ಎಂದು ತಿಳಿಸಿ, ಇಂತಹ ಅನುವಾದಾರ್ಥದಲ್ಲಿಯೂ ತ್ಯಾಗವು ಅಙ್ಗವೇ ಆಗಿರಬೇಕೆಂದು ಇತರರು ಹೇಳುವದು ಸರಿಯಲ್ಲವೆಂದು ಹೇಳುತ್ತಾರೆ–

(೧) “ **ಇಮಂ** – ಇಂತಹ ಕ್ಷುದ್ರವಾದ **ಅನಿತ್ಯಂ** – ಅಶಾಶ್ವತವಾದ, **ಅಸುಖಂ** – ದುಃಖದಿಂದ ಸೇರಿರುವದರಿಂದಲೇ ಸುಖವಿಲ್ಲದಿರುವ, **ಲೋಕಂ** – ಭೂಮಂಡಲವನ್ನು, **ಪ್ರಾಪ್ಯ**–ಹೊಂದಿರುವದರಿಂದಲೇ ನೀನು, **ಭಜಸ್ವಮಾಮ್**

---

(೧) ಗೀ. 9–33.

**ಇಪ್ಪಡಿ ಅರ್ಥಾಂತರಙ್ಗಳಿಲುಮ್ ಪ್ರಯೋಗಮ್ ಉಂಡಾಗೈಯಾಲೇ ತ್ವಾಶ್ರುತಿಮಾತ್ರತ್ತೈಕ್ಕೊಂಡು, ತ್ಯಾಗ ಮಙ್ಗಮೆನ್ರವೊಣ್ಣಾದು.**

– ಭಕ್ತಿಯಿಂದ ಉಪಾಸನೆಯನ್ನಾದರೂ ಮಾಡು ಅಥವಾ ಶರಣಾಗತಿಯನ್ನು ಮಾಡು, ಹಾಗೆ ಮಾಡಿದುದಾದರೆ, ಈ ಅನಿತ್ಯಕ್ಕೆ ಬದಲಾಗಿ ಪ್ರಳಯಕ್ಕೆ ಸಿಕ್ಕದ ಶಾಶ್ವತವಾಗಿರುವ, ಅಸುಖವಾದ ಲೋಕಕ್ಕೆ ಬದಲಾಗಿ ದುಃಖಗಂಧವೇ ಇಲ್ಲದೆ ನಿರತಿಶಯ ಸುಖರೂಪವಾದ ದಿವ್ಯ ವೈಕುಂಠಲೋಕವನ್ನು ಹೊಂದುವಿ ಎಂಬ ಭಾವವು" **ಎಜ್ಙ್ಗಿರವಿಡತ್ತಿಲ್** – ಎಂದು ಹೇಳಿರುವ ಸಂದರ್ಭದಲ್ಲಿ, **ಪ್ರಾಪ್ಸ್ಯ ಎಜ್ಙ್ಗಿರದು** – ಪ್ರಾಪ್ಸ್ಯ ಎಂಬ ಲೃಟ್ಪ್ರತ್ಯಯ್ಯವಿರುವ ಪದವು, **ವಿಧಿಯನ್ರಿಕ್ಕೇ** – ವಿಧ್ಯರ್ಥವಲ್ಲದೆ, **ಪ್ರಾಪ್ಸ್ಯವರ್ತಮಾನಸ್ತ್ವಂ** – "ಹೊಂದಿರುವ ನೀನು ಎಂಬದಾಗಿ", **ವ್ಯಾಖ್ಯಾತಮಾನಾರ್ಪೋಲೇ**–ಶ್ರೀ ಭಾಷ್ಯಕಾರರಿಂದ ಅನುವಾದವೆಂದು ತೋರಿಸುವುದಕ್ಕಾಗಿ ವ್ಯಾಖ್ಯಾನಮಾಡಲ್ಪಟ್ಟಿರುವ ಹಾಗೆ. **ಇಙ್ಗುಮ್** – ಈ ಸರ್ವಧರ್ಮಾನ್ಪರಿತ್ಯಜ್ಯ ಎಂಬ ಸ್ಥಳದಲ್ಲೂ, **ಪರಿತ್ಯಜ್ಯ ಸ್ಥಿತಸ್ತ್ವಮ್** – ಸರ್ವಪ್ರಕಾರದಿಂದಲೂ ಸಪರಿಕರ ಬ್ರಹ್ಮವಿದ್ಯೆಗಳನ್ನೆಲ್ಲಾ ದುಷ್ಕರತೆಯಿಂದ ಸಂಪೂರ್ಣವಾಗಿ ತ್ಯಾಗಮಾಡಿರುವ ನೀನು, **ಎನ್ರುವಿವಕ್ಷಿಕ್ಕರದು** - ಎಂದು ಬೋಧಿಸುತ್ತದೆ ಮೇಲಿನ **ಭಜಸ್ವ**ಪದದಿಂದ ಎರಡು ಉಪಾಯಗಳೂ ಬೋಧಿತವು

ಆಗಲಿ ಹೀಗೆ ಅನುಸಂಧಾನಮಾಡಿ, **ಮಾ ಮೇಕಂ ಶರಣಂ ವ್ರಜ** ಎಂದು ಹೇಳಿರುವದರಿಂದ, ಅಂತಹ ಪರಿತ್ಯಾಗವು ಅಂಗಿಯಾದ ಶರಣಾಗತಿಗೆ ಅಂಗವಾಕಬೇಕಲ್ಲವೇ? ಎಂದರೆ, ಅಂಗಿಯು ವಿಧಿಯು, ಅಂತಹ ಅಂಗಿಗೆ ಸಂಬಂಧಪಟ್ಟ ಅಂಗಗಳೂ ವಿಧಿಗೆ ಸೇರಿದವೇ, ಆದುದರಿಂದ ಯಾವಾಗ ವಿಧಿಯಲ್ಲವು ಅನುವಾದವೆಂದು ಉಪಪಾದಿತವೋ ಆಗ ಅಂಗವಾಗುವದಿಲ್ಲವು. ಹಾಗೆ ಅಂಗವೆಂದು ಭಾವಿಸುವವರ ಅಭಿಪ್ರಾಯವು ಸರಿಯಲ್ಲವೆಂದಾಯಿತು ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ—

**ಇಪ್ಪಡಿ** – ಈ ಲೃಟ್ಟಿಗೆ ಅನುವಾದ ರೂಪಾರ್ಥವನ್ನು ಇಲ್ಲಿ ಹೇಳಿದ ಹಾಗೆ, **ಅರ್ಥಾಂತರಙ್ಗಳಿಲುಮ್** – ಬೇರೇ ಇತರ ಸಂದರ್ಭಗಳಲ್ಲೂ, **ಪ್ರಯೋಗಮ್ ಉಂಡಾಗೈಯಾಲೇ** – ಪ್ರಯೋಗವು ಕಂಡು ಬರುವದರಿಂದ, **ತ್ವಾಶ್ರುತಿಮಾತ್ರತ್ತೈಕೊಂಡು** – ಲೃಪ್ ಪ್ರತ್ಯಯವಾದ ತ್ವಾ ಎಂಬುದು ಶ್ರೋತ್ರಪಥಕ್ಕೆ ಬಿತ್ತೋ ಇಲ್ಲವೋ, **ತ್ಯಾಗಮ್** – ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ ಧರ್ಮಗಳ ತ್ಯಾಗವು, **ಅಙ್ಗಮೆನ್ರವೊಣ್ಣಾದು** – ಮುಂದೆ **ಶರಣಂವ್ರಜ** ಎಂಬಲ್ಲಿ ವಿಧಿಸುವ

ಶರಣಾಗತಿಗೆ ಅಂಗವೆಂದು ಹೇಳಲಾಗುವದಿಲ್ಲವು. ಇದರಿಂದ ಇಲ್ಲಿ ಹೇಳಿರುವ ಪರಿತ್ಯಾಗವು ಶರಣಾಗತಿಗೆ ಅಂಗವೆಂದು ಭಾವಿಸುವದು ಸರಿಯಲ್ಲವು. ಏಕೆಂದರೆ ಯಾವಾಗ ಅನುವಾದವೆಂದು ಹೇಳಲ್ಪಟ್ಟಿತೋ ಆಗ ಅಂಗವಾಗಲು ಮಾರ್ಗವಿಲ್ಲವು ಅಂಗಿಯು ಯಾವಾಗ ವಿಧಿಯೋ ಮುಖ್ಯಾಂಗಗಳೂ ಸಹ ವಿಧಿರೂಪದಲ್ಲೇ ಹೇಳಲ್ಪಟ್ಟಿರಬೇಕು. ಏಕಂದರ ಅಂಗಗಳಿಲ್ಲದ ಅಂಗಿನಿಷ್ಪತ್ತಿ ಇಲ್ಲವಾದುದರಿಂದ ಅಂಗಗಳೂ ವಿಧಿರೂಪದಲ್ಲೇ ಹೇಳಲ್ಪಡತಕ್ಕವುಗಳು. ಇದು ಮೇಲೆಕೊಟ್ಟಿರುವ ಉದಾಹರಣೆಗಳಿಂದಲೇ ವ್ಯಕ್ತವು **ಸ್ನಾತ್ವಾಭುಂಜೀತ** ಎಂಬಲ್ಲಿ ಭೋಜನಕ್ಕೆ ಸ್ನಾನವು ಅಂಗವಾದುದರಿಂದ ಸ್ನಾತ್ವಾ ಎಂಬುದೂ ವಿಧಿಯೇ, ಹಾಗೆಯೇ " **ದರ್ಭಾನದ್ಭಿಸ್ಸಂಸ್ಪೃಶ್ಯಾಗ್ನೌಪ್ರಹರತಿ** " ಎಂಬಲ್ಲೂ ದರ್ಭೆಗಳ ನೀರಿನಿಂದ ಸಂಸ್ಪರ್ಶನವು ಅಗ್ನಿಯಲ್ಲಿ ಪ್ರಹರಣಕ್ಕೆ ಅಂಗವೆಂದು ಇಲ್ಲಿ ಲೆಪ್ಪು ಬೋಧಿಸುತ್ತದೆ ಆದುದರಿಂದ ಅಂಗಿಗೆ ಅಂಗವೆಂದು ಹೇಳಬೇಕಾದರೆ, ಅಂಗವೂ ವಿಧಿರೂಪದಲ್ಲಿ ಹೇಳಲ್ಪಟ್ಟಿರಬೇಕು ಇಲ್ಲಿ " **ಅನಿತ್ಯಮಸುಖಂ ಲೋಕಂ ಇಮಂ ಪ್ರಾಪ್ಯ** " ಎಂಬಲ್ಲಿ ಹೇಳಿರುವದು ಯಾವಾಗ ಅನುವಾದವೆಂದಾಯಿತೋ, ಆಗ ಅಂಗವಲ್ಲವೆಂಬುದು ವ್ಯಕ್ತವೆಂಬ ಭಾವವು ಹಾಗೆ **ಭುಕ್ತ್ವಾಚಾಂದ್ರಾಯಣಂಚರೇತ್** – ನಿಷಿದ್ಧಭೋಜನ ಉಂಟಾದರೆ ಪ್ರಾಯಶ್ಚಿತ್ತರೂಪದಲ್ಲಿ ಚಾಂದ್ರಾಯಣವನ್ನು ಅನುಷ್ಠಿಸು, ಎಂಬಲ್ಲಿ ತ್ವಾ ಪ್ರತ್ಯಯವಿರುವದರಿಂದ ಇಲ್ಲಿ ಚಾಂದ್ರಾಯಣಕ್ಕೆ ಹೇಗೆ ಅಂಗವೆಂದು ಹೇಳಲಾಗುತ್ತದೆ? ನಿಷಿದ್ಧ ಭೋಜನಮಾಡು, ಚಾಂದ್ರಾಯಣವನ್ನು ಅನುಷ್ಠಿಸು ಎಂದು ಹೇಳಿತೆಂಬರ್ಥವು ಹೇಗೆ ಅಸಂಗತವಾದುದೋ ಹಾಗೆ ಎಂಬ ಭಾವವು

ಇದೂ ಅಲ್ಲದೆ ಸಪರಿಕರ ಸರ್ವಧರ್ಮಗಳ ತ್ಯಾಗವು ಅಂಗವೆಂದು ಭಾವಿಸಿದುದಾದರೆ ನಿತ್ಯನೈಮಿತ್ತಿಕಾದಿ ಸಕಲ ವರ್ಣಾಶ್ರಮ ಧರ್ಮಗಳೂ ಪ್ರಪತ್ತಿಗೆ ಅಂಗವೆಂದಾಗಿ, ಅವುಗಳನ್ನೆಲ್ಲಾ ಬಿಡಬೇಕಾಗಿ ಬರುವದರಿಂದ ಸರ್ವಶಾಸ್ತ್ರಾರ್ಥಗಳಿಗೂ ಉಪಪ್ಲವ ಉಂಟಾಗುವದರಿಂದಲೂ, ಆ ಅಭಿಪ್ರಾಯವು ಸರಿಯಲ್ಲವೆಂಬ ತಾತ್ಪರ್ಯವು

ಆಗಲಿ, ಅನುವಾದ ಮತ್ತು ವಿಧಿ ಹೀಗೆ ಎರಡು ವಿಧದಲ್ಲೂ ಲೆಪ್ಪಿನ ಪ್ರಯೋಗವಿರುವಾಗ, ನಾವು ವಿಧಿ ಎಂದೇ ಭಾವಿಸುವೆವು ಎಂದರೆ ಹಾಗೆಯೇ ಭಾವಿಸಬಹುದು, ಅಡ್ಡಿಯಿಲ್ಲವು. ನೀವು ಹೇಳಿದ ಹಾಗೆ ಅನೇಕ ಶಾಸ್ತ್ರ ಪ್ರಮಾಣಗಳಿಗೆ ವಿರೋಧ ಉಂಟಾಗದೆ, ಶರಣಾಗತಿಗೆ ಮುಖ್ಯಾಂಗವಾದ ಆಕಿಂಚನ್ಯಾನುಸಂಧಾನದಿಂದುಂಟಾದ ಕಾರ್ಪಣ್ಯಾಂಗವು ವಿಧಿಸಲ್ಪಟ್ಟಿತೆಂದು ಭಾವಿಸಿದರೆ ವಿರೋಧವೇನೂ ಇಲ್ಲವೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ.—

"ಪರಿತ್ಯಜ್ಯ" ಪದಸ್ಯ ವಿಧ್ಯರ್ಥತ್ವಮ್

ಪರಿತ್ಯಜ್ಯ ಎನ್ಗಿರದು ವಿಧಿಯಾನಪ್ಪೋದು, ಪ್ರಪತ್ತ್ಯಧ್ಯಾಯಾದಿಗಳಿಲ್ ವಿಧಿಕ್ಕಪ್ಪಡಿಯೇ ಆಕಿಂಚನ್ಯ ಪ್ರತಿಸಂಧಾನಾದಿ ರೂಪಮಾನ ಕಾರ್ಪಣ್ಯ ... ಪ್ರಪತ್ತ್ಯಙ್ಗಮಾಗ ವಿಧಿಕ್ಕಪಡೆನ್ರಾಲ್ ಅರ್ಥತ್ತಿಲ್ ವಿರೋಧ ... "ಸರ್ವಧರ್ಮಾನ್ ಪರಿತ್ಯಜ್ಯ" ಎನ್ಗಿರದು, (೧) "ಅಹ ... ಪರಾಧಾನಾಮ್" (೨) "ನಧರ್ಮನಿಷ್ಠೋಽಸ್ಮಿ" ಇತ್ಯಾದಿಗಳಿಲ್

---

"ಪರಿತ್ಯಜ್ಯ" ಎಂಬುದು ವಿಧಿಯಾದರ ಆಗ ಅರ್ಥವೇನೆಂದರೆ

ಪರಿತ್ಯಜ್ಯ ಎನ್ಗಿರದು – ಪರಿತ್ಯಜ್ಯ ಎಂದು ಇಲ್ಲಿ ಹೇಳಿರುವುದು, ವಿಧಿಯಾನಪ್ಪೋದು – ವಿಧಿ ಎಂದೇ ಭಾವಿಸುವ ಸಂದರ್ಭದಲ್ಲಿ, ಪ್ರಪತ್ತ್ಯಧ್ಯಾಯಾದಿಗಳಿಲ್ – ಪ್ರಪತ್ತಿ ವಿಧಾನವನ್ನು ವ್ಯಕ್ತಪಡಿಸುವ ಶಾಸ್ತ್ರಗಳಲ್ಲಿ, ವಿಧಿಕ್ಕಪ್ಪಡಿಯೇ – ವಿಧಿಸಿದ ಹಾಗೆಯೇ, ಆಕಿಂಚನ್ಯ ಪ್ರತಿಸಂಧಾನಾದಿ ರೂಪಮಾನ – ಆಕಿಂಚನ್ಯ ... ಪ್ರಸರ್ಶನರೂಪವಾಗ ಇಲ್ಲಿ ಆದಿಪದದಿಂದ ಗರ್ವಹಾನಿಯೂ ... ಕಾರ್ಪಣ್ಯಮಾಗಿರ – ಕಾರ್ಪಣ್ಯವೆಂದು ಹೇಳಿಸಿ ಕೊಳ್ಳುವ, ಪ್ರಪತ್ತ್ಯಙ್ಗಮಾಗ ವಿಧಿಕ್ಕಪಡೆನ್ರಾಲ್ – ಪ್ರಪತ್ತ್ಯಙ್ಗವು ಇಲ್ಲಿ ವಿಧಿಸ ... ಲ್ಪಟ್ಟರೆ, ಅರ್ಥತ್ತಿಲ್ ವಿರೋಧಮಿಲ್ಲೈ – ಆ ಪದ ದಿಂದ ತೋರಿಬರುವ ಅರ್ಥಕ್ಕೇನಾಗಿ ವಿರೋಧ ಉಂಟಾಗುವದಿಲ್ಲವು,

... ಪದವನ್ನು ಹೇಳುವದರಿಂದ ಸರ್ವಧರ್ಮಾನ್ ಪರಿತ್ಯಜ್ಯ ಎಂಬದರ ಅರ್ಥವೇನು ... ವನ್ನು ತಿಳಿಸುತ್ತಾರೆ – ಅಪ್ಪೋದು – ಆ ಸಂದರ್ಭದಲ್ಲಿ, ವಿಧ್ಯ ರ್ಥವನ್ನು ಆ ಪದ ಸಂಪ್ರದಾಯದಲ್ಲಿ ಶರಣಾಗತಿಯಾದ ಅಂಗಿಗೆ ಅಂಗವಾದುದೇ ವಿಧಿಯಾಗುತ್ತಿದೆ ವಿನಾ ಬೇರೆ ಯಾವುದೂ ಅಂಗವಾಗಲಾರದ ಪ್ರಯುಕ್ತ ಅಧಿ ಕಾರಿಯಾದ ತನ್ನ ಕಾರ್ಪಣ್ಯವೇ ವಿಧಿಸಲ್ಪಟ್ಟಿತೆಂದು ಭಾವಿಸತಕ್ಕದ್ದು ಎಂದು ಹೇಳುತ್ತಾರೆ –

"ಸರ್ವಧರ್ಮಾನ್ ಪರಿತ್ಯಜ್ಯ" ಎನ್ಗಿರದು – ಎಂದು ಹೇಳಿರುವದರ ಅಭಿ ಪ್ರಾಯವೇನೆಂದರೆ ತಿಳಿಸುತ್ತಾರೆ.—(೧) "ಅಹಮಸ್ಮ್ಯಪರಾಧಾನಾಮಾಲ ಯೋಽಕಿಂಚನೋಽಗತಿಃ" ಎಂಬ (೨) "ನಧರ್ಮನಿಷ್ಠೋಸ್ಮಿ" ಎಂದಾ

---

(೧) ಅಹಿ 37-30 (೨) ಸ್ತೋತ್ರರತ್ನ—೨೧.

**ಪಡಿಯೇ, ಸರ್ವಧರ್ಮಙ್ಗಳುಮ್ ತನ್ನೈಯೋಗ್ಯತಾ ಪರ್ಯನ್ತಮಾಗ ಕಳಿತ್ತ ಪಡಿಯೇ ಮುನ್ನಿಟ್ಟುಕೊಂಡೆನ್ರಪಡಿ.**

ರಂಭಿಸಿ "**ಅಕಿಂಚನೋಽನನ್ಯಗತಿಶ್ಶರಣ್ಯ ತ್ವತ್ಪಾದಮೂಲಂ ಶರಣಂ ಪ್ರಪದ್ಯೇ**" ಎಂಬ, ಇತ್ಯಾದಿಗಳಿಲ್ಪಡಿಯೇ - ಇತ್ಯಾದಿ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ತನ್ನೈ** – ತನ್ನನ್ನು, **ಯೋಗ್ಯತಾ ಪರ್ಯಂತಮಾಗ ಕಳಿತ್ತಪಡಿಯೇ** – ಯೋಗ್ಯತೆಯ ಪರ್ಯನ್ತವಾಗಿ ತ್ಯಾಗಮಾಡಿ ಎಂದರೆ ತನ್ನ ಅಶಕ್ತತೆಯನ್ನು ಪ್ರದರ್ಶಿಸಿ ಎಂಬರ್ಥವು, ಇದನ್ನು **ಮುನ್ನಿಟ್ಟುಕೊಂಡೆನ್ರಪಡಿ** – ಮೂಲಕಮಾಡಿಕೊಂಡು ಎಂದು ಹೇಳಿದಂತಾಗುವದು ಎಂದರೆ ಅದನ್ನೇ ಮುಖ್ಯಾಂಗವಾಗಿ ಇಟ್ಟುಕೊಂಡು ಎಂಬ ಭಾವವು ವಿಧಿಯಾಗಬೇಕಾದರೆ ಅಂಗಿಗೆ ಸೇರಿದ ಅಂಗವೇ ಆಗಿರಬೇಕು ಮಿಕ್ಕವುಗಳು ಪ್ರಪತ್ತಿಗೆ ಅಂಗವಾಗಲಾರದಾದುದರಿಂದ (೧) **ಅಹಮಸ್ಮ್ಯಪರಾಧಾನಾಂ** ಎಂಬ ಶ್ಲೋಕವು ಹಿಂದೆಯೇ ಪರಿಕರ ವಿಭಾಗಾಧಿಕಾರದಲ್ಲಿ ಉದಾಹೃತವು ೧೦೬ನೆಯ ಪುಟವನ್ನೋಡಿ. ಇವಲ್ಲದೆ ಕೃತಕೃತ್ಯಾಧಿಕಾರದಲ್ಲೂ ಪ್ರಪತ್ತಿಯೋಗ್ಯಾಧಿಕಾರದಲ್ಲೂ ಉದಾಹೃತವು (೨) '**ನಧರ್ಮನಿಷ್ಠೋಽಸ್ಮಿ**'' ಎಂಬುದೂ ಹಿಂದೆ ಸ್ವರೂಪಾಧಿಕಾರದಲ್ಲಿ ಉದಾಹೃತವು

ನೆಯ ಪುಟವನ್ನು ನೋಡಿ, ಕರ್ಮಯೋಗ, ಜ್ಞಾನಯೋಗ ಭಕ್ತಿಯೋಗಗಳಿಗೆ ಅಶಕ್ತ್ಯತೆಯಿಂದ ಆಕಿಂಚನ್ಯ ಮತ್ತು ಅನನ್ಯಗತಿತ್ವದಿಂದ ಶರಣಾಗತ್ಯನುಷ್ಠಾನಕ್ಕೆ ಯೋಗ್ಯತೆಯನ್ನುಪಪಾದಿಸುವ ಶ್ಲೋಕವು. ಪರಿತ್ಯಜ್ಯ ಎಂಬಲ್ಲಿರುವ ಲ್ಯಪ್ ಪ್ರತ್ಯಯಕ್ಕೆ ವಿಧಿಪರವಾಗಿ ಅರ್ಥಹೇಳಬೇಕಾದರೆ, ಅಂಗಾಂಗಿಗಳಲ್ಲಿ ಒಂದರ ವಿಷಯವಾಗಿ ಅರ್ಥವನ್ನು ಹೇಳಿದರೆ ಶಾಸ್ತ್ರಸಮ್ಮತವಾಗುತ್ತದೆ, ಮಿಕ್ಕವುಗಳನ್ನು ವಿಧಿಯಾಗಿ ಹೇಳಿದರೆ ಶಾಸ್ತ್ರವಿರುದ್ಧವಾಗುತ್ತದೆ, ಆದುದರಿಂದ ಕಾರ್ಪಣ್ಯಾಂಗವು ವಿಧಿಸಲ್ಪಟ್ಟಿತೆಂದು ಅರ್ಥಮಾಡುವದರಲ್ಲಿ ಏನೊಂದೂ ದೋಷವಿಲ್ಲವು ಆದರೆ ಆಪಾತತಃ ವಿಳಂಬವಿಲ್ಲದೆ ತೋರುವ ಸರ್ವಧರ್ಮಗಳ ಸ್ವರೂಪಗಳ ತ್ಯಾಗವೆಂಬರ್ಥವನ್ನು ಬಿಟ್ಟು, ಹೀಗೆ ಸಾಕ್ಷಾತ್ತಾಗಿ ತೋರದೆ ವಿಳಂಬವಾಗಿ ಸ್ವಲ್ಪ ಕಷ್ಟದಿಂದ ಊಹೆಯಿಂದ ತೋರುವ ಅರ್ಥವನ್ನು ಸ್ವೀಕರಿಸಬಹುದು ? ಎಂಬಾಕ್ಷೇಪ ಉಂಟಾದರೆ, ಅದಕ್ಕೆ ಸಮಾಧಾನವನ್ನು ಹೇಳುತ್ತಾರೇನೆಂದರೆ.— ಅವಿಳಂಬಿತವಾಗಿ ಸಾಕ್ಷಾತ್ತಾಗಿ ತೋರುವ ಅರ್ಥವು ಬಹು ಶಾಸ್ತ್ರಪ್ರಮಾಣ ವಿರುದ್ಧವಾಗಿದ್ದ ಪಕ್ಷದಲ್ಲಿ, ವಿಳಂಬಿತವಾಗಿ ಕಷ್ಟಪಟ್ಟು ಅರ್ಥಮಾಡಬೇಕಾದ ಅಭಿಪ್ರಾಯವು ಶಾಸ್ತ್ರ ಸಮ್ಮತವಾದುದಾದರೆ, ಎರಡನೆಯ ಅರ್ಥವೇ ಸಾಧುವಾದುದು ಎಂದು ಉಪದೇಶಿಸುತ್ತಾರೆ.—

**ಸರ್ವಧರ್ಮಸ್ವರೂಪಪರಿತ್ಯಾಗ ವಿಧಿಪರತ್ವವಾದ ನಿರಾಸಃ**

**ಇಪ್ಪಳಕ್ಕು ವಿಳಂಬಿತ ಪ್ರತೀತಿಕಮಾನ ಅರ್ಥಮುಮ್ ಬಹುಪ್ರಮಾಣಾಸುಗುಣಮಾನ್ನೈಯಾಲ್, ಅವತ್ತುಕ್ಕು ವಿರುದ್ಧಮಾಗ ಶಂಕರಾದ್ಯುಕ್ತಙ್ಗಳ ಸರ್ವಧರ್ಮಸ್ವರೂಪತ್ಯಾಗಾದ್ಯರ್ಥಙ್ಗಳಿಲ್ ಕಾಟ್ಟಿಲುಮ್ ಉಪಾದೇಯಮನ್ರೋ.**

**ಸರ್ವಧರ್ಮಸ್ವರೂಪ ಪರಿತ್ಯಾಗವು ವಿಧಿಸಲ್ಪಟ್ಟಿದೆಯೆಂಬ ವಾದದ ನಿರಾಸವು.**

ಇಪ್ಪಳಕ್ಕು – ಹೀಗೀಗ ಉಪಪಾದಿಸಿದ ರೀತಿಯಲ್ಲಿ, **ವಿಳಂಬಿತ ಪ್ರತೀತಿಕಮಾನ ಅರ್ಥಮುಮ್** – ಸಾಕ್ಷಾತ್ತಾಗಿ ತೋರದೆ, ನಾವಕಾಶದಿಂದ ಕಷ್ಟಪಟ್ಟು ತೋರಿಬರುವ ಅರ್ಥವು, **ಬಹುಪ್ರಮಾಣಾಸುಗುಣಮಾಗೈಯಾಲೇ** ಅನೇಕ ಶರಣಾಗತಿಸ್ವರೂಪ ಪ್ರತಿಪಾದಕಶಾಸ್ತ್ರ ಪ್ರಮಾಣಗಳಿಗೆ ಅನುಸಾರವಾಗಿರುವುದರಿಂದ **ಅವತ್ತುಕ್ಕು ವಿರುದ್ಧಮಾಗ** – ಅಂತಹ ಶಾಸ್ತ್ರಪ್ರಮಾಣಗಳಿಗೆಲ್ಲ ವಿರುದ್ಧವಾದ, **ಶಂಕರಾದ್ಯುಕ್ತಙ್ಗಳಾನ** – ಶ್ರೀಮಚ್ಛಂಕರಾಚಾರ್ಯರೇ ಮೊದಲಾದವರುಗಳಿಂದ ಹೇಳಲ್ಪಟ್ಟ ... ಶಬ್ದದಿಂದ ಸಾರಾನ್ನಾದಿಸಿಯುವರು ಏಕದೇವನು ಹೇಳಲ್ಪಟ್ಟನು ಎಂದು ವ್ಯಾಖ್ಯಾನಮಾಡಿರುತ್ತಾರೆ. ಏಕದೇಶಿಯು, ಏಕಾತ್ಮನನು— ಪರಮಾತ್ಮನೊಬ್ಬನೇ ಸತ್ಯನು ಲಕ್ಷ್ಮೀಯುಳ್ಳವನೆಂದು ಹೇಳುವ ತಾತ್ಪರ್ಯ... ಸಾಕ್ಷಾತ್ತಾಗಿ ಅವಿಳಂಬಿತವಾಗಿ ತೋರುವ ಎಂಬ ಭಾವವು. **ಸರ್ವಧರ್ಮಸ್ವರೂಪತ್ಯಾಗಾದ್ಯರ್ಥಙ್ಗಳಿಲ್ ಕಾಟ್ಟಿಲ್** – ಸರ್ವಧರ್ಮಗಳನ್ನು ಸಂಪೂರ್ಣವಾಗಿ ಸ್ವರೂಪತ್ಯಾಗವೇ ಮೊದಲಾದ ಅರ್ಥಗಳಿಗಿಂತಲೂ, **ಉಪಾದೇಯಮನ್ರೋ** – ಗ್ರಾಹ್ಯವಾದುದಲ್ಲವೇ, ಯದ್ಯಪಿ ಈ ವಿಧ್ಯರ್ಥಕ್ಕೆ ಸ್ವಲ್ಪ ವಿಳಂಬದಿಂದ ತೋರುವ ಅರ್ಥವೆಂಬ ದೋಷವಿದ್ದರೂ, ಶಾಸ್ತ್ರವಿರುದ್ಧವಲ್ಲವಾದುದರಿಂದ ಗ್ರಾಹ್ಯವೇ. ಸಂಪೂರ್ಣ ಸರ್ವಧರ್ಮಗಳ ಸ್ವರೂಪ ತ್ಯಾಗವೆಂಬರ್ಥವು ಸಾಕ್ಷಾತ್ತಾಗಿ ತೋರಿಬಂದು ಶ್ರೀಮಚ್ಛಂಕರಾಚಾರ್ಯರೇ ಮೊದಲಾದವರಿಂದ ಪರಿಗೃಹಿತವಾಗಿದ್ದರೂ ನಮಗೆ ಗ್ರಾಹ್ಯವಲ್ಲವು, ಏಕೆಂದರೆ ಅನೇಕ ಶಾಸ್ತ್ರ ಪ್ರಮಾಣಗಳಿಗೆ ವಿರುದ್ಧವಾಗುತ್ತದೆ. ಈ ಸರ್ವಧರ್ಮಾನ್ ಎಂಬವುಗಳಲ್ಲೇ ನಿತ್ಯನೈಮಿತ್ತಿಕ ಕರ್ಮಗಳೂ ಸೇರಿ, ಅವುಗಳನ್ನೂ ಬಿಡಬಹುದು ಎಂಬ ವಿಧ್ಯರ್ಥವು ಉಂಟಾಗುವುದರಿಂದ ಆ ಅರ್ಥವು ಸಮಂಜಸವಾದುದಲ್ಲವು. ನಿತ್ಯನೈಮಿತ್ತಿಕ ಕರ್ಮಗಳು ಈತನ ಜನ್ಮಮೂಲಕ ಬಂದವುಗಳಾಗಿ ಜನ್ಮವಿರುವವರೆಗೂ ನಡೆಸತಕ್ಕದ್ದಾಗಿರುತ್ತದೆ. " **ಕುರ್ವನ್ನೇವೇಹಕರ್ಮಾಣಿ ಜಿಜೀವಿಷೇಚ್ಛತಗಂ**

**ಪ್ರಪತ್ತಿಕ್ಕಾಹ ವ್ಯೊಸು ಧರ್ಮ [illegible] ಸುಶಿ ಕ್ಷತೋ [illegible] ನುಡ್ಡೈಯ ನ್ಯೆರಪೇಕ್ಷ [illegible] ಕ್ಷತುಕ್ತ [illegible] ತಿತಮ್.**

ಸರ್ವಾ " (ಈ [illegible]) ಇದೇ [illegible] ಸಾಧನಗಳಿಗೆ [illegible] ಅಂತಹ ಕೆಲವು [illegible] ಅಲ್ಲದೆ ಗೀತಾಚಾರ್ಯರು [illegible] " ಕುರುಕರ್ಮೈವ [illegible] ಜ್ಯಂಕಾರ್ಯನೋವತತ್ " [illegible] ನಿಜ। ಕರ್ತವ್ಯಾನೀ [illegible] " ಸ್ವೇ ಸ್ವೇ ಕರ್ಮಣ್ಯಭಿ [illegible] " " ಸ್ವ [illegible] ಭ್ಯರ್ಚ್ಯ ಸಿದ್ಧಿಂ ವಿನ್ದ [illegible] " ( [illegible] ) [illegible] ಹೇಳುತ್ತಾ ಹೋಗಿ, ಕೊನೆಗೆ " ಸ್ವಧರ್ಮಾ [illegible] " ಎಂ [illegible] ಧರ್ಮಗಳ ಸ್ವರೂಪತ್ಯಾಗ [illegible] ಉಪದೇಶಿಸಿದನು, ಎಂದಾಗ [illegible] ಭಾವವು ಆದುದರಿಂದ [illegible] ತ್ತು [illegible] " ಎಂಬ [illegible] ಗವು ತಾವು ವಿಧಿ [illegible] ಬರುವ [illegible] ವೇನೂ ಇಲ್ಲವೆಂಬ ತಾತ್ಪರ್ಯವು ಈ ವಿಶ್ವಾರ್ಥವು [illegible] ಪ್ರತೀತಕನಾದುದು ಎಂಬ ವಕ್ಷದಲ್ಲಿ, [illegible] ಏನೊಂದು ನಿರೋಧವೂ ಇಲ್ಲವೆಂ [illegible] ವವು ಇದರಿಂದ [illegible]

ಈ ವಿಶ್ವಾರ್ಥವು ಇದು [illegible] ಆದರೂ ಇನ್ನೊಂದು [illegible] ಗ್ರಾಹ್ಯವೇ ನರಿ ಎಂದು [illegible] " ಪ್ರಪತ್ತಿಕ್ಕಾಹ " ಎಂಬುದರಿಂದ ತಿಳಿಸುತ್ತಾರೆ —

ಯಾವಾಗ ಈ ಎಲ್ಲಾ ಧರ್ಮಗಳ [illegible] ನಿಗೆ ಯೋಗ್ಯತೆ ಇಲ್ಲವೇ ಎಂಬ ಕಾರ್ಪಣ್ಯ [illegible] ಉಂಟಾಯಿತೋ, ಆಗ ಅದರಿಂದ ಸೂಚಿತ ವಾಗಿ ಮಿಕ್ಕ ಯಾವ [illegible] ಈ ಪ್ರಪದನಕ್ಕೆ ಅಂಗವಲ್ಲವೆಂಬ ಭಾವವು ಏರ್ಪಟ್ಟಿತು ಈ ಅರ್ಥ [illegible] ದಿಂದ [illegible] ವಿಶ್ವಾರ್ಥವೂ ಉಚಿತ ವಾಗಿ ಗ್ರಾಹ್ಯವೇ ಎಂದು ತಿಳಿಸುತ್ತಾರೆ — **ಪ್ರಪತ್ತಿಕ್ಕಾಹ** – ಪ್ರಪತ್ತಿಗಾಗಿ,

**ಅಪ್ಪೋದು** 'ಪರಿ'' ಎಂಗಿರ ಉಪಸರ್ಗಮ್ "ಆಚಾಂತೇನಕರ್ತವ್ಯಮ್" "**ಶುಚಿನಾಕರ್ತವ್ಯಮ್**" **ಇತ್ಯಾದಿಗಳಿಲ್ ಚೊಲ್ಲುಗಿರ ಸರ್ವಸಾಧಾರಣ ಯೋಗ್ಯತಾಪಾದಕಙ್ಗಳುಮ್,** ಇದುಕ್ಕು ಅಙ್ಗಮಾಗ ಸ್ವೀಕಾರ್ಯಙ್ಗಳಾಗಾದೆನ್ನು ವಿವಕ್ಷಿಕ್ಕಿರದು-

**ಒರುಧರ್ಮಙ್ಗಳುಮ್** ಯಾವ ಧರ್ಮಗಳನ್ನೂ, **ಅನುಷ್ಠಿಕ್ಕವೇಂಡಾ** – ಅಙ್ಗವಾಗಿ ಅನುಷ್ಠಿಸಬೇಕಾಗಿಲ್ಲವು, **ಎನ್ನು** – ಎಂಬದಾಗಿ, **ಪ್ರಪತ್ತಿಯಿನುಡೈಯ**–ಭರನ್ಯಾಸದ, **ನೈರಪೇಕ್ಷ್ಯತ್ತೈ** – ಸ್ವಂತ ಅಂಗಪಂಚಕಗಳಲ್ಲದೆ ಮಿಕ್ಕ ಯಾವುದರ ಅಪೇಕ್ಷೆಯೂ ಇಲ್ಲವೆಂಬುದನ್ನು, **ಶೊಲ್ಲುಗಿರದೆನ್ಗೈ** – ಹೇಳುತ್ತದೆಂಬ ಭಾವವು, ವಿಧಿಪಕ್ಷತ್ತುಕ್ಕು – ಲೆಪ್ಪಿಗೆ ವಿಧಿಪರವಾಗಿ ಅರ್ಥಮಾಡುವ ಪಕ್ಷಕ್ಕೆ, **ಉಚಿತಮ್** – ಯೋಗ್ಯವಾದ ಅರ್ಥವು, ಉತ್ಕೃಷ್ಟವಾಗಿ ಉಪಾದೇಯವಾದುದು ಎಂಬ ಭಾವವು. ಪ್ರಪದನಕ್ಕೆ ಅದಕ್ಕೆ ಬೇಕಾದ ಐದು ಅಂಗಗಳಲ್ಲದೆ ಇನ್ನು ಯಾವುದೂ ಬೇಕಾಗಿಲ್ಲವೆಂಬ ಸಾರವಾದ ಭಾವವು ಈ ಲೆಪ್ಪಿನ ವಿಧ್ಯರ್ಥದಿಂದ ತೋರಿ ಬರುವದರಿಂದ ಈ ವಿಧ್ಯರ್ಥವೂ ಉಪಾದೇಯವೇ ಎಂದು ಹೇಳಿದರು. ಈ ಅಭಿಪ್ರಾಯವು ಹಿಂದೆ ಪರಿಕರ ವಿಭಾಗಾಧಿಕಾರದಲ್ಲಿ ವ್ಯಕ್ತವು ೧೧೦ನೆಯ ಪುಟವನ್ನು ನೋಡಿ "**ನಜಾತಿ ಭೇದಂ ನಕುಲಂ ನ ಲಿಂಗಂ ನ ಗುಣಕ್ರಿಯಾಃ । ನ ದೇಶಕಾಲೌ ನಾವಸ್ಥಾಂ ಯೋಗೋಹ್ಯಯಮಪೇಕ್ಷತೇ**" ಎಂಬ ಮತ್ತು "**ಶಕ್ಯೋಭಿರೇವ ಪ್ರಸನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ**" ಎಂಬ ಪ್ರಮಾಣಗಳು ಇಲ್ಲಿ ಅನುಸಂಧೇಯಗಳು

ಹೀಗೆ ಪರಿತ್ಯಜ್ಯ ಎಂಬಲ್ಲಿರುವ ಲೆಪ್ಪು, ವಿಧಿಪರವಾದಾಗ ಪರಿ ಎಂಬ ಉಪಸರ್ಗದಿಂದ ತೋರಿ ಬರುವ ಅರ್ಥವೇನು? ಎಂದರೆ ಉಪದೇಶಿಸುತ್ತಾರೆ, – ಐದು ಅಂಗಗಳಲ್ಲದೆ, ಇನ್ನು ಯಾವುದನ್ನೂ ಸುತರಾಂ ಅಙ್ಗವಾಗಿ ಭಾವಿಸಬೇಡ ಎಂಬ ಭಾವವನ್ನು ವ್ಯಕ್ತಪಡಿಸುತ್ತದೆಂದು ಹೇಳುತ್ತಾರೆ —

**ಅಪ್ಪೋದು** – ಲೆಪ್ಪಿಗೆ ವಿಧ್ಯರ್ಥವನ್ನು ಹೇಳಿದ ಪಕ್ಷದಲ್ಲಿ. **ಪರಿ** ಎಂಬ ಉಪಸರ್ಗವು. "**ಆಚಾಂತೇನ ಕರ್ತವ್ಯಂ**'' – ಆಚಮನ ಮಾಡಿದವನಿಂದ ಮಾಡತಕ್ಕದ್ದು ಎಂದರೆ ಆಚಮನಪೂರ್ವಕವಾಗಿಯೇ ಸಕಲ ಕರ್ಮವನ್ನೂ ಮಾಡತಕ್ಕದ್ದು, **ಶುಚಿನಾಕರ್ತವ್ಯಮ್** – ಸ್ನಾನ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನನುಷ್ಠಿಸಿದವನಿಂದ ಮಾಡತಕ್ಕದ್ದು'', **ಇತ್ಯಾದಿಗಳಿಲ್**–ಇವೇ ಮೊದಲಾದ ವಿಧಿರೂಪ ಪ್ರಮಾಣಗಳಲ್ಲಿ, **ಚೊಲ್ಲುಗಿರ** – ಹೇಳುವ, ಸರ್ವ**ಸಾಧಾರಣ ಯೋಗ್ಯತಾ**

## ಸ್ವರೂಪತ್ಯಾಗವಾದನಿರಸನಮ್.

**ಇಜ್ಜನನ್ರಿಕ್ಕೇ ಕರ್ಮಯೋಗಮ್, ಜ್ಞಾನಯೋಗಮ್, ಭಕ್ತಿಯೋಗಮ್, ಎಜ್ಗಿರ ಧರ್ಮಜ್ಗಳೈನುಡೈಯ ಸ್ವರೂಪತ್ಯಾಗಮ್ ಪ್ರಪತ್ತಿಕ್ಕು**

---

**ಪಾದಕಜ್ಗಳೈಯುಮ್** – ಸಮಸ್ತ ಕರ್ಮಗಳಿಗೂ ಸಾಧಾರಣವಾಗಿ ಯೋಗ್ಯತೆಯನ್ನುಂಟುಮಾಡುವ ಸ್ನಾನಸಂಧ್ಯಾವಂದನ, ಆಚಮನ ಪ್ರಾಣಾಯಾಮಾದಿಗಳೂ, **ಇಪ್ಪುಕ್ಕು** – ಈ ಪ್ರಪತ್ತಿಗೆ, **ಅಜ್ಗಮಾಹ ಸ್ವೀಕಾರ್ಯಜ್ಗಳಾಕಾದೆನ್ರು** – ಅಂಗವಾಗಿ ಅಂಗೀಕರಿಸತಕ್ಕದ್ದಲ್ಲವೆಂಬುದನ್ನು, **ವಿವಕ್ಷಿಕ್ಕಿರದು** – ವ್ಯಕ್ತಪಡಿಸುತ್ತದೆ. ತ್ಯಾಗಕ್ಕೆ ವಿಧಿಯಾದ ನಂತರ ಉಪಾಯಾನ್ತರದಲ್ಲಿ ಅಶಕ್ತತೆಯು ಏರ್ಪಟ್ಟು ಅದನ್ನು ತ್ಯಾಗಮಾಡಿರುವುದರಿಂದ ಕಾರ್ಪಣ್ಯಾಂಗವು **ತೋರಿಬಂದರೆ**, ಆಗ ಪರಿತ್ಯಜ್ಯ ಎಂಬುದಕ್ಕೆ ಅರ್ಥವೇನೆಂದರೆ ಸಾಧಾರಣವಾಗಿ ಎಲ್ಲಾ ಕರ್ಮಗಳಿಗೂ **ಬೇಕಾದ** ಸ್ನಾನ ಸಂಧ್ಯಾವಂದನ, ಆಚಮನ ಪ್ರಾಣಾಯಾಮ ಇವೇ **ಮೊದಲಾದವು**ಗಳನ್ನು ಕೂಡ ಅಂಗತ್ವೇನ ಭಾವಿಸದೆ ಸಂಪೂರ್ಣವಾಗಿ ತ್ಯಾಗಮಾಡು ಎಂಬರ್ಥವನ್ನು ಬೋಧಿಸುತ್ತವೆಂಬುದು ಹೀಗೆ ಹೇಳಿದುದರಿಂದ ಸ್ನಾನ ಸಂಧ್ಯಾವಂದನ ಆಚಮನಾದಿಗಳು ಯಾವುವೂ ಪ್ರಪದನಾನುಷ್ಠಾನದ ದಿವಸ ಬೇಕಿಲ್ಲವೆಂಬ ಅರ್ಥವಲ್ಲವು ಬೇರೇ ಸ್ವತಂತ್ರ ವಿಧಿಗಳಿಂದ ಆವಶ್ಯಕವೇ. ಆದರೆ ಆದಿನ ಅವುಗಳನ್ನು ಅನುಷ್ಠಿಸಿದರೂ ಪ್ರಪದನಕ್ಕೆ ಅವು ಅಂಗವೆಂದು ಭಾವಿಸತಕ್ಕದ್ದಲ್ಲವೆಂಬ ಭಾವವು

ಆಗಲಿ, ಶ್ರೀವಚನಭೂಷಣಕಾರರ ಅಭಿಪ್ರಾಯಕ್ಕೂ ಇಲ್ಲಿ **ಉಪಪಾದಿಸಲ್ಪಟ್ಟ** ಅಭಿಪ್ರಾಯಕ್ಕೂ ಏನೊಂದು ವ್ಯತ್ಯಾಸವೂ ತೋರಿಬರಲಿಲ್ಲವಲ್ಲಾ. ಅವರುಗಳು ವಿಶ್ವರ್ಥದಿಂದ ಆ ಕರ್ಮಯೋಗ, ಜ್ಞಾನಯೋಗಾದಿ ಪರಿಕರಗಳ ಮತ್ತು **ಭಕ್ತಿ**ಯೋಗದ ಸ್ವರೂಪತ್ಯಾಗವನ್ನು ಹೇಳಿ ಅವುಗಳನ್ನು ಅನುಷ್ಠಿಸುವ ಆವಶ್ಯಕತೆ ಇಲ್ಲವೆಂದು ಹೇಳಿದರು. ಇಲ್ಲಿಯೂ ಅವುಗಳ ಸ್ವತ್ಯಾಗವೇ ಹೇಳಲ್ಪಟ್ಟಿರುತ್ತದೆ. ಅದರ ಅಶಕ್ತತೆಯಿಂದ ಕಾರ್ಪಣ್ಯಮೂಲಕ ತ್ಯಾಗವು ಅಂತೂ ಎರಡು ಸಂದರ್ಭದಲ್ಲೂ ಅನುಷ್ಠಾನದ ಅಭಾವವೇ ಇರುತ್ತದೆ ಹೀಗಾದ ನಂತರ ಅವರುಗಳ ಅಭಿಪ್ರಾಯವು ಹೇಗೆ ಸರಿಯಲ್ಲವು? ಎಂದು ಪ್ರಶ್ನಿಸಿದರೆ ಉತ್ತರವನ್ನು ಹೇಳುತ್ತಾರೆ.

**ಧರ್ಮಸ್ವರೂಪತ್ಯಾಗವಾದದ ನಿರಸನವು** ಹೇಳಲ್ಪಡುತ್ತದೆ.

**ಇಜ್ಜನನಿ ನ್ನೈ** – ಹೀಗೆ ಪರಿತ್ಯಜ್ಯ ಶಬ್ದದ ಲಿಪ್ಸಿಗೆ ವಿಧ್ಯರ್ಥವನ್ನು ಈಗ ಉಪಪಾದಿಸಿದ ರೀತಿಯಲ್ಲಿ ಹೇಳದೆ, **ಕರ್ಮಯೋಗಂ ಜ್ಞಾನಯೋಗಮ್ ಭಕ್ತಿಯೋಗಂ, ಎಜ್ಗಿರಧರ್ಮಜ್ಗಳೈನುಡೈಯ ತ್ಯಾಗಮ್** – ಎನ್ನುವ ಅನು

**ಅಙ್ಗಮ್ ಎನ್ನುಮ್ಪಕ್ಷತ್ತಿಲ್, ಪ್ರಪತ್ತಿ ಸರ್ವಾಧಿಕಾರಮನ್ರಿಕ್ಕೇ ಯೊಳಿಯುಮ್; ಧರ್ಮಾನುಷ್ಠಾನ ಶಕ್ತನುಕ್ಕಿರೇ ಅವತ್ತಿನುಡೈಯ ತ್ಯಾಗತ್ತೈ ವಿಧಿಕ್ಕವೇಣ್ಡುವದು? ಇದು ಬಹುಪ್ರಮಾಣ ಸಿದ್ಧಮಾನ ಕಾರ್ಪಣ್ಯಮಾಗಿರ**

---

ಷ್ಠಾನಗಳನ್ನು ಸ್ವರೂಪತಃ ತ್ಯಾಗವಮಾಡೋಣವು, **ಪ್ರಪತ್ತಿಕ್ಕು ಅಙ್ಗಮ್ ಎನ್ನುಮ್ಪಕ್ಷತ್ತಿಲ್** – ಪ್ರಪದನಕ್ಕೆ ಅಙ್ಗವು ಎಂದು ಹೇಳಿದ ಪಕ್ಷದಲ್ಲಿ, **ಪ್ರಪತ್ತಿ**– ಪ್ರಪತ್ತಿಯು, **ಸರ್ವಾಧಿಕಾರಮನ್ರಿಕ್ಕೇ ಯೊಳಿಯುಮ್** – ಸ್ತ್ರೀ ಶೂದ್ರಾದಿ ಸಮಸ್ತರಿಗೂ ಅಧಿಕಾರವುಳ್ಳದಲ್ಲವೆಂದಾಗುತ್ತದೆ ಅದು ಹೇಗೆ ಎಂಬುದನ್ನು ಉಪಪಾದಿಸುತ್ತಾರೆ.—ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳ ಸಂಪೂರ್ಣವಾಗಿ ಸ್ವರೂಪತಃ ತ್ಯಾಗವು ಅಂಗವಾಗಿ ವಿಧಿಸಿತು ಎಂದು ಒಪ್ಪಿದರೆ, ಆ ಕರ್ಮಯೋಗಾದಿಗಳಿಗೆ ಅಧಿಕಾರಿಗಳಾಗಿರಬೇಕು, ಅಂತವರು ಅವುಗಳನ್ನು ಸ್ವರೂಪತಃ ತ್ಯಾಗವಮಾಡಬೇಕು , ಆಗ ಅಂತಹ ಪರಿತ್ಯಾಗವು ಅಂಗವೆಂದರೆ, ಕರ್ಮಯೋಗಾದಿಗಳಲ್ಲಿ ಅಧಿಕಾರವಿರುವವರು ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಇವರುಗಳಿಗೆ ಮಾತ್ರವೇ ಪ್ರಪದನದಲ್ಲಿ ಅಧಿಕಾರವು , ಕರ್ಮಯೋಗಾದಿಗಳಿಗೆ ಅನಧಿಕಾರಿಗಳಾದ ಸ್ತ್ರೀಶೂದ್ರಾದಿಗಳಿಗೆ ಪ್ರಪದನದಲ್ಲಿ ಅಧಿಕಾರವಿಲ್ಲವೆಂದಾಗುವದರಿಂದ ಸ್ವರೂಪತ್ಯಾಗಾಭಿಪ್ರಾಯವು ಶಾಸ್ತ್ರವಿರುದ್ಧವಾಗಿ ಅಪಾರ್ಥವಾಗುತ್ತದೆಂದು ಹೇಳುತ್ತಾರೆ. —**ಧರ್ಮಾನುಷ್ಠಾನ ಶಕ್ತನುಕ್ಕಿರೇ** - ಕರ್ಮಯೋಗಾಧಿಗಳನ್ನು ಅನುಷ್ಠಿಸುವ ಯೋಗ್ಯತೆ ಇರುವ ಅಧಿಕಾರಿಗಲ್ಲವೇ, **ಅವತ್ತಿನುಡೈಯ** – ಆ ಕರ್ಮಯೋದಿಗಳ, **ತ್ಯಾಗತ್ತೈ** – ಪರಿತ್ಯಾಗವನ್ನು, **ವಿಧಿಕ್ಕವೇಣ್ಡುವದು** – ಅಂಗವಾಗಿ ವಿಧಿಸಬೇಕಾದುದು ? ಹೀಗೆ ಪ್ರಾಪ್ತವಾಗುವದರಿಂದ ಈ ಧರ್ಮಗಳ ಸ್ವರೂಪತ್ಯಾಗವು ಪ್ರಪದನಕ್ಕೆ ಅಂಗವಾಗಿ ವಿಧಿಸಲ್ಪಟ್ಟಿತೆಂಬ ಅಭಿಪ್ರಾಯವು ಶಾಸ್ತ್ರವಿರುದ್ಧವಾದುದೆಂಬ ಭಾವವು. ಇದರಿಂದ ಪ್ರಪದನಕ್ಕೆ ಸರ್ವಾಧಿಕಾರತ್ವವಿಲ್ಲವೆಂದಾಗುತ್ತದೆಯಾದುದರಿಂದ ಅನೇಕ ಪ್ರಮಾಣಗಳಿಗೆ ವಿರುದ್ಧವೆಂಬ ಭಾವವು. ಮುಂದೆ ಆಳ್ವಾರ್ ಆಚಾರ್ಯರುಗಳ ನಾಲ್ಕು ದಿವ್ಯಸೂಕ್ತಿಗೂ ಸಂಪ್ರದಾಯಕ್ಕೂ ವಿರುದ್ಧವಾದ ಭಾವವಾಗುತ್ತದೆಂದು ಹೇಳುತ್ತಾರೆ. ಪ್ರಪದನಕ್ಕೆ ಕಾರ್ಪಣ್ಯ ಅಥವಾ ಅಕಿಂಚನತ್ವವೂ ಒಂದು ಮುಖ್ಯವಾದ ಅಂಗವು , ಈ ನಾಲ್ಕು ಪ್ರಮಾಣಗಳೂ ಅದನ್ನೇ ಬೋಧಿಸುತ್ತವೆ ಅಂತಹ ಅಂಗವೇ ಇಲ್ಲದುದರಿಂದ ಸ್ವರೂಪತ್ಯಾಗವಿಧಿಯ ವಾದವು ಸರಿಯಾದುದಲ್ಲವೆಂದು ತಿಳಿಸುತ್ತಾರೆ.-- **ಇದು** – ಈ ಕರ್ಮಯೋಗಾದಿ ಧರ್ಮಗಳ ಸ್ವರೂಪತ್ಯಾಗವು ಪ್ರಪದನಕ್ಕೆ ಅಂಗವೆಂದು ವಿಧಿಸಲ್ಪಟ್ಟಿರುತ್ತದೆಂಬ ವಾದವು, **ಬಹುಪ್ರಮಾಣ ಸಿದ್ಧಮಾನ** – ಅನೇಕ ಪ್ರಮಾಣಗಳಾದ

**ಅಙ್ಗತ್ತುಕ್ಕುಮ್ (೧) " ಪುಗುಲೊನ್ರಿಲ್ಲಾವಡಿಯೇಽ " (೨) " ಕುಲಙ್ಗಳಾಯ " (೩) " ಕುಳಿತ್ತುಮೂನ್ರು " (೪) " ನ ಧರ್ಮ ನಿಷ್ಠೋಽಸ್ಮಿ " ಇತ್ಯಾದಿಗಳಿಲೇ ಪ್ರಸಿದ್ಧಮಾನವಕಿಂಚನಾಧಿಕಾರಮೆಂಗಿರ ಸಂಪ್ರದಾಯತ್ತುಕ್ಕುಮ್ ವಿರುದ್ಧಮಾಮ್.**

ಲಕ್ಷ್ಮೀತಂತ್ರ, ಶಾಂಡಿಲ್ಯ ಸ್ಮೃತಿ ಮೊದಲಾದವುಗಳಿಂದ ಸ್ಥಾಪಿತವಾದ, **ಕಾರ್ಪಣ್ಯಮಾಗಿರ ಅಂಗತ್ತುಕ್ಕುಮ್** – ಕಾರ್ಪಣ್ಯವು ಪ್ರಪದನಕ್ಕೆ ಮುಖ್ಯ ಅಂಗವೆಂಬುದಕ್ಕೂ, ಮುಂದೆ ಆಳ್ವಾರಾಚಾರ್ಯರುಗಳ ಪ್ರಮಾಣಗಳಲ್ಲಿ, **ಪ್ರಸಿದ್ಧಮಾನ** – ಪ್ರಸಿದ್ಧವಾಗಿ ತೋರಿಬರುವ, **ಅಕಿಂಚನಾಧಿಕಾರ ಮೆಙ್ಗಿರ ಸಂಪ್ರದಾಯತ್ತುಕ್ಕುಮ್** – ತನಗೆ ಕರ್ಮಯೋಗಾದಿಗಳಿಂದ ಕೂಡಿದ ಭಕ್ತಿಯೋಗಕ್ಕೆ ತನಗೆ ಅಶಕ್ತತೆಯಿಂದಲಾಗಲಿ, **ಅಧಿಕಾರವಿಲ್ಲದುದರಿಂದಲಾಗಲಿ ಪ್ರಾಪ್ತವಾದ ಆಕಿಂಚ**ನ್ಯವು ಪ್ರಪದನಕ್ಕೆ ಆವಶ್ಯಕವೆಂಬ ಸಂಪ್ರದಾಯಕ್ಕೂ, ಎಂದರೆ **ಸಂಪ್ರದಾಯತ್ತುಕ್ಕುಂ ವಿರುದ್ಧಮಾಮ್** – ವಿರುದ್ಧವಾದುದಾಗುತ್ತದೆ. **ಮೇಲೆ ಮೂಲದಲ್ಲಿ** ಹೇಳಿರುವ ನಾಲ್ಕು ಪ್ರಮಾಣಗಳಲ್ಲೂ ಆಕಿಂಚನ್ಯವು ಉಪಪಾದಿತವು. (೧) " **ಪುಗುಲೊನ್ರಿಲ್ಲಾವಡಿಯೇಽ** " – ಇದು **ಅಗುಗಿಲ್ಲೇಽ** ಎಂಬ ಪಾತುರದಲ್ಲಿ ಬರುತ್ತದೆ ಇದು ಹಿಂದೆಯೇ ಅನೇಕ ಸಲ ಉಪಪಾದಿತವು, ದ್ವಯಾಧಿಕಾರದ ಘಟವನ್ನು ನೋಡಿ, **ಪುಗುಲೊನ್ರಿಲ್ಲಾ** ಎಂದರೆ ನನಗೆ ನೀನಲ್ಲದೆ ಬೇರೆ ಉಪಾಯಾನ್ತರಗಳಲ್ಲಿ ಶಕ್ತಿಯು ಇಲ್ಲವು ಎಂಬುದರಿಂದ ಕಾರ್ಪಣ್ಯರೂಪ ಅನನ್ಯಗತಿತ್ವವು, **ಅಡಿಯೇಽ** ಎಂಬುದರಿಂದ ಅನನ್ಯಾರ್ಹಶೇಷತ್ವವೂ ಇಲ್ಲಿ ಹೇಳಲ್ಪಟ್ಟವು (೨) **ಕುಲಙ್ಗಳಾಯ್** – ಇದೂ ಹಿಂದೆಯೇ ಎರಡು ಸಲ ಉದಾಹೃತವು ಈ ಸಾರಸಾರಾರ್ಥಕ್ಕೆ ಉತ್ತರ ಕೃತ್ಯಾಧಿಕಾರದ ೧೨೭ನೆಯ ಪುಟವನ್ನು ನೋಡಿ ಉತ್ತಮಕುಲದಲ್ಲಿ ಜನ್ಮವಿಲ್ಲದಿರುವದೇನು, ಪಂಚೇಂದ್ರಿಯಗಳ ಹಾವಳಿಗೆ ಸಿಕ್ಕಿರುವದೇನು, ವೇದಗಳನ್ನೂ ವೇದಾರ್ಥಗಳನ್ನೂ ಗ್ರಹಿಸಲು ಶಕ್ತಿಯಿಲ್ಲದಿರುವದೇನು, ಹೀಗಿರುವದರಿಂದ **ಇಲಙ್ಗುಪಾದಮನ್ರಿಮತ್ತೋರು ಪತ್ತಿಲೇಽ** – ನಿನ್ನ ಪಾದವನ್ನು ನಂಬಿರುವದೊಂದಲ್ಲದೆ ಬೇರೆ ಉಪಾಯದಲ್ಲಿ ತನಗೆ ಅಧಿಕಾರವೂ ಶಕ್ತಿಯೂ ಇಲ್ಲವು. ಆದುದರಿಂದ ಇಲ್ಲೂ ಅನನ್ಯಗತಿತ್ವರೂಪಕಾರ್ಪಣ್ಯವು ಪ್ರದರ್ಶಿತವು. (೩) **ಕುಳಿತ್ತುಮೂನ್ರನಲ್ಲೆ** – ಇದೂ ಹಿಂದೆಯೇ ಎರಡು ಸಲ ಉದಾಹೃತವು ಉತ್ತರ ಕೃತ್ಯಾಧಿಕಾರದ ೧೨೯ನೆಯ

(೧) ತಿರು ೬. ೧೦. ೧೦ (೨) ತಿರುಚ್ಚಂದವಿರುತ್ತಂ ೯೦. (೩) ತಿರುಮಾಲೈ ೨೫. (೪) ಆಳ. ೨೨.

**ಸ್ವರೂಪತ್ಯಾಗ ವಿಧಿವಾದೇನ ಸರ್ವಶಾಸ್ತ್ರ ಸ್ವವಚನ ಸ್ವಪ್ರವೃತ್ತಿ ವಿರೋಧರೂಪ ಬಾಧಾಭಾವಃ.**

**ಈಶ್ವರಸ್ವೈಪ್ಸಿತ್ತ ಅತ್ಯಸ್ತ ಪರತಂತ್ರತ್ವೈಯಾಲ್ ಉಪಾಯಾಂತರಾಂಗಳುಕ್ಕು**

ಪುಟವನ್ನು ನೋಡಿ. ಇಲ್ಲಿಯೂ ಕಾರ್ಪಣ್ಯವೇ ಉಪಪಾದಿತವು. (೪) **ನಧರ್ಮ ನಿಷ್ಠೋಽಸ್ಮಿ** – ಇದೂ ಹಿಂದೆಯೇ ಉದಾಹೃತವು ಉತ್ತರಕೃತ್ಯಾಧಿಕಾರದ ೧೨೭೮ ನೆಯ ಪುಟವನ್ನೂ, ಗತ್ಯಾಧಿಕಾರದ ... ನೆಯ ಪುಟವನ್ನೂ ನೋಡಿ. ಉಪಾಯಾಂತರದಲ್ಲಿ ತದಂಗಗಳನ್ನು ಅನುಷ್ಠಿಸಲು ತಮಗೆ ಶಕ್ತಿಯಿಲ್ಲದುದ ರಿಂದಲೇ **ಅಕಿಂಚನೋಽನನ್ಯಗತಿಃ** ಎಂದು ಶ್ರೀ ಆಳವಂದಾರ್ರು ಹೇಳಿಕೊಂ ಡಿರುತ್ತಾರೆ

ಆದುದರಿಂದ ಉಪಾಯಾಂತರದ ಸ್ವರೂಪತ್ಯಾಗವು ಪ್ರಪದನಕ್ಕೆ ಅಂಗ ವಾಗಿಯೇ ಇಲ್ಲಿ **ಪರಿತ್ಯಜ್ಯ** ಎಂಬಲ್ಲಿ ವಿಧಿಸಲ್ಪಟ್ಟಿದೆ ಎಂದರೆ ಪ್ರಪದನಕ್ಕೆ ಮುಖ್ಯಾಂಗವಾದ ಕಾರ್ಪಣ್ಯವೇ ಇಲ್ಲವಾಗಿ ಆಳ್ವಾರಾಚಾರ್ಯರುಗಳ ಸೂಕ್ತಿ ಸಂಪ್ರ ದಾಯಗಳಿಗೂ ವಿರುದ್ಧವಾಗುತ್ತವೆಂದು ಹೇಳಲ್ಪಟ್ಟಿತು ಶ್ರೀಭಗವದ್ಗೀತೆ ಯಲ್ಲಾದರೋ ಈ ಚರಮಶ್ಲೋಕದ ಮೂಲಕ ಅರ್ಜುನನಿಗೆ ಕರ್ಮಯೋಗ, ಜ್ಞಾನಯೋಗ ಭಕ್ತಿಯೋಗಗಳ ಉಪದೇಶದಿಂದ ಅವುಗಳ ಅನುಷ್ಠಾನವು ದುಷ್ಕ ರವೇ, ತನಗೆ ಅನುಷ್ಠಿಸಲು ಶಕ್ತಿಯಿಲ್ಲವೇ ಎಂದೇ ಶೋಕಾಕುಲನಾಗಿದ್ದುದ ರಿಂದಲೇ ಭಕ್ತಿಯೋಗೋಪದೇಶಾನಂತರವೂ "**ನಷ್ಟೋ ಮೋಹಸ್ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ । ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ**" (ಶ್ರೀ. ... ...) ಎಂದು ಹೇಳದೆ, ಚರಮಶ್ಲೋಕವನ್ನು ಹೇಳಿ "**ಮಾಶುಚಃ**" ಎಂದು ಶ್ರೀಕೃಷ್ಣಭಗವಾನರವರು ಹೇಳಿದ ನಂತರ, ಮೇಲೆ ಹೇಳಿದ ಹಾಗೆ **ನೋಽಹಮೋಹಃ** ಎಂದು ತಿಳಿಸಿರುವದರಿಂದ ಅರ್ಜುನನೂ ಕೂಡ, ಕರ್ಮಯೋಗಾದಿಗಳ ಅನುಷ್ಠಾನವು ಬಹು ದುಷ್ಕರವಾಗಿ ತೋರಿ, ಕಾರ್ಪಣ್ಯಯುಕ್ತನಾಗಿಯೂ ತನ್ಮೂಲಕ ಶೋಕಯುಕ್ತನಾಗಿಯೂ ಇದ್ದನೆಂಬುದು ವ್ಯಕ್ತವೆಂದು ಭಾವಿಸಬಹುದು

ಈ ಅಭಿಪ್ರಾಯವನ್ನು ಸಾರಪ್ರಕಾಶಿಕೆಯವರು ಸೂಚಿಸಿರುತ್ತಾರೆ

**ಈ ಮೇಲಿನಸ್ವರೂಪತ್ಯಾಗನಿಧಿ ವಾದದಿಂದ, ಸರ್ವಶಾಸ್ತ್ರ ಸ್ವವಚನ ಸ್ವಪ್ರವೃತ್ತಿ ವಿರೋಧ ಬಾಧಕಗಳುಂಟಾಗುತ್ತವೆಂದೂ ಹೇಳುತ್ತಾರೆ.**

ಆಗಲಿ, ಜೀವಾತ್ಮನಿಗೆ ಸ್ವಂತತ್ರ ಕರ್ತೃತ್ವವೇ ಇಲ್ಲವು, ಪರಮಾತ್ಮನಿಗೆ ಅಧೀನವಾಗಿಯೇ ಸಮಸ್ತಕರ್ತೃತ್ವವೂ ಇರುವದು. ಹೀಗಿರುವದರಿಂದ ಬಹಳ ಕಷ್ಟಸಾಧ್ಯವಾದ ಕರ್ಮಯೋಗಾದಿಗಳಿಂದ ಕೂಡಿದ ಉಪಾಯಾಂತರದಲ್ಲಿ ಈತನಿಗೆ

**ಕ್ಷೇತ್ರಜ್ಞರ್ ನಿತ್ಯಶಕ್ತನೆನ್ರು ಕಾಟ್ಟಿ ಇವನುಕ್ಕವತ್ತಿನುಡೈಯತ್ಯಾಗತ್ತೈ ವಿಧಿಕ್ಕಿರದೆನ್ರುಮದು ಸರ್ವಶಾಸ್ತ್ರ ಸ್ವವಚನ ಸ್ವಪ್ರವೃತ್ತ್ಯಾದಿ ವಿರೋಧತ್ತಾಲೇ ಅತ್ಯನ್ತ ಪರಿಹಾಸ್ಯಮ್. ಅಪ್ಪೋದುಶುಲ್ಯನ್ಯಾಯತ್ತೈಯಾಲೇ "ವ್ರಜ" ಎನ್ಗೈಕ್ಕಿನುಮ್ ಘಟಿಯಾದು.**

ಕರ್ತೃತ್ವವೇ ಇಲ್ಲವು, ಆದುದರಿಂದ ಆ ಧರ್ಮಗಳ ಸ್ವರೂಪತ್ಯಾಗವೇ ಇಲ್ಲಿ ಪರಿತ್ಯಜ್ಯವೆಂಬಲ್ಲಿ ಅಂಗರೂಪದಲ್ಲಿ ವಿಧಿಸಲ್ಪಟ್ಟಿತೆಂದು ಭಾವಿಸಲು ಅಡ್ಡಿ ಏನು? ಎಂದು ಪೂರ್ವಪಕ್ಷವನ್ನು ತಂದರೆ, ಇಂತಹ ವಾದವು, ಸರ್ವಶಾಸ್ತ್ರಕ್ಕೂ, ಹೀಗೆ ಅನ್ವಯಿಸುವವರ ಉಕ್ತಿಗಳಿಗೆ ಪರಸ್ಪರ ವಿರೋಧವೂ, ಅಂತವನು ನಿತ್ಯವೂ ಅನುಷ್ಠಿಸಬೇಕಾದ ನಿತ್ಯನೈಮಿತ್ತಿಕಾದಿ ಪ್ರವೃತ್ತಿಗಳಿಗೆ ವಿರೋಧ ಉಂಟಾಗುತ್ತದೆಂದು '**ಈಶ್ವರನ್ಪೈಪತ್ತ**' ಎಂದಾರಂಭಿಸಿದ ವಾಕ್ಯದ ಮೂಲಕ ಉಪಪಾದಿಸುತ್ತಾರೆ ಮೊದಲು ಪೂರ್ವಪಕ್ಷವನ್ನು ಹೇಳಿ ಅದರಿಂದುಂಟಾಗುವ **ಬಾಧಕ**ಗಳನ್ನು ತಿಳಿಸುತ್ತಾರೆ--- **ಈಶ್ವರನ್ಪೈಪ್ಪತ್ತ** - ಈಶ್ವರನನ್ನು ಕುರಿತು, **ಪಾರತಂತ್ರನಾಗೈಯಾಲೇ** – ಪರತಂತ್ರನಾದುದರಿಂದ, **ಉಪಾಯಾನ್ತರಙ್ಗಳುಕ್ಕು** – ಬೇರೆ ಉಪಾಯವನ್ನೂ, ಅದಕ್ಕೆ ಸೇರಿದ ಅಂಗಗಳನ್ನೂ ಸೇರಿಸಿ ಬಹುವಚನವು, ಪ್ರಪತ್ತಿಯಲ್ಲದೆ ಅನೇಕ ಉಪಾಯಗಳಿವೆ ಎಂಬ ಭ್ರಮೆಯು ಕೂಡದು, ಕರ್ಮಯೋಗ, ಜ್ಞಾನಯೋಗ ಸಾಧ್ಯ ಭಕ್ತಿಯೋಗ, ಹೀಗೆ ಇವುಗಳಲ್ಲಕ್ಕೂ, **ಕ್ಷೇತ್ರಜ್ಞರ್** - ಈ ಶರೀರವೆಂಬ ಕ್ಷೇತ್ರದಲ್ಲಿದ್ದುಕೊಂಡು, ಅದಕ್ಕಿಂತ ತಾನು ಬೇರೆಯಾದವನೆಂದು ತಿಳಿದವನು ಎಂಬರ್ಥವು, ಈ ಮನುಷ್ಯನು, **ನಿತ್ಯಶಕ್ತನೆನ್ರುಕಾಟ್ಟಿ**–ಯಾವಾಗಲೂ ಅಶಕ್ತನೆಂದು, **ಕಾಟ್ಟಿ** – ತೋರ್ಪಡಿಸಿ, **ಇವನುಕ್ಕು** - ಈ ಕ್ಷೇತ್ರಜ್ಞನಿಗೆ, **ಅವತ್ತಿನುಡೈಯ** – ಈ ಕರ್ಮಯೋಗಾದಿಗಳ, **ತ್ಯಾಗತ್ತೈ** - ಸ್ವರೂಪತಃ ತ್ಯಾಗವನ್ನು, **ವಿಧಿಕ್ಕಿರದೆನ್ರುಮದು** – ವಿಧಿಸುತ್ತದೆಂದು ಹೇಳುವದು, ಇದೇ ಪೂರ್ವಪಕ್ಷವು, ಅದರಿಂದುಂಟಾಗುವ ಬಾಧಕಗಳನ್ನು ತಿಳಸುತ್ತಾರೆ.—(೧) **ಸರ್ವಶಾಸ್ತ್ರ** – ಉತ್ತರ ಕೃತ್ಯಾದಿಗಳನ್ನು ವಿಧಿಸುವ ಸರ್ವಶಾಸ್ತ್ರಕ್ಕೂ (೨) **ಸ್ವವಚನ** – ತಮ್ಮ ಉಕ್ತಿಗೇನೇ (೩) **ಸ್ವಪ್ರವೃತ್ತ್ಯಾದಿ** – ತಾವು ಈಗ ಅನುಷ್ಠಿಸುತ್ತಿರುವದೇ ಮೊದಲಾದುದಕ್ಕೂ, ಆದಿಶಬ್ದದಿಂದ ಶಿಷ್ಯರುಗಳ ಅನುಷ್ಠಾನಕ್ಕೂ, **ವಿರೋಧತ್ತಾಲೇ** - ವಿರೋಧ ಉಂಟಾಗುವದರಿಂದ, **ಅತ್ಯನ್ತಪರಿಹಾಸ್ಯಮ್** – ತುಂಬಾ ಹಾಸ್ಯಾಸ್ಪದವಾಗುತ್ತದೆ.— ಪೂರ್ವಪಕ್ಷಾಭಿಪ್ರಾಯವೇನೆಂದ, **ಈ ಚೇತನನಿಗೆ** ಶಾಸ್ತ್ರದಲ್ಲಿ ಕರ್ತೃತ್ವವು ಹೇಳಲ್ಪಟ್ಟಿದ್ದರೂ, ಅದು ಪರಮಾತ್ಮನಿಗೆ ಅಧೀನವಾದುದೆಂದು **ಪರಾತ್ತು ತಚ್ಛ್ರುತೇಃ** (೨. ೩. ೪೦) ಎಂಬ ವ್ಯಾಸಸೂತ್ರದಲ್ಲಿ ಹೇಳಲ್ಪಟ್ಟಿರುತ್ತದೆ. ಹೀಗೆಯೇ ಗೀತಾ

ಚಾರ್ಯರಿಂದ "**ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿಸರ್ವಶಃ । ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ**" ಪ್ರಕೃತಿಯಿಂದಾಗು ನ್ನೆಲ್ಲಾ ಮೂಢಾತ್ಮನು ತಾನು ಸ್ವತಂತ್ರಿಸಿ ಮಾಡಿದೆನೆಂದು ತಿಳಿಯುವನೆಂ ನಿಂದಿಸಲ್ಪಟ್ಟಿರುತ್ತಾನೆ ಹಾಗೆಯೇ ಇನ್ನೊಂದು ಕಡೆಯಲ್ಲಿ "**ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿಮಾಯಯಾ**" ಶರೀರಗಳೆಂಬ ಯನ್ತ್ರ ಮೂಲಕ ಸರ್ವೇಶ್ವರನಾದ, ನಾನೇ ಎಲ್ಲಾ ಪ್ರಾಣಿಗಳನ್ನೂ ನುತ್ತಿಸುತ್ತೇನೆಂ ಹೇಳಿಕೊಂಡಿರುವದರಿಂದ ಎಲ್ಲಾ ಮನುಷ್ಯರೂ ಪರತನ್ತ್ರರಾದುದರಿಂದ ಆ ಸಾಧ್ಯವಾದ ಕರ್ಮಯೋಗ ಜ್ಞಾನಯೋಗಗಳಿಂದ ಅನುಗ್ರಹೀತನಾದ ಯೋಗವನ್ನು ಅನುಷ್ಠಿಸಲು ಪರಾಧೀನರು ಆದುದರಿಂದ ಅಂತಹ ಎ ಧರ್ಮಗಳ ಸ್ವರೂಪತ್ಯಾಗವು ಇಲ್ಲಿ ವಿಧಿಸಲ್ಪಟ್ಟಿತು ಎಂಬುದು ಪೂರ್ವಪಕ್ಷಿ ಅಭಿಪ್ರಾಯವು ಸರ್ವಶಾಸ್ತ್ರಕ್ಕೂ, ಪೂರ್ವಪಕ್ಷಿಯ ಹೇಳಿಕೆಗೂ, ಅವರು ಪ್ರವೃತ್ತಿಗೂ ವಿರೋಧವಾಗಿ ಹಾಸ್ಯಾಸ್ಪದವೆಂದು ಹೇಳಿದರು.

(೧) ಸರ್ವಶಾಸ್ತ್ರಕ್ಕೂ ಹೇಗೆ ವಿರೋಧವೆಂದರೆ? ಪ್ರಸನ್ನಾದನನು ನ್ಯಾಸಾನಂತರ ಆಜ್ಞಾನುಜ್ಞಾ ರೂಪವಾದ ಯಾವ ಯಾವ ಪ್ರವೃತ್ತಿಗಳನ್ನು ನಾಗಿರತಕ್ಕದ್ದೆಂದ ಸೂತ್ರಕಾರ ನಿಕಾರದಲ್ಲಿ ಹೇಳಿರುವರೋ ಅವಕ್ಕೆಲ್ಲಾ ವಿರೋ ಧವು ಇದೂ ಅಲ್ಲದೆ ಅನೇಕ ಇತಿ ಕರ್ತವ್ಯತೆಗಳನ್ನು ಶಾಸ್ತ್ರಗಳು ವಿಧಿಸುತ್ತ ಇವೂ ಪರಮಾತ್ಮಸಙ್ಕಲ್ಪಾಧೀನವಾಗಿ ನಡಯುವದರಿಂದ. ಈತನು ಪ್ರಯತ್ನಿ ವದೆಲ್ಲಾ ನಿರರ್ಥಕವಾದುದರಿಂದ ' ಎಲ್ಲಾ ಶಾಸ್ತ್ರಾನುಮತಿಯಿಂದ ನಡೆಯು ದಾರಪುತ್ರ ಪೋಷಣಾದಿಗಳೂ, ಧರ್ಮದಿಂದ ಭಗವತ್ಭಾಗವತ ಕೈಙ್ಕರ್ಯ ಗಾಗಿಯೂ, ದೇಹಯಾತ್ರೆಗಾಗಿಯೂ ಧನಾರ್ಜನೆ ಮೊದಲಾದವುಗಳ ತ್ಯಾಗವು ವಿಧಿಸಲ್ಪಟ್ಟಿರುತ್ತದೆಂದು ಆಗುವದರಿಂದ ಹಾಸ್ಯಾಸ್ಪದವು.

(೨) ಸ್ವವಚನ ವಿರೋಧವು ಹೇಗೆಂದರೆ? ಪರಮಾತ್ಮನಿಗೆ ಪರತ ನಾದುದರಿಂದ ಧರ್ಮಾನುಷ್ಠಾನಗಳಿಗೆ ಅಶಕ್ತನಾದುದರಿಂದ ಅವುಗಳ ಸ್ವರೂ ತ್ಯಾಗವು ಸ್ವತಸ್ಸಿದ್ಧವು. ಅದನ್ನು ವಿಧಿಸಿದರು ಎಂದು ಹೇಳಿದರೆ ಅಂತಾದ್ದ ವಿಧಿಸಬೇಕೇ? ಎಂದು ಕೇಳಬೇಕಾಗುತ್ತದೆ ಆದರೂ ಏನೋ ವಿಧಿಸಿ ಎಂದರೆ, ಈಗ ಕೇಳಬೇಕಾಗುತ್ತದೇನೆಂದರೆ, ತ್ಯಾಗಮಾಡಲು ಮಾತ್ರ ಈತ ಶಕ್ತತೆಯು ಹೇಗೆ?—ಅದಕ್ಕೂ ಅಶಕ್ತತೆಯನ್ನು ಹೇಳಬೇಕಲ್ಲವೇ? ಶರ ಗತಿಯನ್ನು ಅನುಷ್ಠಿಸುವದರಲ್ಲಿ ಮಾತ್ರ ಪರಾಧೀನತೆ ಇಲ್ಲವೋ? ಹೀಗೆ ತ ವಚನಕ್ಕೆ ತಾವೇ ವಿರೋಧ ಕಲ್ಪಿಸಿದ ಹಾಗಾಗುತ್ತದೆಂಬುದನ್ನು ಯೋಚಿಸದೆ ವ ಮಾಡುವದರಿಂದ ಹಾಸ್ಯಾಸ್ಪದವು.

**ಉಪಾಯಾಂತರಂಗಳುಕ್ಕು ಜೀವಾತ್ಮಾ ನಿತ್ಯಾಶಕ್ತನೆನ್ಗೈ ತಂಗಳಕ್ಕು ಅನಿಷ್ಟಮಾನ ಅನುವಾದ ಪಕ್ಷತ್ತುಕ್ಕು ಸ್ಥಿರೀಕರಣಂ ಪಣ್ಣಿನ ಪಡಿಯಾ ಮತ್ತನೈ.**

(೩) ಸ್ವಪ್ರವೃತ್ತಿಗೆ ವಿರೋಧವು ಹೇಗೆ? ಎಂದರೆ, ಹೀಗೆ ಹೇಳುವವರೂ ನಿತ್ಯನೈಮಿತ್ತಿಕಾನುಷ್ಠಾನಗಳಲ್ಲಿ ಪ್ರವೃತ್ತಿಯನ್ನು ಇಟ್ಟುಕೊಂಡಿರುತ್ತಾರೆ. ಸ್ನಾನ, ಊರ್ಧ್ವಪುಂಡ್ರಧಾರಣ, ಸಂಧ್ಯಾವಂದನ, ಬ್ರಹ್ಮಯಜ್ಞಾದಿಗಳನ್ನು ತಾವೇ ಅನುಷ್ಠಿಸುತ್ತಾರೆ. ಎಲ್ಲಾ ಧರ್ಮಗಳ ಸ್ವರೂಪತ್ಯಾಗವು ವಿಧಿಸಲ್ಪಟ್ಟಿತು ಎಂದರೆ ಇವುಗಳನ್ನು ಬಿಡಬೇಕಾಗಿ ಬರುತ್ತದೆ. ಆದುದರಿಂದಲೂ ಹಾಸ್ಯಾಸ್ಪದವು. ಹೀಗೆಯೇ ಅನೇಕ ಶಿಷ್ಟಾಚಾರಗಳುಂಟು. ಭಗವದ್ಭಾಗವತಾರಾಧನೆಯ ರೂಪದಲ್ಲಿ ನಡೆಯುತ್ತವೆ. ಅವುಗಳನ್ನೆಲ್ಲಾ ಅಂಗವಾಗಿ ಬಿಡಬೇಕಾಗಿ ಬರುವದರಿಂದಲೂ ಹಾಸ್ಯಾಸ್ಪದವು.

ಮುಂದೆ ಇನ್ನು ಒಂದು ವಿರೋಧವು, ಪ್ರತಿದ್ವಂದ್ವಿರೂಪದಲ್ಲಿ ಉಂಟಾಗುತ್ತದೆಂದು ಹೇಳುತ್ತಾರೆ— **ಅಪ್ಪೋದು** - ಹಾಗೆ ಧರ್ಮಗಳ ಸ್ವರೂಪ ತ್ಯಾಗ ವಿಧಿಯು **ಪರಿತ್ಯಜ್ಯ** ಎಂಬಲ್ಲಿ ಹೇಳಲ್ಪಟ್ಟಿತೆಂದು ಭಾವಿಸಿದರೆ, **ತುಲ್ಯನ್ಯಾಯತ್ತಾಲೇ** - ಸಮಾನವಾದ ನ್ಯಾಯದಿಂದ, ಚೇತನನು ತುಂಬಾ ಪರತಂತ್ರನಾಗಿ ಅಶಕ್ತನಾಗಿರುವದರಿಂದ ಕರ್ಮಯೋಗಾದಿಗಳ ಪರಿತ್ಯಾಗವು ಹೇಳಲ್ಪಟ್ಟಿತು ಎಂಬ ನ್ಯಾಯಕ್ಕೆ ಅನುಸಾರವಾದ ನ್ಯಾಯದಿಂದಲೇ, **ವ್ರಜ** - ಇಲ್ಲೇ ಈ ಚರಮ ಶ್ಲೋಕದಲ್ಲಿ, **ಶರಣಂವ್ರಜ** - ಶರಣವನ್ನಾಗಿ ಹೊಂದು, ಶರಣಾಗತಿಯನ್ನನುಷ್ಠಿಸು, **ಎನ್ಗೈತಾನುಮ್** - ಎಂದು ಹೇಳುವದೂ ಕೂಡ, **ಘಟಿಯಾದು** - ಕೂಡುವದಿಲ್ಲವು. ಹೀಗೆ ಶರಣಾಗತ್ಯನುಷ್ಠಾನಕ್ಕೂ ಪರಾಧೀನತೆಯಿಂದ ಅಶಕ್ತತೆಯು ಇದ್ದೇ ಇರುತ್ತದೆ. ಅಲ್ಲಿನ ನ್ಯಾಯವು ಇದಕ್ಕೂ ಉಂಟೇ ಉಂಟು, ಆದುದರಿಂದ ಶರಣಾಗತಿಯನ್ನು ಪರಿತ್ಯಾಗಮಾಡಬಹುದು ಎಂದಾಗುವದರಿಂದ ಇನ್ನೂ ಪರಿಹಾಸ್ಯವೆಂಬ ಭಾವವು.

ಅಶಕ್ತತೆ ಎಂದು ಯಾವಾಗ ಉಪಪಾದಿಸಲ್ಪಟ್ಟಿತೋ, ಅಂತಹ ಅಶಕ್ತತೆಯಿಂದಲೇ ತ್ಯಾಗವೆಂಬುದು ಸಿದ್ಧವಾಗುತ್ತದೆ. ಇದಕ್ಕೆ ತ್ಯಾಗಮಾಡು ಎಂಬ ವಿಧಿಯು ಏತಕ್ಕೆ! ಆದುದರಿಂದ ನಿಮ್ಮ ಅಶಕ್ತತಾವಾದದಿಂದಲೇ ತ್ಯಾಗವು ಏರ್ಪಡುವದರಿಂದಲೇ, ಪೂರ್ವಪಕ್ಷಿಯೂ ಕೂಡ ಈ ತಮ್ಮ ವಾದದಿಂದ ಸರಿಯಾದ ಅನುವಾದ ರೂಪಾಭಿಪ್ರಾಯವನ್ನೇ ಸ್ಥಿರೀಕರಿಸಿದ ಹಾಗಾಯಿತೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.— **ಉಪಾಯಾಂತರಙ್ಗಳುಕ್ಕು** - ಕರ್ಮಯೋಗಾದಿ

---

**ಏಕಪ್ರಯೋಗಮ್ ತಾನೇ ಅಶಕ್ತನೈಪ್ಪತ್ತ ತ್ಯಾಗಾನುವಾದಮಾಯ್, ಇತರನೈಪ್ಪತ್ತ ತ್ಯಾಗವಿಧಿಯಾಗ್ಗೈ, ಏಕವಾಕ್ಯತ್ತಿಲ್ ಘಟಿಯಾದು. ಫಲತ್ತಿಲ್ ವೈಷಮ್ಯಮುಮ್ ಅನ್ರಿಕ್ಕೇ ಅಧಿಕಾರಿಯುಮ್ ಏಕನಾಯಿರುಕ್ಕ ಗುರು ಲಘುವಿಕಲ್ಪಮುಮ್ ಶೊಲ್ಲವೊಣ್ಣಾದು.**

---

ಗಳಿಂದ ಸಹಕೃತವಾದ ಭಕ್ತಿಯೋಗವಾದ ಬೇರೆ ಉಪಾಯಕ್ಕೆ. **ಜೀವಾತ್ಮನು, ನಿತ್ಯಾಶಕ್ತನೆನ್ಗೈ** – ಯಾವಾಗಲೂ ಅಶಕ್ತನೆಂದು ಹೇಳುವದು, **ತನಕ್ಕು ಅನಿಷ್ಟಮಾನ** – ಪೂರ್ವಪಕ್ಷಿಗಳಿಂದ ತಮಗೆ ಇಷ್ಟವಿಲ್ಲದ, **ಅನುವಾದ ಪಕ್ಷತ್ತುಕ್ಕು** – ಪರಿತ್ಯಜ್ಯವೆಂಬುದು ಅನುವಾದವನ್ನು ಸೂಚಿಸುತ್ತದೆ ಎಂಬ ಪಕ್ಷವನ್ನೇ, **ಸ್ಥಿರೀಕರಣಂ ಪಣ್ಣಿನ ಪಡಿಯಾಮತ್ತನೈ** – ಸ್ಥಾಪಿಸಿದ ಹಾಗೆಯೇ ಆಗುತ್ತದೇ ವಿನಾ ಅನ್ಯಥಾ ಇಲ್ಲವು.

ಪೂರ್ವಪಕ್ಷಿಯು ಇದರ ಮೇಲೆ ಹೇಳಬಹುದೇನೆಂದರೆ – ಅಶಕ್ತನ ವಿಷಯದಲ್ಲಿ ಅನುವಾದವೆಂದು ಹೇಳಿದರೂ ಚಿಂತೆಯಿಲ್ಲವು, ಶಕ್ತನ ವಿಷಯದಲ್ಲಾದರೋ ಪರಿತ್ಯಜ್ಯವೆಂಬುದರಿಂದ ಧರ್ಮತ್ಯಾಗವು ವಿಧಿಸಲ್ಪಟ್ಟಿತೆಂದು ಹೇಳುವೆವು ಎಂದರೆ ಆಗಲೂ ಸರಿಯಲ್ಲವೆಂದು ಹೇಳುತ್ತಾರೆ. ಶಕ್ತನೂ ಅಶಕ್ತನೂ ಭಿನ್ನಾಧಿಕಾರಿಗಳು, ಅಂತಹರಿಗೆ ಒಂದೇ ವಿಧವಾದ ಸಾಧನವನ್ನು ಅನುವಾದರೂಪದಲ್ಲೇಯಾಗಲಿ, ವಿಧಿರೂಪದಲ್ಲಾಗಲಿ ಹೇಳುವದು ಹೇಗೆ ಸಮಂಜಸವು? ಎನ್ನುತ್ತಾರೆ. ಶಕ್ತನಿಗೆ ಸಾಧನವೂ ಅಶಕ್ತನಿಗೆ ಸಾಧನವೂ ಬೇರೆ ಬೇರೆಯಾಗಿರುವದು ಸಹಜವು. ಹಾಗಲ್ಲದೆ ಒಂದೇ ವಾಕ್ಯದಿಂದ ಸಾಧನವನ್ನು ಹೇಳುವದು ಅಸಂಗತವಲ್ಲವೇ ಎಂದು ಹೇಳುತ್ತಾರೆ – **ಏಕಪ್ರಯೋಗಂ ತಾನೇ** – ಸಾಧನವೆಂದು ಹೇಳುವ ಒಂದೇ ವಾಕ್ಯವೇ ಅಶಕ್ತನ ವಿಷಯದಲ್ಲಿ ತ್ಯಾಗವು ಅನುವಾದವಾಗಿ ಕಾರ್ಯವನ್ನು ಪ್ರಕಟಿಸುತ್ತದೆಂದೂ, **ಇತರನೈಪ್ಪತ್ತ** – ಶಕ್ತನನ್ನು ಕುರಿತು **ತ್ಯಾಗವಿಧಿಯಾಗ್ಗೈ** – ವಿಧಿಯಾಗುವದು, **ಏಕವಾಕ್ಯತ್ತಿಲ್ ಘಟಿಯಾದು** – ಒಂದೇ ವಾಕ್ಯದಲ್ಲಿ ಹೇಳುವದು ಸರಿಯಲ್ಲವು. ಅಶಕ್ತನ ವಿಷಯದಲ್ಲಿ ಹೇಳಿದ ಸಾಧನರೂಪ ವಾಕ್ಯವು, ಶಕ್ತನ ವಿಷಯದಲ್ಲಿ ಅನ್ವಯಿಸಲಾರದೆಂಬ ಭಾವವು

ಭಿನ್ನಾಧಿಕಾರಿಗಳಾದ ಅಶಕ್ತಶಕ್ತರಿಗೆ ಈ ಪರಿತ್ಯಜ್ಯವೆಂಬುದು ಅನ್ವಯಿಸುತ್ತದೆಂದು ಹೇಳಿದಲ್ಲವೇ ನೀವು ದೂಷಣವನ್ನು ಹೇಳಿದಿರಿ. ನಾವು ಹಾಗೆ ಹೇಳುವದೇ ಇಲ್ಲವು. ಶಕ್ತನನ್ನು ಕುರಿತೇ ಹೇಳಿದುದು, ಶಕ್ತನಾಗಿರುವದರಿಂದ ಭಕ್ತಿಯೋಗವನ್ನು ಸಪರಿಕಾರವಾಗಿ ಅನುಷ್ಠಿಸಬಹುದು, ಆತನ ವಿಷಯದಲ್ಲೇ

**ಗುರೂಪಾಯತ್ತಿಲೇ ಶಕ್ತನಾನವನುಕ್ಕೇ ಅದಿನ್ ತ್ಯಾಗವಿಶಿಷ್ಟಮಾನ ಲಘೂಪಾಯತ್ತೈ ವಿಧಿತ್ತಾಲ್, ಗುರೂಪಾಯತ್ತಿಲೊರುತ್ತರುಮ್ ಪ್ರವೃತ್ತಿಪ್ಪಾರಿಲ್ಲಾತ್ತಪಡಿಯಾಮ್, ವೇಱೊರು ಸುಖತ್ತಾಲೇ ಅಧಿಕಾರಭೇದಮ್ ಶೊಲ್ಲವೊಣ್ಣಾತ್ತಪಡಿಯಾಮ್, ಗುರೂಪಾಯತ್ತೈ ವಿಧಿಕ್ಕಿರ ಶಾಸ್ತ್ರಙ್ಗಳೆಲ್ಲಾಮ್ ಪ್ರಮಾಣಮನ್ರಿಕ್ಕೇಯೊಳಿಯುಮ್**

ವಿಕಲ್ಪಿಸಿ ಪ್ರಪದನವನ್ನಾದರೂ ಅನುಷ್ಠಿಸಬಹು[illegible], ಹೀಗೆ ಅನುಷ್ಠಿಸುವಾಗ ಮಾತ್ರ ಸರ್ವಧರ್ಮಗಳ ಪರಿ[illegible] ಹೇಳುವೆವು, ಎಂದರೆ ಆಗಲೂ ದೂಷಣವು ತಪ್ಪಿದ್ದಲ್ಲ [illegible] ಧಿಕಾರಿಗೇನೇ ಒಂದು ಫಲವುಳ್ಳ ಗುರು ಲಘು [illegible] ಶಕ್ತನಿಗೆ ಗುರೂಪಾಯವನ್ನೂ [illegible] ಶಕ್ತನಿಗೆ ಲಘೂ[illegible] ಫಲತಾರತಮ್ಯವಿಲ್ಲದ ಸಂದರ್ಭದಲ್ಲಿ, ನ್ಯಾಯವೆಂಬು [illegible] ಫಲತ್ತಿಲ್ **ವೈಷಮ್ಯಮ್ ಅನ್ರಿಕ್ಕೇ** – ಫಲದಲ್ಲಿ ವಿನೂತ [illegible] ಎರಡೂ ಮೋಕ್ಷನಾಯಕಗಳಾಗಿರುವಾಗ, **ಅಧಿಕಾರಿ [illegible] ಯಿ[illegible]ಕ್ಕೇ** – ಅಧಿಕಾರಿಯು ಒಬ್ಬನೇ[illegible]ಗಿರುವಾಗ, [illegible] **ಪ್ರಮಾ[illegible]** – ಗುರೂಪಾಯವಾದ ಉಪಾಸನವನ್ನೇ[illegible] ಪ್ರಪದನವನ್ನೇಯಾಗಲಿ [illegible] ವಿಕಲ್ಪವನ್ನು, **[illegible]ಲ್ಲವೊಣ್ಣಾದು** – ಹೇಳಲು ಸಾಧ್ಯವಿಲ್ಲವು ದಹರ ವಿದ್ಯೆ [illegible] ವಿದ್ಯೆಗಳ ಹಾಗೆ ಸಮವಾದ ಉಪಾಯವಾದರೂ ಆಗಿದ್ದ [illegible] ಧಿಕಾರಿಗೇನೇ ವಿಕಲ್ಪಿಸಿ ಹೇಳಬಹುದು ಒಂದು ಗುರೂಪಾ[illegible] ಇನ್ನೊಂದು ಲಘೂಪಾಯವೂ ಆಗಿರುವಾಗ, ಹೇಗೆ [illegible] ಹೇಳಲಾಗುತ್ತದೆಂಬ ಭಾವವು ಶಕ್ತಾಶಕ್ತ ಭಿನ್ನಾಧಿಕಾರಿಗಳಿಗೇ ವಿಕಲ್ಪಿಸಿ ಹೇಳಬಹುದು ಎಂಬಭಾವವು.

ಹೀಗೆ ಒಂದು ಗುರೂಪಾಯವೂ ಇನ್ನೊಂದು ಲಘೂಪಾಯವೂ ಆದರೆ ತಿಳುವಳಿಕೆ ಇರುವ ಯಾವನು ಗುರೂಪಾಯವನ್ನು ಅನುಷ್ಠಿಸುವನು ? ಅದನ್ನು ಒಂದು ಉಪಾಯವಾಗಿ ಶಾಸ್ತ್ರದಲ್ಲಿ ಹೇಳಿರುವದು ನಿರರ್ಥಕವಲ್ಲವೋ ಎಂದು ಮುಂದೆ ತಿಳಿಸುತ್ತಾರೆ —**ಗುರೂಪ ಯತ್ತಿಲೇ** – ಗುರೂಪಾಯವಾದ ಭಗವದುಪಾಸನದಲ್ಲಿ ಎಂದರೆ ಭಕ್ತಿಯೋಗದಲ್ಲಿ, **ಶಕ್ತನಾನವನುಕ್ಕೇ** – ಶಕ್ತನಾದವನಿಗೇನೇ, **ಅದಿನ್ ತ್ಯಾಗ ವಿಶಿಷ್ಟಮಾನ** – ಅದರ ತ್ಯಾಗವಾದ ಅಂಗದಿಂದ ಕೂಡಿದ, **ಲಘೂಪಾಯತ್ತೈ** – ಪ್ರಪತ್ತಿಯನ್ನು, **ವಿಧಿತ್ತಾಲ್** – ಪರಿತ್ಯಜ್ಯವೆಂಬುದರಿಂದ ವಿಧಿಸಲ್ಪಟ್ಟರೆ, **ಗುರೂಪಾಯತ್ತಿಲ್** – ಕಷ್ಟವಾದ ಉಪಾಸನದಲ್ಲಿ,

ಭಕ್ತಿಯೋಗದಲ್ಲಿ, **ಒರುತ್ತರುಮ್** – ಒಬ್ಬರೂ, **ಪ್ರವೃತ್ತಿಪ್ಪಾರಿಲ್ಲಾಮೈಯಾಲುಮ್** – ಅನುಷ್ಠಿಸುವರಿಲ್ಲದಿರುವದರಿಂದ, **ವೇರೋರ್‌ ಸುಖತ್ತಾಲೇ** – ಇತರರು ಹೇಳುವ ಜ್ಞಾನ ವಿಶ್ವಾಸ ಮಾಂದ್ಯರೂಪವಾದ ಬೇರೆ ಯಾವ ರೂಪದಲ್ಲೇಯಾಗಲಿ, **ಅಧಿಕಾರ ಭೇದಮ್ ಶೊಲ್ಲವೊಣ್ಣಾಮೈಯಾಲುಮ್** – ಅಧಿಕಾರ ಭೇದವನ್ನು ಹೇಳದಿರುವದರಿಂದಲೂ ಎಂದರೆ, ಉಪಾಸನಕ್ಕೆ ಇಂತವನಿಗೆ ಅಧಿಕಾರವೆಂದು ಹೇಳದೆ ಇರುವದರಿಂದಲೂ, **ಗುರೂಪಾಯತ್ತೈವಿಧಿಕ್ಕಿರ** – ಈ ಕಷ್ಟತರವಾದ ಉಪಾಯವಾದ ಭಕ್ತಿಯೋಗವನ್ನು ವಿಧಿಸುವ. **ಶಾಸ್ತ್ರಙ್ಗಳೆಲ್ಲಾಮ್** – ಶಾಸ್ತ್ರಗಳೆಲ್ಲಾ ಅವು ಯಾವುವೆಂದರೆ ಉಪನಿಷತ್ತು ಸ್ಮೃತಿ, ಬ್ರಹ್ಮಸೂತ್ರ, ಭಾರತ ಭಗವದ್ಗೀತೆ ಭಾಗವತಾದಿಗಳೆಲ್ಲಾ, **ಪ್ರಮಾಣಮನ್ರಿಕ್ಕೇಯೊಳಿಯುಮ್** – ಪ್ರಮಾಣವಲ್ಲದೇ ಹೋಗುವುವು ಹೀಗೆ ಹೇಳುವವರಿಗೆ ಈ ಶಾಸ್ತ್ರಗಳೆಲ್ಲಾ ಪ್ರಮಾಣವಲ್ಲದೇ ಹೋಗುವುವು ಎಂಬ ಭಾವನು ಶಕ್ತನಿಗೇ ಈ ತ್ಯಾಗವಿಧಿಯು ಹೇಳಲ್ಪಟ್ಟಿರುವದರಿಂದ ಆತನಿಗೇನೇ ಪ್ರಪತ್ತಿಯು ವಿಧಿಸಲ್ಪಟ್ಟಿತು ಎಂದರೆ ಆಗ ಆತನು ಭಕ್ತಿಯೋಗ ಗುರೂಪಾಯವನ್ನಾದರೂ ಅಥವಾ ವಿಕಲ್ಪಿಸಿ ಲಘೂಪಾಯವನ್ನಾಗಲಿ ಅನುಷ್ಠಿಸಬಹುದು ಎಂದಾಯಿತು ಲಘೂಪಾಯವಿರುವಾಗ ಅದನ್ನು ಬಿಟ್ಟು ಕಷ್ಟತರವಾದ ಉಪಾಯವನ್ನು ಯಾವ ಬುದ್ಧಿವಂತನೂ ಅನುಷ್ಠಿಸುವದಿಲ್ಲವು ಆದುದರಿಂದ ಗುರೂಪಾಯವನ್ನು ವಿಧಿಸುವ ಶಾಸ್ತ್ರಗಳೆಲ್ಲಾ ನಿರರ್ಥಕಗಳಾವುವು ಎಂಬ ತಾತ್ಪರ್ಯವು.

ಆಗಲಿ. ಶಾಸ್ತ್ರಗಳಲ್ಲಿ ಗುರೂಪಾಯವನ್ನು ಉಪದೇಶಿಸಿರುವದು ಅದರ ಕಷ್ಟತರ ದೆಶೆಯನ್ನು ಪ್ರದರ್ಶಿಸಿ, ಲಘೂಪಾಯವಾದ ಪ್ರಪದನದಲ್ಲಿ ಅಭಿರುಚಿಯನ್ನುಂಟು ಮಾಡಿಸುವದಕ್ಕಾಗಿ, ಉಪಾಸನಾದಿಗಳು ಬಹು ಕಷ್ಟತರವಾದವುಗಳೆಂದು ಈ ಶಾಸ್ತ್ರಗಳಲ್ಲಿ ಉಪಪಾದಿಸಲ್ಪಟ್ಟವೆಂದು ಹೇಳುತ್ತೇವೆ, ಹೀಗೆ ಕಷ್ಟತರವಾಗಿರುವದರಿಂದಲೇ ಅವು ಪರಿತ್ಯಜ್ಯವೆಂಬುವ ವಿಧಿಯಿಂದ ನಿಷೇಧಿಸಲ್ಪಟ್ಟವು ಎನ್ನುತ್ತೇವೆ, ಎಂದರೆ ಆಗ ವಿಕಲ್ಪಿಸಿ ಕೇಳಬೇಕಾಗುತ್ತದೆ ಶಾಸ್ತ್ರವು ಪ್ರರೋಚನಾರ್ಥವಾಗಿ ಭಕ್ತಿಯೋಗವನ್ನು ವಿಧಿಸಿ, ಅದು ಕಷ್ಟತರವೆಂದು ಹೇಳಿ ನಿಷೇಧಿಸಿತು ಎಂದರೆ ಅದೂ ಉಪಾಯವೇ ಎಂದು ಹೇಳಿ ನಿಷೇಧಿಸಿತೇ? ಅಥವಾ ಅದು ಉಪಾಯವೇ ಅಲ್ಲವು, ಆದುದರಿಂದ ಪರಿತ್ಯಾಗಮಾಡು ಎಂದು ನಿಷೇಧಿಸಿತೇ? ಎಂಬ ಎರಡು ವಿಕಲ್ಪಗಳಲ್ಲಿ, ಮೊದಲಿನ ವಿಕಲ್ಪವನ್ನು “ **ಅದು ತನ್ನೈಯೇ ನಿಷೇಧಿಕ್ಕಿರದು** ” ಎಂಬುದರಿಂದ ದೂಷಿಸುತ್ತಾರೆ.— ಹೀಗೆ ಹೇಳುವದು ಅತ್ಯಂತ ಅನುಚಿತವು ಎಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ. **ಲಘೂಪಾಯಪ್ರರೋಚನಾರ್ಥಮಾಗ** – ವಂಚಿಸಿ, ಗುರೂಪಾಯವನ್ನು ತಿರಸ್ಕರಿಸಿ,

**ಲಘೂಪಾಯ ಪ್ರರೋಚನಾರ್ಥವಾಗ, ಗುರೂಪಾಯತ್ವೈ ವಿಧಿತ್ವಾ ಅದು ತನ್ನೈಯೇ ನಿಷೇಧಿಕ್ಕಿರದೆನ್ಗೈಯುಮ್, ಅತ್ಯಂತಾನುಚಿತಮ್,**

ಲಘೂಪಾಯವಾದ ಪ್ರಪತ್ತಿಯಲ್ಲಿ ಮನಸ್ಸುಂಟಾಗುವದಕ್ಕಾಗಿ, **ಮೊದಲು ಗುರುಪಾಯತ್ವೈವಿಧಿತ್ತು** – ಗುರೂಪಾಯವಾದ ಭಕ್ತಿಯೋಗವನ್ನು ಉಪಪಾದಿಸಿ, ವಿಧಿಸಿ, **ಅದು ತನ್ನೈ** – ಆ ಗುರೂಪಾಯವನ್ನೇ, **ನಿಷೇಧಿಕ್ಕಿರದೆನ್ಗೈಯುಮ್** – ನಿಷೇಧಿಸಿ ಹೇಳಿತೆಂಬುವುದು, **ಅತ್ಯಂತಾನುಚಿತಮ್** – ಅತ್ಯಂತ ಯೋಗ್ಯವಾದುದಲ್ಲವು ಭಗವದ್ಗೀತೆಯ ಅಷ್ಟು ಅಧ್ಯಾಯಗಳಿಂದಲೂ ಭಕ್ತಿಯೋಗದ ಮಾಹಾತ್ಮ್ಯವನ್ನೆಲ್ಲಾ ಸವಿಸ್ತರವಾಗಿ ಉಪಪಾದಿಸಿ ಹೇಳಿ, ಕೊನೆಯಲ್ಲಿ **ಮನ್ಮನಾಭವಮದ್ಭಕ್ತಃ** ಎಂದೂ ವಿಧಿಸಿ, ಕಡೆಗೆ "**ನೇತಿ ನೇತಿ**" ಎಂಬ ಶ್ರುತಿವಾಕ್ಯಕ್ಕೆ ಕೆಲವರು ಅರ್ಥಮಾಡುವ ಹಾಗೆ, **ಸರ್ವಧರ್ಮಾನ್‌ಪರಿತ್ಯಜ್ಯ** ಎಂಬಲ್ಲಿ ನಿಷೇಧಿಸಿಹೇಳಿತು ಎಂಬ ಅಭಿಪ್ರಾಯವು ಅತ್ಯಂತ ಅನುಚಿತವಾದುದು ಎಂದು ಹೇಳಿದರು ಏಕೆಂದರೆ, ಸಾವಿರ ಮಾತಾಪಿತೃಗಳಿಗಿಂತಲೂ ವತ್ಸಲತರವಾದ ಶಾಸ್ತ್ರವು ಎಂದಿಗಾದರೂ ವಂಚಿಸುತ್ತದೆಯೋ? ಎಂದರೆ ಪರಮಹಿತಬೋಧನೆಯೂ ಕೂಡ ಪ್ರರೋಚನಾರ್ಥವಾಗಿ ಎಂದಾದರೂ ಹೇಳಬಹುದೇ? ಸ್ವಾಮಿಯು ಪ್ರರೋಚನ ಪ್ರವೃತ್ತಿಯನ್ನು ನಡಸಲಿಲ್ಲ ಎಂದು ಹೇಳುವದಿಲ್ಲವು. ದುಷ್ಟರಾದ ವೃತ್ರಾಸುರ, ಕಾಲಯವನ, ಶೂರ್ಪನಖಾ ಮೊದಲಾದವರ ವಿಷಯದಲ್ಲಿ ಪ್ರರೋಚನವುಂಟು ಮಹಾತ್ಮರಾದ ಜ್ಞಾನಿಗಳ ವಿಷಯದಲ್ಲೂ, "**ಶಾಧಿ ಮಾಂ ತ್ವಾಂ ಪ್ರಪನ್ನಮ್**" ಎಂದು ಶರಣಾಗತಿಯನ್ನನುಷ್ಠಿಸಿ ಪ್ರಾರ್ಥಿಸಿದವನಿಗೆ, "**ಸರ್ವಗುಹ್ಯತಮಂ ಭೂಯಃ**" ಉಪದೇಶಿಸುವೆನು ಎಂದು ಹೇಳಿ ವಂಚಿಸುವನೇ? ಲೋಕದಲ್ಲೂ ಒಬ್ಬ ರೋಗಿಗೆ ಒಂದು ಔಷಧವನ್ನು ವಂಚಿಸಿ ಕುಡಿಸಿ, ಅದರಲ್ಲಿ ಬುದ್ಧಿಯುಂಟಾದನಂತರ ಅದು ಸರಿಯಾದ ಔಷಧವಲ್ಲ ಎಂದು ಹೇಳಿ ಬೇರೆ ಔಷಧವನ್ನು ತೆಗೆದುಕೋ ಎಂದು ಹೇಳುವದು ಹೇಗೆ ಅನುಚಿತವೋ ಹಾಗೆಯೇ ಇಲ್ಲಿಯೂ ಎಂದು ಭಾವಿಸತಕ್ಕದ್ದು. ಇದಕ್ಕೆ ವ್ಯತ್ಯಸ್ತವಾಗಿ ಪ್ರರೋಚನವನ್ನು ಎಂತಹ ಸಂದರ್ಭದಲ್ಲಿ ಮಾಡಬಹುದು ಎಂದರೆ, ಮೊದಲು ಸುಕರವಾಗಿ ರುಚಿಯಾಗಿರುವ ಔಷಧವನ್ನು ಕೊಟ್ಟು ತದನಂತರ ದುಷ್ಕರವಾಗಿಯೂ ಕಹಿಯಾಗಿರುವ ಔಷಧದಲ್ಲಿ ಶೀಘ್ರಗುಣವುಂಟು ಎಂದು ಹೇಳಿ ವಂಚನೆಯು ಎಂದು ಹೇಳಿದರಾದರೂ ಒಪ್ಪಬಹುದು ಗುರುವಾದುದನ್ನು ವಂಚಿಸಿ ಮೊದಲು ಉಪದೇಶಿಸಿ ಅನಂತರ ಅದುಬೇಡ ಈ ಲಘುವಾದುದನ್ನು ಅವಲಂಬಿಸು ಎಂದು ಭಗವಾನ್ ಹೇಳಿದರು ಎಂಬುದು ಪರಿಹಾಸ್ಯಕರವೂ ಅಲ್ಲದೆ, ಶಾಸ್ತ್ರಕ್ಕೆ

**ಅನುಪಾಯಙ್ಙಳ್ಕ್ಕೆ ಉಪಾಯಙ್ಙಳಾಕ ವಿಧಿಕ್ಕಿರದೆನ್ನಾಲ್, ಶ್ರುತಿ ಸ್ಮೃತಿಗಳ್ ಮೊದಲಾನ ಶಾಸ್ತ್ರಙ್ಙಳಾಲ ಪ್ರಸಂಗಿಕ್ಕೈಯಾಲೇ ಶರಣ್ಯಸ್ವರೂಪಾದಿಗಳುಮ್ ಸಿದ್ಧಿಸಾದಪಡಿಯಾಮ್**

ವೈಯರ್ಥ್ಯವನ್ನೂ ಕಲ್ಪಿಸಿದರು ಎಂದು ಹೇಳಬೇಕಾಗುತ್ತದಾದುದರಿಂದ ಅನುಚಿತವು ಎರಡೂ ಉಪಾಯವಾದರೆ ಪ್ರಯೋಜನವು ಹೋಗದಿದೀತು? ಶ್ರೀಕೃಷ್ಣ ಭಗವಾನನೇ ಭಕ್ತಿಯೋಗನಿಷ್ಠನನ್ನು " **ಯುಕ್ತತಮ** " ನೆಂದೂ, ತನಗೆ " **ಅತ್ಯರ್ಥಪ್ರಿಯ** "ನೆಂದೂ, " **ಮಹಾತ್ಮನೆಂದೂ** " ಹೀಗೆಲ್ಲಾ ಕೊಂಡಾಡಿ, ವಿಧಿಸಿ, ಅನಂತರ ಇದು ಯಾವುದೂ ಬೇಡ, ಎಲ್ಲವನ್ನೂ ಬಿಟ್ಟುಬಿಡು ಎಂದು ವಿಧಿಸಿದು ಎಂದರೆ ಭಗವಂತನ ಮಾತು ಹೇಗೆ ಸತ್ಯವೆಂದು ನಂಬಲಾಗುತ್ತದೆ? ಮೊದಲಿನ ಉಪದೇಶವೆಲ್ಲಾ ಸತ್ಯವೇ? ಅದಕ್ಕೆ ಪ್ರತಿಯಾಗಿ ಎರಡನೆಯ ಸಲದ ವಿಧಿಯು ಸತ್ಯವೇ? ಎಂಬ ಶಂಕಾ ಬರುವುದರಿಂದ, ಅತ್ಯಂತಾನುಚಿತವೆಂದು ಹೇಳಿದರು ಭಗವಂತನೇ ಒಂದುಕಡೆ ಒಂದು ವಿಧವಾಗಿ ಹೇಳುತ್ತಾನೆ, ಇನ್ನೊಂದು ಕಡೆ ಅದಕ್ಕೆ ವಿರುದ್ಧವಾಗಿ ಹೇಳುತ್ತಾನೆ, ಎಂದರೆ ಆತನ ಉಪದೇಶದಲ್ಲಿ ನಂಬಿಕೆ ಹೇಗೆ ಎಂದು ಸಂದೇಹ ಉಂಟಾಗುವದರಿಂದ ಅತ್ಯಂತಾನುಚಿತವು

ಎರಡನೆಯ ವಿಕಲ್ಪದ ವಿಷಯದಲ್ಲಿ " **ಅನುಪಾಯಙ್ಙಳ್ಕ್ಕೆ ಉಪಾಯಙ್ಙಳಾಗ** " ಎಂದಾರಂಭಿಸಿ ದೂಷಿಸುತ್ತಾರೆ ಭಕ್ತಿಯೋಗವು ಉಪಾಯವೇ ಅಲ್ಲವು, ಅದನ್ನು ಉಪಾಯವೆಂದು ಭಾವಿಸಿದರೆ ಅದು ಎಷ್ಟು ಕಷ್ಟತರವಾದುದು ನೋಡು, ಆದುದರಿಂದ ಅದನ್ನು ತ್ಯಾಗಮಾಡಿ, ಪ್ರಪದನವನ್ನು ಅನುಷ್ಠಿಸು ಎಂದು ಪ್ರಪದನದಲ್ಲಿ ಅಭಿರುಚಿಯುಂಟಾಗಿರುವದಕ್ಕಾಗಿ ಉಪಾಯವಲ್ಲದುದನ್ನು ಉಪಾಯವೆಂದು ಮೊದಲು ಭಾವಿಸಲ್ಪಟ್ಟಿತು, ಅನಂತರ ಅದನ್ನೇ ನಿಷೇಧಿಸಬೇಕೆಂದು ತ್ಯಾಗವು ವಿಧಿಸಲ್ಪಟ್ಟಿತು ಎಂದರೆ,—ಆಗಲೂ ದೂಷಣವು ತಪ್ಪಲಿಲ್ಲವೆನ್ನುತ್ತಾರೆ— **ಅನುಪಾಯಙ್ಙಳ್ಕೈ** – ಇಲ್ಲಿ ಸಪರಿಕರ ಭಕ್ತಿಯೋಗವು ಉಪಾಯವೇ ಅಲ್ಲವೆಂದು ಒಪ್ಪಿ ಹೇಳುವ ವಾದವು, ಉಪಾಯಗಳೇ ಅಲ್ಲದ, ಭಕ್ತಿಯೋಗಾದಿಗಳನ್ನು (ಇಲ್ಲಿ ಪರಿಕರಗಳಿಂದ ಸೇರಿದ ಭಕ್ತಿಯೋಗವೆಂಬ ಭಾವನೆಯಿಂದ ಬಹುವಚನವು, ಉಪಾಯಗಳು ಎರಡೇ ಎಂದು ಮುಂದೆಯೇ ಹೇಳುತ್ತಾರೆ,) **ಉಪಾಯಙ್ಙಳಾಕ** – ಉಪಾಯಗಳೆಂದು, **ವಿಧಿಕ್ಕಿರದೆನ್ನಾಲ್** – ಈ ಪರಿತ್ಯಜ್ಯ ಎಂಬ ಶಬ್ದವು ವಿಧಿಸುತ್ತದೆ ಎಂದರೆ, **ಶ್ರುತಿ ಸ್ಮೃತಿಗಳ್** – ೩೨ ವಿಧ ಬ್ರಹ್ಮವಿದ್ಯೆಗಳನ್ನು ಬೋಧಿಸುವ ಉಪನಿಷತ್ತುಗಳೂ ಮತ್ತು ಸ್ಮೃತಿಶಬ್ದ

**ಗುರುಕ್ಕಳಾನ ಕೃಷ್ಯಾದಿವ್ಯಾಪಾರಙ್ಗಳೈವರ್ ಲಘೂಕ್ಕಳಾನ ರತ್ನವಾಣಿ ಜ್ಯಾದಿಗಳೈವರ್, ಅರ್ಥಾರ್ಥಿಗಳ್ ಪಕ್ಷಲ್ ವಿಕಲ್ಪಿಕ್ಕಪ್ಪಡುವದುವುಮ್ ಅಧಿಕಾರಿವಿಶೇಷವ್ಯವಸ್ಥೈಯಾಲೇ ಯೆನ್ನುಮಿಡತ್ತೈ ಲೋಕಪ್ರಸಿದ್ಧಮ್**

ದಿಂದ ಭಗವದ್ಗೀತಾ ಮೊದಲಾದವು ಹೇಳಲ್ಪಟ್ಟವು, ಇವುಗಳಲ್ಲೇ ಬ್ರಹ್ಮಸೂತ್ರಗಳೂ ಸೇರಿದವು, ಇವುಗಳೆಲ್ಲಾ, **ಮೋಹನಶಾಸ್ತ್ರಙ್ಗಳಾಗ ಪ್ರಸಂಗಿಕ್ಕೈಯಾಲೇ** – ಅಸತ್ಯವಾದುದನ್ನು ಸತ್ಯವೆಂಬ ಭ್ರಮೆಯನ್ನುಂಟುಮಾಡುವ ಬೃಹಸ್ಪತಿ ಸ್ಮೃತಿ, ಪಾಶುಪತಶಾಸ್ತ್ರ, ಮೊದಲಾದ ಮೋಹನ ಶಾಸ್ತ್ರಗಳ ಹಾಗೆ ಈ ಶ್ರುತಿಸ್ಮೃತಿಗಳಿಗೂ ಅಪಲಾಪವು ಉಂಟಾಗುವವರ ಮುಖಲಕ, **ಶರಣ್ಯಸ್ವರೂಪಾದಿಗಳುಮ್** – ಯಥಾರ್ಥವಾಗಿ ಶರಣ್ಯನ ಸ್ವರೂಪ ಸ್ವಭಾವಾದಿಗಳೂ ಸಹ, **ಸಿದ್ಧಿಯಾದಪಡಿಯಾಮ್** – ಸಿದ್ಧಿಸದೇ ಹೋಗಲು ಕಾರಣವಾಗುತ್ತದೆ ಮೋಹನಶಾಸ್ತ್ರವಾಗಿ, ಅವುಗಳಲ್ಲಿ ಹೇಳಿರುವ ಪರಮಾತ್ಮಸ್ವರೂಪ ಸ್ವಭಾವಗಳೂ ಸಹ ಮೋಹನರೂಪವಾಗಿ ಯಥಾರ್ಥವಲ್ಲದೇ ಹೋಗಿ ಉಪಾದೇಯವಾಗಲಾರದೆಂಬ ಭಾವವು

ಆಗಲಿ, ಲೋಕದಲ್ಲಿ ಅರ್ಥಸಂಪಾದನೆಗಾಗಿ ಕಷ್ಟತರವಾದ ಕೃಷ್ಯಾದಿ ವ್ಯಾಪಾರಗಳು ಬೇಡವೆಂದು ನಿಷೇಧಿಸಿ ಲಘುವಾದ ರತ್ನವ್ಯಾಪಾರ ವಾಣಿಜ್ಯಾದಿಗಳನ್ನು ಅವಲಂಬಿಸು ಎಂದು ಹೇಳುವದರಲ್ಲಿ ಏನೊಂದೂ ಅಸಂಗತವಾದುದನ್ನು ಕಂಡಿಲ್ಲವಲ್ಲಾ, ಎಂದರೆ ಅಧಿಕಾರಿಯು ಒಬ್ಬನೇ ಆಗಿದ್ದರೆ ಆಗಲೂ ದೋಷಯುಕ್ತವೇ. ಶಕ್ತಾಶಕ್ತ ಭಿನ್ನಾಧಿಕಾರಿಗಳ ವಿಷಯದಲ್ಲೀಗ ಹಾಗೆ ವಿಕಲ್ಪಿಸಿ ಹೇಳಬಹುದು ಎಂದು ಹೇಳುತ್ತಾರೆ ಕೃಷ್ಯಾದಿವ್ಯಾಪಾರಗಳಿಗೆ ಯೋಗ್ಯಾಧಿಕಾರಿಯೇ ಬೇರೆ. ರತ್ನವಾಣಿಜ್ಯಾದಿಗಳಿಗೆ ಅಧಿಕಾರಿಯೇ ಬೇರೆ, ಇದು ಲೋಕಪ್ರಸಿದ್ಧವಾದ ವಿಷಯವೆಂದು ಉಪಪಾದಿಸುತ್ತಾರೆ — **ಗುರುಕ್ಕಳಾನ** – ಕಷ್ಟಸಾಧ್ಯಗಳಾದ, **ಕೃಷ್ಯಾದಿ ವ್ಯಾಪಾರಙ್ಗಳ್** – ಬೇಸಾಯ ವ್ಯಾಪಾರ ಮೊದಲಾದ ವ್ಯಾಪಾರಗಳು ಆದಿ ಶಬ್ದದಿಂದ ಕೆರೆಕಟ್ಟುವದು, ಭಾವಿ ತೆಗೆಯುವದೇ ಮುಂತಾದವು ಸೂಚಿತವು, **ಲಘೂಕ್ಕಳಾನ** – ಸುಲಭಗಳಾದ, **ರತ್ನವಾಣಿಜ್ಯಾದಿಗಳುಮ್** – ರತ್ನಪಡಿ ವ್ಯಾಪಾರ, ಸರಕುಗಳ ವ್ಯಾಪಾರ, ಆದಿಶಬ್ದದಿಂದ ಚಿನ್ನ ಬೆಳ್ಳಿ ವ್ಯಾಪಾರಾದಿಗಳು ಹೇಳಲ್ಪಟ್ಟವು, **ಅರ್ಥಾರ್ಥಿಪಕ್ಷೇಲ್** – ಒಂದೇ ಫಲವಾದ ಧನಾರ್ಜನೆಮಾಡಬೇಕೆಂಬುವದರ ವಿಷಯದಲ್ಲಿ, **ವಿಕಲ್ಪಿಕ್ಕಪ್ಪಡುವದುವುಮ್** – ವಿಕಲ್ಪಿಸಿ ಹೇಳುವದೂ ಸಹ, **ಅಧಿಕಾರಿ ವಿಶೇಷವ್ಯವಸ್ಥೈಯಾಲೇ**– ಯಾರು ಯಾವುದರಲ್ಲಿ ಯೋಗ್ಯತೆ ಇರುವ ಅಧಿಕಾರಿಗಳೆಂಬ ವ್ಯವಸ್ಥೆಯ

**ಆಳವಾನುಡೈಯ ಚರಮ ಶ್ಲೋಕವ್ಯಾಖ್ಯಾನತ್ತಿಲುಮ್, ಇವ್ವಳವೇ ವಿವಕ್ಷಿತಮಾಗೈಯಾಲೊರು ವಿರೋಧಮುಮಿಲ್ಲೈ.**

**ಮೂಲಕವಾಗಿ, ಎನ್ರುಮಿಡಮ್** – ಎಂಬುವ ಸಂದರ್ಭವು ಲೋಕಪ್ರಸಿದ್ಧವು. ಇದರಿಂದ ಗುರೂಪಾಯವಾದ ಭಕ್ತಿಯೋಗಕ್ಕೂ ಲಘೂಪಾಯವಾದ ಪ್ರಪದನಕ್ಕೂ ಅಧಿಕಾರಿಗಳು ಬೇರೆ ಬೇರೆ ಎಂಬುದು ಸ್ಥಾಪಿತವು ಇದು ಹಿಂದೆ ಅಧಿಕಾರಿ ವಿಭಾಗಾಧಿಕಾರದಲ್ಲಿ ಉಪಪಾದಿತವು ಹಾಗೆಯೇ ಇಲ್ಲಿ ಲೀಲಾ ಸಾರಥಿಯ ಉಪದೇಶದಲ್ಲೂ ಎರಡು ಉಪಾಯಗಳೂ ಭಿನ್ನಾಧಿಕಾರಿಗಳಿಗೆ ವಿಧಿಸಲ್ಪಟ್ಟಿರುತ್ತವೆ ಎಂಬ ಭಾವವು.

ಆಗಲಿ, ಪೂರ್ವಪಕ್ಷಿಯು ಪುನಃ ಹೇಳಬಹುದೇನೆಂದರೆ— ಶ್ರೀವತ್ಸಾಂಕ ಮಿಶ್ರರಾದ (ಆಳ್ವಾರ್) ಜ್ಞಾನನಿಧಿಗಳು ಈ ಚರಮಶ್ಲೋಕವ್ಯಾಖ್ಯಾನದಲ್ಲಿ ನಾವು ಹೇಳಿದ ಹಾಗೆ ಒಬ್ಬ ಅಧಿಕಾರಿಗೇನೆ, ಉಪಾಯಾಂತರ ದೌಷ್ಕರ್ಯದಿಂದ ಶೋಕಿಸುವವನಿಗೇನೆ ಪ್ರಪತ್ತಿಯು ವಿಧಿಸಲ್ಪಟ್ಟಿರುತ್ತದೆಂದು ತೋರ್ಪಡಿಸುತ್ತಾರಲ್ಲಾ ಎಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ —ಅವರ ಅರ್ಥವು ನಿಮ್ಮ ಅಭಿಪ್ರಾಯಾನುಗುಣವಲ್ಲವೆಂದು ಹೇಳಿ, ಅವರ ಅಭಿಪ್ರಾಯವು ಯಾವುದೆಂದರೆ ತಿಳಿಸುತ್ತಾರೆ— ಶ್ರೀವತ್ಸಾಂಕಮಿಶ್ರರವರು ಬರೆದಿರುವುದೇನೆಂದರೆ— "**ಉಪಾಯಾಂತರ ದೌಷ್ಕರ್ಯಾಚ್ಛೋಕಂ ಸ್ವಂ ಮಾ ಸ್ಮ ಕಾರ್ಷೀಃ । ಸಾಧನತ್ವೇನ ನಿರ್ಣೀತಾನ್ಸರ್ವಾನ್ ಸಂತ್ಯಜ್ಯ ಧರ್ಮತಃ । ಮಾಮೇಕಂ ಶರಣಂ ಯಾಹಿ**" ಎಂಬದಾಗಿ, ಉಪಾಯಾಂತರವಾದ ಭಕ್ತಿಯೋಗವನ್ನು ಅನುಷ್ಠಿಸುವದು ತುಂಬಾ ಕಷ್ಟವೇ ಎಂದು ಶೋಕಿಸುತ್ತಿರುವ, ಮತ್ತು ನನ್ನನ್ನು ಹೊಂದುವದಕ್ಕೆ ಉಪಾಯವಾಗಿ ನಿರ್ಣಯಿಸಲ್ಪಟ್ಟಿರುವದು ಯಾವುದೋ ಆ ಎಲ್ಲಾ ಧರ್ಮಗಳನ್ನು ದೂರವಾಗಿ ತ್ಯಜಿಸಿರುವ ನೀನು ನನ್ನೊಬ್ಬನನ್ನೇ ಉಪಾಯವಾಗಿ ಹೊಂದು ಎಂದರೆ ಪ್ರಪದನವನ್ನು ಅನುಷ್ಠಿಸು ಎಂಬುದು ಅರ್ಥವು ಆದುದರಿಂದ ಕೂರತ್ತಾಳ್ವಾರ್‌ರವರ ಅಭಿಪ್ರಾಯವೂ ಭಿನ್ನಾಧಿಕಾರಿಗೆಂದೇ ಹೇಳುತ್ತಾರೆ —**ಆಳವಾನುಡೈಯ** –ಶ್ರೀ ಕೂರತ್ತಾಳ್ವಾರ್‌ರವರ, **ಚರಮಶ್ಲೋಕ ವ್ಯಾಖ್ಯಾನತ್ತಿಲುಮ್** – ಚರಮಶ್ಲೋಕವ್ಯಾಖ್ಯಾನದಲ್ಲೂ, **ಇವ್ವಳವೇ ವಿವಕ್ಷಿತಮಾಗೈಯಾಲೇ**– ಅಧಿಕಾರಿಯ ವಿಶೇಷವ್ಯವಸ್ಥೆಯೇ ಹೇಳಲ್ಪಟ್ಟಿರುವದರಿಂದ **ಒರು ವಿರೋಧಮಿಲ್ಲೈ** – ಯಾವುದೊಂದು ವಿರೋಧವೂ ಇಲ್ಲವು ಶ್ರೀ ಕೂರತ್ತಾಳ್ವಾರ್‌ರವರ ಅಭಿಪ್ರಾಯವೂ ನಮ್ಮ ಅಭಿಪ್ರಾಯವೇ ವಿನಾ ಬೇರೆ ಅಲ್ಲವೆಂಬಭಾವವು. "**ಸಾಧನತ್ವೇನ ನಿರ್ಣೀತಾನ್ ಸರ್ವಾನ್ ಸಂತ್ಯಜ್ಯ**" ಎಂಬುದಕ್ಕೆ ಶೋಕಿಸುತ್ತಿರುವ ನೀನು

**ಸಮಾವರ್ತನಾದಿಗಳಿಲ್ ಗುರುಲಘುವಿಕಲ್ಪಮುಮ್ ಅವಸ್ಥಾವಿಶೇಷಂಗಳಾಲೇ ನಿಯತಮೆನ್ರು ಕೊಳ್ಳಾದಪೋದು ಗುರುವಿಧಾನವೈಯರ್ಥ್ಯಮುಮ್ ವರುಮ್.**

ಎಂಬುದರೊಂದಿಗೆ ಅನ್ವಯಿಸಲು ಸಾಧ್ಯವಿಲ್ಲವಾಗಿ ಅನುವಾದ ಪಕ್ಷದಲ್ಲಿ, ಅತ್ಯಂತ ಅಶಕ್ತಾಧಿಕಾರವು ತೋರಿಬರುವದರಿಂದ, ಯಥಾಶ್ರುತವಾದ ಅನ್ವಯದಲ್ಲಿ ಸ್ವೈರವೇಕ್ಷ್ಯವು ತೋರಿಬರುವದರಿಂದ ವಿರೋಧವೇನೂ ಇಲ್ಲವೆಂಬ ಭಾವವು **ಉಪಾಸಾನ್ತರ ದೌಷ್ಕರ್ಯಾತ್** ಎಂಬುದರಿಂದ ಪ್ರಸದನವು ಅಶಕ್ತಾಧಿಕಾರಿಗೂ ಭಕ್ತಿಯೋಗವು ಶಕ್ತನಿಗೂ ಎಂಬುದು ವ್ಯಕ್ತವು. "**ಕೇನೋಪಾಯೇನ ಲಘುನಾ ವಿಷ್ಣೋರ್ನಾಮ ಸಹಸ್ರಕಮ್ । ಪಠ್ಯತೇ ಪಂಡಿತೈರ್ನಿತ್ಯಂ ಶ್ರೋತುಮಿಚ್ಛಾಮ್ಯಹಂ ಪ್ರಭೋ**" ಯಾವ ಲಘುವಾದ ಉಪಾಯ ಮೂಲಕ ವಿಷ್ಣುಸಹಸ್ರನಾಮ ಪಠನ ಫಲವೇ ಉಂಟಾಗುತ್ತದೋ ಅದನ್ನು ದಯವಿಟ್ಟು ತಿಳಿಸಿ ಎಂದು ಪಾರ್ವತಿಯು ತನ್ನ ಪತಿಯನ್ನು ಕುರಿತು ಕೇಳಿದುದಕ್ಕೆ ಈಶ್ವರನು "**ಶ್ರೀರಾಮ ರಾಮೇತಿ ರಮೇ ರಾಮೇ ಮನೋರಮೇ । ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ**" ಶ್ರೀರಾಮರಾಮ ಎಂಬುದಾಗಿ ಶ್ರೀರಾಮ ನಾಮ ಪಠನವು ಆ ವಿಷ್ಣುಸಹಸ್ರನಾಮ ಪಠನಕ್ಕೆ ಸಮಾನವಾದ ಫಲವುಳ್ಳದ್ದೆಂದು ಹೇಳಿದುದೂ, ಶಕ್ತನಿಗೆ ವಿಷ್ಣುಸಹಸ್ರನಾಮ ಪಠನವೇ, ಅದಕ್ಕೆ ಅಶಕ್ತನಾದರೆ ಆಗಲಿ ಅಥವಾ ಕಾಲಾನುಕೂಲವಿಲ್ಲದವನಾಗಲಿ ಆದರೆ, ಆತನಿಗೆ ಶ್ರೀರಾಮನಾಮ ಸಂಕೀರ್ತನವೂ, ಹೀಗೆ ಹೇಗೆ ಭಿನ್ನಾಧಿಕಾರಿಗಳನ್ನು ಕುರಿತು ಹೇಳಲ್ಪಟ್ಟಿತೋ ಹಾಗೆಯೇ ಇಲ್ಲಿಯೂ ಎಂದು ಭಾವಿಸತಕ್ಕದ್ದು. ಗುರುವಾದ ಅವಗಾಹನ ಸ್ನಾನಕ್ಕೆ ಬದಲಾಗಿ ವಿಕಲ್ಪಿಸಿ ಲಘುವಾದ ಮನ್ತ್ರಸ್ನಾನ ವಿಧಿಯೂ ಕೂಡ ಭಿನ್ನಾಧಿಕಾರಿಗಳಾದ ಶಕ್ತಾಶಕ್ತರನ್ನು ಕುರಿತದ್ದೆಂದೇ ಭಾವಿಸತಕ್ಕದ್ದು.

ಮುಂದೆ ಸಮಾವರ್ತನಾದಿಗಳಲ್ಲಿ ಒಬ್ಬ ಅಧಿಕಾರಿಗೇನೇ ಗುರು ಲಘು ಪ್ರಕ್ರಿಯೆಗಳುಂಟಲ್ಲಾ ಎಂದರೆ, ಅದಕ್ಕೆ ಸಮಾಧಾನವಾಗಿ, ಭಿನ್ನವಾದ ಅವಸ್ಥಾ ವಿಶೇಷಗಳಿಂದ ವಿಕಲ್ಪಿಸಿ ಹೇಳಿತೆಂದು ಹೇಳಿ, ಹೀಗೆ ಭಾವಿಸದಿದ್ದರೆ ಗುರುಪ್ರಕ್ರಿಯೆಗೆ ವೈಯರ್ಥ್ಯವುಂಟಾಗುತ್ತದೆಂದು ಹೇಳುತ್ತಾರೆ— **ಸಮಾವರ್ತನಾದಿಗಳಿಲ್**= ಬ್ರಹ್ಮಚರ್ಯಾಶ್ರಮ ಗುರುಕುಲವಾಸದೊಂದಿಗೆ ಕಳೆದ ನಂತರ ಗೃಹಸ್ಥಾಶ್ರಮ ಅಥವಾ ಸನ್ನ್ಯಾಸಾಶ್ರಮಗಳಿಗೆ ಪೂರ್ವಭಾವಿಯಾಗಿ ಆಚರಿಸಬೇಕಾದ ಸಮಾವರ್ತನ ಮೊದಲಾದವುಗಳಲ್ಲಿ, ಆದಿಶಬ್ದದಿಂದ ಸ್ನಾನ ಭೇದವನ್ನು ವಿಕಲ್ಪಿಸಿ ಹೇಳುವ ಪ್ರಕರಣಗಳು ಹೇಳಲ್ಪಟ್ಟವು, ಅವು ಯಾವುವೆಂದರೆ **ಕಾಲವಿಲ್ಲದೆಯೂ**

ಅಶಕ್ತಾದ್ಯವಸ್ಥೆಗಳಲ್ಲಿಯಾಗಲೂ ಸ್ನಾನಭೇದವು ವಿಕಲ್ಪಿಸಿ ಹೇಳಲ್ಪಟ್ಟಿರುತ್ತದೆ. **ಗುರುಂ ಪ್ರಾಪ್ಯ** – ಸ್ನಾನ ಕರ್ತವ್ಯವನ್ನು ವಿಸ್ತರಿಸಿ ಗುರುವಾಗಿಯೂ ಎಂದರೆ ಹಿಡಿಬರುವ ಹಾಗೆ ಶಕ್ತನಾಗಿರುವ ಸಂದರ್ಭದಲ್ಲಿ ಈ ಸ್ನಾನಕರ್ಮವನ್ನು ಗುರುವಾಗಿ ಮಾಡಿ, ವಿಳಂಬವನ್ನು ಸಹಿಸದೆಯೂ ಅಶಕ್ತನೂ ಆಗಿರುವ ಸಂದರ್ಭದಲ್ಲಿ ಅವನಿಗೇ ಲಘುವಾಗಿ ತೂಷ್ಣೀಂ ಸ್ನಾನವನ್ನು ಹೀಗೆ ವಿಕಲ್ಪಿಸಿ ವಿಧಿಸಿರುವ. **ಅವಸ್ಥಾವಿಶೇಷಾದಿಭಿರ್ಭೇದೇ** – ಶಕ್ತ್ಯಶಕ್ತಿ ನಿಬಂಧನವಾದ ವಿಕಲ್ಪವಾದ ಅವಸ್ಥಾವಿಶೇಷಗಳಿಂದ, **ನಿಯತ ಮನ್ತ್ರ** – ನಿಯತವಾದ ಮಂತ್ರಗಳು **ಲೋಪೇ** – ಅಂಗೀಕರಿಸದೇ ಹೋದರೆ, **ಗರೀಯಸ್ತ್ವಂ ಗುರುತ್ವಂ** – ಗುರುವಾಗಿ ಶಾಸ್ತ್ರದಲ್ಲಿ ಬೋಧಿಸಿದ ... ಪ್ರಯೋಜನಾಂತರವೇನಿಲ್ಲದೇ ಹೋಗಬಹುದು ... ಎಲ್ಲಿಯೂ ಅವಲಂಬಿಸುವರೇ ವಿನಾ, ಗುರುವಾದ ... ನವರಿಂದ ನಿರುಪಯೋಗವುಳ್ಳದಾಗುತ್ತದೆಂಬ ಭಾವವು ... "**ಸ್ನಾನಕರ್ತ್ರಾ ರಿಷ್ಯಮಾಣಂ ಸೂರ್ಯೋದಯಕಾಲ್ಪ್ರಂ** ..." ಎಂದಾರಂಭಿಸಿ, ಬಹಳ ಹೊತ್ತು ಹಿಡಿಯುವ ಮಂತ್ರ ... ಇದು ಬಹುಕಾಲ ಹಿಡಿಯುತ್ತದೆ. ಇದನ್ನೆಲ್ಲಾ ಅನುಷ್ಠಿಸಲು ... ಇರಬೇಕು. ಹಾಗಿಲ್ಲದ ಪಕ್ಷದಲ್ಲಿ "**ಅಥೈತದಶಕ್ತಂ** ... **ತೂಷ್ಣೀಮೇವ ಸಮಿಧ ಮೂಪದಧಾತಿ**" ... ಹೀಗೆ ವಿಧಿಸಿ ಹೇಳಲ್ಪಟ್ಟಿರುತ್ತದೆ. ಹೀಗೆ ಅರ್ಥವಾದವಿದ್ದರೆ ಗುರುಮಾರ್ಗ ... ಅನುಷ್ಠಿಸ್ಯದವೇ ನಿರರ್ಥಕವಾಗುತ್ತದೆಂಬ ಭಾವ, ... ಹೀಗೆ ಶಕ್ತನಾದವನು ಗುರುಮಾರ್ಗವನ್ನು ತ್ಯಜಿಸಿ ಲಘುಮಾರ್ಗ ... ಬವಾಗಿ ವಿಧಿಸಲ್ಪಡಲಿಲ್ಲವೋ ಹಾಗೆಯೇ ... ಹೇಳಿರುವವರಲ್ಲವೇ ಎಂದು ಭಾವಿಸತಕ್ಕದ್ದು. ... ಇರುವವನಿಗೂ ಅಶಕ್ತನಿಗೂ ಪ್ರಪತ್ತಿಮಾರ್ಗವೆಂಬ ... ಭಾವವು ಸಮಾವರ್ತನೆಯಲ್ಲಿ ಇದರಿಂದ ... ಉಂಟು.

ಹಿಂದೆ ಗುರೂಪಾಯ ... ಶಕ್ತನಾದವನಿಗೇನೆ ಅದರ ತ್ಯಾಗವು ಇಲ್ಲಿ ವಿಧಿಸಲ್ಪಟ್ಟಿತು ಎಂಬ ಪೂರ್ವಪಕ್ಷಿ ಮೂರು ದೂಷಣವನ್ನು ಹಿಂದೆ ಹೇಳಿದರು, ಏನೆಂದರೆ (೧) ಲಘೂಪಾಯವಿರುವಾಗ ಯಾವ ವಿವೇಕಿಯೂ ಗುರೂಪಾಯವನ್ನು ಅವಲಂಬಿಸಲಾರನೆಂದೂ (೨) ಗುರೂಪಾಯಕ್ಕೆ ಅಧಿಕಾರಿಯು ಬೇರೆ ಎಲ್ಲೂ ಹೇಳಲ್ಪಡದೇ ಹೋಗುತ್ತದೆಂದೂ (೩) ಗುರೂಪಾಯ ವಿಧಿಸುವ ಶಾಸ್ತ್ರ

**ಜ್ಞಾನವಿಶ್ವಾಸಪೂರ್ತಿಃ ಪ್ರಪತ್ತ್ಯಧಿಕಾರಃ, ತಯೋರಲ್ಪತ್ವಂ ಭಕ್ತ್ಯಧಿಕಾರ ಇತ್ಯಭಿಪ್ರಾಯಂ ನಿರಸ್ಯತಿ**

**ಜ್ಞಾನಪೂರ್ತ್ತಿಯಾದಲ್, ವಿಶ್ವಾಸಪೂರ್ತ್ತಿಯಾದಲ್, ಉಡೈಯವನ್ ಪ್ರಪತ್ತಿಕ್ಕು ಅಧಿಕಾರಿ, ಜ್ಞಾನಮಾಂದ್ಯಮಾದಲ್, ವಿಶ್ವಾಸಮಾಂದ್ಯಮಾದಲ್, ಉಡೈಯವನ್ ಉಪಾಸನಾದಿಗಳುಕ್ಕು ಅಧಿಕಾರಿ, ಎನ್ನಾಲ್, ಇಚ್ಚರಮಶ್ಲೋಕಾದಿಗಳುಕ್ಕು ಉಪದೇಷ್ಟಾಕ್ಕಳುಮಾಯ್, ಪರಮಾಸ್ತಿ**

---

ಗಳೆಲ್ಲಾ ನಿರರ್ಥಕವಾಗುತ್ತದೆಂದೂ ತಿಳಿಸಿದ್ದರು, ಈಗ ಪೂರ್ವಪಕ್ಷಿಗಳು ಗುರೂಪಾಯಕ್ಕೆ, ಬೇರೆ ಅಧಿಕಾರಿಯು ಹೇಳಲ್ಪಟ್ಟಿರುವನಲ್ಲಾ, ಬೇರೆ ಆದುದರಿಂದ ಈ ಉಪಾಯಗಳು ನಾವೂ ಭಿನ್ನಾಧಿಕಾರಿಗಳಿಗೇ ಎಂದರೆ ನಾವೂ ಹಾಗೆಯೇ ಎಂದೇ ಹೇಳುತ್ತೇವೆ.—ಹೇಗೆಂದರೆ ಪ್ರಪತ್ತಿಗೆ ಅಧಿಕಾರಿಯು, ಜ್ಞಾನ ಮತ್ತು ವಿಶ್ವಾಸ ಪೂರ್ಣವಾಗಿರುವವನು, ಜ್ಞಾನ ಮತ್ತು ವಿಶ್ವಾಸ ಪೂರ್ಣವಾಗಿಲ್ಲದವನು ಉಪಾಸನಕ್ಕೆ ಅಧಿಕಾರಿಯು, ಎಂದು ಹೀಗೆ ಭಿನ್ನಾಧಿಕಾರಿಗಳಿಗೆ ಈ ಪ್ರಪತ್ತಿ ಭಕ್ತಿಗಳಾದ ಉಪಾಯಗಳೆಂದು ಒಬ್ಬ ಮಹನೀಯರು ತಾವು ಬರೆದ ಗ್ರಂಥದಲ್ಲಿ ಹೇಳಿರುತ್ತಾರೆ. ಈ ಅಭಿಪ್ರಾಯವು ಹೀಗೆ ಕಲ್ಪಿಸಿದರೂ ಸರಿಯಲ್ಲವೆಂದು ಖಂಡಿಸುತ್ತಾರೆ.

**ಜ್ಞಾನವಿಶ್ವಾಸಪೂರ್ತಿಯೇ ಪ್ರಪತ್ತಿಗೆ ಅಧಿಕಾರವು ;**
**ಅವುಗಳ ಮಾಂದ್ಯವೇ ಭಕ್ತಿಗೆ ಅಧಿಕಾರವು, ಎಂಬ ವಾದದ ನಿರಸನವು**

**ಜ್ಞಾನಪೂರ್ತ್ತಿಯಾದಲ್** – ಸಂಪೂರ್ಣ ಜ್ಞಾನವನ್ನಾಗಲಿ, ತತ್ವಹಿತ ಪುರುಷಾರ್ಥಗಳ ಸಂಪೂರ್ಣಜ್ಞಾನವನ್ನಾಗಲಿ ಎಂಬ ಭಾವವು, **ವಿಶ್ವಾಸಪೂರ್ತ್ತಿಯಾದಲ್** – ಸಂಪೂರ್ಣ ವಿಶ್ವಾಸವನ್ನಾಗಲಿ, **ಉಡೈಯವನ್** – ಹೊಂದಿದವನು, **ಪ್ರಪತ್ತಿಕ್ಕು ಅಧಿಕಾರಿ** – ಪ್ರಪತ್ತಿಗೆ ಅಧಿಕಾರಿಯು, **ಜ್ಞಾನಮಾಂದ್ಯಮಾದಲ್** – ಜ್ಞಾನದಲ್ಲಿ ನ್ಯೂನತೆಯನ್ನಾಗಲಿ, **ವಿಶ್ವಾಸಮಾಂದ್ಯಮಾದಲ್** – ವಿಶ್ವಾಸದಲ್ಲಿ ನ್ಯೂನತೆಯನ್ನಾಗಲಿ, **ಉಡೈಯವನ್**–ಹೊಂದಿದವನು, **ಉಪಾಸನಾದಿಗಳುಕ್ಕು** – ಉಪಾಸನವೇ ಮೊದಲಾದವುಗಳಿಗೆ, ಆದಿ ಶಬ್ದದಿಂದ ಕರ್ಮಯೋಗಾದಿಗಳು ಹೇಳಲ್ಪಟ್ಟವು, **ಅಧಿಕಾರಿಯು, ಎನ್ನಾಲ್** – ಎಂಬ ಅಭಿಪ್ರಾಯವಾದರೆ, **ಈ ಚರಮಶ್ಲೋಕಾದಿಗಳುಕ್ಕುಮ್** – ಈ ಚರಮಶ್ಲೋಕಕ್ಕೂ, ಆದಿಶಬ್ದದಿಂದ ಹಿಂದಿನ ಅಧ್ಯಾಯಗಳಲ್ಲಿ ಬೋಧಿಸಲ್ಪಟ್ಟ ಕರ್ಮಯೋಗ ಭಕ್ತಿಯೋಗಾದಿಗಳಿಗೂ, **ಉಪದೇಷ್ಟಾಕ್ಕಳುಮಾಯ್** – ಉಪದೇಶಿಸುವರಾಗಿಯೂ, **ಪರಮಾಸ್ತಿಕರುಮಾಗೈಯಾಲೇ**– ಪರಮಾತ್ಮ ಶಾಸ್ತ್ರಾದಿಗಳ ಪ್ರಾಮಾಣ್ಯವನ್ನು ಅಂಗೀಕರಿಸಿರುವರಾಗಿಯೂ, ಇರುವದರಿಂದ, **ಪೂರ್ಣಜ್ಞಾನ ವಿಶ್ವಾಸರಾನ ವ್ಯಾಸಾದಿಗಳುಕ್ಕು**–ಸಂಪೂರ್ಣ

**ಕರುಮಾಗ್ಗೈಯಾಲೇ ಪೂರ್ಣಜ್ಞಾನ ವಿಶ್ವಾಸರಾನ ವ್ಯಾಸಾದಿಗಳುಕ್ಕು ಉಪಾಸನಾದಿಗಳಿಲ್ ಅಧಿಕಾರಮಿಲ್ಲೈಯಾಮ್.**

**ಅವರ್‌ಗಳ್ ಉಪದೇಶಕಾಲತ್ತಿಲೇ ಜ್ಞಾನವಿಶ್ವಾಸಙ್ಗಳೈಯುಡೈಯವರಾಯ್ ಪಿನ್ಬು ಕಲಙ್ಗಿ ಉಪಾಸಕರಾನಾರ್‌ಗಳೆನ್ಗೈಕ್ಕೊರು ಪ್ರಮಾಣಮಿಲ್ಲೈ. ಪ್ರಪನ್ನರಾಯ್ ವೈತ್ತು, ಲೋಕಸಙ್ಗ್ರಹಾರ್ಥಮಾಹ ಉಪಾ**

---

ಈ ಜ್ಞಾನವಿಶ್ವಾಸವನ್ನು ಹೊಂದಿರುವ ವ್ಯಾಸ ವಸಿಷ್ಠ ಪರಾಶರಾದಿಗಳಿಗೂ, **ಉಪಾಸನಾದಿಗಳಿಲ್ ಅಧಿಕಾರಮಿಲ್ಲೈಯಾಮ್** – ಸಪರಿಕರಗಳಾದ ಉಪಾಸನದಲ್ಲಿ ಅಧಿಕಾರವಿಲ್ಲವೆಂದಾಗುತ್ತದೆ. ಏಕೆಂದರೆ—ನೀವು ಸಂಪೂರ್ಣಜ್ಞಾನವಾಗಲಿ ವಿಶ್ವಾಸವಾಗಲಿ ಇರುವವರಿಗೆ ಪ್ರಪತ್ತಿಯಲ್ಲಿ ಅಧಿಕಾರವೆಂದು ಹೇಳಿರುವದರಿಂದ, ಶ್ರೀವ್ಯಾಸಾದಿಗಳು ಸಂಪೂರ್ಣಜ್ಞಾನವಿಶ್ವಾಸವನ್ನುಳ್ಳವರಾದುದರಿಂದ ಉಪಾಸನದಲ್ಲಿ ಅಧಿಕಾರವಿಲ್ಲವೆಂದಾಗುತ್ತದೆ; ಇದು ಸರಿಯಲ್ಲವೆಂಬ ಭಾವವು ಸಂಪೂರ್ಣಜ್ಞಾನವಿಶ್ವಾಸಾದಿಗಳಿಲ್ಲದವರಾದುದರಿಂದ ಅವರು ಉಪಾಸನಾಧಿಕಾರಗಳೆಂದು ಹೇಳಲು ಸಾಧ್ಯವಿಲ್ಲವು. ಏಕೆಂದರೆ ಅವರುಗಳು ಅನುಗ್ರಹಿಸಿರುವ ಗ್ರಂಥಗಳಿಂದ ಅವರು ಜ್ಞಾನಾಗ್ರೇಸರರೆಂದೇ ಭಾವಿಸಬೇಕಲ್ಲವೇ? ಎಂದರೆ ಇದಕ್ಕೆ ಪೂರ್ವಪಕ್ಷಗಳು ಹೇಳಬಹುದೇನೆಂದರೆ—

ಶ್ರೀವ್ಯಾಸಾದಿಗಳು ಜ್ಞಾನಾಗ್ರೇಸರರೆಂದು ಒಪ್ಪದಿರಲು ಸಾಧ್ಯವಿಲ್ಲವು. ಆದುದರಿಂದ, ಉಪದೇಶಕಾಲದಲ್ಲಿ ಪರಿಪೂರ್ಣಜ್ಞಾನಯುಕ್ತರೇ ಹೌದು; ಅನಂತರ ಜ್ಞಾನದಲ್ಲಿ ನ್ಯೂನತೆಯುಂಟಾಗಿ ಉಪಾಸನೆಯನ್ನು ಕೈಕೊಂಡಿರಬಹುದು, ಎಂದು ವಾದವನ್ನು ತಂದರೆ, ಅದಕ್ಕೆ ಪ್ರಮಾಣವೇನಿದೆ ಎಂದು ಕೇಳುತ್ತಾರೆ-—**ಅವರ್‌ಗಳ್** – ಆ ಶ್ರೀವ್ಯಾಸಾದಿಗಳು, **ಉಪದೇಶಕಾಲತ್ತಿಲೇ** – ತಮ್ಮ ಗ್ರಂಥಗಳಲ್ಲಿ ಉಪದೇಶಿಸಿರುವ ಕಾಲದಲ್ಲಿ, **ಜ್ಞಾನವಿಶ್ವಾಸಙ್ಗಳೈಯುಡೈವರಾಯ್** - ಪೂರ್ಣಜ್ಞಾನವಿಶ್ವಾಸಗಳನ್ನು ಹೊಂದಿದವರಾಗಿ, **ಪಿನ್ಬು** – ಅನಂತರ, **ಕಲಙ್ಗಿ** – ಆ ಜ್ಞಾನವಿಶ್ವಾಸಗಳು ವ್ಯತ್ಯಸ್ತವಾಗಿ ಮ್ಲಾನತೆಯನ್ನು ಹೊಂದಿ, **ಉಪಾಸಕರಾನಾರ್‌ಗಳ್** – ಉಪಾಸಕರಾದರು, **ಎನ್ಗೈಕ್ಕು** – ಎಂದು ಹೇಳುವುದಕ್ಕೆ **ಒರು ಪ್ರಮಾಣಮಿಲ್ಲೈ** – ಒಂದು ಪ್ರಮಾಣವೂ ಇಲ್ಲವು, ಅದೂ ಅಲ್ಲದೆ ಮೊದಲು ಉಪದೇಶಕಾಲದಲ್ಲಿ ಜ್ಞಾನಾಗ್ರೇಸರರಾಗಿರುವವರು ಎಂದಿಗಾದರೂ ಜ್ಞಾನವಿಶ್ವಾಸಗಳ ಹಾನಿಯನ್ನು ಹೊಂದುವರೇ? ಸ್ವಾಮಿಯ ಅನುಗ್ರಹದಿಂದ ಉಂಟಾದ ಸಂಪೂರ್ಣಜ್ಞಾನಕ್ಕೆ ಕೊರತೆಯುಂಟಾಗುವ ಹಾಗೆ ಕುಮಾರ್ಗದಲ್ಲಿ ಪ್ರವರ್ತಿಸುವಂತವರೇ? ಆದುದರಿಂದ ಅಂತಹ ಭಾವನೆಯೇ ಸರಿಯಲ್ಲವೆಂಬ ಭಾವವು.

ಸನಾದಿಗಳ್ಳೈ ಅನುಷ್ಠಿತ್ತಾರ್‌ಗಳೆನ್ಗೈಕ್ಕುಮವರ್ಗಳ್ ಪ್ರಬಂಧಙ್ಗಳಿಲೊರುವಚನ ಮಿಲ್ಲೈ ಅಪ್ಪಡಿ ಕಲ್ಪಿಕ್ಕಪ್ಪುಕ್ಕಾಲುಮ್ ತನ್ ಅಧಿಕಾರತ್ತುಕ್ಕು ನಿಷಿದ್ಧ ಮಾನವತ್ತೈ ಲೋಕಸಂಗ್ರಹಾರ್ಥಮಾಹ ವನುಷ್ಠಿಕ್ಕಪುಕ್ಕಾಲ್, ಅವೈ ಇವರ್ಕ ತನಕ್ಕುಮ್ ಪಾಪಮಾಯ್, ಅಧಿಕಾರತ್ತುಕ್ಕು ವಿರುದ್ಧಾನುಷ್ಠಾನಮ್ ಪಣ್ಣುಗೈಯಾಲೇ ತನ್ನನುಷ್ಠಾನತ್ತೈ ಇಟ್ಟು ಲೋಕಸಂಗ್ರಹಮ್ ಪಣ್ಣುವುಮ್ ಕಡಪ್ಪಡಾದೊಳಿಯುಮ್.

---

ಹೋಗಲಿ, ಲೋಕಸಙ್ಗ್ರಹಾರ್ಥಕ್ಕಾಗಿ, ತಾವು ಉಪಾಸನವನ್ನು ಅನುಷ್ಠಿಸಿದರೆ ಅದನ್ನು ಮೇಲುಪಙ್ತಿಯಾಗಿಟ್ಟುಕೊಂಡು, ಇತರರು ಅನುಷ್ಠಿಸುವರು ಎಂಬ ಲೋಕಸಙ್ಗ್ರಹಕ್ಕಾಗಿ ಅನುಷ್ಠಿಸಿದರು ಎಂದು ಹೇಳುತ್ತೇವೆ ಎಂದರೆ, ಅಗಲೂ ಸಮಂಜಸವಾಗುವದಿಲ್ಲವು, ಹಾಗೆ ಪ್ರಪದನಾಧಿಕಾರಿಗಳಾಗಿದ್ದರೂ ಲೋಕಸಙ್ಗ್ರಹಕ್ಕಾಗಿ ಉಪಾಸನಮಾಡಿದರು ಎಂಬುದಕ್ಕೆ ಪ್ರಮಾಣವೂ ಇಲ್ಲವೆಂದು ಹೇಳುತ್ತಾರೆ. ಪ್ರಪನ್ನರಾಯ್‌ವೈತ್ತು – ಪ್ರಪತ್ತಿಗೆ ಅಧಿಕಾರಿಗಳಾಗಿ ಇದ್ದುಕೊಂಡೇ, ಲೋಕಸಂಗ್ರಹಾರ್ಥಮಾಕ – ಲೋಕದ ಜನರ ಸಂಗ್ರಹಾರ್ಥವಾಗಿ, ಲೋಕದ ಜನರನ್ನು ತಮ್ಮ ಮಾರ್ಗಕ್ಕೆ ತಂದುಕೊಂಡು ತೋರಿಸಿಕೊಡುವುದಕ್ಕಾಗಿ, ಉಪಾಸನಾದಿಗಳ್ಳೈ ಅನುಷ್ಠಿತ್ತಾರ್‌ಗಳೆನ್ಗೈಕ್ಕುಮ್ – ಸಪರಿಕರ ಉಪಾಸನವನ್ನು ಅನುಷ್ಠಿಸಿದರೆಂದು ಹೇಳುವುದಕ್ಕೆ, ಪ್ರಬಂಧಗಳಿಲ್ – ಅವರ ಗ್ರಂಥಗಳಲ್ಲಿ, ಒರುವಚನಮಿಲ್ಲೈ – ಒಂದು ಪ್ರಮಾಣವೂ ಇಲ್ಲ ಅವರ ಗ್ರಂಥಗಳಲ್ಲೂ ಇಲ್ಲವು; ಮತ್ತು ಆ ಗ್ರಂಥಗಳನ್ನು ಕುರಿತು ಬರೆದಿರುವ ಉಪಪಾದನೆಗಳಲ್ಲೂ ಪ್ರಮಾಣವಿಲ್ಲವು. ಅಪ್ಪಡಿ ಕಲ್ಪಿಕ್ಕಪ್ಪುಕ್ಕಾಲುಮ್– ಹಾಗೆ ಪ್ರಮಾಣವೇ ಇಲ್ಲದಿರುವದನ್ನು ಕಲ್ಪಿಸುವದಕ್ಕೆ ಪ್ರಾರಂಭಿಸಿದರೂ, ಪ್ರಮಾಣವಲ್ಲದಿರುವದನ್ನು ಒಂದುವೇಳೆ ಒಪ್ಪಿಕೊಂಡರೂ, ತನ್ ಅಧಿಕಾರತ್ತುಕ್ಕು ನಿಷಿದ್ಧಮಾನತ್ತೈ – ತನ್ನ ಅಧಿಕಾರವಾದ ಪ್ರಪತ್ತಿಗೆ ನಿಷಿದ್ಧವಾದ ಉಪಾಸನವನ್ನು, ಲೋಕಸಂಗ್ರಹಾರ್ಥವಾಗಿ, ಅನುಷ್ಠಿಕ್ಕಪುಕ್ಕಾಲ್ – ಅನುಷ್ಠಿಸಲು ಆರಂಭಿಸಿದರೆ, ಎಂದರೆ ಅನುಷ್ಠಿಸಿದುದಾದರೆ, ಅವೈ - ಅಂತಹ ಅನುಷ್ಠಾನಗಳು, ಇವರ್ಕತನಕ್ಕುಮ್ ಪಾಪಮಾಯ್ – ಇವನಿಗೂ ಅದು ಅಪರಾಧರೂಪವಾಗಿ, ಅಧಿಕಾರತ್ತುಕ್ಕು ವಿರುದ್ಧಾನುಷ್ಠಾನಮ್ – ತನ್ನ ಅಧಿಕಾರಕ್ಕೆ ವಿರುದ್ಧವಾದ ಉಪಾಸನಾನುಷ್ಠಾನವನ್ನು, ಪಣ್ಣುಗೈಯಾಲೆ – ಮಾಡುವದರಿಂದ, ತನ್ನನುಷ್ಠಾನತ್ತೈ ಯಿಟ್ಟು – ತನ್ನ ವಿರುದ್ಧಾನುಷ್ಠಾನವನ್ನು ಮೂಲಮಾಡಿಕೊಂಡು, ಲೋಕಸಙ್ಗ್ರಹಮ್ ಪಣ್ಣುವುಮ್ – ಲೋಕಸಂಗ್ರಹವನ್ನು ಮಾಡೋಣವು, ಕಡಪ್ಪಡಾದೊಳಿಯುಮ್ – ಸಿದ್ಧಿಸದೇ ಹೋಗುತ್ತದೆ.

**ಲೋಕಸಂಗ್ರಹ ಶಬ್ದಾರ್ಥಃ**

**ತನಕ್ಕಿರಂಡುವಳಿಗಳ್ ಶಾಸ್ತ್ರಾನುಮತಙ್ಗಳಾನಾಲ್, ಅವತ್ತಿಲ್ ಲೋಕತ್ತಾರ್ಕ್ಕು ಶಕ್ಯಮಾಯ್, ಅವರುಗಳುಕ್ಕು ಹಿತಮಾಯಿರುಪ್ಪದೊನ್ರೈ ತಾನ್ ಅನುಷ್ಠಿತ್ತು ಕ್ಕಾಟ್ಟಿ, ಲೋಕತ್ತಾರೈ ಯದಿಲೇ ನಿಲ್ಶೈನಿರುತ್ತಿಗೈಯೇ ಲೋಕಸಙ್ಗ್ರಹಮೆನ್ರು ಶ್ರೀಗೀತಾಭಾಷ್ಯತ್ತಿಲೇ ಅರುಳಿಚ್ಚೆಯ್ದಾರ್.**

---

ತನ್ನ ಅಧಿಕಾರವೇ ಬೇರೆ, ಅನುಷ್ಠಾನವೇ ಬೇರೆ, ನಮಗೆ ತೋರಿಸುವ ಅನುಷ್ಠಾನವೇ ಬೇರೆ ಎಂದು ತಿಳಿದು ಜನರು ಅನುಮೋದಿಸದೇ ಹೋಗಬಹುದು. ಲೋಕಸಙ್ಗ್ರಹವೇ ಸಿದ್ಧಿಸುವದಿಲ್ಲವೆಂಬ ಭಾವವು

ಆಗಲಿ, ತನ್ನ ವಿಷಯವು ಹಾಗಿರಲಿ, ತನಗೆ ಅಧಿಕಾರವು ಯಾವುದರಲ್ಲಾದರೂ ಆಗಲಿ, ಲೋಕಸಙ್ಗ್ರಹವು ಲೋಕೋಪಕಾರಕ್ಕಾಗಿಯಲ್ಲವೋ ? ಅವರುಗಳಿಗೆ ಯಾವುದು ಹಿತವೋ ಅದನ್ನು ಅನುಷ್ಠಿಸಿ ತೋರಿಸುವದು ಲೋಕಸಙ್ಗ್ರಹವಲ್ಲವೋ ? ಅದು ಉಪಾದೇಯವಲ್ಲವೋ ? ಎಂದರೆ ಇದು ಲೋಕಸಂಗ್ರಹವಾಗುವ ಗಿಲ್ಲವು. ಶ್ರೀಮದ್ಗೀತಾಚಾರ್ಯರ ಅಭಿಪ್ರಾಯಾನುಸಾರ ಲೋಕಸಙ್ಗ್ರಹವೇನೆಂಬುದನ್ನು ತಿಳಿಸುತ್ತಾರೆ; ತಾನು ಯಾವುದನ್ನು ಶಾಸ್ತ್ರಾನುಮತಿಯಿಂದ ಅನುಷ್ಠಿಸತಕ್ಕದ್ದೋ, ಅದನ್ನೇ ಲೋಕಹಿತಕ್ಕಾಗಿ ಅನುಷ್ಠಿಸತಕ್ಕದೆಂದು ಉಪದೇಶಿಸೋಣವೇ ಲೋಕಸಙ್ಗ್ರಹವೆಂದು ಶ್ರೀಕೃಷ್ಣಭಗವಾನರವರು ಗೀತಾ ಮೂರನೆಯ ಅಧ್ಯಾಯದಲ್ಲಿ ಉಪದೇಶಿಸಿದರೆಂದು "ತನಕ್ಕಿರಂಡು" ಎಂಬ ವಾಕ್ಯದ ಮೂಲಕ ತಿಳಿಸುತ್ತಾರೆ.—

**ತನಕ್ಕಿರಂಡುವಳಿಗಳ್** – ತನಗೆ ಮೋಕ್ಷೋಪಾಯಗಳಾದ ಎರಡು ಮಾರ್ಗಗಳು, ಭಕ್ತಿಪ್ರಪತ್ತಿಗಳು, **ಶಾಸ್ತ್ರಾನುಮತಙ್ಗಳಾನಾಲ್**–ಶಾಸ್ತ್ರಾನುಮತಿವುಳ್ಳವುಗಳಾದನಂತರ, **ಅವತ್ತಿಲ್** – ಅವುಗಳಲ್ಲಿ, **ಲೋಕತ್ತಾರ್ಕ್ಕು ಶಕ್ಯಮಾಯ್** – ಲೋಕದ ಜನರಿಗೆ ಸಾಧ್ಯವಾಗಿ, **ಅವರುಗಳುಕ್ಕು ಹಿತಮಾಯಿರುಪ್ಪದೊನ್ರೈ** – ಅವರುಗಳಿಗೆ ಹಿತವಾಗಿರುವದೊಂದನ್ನು, **ತಾನ್ ಅನುಷ್ಠಿತ್ತುಕ್ಕಾಟ್ಟಿ** – ತಾನೇ ಅನುಷ್ಠಿಸಿ ತೋರಿಸಿ ಎಂದರೆ ತನಗೂ ಶಾಸ್ತ್ರಾನುಮತಿರೀತ್ಯಾ ಅಧಿಕಾರವಿದ್ದು ಅನುಷ್ಠಿಸಿ ತೋರಿಸಿ, **ಲೋಕತ್ತಾರೈಯದಿಲೇ** – ಲೋಕದ ಜನರನ್ನು ಆ ಅನುಷ್ಠಾನದಲ್ಲಿ, **ನಿಲ್ಶೈನಿರುತ್ತಿಗೈಯೇ** – ಸ್ಥಾಪಿಸಿ ನಿಲ್ಲಿಸುವದೇ, ಲೋಕಸಂಗ್ರಹವೆಂದು, **ಶ್ರೀಗೀತಾಭಾಷ್ಯತ್ತಿಲೇ** – ಶ್ರೀಗೀತಾಭಾಷ್ಯದಲ್ಲಿ, **ಅರುಳಿಚ್ಚೆಯ್ದಾರ್**–ಶ್ರೀಭಾಷ್ಯಕಾರರು ಕೃಪಯಾ ಅಪ್ಪಣೆಕೊಡಿಸಿರುತ್ತಾರೆ, ಎಂದರೆ ಶ್ರೀಗೀತಾಚಾರ್ಯರ ಲೋಕಸಂಗ್ರಹಾಭಿಪ್ರಾಯವನ್ನು ವ್ಯಕ್ತಪಡಿಸಿದರೆಂಬ ಭಾವವು. ಎಲ್ಲಿ ಎಂದರೆ " **ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವನ್ತಿ ಭಾರತ । ಕುರ್ಯಾದ್ವಿದ್ವಾಂಸ್ತಥಾಸಕ್ತ**

**ಶ್ಚಿಕೀರ್ಷುರ್ಲೋಕಸಂಗ್ರಹಮ್ । ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ । ಜೋಷಯೇತ್** ಸರ್ವಕರ್ಮಾಣಿ **ವಿದ್ವಾನ್ಯುಕ್ತಸ್ಸಮಾಚರನ್**" ಎಂಬ ಶ್ಲೋಕಗಳಲ್ಲಿ (೩-೨೫, ೨೬) ಪ್ರಕರಣವೇನೆಂದರೆ—ಅರ್ಜುನನು ಜ್ಞಾನಯೋಗವನ್ನು ಅನುಷ್ಠಿಸತಕ್ಕದ್ದೇ ಕರ್ಮಯೋಗವನ್ನು ಅನುಷ್ಠಿಸತಕ್ಕದ್ದೇ ಎಂದು ಶ್ರೀಕೃಷ್ಣಭಗವಾನರವರನ್ನು ಪ್ರಶ್ನಿಸಲು, ಜ್ಞಾನಯೋಗವು ಸರ್ವೇನ್ದ್ರಿಯ ಉಪರತಿಯಿಂದ ಅನುಷ್ಠಿಸತಕ್ಕದ್ದಾದುವರಿಂದ ಅದು ಕಷ್ಟವು, ಅದಕ್ಕು ಕೂಡ ಕರ್ಮಯೋಗವು ಬೇಕು, ಆದದರಿಂದ ನೀನು ಕರ್ಮಯೋಗವನ್ನೇ ಅನುಷ್ಠಿಸತಕ್ಕದ್ದು ಎಂದು ಶ್ರೀಕೃಷ್ಣಭಗವಾನ್ ಉತ್ತರವನ್ನು ಹೇಳುವ ಪ್ರಕರಣವು. ಜ್ಞಾನಯೋಗಾಧಿಕಾರಿಯಾಗಿದ್ದರೂ, ನಿತ್ಯನೈಮಿತ್ತಿಕಕರ್ಮಗಳಿಂದ ಕೂಡಿದ ಕರ್ಮಯೋಗವನ್ನು ಅನುಷ್ಠಿಸುವದೇ ಸರಿಯಾದ ಮಾರ್ಗವೆಂದು ಭಾವಿಸಿ ಅವಿದ್ವಾಂಸರೂ ಕೂಡ ತನ್ನನ್ನು ಅನುಸರಿಸಿ ಅನುಷ್ಠಿಸಲಿ ಎಂಬದಾಗಿ ವಿದ್ವಾಂಸನೂ ಅವುಗಳನ್ನು ಅನುಷ್ಠಿಸತಕ್ಕದ್ದೆಂದೂ, ಹಾಗೆಯೇ ಹಿಂದೆ ಜ್ಞಾನಯೋಗಾಧಿಕಾರಿಗಳಾಗಿರಲು ಯೋಗ್ಯರಾದ ಜನಕಾದಿಗಳು ಅದನ್ನು ಬಿಟ್ಟು ಕರ್ಮಯೋಗವನ್ನೇ ಅನುಷ್ಠಿಸಿದರು ಎಂಬುದು ಉಪದೇಶವು. ಗೀತಾಭಾಷ್ಯತ್ತಿಲ ಅರುಳಿಚ್ಚೆಯ್ಯುಬಾರ್ ಎಂದು ಹೇಳಿರುವದು ಯಾವುದು ಎಂದರೆ— ಜ್ಞಾನಯೋಗೇ ಶಕ್ತೋऽಪಿ **ಪೂರ್ವೋಕ್ತರೀತ್ಯಾ ಕರ್ಮಯೋಗ ಏವ ಜ್ಞಾನಯೋಗನಿರಪೇಕ್ಷ ಆತ್ಮಾವಲೋಕನ ಸಾಧನಮಿತಿ ಬುದ್ಧ್ಯಾಯುಕ್ತಃ ಕರ್ಮೈವಾಚರನ್ ಸರ್ವಕರ್ಮಸು ಅಕೃತ್ಸ್ನವಿದಾಂ ಪ್ರೀತಿಂ ಜನಯೇತ್**" ಈ ವ್ಯಾಖ್ಯಾನದಲ್ಲಿ ಲೋಕತ್ತಾರ್ಕ್ಕು ಶಕ್ಯಮಾಯ್ **ಅವರ್ಗಳುಕ್ಕು ಹಿತಮಾಯಿರ**ುಪ್ಪದೊನ್ರೈ ತಾನ್ **ಅನುಷ್ಠಿತ್ತುಕ್ಕಾಟ್ಟಿ** ಲೋಕತ್ತಾರ್ಕ್ಕೈ **ಅದಿಲೇ ನಿಲೈ ನಿರುತ್ತುಗೈಯೇ** ಲೋಕಸಙ್ಗ್ರಹಮನ್ರು **ಅರುಳಿಚ್ಚೆಯ್ದಾರ್,** ಎಂಬುದ ಉಪಪಾದನೆಯು

ಇದರಿಂದ ತಾನು ಅನುಷ್ಠಿಸಿ ತೋರಿಸತಕ್ಕದ್ದಲ್ಲವಾದುದನ್ನು ಅನುಷ್ಠಿಸಿ ತೋರಿಸುವದು ಲೋಕಸಙ್ಗ್ರಹವಾಗುವದಲ್ಲವು ತನಗೂ ಅದೂ ಶಾಸ್ತ್ರವಿಹಿತವಾದುದಾಗಿ, ಅದನ್ನು ಲೋಕಹಿತಕ್ಕಾಗಿ ತಾನೂ ಅನುಷ್ಠಿಸಿ ತೋರಿಸಿದರೆ ಅದು ಲೋಕಸಙ್ಗ್ರಹವಾಗುತ್ತದೆ ಹಾಗಲ್ಲದಿರುವದನ್ನು ಅನುಷ್ಠಿಸಿ ತೋರಿಸುವದು ಶುದ್ಧಾಭಾಸವಾಗಿ ಪರಿಣಮಿಸಬಹುದು ಹೇಗೆಂದರೆ ತಿಳಿಸುತ್ತಾರೆ. ಗೃಹಸ್ಥಧರ್ಮಗಳೇ ಬೇರೆ, ಸನ್ಯಾಸಿಯ ಧರ್ಮಗಳೇ ಬೇರೆ ಲೋಕಸಙ್ಗ್ರಹಕ್ಕಾಗಿ ಸನ್ನ್ಯಾಸಿಯು ಗೃಹಸ್ಥನ ಅನುಷ್ಠಾನಗಳವಲಂಬಿಸಿ ತೋರುವದು ಸರಿಯಲ್ಲವು ಅದು ಲೋಕಸಙ್ಗ್ರಹವಾಗುವದಿಲ್ಲವೆಂದು ಉಪದೇಶಿಸುತ್ತಾರೆ

**ಅಲ್ಲದು ಸನ್ನ್ಯಾಸಿಕ್ಕು ನಿಷಿದ್ಧಮಾನ ಗೃಹಸ್ಥೈಕಾಂತಧರ್ಮತ್ತೈ ಸನ್ನ್ಯಾಸಿಯನುಷ್ಠಿತ್ತು ಕಾಟ್ಟುಮದು ಲೋಕಸಂಗ್ರಹಾರ್ಥಮಾಗಾದು. ಇದು ಆಜ್ಞಾತಿಲಂಘನಮಾಮತ್ತನ್ನೈ.**

**ಇ(ಅ)ಪ್ಪಡಿಯೇ ಪ್ರಪತ್ತ್ಯಧಿಕಾರಿಕ್ಕು ನಿಷಿದ್ಧತ್ತೈ ಅವನ್ತಾನೇ ಕೈಙ್ಕರ್ಯ ಬುದ್ಧಿಯಾಲೇ ಅನುಷ್ಠಿಕ್ಕೈಯುಮ್ ಸ್ವಾಧಿಕಾರವಿರುದ್ಧಮ್.**

---

**ಅಲ್ಲದು** – ಹಾಗಲ್ಲದೆ ಎಂದರೆ ತನಗೂ ಆ ಮಾರ್ಗವು ವಿಹಿತವಾಗಿ ಶಾಸ್ತ್ರದಲ್ಲಿ ಹೇಳಲ್ಪಟ್ಟು ಲೋಕಹಿತಕ್ಕಾಗಿ ತಾವು ಅನುಷ್ಠಿಸಿ ತೋರಿಸದೆ, ತನಗೆ ವಿಹಿತವಲ್ಲದ ಮಾರ್ಗವಾದ ಉಪಾಸನವನ್ನು ವ್ಯಾಸಾದಿಗಳು ಕೈಕೊಂಡರೆಂದು ಹೇಳುವದು, **ಸನ್ನ್ಯಾಸಿಕ್ಕು** – ಸನ್ಯಾಸಿಗೆ, **ನಿಷಿದ್ಧವಾದ, ಗೃಹಸ್ಥೈಕಾಂತಧರ್ಮತ್ತೈ**–ಗೃಹಸ್ಥನಿಗೆ ಏಕಾಂತವಾದ, ಪತ್ನಿಯೊಂದಿಗೆ ಇರುವ ಧರ್ಮವನ್ನು, ಸನ್ಯಾಸಿಯು, **ಅನುಷ್ಠಿತ್ತುಕಾಟ್ಟುಮದು** – ಅನುಷ್ಠಿಸಿ ತೋರಿಸುವದು, **ಲೋಕಸಙ್ಗ್ರಹಮಾಗಾದು** – ಲೋಕಸಂಗ್ರಹವಾಗುವದಿಲ್ಲವು. ತಮಗೆ ವಿಹಿತವಲ್ಲದ ಕರ್ಮವನ್ನು ಆಚರಿಸುತ್ತಾರೆಂದು ಹೇಳನಕ್ಕೆ ಕಾರಣವಾಗಿ ಯಾರೂ ಆ ಅನುಷ್ಠಾನ ರೀತ್ಯಾ ನಡೆಯುವದಿಲ್ಲವೆಂಬ ಭಾವವು ಇದರಿಂದ ಲೋಕಕ್ಕೆ ಹಿತವಿಲ್ಲವು; ತನಗಾದರೋ ಭಗವನ್ನಿಗ್ರಹ ಪ್ರಾಪ್ತಿ ಎಂದು ಮುಂದೆ ಹೇಳುತ್ತಾರೆ. ಲೋಕಸಙ್ಗ್ರಹಕ್ಕೆ ಬದಲಾಗಿ ಇದು ಏನಾಗುತ್ತದೆ. ಎಂದರೆ **ಇದು ಆಜ್ಞಾತಿಲಂಘನಮಾಮತ್ತನ್ನೈ** – ತನಗೆ ನಿಷಿದ್ಧವಾದ ಆಚರಣೆಯನ್ನು ಅವಲಂಬಿಸಿದುದರಿಂದ ಸ್ವಾಮಿಗೆ ಆಜ್ಞಾಭ್ಛೇದಿಯಾಗಿ ಭಗವನ್ನಿಗ್ರಹಕ್ಕೆ ಪಾತ್ರನಾಗುವನು ಆದುದರಿಂದ ವ್ಯಾಸಾದಿಗಳು ಎಂದಿಗೂ ತಮಗೆ ವಿಹಿತವಲ್ಲದ ಉಪಾಸನಾದಿಗಳನ್ನು ಲೋಕಹಿತಕ್ಕಾಗಿ ಅನುಷ್ಠಿಸಿದವರಲ್ಲವೆಂಬ ತಾತ್ಪರ್ಯವು.

ಆ ಅಭಿಪ್ರಾಯವನ್ನೇ ಇನ್ನೊಂದು ವಿಧವಾಗಿ ವಿಕಲ್ಪಿಸಿ ಲೋಕಹಿತಕ್ಕಾಗಿ ಕೈಙ್ಕರ್ಯಭಾವನೆಯಿಂದ ಅನುಷ್ಠಿಸಿದರೆಂದು ಹೇಳುವದೂ ಸಹ ಅವರುಗಳ ಅಧಿಕಾರಕ್ಕೆ ವಿರುದ್ಧವಾದುದಾದುದರಿಂದ ಸರಿಯುಲ್ಲವೆಂದು ಹೇಳುತ್ತಾರೆ.—

**ಇಪ್ಪಡಿಯೇ** – ಇದೇ ರೀತಿಯಲ್ಲೇ ಎಂದರೆ ಲೋಕಸಙ್ಗ್ರಹಕ್ಕಾಗಿ ತನಗೆ ವಿರುದ್ಧವುದುದರ ಆಚರಣೆಯು ಹೇಗೆ ಸರಿಯುಲ್ಲವಾಗಿ ಲೋಕಸಙ್ಗ್ರಹವಾಗುವದಿಲ್ಲವೋ ಹಾಗೆಯೇ, **ಪ್ರಪತ್ತ್ಯಧಿಕಾರಿಕ್ಕು** – ಪ್ರಪತ್ತಿಗೆ ಅಧಿಕಾರಿಯಾದವನಿಗೆ, **ನಿಷಿದ್ಧತ್ತೈ** – ತನಗೆ ಹೇಳಲ್ಪಡದೇ ಇರುವ ಉಪಾಸನಾದಿಗಳನ್ನು, **ಅವನ್ತಾನೇ** – ಅವನೂ, **ಕೈಙ್ಕರ್ಯಬುದ್ಧಿಯಾಲೇ** – ಭಗವಂತನು ಮೆಚ್ಚುವ ಕೈಂಕರ್ಯವೆಂಬ ಬುದ್ಧಿಯಿಂದ, **ಅನುಷ್ಠಿಕ್ಕೈಯುಮ್** – ಅನುಷ್ಠಿಸೋಣವು, **ಸ್ವಾಧಿಕಾರವಿರು**

ಪ್ರಪತ್ತೇರನಪೇಕ್ಷಿತೋಽಪಿ ವರ್ಣಾಶ್ರಮಧರ್ಮಾನತ್ಯಾಜ್ಯಮ್
ಶಾಸ್ತ್ರವಿಹಿತತ್ವಾತ್,

ಪ್ರಪತ್ತಿಕ್ಕು ಅನಪೇಕ್ಷಿತಙ್ಗಳಾನ ಶಾಸ್ತ್ರೀಯಙ್ಗಳೈ ಕೈಂಕರ್ಯ ಬುದ್ಧಿಯಾಲೇ ಅನುಷ್ಠಿಪ್ಪಾರ್ಕ್ಕು ವಿರೋಧಮಿಲ್ಲೈ. ತನ್ತ್ರಮ್ ಜಾತ್ಯಾದಿಗಳುಕ್ಕು

ದ್ಧಮ್ – ತನ್ನ ಅಧಿಕಾರಕ್ಕೆ ವಿರುದ್ಧವಾದ ಅನುಷ್ಠಾನವಾಗುತ್ತದೆ. ಇದರಿಂದ ಇದು ಕೈಙ್ಕರ್ಯವೂ ಆಗುವದಲ್ಲವು, ಭಗವಂತನೂ ಪ್ರೀತನಾಗುವದಿಲ್ಲವೆಂಬ ಭಾವವು. ಆದುದರಿಂದ ವ್ಯಾಸಾದಿಗಳು ಜ್ಞಾನವಿಶ್ವಾಸಾಧಿಕ್ಯಗಳಿಂದ ಪ್ರಪತ್ತಿಗೆ ಅಧಿಕಾರಿಗಳಾಗಿದ್ದರೂ ಕೈಂಕರ್ಯಬುದ್ಧಿಯಿಂದ ಉಪಾಸನಾದಿಗಳನ್ನು ಅನುಷ್ಠಿಸಿದರು ಎಂದು ಹೇಳಲೂ ಸಾಧ್ಯವಿಲ್ಲವೆಂದು ಹೇಳಿ ಮುಗಿಸಿದರು.

ಮುಂದೆ ಈ ಪ್ರಪತ್ತ್ಯಧಿಕಾರಿಗೆ ತನ್ನ ಉಪಾಯಕ್ಕೆ ಅಂಗವಾಗಿ ವಿಧಿಸದೇ ಇರುವ, ತನ್ನ ವರ್ಣಾಶ್ರಮಧರ್ಮಗಳನ್ನು ಕೈಂಕರ್ಯಬುದ್ಧಿಯಿಂದ ಅನುಷ್ಠಿಸಕೂಡದೇ ಎಂದರೆ ಅವುಗಳನ್ನು ಅಗತ್ಯವಾಗಿ ಕೈಂಕರ್ಯಬುದ್ಧಿಯಿಂದ ಅನುಷ್ಠಿಸಲೇಬೇಕು ಎಂಬ ಶಾಸ್ತ್ರಾರ್ಥವಿರುವದರಿಂದ ಅನುಷ್ಠಿಸತಕ್ಕದ್ದೆಂದೂ. ಹಾಗೆ ಅನುಷ್ಠಿಸದೇ ಬಿಟ್ಟರೆ ಜ್ಞಾನಶೂನ್ಯ ಮೃಗ ಪಕ್ಷಿ ಪಶುಗಳಿಗೆ ಸಮಾನವಾಗುವನೆಂದೂ ಹೇಳುತ್ತಾರೆ

ಪ್ರಪತ್ತಿಗೆ ಬೇಕಾಗಿಲ್ಲದ ವರ್ಣಾಶ್ರಮ ಧರ್ಮಗಳು
ತ್ಯಾಗಮಾಡತಕ್ಕವುಗಳಲ್ಲವು, ಶಾಸ್ತ್ರವಿಹಿತವಾದುದರಿಂದ

ಪ್ರಪತ್ತಿಕ್ಕು ಅನಪೇಕ್ಷಿತಂಗಳಾನ – ಪ್ರಪತ್ತಿರೂಪ ಉಪಾಯಾನುಷ್ಠಾನಕ್ಕೆ ಬೇಕಾಗದ, ಎಂದರೆ ಅದಕ್ಕೆ ಅಂಗಗಳಲ್ಲದೇ ಇರುವ, ಶಾಸ್ತ್ರೀಯಙ್ಗಳೈ – ಶಾಸ್ತ್ರಗಳಲ್ಲಿ ಹೇಳಿರುವ ಧರ್ಮಗಳನ್ನು, ಕೈಙ್ಕರ್ಯಬುದ್ಧಿಯಾಲೇ – ಭಗವಂತನಿಗೆ ಮಾಡುವ ಕೈಙ್ಕರ್ಯವೆಂಬ ಬುದ್ಧಿಯಿಂದ, ಅನುಷ್ಠಿಪ್ಪಾರ್ಕ್ಕು – ಅನುಷ್ಠಿಸುವವರಿಗೆ ವಿರೋಧಮಿಲ್ಲೈ – ವಿರೋಧವೇನೂ ಇಲ್ಲವು ಹಾಗೆ ಅನುಷ್ಠಿಸುವದರಲ್ಲಿ ಶಾಸ್ತ್ರವಿರುದ್ಧವಾದುದು ಏನೂ ಇಲ್ಲವು, ಆದುದರಿಂದ ಅನುಷ್ಠಿಸಬೇಕೆಂಬ ತಾತ್ಪರ್ಯವು ಶಾಸ್ತ್ರವಿಹಿತವಾದ ಕರ್ಮಗಳನ್ನು ಶಾಸ್ತ್ರಾನುಮತಿಯಿಂದಲೇ, ಫಲಾಭಿಸಂಧಿರಹಿತನಾಗಿ ಅನುಷ್ಠಿಸಿ, ಭಗವತ್ಪ್ರೀತಿಯುಂಟಾಗಲೆಂದು ಕೈಙ್ಕರ್ಯರೂಪದಲ್ಲಿ ಎಸಗಿ ಆತನಲ್ಲಿ ಸಮರ್ಪಿಸೋಣದರಲ್ಲಿ ಏನೊಂದೂ ವಿರೋಧವಿಲ್ಲವೆಂಬ ಭಾವವು.

" ಮಯಿಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮಚೇತಸಃ " ಎಂಬಲ್ಲಿ ಹೇಳಿರುವ ಹಾಗೆ ಅನುಷ್ಠಿಸಬಹುದೆಂಬ ತಾತ್ಪರ್ಯವು. ತನ್ತ್ರಮ್ ಜಾತ್ಯಾದಿಗ

**ಅನುರೂಪಂಗಳುಮಾಯ್, ತನ್ನಾಮುಕ್ಕು ಶಕ್ಯಂಗಳುಮಾನ ಸರ್ವಧರ್ಮಂಗಳೆನುಡೈಯ ಸ್ವರೂಪತ್ಯಾಗಮ್ ಅಂಗಮಾಕ ವಿಧೇಯಮೆನ್ನುಮ್ ಪಕ್ಷತ್ತಿಲುಮ್, ಪ್ರಪತ್ತ್ಯುತ್ತರಕಾಲವ್ ತನ್ ವರ್ಣಾಶ್ರಮಾದ್ಯಧಿಕಾರಙ್ಗಳುಕ್ಕು ಅನುರೂಪಮಾಗವಡೈತ್ತ ಕೈಙ್ಕರ್ಯಫಲತ್ತೈಯುಮಿಳಿನ್ದು ಅಹಿಂಸಾ ಸತ್ಯವಚನಾದಿ ಸಾಮಾನ್ಯ ಧರ್ಮಙ್ಗಳೈಯುಮ್ ಆಚಾರ್ಯವಂದನಾದಿಗಳೈಯುಮ್ ತವಿರ್ನ್ದು ಪಶು ಮೃಗ ಪಕ್ಷ್ಯಾದಿಗಳೈಪ್ಪೋಲೆ ತಿರುಯುಮ್ಪಡಿಯಾಮ್.**

---

**ಳುಕ್ಕು** – ತಮ್ಮ ತಮ್ಮ ವರ್ಣಾಶ್ರಮಗಳಿಗೆ, **ಅನುರೂಪಂಗಳುಮಾಯ್** – ಅನುಗುಣವಾದುದಾಗಿ, ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟವುಗಳಾಗಿಯಾಗಲಿ, ಶಾಸ್ತ್ರಾನುಮತಿಯುಳ್ಳವಗಳಾಗಿಯಾಗಲಿ, **ತನ್ನಾಮುಕ್ಕು ಶಕ್ಯಂಗಳುಮಾನ** – ತಮಗಳಿಗೆ ಸಾಧ್ಯವಾದ, **ಸರ್ವಧರ್ಮಂಗಳೆನುಡೈಯ** – ಸಮಸ್ತಧರ್ಮಗಳ, **ಸ್ವರೂಪತ್ಯಾಗಮ್** – ಸಂಪೂರ್ಣತ್ಯಾಗವು, **ಅಂಗಮಾಕವಡೈತ** – ಅಂಗವೆಂದು ಗ್ರಹಿಸಿದ, **ಕೈಙ್ಕರ್ಯಫಲತ್ತೈಯುಮ್**– ಭಗವತ್ಕೈಙ್ಕರ್ಯ ರೂಪಫಲವನ್ನೂ, **ಇಳಿನ್ದು** – ಇಲ್ಲದೇ ಹೋಗಿ, **ಅಹಿಂಸಾ ಸತ್ಯವಚನಾದಿ ಧರ್ಮಙ್ಗಳೈಯುಮ್** – ಪರಹಿಂಸೆಯನ್ನು ಮಾಡಕೂಡದು, ಸತ್ಯವನ್ನೇ ಹೇಳತಕ್ಕದ್ದು ಇವೇ ಮೊದಲಾದ ಧರ್ಮಗಳನ್ನೂ, **ಆಚಾರ್ಯವಂದನಾದಿಗಳೈಯುಮ್**-ತಮ್ಮ ಆಚಾರ್ಯರಿಗೆ ನಮಸ್ಕಾರಕೈಙ್ಕರ್ಯಗಳನ್ನೂ **ತವಿರನ್ದು** – ತ್ಯಾಗಮಾಡಿ, **ಪಶುಮೃಗ ಪಕ್ಷ್ಯಾದಿಗಳೈಪೋಲೆ** – ಪಶು ಮೃಗ ಪಕ್ಷಿಯೇ ಮೊದಲಾದ ಜ್ಞಾನಶೂನ್ಯಜನ್ತುಗಳ ಹಾಗೆ, **ತಿರುಯುಮ್ಪಡಿಯಾಮ್** – ಯಥೇಚ್ಛವಾಗಿ ಸಂಚರಿಸುವ ಹಾಗೆ ಆಗುತ್ತದೆ **ಸರ್ವಧರ್ಮಾನ್ ಪರಿತ್ಯಜ್ಯ** – ಎಂಬಲ್ಲಿ ಸರ್ವಧರ್ಮಗಳ ಸ್ವರೂಪತ್ಯಾಗವು ವಿಧಿಸಲ್ಪಟ್ಟಿತೆಂದರೆ, ಸರ್ವಧರ್ಮಗಳಲ್ಲಿ ಈತನಿಗೆ ವಿಹಿತಗಳಾದ ಆಜ್ಞಾಕೈಂಕರ್ಯಗಳಾದ ನಿತ್ಯನೈಮಿತ್ತಿಕ ಕರ್ಮಗಳನ್ನೂ ಹಾಗೆಯೇ ಭಗವದ್ಭಾಗವತ ಕೈಂಕರ್ಯಗಳನ್ನೂ ತ್ಯಾಗಮಾಡತಕ್ಕದ್ದೆಂದೂ ವಿಧಿಸಲ್ಪಟ್ಟಿತೆಂದಾಗುವದರಿಂದ ಇಂತಹ ಪ್ರಪನ್ನನು ಮೃಗ ಪಶು ಪಕ್ಷ್ಯಾದಿಗಳ ಹಾಗೆ ಯಥೇಚ್ಛವಾಗಿ ತಿರುಗಬಹುದು ; ಎಂದರೆ ಶಾಸ್ತ್ರೀಯವಾಗಿ ಮಾಡತಕ್ಕ ಎನೊಂದೂ ನಿರ್ಬಂಧವಿಲ್ಲದೆ ಇರಬಹುದು , ಜ್ಞಾನವಿವೇಕಯುಕ್ತನಾದ ತಾನೂ, ಜ್ಞಾನಶೂನ್ಯಗಳಾದ ಅವೂ ಒಂದೇ ಆಯಿತೆಂಬ ಭಾವವು.

ಆಗಲಿ, ಧರ್ಮಗಳು ಎರಡುವಿಧವು ಪ್ರವೃತ್ತಿಧರ್ಮಗಳು ನಿವೃತ್ತಿಧರ್ಮಗಳು ಎಂಬದಾಗಿ, ಪ್ರವೃತ್ತಿಃ **ಪುನರಾವೃತ್ತಿ ನಿವೃತ್ತಿಃ ಪರಮಾಗತಿಃ** " (ಭಾರ. ಶಾನ್ತಿ. ೨೧೯ ೮) ಎಂದು ಹೇಳಿರುವ ಹಾಗೆ ಪ್ರವೃತ್ತಿರೂಪವಾದ ಸರ್ವಧರ್ಮಗಳೂ ಸ್ವರಕ್ಷಣಾರ್ಥವಾದ ಸ್ವವ್ಯಾಪಾರವಾದುದರಿಂದ ಆವಾಗ ವಿರುದ್ಧವಾದುವುಗಳು, ಅವುಗಳ

**ನಿಷೇಧವಾಕ್ಯಸಿದ್ಧಙ್ಗಳಾನ ನಿವೃತ್ತಿರೂಪ ಧರ್ಮಙ್ಗಳಿಲ್ ಸ್ವರಕ್ಷಾರ್ಥ ಸ್ವವ್ಯಾಪಾರ ಮಿಲ್ಲಾಮೈಯಾಲೇ ಶರಣಾಗತಿಯೋಡು ವಿರೋಧಮಿಲ್ಲಾ ಮೈಯಾಲ್, ಇಙ್ಗು ಪ್ರವೃತ್ತಿರೂಪ ಧರ್ಮಙ್ಗಳನುಡೈಯತ್ಯಾಗಮೇ ವಿವಕ್ಷಿತ ಮೆನ್ರುಮ್ ನಿರ್ವಾಹಮುಮ್ ಮಂದಮ್. ನಿವೃತ್ತಿಯುಮ್ ವ್ಯಾಪಾರ ವಿಶೇಷಮೆನ್ನುಮಿಡಮುಮ್ ಅದುವುಮ್ ಸ್ವರಕ್ಷಣಾರ್ಥಮಾಮೆನ್ನುಮಿಡ ಮುಮ್, ಲೋಕವೇದಸಿದ್ಧಮಿರೇ.**

ತ್ಯಾಗವೇ ಅಂಗವಾಗಿ ವಿಧಿಸಲ್ಪಟ್ಟಿವೆಂದು ಹೇಳಿದೆವು, ನಿವೃತ್ತಿ ರೂಪಧರ್ಮಗ ಳಾದರೋ ಅಂತವುಗಳಲ್ಲವಾದುದರಿಂದ ಅಂತವುಗಳ ತ್ಯಾಗವು ಅಂಗವೆಂದು ವಿಧಿಸ ಲಿಲ್ಲವೆಂದು ಹೇಳುತ್ತೇನೆ, ಅಂತಹ ಸಂದರ್ಭದಲ್ಲಿ ಹಿಂಸಿಸಬೇಡ, ಅನೃತ ಹೇಳ ಬೇಡ ಇತ್ಯಾದಿ ನಿಷೇಧ ಧರ್ಮಗಳ ತ್ಯಾಗವು ಹೇಳಿದಂತಾಗುವದಿಲ್ಲವಷ್ಟೇ? ಎಂದರೆ ಈ ಅಭಿಪ್ರಾಯವೂ ಸರಿಯಲ್ಲವೆಂದು ತಿಳಿಸುತ್ತಾರೆ—ಏಕೆಂದರೆ ನಿಷೇಧದಿಂದುಂ ಟಾಗುವ ನಿವೃತ್ತಿಯೂ ಒಂದು ವ್ಯಾಪಾರ ವಿಶೇಷವೇ ಆಗುತ್ತದೆ, ಅದೂ ಕೂಡ ಸ್ವರಕ್ಷಣಾರ್ಥವಾದುದೇ ಆಗುತ್ತದೆಂದು ತಿಳಿಸುತ್ತಾರೆ.— **ನಿಷೇಧವಾಕ್ಯಙ್ಗಳಾನ** – ವೇದಗಳಲ್ಲಿನ ನಿಷೇಧವಾಕ್ಯಗಳಿಂದ "ನಹಿಂಸ್ಯಾತ್" ಇವೇ ಮೊದಲಾದವು ಗಳಿಂದ ಸಿದ್ಧಗಳಾದ, **ನಿವೃತ್ತಿರೂಪ ಧರ್ಮಗಳಲ್ಲಿ, ಸ್ವರಕ್ಷಣಾರ್ಥ ಸ್ವವ್ಯಾಪಾರ ಮಿಲ್ಲಾಮೈಯಾಲೆ** – ತನ್ನ ರಕ್ಷಣೆಗೆ ಉಪಯುಕ್ತವಾದ ತನ್ನ ವ್ಯಾಪಾರಗಳು ಯಾವುವೂ ಇಲ್ಲವಾದುದರಿಂದ, **ಶರಣಾಗತಿಯೋಡುವಿರೋಧಮಿಲ್ಲಾಮೈಯಾ ಲೇ** – ಶರಣಾಗತಿ ಧರ್ಮಕ್ಕೇನೂ ವಿರೋಧವಾದುದು ಯಾವುದೂ ಇಲ್ಲದುದರಿಂದ, ಇಙ್ಗು– ಈ ಸ್ಥಳದಲ್ಲಿ ಎಂದರೆ **ಪರಿತ್ಯಜ್ಯ** ಎಂಬುದಕ್ಕೆ ವ್ಯಾಖ್ಯಾನ ಮಾಡುವದರಲ್ಲಿ, **ಪ್ರವೃತ್ತಿರೂಪ ಧರ್ಮಗಳ ಸ್ವರೂಪತ್ಯಾಗವೇ, ವಿವಕ್ಷಿತಮೆನ್ರುಮ್** – ಇಲ್ಲಿ ವಿಧಿಸತಕ್ಕದ್ದೆಂಬ, **ನಿರ್ವಾಹಮುಮ್** – ಯೋಜನೆಯೂ ಕೂಡ **ಮಂದಮ್** – ಪ್ರಜ್ಞಾಶಾಲಿಗಳ ಹೇಳಿಕೆಯಾಗುವುದಿಲ್ಲವು, ಏಕೆಂದರೆ ಎರಡು ಕಾರಣಗಳನ್ನು ಹೇಳುತ್ತಾರೆ – (೧) **ನಿವೃತ್ತಿಯುಮ್ ವ್ಯಾಪಾರ ವಿಶೇಷಮೆನ್ನು ಮಿಡ ಮುಮ್** - ಶ್ರುತಿಯ ನಿಷೇಧವಾಕ್ಯವನ್ನನುಸರಿಸಿ ನಡೆಯುವ ನಿವೃತ್ತಿಯೂ ಕೂಡ ಒಂದು ವ್ಯಾಪಾರ ವಿಶೇಷವೇ ಎಂಬುವ ಸಂದರ್ಭವೂ (೨) **ಅದುವುಮ್** – ಅಂತಹ ನಿವೃತ್ತಿಯೂ ಸಹ, **ಸ್ವರಕ್ಷಣಾರ್ಥಮಾಮೆನ್ನು ಮಿಡಮುಮ್** – ಸ್ವರಕ್ಷ ಣೆಗೆ ಉಪಯುಕ್ತವಾಗುವದೆಂಬುವ ಸಂದರ್ಭವೂ ಸಹ, **ಲೋಕವೇದಸಿದ್ಧಮಿರೆ** – ಲೋಕದಲ್ಲೂ ಅಥವಾ ಲೋಕವೆಂದರೆ ಸ್ಮೃತಿಯಲ್ಲೂ, ವೇದದಲ್ಲೂ ವ್ಯಕ್ತವಾದ ವಿಷಯವಷ್ಟೇ. ಪೂರ್ವಪಕ್ಷಿಯು ನಿಷೇಧವಾಕ್ಯಾನುಸಾರ ನಡೆಯುವ ನಿವೃತ್ತಿಯು ವ್ಯಾಪಾರವೇ ಅಲ್ಲವೆಂದು ಭಾವಿಸಿದ್ದನು. ಆದೂ ವ್ಯಾಪಾರವೇ ಆಗುತ್ತದೆ;

**ಇವ್ವಿಧಿ ಬಲತ್ತಾಲೇ ಪ್ರವೃತ್ತಿ ನಿವೃತ್ತಿ ರೂಪಙ್ಗಳಾನ ಸರ್ವಧರ್ಮಙ್ಗಳೈಯುಮ್ ತವಿರನ್ದು ತಿರಿಗೈತಾನೇ ಪ್ರಪನ್ನನುಕ್ಕು ಶಾಸ್ತ್ರಾರ್ಥಮಾನಾಲೋವೆನ್ನಿಲ್ ?— ಪ್ರಪನ್ನರಾನ ಪೂರ್ವರುಗಳುಮ್, ಇಪ್ಪೋದುಳ್ಳರುಮ್ ಸಾವಧಾನರಾಯ್‌ಪ್ಪಣ್ಣಿಪ್ಪೋರುಗಿರ ಕೈಙ್ಕರ್ಯಙ್ಗಳುಮ್, ಅಪಚಾರ ಪರಿಹಾರಙ್ಗಳುಮ್ ವಿರುದ್ಧಾನುಷ್ಠಾನಮಾಮ್.**

---

ಹೇಗೆಂದರೆ ಇನ್ನೊಬ್ಬರ ಧನವನ್ನು ಮುಟ್ಟಬೇಡವೆಂದರೆ, ತನ್ನ ಭಂಡಿಯಲ್ಲಿ ಕೂತಿದ್ದ ಸ್ನೇಹಿತನು ಹಣದ ಚೀಲವನ್ನು ಮರೆತು ಬಿಟ್ಟು ಹೋಗಿ, ಎಲ್ಲಿ ಬಿಟ್ಟು ಬಿಟ್ಟೆನೋ ? ಎಂದು ಕಟಸ್ಥನಾಗಿದ್ದರೂ, ತಾನು ಆತನಿಗೆ ತಿಳಿಸಬೇಕಾದ ವ್ಯಾಪಾರ ಉಳ್ಳದುದು ; ಅದೂ ಅಲ್ಲದೆ ಅದನ್ನು ಅಪಹರಿಸಿ ಇಟ್ಟುಕೊಳ್ಳತಕ್ಕದ್ದಲ್ಲವೆಂದು ಮನಸ್ಸನ್ನು ನಿಗ್ರಹಿಸುವ ವ್ಯಾಪಾರವನ್ನೂ ಉಳ್ಳದುದು (೩) ಅಂತಹ ನಿವೃತ್ತಿಯ ಊ ಸ್ವರಕ್ಷಣಕ್ಕೆ ಉಪಯುಕ್ತವಾಗುತ್ತದೆ ಹೇಗೆಂದರೆ—ಆ ಹಣದ ಚೀಲವು, ಇವ ನಲ್ಲಿದೆ ಎಂಬ ರುಜುವಾತು ಉಂಟಾದರೆ ನ್ಯಾಯಾಧಿಪತಿಯು ಆಗ್ರಹದಿಂದ ರಕ್ಷಿಸ ಲ್ಪಡುವದಕ್ಕೂ ಹೇತುವಾಗುತ್ತದೆಂಬ ಭಾವವು ಹಾಗೆಯೇ ವೇದದಲ್ಲಿ ಇತರರ ದ್ರವ್ಯಕ್ಕೆ ಆಶೆಪಡಬೇಡವೆಂದು ಹೇಳಿ, ಹಾಗೆ ನಡೆದುಕೊಳ್ಳುವದು ಭಗವದನುಗ್ರಹ ಪ್ರಾಪ್ತಿಗೆ ಹೇತುವಾಗುತ್ತದೆ ಹಾಗಿಲ್ಲದಿದ್ದರೆ ಭಗವನ್ನಿಗ್ರಹಕ್ಕೆ ಗುರಿಯಾಗುವನು. ಹೀಗೆ ಅನೇಕ ನಿವೃತ್ತಿಧರ್ಮಗಳೂ ವ್ಯಾಪಾರಗಳೆಂದೂ, ಅವು ಸ್ವರಕ್ಷಣೆಗೆ ಉಪ ಯುಕ್ತವಾಗಬಹುದೆಂದೂ ತೋರಿಸಬಹುದು

ಹಾಗಾದರೆ, ಪ್ರವೃತ್ತಿ ನಿವೃತ್ತಿರೂಪಗಳಾದ ಎಲ್ಲಾ ಧರ್ಮಗಳ ತ್ಯಾಗವೇ ವಿಧಿಸಿತು ಎಂದು ಹೇಳಿಬಿಡುತ್ತೇವೆ, ಎಂದರೆ ಆಗಲೂ ದೂಷಣವನ್ನು ಹೇಳಿ, ಇದುದರಿಂದ ಧರ್ಮಗಳ ಸ್ವರೂಪತ್ಯಾಗ ವಿಧಿಸಲ್ಪಟ್ಟಿತೆಂಬ ಅಭಿಪ್ರಾಯವೇ ಸಾಧು ವಾದುದಲ್ಲವೆಂದು ಮುಂದೆ ತಿಳಿಸುತ್ತಾರೆ - **ಇವ್ವಿಧಿಬಲತ್ತಾಲೇ** – ಪರತ್ಯಜ್ಯ ಎಂಬಲ್ಲಿ ಸರ್ವಧರ್ಮಗಳ ಸ್ವರೂಪತ್ಯಾಗ ವಿಧಿಸಲ್ಪಟ್ಟಿತೆಂಬ ಬಲದಿಂದ, **ಪ್ರವೃತ್ತಿ ನಿವೃತ್ತಿರೂಪಙ್ಗಳಾನ ಸರ್ವಧರ್ಮಂಗಳೈಯುಮ್**–ಪ್ರವೃತ್ತಿ ನಿವೃತ್ತಿರೂಪ ಸಮಸ್ತ ಧರ್ಮಗಳನ್ನು, **ತವಿರ್‌ನ್ದು** – ಸಂಪೂರ್ಣವಾಗಿ ತ್ಯಾಗಮಾಡಿ, **ತಿರಿಗೈತಾನೇ** – ಯಥೇಚ್ಛೆಯಿಂದ ಸಂಚರಿಸುವದೇ, **ಪ್ರಪನ್ನನುಕ್ಕು** – ಪ್ರಪದನಾನುಷ್ಠಾನಮಾಡಿ ದವನಿಗೆ, **ಶಾಸ್ತ್ರಾರ್ಥಮಾನಾಲೋವೆನ್ನಿಲ್** – ಶಾಸ್ತ್ರಾಭಿಪ್ರಾಯವೆಂಬುದೇ ಆಕೆ ಕೂಡದು ? ಎಂದರೆ **ಪ್ರಪನ್ನರಾನ ಪೂರ್ವರುಗಳುಮ್** – ಪ್ರಪದನವನ್ನನು ಷ್ಠಿಸಿದ ಪೂರ್ವಾಚಾರ್ಯರುಗಳೂ ತಚ್ಛಿಷ್ಯರಾದ ಮಹನೀಯರೂ ಸಹ, **ಇಪ್ಪೋದು ಳ್ಳರುಮ್**–ಈಗಿರುವ ಮಹನೀಯರಾದ ಪ್ರಪನ್ನರೂ ಸಹ, **ಸಾವಧಾನರಾಯ್**

**ಯಥಾಪ್ರಮಾಣಮ್ ಪ್ರಪತ್ತಿಸಂಪ್ರದಾಯ ಪ್ರವರ್ತಕರಾಯ್ ಪರಮ ಕಾರುಣಿಕರುಮಾಯ್ ಇರುಕ್ಕಿರವರ್ಗಳುಕ್ಕು ಭ್ರಮ ವಿಪ್ರಲಂಭ ಸಂಭಾವನೆಯುಮಿಲ್ಲೈ.**

– ತುಂಬಾ ಜಾಗರೂಕರಾಗಿ, ಶ್ರದ್ಧಾಭಕ್ತಿಯುತರಾಗಿ ಎಂಬ ಭಾವವು, **ಪಣಿ ಪೋರುಗಿರ ಕೈಙ್ಕರ್ಯಙ್ಗಳುಮ್** – ಅನುಷ್ಠಿಸುತ್ತಿರುವ ಕೈಂಕರ್ಯಗಳೂ ಮತ್ತು, **ಅಪಚಾರ ಪರಿಹಾರಙ್ಗಳುಮ್** – ಅಂತಹ ಪ್ರಪನ್ನರಲ್ಲಿ ಮಾಡಿದ ಅಪಚಾರಗಳಿಗೆ ಪ್ರಾಯಶ್ಚಿತ್ತರೂಪದಲ್ಲಿ ಅವರುಗಳು ಅನುಷ್ಠಿಸುವ ಕ್ಷಮಾಪಣೆ ಶರಣಾಗತಿ ಮೊದಲಾದ ಅನುಷ್ಠಾನಗಳೂ ಸಹ, **ವಿರುದ್ಧಾನುಷ್ಠಾನಮಾಮ್** – ನಿಮ್ಮ ಅಭಿಪ್ರಾಯದ ಪ್ರಕಾರ ವಿರುದ್ಧವಾದ ಅನುಷ್ಠಾನವಾಗಬಹುದು. ಸಮಸ್ತ ಪ್ರವೃತ್ತಿ ನಿವೃತ್ತಿ ಧರ್ಮಗಳ ಸ್ವರೂಪತ್ಯಾಗವು, ಪರಿತ್ಯಜ್ಯ – ಎಂಬಲ್ಲಿ ತ್ಯಾಗವು ವಿಧಿಯಾದ ಪ್ರಯುಕ್ತ ಹಿಂದೆ ಆಳ್ವಾರಾಚಾರ್ಯರುಗಳು ನಡೆಸಿದ ಕೈಙ್ಕರ್ಯಗಳೂ, ಈಗಿನ ಬ್ರಹ್ಮವಿತ್ತುಗಳೂ ಭಾಗವತೋತ್ತಮರುಗಳೂ ಅನುಷ್ಠಿಸುವ ಕೈಙ್ಕರ್ಯಗಳು, ಭಾಗವತಾಪಚಾರಗಳ ಸಂಘಟನೆಯಲ್ಲಿ ಪ್ರಾಯಶ್ಚಿತ್ತ ರೂಪದಲ್ಲಿ ಅವರುಗಳು ಅನುಷ್ಠಿಸುವ ಕರ್ಮಗಳೂ ಎಲ್ಲವೂ ನಿಮ್ಮ ಅಭಿಪ್ರಾಯದ ಪ್ರಕಾರ ವಿರುದ್ಧಾಚರಣೆಗಳಾಗುವುವು ಎಂಬ ತಾತ್ಪರ್ಯವು.

ಆಗಲಿ, ಹಿಂದಿನ ಆಚಾರ್ಯರುಗಳೂ ಈಗಿನವರೂ ಸಹ ಅನುಷ್ಠಿಸಿದುದು ಸರಿಯಲ್ಲವು ; ಏಕೆಂದರೆ ಭ್ರಮ ವಿಪ್ರಲಂಭಾದಿಗಳಿಂದ ಹಾಗೆ ಅನುಷ್ಠಿಸಿರಬಹುದೆಂದು ಏಕೆ ಹೇಳಕೂಡದು ; ಸರ್ವಧರ್ಮಾನ್ಪರಿತ್ಯಜ್ಯ ಎಂಬುದರ ನಿಶ್ಚಯವಾದ ಅರ್ಥವು ಅವರಿಗೆ ಉಂಟಾಗದೆ ಭ್ರಮ ಬುದ್ಧಿಯಿಂದ ಅವರುಗಳು ಅನುಷ್ಠಿಸಿರಬಹುದೆಂದು ಪೂರ್ವಪಕ್ಷಿಯು ಹೇಳಬಹುದೆಂದು ಭಾವಿಸಿ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಏನೆಂದರೆ—ನಮ್ಮ ಪೂರ್ವಾಚಾರ್ಯರುಗಳಿಗೆ ಭ್ರಮ ವಿಪ್ರಲಂಭಾದಿಗಳನ್ನು ಆರೋಪಿಸುವದು ನ್ಯಾಯವಲ್ಲವು. ಅವರುಗಳು ಶಾಸ್ತ್ರಗಳಿಗೆ ಈಷದಪಿ ವಿರೋಧವಿಲ್ಲದೆ ಶಾಸ್ತ್ರಗಳನ್ನು ಚನ್ನಾಗಿ ವಿಮರ್ಶಿಸಿ ತಿಳಿದು ತದನುಗುಣವಾಗಿ ಅನುಷ್ಠಿಸಿದವರು, ಆದುದರಿಂದ ಅವರುಗಳಿಗೆ ಭ್ರಮ ಮೊದಲಾದವುಗಳ ಆರೋಪಣೆಯು ಎಂದಿಗೂ ಉಚಿತವಲ್ಲವೆಂದು ಹೇಳುತ್ತಾರೆ.—**ಯಥಾಪ್ರಮಾಣಮ್**– ಶಾಸ್ತ್ರಪ್ರಮಾಣವು ಹೇಗಿರುತ್ತದೋ ತದನುಗುಣವಾಗಿ, **ಪ್ರಪತ್ತಿ ಸಂಪ್ರದಾಯ ಪ್ರವರ್ತಕರಾಯ್** – ಪ್ರಪದನಾನುಷ್ಠಾನವನ್ನು ತಮ್ಮ ತಮ್ಮ ಆಚಾರ್ಯರುಗಳು ನಡೆಸಿದ ಕ್ರಮದಲ್ಲೇ ನಡೆಸುವವರಾಗಿಯೂ, **ಪರಮಕಾರುಣಿಕರುಮಾಯ್** – ತಮ್ಮನ್ನು ಆಶ್ರಯಿಸಿದವರ ವಿಷಯದಲ್ಲಿ ಪರಮಕೃಪೆಯುಳ್ಳವರಾಗಿಯೂ, **ಇರು**

**ಯಾವಜ್ಜೀವಮ್ ಸರ್ವಧರ್ಮತ್ಯಾಗಮ್ ವಿಧೇಯಮಾಗಿಲನ್ರೋ ಇವ್ವಿರೋಧಮುಳ್ಳದು ; ಪ್ರಪತ್ತ್ಯನುಷ್ಠಾನ ಕ್ಷಣತ್ತಿಲ್ ಸರ್ವಧರ್ಮಙ್ಗಳಿನುಡೈಯ ಸ್ವರೂಪತ್ಯಾಗಮ್ ಅಂಗಮಾನಾಲ್ ವಿರೋಧಮಿಲ್ಲೈಯೇ ? ಎನ್ನಿಲ್, ಅಪ್ಪೋದು ಸಂಭಾವಿತಮಲ್ಲಾದವತ್ತಿನುಡೈಯ ಸ್ವರೂಪತ್ಯಾಗಮ್**

---

ಕ್ಕಿರವರಗಳುಕ್ಕು – ಇರುವವರಿಗೆ, **ಭ್ರಮ ವಿಪ್ರಲಂಭ ಸಂಭಾವನೆಯುಮ್** – ಅಜ್ಞಾನದಿಂದ ಯಥಾರ್ಥಜ್ಞಾನವನ್ನು ಗ್ರಹಿಸದೇ ಇರೋಣವು ಭ್ರಮೆಯು, ಇತರರನ್ನು ವಂಚಿಸಿ ಅಪಾರ್ಥವನ್ನು ಹೇಳೋಣವು ವಿಪ್ರಲಂಭವು ಇವುಗಳ ಪ್ರಸಕ್ತಿಯು, **ಇಲ್ಲೈ** – ಇಲ್ಲವು.

ಮುಂದೆ ಪೂರ್ವಪಕ್ಷಿಯು ಬಹುಮಟ್ಟಿಗೆ ಈ ಸಮಾಧಾನಗಳಿಂದ ಜಿತನಾಗಿ ಹೇಳಬಹುದು ಏನೆಂದರೆ, ಯಾವಾಗಲೂ ಯಾವಜ್ಜೀವವೂ ಅವುಗಳ ತ್ಯಾಗವನ್ನು ಪ್ರಪನ್ನನು ಮಾಡಬಹುದೆಂದು ಹೇಳಿದರಲ್ಲವೇ ಇಷ್ಟುದೂರ ದೂಷಣೆಯನ್ನು ಹೇಳುವಿರಿ ; ಆ ಪ್ರಪದನ ಕಾಲದಲ್ಲಿ ಮಾತ್ರವೇ ಅವುಗಳ ಪಾತ್ಯಾಗವು ವಿಧಿಸಲ್ಪಟ್ಟಿತೆಂದು ಹೇಳುವೆವು ಎಂದರೆ, ಆಗಲೂ ವಿರೋಧವು ತಪ್ಪಿದ್ದಲ್ಲವು ಎನ್ನುತ್ತಾರೆ, ಹೇಗೆಂದರೆ ಅಯೋಗ್ಯಪ್ರವೃತ್ತಿಯಾಗಿ ಅದು ಧರ್ಮವೇ ಅಲ್ಲದಿದ್ದರೆ ಅದರ ತ್ಯಾಗ ವಿಧಿಯನ್ನು ಈ ಸಂದರ್ಭದಲ್ಲಿ ಹೇಳಬೇಕಾದ ಆವಶ್ಯಕತೆ ಏನು ? ಯಾವಾಗಲೂ ತ್ಯಾಗಮಾಡತಕ್ಕದ್ದೇಯಾದುದರಿಂದ ಈಗ ನಿಷೇಧಿಸಿ ವಿಧಿಸಬೇಕಾದ ಪ್ರಕರಣವೇ ಇಲ್ಲವು , ಅದೂ ಅಲ್ಲದೆ ಆ ಕಾಲದಲ್ಲಿ ಶಿಖಾಯಜ್ಞೋಪವೀತ, ದ್ವಾದಶೋರ್ಧ್ವಪುಂಡ್ರ, ಭಗವತ್ ಕ್ಷೇತ್ರವಾಸ ಇವುಗಳ ತ್ಯಾಗವೂ ವಿಧಿಸಲ್ಪಟ್ಟಿತೆಂದು ಭಾವಿಸಬೇಕಾಗುವದಿಲ್ಲವೇ ? ಎಂದು ಆಕ್ಷೇಪಿಸುತ್ತಾರೆ--- **ಯಾವಜ್ಜೀವಮ್** – ಪ್ರಪನ್ನನಿಗೆ ಜೀವಮಾನವಿರುವ ತನಕ, **ಸರ್ವಧರ್ಮತ್ಯಾಗಮ್** – ಸರ್ವಧರ್ಮಗಳ ಸ್ವರೂಪತ್ಯಾಗವು, **ವಿಧೇಯಮಾಗಿಲನ್ರೋ** – ಅಂಗವಾಗಿ ವಿಧಿಸಲ್ಪಟ್ಟಿತೆಂದು ಹೇಳಿದರಲ್ಲವೇ, **ಇವ್ವಿರೋಧಮುಳ್ಳದು** – ನೀವು ಹೇಳುವ ಆಕ್ಷೇಪಣೆಗಳುಂಟಾಗುತ್ತವೆ. ಆದುದರಿಂದ ನಾವು ಈಗ ಹೇಳುವುದೇನೆಂದರೆ—**ಪ್ರಪತ್ತ್ಯನುಷ್ಠಾನಕ್ಷಣತ್ತಿಲ್** – ಪ್ರಪದನವನ್ನು ಅನುಷ್ಠಿಸುವ ಆ ಕ್ಷಣಕಾಲದಲ್ಲಿ, **ಸರ್ವಧರ್ಮಙ್ಗಳುಡೈಯ ಸ್ವರೂಪತ್ಯಾಗಮ್** – ಸಮಸ್ತಧರ್ಮಗಳ ಸ್ವರೂಪತ್ಯಾಗವು, **ಅಂಗಮಾನಾಲ್** – ಅಂಗವಾಗಿ ವಿಧಿಸಲ್ಪಟ್ಟಿತೆಂದು ಹೇಳಿದರೆ, **ವಿರೋಧಮಿಲ್ಲೈಯೇ** – ಆಗ ಏನೊಂದು ಆಕ್ಷೇಪಣೆಯೂ ಇಲ್ಲವಷ್ಟೆ, **ಎನ್ನಿಲ್** – ಎಂದು ಹೇಳಿದರೆ, ಆಗಲೂ ಆಕ್ಷೇಪವು ತಪ್ಪಿದ್ದಲ್ಲವೆಂದು ಮುಂದೆ ಹೇಳುತ್ತಾರೆ.—ನೀವು ಆ ಕಾಲದಲ್ಲಿ ಮಾತ್ರ ಧರ್ಮಗಳ ಸ್ವರೂಪತ್ಯಾಗವು ವಿಧಿಸಿತು ಎಂದು ಹೇಳಿದರಲ್ಲಾ,

**ವಿಧಿಕ್ಕವೇಣ್ಡಾ ಸಂಭಾವಿತಮಾನವತ್ತಿನುಡೈಯ ಸ್ವರೂಪತ್ಯಾಗಮ್ ವಿಧೇಯ ಮಾಗಿಲ್ ಅಪ್ಪೋದುಂಡಾನ ಭಗವತ್ ಕ್ಷೇತ್ರವಾಸ ಶಿಖಾ ಯಜ್ಞೋಪವೀತೋರ್ಧ್ವಪುಂಡ್ರಧಾರಣಾದಿಗಳೈತ್ತವಿರ್ನ್ದುಕೊಂಡು ಪ್ರಪತ್ತಿಪಣ್ಣ ಪ್ರಸಂಗಿಕ್ಕುಮ್.**

**ತಸ್ಮಾತ್ತ್ಯಾಗವಿಧ್ಯರ್ಥಮುಪದಿಶ್ಯ ಉಪಸಂಹರಃ**

**ಆಗೈಯಾಲ್, ಉಪಾಸನತ್ತಿಲ್ ವಱುಮ್ ಕರ್ಮಾದ್ಯಙ್ಗಗಳಾಲೇ ನಿರಪೇಕ್ಷೈಯಾಯಿರುಕ್ಕಿರ ಪ್ರಪತ್ತಿಕ್ಕು ಅಂಗಮಾಗ ವೊರು ಧರ್ಮಙ್ಗಳೈಯುಮ್ಪ**

---

ಆ ಧರ್ಮಗಳೇನು ಅಸಂಭಾವಿತಗಳೇ ಅಥವಾ ಸಂಭಾವಿತಗಳೇ ಎಂದು ವಿಕಲ್ಪಿಸಿ, ಮೊದಲು ಅಸಂಭಾವಿತಗಳಾಗಿದ್ದರೆ ದೂಷಣವನ್ನು ಹೇಳುತ್ತಾರೆ.—**ಅಪ್ಪೋದು**–ಆ ಸಂದರ್ಭದಲ್ಲಿ, ಆ ಪ್ರಪದನವನ್ನು ಅನುಷ್ಠಿಸುವ ಸಂದರ್ಭದಲ್ಲಿ, **ಸಂಭಾವಿತಮಲ್ಲಾದವತ್ತಿನುಡೈಯ** – ಅಪ್ರಸ್ತುತವಾದವುಗಳ, **ಸ್ವರೂಪತ್ಯಾಗವು, ವಿಧಿಕ್ಕವೇಂಡಾ** – ವಿಧಿಸುವದಕ್ಕೆ ಕಾರಣವೇ ಇಲ್ಲವು. ಸಂಭಾವಿತಗಳಾಗಿದ್ದರೆ ಆಗ ಏನು ಆಕ್ಷೇಪವು ಉಂಟಾಗುತ್ತದೆಂದರೆ ತಿಳಿಸುತ್ತಾರೆ.—**ಸಂಭಾವಿತಮಾನತ್ತಿನುಡೈಯ** – ಆ ಧರ್ಮಗಳು ಉಚಿತವಾದವಾಗಿದ್ದ ಪಕ್ಷದಲ್ಲಿ ಅವುಗಳ ಕೆಲವು ಅಂತಹ ಸಂಭಾವಿತ ಧರ್ಮಗಳನ್ನು ಹೇಳುತ್ತಾರೆ— **ಅಪ್ಪೋದುಂಡಾನ** – ಆ ಪ್ರಪದನಕಾಲದಲ್ಲಿರುವ **ಭಗವತ್ ಕ್ಷೇತ್ರದಲ್ಲಿ ವಾಸವನ್ನೂ, ಶಿಖೆ, ಯಜ್ಞೋಪವೀತ, ದ್ವಾದಶೋರ್ಧ್ವಪುಂಡ್ರ,** ಇವುಗಳ **ಧಾರಣಾದಿಗಳೈ** – ಧಾರಣ ಮೊದಲಾದವುಗಳನ್ನೂ, **ತವಿರ್ನ್ದುಕೊಂಡು** – ತ್ಯಾಗಮಾಡಿ, **ಪ್ರಪತ್ತಿಪಣ್ಣ ಪ್ರಸಙ್ಗಿಕ್ಕುಮ್** – ಆ ತ್ಯಾಗವು ವಿಧಿಯಾದುದರಿಂದ ಅವುಗಳನ್ನೂ ತ್ಯಾಗಮಾಡಿಯೇ ಪ್ರಪದನವನ್ನು ಅನುಷ್ಠಿಸಬೇಕಾಗಿ ಬರುವದು ಎಂಬ ಭಾವವು

ಆದುದರಿಂದ ಇಲ್ಲಿ ಪರಿತ್ಯಜ್ಯ ಎಂಬಲ್ಲಿರುವ ತ್ಯಾಗಕ್ಕೆ ಸ್ವರೂಪತ್ಯಾಗವು ಅಂಗವಾಗಿ ವಿಧಿಸಿತು ಎಂದು ಹೇಳಿದರೆ, ನಾನಾವಿಧವಾದ ದೂಷಣೆಗಳಿಗೆ ಒಳಗಾಗುವದರಿಂದ, ತ್ಯಾಗವನ್ನು ವಿಧಿಯಾಗಿ ಭಾವಿಸುವದಾದರೆ ಆಗ ಪ್ರಪದನಕ್ಕೆ ಅವಶ್ಯಕವಾಗಿ ಬೇಕಾದ ಐದು ಅಂಗಗಳಲ್ಲದೆ ಇನ್ನು ಯಾವ ಧರ್ಮಗಳನ್ನೂ ಅಂಗವಾಗಿ ಪರಿಗ್ರಹಿಸಬೇಡವೆಂದು ವಿಧಿಸಿತು ಎಂದು ಇಟ್ಟುಕೊಂಡರೆ ಯಾವ ವಿರೋಧವೂ ಇಲ್ಲವೆಂದು ನಿಗಮನಮಾಡಿ ಹೇಳುತ್ತಾರೆ ಹೀಗೆ ತ್ಯಾಗ ವಿಧಿಗೆ ಅರ್ಥವಾದರೆ ಭಕ್ತಿಯೋಗಕ್ಕೆ ಅಶಕ್ತನಾಗಿರುವನಿಗೂ, ಕಾಲವಿಳಂಬವನ್ನು ಸಹಿಸದೇ ಇರುವವನಿಗೂ ಪ್ರಪದನದಲ್ಲಿ ಅಧಿಕಾರವು, ಹೀಗೆ ಅಭಿಪ್ರಾಯವಾದರೆ ಯಾವ ಪ್ರಮಾಣಗಳಿಗೂ ವಿರೋಧವಿರುವದಿಲ್ಲವೆಂದು ಉಪದೇಶಿಸುತ್ತಾರೆ.—

**ತ್ತವೇಣ್ಡಾವೆನ್ಗೈಯೇ ತ್ಯಾಗವಿಧಿ ಪಕ್ಷತ್ತುಕ್ಕು ಉಚಿತಮ್. ಇನ್ದ ತ್ಯಾಗ ವಿಧಿ ಯಾನಪಕ್ಷಮ್ ತನ್ನಿಲುಮ್ ಉಪಾಯಾಂತರ ಸಾಮರ್ಥ್ಯಮಿಲ್ಲಾದಾರ್ಕ್ಕುಮ್, ಅದುಣ್ಡಾಗಿಲುಮ್ ವಿಳಂಬಕ್ಷಮರಲ್ಲಾದಾರ್ಕ್ಕು ಇ ಪ್ರಪತ್ತಿಯಿಲ್ ಅಧಿಕಾರಮ್. ಇಪ್ಪಡಿಯಾನಾಲೊರು ಪ್ರಮಾಣಙ್ಗಳುಕ್ಕುಮ್ ವಿರೋಧಮಿಲ್ಲೈ.**

**ಆದುದರಿಂದ ತ್ಯಾಗವಿಧಿಗೆ ಅರ್ಥವನ್ನು ಪದೇಶಿಸಿ ಈ ವಾದವನ್ನು ಉಪಸಂಹಾರ ಮಾಡುತ್ತಾರೆ.**

**ಆಗೈಯಾಲ್** – ಧರ್ಮಗಳ ಸ್ವರೂಪತ್ಯಾಗವು ಅಂಗವಾಗಿ ವಿಧಿಸಿರುತ್ತದೆಂಬ ಅಭಿಪ್ರಾಯವು ಅನೇಕ ದೂಷಣೆಗೆ ಒಳಗಾಗಿರುವದರಿಂದ, **ಉಪಾಸನತ್ತಿಲ್ ವರುಮ್** – ಭಕ್ತಿಯೋಗಕ್ಕೆ ಬೇಕಾದ, **ಕರ್ಮಾದ್ಯಙ್ಗಗಳಾಲೇ** – ಕರ್ಮಯೋಗ, ಆದಿ ಶಬ್ದದಿಂದ ಜ್ಞಾನಯೋಗ ನಿತ್ಯನೈಮಿತ್ತಿಕಾನುಷ್ಠಾನ, ಇವುಗಳಿಂದ, **ನಿರಪೇಕ್ಷೆಯಾಯಿರುಕ್ಕಿರೆ** – ಸೇರಿರಬೇಕೆಂಬ ಅಪೇಕ್ಷೆ ಇಲ್ಲದಿರುವ, **ಪ್ರಪತ್ತಿಕ್ಕು** – ಪ್ರಪದನಕ್ಕೆ, **ಅಂಗಮಾಗ** – ಅಂಗವಾಗಿ, **ಒರು ಧರ್ಮಙ್ಗಳೈಯುಮ್** – ಯಾವದೊಂದು ಧರ್ಮವನ್ನಾಗಲಿ, **ಪತ್ತವೇಣ್ಡಾ** – ಅನುಷ್ಠಿಸತಕ್ಕದ್ದಲ್ಲವು, ಎಙ್ಗೈಯೇ ಎಂಬುದೇ, **ತ್ಯಾಗ ವಿಧಿಪಕ್ಷತ್ತಿಕ್ಕು ಉಚಿತಮ್** – ಪರಿತ್ಯಜ್ಯ ಎಂಬಲ್ಲಿ ತ್ಯಾಗವು ವಿಧಿಸಲ್ಪಟ್ಟಿರುತ್ತದೆ ಎಂಬುವ ಸಂದರ್ಭಕ್ಕೆ ಯೋಗ್ಯವಾದುದು. ಪರಿತ್ಯಜ್ಯ ಎಂಬಲ್ಲಿ ತ್ಯಾಗವು ವಿಧಿಸಲ್ಪಟ್ಟಿರುತ್ತದೆ ಎಂಬುದು ಅಭಿಪ್ರಾಯವಾದರೆ, ಯಾವ ಧರ್ಮವನ್ನಾಗಲಿ ಪ್ರಪದನಕ್ಕೆ ಅಂಗವಾಗಿ ಅಂಗೀಕರಿಸಬೇಡವೆಂದು ಎಲ್ಲಾ ಧರ್ಮಗಳ ಅಂಗತ್ವೇನ ತ್ಯಾಗವು ವಿಧಿಸಲ್ಪಟ್ಟಿತೆಂದು ಭಾವಿಸತಕ್ಕದ್ದು. ಅದಕ್ಕೆ ಅಧಿಕಾರಿಯು ಯಾರು ? ಎಂದರೆ ಪೂರ್ವಪಕ್ಷಿಯು ಹೇಳಿದ ಹಾಗೆ ಉಪಾಸನಾಧಿಕಾರಿಯೇ ಅಲ್ಲವು. ಆ ಉಪಾಸನಕ್ಕೆ ಶಕ್ತಿಯಿಲ್ಲದವನೂ ಮತ್ತು ವಿಳಂಬವನ್ನು ಸಹಿಸದೇ ಇರುವವನೂ ಎಂದು ತಿಳಿಸುತ್ತಾರೆ –**ಇನ್ದ ತ್ಯಾಗ ವಿಧಿಯಾನಪಕ್ಷಮ್ ತನ್ನಿಲುಮ್**– ಈ ತ್ಯಾಗವು ವಿಧಿಯೆಂದು ಭಾವಿಸುವ ಪಕ್ಷದಲ್ಲಿ, **ಉಪಾಯಾನ್ತರಸಾಮರ್ಥ್ಯಮಿಲ್ಲಾದಾರ್ಕ್ಕು**– ಉಪಾಸನದಲ್ಲಿ ಸಾಮರ್ಥ್ಯವಿಲ್ಲಾದವರಿಗೂ, **ಅದುಣ್ಡಾಗಿಲುಮ್** – ಒಂದುವೇಳೆ ಸಾಮರ್ಥ್ಯವುಂಟಾಗಿದ್ದರೂ ಕೂಡ, **ವಿಳಂಬಕ್ಷಮರಲ್ಲಾದಾರ್ಕ್ಕು** – ವಿಳಂಬವನ್ನು ಸಹಿಸದೇ ಇರುವವರಿಗೂ, **ಪ್ರಪತ್ತಿಯಿಲ್ ಅಧಿಕಾರಮ್** – ಪ್ರಪದನದಲ್ಲಿ ಅಧಿಕಾರವು. **ಇಪ್ಪಡಿಯಾನಾಲ್** – ಹೀಗೆ ಮೇಲೆ ಹೇಳಿದ ಹಾಗೆ ಅರ್ಥಮಾಡಿದರೆ, **ಒರುಪ್ರಮಾಣಙ್ಗಳುಕ್ಕುಮ್** –ಯಾವದೊಂದು ಶಾಸ್ತ್ರಪ್ರಮಾಣಗಳಿಗೂ, **ವಿರೋಧಮಿಲ್ಲೈ** – ವಿರೋಧವಾಗುವದಿಲ್ಲವು ಪರಿತ್ಯಜ್ಯ – ಎಂಬಲ್ಲಿ ತ್ಯಾಗವು ವಿಧಿಸ

**ಪೂರ್ವಾಚಾರ್ಯರುಗಳಿಮ್ ಇವ್ವಿಡತ್ತಿಲ್ ಸರ್ವಧರ್ಮ ಸ್ವರೂಪತ್ಯಾಗಮ್ ಪ್ರಪತ್ತ್ಯಙ್ಗಮೆನ್ರುಮ್, ಇಪ್ಪಡಿಯನ್ರೆನ್ರುಮ್, ವಿವಾದಂಪಣ್ಣಿನಾರ್ಗ**

ಲ್ಪಟ್ಟಿತೆಂದೂ, ಸ್ವರೂಪತ್ಯಾಗವು ಅಂಗವಾಗಿ ವಿಧಿಸಲ್ಪಟ್ಟಿತೆಂದು ನೀವು ಭಾವಿಸಿದರೆ, ಅನೇಕ ಪ್ರಮಾಣಗಳಿಗೆ ವಿರುದ್ಧವಾದುದಾಗುತ್ತದೆಂದು ತೋರಿಸಿದೆವು. ತ್ಯಾಗವೇ ವಿಧಿಸಲ್ಪಟ್ಟಿತೆಂದು ಭಾವಿಸುವದಾದರೆ, ನಾವು ಹೇಳಿದ ಹಾಗೆ ಒಪ್ಪಿಕೊಂಡರೆ, ಎಂದರೆ ಪ್ರಪದನಕ್ಕೆ ಅಂಗವಾಗಿ ಯಾವದೂ ಬೇಕಿಲ್ಲವಾದುದರಿಂದ ಅವುಗಳ ನೈರಪೇಕ್ಷ್ಯವು ವಿಧಿಸಲ್ಪಟ್ಟಿತೆಂದೂ, ಅದಕ್ಕೆ ಅಧಿಕಾರಿಯು ಉಪಾಯಾನ್ತರವಾದ ಉಪಾಸನಕ್ಕೆ ಅಶಕ್ತನೂ, ವಿಳಂಬವನ್ನು ಸಹಿಸದವನೂ ಎಂದೂ ಭಾವಿಸತಕ್ಕದ್ದು. ಉಪಾಸನಕ್ಕಾದರೋ ಶಕ್ತಿಯೂ ಇರಬೇಕು, ಒಂದುವೇಳೆ ಈ ಜನ್ಮದಲ್ಲೇ ಮೋಕ್ಷ ಪ್ರಾಪ್ತಿಯುಂಟಾದರೂ ಉಂಟಾಗಬಹುದು ; ಇಲ್ಲವೇ ವಿಳಂಬಿಸಿದರೂ ವಿಳಂಬಿಸಬಹುದು. ತ್ರೈವರ್ಣಿಕನಾಗಿ ಶಕ್ತಿಯೂ ಇದ್ದು ವಿಳಂಬವನ್ನು ಸಹಿಸಿಕೊಳ್ಳುವವನಿಗೆ ಉಪಾಸನದಲ್ಲಿ ಅಧಿಕಾರವು. ಅಶಕ್ತ್ಯತೆಯೂ ವಿಳಂಬವನ್ನು ಸಹಿಸದವನಿಗೂ ಪ್ರಪದನದಲ್ಲಿ ಅಧಿಕಾರವೆಂಬ ಭಾವವು. ಹೀಗೆ ಹೇಳಿದರೇನೇ ಭಕ್ತಿಯೋಗವನ್ನು ವಿಧಿಸುವ ಶಾಸ್ತ್ರಕ್ಕೆ ನೈರರ್ಥ್ಯಕ್ಯವಿಲ್ಲವು.

ಆಗಲಿ ಶ್ರೀಯತಿವರ್ಯರ ಜೀವಮಾನದೆಶೆಯಲ್ಲೇ ಕೆಲವರು ಈ ತ್ಯಾಗವು ಅನುವಾದಾರ್ಥವೆಂದೂ, ಇನ್ನು ಕೆಲವರು ಸರ್ವಧರ್ಮತ್ಯಾಗವು ವಿಧಿಸಲ್ಪಟ್ಟಿತೆಂದೂ ವಿವಾದವು ನಡೆಯಿತಲ್ಲವೇ ? ಶ್ರೀ ಭಾಷ್ಯಕಾರರೂ ಈ ಸಂದರ್ಭದಲ್ಲಿ ಯಾವದೊಂದು ಭಾವವನ್ನು ಖಂಡಿಸಲಿಲ್ಲವಾದುದರಿಂದ ಸರ್ವಧರ್ಮಸ್ವರೂಪತ್ಯಾಗವು ಅಂಗವಾಗಿ ವಿಧಿಸಲ್ಪಟ್ಟಿತೆಂಬ ಭಾವದಲ್ಲೂ ಶ್ರೀ ಭಾಷ್ಯಕಾರರಿಗೆ ಸಮ್ಮತಿಯೇ ಎಂದು ಭಾವಿಸತಕ್ಕದ್ದಲ್ಲವೋ ? ಎಂದು ಪೂರ್ವಪಕ್ಷಿಯು ಕೇಳಬಹುದು ಇದಕ್ಕೆ ಉತ್ತರವಾಗಿ ಹೇಳುತ್ತಾರೇನೆಂದರೆ ? ವಿವಾದವಿದ್ದುದೇನೋ ನಿಶ್ಚಯವು. ವಿವಾದವು ಯಾವ ಸಂದರ್ಭದಲ್ಲಿ ಎಂದರೆ ನೀವು ಹೇಳಿದ ಸಂದರ್ಭದಲ್ಲಿ ಅಲ್ಲವು ; ಪ್ರಪದನಕ್ಕೆ ಮುಖ್ಯವಾದ ಅಂಗವಾದ ಆಕಿಂಚನ್ಯವೂ ಮತ್ತು ಪ್ರಪತ್ತಿಯ ನೈರಪೇಕ್ಷ್ಯವೂ ಯಾವ ಪದಗಳಲ್ಲಿ ಬೋಧಿತವೆಂಬ ವಿಚಾರದಲ್ಲೀಗ ವಿವಾದವು ನಡೆದು ಈ ಪದಗಳಲ್ಲಿ ಎಂದು ವ್ಯವಸ್ಥೆಯನ್ನು ಮಾಡಿದರು ಎಂದು ಮುಂದೆ ಉಪದೇಶಿಸುತ್ತಾರೆ. ಅಂತಹ ವ್ಯವಸ್ಥೆಯು ಮುಖ್ಯವೆಂದು ಭಾವಿಸಿ ಅವುಗಳನ್ನು ಮುಂದಿನ ಕಾರಿಕೆಗಳ ಮೂಲಕ ತಿಳಿಸುತ್ತಾರೆ.—**ಪೂರ್ವಾಚಾರ್ಯರುಗಳುಮ್** – ಶ್ರೀಭಾಷ್ಯಕಾರರ ಕಾಲದವರಾಗಿ ಅವರ ಶಿಷ್ಯರುಗಳಾದ ಆಚಾರ್ಯರುಗಳೂ, **ಇವ್ವಿಡತ್ತಿಲ್** - ಈ ಚರಮಶ್ಲೋಕದಲ್ಲಿ, **ಸರ್ವಧರ್ಮಸ್ವರೂಪತ್ಯಾಗವು, ಪ್ರಪತ್ತ್ಯಙ್ಗಮೆನ್ರುಮ್**–ಪ್ರಪದನಕ್ಕೆ ಅಂಗವೆಂದೂ,

**ಕಿನ್ರ್. ಪ್ರಪತ್ತಿಕ್ಕು ಅಧಿಕಾರಮಾನ ಅಕಿಂಚನ್ಯಮುಮ್, ಪ್ರಪತ್ತಿಯಿನುಡೈಯ ನೈರಪೇಕ್ಷಮುಮ್, ಇಚ್ಚರಮಶ್ಲೋಕತ್ತಿಲ್ ಎನ್ದ ಪದಙ್ಗಳಿಲೇ ವಿವಕ್ಷಿಕ್ಕೈಯುಚಿತಮೆನ್ರು ವಿಮರ್ಶಿತ್ತಾರ್ಗಳತ್ತನೈ.**

---

**ಇಪ್ಪಡಿಯನ್ರೆನ್ರುಮ್** – ಇನ್ನು ಕೆಲವರು ಹಾಗಲ್ಲವೆಂದೂ, **ವಿವಾದಂಪಣಿ ನಾರ್ಗಳನ್ರು** – ವಿವಾದವನ್ನು ಮಾಡಿದರು ಎಂಬುದು ಸರಿಯಲ್ಲವು, ಹಾಗೇನೂ ವಿವಾದವು ನಡೆಯಲಿಲ್ಲವು. ಹಾಗಾದರೆ ಯಾವ ಸಂದರ್ಭದಲ್ಲಿ ವಿವಾದವು ನಡೆದಿದ್ದು ಎಂದರೆ ಹೇಳುತ್ತಾರೆ. —**ಪ್ರಪತ್ತಿಕ್ಕು ಅಧಿಕಾರಮಾನ** – ಪ್ರಪದನಕ್ಕೆ ಅಧಿಕಾರವನ್ನುಂಟುಮಾಡುವ, **ಆಕಿಂಚನ್ಯಮುಮ್, ಪ್ರಪತ್ತಿಯಿನುಡೈಯ ನೈರಪೇಕ್ಷ್ಯಮುಮ್** – ಪ್ರಪತ್ತಿಗೆ ತನ್ನ ಅಂಗಗಳು ವಿನಾ ಇನ್ನು ಯಾವದೂ ಅಂಗವಾಗಿ ಬೇಕಿಲ್ಲವೆಂಬುದೂ, **ಇಚ್ಚರಮಶ್ಲೋಕತ್ತಿಲ್** – ಈ ಚರಮಶ್ಲೋಕದಲ್ಲಿ, **ಎನ್ದ ಪದಙ್ಗಳಿಲೇ** – ಯಾವ ಪದಗಳಲ್ಲಿ, **ವಿವಕ್ಷಿಕ್ಕೈಯುಚಿತಮ್** – ಹೇಳಲ್ಪಟ್ಟವೆಂಬ ಭಾವನೆಯು ಸಮಂಜಸವಾದುದು, **ಎನ್ರುವಿಮರ್ಶಿತ್ತಾರ್ಗಳತ್ತನೈ** – ಎಂದು ವಿಮರ್ಶಿಸಿ ತಿಳಿದರು, ಇಷ್ಟುಮಾತ್ರವೇ ನಡೆದುದು ಎಂಬ ಭಾವವು ವಿವಾದವೂ ಇಲ್ಲವು, ಆ ಸಂದರ್ಭದಲ್ಲಿ ಅಪಾರ್ಥವನ್ನು ಯಾರೂ ಹೇಳಲಿಲ್ಲವು ಆದುದರಿಂದ ಶ್ರೀಭಾಷ್ಯಕಾರರು ಯಾವುದನ್ನೂ ಖಂಡಿಸಿ ಹೇಳಲೂ ಇಲ್ಲವು ಎಂಬುದು ತಾತ್ಪರ್ಯವು ಶ್ರೀಯತಿವರ್ಯರ ಕಾಲದ ಕೆಲವು ಆಚಾರ್ಯರುಗಳ ಅಭಿಪ್ರಾಯವೇನೆಂದರೆ ? " ಸರ್ವಧರ್ಮಾನ್ಪರಿತ್ಯಜ್ಯ" ಎಂಬುದಕ್ಕೆ ಅನುವಾದ ಪರವಾಗಿ ಅರ್ಥಹೇಳಿ, ಆಕಿಂಚನ್ಯರೂಪವಾದ ಅಧಿಕಾರವು ಹೇಳಲ್ಪಟ್ಟಿತೆಂದೂ, ಅನಂತರ ಈ ಪ್ರಪತ್ತಿಗೆ ಅನ್ಯ ನೈರಪೇಕ್ಷ್ಯವು ಮಾಮೇಕಂ ಎಂಬಲ್ಲಿರುವ ಏಕ ಶಬ್ದದಿಂದ ಬೋಧಿತವೆಂದೂ ಅಭಿಪ್ರಾಯಪಟ್ಟರು. ಇನ್ನು ಕೆಲವರು ಪೂರ್ವಾರ್ಧದಲ್ಲಿ ನೈರಪೇಕ್ಷ್ಯಯುಕ್ತವಾದ ಉಪಾಯವನ್ನು ಹೇಳಿ, ಉತ್ತರಾರ್ಧದ ಮಾಶುಚಃ ಎಂಬಲ್ಲಿ ಶೋಕ ಮೂಲಕವಾಗಿ ಆಕಿಂಚನ್ಯಯುಕ್ತವಾದ ಅಧಿಕಾರವು ಬೋಧಿಸಲ್ಪಟ್ಟಿತೆಂದು ಅಭಿಪ್ರಾಯಪಟ್ಟರು ಯೋಜನೆಯ ಭೇದದಲ್ಲಿ ವಿವಾದವೇ ವಿನಾ, ತಾತ್ಪರ್ಯಾರ್ಥದಲ್ಲಿ ವಿವಾದವಿಲ್ಲವಾದುದರಿಂದ ಶ್ರೀಭಾಷ್ಯಕಾರರು ಯಾವುದನ್ನೂ ನಿರಾಕರಿಸಲಿಲ್ಲವು ಸರ್ವಧರ್ಮಸ್ವರೂಪತ್ಯಾಗವೆಂಬುದು ವಿಧಿಸಲ್ಪಟ್ಟಿತೆಂದು ಯಾರಾದರೂ ಹೇಳಿದ್ದ ಪಕ್ಷದಲ್ಲಿ ಅದನ್ನು ಖಂಡಿಸುತ್ತಿದ್ದರು ವಿವಾದವು ಯಾವ ಪದಗಳಿಂದ ಆಕಿಂಚನ್ಯವೂ ಅನ್ಯ ನೈರಪೇಕ್ಷ್ಯವೂ ತೋರಿ ಬರುತ್ತವೆ ಎಂಬ ವಿಷಯವಾಗಿಯಾದುದರಿಂದ, ಈ ಅಭಿಪ್ರಾಯಗಳು ಸಾಧುವಾದುವು. ಆದುದರಿಂದ ನಿರಾಕರಿಸಲಿಲ್ಲವೆಂಬ ತಾತ್ಪರ್ಯವು. ಈ ಸರ್ವಧರ್ಮಸ್ವರೂಪ ತ್ಯಾಗವು ಅಂಗವಾಗಿ ಹೇಳಲ್ಪಟ್ಟಿತೆಂಬ ವಿಷಯದಲ್ಲಿ

**ಅಧಿಕಾರಂ ಪುರಸ್ಕೃತ್ಯೋಪಾಯಸ್ಯ ನಿರಪೇಕ್ಷತಾಮ್ ।**
**ಏಕಶಬ್ದೇನ ವಕ್ತೀತಿ ಕೇಚಿದ್ವಾಕ್ಯವಿದೋ ವಿದುಃ ॥೧೧॥**
**ನೈರಪೇಕ್ಷ್ಯಂ ಪುರಸ್ಕೃತ್ಯ ವಿಹಿತಸ್ಯ ಲಘೀಯಸಃ ।**
**ಉಪಾಯಸ್ಯಾಧಿಕಾರಂತು ಶೋಕದ್ಯೋತ್ಯಂ ವಿದುಃ ಪರೇ ॥೧೧॥**

---

ವಿವಾದವು ಶ್ರೀ ಯತಿವರ್ಯರ ಕಾಲದಲ್ಲೇ ನಡೆಯಿತೆಂಬುದು, ಅವರಿಂದೀಚಿನವರು ಆರೋಪಿಸಿ ಹೇಳಿದವಿಷಯುವೇ ವಿನಾ, ಅವರ ಕಾಲದಲ್ಲಿ ಇಂತಹ ವಿವಾದವು ನಡೆಯಲೇ ಇಲ್ಲವೆಂಬ ಭಾವವು. ನಡೆದುದು, ಯಾವ ಪದಗಳಲ್ಲಿ ಅಂಕಿಚನ್ಯರೂಪ ಅಧಿಕಾರವೂ. ಅಂಗತ್ವೇನ ಅನ್ಯನೈರಪೇಕ್ಷ್ಯವೂ ಬೋಧಿತವೆಂಬ ವಿಷಯದಲ್ಲಿ ಎಂದು ತಿಳಿಯತಕ್ಕದ್ದು.

ಮುಂದೆ ಶ್ರೀ ಭಾಷ್ಯಕಾರರ ಕಾಲದಲ್ಲಿ ನಡೆದ ವಿವಾದವು ಯಾವ ವಿಷಯದಲ್ಲಿ ಎಂಬುದನ್ನು ಎರಡು ಕಾರಿಕೆಗಳಿಂದ ಅನುಗ್ರಹಿಸಿ ತಿಳಿಸುತ್ತಾರೆ.—ಅನಂತರ ಎರಡು ಕಾರಿಕೆಗಳಿಂದ ಪೂರ್ವಪಕ್ಷಿಗಳಿಂದ ಹೇಳಲ್ಪಟ್ಟ ವಿವಾದಾಭಿಪ್ರಾಯವು ಆರೋಪಿತವೆಂದೂ, ಆ ಅಭಿಪ್ರಾಯವು ಶ್ರೀ ವಿಷ್ಣುಚಿತ್ತವರದಾಚಾರ್ಯರೇ ಮೊದಲಾದವರುಗಳಿಂದ ನಿರಾಕರಿಸಲ್ಪಟ್ಟಿತೆಂದೂ ತಿಳಿಸುತ್ತಾರೆ.— **ಅಧಿಕಾರಂ ಪುರಸ್ಕೃತ್ಯ** - **"ಸರ್ವಧರ್ಮಾನ್ಪರಿತ್ಯಜ್ಯ"** ಎಂಬುದು ಅನುವಾದವಾಗಿ, ಆಕಿಂಚನ್ಯ ವಿಶಿಷ್ಟವಾದ ಅಧಿಕಾರವನ್ನು ಮೊದಲು ಹೇಳಿ, **ಉಪಾಯಸ್ಯ ನಿರಪೇಕ್ಷತಾಂ** - ಈ ಪ್ರಪದನರೂಪವಾದ ಉಪಾಯಕ್ಕೆ ಇನ್ನು ಯಾವುದೂ ಅಂಗವಾಗಿ ಬೇಕಿಲ್ಲವೆಂಬುದನ್ನು **ಏಕಶಬ್ದೇನವಕ್ತಿ** – ಏಕವೆಂಬ ಪದದಿಂದ ಹೇಳುತ್ತದೆ ಎಂದು ಇದಕ್ಕೆ ಕರ್ತೃಪದವು ಚರಮಶ್ಲೋಕವೆಂದಾಗಿ ಇಟ್ಟುಕೊಳ್ಳಬಹುದು; ಅಥವಾ **ಭಗವಾನ್ವಕ್ತಿ** - ಶ್ರೀಕೃಷ್ಣಭಗವಾನ್‌ರವರು ಹೇಳುತ್ತಾರೆಂದಾಗಲಿ ಇಟ್ಟುಕೊಳ್ಳಬಹುದು, **ಇತಿ** - ಎಂಬದಾಗಿ, **ಕೇಚಿದ್ವಾಕ್ಯವಿದಃ** - ಕೆಲವು ಪ್ರಾಜ್ಞರಾದ ಆಚಾರ್ಯರುಗಳು, **ಈ** ಚರಮಶ್ಲೋಕರಹಸ್ಯಾರ್ಥವನ್ನು ತಿಳಿದವರು, **ವಿದುಃ** - ಅಭಿಪ್ರಾಯಪಟ್ಟಿರುವರು. ಪರಿತ್ಯಜ್ಯವೆಂಬ ಸಂದರ್ಭದಲ್ಲಿ ಅನುವಾದವಾಗುವುದರಿಂದ, ಅಧಿಕಾರವನ್ನು ಹೇಳಿ, ಪ್ರಸಕ್ತ್ಯುಪಾಯದ ನೈರಪೇಕ್ಷವನ್ನು ಏಕ ಶಬ್ದದಿಂದ ಬೋಧಿಸುತ್ತದೆಂದು ಕೆಲವರು ಹೇಳಿದರು ಎಂಬ ಭಾವವು. ಅದರಿಂದ ಆಕಿಂಚನ್ಯವು ಬೋಧಿತವೆಂಬುವದು ಅವರ ಅಭಿಪ್ರಾಯವು. ಮುಂದಿನ ಶ್ಲೋಕದಲ್ಲಿ ಇನ್ನು ಕೆಲವರ ಅಭಿಪ್ರಾಯವನ್ನು ತಿಳಿಸುತ್ತಾರೆ— **ಲಘೀಯಸ್ಯ**-ಲಘುವಾದ, **ವಿಹಿತಸ್ಯ-ಶರಣಂವ್ರಜ** ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟ, **ಉಪಾಯಸ್ಯ** – ಉಪಾಯವಾದ ಪ್ರಪದನದ **ನೈರಪೇಕ್ಷ್ಯಂ** - ಅಂಗವಾಗಿ ಯಾವದೂ ಬೇಕಾಗಿಲ್ಲವೆಂಬುದನ್ನು, **ಪುರಸ್ಕೃತ್ಯ**– ಮೊದಲು ಪೂರ್ವಾರ್ಧದಲ್ಲಿ ಹೇಳಿ, **ಅಧಿಕಾರಂತು** – ಆಕಿಂಚನ್ಯಯುಕ್ತವಾದ ಅಧಿಕಾರವನ್ನಾದರೋ, ಅನಂತರ, **ಶೋಕದ್ಯೋತ್ಯಂ**-**"ಮಾಶುಚಃ"** ಎಂದು

**ಇತ್ಥಮರ್ಥಾವಿಶೇಷೇಽಪಿ ಯೋಜನಾ ಭೇದಮಾತ್ರತಃ ।**
**ಪ್ರಾಚಾಂ ವಿವಾದಸ್ಸಂವೃತ್ತೋ ಭಾಷ್ಯಕಾರೈರವಾರಿತಃ ॥೧೧೨॥**

---

ಉತ್ತರಾರ್ಧದಲ್ಲಿ ಹೇಳಲ್ಪಟ್ಟ ಪದದಲ್ಲಿ ವ್ಯಕ್ತಪಡುವ ಶೋಕದಿಂದ ತೋರಲ್ಪಡುತ ದೆಂದು, **ಪರೇ** - ಇನ್ನೂ ಕೆಲವು ಆಚಾರ್ಯರುಗಳು ವಿದುಃ . ಅಭಿಪ್ರಾಯಪಟ್ಟರು. **ಪರೇ** ಎಂಬುದಕ್ಕೂ **ಪರೇವಾಕ್ಯ ವಿದೋ** ಎಂಬುದನ್ನು ಸೇರಿಸಿ ಅರ್ಥಮಾಡ ಬಹುದು.

ಇನ್ನು ಕೆಲವು ಆಚಾರ್ಯರುಗಳ ಅಭಿಪ್ರಾಯವಾದರೋ, ಮೊದಲು ನೈರಪೇಕ್ಷ ವಾಗಿ ಲಘುವಾದ ಉಪಾಯವದ್ನು ವಿಧಿಸಿ. ಉತ್ತರಾರ್ಧದಲ್ಲಿ ಅಂತಹ ಸುಕರವಾದ ಉಪಾಯಕ್ಕೆ ಅಧಿಕಾರಿಯನ್ನು, **ಮಾಶುಚಃ** ಎಂಬಲ್ಲಿ ತೋರಿಬರುವ ಆಕಿಂಚನ್ಯ ವುಳ್ಳವನೆಂದು ಹೇಳಿದರು; ಹೀಗೆ ಎರಡು ವಿಧ ಆಚಾರ್ಯರುಗಳ ಅಭಿಪ್ರಾಯಗಳಲ್ಲೂ ಏನೊಂದೂ ತುಂಬಾ ವ್ಯತ್ಯಾಸವಿಲ್ಲವಾದುದರಿಂದ ಶ್ರೀ ಭಾಷ್ಯಕಾರರು ಸುಮ್ಮನೇ ಇದ್ದರೆ ವಿನಾ, ಸ್ವರೂಪತ್ಯಾಗಾಭಿಪ್ರಾಯವುಳ್ಳವರಾಗಿ ಯಾವ ಉತ್ತರವನ್ನೂ ಕೊಡ ಲಿಲ್ಲವೆಂಬುದು ತಾತ್ಪರ್ಯವು.

**ಇತ್ಥಂ** - ಈ ಪ್ರಕಾರವಾಗಿ, **ಅರ್ಥಾವಿಶೇಷೇಽಪಿ** – ಅಭಿಪ್ರಾಯದಲ್ಲಿ ಏನೊಂದೂ ವ್ಯತ್ಯಾಸವಿಲ್ಲದುದರಿಂದಲೇ, ಹೇಗೆಂದರೆ ಇಬ್ಬರ ಅಭಿಪ್ರಾಯಗಳಲ್ಲೂ ಆಕಿಂಚನ್ಯರೂಪ ಅಧಿಕಾರವೂ, ಪ್ರಪದನಕ್ಕೆ ನೈರಪೇಕ್ಷವೂ ಬೇಕೆಂಬುದು ಉಪ ಪಾದಿಸಲ್ಪಟ್ಟಿರುವದರಿಂದ, ಅರ್ಥದಲ್ಲಿ **ಅವಿಶೇಷ**ವೆಂಬ ಭಾವವು; ಆದರೆ ವ್ಯತ್ಯಾಸ ವೆಲ್ಲಿ? ಎಂದರೆ ಯೋಜನೆಯಲ್ಲಿ ಎಂದು ಹೇಳುತ್ತಾರೆ, **ಯೋಜನಾಭೇದಮಾತ್ರತಃ**- ಅವು ಯಾವ ಪದಗಳಲ್ಲಿ ಹೇಳಲ್ಪಟ್ಟವೆಂದು ನಿರ್ಧರಿಸುವ ಯೋಜನೆಯ ಭೇದ ಮಾತ್ರದಿಂದ, **ಪ್ರಾಚಾಂ** - ಪೂರ್ವಾಚಾರ್ಯರುಗಳ, **ಸಂವೃತ್ತಃ** - ಪ್ರಾಪ್ತವಾದ **ವಿವಾದವು**, **ಭಾಷ್ಯಕಾರೈಃ** - ಶ್ರೀ ಭಾಷ್ಯಕಾರರಿಂದ, **ಅವಾರಿತಃ** - ತಿರಸ್ಕರಿಸ ಲ್ಪಡಲಿಲ್ಲವು. ಇಬ್ಬರ ಅಭಿಪ್ರಾಯಗಳೂ ಶಾಸ್ತ್ರಸಮ್ಮತವಾಗಿದ್ದುದರಿಂದ ಯಾರ ಅಭಿಪ್ರಾಯವನ್ನೂ ಖಂಡಿಸಲಿಲ್ಲವು. ಶಾಸ್ತ್ರವಿರುದ್ಧವಾಗಿಯಾಗಲಿ, ಇತರ ಸಂಪ್ರ ದಾಯ ಪ್ರಮಾಣಗಳಿಗೆ ವಿರುದ್ಧವಾಗಿಯಾಗಲಿ ಇಲ್ಲದುದರಿಂದ ತಟಸ್ಥರಾಗಿದ್ದು ಬಿಟ್ಟರೆಂಬಭಾವವು. ಇಲ್ಲಿ ಸರ್ವಧರ್ಮಾನ್‌ಪರಿತ್ಯಜ್ಯ ಎಂಬ ಪ್ರಥಮಪಾದವು ಆಕಿಂಚನ್ಯ ವನ್ನು ಉಪಪಾದಿಸುತ್ತದೆಂದು ಕೆಲವರ ಅಭಿಪ್ರಾಯವು, ಏಕೆಂದರೆ ಸಪರಿಕರವಾದ ಭಕ್ತಿಯೋಗವನ್ನನುಷ್ಠಿಸುವದು ಅಸಾಧ್ಯವೇ ಎಂಬದಾಗಿ ಆಕಿಂಚನ್ಯವು. ಇನ್ನು ಕೆಲವರು ಆ ಪ್ರಥಮಪಾದವು ಪ್ರಪದನಕ್ಕೆ ಅನ್ಯನೈರಪೇಕ್ಷ್ಯವನ್ನು ಸಾಧಿಸುತ್ತ ದೆಂದು ಹೇಳಿದರು ಎಂದರೆ ಇನ್ನು ಯಾವುದೂ ಪ್ರಪದನಕ್ಕೆ ಅಂಗವಲ್ಲವೆಂಬುದನ್ನು ಬೋಧಿಸುತ್ತದೆಂದು ಹೇಳಿದರು. ಉಭಯಪಕ್ಷದಲ್ಲೂ ಶಾಸ್ತ್ರವಿರುದ್ಧವಾದುದೇನೂ ಇಲ್ಲದುದರಿಂದ ಇಬ್ಬರವಾದವೂ ಖಂಡಿಸಲ್ಪಡಲಿಲ್ಲವು. ಯಾವಾಗ ಪ್ರತಿಷೇಧಿ

**ಅಜ್ಞಾತಪೂರ್ವವೃತ್ತಾಂತೈ ರ್ಯತ್ತತ್ರಾರೋಪಿತಂ ಪರೈಃ ।
ತತ್ತು ಶ್ರೀ ವಿಷ್ಣುಚಿತ್ತಾದ್ಯೈರ್ನಿರ್ಮೂಲ ಮಿತಿ ದರ್ಶಿತಮ್ ॥೧೧೩॥**

---

ಸಲ್ಪಡಲಿಲ್ಲವೋ ಆಗ ಅಭಿಮತವಾದುದೇ ಎಂಬ ನ್ಯಾಯವಾದ ಪ್ರಕಾರ ಬಹುಶಃ ಶ್ರೀ ಭಾಷ್ಯಕಾರರಿಗೆ ಎರಡೂ ಸಮ್ಮತವೇ. ಪ್ರಥಮ ಪಾದವು ಆಕಿಂಚನ್ಯಾಧಿಕಾರ ಬೋಧಕವೆಂದರೂ ಬಾಧಕವಿಲ್ಲವು; ಅಥವಾ ಬೇರೆ ಅಂಗವು ಯಾವುದೂ ಬೇಕಿಲ್ಲ ವೆಂಬ ನೈರಪೇಕ್ಷ ವಿಧಿಪರವೆಂದರೂ ಬಾಧಕವಿಲ್ಲವು;ಹೀಗೀಗ ವಿವಾದ ಉಂಟಾದುದೇ ವಿನಾ,ಈಚಿನವರು ಕಲ್ಪನೆ ಮಾಡಿ ಸರ್ವಕರ್ಮ ಸ್ವರೂಪತ್ಯಾಗ ವಿಧಿಪರವೆಂದು ಹೇಳು ವದು ಶಾಸ್ತ್ರವಿರುದ್ಧವು, ಅಂತಹ ವಾದವು ನಡೆಯಲೇ ಇಲ್ಲವೆಂಬುದು, ಶ್ರೀ ವಿಷ್ಣು ಚಿತ್ತವರದಾಚಾರ್ಯರುಗಳ ವಾಕ್ಯಗಳಿಂದ ವ್ಯಕ್ತವೆಂಬಭಾವವು. ಈ ಶ್ರೀಭಾಷ್ಯಕಾರರ ಪ್ರವೃತ್ತಿಯಿಂದ ನಾವು ಮುಖ್ಯವಾಗಿ ಗ್ರಹಿಸತಕ್ಕ ಒಂದು ವಿಷಯವುಂಟು. ಯಾರಾ ದರೂ ಶ್ರೀಮಹರ್ಷಿಗಳ ಅಥವಾ ಭಗವದುಕ್ತಿಗಳಲ್ಲಿ ಯೋಜನಾ ಬೇಧದಿಂದ ಸ್ವಾರ ಸ್ಯಾರ್ಥಗಳನ್ನು ಕಲ್ಪಿಸಿದರೆ, ಅವುಗಳು ಸಿದ್ಧಾಂತಕ್ಕೂ ಇತರ ಶಾಸ್ತ್ರಪ್ರಮಾಣಗಳಿಗೂ ಅವಿರುದ್ಧವಾಗಿಯೂ ಇದ್ದರೆ, ಅವೂ ಕೂಡ ಗ್ರಾಹ್ಯವೇ, ಅಂತಹ ಸ್ವಾರಸ್ಯಾಭಿ ಪ್ರಾಯಗಳು ಹಿಂದೆ ಯಾರಿಂದಲೂ ಉಪಪಾದಿತವಲ್ಲವೆಂಬ ಭಾವನೆಯಿಂದ ಅವು ಗಳನ್ನು ಸುಮ್ಮನೆ ನಿರಾಕರಿಸಿಬಿಡುವದು ಸರಿಯಲ್ಲವೆಂಬ ಭಾವವು ಶಿಕ್ಷಿತವು. ಶ್ರೀ ಯತಿವರ್ಯರು ಆ ಕಾರಣದಿಂದಲೇ ಆ ಎರಡು ಅಭಿಪ್ರಾಯಗಳಲ್ಲಿಯಾವುದೊಂದನ್ನೂ ನಿರಾಕರಿಸಲಿಲ್ಲವು. "**ಅಪ್ರತಿಷಿದ್ಧಮನುಮತಂ**" ಯಾವಾಗ ನಿರಾಕರಿಸಲಿಲ್ಲವೋ ಆಗ ಇಷ್ಟವಾದುದೇ ಎಂಬ ನ್ಯಾಯಾನುಸಾರವಾಗಿ ಶ್ರೀ ಭಾಷ್ಯಕಾರ್ಯರಿಗೆ ಆವು ಅಭಿ ಮತಗಳೇ ಎಂದು ಭಾವಿಸತಕ್ಕದ್ದಾಗಿವೆ ಎಂಬ ಭಾವವು

ಹೀಗೀಗ ವಿವಾದವು ನಡೆಯಿತೇ ವಿನಾ, ಪೂರ್ವಪಕ್ಷಗಳು ಹೇಳುವ ಹಾಗಲ್ಲವು. ವಿಷಯವನ್ನು ಚನ್ನಾಗಿ ವಿಮರ್ಶಿಸಿ ತಿಳಿಯದೆ, ಸ್ವರೂಪತ್ಯಾಗವು ಅಂಗವಾಗಿ ವಿಧಿಸಿತು ಎಂಬ ಅಭಿಪ್ರಾಯವನ್ನು ಶ್ರೀಯತಿವರ್ಯರು ನಿರಾಕರಿಸಲಿಲ್ಲವೆಂಬ ಹೇಳಿಕೆಯು, ಈಚಿನವರ ವಿಷಯತಿಳಿಯದವರ ಆರೋಪಣೆ ಎಂದೂ, ಆ ಅಭಿಪ್ರಾಯವನ್ನು ಶ್ರೀ ವಿಷ್ಣುಚಿತ್ತರು ವರದಾಚಾರ್ಯರೇ ಮೊದಲಾದವರೇ ಖಂಡಿಸಿರುತ್ತಾರೆಂದು ಮುಂದಿನ ಶ್ಲೋಕದಿಂದ ಹೇಳುತ್ತಾರೆ ..**ಅಜ್ಞಾತಾಪೂರ್ವವೃತ್ತಾನ್ತೈಃ**-ತಿಳಿಯ ಯಲ್ಪಡದಿರುವ ಪೂರ್ವವೃತ್ತಾನ್ತವುಳ್ಳವರಾದ ಎಂದರೆ ಪೂರ್ವದಲ್ಲಿ ಶ್ರೀಯತಿವರ್ಯರ ಸಾನ್ನಿಧ್ಯದಲ್ಲಿ ನಡೆದ ವೃತ್ತಾಂತವೇನೆಂಬುದು ತಿಳಿಯದೇ ಇರುವ, ಇತರರುಗಳಿಂದ, **ಯತ್** - ಯಾವ ಸರ್ವ ಕರ್ಮಗಳ ತ್ಯಾಗವೆಂಬ ಅಭಿಪ್ರಾಯವು, **ತತ್ರ** - ಆ ವಿವಾದ ದಲ್ಲಿ, **ಆರೋಪಿತಂ** - ನಡೆಯದಿರುವದನ್ನು ಆರೋಪಿಸಿ ಹೇಳಲ್ಪಟ್ಟಿತೋ, **ತತ್ತು** - ಆ ಅಭಿಪ್ರಾಯವಾದರೋ, **ಶ್ರೀ ವಿಷ್ಣುಚಿತ್ತಾದ್ಯೈಃ** . ಶ್ರೀ ದಷ್ಣುಚಿತ್ತರೂ ಆದಿ ಪದದಿಂದ ವರದಾಚಾರ್ಯ ವಾದಿ ಹಂಸಾಂಬುವಾಹರೇ ಮೊದಲಾದವರಿಂದ, ಅವರು

ಗಳ ಗ್ರಂಥಗಳಲ್ಲಿ, **ನಿರ್ಮೂಲಮಿತಿ** ಆಧಾರವಿಲ್ಲದುದೆಂದು, ಸಹೇತುಕವಾದುದಲ್ಲ ವೆಂದು, **ದರ್ಶಿತಂ** ಪ್ರದರ್ಶಿಸಲ್ಪಟ್ಟಿತು ಶ್ರೀ ವಿಷ್ಣುಚಿತ್ತರವರು ಸಾಕ್ಷಾತ್ತಾಗಿ ಯತಿವರ್ಯರಿಂದಲೇ ಉಪದೇಶವನ್ನು ಹೊಂದಿದವರು; ಅವರು ಬರೆದಿರುವದೇನೆಂದರೆ **ಸ್ವಸ್ವವರ್ಣಾಶ್ರಮಾಧೀನಂ ಕರ್ಮ ನ ತ್ಯಾಜ್ಯ ಮೇ ವತತ್ । ಯಾವದ್ದೇಹಂ ಪ್ರಪನ್ನೈಶ್ಚ ತ್ಯಾಗಹೇತೊ ರದರ್ಶನಾತ್।ವಿಹಿತೇಷು ವ್ಯವಸ್ಥಾನಂ ಪ್ರಪನ್ನಾನಾಂ ಪ್ರಪಂಚ್ಯತೇ। ಶ್ರುತಿ ಸ್ಮೃತ್ಯಾದಿ ವಿಹಿತ ಮನುಷ್ಠಾನಂತು ನೈತ್ಯಕಮ್॥** ತಮ್ಮ ತಮ್ಮ ವರ್ಣಾಶ್ರಮಗಳಿಗೆ ಅಧೀನವಾಗಿ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಕರ್ಮವನ್ನು ಬಿಡತಕ್ಕದ್ದಲ್ಲವು. ದೇಹವಿರುವವರಿಗೂ ಜನ್ಮಾನುಸಾರವಾಗಿ ಪ್ರಪನ್ನರಿಂದಲೂ ಕೂಡ ಬಿಡಲು ಶಾಸ್ತ್ರಗಳಲ್ಲಿ ಯಾವ ಕಾರಣವು ತೋರಿ ಬಾರದಿರುಪದರಿಂದ ಅವರವರಿಗೆ ವಿಹಿತವಾದ ನಿತ್ಯಕರ್ಮಗಳಲ್ಲಿರೋಣವು ಪ್ರಪನ್ನರಿಗೂ ಕೂಡ ಹೇಳಲ್ಪಟ್ಟಿರುತ್ತದೆ. ಶ್ರುತಿಸ್ಮೃತ್ಯಾದಿಗಳಲ್ಲಿ ವಿಧಿಸಲ್ಪಟ್ಟ ನಿತ್ಯಕರ್ಮಗಳೂ ಪ್ರಪನ್ನರಿಂದ ಅನುಷ್ಠಿಸತಕ್ಕವುಗಳೇ ಎಂಬದಾಗಿ ಉಪದೇಶಿಸಿರುತ್ತಾರೆ. ಸಾರದೀಪಿಕೆಯುವರು **"ಇಪ್ಪಾಲ್ ಪಟ್ಟವರ್‌ಗಳಾಲೆ** ಆರೋಪಿತಮೆನ್ರು ಎಙ್ಗಳಾಳ್ವಾರ್ ತಿರುಕ್ಕುರು **ಕ್ಕೈಪ್ಪಿರಾನ್ ಪಿಳ್ಳಾನ್** ಮುದಲಾನಾರ್‌ಗಳಾಲ್ ಕಾಟ್ಟಪ್ಪಟ್ಟದೆನ್ಗೈ" ಎಂದು ಅಪ್ಪಣೆ ಕೊಡಿಸಿರುತ್ತಾರೆ. ಇವರಿಬ್ಬರು ಶ್ರೀ ಭಾಷ್ಯಕಾರರ ಪ್ರಿಯ ಶಿಷ್ಯರಾಗಿ, ಆಚಾರ್ಯಾಭಿಪ್ರಾಯವನ್ನು ಚನ್ನಾಗಿ ತಿಳಿದವರಾದುದರಿಂದ ಸ್ವರೂಪತ್ಯಾಗಾರ್ಥವನ್ನು ಶ್ರೀಯತಿವರ್ಯರು ಅಂಗೀಕರಿಸಲಿಲ್ಲವೆಂಬುದು ವ್ಯಕ್ತವು ಈ **ತಿರುಕ್ಕುರುಕ್ಕೈಪಿರಾನ್‌ಪಿಳ್ಳಾನ್** ಎಂಬುವರು ಶ್ರೀಭಾಷ್ಯಕಾರರ ಮುಖ್ಯ ಶಿಷ್ಯರು; ಶ್ರೀನಮ್ಮಾಳ್ವಾರ್ರವರ ತಿರುವಾಯ್‌ಮೊಳಿಗೆ ಅರಾಯಿರಪ್ಪಡಿ ಎಂಬ ಭಾಷ್ಯವನ್ನು ಅನುಗ್ರಹಿಸಿದವರು. ಇವರು ಶ್ರೀ ಭಾಷ್ಯಸಿಂಹಾಸನಾಧಿಗಳಾದ ನಾಲ್ವರಲ್ಲಿ ಮುಖ್ಯಸ್ಥರು. ಇವರು ಹೀಗೆ ಶ್ರೀ ಭಾಷ್ಯ ಮತ್ತು ಭಗವದ್ವಿಷಯವೆರಡರಲ್ಲೂ ಅದ್ವಿತೀಯ ಪಾಂಡಿತ್ಯವನ್ನು ಹೊಂದಿದವರಾದುದರಿಂದ ಉಭಯವೇದಾಂತ ಸಿಂಹಾಸನಾಧಿಪತಿ ಎಂಬ ಬಿರುದನ್ನು ವಹಿಸಿದ್ದರು. ಎಙ್ಗಳಾಳ್ವಾರ್‌ರವರು ಶ್ರೀಭಾಷ್ಯಕಾರ್ರವರ ೭೪ ಶಿಷ್ಯರುಗಳಲ್ಲಿ ಒಬ್ಬರು. ಇವರಿಗೆ ಶ್ರೀ ಭಾಷ್ಯಕಾರರ ನಿಯಮನಾನುಸಾರವಾಗಿ ತಿರುಕ್ಕುರುಹೈಪ್ಪಿರಾನ್‌ಪಿಳ್ಳಾನ್‌ರವರು ಶ್ರೀಭಾಷ್ಯ ಭಗವದ್ವಿಷಯ ಮೊದಲಾದವುಗಳನ್ನು ಉಪದೇಶಿಸಿ,ಶ್ರೀ ರಾಮಾನುಜ ಸಿದ್ಧಾಂತವನ್ನು ಪ್ರಚುರಪಡಿಸುವ ಹಾಗೆ ಮಾಡಿದರು.

"**ಸರ್ವಧರ್ಮಾನ್ ಪರಿತ್ಯಜ್ಯ**" ಎಂಬ ಪ್ರಥಮಪಾದದಿಂದ ತೋರಿಬರುವ ಮುಖ್ಯಾಭಿಪ್ರಾಯಗಳು (೧) ಆಕಿಂಚನ್ಯಾಧಿಕಾರವೂ (೨) ಅಂಗಾಂತರನೈರಪೇಕ್ಷ್ಯವೂ, ಎಂದು ವ್ಯಕ್ತವಾಗಿ ಸಮರ್ಥಿಸಲ್ಪಟ್ಟವು. ಮಹರ್ಷಿಗಳಾದ ವ್ಯಾಸಾದಿಗಳು ಪ್ರಪತ್ತಿಯನ್ನು ತ್ಯಜಿಸಿ, ಉಪಾಸನವನ್ನವಲಂಬಿಸಲು, ಪ್ರಪದನ ಶಾಸ್ತ್ರಜ್ಞಾನ ವಿಶ್ವಾಸಗಳ ಮಾಂದ್ಯವು ಕಾರಣವೆಂದು ಕೆಲವರು ಹೇಳಿದರು. ಈ ಅಭಿಪ್ರಾಯ

**ಆನಾಲ್** (೧) "**ಇದಂ ಶರಣ ಮಜ್ಞಾನಾ ಮಿದ ಮೇವ ವಿಜಾನತಾಮ್। ಇದಂ ತಿತೀರ್ಷತಾಂ ಪಾರ ಮಿದ ಮಾನಂತ್ಯ ಮಿಚ್ಛತಾಮ್॥**" **ಎನ್ರುಮ್**

---

ವನ್ನು ಹಿಂದೆಯೇ ಖಂಡಿಸಿದರು. (೧) ಪ್ರಪತ್ತಿ ಶಾಸ್ತ್ರಪ್ರಕ್ರಿಯೆಯನ್ನೆಲ್ಲಾ ಅತಿ ವಿಶದವಾಗಿ ಉಪಪಾದಿಸಿ ಹೇಳಿದ ಜ್ಞಾನಾಗ್ರೇಸರರಾಗಿ ಋಷಿಗಳಲ್ಲೆಲ್ಲಾ ಸರ್ವ ಶ್ರೇಷ್ಠರೆಂದೂ, "**ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ**" ಹೀಗೆ ವಿಷ್ಣ್ವಂಶರೆಂದು ತಮ್ಮ ತಂದೆಯಾದ ಶ್ರೀ ಪರಾಶರರಿಂದಲೇ ಹೊಗಳಲ್ಪಟ್ಟವರಿಗೆ ಜ್ಞಾನವಿಶ್ವಾಸಗಳಲ್ಲಿ ಮಾಂದ್ಯವುಂಟೇ ? ಹಾಗೆ ಹೇಳಲು ಹೇಗೆ ಮನಸ್ಸು ಒಪ್ಪಿತೋ ? ಆಶ್ಚರ್ಯವು. ಇಂತವರಿಗೆ ಜ್ಞಾನವಿಶ್ವಾಸ ಮಾಂದ್ಯಗಳು ಸರ್ವಾತ್ಮನಾ ಇಲ್ಲವು. ಸ್ವತಂತ್ರ ಪ್ರಪತ್ತಿಯಲ್ಲಿ ಅಧಿಕಾರ ಉಂಟಾಗಲು (೧) ಭಕ್ತಿ ಪ್ರಪತ್ತಿಗಳ ಸ್ವರೂಪಜ್ಞಾನ ಉಂಟಾಗುವದರ ಮೂಲಕ ಗುರುಲಘೂಪಾಯಗಳ ಸ್ವರೂಪಜ್ಞಾನವು ಬೇಕು (೨) ಹೀಗೆ ಜ್ಞಾನವಿರುವದರ ಮೂಲಕ ಭಕ್ತ್ಯುಪಾಯದಲ್ಲಿ ತಾನು ಅಶಕ್ತನೆಂಬ ಭಾವವುಂಟಾಗಬೇಕು. (೩) ಹೀಗೆ ಜ್ಞಾನವಿದ್ದರೂ ವಿಳಂಬವನ್ನು ಸಹಿಸದೇ ಇರಬೇಕು. ಶ್ರೀ ವ್ಯಾಸಾದಿಗಳು ಜ್ಞಾನವಿಶ್ವಾಸ ಮಾಂದ್ಯವಿಲ್ಲದೆ ಪರಿಪೂರ್ಣಜ್ಞಾನವುಳ್ಳವರಾಗಿ ವಿಳಂಬವನ್ನು ಸಹಿಸುವವರಾಗಿ ಭಕ್ತ್ಯುಪಾಯದಲ್ಲಿ ಶಕ್ತಿಯುಳ್ಳವರಾಗಿಯೂ ಇದ್ದುದರಿಂದ, ವಿಪುಳ ಸುಖದಾಯಕವಾಗಿರುವ ಉಪಾಸನಾನುಷ್ಠಾನವನ್ನೇ ಅವಲಂಬಿಸಿದರೆಂಬಿದು ಶ್ರೀಗುರುಗಳ ಅಭಿಪ್ರಾಯವು.

ಆದರೆ "ಇದಂ ಶರಣಮಜ್ಞಾನಾಂ" ಎಂಬ ಲಕ್ಷ್ಮೀತಂತ್ರ ಶ್ಲೋಕದಲ್ಲೂ, "**ಅವಿದ್ಯಾತೋ ದೇವೇ**" ಎಂಬ ಶ್ರೀಪರಾಶರಭಟ್ಟರ ಶ್ಲೋಕದಲ್ಲೂ, ಜ್ಞಾನ ಮಾಂದ್ಯವಿರುವವರಿಗೆ ಭಕ್ತಿಯಲ್ಲಿ ಅಧಿಕಾರವೆಂಬ ಭಾವವು ತೋರಿಬರುವದಿಲ್ಲವೇ? ಎಂದರೆ, ಅಲ್ಲಿ ಹೇಳಿರುವ ಅಜ್ಞಾನಶಬ್ದ ತಾತ್ಪರ್ಯವೇನೆಂಬುದನ್ನು ತಿಳಿಸುತ್ತಾರೆ.—ಆ ಶ್ಲೋಕಗಳ ತಾತ್ಪರ್ಯವನ್ನು ಮುಂದೆ ವಿಶದೀಕರಿಸುತ್ತಾರೆ. ಆದುದರಿಂದ ಅವುಗಳ ತಾತ್ಪರ್ಯವನ್ನು ಸಙ್ಗ್ರಹವಾಗಿ ತಿಳಿಸುವೆವು.—**ಆನಾಲ್** - ಮೇಲೆ ಹೇಳಿದುದೇ ಅಭಿಪ್ರಾಯವಾದರೆ, "**ಇದಂ ಶರಣಮಜ್ಞಾನಾ**" **ಎನ್ನುಮ್**- ಎಂಬುದಾಗಿಯೂ, ಮತ್ತು "**ಅವಿದ್ಯಾತೋ ದೇವೇ**" **ಏನ್ನುಮ್** ಎಂಬುದಾಗಿಯೂ, **ಶೊಲ್ಲುಗಿರ** – ಹೇಳುವ, **ಅಧಿಕಾರಭೇದವು, ಇರುಕ್ಕುಂಪಡಿ** - ಯಥಾರ್ಥವಾಗಿರುವ ಸಂದರ್ಭವು, **ಯೆನ್ನೆನ್ನಿಲ್**-ಯಾವುದೆಂದರೆ,ತಿಳಿಸುತ್ತಾರೆ.— "**ಇದಂ** – ಈ ಪ್ರಪದನವು, **ಅಜ್ಞಾನಾಂ** - ಪ್ರಪದನದ ಸಾಮಾನ್ಯಜ್ಞಾನವಿದ್ದು ಭಕ್ತಿಯೋಗವಾದ ಉಪಾಸನದ ಸರಿಯಾದ ಜ್ಞಾನವಿಲ್ಲದವರಿಗೂ, **ಶರಣಂ** - ಉಪಾಯವು; **ವಿಜಾನತಾಂ** - ಪ್ರಪತ್ತಿಭಕ್ತಿಗಳ ಜ್ಞಾನವುಂಟಾಗಿ, ಭಕ್ತಿಯೋಗವನ್ನು ಸಪ

**(೨) "ಅವಿದ್ಯಾತೋ ದೇವೇ ಪರಿಬೃಢತಯಾ ವಾ ವಿದಿತಯಾಸ್ವಭಕ್ತೇ ಭೂರ್ವಮ್ನಾ ವಾ ಜಗತಿ ಗತಿ ಮನ್ಯಾ ಮವಿದುಷಾಮ್" । ಎನ್ನುಮ್ ಅಧಿಕಾರ ಭೇದ ಮಿರುಕ್ಕವ್ಪಡಿ ಯೆನ್ನೆನ್ನಿಲ್ ?**

---

ರಿಕರವಾಗಿ ಅನುಷ್ಠಿಸಲು ತನಗೆ ಶಕ್ತಿಯಿಲ್ಲದುದರಿಂದ **ಪ್ರಪತ್ತ್ಯನುಷ್ಠಾನವೇ** ಸುಕರವೆಂದು ವಿವೇಕಜ್ಞಾನವನ್ನು ಹೊಂದಿದವನಿಗೂ, **ಇದಂ** – ಈ, ಪ್ರಪದನವೇ **ಶರಣಂ** - ಉಪಾಯವು. **ತಿತೀರ್ಷತಾಂಪಾರಂ** - ಸಂಸಾರದ, **ಅನಿಷ್ಟಂ ತರ್ತು ಮಿಚ್ಛತಾಂ** – ಅನಿಷ್ಟವನ್ನು ದಾಟಿ ಆಚೆ ದಡವನ್ನು ಹೊಂದಲು ಅಪೇಕ್ಷೆಯಲ್ಲಿ ತ್ವರೆಯುಳ್ಳವರಿಗೂ, **ಇದಂ ಶರಣಂ**–ಇದೇ ಉಪಾಯವು; ವಿಳಂಬವನ್ನು ಸಹಿಸದೇ ಇರುವವರಿಗೂ ಇದೇ ಉಪಾಯವೆಂಬ ಭಾವವು; **ಇದಮಾನಂತ್ಯಮಿಚ್ಛತಾಂ** – ಪರಿಪೂರ್ಣಬ್ರಹ್ಮಾನುಭವವನ್ನು ಹೊಂದಬೇಕೆಂಬ ಅಪೇಕ್ಷೆಯುಳ್ಳವರೆಲ್ಲರಿಗೂ ಇದೇ ಉಪಾಯವು, ಇದರಿಂದ ತುಂಬಾ ಜ್ಞಾನವಿಲ್ಲದವರಿಗೂ ಜ್ಞಾನವಿದ್ದರೂ ಉಪಾಸನೆಯನ್ನು ಮಾಡಲು ಅಶಕ್ತರಾದವರಿಗೂ, ವಿಳಂಬವನ್ನು ಸಹಿಸದವರಿಗೂ ಮೋಕ್ಷಬೇಕೆಂಬುವರಿಗೂ ಹೀಗೆ ಪ್ರಪದನಕ್ಕೆ ಸರ್ವರೂ ಅಧಿಕಾರಗಳೆಂಬುದು ಸ್ಥಾಪಿತವು. ಹೀಗೆ ಈ ನಾಲ್ಕು ವಿಧ ಅಧಿಕಾರಿಗಳಿಗೂ ಪ್ರಪದನದಲ್ಲೇ ಅಧಿಕಾರ ವೆಂದು ಹೇಳಲ್ಪಟ್ಟಿತು. ಇಲ್ಲಿ **ಇದಮೇವ ವಿಜಾನತಾಂ** ಎಂದಿರುವುದರಿಂದ, ಒಳ್ಳೆಯ ಪ್ರಾಜ್ಞನಾದವನಿಗೆ ಪ್ರಪದನ ಅಧಿಕಾರವೆಂದುಅರ್ಥಮಾಡಿ,ಮಂದಾಧಿಕಾರಿ ಗಳಿಗೀಗ ಭಕ್ತಿಯೋಗವಾದ ಉಪಾಸನದಲ್ಲಿ ಅಧಿಕಾರವೆಂದು ಕೆಲವರು ಅರ್ಥಮಾಡಿ ಬಿಟ್ಟರು. ಹೀಗೆ ಅರ್ಥವಲ್ಲವೆಂದು ಮುಂದೆ ಉಪಪಾದಿಸುತ್ತಾರೆ. **ಇದಮಾ ನಂತ್ಯ ಮಿಚ್ಛತಾಮ** ಎಂಬುದರಿಂದ **"ಅಭಯಂ ಸರ್ವಭೂತೇಭ್ಯಃ"** ಎಂಬಲ್ಲಿ ತೋರಿಬರುವ ಸರ್ವಾಧಿಕಾರತ್ವವು ಬೋಧಿತವು.

(೨) ಇದೂ ಹಿಂದಿನ ಶ್ಲೋಕದ ಅನುವಾದವೇ. ಪ್ರಪತ್ತಿಯಲ್ಲಿ ಯಾರಿಗೆ ಅಧಿಕಾರವೆಂದು ತಿಳಿಸುವ ಸಂದರ್ಭದಲ್ಲಿ, ಪ್ರಪದನಕ್ಕೂ ಉಪಾಸನಕ್ಕೂ ಪ್ರಪತ್ತಿ ಭಕ್ತಿಗಳಲ್ಲಿ ಅಧಿಕಾರಭೇದವೂ ಹೇಳಲ್ಪಡುತ್ತದೆ. **ಅವಿದ್ಯಾತಃ** - ಇದರರ್ಥವು, **ಇದಂ ಶರಣಮಜ್ಞಾನಾಂ** ಎಂಬುದರ ಅರ್ಥವೇ ; ಉಪಾಸನ ಪ್ರಪದನಗಳ ಸರಿಯಾದ ಜ್ಞಾನವಿಲ್ಲದುದರ ಮೂಲಕವಾಗಿ **ಗತಿಮನ್ಯಾ ಮವಿದುಷಾಂ** - ಬೇರೆ ಉಪಾಯವನ್ನು ಅಥವಾ ಇನ್ನೊಂದು ಉಪಾಯವಾದ ಭಕ್ತಿಯೋಗ ಗತಿ ಯನ್ನು ತಿಳಿಯದೇ ಇರುವವರಿಗೂ, ೨. **ದೇವೇ** – ಸರ್ವೇಶ್ವರನಲ್ಲಿ, **ವಿದಿತಯಾ** – ಗುರೂಪದೇಶದಿಂದಲಾಗಲಿ ಶಾಸ್ತ್ರಜ್ಞಾನದಿಂದಲಾಗಲಿ ತಿಳಿದ, **ಪರಿಭೃಢತಯಾ ವಾ**–ಅಘಟಿತಘಟನಾ ಸಾಮರ್ಥ್ಯವುಳ್ಳವನೆಂಬುದರಿಂದಲಾಗಲಿ ಎಂದರೆ ಮಹಾಪ ರಾಧಿಯಾಗಿದ್ದರೂ ಆಶ್ರಯಿಸಿಬಿಟ್ಟರೆ ಮುಕ್ತಿಯನ್ನೀಯುವ ಸಾಮರ್ಥ್ಯವುಳ್ಳವ ನೆಂಬುದರಿಂದಲಾಗಲಿ ಅಥವಾ **ಸ್ವಭಕ್ತೇ ಭೂರ್ಮಮ್ನಾ ವಾ** – ಆಶ್ರಯಿಸಿದರೆ

**ಇವ್ವಿಡತ್ತಿಲ್ ಚೊನ್ನ ಅಜ್ಞಾನಮ್ ಪಶ್ವಾದಿಗಳ್ಪೋಲೆ ಶಾಸ್ತ್ರೀಯ ಮೊನ್ರು ಮರಿಯಾದೊಳಿಗೈಯುನ್ರು, ಮತ್ತೇದೆನ್ನಿಲ್? ಉಪಾಸನಾದಿಗಳಿಲ್ ತೆಳಿವಿಲ್ಲಾಮೈಯಾದಲ್, ಪ್ರಪತ್ತಿ ತನ್ನಿಲುಮ್ ಸೂಕ್ಷ್ಮ ವಿಶೇಷಙ್ಗಳ್ ಅರಿಯಾಮೈಯಾದಿಲಾಮತ್ತನೈ.**

---

ರಕ್ಷಿಸಿಯೇ ರಕ್ಷಿಸುವನೆಂಬ ತನ್ನ ಸಂಪೂರ್ಣ ಭಕ್ತಿವಿಶ್ವಾಸಗಳಿಂದಲಾಗಲಿ, **ಜಗತಿ ಗತಿ ಮನ್ಯಾಮವಿದುಷಾಂ**-ಈ ಜಗತ್ತಿನಲ್ಲಿ ಬೇರೆ ಗತಿ ಇಲ್ಲವೆಂದು ತಿಳಿದವನಿಗೂ ಇದು **ಇದಮೇವ ವಿಜಾನತಾಂ** - ಎಂಬುದರ ಅಭಿಪ್ರಾಯವು. ಇನೆಯ ಅಧಿಕಾರಿ ಸಹ ಇದರಲ್ಲೇ ಸೇರಿದನು. **ಗತಿಮನ್ಯಾ ಮವಿದುಷಾಂ** ಎಂಬುದರಿಂದ ಸರ್ವಾಧಿಕಾರತ್ವವನ್ನು ಹೇಳಬಹುದು. ಇದರ ಉತ್ತರಾರ್ಧವು ಇಂತವರಿಗೆಲ್ಲಾ ಶ್ರೀ ಹರಿಯೇ ಪ್ರಾಪ್ಯನೂ ಪ್ರಾಪಕನೂ ಎಂದು ದ್ವಯಮಂತ್ರದ ಅರ್ಥವನ್ನು ಬೋಧಿಸುತ್ತಾರೆ. - ಅದು ಯಾವುದೆಂದರೆ "**ಗತಿರ್ಗನ್ತ್ಯಶ್ಚಾಸೌ ಹರಿರಿತಿ ಚಿತನ್ತಾಹ್ವಯ ಮನೋಽಹಸ್ಯಂ ವ್ಯಾಜಹ್ರೇಸಖಲು ಭಗವಾನ್ ಶೌನಕಮುನಿಃ**" ಎಂಬುದು ಪರಮಶೇಷಿಯಾದ ಶ್ರೀಮನ್ನಾರಾಯಣನಿಗಿಂತ ಬೇರೆ ಸಿದ್ಧೋಪಾಯನೂ ಇಲ್ಲವು; ಉಪೇಯನೂ ಇಲ್ಲವು; ಎಂದು ಇಲ್ಲಿ ಹೇಳಲ್ಪಟ್ಟಿತು. ಇಂತಹ ಮಹತ್ತಾದ ರಹಸ್ಯವನ್ನು ಶೌನಕಮುನಿಗಳು ಉಪದೇಶಿಸಿರುತ್ತಾರೆಂದು ಹೇಳಲ್ಪಟ್ಟಿರುತ್ತದೆ. ತುಂಬಾ ತಿಳುವಳಿಕೆ ಇಲ್ಲದವರಿಗೂ, ತಿಳುವಳಿಕೆ ಇರುವವರಿಗೂ, ಅಶಕ್ತರಿಗೂ, ವಿಳಂಬವನ್ನು ಸಹಿಸದವರಿಗೂ ಪ್ರಪದನವೇ ಎಂಬುದು **ಈ** ಶ್ಲೋಕದ ತಾತ್ಪರ್ಯವು.

**ಎನ್ನುಮ್** - ಹೀಗೆ ಎರಡು ಶ್ಲೋಕಗಳಲ್ಲೂ, **ಶೊಲ್ಲುಗಿರ** - ಹೇಳಲ್ಪಟ್ಟ, **ಅಧಿಕಾರಭೇದಂ** - ಅಧಿಕಾರದಲ್ಲಿರುವ ಭೇದವು, ಇರುಕ್ಕುಂಪಡಿ ಉಪಪಾದಿಸಲ್ಪಟ್ಟ ಕ್ರಮವು, **ಯೆನ್ನೆನ್ನಿಲ್** - ಹೇಗೆ ಎಂದರೆ ಮುಂದೆ ಈ ಎರಡು ಶ್ಲೋಕಗಳೂ ಸಮಾನಾರ್ಥಕಗಳಾದುದರಿಂದ ಎರಡನ್ನೂ ಸೇರಿಸಿ ತಾತ್ಪರ್ಯವನ್ನು ಬೋಧಿಸುತ್ತಾರೆ. ಇತರರು ಮಾಡಿರುವ ಅರ್ಥವು ಸರಿಯಾದವಲ್ಲವೆಂದು ತೋರಿಸುವದಕ್ಕಾಗಿ ತಾವೇ ಅರ್ಥವನ್ನು ದಯಪಾಲಿಸುತ್ತಾರೆ. - **ಇವ್ವಿಡತ್ತಿಲ್** - ಈ ಎರಡು ಪ್ರಮಾಣದಲ್ಲೂ, **ಚೊನ್ನ ಅಜ್ಞಾನಂ** "**ಇದಂಶರಣಮಜ್ಞಾನಾಂ**" ಎಂಬಲ್ಲಿಯೂ "**ಅವಿದ್ಯಾತಃ**" ಎಂಬಲ್ಲಿಯೂ ಹೇಳಿರುವ ಅಜ್ಞಾನವು, **ಪಶ್ವಾದಿಗಳ್ಪೋಲೇ** - ಆಕಳು ಮೊದಲಾದ ಮೂಗು ಜಂತುಗಳ ಹಾಗೆ, **ಶಾಸ್ತ್ರೀಯಮೊನ್ರುಮ್ ಅರಿಯಾದೊಳಿಗೈ ಯುನ್ರು** - ಶಾಸ್ತ್ರಸಂಬಂಧವಾಗಿರುವ ಒಂದನ್ನು ತಿಳಿಯದೆ ಇರುವದಲ್ಲವು. **ಮತ್ತೇದೆನ್ನಿಲ್** - ಹಾಗಾದರೆ ಅಜ್ಞಾನವು ಯಾವುದರಲ್ಲಿ? ಎಂದರೆ – **ಉಪಾಸನಾದಿಗಳಿಲ್ ಶೆಳಿವಿಲ್ಲಾಮೈಯಾದಲ್** - ಉಪಾಸನ ಮತ್ತು ಆದಿಶಬ್ದದಿಂದ ಅದಕ್ಕೆ ಅಂಗಗಳಾದ ಕರ್ಮಯೋಗ ಜ್ಞಾನಯೋಗಗಳು, ಇವುಗಳ

**ಇವತ್ತಿಲ್ "ವಿಜಾನತಾಮ್" ಎನ್ರುಮ್ "ದೇವೇ ಪರಿಬೃಢತಯಾ ವಾ ವಿದಿತಯಾ" ಎನ್ನುಮ್ ಶೊನ್ನ ಜ್ಞಾನವಿಶೇಷಮುಮ್ ಉಪಾಸನಾದಿಗಳಿಲ್ ತೆಳಿವಾದಲ್, ಪ್ರಪತ್ತಿಕ್ಕು ಉಪಯುಕ್ತಮಾನ ಶರಣ್ಯ ಗುಣಾದಿವಿಷಯು**

---

ಜ್ಞಾನವಿಲ್ಲದಿರುವದರಿಂದಲಾಗಲಿ, ಅಥವಾ **ಪ್ರಪತ್ತಿತನ್ನಿಲುಮ್** ಪ್ರಪದನಶಾಸ್ತ್ರದಲ್ಲಾಗಲಿ, **ಸೂಕ್ಷ್ಮವಿಶೇಷಙ್ಗಳ್** - ಪ್ರಪತ್ತಿಯ ಅರ್ಥವೇನು ? ಅದು ಹೇಗೆ ಉಪಾಯವಾಗುತ್ತದೆ ? ಅದನ್ನನುಷ್ಠಿಸುವ ಕ್ರಮು ಹೇಗೆ ? ಇವೇ ಮೊದಲಾದ **ಸೂಕ್ಷ್ಮ**ವಿಶೇಷಗಳನ್ನು,, **ಅರಿಯಾವೈಯಾದಿಲಾಮುತ್ತನ್ನೈ** - ತಿಳಿಯದೇ ಇರುವದಾಗಲಿ ಆಗಬಹುದು, ಇಷ್ಟುಮಾತ್ರವೇ, "**ಅಜ್ಞಾನಾಂ**" ಎಂಬುದರಲ್ಲೂ ಮತ್ತು "**ಅವಿಜ್ಞಾತಃ**" ಎಂಬುದರಲ್ಲೂ ಇರುವ ಅಜ್ಞಾನ ಶಬ್ದದ ಅರ್ಥವೆಂಬ ತಾತ್ಪರ್ಯವು. ಉಪಾಸನಾಂಗೋಪಾಯಕ್ಕೆ ಬೇಕಾದ ಸಪರಿಕರ ಭಕ್ತಿಯೋಗ ಜ್ಞಾನವಿಲ್ಲದವರಿಗೂ, ಅಥವಾ ಪ್ರಪದನಶಾಸ್ತ್ರದ ವಿಶೇಷ ಜ್ಞಾನವಿಲ್ಲದವರಿಗೂ ಪ್ರಪದನದಲ್ಲೇ ಅಧಿಕಾರವೆಂದು ಹೇಳಿದಂತಾಯಿತು. ಆಗಲಿ, ಹಾಗಾದರೆ ಪ್ರಪದನಾನುಷ್ಠಾನವನ್ನು ಮಾಡುವವನಿಗೆ ಸೂಕ್ಷ್ಮ ವಿಶೇಷಜ್ಞಾನವು ಬೇಡವೋ ? ಎಂದರೆ ಪ್ರಪತ್ತಿಗೆ ಉಪಯುಕ್ತವಾದ ಸಾಮಾನ್ಯಜ್ಞಾನವೇ ಸಾಕು, ವಿಶೇಷ ಜ್ಞಾನವು ಬೇಕಾಗಿಲ್ಲವೆಂಬ ಭಾವವು.

ಹಿಂದೆ ಜ್ಞಾನಶೂನ್ಯರಿಗೂ ಇದೇ ಉಪಾಯವೆಂದು ಹೇಳಲ್ಪಟ್ಟಿತು. ಮುಂದೆ ಆ ಶ್ಲೋಕಗಳಲ್ಲಿರುವ "**ಇದಮೇವವಿಜಾನತಾಂ**" ಎಂಬುದರ ಮತ್ತು "**ದೇವೇ ಪರಿಬೃಢತಯಾ ವಾ ವಿದಿತಯಾ**" ಎಂಬುದರ ಅರ್ಥವನ್ನು ವ್ಯಕ್ತಪಡಿಸುತ್ತಾರೆ. ಜ್ಞಾನವುಳ್ಳವರೂ ಇದಕ್ಕೆ ಅಧಿಕಾರಿಗಳೆಂದು ಹೇಳಲ್ಪಟ್ಟಿರುತ್ತದೆ. ಯಾವ ಜ್ಞಾನವುಳ್ಳವರೆಂದರೆ ಹೇಳುತ್ತಾರೆ— **ಇವತ್ತಿಲ್** - ಈ ಪ್ರಮಾಣಗಳಲ್ಲಿ "**ವಿಜಾನತಾಂ**" ಎನ್ರುಮ್ - ಎಂಬದಾಗಿಯೂ, "**ದೇವೇಪರಿಬೃಡತಯಾ** ವಾ **ವಿದಿತಯಾ" ಎನ್ರುಮ್** - ಎಂಬದಾಗಿಯೂ, **ಶೊನ್ನ ಜ್ಞಾನವಿಶೇಷಮುಮ್** - ಹೇಳಲ್ಪಟ್ಟ ಜ್ಞಾನವಿಶೇಷವು, **ಉಪಾಸನಾದಿಗಳಿಲ್ ತೆಳಿವಾದಲ್** ಸಪರಿಕರವಾದ ಉಪಾಸನವಾದ ಬ್ರಹ್ಮವಿದ್ಯೆಯ ಪೂರ್ಣಜ್ಞಾನವಾಗಲಿ, ಅಥವಾ **ಪ್ರಪತ್ತಿಕ್ಕುಪಯುಕ್ತಮಾನ** ಪ್ರಪದನಕ್ಕೆ ಸಹಕಾರಿಯಾದ, **ಶರಣ್ಯಗುಣಾದಿ ವಿಷಯತ್ತಿಲ್** - ಸರ್ವರಕ್ಷಕನಾದ ಭಗವಂತನ ಕಲ್ಯಾಣಗುಣಗಳೇ ಮೊದಲಾದ ವಿಷಯದಲ್ಲಿ, **ತೆಳಿವಾದಲಾಮುತ್ತನ್ನೈ** - ಸರಿಯಾದ ಜ್ಞಾನವಾದರೂ ಆಗಬಹುದು. **ಅಲ್ಲದು** - ಹಾಗಲ್ಲದೆ **ಅನಪೇಕ್ಷಿತಮಾನ** ಸರ್ವ**ವಿಷಯಜ್ಞಾನಮನ್ರು** - ಪ್ರಪದನಕ್ಕೆ ಬೇಕಾಗದೇ ಇರುವ ಸಮಸ್ತ ವಿಷಯದ ತಿಳಿವಳಿಕೆಯು ಅಲ್ಲವು. ಉಪಾಸನಾದಿಗಳಲ್ಲಿ ಜ್ಞಾನ ಉಂಟಾಗುವದರಿಂದ, ಅದು ತುಂಬಾ ಗುರುವಾದ ಉಪಾಯವು, ಅನುಷ್ಠಿಸುವದು ಕಷ್ಟತರವೆಂಬ ವಿಷಯವನ್ನು ಗ್ರಹಿಸುವನು; ಮತ್ತು ಪರಮಾತ್ಮನ ಆಶ್ರಿತ

**ತ್ತಿಲ್ ಶೆಳಿನಾಕಲಾಂ** ಸುಕ್ತನ್ನೈ; **ಅಲ್ಲದು ಇದುಕ್ಕು ಅನಪೇಕ್ಷಿತವಾನ ಸರ್ವ** ವಿಷಯುಜ್ಞಾನವುನಾ **ಪರಿಬೃಢತ್ವರೂಪ ಶರಣ್ಯಗುಣವಿಶೇಷಜ್ಞಾನಮಿರೇ ಇಙ್ಗುಕೊಳ್ಳಪ್ಪಡುಗಿರದು. ಇವ್ವುಪಯುಕ್ತಜ್ಞಾನ ಮುಂಡಾನಾಲುಮ್ ಉಪಾಯಾಂತರತ್ತಿಲ್ ಶಕ್ತಿಯಿಲ್ಲಾದಪೋದು ಆಕಿಂಚನನಾಯ್ ಪ್ರಪತ್ತಿಕ್ಕು ಅಧಿಕಾರಿಯಾಮ್.**

---

ರಕ್ಷಣೋಪಯುಕ್ತಗಳಾದ ಕಲ್ಯಾಣಗುಣಗಳ ಜ್ಞಾನವೂ, ಆತನು ಸರ್ವಶೇಷಿಯಾಗಿ ಅಘಟಿತಘಟನಾಶಕ್ತಿಯುಳ್ಳವನಾಗಿ ಹೀಗೆ ಪರಿಬೃಢನಾಗಿ ಪ್ರಪನ್ನನನ್ನು ಎಂದಿಗೂ ಕೈ ಬಿಡನು, ಇದೀಗ ತನಗೆ ಅನುಕೂಲವಾದ ಲಘೂಪಾಯವೆಂಬ ಜ್ಞಾನ ಉಂಟಾಗುವನಿಗೂ ಈ ಪ್ರಪದನದಲ್ಲಿ ಅಧಿಕಾರ ಉಂಟಾಗುತ್ತದೆಂಬ ಭಾವವು ಇಗನ್ನೇ ಮುಂದಿನ ವಾಕ್ಯದಮೂಲಕ ಉಪಪಾದಿಸುತ್ತಾರೆ.- **ಪರಿಬೃಢತ್ವ ರೂಪ** -ಸರ್ವೇಶ್ವರನಾಗಿ ಸರ್ವಶೇಷಿಯಾಗಿ ಸರ್ವನಿಯಾಮಕನಾಗಿ, ಅಘಟಿತ ಘಟನಾಶಕ್ತಿಯುಳ್ಳ, **ಶರಣ್ಯಗುಣವಿಶೇಷಜ್ಞಾನಮಿರೇ** – ಸಿದ್ಧೋಪಾಯನಾಗಿ ಸರ್ವರಕ್ಷಕನಾಗಿ ಪ್ರಪನ್ನರಿಗೆ ಪ್ರಾಪ್ಯನಾಗಿಯೂ ಇರಲು ಯೋಗ್ಯವಾದ ಗುಣ ವಿಶೇಷಗಳಾದ ಕಾರುಣ್ಯ ಸೌಲಭ್ಯಸೌಶೀಲ್ಯವಾತ್ಸಲ್ಯಾದಿಗಳ ಜ್ಞಾನವೀಗ, **ಇಙ್ಗುಕೊಳ್ಳಪ್ಪಡುಗಿರದು** - ಇಲ್ಲಿ ಹೇಳಲ್ಪಡತಕ್ಕದ್ದಾಗಿರುತ್ತದೆ. ಪೂರ್ವಪಕ್ಷಿಗಳು ಇದಕ್ಕೆ ಹೇಗೆ ಅರ್ಥಮಾಡಿದ್ದರು ? ಎಂದರೆ, ಹೀಗೆ ಸಂಪೂರ್ಣ ಜ್ಞಾನಾಧಿಕಾರಿಯೂ ಪ್ರಪದನಾಧಿಕಾರಿ ಎಂದು ಹೇಳಲ್ಪಟ್ಟಿರುವದರಿಂದ, ಅಂತಹ ಜ್ಞಾನವಿಲ್ಲದೆ ಮಂದಾಧಿಕಾರಿಯೇ ಉಪಾಸನಕ್ಕೆ ಅಧಿಕಾರಿ ಎಂದು ಭಾವಿಸಿದರು ಇದು ಸರಿಯಾದ ಅಭಿಪ್ರಾಯವಲ್ಲವೆಂದು ಉಪಪಾದಿಸಿ ಹೇಳುತ್ತಾರೆ. ಈ ಜ್ಞಾನಮೂಲಕವಾಗಿ ತಾನು ಅಶಕ್ತನು, ತನ್ಮೂಲಕ ಆಕಿಂಚನನು ಎಂದು ತೋರಿದರೆ ಅಂತವನಿಗೂ ಪ್ರಪದನದಲ್ಲಿ ಅಧಿಕಾರವೆಂದ ಈ ಮುಂದಿನ ವಾಕ್ಯವಾದ **ಇವ್ವುಪಯುಕ್ತಜ್ಞಾನಮುಣ್ಡಾನಾಲ್** ಎಂಬುದರಿಂದ ಹೇಳುತ್ತಾರೆ. ಆದರೆ ಉಪಾಯವು ಗುರುವಾದರೂ ತನಗೆಶಕ್ತಿಯುಂಟು ಎಂದು ಭಾವಿಸಿದುದಾದರೆ ಉಪಾಸನಕ್ಕೇಅಧಿಕಾರಿಯಾಗುವನು **ಇವ್ವುಪಯುಕ್ತ ಜ್ಞಾನಮುಣ್ಡಾನಾಲ್** - ಹೀಗೆ ಉಪಾಸನಕ್ಕೆ ಬೇಕಾದ ಜ್ಞಾನವಾಗಲಿ, ಅಥವಾ ಪ್ರಪದನಕ್ಕೆ ಬೇಕಾದ ಶರಣ್ಯನ ಕಲ್ಯಾಣಗುಣಗಳ ಜ್ಞಾನವಾಗಲಿ, ಉಂಟಾದರೆ **ಉಪಾಯಾಂತರತ್ತಿಲ್** - ಬೇರೆ ಉಪಾಯವಾದ ಉಪಾಸನದಲ್ಲಿ, **ಶಕ್ತಿಯಿಲ್ಲಾದಪೋದು** - ಅದು ಗುರೂಪಾಯವು, ತುಂಬಾ ಕಷ್ಟತರವಾದುದು, ಆದುದರಿಂದ ತನಗೆ ಶಕ್ತಿಯಿಲ್ಲದಿರುವಾಗ, **ಆಕಿಂಚನನಾಗಿ, ಪ್ರಪತ್ತಿಕ್ಕು ಅಧಿಕಾರಿಯಾಮ್** - ತಾನು ಪ್ರಪತ್ತಿಗೆ ಅಧಿಕಾರಿಯು ಆಗುವನು; ಎಂದರೆ ಅಂತಹ ಜ್ಞಾನಮೂಲಕವಾಗಿ ಹಾಗೆ ಭಾವಿಸುವನು. ಹೀಗೆ ಜ್ಞಾನ ಉಂಟಾದುದರಮೂಲಕ ತಾನು ಉಪಾಸನಕ್ಕೆ ಅಶಕ್ತನು ಎಂಬುದರಿಂದ ಆಕಿಂಚನ್ಯವು,

ಏರ್ಪಟ್ಟು, ಪ್ರಪತ್ತಿಗೇನೇ ತಾನು ಯೋಗ್ಯನೆಂದು ಭಾವಿಸುವನಾದುದರಿಂದ ಇಂತಹ ಜ್ಞಾನಾಧಿಕಾರಿಯೂ ಸಹ ಪ್ರಪದನಕ್ಕೆ ಅಧಿಕಾರಿ ಎಂಬ ಭಾವವು ಶ್ರೀ ಯಾಮುನ ಮುನಿಗಳು ಅವರ ಸ್ತೋತ್ರರತ್ನದಲ್ಲಿ ಈ ಅಭಿಪ್ರಾಯಗಳನ್ನೇ "ನಧರ್ಮ ನಿಷ್ಠೋಽಸ್ಮಿ" ಇತ್ಯಾದಿಗಳಿಂದ ತಮಗೆ ಕರ್ಮಯೋಗ ಜ್ಞಾನಯೋಗಭಕ್ತಿಯೋಗ ಗಳಲ್ಲಿ ಅಶಕ್ತಿಯಿರುವುದರಿಂದ, ಅಕಿಂಚನನಾಗಿಯೂ ಅನನ್ಯಗತಿಕನಾಗಿಯೂ ಇರುವ ನಾನು ಪ್ರಪದನವನ್ನು ಅನುಷ್ಠಿಸಿರುತ್ತೇನೆಂದು ಹೇಳಿ, ಹೀಗೆ ಭರನ್ಯಾಸವನ್ನೂ ಅಜ್ಞಾನದಿಂದ ತಾವು ಅನುಷ್ಠಿಸಲಿಲ್ಲವೆಂದೂ "ಪ್ರಬುದ್ಧಧೀ" ಯಾಗಿಯೇ ಎಂದು ಹೇಳಿಕೊಳ್ಳುತ್ತಾರೆ

ಹೀಗೆ ಅಲ್ಪ ಜ್ಞಾನವುಳ್ಳವನೂ ಉಪಾಯಾನ್ತರ ಜ್ಞಾನವಿಲ್ಲದವನಾದುದರಿಂದ ಪ್ರಪದನಕ್ಕೆ ಅಧಿಕಾರಿ ಎಂದೂ, ವಿಶದಜ್ಞಾನವುಳ್ಳವನೂ ಉಪಾಯಾನ್ತರಕ್ಕೆ ತನಗೆ ಶಕ್ತಿಯಿಲ್ಲವೆಂಬ ಆಕಿಂಚನ್ಯವುಂಟಾಗುವುದರ ಮೂಲಕ ಪ್ರಪದನಕ್ಕೆ ಅಧಿಕಾರಿ ಎಂದೂ, ಈ ಪ್ರಮಾಣಗಳು ಬೋಧಿಸುವವೆಂದೂ ಪ್ರಥಮದ್ವಿತೀಯಪಾದಾರ್ಥಗಳನ್ನು ತಿಳಿಸಿದರು. ಮುಂದೆ "ಇದಂತಿತೀರ್ಷತಾಂ ಪಾರಂ" ಮತ್ತು "ಸ್ವಭಕ್ತೇಃ ಭೂಯಸ್ಯ್ಞಾನಾ" ಎಂಬುದರ ಅರ್ಥವನ್ನು ಬೋಧಿಸುತ್ತಾರೆ ಉಪಾಯಾನ್ತರ ವಾದ ಉಪಾಸನದಲ್ಲಿ ಶಕ್ತಿ ಇರುವವರೂ ಅಧಿಕಾರಿಗಳಾಗಬಹುದೋ ಎಂದರೆ ಎರಡು ಸಂದರ್ಭದಲ್ಲಿ ಅಧಿಕಾರವುಂಟು ಎಂದು ಮುಂದೆ ಹೇಳಲ್ಪಡುತ್ತದೆ – (೧) ಶಕ್ತಿ ಇದ್ದರೂ ವಿಳಂಬವನ್ನು ಸಹಿಸದೆ ಈ ದೇಹಾವಸಾನದಲ್ಲೇ ಮೋಕ್ಷ ಬೇಕೆಂದಿರು ವವನು ಮತ್ತು (೨) ಆತನನ್ನು ಸೇರಿ ಇರದೆ ಆಗುವದೇ ಇಲ್ಲವೆಂದು ಆರ್ತನಾಗಿರು ವವನೂ ಸಹ ಅಧಿಕಾರಿಗಳೇ ಎಂದು ಮುಂದೆ ಹೇಳಲ್ಪಡುತ್ತದೆ. ಹೀಗೆ ಭಕ್ತಿ ಯೋಗ ಮೊದಲಾದವುಗಳ ಜ್ಞಾನಾಧಿಕಾರಿಯು (೧) ಅಶಕ್ತನಾಗಿದ್ದರಾಗಲಿ (೨) ವಿಳಂಬ ವನ್ನು ಸಹಿಸದೇ ಇದ್ದರಾಗಲಿ ಪ್ರಪತ್ತಿಯಲ್ಲೇ ಅಧಿಕಾರವೆಂದು ಹೇಳುವ ಸಂದರ್ಭ ದಲ್ಲಿ ಕೆಲವರು ಮುಂದಿನ ವಾದವನ್ನು ತರಬಹುದೇನೆಂದರೆ ? ಉಪಾಸನದಲ್ಲಿ ಒಂದು ವೇಳೆ ಶಕ್ತಿಯಿದ್ದರೂ, ಈ ಚೇತನನು ಭಗವತ್ಪಾರತಂತ್ರ್ಯವುಳ್ಳವನು, ಭಗವಂತನಾದರೋ ಪರಿಬೃಢನು, ಸರ್ವಶಕ್ತನು; ಶೇಷರಾದ ನಾವು ಅಂತಹ ಶೇಷಿಯನ್ನು ನಂಬಿ ಬಿಟ್ಟು ನಾವು ನಿಶ್ಚಿಂತೆಯಿಂದ ಇರುವದು ಉಚಿತವಲ್ಲವೋ ? ಹಾಗಲ್ಲದೆ ತನಗೆ ಶಕ್ತಿಯಿದೆ, ಉಪಾಸನೆಯನ್ನು ಮಾಡುತ್ತೇನೆಂಬುದು ಅಹಂಕಾರ ಗರ್ಭಿತವಾಗಿ ತನ್ನ ಸ್ವರೂಪಕ್ಕೆ ಹಾನಿಯು, ಆದುದರಿಂದ ಸ್ವಾಮಿಯನ್ನು ನಂಬಿ ಬಿಡುವದು ಉಚಿತವಲ್ಲವೋ ? ಸೀತೆಗೆ ಯದ್ಯಪಿ ರಾವಣನನ್ನು ಭಸ್ಮಮಾಡುವ ಶಕ್ತಿಯಿತ್ತು. ಹಾಗೆಯೇ ಆಕೆಯು ರಾವಣನನ್ನು ಕುರಿತು ಹೇಳುತ್ತಾಳೆ "ಅಸಂದೇಶಾತ್ತು ರಾಮಸ್ಯ, ತಪಸಶ್ಚಾನು ಪಾಲನಾತ್। ನತ್ವಾಂ ಕುರ್ಮಿ ದಶಗ್ರೀವ ಭಸ್ಮಭಸ್ಮಾರ್ಹ ತೇಜಸಾ" ಓ ದಶಗ್ರೀವನೇ ಈ ಕ್ಷಣದಲ್ಲಿ ನನ್ನ ಪಾತಿವ್ರತ್ಯ ರೂಪ ತೇಜಸ್ಸಿನ ಬಲದಿಂದ ಭಸ್ಮಮಾಡಲು ಯೋಗ್ಯ ನಾದ ನಿನ್ನನ್ನು ದಹಿಸಿ ಭಸ್ಮಮಾಡುವ ಶಕ್ತಿಯು ನನಗುಂಟು, ಆದರೂ ನಿನ್ನನ್ನು

## ಶರಣ್ಯೋಪಯುಕ್ತ ಗುಣಜ್ಞಾನಾತ್ ಸ್ವಪ್ರವೃತ್ತಿ ನಿವೃತ್ತಿರೇವ ಉಚಿತೇತಿ ವಾದಸ್ಯ ಖಂಡನಮ್

**ಶಕ್ತಿಯುಂಡೇಯಾಗಿಲುಮ್** (೧) "**ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ। ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್**"

ಭಸ್ಮಮಾಡಲು ನನ್ನ ಪತಿಯಾದ ಶ್ರೀ ರಾಮಚಂದ್ರ ಪ್ರಭುವಿನ ಆಜ್ಞೆಯು ನನಗಿಲ್ಲವು. ಏಕೆಂದರೆ ನಿನ್ನೊಬ್ಬನನ್ನು ಮಾತ್ರ ಭಸ್ಮಮಾಡುವದಕ್ಕಾಗಿ ನಾನು ಬಂದಿಲ್ಲವು, ಈ ಲೋಕವನ್ನು ಅರಾಕ್ಷಸವಾಗಿ ಮಾಡಬೇಕೆಂಬುದು ನನ್ನ ಪತಿಯ ಸಙ್ಕಲ್ಪವು, ಆದುದರಿಂದ ಪತಿಯ ಆಜ್ಞೆಯಿಲ್ಲವು. ಅದೂ ಅಲ್ಲದ ಮುಂದೆ ನನ್ನ ಪಾತಿವ್ರತ್ಯ ತೇಜೋಬಲದಿಂದ "**ಶೀತೋಭವ ಹನುಮತಃ**" ಎಂದು ಅಗ್ನಿಯನ್ನು ಪ್ರಾರ್ಥಿಸುವದಕ್ಕೂ, ಮತ್ತು ನಾನೇ ಅಗ್ನಿಪ್ರವೇಶ ಮಾಡಿದಾಗ ನನಗೂ ಸಹ ಶೀತಲವ್ವಾಗಿರುವ ಹಾಗೆಇರುವದಕ್ಕೂ, ನನ್ನ ತಪಸ್ಸನ್ನು ಖರ್ಚುಮಾಡದೆ ಅನುಪಾಲನ ಮಾಡಿಕೊಳ್ಳಬೇಕಾಗಿರುವದರಿಂದ ನಿನ್ನನ್ನು ದಹಿಸುವದಿಲ್ಲವು ಎಂದು ಶ್ರೀ ರಾಮನಿಗೆ "**ಶರೈಸ್ತು ಸಂಕುಲಾಂ ಕೃತ್ವಾ**" ಎಂದು ಹೇಳಿ ಕಳುಹಿಸಿದ ಹಾಗೆ ಪರಮಾತ್ಮನನ್ನು ನಂಬಿಬಿಡುವದೇ, ಈ ಶೇಷಭೂತನಿಗೆ ಉಚಿತವಾದುದಲ್ಲವೇ ! ಎಂಬುದು ಪೂರ್ವಪಕ್ಷವು ಇದನ್ನೇ ಉಪಪಾದಿಸಿ ಹೇಳಿ ಈ ಅಭಿಪ್ರಾಯವನ್ನೇ ಖಂಡಿಸುತ್ತಾರೆ:-

## ಶರಣ್ಯನ ಕಲ್ಯಾಣಗುಣಜ್ಞಾನದಿಂದ ನಮ್ಮ ಪ್ರವೃತ್ತಿ ನೈರಪೇಕ್ಷ್ಯವೇ ಯುಕ್ತವೆಂಬ ವಾದದ ಖಂಡನವು.

ಒಂದು ವೇಳೆ ಉಪಾಸನಾದಿಗಳಿಗೆ ಬೇಕಾದ ಜ್ಞಾನವೂ ಶಕ್ತಿಯೂ ಇದ್ದರೂ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳ ಮೂಲಕವಾಗಿ ಮೋಕ್ಷವನ್ನು ಸಾಧಿಸಿಕೊಳ್ಳುತ್ತೇನೆಂಬುದು ಅಹಂಕಾರ ಗರ್ಭಿತವಾಗಿ ಮುಮುಕ್ಷುವಿನ ಸ್ವರೂಪಕ್ಕೆ ವಿರುದ್ಧವಾದ ಪ್ರವೃತ್ತಿಯಲ್ಲವೋ ? ಅಂತಹ ಜ್ಞಾನಿಯೂ ಶಕ್ತನಾಗಿದ್ದರೂ ಪ್ರಪದನಕ್ಕೆ ಅಧಿಕಾರಿಯು ಎಂದು ಹೇಳುವರು. ಇದರ ಸಮರ್ಥನೆಗಾಗಿ **ಸೀತಾ** ಪ್ರವೃತ್ತಿಯನ್ನು ಉದಾಹರಿಸುವರು. ಹೀಗೆ ಪೂರ್ವಪಕ್ಷವನ್ನು ಉಪಪಾದಿಸಿ ಖಂಡಿಸುತ್ತಾರೆ. **ಶಕ್ತಿಯುಂಡೇಯಾಗಿಲುಮ್** - ಶಕ್ತಿಯಿದ್ದರೂ ಕೂಡ, ಇದರಲ್ಲೇ ಭಕ್ತಿಯೋಗಾದಿಗಳ ಜ್ಞಾನವೂ ಸೇರಿತು ; ಹೀಗೆ ಉಪಾಸನಕ್ಕೆ ಶಕ್ತಿ ಇದ್ದರೂ ಕೂಡ, (೧) **ಶರೈಸ್ತು** - ಬಾಣಗಳ ಮೂಲಕವಾಗಿ, **ಲಂಕಾಂ** - ಲಂಕಾಪಟ್ಟಣವನ್ನು, **ಸಂಕುಲಾಂ** ಕೃತ್ವಾ - ವ್ಯಾಕುಲಿತವಾದುದನ್ನಾಗಿಮಾಡಿ, ಪರಬ**ಲಾರ್ದನಃ** ಶತ್ರುಬಲವನ್ನು ನಿರ್ಮೂಲಮಾಡುವ, ಕಾಕುತ್ಸ್ಥಃ - ಕಕುಸ್ಥವಂಶೋತ್ಪನ್ನನಾದ ಶ್ರೀ ರಾಮನು, **ಮಾಂನಯೇದ್ಯದಿ** - ನನ್ನನ್ನು ಈ ಬಂಧದಿಂದ **ಬಿಡಿಸಿ** ಕರೆದು

(೧) ರಾ. ಸುಂದರ ೩೯. ೩೦

ಎಜ್ಞ್ಲಿರಪಡಿಯೋ ರಕ್ಷಕರ್ ಕ್ಕೈಪಾರ್ತ್ತು ತಾಂ ಕೈವಾಙ್ಗಿಯಿರುಕ್ಕೈಯನ್ರೋ ಉಚಿತಮೆನ್ನಿಲ್ ? ಇದು ಪ್ರಪನ್ನನುಡೈಯ ಉತ್ತರಕೃತ್ಯವಿಶೇಷತ್ತುಕ್ಕು ಉದಾಹರಣಮಾಮ್. ಅಲ್ಲಾದಪೋದು ಉಪಾಯ ವಿಧಾಯಕ ಶಾಸ್ತ್ರಙ್ಗಳ್ ನಿರರ್ಥಕಙ್ಗಳಾಮ್.

---

ಕ್ಕೊಂಡು ಹೋದರೆ, ತತ್ - ಆ ಪರಾಕ್ರಮವನ್ನು ವ್ಯಕ್ತಗೊಳಿಸುವ ಆ ಪ್ರವೃತ್ತಿಯು, ತಸ್ಯ - ಆ ಧೀರೋದಾತ್ತನಾದ ಪ್ರಭುವಿಗೆ, ಸದೃಶಂ ಭವೇತ್-ಯೋಗ್ಯವಾದುದಾಗುವದು, ಎಂದು ಸೀತೆಯು ಆಂಜನೇಯನಿಗೆ ಹೇಳಿ ತನ್ನ ಪತಿಗೆ ಹೀಗೀಗ ತಿಳಿಸತಕ್ಕದ್ದು ಎಂದು ಹೇಳುವ ಪ್ರಕರಣವು. ಮೇಲೆ ಹೇಳಿರುವ ಹಾಗೆ ಸೀತೆಗೇ ರಾವಣನನ್ನು ಭಸ್ಮಮಾಡುವ ಶಕ್ತಿಯು ಇದ್ದರೂ, ಶೇಷಭೂತಳಾದ ತನಗೆ ಅದು ಹೇಗೆ ಯೋಗ್ಯವಲ್ಲವೆಂದು ತಿಳಿದು "ನತ್ವಾಂ ಕುರ್ಮಿ ಭಸ್ಮ" ಎಂದು ಹೇಳಿ ಪ್ರವೃತ್ತಿಯಿಂದ ನಿವೃತ್ತಳಾದಳೋ ಹಾಗೆಯೇ ಮುಮುಕ್ಷುವೂ, ತನಗೆ ಉಪಾಸನಕ್ಕೆ ಶಕ್ತಿಯಿದ್ದರೂ, ಅದನ್ನು ಅವಲಂಬಿಸದೆ ಶೇಷಿಯಾದ ಸರ್ವಶಕ್ತನನ್ನೇ ನಂಬಿಬಿಡುವದು ಈತನ ಶೇಷರೂಪ ಸ್ವರೂಪಕ್ಕೆ ಉಚಿತವಲ್ಲವೋ ? ಎಂಬುದು ಪೂರ್ವಪಕ್ಷವು. ಇದನ್ನೇ ಮುಂದೆ ಉಪಪಾದಿಸುತ್ತಾರೆ— ಎಙ್ಗಿರಪಡಿಯೇ-ಎಂದು ಸೀತಾ ವೃತ್ತಾಂತದಲ್ಲಿ ತೋರಿಬರುವ, ರಕ್ಷಕರ್ ಕೈಪಾರ್ತ್ತು - ಸರ್ವಶಕ್ತನಾಗಿ ರಕ್ಷಣೆಗೆ ಉಪಯುಕ್ತಗುಣಗಳನ್ನು ಹೊಂದಿ ರಕ್ಷಿಸಬೇಕೆಂಬ ಸಂಕಲ್ಪದಿಂದಿರುವವನ ಅರ್ಹತೆಯನ್ನು ವಿಮರ್ಶಿಸಿ ನೋಡಿ, ತಾಂ ಕೈವಾಂಗಿರುಕ್ಕೈ - ಸ್ವಪ್ರವೃತ್ತಿಯನ್ನು ಮಾಡದಿರೋಣವು, ಅನ್ರೋ ಉಚಿತಮೆನ್ನಿಲ್ ಅಲ್ಲವೋ ಯೋಗ್ಯವಾದುದು ಎಂದರೆ, ಇದು ಪ್ರಪನ್ನನುಡೈಯ ಉತ್ತರ ಕೃತ್ಯ ವಿಶೇಷತ್ತುಕ್ಕು— ಇದು ಪ್ರಪನ್ನನು ಉಪಾಯಾನುಷ್ಠಾನವನ್ನು ಮಾಡಿದ ನಂತರ ಉತ್ತರಕೃತ್ಯ ವಿಶೇಷಕ್ಕೆ, ಉದಾಹರಣಮಾಮ್ - ಉದಾಹರಣವಾಗಬಹುದು. ಉಪಾಯವನ್ನು ಅನುಷ್ಠಿಸಿಬಿಟ್ಟನಂತರ ಕೃತ್ಯಕೃತ್ಯನಾದನು. ಅಂತಹ ಕೃತಕೃತ್ಯ ನೀಗ ಮೋಕ್ಷಕ್ಕಾಗಿ ಇನ್ನೇನನ್ನೂ ಮಾಡತಕ್ಕದ್ದಿಲ್ಲವು ; ಶರಣ್ಯನ ಅನುಗ್ರಹವನ್ನು ನಿರೀಕ್ಷಿಸುತ್ತಾ " ಮೃತ್ಯುಂ ಪ್ರಿಯಮಿವಾತಿಥಿಂ " ಎಂದು ಎದರು ನೋಡುತ್ತಾ ಇರಬಹುದು. ಅಂತಹ ಕೃತಕೃತ್ಯನಿಗೂ ಕೂಡ ಹನ್ನೊಂದು ವಿಧ ಇತಿ ಕರ್ತವ್ಯತೆಗಳುಂಟೆಂದು ಉತ್ತರ ಕೃತ್ಯಾಧಿಕಾರದಲ್ಲಿ ಉಪದೇಶಿಸಿರುತ್ತಾರೆ. ರಕ್ಷಕರ್ ಕೈಪಾರ್ತ್ತು ತಾಂ ಕೈವಾಂಗಿ ಇರುಕ್ಕ ಅವಸ್ಥೆಯು ಯಾವಾಗ ಎಂದರೆ ಉಪಾಯಾನುಷ್ಠಾನಮಾಡಿ ಕೃತಕೃತ್ಯನಾದ ನಂತರವೀಗ, ಉಪಾಯ ವಿಷಯದಲ್ಲಿ ಇನ್ನು ಯಾವುದೂ ಬೇಕಿಲ್ಲವಾದುದರಿಂದ ತಟಸ್ಥನಾಗಿರಬಹುದು, ಉಪಾಯಾನುಷ್ಠಾನ ವಿಷಯದಲ್ಲಿ ತಟಸ್ಥನಾಗಿರಬಹುದೋ ? ಎಂಬುದು ತಾತ್ಪರ್ಯವು. ಈ ಭಾವವನ್ನು ಪೂರ್ವಪಕ್ಷಿಗಳು ಉದಾಹರಿಸಿದ ಸೀತಾ ಪ್ರವೃತ್ತಿಯಲ್ಲೂ ಕಾಣಬಹುದು. ಹೇಗೆಂದರೆ

ಉಪಾಯಾನ್ತರತ್ತಿಲ್ ತನಕ್ಕು ಜ್ಞಾನಮುಂಡಾಯ್, ಅದಿಲ್ ಅನು

---

ಸೀತೆಯ ತ ದೆಯಾದ ಜನಕ ಮಹಾರಾಜನು ಯಾವಾಗ ವಿವಾಹಕಾಲದಲ್ಲಿ " ಇಯಂ ಸೀತಾ ಮಮಸುತಾ ಸಹಧರ್ಮ ಚರೀತವ । ಪ್ರತೀಚ್ಛ ಚೈನಾಂಭದ್ರ ತೇ ಪಾಣಿಂಗೃಹ್ಣೀಷ್ವಪಾಣಿನಾ " ಎಂಬಲ್ಲಿ ಹೇಳಿರುವ ಹಾಗೆ, ಮಹಾ ಗುರುವಿನ ಸ್ಥಾನದಲ್ಲಿರುವ ಜನಕನು, ತನ್ನ ಶಿಷ್ಯ ಸ್ಥಾನೀಯಳಾದ ಸೀತಾವಿಷಯದಲ್ಲಿ ರಕ್ಷಣೆಯ ಭರವನ್ನು ಪಾಣಿಗ್ರಹಣ ರೂಪವಾದ ಪ್ರಪದನ ಕಾಲದಲ್ಲಿ ಸಮರ್ಪಿಸಿ ಬಿಟ್ಟರೋ, ಅನಂತರ ಶಿಷ್ಯಳಾದ ಸೀತೆಯ ಉತ್ತರ ಕೃತ್ಯವು ನ್ಯಾಯವಾಗಿ " ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ" ಎಂಬು ಹೇಳಿ ತಟಸ್ಥಳಾಗಿದ್ದು ಬಿಟ್ಟಳು. ಆದುದರಿಂದ ಆಕೆಯ ಪ್ರವೃತ್ತಿ ನಿವೃತ್ತಿಯು ತುಂಬ ಸಾಧುವಾದುದೇ ಎಂಬಭಾವವು.

ಹೀಗೆ ಸ್ವಪ್ರವೃತ್ತಿಯು ನಿಂದ್ಯವೆಂದು ಭಾವಿಸಿ, ಸ್ವಪ್ರವೃತ್ತಿ ನಿವೃತ್ತಿಯೇ ಜ್ಞಾನಿಗೆ ಉಚಿತವಾದುದೆಂದರೆ, ಉಪಾಯಗಳನ್ನು ಅನುಷ್ಠಿಸಬೇಕೆಂದು ವಿಧಿಸುವ ಶಾಸ್ತ್ರಗಳು ಆಗ ನಿರರ್ಥಕಗಳಾಗುವುವೆಂದು ತಿಳಿಸುತ್ತಾರೆ— ಅಲ್ಲಾದಪೋದು – ಹೀಗೆ ಭಾವಿಸದೇ ಹೋದರೆ, ತಟಸ್ಥನಾಗಿರುವದು ಉಪಾಯಾನುಷ್ಠಾನ ಮಾಡದ ನ್ಯೂನತರವೆಂದು ಭಾವಿಸಿದೆ, ಉಪಾಯಾನುಷ್ಠಾನ ದೆಶೆಯಲ್ಲೇ ಎಂದು ಭಾವಿಸಿದುದಾದರೆ, ಉಪಾಯ ವಿಧಾಯಕ ಶಾಸ್ತ್ರಂಗಳ್ - ಉಪಾಯವನ್ನು ವಿಧಿಸುವ ಶಾಸ್ತ್ರಗಳು, ನಿರರ್ಥಕಂಗಳಾಮ್ – ಉಪಯೋಗವಿಲ್ಲದವುಗಳಾಗುವವು. ಸರ್ವೇಶ್ವರನೇ ತಾನಾಗಿಯೇ ನಮಗೆ ಸರ್ವಶ್ರೇಯಸ್ಸನ್ನುಂಟುಮಾಡುವನು ; ನಾವೇನು ಮಾಡತಕ್ಕದ್ದಿಲ್ಲವೆಂದಾಗುತ್ತದೆ. ಆಗ ಅನೇಕ ಶಾಸ್ತ್ರಗಳೆಲ್ಲಾ ವಿರುದ್ಧವಾದ್ದವಾಗುತ್ತವೆಂಬ ತಾತ್ಪರ್ಯವು ಭಕ್ತ್ಯಾ ಪರಮಯಾ ವಾಪಿ ಪ್ರಪತ್ತ್ಯಾ ವಾ ಮಹಾಮ ನೇ । ಪ್ರಾಪ್ಯೋಹಂ ನಾನ್ಯಥಾ ಪ್ರಾಪ್ಯೋ ಮಮ ಕೈಂಕರ್ಯ ಲಿಪ್ಸುಭಿಃ "ಎಂಬ ಉಪಾಸೀತ, ಧ್ರುಯಿಥ ಶರಣಂ ವ್ರಜ " ಓಮಿತ್ಯಾತ್ಮಾನಂ ಯುಂಜೀತ " ಇತ್ಯಾದಿ ಶಾಸ್ತ್ರಗಳಿಗೆ ವೈಯರ್ಥ್ಯ ಉಂಟಾಗುತ್ತದೆಂಬ ಭಾವವು.

ಆಗಲಿ, ಪ್ರಪದನಾನುಷ್ಠಾನವನ್ನು ನಿಮ್ಮಲ್ಲೂ ತುಂಬಾ ಜ್ಞಾನನಿಷ್ಠರಾಗಿಯೂ ಉಪಾಸನಕ್ಕೆ ಶಕ್ತಿವಂತರಾಗಿಯೂ ಇರುವವರು ಅನುಷ್ಠಿಸುತ್ತಾರಲ್ಲಾ, ಅದ ಹೇಗೆ ? ಅದು ಹೇಗೆ ಉಚಿತವಾದ ಮಾರ್ಗವು ? ಎಂದು ಪೂರ್ವಪಕ್ಷಿಯು ಆಕ್ಷೇಪಿಸಬಹುದು ಹಾಗೆ ಜ್ಞಾನನಿಷ್ಠನಾಗಿದ್ದರೂ. ವಿಳಂಬವನ್ನು ಸಹಿಸದೇ, ಆರ್ತನಾಗಿ ಒಡನೆಯೇಯಾಗಲಿ, ಅಥವಾ ದೃಪ್ತನಾಗಿ ಈ ಜನ್ಮದ ದೇಹಾವಸಾನದಲ್ಲೇ ಆಗಲಿ ಮೋಕ್ಷವನ್ನು ಅಪೇಕ್ಷಿಸುವ ಜ್ಞಾನಶಕ್ತಿಗಳಿರುವವನಿಗೂ ಕೂಡ ಪ್ರಪದನದಲ್ಲೇ ಅಧಿಕಾರವೆಂದು ತಿಳಿಸುತ್ತಾರೆ—ಹಾಗೆ ಸಮಾಧಾನವನ್ನು ಹೇಳುವ ಸಂದರ್ಭದಲ್ಲಿ ಇದತಿತೀರ್ಷತಾಂ ಪಾರಂ ಮತ್ತು ಸ್ವಭಕ್ತ್ಯಾ ಭೂಮ್ನಾ ವಾ ಜಗತಿ ಗತಿಮನ್ಯಾಮವಿದುಷಾಂ ಎಂಬುವುಗಳ ತಾತ್ಪರ್ಯವನ್ನು ತಿಳಿಸುತ್ತಾರೆ—

ಷ್ಠಾನಶಕ್ತಿಯುಂಡಾನಾಲುಮ್, ವಿಳಂಬ ಕ್ಷಮನನ್ರಿಕ್ಕೇ ಯಿರುಕ್ಕುಮಾಗಿಲ್, ಕಡುಕ ಫಲಂ ತರವಲ್ಲ ಪ್ರಪತ್ತಿಯೇ ನಮುಕ್ಕು ಉಚಿತ್ತೈ ಯೆನ್ರಿರುಕ್ಕು ಮವ ನುಮ್ ಪ್ರಪತ್ತಿಕ್ಕಿ ಅಧಿಕಾರಿಯಾನುಮ್ ಇತ್ತ್ಯೈ "ಇದಂ ಶಿಶೀರ್ಷತಾಂ ಸಾರಂ" ಇತ್ಯಾದಿಗಳಿಲೇ ಶೊಲ್ಲುಗಿರದು ಎಜ್ಞನೇ ಎನ್ನಿಲ್ ? "ಶಿಶೀರ್ಷತಾಂಸಾರಂ" ಎನ್ರುದು ಕಡುಗ ಅನಿಷ್ಟನಿವೃತ್ತಿ ಪಿರಕ್ಕವೇಣು ಮೆನ್ನುಮ್ ತ್ವರೆಯುಡೈಯಾ ರ್ಕ್ಕು ಎನ್ರುಪಡಿ. ಆನಂತ್ಯಮಿಚ್ಛತಾಮ್" ಎನ್ರುದು ಸ್ವರೂಪಪ್ರಾಪ್ತಪರಿಪೂರ್ಣ

---

**ಉಪಾಯಾನ್ತರತ್ತಿಲ್** – ಬೇರೆ ಉಪಾಯವಾದ ಭಕ್ತಿಯೋಗದಲ್ಲಿ ಎಂದರೆ ಉಪಾಸನದಲ್ಲಿ, **ತನಕ್ಕು ಜ್ಞಾನ ಮುಂಡಾಯ್** – ತನಗೆ ಪೂರ್ಣಜ್ಞಾನವೂ ಉಂಟಾಗಿ, **ಅದಿಲ್** – ಅದರಲ್ಲಿ, **ಅನುಷ್ಠಾನ ಶಕ್ತಿಯುಂಡಾ ನಾಲುಮ್** – ಅನುಷ್ಠಿಸುವ ಶಕ್ತಿಯನ್ನು ಹೊಂದಿದ್ದರೂ, **ವಿಳಂಬಕ್ಷಮನನ್ರಿಕ್ಕೇ** – ಮೋಕ್ಷ ಪ್ರಾಪ್ತಿಯಲ್ಲಿ ವಿಳಂಬವನ್ನು ಸಹಿಸಿದವನಾಗಿ, **ಇರುಕ್ಕುಮಾಗಿಲ್** - ಇದ್ದ ಪಕ್ಷದಲ್ಲಿ, **ಕಡುಗ ಫಲಂ ತರವಲ್ಲ** - ಶೀಘ್ರವಾಗಿ ಫಲವನ್ನು ಹೊಂದಿಸತಕ್ಕ ಶಕ್ತಿಯುಳ್ಳ ಪ್ರಪತ್ತಿಯೇ, **ನಮುಕ್ಕು ಉಚಿತ್ತೈ ಎನ್ರಿರುಕ್ಕು ಮವನುಮ್** – ನಮಗೆ ಯೋಗ್ಯ ವಾದುದು ಎಂದು ಭಾವಿಸಿರುವವನೂ, **ಪ್ರಪತ್ತಿಕ್ಕು ಅಧಿಕಾರಿಯಾಮ್**-ಪ್ರಪದನಕ್ಕೆ ಅಧಿಕಾರಿಯಾಗುವನು. ಉಪಾಸನಾನುಷ್ಠಾನವನ್ನು ಮಾಡುವದಕ್ಕೆ ಬೇಕಾದ ಜ್ಞಾನ ಮತ್ತು ಶಕ್ತಿ ಎರಡೂ ಇದ್ದರೂ, ಮೋಕ್ಷಪ್ರಾಪ್ತಿಯಲ್ಲಿ ವಿಳಂಬವನ್ನು ಸಹಿಸದೆ ಇದ್ದರೆ, ಎಂದರೆ ಈ ದೇಹಾವಸಾನಾನಂತರವೇ ಮೋಕ್ಷವಾಗಬೇಕೆಂಬ ತ್ವರೆಯುಳ್ಳ ವನಾದರೆ, ಪ್ರಪದನದಲ್ಲೇ ಅಧಿಕಾರವೆಂದು ಹೇಳಲ್ಪಟ್ಟಿತು. ಹೀಗೆ ಹೇಳಿದರೆ ಜ್ಞಾನಶಕ್ತಿಗಳಿದ್ದು ವಿಳಂಬವನ್ನು ಸಹಿಸುವನಾದರೆ ಭಕ್ತಿಯೋಗದಲ್ಲೇ ಅಧಿಕಾರ ಉಂಟಾಗುವದರಿಂದ ಉಪಾಸನವನ್ನು ಬೋಧಿಸುವ ಬ್ರಹ್ಮವಿದ್ಯೆಯು ನಿರರ್ಥಕ ವಾಗುವದಿಲ್ಲವೆಂಬ ಭಾವವು. ಅಂತವರ ಮೂಲಕ ಉಪಾಯ ವಿಧಾಯಕ ಶಾಸ್ತ್ರ ಗಳು ನಿರರ್ಥಕಗಳಾಗುವದಿಲ್ಲವೆಂದು ಹೇಳಿದಂತಾಯಿತು.

ಈ ಅಭಿಪ್ರಾಯವೇ ಮೇಲೆ ಉದಾಹರಿಸಿದ ಲಕ್ಷ್ಮೀ ತಂತ್ರ ಶ್ರೀ ಪರಾಶರ ಭಟ್ಟರವರ ಶ್ಲೋಕಗಳಲ್ಲಿ ಎಲ್ಲಿ ಉಪಪಾದಿತವೆಂದರೆ ಮುಂದೆ ತಿಳಿಸುತ್ತಾರೆ–**ಇತ್ತ್ಯೈ**- ಈ ಅಭಿಪ್ರಾಯವೇ, ಜ್ಞಾನ ಶಕ್ತಿಗಳಿದ್ದರೂ, ವಿಳಂಬವನ್ನು ಸಹಿಸದಿರುವವನಿಗೆ ಪ್ರಪ ದನದಲ್ಲಿ ಅಧಿಕಾರವೆಂಬುದು "ಇದಂ ಶಿಶೀರ್ಷತಾಂ ಸಾರಂ" **ಇತ್ಯಾದಿಗಳಿಲೇ** – ಇವೇ ಮೊದಲಾದುವುಗಳಲ್ಲಿ **ಶೊಲ್ಲುಗಿರದು** - ಹೇಳಲ್ಪಟ್ಟಿರುತ್ತದೆ. **ಎಜ್ಞನೇ ಎನ್ನಿಲ್** - ಅದು ಹೇಗೆ ಎಂದರೆ, **ಶಿಶೀರ್ಷತಾಂ ಸಾರಂ ಎನ್ರುದು** - ಎಂದು ಹೇಳಿರುವದು, **ಕಡುಗ** ಅನಿಷ್ಟನಿವೃತ್ತಿ **ಪಿರಕ್ಕವೇಣು ಮೆನ್ನುಮ್** - ಶೀಘ್ರದಲ್ಲಿ ಅನಿಷ್ಟ ನಿವೃತ್ತಿ ಎಂದರೆ ಸಂಸಾರ ಬಂಧ ನಿವೃತ್ತಿಯುಂಟಾಗಬೇಕೆಂಬುದಾಗಿ, **ತ್ವರೈಯುಡೈಯಾರೆ ನ್ರಪಡಿ** - ತ್ವರೆಯುಳ್ಳವರಿಗೂ ಕೂಡ ಈ ಪ್ರಪದನವೇ

**ಭಗವದನುಭವತ್ತೈ ಪೆಱಱಲ್ಲದು ಧರಿಕ್ಕಮಾಟ್ಟಾದಾರ್ಕ್ಕುಂಪಡಿ ಇವ್ವೈ ಇರಣ್ಡೈಯುಮ್ ನಿನೈತ್ತು "ಸ್ವಭಕ್ತೇಃ ಭೂರ್ಮನ್ನಾವಾ" ಎನ್ಱಿರಾರ್ ಇಱ್ಱು ಭಕ್ತಿ**

---

ಉಪಾಯವೆಂದ ಹೇಳಿದ ಹಾಗೆ ಮುಂದೆ **ಇದಂ ಆನಂತ್ಯಮಿಚ್ಛತಾಂ** ಎಂಬುದರ ತಾತ್ಪರ್ಯವನ್ನು ವ್ಯಕ್ತಪಡಿಸುತ್ತಾರೆ — **ಆನಂತ್ಯ ಮಿಚ್ಛತಾಂ** ಎನ್ನದು - ಆನಂತ್ಯವನ್ನು ಅಪೇಕ್ಷಿಸುವವರಿಗೆ ೦ ಎ ಹೇಳದು, **ಸ್ವರೂಪ ಪ್ರಾಪ್ತ ಪರಿಪೂರ್ಣ ಭಗವದನುಭವತ್ತೈ** - ಪ್ರಪನ್ನನ ಸ್ವರೂಪಕ್ಕೆ ಉಚಿತವಾದ ಪರಿಪೂರ್ಣಬ್ರಹ್ಮಾನುಭವ ರೂಪ ಮೋಕ್ಷವನ್ನು, **ಪೆಱಱಲ್ಲದು** - ಹೊಂದದೇ ಇದ್ದುದಾದರೆ, **ಧರಿಕ್ಕಮಾಟ್ಟಾದಾರಕ್ಕುಂಪಡಿ** - ಜೀವವೇ ಉಳಿಯುವದಿಲ್ಲವೆಂದು ಭಾವಿಸುವವರಿಗೂ ಸಹ, **ಇದಂ** ಶರಣಂ-ಈ ಪ್ರಪದನವೇ ಉಪಾಯವು **ಎಂದರೆ** ಅಂತವರಿಗೂ ಪ್ರಪದನದಲ್ಲಿ ಅಧಿಕಾರವು ; ಎಂದರೆ ಪರಿಪೂರ್ಣ ಬ್ರಹ್ಮಾನುಭವವು **ಕ್ಷಿ**ಪ್ರದಲ್ಲೇ ಉಂಟಾಗಬೇಕೆಂಬ ಉತ್ಕಟೇಚ್ಛೆಯುಳ್ಳವರಿಗೂ ಕೂಡ ಪ್ರಪದನದಲ್ಲೇ ಅಧಿಕಾರವೆಂಬ ತಾತ್ಪರ್ಯವು. ಇಂತಹ ಅಧಿಕಾರಿಗೆ ದೃಷ್ಟಾಂತವು ಭರತಾಳ್ವಾರ್ರವರ ಪ್ರವೃತ್ತಿಯಲ್ಲಿ ಕಾಣಬಹುದು. "**ಇಹ ಮೋಕ್ಷ್ಯಂಡಿಲೇ ಶೀಘ್ರಂ** ಕುಶಾನಾಸ್ತರ **ಸಾರಥೇ**" ಎಂದು ಶ್ರೀ ಭರತರು ತನ್ನ ಸಾರಥಿಗೆ ಆಜ್ಞಾಪಿಸಿದುದಾಗ ಎಂತಹ ಉತ್ಕಟೇಚ್ಛೆಯುಂಟಾಯಿತೋ ಅಂತಹ ಅವಸ್ಥೆಯು ಮತ್ತು ಶ್ರೀನಮ್ಮಾಳ್ವಾರ್ರವರಿಗೆ **ಮುನಿಯೇ ನಾನ್ಮುಗನೇ** ಎಂಬ ಕೂಗಿ ೧೦ ಪಾಶುರಗಳನ್ನು ಹೇಳುವಾಗ ಉಂಟಾದ ಉತ್ಕಟೇಚ್ಛೆಯು ಇಲ್ಲಿ ನಿದರ್ಶನವು. ಕೆಲವು ಗೋಪಕನ್ನಿಕೆಯರ ವೃತ್ತಾಂತವೂ ಇದಕ್ಕೆ ನಿದರ್ಶನವು. "**ಚಿಂತಯನ್ತೀ ಜಗತ್ಸೂತಿಂ ಪರಬ್ರಹ್ಮ** ಸ್ವರೂಪಿಣಂ। **ನಿರುಚ್ಛ್ವಾಸತಯಾ ಮುಕ್ತಿಂ ಗತಾನ್ಯಾ ಗೋಪಕನ್ಯಕಾ**" ಜಗತ್ಕಾರಣನಾದ ಪರಬ್ರಹ್ಮಸ್ವರೂಪನಾದ ಶ್ರೀ ಕೃಷ್ಣಭಗವಾನರವರನ್ನೇ ಧ್ಯಾನಿಸುವವಳಾಗಿ ಶ್ವಾಸನಿರೋಧವನ್ನು ಮಾಡಿ ಇನ್ನೊಬ್ಬ ಗೋಪಕನ್ನಿಕೆಯು ಮುಕ್ತಿಯನ್ನು ಹೊಂದಿದಳೆಂದು ಹೇಳಲ್ಪಟ್ಟಿರುತ್ತದೆ. ಇವುಗಳೆಲ್ಲಾ ಉತ್ಕಟೇಚ್ಛೆಗೆ ನಿದರ್ಶನಗಳು. ಇವುಗಳಿಗೆ ಸರಿಯಾದ ಉಕ್ತಿಗಳು ಪರಾಶರ ಭಟ್ಟರ ಶ್ರೀ ಸೂಕ್ತಿಯಲ್ಲಿ ಯಾವುದು ಎಂದರೆ, ಈ ಎರಡು ಅಭಿಪ್ರಾಯಗಳನ್ನೂ ಒಟ್ಟುಗೂಡಿಸಿ **ಸ್ವಭಕ್ತೇಃ ಭೂರ್ಮನ್ನಾ ವಾ ಗತಿಮನ್ಯಾಮವಿದುಷಾಮ್** ಎಂಬಲ್ಲಿ ಹೇಳಲ್ಪಟ್ಟಿತೆಂದು ಅಪ್ಪಣೆ ಕೊಡಿಸುತ್ತಾರೆ— **ಇವ್ವೈ ಇರಣ್ಡೈಯುಮ್ ನಿನೈತ್ತು** - ಹೀಗೆ "**ಇಂತಿತೀರ್ಷ ತಾಪಾರಮ್**" ಎಂದು ಮತ್ತು "**ಇದಮಾನನ್ತ್ಯ ಮಿಚ್ಛತಾಂ**" ಎಂದೂ ಹೇಳಲ್ಪಟ್ಟ ಎರಡು ವಿಧ ಅಧಿಕಾರವನ್ನೂ ಜ್ಞಾಪಕದಲ್ಲಿಟ್ಟು "**ಸ್ವಭಕ್ತೇಃ ಭೂರ್ಮನ್ನಾ ವಾ**" ಎನ್ಱಿರಾರ್ ಎಂದು ಶ್ರೀ ಪರಾಶರಭಟ್ಟರು ಹೇಳಿರುತ್ತಾರೆ. ಆ ಎರಡರ ಅಭಿಪ್ರಾಯವೂ ಈ "**ಸ್ವಭಕ್ತೇಃ ಭೂರ್ಮನ್ನಾ ವಾ**" ಎಂಬಲ್ಲಿ ಅಡಗಿವೆ ಎಂಬ ಭಾವವು. ಅದು **ಹೇಗೆ ಎಂಬುದನ್ನು ಆವರೇ ಉಪಪಾದಿಸಿ ತಿಳಿಸುತ್ತಾರೆ—"ಸ್ವಭಕ್ತೇಃ ಭೂರ್ಮನ್ನಾ**

**ಯೆನ್ರದು ಪ್ರೇಮ ಪಾರವಶ್ಯತ್ತೈ ಚ್ಚೊನ್ನಪಡಿ ; ಅಲ್ಲದು ಭಕ್ತಿಯೋಗತ್ತೈ ಚ್ಚೊನ್ನಪಡಿಯನ್ರು. ಇಪ್ಪಕ್ತಿಯಿನುಡೈಯ ಭೂಮಾವಾಗಿರದು, ಕಡುಗ ಪ್ರಾಪ್ತಿ ಕಿಡೈಯಾದ ಪೋದಳಿಯುಂಪಡಿಯಾನ ಅವಸ್ಥಾವಿಶೇಷಮ್. ಇದು ಶಿಲರ್ಕ್ಕು ಶಟ್ಟೆನ ಪ್ಪಿಟ್ಟ ಭಕ್ತಿಯೋಗ ಮಿಲ್ಲೈಯಾಗಿಲುಮ್, ಸುಕೃತ ವಿಶೇಷಮೂಲಮಾನ ಭಗವತ್ಪ್ರಸಾದತ್ತಾಲೇ ವರುಮ್. ಇನ್ನವಸ್ಥೈಯುಡೈಯವನುಮ್ ಪ್ರಪತ್ತಿಕ್ಕ ಅಧಿಕಾರಿ.**

---

**ವಾ** ಎಂಬಲ್ಲಿರುವ ಭಕ್ತಿ ಶಬ್ದವು ಭಕ್ತಿಯೋಗವೆಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟ ಅಲ್ಲವೆಂದೂ, ಪರಮಾತ್ಮನಲ್ಲಿರುವ ನಿರತಿಶಯ ಪ್ರೀತ್ಯತಿಶಯವನ್ನು ಬೋಧಿಸುತ್ತದೆಂದೂ ತಿಳಿಸಿ, ಇಂತಹ ಪ್ರೀತ್ಯತಿಶಯವು, ವಿಳಂಬವನ್ನು ಸಹಿಸದಿದ್ದರೂ, ಅಥವಾ ಪ್ರಾಪ್ಯ ಪ್ರಾಪ್ತಿಯಲ್ಲಿ ಉತ್ಕಟೇಚ್ಛೆಯುಂಟಾದರೂ, ಲಭಿಸುತ್ತದೆಂದು ಉಪಪಾದಿಸುತ್ತಾರೆ. ಇಂತಹ ಪ್ರೀತ್ಯತಿಶಯವನ್ನು ಹೊಂದಿದವರೂ ಅಧಿಕಾರಿಗಳೆಂದು ಉಪದೇಶಿಸುತ್ತಾರೆ—ಇಜ್ಜ - ಇಲ್ಲಿ ಎಂದರೆ ಸ್ವಭಕ್ತೇ ಭೂಮಾವಾ ಎಂಬಲ್ಲಿ **ಭಕ್ತಿಯೆನ್ರದು** - ಭಕ್ತಿ ಎಂದು ಹೇಳಿರುವದು, **ಪ್ರೇಮಪಾರವಶ್ಯತ್ತೈ** - ಪ್ರೀತ್ಯತಿಶಯದಿಂದ ಪರವಶವಾಗಿರುವ ಅವಸ್ಥೆಯನ್ನು, **ಚೊನ್ನಪಡಿ** - ಹೇಳಿದ ಹಾಗೆ ಅರ್ಥವೆಂದು ಭಾವಿಸತಕ್ಕದ್ದು. **ಅಲ್ಲದು** - ಹಾಗಲ್ಲದೆ, **ಭಕ್ತಿಯೋಗತ್ತೈ** - ಭಕ್ತಿಯೋಗವನ್ನು, **ಚೊನ್ನಪಡಿಯನ್ರು** - ಹೇಳಿತು ಎಂಬ ಅರ್ಥವಲ್ಲವು. ಇಂತಹ ಪ್ರೇಮಪಾರವಶ್ಯದ ಭೂಮಾ ಎಂದರೇನೆಂಬುದನ್ನು ಮುಂದಿನ ವಾಕ್ಯವಾದ **"ಇಪ್ಪಕ್ತಿಯಿನುಡೈಯ"** ಎಂಬುದರಿಂದ ತಿಳಿಸುತ್ತಾರೆ.— **ಇಪ್ಪಕ್ತಿಯಿನುಡೈಯ** ಇಂತಹ ಪ್ರೀತಿಪಾರವಶ್ಯಾವಸ್ಥೆಯ, **ಭೂಮಾವಾಗಿರದು** - ಭೂಮಾ ಎಂಬುದು, **ಕಡುಗಪ್ರಾಪ್ತಿಕಿಡೈಯಾದಪೋದು** - ಶೀಘ್ರದಲ್ಲಿ ಪ್ರಾಪ್ಯಪ್ರಾಪ್ತಿಯುಂಟಾಗದೇ ಇದ್ದರೆ, **ಅಳಿಯುಂಪಡಿ** - ಜೀವಧಾರಣೆಗೆ ಶಕ್ತಿಯೇ ಇಲ್ಲದೆ ದೇಹನಾಶವನ್ನುಂಟು ಮಾಡುವ ಅವಸ್ಥಾವಿಶೇಷವು. ಒಬ್ಬ ಕಾಮುಕಳನ್ನು ಶೀಘ್ರ ಹೊಂದಬೇಕೆಂಬ ಪ್ರೀತ್ಯತಿಶಯವನ್ನು ಹೊಂದಿರುವ ಕಾಮುಕನು, ಆಕೆಯ ಪ್ರಾಪ್ತಿ ಇಲ್ಲದುದರಿಂದ ಹೇಗೆ ನಶಿಸಿ ಹೋಗಿ ಪ್ರಾಣವನ್ನು ಬಿಡುವನೋ, ಅದರ ಹಾಗೆ ಈ ಪ್ರೀತ್ಯತಿಶಯವಿರುವನೂ ಸಹ; ಅಂತಹ ಪ್ರೀತ್ಯಾತಿಶಯವೇ ಭಕ್ತಿಯ ಭೂಮಾವೆಂದು ಕರೆಯಲ್ಪಡುತ್ತದೆಂಬ ಭಾವವು. ಭಗವಂತನಲ್ಲಿ ಇಂತಹ ನಿರತಿಶಯ ಪ್ರೀತ್ಯಾತಿರೇಕವು ಕೆಲವರಿಗೆ ಹಿಂದಿನ ಸುಕೃತ ವಿಶೇಷದಿಂದ ಲಭಿಸುತ್ತದೆ. ಅಂತವರು ಪರಮಾತ್ಮನನ್ನಗಲಿ ತುಂಬಾ ಕಾಲವಿರಲಾರದ ದೆಶೆಯಲ್ಲಿರುವವರು. ಇಂತಹ ಅವಸ್ಥೆಯೇ ವಿಷ್ಣುಪುರಾಣ ಲ್ಲಿ **"ಯಾಪ್ರೀತಿ ರವಿವೇಕಾನಾಂ ವಿಷಯೇಷ್ವನಪಾಯಿನಾಮ್ । ತಾಮನುಸ್ಮರತಸ್ಸಾಮೇ ಹೃದಯಾನ್ಮಾಪಸರ್ಪತು"** (ವಿ.ಪು.) ವಿಷಯಲಂಪಟರಾದ ಅವಿವೇಕಿಗಳಿಗೆ ಇಷ್ಟವಾದ ವಿಷಯದಲ್ಲಿ ಏಕಾಂತವಾದ ಪ್ರೀತ್ಯತಿಶಯವು ಹೇಗಿರುತ್ತದೋ, ಅಂತಹ ಪ್ರೀತ್ಯತಿಶಯವು ಭಗವಂತನಾದ

ನಿನ್ನ ವಿಷಯದಲ್ಲಿ ನನ್ನ ಹೃದಯವನ್ನಗಲದೇ ಇರಲಿ ಇದು ಪ್ರಹ್ಲಾದ ವಾಕ್ಯವು. ಇದೇ ಸ್ವಾರಸ್ಯವಾದ ಅರ್ಥವು ಇನ್ನೊಂದು ಅರ್ಥವು. **ಹೇ ಮಾಪ** - ಓ ಲಕ್ಷ್ಮಿಪತಿಯೇ ಇಂತಹ ಅವಿವೇಕಿಗಳ ಪ್ರೀತಿಯು ನನ್ನ ಹೃದಯವನ್ನು ಬಿಟ್ಟು, **ಸರ್ಪತು** - ಹೊರಟು ಹೋಗಲಿ ಎಂಬುದು. ಇದು ಅಷ್ಟು ಸ್ವಾರಸ್ಯವಾದುದಲ್ಲವು ಇಂತಹ ಪ್ರೀತ್ಯಾತಿಶಯ ವಿಶೇಷವನ್ನೇ ಪ್ರಹ್ಲಾದರು ಅಪೇಕ್ಷಿಸುತ್ತಾರೆ ಇದು ಶಿಲರ್ಕ್ಕು-ಇದು ಕೆಲವರಿಗೆ, **ಕಟ್ಟಳೈ ಪಟ್ಟ ಭಕ್ತಿಯೋಗ ಮಿಲ್ಲೈಯಾಗಿಲುಮ್** - ಬ್ರಾಹ್ಮಣಾದಿಗಳಿಗೆಂದು ಶಾಸ್ತ್ರದಲ್ಲಿ ವಿಧಿಸಿರುವ ಭಕ್ತಿ ಯೋಗ ಇಲ್ಲದಿದ್ದರೂ, ಎಂದರೆ ಸ್ತ್ರೀ ಶೂದ್ರಾದಿಗಳಾಗಿದ್ದರೂ, **ಸುಕೃಶವಿಶೇಷ ಮೂಲಮಾನ** - ಹಿಂದಿನ ಜನ್ಮದಲ್ಲಿ ಮಾಡಿದ ಸುಕೃತಿ ವಿಶೇಷಗಳಿಂದ, **ಭಗ ವತ್ಪ್ರಸಾದತ್ತಾಲೆ** - ಭಗವದನುಗ್ರಹದಿಂದ, **ವರುಮ್** - ಬರಬಹುದು. **ಇವ್ವ ವಸ್ಥೈಯುಡೈಯವನುಮ್** - ಇಂತಹ ಪ್ರೀತ್ಯತಿಶಯವನ್ನು ಹೊಂದಿರುವವನೂ **ಅಧಿಕಾರಿ** - ಪ್ರಪದನಕ್ಕೆ ಆರ್ತನಾದ ಅಧಿಕಾರಿಯು ಅದೇನೆಂದರೆ, ಇನ್ನೊಂದಾದ ಉಪಾಯವಾದ ಉಪಾಸನದಿಂದ ಆರ್ತನ ಮನೋರಥವನ್ನು ಸರ್ವೇಶ್ವರನು ಪೂರ್ಣ ಮಾಡಲು ಸಾಧ್ಯವಿಲ್ಲದುದರಿಂದ; ಅಂತಹ ಅಧಿಕಾರಿಗೆ ಪ್ರಪದನವೇ ಅಧಿಕಾರವು ಎಂಬ ತಾತ್ಪರ್ಯವು ಇದಕ್ಕೆ ದೃಷ್ಟಾಂತವಾಗಿ "**ಚಿನ್ತಯಂತೀಜಗತ್ಸೂತಿಂ ಪರ ಬ್ರಹ್ಮ ಸ್ವರೂಪಿಣಮ್ । ನಿರುಚ್ಛ್ವಾಸತಯಾ ಮುಕ್ತಿ ಗತಾ ನ್ಯಾ ಗೋಪ ಕನ್ನಿಕಾ** "॥ ಜಗತ್ತಿಗೆ ಕಾರಣಭೂತನಾದ ಪರಬ್ರಹ್ಮ ಸ್ವರೂಪಿಯಾದ ಶ್ರೀ ಕೃಷ್ಣ ಭಗವಾನರನ್ನು ಪ್ರೀತ್ಯತಿಶಯದಿಂದ ಚಿನ್ತಿಸುತ್ತಾ ಶ್ವಾಸನಿರೋಧ ಮೂಲಕ ನಿರ್ಯಾಣವನ್ನು ಇನ್ನೊಬ್ಬ **ಗೋಪ** ಕನ್ನಿಕೆಯು ಹೊಂದಿ ಮುಕ್ತಿಯನ್ನು ಪಡೆದಳು ಎಂದು ಹೇಳಲ್ಪಟ್ಟಿರುತ್ತದೆ ಇನ್ನೊಂದು ನಿದರ್ಶನವಾಗಿ ಶಬರೀ ವೃತ್ತಾಂತ ವನ್ನು ಹೇಳಬಹುದು ಶಬರಿಯು ಆರ್ತಳಾಗಿ ಶ್ರೀ ರಾಮಾಜ್ಞೆಯನ್ನು ಪ್ರಾರ್ಥಿಸುವಳಾಗಿ ಅಗ್ನಿಪ್ರವೇಶವನ್ನು ಮಾಡಿ ಮೋಕ್ಷವನ್ನು ಹೊಂದಿದಳು ಎಂದು ಹೇಳಲ್ಪಟ್ಟಿರುತ್ತದೆ "**ಯತ್ರತೇ ಸುಕೃತಾತ್ಮಾನೋ ವಿಹರನ್ತಿ ಮಹ ರ್ಷಯಃ । ತತ್ಪುಣ್ಯಂ ಶಬರೀ ಸ್ಥಾನಂ ಜಗಾಮಾತ್ಮಸಮಾಧಿನಾ** ॥" ಎಂಬಲ್ಲಿ **ಆತ್ಮಸಮಾಧಿನಾ** ಎಂದರೆ ಪರಬ್ರಹ್ಮನನ್ನು ಚಿಂತಿಸುವವಳಾಗಿ ಎಂಬರ್ಥವು. ಮೇಲಿನ ಶ್ಲೋಕದ **ಚಿನ್ತಯನ್ತೀ ಜಗತ್ಸೂತಿಂ** ಎಂಬುದರ ಅರ್ಥವು. ಇದಕ್ಕೆ ಶ್ರೀ ಗೋವಿಂದರಾಜೀಯ ವ್ಯಾಖ್ಯಾನದಲ್ಲಿ "**ಸ್ತ್ರಿಯಾ ಅಪಿ ವಿದುರಾದೇರಿವ ಯೋಗಾಧಿಕಾರ ಸ್ಸಂಭವತಿ, ತದಂಗ ಯಜ್ಞಾದಿಕರ್ಮಸ್ಥಾನೇ ಗುರು ಶುಶ್ರೂ ಷಾ** " ಹೀಗೆ ಶಾಸ್ತ್ರವಿರುದ್ಧವಾಗಿ, ವಿದುರಾದಿಗಳೂ ಸ್ತ್ರೀಯಾದ ಶಬರಿಯೂ ಉಪಾಸನವನ್ನು ಅನುಷ್ಠಿಸಿದರೆಂದು ಹೇಳಲ್ಪಟ್ಟಿರುತ್ತದೆ ಶ್ರೀ ಗೋವಿಂದ ರಾಜೀಯರು ಇಂತಹ ಶಾಸ್ತ್ರವಿರುದ್ಧ ವ್ಯಾಖ್ಯಾನವನ್ನು ಮಾಡಿರುವುದು ಆಶ್ಚರ್ಯ ಕರವಾದುದು. ಶ್ರೀ ಕೃಷ್ಣಭಗವಾನರವರೇ ದುರ್ಯೋಧನನ ಸಭೆಯಲ್ಲಿ ಎಳ್ಳಷ್ಟು

ಗಲಿ ಶಾಸ್ತ್ರಾತಿಕ್ರಮವನ್ನು ಮಾಡುವುದಿಲ್ಲವೆಂದು ಶಪಥಮಾಡಿದವರು. ಇತರರು ಮಾಡಿದರೆ ಅನುಗ್ರಹಿಸುವರೇ ? ಸ್ತ್ರೀತ್ವದಿಂದಲೂ ಶಬರತ್ವದಿಂದಲೂ ಶಬರಿಯು ಯೋಗಕ್ಕೆ ಎಂದರೆ ಭಕ್ತಿಯೋಗಕ್ಕೆ ಅನಧಿಕಾರಿಯು ಇವರುಗಳಿಗೆಲ್ಲಾ ಸುಲಭ ಮಾರ್ಗವಾದ ಭಾಗವತ ಸಂಶ್ರಯಣವನ್ನು ಉಪಾಯವಾಗಿ ಬೋಧಿಸಿದವರು. ಹೀಗೆ ಶ್ರೀಕೃಷ್ಣ ಭಗವಾನರವರೇ ಉದ್ಧವರಿಗೆ ಉಪದೇಶಿಸುತ್ತಾರೆ —**ಸತ್ಸಙ್ಗೇನ ಹಿ ದೈತೇಯಾ ಯಾತುಧಾನಾಃ ಖಗಾ ಮೃಗಾಃ ಗಂಧರ್ವಾಪ್ಸರಸೋ ನಾಗಾಸ್ಸಿದ್ಧಚಾರಣಗುಹ್ಯಕಾಃ। ವಿದ್ಯಾಧರಾಮನುಷ್ಯೇಷು ವೈಶ್ಯಾ ಶ್ಶೂದ್ರಾಸ್ಸ್ತ್ರಿಯೋನ್ತ್ಯಜಾಃ। ಬಹವೋ ಮತ್ಪದಂಪ್ರಾಪ್ತಾಃ** (ಭಾಗ೧೧ ೧೧)ಎಂದುಹೇಳಿರುವಾಗ ಅಶಾಸ್ತ್ರೀಯವಾದ ಬಹು ಕಷ್ಟಸಾಧ್ಯವಾದ ಉಪಾಸನವು ಏತಕ್ಕೆ? ವಿದುರರುಧೃತರಾಷ್ಟ್ರನಿಂದ ಪರಬ್ರಹ್ಮಸಾಧನ ರೂಪ ಯೋಗಾನುಷ್ಠಾನವನ್ನು ಉಪದೇಶಿಸೆಂದು ಪ್ರಾರ್ಥಿಸಲ್ಪಟ್ಟರೂ, **ಶೂದ್ರಯೋನಾವ ಹಂ ಜಾತಃ ನಾತೋನ್ಯದ್ವಕ್ತುಮುತ್ಸಹೇ,** ಶೂದ್ರಯೋನಿಯಲ್ಲಿ ಹುಟ್ಟಿದವನಾದುದರಿಂದ ನನಗೆ ಉಪದೇಶಿಸಲು ಅಧಿಕಾರವಿಲ್ಲವೆಂದು ಹೇಳಿ, ಸನತ್ಸುಜಾತರಲ್ಲಿಗೆ ಕರೆದುಕೊಂಡುಹೋಗಿ ಧೃತರಾಷ್ಟ್ರನಿಗೆ ಉಪದೇಶಿಸುವಹಾಗೆ ಮಾಡಿರುತ್ತಾರೆ ಹೀಗೆ ಬಾಯಲ್ಲೂ ಕೂಡ ಉಚ್ಚರಿಸಲು ತನಗೆ ಅರ್ಹತೆ ಇಲ್ಲವೆಂದು ಹೇಳಿದವರು ತಾವೇ ಅನುಷ್ಠಿಸುತ್ತಾರೆಯೇ ? ಮಹಾಭಾರತವನ್ನೆಲ್ಲಾ ಬೆಳಕನ್ನು ಹಚ್ಚಿ ಹುಡುಕಿದರೂ ವಿದುರಾಧಿಕಾರಿಯಾಗಿ ಉಪಾಸನೆಯನ್ನು ಮಾಡಿದರೆಂಬ ಉಕ್ತಿಯು ಸಿಕ್ಕುವುದಿಲ್ಲ ಮಹರ್ಷಿಗಳು ಧರ್ಮೋಪದೇಶಕ್ಕಾಗಿಯೇ ಬದ್ಧಕಂಕಣರಾದವರು ಅಶಾಸ್ತ್ರೀಯವಾದುದನ್ನು ಉಪಪಾದಿಸಿರುವರೇ ? ಆದುದರಿಂದ ಗೋವಿಂದರಾಜೀಯ ವ್ಯಾಖ್ಯಾನವು ಅನುಪಾದೇಯವಾದುದು ನಿರತಿಶಯ ಪ್ರೀತಿಯು ಪರಾಕಾಷ್ಠಾದೆಶೆಯ ಪ್ರಾಪ್ತಿಯು ಭಕ್ತಿಯೋಗದಲ್ಲೇ ಬರತಕ್ಕದ್ದು. ಉಪಾಸನೆಗೆ ಅಧಿಕಾರಿ ಅಲ್ಲದವನಿಗೆ ಉಂಟಾಗುವದೇ ಇಲ್ಲವೆಂದು ಭಾವಿಸತಕ್ಕದ್ದಲ್ಲವು ಹಿಂದೆ ಮಾಡಿದ ಸುಕೃತವಿಶೇಷಮೂಲಕವಾಗಿಯೂ ಭಗವಂತನಲ್ಲಿ ವಿಶೇಷವಾದ ಪ್ರೀತ್ಯತಿಶಯವು ದೊರೆಯಬಹುದು. ಅಂತವನೂ ಈ ಪ್ರಪತ್ತಿಗೆ ಅಧಿಕಾರಿಯು. ಅಂತಹ ಅವಸ್ಥಾ ವಿಶೇಷವುಳ್ಳವರನ್ನು ಕುರಿತೇ "**ಇದಮಾನಂತ್ಯ ಮಿಚ್ಛತಾಮ್**" ಎಂದು ಹೇಳಲ್ಪಟ್ಟಿತೆಂದು ತಿಳಿಸಿರುತ್ತಾರೆ ಇಂತಹ ಸುಕೃತವಿಶೇಷದಿಂದ ಪ್ರೀತ್ಯತಿಶಯ ಲಭಿಸಿದವರಿಗೆ ನಿದರ್ಶನವಾಗಿ ವಿದುರ, ಶಬರೀ, ಗುಹ, ಗಜೇಂದ್ರ, ಮೊದಲಾದವರನ್ನು ಹೇಳಬಹುದು.

ಇಂತಹ ಅಶಾಸ್ತ್ರೀಯ ವ್ಯಾಖ್ಯಾನದಲ್ಲಿ ತೋರುವ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟು "**ಧರ್ಮವ್ಯಾಧಾದಯೋಪ್ಯನ್ಯೇ**" ಎಂಬ ವಿಷ್ಣುಧರ್ಮ ಶ್ಲೋಕಕ್ಕೆ ಅಪಾರ್ಥವನ್ನು ಹೇಳುತ್ತಾರೆ. ಇವರೆಲ್ಲಾ ಉಪಾಸನೆಗೆ ಅಧಿಕಾರಿಗಳಲ್ಲವು. ಹೇಗೆಂದರೆ "**ಶ್ರಮಣೀಯಥಾ**" **ಶ್ರಮಣೀ** ಎಂದರೆ ಶಬರಿಯು; ಸ್ತ್ರೀತ್ವ ಶಬರತ್ವಗಳಿಂದ ಉಪಾಸನಕ್ಕೆ ಹೇಗೆ ಅಧಿಕಾರಿಯಲ್ಲವೋ ಹಾಗೆ ಧರ್ಮವ್ಯಾಧ ವಿದು

ರಾದಿಗಳೂ ಅಲ್ಲವು ಇವರುಗಳೆಲ್ಲಾ ಭಾಗವತ ಸಂಶ್ರಯಣದಿಂದ ಮುಕ್ತಿಯನ್ನು ಹೊಂದಿದವರು

ಆದರೆ ಶ್ರೀಸಾರದೀಪಿಕೆಯವರು '**ಆಳ್ವಾರ್ ನಾಥಮುನಿಪ್ರಭೃತಿಗಳಿಕ್ಕುಕ್ಕಿಡೈತ್ತದಿರೇ**" ಎಂಮ ಇವರುಗಳನ್ನು ನಿದರ್ಶನವಾಗಿ ಹೇಳಿರುತ್ತಾರೆ ಆಳ್ವಾರ್ರವರ ನಿದರ್ಶನವು ಸರಿಹೋಯಿತು ಇವರು ಶೂದ್ರರ ಮಧ್ಯದಲ್ಲಿದ್ದು ಸುಕೃತ ಪರಿಪಾಕದಿಂದ ನಿರತಿಶಯ ಪ್ರೀತಿಯು ಭಗವಂತನಲ್ಲಿ ಉಂಟಾಗಿ ಶರಣಾಗತಿಯನ್ನು ಮಾಡಿ ಪ್ರಾಪ್ಯವನ್ನು ಹೊಂದಬೇಕೆಂದು ಆರ್ತರಾಗಿಇದ್ದರು ನಾಥಮುನಿದೃಷ್ಟಾಂತಹೇಗೋ ತಿಳಿಯಲಿಲ್ಲವು ಇವರಿಗೂ ಪರಮಾತ್ಮನಲ್ಲಿ ನಿರತಿಶಯ ಪ್ರೀತ್ಯತಿರೇಕ ವಿತ್ತೆಂಬುದರಲ್ಲೇನೂ ಸಂದೇಹನಿಲ್ಲವು ಆದರೆ ಇವರು ಬ್ರಾಹ್ಮಣರು. ಭಕ್ತಿಯೋಗದಲ್ಲಿ ಶಕ್ತಿಯಿಲ್ಲದವರಲ್ಲವು ಆದುದರಿಂದ ಭಕ್ತಿಯೋಗವನ್ನನುಷ್ಠಿಸಿ ಆ ಯೋಗಬಲದಿಂದ ಬಹುಕಾಲವೆಂದರೆ ಮುನ್ನೂರು ವರ್ಷಗಳಿಗೂ ಹೆಚ್ಚುಕಾಲ ಜೀವಿಸಿದ್ದರೆಂಬ ವೃತ್ತಾಂತವುಂಟು ಆಚಾರ್ಯಪರಂಪರೆಯಲ್ಲಿ ಉಪಾಸನವನ್ನು ಅನುಷ್ಠಿಸಿದವರಲ್ಲಿ ಇವರೇ ಕೊನೆಯವರು ಎಂದು ಹೇಳಲ್ಪಟ್ಟಿರುತ್ತದೆ ಇವರಾದನಂತರ ಉಪಾಸನವನ್ನು ಅನುಷ್ಠಿಸಿದ ಆಚಾರ್ಯರು ಯಾರೂಇಲ್ಲವು ಯಾಮುನಮುನಿಗಳು, ಶ್ರೀಭಾಷ್ಯಕಾರರೇ ಮೊದಲಾದವರೆಲ್ಲಾ ಶರಣಾಗತಿಯನ್ನೇ ಅನುಷ್ಠಿಸಿದವರು. ಶಕ್ತರಾಗಿದ್ದರೂ ವಿಳಂಬವನ್ನು ಸಹಿಸದೆ ಪ್ರಪದನಾಧಿಕಾರಿಗಳಾದರು. ಶ್ರೀ ಆಳವಂದಾರ್ರವರು "**ನಧರ್ಮನಿಷ್ಠೋಽಸ್ಮಿ**" ಎಂಬ ಶ್ಲೋಕದಲ್ಲಿ ತಮಗೆ ಭಕ್ತಿಯೋಗಾನುಷ್ಠಾನಕ್ಕೂ ಅಶಕ್ತತೆಯನ್ನು ಹೇಳಿಕೊಂಡಿರುತ್ತಾರೆ ತಮ್ಮ ಗುರುಗಳಾದ ಯಾಮುನಮುನಿಗಳೇ ಶರಣಾಗತಿಯನ್ನು ಅನುಷ್ಠಿಸಿರುವಾಗ ಶ್ರೀ ಯತಿವರ್ಯರಿಗೂ ಅದೇ ಉಪಾದೇಯವು ಇಲ್ಲಿ **ಇದುಭಗವತ್ಪ್ರಸಾದತ್ತಾಲೇವರುವತ್** ಎಂದು ಹೇಳಿರುವುದರಿಂದ ನಾವುಗ್ರಹಿಸತಕ್ಕ ಇನ್ನೊಂದು ವಿಶೇಷವೇನೆಂದರೆ, ಭಗವಂತನಲ್ಲಿ ಉಂಟಾಗುವ ಪ್ರೀತ್ಯತಿಶಯವು ವೃದ್ಧಿಯಾಗಿ ಪರಭಕ್ತಿ, ಪರಜ್ಞಾನ ಪರಮಾಭಕ್ತಿರೂಪ ಅವಸ್ಥೆಗಳನ್ನು ಹೊಂದುವುದು ಬರೀ ಭಕ್ತಿ ಯೋಗಾನುಷ್ಠಾನದಿಂದಲೇಪ್ರಾಪ್ತವಾಗುವಂತಾದ್ದು, ಅನ್ಯಥಾಉಂಟಾಗತಕ್ಕದ್ದಲ್ಲವೆಂದುಭಾವಿಸತಕ್ಕದ್ದಲ್ಲವು ಆದುದರಿಂದಲೇಇಲ್ಲಿಉಪಾಸನೆಗೆಶಾಸ್ತ್ರರೀತ್ಯಾಅಧಿಕಾರವಿಲ್ಲದಿರುವವರಿಗೂ ಕೂಡ **ಜನ್ಮಾರ್ಜಿತಸುಕೃತಪರಿಪಾಕ**ದಿಂದ ಉಂಟಾಗಬಹುದೆಂದೂ, ಅಂತವರೂ **ಪ್ರಪದ**ನಕ್ಕೆ ಅಧಿಕಾರಿಗಳೆಂದೂ ಹೇಳಲ್ಪಟ್ಟಿತು ಇದೂ ಅಲ್ಲದೆ ಪ್ರಪದನವನ್ನು ಅನುಷ್ಠಿಸಿದ ನಂತರ, "**ಪರಭಕ್ತಿ ಪರಜ್ಞಾನ ಪರಮಭಕ್ತ್ಯೈಕಸ್ವಭಾವಂ ಮಾಂ ಕುರುಷ್ವ**"ಎಂದು ಪ್ರಾರ್ಥಿಸುತ್ತಾರೆ ಇದರಿಂದಕೆಲವರು ಅಭಿಪ್ರಾಯಪಡುವದೇನೆಂದರೆ ಇಲ್ಲಿ ಶ್ರೀ ಯತಿವರ್ಯರುಆಚರಿಸಿರುವ ಶರಣಾಗತಿಯೂ, ಇಲ್ಲಿಪ್ರಾರ್ಥಿಸಿರುವ "**ಪರಭಕ್ತಿ ಪರಜ್ಞಾನ ಪರಮಭಕ್ತ್ಯೈಕಸ್ವಭಾವಂ ಮಾಂಕುರುಷ್ವ**" ಎಂಬುದೂ, ಉಪಾಸನ ಸಿದ್ಧಿ ಪ್ರಾರ್ಥನೆ ಎಂದು ಹೇಳುವರು. ಈ ಶ್ರೀ ನಿಗ

## ಶ್ಲೋಕದ್ವಯಾರ್ಥ ಉಪಪಾದರ್ಯ ನಿಗಮಯತಿ.

**ಇಪ್ಪಡಿಯಾಗೈಯಾಲ್ ಉಪಾಯಾನ್ತರತ್ತಿಲ್ ಅಜ್ಞರಾಯ್, ಇಪ್ಪ್ರಪಾಯತ್ತಿಲ್ ಸಮುದಾಯಜ್ಞಾನಮಾತ್ರಮುಡೈಯರಾಇರುಪ್ಪಾರ್ಕ್ಕುಮ್ ಇದಿಲುಂ ಉಪಾಯಾನ್ತರತ್ತಿಲುಂ ತೆಳಿವುಣ್ಡಾನಾಲುಮ್ ಉಪಾಯಾನ್ತರತ್ತಿಲ್ ಅನುಷ್ಠಾನಶಕ್ತಿ ಇಲ್ಲಾದಾರ್ಕ್ಕುಮ್, ಇವೈಯಿರಣ್ಡುಮುಂಡಾನಾಲುಮ್, ವಿಳಂಬಂಪೊರಾದ ಆರ್ತ್ಯತಿಶಯ ಮುಡೈಯಾರ್ಕ್ಕುಮ್, ಪ್ರಪತ್ತಿಯಿಲೆ**

---

ಮಾನ್ತರ ವಾಕ್ಯವನ್ನು ಮನಸ್ಸಿಗೆ ತಂದುಕೊಂಡರೆ, ಉಪಾಸನಕ್ಕೆ ಅಧಿಕಾರವಿಲ್ಲದವರಿಗೂ ಕೂಡ ಸುಕೃತವಿಶೇಷದಿಂದಲೂ ಕೃಪಾನಿಧಿಯ ಅನುಗ್ರಹದಿಂದಲೂ ಈ ಅವಸ್ಥೆಗಳು ಉಂಟಾಗಬಹುದು ಆದರೆ ಶ್ರೀ ಯತಿವರ್ಯರು ಅನುಷ್ಠಿಸಿದುದು ಶರಣಾಗತಿಯೇ ವಿನಾ ಉಪಾಸನವಲ್ಲವು ಎಂಬುದು ಸ್ಥಾಪಿತವು

## ಹೀಗೆ ಈ ಎರಡು ಶ್ಲೋಕಾರ್ಥಗಳನ್ನು ಉಪಪಾದಿಸಿ ನಿಗಮನಮಾಡುತ್ತಾರೆ

**ಇಪ್ಪಡಿಯಾಗೈಯಾಲೇ** - ಆ ಶ್ಲೋಕಗಳಲ್ಲಿರುವ ಅಭಿಪ್ರಾಯವು ಈಗ ನಾವು ಉಪಪಾದಿಸಿದ ರೀತಿಯಲ್ಲಾದುದರಿಂದ, **ಉಪಾಯಾಂತರತ್ತಿಲ್** - ಭಕ್ತಿಯೋಗ ವಿಷಯದಲ್ಲಿ (೧) **ಅಜ್ಞರಾಯ್**-ತಿಳಿವಳಿಕೆ ಇಲ್ಲದವರಾಗಿ, **ಇಪ್ಪ್ರಪಾಯತ್ತಿಲ್** ಈ ಪ್ರಪದನದಲ್ಲಿ, **ಸಮುದಾಯ ಜ್ಞಾನಮಾತ್ರ ಮುಡೈಯರ್ ಯಿರುಪ್ಪಾರ್ಕ್ಕುಮ್** - ಒಟ್ಟಿನಲ್ಲಿ ಮೋಕ್ಷಪ್ರಾಪಕವೆಂಬ ಜ್ಞಾನಮಾತ್ರವನ್ನು ಹೊಂದಿರುವವರಿಗೂ, **ಇದಿಲುಮ್**-ಇದರಲ್ಲೂ, ಮತ್ತು (೨) **ಉಪಾಯಾನ್ತರತ್ತಿಲುಮ್**-ಭಕ್ತಿಯೋಗನಿಷ್ಠೆಯಲ್ಲಿ, **ತೆಳಿಉಣ್ಡಾನಾಲುಮ್**-ಜ್ಞಾನಉಂಟಾದರೂ, **ಉಪಾಯಾನ್ತರತ್ತಿಲ್** - ಆ ಭಕ್ತಿಯೋಗದಲ್ಲಿ, **ಅನುಷ್ಠಾನಶಕ್ತಿಯಿಲ್ಲಾದಾರ್ಕ್ಕುಮ್** - ಅನುಷ್ಠಿಸುವ ಶಕ್ತಿಯಿಲ್ಲದವರಿಗೂ, (೩) **ಇವೈಯಿರಣ್ಡುಉಂಡಾನಲುಮ್** - ಈ ಅನುಷ್ಠಾನಕ್ಕೆ ಬೇಕಾದ ಜ್ಞಾನ ಶಕ್ತಿ ಎರಡೂ ಇದ್ದರೂ, **ವಿಳಂಬಂಪೋರಾದ ಆರ್ತ್ಯತಿಶಯಮುಡೈಯಾರ್ಕ್ಕುಮ್**-ಪುನರ್ಜನ್ಮವಿಲ್ಲದೆಮೋಕ್ಷಪ್ರಾಪ್ತಿಯಲ್ಲಿವಿಳಂಬವನ್ನು ಸಹಿಸದಿರುವ **ಆರ್ತ್ಯತಿಶಯ**ವನ್ನುಹೊಂದಿರುವವರಿಗೂ ಹೆಚ್ಚಾದಆಕಿಂಚನ್ಯವನ್ನು ಹೊಂದಿರುವವನಿಗೂ, **ಪ್ರಪತ್ತಿಯಿಲೇ**-ಪ್ರಪದನದಲ್ಲೇ, **ಇಳಿಯಲಾಮ್**-ಪ್ರವೇಶ ಉಂಟಾಗುತ್ತದೆ ಎಂದರೆ ಅಧಿಕಾರ ಉಂಟಾಗುತ್ತದೆಂಬ ಭಾವವು. ಹೀಗೆ ಈ ಮೂವರೂ ಅಧಿಕಾರಿಗಳೆಂದು ಹೇಳಲ್ಪಟ್ಟಿತು. ೧ನೆಯ ಅಧಿಕಾರಿಯು, **ಇದಂ ಶರಣಮಜ್ಞಾನಾಂ** ಎಂಬುದರಿಂದಲೂ ೨ನೆಯ ಅಧಿಕಾರಿಯು " **ಇದಮೇವವಿಜಾನತಾಂ** " ಎಂಬುದರಿಂದಲೂ ೩ನೆಯ ಅಧಿಕಾರಿಯು **ಇದಂತಿತೀರ್ಷತಾಂಪಾರಮಿಚ್ಛತಾಮಾನಂತ್ಯಮಿಚ್ಛತಾಮ್**" ಎಂಬುದರಿಂದಲೂ ಹೇಳಲ್ಪಟ್ಟರೆಂಬ ಭಾವವು. ಇವು ಎಲ್ಲಾ ಸಂದರ್ಭದಲ್ಲಿಯೂ "**ಅಕಿಂಚನೋಽನನ್ಯಗತಿಃ**" ಎಂದು ಶ್ರೀಆಳವಂದಾ

**ಯಿಳಿಯಲಾವ್. ಇನ್ವಿಳಂಬಾಕ್ಷಮುನುಮ್ ತಾನ್ ನಿನೈತ್ತ ಕಾಲತ್ತಿಲೇ ಫಲಂ ಪೆರುಕೈಕ್ಕು ಉಪಾಯಾಂತರರಹಿತರ್ - ಇಪ್ಪ್ರಕಾರತ್ತೈ ನಿನೈತ್ತು "ಜಗತಿಗತಿ ಮುನ್ಯಾಮು ವಿದುಷಾಂ" ಎಙ್ಗಿರದು.**

---

ರ್ರವರು ಹೇಳಿಕೊಂಡಹಾಗೆ, ಆಕಿಂಚನ್ಯವೇ ಪ್ರದರ್ಶಿತವೆಂದು ಗ್ರಹಿಸತಕ್ಕದ್ದು. ಇದು ಶ್ರೀ ಪರಾಶರಭಟ್ಟರ ಶ್ಲೋಕದಲ್ಲಿ ವ್ಯಕ್ತವಾಗಿ ಹೇಳಲ್ಪಟ್ಟಿರುತ್ತದೆ. **"ಗತಿ ಮುನ್ಯಾಮುವಿದುಷಾಂ"** ಎಂಬ ಪ್ರಯೋಗವಿರುವದರಿಂದ **"ಅಕಿಂಚನೋಽನನ್ಯ ಗತಿಃ"** ಎಂಬುದು ವ್ಯಕ್ತಪಡಿಸಲ್ಪಟ್ಟಿತು

ಆದರೆ ಒಂದು ಪೂರ್ವಪಕ್ಷವು ಉದಿಸಬಹುದು; ಹೇಗೆಂದರೆ ಪ್ರಥಮಾಧಿ ಕಾರಿಯಲ್ಲಿ ಅಜ್ಞಾನವಿರುವದರಿಂದ ಬೇರೆ ಗತಿಯು ಆತನಿಗಿಲ್ಲದೆ **ಅಕಿಂಚನ್ಯ** ಉಂಟೆಂದು ಹೇಳಬಹುದು; ದ್ವಿತೀಯಾಧಿಕಾರಿಯಲ್ಲಿ ಅಶಕ್ತತೆ ಇರುವದರಿಂದ ಈ ಉಪಾಯವಲ್ಲದೆ ಬೇರೆ ಗತಿಯಿಲ್ಲವಾದುದರಿಂದ ಆಕಿಂಚನ್ಯವನ್ನು ಒಪ್ಪ ಬಹುದು. ಜ್ಞಾನ ಶಕ್ತಿ ಎರಡೂ ಇರುವ ತೃತೀಯಾಧಿಕಾರಿಗೆ ವಿಳಂಬವನ್ನು ಸಹಿಸದ ಮಾತ್ರದಿಂದ ಅಧಿಕಾರಿ ಹೇಗಾಗುವನು? ಎಂದರೆ ಅದಕ್ಕೆ ಮುಂದಿನ ವಾಕ್ಯವಾದ **"ಇನ್ವಿಳಂಬಾಕ್ಷಮುನುಮ್"** ಎಂಬುದರಿಂದ ಸಮಾಧಾನವನ್ನು ಹೇಳುತ್ತಾರೆ **ಇನ್ವಿಳಂಬಾಕ್ಷಮುನುಮ್** - ಈ ಜ್ಞಾನಶಕ್ತಿಗಳೆರಡೂ ಇದ್ದೂ ಮೋಕ್ಷಪ್ರಾಪ್ತಿಯಲ್ಲಿ ವಿಳಂಬವನ್ನು ಸಹಿಸದೆ ಇರುವವನೂ ಸಹ, ತಾನ್ **ನಿನೈತ್ತ ಕಾಲತ್ತಿಲೆ** - ತಾನು ಅಪೇಕ್ಷಿಸಿದ ಕಾಲದಲ್ಲೇ **ಫಲಂಪೆರುಗೈಕ್ಕುಮ್** - ಮುಕ್ತಿ ಫಲವನ್ನು ಹೊಂದುವದಕ್ಕೆ, **ಉಪಾಯಾಂತರ ರಹಿತರ್** - ಬೇರೆ ಉಪಾಯ ವಿಲ್ಲದಿರುವವನು, ಆದುದರಿಂದಲೇ ಅಕಿಂಚನನು, ಅನನ್ಯ ಗತಿಕನೆಂಬ ಭಾವವು. **ಇಪ್ಪ್ರಕಾರತ್ತೈನಿನೈತ್ತು**-ಇಂತಹ ಅನನ್ಯಗತಿತ್ವವನ್ನು ಮನಸ್ಸಿನಲ್ಲಿಟ್ಟು **"ಜಗತಿ ಗತಿ ಮುನ್ಯಾ ಮುವಿದುಷಾಂ" ಎಂಗಿರದು** - ಜಗತ್ತಿನಲ್ಲಿ ಬೇರೆ ಗತಿಯನ್ನು ತಿಳಿ ಯದೆ ಆಕಿಂಚನ್ಯವುಳ್ಳವರು ಎಂದು ಶ್ಲೋಕದಲ್ಲಿ ಹೇಳಿರುವದು.

ಮುಂದೆ ವ್ಯಾಸಾದಿ ಮಹರ್ಷಿಗಳು ಹೇಗೆ ಭಕ್ತಿಯೋಗನಿಷ್ಠೆಗೆ ಅಧಿಕಾರ ಗಳೆಂಬುದನ್ನು ತಿಳಿಸುತ್ತಾರೆ—ಪೂರ್ವಪಕ್ಷಿಗಳು **"ನರಸ್ಯ ಬುದ್ಧಿ ದೌರ್ಬಲ್ಯಾ ದುಪಾಯಾಂತರ ಮಿಷ್ಯತೇ"** ಎಂಬ ಶ್ಲೋಕವನ್ನು ಮನಸ್ಸಿನಲ್ಲಿಟ್ಟು, ಜ್ಞಾನ ಮಾಂದ್ಯ ವಿಶ್ವಾಸ ಮಾಂದ್ಯವುಳ್ಳವರೇ ಅಧಿಕಾರಿಗಳೆಂದು ತಮ್ಮ ಗ್ರಂಥದಲ್ಲಿ ಹೇಳಿ ದ್ದರು. ಹಾಗಲ್ಲವು, ವ್ಯಾಸಾದಿಗಳು ಉಪಾಯಾನ್ತರಜ್ಞಾನವುಳ್ಳವರಾಗಿ, ಭಜನ ಸುಖವು ನಿರತಿಶಯವಾಗಿ ವಿಪುಲವಾದುದೆಂದು ತಿಳಿದವರಾಗಿ, ಅದನ್ನು ಅನುಷ್ಠಿ ಸಲು ಶಕ್ತಿ ಮತ್ತು ವಿಶ್ವಾಸವುಳ್ಳವರಾಗಿ, ವಿಳಂಬ ಪ್ರಾಪ್ತಿಯನ್ನು ಅನುಮೋದಿಸು ವವರಾಗಿಯೂ ಇದ್ದುದರಿಂದ ಅವರಿಗೆ ಉಪಾಸನವೇ ಉಪಾದೇಯವಾಗಿ, ಅದ ರಲ್ಲಿ ಅಧಿಕಾರ ಉಂಟಾಯಿತೆಂದು ಉಪದೇಶಿಸುತ್ತಾರೆ.—

**ವ್ಯಾಸಾದಿಷು ಭಕ್ತಿಯೋಗೇ ಅಧಿಕಾರಸ್ತು ನ ಜ್ಞಾನಶಕ್ತಿ ಮಾಂದ್ಯೇನ, ಅಪಿತು ಅರ್ಥಿತ್ವ ಸಾಮರ್ಥ್ಯ ವಿಳಂಬ ಕ್ಷಮಾದ್ಯೈಃ.**

---

**ವ್ಯಾಸಾದಿಗಳ್ ಅಧಿಕಾರಿ ಪುರುಷರ್ ಗಳಾಗೈಯಾಲೇ ವಿಳಂಬಕ್ಷಮರು ಮಾಯ್' ಉಪಾಯಾನ್ತರ ಶಕ್ತರುಮಾಯ್ ಯಿರುಪ್ಪಾರ'ಗಳಾಗೈಯಾಲ್' ಉಪಾಸನತ್ತಿಲ' ಯಿಳಿಂದಾರ'ಗಳ' ; ಅಲ್ಲದು ಜ್ಞಾನಮಾಂದ್ಯ ಮಾದಲ್ ವಿಶ್ವಾಸಮಾಂದ್ಯ ಮಾದಲ' ಉಂಡಾಯಿಳಿಂದಾರ'ಗಳನ್ರು.**

---

**ವ್ಯಾಸಾದಿಗಳಿಗೆ ಭಕ್ತಿಯೋಗದಲ್ಲಿ ಅಧಿಕಾರವು ಜ್ಞಾನಶಕ್ತಿಗಳ ಮಾಂದ್ಯ ದಿಂದಲ್ಲವು. ಆರ್ಥಿತ್ವಸಾಮರ್ಥ್ಯ ವಿಳಂಬ ಸಹನಾದಿಗಳ ಮೂಲಕವಾಗಿ.**

---

**ವ್ಯಾಸಾದಿಗಳು** ಇಲ್ಲಿ **ಆದಿ** ಶಬ್ದದಿಂದ ಶ್ರೀ ಪರಾಶರ ವಿಶ್ವಾಮಿತ್ರ ವಸಿಷ್ಠ ಮೊದಲಾದವರೂ ಜನಕಾದಿಗಳೂ ಹೇಳಲ್ಪಟ್ಟರು, **ತಧಿಕಾರಿಪುರುಷರ'ಗಳಾ ಗೈಯಾಲೇ**-ಭಕ್ತಿಯೋಗದಲ್ಲಿ ಅಧಿಕಾರವುಳ್ಳವರಾದುದರಿಂದ, **ವಿಳಂಬಕ್ಷಮರು ಮಾಯ'**-ಮೋಕ್ಷಪ್ರಾಪ್ತಿಯಲ್ಲಿ ವಿಳಂಬವನ್ನು ಸಹಿಸುವವರಾಗಿ, **ಉಪಾಯಾ ನ್ತರ ಶಕ್ತರುಮಾಯ'** - ಭಕ್ತಿಯೋಗವನ್ನು ಅನುಷ್ಠಿಸಲು ಬೇಕಾದ ಶಕ್ತಿ ಯನ್ನು ಹೊಂದಿದವರಾಗಿಯೂ, **ಇರುಪ್ಪಾರ'ಗಳಾಗೈಯಾಲೇ**-ಇರುವರಾದುದ ರಿಂದ, **ಉಪಾಸನತ್ತಿಲ'** - ಉಪಾಸನದಲ್ಲಿ, **ಇಳಿಂದಾರ'ಗಳ'** - ಪ್ರವೇಶವನ್ನು ಹೊಂದಿದರು **ಅಲ್ಲದೆ** - ಹಾಗಲ್ಲದೆ, **ಜ್ಞಾನಮಾಂದ್ಯಮಾದಲ'** - ಕೆಲವರು ತಮ್ಮ ಗ್ರಂಥದಲ್ಲಿ ಬರೆದಿರುವ ಹಾಗೆ, ಜ್ಞಾನದ ದೌರ್ಬಲ್ಯವಾಗಲಿ, **ವಿಶ್ವಾಸಮಾಂ ದ್ಯಮಾದಲ'** - ವಿಶ್ವಾಸದ ದೌರ್ಬಲ್ಯವಾಗಲಿ, **ಉಂಡಾಯ'** - ಪ್ರಾಪ್ತವಾಗಿ **ಇಳಿಂದಾರ'ಗಳನ್ರು** ಪ್ರವೇಶ ಉಂಟಾಯಿತು ಎಂಬುದಲ್ಲವು. ಕೆಲವರು ಹೇಳಿರುವದೇನೆಂದರೆ— **ಪ್ರಾಪಕಾನ್ತರಂ ಅಜ್ಞರ'ಕ್ಕುಪಾಯಮ'"** ಅಜ್ಞರಿಗೆ ಬೇರೆ ಉಪಾಯವಾದ ಉಪಾಸನೆಯು, ಹೀಗೆ ಅವರ ಅಭಿಪ್ರಾಯವು; ಏತ ರಿಂದ ಎಂದರೆ **ನರಸ್ಯ ಬುದ್ಧಿ ದೌರ್ಬಲ್ಯಾದುಪಾಯಾನ್ತರಮಿಷ್ಯತೇ"** ಎಂಬ ವಾಕ್ಯವನ್ನನುಸರಿಸಿ, ಅದರರ್ಥವನ್ನು ಸರಿಯಾಗಿ ಗ್ರಹಿಸದೆ, ಹಾಗೆ ಹೇಳುತ್ತಾ ರೆಂಬ ಭಾವವು. ಪ್ರಪದನದಲ್ಲಿ ಅಧಿಕಾರಿಗಳು ಮೂರು ವಿಧವೆಂದು ಹಿಂದೆ ಹೇಳ ಲ್ಪಟ್ಟಿತು. (೧) ಭಕ್ತಿಯೋಗದ ಜ್ಞಾನವಿಲ್ಲದವರು (೨) ಜ್ಞಾನವಿದ್ದರೂ ಅದಕ್ಕೆ ಅಶಕ್ತರು (೩) ಜ್ಞಾನಶಕ್ತಿಗಳಿದ್ದರೂ ವಿಳಂಬವನ್ನು ಸಹಿಸದವರು ಹೀಗೆ ಈ ಮೂರು ಪಂಗಡಕ್ಕೂ ವ್ಯಾಸಾದಿಗಳು ಸೇರಿದವರಲ್ಲವು —ಅವರಿಗೆ ಭಕ್ತಿಯೋಗದ ಜ್ಞಾನವು ಸಂಪೂರ್ಣವಾಗಿ ಉಂಟು, ಅದರ ವಿಷಯವಾಗಿ ಭಗವದ್ಗೀತೆ ಭಾಗ ವತಾದಿಗಳಲ್ಲೂ ಬ್ರಹ್ಮಸೂತ್ರಗಳಲ್ಲೂ ವಿಸ್ತರಿಸಿ ಹೇಳಿರುತ್ತಾರೆ. (೨) ಅವರಿಗೆ ಯಾವ ವಿಧ ಅಶಕ್ತತೆಯೂ ಇಲ್ಲವು, ಮಹಾ ಸಮರ್ಥರು (೩) ಮತ್ತು ಅವರು

**ಅಶಕ್ತ್ಯಸ್ವಾತಿ ಕೃಚ್ಛ್ರೇಷು ದುರಾಶಾ ದಾರ್ಢ್ಯಶಾಲಿನಃ ।**
**ಕಸ್ಯಚಿದ್ಬುದ್ಧಿ ದೌರ್ಬಲ್ಯಂ ಲಘುತ್ಯಾಗಸ್ಯ ಕಾರಣಮ್ ॥೧೧೪॥**

ವಿಳಂಬವನ್ನು ಸಹಿಸುವವರು, ಏಕೆಂದರೆ ಮೋಕ್ಷದಲ್ಲಿ ಪ್ರಾಪ್ತವಾಗುವ ಆನಂದ ವನ್ನು ಇಲ್ಲಿಯೇ ಸ್ವಲ್ಪ ಮಟ್ಟಿಗೆ, **ತಮೇವಂ ವಿದ್ವಾನ್ ಅಮೃತ ಇಹ ಭವತಿ''** ಎಂದೂ **"ಭಜನ ಸುಖಮೇಕಸ್ಯ ವಿಪುಲಂ"** ಎಂದೂ ಹೇಳಿರುವ ಹಾಗೆ ಅನುಭವಿ ಸುವರಾದಪ್ರಯುಕ್ತ, ಅವರು ಅಷ್ಟು ತ್ವರೆಯುಳ್ಳವರಲ್ಲವು ಹೀಗೆ ಈ ಕಾರಣಗಳಿಂದ ಅವರಿಗೆ ಪ್ರಪದನದಲ್ಲಿ ಅಧಿಕಾರವಿಲ್ಲವು; ಭಕ್ತಿಯೋಗದಲ್ಲೇ ಅಧಿಕಾರವುಳ್ಳವರು ಎಂದು ಉಪಪಾದಿಸಿದರು ಆದುದರಿಂದ ಪೂರ್ವಪಕ್ಷಿಗಳು ಹೇಳಿದಹಾಗೆ ಬುದ್ಧಿ ದೌರ್ಬಲ್ಯದಿಂದಲಾಗಲಿ, ವಿಶ್ವಾಸಮಾಂದ್ಯದಿಂದಲಾಗಲಿ ಭಕ್ತಿಯೋಗದಲ್ಲಿ ಅವರಿಗೆ ಅಧಿಕಾರವೆಂದು ಹೇಳುವದು ಸರಿಯಲ್ಲವೆಂಬ ಭಾವವು

ಈಗ ಪೂರ್ವಪಕ್ಷಿವಾದಗಳನ್ನು ನಿರಸನಮಾಡಿ ಸ್ಥಾಪಿಸಿದ ಅಭಿಪ್ರಾಯಗಳು ಮುಖ್ಯವಾದುದರಿಂದ, ಅವುಗಳನ್ನು ಮುಂದೆ ಎರಡು ಕಾರಿಕೆಗಳ ಮೂಲಕ ಸ್ಥಾಪಿಸುತ್ತಾರೆ —

**ಅವತಾರಿಕೆಯು.**—ಹಿಂದೆ **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ಸ್ವರೂಪ ತ್ಯಾಗ ವಿಧಿಸಲ್ಪಟ್ಟಿತೆಂಬ ವಾದವನ್ನು ಖಂಡಿಸಿ, ಶ್ರೀಯತಿವರ್ಯರಿಗೂ ಈ ಅಭಿಪ್ರಾ ಯವು ಗ್ರಾಹ್ಯವಲ್ಲವೆಂದೂ ಅವರ ಶಿಷ್ಯರುಗಳೇ ತಮ್ಮ ಗ್ರಂಥಗಳಲ್ಲಿ ಖಂಡಿಸಿ ಹೇಳಿ ರುತ್ತಾರೆಂದೂ, ಶ್ರೀ ವಿಷ್ಣುಚಿತ್ತರೇ ಮೊದಲಾದವರುಗಳ ಅಭಿಪ್ರಾಯವನ್ನು ತಿಳಿಸಿ ದರು ಆದುದರಿಂದ ಆಕಿಂಚನ್ಯವೇ ಬೋಧಿಸಲ್ಪಟ್ಟಿತೆಂದು ತಿಳಿಸಿ ಪ್ರಪದನದಲ್ಲಿ ಅಧಿಕಾರ ಉಂಟಾಗುವುದು ಆಕಿಂಚನ್ಯದಿಂದಲೇ ಎಂದು ಸ್ಥಾಪಿಸಿ ಹಾಗೆಯೇ **"ಇದಂ ಶರಣಮಜ್ಞಾನಾಂ"** ಎಂಬ ಲಕ್ಷ್ಮೀತಂತ್ರಶ್ಲೋಕದಲ್ಲೂ, **"ಅವಿ ಜ್ಞಾತೋ ದೇವೇ"** ಎಂಬ ಶ್ರೀಪರಾಶರ ಭಟ್ಟರ ಶ್ಲೋಕದಲ್ಲೂ, ಆಕಿಂಚನ್ಯವೇ ಹೇಳಲ್ಪಟ್ಟಿತೆಂದೂ, ಈ ಆಕಿಂಚನ್ಯವು ಮೂರು ವಿಧವಾಗಿ ಉಂಟಾಗಬಹುದಾದು ದರಿಂದ, ಅವರು ಯಾರೆಂಬುದನ್ನೂ ಹಿಂದೆಯೇ ಉಪಪಾದಿಸಿ ಹೇಳಿದರು. ಈ ಮೇಲಿನ ಎರಡು ಶ್ಲೋಕಗಳಿಗೆ ಸರಿಯಾದ ಅರ್ಥವನ್ನು ಗ್ರಹಿಸದೆ ಕೆಲವರು ಜ್ಞಾನಮಾಂದ್ಯ ವಿಶ್ವಾಸಮಾಂದ್ಯವಿರುವರೇ ಭಕ್ತಿಯೋಗಕ್ಕೆ ಅಧಿಕಾರಿಗಳೆಂದೂ, ಅದಿಲ್ಲದವರು ಪ್ರಪದನಕ್ಕೆ ಅಧಿಕಾರಿಗಳೆಂದೂ, ಆದುದರಿಂದಲೇ ವ್ಯಾಸಾದಿಗಳು ಜ್ಞಾನಮಾಂದ್ಯ ವಿಶ್ವಾಸಮಾಂದ್ಯವುಳ್ಳವರಾಗಿ ಉಪಾಸನವನ್ನು ಕೈಕೊಂಡರೆಂದೂ ಹೇಳಿದ ಪೂರ್ವಪಕ್ಷವನ್ನು ಖಂಡಿಸಿ, ವ್ಯಾಸಾದಿಗಳು ಮಹತ್ತಾದ ಜ್ಞಾನನಿಧಿ ಗಳಾಗಿ ಭಕ್ತಿಯೋಗಕ್ಕೆ ಬೇಕಾದ ಜ್ಞಾನಶಕ್ತಿಗಳನ್ನು ಹೊಂದಿದವರಾಗಿ, ವಿಳಂ ಬವನ್ನು ಸಹಿಸುವವರಾಗಿಯೂ ಇದ್ದುದರಿಂದ ಉಪಾಸನವನ್ನು ಪರಿಗ್ರಹಿ ಸಿದರೆಂದು ತಿಳಿಸಿದರು. ಪ್ರಪದನಶಾಸ್ತ್ರ ಭಕ್ತಿಯೋಗಶಾಸ್ತ್ರ ಪ್ರಣೀತರಾಗಿರುವ

ಶ್ರೀ ವ್ಯಾಸಾದಿಗಳಿಗೆ ಜ್ಞಾನವಿಶ್ವಾಸಮಾಂದ್ಯವನ್ನು ಆರೋಪಿಸಬಹುದೇ? ಹೀಗೆ ಜ್ಞಾನವಿಶ್ವಾಸಮಾಂದ್ಯವನ್ನು ಶ್ರೀವ್ಯಾಸಾದಿಗಳಲ್ಲಿ ಪೂರ್ವಪಕ್ಷಿಗಳು ಆರೋಪಿಸುವುದಕ್ಕೆ ಕಾರಣವೇನೆಂದರೆ **"ನರಸ್ಯ ಬುದ್ಧಿ ದೌರ್ಬಲ್ಯಾದುಪಾಯಾನ್ತರಮಿಷ್ಯತೇ"** ಎಂಬಲ್ಲಿ ಹಾಗೆ ಹೇಳಿರುತ್ತದೆಂದು ಅದನ್ನು ಉದಾಹರಿಸಿದ್ದರು. ಮನುಷ್ಯನು ಪ್ರಪತ್ತಿಯಲ್ಲಿ ವಿಶ್ವಾಸಮಾಂದ್ಯದಿಂದಭಕ್ತಿಯೋಗಕ್ಕೆಅಧಿಕಾರವನ್ನುಹೊಂದುವನೆಂದೂ, ಒಂದು ವೇಳೆ ಭಕ್ತಿಯೋಗಕ್ಕೆ ಶಕ್ತಿಯನ್ನುಂಟಾಗಿದ್ದರೂ ವ್ಯಾಸಾದಿಗಳ ಹಾಗೆ ವಿಶ್ವಾಸಮಾಂದ್ಯದಿಂದ ಭಕ್ತಿಯೋಗದಲ್ಲೇ ಅಧಿಕಾರವೆಂದೂ, ಹಾಗೆ ಒಂದು ವೇಳೆ ಶಕ್ತಿಯಿಲ್ಲದಿದ್ದರೂ ನಾಮ ಸಂಕೀರ್ತನಾದಿಗಳ ಸಹಾಯದಿಂದ ಕ್ರಮೇಣ ಭಕ್ತಿಯೋಗದಲ್ಲಿ ಅಧಿಕಾರ ಉಂಟಾಗುತ್ತದೆಂದೂ ಪೂರ್ವಪಕ್ಷಿಗಳ ಅಭಿಪ್ರಾಯವು. ಯಾವಾಗ ಮಹಾವಿಶ್ವಾಸವಿಲ್ಲವೋ, ಅಂತಹ ಅಧಿಕಾರಿಗೆ ಭಕ್ತಿಯೋಗವೇ ಯುಕ್ತವಾಗಿ ಉಪಾಯವೆಂದು ಅವರು ಹೇಳುವರು. ಇದನ್ನು ಈ ಶ್ಲೋಕದಲ್ಲಿ ನಿರಾಕರಿಸುತ್ತಾರೆ. ಈ ಪ್ರಮಾಣಕ್ಕೆ ಹಾಗೆ ಅರ್ಥವಲ್ಲವೆಂದೂ, ಅದರ ಸರಿಯಾದ ಅಭಿಪ್ರಾಯವೇನೆಂಬುದನ್ನೂ ಈ ಕಾರಿಕೆಗಳ ಮೂಲಕ ತಿಳಿಸುತ್ತಾರೆ.—**ಅತಿಕೃಚ್ಛ್ರೇಷು** - ತುಂಬಾ ಕಷ್ಟಸಾಧ್ಯಗಳಾದ ಏಕೆಂದರೆ ಕರ್ಮಯೋಗ ಜ್ಞಾನಯೋಗಗಳಿಂದ ಸಹಕೃತವಾಗಿಯೂ ತುಂಬ ಕಷ್ಟಸಾಧ್ಯವಾದ ಅನನ್ಯ ಭಕ್ತಿಯಿಂದ ಕೂಡಿದ ಈ ಉಪಾಸನಾದಿಗಳಲ್ಲಿ, **ಅಶಕ್ತಸ್ಯ** - ಅಶಕ್ತನಾದ, **ದುರಾಶಾದಾರ್ಢ್ಯಶಾಲಿನಃ**- ಮೋಕ್ಷವನ್ನು ಹೊಂದಲು ಬೇರೆ ಉಪಾಯವಿಲ್ಲವಾದುದರಿಂದ ಈ ಉಪಾಸನದಿಂದಲೇ ಸಾಧಿಸುವನೆಂಬ ಅಹಂಕಾರದಿಂದ ದುಷ್ಟವಾದ ಆಶೆಯಲ್ಲಿ ದಾರ್ಢ್ಯವನ್ನು ಹೊಂದಿದ, ಎಂದರೆ ಆಪ್ತರಾದವರು ಅದು ಸರಿಯಲ್ಲವೆಂದು ಹೇಳಿದರೂ ಕೂಡ ಮನಕೊಡದಹಾಗೆ ದಾರ್ಢ್ಯವನ್ನು ಹೊಂದಿದ, **ಕಸ್ಯಚಿನ್ನರಸ್ಯ**-ಯಾವನೋ ಒಬ್ಬ ಮನುಷ್ಯನ, **ಬುದ್ಧದೌರ್ಬಲ್ಯಂ**-ವಿವೇಕ ಜ್ಞಾನದಮಾಂದ್ಯವು, ಎಂದರೆ ಸಕೃದನುಷ್ಠೇಯವಾದ ಪ್ರಪದನವು ಮೋಕ್ಷವನ್ನು ಎಲ್ಲಾದರೂ ಕೊಡುತ್ತದೋ ಎಂಬ ಸಂಶಯದಿಂದುಂಟಾದ ವಿಶ್ವಾಸ ನ್ಯೂನತೆಯು, **ಲಘುತ್ಯಾಗಸ್ಯಕಾರಣಮ್** - ಲಘುವಾಗಿ ಸುಕರವಾದ ಸಕೃದನುಷ್ಠೇಯವಾಗಿ, ದೇಹಾವಸಾನದಲ್ಲಿ ಮೋಕ್ಷಪ್ರಾಪ್ತಿಯನ್ನುಂಟುಮಾಡುವ ಪ್ರಪತ್ತಿಯನ್ನು ತ್ಯಾಗಮಾಡುವದಕ್ಕೆ ಕಾರಣವು. ಇದೀಗ **"ನರಸ್ಯಬುದ್ಧಿದೌರ್ಬಲ್ಯಾತ್"**ಎಂಬವಾಕ್ಯ ತಾತ್ಪರ್ಯವೆಂಬ ಭಾವವು. ಈ ಲಘುವಾದ ಸಕೃದನುಷ್ಠೇಯವಾದ ಪ್ರಪದನವು ಎಲ್ಲಾದರೂ ಮೋಕ್ಷವನ್ನು ಕೊಟ್ಟೀತೇ ಎಂಬ ಸಂಶಯದಿಂದ ಪ್ರೇರಿತನಾಗಿ ಅದರಲ್ಲಿ ವಿಶ್ವಾಸವನ್ನು ತೊರೆದು ಈ ಲಘುವಾದ ಉಪಾಯವನ್ನು ತ್ಯಜಿಸಿ, ಬಹು ಕಷ್ಟಸಾಧ್ಯವಾದದು ಬಹು ಕರ್ಮಕಲಾಪಗಳಿಂದ ಕೂಡಿದ ಕರ್ಮಯೋಗಾದಿಗಳಿಂದ ನೇರಿದ ಭಕ್ತಿಯೋಗವನ್ನು ತಾನು ಅವುಗಳಿಗೆ ಅಶಕ್ತನಾಗಿದ್ದರೂ ಅವಲಂಬಿಸುವನು; ಅದಕ್ಕೆ ಕಾರಣವು ಪ್ರಪದನದಲ್ಲಿ ಆತನಿಗೆ ಮಹಾವಿಶ್ವಾಸದ ನ್ಯೂನತೆಯೇ ಕಾರಣವೆಂಬುದು ತಾತ್ಪರ್ಯವು.

**ತತ್ರ ಪ್ರಪತ್ತ್ಯನರ್ಹಾಣಾ ಮನ್ಯದಿತ್ಯಪಿ ಯುಜ್ಯತೇ |**
**ವ್ಯಾಸಾದಿಷು ನೈವೈಷಾ ನೀತಿಸ್ಸಂಶಯಘಾತಿಷು || ೧೧೫ ||**

---

ಕೆಲವರು ಪ್ರಪತ್ತಿಯನ್ನು ತ್ಯಾಗಮಾಡಲು ಅವರಿಗೆ ಅದರಲ್ಲಿ ವಿಶ್ವಾಸವಿಲ್ಲದಿರುವದೇ ಕಾರಣವು ಆದರಿಂದ ಭಕ್ತಿಗೆ ಅಧಿಕಾರವುಂಟಾಯಿತು ಎಂಬರ್ಥವಲ್ಲವು. ಅದಕ್ಕೂ ಆತನು ಅಶಕ್ತನಾಗಿರಬಹುದೆಂಬ ಭಾವವು.

**ತತ್ರ** - ಹಾಗೆ ಉಪಾಸನಾದಿಗಳಿಗೆ ಆಶಕ್ತರಾಗಿರುವವರ ವಿಷಯದಲ್ಲಿ, **ಪ್ರಪತ್ತ್ಯನರ್ಹಾಣಾಂ**-ಬುದ್ಧಿದುರ್ಬಲರಾಗಿ ವಿಶ್ವಾಸಮಾಂದ್ಯದಿಂದ ಪ್ರಪದನಕ್ಕೆ ಅನರ್ಹರಾಗಿರುವವರಿಗೆ, **ಅನ್ಯದಿತ್ಯಪಿ**-ಪರಂಪರೆಯಿಂದ ಭಕ್ತಿಯೋಗಕ್ಕೆ ಸಾಧನವಾಗಿರುವ ನಾಮಸಂಕೀರ್ತನಾದಿಗಳು ಕೂಡ, **ಯುಜ್ಯತೇ**-ಯುಕ್ತವಾದುದಾಗುತ್ತವೆ. ಮುಂದೆ ವ್ಯಾಸಾದಿಗಳ ವಿಷಯದಲ್ಲಿ ಈ ನ್ಯಾಯವು ಕೂಡುವದಿಲ್ಲವೆಂದು ಹೇಳುತ್ತಾರೆ **ಸಂಶಯಘಾತಿಷು**-ಮನುಷ್ಯರಲ್ಲಿರುವ ಸಂಶಯ ಇದು ಭ್ರಮ ವಿಪ್ರಲಂಭಾದಿಗಳಿಗೂ ಉಪಲಕ್ಷಣವು, ಇವುಗಳನ್ನೆಲ್ಲಾ ತಮ್ಮ ಸದುಪದೇಶದಿಂದಲೂ ಪಾಂಡಿತ್ಯದಿಂದಲೂ ನಾಶಮಾಡುವ ಶಕ್ತಿಯುಳ್ಳ, **ವ್ಯಾಸಾದಿಷು**-ವ್ಯಾಸರೇ ಮೊದಲಾದ ಮಹರ್ಷಿಗಳಲ್ಲಿ, **ನೈವೈಷಾನೀತಿಃ**-ಈ ನ್ಯಾಯವು ಕೂಡುವದಿಲ್ಲವು. ಅವರು ಪ್ರಪದನವನ್ನು ತ್ಯಜಿಸಿ ಉಪಾಸನವನ್ನು ಕೈಕೊಂಡಿದುದು ಬುದ್ಧಿದೌರ್ಬಲ್ಯವೆಂದರೆ ಅದರಲ್ಲಿ ಮಹಾವಿಶ್ವಾಸವಿಲ್ಲದುದರಿಂದಲ್ಲವು ಹಾಗೆ ವಿಶ್ವಾಸವಿಲ್ಲದಿದ್ದರೆ, ಶರಣಾಗತಿಯನ್ನನುಷ್ಠಿಸು ಎಂದು ಉಪದೇಶಿಸಿರುತ್ತಾರಲ್ಲಾ ; ಹಾಗಾದರೆ ಅವೆಲ್ಲಾ ವಂಚನೋಕ್ತಿಯೆ ? ಉದ್ಧವರಿಗೆ ಶ್ರೀಕೃಷ್ಣನು "**ತಸ್ಮಾತ್ತ್ವಮುದ್ಧವೋತ್ಸೃಜ್ಯಚೋದನಾಂ ಪ್ರತಿಚೋದನಾಮ್ | ಪ್ರವೃತ್ತಿಂಚ ನಿವೃತ್ತಿಂಚ ಶ್ರೋತವ್ಯಂಶ್ರುತಮೇವಚ | ಮಾಮೇಕ ಮೇವ ಶರಣ ಮಾತ್ಮಾನಂ ಸರ್ವದೇಹಿನಾಂ| ಯಾಹಿ ಸರ್ವಾತ್ಮಭಾವೇನ ಯಾಸ್ಯಸ್ಯ ಕುತೋಭಯಮ್**" ಎಂದು ಹೇಳಿ, ತನ್ನಲ್ಲಿ ಶರಣಾಗತಿಯನ್ನು ಮಾಡು ಎಂದು ಉಪದೇಶವು ಹಾಗಾದರೆ ಮೋಸವೇ? ಹಾಗಾದರೆ ಇಂತಹ ತಾವೇ ಉಪದೇಶಿಸಿದ ಲಘುಮಾರ್ಗವನ್ನು ತಾವೇ ಏಕೆ ತ್ಯಜಿಸಿದರು ? ಬಹು ದುಷ್ಕರಗಳಾದ ಕರ್ಮಯೋಗಾದಿ ಸಹಕೃತ ಉಪಾಸನಾದಿಗಳ ಮಹಾತ್ಮೆಯ ಜ್ಞಾನವೂ, ಶಕ್ತಿಯೂ, ವಿಳಂಬವನ್ನು ಸಹಿಸುವ ಯೋಗ್ಯತೆಯೂ, ಅದರಲ್ಲಿ ವಿಶೇಷಾನಂದ ಉಂಟೆಂಬ ಜ್ಞಾನವೂ, ಎಲ್ಲಾ ಇದ್ದುದರಿಂದ ಭಕ್ತಿಯೋಗವನ್ನೇ ಅವಲಂಬಿಸಿದರು.

ಇದನ್ನು ಬಹು ಸುಲಭವಾಗಿ ಒಂದು ದೃಷ್ಟಾಂತ ಮೂಲಕ ವ್ಯಕ್ತಪಡಿಸಬಹುದು. ಒಂದು ನದಿಯನ್ನು ದಾಟಬೇಕೆಂದು, ಇಬ್ಬರು ನದಿಯ ಹತ್ತಿರಕ್ಕೆ ಬಂದಿದ್ದಾರೆಂದು ಭಾವಿಸೋಣ. ಒಬ್ಬನು ಬಹಳ ಅಶಕ್ತನು, ಅಲ್ಲಿಯೇ ಹತ್ತಿರದಲ್ಲಿ ಕಟ್ಟಿರುವ ಒಂದು ಸೇತುವೆಯ ಮೂಲಕ ನಡೆದು ಆಚೆಯ ದಡಕ್ಕೆ ಹೋಗಿ

**ಇಪ್ಪಡಿ ಉಪಾಸನ ಪ್ರಪದನಙ್ಗಳುಕ್ಕು ಅಧಿಕಾರಮ್ ವ್ಯವಸ್ಥಿತ ಮಾಗೈಯಾಲ್ ಇರಣ್ಡು ಶಾಸ್ತ್ರಮುಮ್ ಸಪ್ರಯೋಜನಮ್.**

---

ಸೇರುವನು ಇನ್ನೊಬ್ಬನು ಚನ್ನಾಗಿ ದೇಹದಾರ್ಢ್ಯವಿರುವ ಯುವ್ವನಸ್ಥನು. ಈಜುವದರಲ್ಲಿ ಪ್ರವೀಣನು, ಈಜುವದರಲ್ಲಿರುವ ಆನಂದವನ್ನು ತಿಳಿದವನು, ಕಷ್ಟವೆಂದು ತಿಳಿದಿದ್ದರೂ ಈಜುತ್ತಾ ಹೋಗಿ, ಈಜುವಾಗ ಆನಂದವನ್ನು ಹೊಂದಿ ಸ್ವಲ್ಪ ನಿಧಾನವಾಗಿ, ಆ ಅಶಕ್ತನು ಹೋಗಿ ಸೇರಿದ ಒಂದು ಘಂಟೆಯ ಮೇಲೆ ಆಚೆಯ ದಡಕ್ಕೆ ಹೋಗಿ ಸೇರುವನು, ಈ ಎರಡನೆಯವನಿಗೆ ಸುಲಭವಾಗಿ ಸೇತುವೆಯ ಮೇಲೆ ನಡೆದು ಹೋಗಬಹುದೆಂಬ ಜ್ಞಾನವಿಲ್ಲದೆಯೂ ಇಲ್ಲವು ವಿಶ್ವಾಸವಿಲ್ಲದೆಯೂ ಇಲ್ಲವು ಹಾಗೆಯೇ ಈ ವ್ಯಾಸಾದಿಗಳು ಪ್ರಪದನದಲ್ಲಿ ಜ್ಞಾನವಿಶ್ವಾಸವಿಲ್ಲದವರಲ್ಲವು ಆದರೆ ತಮಗೆ ಉಪಾಸನದಲ್ಲಿ ಜ್ಞಾನ ಶಕ್ತಿ ವಿಳಂಬ ಸಹಿಷ್ಣುತೆ, ಆನಂದವು ಎಲ್ಲಾ ಇದ್ದುದರಿಂದ ಕಷ್ಟವಾದರೂ ಉಪಾಸನ ಮಾರ್ಗವನ್ನೇ ಅವಲಂಬಿಸಿದರು ನದಿಯಲ್ಲಿ ಈಜುವಾಗ ಶಕ್ತನಾಗಿದ್ದವನ ಆನಂದಾನುಭವವು ಹೇಗೆ ಅಶಕ್ತನಿಗಿಲ್ಲವೋ, ಹಾಗೆಯೇ ಪ್ರಪದನಾನುಷ್ಠಾತೃವಿಗೆ ಇಲ್ಲವು ಈ ತಾರತಮ್ಯವನ್ನೇ "**ಪ್ರಪನ್ನಾದನ್ಯೇಷಾಂ**" ಎಂಬ ಶ್ಲೋಕದಲ್ಲಿ "**ಭಜನ ಸುಖಮೇಕಸ್ಯ ವಿಪುಲಂ**" ಎಂದೂ "**ಪರಿಮಿತರಸಾ**" ಎಂದೂ, ಪ್ರದರ್ಶಿಸಿರುತ್ತಾರೆ. ೮೮೮—೮೫೦ ಪುಟಗಳನ್ನು ನೋಡಿ.

ಆದುದರಿಂದ ಉಪಾಸನವೂ ಪ್ರಪದನವೂ ಎರಡೂ ಯೋಗ್ಯವಾದ ಉಪಾಯಗಳೇ; ಆಯಾ ಅಧಿಕಾರಿಗಳಿಗೆ ಅವುಗಳು ಉಪಾಯಗಳೇ. ಆಯಾ ಅಧಿಕಾರಿಗಳಿಗೆ ಅವುಗಳು ಉಪಯುಕ್ತ ಶಾಸ್ತ್ರಗಳೇ ವಿನಾ ಅನ್ಯಥಾ ಅಲ್ಲವೆಂದು ನಿಗಮನದಲ್ಲಿ ಹೇಳುತ್ತಾರೆ. ಉಪಾಸನವು ದುಷ್ಕರವಾದುದರಿಂದಲೂ, ಅಹಂಭಾವವನ್ನು ಪ್ರಕಟಿಸುವದರಿಂದಲೂ ಯೋಗ್ಯವಾದುದಲ್ಲವೆಂದೂ, ಮನುಷ್ಯನು ಜ್ಞಾನ ವಿಶ್ವಾಸ ಮಾಂದ್ಯಗಳಿಂದ ಅದನ್ನು ಅವಲಂಬಿಸುವನೆಂದೂ, ಇತರರು ಹೇಳಿದ ಅಭಿಪ್ರಾಯವು ಸರ್ವಥಾ ಸರಿಯಲ್ಲವೆಂದು ತೋರಿಸುವದಕ್ಕಾಗಿಯೂ ಈ ನಿಗಮನ ವಾಕ್ಯವು **ಇಪ್ಪಡಿ** - ನಾವು ಈಗ ಉಪದೇಶಿಸಿದ ರೀತಿಯಲ್ಲಿ, **ಉಪಾಸನ ಪ್ರಪದನಙ್ಗಳುಕ್ಕು** - ಭಕ್ತಿ ಪ್ರಪತ್ತಿಗಳಾದ ಎರಡು ಉಪಾಯಗಳಿಗೂ, **ಅಧಿಕಾರಮ್ ವ್ಯವಸ್ಥಿತಮಾಗೈಯಾಲ್** - ಅಧಿಕಾರವು ವ್ಯವಸ್ಥಿತವಾಗಿರುವದರಿಂದ, **ಇರಣ್ಡು ಶಾಸ್ತ್ರಮುಮ್**-ಈ ಉಪಾಸನವನ್ನೂ ಪ್ರಪದನವನ್ನೂ ಉಪಪಾದಿಸಿ ವಿಧಿಸಿರುವ ಶಾಸ್ತ್ರವೂ, **ಸಪ್ರಯೋಜನಮ್** - ಆಯಾ ಅಧಿಕಾರಿಗಳಿಗೆ ಉಪಯುಕ್ತವಾದವುಗಳೇ. ಉಪಾಸನವು ನಿರರ್ಥಕವಾದ ಶಾಸ್ತ್ರವಲ್ಲವೆಂಬ ಭಾವವು. ಇಲ್ಲಿ **ಅಧಿಕಾರಮ್ ವ್ಯವಸ್ಥಿತಮಾಗೈಯಾಲ್** ಎಂದುಹೇಳಿರುತ್ತದೆಯಲ್ಲಾ, ಹೇಗೆ ವ್ಯವಸ್ಥಿತವೆಂದರೆ :—

(೧) ಉಪಾಸನದಲ್ಲಿ ಜ್ಞಾನವಿಲ್ಲದೆ ಪ್ರಪದನದಲ್ಲಿ ಸಮುದಾಯ ಜ್ಞಾನ ವಿರುವವನಿಗೂ,

(೨) ಉಪಾಸನದಲ್ಲಿ ಒಳ್ಳೆ ಜ್ಞಾನವಿದ್ದರೂ, ಇದನ್ನನುಷ್ಠಿಸಲು ತಾನು ಅಶಕ್ತನೆಂದು ತಿಳಿದಿರುವವನಿಗೂ,

(೩) ಉಪಾಸನದಲ್ಲಿ ಜ್ಞಾನಶಕ್ತಿ ಎರಡೂ ಇದ್ದರೂ ವಿಳಂಬವನ್ನು ಸಹಿಸದೆಯೂ, ಆರ್ತನಾಗಿಯೂ ಇರುವವನಿಗೂ ಪ್ರಪದನದಲ್ಲಿ ಅಧಿಕಾರವು,

(೧) ಪ್ರಪದನದಲ್ಲಿ ವಿಶ್ವಾಸಶೂನ್ಯನಿಗೂ, (೨) ಜ್ಞಾನ ಶಕ್ತಿಗಳಿಂದ ಕೂಡಿ ವಿಳಂಬವನ್ನು ಸಹಿಸಿಕೊಳ್ಳುವವನಿಗೂ, (೩) ಉಪಾಸನಾನಂದದಲ್ಲಿ ಮಮತೆಯುಳ್ಳವನಿಗೂ ಉಪಾಸನಕ್ಕೆ ಅಧಿಕಾರವು.

ಇವೆರಡರಲ್ಲಿ ಭಕ್ತಿ ಅಥವಾ ಪ್ರಪತ್ತಿಯನ್ನು ಅವಲಂಬಿಸಬಹುದೆಂಬ ಯೋಗ್ಯತೆ ಇರುವವರನ್ನೇ ಕುರಿತು ಹೇಳಿದ ವ್ಯವಸ್ಥೆಯು ವರ್ಣಭೇದದಿಂದ ಅಧಿಕಾರ ಭೇದಾದಿಗಳು ಹಿಂದೆಯೇ ಅಧಿಕಾರಿ ವಿಭಾಗಾಧಿಕಾರದಲ್ಲಿ ಉಪಪಾದಿತವು ಇಲ್ಲಿಯಾದರೋ ಎರಡಕ್ಕೂ ಯೋಗ್ಯತೆ ಇರುವ ನಮಗೆ ಯಾವುದು ಉಚಿತವೆಂಬ ಚರ್ಚೆಯಲ್ಲಿ ಕೆಲವರು ಭಕ್ತಿಯೋಗವನ್ನು ನಿಂದಿಸಿ ಹೇಳಿದರು ಅದು ಸರಿಯಲ್ಲವೆಂದು ಹೇಳಿ, ಹೀಗೆ ಅಧಿಕಾರಿ ವ್ಯವಸ್ಥೆಯನ್ನು ಮಾಡಿದರೆಂದು ತಿಳಿಯತಕ್ಕದ್ದಾಗಿರುತ್ತದೆ.

ಹೀಗೆ ಸ್ವರೂಪತ್ಯಾಗವು **"ಸರ್ವಧರ್ಮಾನ್ ಪರಿತ್ಯಜ್ಯ"**ಎಂಬಲ್ಲಿ ವಿಧಿಪರವೆಂಬವಾದವು ಸಮೂಲವಾಗಿ ನಿರಸನ ಮಾಡಲ್ಪಟ್ಟಿತು. ಹಾಗಾದರೆ ನಿತ್ಯನೈಮಿತ್ತಿಕಾನುಷ್ಠಾನರೂಪ ಸ್ವಧರ್ಮತ್ಯಾಗವು ಕೂಡದಂತಾಯಿತು ಈ ಧರ್ಮಗಳನ್ನು ಅನುಷ್ಠಿಸಿದರೆ ಪ್ರಪದನ ವಿಧಿಗೆ ವಿರುದ್ಧವಲ್ಲವೋ? ಪ್ರಪದನಕ್ಕೆ ಅನ್ಯಾಪೇಕ್ಷೆಯು ಇಲ್ಲವಷ್ಟೇ? ಇವುಗಳನ್ನನುಷ್ಠಿಸಿದರೆ ಬ್ರಹ್ಮಾಸ್ತ್ರವು ಶಣವಲ್ಕಲರಜ್ಜುಬಂಧನವನ್ನು ಹೇಗೆ ಸಹಿಸುವದಿಲ್ಲವೋ ಹಾಗೆಯೇ ಪ್ರಪದನಕ್ಕೂ ಪ್ರತ್ಯವಾಯ ಸಂಭವವಿಲ್ಲವೋ? ಎಂದರೆ ಸಮಾಧಾನವನ್ನು ಹೇಳುತ್ತಾರೆ ಈ ನಿತ್ಯನೈಮಿತ್ತಿಕಾನುಷ್ಠಾನವು ಉಪಾಸನಕ್ಕೆ ಮಾತ್ರವೇ ಅಂಗವು. ಪ್ರಪದದಕ್ಕೆ ಅಂಗವಾಗಿ ಅವು ಬೇಕಿಲ್ಲವು. ಆದರೂ ಬೇರೇ ವಿಧಿಯ ಮೂಲಕ ಅಗತ್ಯವಾಗಿ ಅನುಷ್ಠಿಸತಕ್ಕವುಗಳಾದುದರಿಂದ ತ್ಯಾಗಮಾಡಕೂಡದೆಂದೂ ಹಾಗೆ ತ್ಯಾಗಮಾಡಿದುದಾದರೆ ಭಗವನ್ನಿಗ್ರಹಕ್ಕೆ ಒಳಗಾಗುವರೇದೂ ತಿಳಿಯತಕ್ಕದ್ದು. ಆದುದರಿಂದ ಸ್ವವರ್ಣೋಚಿತ ದರ್ಮಗಳನ್ನು ಭಗವತ್ಕೈಂಕರ್ಯವೆಂದು ಭಾವಿಸಿ ಅನುಷ್ಠಿಸತಕ್ಕದ್ದು. ಆದುದರಿಂನ ವರ್ಣಾಶ್ರಮವಿಹಿತ ಧರ್ಮಗಳನ್ನು ಇಬ್ಬರೂ ಅನುಷ್ಠಿಸಲೇ ಬೇಕು. ಆದರೆ ಇಬ್ಬರ ಅನುಷ್ಠಾನದ ಅಭಿಪ್ರಾಯದಲ್ಲಿ ವ್ಯತ್ಯಾಸ ಉಂಟೆಂದು ಮುಂದಿನ ವಾಕ್ಯಗಳಿಂದ ಉಪದೇಶಿಸುತ್ತಾರೆ:

**ಇರಣ್ಡಧಿಕಾರಿಗಳುಕ್ಕುಮ್**-ಈ ಎರಡು ವಿಧವಾದ ಉಪಾಸನ ಪ್ರಪದನಾ

**ಇರಣ್ಡಧಿಕಾರಿಗಳುಕ್ಕುಮ್ ಸ್ವಧರ್ಮತ್ತಿಲ್ ಪ್ರತಿಪತ್ತಿ ವೈಷಮ್ಯಮೇ ಉಳ್ಳದು. ಪ್ರಪನ್ನನುಕ್ಕು ಕೋಲಿನ ಫಲತ್ತೈಪ್ಪತ್ತ ವೇರೊನ್ನೈ ಅನುಷ್ಠಿಕ್ಕಿಲ್ ಬ್ರಹ್ಮಾಸ್ತ್ರಬಂಧ ನ್ಯಾಯತ್ತಾಲೇ ವಿರೋಧಮುಂಡಾನಾಲುಮ್ ಸ್ವಯಂ ಪ್ರಯೋಜನಮಾಗವತದಲ್ ಭಗವದ್ಭಾಗವತ ಸಮೃದ್ಧ್ಯಾದಿಪ್ಪತ್ತವಾದಲ್ ವೇರೊನ್ನೈ ಅನುಷ್ಠಿತ್ತಾಲ್ ವಿರೋಧಮಿಲ್ಲೈ.**

ಧಿಕಾರಿಗಳಿಗೂ, **ಸ್ವಧರ್ಮತ್ತಿಲ್**-ತಮ್ಮ ವರ್ಣಾಶ್ರಮೋಚಿತ ಧರ್ಮದಲ್ಲಿ, ಎಂದರೆ ಅವರುಗಳ ನಿತ್ಯನೈಮಿತ್ತಿಕಾನುಷ್ಠಾನದಲ್ಲಿ, **ಪ್ರತಿಪ್ರತ್ತಿವೈಷಮ್ಯಮೇ ಉಳ್ಳದು** - ಅಭಿಪ್ರಾಯದ ವ್ಯತ್ಯಾಸವೇ ಇರುವಂತಾದ್ದು; ವ್ಯತ್ಯಾಸವು ಹೇಗೆ ಎಂದು ತೋರಿಸುತ್ತಾರೆ--**ಪ್ರಪನ್ನನುಕ್ಕು**-ಪ್ರಪದನಾನುಷ್ಠಾನವನ್ನು ಮಾಡಿದವನಿಗೆ, **ಕೋಲಿನ ಫಲತ್ತೈಪ್ಪತ್ತ**-ಆತನು ಅಪೇಕ್ಷಿಸಿದ ಫಲವನ್ನು ಕುರಿತು **ವೇರೊನ್ನೈ ಅನುಷ್ಠಿಕ್ಕಿಲ್** - ಪ್ರಪದನವಲ್ಲದೆ ಬೇರೆ ಯಾವುದಾದರೂ ಒಂದನ್ನು ಅನುಷ್ಠಿಸಿದರೆ, **ಬ್ರಹ್ಮಾಸ್ತ್ರಬಂಧನ್ಯಾಯತ್ತಾಲೇ** - ಬ್ರಹ್ಮಾಸ್ತ್ರವು, ಇತರ ಬಂಧವನ್ನು ಹೇಗೆ ಸಹಿಸುವದಿಲ್ಲವೋ ಹಾಗೆ **ವಿರೋಧ ಮುಂಡಾನಾಲುಮ್**-ವಿರೋಧ ಉಂಟಾದರೂ, **ಸ್ವಯಂಪ್ರಯೋಜನಮಾಗವಾದಲ್** - ಆ ಅನುಷ್ಠಾನದಿಂದ ಬೇರೇ ಫಲದ ಪ್ರಯೋಜನವನ್ನು ಕೋರದೆ, ಅನುಷ್ಠಾನವು ಸ್ವತಃ ಪ್ರಯೋಜನವೆಂದಾಗಲಿ, ಅಥವಾ **ಭಗವದ್ಭಾಗವತ ಸಮೃದ್ಧ್ಯಾದಿ ಪತ್ತವಾದಲ್** - ಭಗವದ್ಭಾಗವತ ಕೈಂಕರ್ಯವೇ ಮೊದಲಾದವುಗಳನ್ನು ಕುರಿತದ್ದೆಂದಾಗಲಿ, **ವೇರೊನ್ನೈ ಅನುಷ್ಠಿತ್ತಾಲ್** - ಬೇರೆ ಯಾವುದಾದರೂ ಒಂದನ್ನು ಅನುಷ್ಠಿಸಿದರೆ, **ವಿರೋಧಮಿಲ್ಲೈ**-ಪ್ರತ್ಯವಾಯವೇನೂ ಇಲ್ಲವು; ಬ್ರಹ್ಮಾಸ್ತ್ರ ಬಂಧ ನ್ಯಾಯದ ಹಾಗೆ ಪ್ರತ್ಯವಾಯವೇನೂ ಇಲ್ಲವು. ಅನುಷ್ಠಿಸಿದ ಪ್ರಪದನಕ್ಕೆ ಏನೊಂದೂ ತೊಂದರೆಯೂ ಇಲ್ಲವು. ಉಪಾಸನಾಧಿಕಾರಿಯು ಉಪಾಸನಕ್ಕೆ ಅಂಗವಾಗಿ ಸ್ವವರ್ಣಾಶ್ರಮಧರ್ಮಗಳನ್ನು ಅನುಷ್ಠಿಸಲೇ ಬೇಕು. ಈ ಪ್ರಪದನಾನುಷ್ಠಾನಕ್ಕೆ ಅಂಗವಾಗಿ ಇನ್ನು ಯಾವುದೂ ಬೇಕಿಲ್ಲವಾಗಿಲ್ಲವಾದುದರಿಂದ, ನಿತ್ಯನೈಮಿತ್ತಿಕಗಳು ಪ್ರಪದನಕ್ಕೆ ಬೇಕಿಲ್ಲವು. ಹಾಗಾದರೆ ಅವುಗಳನ್ನು ಬಿಡಬಹುದೋ ? ಬಿಡಕೂಡದು ಅನುಷ್ಠಿಸಲೇ ಬೇಕು. ಪ್ರತಿಪತ್ತಿಯಲ್ಲಿ ತಾರತಮ್ಯ ಉಂಟು ? ಈ ಪ್ರಪದನಾಧಿಕಾರಿಯು, ಅವು ಸ್ವಯಂ ಪ್ರಯೋಜನವೆಂದು ಫಲಾಪೇಕ್ಷೆಯಿಲ್ಲದೆ ಅನುಷ್ಠಿಸುವನು. ಅಥವಾ ಭಗವದ್ಭಾಗವತ ಕೈಕರ್ಯವೆಂದು ಭಾವಿಸಿ ಅನುಷ್ಠಿಸುವನು. ಅಂತೂ ಸ್ವರೂಪ ತ್ಯಾಗ ಕೂಡದೆಂಬ ತಾತ್ಪರ್ಯವು. ಸ್ವಾಮಿಯ ಆಜ್ಞಾ ಕೈಂಕರ್ಯಗಳೆಂದೂ ಅನುಷ್ಠಿಸುವನು.

ಆಗಲಿ, ಸ್ವರೂಪ ತ್ಯಾಗವು ಕೂಡದೆಂದೇನೋ ಒಪ್ಪೋಣ. **ಸರ್ವಧರ್ಮಾನ್ ಪರಿತ್ಯಜ್ಯ** ಎಂದು ಹೇಳಿರುವದರಿಂದ, ಉಪಾಯಬುದ್ಧಿ ತ್ಯಾಗವೆಂದು ಹೇಳುವೆವು, ಎಂದರೆ ಆ ಅಭಿಪ್ರಾಯವು ಸಮಂಜಸವಲ್ಲವೆಂದು ತಿಳಿಸುತ್ತಾರೆ.

### ಉಪಾಯತ್ವ ಬುದ್ಧಿತ್ಯಾಗ ವಾದಸ್ಯ ನಿರಸನಮ್

ಇಪ್ಪಡಿ ಸ್ವರೂಪತ್ಯಾಗಮ್ ಕೂಡಾ ದೊಳಿನ್ದಾಲುಮ್, ಉಪಾಯತ್ವ ಬುದ್ಧಿತ್ಯಾಗಮ್ ಪಣ್ಣುಗೈ, "ಪರಿತ್ಯಜ್ಯ" ವುಕ್ಕು ಪೊರುಳಾನಾಲೋವೆನ್ನಿಲ್? ಪ್ರಪನ್ನನುಕ್ಕು ಉತ್ತರಕೃತ್ಯ ಗೋಚರಙ್ಗಳಾನ ವಾಕ್ಯಙ್ಗಳಿಲ್ ಉಪಾಯ ಬುದ್ಧಿ ತ್ಯಾಗಮ್ ವಿಧಿಕ್ಕಿರವಿಡಮ್ ಉಚಿತಮ್. ಇಙ್ಗು ಉತ್ತರಕೃತ್ಯ

---

### "ಪರಿತ್ಯಜ್ಯ" ಎಂಬಲ್ಲಿ ಉಪಾಯತ್ವ ಬುದ್ಧಿತ್ಯಾಗವು ಹೇಳಲ್ಪಟ್ಟಿತೆಂಬ ವಾದದ ಖಂಡನವು.

**ಇಪ್ಪಡಿ** - ಮೇಲೆ ಸವಿಸ್ತರವಾಗಿ ಉಪಪಾದಿಸಿದುದರಿಂದ, **ಸ್ವರೂಪ ತ್ಯಾಗಮ್** - ಈ "ಪರಿತ್ಯಜ್ಯ" ವೆಂಬಲ್ಲಿ ಸ್ವರೂಪತ್ಯಾಗವು, **ಕೂಡಾದೊಳಿನ್ದಾಲುಮ್** - ಸಮಂಜಸವಾಗದೆಹೋದರೂ, **ಉಪಾಯತ್ವ ಬುದ್ಧಿತ್ಯಾಗಮ್** – **ಈ ಉತ್ತರ** ಕೃತ್ಯಗಳಲ್ಲಿ ಅವೂ ಉಪಾಯ ಸಹಕಾರಿಗಳೆಂಬ ಬುದ್ಧಿಯ ತ್ಯಾಗವನ್ನು, **ಪಣ್ಣುಗೈ**-ಮಾಡೋಣವು, **"ಪರಿತ್ಯಜ್ಯ"**ವುಕ್ಕು–ಪರಿತ್ಯಜ್ಯವೆಂಬುದಕ್ಕೆ, **ಪೊರುಳಾನಾಲೋವೆನ್ನಿಲ್** - ತಾತ್ಪರ್ಯವೆಂದು ಹೇಳಬಹುದಲ್ಲಾ ಎಂದರೆ, ಈ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ—ಈಗ ಪೂರ್ವಪಕ್ಷಾಭಿಪ್ರಾಯವೇನೆಂದರೆ, ತಾನು ಮಾಡಬೇಕಾದ ವರ್ಣಾಶ್ರಮ ಧರ್ಮಗಳಲ್ಲಿ, ಅವು ಮೋಕ್ಷಸಾಧನಗಳೆಂಬ ಭಾವವನ್ನು ತ್ಯಜಿಸಬೇಕೆಂಬುದೇ, ಪರಿತ್ಯಜ್ಯ ವೆಂಬಲ್ಲಿ ಹೇಳಿದ ತ್ಯಾಗ ವಿಧಿಯು ಎಂಬುದು. ಇದೂ ಸಮಂಜಸವಾಗುವುದಿಲ್ಲವೆಂದು ಉಪದೇಶಿಸುತ್ತಾರೆ.—ಪ್ರಪದನಾನುಷ್ಠಾನಾನಂತರ ಮಾಡಬೇಕಾದ ಉತ್ತರ ಕೃತ್ಯಗಳಲ್ಲಿ ಉಪಾಯಬುದ್ಧಿ ತ್ಯಾಗವನ್ನು ವಿಧಿಸುವದೇನೋ ಉಚಿತವು. ಹಾಗಲ್ಲದೆ ಉಪಾಯಾನುಷ್ಠಾನಕಾಲದಲ್ಲೇ ಇಂತಹ ಉಪಾಯ ಬುದ್ಧಿ ತ್ಯಾಗವು ವಿಧಿಸಲ್ಪಟ್ಟಿತು ಎಂದರೆ, ಆಗ ಅಂತಹ ಉಪಾಯ ಬುದ್ಧಿತ್ಯಾಗವು ಪ್ರಪದನಕ್ಕೆ ಅಂಗವೆಂದು ಒಪ್ಪಬೇಕಾಗುತ್ತದೆಯಾಗುವದರಿಂದ ಅಭಿಪ್ರಾಯವು ಸಮಂಜಸವಲ್ಲವೆಂದು ತೋರ್ಪಡಿಸುತ್ತಾರೆ.—

**ಪ್ರಪನ್ನನುಕ್ಕು** - ಪ್ರಪದನಾನುಷ್ಠಾನ ಮಾಡಿ ಪ್ರಪನ್ನನಾದವನಿಗೆ, **ಉತ್ತರ ಕೃತ್ಯಗೋಚರಙ್ಗಳಾನ**-ಉತ್ತರ ಕೃತ್ಯಗಳೆಂದು ಸೂಚಿಸಲ್ಪಟ್ಟ, **ವಾಕ್ಯಂಗಳಿಲ್**-ಪ್ರಮಾಣಗಳಲ್ಲಿ, **ಉಪಾಯಬುದ್ಧಿತ್ಯಾಗಮ್** - ಉಪಾಯವೆಂಬ ಬುದ್ಧಿಯನ್ನು ತ್ಯಜಿಸೋಣವು, **ವಿಧಿಕ್ಕಿರವಿಡಮ್** - ವಿಧಿಸಲ್ಪಟ್ಟಿರುತ್ತದೆಂದು ಹೇಳುವ ಸಂದರ್ಭವು, **ಉಚಿತಮ್** - ಸಮಂಜಸವಾದುದು. ಉಪಾಯವು ಅನುಷ್ಠಿಸಲ್ಪಟ್ಟ ನಂತರ ಅದಕ್ಕಿನ್ನೇನೂ ಸಹಾಯಕವಾಗಲಿ, ಪ್ರಯೋಜನವಾಗಿಯಾಗಲಿ ಅಙ್ಗವಾಗಿಯಾಗಲಿ ಬೇಕಾಗಿಲ್ಲವಾದುದರಿಂದ, ಅಂತಹ ಉತ್ತರ ಕೃತ್ಯಗಳಲ್ಲಿ ಉಪಾಯವೆಂಬ ಬುದ್ಧಿಯನ್ನು ತ್ಯಾಗಮಾಡತಕ್ಕದ್ದು ನ್ಯಾಯವು. ಏಕೆಂದರೆ ಶ್ರೀ ಯಾಮುನ ಮುನಿಗಳು ಹಾಗೆಯೇ ಗೀತಾರ್ಥಸಂಗ್ರಹದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ :–

ಪರಮನ್ರಿಕ್ಕೇ ಉಪಾಯ ವಿಧಾಯಕಮಾಯಿರುಕ್ಕಿರ ಇವ್ವಾಕ್ಯತ್ತಿಲ್ ಚೊಲ್ಲು ಗೈಯಾಲೇ ಇಬ್ಬುದ್ಧಿತ್ಯಾಗಪೂರ್ವಕಮಾನ ಧರ್ಮಸ್ವರೂಪಮ್ ಪ್ರಪತ್ತಿಕ್ಕು ಅಂಗಮಾಕ ಅನುಷ್ಠೇಯಮೆನ್ರು ಫಲಿಕ್ಕೈಯಾಲ್ ಸ್ವಯಂಪ್ರಯೋಜನ ಮಾನ ಕೇವಲ ಕೈಂಕರ್ಯಮ್ ಉತ್ತರಕೃತ್ಯಮೆಙ್ಗಿರ ಮತಮ್ ಸಿದ್ಧಿ ಯಾದು.

---

"ನಿಜಕರ್ಮಾದಿ ಭಕ್ತ್ಯನ್ತಂ ಕುರ್ಯಾತ್ಪ್ರೀತ್ಯೈವಕಾರಿತಃ । ಉಪಾಯತಾಂ ಪರಿ ತ್ಯಜ್ಯ ನ್ಯಸ್ಯೇ ದ್ದೇವೇತು ತಾ ಮಭೀಃ" ಈ ಶ್ಲೋಕದಲ್ಲಿ ಹೇಳಿರುವ ನ್ಯಸ್ಯೇತ್ ಎಂಬುದು ಶರಣಾಗತಿಯನ್ನು ಬೋಧಿಸುವದಿಲ್ಲವು. ಭಗವಂತನಲ್ಲಿ ಅವುಗಳ ಸಮರ್ಪಣೆಯನ್ನು "ಮಯಿಸರ್ವಾಣಿಕರ್ಮಾಣಿ ಸನ್ನ್ಯಸ್ಯ" ಎಂಬಲ್ಲಿ ಹೇಗೋ ಹಾಗೆ ಬೋಧಿಸುತ್ತದೆ. ಈ ಶ್ಲೋಕಕ್ಕೆ ಕೆಲವರು ಸರಿಯಾದ ಅರ್ಥವನ್ನು ಹೇಳದೆ ವಿಪರೀತಾರ್ಥವನ್ನು ಹೇಳಿದುದರಿಂದ ಶ್ರೀ ನಿಗಮಾನ್ತದೇಶಿಕರವರೇ ಸಮಂಜ ಸಾರ್ಥವನ್ನು ಉಪದೇಶಿಸಿರುತ್ತಾರೆ. ಶ್ರೀ. ಭ. ಗೀತಾ ೧೪೫೬-೭ ನೆಯ ಪುಟವನ್ನು ನೋಡಿ. ಇಙ್ಗ-ಸರ್ವಧರ್ಮಾ ಪರಿತ್ಯಜ್ಯ ಎಂಬಲ್ಲಿಯಾದರೋ, ಉತ್ತರ ಕೃತ್ಯ ಮನ್ರಿಕ್ಕೇ - ತನ್ನ ವರ್ಣಾಶ್ರಮ ಧರ್ಮಗಳ ಅನುಷ್ಠಾನವು, ಪ್ರಪದನಾನಂತರ ನಡೆ ಯುವ ಉತ್ತರ ಕೃತ್ಯವಲ್ಲದೆ, ಉಪಾಯ ವಿಧಾಯಕಮಾಯ್ - ಉಪಾಯ ವನ್ನು ವಿಧಿಸುವ ಸಂದರ್ಭವಾಗಿ, ಇರುಕ್ಕಿರ ಇವ್ವಾಕ್ಯತ್ತಿಲ್ ಚೊಲ್ಲುಗೈ ಯಾಲೇ - ಈ ಚರಮಶ್ಲೋಕದ ವಾಕ್ಯದಲ್ಲಿ, ಸರ್ವಧರ್ಮಾ ಪರಿತ್ಯಜ್ಯ - ಎಂಬಲ್ಲಿ ಹೇಳಿರುವದರಿಂದ, ಬುದ್ಧಿತ್ಯಾಗಪೂರ್ವಕಮಾನ - ಈ ಉಪಾಯ ಬುದ್ಧಿ ತ್ಯಾಗ ಪೂರ್ವಕವಾದ, ಧರ್ಮಸ್ವರೂಪಮ್ - ಈ ಸ್ವವರ್ಣಾಶ್ರಮ ವಿಹಿತ ಕರ್ಮಸ್ವರೂ ಪವು, ಪ್ರಪತ್ತಿಕ್ಕು ಅಂಗಮಾಗಿ ಅನುಷ್ಠೇಯಮೆನ್ನು - ಪ್ರಪದನ ಅಂಗವಾಗಿ ಅನುಷ್ಠಿಸಲ್ಪಡತಕ್ಕದ್ದೆಂದು, ಫಲಿಕ್ಕೈಯಾಲ್ - ಪ್ರಾಪ್ತವಾಗುವದರಿಂದ, ಕೇವಲ ಸ್ವಯಂಪ್ರಯೋಜನಮಾನ - ಅನುಷ್ಠಾನ ಮಾತ್ರವೇ ಪ್ರಯೋಜನವಲ್ಲದೆ ಇನ್ನೂ ಯಾವ ಪ್ರಯೋಜನವೂ ಇಲ್ಲದ, ಕೈಂಕರ್ಯಮ್ - ನಿತ್ಯನೈಮಿತ್ತಿಕಾನುಷ್ಠಾನ ರೂಪ ಕೈಂಕರ್ಯವು, ಉತ್ತರಕೃತ್ಯಮೆಙ್ಗಿರ ಮತವು - ಕೃತ್ಯವೆಂದು ಹೇಳುವ ಅಭಿಪ್ರಾಯವು, ಸಿದ್ಧಿಯಾದು - ಶಾಸ್ತ್ರಾನುಮತಿ ಇಲ್ಲದಾಗುವದು,

ಹಾಗೆ ಉಪಾಯತ್ವ ಬುದ್ಧಿತ್ಯಾಗವು ವಿಧಿಸಲ್ಪಟ್ಟಿತು ಎಂದು ಹೇಳಿದರೆ ಬರುವ ಅನುಪಪತ್ತಿಗಳನ್ನು ಹೇಳಲು ಹೊರಟು, ಪ್ರಥಮತಃ –

(೧) ಉಪಾಯ ಬುದ್ಧಿತ್ಯಾಗ ಹೇಳಿಲ್ಪಟ್ಟ ಧರ್ಮಗಳು ಪ್ರಪದನಕ್ಕೆ ಅಂಗ ವೆಂದು ಹೇಳಿದಂತಾಗುವದು. ಪ್ರಪದನಕ್ಕೆ ಮಿಕ್ಕ ಯಾವುವೂ ಅಂಗಗಳಲ್ಲವು. ಆದುದರಿಂದ ನಿತ್ಯನೈಮಿತ್ತಿಕಗಳೂ ಅಂಗಗಳೆಂದು ಹೇಳುವದು ಸರಿಯಲ್ಲವು. ಮುಂದೆ ಎರಡು ವಾಕ್ಯಗಳಿಂದ ಇನ್ನೂ ಎರಡು ಅನುಪಪತ್ತಿಗಳನ್ನು ಹೇಳುತ್ತಾರೆ :-

**ಇವ್ವುಪಾಯತ್ತುಕ್ಕು ಚೊಲ್ಲುಗಿರ ಧರ್ಮಾಂತರ ನೈರಪೇಕ್ಷ್ಯಮುಮ್ ಕಿಡೈಯಾದು ; ಇವ್ವುಪಾಯುಮ್ ಅಕಿಂಚನಾಧಿಕಾರಮನ್ರಿಕ್ಕೇ ಯೊಳಿಯುಮ್. ಎಙ್ಗನೇ ಯೆನ್ನಿಲ್ ?—ಉಪಾಯಮಲ್ಲಾದವತ್ತಿಲ್ ಉಪಾಯ ಬುದ್ಧಿತ್ಯಾಗಮ್ ವಿಧಿಕ್ಕವೇಣ್ಡಾ ; ಉಪಾಯಮಾನವತ್ತಿಲ್ ಉಪಾಯ**

---

(೨) ಈ ಉಪಾಯಕ್ಕೆ ಧರ್ಮಾಂತರಗಳ ಯಾವ ಅಪೇಕ್ಷೆಯೂ ಬೇಕಿಲ್ಲ ವೆಂಬ ಪ್ರಮಾಣವು ಇಲ್ಲವಾಗುತ್ತದೆಂದೂ, (೩) ಈ ಉಪಾಯಕ್ಕೆ ಆಕಿಂಚನ್ಯವೂ ಇಲ್ಲವಾಗುತ್ತದೆಂದೂ, ಹೇಳಬೇಕಾಗುತ್ತದೆಂದೂ ತಿಳಿಸುತ್ತಾರೆ. ಅದನ್ನೇ "**ಎಙ್ಗನೇ ಎನ್ನಿಲ್**" ಎಂಬುದರ ಮೂಲಕ ಉಪಪಾದಿಸುತ್ತಾರೆ —

**ಇವ್ವುಪಾಯುತ್ತುಕ್ಕು** - ಈ ಉಪಾಯವಾದ ಪ್ರಪತ್ತಿಗೆ, **ಚೊಲ್ಲುಗಿರ**- ಪ್ರಮಾಣಗಳಲ್ಲಿ ಹೇಳಿರುವ, **ಧರ್ಮಾಂತರ ನೈರಪೇಕ್ಷ್ಯಮುಮ್** - ಬೇರೆ ಯಾವ ಧರ್ಮಗಳ ಅಪೇಕ್ಷೆ ಇಲ್ಲದಿರೋಣವು, **ಕಿಡಯಾದು**, ಇಲ್ಲದೆ ಹೋಗುತ್ತದೆ. **ಧರ್ಮಾಂತರ ನೈರಪೇಕ್ಷ್ಯವು**, "ಪ್ರಪತ್ತೇಃ **ಕ್ವಚಿದಪ್ಯೇವಂ ಪರಾಪೇಕ್ಷಾ ನವಿದ್ಯತೇ**" "**ನಜಾತಿಭೇದಂ ನ ಕುಲಂ ನಲಿಂಗಂ ನಗುಣಾ ಕ್ರಿಯಾಃ । ನದೇಶಕಾಲೌ ನಾವಸ್ಥಾಂ ಯೋಗೋ ಹ್ಯಯ ಮುಪೇಕ್ಷತೇ**" "**ಸಕೃದೇವ ಪ್ರಪನ್ನಸ್ಯ ಕೃತ್ಯಂ ನೈವಾ ನ್ಯದಿಷ್ಯತೇ**" ಇತ್ಯಾದಿ ಪ್ರಮಾಣಗಳಿಗೆ ವಿರುದ್ಧವಾಗುತ್ತದೆಂಬ ಭಾವವು. ಇನ್ನೂ ದೋಷವೇನೆಂದರೆ ಹೇಳುತ್ತಾರೆ - **ಇವ್ವುಪಾಯುಮ್** - ಈ ಪ್ರಪದನವು, **ಅಕಿಂಚನಾಧಿಕಾರ ಮನ್ನಿಕ್ಕೇ ಯೊಳಿಯುಮ್** - ಮುಖ್ಯವಾದ ಅಕಿಂಚನಾಧಿಕಾರವೇ ಇಲ್ಲದೇ ಹೋಗುತ್ತದೆ. "**ಅಕಿಂಚನೋऽನನ್ಯಗತಿಃ**" ಎಂದು ಶ್ರೀಯಾಮುನಮುನಿಗಳು ಆಕಿಂಚನ್ಯವು ಪ್ರಪದನಾಧಿಕಾರಿಗೆ ಮುಖ್ಯವೆಂದು ಹೇಳಿದ ಪ್ರಮಾಣಕ್ಕೆ ವಿರುದ್ಧವಾಗುತ್ತದೆ. ಪ್ರಪದನಕ್ಕೆ ಆಕಿಂಚನ್ಯವಾದ ಅಂಗವು ಇಲ್ಲವೆಂದಾಗುತ್ತದೆಂದು ಹೇಳಿದರು. ಅದು ಹೇಗೆ ? ಎಂದರೆ ಮುಂದಿನ ವಾಕ್ಯಗಳಿಂದ ಉಪಪಾದಿಸುತ್ತಾರೆ.:—**ಎಙ್ಗನೇ** ಎನ್ನಿಲ್-ಅದು ಹೇಗೆ ಎಂದರೆ, **ಉಪಾಯಮಲ್ಲಾದವತ್ತಿಲ್** - ಉಪಾಯವಲ್ಲದಿರುವ ಧರ್ಮಗಳಲ್ಲಿ, **ಉಪಾಯ ಬುದ್ಧಿತ್ಯಾಗಮ್** - ಉಪಾಯವೆಂಬ ಬುದ್ಧಿಯನ್ನು, ತ್ಯಾಗ ಮಾಡೋಣವನ್ನೂ, **ವಿಧಿಕ್ಕವೇಣ್ಡಾ** - ವಿಧಿಸಬೇಕಾದ್ದೇನೂ ಇಲ್ಲವು. ಉಪಾಯವಲ್ಲದೇ ಇರುವದನ್ನು ಉಪಾಯವಲ್ಲವೆಂದು ಭಾವಿಸು ಎಂದು ವಿಧಿಸಬೇಕಾದುದು ಏನೂ ಇಲ್ಲವು. ಉಪಾಯವಾಗಿರುವದಕ್ಕೀಗ ಅದು ಉಪಾಯವೆಂಬ ಭಾವನೆಯ ತ್ಯಾಗ ಮಾಡು ಎಂದು ವಿಧಿಸುವದು ನ್ಯಾಯವು. ಅದು ಉಪಾಯವೇ ಅಲ್ಲವಾದರೆ ಉಪಾಯವಲ್ಲವೆಂದು ಭಾವಿಸು ಎಂದು ವಿಧಿಸ ಬೇಕೇ ಎಂಬ ತಾತ್ಪರ್ಯವು. **ಉಪಾಯಮಾನವತ್ತಿಲ್** - ಉಪಾಯವಾಗಿರುವದರಲ್ಲಿ **ಉಪಾಯಬುದ್ಧಿತ್ಯಾಗಮ್ಪಣ್ಣಿ ಅನುಷ್ಠಿಕ್ಕೈ ಯಾವದು ?** - ಉಪಾಯವೆಂಬ ಭಾವವನ್ನು ತ್ಯಾಗಮಾಡಿ

**ಬುದ್ಧಿ ತ್ಯಾಗಮ್ಪಣ್ಣಿ ಅನುಷ್ಠಿಕ್ಕೈಯಾವದು? ಪಕ್ಕೈಯು ಉಪಾಸನಾದಿಗಳಿಲ್ ನಿಲೈಯಾಮ್.**

**ಇಙ್ಗು ಉಪಾಯತ್ವ ಬುದ್ಧಿತ್ಯಾಗಮ್ ಪೊರುಳಾಗ ಚೊಲ್ಲುಗಿರಪಕ್ಷತ್ತಿಲ್, ತ್ಯಾಗವಿಧಿಕ್ಕುಮ್ ಅನುಷ್ಠಾನವಿಧಿಕ್ಕುಮ್, ಅಧಿಕಾರಿ ಭೇದತ್ತಾಲೆ ವಿರೋಧಮ್ ಪರಿಹರಿತ್ತ ವಿಡಮುಮ್ ಅನಪೇಕ್ಷಿತ ವಚನಮ್- ಇಙ್ಗು**

---

ಅನುಷ್ಠಿಸೋಣವೆಂಬುದು ಹೇಗೆ ಆಯಿತು ಎಂದರೆ ? **ಪಕ್ಕೈಯು ಉಪಾಸನಾದಿಗಳಿಲ್ ನಿಲೈಯಾಮ್** - ಹಿಂದೆ ಹೇಳಲ್ಪಟ್ಟ ಉಪಾಯಾನ್ತರವಾದ ಭಕ್ತಿಯೋಗಾದಿಗಳಲ್ಲೇ ಇರುವ ಸ್ಥಿತಿಯಾಗುತ್ತದೆ. ಇಲ್ಲಿ ಆದಿ ಶಬ್ದದಿಂದ ಉಪಾಸನಕ್ಕೆ ಸಾಧಕಗಳಾದ ಕರ್ಮಯೋಗ ಜ್ಞಾನಯೋಗಗಳು ಹೇಳಲ್ಪಟ್ಟವು. ಉಪಾಯವಲ್ಲದೇ ಇರುವದಕ್ಕೆ ಉಪಾಯತ್ವ ಬುದ್ಧಿತ್ಯಾಗ ಕೂಡುವದಿಲ್ಲವಾದುದರಿಂದ, ಉಪಾಯ ಬುದ್ಧಿತ್ಯಾಗವು ವಿಧಿಸಲ್ಪಟ್ಟಿತೆಂದು ಅಭಿಪ್ರಾಯಪಡುವದಾದರೆ, ಆಗ ಪ್ರಪದನಾನುಷ್ಠಾನ ಮಾಡುವವನು ಉಪಾಸನವನ್ನನುಷ್ಠಿಸಿ, ಅದರಲ್ಲಿ ಉಪಾಯ ಬುದ್ಧಿತ್ಯಾಗ ಮಾಡಬೇಕೆಂದು ಹೇಳಿದಂತಾಯಿತು. ಆಗ ಪ್ರಪದನಾನುಷ್ಠಾನ ಮಾಡುವವನು ಉಪಾಸನವನ್ನು ಅಂಗವಾಗಿ ಅನುಷ್ಠಿಸಿ, ಪ್ರಪದನವನ್ನು ಅಂಗವಾಗಿ ಅನುಷ್ಠಿಸತಕ್ಕದೆಂದಾಯಿತು. ಉಪಾಸನಾನುಷ್ಠಾನ ಮಾಡುವವನು ಪ್ರಪದನವನ್ನು ಅಂಗವಾಗಿಯೂ ಉಪಾಸನವನ್ನು ಅಂಗಿಯಾಗಿ ಅನುಷ್ಠಿಸತಕ್ಕದ್ದೆಂದೂ ಹಿಂದೆ ಹೇಳಲ್ಪಟ್ಟಿರುವದರಿಂದ ಎರಡಕ್ಕೂ ತುಂಬಾ ವ್ಯತ್ಯಾಸವಿಲ್ಲದೆ ಎರಡೂ ಶಕ್ತ್ಯಧಿಕಾರಿಗಳಿಗೆ ಉಪಾಯವೆಂದಾಗಿ, ಪ್ರಪದನಕ್ಕೆ ಆಕಿಂಚನ್ಯರೂಪವಾದ ಅಂಗವೇ ಇಲ್ಲವಾಗುತ್ತದೆಂಬ ಭಾವವು. ಇವುಗಳನ್ನೇ ಮುಂದಿನ ವಾಕ್ಯಗಳಿಂದಲೂ ಉಪಪಾದಿಸುತ್ತಾರೆ – **ಇಙ್ಗು** - ಈ ಚರಮಶ್ಲೋಕದ ಸರ್ವಧರ್ಮಾನ್ ಪರಿತ್ಯಜ್ಯವೆಂಬಲ್ಲಿ, **ಉಪಾಯತ್ವಬುದ್ಧಿತ್ಯಾಗಮ್ ಪೊರುಳಾಗ ಚೊಲ್ಲುಗಿರ ಪಕ್ಷತ್ತಿಲ್** - ವಿಧಿಸಲ್ಪಟ್ಟಿತೆಂಬುದೇ ಅಭಿಪ್ರಾಯವೆಂದು ಹೇಳುವ ಪಕ್ಷದಲ್ಲಿ, **ತ್ಯಾಗವಿಧಿಕ್ಕುಮ್** - ಪ್ರಪನ್ನನು ಉಪಾಸನದಲ್ಲಿ ಉಪಾಯತ್ವ ಬುದ್ಧಿಯನ್ನು ಬಿಟ್ಟು ಅಂಗವಾಗಿ ಅನುಷ್ಠಿಸತಕ್ಕದೆಂಬುದಕ್ಕೂ, **ಅನುಷ್ಠಾನವಿಧಿಕ್ಕುಮ್** – ಉಪಾಸಕನು ಪ್ರಪದನವನ್ನು ಅಂಗವಾಗಿ ಅನುಷ್ಠಿಸತಕ್ಕದ್ದೆಂಬುದಕ್ಕೂ, **ಅಧಿಕಾರಿ ಬೇಧತ್ತಾಲೇ** - ಹೀಗೆ ಪ್ರಪನ್ನನು ತ್ಯಾಗಾಧಿಕಾರಿ, ಉಪಾಸಕನು ಅನುಷ್ಠಾನಾಧಿಕಾರಿ ಎಂಬ ಭೇದದಿಂದ, **ವಿರೋಧಮ್ ಪರಿಹರಿತ್ತ ವಿಡನುಮ್** - ಇಬ್ಬರ ಅನುಷ್ಠಾನದಲ್ಲೂ ಪ್ರಪದನ ಉಪಾಸನಗಳಿರುವದರಿಂದ ವಿರೋಧವೇ ಇಲ್ಲವಾದುದಾಗುತ್ತದೆ; ಭೇಧವೇ ಇಲ್ಲದೆ ಎರಡೂ ಶಕ್ತ್ಯಧಿಕಾರಿಗಳಿಗೇ ಆಗುತ್ತದೆ ಎಂಬ ಸಂದರ್ಭವೂ ಸಹ, **ಅನಪೇಕ್ಷಿತ ವಚನಮ್**-ಇಷ್ಟವಿಲ್ಲದ ಉಕ್ತಿಯಾಗುತ್ತದೆ ; ಎಂದರೆ ಎರಡಕ್ಕೂ ಭೇದವಿಲ್ಲದ ಹಾಗೆ ಪ್ರಸಂಗಬರುವದರಿಂದ ಎರಡಕ್ಕೂ

**ಸ್ವರೂಪತ್ಯಾಗಮ್ ಶೊಲ್ಲುಂಪೋದಿರೇ ಇವ್ವಿರೋಧ ಪ್ರಸಙ್ಗಮುಳ್ಳದು.**
**ಇಪ್ಪಡಿ ಬುದ್ಧಿವಿಶೇಷ ತ್ಯಾಗಪೂರ್ವಕ ಕರ್ಮಜ್ಞಾನ ಭಕ್ತಿಗಳೈಪ್ರಪತ್ತಿಕ್ಕು ಅಙ್ಗಮಾಕ ವಿಶ್ಶೈಯುಮ್ಪಕ್ಷತ್ತಿಲ್ ಉಪಾಸನ ಪ್ರಪದನಙ್ಗಳುಕ್ಕು**

---

ಭೇದ ಹೇಳುವದು ನಿರರ್ಥಕ ವಿಷಯವಾಗುತ್ತದೆಂಬ ಭಾವವು. ನಾವು ಹಿಂದೆ ಖಂಡಿಸಿದ ಸ್ವರೂಪತ್ಯಾಗ ವಿಧಿಯಲ್ಲಾದರೂ ಎರಡು ಉಪಾಯಗಳಿಗೂ ವಿರೋಧ ವಿರುವದೆಂದು ಎಂದರೆ ವ್ಯತ್ಯಾಸವಿರುವದೆಂದು ಹೇಳಬಹುದು. ಈ ಮೇಲಿನ ಉಪಾಯತ್ವ ಬುದ್ಧಿ ತ್ಯಾಗವಿಧಿಯ ವಿಷಯದಲ್ಲಾದರೋ ಎರಡಕ್ಕೂ ಇಲ್ಲವಾಗುತ್ತದೆಂದು ಹೇಳುತ್ತಾರೆ—**ಇಙ್ಗ - ಈ ಸರ್ವಧರ್ಮಾ೯ ಪರಿತ್ಯಜ್ಯ** ಎಂಬ ವ್ಯತ್ಯಾಸವೇ ಸ್ಥಳದಲ್ಲಿ, **ಸ್ವರೂಪತ್ಯಾಗಮ್ ಶೊಲ್ಲುಮ್ ಪೋದಿರೆ,** ಪೂರ್ವಪಕ್ಷಿಗಳು ಸ್ವರೂಪತ್ಯಾಗ ವಿಧಿ ಎಂದು ಹೇಳುವಾಗವಾದರೂ, **ಇವ್ವಿರೋಧ ಪ್ರಸಙ್ಗಮುಳ್ಳದು** – ಈ ಎರಡು ಉಪಾಯಗಳಾದ ಪ್ರಪದನ ಉಪಾಸನಗಳಿಗೆ ವ್ಯತ್ಯಾಸದ ಪ್ರಸಙ್ಗವಾದರೂ ಇತ್ತು ; ಈ ಉಪಾಯತ್ವ ಬುದ್ಧಿ ತ್ಯಾಗವನ್ನು ಹೇಳುವ ಸಂದರ್ಭದಲ್ಲಿ ಎರಡಕ್ಕೂ ವ್ಯತ್ಯಾಸವೇ ಇಲ್ಲವೆಂದಾಗುತ್ತದೆಂಬ ಭಾವವು. ಎರಡು ಉಪಾಯಗಳಿಗೂ ವ್ಯತ್ಯಾಸವೇ ಇಲ್ಲವೆಂಬುದನ್ನು **"ಇಪ್ಪಡಿ"** ಎಂದಾರಂಭಿಸಿದ ವಾಕ್ಯದ ಮೂಲಕ ಉಪಪಾದಿಸುತ್ತಾರೆ.—**ಇಪ್ಪಡಿ** - ಈ ರೀತಿಯಲ್ಲಿ, ಯಾವ ರೀತಿಯಲ್ಲಿ ಎಂಬುದನ್ನು ಅವರೇ ವಿಶದೀಕರಿಸುತ್ತಾರೆ.—**ಬುದ್ಧಿವಿಶೇಷತ್ಯಾಗಪೂರ್ವಕ**-ಉಪಾಯತ್ವ ಬುದ್ಧಿತ್ಯಾಗಪೂರ್ವಕವಾಗಿ, **ಕರ್ಮಜ್ಞಾನ ಭಕ್ತಿಗಳನ್ನು, ಪ್ರಪತ್ತಿಕ್ಕು ಅಂಗಮಾಗ**-ಪ್ರಪದನಕ್ಕೆ ಅಂಗವಾಗಿ, **ಇಶ್ಶೈಯುಂ ಪಕ್ಷತ್ತಿಲ್** - ಅಪೇಕ್ಷಿತವೆಂದು ಹೇಳುವ ಸಂದರ್ಭದಲ್ಲಿ, **ಉಪಾಸನ ಪ್ರಪದನ** ಗಳೆರಡಕ್ಕೂ, **ಅಂಗಾಂಗಿ ವ್ಯಪದೇಶತ್ತಿಲ್** - ಅಂಗಾಂಗಗಳೆಂದು ಹೇಳುವದರಲ್ಲಿ ಮಾತ್ರವೇ, **ಮಾರಾಟ್ಟಮೇಯುಳ್ಳದು** – ವ್ಯತ್ಯಾಸವನ್ನುಳ್ಳದು. ಹೇಗೆ ? ಎಂದರೆ ಪ್ರಪದನದಲ್ಲಿ ಪ್ರಪತ್ತಿ ಅಂಗಿ, ಕರ್ಮಯೋಗಾದಿಗಳಿಂದ ಕೂಡಿದ ಉಪಾಸನವು ಅಂಗವಾಯಿತು. ಉಪಾಸನದಲ್ಲಾದರೋ ಉಪಾಸನವು ಅಂಗಿ, ಪ್ರಪದನವು ಅಂಗವಾಯಿತು. ಹೀಗೆ ಎರಡು ವಿಧ ಉಪಾಯದಲ್ಲೂ ಎರಡೂ ಇರುವದರಿಂದ, ಎರಡಕ್ಕೂ ಏನೂ ವ್ಯತ್ಯಾಸವೇ ಇಲ್ಲವೆಂದು ಏರ್ಪಡುತ್ತದೆ ಎಂಬ ಭಾವವು. ಆದುದರಿಂದ ಆಕಿಂಚನ್ಯವೇ ಈ ಪ್ರಪತ್ತಿಗೆ ಇಲ್ಲದೇ ಹೋಯಿತು ಎಂಬ ಭಾವವು.

ಮುಂದೆ ಉಪಾಯಾತ್ವ ಬುದ್ಧಿ ಪರಿತ್ಯಾಗವಾದಿಗಳು ಹೇಳಬಹುದೇನೆಂದರೆ, ಎರಡೂ ಒಂದೇ ವಿಧವಾದುದು ಹೇಗಾಗುತ್ತದೆ ? ಪ್ರಪದನಕ್ಕೆ ಅಂಗವಾಗಿ ಬೇಕಾದ ಉಪಾಸನವು, ತುಂಬಾ ಬೇಕಿಲ್ಲವು. ಸ್ವಲ್ಪಮಟ್ಟಿಗೆ ಇದ್ದರೆ ಸಾಕು. ಉಪಾಸನದಲ್ಲಾದರೋ ವಿಶೇಷವಾಗಿ ಬೇಕು. ಆದುದರಿಂದ ವ್ಯತ್ಯಾಸವಿದೆಯಲಾ ಎಂದು ಹೇಳಬಹುದೆಂದು ಯೋಚಿಸಿ ಆಗಲೂ ಅಭಿಪ್ರಾಯವು ಸರಿಯಲ್ಲವೆಂದು

**ಅಙ್ಗಾಙ್ಗಿ ವ್ಯಪದೇಶತ್ತಿಲ್ ಮಾರಾಟ್ಟಮೇಯುಳ್ಳದು ; ಅಂಗ ಭಾವತ್ತಿಲೇ ಯಥಾ ಕಥಂಚಿದನುಷ್ಠಾನಮ್ ಅಮೈಯುಂ ಎಂಗಿರ ವೈಷಮ್ಯಮುಂ ಮಂದಮ್. "ಸಕಲಾಂಗೋಪಸಂಹಾರಃ ಕಾಮ್ಯಂ ಕರ್ಮಪ್ರಸಿಧ್ಯತಿ" ಎನ್ರು ಶೊಲ್ಲಪಟ್ಟದಿರೆ.**

---

**ಅಂಗಭಾವತ್ತಿಲೇ** ಎಂದಾರಂಭಿಸಿದ ವಾಕ್ಯದಿಂದ ತಿಳಿಸುತ್ತಾರೆ. :– **ಅಂಗಭಾವ ತ್ತಿಲೇ** - ಅಂಗ ಭಾವದಿಂದ, **ಯಥಾಕಥಂಚಿದನುಷ್ಠಾನಮ್** - ಹೇಗೋ ಹಾಗೆ ಸ್ವಲ್ಪವಾದ ಉಪಾಸನಾನುಷ್ಠಾನವು, **ಅಮೈಯುಮ್** - ಈ ಪ್ರಪದನಕ್ಕೆ ಸಾಕು, **ಎಂಗಿರವೈಷಮ್ಯಮುಮ್** - ಎಂದು ಹೇಳುವ ಪ್ರಪದನ ಉಪಾಸನಕ್ಕೆ ಇರುವ ವ್ಯತ್ಯಾಸದ ಹೇಳಿಕೆಯೂ ಕೂಡ. **ಮಂದಮ್** - ಸರಿಯಾದ ತಿಳುವಳಿಕೆ ಇಲ್ಲದ ವಿಷಯವು ; ಏಕೆಂದರೆ ಹಾಗೆ ಹೇಳುವದು ಶಾಸ್ತ್ರವಿರುದ್ಧವಾದ ಮಾತು ಎಂದು ಪ್ರಮಾಣವನ್ನು ಉದಾಹರಿಸುತ್ತಾರೆ. :– "**ಸಕಲಾಂಗೋಪಸಂಹಾರಃ** - ಒಂದು ಕರ್ಮದ ಸಮಸ್ತವಾದ ಅಂಗವು ಪೂರ್ತಿಯಾಗಿ ಮುಗಿಯೋಣವು ಎಂದರೆ ಅಂಗದ ಸಂಪೂರ್ಣತೆಯು, **ಕಾಮ್ಯಂಕರ್ಮ** - ಅಭಿಲಷಿತ ಫಲವನ್ನು ಕೊಡುವ ಕರ್ಮ ವಾಗಿ. ಪ್ರಸಿಧ್ಯತಿ - ಪರಿಣಮಿಸುತ್ತದೆ ಸಿದ್ಧಿಸುತ್ತದೆ." ಎನ್ರು **ಶೊಲ್ಲಪ್ಪಟ್ಟದಿರೇ**- ಎಂದಲ್ಲವೇ ಹೇಳಲ್ಪಟ್ಟಿರುತ್ತದೆ. ಅಂಗವು **ಯಥಾಕಥಂಚಿ** ದಲ್ಲದೆ ಸಂಪೂರ್ಣತೆ ಯನ್ನು ಹೊಂದಿದರೇನೇ ಅಂಗಿಯಾದ ಕರ್ಮವು ಫಲವನ್ನು ಕೊಡುವ ಸಿದ್ಧಿಯನ್ನು ಹೊಂದೀತು. ಹಾಗೆ ಅಂಗಪೂರ್ಣತೆಯಿಲ್ಲದಿದ್ದರೆ ಅಂಗಿಯೇ ಇಲ್ಲವು. ಆದುದ ರಿಂದಲೇ ಅಂಗನ್ಯೂನತೆ ಕೂಡದೆಂಬ ಭಾವದಿಂದ ಅಂತಹ ಅಭಿಪ್ರಾಯವು **ಮಂದಮ್** ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಪ್ರಸ್ತುತವಾದರೂ ಪ್ರಾಸಂಗಿಕವಾಗಿ ತಿಳಿಸತಕ್ಕ ವಿಷ ಯವು ಒಂದುಂಟು ; ಏನೆಂದರೆ – ಪೂರ್ವಜನ್ಮದಲ್ಲಿ ಕರ್ಮಯೋಗವನ್ನು ನಡೆಸಿದ ಅಧಿಕಾರಿಯು ಈ ಜನ್ಮದಲ್ಲಿ ಕರ್ಮಯೋಗರೂಪವಾದ ಅಂಗದ ಅಪೇಕ್ಷೆ ಇಲ್ಲದೇನೇ ಉಪಾಸನೆಯನ್ನು ಅವಲಂಬಿಸಬಹುದೆನ್ನುವರು. ಈ ಅಭಿಪ್ರಾಯವೂ ಮಂದವೇ. ಏಕೆಂದರೆ—

(೧) ಹಿಂದಿನ ಜನ್ಮದಲ್ಲಿ ಕರ್ಮಯೋಗಾದಿಗಳು ಅನುಷ್ಠಿಸಲ್ಪಟ್ಟಿದ್ದವು ಎಂದು ತಿಳಿಯುವ ಬಗೆ ಹೇಗೆ ? ಹೀಗೆ ಅಂಗವನ್ನು ಅನುಷ್ಠಿಸದೆ ಉಪಾಸನವನ್ನು ಅವಲಂಬಿಸಿದರೆ, ಈ ಶ್ರೀನಿಗಮಾಂತ ದೇಶಿಕರವರ ವಾಕ್ಯದ ಪ್ರಕಾರ, ಅಂಗವಿಲ್ಲದುದರಿಂದ ಅಂಗಿಯಿಂದ ಫಲಸಿದ್ಧಿಯಿಲ್ಲ ವೆಂಬುದು ವ್ಯಕ್ತವು. ಹೋದಜನ್ಮದಲ್ಲಿ ಉಪನಯನವಾಗಿದ್ದರೆ, ಈ ಜನ್ಮದಲ್ಲಿ ಬೇಡವೆ ? ಹೊಸದಾಗಿ ಅಕ್ಷರ ಮೊದಲಾದವುಗಳನ್ನು ಹೇಗೆ ಕಲಿಯಬೇಕೋ, ಹಾಗೆಯೇ ಈ ಜನ್ಮದ ಉಪಾಸನಾನುಷ್ಠಾನಕ್ಕೆ

ಕರ್ಮಯೋಗವೂ ಬೇಕು ಈ ಅಭಿಪ್ರಾಯವನ್ನು ಶ್ರೀನಿಗಮಾಂತ ದೇಶಿಕರವರು ನ ಧರ್ಮನಿಷ್ಠೋಽಸ್ಮಿ" ಎಂಬ ಯಾಮುನೇಯ ಶ್ಲೋಕ ವ್ಯಾಖ್ಯಾನದಲ್ಲಿ ತಿಳಿಸಿರುತ್ತಾರೆ.—

(೨) ಅಂಗಾಂಗಿಗಳ ಸಮುಚ್ಚಯವಿದ್ದರೇನೇ ಕರ್ಮದಿಂದ ಫಲಸಿದ್ಧಿಯು. ಆದರೆ ಪೂರ್ವಜನ್ಮದ ಕರ್ಮಾನುಷ್ಠಾನವು ನಿರರ್ಥಕವಾದುದೋ? ಎಂದರೆ ನಿರರ್ಥಕವಲ್ಲವು. ಅನುಷ್ಠಾನ ಸಂಸ್ಕಾರ ಬಲದಿಂದ ಈಗ ನಡೆಸುವ ಕರ್ಮಯೋಗಸಿದ್ಧಿಯು ಬಹು ಶೀಘ್ರವಾಗಿ ಲಭಿಸುತ್ತದೆಂದು ಇಟ್ಟುಕೊಳ್ಳತಕ್ಕದ್ದು.

ಈಗ ಉಪಾಯ ಬುದ್ಧಿತ್ಯಾಗವು "ಸರ್ವಧರ್ಮಾ" ಎಂಬುದರಿಂದ ವಿಧಿಸಲ್ಪಟ್ಟಿತು ಎಂದು ಅಭಿಪ್ರಾಯಪಟ್ಟರೆ, ಹೀಗೆ ಅನೇಕ ದೋಷ ಅನುಪಪತ್ತಿಗಳಿಗೆ ಕಾರಣವಾಗುತ್ತದೆಂದು ತಿಳಿಸಿದರು :—

೧. ಉಪಾಯಾಂತರವು ಪ್ರಪತ್ತಿಗೆ ಅಂಗವೆಂದು ಹೇಳಬೇಕಾಗುತ್ತದೆ.

೨ ನಿತ್ಯನೈಮಿತ್ತಿಕಗಳು ಉತ್ತರ ಕೃತ್ಯವಾಗಿ ಕೈಂಕರ್ಯರೂಪವಾದುದೆಂಬುದು ತಪ್ಪಿಹೋಗುತ್ತದೆ.

೩. ಪ್ರಪದನದ ಸ್ವಂತ ಅಂಗಗಳಲ್ಲದೆ ಮಿಕ್ಕ ಯಾವುದು ಬೇಕಿಲ್ಲವೆಂಬ ನೈರಪೇಕ್ಷ್ಯ ವಿಧಿಗೆ ವಿರುದ್ಧವಾಗುತ್ತದೆ.

೪. ಆಕಿಂಚನಾಧಿಕಾರವೇ ಇಲ್ಲವಾಗುತ್ತದೆ. ಪ್ರಪದನ ಉಪಾಸನಗಳೆರಡೂ ಶಕ್ತಾಧಿಕಾರಿಗೇ ಎಂದೇ ಹೇಳಿದಂತಾಗುತ್ತದೆ.

೫. ಪ್ರಪದನಕ್ಕೂ ಭಕ್ತಿಯೋಗಕ್ಕೂ ತುಂಬಾ ವ್ಯತ್ಯಾಸವೇ ಇಲ್ಲವಾದುದಾಗುತ್ತದೆ, ಪ್ರಪದನಕ್ಕೆ ಭಕ್ತಿಯೋಗವು ಅಂಗವಾಗಿಯೂ ಭಕ್ತಿಗೆ ಪ್ರಪದನವು ಅಂಗವಾಗಿ ಎರಡರಲ್ಲೂ ಎರಡು ಇರುವದರಿಂದ ತುಂಬಾ ವ್ಯತ್ಯಾಸವಿಲ್ಲದಾಗಿ, ಗುರು ಲಘು ವೈಷಮ್ಯ ಹೇಳುವ ಪ್ರಮಾಣಗಳಿಗೆ ವಿರುದ್ಧವಾಗುತ್ತದೆ.

೬. ಅಂಗವಾದವು ಸಂಪೂರ್ಣವಾಗಿ ಅನುಷ್ಠಿಸಬೇಕಾಗಿಲ್ಲವೆಂದರೆ, ಅಂಗಾಂಗಿಗಳ ಸಂಪೂರ್ಣ ಸಮುಚ್ಚಯದಿಂದಲೇ ಕರ್ಮಫಲಗಳ ಸಿದ್ಧಿ ಎಂದು ಹೇಳುವ ಪ್ರಮಾಣಗಳಿಗೆ ವಿರೋಧವು. ಆದುದರಿಂದ ಉಪಾಯತ್ವ ಬುದ್ಧಿತ್ಯಾಗವು ವಿಧಿಸಲ್ಪಟ್ಟಿತೆಂಬ ಭಾವವು ಸ್ವರೂಪತ್ಯಾಗವು ವಿಧಿಸಲ್ಪಟ್ಟಿತೆಂಬ ಅಭಿಪ್ರಾಯದ ಹಾಗೆಯೇ ಅಸಮಂಜಸವೆಂದು ಹೇಳಿದರು.

ಸ್ವರೂಪತ್ಯಾಗವಿಧಿ ಸರಿಯಲ್ಲವೆಂಬ ಅಭಿಪ್ರಾಯವನ್ನು ಹಿಂದೆ ಕಾರಿಕೆಗಳ ಮೂಲಕ ಸಮರ್ಥಿಸಿ, ಹೇಳಿದಹಾಗೆ ಈ ಉಪಾಯತ್ವ ಬುದ್ಧಿತ್ಯಾಗವಿಧಿ ಎಂಬುದೂ ಸರಿಯಲ್ಲವೆಂದು "ಅತಃ" ಎಂದು ಆರಂಭಿಸಿದ ಈ ಮುಂದಿನ ಕಾರಿಕೆಗಳಿಂದ ಸ್ಥಾಪಿಸುತ್ತಾರೆ.—

ಧರ್ಮಸ್ವರೂಪತ್ಯಾಗ ಹೇಳಿದರೇನೋ ಅನುಪಪತ್ತಿಗಳು ಉಂಟಾಗುವದರಿಂದ, **"ಸಙ್ಗಂತ್ಯಕ್ತ್ವಾ ಫಲಂಚೈವ ಸತ್ಯಾಗ ಸ್ಸಾತ್ವಿಕೋಮತಃ"** (೧೮ ೧೮ ೯) ಎಂಬಲ್ಲಿ ಹೇಳಿರುವ ಹಾಗೆ ಸಾತ್ವಿಕತ್ಯಾಗವನ್ನು **"ಸರ್ವಧರ್ಮಾ್ನ ಪರಿತ್ಯಜ್ಯ"** ವೆಂಬಲ್ಲಿ ಹೇಳುವದೇ ನ್ಯಾಯವೆಂದು ಭಾವಿಸಿ, **ಉಪಾಯಬುದ್ಧಿತ್ಯಾಗವೇ** ಹೇಳಲ್ಪಟ್ಟಿತೆಂಬುದರಿಂದಲೂ ಮೇಲೆತೋರ್ಪಡಿಸಿರುವ ಹಾಗೆ ಆರುವಿಧ ಅನುಪಪತ್ತಿಗಳುಂಟಾಗುತ್ತವೆಂದು ಉಪಪಾದಿಸಿದರು. ಉಪಾಯತ್ವ ಬುದ್ಧಿತ್ಯಾಗವೇನು ಉಪಾಯವಲ್ಲದುದರಲ್ಲಿ ಉಪಾಯತ್ವಬುದ್ಧಿತ್ಯಾಗವೇ ? ಅಥವಾ ಉಪಾಯವಾದುದರಲ್ಲಿ ಉಪಾಯತ್ವ ಬುದ್ಧಿತ್ಯಾಗವೇ ? ಎಂದು ವಿಕಲ್ಪಿಸಿ, ಮೊದಲನೆಯ ವಿಕಲ್ಪವು ಕೂಡುವದೇ ಇಲ್ಲವು. ಉಪಾಯವಲ್ಲದುದರಲ್ಲಿ ಉಪಾಯತ್ವ ಬುದ್ಧಿಯೇ ಉಂಟಾಗುವದಿಲ್ಲವಾದುದರಿಂದ. ಎರಡನೆಯ ವಿಕಲ್ಪವೂ ಸಹ ಕೂಡುವದಿಲ್ಲವು :– ಹೇಗೆಂದರೆ ತನಗೆ ಕರ್ಮಯೋಗಾದಿಗಳೇ ಅಶಕ್ಯವಾದುವು ; ಅಂತಹ ಧರ್ಮಗಳಲ್ಲಿ ಉಪಾಯತ್ವರೂಪ ಬುದ್ಧಿಯೇ ಉದಯಿಸುವದಿಲ್ಲವು ; ಶಕ್ಯಗಳಾಗಿ ಅನುಷ್ಠೇಯಗಳಾಗಿರುವ ಧರ್ಮಗಳಲ್ಲೀಗ ಉಪಾಯತ್ವ ಬುದ್ಧಿಯುಂಟಾಗಬಹುದು ; ಅಂತವುಗಳ ತ್ಯಾಗವನ್ನು ವಿಧಿಸುವದೀಗ ನ್ಯಾಯವು. ಆದುದರಿಂದ ಉಪಾಯತ್ವ ಬುದ್ಧಿತ್ಯಾಗ ಹೇಳಿದರೆ ಪ್ರಪತ್ತಿಗೆ ಅಂಗವಾಗಿ ಕರ್ಮಯೋಗಾದಿಗಳಿಂದ ಕೂಡಿದ ಉಪಾಸನವನ್ನು ಅನುಷ್ಠಿಸಿ ಸಾತ್ವಿಕತ್ಯಾಗವನ್ನು ಹೇಳತಕ್ಕದ್ದೆಂದು ಆಗುತ್ತದೆ. ಹೀಗಾಗಿರುವದರಿಂದ ಪ್ರಪತ್ತಿಗೆ ಉಪಾಸನವು ಅಂಗವೂ ಉಪಾಸನಕ್ಕೆ ಪ್ರಪತ್ತಿಯು ಅಂಗವು ಎಂದಾಗಿ ಎರಡು ಉಪಾಯಗಳು ಶಕ್ತನಿಗೇ ಅರ್ಹವಾದುದಾಗಿ, (೧) ಅಕಿಂಚನತ್ವವು ಪ್ರಪತ್ತಿಗೆ ಇಲ್ಲವಾಯಿತು. (೨) ನೈರಪೇಕ್ಷ್ಯವನ್ನು ಹೇಳುವ ಪ್ರಮಾಣಗಳಿಗೂ ವಿರೋಧವು (೩) ಪ್ರಪತ್ತಿಯಲ್ಲಿ ಸರ್ವರಿಗೂ ಅಧಿಕಾರವುಂಟೆಂಬುದು ತಪ್ಪಿ, ಉಪಾಸನಾಧಿಕಾರಿ ಮಾತ್ರವೇ ಅದಕ್ಕೆ ಅರ್ಹನೆಂಬ ಹೀಗೆ ದೋಷಗಳು ಉಂಟಾಗುತ್ತವೆ. ಸ್ವರೂಪತ್ಯಾಗವನ್ನು ಪರಿತ್ಯಜ್ಯವೆಂಬುದಕ್ಕೆ ಹೇಳಿದರೆ ಕೈಂಕರ್ಯರೂಪದಲ್ಲಿ ಆವಶ್ಯಕವಾಗಿ, ಅನುಷ್ಠಿಸಬೇಕಾದ ಧರ್ಮಗಳನ್ನೂ ಸಹ ಬಿಡಬಹುದೆಂದು ಆಗುವದರಿಂದ ಅದೂ ಸರಿಯಲ್ಲವೆಂಬುದು ಹಿಂದೆ ಹೇಳಲ್ಪಟ್ಟಿತು. ಆದುದರಿಂದ ಸ್ವರೂಪತ್ಯಾಗದ ವಿಧಿ ಎಂದೂ, ಉಪಾಯತಾಬುದ್ಧಿ ತ್ಯಾಗ ವಿಧಿ ಎಂದೂ, ಸರ್ವಧರ್ಮಾ್ನ ಪರಿತ್ಯಜ್ಯವೆಂಬುದಕ್ಕೆ ವ್ಯಾಖ್ಯಾನಗಳು ಅಸಂಗತವಾದುವೆಂಬುದನ್ನು ಕಾರಿಕೆಗಳ ಮೂಲಕ ತಿಳಿಸುತ್ತಾರೆ.

**ಅತಃ** - ಆಕಾರಣದಿಂದ, **ಸ್ವರೂಪತ್ಯಾಗೋಕ್ತೌ** - ಸರ್ವದರ್ಮಾ್ನ ಪರಿತ್ಯಜ್ಯವೆಂಬಲ್ಲಿ ಸಮಸ್ತ ಧರ್ಮಗಳ ತ್ಯಾಗವು ವಿಧಿಸಲ್ಪಟ್ಟಿತೆಂದು ಹೇಳಿದರೆ, **ಕೈಂಕರ್ಯಸ್ಯಾಪಚಾರತಾ** - ಅವಶ್ಯಕವಾಗಿ ಮಾಡಬೇಕಾದ ನಿತ್ಯನೈಮಿತ್ತಿಕರೂಪ ಆಜ್ಞಾಕೈಂಕರ್ಯಗಳನ್ನೂ, ಮತ್ತು ಭಗವದ್ಭಾಗವತಾರ್ಚನರೂಪಗಳಾದ ಅನುಜ್ಞಾಕೈಂಕರ್ಯಗಳನ್ನೂ ಮಾಡುವದು ಅಪಚಾರವಾಗಿ ಸರಿಯಲ್ಲದೆಂಬುದೂ **ಭವೇತ್** - ಆಗುತ್ತದೆ.

**ಅತ ಸ್ವರೂಪ ತ್ಯಾಗೋಕ್ತೌ ಕೈಂಕರ್ಯಸ್ಯಾಪಚಾರತಾ ।**
**ಉಪಾಯತ್ವ ಮತಿತ್ಯಾಗೇ ತತ್ಸ್ವರೂಪಾಂಗತಾ ಭವೇತ್ ॥೧೧೬॥**
**ಸಾತ್ವಿಕತ್ಯಾಗಯುಕ್ತಾನಾಂ ಧರ್ಮಾಣಾ ಮೇತದಂಗತಾ ।**
**ನೂನಂ ವಿಸ್ಮೃತ ಕಾಕಾದಿ ವೃತ್ತಾನ್ತೈ ರುಪವರ್ಣಿತಾ ॥೧೧೭॥**

---

**ಉಪಾಯತ್ವಮತಿತ್ಯಾಗೇ** - ಉಪಾಯತ್ವ ಬುದ್ಧಿತ್ಯಾಗವು **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ವಿಧಿಸಲ್ಪಟ್ಟಿತೆಂದರೆ, **ತತ್ಸ್ವರೂಪಾಂಗತಾ** - ಆ ಉಪಾಯವಾಗಿರುವ ಉಪಾಸನವನ್ನು ಅನುಷ್ಠಿಸಿ ಉಪಾಯತ್ವಬುದ್ಧಿಯನ್ನು ತ್ಯಾಗಮಾಡಬೇಕೆಂದಾಗುವುದರಿಂದ ಆ ಉಪಾಸನವನ್ನು ಪ್ರಪದನಕ್ಕೆ ಅಂಗವೆಂಬ ಭಾವವು, **ಭವೇತ್** - ಉಂಟಾಗುತ್ತದೆ ಇವೆರಡು ಅಭಿಪ್ರಾಯಗಳೂ ಆ ಕಾರಣದಿಂದ ಸರಿಯಾದವಲ್ಲವೆಂಬ ಭಾವವು. ಸ್ವರೂಪತ್ಯಾಗ ಪಕ್ಷದಲ್ಲಿ ಅವಶ್ಯಕವಾಗಿ ಕರ್ತವ್ಯಗಳಾದ ನಿತ್ಯನೈಮಿತ್ತಿಕಗಳೂ, ಭಗವದ್ಭಾಗವತ ಅನುಜ್ಞಾ ಕೈಂಕರ್ಯಗಳೂ ಅಪಚಾರಗಳು ಹೇಗಾಗುತ್ತವೆ ? ಎಂದರೆ ಅವುಗಳ ತ್ಯಾಗವು ವಿಧಿಯಾಗಿ ನಿಷೇಧಿಸಲ್ಪಟ್ಟಿರುವದರಿಂದ, ಅಕೃತ್ಯಕರಣದೋಷಯುಕ್ತಗಳಾಗಿ ಪರಿಣಮಿಸುತ್ತವೆಂಬ ಭಾವವು. ಎರಡನೆಯ ಅಭಿಪ್ರಾಯದಲ್ಲಿ ಉಪಾಸನವು ಅಂಗವಾಗಿ ಹೇಳಲ್ಪಟ್ಟು, ಉಪಾಸನಕ್ಕೆ ಶಕ್ತಿಯಿರುವವನಿಗೆ ಪ್ರಪತ್ತಿಯು ವಿಹಿತವಾಗಿ ಆಕಿಂಚನ್ಯ ಅಂಗವಿಲ್ಲದುದಾಗುತ್ತವೆಂಬ ಭಾವವು ನೈರಪೇಕ್ಷ್ಯ ಶಾಸ್ತ್ರಪ್ರಮಾಣಕ್ಕೂ ಸಹ ವಿರೋಧವಾಗುತ್ತದೆ.

ಹೀಗೆ ಉಪಾಯತ್ವ ಮತಿತ್ಯಾಗ ವಿಷಯದಲ್ಲಿ ದೂಷಣಾಂತರವನ್ನೂ ಹೇಳುತ್ತಾರೆ. ಅನೇಕರು ಅನುಷ್ಠಿಸಿರುವ ಪ್ರಪದನಗಳಲ್ಲಿ ಇಂತಹ ಉಪಾಯತ್ವ ಮತಿತ್ಯಾಗ ವಿಷಯವು ತೋರಿಬರುವದಿಲ್ಲವಾದುದರಿಂದ ಅಸಂಗತವಾದುದೆಂದು ತಿಳಿಸುತ್ತಾರೆ.—

**ಅರ್ಥವು — ಸಾತ್ವಿಕತ್ಯಾಗಯುಕ್ತಾನಾಂ** - ಧರ್ಮಗಳಿಗೆ ಉಪಾಯತ್ವ ಬುದ್ಧಿಯತ್ಯಾಗವೆಂದರೆ ಸಾತ್ವಿಕತ್ಯಾಗದಿಂದ ಕೂಡಿರುವ **ಧರ್ಮಾಣಾಂ** - ಕರ್ಮಯೋಗಾದಿಗಳಿಂದ ಕೂಡಿದ ಉಪಾಸನ ರೂಪಧರ್ಮಗಳು, **ಏತದಂಗತಾ** - ಈ ಪ್ರಪದನಕ್ಕೆ ಅಂಗವಾಗಿರುವ ಭಾವವು, **ವಿಸ್ಮೃತ ಕಾಕಾದಿವೃತ್ತಾನ್ತೈಃ** - ಮರೆತುಹೋದ ಕಾಕಾಸುರ, ಆದಿ ಶಬ್ದದಿಂದ ಗಜೇಂದ್ರ, ಕಾಳೀಯ, ದ್ರೌಪದಿ, ಗುಹ, ವಿಭೀಷಣನೇ ಮೊದಲಾದ ವೃತಾಂತಗಳಿಂದ **ಉಪವರ್ಣಿತಾ** - ವರ್ಣಿಸಲ್ಪಟ್ಟಿತೆಂಬುದು, **ನೂನಂ**- ನಿಶ್ಚಯವು, ತಾತ್ಪರ್ಯವೇನೆಂದರೆ ಈ ಮೇಲೆ ಹೇಳಿದ ಕಾಕಾದಿಗಳ ಪ್ರಪದನಗಳಲ್ಲಿ ಎಲ್ಲಿಯೂ ಈ ಅಧಿಕಾರಿಗಳು ಉಪಾಸನವನ್ನು ಅನುಷ್ಠಿಸಿ ಸಾತ್ವಿಕ ತ್ಯಾಗವನ್ನು ಹೇಳಿ ಪ್ರಪದನವನ್ನು ಅನುಷ್ಠಿಸಿದರೆಂದು ಗ್ರಂಥಗಳಲ್ಲಿ ಹೇಳಿಲ್ಲವು. ಆಗ ಪೂರ್ವಪಕ್ಷಿಗಳು ಯಾವ ಸಮಾಧಾನವನ್ನು ಹೇಳಬೇಕಾಗುತ್ತದೆ ಎಂದರೆ ಅಲ್ಲಲ್ಲಿ ಹೇಳುವುದನ್ನು ಮರೆತುಬಿಟ್ಟರೆಂದು

**ಸಕೃತ್ಪ್ರಪದನೇನ್ಯೈವ ಧರ್ಮಾಂತರ ದವೀಯಸಾ |**
**ತತ್ಷಣೇಭಿಮತಂ ಪೂರ್ವೈಃಸಂಪ್ರಾಪ್ತ ರಿತಿ ಶುಶ್ರುಮ ||೧೧೪||**

---

ಹೇಳಬೇಕಾಗುತ್ತದೆ ಎಂಬ ತಾತ್ಪರ್ಯವು ಪ್ರಪದನವನ್ನು ವರ್ಣಿಸಿರುವ, ವಾಲ್ಮೀಕಿ ವ್ಯಾಸ ಮೊದಲಾದ ಮಹರ್ಷಿಗಳಿಗೆ ವಿಸ್ಮೃತಿ ಎಲ್ಲಾದರೂ ಉಂಟೋ ? ನಿಶ್ಚಯವಲ್ಲದ ವಿಷಯದಲ್ಲಿ ನಿಶ್ಚಯತ್ವವನ್ನು ಆರೋಪಿಸುವುದ ಕ್ಕಾಗಿಯೇ, **ನೂನಂ** - ಎಂಬ ಉತ್ಪ್ರೇಕ್ಷೆಯನ್ನು ಸೂಚಿಸುವ ಅವ್ಯಯವು. ಆದುದರಿಂದ ಈ ಯಾವ ವೃತ್ತಾಂತದಲ್ಲೂ ಉಪಾಸನಾದಿಗಳನ್ನು ಅಂಗವಾಗಿ ಅನು ಷ್ಠಿಸಲ್ಪಟ್ಟ ಸಾತ್ವಿಕತ್ಯಾಗವು ಹೇಳಲ್ಪಟ್ಟಿಲ್ಲವೆಂಬುದು ತಾತ್ಪರ್ಯವು. ಹೀಗೆ ಉತ್ಪ್ರೇಕ್ಷಿಸಿ ಹೇಳಿರುವುದರಿಂದ ಅವರ ಅಭಿಪ್ರಾಯವು ತುಂಬಾ ಹಾಸ್ಯಾಸ್ಪದವೆಂದು ತೋರ್ಪಡಿಸಿದರು ಹೇಗೆಂದರೆ ಕಾಕನೂ, ನಿಷಾದನೂ, ಗಜೇಂದ್ರನೂ, ಸ್ತ್ರೀಯಾ ಗಿಯೂ ಬಹಿಷ್ಠೆಯಾಗಿಯೂ ಇದ್ದ ದ್ರೌಪದಿಯೂ ಕಾಳೀಯನೂ ಸಹ ಉಪಾಸ ನಕ್ಕೇ ಅನರ್ಹರು. ಅದೂ ಅಲ್ಲದೆ ಆರ್ತರಾಗಿ ಶರಣಾಗತಿಯನ್ನು ಮಾಡುವ ಕಾಲದಲ್ಲಿ ಉಪಾಸನಕ್ಕೆ ಎಲ್ಲಿ ಅವಕಾಶವು? ಕ್ಷಣಕಾಲದಲ್ಲಿ ಸಾಧ್ಯವಾಗುವ ಶರಣಾ ಗತಿಗೆ ಉಪಾಸನವು ಹೇಗೆ ಅಂಗವಾದೀತು ಆದುದರಿಂದ ಅಭಿಪ್ರಾಯವು. ಪರಿಹಸನೀಯವು

**ಅರ್ಥವು**—ಮೇಲೆ ಹೇಳಿದ ಕಾಕ, ಕಪೋತ, ಕಾಳೀಯ ಗಜೇಂದ್ರ, ನಿಷಾದಾದಿಗಳು ಅಜ್ಞರು, ಆದುದರಿಂದ ಪ್ರಪದನವು ಹೇಗೋ ಅನುಷ್ಠಿಸಲ್ಪಟ್ಟಿತು. ಜ್ಞಾನಿಗಳಾದ ಶ್ರೀ ಪರಾಂಕುಶರೇ ಮೊದಲಾದವರುಗಳಲ್ಲಿ ಪ್ರಪದನವು, ಭಕ್ತಿಯೋ ಗಾಂಕವಾಗಿ ಅನುಷ್ಠಿಸಲ್ಪಟ್ಟ ಹಾಗೆ ತೋರಿಬರುತ್ತದೆ ಎಂದರೂ, ಆ ಸಂದರ್ಭ ದಲ್ಲೂ ಸರಿಯಲ್ಲವೆಂದು ಹೇಳುತ್ತಾರೆ **ಪೂರ್ವೈಃ** – ಹಿಂದಿನವರು ಎಂದರೆ ಶ್ರೀ ಪರಾಂಕುಶರೇ ಮೊದಲಾದ ಆಳ್ವಾರಾಚಾರ್ಯರುಗಳು, **ಧರ್ಮಾಂತರದವೀಯಸಾ** - ಧರ್ಮಾಂತರಗಳಾದ ಕರ್ಮಯೋಗಾದಿಗಳಿಂದ ದೂರತರವಾಗಿ, ಎಂದರೆ ಉಪಾ ಯಾನ್ತರವಾದ ಕರ್ಮಯೋಗಾದಿಗಳಿಂದ ಸೇರಿದ ಉಪಾಸನವೊಂದೂ ಇಲ್ಲದೆ, **ಸಕೃತ್ಪ್ರಪದನೇನ್ಯೈವ** - ಒಂದು ಸಲ ಅಲ್ಪಕಾಲದಲ್ಲಿ ಅನುಷ್ಠಿಸಲ್ಪಟ್ಟ ಪ್ರಪದನ ದಿಂದಲೇನೇ, **ತತ್ಷಣೇ** - ಅವರುಗಳು ಆರ್ತಪ್ರಪತ್ತಿಯನ್ನು ಅನುಷ್ಠಿಸಿದ ಪ್ರಯುಕ್ತವಾಗಿ ಪ್ರಪದನವನ್ನು ಅನುಷ್ಠಿಸಿದ ತಕ್ಷಣವೇ, **ಅಭಿಮತಂ** - ತಮಗೆ ಇಷ್ಟವಾದ ಪರಮಪುರುಷಾರ್ಥವನ್ನು **ಎಂದರೆ ಮೋಕ್ಷವನ್ನು** ಎಂಬ ಭಾವವು, **ಸಂಪ್ರಾಪ್ತಃ** - ಹೊಂದಿದರು, **ಇತಿ** - ಎಂಬದಾಗಿ, **ಶುಶ್ರುಮ** – **ಕೇಳಿರು ವೆವು.** ಶ್ರೀನಮ್ಮಾಳ್ವಾರ್ರವರಿಗೆ ತುಂಬಾ ಆರ್ತರಾದ ಒಡನೆಯೇ ಮುಕ್ತಿಯು ಲಭಿಸಿತೆಂಬುದನ್ನು ಅವರ ೧೦ನೆಯ ಪತ್ತು-ಹತ್ತನೆಯ ತಿರುವಾಯ್‌ಮೊಳಿಯಲ್ಲಿ ಉಪಪಾದಿತವಾಗಿರುವದನ್ನು ಕಾಣಬಹುದು ಹಾಗೆಯೇ ಹಿಂದೆ ಹೇಳಿದ ಗಜೇಂದ್ರ

**ಕಾಕಾದಿಗಳೂ** ಸಹ ಆರ್ತರಾಗಿಯೇ ಪ್ರಪದನವನ್ನು ಅನುಷ್ಠಿಸಿದರೇ ವಿನಾ, ಉಪಾಸನಾದಿಗಳನ್ನು ಅಂಗವಾಗಿ ಅನುಷ್ಠಿಸಿ, ಸಾತ್ವಿಕ ತ್ಯಾಗಪೂರ್ವಕವಾಗಿ ಪ್ರಪದನವನ್ನು ಅನುಷ್ಠಿಸಿದರೆಂದು ಎಲ್ಲಿಯೂ ಹೇಳಿಲ್ಲವಾದುದರಿಂದ, ಅವರು **ಗಳು** ತಮ್ಮ ಅಭೀಷ್ಟವನ್ನು ಒಡನೆಯೇ ಹೊಂದಿದರೆಂದೇ ನಾವು ಕೇಳಿರು **ವೆವು** ಎಂಬ ತಾತ್ಪರ್ಯವು ಗಜೇಂದ್ರನೂ, ಕಾಕನೂ, ದ್ರೌಪದಿಯೂ, **ಕಾಳೀ ಯನೂ**, ವಿಭೀಷಣನೂ ಇವರೆಲ್ಲಾ ಆರ್ತರಾಗಿಯೇ ಶರಣಾಗತಿಯನ್ನು ಅನುಷ್ಠಿಸಿದ ರಾದುದರಿಂದ ಅವರ ಅಭಿಮತವನ್ನು ಒಡನೆಯೇ ಹೊಂದಿದರೆಂಬರ್ಥವೂ ಸುಲಭ ವಾಗಿ ತೋರಿಬರುತ್ತದೆ ಹೇಗೆಂದರೆ **ಪೂರ್ವೇ** ಹಿಂದೆ ಪ್ರಪದನವನ್ನು ಅನುಷ್ಠಿಸಿದ ರೆಂದು ಇತಿಹಾಸಾದಿಗಳಲ್ಲಿ ಉಪವರ್ಣಿತರಾದವರು, **ಧರ್ಮಾಂತರದವೀಯಸಾ-** ಉಪಾಸನಾದಿಗಳ ಅನುಷ್ಠಾನ ಯಾವುದೂ ಇಲ್ಲದೆ ಅವುಗಳಿಗೆ ದೂರತರವಾಗಿಯೇ **ಸಕೃದೇವ ಪ್ರಪದನೇನೈವ - "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ"** ಎಂಬಲ್ಲಿ ಹೇಳಿರುವ ಹಾಗೆ ಆರ್ತರಾಗಿ ಮಾಡಿದ **ಸಕೃತ್** ಪ್ರಪದ ನಾನುಷ್ಠಾನದಿಂದಲೇ, **ತತ್ಕ್ಷಣೇ** - ಒಡನೆಯೇ **ಅಭಿಮತಂ** - ತಮ್ಮ ತಮ್ಮ ಅಭೀಷ್ಟವನ್ನು, **ಸಂಪ್ರಾಪುರಿತಿಶುಶ್ರುಮ** - ಹೊಂದಿದರೆಂದು ಕೇಳಿರುವೆವು. **ಈ ಮೇಲೆ** ಹೇಳಿದವರಿಗೆಲ್ಲಾ ಒಡನೆಯೇ ಸ್ವಾಮಿಯ ಅನುಗ್ರಹ ಪ್ರಾಪ್ತಿಯು ಎಂಬುದು ತಾತ್ಪರ್ಯವು ಈ ಮೇಲೆ ಉದಾಹರಿಸಿರುವವರಿಗೆಲ್ಲಾ ಹೀಗೆ ಸರ್ವೇ ಶ್ವರಾನುಗ್ರಹಪ್ರಾಪ್ತಿ ಎಂಬುದು ಇತಿಹಾಸಗಳಿಂದ ಸರ್ವರಿಗೂ ತಿಳಿದ ವಿಷಯವೇ.

ಆದುದರಿಂದ ಹೀಗೆ ಸ್ವರೂಪತ್ಯಾಗ ವಿಧಿಪಕ್ಷದಲ್ಲೂ, ಉಪಾಯತ್ವ ಬುದ್ಧಿ ತ್ಯಾಗ ವಿಧಿ ಪಕ್ಷದಲ್ಲೂ ದೋಷಗಳು ತಪ್ಪಿದ್ದಲ್ಲವೆಂದು ಹಿಂದಿನ ಶ್ಲೋಕಗಳಿಂದ ಹೇಳಿದರು. ಹಾಗಾದರೆ ಪೂರ್ವಪಕ್ಷಿಗಳು ಕೇಳಬಹುದು ಏನೆಂದರೆ—**ಸರ್ವಧರ್ಮಾ ಪರಿತ್ಯಜ್ಯ** ಎಂಬುದಕ್ಕೆ ವಿಧಿಪಕ್ಷವಾಗಿ ಅರ್ಥವನ್ನು ನೀವೂ ಹೇಳುವದಾದರೆ ಆಗ ನೀವು ಹೇಗೆ ಅರ್ಥವನ್ನು ಹೇಳುವಿರಿ? ಎಂದು ಕೇಳಿದರೆ, ನಾವು ನೈರಪೇಕ್ಷ್ಯ ವಿಧಿಯು ಹೇಳಲ್ಪಟ್ಟಿತೆಂದು ಭಾವಿಸಿ ಆಕಿಂಚನ್ಯವನ್ನು ಸ್ಥಾಪಿಸುವೆವು, ಆದುದರಿಂದ ನಮ್ಮ ಅಭಿಪ್ರಾಯಕ್ಕೆ ಸ್ವಲ್ಪವಾಗಲಿ ಬಾಧೆ ಇಲ್ಲವೆಂದು ಮುಂದಿನ ಕಾರಿಕೆ ಯಿಂದ ತಿಳಿಸುತ್ತಾರೆ —

### ನೈರಪೇಕ್ಷ್ಯ ವಿಧಿಪಕ್ಷದಲ್ಲೀಗ ಯಾವ ಪ್ರಮಾಣಕ್ಕೂ ಬಾಧೆಯು ಇಲ್ಲವೆಂದು ಹೇಳುತ್ತಾರೆ.

ಪ್ರಪದನಕ್ಕೆ ಅಂಗವಾಗಿ ಉಪಾಸನವು ಹೇಳಲ್ಪಟ್ಟಿರುತ್ತದೆಂಬ ಈಗ ಪ್ರಸಕ್ತ ವಾದ ವಾದವು ಬಾಧಿಸಲ್ಪಟ್ಟರೇನೇ, ಹಾಗೆ ಸರ್ವ ಸಮಸ್ತ ಅಂಗ ನೈರಪೇಕ್ಷ್ಯವೂ ಬೋಧಿಸಲ್ಪಟ್ಟಿತೆಂದು ಭಾವಿಸಿದರೇನೇ ಸರ್ವಸಾಮಂಜಸ್ಯವೂ ಉಂಟಾಗುತ್ತದೆಂಬ ಭಾವದಿಂದ, ಪ್ರಪದನಕ್ಕೆ ಬ್ರಹ್ಮಾಸ್ತ್ರ ತುಲ್ಯ ಪ್ರಭಾವವು ಕಾಪಾಡಲ್ಪಡುತ್ತದೆ. **ನಿತ್ಯನೈಮಿತ್ತಿಕಾದಿಗಳೂ** ಸ್ವರೂಪತಃ ತ್ಯಾಗವಾದವುಗಳಲ್ಲದೆ ಕೈಂಕರ್ಯರೂಪದಲ್ಲಿ

**ನೈರಪೇಕ್ಷ್ಯ ವಿಧಿಪಕ್ಷೇತು ನ ಕಸ್ಯಾಪಿ ಬಾಧ ಇತ್ಯಾಹ**

---

**ಪ್ರಸಕ್ತಾಂಗತ್ವ ಬಾಧೇತು ಬ್ರಹ್ಮಾಸ್ತ್ರ ಸಮತೇಜಸಃ ।**
**ಉಪಾಯಸ್ಯ ಪ್ರಭಾವಶ್ಚ ಕೈಂಕರ್ಯಾದಿಚ ಸುಸ್ಥಿತಮ್ ॥**

---

ಅನುಷ್ಠಿಸತಕ್ಕದ್ದೆಂಬುದೂ ಸ್ಥಾಪಿಸಲ್ಪಡುತ್ತದೆಂಗೂ ಹೇಳುತ್ತಾರೆ. ಹೀಗೆ ನಾವು ಹೇಳುವ ನೈರಪೇಕ್ಷವು ವಿಧಿಸಲ್ಪಟ್ಟಿತೆಂಬುದರಿಂದ ಹೀಗೆ ಎರಡು ವಿಧವಾದ ಸಾಮಂಜಸ್ಯವೂ ಏರ್ಪಟ್ಟಿತು. ಎಂದು ಹೇಳುತ್ತಾರೆ. ಪೂರ್ವಪಕ್ಷಿಗಳ ಎರಡು ವಿಧಗಳಾದ ಸ್ವರೂಪತ್ಯಾಗವಿಧಿ, ಉಪಾಯತ್ವಬುದ್ಧಿ ತ್ಯಾಗಪಕ್ಷಗಳಲ್ಲಿ ಇಂತಹ ಸಮಂಜಸಗಳಿಲ್ಲದೆ ದೋಷಗಳೇ ಉಂಟಾಗುವದರಿಂದ, ಅವುಗಳನ್ನು ವ್ಯಾವರ್ತಿಸಿ ಹೇಳುವದಕ್ಕಾಗಿಯೇ ಇಲ್ಲಿ "ತು" ಶಬ್ದವು

**ಪ್ರಸಕ್ತಾಂಗತ್ವಬಾಧೇತು** - ಈಗ ಪ್ರಸಕ್ತವಾಗಿರುವ ಕರ್ಮಯೋಗಾದಿ ಉಪಾಸನಗಳು ಅಂಗವೆಂಬುದು ಪರಿಹಾರವಾಗಿ ಇತರಗಳಾದ ಅಂಗಗಳ ನೈರ ಪೇಕ್ಷವು ವಿಧಿಸಲ್ಪಟ್ಟಿತೆಂಬ ಭಾವನೆಯಲ್ಲಾದರೋ, **ಬ್ರಹ್ಮಾಸ್ತ್ರ ಸಮ ತೇಜಸಃ**-ಬ್ರಹ್ಮಾಸ್ತ್ರಕ್ಕೆ ಸಮವಾದ ಪ್ರಭಾವವುಳ್ಳ, **ಉಪಾಯಸ್ಯ**-ಉಪಾಯ ವಾದ ಪ್ರಪದನದ, **ಪ್ರಭಾವಶ್ಚ** - ಪ್ರಭಾವವೂ ಕೂಡ, **ಸುಸ್ಥಿರಂ**-ಸುಪ್ರತಿಷ್ಠಿತ ವಾಯಿತು, ಮತ್ತೂ **ಕೈಂಕರ್ಯಾದಿಚ** - ನಿತ್ಯನೈಮಿತ್ತಿಕಗಳ ಅನುಷ್ಠಾನವೂ, ಗತಿಚಿಂತನಾದಿಗಳೂ ಕೈಂಕರ್ಯ ರೂಪದಲ್ಲಿ ಅಂಗತ್ವೇನವಲ್ಲದೆ ಅನುಷ್ಠೇಯ ಗಳೆಂಬುದೂ ಸಹ, **ಸುಸ್ಥಿರಮ್** - ಸ್ಥಾಪಿಸಲ್ಪಟ್ಟಿತು. ಪ್ರಪದನಕ್ಕೆ ಅಂಗವಾಗಿ ಯಾವುದೂ ವಿಧಿಸಲ್ಪಡಲಿಲ್ಲವೆಂದು ಹೇಳಿದರೇನೇ ಸರ್ವಸಾಮಂಜಸ್ಯವು ಉಂಟಾ ಗುತ್ತದೆ ಪ್ರಥಮತಃ ಪ್ರಪದನದ ಮಹಾತ್ಮೆಯೂ ಉಳಕೊಂಡಿತು. ಅದಕ್ಕೆ ಬೇಕಾದ ಐದು ಅಂಗಗಳಲ್ಲದೆ ಇನ್ನು ಯಾವುದು ಬೇಕಿಲ್ಲವೆಂದು ನೈರಪೇಕ್ಷವನ್ನು ಹೇಳುವ ಶಾಸ್ತ್ರಗಳಿಗೆ ಪ್ರಾಮಾಣ್ಯವೂ ಹೇಳಿದಂತಾಯಿತು. ಇನ್ನೊಂದು ಉಪಾಯಕ್ಕೀಗ **ಸಹಕಾರಿತ್ವೇನಚ** - ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವ ಹಾಗೆ (೩ ೪ ೩೩ ) ನಿತ್ಯ ನೈಮಿತ್ತಿಕಾರಿಗಳು ಅಂಗವಾಗಿ ಅನುಷ್ಠಿಸತಕ್ಕದ್ದು. ಇದು ಯಾವುದು ಪ್ರಪದನಕ್ಕೆ ಅಂಗವಾಗಿ ಬೇಕಿಲ್ಲವು. ಇದರಿಂದ ನಿತ್ಯ ನೈಮಿತ್ತಿಕಾನುಷ್ಠಾನಕ್ಕೂ ಏನೊಂದು ವಿಘಾತವಿಲ್ಲವು ಅದೂ **ಸುಸ್ಥಿರಮ್**-ರಕ್ಷಿ ಸಲ್ಪಟ್ಟಿತು. ಅದು ಅಂಗವಾಗಿ ಬೇಕಿಲ್ಲವಾದರೂ ಇತರ ಪ್ರಮಾಣಗಳಿಂದ ಅವುಗಳ ಅನುಷ್ಠಾನವು ಆವಶ್ಯಕವಾಗಿ, ಸುರಕ್ಷಿತವೆಂಬ ಭಾವವು. ಇಲ್ಲಿ **"ಕೈಂಕರ್ಯಾದಿ"** - ಎಂಬಲ್ಲಿರುವ ಆದಿ ಶಬ್ದದಿಂದ ಅಕಿಂಚನಾಧಿಕಾರತ್ವವೂ ಸರ್ವಾಧಿಕಾರತ್ವವೂ ಸಹ **ಸುಸ್ಥಿರಮ್** - ಚನ್ನಾಗಿ ರಕ್ಷಿಸಲ್ಪಟ್ಟವು. ಇದು ಸಾರ ಸಂಗ್ರಹ ವ್ಯಾಖ್ಯಾತಾವಿನ ಅಭಿಪ್ರಾಯವು.

**ಅಗ್ಯೆಯಾಲ್, ಇಙ್ಗು ಸರ್ವಧರ್ಮಙ್ಗಳೆನುಡ್ಯೆಯು ಸ್ವರೂಪತ್ಯಾಗತ್ತೈ ಅಙ್ಗಮಾಗ ವಿಧಿಕ್ಕಿರದೆನ್ರುಮ್, ಅವೈ ಅಙ್ಗಮಾಮ್ಪಡಿ ಇಙ್ಗು ಬುದ್ಧಿವಿಶೇಷ ತ್ಯಾಗಮಾತ್ರಮ್ ವಿಧಿಕ್ಕಿರದೆನ್ರುಮ್ ಶೊಲ್ಲುಗಿರ ಪಕ್ಷಂಗಳ್, ಆಜ್ಞಾನು ಪಾಲನಾದಿ ಶಾಸ್ತ್ರಂಗಳುಕ್ಕುಮ್, ಪ್ರಪತ್ತಿಕ್ಕು ನೇರಪೇಕ್ಷ್ಯಂ ಶೊಲ್ಲುಗಿರ**

---

· ಈ ಪ್ರಪದನಕ್ಕೆ ಇನ್ನು ಯಾವುದಾದರು ಸಾಪೇಕ್ಷೆಯುಂಟೆಂದು ಭಾವಿಸಿದರೆ ಪ್ರಪದನದಮಾಹಾತ್ಮ್ಯೆಗೇ ಕುಂದಕವೆಂಬ ಭಾವವು **ಬ್ರಹ್ಮಾಸ್ತ್ರ ಸಮತೇಜಸಂ** ಎಂಬಲ್ಲಿ ಬ್ರಹ್ಮಾಸ್ತ್ರ ಸಾಮ್ಯದಿಂದ ಹೇಳಲ್ಪಟ್ಟಿತು ಆಂಜನೇಯನು ಇಂದ್ರಜಿತು ಬಿಟ್ಟ ಬ್ರಹ್ಮಾಸ್ತ್ರದಿಂದ ಕಟ್ಟಲ್ಪಟ್ಟಿದ್ದನು ಯಾವಾಗ ಇಂದ್ರಜಿತುವಿನ ಸೈನಿಕರು ಒಂದು ಶಣವಲ್ಕಲಗಳಿಂದ ಆಂಜನೇಯನನ್ನು ಕಟ್ಟಿದರೋ, ಆಗ ಬ್ರಹ್ಮಾಸ್ತ್ರಕ್ಕೆ ಅಪಮರ್ಯಾದೆಯಾಗಿ, ಆದರೆ ಬಂಧವು ಬಿಟ್ಟುಹೋಯಿತೆಂದು ಹೇಳಲ್ಪಟ್ಟಿರುತ್ತದೆ. "**ಸ ಬದ್ಧಸ್ತೇನವಲ್ಕೇನ ವಿಮುಕ್ತೋಽಸ್ತ್ರೇಣ ವೀರ್ಯವಾನ್। ಅಸ್ತ್ರಬಂಧಸ್ಸಚಾನ್ಯಂಹಿನ ಬದ್ಧ ಮನುವರ್ತತೇ**" (ರಾ ಸುಂದರ ೪೮ ೪೯) ಆಂಜನೇಯನು ಶಣಬು ಹಗ್ಗಗಳಿಂದ ಯಾವಾಗ ಕಟ್ಟಲ್ಪಟ್ಟನೋ, ಆಗ ಪರಾಕ್ರಮ ಶಾಲಿಯಾದ ಆಂಜನೇಯನು ಬ್ರಹ್ಮಾಸ್ತ್ರದಿಂದ ಬಿಡಲ್ಪಟ್ಟನು; ಏಕೆಂದರೆ ಬ್ರಹ್ಮಾಸ್ತ್ರ ಬಂಧವು, ಬೇರೆಯಾದ ಇನ್ನಾವ ಬಂಧವನ್ನಾಗಲಿ ಅನುಸರಿಸಿ ಇರುವದಿಲ್ಲವಷ್ಟೇ! ಎಂದರೆ ಇತರ ಬಂಧದ ಜೊತೆಯಲ್ಲಿ ಬ್ರಹ್ಮಾಸ್ತ್ರ ಬಂಧವು ನಿಲ್ಲುವದಿಲ್ಲವೆಂಬ ಭಾವವು ಬ್ರಹ್ಮಾಸ್ತ್ರಕ್ಕೆ ಹೇಗೆ ಇತರ ಬಂಧನೈರಪೇಕ್ಷ್ಯವೋ ಹಾಗೆಯೇ ಪ್ರಪದನಕ್ಕೂ ಎಂಬ ಭಾವವು

ಹಿಂದೆ ಹೇಳಿದ ಪಕ್ಷದ್ವಯದಲ್ಲೂ ಉಂಟಾಗುವ ದೋಷಗಳನ್ನು ಅನುವಾದ ಮಾಡಿ ಹೇಳಿ ಉಪಸಂಹಾರಮಾಡುತ್ತಾರೆ—**ಆಗ್ಯೆಯಾಲ್**-ಈಗ ನಾವು ಉಪಪಾದಿಸಿ ಹೇಳಿದ ರೀತಿಯಲ್ಲಿ ಸ್ವರೂಪತ್ಯಾಗವಿಧಿ ಮತ್ತೂ ಉಪಾಯತ್ವ ಬುದ್ಧಿತ್ಯಾಗ ವಿಧಿ ಇವೆರಡರಲ್ಲೂ, ದೋಷಗಳು ಸ್ಥಾಪಿತವಾದುದರಿಂದ, **ಇಙ್ಗು** - ಈ ಚರಮ ಶ್ಲೋಕದಲ್ಲಿ, **ಸ್ವರೂಪತ್ಯಾಗತ್ತೈ ಅಂಗಮಾಗ ವಿಧಿಕ್ಕಿರದೆನ್ರುಮ್** - ಸಮಸ್ತ ಧರ್ಮಗಳ ಸಂಪೂರ್ಣವಾದ ಸ್ವರೂಪತ್ಯಾಗವು ಪ್ರಪದನಕ್ಕೆ ಅಂಗವಾಗಿ ವಿಧಿಸಿರುತ್ತದೆಂದು **ಅವೈ**-ಆ ಧರ್ಮಗಳು, **ಅಙ್ಗಮಾಮ್ಪಡಿ**-ಆವಶ್ಯಕವಾಗಿ ಅಂಗವಾಗಿ ಅನುಷ್ಠಿಸಲ್ಪಟ್ಟು, **ಬುದ್ಧಿವಿಶೇಷತ್ಯಾಗಮಾತ್ರಂ** - ಉಪಾಯತ್ವ ಬುದ್ಧಿವಿಶೇಷದ ತ್ಯಾಗಮಾತ್ರವನ್ನು ಇದರಿಂದ ಉಪಾಸನಾದಿಗಳು ಅಂಗವಾಗಿ ಅನುಷ್ಠಿಸಲ್ಪಟ್ಟು, ಆ ಅನುಷ್ಠಾನವು ಉಪಾಯ ರೂಪದಲ್ಲಿ ಎಂದು ಭಾವಿಸಿದ ಫಲಕರ್ತೃತ್ವಾದಿಗಳ ತ್ಯಾಗವನ್ನು ವಿಧಿಸಿತು ಎಂದೂ, **ಶೊಲ್ಲುಗಿರ ಪಕ್ಷಂಗಳ್** - ಹೇಳುವ ವಾದಗಳು, (೧) **ಆಜ್ಞಾನುಪಾಲನ ಶಾಸ್ತ್ರಙ್ಗಳುಕ್ಕು**-ಸ್ವರೂಪತ್ಯಾಗ ವಿಧಿಯ ವಾದದಿಂದ ಆಜ್ಞಾ ಕೈಂಕರ್ಯಗಳ ತ್ಯಾಗವು ವಿಧಿಸಲ್ಪಟ್ಟಿದುದರಿಂದ ನಿತ್ಯ ನೈಮಿತ್ತಿಕ ಕರ್ಮಗಳನ್ನು

**ಶಾಸ್ತ್ರಙ್ಗಳುಕ್ಕುಮ್‌, ಪೂರ್ವಾಚಾರ್ಯ ಸಂಪ್ರದಾಯಙ್ಗಳುಕ್ಕುಮ್‌ ಪ್ರಪನ್ನರಾಯ್‌ ಪೋನ್ನ ಪೂರ್ವಶಿಷ್ಟರುಗಳುಡೈಯ ಆಚಾರತ್ತುಕ್ಕುಮ್‌, ವಿರುದ್ಧಙ್ಗಳಾಮ್‌. ಇಪ್ಪಡಿ ಉಕ್ತ ದೋಷಙ್ಗಳಾಲೇ ಧರ್ಮಙ್ಗಳಿನುಡೈಯ ಸ್ವರೂಪತ್ಯಾಗಮುಮ್‌ ಪ್ರಪತ್ತಿಕ್ಕು ಅಂಗಮನ್ರು. ಉಕ್ತ ನೈರಪೇಕ್ಷ್ಯತ್ತಾಲೇ ಅಂದ**

---

**ಅಹರಹಸ್ಸಂಧ್ಯಾ ಮುಪಾಸೀತೇತ್ಯಾದಿ** ಸ್ವಾಮಿಯ ಆಜ್ಞಾನುಸಾರ ನಡೆಸಿಯೇ ತೀರಬೇಕೆಂದು ಹೇಳುವ ಶಾಸ್ತ್ರಗಳಿಗೂ ವಿರುದ್ಧಗಳಾಗುತ್ತವೆ (೨) **ಪ್ರಪತ್ತಿ ನೈರಪೇಕ್ಷ್ಯ ಶೊಲ್ಲುಗಿರ ಶಾಸ್ತ್ರಙ್ಗಳುಕ್ಕುಮ್‌** - ಪ್ರಪತ್ತಿಗೆ ಅಂಗವಾಗಿ ಯಾವ ಧರ್ಮಗಳ ಅನುಷ್ಠಾನವು ಬೇಕಿಲ್ಲವೆಂದು ಹೇಳುವ **"ನಜಾತಿ ಭೇದಂ"** ಇತ್ಯಾದಿ ಪ್ರಪತ್ತಿ ಶಾಸ್ತ್ರಗಳಿಗೂ, ವಿರುದ್ಧವಾಗುತ್ತದೆ; ಇದು ಉಪಾಯತ್ವ ಬುದ್ಧಿತ್ಯಾಗವಾದದಿಂದುಂಟಾಗುತ್ತದೆ (೩) **ಪೂರ್ವಾಚಾರ್ಯಸಂಪ್ರದಾಯಙ್ಗಳುಕ್ಕುಮ್‌**-ಪೂರ್ವಾಚಾರ್ಯರು ಸಂಪ್ರದಾಯರೀತ್ಯಾ ನಡೆಸಿದ ಅನುಷ್ಠಾನಕ್ಕೂ. ವಿರುದ್ಧವಾಗುತ್ತದೆ. ಪೂರ್ವಾಚಾರ್ಯರುಗಳು ನಿತ್ಯ ನೈಮಿತ್ತಿಕಾನುಷ್ಠಾನಗಳನ್ನು ಬಹು ಮಮತೆಯಿಂದ ಅನುಷ್ಠಿಸಿದರೇ ವಿನಾ ಅವುಗಳನ್ನು ಸ್ವರೂಪತಃ ಅಂಗವಾಗಿ ತ್ಯಾಗಮಾಡಲಿಲ್ಲವು; ಮತ್ತು ಅವರುಗಳು ಉಪಾಸನಾದಿಗಳನ್ನು ಅನುಷ್ಠಿಸಿ ಅವುಗಳಲ್ಲಿ ಉಪಾಯತ್ವ ಬುದ್ಧಿಯನ್ನು ತ್ಯಾಗಮಾಡಲಿಲ್ಲವು (೪) **ಪ್ರಪನ್ನರಾಯ್‌ ಪೋನ್ನ** - ಪ್ರಪದನವನ್ನು ಅನುಷ್ಠಿಸಿ ಹೋದ, **ಪೂರ್ವಶಿಷ್ಟರುಗಳುಡೈಯ** - ಶಾಸ್ತ್ರರೀತ್ಯಾ ಅನುಷ್ಠಾನವನ್ನು ಇಟ್ಟುಕೊಂಡು ಮಹಾ ಭಾಗವತೋತ್ತಮರೆನಿಸಿದ ಹಿಂದಿನವರ **ಆಚಾರತ್ತುಕ್ಕುಮ್‌** - ಪ್ರವೃತ್ತಿಗೂ, **ವಿರುದ್ಧಙ್ಗಳಾಮ್‌** - ಇವು ನಾಲ್ಕಕ್ಕೂ ವಿರುದ್ಧಗಳಾಗುತ್ತವೆ **ಇಪ್ಪಡಿ** - ಈ ರೀತಿಯಲ್ಲಿ, **ಉಕ್ತದೋಷಙ್ಗಳಾಲೇ** - ಆಜ್ಞಾಪಾಲನವನ್ನು ಬೋಧಿಸುವ ಶಾಸ್ತ್ರಗಳಿಗೂ ನೈರಪೇಕ್ಷ ಶಾಸ್ತ್ರಾದಿಗಳಿಗೂ, ಪೂರ್ವಾಚಾರ್ಯರು ಮತ್ತು ಅವರನ್ನನುಸರಿಸಿ ನಮಗೆ ಹಿಂದೆ ಅನುಷ್ಠಿಸಿದವರಾದ ಶಿಷ್ಟಾಚಾರ್ಯಕ್ಕೂ ವಿರುದ್ಧವೆಂಬ ಹಿಂದೆ ಹೇಳಲ್ಪಟ್ಟ ದೋಷಗಳಿಂದ **ಧರ್ಮಙ್ಗಳುಡೈಯ ಸ್ವರೂಪತ್ಯಾಗಮುಮ್‌** - ಎಲ್ಲಾ ಧರ್ಮಗಳನ್ನು ಸ್ವರೂಪತಃ ತ್ಯಾಗಮಾಡೋಣವೂ, **ಪ್ರಪತ್ತಿಕ್ಕು ಅಂಗಮನ್ರು** - ಪ್ರಪತ್ತಿಗೆ ಅಂಗವಲ್ಲವು. **ಉಕ್ತನೈರಪೇಕ್ಷ್ಯತ್ತಾಲೇ** - ಪ್ರಪದನಕ್ಕೆ ಇನ್ನು ಯಾವ ಧರ್ಮಗಳೂ ಅಂಗವಾಗಿ ಬೇಕಿಲ್ಲದಿರುವುದರಿಂದ, **ಅನ್ದ ಧರ್ಮಗಳಿನುಡೈಯ ಸ್ವರೂಪಮುಮ್‌** - ಆ ಧರ್ಮಗಳ ಸ್ವರೂಪತಃ ಅನುಷ್ಠಾನವೂ ಸಹ, **ಪ್ರಪತ್ತಿಕ್ಕು ಅಂಗಮನ್ರು** - ಪ್ರಪದನಕ್ಕೆ ಅಂಗವಲ್ಲವು ಹಾಗಾದರೆ ಸರ್ವಧರ್ಮಾನ್‌ ಪರಿತ್ಯಜ್ಯ ಎಂಬಲ್ಲಿ ಯಾವುದರ ತ್ಯಾಗವು ವಿಧಿಸಲ್ಪಟ್ಟಿತೆಂದರೆ ಹೇಳುತ್ತಾರೆ **ಆಗೈಯಾಲ್‌** - ಆ ಕಾರಣದಿಂದ, ಪೂರ್ವಪಕ್ಷಗಳ ಎರಡು ವಿಧವಾದ ಅಭಿಪ್ರಾಯವೂ ಸರಿಯಲ್ಲವಾದುದರಿಂದ, **ಇಙ್ಗ** - ಈ ಸರ್ವಧರ್ಮಾನ್‌ ಪರಿತ್ಯಜ್ಯವೆಂಬಲ್ಲಿ, **ಒರು**

**ಧರ್ಮಂಗಳಿನುಡೈಯ ಸ್ವರೂಪಮುಮ್ ಪ್ರಪತ್ತಿಕ್ಕು ಅಂಗಮನ್ರು. ಆಗೈಯಾಲ್ ಇಙ್ಙುಮುಕ್ತೋರುಧರ್ಮಂಗಳಾಲುಮ್ ಇಪ್ರಪತ್ತಿಕ್ಕು ಆಪೇಕ್ಷೈಯಿಲ್ಲೈಯೆನ್ಗೈಯಿಲೇ ಇತ್ತ್ಯಾಗ ವಿಧಿಕ್ಕು ತಾತ್ಪರ್ಯಮ್.**

**ನೈರಪೇಕ್ಷ ವಿಧಿಸಿದ್ಧಾನ್ತೇ ಪ್ರಸಕ್ತಿಂ ಪ್ರಸಕ್ತಾಂಶ್ಚ ದರ್ಶಯತಿ**

---

**ಇಪ್ಪಡಿ ಪ್ರತಿಷೇಧಕ್ಕೈಕ್ಕು ಪ್ರಸಙ್ಗಮ್ ವೇಣುಮ್. ಇಙ್ಙ ಎನ್ನ ಧರ್ಮಙ್ಗಳ್ ಪ್ರಸಕ್ತಙ್ಗಳಾಯ್ ಪ್ರತಿಷೇಧಿಕ್ಕಪ್ಪಡುಗಿರನವೆನ್ರಿಲ್ ? ವೇದಾನ್ತಚೋದಿತ್ತೈಗಳಾನವಿದ್ಯೈಗಳಿಲ್ ಒರುವಿದ್ಯೈಗಳಿಲೆಯೋದಿ ಅಙ್ಗಙ್ಗಳಾಯ್**

---

**ಧರ್ಮಙ್ಗಳಾಲುಮ್**-ಯಾವ ಧರ್ಮಗಳಿಂದಲೂ, **ಇಪ್ರಪತ್ತಿಕ್ಕು**-ಈ ಪ್ರಪದನಕ್ಕೆ, ಅಪೇಕ್ಷೆ ಇಲ್ಲವು, **ಎನ್ಗೈಯಿಲೆ** - ಎಂದು ಹೇಳುವದರಲ್ಲಿ, ನೈರಪೇಕ್ಷ, **ಇತ್ಯಾಗ ವಿಧಿಕ್ಕತ್ತಾತ್ಪರ್ಯಮ್** - ಈ ತ್ಯಾಗವಿಧಿಗೆ ಅಭಿಪ್ರಾಯವು ಸ್ವರೂಪತ್ಯಾಗವಿಧಿ ಪಕ್ಷದಲ್ಲಿ ಆಜ್ಞಾನುಪಾಲನ ಶಾಸ್ತ್ರಕ್ಕೆ ವಿರೋಧವೂ, ಉಪಾಯತ್ವ ಬುದ್ಧಿತ್ಯಾಗ ವಿಧಿ ಪಕ್ಷದಲ್ಲಿ ನೈರಪೇಕ್ಷ ಶಾಸ್ತ್ರ ವಿರೋಧವೂ, ಉಭಯ ಪಾದದಲ್ಲೂ ಪೂರಾಚಾರ್ಯರುಗಳ ಅನುಷ್ಠಾನಕ್ಕೂ ಅನೇಕ ಶಿಷ್ಟಾಚಾರಕ್ಕೂ, ವಿರೋಧವು. ಉಂಟಾಗುತ್ತದೆಂದು ಉಪದೇಶಿಸಿರುತ್ತಾರೆ ಪ್ರಪದನಕ್ಕೆ ಅಂಗವಾಗಿ ಯಾವುದೂ ಬೇಕಾಗಿಲ್ಲವೆಂಬ ನೈರಪೇಕ್ಷ್ಯವೇ ವಿಧಿಸಿತು ಎಂದು ಭಾವಿಸತಕ್ಕದ್ದೆಂದುಹೇಳಿದರು.

**ನೈರಪೇಕ್ಷ ವಿಧಿಯೇ ಸಿದ್ಧಾನ್ತವಾದರೆ, ಅದಕ್ಕೆ ಪ್ರಸಕ್ತಿಯನ್ನೂ ಪ್ರಸಕ್ತವಾದವುಗಳನ್ನೂ ತಿಳಿಸುತ್ತಾರೆ.**

ಹೀಗೆ ಸ್ವರೂಪತ್ಯಾಗವಿಧಿಯೂ, ಉಪಾಯತ್ವ ಬುದ್ಧಿತ್ಯಾಗವಿಧಿಯೂ ಸರಿಹೋಗುವದಿಲ್ಲವೆಂದು ಹೇಳಿ ಸರ್ವಧರ್ಮಾ್ನ್ ಪರಿತ್ಯಜ್ಯವೆಂಬುದು ವಿಧಿಯಾದರೆ ನೈರಪೇಕ್ಷ ವಿಧಿಯನ್ನೇ ಹೇಳಬೇಕೇ ವಿನಾ ಅನ್ಯಥಾ ಇಲ್ಲವೆಂದು ಹೇಳಿದುದಾಯಿತು ಆದರೆ, ಹಾಗೆ ನೈರಪೇಕ್ಷ್ಯವನ್ನು ವಿಧಿಸುವುದಕ್ಕೆ ಪ್ರಸಕ್ತಿ ಇರಬೇಕು, ಕಾರಣವಿರಬೇಕು. ಹಾಗೆ ನೈರಪೇಕ್ಷ್ಯವು ಹೇಳಲ್ಪಟ್ಟರೆ ಯಾವುಗಳ ನೈರಪೇಕ್ಷ್ಯವು ಹೇಳಲ್ಪಟ್ಟಿತೆಂದು ತಿಳಿಸುವದು ಆವಶ್ಯಕವು. ಯಾವುಗಳು ಇಲ್ಲಿ ಪ್ರಸಕ್ತವಾಗಿ ಯಾವುಗಳು ನಿಷೇಧಿಸಲ್ಪಟ್ಟವೆಂದು ಪ್ರಶ್ನಿಸಿ ಉತ್ತರವನ್ನು ದಯಪಾಲಿಸುತ್ತಾರೆ **"ಇಪ್ಪಡಿ"** ಎಂದಾರಂಭಿಸಿ **ಇಪ್ಪಡಿ** - ಹೀಗೆ ನೈರಪೇಕ್ಷ್ಯ ವಿಧಿಯನ್ನು ಸಿದ್ಧಾಂತಿಸಿ ಹೇಳುವ ಸಂದರ್ಭದಲ್ಲಿ, **ಪ್ರತಿಷೇಧಿಕ್ಕೈಕ್ಕು** - ಧರ್ಮಗಳು ಅಂಗವಾಗಿ ಬೇಡವೆಂದು ನಿಷೇಧಿಸಿ ಹೇಳುವದಕ್ಕೆ, **ಪ್ರಸಙ್ಗಮ್ ವೇಣುಮ್'** - ಸಂದರ್ಭವಿರಬೇಕು ಅಪ್ರಸಕ್ತಗಳಾಗಿರುವ ಧರ್ಮಗಳಾದ ಊಟ ಮಾಡೋಣ ಮುಂತಾದ ಧರ್ಮಗಳ ನಿಷೇಧವನ್ನು ಹೇಳಲು ಕಾರಣವಿಲ್ಲವಷ್ಟೇ ಎಂಬ ಭಾವವು. ಆ ಧರ್ಮಗಳು ಪ್ರಸಕ್ತಗಳಾಗಿರಬೇಕು; ಅವು ಇಲ್ಲಿ ಅಂಗತ್ವೇನ ನಿಷೇಧಿಸಲ್ಪಟ್ಟಿರಬೇಕು ಅಂತವುಗಳು ಯಾವುವೆಂದರೆ ತಿಳಿಸುತ್ತಾರೆ. **ವೇದಾಂತ**

**ತೊತ್ತಿನ ವರ್ಣಾಶ್ರಮ ಧರ್ಮಂಗಳುಮ್, ಗತಿಚಿನ್ತನಾದಿಗಳುಮ್ ವಿದ್ಯಾನ್ತರತ್ತಿಲುಮ್. ವರುಮಾಪ್ಪೋಲೆ, ನ್ಯಾಸವಿದ್ಯೆಯಿಲುಮ್ ಇವೈ ತುಲ್ಯ ನ್ಯಾಯತ್ತಾಲೇ ಅಂಗಂಗಳಾಯ್ ವರಪ್ಪ್ರಾಗ, ಇಪ್ಪಡಿ ಅಂಗತ್ವ ಪ್ರಸಙ್ಗಮುಡೈಯ ಸರ್ವಧರ್ಮಂಗಳಾಲುಮ್ ಇದುಕ್ಕು ಅಪೇಕ್ಷೆಯಿಲ್ಲೈ ಯೆನ್ಗೈ ಇವ್ವಿಡುತ್ತುಕ್ಕು ಉಚಿತಮ್.**

---

**ಚೋದಿತ್ತೈಗಳಾನ** - ಉಪನಿಷತ್ತುಗಳಲ್ಲಿ ಬೋಧಿಸಲ್ಪಟ್ಟಿರುವ, **ವಿದ್ಯೈಗಳಿಲ್** - ಮೂವತ್ತೆರಡು ವಿಧ. ಬ್ರಹ್ಮವಿದ್ಯೆಗಳಲ್ಲಿ, **ಒರು ವಿದ್ಯೈಗಳಿಲೇ** - ಒಂದು ಬ್ರಹ್ಮ ವಿದ್ಯೆಯಲ್ಲಿ, **ಓದಿ** - ವಿಧಿಸಲ್ಪಟ್ಟ, **ಅಙ್ಗಗಳಾಯ್ ತೊತ್ತಿನ** - ಉಪಾಸನಕ್ಕೆ ಅಂಗವಾಗಿ ಹೇಳಲ್ಪಟ್ಟ, **ವರ್ಣಾಶ್ರಮಧರ್ಮಙ್ಗಳುಮ್** - ವರ್ಣಾಶ್ರಮಧರ್ಮಗಳೂ, ಮತ್ತು **ಗತಿಚಿಂತನಾದಿಳಗೂ, ವಿದ್ಯಾನ್ತರತ್ತಿಲುಮ್** - ಬೇರೆ ಬ್ರಹ್ಮವಿದ್ಯೆಗಳಲ್ಲೂ **ವರುಮಾಪ್ಪೋಲೆ** - ಅಙ್ಗಗಳಾಗಿ ಬರುವಹಾಗೆ, **ನ್ಯಾಸವಿದ್ಯೆಯಿಲುಮ್** - ಬಹ್ಮವಿದ್ಯೆಗೆ ತುಲ್ಯವಾದ ಈ ಪ್ರಪದನದಲ್ಲೂ, **ಇವೈ** - ಇವುಗಳು ವರ್ಣಾಶ್ರಮ ಧರ್ಮಗಳು ಗತಿಚಿಂತನ ಮೊದಲಾದವುಗಳೂ, **ತುಲ್ಯ ನ್ಯಾಯತ್ತಾಲ್** - ಬ್ರಹ್ಮವಿದ್ಯೆಗಳೆಲ್ಲಾ ಸಮವೆಂಬ ನ್ಯಾಯದಿಂದ **ವರಪ್ಪ್ರಾಗ**-ಅಂಗತ್ವೇನ ಬರತಕ್ಕದ್ದೆಂದಾದರೆ, ಇಷ್ಟುದೂರ ಪೂರ್ವಪಕ್ಷದ ಅನುವಾದವು, ಹೀಗೆ ವಾದವು ಉಂಟಾದರೆ, ಆಗ **ಇಪ್ಪಡಿ** - ಈಗ ಅನುವಾದ ಮಾಡಿದ ರೀತಿಯಲ್ಲಿ, **ಅಂಗತ್ವ ಪ್ರಸಙ್ಗಮುಡೈಯ** - ಅಂಗವಾಗಿ ಭಾವಿಸಬಹುದಾದ, **ಸರ್ವಧರ್ಮಂಗಳಾಲುಮ್**- ಸಮಸ್ತ ಧರ್ಮಗಳಿಂದಲೂ, ಇದುಕ್ಕು-ಈ ನ್ಯಾಸವಿದ್ಯೆಯಾದ ಪ್ರಪದನಕ್ಕೆ, **ಅಪೇಕ್ಷೆ ಇಲ್ಲೈ ಎನ್ಗೈ**-ಅಪೇಕ್ಷೆ ಇಲ್ಲವು, ಎಂದರೆ ಇವು ಯಾವ ಧರ್ಮಗಳು ಪ್ರಪದನಕ್ಕೆ ಅಂಗವಾಗಿ ಬೇಕಿಲ್ಲವೆಂದು ಹೇಳುವದು, **ಇವ್ವಿಡತ್ತುಕ್ಕು** - ಸರ್ವಧರ್ಮಾನ್ಪರಿತ್ಯಜ್ಯ ಎಂಬುದು ವಿಧಿ ಎಂದು ಭಾವಿಸುವ ಸ್ಥಳದಲ್ಲಿ, **ಉಚಿತಂ** - ಯೋಗ್ಯವಾದುದು, ಎಂದರೆ ಶಾಸ್ತ್ರ ಸಮಂಜಸವಾದುದು. ಪೂರ್ವಪಕ್ಷದ ಅನುವಾದವು ಹೇಗೆಂದರೆ ಪಂಚಾಗ್ನಿ ವಿದ್ಯೆಉಪಕೋಸಲವಿದ್ಯೆ ಇವೇ ಮೊದಲಾದ ಬ್ರಹ್ಮವಿದ್ಯಾಪ್ರಕರಣಗಳಲ್ಲಿ ಅಂಗವಾಗಿ ಹೇಳಲ್ಪಟ್ಟ ವರ್ಣಾಶ್ರಮ ಧರ್ಮಗಳನ್ನು ಹಾಗೆ ಹೇಳಲ್ಪಡದೇ ಇರುವ ಮಿಕ್ಕ ಎಲ್ಲಾ ಬ್ರಹ್ಮ ವಿದ್ಯೆಗಳಲ್ಲೂ ಅಂಗವಾಗಿ ಇಟ್ಟುಕೊಳ್ಳಬೇಕೆಂಬುದು ಹೇಗೆ ವಿಧಿಯೋ, ಹಾಗೆಯೇ ನ್ಯಾಸವಿದ್ಯೆಯು ಸಹ ಬಹ್ಮವಿದ್ಯೆಯೇ ಆಗಿರುವಾಗ ತುಲ್ಯ ನ್ಯಾಯದಪ್ರಕಾರ ಇದಕ್ಕು ಅಙ್ಗವಾಗಿ ವಿಧಿಸಲ್ಪಟ್ಟದೆ ಎಂದು ಭಾವಿಸತಕ್ಕದ್ದಲ್ಲವೇ ಎಂಬುದು ಆಕ್ಷೇಪವು ಇದಕ್ಕೆ ಸಮಾಧಾನವು ಹೇಗೆಂದರೆ, ಸರ್ವಧರ್ಮಾನ್ ಪರಿತ್ಯಜ್ಯ ಎಂಬ ವಿಶೇಷ ವಿಧಿಯಿಂದ ಈ ನ್ಯಾಸವಿದ್ಯೆಗೆ ಯಾವ ಅಂಗದ ಅಪೇಕ್ಷೆಯೂ ಇಲ್ಲದಿರುವದರಿಂದ ನಿತ್ಯನೈಮಿತ್ತಕವೇ ಮೊದಲಾದ ಆಜ್ಞಾನುಜ್ಞಾ ಕೈಂಕರ್ಯಗಳು ಯಾವುವೂ ಅಂಗವಾಗಿ ವಿಧಿಸಲ್ಪಡದೇ ಇರುವದರಿಂದ, ಅವುಗಳ

ನೈರಪೇಕ್ಷವು ವಿಧಿಸಲ್ಪಟ್ಟಿತು ಎಂಬುದೇ ಶಾಸ್ತ್ರಸಮ್ಮತವಾದ ಅಭಿಪ್ರಾಯವು. ಇತರ ಬ್ರಹ್ಮವಿದ್ಯೆಗಳಲ್ಲಿ ಹೇಳದಿದ್ದರೂ ಇವುಗಳನ್ನು ಅಂಗವಾಗಿ ಭಾವಿಸತಕ್ಕದ್ದಾದರೂ ಈ ಬ್ರಹ್ಮವಿದ್ಯೆಯಾದ ಪ್ರಪದನದಲ್ಲಿ ಮಾತ್ರ ವರ್ಣಾಶ್ರಮಧರ್ಮಗಳನ್ನು ಅಂಗವಾಗಿ ಭಾವಿಸತಕ್ಕದ್ದಲ್ಲವು ಎಂದು **"ಸರ್ವಧರ್ಮಾನ್ ಪರಿತ್ಯಜ್ಯ"** ಎಂಬ ವಿಧಿಯು ಇತರ ಅಂಗನೈರಪೇಕ್ಷ್ಯೆಯನ್ನು ಬೋಧಿಸಿತು ಎಂಬುದು ಸಮಾಧಾನವು. ಯಾವಾಗ ಪ್ರಪದನಾನುಷ್ಠಾನಕ್ಕೆ ನಿತ್ಯನೈಮಿತ್ತಿಕಗಳು ಅಂಗವಲ್ಲವೆಂದು ಹೇಳಲ್ಪಟ್ಟಿತೋ, ಆಗ ನಿತ್ಯನೈಮಿತ್ತಿಕಗಳನ್ನು ಪ್ರಪನ್ನನು ಅನುಷ್ಠಿಸತಕ್ಕದ್ದೇ ಅಥವಾ ತ್ಯಜಿಸಬಹುದೇ ಎಂಬ ಸಂದರ್ಭದಲ್ಲಿ ಆವಶ್ಯಕವಾಗಿ ಬೇರೆ ವಿಧಿಗಳಿಂದ ಅನುಷ್ಠೇಯುವೆಂದು **"ಇದ್ದ ವರ್ಣಙ್ಗಳುಕ್ಕು"** ಎಂದಾರಂಭಿಸಿ ಉಪದೇಶಿಸುತ್ತಾರೆ **ವಿಹಿತತ್ವಾಚ್ಚಾಶ್ರಮಕರ್ಮಾಪಿ** (ಬ್ರ ಸೂ. ೩ ೪ ೩೨) ಎಂಬಲ್ಲಿ ಆಶ್ರಮಕರ್ಮಗಳು ಆವಶ್ಯಕವಾಗಿ ಅನುಷ್ಠೇಯಗಳು ಎಂದು ಹೇಳಲ್ಪಟ್ಟಿರುವದೇನೋ ನ್ಯಾಯವು ಹಾಗೆಯೇ **"ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ, ಯಜ್ಞೇನ ದಾನೇನ ತಪಸಾನಾಶಕೇನ" "ವರ್ಣಾಶ್ರಮಾ ಚಾರವತಾ ಪುರುಷೇಣ ಪರಃ ಪುಮಾನ್। ವಿಷ್ಣುರಾರಾಧ್ಯತೇ ಪನ್ಥಾನಾನ್ಯತ್ತತ್ತೋಷಕಾರಕಃ॥"** ವಿ ಪು ೩ ೮.೯ **"ಸಹಕಾರಿತ್ವೇ ನ ಚ"** (ಬ್ರ ಸೂ ೩ ೮ ೩೩) **"ಅಗ್ನಿಹೋತ್ರಾದಿತು ತತ್ಕಾರ್ಯಾಯೈವ ತದ್ದರ್ಶನಾತ್"** (ಬ್ರ ಸೂ ೪ ೧ ೧೬) ಇವೇ ಮೊದಲಾದ ಪ್ರಮಾಣಗಳು ಉಪಾಸನಕ್ಕೆ ವರ್ಣಾಶ್ರಮಾದಿ ಧರ್ಮಗಳು ಅಂಗವೆಂದು ಹೇಳುತ್ತವೆ ಇವೆಲ್ಲಾ ಭಕ್ತಿಯೋಗನಿಷ್ಠನಾದ ಉಪಾಸಕನ ವಿಷಯವಾದುದರಿಂದ ಪ್ರಪದನಾನುಷ್ಠಾನವನ್ನು ಮಾಡಿದವನು ಅವುಗಳನ್ನು ಅನುಷ್ಠಿಸಬೇಕೇ? ಎಂಬ ಸಂದರ್ಭದಲ್ಲಿ ಹೇಳುತ್ತಾರೇನೆಂದರೆ—**"ಅಹರಹಸ್ಸಂಧ್ಯಾಮುಪಾಸೀತ", "ತದುಹವಾ ಏತೇ ಬ್ರಹ್ಮವಾದಿನಃ ಪೂರ್ವಾಭಿಮುಖಾಸ್ಸಂಧ್ಯಾಯಾಂ ಗಾಯತ್ರ್ಯಾಭಿಮನ್ತ್ರಾ ಅಪಊರ್ಧ್ವಂ ವಿಕ್ಷಿಪನ್ತಿ" "ಸಂಧ್ಯಾಹೀನೋಽಶುಚಿರ್ನಿತ್ಯ ಮನರ್ಹಸ್ಸರ್ವಕರ್ಮಸು"** ಇತ್ಯಾದಿ ಪ್ರಮಾಣಗಳಿರುವುದರಿಂದ, ಪ್ರಪದನಕ್ಕೆ ಅಂಗತ್ವೇನ ಬೇಕಾಗಿಲ್ಲದ್ದರೂ, ಅವುಗಳ ಅವಶ್ಯಾನುಷ್ಠಾನವು ವಿಧಿಸಲ್ಪಟ್ಟಿರುತ್ತದೆಂದು ಉಪದೇಶಿಸುತ್ತಾರೆ:

### ಹೀಗೆ ನೈರಪೇಕ್ಷ್ಯವು ವಿಧಿಸಲ್ಪಟ್ಟರೆ ಪ್ರಪನ್ನರಿಗೆ ವರ್ಣಾಶ್ರಮ ಧರ್ಮಾನುಷ್ಠಾನವು ಹೇಗೆ ಸಂಭವಿಸುತ್ತದೆ?

ಪ್ರಪದನಾನುಷ್ಠಾನ ಮಾಡಿದವನಿಗೆ ನಿತ್ಯನೈಮಿತ್ತಿಕಗಳ ಅನುಷ್ಠಾನದ ಆವಶ್ಯಕವಿಲ್ಲವೆಂದು ಹೇಳಲು ಯಾರಿಗೂ ಪ್ರಮಾಣದ ಸಹಾಯವಿಲ್ಲವೆಂದು ತಿಳಿಸುತ್ತಾರೆ —**ಇದ್ದ ವರ್ಣಙ್ಗಳುಕ್ಕು** - ಈ ವರ್ಣಾಶ್ರಮ ಧರ್ಮಗಳಿಗೆ (೧) **ಸಹಕಾರಿತ್ವೇನ ಚ" - "ತಮೇತಂ ವೇದಾನುವಚನೇನ"** (ಬೃ ೬ ೪ ೨೨) ಇತ್ಯಾದಿ ಶ್ರುತಿಯಿಂದ ಬ್ರಹ್ಮವಿದ್ಯೆಯಾದ ಉಪಾಸನಕ್ಕೆ ಸಹಕಾರಿಯಾಗಿ ಎಂದರೆ ಅಂಗವಾಗಿ ಭಕ್ತಿಯೋಗೋತ್ಪಾದಕವಾಗಿ ಈ ಕರ್ಮಗಳನ್ನು ಅನುಷ್ಠಿಸತಕ್ಕದ್ದು" **ಎಙ್ಗಿರ**

**ನೈರಪೇಕ್ಷ್ಯ ವಿಧೌ ಪ್ರಪನ್ನಾನಾಂ ವರ್ಣಾಶ್ರಮ ಧರ್ಮಾನುಷ್ಠಾನಮ್ ಕಥಂ ಸಂಗಚ್ಛತೇ ?**

**ಇದ್ಧರ್ಮಙ್ಗಳುಕ್ಕು (೧) " ಸಹಕಾರಿತ್ವೇನ ಚ " ಎಙ್ಗಿರ ಸೂತ್ರತ್ತಿ ಲ್ಶೊನ್ನವಿದ್ಯಾ ಸಹಕಾರಿತ್ವವೇಷಮ್ ತವಿರ್ನ್ದಾಲುಮ್ (೨) " ವಿಹಿತತ್ವಾ ಚಾಶ್ರಮ ಕರ್ಮಾಪಿ " ಎನ್ರು ಸೂತ್ರಾನ್ತರತ್ತಿಲ್ಶೊನ್ನ ವಿನಿಯೋಗಾನ್ತ ರತ್ತುಕ್ಕು ಪ್ರಪನ್ನರ್ ಪಕ್ಕಲ್ ನಿವಾರಕರಿಲ್ಲೈ.**

---

**ಸೂತ್ರತ್ತಿಲ್, ಚೊನ್ನ**-ಎಂಬ ಸೂತ್ರದಲ್ಲಿ ಹೇಳಿರುವ **ವಿದ್ಯಾ ಸಹಕಾರಿತ್ವವೇಷಂ ತವಿರ್ನ್ದಾಲುಮ್ "** ಬ್ರಹ್ಮವಿದ್ಯೆಗೆ ಅಂಗವಾಗಿರುವ ಭಾವವು ತಪ್ಪಿದರೂ ಎಂದರೆ ಇಲ್ಲದಿದ್ದರೂ, **" ವಿಹಿತತ್ವಾಚ್ಚಾಶ್ರಮ ಕರ್ಮಾಪಿ"—" ಸಹಕಾರಿತ್ವೇನಚ"** ಎಂಬುದರ ಹಿಂದಿನ ಸೂತ್ರವಾದ ಇದರಲ್ಲಿ ಬ್ರಹ್ಮವಿದ್ಯಾನಿಷ್ಠನಲ್ಲದ ಕೇವಲಾಶ್ರಮಿಗೂ ಕೂಡ ಇವುಗಳು ಅಂಗವಾಗಿ ವಿಧಿಸಲ್ಪಟ್ಟಿರುತ್ತದೆ" **ಎನ್ರು** - ಎಂಬುದಾಗಿ **ಸೂತ್ರಾಂತರತ್ತಿಲೇ** - ಬೇರೇ ಸೂತ್ರದಲ್ಲಿ, **ಚೊನ್ನ**-ಹೇಳಲ್ಪಟ್ಟು, **ವಿನಿಯೋಗಾಂತರತ್ತುಕ್ಕು**- ಬೇರೆ ವಿಧವಾಗಿ ವಿಧಿಸಲ್ಪಟ್ಟು ಆ ಕಾರಣದಿಂದ ಉಪಯುಕ್ತವಾಗುವದಕ್ಕೆ, **ಪ್ರಪನ್ನಪಕ್ಕಲ್** - ಪ್ರಪದನವನ್ನು ಅನುಷ್ಠಿಸಿದವನ ಸಂದರ್ಭದಲ್ಲಿ **ನಿವಾರಕರಿಲ್ಲೈ**- ಅನುಷ್ಠಾನವನ್ನು ತಪ್ಪಿಸುವರಿಲ್ಲವು. ವಿಹಿತ ಕರ್ಮಾನುಷ್ಠಾನವು ಬೇರೆ ವಿಧಿ ಪ್ರಾಪ್ತವಾಗಿ ಬಂದಿರುವದರಿಂದ ಅದನ್ನು ತಪ್ಪಿಸಲು ಯಾರಿಗೂ ಶಕ್ತಿಯಿಲ್ಲವು. ಅಂತಹ ವಿಹಿತ ಕರ್ಮಗಳನ್ನು ತ್ಯಾಗಮಾಡಬಹುದೆಂಬ ಹೇಳಿಕೆಯು ಅಶಾಸ್ತ್ರೀಯವಾದುದೆಂಬ ಭಾವವು **" ವಿಹಿತತ್ವಾಚ್ಚಾಶ್ರಮ ಕರ್ಮಾಪಿ "** ಎಂಬ ಬ್ರಹ್ಮಸೂತ್ರದ ಅಭಿಪ್ರಾಯವೇನೆಂದರೆ — ಬ್ರಹ್ಮವಿದ್ಯೆಗೆ ಅಙ್ಗಗಳಾದ ಯಜ್ಞಾದಿ ಕರ್ಮಗಳು, ಬ್ರಹ್ಮವಿದ್ಯಾನಿಷ್ಠರಲ್ಲದ ಕೇವಲಾಶ್ರಮಿಗಳಿಗೆ ಆವಶ್ಯಕವೇ ಇಲ್ಲವೇ ಎಂಬ ಸಂದರ್ಭದಲ್ಲಿ, ಮುಕ್ತಿಫಲಸಾಧನಕ್ಕೂ- ಕೇವಲ ಸ್ವರ್ಗಾದಿ ಸಾಧನತ್ವಕ್ಕೂ ಉಪಯುಕ್ತವೆಂಬುದು ವಿರುದ್ಧವಾಗುವದರಿಂದ, ಕೇವಲಾಶ್ರಮಿಗಳಿಗೆ ಯಜ್ಞಾದಿ ಕರ್ಮಗಳು ಆವಶ್ಯಕವಿಲ್ಲವೆಂಬ ಪೂರ್ವಪಕ್ಷ ಬಂದರೆ, ಈ ಸೂತ್ರವು ಅದನ್ನು ನಿರಸನ ಮಾಡುತ್ತದೆ **" ಯಾವಜ್ಜೀವಂ ಅಗ್ನಿಹೋತ್ರಂ ಜುಹುಯಾತ್ "** ಇತ್ಯಾದಿಗಳಿಂದ ಕೇವಲಾಶ್ರಮಿಗಳಿಗೆ ಯಾವಜ್ಜೀವವೂ ವಿಧಿಸಿರುವುದರಿಂದ, ಈ ಅಗ್ನಿಹೊತ್ರಾದಿಗಳು ಆಶ್ರಮ ಕರ್ಮಗಳೂ ಸಹ ಆಗಿವೆ. ನಿತ್ಯವಾದ ಅನಿತ್ಯವಾದ ಫಲಗಳ ಸಾಧನವು ಪರಸ್ಪರ ವಿರುದ್ಧವಾದುವು ಇವೆರಡೂ ಹೇಗೆ ಕೂಡುತ್ತವೆ ? ಎಂದರೆ ವಿಧಿಭೇದದಿಂದ ಕೂಡುತ್ತವೆ ಅನಿತ್ಯ ಫಲಹೊಂದುವ ಕೇವಲಾಶ್ರಮಿಗೆ **" ಯಾವಜ್ಜೀವಂ ಅಗ್ನಿಹೋತ್ರಂ ಜುಹುಯಾತ್ "** ಎಂದು ಹೇಳಲ್ಪಟ್ಟಿತು ನಿತ್ಯಫಲಹೊಂದುವ ಭಕ್ತಿಯೋಗ ನಿಷ್ಠನಿಗೆ **" ತಮೇತಂ ವೇದಾನುವಚನೇನ**

---

(೧) ಶಾ. ಸೂ ೩. ೪. ೩೩. (೨) ಶಾ. ಸೂ. ೩. ೪. ೩೨.

**ಆಗೈಯಾಲ್, ಇದ್ಧರ್ಮಙ್ಗಳಿನುಡೈಯ ಅನುಷ್ಠಾನಮುಮ್, ಧರ್ಮಂಗಳೈ ತ್ಯಜಿಕ್ಕೈಯುಮ್ ಪ್ರಪತ್ತಿಕ್ಕು ಅಂಗಮಲ್ಲಾಮೈಯಾಲ್, ಅಶಕ್ಯಙ್ಗಳಿಲ್ ನೈರಾಶ್ಯಂ, ಅಧಿಕಾರತ್ತಿಲೇ ಶೊರುಗಂ, ಶಕ್ಯಮಾನ ನಿತ್ಯನೈಮಿತ್ತಿಕಂಗಳುಡೈಯ ಅನುಷ್ಠಾನಂ, ಆಜ್ಞಾನುಪಾಲನಮಾನ ಕೈಙ್ಕರ್ಯಮಾತ್ರಮಾಂ.**

---

**ಬ್ರಾಹ್ಮಣಾವಿವದಿಷನ್ತಿ ಯಜ್ಞೇನ ದಾನೇನ ತಪಸಾऽನಾಶಕೇನ"** ಎಂದು ವಿಧಿಸಿರುತ್ತದೆ. ಆದುದರಿಂದ ಏನೊಂದು ವಿರೋಧವಿಲ್ಲವು ಯಜ್ಞಾದಿ ಕರ್ಮಗಳನ್ನು ಕೇವಲಾಶ್ರಮಿಗಳೂ ಸಹ ಆವಶ್ಯಕವಾಗಿ ಅನುಷ್ಠಿಸತಕ್ಕದ್ದೇ, ಎಂಬುದು ಈ ಸೂತ್ರಾಭಿಪ್ರಾಯವು

ಮೇಲೆ ಉಗಪಾಸಿದ ಅಭಿಪ್ರಾಯವನ್ನೇ ಸಮರ್ಥನಮಾಡ ಹೇಳುತ್ತಾರೆ.—

**ಆಗೈಯಾಲ್** - ಸ್ವವರ್ಣಾಶ್ರಮ ವಿಹಿತಗಳಾದ ನಿತ್ಯನೈಮಿತ್ತಿಕ ಕರ್ಮಗಳು ಅವಶ್ಯಾನುಷ್ಠೇಯಗಳಾಗಿ ಪ್ರಪನ್ನಾ ಪ್ರಪನ್ನ ಭೇದವಿಲ್ಲದೆ ಎಲ್ಲರೂ ಅನುಷ್ಠಿಸತಕ್ಕದ್ದಾದುದರಿಂದ, **ಇದ್ಧರ್ಮಂಗಳಿನುಡೈಯ ಅನುಷ್ಠಾನಮುಮ್** - ಈ ನಿತ್ಯ ನೈಮಿತ್ತಿಕ ಧರ್ಮಗಳ ಅನುಷ್ಠಾನವಾಗಲಿ, **ಧರ್ಮಙ್ಗಳೈ ತ್ಯಜಿಕ್ಕೈಯುಮ್** - ಅವುಗಳ ತ್ಯಾಗವಾಗಲಿ, ಪ್ರಪತ್ತಿಗೆ **ಅಂಗಮಲ್ಲಾಮೈಯಾಲ್** - ಅಂಗವಲ್ಲದುದರಿಂದ, **ಅಶಕ್ಯಙ್ಗಳಿಲ್ ನೈರಾಶ್ಯಮ್** - ತನಗೆ ಸಾಧ್ಯವಲ್ಲದ ಕರ್ಮಯೋಗಾದಿಗಳಿಂದ ಕೂಡಿದ ಭಕ್ತಿಯೋಗದ ನೈರಪೇಕ್ಷ್ಯವು, **ಅಧಿಕಾರತ್ತಿಲೇ ಶೊರುಗುಮ್**-ಅಶಕ್ತತೆಯಿಂದುಂಟಾಗುವ ಆಕಿಂಚನ್ಯದ ಮೂಲಕಪ್ರವರ್ತನದ ಅಧಿಕಾರದಲ್ಲಿ ಸಂಬಂಧವನ್ನುಂಟುಮಾಡುತ್ತದೆ ಮತ್ತು **ಶಕ್ಯಮಾನ**-ತನಗೆ ಸಾಧ್ಯವಾಗಿರುವ **ನಿತ್ಯನೈಮಿತ್ತಿಕಗಳ ಅನುಷ್ಠಾನವು, ಆಜ್ಞಾನುಪಾಲನಮಾನ- "ಅಹರಹಸ್ಸಂಧ್ಯಾಮುಪಾಸೀತ"** ಇತ್ಯಾದಿ ಪ್ರತ್ಯೇಕ ವಿಧಿಪ್ರಾಪ್ತವಾಗಿ, ಭಗವದಾಜ್ಞಾನುಪಾಲನರೂಪವಾದ, **ಕೈಙ್ಕರ್ಯಮಾತ್ರಮಾಮ್** - ಕೈಙ್ಕರ್ಯಮಾತ್ರವಾಗುತ್ತದೆ. ಇಲ್ಲಿ ಮಾತ್ರ ಶಬ್ದವು ಏತಕ್ಕೆಂದರೆ ಉಪಾಸಕನ ವಿಷಯದಲ್ಲಿ ನಿತ್ಯನೈಮಿತ್ತಿಕಗಳ ಅನುಷ್ಠಾನವು ಅಂಗವಾಗಿಯೂ ಭಗವತ್ಕೈಂಕರ್ಯವೂ ಎರಡೂ ಆಗುತ್ತದೆ ಪ್ರಪತ್ತಿಯನ್ನು ಅನುಷ್ಠಿಸಿದವನ ವಿಷಯದಲ್ಲಿ ಕೈಂಕರ್ಯಮಾತ್ರವಾಗುತ್ತದೆಂಬ ಭಾವವು ಅಶಕ್ಯವಾದ ಕರ್ಮಯೋಗ ಭಕ್ತಿಯೋಗಾದಿಗಳ ನೈರಾಶ್ಯವನ್ನೇ ಶ್ರೀ ಯಾಮುನ ಮುನಿಗಳು, **ನ ಧರ್ಮನಿಷ್ಠೋಽಸ್ಮಿ ನ ಚಾತ್ಮವೇದೀನ ಭಕ್ತಿಮಾ೯ ತ್ವಚ್ಚರಣಾರವಿಂದೇ"** ಎಂಬುದರಿಂದ ತಿಳಿಸಿ, ಆದುದರಿಂದಲೇ ತಮಗೆ ಆಕಿಂಚನ್ಯರೂಪವಾದ ಅಧಿಕಾರವು ಪ್ರಾಪ್ತವಾಯಿತೆಂದು **"ಅಕಿಂಚನೋऽನನ್ಯಗತಿಃ"** ಎಂದು ಉತ್ತರಾರ್ಧದಲ್ಲಿ ಹೇಳಿಕೊಂಡರು. ಇದರಿಂದ **"ಅಧಿಕಾರತ್ತಿಲೇ ಶೊರಗುಮ್"** ಎಂಬುದು ನಿದರ್ಶಿಸಲ್ಪಟ್ಟಿತು. ಪ್ರಪತ್ತಿಗೆ ಯಾವ ಧರ್ಮಗಳೂ ಅಂಗವಲ್ಲವೆಂಬ ಅಭಿಪ್ರಾಯವನ್ನು **ಧರ್ಮಂಗಳುಡೈಯ ಅನುಷ್ಠಾನಮುಮ್ ಧರ್ಮಂಗಳೈತ್ಯಜಿಕ್ಕೈಯುಮ್ ಅಂಗಮ**

**ಮುಲ್ಲಾಮೈಯಾಲೇ** ಎಂದು ಉಪದೇಶಿಸಿರುತ್ತಾರೆ. ಈ ಅಭಿಪ್ರಾಯದೇ ಈ ಮುಂದಿನ ಶ್ಲೋಕದಲ್ಲಿ ಉಪಪಾದಿತವು

**" ಭಾವಾಭಾವೌ ನಧರ್ಮಾಣಾಂ ಪ್ರಪತ್ತೇ ರಂಗಮಿಷ್ಯತೇ ।**
**ಸ್ವತಂತ್ರ ಶಿಷ್ಟ್ಯಾ ಶಕ್ಯೇಹಾ ಶೇಷಭಾವೋಧಿಕಾರಗಃ "**

ಈ ಶ್ಲೋಕ ತಾತ್ಪರ್ಯವೇನೆಂದರೆ, ಧರ್ಮಗಳ ಇರುವಿಕೆಯಾಗಲಿ ಇಲ್ಲದಿರುವದಾಗಲಿ, ಎಂದರೆ ಅವುಗಳ ಅನುಷ್ಠಾನವಾಗಲಿ ಅನುಷ್ಠಾನವಿಲ್ಲದಿರುವದಾಗಲಿ ಪ್ರಪತ್ತಿಗೆ ಅಂಗವಾಗಿರಬೇಕೆಂಬ ಅಪೇಕ್ಷೆಯಿಲ್ಲವು ಇದರಿಂದ ಭಕ್ತಿಯೋಗದ ನೈರಪೇಕ್ಷ್ಯವು ಬೋಧಿತವು ಹಾಗಾದರೆ ಶಕ್ಯಗಳಾದ ನಿತ್ಯನೈಮಿತ್ತಿಕಗಳ ಆವಶ್ಯಕತೆ ಇಲ್ಲವೋ ? ಎಂದರೆ, ಸ್ವತಂತ್ರ ವಿಧಿಯಿಂದ ಈ ಶಕ್ಯಗಳಾದ ನಿತ್ಯನೈಮಿತ್ತಿಕಗಳನ್ನು ಅನುಷ್ಠಿಸತಕ್ಕದ್ದು ಹೀಗೆ ಯಾವ ಧರ್ಮಗಳೂ ಪ್ರಪತ್ತಿಗೆ ಅಂಗವಲ್ಲದುದರಿಂದ ಅಶಕ್ಯಗಳಾದುವುಗಳ ನೈರಾಶ್ಯದಿಂದ ಪ್ರಪದನಕ್ಕೆ ಅಂಗವಾದ ಆಂಕಿಚನ್ಯವು ಏರ್ಪಡುತ್ತದೆ, ಎಂಬುದು

ಆಗಲಿ, ಪ್ರಪದನಕ್ಕೆ ಆನುಕೂಲ್ಯ ಸಂಕಲ್ಪವು ಒಂದು ಅಂಗವಾದನಂತರ, ನಿತ್ಯನೈಮಿತ್ತಿಕಗಳ ಅನುಷ್ಠಾನವು ಶಾಸ್ತ್ರವಿಹಿತವಾಗಿ, ಶಾಸ್ತ್ರಾನುಗುಣವಾಗಿ ನಡೆಯೋಣವು ಆನುಕೂಲ್ಯ ಸಂಕಲ್ಪಕ್ಕೆ ಸೇರಿದುದಾದರಿಂದ, ಅವುಗಳ ಅನುಷ್ಠಾನವೂ, ಅಂಗವಾಗಿ ಏರ್ಪಡುವುದಿಲ್ಲವೋ ? ಸ್ವತಂತ್ರವಿಧಿಯಿಂದ ಮಾತ್ರ ಪ್ರಯುಕ್ತವಾದುವೆಂದು ಹೇಗೆ ಹೇಳುವಿರಿ ? ಎಂಬ ಪೂರ್ವಪಕ್ಷಕ್ಕೆ ಸಮಾಧಾನವನ್ನು ಮುಂದಿನ ಕಾರಿಕೆಯ ಮೂಲಕ ತಿಳಿಸುತ್ತಾರೆ. ಈ ಪೂರ್ವಪಕ್ಷಕ್ಕೆ ಸಿದ್ಧಾಂತಿಸಿ ಹೇಳುವದು ಆವಶ್ಯಕವಾದುದರಿಂದ ಕಾರಿಕೆಯು ಎಂದು ಭಾವಿಸತಕ್ಕದ್ದು

**ವರ್ಣಾಶ್ರಮಧರ್ಮಗಳೂ ಕೂಡ ಶಾಸ್ತ್ರಗಳಲ್ಲಿ ವಿಹಿತವಾದುವುಗಳಾಗಿ ಆನುಕೂಲ್ಯಸಂಕಲ್ಪದಲ್ಲೇ ಸೇರಿದವಾದುದರಿಂದ ಅವುಗಳೂ ಪ್ರಪತ್ತಿಗೆ ಅಂಗವೆಂಬ ವಾದದ ನಿರಸನವು.**

ಆನುಕೂಲ್ಯಸಂಕಲ್ಪ ಮಾತ್ರವೇ ಅಂಗವು ಶಾಸ್ತ್ರಬೋಧಿತಮಾರ್ಗದಲ್ಲಿ ನಡೆಯುವನೆಂಬ ಸಂಕಲ್ಪಮಾತ್ರವೇ ಅಂಗವೇ ವಿನಾ, ಮುಂದೆ ಆ ಸಂಕಲ್ಪಾನುಗುಣವಾಗಿ ಮಾಡಬೇಕಾದ ಅನುಷ್ಠಾನವು ಅಂಗವಲ್ಲವು ಆದುದರಿಂದ ಭಗವದಾಜ್ಞೆಯಪ್ರಕಾರ ನಡೆಯತಕ್ಕದ್ದು ಆವಶ್ಯಕವಾದುದರಿಂದ, ಅಂತವುಗಳ ಅನುಷ್ಠಾನವು ಅಂಗವಾಗುವುದಿಲ್ಲವೆಂದು ಈ ಶ್ಲೋಕಗಲ್ಲಿ ಸಿದ್ಧಾಂತಿಸಿ ಹೇಳುತ್ತಾರೆ —

**ಅರ್ಥವು—ಸಂಕಲ್ಪಮಾತ್ರಮೇವಾಂಗಂಶ್ರುತಮ್**-ಶಾಸ್ತ್ರಗಳಲ್ಲಿ ಹೇಳಿರುವದಕ್ಕನುಗಣವಾಗಿ ನಡೆಯುತ್ತೇನೆಂಬ ಸಙ್ಕಲ್ಪಮಾತ್ರವೇ ಪ್ರಪದನಕ್ಕೆಅಙ್ಗವಾಗಿ ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುತ್ತದೆ **ಮಾತ್ರಮೇವ** - ಎಂಬೀ ಎರಡು ಪದಗಳಿಂದ ಪ್ರಯತ್ನ ಅನುಷ್ಠಾನಾದಿಗಳು ಯಾವುವೂ ಅಲ್ಲವೆಂಬುದು ದ್ಯೋತಿತವಾದರೂ, **ಅದನ್ನೇ ಮುಂದೆ ವ್ಯಕ್ತಪಡಿಸುತ್ತಾರೆ.— ಆಚರಣಂ ಪುನಃ**-ಅವುಗಳ ಅನುಷ್ಠಾನ

## ವರ್ಣಾಶ್ರಮ ಧರ್ಮಾಣಾಮಪಿ, ವಿಹಿತತ್ವಾತ್ ಆನುಕೂಲ್ಯಸಙ್ಕಲ್ಪೇ ಅಂತರ್ಗತತ್ವಾಚ್ಚ ಪ್ರಪತ್ತೇಃ ರಂಗತ್ವಮಿತಿ ವಾದಸ್ಯ ನಿರಾಸಃ

---

**ಸಙ್ಕಲ್ಪಮಾತ್ರಮೇವಾಂಗಂ ಶ್ರುತ ಮಾಚರಣಂ ಪುನಃ ।**
**ಅನಂಗ ಮಾಜ್ಞಯಾ ಪ್ರಾಪ್ತಂ ನ ಸಂಕಲ್ಪ ನಿಬಂಧನಮ್ ॥೧೨೧॥**

---

ಪಾದರೋ **ಅನಂಗಮ್ ಶ್ರುತಮ್** - ಪ್ರಪದನಕ್ಕೆ ಅಙ್ಗವಲ್ಲವೆಂದೂ, ಹೇಳಲ್ಪಟ್ಟಿತು **ಆಜ್ಞಯಾಪ್ರಾಪ್ತಮ್**-ಸ್ವತಂತ್ರಾಜ್ಞೆಯಿಂದುಂಟಾದುದರ ಅನುಷ್ಠಾನವು **ನಸಙ್ಕಲನಿಬಂಧನಮ್** - ಆನುಕೂಲ್ಯ ಸಙ್ಕಲ್ಪಕ್ಕೆ ಸೇರಿದುದಲ್ಲವು ಅನುಷ್ಠಾನ ಸಂಕಲ್ಪಮಾತ್ರವೇ ಅಂಗವೇ ವಿನಾ, ಅನುಷ್ಠಾನವಲ್ಲವು ಹೇಗೆಂದರೆ ಉಪನಯನಕ್ಕೆ ಅಂಗವಾಗಿ ಆಚಾರ್ಯನಾದ ಪಿತಾ, ಕರ್ಮಕುರು, ಮಾಸುಷುಪ್ತಾಃ, ಬಿಕ್ಷಾಚರ್ಯಂಚರ, ಆಚಾರ್ಯಾಧೀನೋ ಭವ, ವಟುವನ್ನು ಕುರಿತು ಆಜ್ಞಾಪಿಸಿದರೆ, ಆತನು ಬಾಢಂ ಎಂದು ಸಙ್ಕಲ್ಪಿಸಿ ಹೇಳುವದು ಮಾತ್ರವೇ ಹೇಗೆ ಅಂಗವೋ ಹಾಗೆಯೇ ಇಲ್ಲಿಯೂ ಎಂದು ಭಾವಿಸತಕ್ಕದ್ದಾಗಿರುತ್ತದೆ ಅನುಷ್ಠಾನಗಳೆಲ್ಲಾ ಉತ್ತರಕಾಲೀನವಾದುವು ಹಾಗೆಯೇ ವಿವಾಹದಲ್ಲೂ ಕನ್ಯಾಪಿತೃವು **"ಕನ್ಯಾಂ ಸಾಲಂಕೃತಾಂ ಸಾಧ್ವೀಂ ಸುಶೀಲಾಯ ಸುಧೀಮತೇ । ಪ್ರಯತೋಹಂ ಪ್ರಯಚ್ಛಾಮಿ ಧರ್ಮಕಾಮಾರ್ಥ ಸಿದ್ಧಯೇ ॥ ಲಕ್ಷ್ಮೀರೂಪಾಮಿಮಾಂಕನ್ಯಾಮ್ ತುಭ್ಯಂ ಶ್ರೀಧರರೂಪಿಣೇ ॥** ಎಂದು ಹೇಳಿ ತನ್ನ ಅಳಿಯಂದಿರನ್ನು ಕುರಿತು— **"ಧರ್ಮೇಚಾರ್ಥೇಚ ಕಾಮೇಚ ಭವಾನ್ನಾಚರೇದಿಮಾಮ್"** ಪ್ರತಿಜ್ಞೆ ಮಾಡಿಸಲು, ಅಳಿಯನು ನಾತಿಚರಾಮಿ ಎಂದು ಸಂಕಲ್ಪಪೂರ್ವಕ ಪ್ರತಿಜ್ಞೆ ಮಾಡುವದನ್ನು ಇದಕ್ಕೆ ನಿದರ್ಶನವಾಗಿ ಭಾವಿಸಬಹುದು

ಹೀಗೆ ನಿತ್ಯನೈಮಿತ್ತಿಕಗಳೆಲ್ಲಾ ಬೇರೆ ಸ್ವತಂತ್ರ ವಿಧಿಗಳ ಮೂಲಕ ಅನುಷ್ಠೇಯಗಳೆಂದು ಹೇಳಿದರೆ, ಇವು ಆಜ್ಞಾಕೈಂಕರ್ಯಗಳಾಗಿ ಭಗವನ್ನಿಗ್ರಹದಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೂ, ಭಗವತ್ಪ್ರೀಣನಕ್ಕಾಗಿಯೂ, ಫಲಾಭಿಸಂಧಿರಹಿತವಾಗಿ ಸಾತ್ವಿಕತ್ಯಾಗಪೂರ್ವಕವಾಗಿಯೂ ಮಾಡತಕ್ಕದ್ದೇನೋ ಸರಿಯೇ ಆದರೆ ಅನುಜ್ಞಾಕೈಂಕರ್ಯಗಳಿಗೆ ಅಂತಹ ವಿಧಿಯಿಲ್ಲದ ಪ್ರಯುಕ್ತ ತ್ಯಾಗಮಾಡಬಹುದೆಂದಾಗುವದಿಲ್ಲವೇ ? ಹಿಂದಿನ ಆಳ್ವಾರ್ ಆಚಾರ್ಯರುಗಳ ಅನುಷ್ಠಾನದಲ್ಲೂ ಮಹಾ ಭಾಗವತರುಗಳ ಸತ್ಸಂಪ್ರದಾಯದಲ್ಲೂ ಅನುಜ್ಞಾ ಕೈಂಕರ್ಯಗಳಿಗೂ ತುಂಬಾ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತಾರಲ್ಲಾ, ಶ್ರೀ ಪರಕಾಲರೂ ಶ್ರೀ ಭಾಷ್ಯಕಾರರೂ ಸಹ ಬಹುಶ್ರದ್ಧೆಯಿಂದ ತುಂಬಾ ದ್ರವ್ಯವನ್ನು ವಿನಿಯೋಗಿಸಿ, ದೇವಸ್ಥಾನ, ಗೋಪುರಾದಿಗಳನ್ನು ಕಟ್ಟಿದರಲ್ಲಾ; ನೀವು ಹೇಳಿದ ಹಾಗೆ ಒಪ್ಪಿಕೊಂಡರೆ, ಅನುಜ್ಞಾಕೈಂಕರ್ಯಗಳು ಮೋಕ್ಷೋಪಾಯವಾಗಲಿ, ಅವುಗಳಿಗೆ ಅಂಗವಾಗಿಯಾಗಲಿ, ಭಗವದಾಜ್ಞಾ

## ಅನುಜ್ಞಾಕೈಂಕರ್ಯಾಣಾಂ ಪ್ರಪನ್ನೋಚಿತಂ ಪ್ರಯೋಜಕಮಾಹ

**ಇಪ್ಪಡಿಯಾಗಿಲ್‌ ಇವನುಕ್ಕು ನಿತ್ಯನೈಮಿತ್ತಿಕಂಗಳಿಲ್‌ ಅಡೈಕ್ಕವೊಣ್ಣಾದ ಪ್ರಭೂತಕೈಂಕರ್ಯಂಗಳುಕ್ಕು ಪ್ರಯೋಜಕರಾರ್‌ ? ಎನ್ನಿಲ್—**

---

ಸಿದ್ಧವಾಗಿಯಾಗಲಿ, ಪ್ರಾಯಶ್ಚಿತ್ತರೂಪವಾಗಿ ಆಗಲಿ ಸ್ವರ್ಗಪಶ್ವಾದಿ ಕಾಮಾರ್ಥವಾಗಿಯಾಗಲಿ, ಅಥವಾ ಸ್ವಸುಖಕ್ಕಾಗಲಿ, ಆಗುವದಿಲ್ಲವು ಮುಕ್ತರ ಹಾಗೆ ಪ್ರತ್ಯಕ್ಷವಾಗಿ ಭಗವತ್ಪ್ರೀತ್ಯರ್ಥವೆಂದೂ ತಿಳಿದು ಅನುಷ್ಠಿಸುವದೂ ಇಲ್ಲವು; ಹೀಗಿರುವಾಗ ಅನುಜ್ಞಾಕೈಂಕರ್ಯಗಳಲ್ಲಿ ಪ್ರವೃತ್ತಿಯು ಹೇಗೆ? ಅವುಗಳಿಂದ ಪ್ರಪನ್ನನಿಗೆ ಏನು ಪ್ರಯೋಜನವು? ಎಂದರೆ ಸಮಾಧಾನವನ್ನು ಹೇಳುತ್ತಾರೆ.

**ಅನುಜ್ಞಾ ಕೈಂಕರ್ಯಗಳು ಪ್ರಪನ್ನನಿಗೆ ಅನಾವಶ್ಯಕವೇ ಎಂದರೆ ಆತನಿಗೂ ಉಚಿತವಾದ ಪ್ರಯೋಜನವನ್ನು ತಿಳಿಸುತ್ತಾರೆ.**

**ಇಪ್ಪಡಿಯಾಗಿಲ್**-ನಿತ್ಯನೈಮಿತ್ತಿಕಾನುಷ್ಠಾನವು ಪ್ರಪದನಕ್ಕೆ ಅಂಗವಲ್ಲದೆ ಸ್ವತಂತ್ರ ವಿಧಿಯಿಂದ ಅನುಷ್ಠೇಯಗಳೆಂದು ಒಪ್ಪಿಕೊಂಡರೆ, **ನಿತ್ಯನೈಮಿತ್ತಿಕಙ್ಗಳಿಲ್‌ ಅಡೈಕ್ಕ ಒಣ್ಣಾದ** - ನಿತ್ಯನೈಮಿತ್ತಿಕಗಳಲ್ಲೇ ಸೇರಿದವೆಂದು ಭಾವಿಸಲು ಸಾಧ್ಯವಿಲ್ಲದ, **ಪ್ರಭೂತ ಕೈಙ್ಕರ್ಯಂಗಳುಕ್ಕು** - ದೇವಾಲಯ **ಗೋಪುರ** ಮಂಟಪಾದಿಗಳಾದ ಮಹತ್ತಾದ ಅನುಜ್ಞಾ ಕೈಂಕರ್ಯಗಳಿಗೆ, **ಪ್ರಯೋಜಕರಾರ್‌**-ಪ್ರವರ್ತಕರು ಯಾರು? ಎಂದರೆ ಅವುಗಳಿಂದ ಏನು ಪ್ರಯೋಜನವೆಂಬ ಭಾವವು, **ಎನ್ನಿಲ್‌**-ಹೀಗೆ ಪೂರ್ವಪಕ್ಷ ತಂದರೆ, ಅದರ ಅನುಷ್ಠಾನಕ್ಕೆ ಕೆಲವು ಪ್ರಯೋಜನಗಳನ್ನು ವಿಕಲ್ಪಿಸಿ, ಅವು ಯಾವುವೂ ಆಗುವದಿಲ್ಲವೆಂದು ತಿಳಿಸಿ, ಭಗವತ್ಪ್ರೀಣನವೇ ಮುಖ್ಯ ಪ್ರಯೋಜನವೆಂದು ಕೊನೆಯಲ್ಲಿ ತಿಳಿಸುತ್ತಾರೆ ಪೂರ್ವಪಕ್ಷಿಯ ಆಶಯವೇನೆಂದರೆ ನಾವು ಹೇಳಿದ ಹಾಗೆ ಪ್ರಪದನಕ್ಕೆ ಅಂಗವಾಗಿ ಭಾವಿಸಿ, ತ್ಯಾಗವು **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ಹೇಳಲ್ಪಟ್ಟಿತೆಂದು ಭಾವಿಸಿದರೆ, ಈ ಅನುಜ್ಞಾ ಕೈಂಕರ್ಯಗಳೂ ಅವುಗಳಲ್ಲೇ ಸೇರಿದವೆಂದು ಭಾವಿಸಬಹುದು ಈಗ ಪ್ರಪತ್ತಿಗೆ ಯಾವುದೂ ಅಂಗವಲ್ಲವೆಂದು ನೈರಪೇಕ್ಷ್ಯವು ಸಿದ್ಧಾಂತಿಸಲ್ಪಟ್ಟಿದುದರಿಂದ ಅನುಜ್ಞಾ ಕೈಂಕರ್ಯಗಳನ್ನು ಅಷ್ಟು ಭಕ್ತಿವಿಶ್ವಾಸದಿಂದ ಶ್ರೀ ತಿರುಮಂಗೈಯಾಳ್ವಾರ್‌, ಶ್ರೀ ಭಾಷ್ಯಕಾರರ್‌ ಪ್ರಭೃತಿಗಳು ಅನುಷ್ಠಿಸಲು ಹೇತುವೇನು? ಇಷ್ಟುಮಾತ್ರವೇ ಅಲ್ಲದೆ ಶ್ರೀ ಭಾಷ್ಯಕಾರರು ತಮ್ಮ ಚರಮದೆಶೆಯಲ್ಲಿ ತಮ್ಮ ಶಿಷ್ಯರಿಗೆ ಪ್ರಧಾನವಾಗಿ ಈ ಅನುಜ್ಞಾ ಕೈಂಕರ್ಯಗಳು ಪ್ರಪನ್ನನಿಗೆ ಸ್ವರೂಪದಾಯಕಗಳೆಂದು ಭಾವಿಸಿ ಉಪದೇಶಿಸಿದರಲ್ಲಾ ಅದು ಹೇಗೆ? ಅವು ಪ್ರಪನ್ನನಿಗೆ ಹೇಗೆ ಅನುಷ್ಠೇಯಗಳು? ಎಂದರೆ ವಿಕಲ್ಪಿಸಿ, ಅವು ಯಾವುವೂ ಅಲ್ಲವೆಂದು ಉಪದೇಶಿಸಿ ಭಗವತ್ಪ್ರೀಣನಾಭಿಸಂಧಿಯೇ ಪ್ರವರ್ತಕವೆಂದು ತಿಳಿಸುತ್ತಾರೆ.—

**ಇವೈ ಇವನುಕ್ಕು ಉಪಾಯಾಂತರತ್ತಿರ್ಪ್ಪುಕಾದು. ಅಗಾಂತರ ನಿರಪೇಕ್ಷೈಯಾನ ಪ್ರಪತ್ತಿಕ್ಕು ಪರಿಕರಂಗಳುಮಾಗಾದು ; ಅಕರಣತ್ತಿಲ್ ಈಶ್ವರನ್ ವೆರುಕ್ಕುಮೇನ್ರು ಶೆಯ್‌ಗಿರಾನುಮಲ್ಲನ್ ; ತನಿಯೇ ಯಿವೈ ತನಕ್ಕೊರು ಪಾಪಕ್ಷಯು, ಸ್ವರ್ಗ, ಪಶು, ಪುತ್ರಾದಿ ಫಲಾಂತರತ್ತೈ ಆಶೈಪ್ಪಟ್ಟುಚ್ಚೆಯ್ ಗಿರಾನನುಮಲ್ಲನ್ ; ಲೌಕಿಕರಾನವರ್‌ಗಳ್ ದ್ಯೂತಾದಿಗಳ್ ಪ್ಪಣ್ಣುಮಾಪ್ಪೋಲೇ ಕೇವಲಂ ತನ್ನುಗಪ್ಪಾಲೇ ಪ್ರವರ್ತಿಕ್ಕಿರಾನುಮಲ್ಲನ್ ; ಮುಕ್ತ**

---

**ಇವೈ ಇವನುಕ್ಕು**-ಈ ಅನುಜ್ಞಾ ಕೈಂಕರ್ಯಗಳು ಇವನಿಗೆ, **ಉಪಾಯಾನ್ತತ್ತಿರ್ಪ್ಪುಗಾದು**-ಬೇರೆ ಉಪಾಯವಾದ ಉಪಾಸನಕ್ಕು ಅಂಗವಾಗಿ ಸೇರಿದ್ದಲ್ಲವು. ಅಭಿಪ್ರಾಯವೇನೆಂದರೆ ಇಂತಹ ಪ್ರಭೂತಕೈಂಕರ್ಯಗಳಲ್ಲಿ ಪ್ರವೃತ್ತಿಯುಳ್ಳವರು ಪ್ರಪದನವನ್ನು ಅನುಷ್ಠಿಸಿದವರಲ್ಲವು ; ಉಪಾಸನವನ್ನು ಅವಲಂಬಿಸಿದವರು ; ಎಂದು ಹೇಳಲೂ ಸಾಧ್ಯವಿಲ್ಲವು ಉಪಾಸನಕ್ಕೆ ಅಂಗವಾಗಿ ನಿತ್ಯನೈಮಿತ್ತಿಕಗಳೇನೋ ಆವಶ್ಯಕವು ಹಾಗೆ ಆವಶ್ಯಕವೆಂದು ಈ ಅನುಜ್ಞಾ ಕೈಂಕರ್ಯಗಳ ವಿಷಯದಲ್ಲೂ ಹೇಳಲು ಸಾಧ್ಯವಿಲ್ಲವು ಎಂಬ ಭಾವವು **ಅಂಗಾಂತರ ನಿರಪೇಕ್ಷೈಯಾನ**- ಐದು ಅಂಗಗಳಲ್ಲದೆ ಬೇರೆ ಯಾವ ಅಂಗಗಳೂ ಬೇಡದೇ ಇರುವ, ಪ್ರಪತ್ತಿಕ್ಕುಂ ಪ್ರಪದನಕ್ಕೆ, **ಪರಿಕರಙ್ಗಳು ಮಾಗಾದು** - ಅಂಗಗಳೆಂದು ಭಾವಿಸಲೂ ಸಾಧ್ಯವಿಲ್ಲವು. **ಅಕರಣತ್ತಿಲ'**-ಈ ಅನುಜ್ಞಾ ಕೈಂಕರ್ಯಗಳನ್ನು ಅನುಷ್ಠಿಸದಿದ್ದರೆ **ಈಶ್ವರನ'** - ಸರ್ವೇಶ್ವರನು, **ವೆರುಕ್ಕುಮೆನ್ರು** - ಕೋಪಿಸಿ ನಿಗ್ರಹಿಸುವನೆಂದು, **ಶೆಯ'ಗಿರಾನುಮಲ್ಲನ್**-ಪ್ರಪನ್ನನು ಅನುಷ್ಠಿಸುವನು ಎಂಬುದೂ ಅಲ್ಲವು. ಏಕೆಂದರೆ ಕೋಪಿಸಿ ನಿಗ್ರಹಿಸಬೇಕಾದರೆ ಆಜ್ಞಾ ಕೈಂಕರ್ಯಗಳಾಗಿರಬೇಕು ; ಇವಾದರೋ ಅನುಜ್ಞಾ ಕೈಂಕರ್ಯಗಳು, ಹಾಗಾದರೆ ಇನ್ನು ಸ್ವಪ್ರಯೋಜನಾದಿಗಳಿಗಾಗಿ ಆಚರಿಸುವನೋ ? ಎಂದರೆ ಹಾಗೂ ಅಲ್ಲವೆಂದು ಉಪಪಾದಿಸುತ್ತಾರೆ.—**ತನಿಯೇ**-ಬೇರೆಯಾಗಿ ಎಂದರೆ ಈ ಉಪಾಯಾನುಷ್ಠಾನಕ್ಕೇನೂ ಸಂಬಂಧವಿಲ್ಲದೆ, **ಇವೈ**-ಈ ಅನುಜ್ಞಾಕೈಂಕರ್ಯಗಳ್ಳು, **ತನಕ್ಕು**-ತನಗೊಂದು, **ಪಾಪಕ್ಷಯು, ಸ್ವರ್ಗ, ಪಶು, ಪುತ್ರರೇ** ಮೊದಲಾದ **ಫಲಾಂತರತ್ತೈ**- ಮೋಕ್ಷವಲ್ಲದ ಬೇರೆ ಫಲಗಳಿಗೆ ಆಶೆಪಟ್ಟು, **ಚೆಯ'ಗಿರಾನು ಮಲ್ಲನ್**-ಮಾಡತಕ್ಕವನೂ ಅಲ್ಲವು. ಏಕೆಂದರೆ ಈ ಪ್ರಪನ್ನನು ವೈರಾಗ್ಯದಲ್ಲಿರುವವನು, ಮೋಕ್ಷೇತರ ಫಲಾಕಾಂಕ್ಷೆ ಇಲ್ಲದವನು ; ಅವನಿಗೆ ಇವು ಯಾವುವೂ ಬೇಕಿಲ್ಲವು ; ಆಗಲಿ ಪಾಪಕ್ಷಯ ಬೇಕಿಲ್ಲವೋ ? ಎಂದರೆ ಅದು ಪ್ರಪದನದಿಂದಲೇ ಆಗಿರುವಾಗ ಉಪಾಯಾನ್ತರ ಬೇಕಿಲ್ಲವು **ಲೌಕಿಕರಾನವರ'ಗಳ'**-ಈ ಲೋಕದ ಅನುಭವಗಳಲ್ಲಿ ಇಚ್ಛೆಯುಳ್ಳವರು, **ದ್ಯೂತಾದಿಗಳ' ಪಣ್ಣುಮಾಪ್ಪೋಲೇ**-ಜೂಜಾಟಗಳಲ್ಲಿ ಪ್ರವರ್ತಿಸುವ ಹಾಗೆಯೂ, **ಕೇವಲತನ್ನುಕಪ್ಪಾಲೇ** ಕೇವಲ ತನ್ನ ಉಪಭೋಗಕ್ಕಾಗಿ, **ಪ್ರವರ್ತಿಕ್ಕಿರಾನುಮಲ್ಲನ್** - ಪ್ರವರ್ತಿಸುವನೂ

**ರ್ಕೈಪ್ಪೋಲೆ ಭಗವದಭಿಪ್ರಾಯತ್ತೈ ಪ್ರತ್ಯಕ್ಷಮಾಗಕ್ಕಂಡು ಅವನೈ ಉಗಪ್ಪಿ ಕ್ಕೈಕ್ಕು ಪ್ರವರ್ತಿಕರಾನುಮಲ್ಲ ; ಮತ್ತಂಗನೇ ಎನ್ನಿಲ್ ? ಇಕ್ಕೈಂಕರ್ಯಂ ಗಳುಕ್ಕುಂ ಫಲಾಂತರಂಗಳ್ ಪೋಲೇ, ಭಗವತ್ಪ್ರೀತಿಯುಮು' ಫಲಮಾಗ ಶಾಸ್ತ್ರಸಿದ್ಧಮಾಗೈಯಾಲೇ ಅವನು ಕಪ್ಪಿಲೇ ಸತ್ತ್ವೋತ್ತರನಾನ ತನ್ಪ್ರಕೃತಿ ಸ್ವಭಾವತ್ತಾಲೇ ರುಚಿಪಿರಕ್ಕೈಯಾಲೇ ಸುಹೃತ್ಪುತ್ರಾದ್ಯುಪಲಾಳನಙ್ಗ**

---

ಅಲ್ಲವು, ಏಕೆಂದರೆ ಆತನಿಗೆ ಐಹಿಕೋಪಭೋಗಗಳಲ್ಲಿ ವಿರಕ್ತಿಯುಂಟಾಗಿರುವದ ರಿಂದ ಎಂಬ ಭಾವವು ಕಾಮ್ಯಕರ್ಮಗಳು ಪ್ರಪನ್ನನಿಗೆ ಸರ್ವಾತ್ಮನಾ ತ್ಯಾಜ್ಯ ವಾದುದರಿಂದ ಆ ಭಾವನೆಯಿಂದ ಎಂದಿಗೂ ಪ್ರಪನ್ನನು ಅನುಜ್ಞಾ ಕೈಂಕರ್ಯ ಗಳನ್ನು ಮಾಡುವನಲ್ಲವು ಅಥವಾ ಮುಕ್ತರಹಾಗೆ ಭಗವದಭಿಪ್ರಾಯವನ್ನೂ **ಪ್ರತ್ಯಕ್ಷಮಾಕಕ್ಕಂಡು** - ಪ್ರತ್ಯಕ್ಷವಾಗಿ ನೋಡಿ, **ಅವನೈ ಉಕಪ್ಪಿಕ್ಕೈಕ್ಕು - ಪ್ರವರ್ತಿಕಾರಾನುಮಲ್ಲ** - ಭಗವಂತನ ಮುಖೋಲ್ಲಾಸವನ್ನುಂಟುಮಾಡುವದ ಕ್ಕಾಗಿ ಪ್ರವರ್ತಿಸುವನೂ ಅಲ್ಲವು ; ಏಕೆಂದರೆ ಮುಕ್ತನೂ ಆಗಲಿಲ್ಲವು ; ಭಗವತ್ಪ್ರ ತ್ಯಕ್ಷವೂ ಇನ್ನೂ ಉಂಟಾಗಲಿಲ್ಲವು ಆದುದರಿಂದ, **ಮತ್ತೆಙ್ಗನೇ ಯೆನ್ನಿಲ್** - ಹಾಗಾ ದರೆ ಇನ್ನು ಏತಕ್ಕಾಗಿ ಪ್ರವೃತ್ತಿಯು ? ಎಂದರೆ ಹೇಳುತ್ತಾರೆ -- ಇಂತಹ ಅನುಜ್ಞಾ ಕೈಂಕರ್ಯಗಳಿಂದ ತನಗೆ ನಿರತಿಶಯ ಶ್ರೇಯಸ್ಸನ್ನುಂಟುಮಾಡುವ ಶೇಷಿಯು ಪ್ರೀತ ನಾಗುವನು, ಈ ಕೈಂಕರ್ಯಗಳಿಂದ ಭಗವನ್ಮುಖೋಲ್ಲಾಸವು ಉಂಟಾಗುತ್ತದೆ, ಎಂಬ ಉದ್ದೇಶಮಾತ್ರದಿಂದ ಅವುಗಳನ್ನು ಎಸಗುವನೆಂದು ತಿಳಿಸುತ್ತಾರೆ — **ಇಕ್ಕೈಙ್ಕರ್ಯ ಙ್ಗಳುಕ್ಕು**-ಈ ಅನುಜ್ಞಾ ಕೈಂಕರ್ಯಗಳಿಗೆ, **ಫಲಾಂತರಙ್ಗಳ್ ಪ್ಪೋಲೇ**-ಸ್ವರ್ಗೋಪ ಭೋಗಾದಿಗಳಾದ ಇತರ ಫಲಗಳುಂಟಾಗುವ ಹಾಗೆಯೇ **ಭಗವತ್ಪ್ರೀತಿಯುಮು' ಫಲಮಾಗ**-ಭಗವಂತನ ಪ್ರೀತಿಯೂ ತನಗೆ ಬೇಕಾದ ಫಲವೆಂಬುದು, **ಶಾಸ್ತ್ರಸಿದ್ಧ ಮಾಗೈಯಾಲೇ**-ಶಾಸ್ತ್ರದಲ್ಲಿ ಸ್ಥಾಪಿತವಾದುದರಿಂದ, **ಅವನುಗಪ್ಪಿಲೇ**-ಭಗವಂತನ ಪ್ರೀಣನಾರ್ಥವಾಗಿ, **ಸತ್ತ್ವೋತ್ತರನಾನ** - ಸತ್ವಗುಣಗಣಾಧಿಕ್ಯವುಳ್ಳ, **ತನ್ ಪ್ರಕೃತಿ ಸ್ವಭಾವತ್ತಾಲೇ** - ತನ್ನ ದೇಹಸಂಬಂಧ ಗುಣಗಳಿಂದ, **ರುಚಿಪಿರಕ್ಕೈ ಯಾಲೇ** - ಆ ಕೈಂಕರ್ಯಗಳನ್ನನುಷ್ಠಿಸಬೇಕೆಂಬ ಅಭಿರುಚಿಯುಂಟಾಗುವದರಿಂದ, **ಸುಹೃತ್ಪುತ್ರಾದ್ಯುಪಲಾಳನಙ್ಗಳಿಲ್ಪೋಲೇ** - ಸ್ನೇಹಿತ, ಪುತ್ರ ಆದಿ ಶಬ್ದದಿಂದ ಪತ್ನೀ ಬಂಧುವರ್ಗವು ಹೇಳಲ್ಪಟ್ಟರು ; ಇವರುಗಳ ಪ್ರೀತಿಯು ಸರಸಸಲ್ಲಾ ಪಾದಿಗಳಿಂದ ಉಂಟಾಗುವ ಹಾಗೆ, **ಸರ್ವವಿಧ ಬಂಧುವಾನವನುಡೈಯ — "ಪಿತಾತ್ವಂ ಮಾತಾತ್ವಂ ದಯಿತತನಯಸ್ತ್ವಂ"** ಎಂದು ಮತ್ತು **" ತ್ವಮೇವ ಮಾತಾಚ ಪಿತಾತ್ವಮೇವ ತ್ವಮೇವ ಬಂಧುಶ್ಚ ಗುರುಸ್ತ್ವಮೇವ"** ಎಂಬಲ್ಲೂ (ಶರಣಾಗತಿಗದ್ಯ) ಹೇಳಿರುವ ಹಾಗೆ, ಸರ್ವವಿಧ ಬಂಧುವಾದವನಿಗೆ **ಪ್ರೀಣ ನಂಗಳಿಲೇ** - ಪ್ರೀತಿಯನ್ನುಂಟುಮಾಡುವದಕ್ಕಾಗಿಯೇ, **ಶಾಸ್ತ್ರಮ್ ಕೈವಿಳ**

**ಳಿರ್ ಪೋಲೇ ಸರ್ವವಿಧಬಂಧುವಾನವನುಡೈಯ ಪ್ರೀಣನಙ್ಗಳಿಲೇ ಶಾಸ್ತ್ರಂ ಕೈವಿಳಕ್ಕಾಕ ಪ್ರವರ್ತಿಕ್ಕಿರಾರ್ ।**

---

**ಕ್ಕಾಗ** - ಶಾಸ್ತ್ರವೇ ತನಗೆ ಕೈದೀವಿಟಿಗೆ ಎಂದು ಭಾವಿಸಿ, ಎಂದರೆ ಶಾಸ್ತ್ರವೇ ತನಗೆ ಮಾರ್ಗದರ್ಶಿಯೆಂದು ಭಾವಿಸಿ, ಪ್ರವರ್ತಿಕ್ಕಿರಾರ್ - ಪ್ರಪದನನಿಷ್ಠನು ಪ್ರವರ್ತಿಸುವನು ಆಜ್ಞಾಕೈಂಕರ್ಯವನ್ನು, ಶ್ರೀಯತಿವರ್ಯರೂ ಶ್ರೀ ತಿರುಮಂಗೈಯಾಳ್ವಾರವರೂ ಮೊದಲಾದವರೂ ತುಂಬಾ ಆದರದಿಂದಲೂ ಭಕ್ತಿವಿಶ್ವಾಸದಿಂದಲೂ ಅನುಷ್ಠಿಸಿದ ಸಂಪ್ರದಾಯ ರೀತ್ಯಾ, ಪ್ರಪನ್ನನೂ ಸಹ ಕೇವಲ ಭಗವನ್ಮುಖೋಲ್ಲಾಸಕ್ಕಾಗಿಯೇ ಅನುಷ್ಠಿಸುತ್ತಾನೆಯೇ ವಿನಾ ಅನ್ಯಥಾ ಅಲ್ಲವು, ಇನ್ನು ಯಾವ ಫಲಕ್ಕಾಗಿಯೂ ಅಲ್ಲವು, ಮೇಲಿನ ವಾಕ್ಯದಲ್ಲಿ ಈ ಕೈಂಕರ್ಯಗಳಿಂದ ಭಗವತ್ಪ್ರೀಣನರೂಪ ಫಲವು ಶಾಸ್ತ್ರಸಿದ್ಧವೆಂದು ಹೇಳಲ್ಪಟ್ಟಿತು ಎಲ್ಲಿ ಎಂದರೆ ಶಾಂಡಿಲ್ಯ ಸ್ಮೃತಿಯನ್ನು ಉದಾಹರಿಸಬಹುದು. ೧೪೪೬ನೆಯ ಪುಟವನ್ನು ನೋಡಿ. **"ಯಸ್ತ್ವಾಕಾರಯತೇ ಭೂಮೌ ವಿಷ್ಣೋರಾಯತನಾನಿವೈ । ತಸ್ಯ ತುಷ್ಯೇಭವೇ ದ್ವಿಷ್ಣು ಸ್ಸರ್ವ ಲೋಕೇಶ್ವರಃ ಪ್ರಭುಃ ॥ ಶುಭೇತ್ವಸೌ ತುಷ್ಯತಿ ದುಷ್ಕೃತೇತು ನ ತುಷ್ಯತೇ ಸೌ ಪರಮ ಶ್ಶರೀರೀ । ಅನಾದೃತಸುತಂ ಗೇಹೀ ಪುರುಷಂ ನಾಭಿನಂದತಿ । ತಥಾನರ್ಚಿತ ಸದ್ಭಕ್ತಂ ಭಗವಾನ್ನಾಭಿನಂದತಿ ॥ ಮಮ ಮದ್ಭಕ್ತ ಭಕ್ತೇಷು ಪ್ರೀತಿರಭ್ಯಧಿಕಾ ಭವೇತ್ । ತಸ್ಮಾನ್ಮದ್ಭಕ್ತ ಭಕ್ತಾಶ್ಚ ಪೂಜನೀಯಾ ವಿಶೇಷತಃ"** ಎಂಬುದಾಗಿ ಪ್ರಮಾಣವಿದೆ ಇದರರ್ಥವೇನೆಂದರೆ —ಈ ಲೋಕದಲ್ಲಿ ಯಾವನು ವಿಷ್ಣುದೇವಾಲಯಾದಿಗಳನ್ನು ನಿರ್ಮಿಸುವನೋ, ಅವನು ಸರ್ವಲೋಕೇಶ್ವರನಾದ ಸರ್ವಸಮರ್ಥನಾದ ವಿಷ್ಣುವಿಗೆ ಪ್ರೀಣನವನ್ನುಂಟುಮಾಡುವನು. ಶುಭ ಕರ್ಮವಾಗಿದ್ದರೆ ಸರ್ವಶರೀರಿಯಾಗಿ ಸರ್ವಶ್ರೇಷ್ಠನಾದ ಭಗವಂತನು ಸಂತೋಷಿಸುವನು ಅದು ದುಷ್ಕೃತವಾಗಿದ್ದರೆ ಆನಂದಿಸುವದಿಲ್ಲವು ಹಾಗೆಯೇ ಯಜಮಾನನೂ ಸಹ ಆನಂದಿಸಲ್ಪಡದ ಪುತ್ರನುಳ್ಳ ಪುರುಷನನ್ನು ಕುರಿತು ಆನಂದಿಸುವದಿಲ್ಲವು. ಹಾಗೆಯೇ ತನ್ನ ಸದ್ಭಕ್ತನನ್ನು ಪೂಜಿಸದೇ ಇರುವನನ್ನು ಕಂಡು ಭಗವಂತನು ಸಂತೋಷಿಸುವದಿಲ್ಲವು" "ನನ್ನ ಭಕ್ತರುಗಳ ಭಕ್ತರುಗಳಲ್ಲೂ ಪ್ರೀತಿಯು ನನಗೆ ವಿಶೇಷವಾಗಿ ಉಂಟು. ಆದುದರಿಂದ ಅಂತಹ ಭಕ್ತಭಕ್ತರುಗಳು ವಿಶೇಷವಾಗಿ ಪೂಜಿಸಲು ಅರ್ಹರು" ಎಂದು ಹೇಳಲ್ಪಟ್ಟಿರುತ್ತದೆ. ಇಲ್ಲಿ **ಶಾಸ್ತ್ರಂ ಕೈವಿಳಕ್ಕಾಗ ಪ್ರವರ್ತಿಕ್ಕಿರಾರ್** ಎಂದು ಹೇಳಿರುವದರಿಂದ ಪ್ರಪನ್ನನಿಗೆ, ಶಾಸ್ತ್ರೀಯ ನಿಯಮನಾಧಿಕಾರದಲ್ಲಿ ಹೇಳಲ್ಪಟ್ಟ ಶಾಸ್ತ್ರಾನುಗುಣವಾದ ಪ್ರವೃತ್ತಿಯೇ ಅವಶ್ಯಕವೆಂಬುದು ಜ್ಞಾಪಿಸಲ್ಪಟ್ಟಿತು ಆಜ್ಞಾಕೈಂಕರ್ಯಗಳು ಹೇಗೆ ಶಾಸ್ತ್ರಾನುಗುಣವಾಗಿ ನಡೆಸತಕ್ಕದ್ದೋ, ಅದೇ ಮೇರೆಗೆ ಅನುಜ್ಞಾ ಕೈಂಕರ್ಯಗಳನ್ನೂ ಶಾಸ್ತ್ರ ರೀತ್ಯಾ ನಡೆಸತಕ್ಕದ್ದು ದೇವಾಲಯದಲ್ಲಿ ಸ್ವಾಮಿಗೆ ಉತ್ಸವವನ್ನು ನಡೆಸುತ್ತೀ

**ಪ್ರಪನ್ನಸ್ಯ ಪರಶೇಷತ್ವರೂಪ ಸ್ವರೂಪಜ್ಞಾನಂ ಆವಶ್ಯಕಂ, ಶಾಸ್ತ್ರಜ್ಞಾನಂ ಕಿಮರ್ಥಂ? ಇತಿಕೇಷಾಂ ಚಿಚ್ಛಂಕಾ ಮಾಕ್ಷಿಪ್ಯ ಪರಿಹರತಿ.**

---

**ಇನ್ನಿಡತ್ತಿಲ್ ಶಿಲರ್ ಸರ್ವೇಶ್ವರ್ರಪಕ್ಕಲಿಲೇ ಸರ್ವಭರನ್ಯಾಸಂ ಪಣ್ಣಿನ ವಿವೇಕಿಕ್ಕು ತ್ಯಾಜ್ಯೋಪಾದೇಯ ವಿಭಾಗ ನಿರ್ಣಯಕಂ ಸ್ವರೂಪಜ್ಞಾನ**

---

ನೆಂದು, ಬಿಸಿಲಲ್ಲಾಗಲಿ ಮಳೆಯಲ್ಲಾಗಲಿ ಸುತ್ತಿಸಬಾರದು ಧೂಪದೀಪ ನಿವೇದನ ಶಾತ್ತುಮೊರೈಗಳನ್ನು ಶಾಸ್ತ್ರಕ್ರಮರೀತ್ಯಾ ನಡೆಸತಕ್ಕದ್ದು; ವ್ಯತ್ಯಸ್ತಕ್ರಮವು ಕೂಡದು ಸ್ವಾಮಿಗೆ ತುಳಸಿಯನ್ನು ಎತ್ತುವದು ನಿಷಿದ್ಧ ದಿನಗಳಲ್ಲಿ ಕೂಡದು ನಿಷಿದ್ಧ ಪುಷ್ಪಗಳನ್ನೂ ಸಮರ್ಪಿಸಲಾಗದು. ಆದುವರಿಂದ **"ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ"** (ಗೀ ೧೬-೨೪) ಎಂಬ ಲೀಲಾಸಾರಥಿ ವಾಕ್ಯವನ್ನೇ ಮುಂದೆ ಉದಾಹರಿಸುತ್ತಾರೆ ಅನುಜ್ಞಾ ಕೈಂಕರ್ಯಗಳಲ್ಲೂ ಶಾಸ್ತ್ರಕ್ರಮ ವ್ಯತ್ಯಾಸವು ನನ್ನವಾ ಕೂಡದೆಂದು ಒಂದು ಕಾರಿಕೆಯನ್ನೇ ದಯಪಾಲಿಸಿರುತ್ತಾರೆ **"ಅನುಜ್ಞಯಾ ಪ್ರವೃತ್ತೇಽಪಿ ಕ್ರಮಕೋಪಾದಿಸಂಭವೇ। ಆಜ್ಞಾತಿಕ್ರಮದೋಷಸ್ಸ್ಯಾನ್ನಿಯಮೋತೋದುರತ್ಯಯಃ"** ॥ ೧೪೭೧ ನೆಯ ಪುಟವನ್ನು ನೋಡಿ. ಪ್ರಪನ್ನನಿಗೆ ಶಾಸ್ತ್ರವೇ ಕೈವಿಳಕ್ಕಾಗಿರಬೇಕೆಂಬ ಉಪಪಾದನೆಗೆ ೧೪೨೮ನೆಯ ಪುಟವನ್ನು ನೋಡಿ ಈ ಮೇಲಿನ ವಾಕ್ಯದಲ್ಲಿ **ಸುಹೃತ್ಪುತ್ರಾದ್ಯುಪ ಲಾಲನಗಳಿರ್ ಪಡಿಯೇ** ಎಂದು ಉಪಮೆಯನ್ನು ಹೇಳಿರುವದು ಈ ಮೇಲಿನ **"ಅನಾದೃತ ಸುತಂಗೇಹೇ"** ಎಂಬ ಶಾಂಡಿಲ್ಯ ವಾಕ್ಯವನ್ನು ಸ್ಮರಿಸುವ ಹಾಗೆ ಮಾಡುತ್ತದ

**ಪ್ರಪನ್ನನಿಗೆ ತನ್ನ ಸ್ವರೂಪಜ್ಞಾನವೀಗ ಮುಖ್ಯವು, ಶಾಸ್ತ್ರಜ್ಞಾನದಿಂದಾಗುವ ಫಲವೇನು? ಎಂಬ ಪೂರ್ವಪಕ್ಷವನ್ನು ಮಾಡಿ ಪರಿಹರಿಸುತ್ತಾರೆ.**

ಅನುಜ್ಞಾ ಕೈಂಕರ್ಯಗಳೂ ಅವಶ್ಯಕವಾಗಿ ಮಾಡತಕ್ಕದ್ದು. ಇಲ್ಲದಿದ್ದರೆ ಭಗವತ್ಪ್ರೀಣನಾನುಗ್ರಹಗಳಿಗೆ ಬದಲಾಗಿ ಭಗವನ್ನಿಗ್ರಹ ಉಂಟಾಗುತ್ತದೆಂದೂ ಸ್ಥಾಪಿಸಲ್ಪಟ್ಟಿತು ಈ ಅನುಜ್ಞಾಕೈಂಕರ್ಯಗಳೇನು ತ್ಯಾಜ್ಯವೇ ಉಪಾದೇಯವೇ ಎಂದು ತಿಳಿಸಲು ತನ್ನ ಶೇಷತ್ವಸ್ವರೂಪಜ್ಞಾನದಿಂದಲೇ ಸಾಧ್ಯವಾಗಿರುವಾಗ, ಶಾಸ್ತ್ರಜ್ಞಾನವು ಏತಕ್ಕೆ? ಪ್ರಪನ್ನನಿಗೆ ನಿರರ್ಥಕವಲ್ಲವೋ? ಅಪ್ರಪನ್ನನಿಗೆ ಇನ್ನೂ ಆವಶ್ಯಕವೆಂದರೆ ಒಪ್ಪಬಹುದು ಪ್ರಪನ್ನನಿಗೆ ಏತಕ್ಕೆ? ಎಂದು ಪೂರ್ವಪಕ್ಷವನ್ನು ಅನುವಾದ ಮಾಡಿ ಪರಿಹರಿಸುತ್ತಾರೆ.

**ಇನ್ನಿಡತ್ತಿಲ್** - ಈ ಸ್ಥಳದಲ್ಲಿ ಎಂದರೆ ಈ ಸಂದರ್ಭದಲ್ಲಿ, **ಶಿಲರ್** - ಕೆಲವರು, **ಸರ್ವೇಶ್ವರ್ರಪಕ್ಕಲಿಲೇ** ಸರ್ವೇಶ್ವರನನ್ನುದ್ದೇಶಿಸಿ, **ಸರ್ವ ಭರನ್ಯಾಸ**

**ಮನ್ರೋ? ಇಪ್ಪಡಿ ಇವರ್ ಸ್ವರೂಪ ವಶ್ಯನಾ ಮತ್ತನ್ಯೈ ಪ್ಪೋಕ್ಕಿ, ಶಾಸ್ತ್ರವಶ್ಯ ನಾನಪ್ಪಡಿ ಯನ್ನೆನ್ರು ಶೊಲ್ಲುವರ್ ಗಳ್. ಇದುವುನ್ ಅನುಪಪನ್ನಮ್. ಎಙ್ಙನೇ ಎನ್ನಿಲ್? ಸ್ವರೂಪಂ ಇನ್ನಪಡಿ ಇರುಕ್ಕುಮೆನ್ರು ಶಾಸ್ತ್ರತ್ತೈ ಕ್ಕೊಂಡು ಅರುತಿಯಿಟ್ಟಾಲ್, ಇಸ್ಸ್ವರೂಪತ್ತುಕ್ಕು ಇನ್ನ ಪುರುಷಾರ್ಥಮುಂ. ತದುಪಾಯಮುಮ್ ತ್ಯಾಜ್ಯಂ, ಇನ್ನ ಪುರುಷಾರ್ಥಮುಮ್ ತದುಪಾಯ ಮುಮ್ ಉಪಾದೇಯಮೆನ್ರು ಪಿರಿತ್ತು ತಿಳಿಗೈಕ್ಕು ಮುಕ್ತನಾನಂಳವುಮ್**

---

**ಪಣ್ಣಿನ** - ಸಮಸ್ತ ರಕ್ಷಣಭರವನ್ನು ಭಗವಂತನಲ್ಲಿ ಸಮರ್ಪಿಸಿದ, **ವಿವೇಕಿಕ್ಕು**- ವಿವೇಕ ಜ್ಞಾನವುಳ್ಳ ಪ್ರಪನ್ನನಿಗೆ, **ತ್ಯಾಜ್ಯೋಪಾದೇಯ ವಿಭಾಗ ನಿರ್ಣಾಯ ಕಮ್**- ಈ ಕರ್ಮಾನುಷ್ಠಾನವು ಬಿಡತಕ್ಕದ್ದು, ಇದನ್ನು ಅಂಗೀಕರಿಸತಕ್ಕದ್ದೆಂಬ ವಿಭಾಗವನ್ನು ನಿರ್ಣಯಿಸುವಂತಾದ್ದು, **ಸ್ವರೂಪಜ್ಞಾನಮನ್ರೋ**-ಶೇಷಿಶೇಷತ್ವ ರೂಪಸ್ವರೂಪದ ಜ್ಞಾನವಲ್ಲವೋ? **ಇಪ್ಪಡಿ** - ಹೀಗೆ, **ಇವರ್** - ಈ ಪ್ರಪನ್ನನು, **ಸ್ವರೂಪವಶ್ಯನಾ ಮತ್ತನ್ಯೈ ಪೋಕ್ಕಿ**- ಸ್ವರೂಪಜ್ಞಾನಕ್ಕೆ ಅಧೀನನಾಗುವನು, ಅಷ್ಟು ಮಾತ್ರವಲ್ಲದೆ, **ಶಾಸ್ತ್ರವಶ್ಯನಾನ್ಪಡಿಯನ್ರೆನ್ರು ಶೊಲ್ಲುವರ್ ಗಳ್** - ಶಾಸ್ತ್ರಜ್ಞಾನಕ್ಕೆ ಅಧೀನನಾಗಬೇಕೆಂಬುದು ಹೇಗೆ? ಎಂದು ಕೆಲವರು ಆಕ್ಷೇಪಿಸುವರು, **ಇದುವುನ್ ಅನುಪಪನ್ನಮ್** - ಹಿಂದೆ **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ಪೂರ್ವಪಕ್ಷಗಳನ್ನು ಮಾಡಿದಹಾಗೆಯೇ, ಇದೂ ಸಹ, ಸಮಂಜಸವಾದುದಲ್ಲವು **ಎಙ್ಙನೇ ಎನ್ನಿಲ್?** - ಅದು ಹೇಗೆ ಸಮಂಜಸವಲ್ಲವು ಎಂದರೆ, ಉಪಪಾದಿಸಿ ಹೇಳುತ್ತಾರೆ ಸ್ವರೂಪಜ್ಞಾನ ಮಾತ್ರದಿಂದ ಅನುಜ್ಞಾ ಕೈಂಕರ್ಯಗಳನ್ನು ಅನುಷ್ಠಿಸಿದರೆ, ಶಾಸ್ತ್ರವಿರುದ್ಧ ಪ್ರಕ್ರಿಯೆಗಳಾಗಿ, ಭಗವತ್ಪ್ರೀಣನ ಸಂಪಾದಕ ಉಪಚಾರಗಳಾಗದೆ ಅಪಚಾರಗಳಾಗಬಹುದು ಆದುದರಿಂದ ಅವುಗಳೂ ಕೂಡ ಶಾಸ್ತ್ರಾನುಗುಣವಾಗಿಯೇ ನಡೆಸಬೇಕಾಗಿರುವದರಿಂದ ಶಾಸ್ತ್ರಜ್ಞಾನವು ಆವಶ್ಯಕವೆಂದು ತಿಳಿಸುತ್ತಾರೆ— **ಸ್ವರೂಪಂ ಇನ್ನಪಡಿ ಇರುಕ್ಕುಮೆನ್ರು ಶಾಸ್ತ್ರತ್ತೈ ಕ್ಕೊಂಡು ಅರುದಿ ಇಟ್ಟಾಲ್**-ಶೇಷಿಯಾದವನಿಗೆ ಶೇಷನಾದವನು ಹೀಗೆ ನಡೆದರೆ ಭೋಗ್ಯವಾಗುತ್ತದೆಂದು ಇದೇ ತನ್ನ ಸ್ವರೂಪವು ಎಂದು ಶಾಸ್ತ್ರ ಮೂಲಕವಾಗಿ ತಿಳುವಳಿಕೆಯುಂಟಾದರೆ, **ಇಸ್ಸ್ವರೂಪತ್ತುಕ್ಕು** - ಈ ತನ್ನ ಶೇಷನಾಗಿ, ತದೇಕ ಭೋಗ್ಯತಾಬುದ್ಧಿಯಿಂದ ಇರುವ ಸ್ವರೂಪಕ್ಕೆ, **ಇನ್ನ ಪುರುಷಾರ್ಥಮುಮ್ ತದುಪಾಯಮುಮ್ ತ್ಯಾಜ್ಯಮ್**-ಈ ಐಹಿಕ ಪುರುಷಾರ್ಥವೂ ಅದಕ್ಕೆ ಸಾಧನವಾದ ಉಪಾಯವೂ ತ್ಯಾಜ್ಯವೆಂದೂ, **ಇನ್ನ ಪುರುಷಾರ್ಥಮುಮ್ ತದುಪಾಯಂ ಉಪಾದೇಯಮೆನ್ರು** - ಈ ಭಗವದಾಲಯ ನಿರ್ಮಾಣ, ಮಾಲಾಕರಣ ದೀಪಾರೋಪಣ ತುಲಸ್ಯಾಹರಣ ಫಲಗಳೂ, ತತ್ಸಾಧನಗಳೂ ಸಹ ಉಚಿತವೆಂದು, **ಪಿರಿತ್ತು ತಿಳುಗೈಕ್ಕು** - ವಿಭಾಗಿಸಿ ವಿವೇಚಿಸಿ ತಿಳಿಯುವದಕ್ಕೆ, **ಮುಕ್ತನಾನವಳಿ**

**ಶಾಸ್ತ್ರಮೊಳಿಯ ವಳಿಯಿಲ್ಲೈ. ಸ್ವರೂಪತ್ತಿಲ್ ಶೇಷತ್ವಾದಿಗಳೈಕ್ಕೊಂಡು ಶಿಲ ಔಚಿತ್ಯಮಾತ್ರ ಮರಿಯಲಾಮ್; ಇತ್ತನೆಯಲ್ಲದು ಶೇಷಿಯುಗಸ್ತ ಪ್ರಕಾರಮಿದು, ಇಕ್ಕೈಙ್ಕರ್ಯತ್ತುಕ್ಕು ಉಪಾಯಙ್ಗಳ್ ಇವೈ, ಎನ್ರು ಸ್ವರೂಪ ಜ್ಞಾನಂ ನಿಯಮಿತ್ತುಕ್ಕಾಟ್ಟಾದು ಆನಪಿನ್ಬು ಶಾಸ್ತ್ರತ್ತೈ ಅನಾದರಿತ್ತು ನಿಷಿದ್ಧ ದ್ರವ್ಯಙ್ಗಳೈಕ್ಕೊಂಡಾದಲ್, ವಿಹಿತಙ್ಗಳ್ ತನ್ನಿಲುಂ ನ್ಯಾಯಾರ್ಜಿತ**

---

**ವುಮ್** - ಮುಕ್ತಿಯನ್ನು ಹೊಂದುವವರಿಗೂ, **ಶಾಸ್ತ್ರಮೊಳಿಯ ವಳಿಯಿಲ್ಲೈ**- ಶಾಸ್ತ್ರವನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲವು ಕಾಮ್ಯಕರ್ಮಗಳೂ ತತ್ಸಾಧನಗಳೂ ಸರಿಯಲ್ಲವು, ತನಗೆ ಯೋಗ್ಯವಲ್ಲವೆಂದು ತಿಳಿಯಲೂ ಶಾಸ್ತ್ರವು ಬೇಕು ಯಾವ ಕೈಂಕರ್ಯಗಳು ಅನುಜ್ಞಾ ಕೈಂಕರ್ಯಗಳಾಗಿ ತನ್ನ ಸ್ವರೂಪಕ್ಕೆ ಉಚಿತವಾದ ವೆಂದೂ, ಅದಕ್ಕೆ ಸಾಧನಗಳು ಯಾವುವೆಂದೂ ಇವುಗಳನ್ನೆಲ್ಲಾ ತಿಳಿಯಲೂ ಸಹ, ಶಾಸ್ತ್ರ ಬಿಟ್ಟರೆ ಮಾರ್ಗವೇ ಇಲ್ಲವೆಂಬ ಭಾವವು ಇವೆಲ್ಲಾ ಶಾಸ್ತ್ರೀಯ ನಿಯಮನಾಧಿಕಾರನಲ್ಲಿ ಸದೃಷ್ಟಾಂತಗಳಾಗಿ ಉಪಪಾದಿತವು ಧನುರ್ಮಾಸದಲ್ಲಿ ಉಷಃಕಾಲಾರಾಧನೆಯು ಶಾಸ್ತ್ರವಿಹಿತವು, ಅದನ್ನು ತ್ಯಜಿಸಿ, ಮಧ್ಯಾಹ್ನ ೧೨ ಗಂಟೆಗೆ ಆಚರಿಸುವದು ಅಪಚಾರವು. ಪುಷ್ಪಗಳನ್ನೂ ತುಲಸಿಯನ್ನೂ ತಂದುಕೊಡುವ ದೇನೋ ಸ್ವಾಮಿಗೆ ಉಪಚಾರವೇ, ಆದರೆ ಶಾಸ್ತ್ರನಿಷಿದ್ಧ ಪುಷ್ಪಗಳನ್ನೂ ಭಾನು ವಾರಾದಿ ನಿಷಿದ್ಧ ಕಾಲಗಳಲ್ಲಿ ತಂದ ತುಳಸಿಯನ್ನೂ ಸ್ವಾಮಿಗೆ ಅರ್ಪಿಸಿದರೆ ಉಪಚಾರವಾಗುವದಿಲ್ಲವು. ಅಪಚಾರವಾಗುತ್ತದೆ ಇದಕ್ಕೆಲ್ಲಾ ಶಾಸ್ತ್ರಜ್ಞಾನವು ಆವಶ್ಯಕವು. ಕೇವಲ ಸ್ವರೂಪಜ್ಞಾನವು ಈ ಸಂದರ್ಭಗಳಲ್ಲಿ ಅನುಕೂಲಿಸುವ ದಿಲ್ಲವು ಕೇವಲ ಸ್ವರೂಪಜ್ಞಾನದಿಂದ ಏನನ್ನು ತಿಳಿಯಬಹುದು? ಎಂದರೆ ತಿಳಿಸುತ್ತಾರೆ.— **ಸ್ವರೂಪತ್ತಿಲ್** - ತನ್ನ ಸ್ವರೂಪಜ್ಞಾನದ, **ಶೇಷತ್ವಾದಿಗಳೈ ಕ್ಕೊಂಡು** - ಶೇಷತ್ವ ಮೊದಲಾದವುಗಳ ಮೂಲಕವಾಗಿ, ಇಲ್ಲಿ ಆದಿಶಬ್ದದಿಂದ ಪರಾಧೀನತ್ವ ಅನನ್ಯಭೋಗ್ಯತ್ವಾದಿಗಳು ಹೇಳಲ್ಪಟ್ಟವು ಇವುಗಳ ಜ್ಞಾನಮೂಲಕ ವಾಗಿ, **ಶಿಲಔಚಿತ್ಯ ಮಾತ್ರ ಮರಿಯುಮ್**-ಯಾವ ಕೈಙ್ಕರ್ಯಗಳು ಉಚಿತ ವೆಂಬುದನ್ನು ಮಾತ್ರ ತಿಳಿಯಬಹುದು; **ಇತ್ತನೈಯಲ್ಲದು** - ಇಷ್ಟುಮಾತ್ರವೇ ಅಲ್ಲದೆ, **ಶೇಷಿಯುಗನ್ದಪ್ರಕಾರಮಿದು**-ಶೇಷಿಯಾದ ಭಗವಂತನಿಗೆ ಪ್ರೀಣನವುಂ ಟಾಗುವ ಕ್ರಮ ಹೀಗೆ, ಧರ್ಮದಿಂದ ಅರ್ಜಿತವಾದ ಧನವಾಗಿದ್ದರೇನೇ ಪ್ರೀಣನವು ಇತ್ಯಾದಿಗಳು. **ಇಕ್ಕೈಙ್ಕರ್ಯತ್ತುಕ್ಕು**- ಈ ಕೈಙ್ಕರ್ಯಕ್ಕೆ, **ಉಪಾಯಙ್ಗಳು ಇವೈ ಎನ್ರು**-ಸಾಧನಗಳು ಇವು ಎಂದು, **ಸ್ವರೂಪಜ್ಞಾನವು ನಿಯಮಿತ್ತುಕ್ಕಾಟ್ಟಾದು**- ವಿಮರ್ಶಿಸಿ ತೋರಿಸಲಾರದು **ಆನಪಿನ್ಬು**- ಹೀಗಾದನಂತರ, **ಶಾಸ್ತ್ರತ್ತೈ ಅನಾ ದರಿತ್ತು**-ಶಾಸ್ತ್ರವನ್ನು ತಿರಸ್ಕರಿಸಿ, **ನಿಷಿದ್ಧ ದ್ರವ್ಯಙ್ಗಳೈ ಕೊಂಡಾದಲ್**- ನಿಷಿದ್ಧ ಗಳಾದ ದ್ರವ್ಯಗಳ ಮೂಲಕವಾಗಲಿ, **ವಿಹಿತಙ್ಗಳ್ ತನ್ನಿಲುಮ್** - ಒಂದು ವೇಳೆ

**ಮಲ್ಲಾದ ದ್ರವ್ಯಙ್ಗಳೈ ಕ್ಕೊಂಡಾದಲ್, ತನಕ್ಕು ರುಚಿತ್ತಪಡಿಯೇ ಶಾಸ್ತ್ರ ವಿರುದ್ಧಮಾಯಿರುಕ್ಕುಙ್ಕಟ್ಟಳೈಯಿಲೇ ಕೈಙ್ಕರ್ಯತ್ತೈ ನಡತ್ತಪ್ಪಾರ್ತ್ತಾಲ್ ಉಪ ಚಾರಾಪಚಾರಙ್ಗಳುಕ್ಕುಪಿರಿವಿಲ್ಲೈಯಾಮ್. ಅಪ್ಪೋದು ತನ್ ರುಚಿಯೊ**

---

ನಿಷಿದ್ಧಗಳಿಲ್ಲದೆ ಶಾಸ್ತ್ರವಿಹಿತಗಳಾಗಿದ್ದರೂ, **ನ್ಯಾಯಾರ್ಜಿತಮಲ್ಲಾದದ್ರವ್ಯ ಙ್ಗಳೈ ಕ್ಕೊಂಡಾದಲ್**-ನ್ಯಾಯವಾಗಿ ಸಂಪಾದಿಸದೇ ಇರುವ ದ್ರವ್ಯಗಳ ಮೂಲಕ ವಾಗಲಿ ಎಂದರೆ ಒಬ್ಬರಿಗೆ ಅನ್ಯಾಯಮಾಡಿ ಸಂಪಾದಿಸಿದ ದ್ರವ್ಯಮೂಲಕವಾಗಲಿ, **ತನಕ್ಕು ರುಚಿತ್ತಪಡಿಯೇ**-ಶಾಸ್ತ್ರವನ್ನು ಬಿಟ್ಟು ತನಗೆ ಇಷ್ಟಬಂದಹಾಗೆ ಎಂದರೆ ಈರುಳ್ಳಿ ಹುಳಿ ತನಗೆ ಇಷ್ಟವೆಂದು ಅದನ್ನು ಭಗವಂತನಿಗೆ ನಿವೇದನ ಮಾಡುವದು, **ಶಾಸ್ತ್ರವಿರುದ್ಧಮಾಯಿರುಕ್ಕು ಕಟ್ಟಳೈಯಿಲೇ**-ಶಾಸ್ತ್ರವಿರುದ್ಧವಾಗಿರುವ ರೀತಿ ಯಲ್ಲಿ, **ಕೈಙ್ಕರ್ಯತ್ತೈ ನಡತ್ತಪ್ಪಾರ್ ತ್ತಾಲ್** - ಕೈಂಕರ್ಯವನ್ನು ನಡೆಸಿದುದಾದರೆ, **ಉಪಚಾರಾಪಚಾರಙ್ಗಳುಕ್ಕು**-ಇವುಗಳು ಭಗವಂತನಿಗೆ ಉಪಚಾರರೂಪವಾದವು, ಇವು ಅಪಚಾರಗಳಾದುವು ಎಂಬ ಪಿರಿವು—ವಿಭಾಗವು, **ಇಲ್ಲೈಯಾಂ**-ಇಲ್ಲವಾಗು ತ್ತದೆ ಅಪಚಾರಗಳು ಉಪಚಾರಗಳಾಗಿ ಎರಡೂ ಒಂದೇಯಾಗುತ್ತವೆ ಇದರಿಂದ ಅನುಜ್ಞಾ ಕೈಂಕರ್ಯಗಳೆಂದು ತನ್ನ ಇಷ್ಟಬಂದಂತೆ ಮಾಡತಕ್ಕದ್ದಲ್ಲವು ಅವು ಗಳನ್ನು ಸಹ ಶಾಸ್ತ್ರಾನುಸಾರವಾಗಿ ನಡೆಸತಕ್ಕದ್ದೆಂಬುದು ತಾತ್ಪರ್ಯವು ದೇವರಿಗೆ ಮಾಲಾ ಕೈಂಕರ್ಯವನ್ನು ಮಾಡುತ್ತೇನೆಂದು ತುಲಸಿಯು ಇಲ್ಲದೆ, ಮನೆಯ ಹಿತ್ತಲಲ್ಲಿ ಬೇವಿನ ಮರವಿದ್ದರೆ ಅದರ ಸೊಪ್ಪಿನ ಮಾಲೆಯನ್ನು ಕಟ್ಟಿ ಮನ ಬಂದಂತೆ ಸಮರ್ಪಿಸಲಾಗದೆಂಬ ಭಾವವು ಮತ್ತು ಒಬ್ಬನ ತಲೆಯನ್ನು ಹೊಡೆದು ಬಾಚಿಕೊಂಡು ಬಂದ ಹಣದಿಂದ ಸ್ವಾಮಿಗೆ ಉತ್ಸವಾದಿ ಕೈಂಕರ್ಯಗಳನ್ನು ನಡೆಸ ಕೂಡದೆಂಬ ಭಾವವು ಇವುಗಳು ಉಪಚಾರಗಳಾಗುವದಿಲ್ಲವು ಅಪಚಾರಗಳಾಗಿ ಭಗವದನುಗ್ರಹವು ಉಂಟಾಗಲಾರದೆಂಬ ಭಾವವು ಶ್ರೀ ಕೃಷ್ಣಭಗವಾನರಿಗೆ ದುರ್ಯೋಧನನ ಧನವು ಅಧರ್ಮದಿಂದುಂಟಾದುದರಿಂದ ಆತನ ಶಾಸ್ತ್ರವಿರುದ್ಧಾ ತಿಥ್ಯವನ್ನು ಪರಿಗ್ರಹಿಸಲಿಲ್ಲವು ಆ ಕಾರಣದಿಂದಲೇ ಭೀಷ್ಮದ್ರೋಣರ ಪ್ರಾರ್ಥನೆ ಯನ್ನೂ ಅಂಗೀಕರಿಸಲಿಲ್ಲವು ಶ್ರೀ ರಂಗನಾಥನು ವೇಶ್ಯಾ ಸ್ತ್ರೀ ಕಟ್ಟಿಸಿದ ಗೋಪುರವನ್ನು ಅನುಮೋದಿಸಲಿಲ್ಲವು ಪಿತ್ರಾರ್ಜಿತವಾದ ದ್ರವ್ಯದ ಮೂಲಕ ಪರಮಭಾಗವತರಾದ ವಿದುರರು ಮಾಡಿದ ಆತಿಥ್ಯವು **"ಶುಚೀನಿ ಗುಣವಂತಿಚ"** ಎಂಬಲ್ಲಿ ಹೇಳಿರುವ ಹಾಗೆ ಪ್ರಶಸ್ತವಾಗಿ ಉಪಾದೇಯವಾಯಿತು ಹಾಗೆಯೇ ಕುಚೇಲರ ಪೃಥುಕ ತಂಡಲವೂ, ಋಷ್ಯಂಶಸಂಭೂತರಾದ ಗೋಪಸ್ತ್ರೀಯರ ಕ್ಷೀರ ದಧಿ ನವನೀತಗಳನ್ನೂ ತಾವಾಗಿಯೇ ಪರಿಗ್ರಹಿಸಿದರು ಹಾಗೆಯೇ ಶಬರಿಯು ಸಮರ್ಪಿಸಿದ ಫಲವೂ ಶ್ರೀರಾಮಚಂದ್ರನಿಗೆ ಪ್ರಿಯವಾದುದಾಯಿತು ಈ ಸಂದರ್ಭದಲ್ಲೆಲ್ಲಾ ಶಾಸ್ತ್ರವಿರುದ್ಧವಾದುದಲ್ಲವಾದುದರಿಂದ ಉಪಾದೇಯವು.

**ಳಿಯುವೇರು ನಿಯಾಮಕ ಮಿಲ್ಲಾ ಮೈಯಾಲೇಃ ಮುಮುಕ್ಷುಕ್ಕಳ್ ತವಿರ್ನ್ದು ಪೋರುಗಿರ ಸರ್ವನಿಷಿದ್ಧಙ್ಗಳೈಯುಮ್ ತನ್ ರುಚಿ ಮಾತ್ರತ್ತಾಲೇ ಕೈಙ್ಗರ ಮಾಗ, ಅನುಷ್ಠಿಕ್ಕ ಪ್ರಸಂಗಿಕ್ಕುಮ್.**

---

ಗಜೇಂದ್ರನ ಕಮಲಪುಷ್ಪವೂ ಮಾಲಾಕಾರನ ಹಾರವೂ ಉಪಾದೇಯವಾಗಿ ಪರಿಣಮಿಸಿತು ಈ ಸಂದರ್ಭದಲ್ಲಿ **ಕೌಸಲ್ಯಾಕಲ್ಪಿತಂ ಗೇಹೇ ಕಾನನೇ ಲಕ್ಷ್ಮಣಾರ್ಪಿತಮ್ | ಪಂಪಾಯಾಂ ಶಬರೀದತ್ತಂ ಯದ್ಭರದ್ವಾಜ ಕಲ್ಪಿತಂ || ನವನೀತಂ ಘೃತಂ ಕ್ಷೀರಂ ವ್ರಜೈಃ ಯದ್ಯದ್ಸಮರ್ಪಿತಮ್ ||** ಇತ್ಯಾದಿ ಅನುಸಂಧೇಯವು

ಆಗಲಿ, ಭಗವಚ್ಛಾಸ್ತ್ರದಲ್ಲಿಹೇಳಿರುವವೇನೆಂದರೆ—"**ಆತ್ಮನೋಯತ್ಪ್ರಿಯಂ ಭೋಜ್ಯಂ ತತ್ಸರ್ವಂ ವಿನಿವೇದಯೇತ್**" "ತನಗೆ ಯಾವುದು ಪ್ರಿಯವಾದ ಭೋಜನವೋ ಅದನ್ನೆಲ್ಲಾ ಭಗವಂತನಿಗೆ ನಿವೇದನವಾಗಿ ಸಮರ್ಪಿಸಬಹುದು" ಎಂದು ಭಗವಚ್ಛಾಸ್ತ್ರದಲ್ಲಿ ಹೇಳಿದೆಯಲ್ಲಾ ಎಂಬ ಪೂರ್ವಪಕ್ಷ ತಂದರೆ, ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ ಏನೆಂದರೆ ನಿನಗೆ ಪ್ರಿಯವಾದ ಭೋಜ್ಯವು ಶಾಸ್ತ್ರವಿಹಿತವಾದುದೇ ಆಗಿರಬೇಕು ಅಂತಹ ಭೋಜ್ಯವನ್ನೇ ಸಮರ್ಪಿಸತಕ್ಕದ್ದೆಂಬುದು ಶಾಸ್ತ್ರಾಭಿಪ್ರಾಯವು **ಅಪ್ಪೋದು**- ಆ ಸಂದರ್ಭದಲ್ಲಿ ಎಂದರೆ ಶಾಸ್ತ್ರವನ್ನು ಅನಾದರಿಸಿ, ತನ್ನ ಇಷ್ಟಾನುಸಾರವಾಗಿ ನಡೆದುದಾದರೆ, **ತನ್ನ ರುಚಿಯೊಳಿಯು** - ತನ್ನ ಇಷ್ಟವಲ್ಲವೆ, **ವೇರುನಿಯಾಮಕಮಿಲ್ಲಾಮೈಯಾಲೇ** - ಬೇರೆ ಯಾವುದು ವ್ಯವಸ್ಥಿಸತಕ್ಕದ್ದಿಲ್ಲವಾದುದರಿಂದ, **ಮುಮುಕ್ಷುಕ್ಕಳ್**- ಮೋಕ್ಷಾರ್ಥಿಗಳು, **ತವಿರ್ನ್ದು ಪೋರುಕಿರ**- ಪರಿತ್ಯಾಗಮಾಡುವ, **ಸರ್ವನಿಷಿದ್ಧಙ್ಗಳೈಯುಂ**- ಸಮಸ್ತ ನಿಷಿದ್ಧ ದ್ರವ್ಯಗಳನ್ನೂ, ಆಹಾರ, ವಾಸ ಅರ್ಚನ, ನಿವೇದನಗಳಿಗೆ ನಿಷಿದ್ಧಗಳೆಂದು ಹೇಳಲ್ಪಟ್ಟವುಗಳನ್ನು, **ತನ್ ರುಚಿಮಾತ್ರತ್ತಾಲೇ**- ತನಗೆ ಇಷ್ಟವಾದವು ಪ್ರಿಯವಾದುವು ಎಂಬ ಮಾತ್ರದಿಂದ, **ಕೈಂಕರ್ಯಮಾಗ ಅನುಷ್ಠಿಕ್ಕ ಪ್ರಸಂಗಿಕ್ಕುಮ್**-ಕೈಂಕರ್ಯವೆಂದು ಭಾವಿಸಿ, ಸಮರ್ಪಿಸಬೇಕಾಗುತ್ತದೆ ತನಗೆ ಪ್ರಿಯವಾದವು ಎಂದು ಇಷ್ಟುಮಾತ್ರವೇ ಇಟ್ಟುಕೊಂಡರೆ ಅವು ಶಾಸ್ತ್ರವಿರುದ್ಧವಾದವುಗಳಾಗಿ ನಿಷಿದ್ಧಗಳಾದರೂ ಚಿಂತೆಯಿಲ್ಲ, ಸಮರ್ಪಿಸಬಹುದೆಂದಾಗುತ್ತದ ಆದುದರಿಂದ ತನಗೆ ಪ್ರಿಯವಾಗಿಯೂ ಇರಬೇಕಲ್ಲದೆ, ಶಾಸ್ತ್ರವಿರುದ್ಧಗಳಲ್ಲದೆ ಆ ಕಾರಣದಿಂದ ನಿಷಿದ್ಧವಲ್ಲದವುಗಳಾಗಿಯೂ ಇರಬೇಕೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ.— ಭಗವಚ್ಛಾಸ್ತ್ರಪ್ರಮಾಣದ "**ಆತ್ಮನೋ ಯತ್ಪ್ರಿಯಂ ಭೋಜ್ಯಂ**" ಎಂಬ ವಾಕ್ಯದಲ್ಲೂ ಇದೇ ಅಭಿಪ್ರಾಯವು ಶಾಸ್ತ್ರವಿರುದ್ಧವಲ್ಲದ "**ಯತ್ಪ್ರಿಯಂ ಭೋಜಂ**" ಎಂಬುದೇ ತಾತ್ಪರ್ಯವು ಹಾಗೆಯೇ ಸ್ವಾಮಿಗೆ ಪುಷ್ಪಗಳನ್ನು ಅಷ್ಟೋತ್ತರ ಶತನಾಮರೂಪದಲ್ಲಿ ಸಮರ್ಪಿಸುವಾಗ "**ವೇದೋಕ್ತ ಪುಷ್ಪಾಣಿ ಸಮರ್ಪಯಾಮಿ**" ಎಂದೇ ಸಙ್ಕಲ್ಪವು ಶಾಸ್ತ್ರನಿಷಿದ್ಧ ಪುಷ್ಪಗಳು ಕೂಡದು.

**ಹವಿರ್ನಿವೇದನತ್ತಿಲುಮ್ ಶ್ರೀಭಾಷ್ಯಕಾರರ್ " ಶಾಸ್ತ್ರಾವಿರುದ್ಧಾನಿ ಸಂಭೃತ್ಯ" ಎನ್ರು ಅರುಳಿಚ್ಚೆಯ್‌ದಾರ್.**

**ಅತಃ ಸರ್ವತ್ರ ಶಾಸ್ತ್ರವಶ್ಯತಾ ಆವಶ್ಯಕೀ**

**ಆಗೈಯಾಲ್ ಶಾಸ್ತ್ರವಶ್ಯನಾಯ್ ತನ್ ಅಧಿಕಾರತ್ತುಕ್ಕು ಶಾಸ್ತ್ರವುಡೈತ್ತ ಕೈಙ್ಕರ್ಯಙ್ಗಳೈಪ್ಪಣ್ಣಪ್ಪಾಪ್ಪತ್ತನ್. ೧) "ಶಸ್ತ್ರಾಚ್ಛಾಸ್ತ್ರಂ ಪ್ರಮಾಣಂತೇ**

---

ಇದನ್ನನುಸರಿಸಿಯೇ ಶ್ರೀ ಯತಿವರ್ಯರು ತಾವು ರಚಿಸಿದ " ನಿತ್ಯ " ವೆಂಬ ಗ್ರಂಥದಲ್ಲಿ ಹಾಗೆಯೇ ಉಪದೇಶಿಸಿರುತ್ತಾರೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ— **ಹವಿರ್ನಿವೇದನತ್ತಿಲುಮ್** - ಈ ಭಗವದಾರಾಧನೆ ಎಂಬ ಯಜ್ಞದಲ್ಲಿ ಭಗವಂತನಿಗೆ ಹವಿಸ್ಸಿನ ರೂಪದಲ್ಲಿ ಭೋಜ್ಯಾಸನವನ್ನು ಅಲಂಕರಿಸುವ ಹಾಗೆ ಭಾವಿಸಿ, ನಿವೇದನ ರೂಪದಲ್ಲಿ ಸಮರ್ಪಿಸುವ ಪದಾರ್ಥಗಳ ವಿಷಯದಲ್ಲೂ ಎಂಬ ಭಾವವು, **ಶ್ರೀ ಭಾಷ್ಯಕಾರರ್**-ಶ್ರೀ ಯತಿವರ್ಯರು, **ಶಾಸ್ತ್ರಾವಿರುದ್ಧಾನಿ ಎನ್ರು**-ಶಾಸ್ತ್ರವಿರುದ್ಧಗಳಲ್ಲದ ಭೋಜ್ಯಪದಾರ್ಥಗಳನ್ನು ಸಂಪಾದಿಸಿಕೊಂಡು ಎಂದು **ಅರುಳಿಚ್ಚೆಯ್‌ದಾರ್** - ಅಪ್ಪಣೆ ಕೊಡಿಸಿರುತ್ತಾರೆ — ಅವರ ಪೂರಾ ವಾಕ್ಯವು ಯಾವುದೆಂದರೆ—**"ಲೋಕೇ ಪ್ರಿಯತಮಾನ್ಯಾತ್ಮನಶ್ಚ ಇಷ್ಟತಮಾನಿ, ಶಾಸ್ತ್ರಾವಿರುದ್ಧಾನಿ ಸಂಭೃತ್ಯ ಶೋಷಣಾದಿ ಕೃತ್ವಾಽರ್ಘ್ಯ ಜಲೇನ ಸಂಪ್ರೋಕ್ಷ್ಯಾಸ್ತ್ರಮಂತ್ರೇಣ ರಕ್ಷಾಂ ಕೃತ್ವಾ, ಸುರಭಿಮುದ್ರಾಂ ಪ್ರದರ್ಶ್ಯ ಅರ್ಹಣಪೂರ್ವಕಂ ಹವಿರ್ನಿವೇದಯೇತ್ "** ಎಂದು ಇರುತ್ತದೆ ನಿವೇದನರೂಪದಲ್ಲಿ ಸಮರ್ಪಿಸುವ ಹವಿಸ್ಸಿಗೆ ಮೂರು ಗುಣಗಳಿರಬೇಕೆಂದು ಹೇಳಿರುತ್ತಾರೆ — (೧) ಲೋಕದಲ್ಲಿ ಎಲ್ಲರಿಗೂ ಪ್ರಿಯತಮವಾದವುಗಳಾಗಿಯೂ (೨) ತನಗೂ ಇಷ್ಟತಮವಾಗಿಯೂ (೩) ಶಾಸ್ತ್ರವಿರುದ್ಧವಲ್ಲದವುಗಳಾಗಿಯೂ ಇರತಕ್ಕದ್ದೆಂದು ಹೇಳಿರುತ್ತಾರೆ. ಆದುದರಿಂದ ಪ್ರಪನ್ನರಿಗೆ ಶಾಸ್ತ್ರವಶ್ಯತೆ ಬೇಕಿಲ್ಲವೆಂಬ ವಾದವು ಈ ಯತಿವರ್ಯರ ದಿವ್ಯಸೂಕ್ತಿಯಿಂದಲೂ ನಿರಸ್ತವು. ಪ್ರಪನ್ನನಿಗೆ ಕೈಙ್ಕರ್ಯವು ಪ್ರಿಯವಾಗಿದ್ದುದಾದರೆ ಸಾಕು; ಶಾಸ್ತ್ರವಶ್ಯತೆ ಬೇಕಾಗಿಲ್ಲವೆಂಬ ವಾದವನ್ನು ಶ್ರೀ ಯತಿವರ್ಯರ ದಿವ್ಯಸೂಕ್ತಿಯಿಂದಲೇ ನಿರಾಕರಿಸಿರುತ್ತಾರೆ. ಪ್ರಪನ್ನಾಪ್ರಪನ್ನರಿಗೂ ಈ ಶಾಸ್ತ್ರವಶ್ಯತ್ವವು ಮುಖ್ಯವೆಂದು ಸಪ್ರಮಾಣವಾಗಿ ಮುಂದಿನ ವಾಕ್ಯಗಳಿಂದ ಸಮರ್ಥಿಸಿ ಹೇಳುತ್ತಾರೆ

**ಆದುದರಿಂದ ಎಲ್ಲರಿಗೂ ಶಾಸ್ತ್ರವಶ್ಯತೆಯು ಅತ್ಯಾವಶ್ಯಕವು**

**ಆಗೈಯಾಲ್** - ಹೀಗೆ ಶ್ರೀ ಯತಿವರ್ಯರ ದಿವ್ಯಸೂಕ್ತಿಯಿಂದಲೂ ಶಾಸ್ತ್ರವಿರುದ್ಧವಲ್ಲದ ದ್ರವ್ಯಗಳು ಭಗವತ್ ಕೈಂಕರ್ಯಕ್ಕೆ ಉಪಾದೇಯಗಳೆಂದು ವಿಧಿಸಲ್ಪಟ್ಟಿರುವದರಿಂದ, **ಶಾಸ್ತ್ರವಶ್ಯನಾಯ್**-ಮುಮುಕ್ಷುವೂ ಕೂಡ ಶಾಸ್ತ್ರವಶ್ಯನಾಗಿಯೇ

**ಕಾರ್ಯಾಕಾರ್ಯ ವ್ಯವಸ್ಥಿತೌ । ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮಕರ್ತು ಮಿಹಾರ್ಹಸಿ ॥ ಏನ್ರು ಉಪದೇಶಂ ಸರ್ವಾಧಿಕಾರಿಗಳುಕ್ಕುಂ ಪೊದುವಾ ಯಿರುಕ್ಕುಂ.**

---

ಇದ್ದುಕೊಂಡು, ತನಗೆ ಶಾಸ್ತ್ರವಶ್ಯತೆಯು ಬೇಕಾಗಿಲ್ಲವೆಂದು ಭಾವಿಸುವದು ಅನುಚಿತವೆಂಬ ತಾತ್ಪರ್ಯವು **ತನ್ ಅಧಿಕಾರತ್ತುಕ್ಕು ಶಾಸ್ತ್ರವುಡೈತ್ತ**-ಪ್ರಪನ್ನ ನಾಗಿರುವ ತನ್ನ ಅಧಿಕಾರಕ್ಕೆ ಶಾಸ್ತ್ರವು ಉಚಿತವೆಂದು ಸಮ್ಮತಿಸಿದ, ಕೈಂಕರ್ಯ ಗಳನ್ನು, **ಪಣ್ಣಪ್ಪ್ರಾಪ್ತಂ** - ಮಾಡತಕ್ಕದ್ದು ವಿಧಾಯಕವು ಹೀಗೆ ತಾವು ಸ್ಥಾಪಿಸಿದ ಅಭಿಪ್ರಾಯದ ಸಮರ್ಥನೆಗಾಗಿ ಶ್ರೀ ಗೀತಾಚಾರ್ಯರ ದಿವ್ಯಸೂಕ್ತಿಯನ್ನು ಉದಾಹರಿಸಿ ಶಾಸ್ತ್ರವಶ್ಯತೆಯು ಪ್ರಪನ್ನರೇ ಆಗಲಿ ಅಪ್ರಪನ್ನರೇ ಆಗಲಿ ಸರ್ವರಿಗೂ ಆವಶ್ಯಕವೆಂದು ಸ್ಥಾಪಿಸುತ್ತಾರೆ.— (೧) **ತಸ್ಮಾತ್** - ಶಾಸ್ತ್ರವಿಧಿಗನುಸಾರವಾದ ಪ್ರವೃತ್ತಿಗಳಿಲ್ಲದಿದ್ದರೆ ಯಾವ ಪುರುಷಾರ್ಥಗಳೂ ಲಭಿಸುವದಿಲ್ಲವೆಂದು ಹೇಳಲ್ಪಟ್ಟಿ ರುವದರಿಂದ, **ತೇ**-ದೈವಸ್ವಭಾವಯುಕ್ತನಾದ ನಿನಗೇ, (ಅರ್ಜುನನಿಗೆ ಭಗವಂತನ ವಾಕ್ಯವು) **ಶಾಸ್ತ್ರವೇ ಪ್ರಮಾಣವು ;** ಯಾವುದಕ್ಕೆ ಎಂದರೆ ಹೇಳುತ್ತಾರೆ **ಕಾರ್ಯಾ ಕಾರ್ಯ ವ್ಯವಸ್ಥಿತೌ**-ಶ್ರುತಿಗಳಲ್ಲಿ ಹೀಗೆ ಮಾಡು ಎಂದು ವಿಧಿಸಿರುವುದಕ್ಕೆ ವಿಧಿ ಎಂಬ ಹೆಸರು, ಹೀಗೆ ಮಾಡಕೂಡದೆಂದು ಹೇಳಿರುವದಕ್ಕೆ ನಿಷೇಧವೆಂದು ಹೆಸರು, ಹೀಗೆ ವಿಧಿ ನಿಷೇಧ ವಾಕ್ಯಗಳಿಗನುಸಾರವಾಗಿ ನಡೆಯುವದೀಗ ಕಾರ್ಯ, ಅದಕ್ಕೆ ವಿರುದ್ಧ ವಾಗಿ ನಡೆಯುವ ಕೃತ್ಯಾಕರಣ ಅಕೃತ್ಯಕರಣಗಳೆರಡೂ ಅಕಾರ್ಯಗಳು, ಇವುಗಳನ್ನು ನಿಷ್ಕರ್ಷಿಸಿ ತಿಳಿಯುವದರಲ್ಲಿ, ಶಾಸ್ತ್ರವೇ ಪ್ರಮಾಣವು ಶಾಸ್ತ್ರಶಬ್ದದಿಂದ ಉಪ ನಿಷತ್ತುಗಳಿಂದ ಕೂಡಿದ ವೇದಗಳೂ, ಅವುಗಳ ಉಪಬ್ರಹ್ಮಣಗಳೂ ಹೇಳಲ್ಪಟ್ಟವು. ಅವು ಹದಿನಾಲ್ಕೆಂದು “ **ಅಙ್ಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯ ವಿಸ್ತರಃ । ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾಹ್ಯೇತಾ ಶ್ಚತುರ್ದಶ** ” ಎಂಬಲ್ಲಿ ಹೇಳಲ್ಪಟ್ಟವು ಎಲ್ಲಾ ಪುರಾಣಗಳೂ ಪ್ರಮಾಣವಲ್ಲವು ಸಾತ್ವಿಕವೆಂದು ವಿಭಾಗಿ ಸಲ್ಪಟ್ಟ ಆರು ಮಾತ್ರವೇ ಪ್ರಮಾಣಗಳು ವ್ಯಾಸಸೂತ್ರಗಳೂ ಶಾಸ್ತ್ರಕ್ಕೆ ಸೇರಿದವು. ಸ್ಮೃತಿಗಳಲ್ಲೂ ಕೆಲವು ಮಾತ್ರವೇ ಗ್ರಾಹ್ಯವೇ ಕೆಲವನ್ನು ಶ್ರೀ ವ್ಯಾಸರು ಉಪಾ ದೇಯವಲ್ಲವೆಂದು ಖಂಡಿಸಿರುತ್ತಾರೆ “ **ಶ್ರುತಿಸ್ಮೃತೀತು ವಿಪ್ರಾಣಾಂ ಚಕ್ಷುಷೀ ದ್ವೇವಿನಿರ್ಮಿತೇ । ಕಾಣ ಸ್ತ್ರತ್ರೈಕಯಾ ಹೀನೋ ದ್ವಾಭ್ಯಾಮನ್ಧಃ ಪ್ರಕೀರ್ತ್ಯತೇ**” ಎಂಬ ಶ್ರೀ ಪರಾಶರೋಕ್ತಿಯು ಇರುತ್ತದೆ ವಿಪ್ರರಿಗೆ ಶ್ರುತಿಸ್ಮೃತಿಗಳೆರಡೂ ಎರಡು ಕಣ್ಣುಗಳಾಗಿ ನಿರ್ಮಿಸಲ್ಪಟ್ಟಿವೆ. ಅವುಗಳಲ್ಲಿ ಒಂದರ ಜ್ಞಾನವಿಲ್ಲದವನು ಒಕ್ಕಣ್ಣನು; ಎರಡರ ಜ್ಞಾನವೂ ಇಲ್ಲದವನು ಸಂಪೂರ್ಣ ಕುರುಡನೆಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ಈಗ ಯುದ್ಧಮಾಡುವದು ನ್ಯಾಯವೇ ? ಯುದ್ಧಮಾಡದಿರುವದು ನ್ಯಾಯವೇ ? ಎಂಬ ವಿವೇಕ ಜ್ಞಾನಕ್ಕೆ ಶಾಸ್ತ್ರವೇ ಪ್ರಮಾಣವೆಂದು ಶ್ರೀ ಗೀತಾ ಚಾರ್ಯರು ಉಪದೇಶಿಸಿದರು.

" ಪ್ರೀತ್ಯೈವಕಾರಿತಃ " ಇತಿ ಯಾಮುನೋಕ್ತ್ಯಾ ಪ್ರಪನ್ನಸ್ಯ ನ ಶಾಸ್ತ್ರ ವಶ್ಯತಾ ಇತಿ ವಾದಸ್ಯ ಖಂಡನಮ್

ಆಳವಂದಾರ್ ಶ್ರೀ ಗೀತಾರ್ಥ ಸಂಗ್ರಹತ್ತಿಲೇ "ಜ್ಞಾನೀತು ಪರಮೈ

---

ಆದುದರಿಂದ ಶಾಸ್ತ್ರವಿಧಾನೋಕ್ತಂ - ಶಾಸ್ತ್ರಪ್ರಕ್ರಿಯೆಗೆ ಅನುಸಾರವಾಗಿ ಹೇಳಿದುದನ್ನು, ಜ್ಞಾತ್ವಾ - ವಿವೇಕಿಸಿ ತಿಳಿದು, ಇಹ - ಈ ಲೋಕದಲ್ಲಿ ಅಥವಾ ಈ ಯುದ್ಧ ಮಾಡುವ ಸಂದರ್ಭದಲ್ಲಿ, ಈ ಪ್ರಕರಣಕ್ಕನುಗುಣವಾಗಿ ಅರ್ಥ ಬರೆಯ ಬೇಕಾದರೆ, ಇಹ- ಈ ಸರ್ವಧರ್ಮಾ ಪರಿತ್ಯಜ್ಯ ಎಂಬರ್ಥ ನಿರೂಪಣೆಯಲ್ಲಿ ಅನುಜ್ಞಾ ಕೈಙ್ಕರ್ಯಗಳು ಮಾಡತಕ್ಕವೇ ? ಅಥವಾ ತ್ಯಾಜ್ಯವೇ, ಮತ್ತು ಮಾಡತಕ್ಕವುಗಳಾ ದರೆ ಹೇಗೆ ಮಾಡತಕ್ಕವು? ಮುಮುಕ್ಷುವಿನ ಇಷ್ಟಪ್ರಕಾರವೇ ಅಥವಾ ಶಾಸ್ತ್ರ ರೀತಿಯಲ್ಲೇ ? ಎಂಬ ಸಂದರ್ಭದಲ್ಲಿ, ಕರ್ಮ ಕರ್ತುಮರ್ಹಸಿ – ಅಂತಹ ಶಾಸ್ತ್ರ ವಿಧಾನ ರೀತಿಯಲ್ಲೇ ಮಾಡಲು ಯೋಗ್ಯನಾಗು, ಎನ್ರು - ಎಂಬ ಉಪದೇಶವೂ, ಸರ್ವಾಧಿಕಾರಿಗಳುಕ್ಕು - ಮುಮುಕ್ಷು ಬುಬುಕ್ಷು ವ್ಯತ್ಯಾಸ ಮತ್ತು ವರ್ಣಾಶ್ರಮ ಭೇದ ತಾರತಮ್ಯವಿಲ್ಲದೆ ಸಮಸ್ತಾಧಿಕಾರಿಗಳಿಗೂ, ಪೊದುವಾಯಿರುಕ್ಕುಮ್– ಸಮವಾದ ಹಿತೋಪದೇಶವಾಗಿರುತ್ತದೆ.

ಇದರಮೇಲೆ ಇನ್ನೊಂದು ಪೂರ್ವಪಕ್ಷವನ್ನು ಉಪಪಾದಿಸಿ ಖಂಡಿಸಿರುತ್ತಾರೆ. ಇದು ಹಿಂದೆಯೇ ಉಪಪಾದಿತವಾಗಿದ್ದರೂ ೧೪೫೬–(೫೭ನೆಯಪುಟಗಳನ್ನು ನೋಡಿ) ಪುನಃ ಅದಕ್ಕೆ ಪ್ರಕರಣವು ಒದಗಿದುದರಿಂದ ಅನುವಾದರೂಪದಲ್ಲಿ ಪ್ರಾಸಂಗಿಕ ವಾಗಿ ಹೇಳಬೇಕಾಗಿರುತ್ತದೆ. ಈಗ ಮೋಕ್ಷಾರ್ಥಿಯು ತನ್ನ ಇಷ್ಟಾನುಸಾರ ಮಾತ್ರ ಅನುಜ್ಞಾ ಕೈಂಕರ್ಯಗಳನ್ನು ಮಾಡತಕ್ಕದ್ದಲ್ಲವು. ಶಾಸ್ತ್ರವಿಧಾನೋಕ್ತವಾಗಿಯೇ ನಡೆಸತಕ್ಕದ್ದೆಂದು ಸ್ಥಾಪಿಸಿದನು. ಶ್ರೀ ಯಾಮುನಮುನಿಗಳು ಹೀಗೆ ಹೇಳದೆ ಗೀತಾರ್ಥ ಸಂಗ್ರಹದಲ್ಲಿ "ನಿಜಕರ್ಮಾದಿ ಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವ ಕಾರಿತಃ ಎಂಬ ಮುಮುಕ್ಷುವು ಪ್ರೀತ್ಯೈವ–ಪ್ರೀತಿಯಿಂದಲೇ ಎಂದು ಅವಧಾರಣದೊಂದಿಗೆ ಹೇಳಿರುತ್ತಾರೆ. ಅದು ಹೇಗೆ ಸಮಂಜಸವೆಂದು ಆಕ್ಷೇಪ ತಂದರೆ ಸಮಾಧಾನ ವನ್ನು ಹೇಳುತ್ತಾರೆ.

"ಪ್ರೀತ್ಯೈವಕಾರಿತಃ" ಎಂಬ ಶ್ರೀ ಯಾಮುನೋಕ್ತಿಯಿಂದ ಪ್ರಪನ್ನನಿಗೆ ಶಾಸ್ತ್ರ ವಶ್ಯತೆ ಇಲ್ಲವೆಂಬ ವಾದದ ಖಂಡನವು.

ಆಳವಂದಾರ್-ಶ್ರೀ ಯಾಮುನಾಚಾರ್ಯರವರೇ ಶ್ರೀಗೀತಾರ್ಥ ಸಙ್ಗ್ರಹ ದಲ್ಲಿ, ಜ್ಞಾನೀತು . ಜ್ಞಾನಿಯಾದರೋ ಹಿಂದೆ ಹೇಳಿದ ಮೂರು ಜನ ಭಕ್ತರುಗಳ ಹಾಗೆ ಅಲ್ಲದೆ ಅವ್ಯಭಿಚರಿತ ಭಕ್ತಿಯುಳ್ಳವನಾಗಿ ಎಂದರೆ ಅನ್ಯದೇವತಾಭಕ್ತಿ ಇಲ್ಲದೇ ಭಗವಂತನಲ್ಲೇ ಭಕ್ತಿಯುಳ್ಳವನಾಗಿ, ಇಷ್ಟು ಮಾತ್ರವೇ ಅಲ್ಲದೆ ಐಹಿಕಾಪೇಕ್ಷೆ ಯಾವುದೂ ಇಲ್ಲದೆ ಅನನ್ಯಪ್ರಯೋಜನವುಳ್ಳವನಾದುದರಿಂದ, ಪರೈಕಾನ್ತಿಯು.

**ಕಾಂತೀ ಪರಾ (ತದಾ) ಯತ್ತಾತ್ಮ ಜೀವನಃ । ತತ್ಸಂಶ್ಲೇಷ ವಿಯೋಗೈಕ**

---

ಹಿಂದೆ ಹೇಳಲ್ಪಟ್ಟ ಮೂರು ಜನ ಭಕ್ತರೂ ಏಕಾನ್ತಿಗಳು. ಇವರು ಅನ್ಯ ಪ್ರಯೋಜನವನ್ನೂ ಉಳ್ಳವರು. ಪರಮೈಕಾನ್ತಿಯಾದರೋ ಅನನ್ಯ ಪ್ರಯೋಜನನು. ಇನ್ನು ಮೂರು ಜನ ಭಕ್ತರಿಗಿಂತಲೂ ಈತನು ವಿಲಕ್ಷಣನೆಂದು ತು ಶಬ್ದವು. **"ಪ್ರತಿಬುದ್ಧಸ್ತು ಮೋಕ್ಷಭಾಕ್"** ಎಂಬುದರ ಅರ್ಥವು ಉಪಪಾದಿತವು. **ತದಾಯತ್ತಾತ್ಮ ಜೀವನಃ** – **"ಮಚ್ಚಿತ್ತಾ ಮದ್ಗತ ಪ್ರಾಣಾ ಬೋಧಯನ್ತಃ ಪರಸ್ಪರಮ್ । ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ"** (ಗೀ. ೧೦-೯) ಎಂಬಲ್ಲಿ ಹೇಳಿರುವಹಾಗೆ ಇರುವ ಆ ಜ್ಞಾನಿಯು ಎಂತವನೆಂದರೆ ಪರಮಾತ್ಮನಿಗೆ ಅಧೀನವಾದ ತನ್ನ ಆತ್ಮಸ್ವರೂಪದ ಸತ್ತಾಸ್ಥಿತಿಗಳುಳ್ಳವನು. ಮೇಲೆ ಹೇಳಿದುದನ್ನು ಮಾಡದಿದ್ದರೆ ಪ್ರಾಣವೇ ಉಳಿಯುವದಿಲ್ಲವೆಂದು ಭಾವಿಸುವವನು. ಇನ್ನೂ ಎಂತವನೆಂದರೆ? **ತತ್ಸಂಶ್ಲೇಷ ವಿಯೋಗೈಕಸುಖದುಃಖಃ**-ಪರಮಪುರುಷನೊಂದಿಗೆ ಸೇರಿರುವುದನ್ನೇ ಸುಖವಾಗಿಯೂ, ಹಾಗಿಲ್ಲದಿರುವ ಅವಸ್ಥೆಯನ್ನು ದುಃಖವಾಗಿಯೂ, ಭಾವಿಸುವವನು. ಆತನನ್ನೇ ಉಪಾಸನೆ ಮಾಡೋಣವು;ಅದಿಲ್ಲದ ಕಾಲದಲ್ಲಿ ಆತನ ಗುಣಚೇಷ್ಟಿತಗಳನ್ನು ಕೊಂಡಾಡೋಣವು, ಮೊದಲಾದವು ಮುಂದಿನ ಶ್ಲೋಕದಲ್ಲಿ ಹೇಳಲ್ಪಡುವವು. ಇದು ಸಂಶ್ಲೇಷ ಎನಿಸುತ್ತದೆ. ಹೀಗೆ ಉಪಾಸನ, ಶ್ರವಣ ಕೀರ್ತನ, ಅರ್ಚನಾದಿಗಳಿಲ್ಲದಿರೋಣವೇ ವಿಶ್ಲೇಷವು. ಮೊದಲನೆಯ ಸಂದರ್ಭದಲ್ಲಿ ಸುಖವನ್ನೂ ಎರಡನೆಯ ಅವಸ್ಥೆಯಲ್ಲಿ ದುಃಖವನ್ನೂ ಹೊಂದುವವನು. ಮಹರ್ಷಿಯು **"ಯನ್ಮುಹೂರ್ತಂ ಕ್ಷಣಂ ವಾಪಿ ವಾಸುದೇವೋ ನಚಿನ್ತ್ಯತೇ। ಸಾ ಹಾನಿಸ್ತನ್ಮಹಚ್ಛಿದ್ರಂ ಸಾ ಭ್ರಾನ್ತಿಸ್ಸಾಚವಿಕ್ರಿಯಾ"** (ವಿ. ಪು. ೧.೯.೭೩) ಇದರ ಅರ್ಥಕ್ಕೆ ಉಪಾಯವಿಭಾಗಾಧಿಕಾರದ ಪುಟವನ್ನು ನೋಡಿ ಎಂದು ಹಾಗೆಯೇ ಹೇಳಿರುತ್ತಾರೆ. ಮತ್ತು **"ಏತಸ್ಮಿನ್ನಪ್ಯತಿ ಕ್ರಾಂತೇ ಮುಹೂರ್ತೇ ಧ್ಯಾನವರ್ಜಿತೇ। ದಸ್ಯುಭಿ ರ್ಮುಷಿತೇನೈವ ಯುಕ್ತ ಮಾಕ್ರಂದಿತುಂ ಭೃಶಮ್"** ಪರಮಾತ್ಮಧ್ಯಾನವಿಲ್ಲದೆ ಒಂದು ಮುಹೂರ್ತವು ಕಳೆದುಹೋದರೂ ಆ ಹೊತ್ತಿನಲ್ಲಿ ಕಳ್ಳರು ಬಂದು ಸುಲಿಗೆ ಮಾಡುವಕಾಲದಲ್ಲಿ ಕೂಗಿಕೊಳ್ಳುವಹಾಗೆ ಅಳತಕ್ಕದ್ದೆಂದು ಹೇಳಲ್ಪಟ್ಟಿರುತ್ತದೆ. ಮತ್ತು ಆ ಜ್ಞಾನಿಯು ಇನ್ನೂ ಎಂತವನೆಂದರೆ **ತದೇಕಧೀಃ** ಆತನೊಬ್ಬನಲ್ಲೇ ಇಟ್ಟ ಬುದ್ಧಿಯುಳ್ಳವನು, ಚಿಂತೆಯುಳ್ಳವನು.

ಜ್ಞಾನಿಯ ವೈಲಕ್ಷಣ್ಯವನ್ನು ಹಿಂದೆ ಹೇಳಿದರು. ಇನ್ನೂ ಆತನು ಎಂತವನೆಂದರೆ ಭಗವದ್ಗೀತೆಯ ಪರಮಹಿತೋಪದೇಶವಾದ **"ಮನ್ಮನಾ ಭವಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು"** ಎಂಬಲ್ಲಿ ತೋರಿಬರುವ ಲಕ್ಷಣವನ್ನುಳ್ಳವರೆಂದು ಹೇಳುತ್ತಾರೆ. **ಭಗವದ್ಧ್ಯಾನ** - ಭಗವಂತನ ಅನುಚಿಂತನವು, **ಯೋಗ** – ಆಸನಾದಿಗಳನ್ನು ನಿರ್ಮಿಸಿಕೊಂಡು ತದೇಕಧ್ಯಾನದಿಂದ ಪರಬ್ರಹ್ಮ ಸಾಕ್ಷಾತ್ಕಾರಕ್ಕಾಗಿ

**ಸುಖದುಃಖ ಸ್ತದೇಕಧೀಃ । ಭಗವದ್ಧ್ಯಾನ ಯೋಗೋಕ್ತಿ ವಂದನ ಸ್ತುತಿ ಕೀರ್ತ್ತನೈಃ । ಲಬ್ಧಾತ್ಮಾ ತದ್ಗತ ಪ್ರಾಣಮನೋ ಬುದ್ಧೀನ್ದ್ರಿಯ ಕ್ರಿಯಃ ॥**

---

**ಉಪಾಸನೆಯು, ಉಕ್ತಿಃ** - ಪ್ರತಿಪಾದನವು ಅಥವಾ ಸೇವೆಯು, **ವಂದನ** - ತ್ರಿಕರಣಗಳಿಂದಲೂ ಪ್ರಣಾಮವು, **ಸ್ತುತಿ** – ಗುಣಾನುಕಥನವು, ಸ್ತೋತ್ರಗಳನ್ನು ಹೇಳೋಣವು, **ಕೀರ್ತ್ತನೈಃ** - ಆತನಗುಣ ವಿಭವ ಚೇಷ್ಟಿತಾದಿಗಳನ್ನು ಕೊಂಡಾಡೋಣವು, ಇವುಗಳಿಂದ **ಲಬ್ಧಾತ್ಮಾ** - ಸತ್ತೆಯನ್ನು ಹೊಂದಿದ ಆತ್ಮಸ್ವರೂಪವನ್ನುಳ್ಳವನು, ಇವುಗಳಿಲ್ಲದೆ ತಾನು ವಸ್ತುವೇ ಅಲ್ಲವೆಂಬ ಭಾವವು. ಅಥವಾ ಈ ಮೇಲೆ ಹೇಳಿದ ಧ್ಯಾನಾದಿ ವ್ಯಾಪಾರಗಳನ್ನು ಆತನಲ್ಲಿ ಸಮರ್ಪಿಸುವದರ ಮೂಲಕ ಉಂಟಾದ ಅನುಗ್ರಹದಿಂದ ಸತ್ತೆಯನ್ನು ಹೊಂದಿದವನು, ಇನ್ನೂ ಎಂತವನೆಂದರೆ ತದ್ಗತ ...ಕ್ರಿಯಃ, **ತದ್ಗತ**-ಆ ಪರಮ ಪುರುಷನನ್ನು ಹೊಂದಿದ, ಪ್ರಾಣ, ಮನಸ್ಸು, ಎಂದರೆ ಸಂಕಲ್ಪ, ಬುದ್ಧಿ ಎಂದರೆ ವಿವೇಕಜ್ಞಾನ ಅಥವಾ ಮನಸ್ಸಿನಿಂದುಂಟಾದ ನಿಶ್ಚಯಜ್ಞಾನವು, ಹೀಗೆ ಅನೇಕ ಕಡೆಯಲ್ಲಿ ಮನಸ್ಸಿಗೂ ಬುದ್ಧಿಗೂ ಸ್ವಲ್ಪ ವ್ಯತ್ಯಾಸವು ಹೇಳಲ್ಪಟ್ಟಿರುತ್ತದೆ, ಇದಕ್ಕೆ ಉದಾಹರಣವಾಗಿ "**ಮಯ್ಯೇವ ಮನಆಧತ್ಸ್ವ ಮಯಿಬುದ್ಧಿಂ ನಿವೇಶಯ**" (ಗೀ. ೧೨.೭) ಎಂಬುದನ್ನು ಹೇಳಬಹುದು. ಇದು ಮನಸ್ಸಿನ ಮೂಲಕವಾಗಿ ಆತ್ಮಾವಿಗೆ ಉಂಟಾಗುವ ವಿವೇಕೋದ್ಧ ಜ್ಞಾನಕ್ಕೆ ಸಂಬಂಧಿಸಿದುದು. ಶ್ರೀ ಯತಿವರ್ಯರು ಶ್ರೀ ಭಾಷ್ಯದಲ್ಲಿ "**ಅಧ್ಯವಸಾಯಾ ಭಿಮಾನ ಚಿಂತಾವೃತ್ತಿ ಭೇದಾನ್ಮನ ಏವ ಬುದ್ಧ್ಯಹಂಕಾರ ಚಿತ್ತಶಬ್ದೈರ್ವ್ಯಪದಿಶ್ಯತೇ**" ಎಂದು ಅಪ್ಪಣೆ ಕೊಡಿಸಿರುತ್ತಾರೆ. ಬಾಹ್ಯೇಂದ್ರಿಯ, ಇವುಗಳ **ಕ್ರಿಯಃ** - ಕ್ರಿಯೆಗಳನ್ನುಳ್ಳವನು. ಅಭಿಪ್ರಾಯವೇನೆಂದರೆ ಮನಸ್ಸು ಇಂದ್ರಿಯಗಳು ಐಹಿಕ ವಿಷಯೋಪಗಳಲ್ಲಿ ಪ್ರವರ್ತಿಸದ ಹಾಗೆ ಮಾಡಿಕೊಂಡು, ಎಲ್ಲವೂ ಭಗವಂತನಲ್ಲೇ ಸಕ್ತವಾಗಿರುವ ವೃತ್ತಿಯುಳ್ಳವನು ಜ್ಞಾನಿಯು. "**ಮಯ್ಯೇವ ಮನ ಆಧತ್ಸ್ವ ಮಯಿಬುದ್ಧಿಂ ನಿವೇಶಯ**" ಎಂಬಲ್ಲಿ ಉಪದೇಶಿಸಲ್ಪಟ್ಟ ಭಾವವು ಸೂಚಿತವು.

ಜ್ಞಾನಿಯು ಎಂತವನು ಹೇಗೆ ವಿಲಕ್ಷಣನೆಂಬುದನ್ನು ಹಿಂದಿನ ಶ್ಲೋಕಗಳಿಂದ ಉಪಪಾದಿಸಿ ಹೇಳಿದರು, ಹೀಗೆ ಆತನು "**ಸತತಂ ಕೀರ್ತ್ತಯಂತೋ ಮಾಂ ಯತನ್ತಶ್ಚ ದೃಢವ್ರತಾಃ । ನಮಂಸ್ಯನ್ತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ**" ಸದಾ ಧ್ಯಾನ ಯೋಗ ಸ್ತುತಿ, ವಂದನ ಕೀರ್ತನಾದಿಗಳಲ್ಲೇ ಇರುವ ಪ್ರಪನ್ನನಿಗೆ ತನಗೆ ವಿಧಿಸಲ್ಪಟ್ಟ ವರ್ಣಾಶ್ರಮಧರ್ಮಗಳಾದ ನಿತ್ಯನೈಮಿತ್ತಿಕ ಕರ್ಮಗಳ ಆವಶ್ಯಕತೆ ಏತಕ್ಕೆ? "**ಸರ್ವಧರ್ಮಾನ್ ಪರಿತ್ಯಜ್ಯ**" ಎಂಬಲ್ಲಿ ಎಲ್ಲಾ ಕರ್ಮಗಳನ್ನೂ ತ್ಯಾಗಮಾಡಬಹುದೆಂದು ವಿಧಿಸಿರುತ್ತೆಯಲ್ಲಾ ಎಂದು ಪೂರ್ವಪಕ್ಷವನ್ನು ತಂದರೆ, ಅವುಗಳೂ ಆವಶ್ಯಕವಾಗಿ ಕರ್ತ್ತವ್ಯಗಳೆಂದೂ, ಅವುಗಳನ್ನು ಹೇಗೆ ಅನುಷ್ಠಿಸತಕ್ಕ

**ನಿಜಕರ್ಮಾದಿ ಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವ ಕಾರಿತಃ ।**
**ಉಪಾಯತಾಂ ಪರಿತ್ಯಜ್ಯ ನ್ಯಸೇದ್ದೇವೇತು ತಾಮಭೀಃ ॥ ೩೧ ॥**
**ಎನ್ರು ಅರುಳಿಚ್ಚೆಯ್‌ದ ವಿಡತ್ತಿಲ್ ಪ್ರೀತ್ಯೈವಕಾರಿತಃ ಎನ್ರದು**

---

ದ್ದೆಂಬುದನ್ನೂ ಈ ಶ್ಲೋಕದಲ್ಲಿ ಉಪಪಾದಿಸುತ್ತಾರೆ. ಇದು ಹಿಂದೆಯೇ ಶಾಸ್ತ್ರೀಯ ನಿಯಮನಾಧಿಕಾರದಲ್ಲಿ ಉಪಪಾದಿತವಾದುದರಿಂದ ಇದರ ಅರ್ಥಕ್ಕೆ ೧೪೫-೭ನೆಯ ಪುಟಗಳನ್ನು ನೋಡಿ. ಅಲ್ಲಿ ಅಪ್ಪಣೆ ಕೊಡಿಸಿರುವುದೇನೆಂದರೆ "**ನಿಜಕರ್ಮಾದಿ**" ಎನ್ರು **ಶ್ರೀ ಗೀತಾರ್ಥಸಙ್ಗ್ರಹತ್ತಿಲ್** "**ಪ್ರೀತ್ಯೈವ**" ಎಙ್ಗಿರ **ಅವಧಾರಣ ತ್ತಾಲೇ** ಸಾಧನತ್ವ ಬುದ್ಧಿಯೈ ವ್ಯವಚ್ಛೇದಿತ್ತಾರೆನ್ರು ವಿಡಙ್ "**ಉಪಾಯ ತಾಂ ಪರಿತ್ಯಜ್ಯ**" ಎನ್ರು **ವಿವರಿಕ್ಕೈಯಾಲೇ ಸುವ್ಯಕ್ತಮ್**". ನಿತ್ಯದಾಸ್ಯೈಕ ಸ್ವಭಾವನಾಗಿ ಐಹಿಕವನ್ನೆಲ್ಲಾ ತೊರೆದು ಪರಮಾತ್ಮನಲ್ಲೇ ಸಕ್ತವಾದ ಮನಸ್ಸುಳ್ಳವ ನಾಗಿ ಮುಕ್ತನಹಾಗೆ ಆನಂದಿಸಿಕೊಂಡಿರುವ ಪ್ರಪನ್ನನಿಗೆ, ತನಗೆ ನಿಯತವಾದ ನಿತ್ಯ ನೈಮಿತ್ತಿಕ ಕರ್ಮಗಳಾದ ಆಜ್ಞಾ ಕೈಂಕರ್ಯಗಳನ್ನೂ, ಹಾಗೆಯೇ ಭಗವಂತನ ಮುಖೋಲ್ಲಾಸಕ್ಕೆ ಹೇತುಗಳಾದ ಅನುಜ್ಞಾ ಕೈಂಕರ್ಯಗಳನ್ನೂ, ಯಥಾಧಿಕಾರ ವಾಗಿ ಶಾಸ್ತ್ರರೀತ್ಯಾ ಅನುಷ್ಠಿಸತಕ್ಕದ್ದು. ಅವುಗಳಲ್ಲಿ ಆಜ್ಞಾಕೈಂಕರ್ಯಗಳನ್ನು ಯಥಾಶಾಸ್ತ್ರಂ ಅನುಷ್ಠಿಸಲೇ ಬೇಕು. ಇಲ್ಲವಾದರೆ ಭಗವದಾಜ್ಞಾಚ್ಛೇದಿಯಾಗಿ ಭಗವನ್ನಿಗ್ರಹಕ್ಕೆ ಒಳಗಾಗುವನು. ಅದೂ ಅಲ್ಲದೆ **ಸಂಧ್ಯಾಹೀನೋಽಶುಚಿರ್ನಿತ್ಯ ಮನರ್ಹ ಸ್ಸರ್ವಕರ್ಮಸು**" ಎಂದೂ ಹೇಳಲ್ಪಟ್ಟಿರುವುದರಿಂದ ಭಗವದಾರಾಧನ ರೂಪವಾದಯಾವ ಕರ್ಮಗಳಿಗೂ ಯೋಗ್ಯನಾಗುವದಿಲ್ಲವು. ಅನುಜ್ಞಾಕೈಂಕರ್ಯಗಳ ನ್ನೆಸಗುವದೂ, ಭಗವನ್ಮುಖೋಲ್ಲಾಸಕರವಾದುದರಿಂದ, ಅವುಗಳು ಶಾಸ್ತ್ರೀಯನಿಯ ಮನಾನುಸಾರವಾಗಿ ಅನುಷ್ಠಿತಗಳಾಗದೇ ಹೋದರೆ, "**ಪ್ರೀತ್ಯೈವಕಾರಿತಃ**" ಎಂದು ಹೇಳಿದ ಹಾಗೆ ಆಗುವದಿಲ್ಲವು. ತನ್ನ ಇಷ್ಟಾನುಸಾರ ಕೈಂಕರ್ಯಗಳನ್ನು ಮಾಡ ಬಹುದು ಎಂಬುದು ಇದಕ್ಕೆ ಅರ್ಥವಲ್ಲವು. ಭಗವತ್ಪ್ರೀಣನ ಉಂಟಾಗುವ ಹಾಗೆಯೇ ಪ್ರೀತಿಯಿಂದ ಶಾಸ್ತ್ರರೀತ್ಯಾ ಮಾಡತಕ್ಕದ್ದು ಎಂಬ ಭಾವವು.

ಮುಂದೆ ಪ್ರೀತ್ಯೈವ ಎಂಬಲ್ಲಿರುವ ಏವ ಕಾರದ ಅರ್ಥವೇನು ? ಯಾವು ದನ್ನು ವ್ಯವಚ್ಛೇದಿಸಿ ಈ ಅವಧಾರಣವು ಪ್ರಯೋಗಿಸಲ್ಪಟ್ಟಿರುತ್ತದೆ ? ಎಂಬು ದನ್ನು ಮುಂದಿನ ವಾಕ್ಯಗಳಿಂದ ಉಪಪಾದಿಸಿ ಪೂರ್ವಪಕ್ಷಿಗಳು ಹೇಳಿದ ಅರ್ಥವು ಸರಿಯಲ್ಲವೆಂದು ತಿಳಿಸುತ್ತಾರೆ. ಹಾಗಾದರೆ ಸರಿಯಾದ ಅಭಿಪ್ರಾಯವು ಯಾವುದೆಂ ದರೆ ತಿಳಿಸುತ್ತಾರೆ. ಎನ್ರು – ಎಂಬದಾಗಿ, ಎಂದರೆ ಹಿಂದಿನ **ನಿಜಕರ್ಮಾದಿ** ಎಂಬ ಶ್ಲೋಕದಲ್ಲಿ, **ಅರುಳಿಚ್ಚೆಯ್‌ದ ವಿಡತ್ತಿಲ್** - ಕೃಪಯಾ ಉಪದೇಶಿಸಿದ ಸಂದರ್ಭ ದಲ್ಲಿ, "**ಪ್ರೀತ್ಯೈವಕಾರಿತಃ**", ಎನ್ರದುವುಮ್ – ಎಂದು ಹೇಳಿರುವದು, ಶಾಸ್ತ್ರಂ

**ವುಮ್ ಶಾಸ್ತ್ರಂ ವೇಣ್ಡಾವೆನ್ರಪಡಿಯನ್ರು. ಇಙ್ಙು ಶಾಸ್ತ್ರಮ್‌ಕೊಂಡೇ ಅರಿಯ ವೇಂಡುಗಿರ ಕೈಂಕರ್ಯಮ್ ತನ್ನಿಲ್ ಸ್ವಾಮಿಸಂತೋಷಜನಕತ್ವಮಡಿಯಾಕ ಶೇಷಭೂತನಾನ ತನುಕ್ಕು ಪ್ಪಿರುಕ್ಕಿರ ಪ್ರೀತಿಯುಡೈಯ ಪ್ರೇರಕತ್ವಾತಿ ಶಯಮ್ ಶೊಲ್ಲುಗೈಯಿಲೇ ತಾತ್ಪರ್ಯಮ್.**

---

**ವೇಂಡಾವೆನ್ರಪಡಿಯನ್ರು**-ಶಾಸ್ತ್ರವು ಬೇಡವೆಂದು ಹೇಳಿದುದಲ್ಲವು, ಪ್ರೀತಿಯಿಂದಲೇ ಮಾಡತಕ್ಕದ್ದು ಎಂದರೆ ಶಾಸ್ತ್ರದ ಆವಶ್ಯಕತೆ ಬೇಕಿಲ್ಲವೆಂದು ಹೇಳಿದ ಅಭಿಪ್ರಾಯವಲ್ಲವೆಂಬ ಭಾವವು. **ಇಙ್ಙು** - ಈ ಸಂದರ್ಭದಲ್ಲಿ ಎಂದರೆ ಅನುಜ್ಞಾ ಕೈಂಕರ್ಯಗಳನ್ನು ಅನುಷ್ಠಿಸುವ ಸಂದರ್ಭದಲ್ಲಿ, **ಶಾಸ್ತ್ರಮ್ ಕೊಂಡೇ** - ಶಾಸ್ತ್ರ ಮೂಲಕವಾಗಿಯೇ, **ಅರಿಯವೇಣ್ಡುಗಿರ ಕೈಂಕರ್ಯಂ ತನ್ನಿಲ್**-ತಿಳಿಯಬೇಕಾದ ಕೈಂಕರ್ಯಾನುಷ್ಠಾನದಲ್ಲಿ, **ಸ್ವಾಮಿಸಂತೋಷ ಜನಕತ್ವಮಡಿಯಾಗ** - ಸರ್ವೇಶ್ವರನಿಗೆ ಸಂತೋಷವನ್ನುಂಟುಮಾಡುವದರ ಮೂಲಕವಾಗಿ, **ಶೇಷಭೂತನಾದ ತನುಕ್ಕು** - ತನಗೆ, **ಪಿರುಕ್ಕಿರ ಪ್ರೀತಿಯಿನುಡೈಯ**-ಉಂಟಾಗುವ ಪ್ರೀತಿಯ, **ಪ್ರೇರಕತ್ವಾತಿಶಯಮ್** - ಪ್ರೇರಿಸೋಣದರ ಆಧಿಕ್ಯವನ್ನು, **ಶೊಲ್ಲುಗೈಯಿಲೇ ತಾತ್ಪರ್ಯಮ್** - ಹೇಳುವದರಲ್ಲಿ ಅಭಿಪ್ರಾಯವು. ಈ ಆಜ್ಞಾನುಜ್ಞಾ ಕೈಂಕರ್ಯಗಳನ್ನೆಲ್ಲಾ ಶಾಸ್ತ್ರವಿಧಾನ ಕ್ರಮಗಳನ್ನನುಸರಿಸಿಯೇ ನಡೆಸತಕ್ಕದ್ದಾಗಿವೆ. "**ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ**" ಎಂದು ಶ್ರೀ ಕೃಷ್ಣಭಗವಾನರವರ ಉಪದೇಶವು. ತಾನು ಮನುಷ್ಯಾವತಾರಿಯಾದುದರಿಂದ ಮನುಷ್ಯನ ಹಾಗೆಯೇ ತಾನೇ ಶಾಸ್ತ್ರಾತಿಕ್ರಮಮಾಡಿ ಎಂದಿಗೂ ನಡೆಯುವವನಲ್ಲವೆಂದು ದುರ್ಯೋಧನನ ಎದುರಿನಲ್ಲಿ ಪ್ರತಿಜ್ಞೆಯನ್ನು ಮಾಡಿದ್ದಾರೆ. ನೆಯ ಪುಟವನ್ನು ನೋಡಿ. ಶಾಸ್ತ್ರರೀತ್ಯಾ ನಡಿಸಿದರೇನೇ ಭಗವಂತನ ಪ್ರೀತಿಯು ದೊರೆಯುತ್ತದೆ ಎಂದು ಅಂತಹ ಪ್ರೀತಿಯು ಲಭಿಸುವದಕ್ಕಾಗಿ ತುಂಬಾ ಪ್ರೀತ್ಯತಿಶಯದಿಂದಲೇ ಆ ಆಜ್ಞಾನುಜ್ಞಾ ಕೈಂಕರ್ಯಗಳನ್ನೆಲ್ಲಾ ಅನುಷ್ಠಿಸತಕ್ಕದ್ದೆಂಬ ತಾತ್ಪರ್ಯವು. ಆದುದರಿಂದ ಆ ಕರ್ಮಾನುಷ್ಠಾನಗಳಲ್ಲಿ ಅವು ಉಪಾಯವಾಗಿ ಪರಿಣಮಿಸುತ್ತವೆ ಎಂಬ ಭಾವವನ್ನು ಪರಿತ್ಯಾಗವಮಾಡಬೇಕು ಎಂಬ ಭಾವವು. ಇದೀಗ ಪ್ರೀತ್ಯೈವ ಎಂಬಲ್ಲಿನ ಏವಕಾರದ ಭಾವವು ಎಂದು ಉಪದೇಶಿಸಿರುತ್ತಾರೆ. ಕರ್ಮವೇಉಪಾಯವೆಂಬುದು ಕರ್ಮಮೀಮಾಂಸಕನ ಅಭಿಪ್ರಾಯವು. ಕ್ಷಣಸಾಧ್ಯವಾದ ಕರ್ಮದಿಂದ ಒಂದು ಅಪೂರ್ವವು ಉತ್ಪನ್ನವಾಗಿ ಫಲವನ್ನು ಕೊಡುತ್ತದೆಂಬುದು ಆತನ ಅಭಿಪ್ರಾಯವು. ಸರಿಯಾದ ಅಭಿಪ್ರಾಯವೇನೆಂದರೆ ಈ ಕ್ಷಣಸಾಧ್ಯವಾದ ಕರ್ಮವು ಭಗವನ್ಮುಖೋಲ್ಲಾಸವನ್ನುಂಟುಮಾಡಿ ಆತನ ಅನುಗ್ರಹ ಮೂಲಕ ಫಲಪ್ರಾಪ್ತಿಯು. ಆದುದರಿಂದ ಈ ಕರ್ಮಗಳೆಲ್ಲಾ ಭಗವದಾರಾಧನರೂಪವಾದುದರಿಂದ ಆತನು ಮೆಚ್ಚುವಹಾಗೆ ಶಾಸ್ತ್ರರೀತ್ಯಾ ಶ್ರದ್ಧಾಭಕ್ತಿಗಳ ಆಧಿಕ್ಯ ಪುರಸ್ಸರವಾಗಿ

ಇಶ್ಲೋಕಙ್ಗಳ್ಳೈ ಉಪಾಸನಾಧಿಕಾರಿಪಕ್ಕಲಿಲೇ ಯೋಜಿಕ್ಕುಮ್ ಪೋದು ಉಪಾಸನಾದಿಗಳುಡೈಯ ಸ್ವಾದುತಮತ್ವತ್ತೈಯುಮ್, ಫಲೋ

---

ಅನುಷ್ಠಿಸಿದುದಾದರೆ ಆತನು ಪ್ರೀತನಾಗಿ ಶ್ರೇಯಸ್ಸನ್ನು ವರ್ಷಿಸುವನು. ಆತನು ಪ್ರಸನ್ನನಾದರೇನೇ ಫಲವು. ಭಗವಂತನು ಈ ಮುಮುಕ್ಷುವಿಗೆ ಸಿದ್ಧೋಪಾಯನಾಗಿ ಕಂಕಣಬದ್ಧನಾಗಿ ನಿಂತಿರುವಾಗ ಆತನ ಮುಖೋಲ್ಲಾಸ ಹೇಗೆ ಉಂಟಾಗಬೇಕೋ ಹಾಗೆ ಭಕ್ತ್ಯಾಧಿಕ್ಯದಿಂದ ನಡೆಸಬೇಕೆಂಬುದೇ ಶ್ರೀ ಯಾಮುನಮುನಿಗಳ ಅಭಿಪ್ರಾಯವು.

ಈ "ನಿಜಭಕ್ತ್ಯಾದಿ" ಎಂದು ಹೇಳಿದುದೇನು ಪ್ರಪತ್ತ್ಯಧಿಕಾರಿಯ ವಿಷಯವಾಗಿ ಹೇಳಿದುದೇ ಅಥವಾ ಉಪಾಸನಾಧಿಕಾರಿಯು ವಿಷಯವಾಗಿ ಹೇಳಿದುದೇ ಎಂಬ ಚರ್ಚೆಯಲ್ಲಿ ಭಗವದ್ಗೀತೆಯು ಒಂದೇ ಉಪಾಯವನ್ನು ಕುರಿತು ಹೇಳಲಿಲ್ಲವು. ಎರಡು ಉಪಾಯಗಳನ್ನು ಕುರಿತೇ ಹೇಳಿರುವದು ಎಂಬುದನ್ನು ದಾಸನ ಗೀತಾರ್ಥ ಉಪಪಾದನೆಯಾದ ಆಚಾರ್ಯಹೃದಯಾನ್ವೇಷಿಣಿಯಲ್ಲಿ ಪ್ರಾಪ್ತ ಸ್ಥಳಗಳಲ್ಲಿ ತೋರಿಸಿರುತ್ತೇನೆ. ಈ ಪ್ರಕರಣದಲ್ಲಿ ಈ ಗೀತಾರ್ಥಸಙ್ಗ್ರಹ ವಾಕ್ಯವು ಸ್ವತಂತ್ರ ಪ್ರಪತ್ತಿನಿಷ್ಠನಿಗೆ ಅನ್ವಯಿಸುತ್ತದೆಂದು ಶ್ರೀ ದೇಶಿಕವರ್ಯರು ತಿಳಿಸಿ, ಮುಂದಿನ ವಾಕ್ಯದಲ್ಲಿ "ಈ ಶ್ಲೋಕಙ್ಗಳ್ಳೈ ಉಪಾಸನಾಧಿಕಾರಿಪಕ್ಕಲಿಲೇ" ಎಂದಾರಂಭಿಸಿ ಭಕ್ತಿಯೋಗನಿಷ್ಠನನ್ನು ಕುರಿತು ಹೇಳುವ ಸಂದರ್ಭದಲ್ಲಿ ಯಾವ ಯಾವ ಭಾವಗಳು ಈ ಶ್ಲೋಕಗಳಿಂದ ದ್ಯೋತಿತವೆಂದು ತಿಳಿಸುತ್ತಾರೆ. ಇದರಿಂದ ಶ್ರೀ ಯಾಮುನ ಮುನಿಗಳ ಮತ್ತು ಶ್ರೀ ದೇಶಿಕವರ್ಯರ ಅಭಿಪ್ರಾಯವೂ ಐಕಕಂಠ್ಯದಿಂದ ಶ್ರೀಮದ್ಗೀತಾಶಾಸ್ತ್ರವೂ ಅದರ ಸಙ್ಗ್ರಹ ವ್ಯಾಖ್ಯಾನವಾದ ಗೀತಾರ್ಥ ಸಂಗ್ರಹವೂ ಸಹ ಎರಡು ವಿಧ ಉಪಾಯಗಳನ್ನೂ ಬೋಧಿಸುತ್ತವೆ ಎಂಬುದನ್ನು ಇಲ್ಲಿ ವ್ಯಕ್ತವಾಗಿ ಗ್ರಹಿಸಬಹುದು. ಇದರಿಂದ ಗೀತಾಶಾಸ್ತ್ರವು ಉಪಾಸನ ಒಂದನ್ನೇ ಬೋಧಿಸುತ್ತದೆಂಬ ವಾದವು ನಿರಾಕರಿಸಲ್ಪಟ್ಟಿತು. ಈ ಸಂಗ್ರಹ ಶ್ಲೋಕಗಳು ಏನನ್ನು ಉಪಪಾದಿಸುತ್ತವೆಂದರೆ ಹೇಳುತ್ತಾರೆ. ಮೂರು ಮುಖ್ಯಾಂಶಗಳನ್ನು ಗ್ರಹಿಸಬಹುದೆಂದು ತಿಳಿಸುತ್ತಾರೆ. ಇಶ್ಲೋಕಙ್ಗಳ್ಳೈ - ಈ ಸಂಗ್ರಹ ಶ್ಲೋಕಗಳನ್ನು, ಉಪಾಸನಾಧಿಕಾರಿಪಕ್ಕಲಿಲೇ-ಉಪಾಸನನಿಷ್ಠನ ವಿಷಯದಲ್ಲಿ, ಯೋಜಿಕ್ಕುಂಪೋದು - ಅನ್ವಯಿಸುವ ಸಂದರ್ಭದಲ್ಲಿ (೧) ಉಪಾಸನಾದಿಗಳುಡೈಯ- ಉಪಾಸನವೇ ಮೊದಲಾದವುಗಳ, ಆದಿಶಬ್ದದಿಂದ ತದಿತರ ಕಾಲಗಳಲ್ಲಿ ನಡೆಯುವ, ಶ್ರವಣ, ಕೀರ್ತನೆ, ಭಗವದಾರಾಧನೆ, ನಾಮಸಂಕೀರ್ತನೆ ಮೊದಲಾದವು ಹೇಳಲ್ಪಟ್ಟವು. ಸ್ವಾದುತಮತ್ವತ್ತೈಯುಮ್ – ಅತ್ಯಂತ ತನಗೆ ಭೋಗ್ಯವಾಗಿರುವುದನ್ನೂ ಇವು ಮೊದಲಿನ ಎರಡು ಶ್ಲೋಕಗಳಿಂದಲೂ, ಸ್ಪಷ್ಟವು. (೨) ಫಲೋಪಾಯಮಾನ - ಫಲಕ್ಕೆ ಸಾಧಕವಾದ, ಶರಣ್ಯನುಕ್ಕು ಪ್ರಸಾದನಮಾಯ್

**ಪಾಯಮಾನ ಶರಣ್ಯನುಕ್ಕು ಪ್ರಸಾದನಮಾಯ್‌ಕ್ಕೊಂಡು, ಫಲತ್ತುಕ್ಕು ಸಾಕ್ಷಾದುಪಾಯಮನ್ರಿಕ್ಕೇ ನಿರ್ಕ್ಕಿರ ನಿಲೈಯುಮ್, ಇವ್ವುಪಾಸನತ್ತಾಲೇ ಪ್ರಸನ್ನನಾನ ಸರ್ವೇಶ್ವರರ್ ತಾನೇ ಸಾಕ್ಷಾದುಪಾಯಮಾಯ್ ನಿರ್ಕ್ಕಿರ ನಿಲೈಯ್ಯೈ ಯುಮ್ ಶೊಲ್ಲುಗೈಯಿಲೇ ನೋಕ್ಕಾಕಕ್ಕಡವದು.**

---

**ಕ್ಕೊಂಡು** - ಸರ್ವ ರಕ್ಷಕನಾದ ಭಗವಂತನ ಪ್ರಸನ್ನತೆಯನ್ನುಂಟುಮಾಡುವದಾಗಿ **ಫಲತ್ತುಕ್ಕು** ಸಾಕ್ಷಾದುಪಾಯ ಮನ್ರಿಕ್ಕೇ ನಿರ್ಕ್ಕಿರ ನಿಲೈಯುಮ್ - ಆ **ಉಪಾಸನಾದಿಗಳು** ವ್ಯಾಜಮಾತ್ರವೇ ಅಲ್ಲದೆ ಫಲವನ್ನು ತಾವಾಗಿಯೇ ಸಾಕ್ಷಾತ್ತಾಗಿ ಎಂದಿಗೂ ಫಲವನ್ನು ಸಾಧಿಸಿಕೊಡಲಾರರೆಂಬ ಭಾವವನ್ನೂ, ಇದು **"ಉಪಾಯತಾಂ ಪರಿತ್ಯಜ್ಯ ನ್ಯಸೇದ್ದೇವೇತು ತಾಮಭೀಃ"** ಎಂಬಲ್ಲಿ ಉಪಪಾದಿತವು. (೩) **ಇವ್ವುಪಾಸನತ್ತಾಲೇ** - ಈ ಉಪಾಸನನಿಂದ, **ಪ್ರಸನ್ನನಾನ** – ಪ್ರೀತನಾದ **ಸರ್ವೇಶ್ವರರ್ ತಾನೇ**–ಸರ್ವೇಶ್ವರನೇ, **ಸಾಕ್ಷಾದುಪಾಯ ಮಾಯ್‌ನಿರ್ಕ್ಕಿರನಿಲೈಯ್ಯೈಯುಮ್**-ಸಾಕ್ಷಾದುಪಾಯವಾಗಿರುವ, ಫಲಪ್ರದಾತಾವಾಗಿ ತಾನೇ ಕಂಕಣಬದ್ಧನಾಗಿ ನಿಂತಿರುವ ಸ್ಥಿತಿಯನ್ನೂ ಇದು **"ನಿಜಕರ್ಮಾದಿ ಭಕ್ತ್ಯಂತಂ ಕುರ್ಯಾತ್ಪ್ರೀತ್ಯೈವಕಾರಿತಃ । ಉಪಾಯತಾಂ ಪರಿತ್ಯಜ್ಯ"** ಎಂಬುದರಿಂದ ಹೇಳಲ್ಪಟ್ಟವು. ಈತನು ಮಾಡುವ ಭಕ್ತಿಯೋಗವೂ ಅದಕ್ಕೆ ಸಂಬಂಧಪಟ್ಟ ಸರ್ವವಿಧಾನುಷ್ಠಾನಗಳೂ ವ್ಯಾಜಮಾತ್ರವಾದವೇ, ಆದುದರಿಂದಲೇ **ಉಪಾಯತಾಂ ಪರಿತ್ಯಜ್ಯ** ಎಂಬ ಉಪದೇಶವು. ಹಾಗಾದರೆ ಫಲಪ್ರದನು ಯಾರು? ಎಂದರೆ **ಪ್ರೀತ್ಯೈವಕಾರಿತ** ವಾಗುವದರ ಮೂಲಕ ಉಂಟಾದ ಭಗವಂತನ ಅನುಗ್ರಹವೇ ಎಂಬ ಭಾವವು, **ಶೊಲ್ಲುಗೈಯಿಲೇ** - ಹೀಗೆ ಮೂರನ್ನೂ ಹೇಳುವದರಲ್ಲಿ **ನೋಕ್ಕಾಕಕಡವದು** – ಮುಖ್ಯ ತಾತ್ಪರ್ಯವುಳ್ಳವುಗಳಾಗಿರುತ್ತವೆ. ಈ ಮೂರು ಶ್ಲೋಕಗಳಿಂದ ಗ್ರಹಿಸತಕ್ಕ ಭಾವಗಳು ಈ ಮೂರು ಎಂದು ಹೇಳಿದರು..—ಉಪಾಯವಾದ ಉಪಾಸನೆಯೂ ಅದಕ್ಕೆ ಸಂಬಂಧಿಸಿದ ಪ್ರವೃತ್ತಿಗಳೂ **"ಭಜನಸುಖಮೇಕಸ್ಯ ವಿಪುಲಂ"** ಎಂಬಲ್ಲಿ ಹೇಳಿರುವ ಹಾಗೆ ಸ್ವಾದುತಮವೆಂದೂ, ಹೀಗಿದ್ದರೂ, ಅದು ವ್ಯಾಜಮಾತ್ರವೇ ಎಂದೂ, ಪ್ರೀತ್ಯತಿಶಯದಿಂದ ಮಾಡುವದರಿಂದ ಉಂಟಾದ ಭಗವದನುಗ್ರಹವೇ ಸಾಕ್ಷಾತ್ತಾಗಿ ಫಲದಾಯಕವೆಂದೂ, ಬೋಧಿಸುತ್ತವೆಂದು ತಾತ್ಪರ್ಯವು.

ಈ ಉಪಾಸನನಿಷ್ಠನ ವಿಷಯದಲ್ಲಾದರೋ ಈ ಶ್ಲೋಕಗಳು ಉಪಾಸನಾದಿ ಸ್ವಾದುತಮತ್ವ ಮೊದಲಾದುವು ಬೋಧಿತವೆಂದೇನೋ ಹೇಳಲ್ಪಟ್ಟಿತು. ಪ್ರಪತ್ತಿನಿಷ್ಠನಿಗೆ ಉಪಾಸನಾದಿಗಳು ಯಾವುವು ಇಲ್ಲವಲ್ಲಾ, ಹಾಗಾದರೆ ಅಂತಹ ಭರನ್ಯಾಸನಿಷ್ಠನಿಗೆ ಈ ಶ್ಲೋಕಗಳನ್ನು ಅನ್ವಯಿಸುವದರಿಂದ ತೋರುವ ಅರ್ಥಗಳು ಯಾವುವೆಂದರೆ **"ಸ್ವತಂತ್ರಪ್ರಪತ್ತಿನಿಷ್ಠರ್"** ಎಂಬ ವಾಕ್ಯದ ಮೂಲಕ ತಿಳಿಸುತ್ತಾರೆ.— ಈತನ ವಿಷಯದಲ್ಲಿ ಈ ಶ್ಲೋಕಗಳಿಂದ ಎರಡು ಮುಖ್ಯಾಭಿಪ್ರಾಯಗಳು ತೋರಿ

ಸ್ವತಂತ್ರ ಪ್ರಪತ್ತಿನಿಷ್ಠನ್ನಿರುತ್ತಿಲ್ ಇಶ್ಲೋಕಙ್ಗಳೈ ಯೋಜಿಕ್ಕುಮ್ಪೋದು ಇವನ್ ಆಜ್ಞಾನುಜ್ಞೈಗಳಾಲೇ ಪಣ್ಣುಮ್ ಕೈಙ್ಕರ್ಯಮೆಲ್ಲಾಮ್. ಭಕ್ತಿಯೋಗಾದಿಗಳಿನ್ ಕಟ್ಟಳೈ ಕುಲೈಯಾದಿರುನ್ದಾಲುಮ್, ಸ್ವಾಮಿಸಂತೋಷಮೊಳಿಯ ವೇರೊರು ಸ್ವರ್ಗಮೋಕ್ಷಾದಿ ಪ್ರಯೋಜನತ್ತುಕ್ಕುಪಾಯಮಾಗ ಮನುಷ್ಠಿಕ್ಕಿರಾ ನಲ್ಲಾಮೈಯಾಲೇ ಇವನುಕ್ಕು ಅನನ್ಯೋಪಾಯತ್ವೈಯುಮ್ ಅನನ್ಯಪ್ರಯೋಜನತ್ವೈಯುಮ್ ಕುಲೈಯಾದೇ ಇರುಕ್ಕಿರಪಡಿಯೈಯುಮ್ ಅಕಿಂಚನನಾನ ವಿವನುಕ್ಕು ಈಶ್ವರನ್ ತಾನೇ ಉಪಾಯಾನ್ತರ ಸ್ಥಾನತ್ತಿಲೇ ನಿನ್ರು ಫಲಂ ಕೊಡುಕ್ಕಿರ ಪಡಿಯೈಯುಮ್, ಶೊಲ್ಲುಗೈಯಿಲೇ ತಾತ್ಪರ್ಯಮ್.

---

ಬರುತ್ತವೆಂದು ತಿಳಿಸುತ್ತಾರೆ.—ಸ್ವತಂತ್ರ ಪ್ರಪತ್ತಿನಿಷ್ಠನ್ನಿರುತ್ತಿಲ್ – ಸ್ವತಂತ್ರ ಪ್ರಪತ್ತಿನಿಷ್ಠನ ವಿಷಯದಲ್ಲಿ ಈ ಶ್ಲೋಕಗಳನ್ನು, ಯೋಜಿಕ್ಕುಮ್ಪೋದು – ಅನ್ವಯಿಸುವ ಸಂದರ್ಭದಲ್ಲಿ (೧) ಇವನ್ – ಈ ಶರಣಾಗತಿಯನ್ನು ಅನುಷ್ಠಿಸಿದವನು, ಆಜ್ಞಾನುಜ್ಞೈಗಳಾಲೇ ಪಣ್ಣುಮ್ ಕೈಙ್ಕರ್ಯಮೆಲ್ಲಾಮ್ - ಆಜ್ಞಾನುಜ್ಞಾರೂಪದಲ್ಲಿ ಮಾಡುವ ಕೈಂಕರ್ಯವೆಲ್ಲಾ, ಭಕ್ತಿಯೋಗಾದಿಗಳಿನ್ ಕಟ್ಟಳೈ ಕುಲೈ ಯಾದಿರುನ್ದಾಲುಮ್ – ಭಕ್ತಿಯೋಗ ಮತ್ತು ಅದಕ್ಕೆ ಸಂಬಂಧಿಸಿದ ಪ್ರವೃತ್ತಿಗಳು ಇವುಗಳ ಅನುಷ್ಠಾನದಲ್ಲಿ ಶಾಸ್ತ್ರಮರ್ಯಾದೆಯನ್ನು ಹೇಗೆ ತಿರಸ್ಕರಿಸಕೂಡದೋ ಹಾಗೆಯೇ ಅನುಷ್ಠಿಸಲ್ಪಟ್ಟರೂ, ಸ್ವಾಮಿಸಂತೋಷಮೊಳಿಯ - ಸ್ವಾಮಿಗೆ ಸಂತೋಷವಾಗುವದನ್ನು ಬಿಟ್ಟು, ವೇರೊರು-ಬೇರೆ ಯಾವುದೊಂದೂ, ಸ್ವರ್ಗಮೋಕ್ಷಾದಿ ಪ್ರಯೋಜನತ್ತುಕ್ಕು ಉಪಾಯಮಾಗ - ಸ್ವರ್ಗವಾದ ಅಥವಾ ಮೋಕ್ಷವಾದ, ಆದಿ ಶಬ್ದದಿಂದ ವಿಹಿತಕೈಂಕರ್ಯವಾದ, ಪ್ರಯೋಜನಗಳಿಗೆ ಸಾಧನವೆಂದು ಭಾವಿಸಿ, ಆಗಲಿ, ಮೋಕ್ಷ ಪ್ರಯೋಜನಕ್ಕೂ, ಸಾಧನವೆಂದು ಭಾವಿಸುವದಿಲ್ಲವೋ? ಎಂದರೆ ಸರ್ವಭರವನ್ನೂ ಪುರಮಪುರುಷನಲ್ಲಿಟ್ಟು ನಿರ್ಭರನಾಗಿಯೂ ನಿರ್ಭಯನಾಗಿಯೂ ಇರುವ ಈ ಪ್ರಪನ್ನನಿಗೆ ಇನ್ನು ಮೋಕ್ಷಪ್ರಯೋಜನಕ್ಕೆ ಸಾಧನವೇಕೆ? ಆದುದರಿಂದ ಇವೆಲ್ಲಾ ಪ್ರಯೋಜನಗಳಿಗೂ ಸಾಧನವೆಂಬ ಭಾವನೆ ಇಲ್ಲದೆ ಇರುವದರಿಂದ ಎಂಬರ್ಥವು (೧) ಇವನಕ್ಕು - ಈ ಕೃತಕೃತ್ಯನಿಗೆ ಅನನ್ಯೋಪಾಯತೆ ಅನನ್ಯ ಪ್ರಯೋಜನವನ್ನೂ ಪರಮಪುರುಷನಲ್ಲದೆ ತನಗೆ ಬೇರೆ ಉಪಾಯವು ಯಾವುದೂ ಇಲ್ಲವೆಂದೂ, ಭಗವತ್ಪ್ರೀಣನ ಮಾತ್ರ ಪ್ರಯೋಜನವಲ್ಲದೆ ಬೇರೆ ಇನ್ನು ಯಾವ ಪ್ರಯೋಜನವೂ ಇಲ್ಲವೆಂದೂ, ಎಂಬ ಭಾವಗಳು, ಕುಲೈಯಾದೇ ಇರುಕ್ಕಿರ ಪಡಿಯುಮ್ - ನ್ಯೂನತೆಯನ್ನು ಹೊಂದದೇ ಇರುವ ಸ್ಥಿತಿಯನ್ನೂ (೨) ಅಕಿಂಚನನಾನ ವಿವನಕ್ಕು - ಸರ್ವೇಶ್ವರನಲ್ಲದೆ ತನಗೆ ಇನ್ನು ಯಾರು ರಕ್ಷಕರಿಲ್ಲವೆಂದು ದೈನ್ಯದಿಂದಿರುವ ಈ ಪ್ರಪನ್ನನಿಗೆ ಈಶ್ವರನ್ ತಾನೇ - ಸರ್ವೇಶ್ವರನಾದ ತಾನೇ, ಉಪಾಯಾನ್ತರಸ್ಥಾನತ್ತಿಲೇ -

ಬೇರೇ ಉಪಾಯವಾದ ಭಕ್ತಿಯೋಗ ಸ್ಥಾನದಲ್ಲಿ, **ನಿನ್ರು** - ನಿಂತು, **ಫಲಂಕೊಡು ಕ್ಕಿರ ಪಡಿಯ್ಯೈಯುಮ್** - ಫಲವನ್ನು ದಯಪಾಲಿಸುವ ರೀತಿಯನ್ನು, **ಶೊಲ್ಲು ಗೈಯಿಲೇ ತಾತ್ಪರ್ಯಮ್** - ಉಪದೇಶಿಸುವದರಲ್ಲಿ ತಾತ್ಪರ್ಯವು. ಭಕ್ತಿ ಯೋಗಕ್ಕೆ ಅನ್ವಯಿಸಿದಾಗ ಹೇಗೆ ಆ ಅನುಷ್ಠಾನಗಳೆಲ್ಲಾ ಶಾಸ್ತ್ರರೀತ್ಯಾ ನಡೆಸತಕ್ಕ ವೆಂದು ಏರ್ಪಟ್ಟವೋ, ಅದೇ ರೀತಿಯಲ್ಲೇ ಈ ಕೃತಕೃತ್ಯನೂ ಸಹ ಅನುಷ್ಠಿಸ ತಕ್ಕದ್ದು ; ಪ್ರೀತ್ಯೈವ ಎಂದು ಅವಧಾರಣದೊಂದಿಗೆ ಹೇಳಿರುವದರಿಂದ, ಯಾವ ಫಲಾಪೇಕ್ಷೆಯ ಬುದ್ಧಿಯೂ ಇರಕೂಡದೆಂದಾಗುವದರಿಂದ, ಇದರಲ್ಲಿ ಮೋಕ್ಷ ಫಲವೂ ಸೇರಿ ಅನನ್ಯೋಪಾಯತ್ವಬುದ್ಧಿಯು ಏರ್ಪಟ್ಟಿತು. **ಉಪಾ ಯತಾಂ ಪರಿತ್ಯಜ್ಯ** ಎಂಬಲ್ಲಿಯೇ ಇದು ಸುವ್ಯಕ್ತವು. ಬೇರೆ ಫಲವ್ಯಾವದನ್ನೂ ಅಪೇಕ್ಷಿಸದೆ ಬರೀ ಪ್ರೀತಿಪುರಸ್ಸರವಾಗಿ ನಡೆಸುವದರಿಂದ ಅನನ್ಯಪ್ರಯೋಜನ ತ್ವವೂ ಏರ್ಪಟ್ಟಿತು. ಯಾವಾಗ ಉಪಾಯಾನ್ತರದಲ್ಲಿ ಬುದ್ಧಿಯಿಲ್ಲವೋ, ಅಗ ನ್ಯಸೇದ್ದೇವೇತು ತಾಮಭೀಃ ಎಂಬಲ್ಲಿ ತೋರುವ ಹಾಗೆ, ಉಪಾಯಾಂತರ ಸ್ಥಾನ ದಲ್ಲಿ ಪರಮಪುರುಷ ನಿವೇಶನವೂ ಸಿದ್ಧಿಸಿತು ಎಂಬುದು ಮೇಲಿನ ವಾಕ್ಯ ತಾತ್ಪ ರ್ಯವು. ಈತನು ತಾನೇ ಅಸ್ವತಂತ್ರನಾದುದರಿಂದ ಆಕಿಂಚನ್ಯವು ಏರ್ಪಟ್ಟು ಪರಮಾತ್ಮನಲ್ಲೇ ಸರ್ವಭರವನ್ನಿಟ್ಟವನಾದುದರಿಂದ ಆತನ ಮುಖೋಲ್ಲಾಸಕ್ಕಾ ಗಿಯೇ ಶಾಸ್ತ್ರನಿಯಮನಾನುಸಾರ ಸರ್ವವಿಹಿತಗಳಾದ ಆಜ್ಞಾನುಜ್ಞಾಕೈಂಕರ್ಯ ಗಳನ್ನು ಮಾಡತಕ್ಕದ್ದೆಂಬ ಭಾವವು.

**ಹೀಗೆ ಶಾಸ್ತ್ರರೀತ್ಯಾ ಆಜ್ಞಾನುಜ್ಞಾ ಕೈಂಕರ್ಯಗಳನ್ನು ಅನುಷ್ಠಿಸಿದರೆ ದೇವತಾನ್ತರ ಸಂಬಂಧ ಉಂಟಾಗುತ್ತದೆಂಬ ಶಙ್ಕಾವಿಗೆ ಸಮಾಧಾನವು.**

ಹೀಗೆ ಶ್ರೀಯಾಮುನ ಮುನಿಗಳ ದಿವ್ಯಸೂಕ್ತಗಳಿಂದ ಈ ಎರಡು ವಿಧ ಉಪಾಯನಿಷ್ಠರಾದ ಭಕ್ತರೂ ಪ್ರಪನ್ನರೂ ವರ್ಣಾಶ್ರಮಾದಿ ಧರ್ಮಗಳನ್ನೆಲ್ಲಾ ಶಾಸ್ತ್ರರೀತ್ಯಾ ಭಗವತ್ಪ್ರೀಣನಕ್ಕಾಗಿ ತುಂಬಾ ಭಕ್ತಿಯಿಂದ ಅನುಷ್ಠಿಸತಕ್ಕದ್ದೆಂದು ಉಪದೇಶಿಸಲ್ಪಟ್ಟಿತು. ಈ ಅಭಿಪ್ರಾಯಗಳು ಹಿಂದೆಯೇ ಶಾಸ್ತ್ರೀಯ ನಿಯಮನಾಧಿ ಕಾರದಲ್ಲಿ ಉಪಪಾದಿತವಾಗಿದ್ದರೂ "ಸರ್ವಧರ್ಮಾ ಪರಿತ್ಯಜ್ಯ" ಎಂಬಲ್ಲಿನ ತ್ಯಾಗ ಶಬ್ದಾರ್ಥ ವಿವರಣವು ಪ್ರಕರಣವಾದುದರಿಂದ ಅವುಗಳನ್ನೇ ಪುನಃ ಅನುವಾದರೂಪ ದಲ್ಲಿ ಹೇಳಬೇಕಾದುದು ಆವಶ್ಯಕವಾಯಿತು. ಮೇಲೆ ಉಪಪಾದಿಸಿದ ರೀತಿಯಲ್ಲಿ ಆಜ್ಞಾನುಜ್ಞಾ ಕೈಂಕರ್ಯಗಳನ್ನು ಶಾಸ್ತ್ರರೀತ್ಯಾ ನಡೆಸಲೇ ಬೇಕೆಂದಾದರೆ, ಆಗ ಸೂರ್ಯ, ಅಗ್ನಿ ಮೊದಲಾದ ದೇವತಾಂತರ ಸಂಬಂಧವು ತಪ್ಪಿದ್ದಲ್ಲವಾಗುತ್ತದೆ. ಆಗ ಈ ಭಕ್ತರ ಮತ್ತು ಪ್ರಪನ್ನರ ಪರಮೈಕಾಂತಿತ್ವಕ್ಕೆ ಭಂಗಬರುವುದಿಲ್ಲವೋ ? ಎಂದರೆ ಇಲ್ಲವೆಂದು ಸಮಾಧಾನವನ್ನು ಎರಡು ವಿಧವಾಗಿ ಉಪದೇಶಿಸುತ್ತಾರೆ. ಮೊದಲು ಪೂರ್ವಪಕ್ಷವನ್ನು ಉಪಪಾದಿಸುತ್ತಾರೆ— **ಇರಣ್ಡಧಿಕಾರಿಗಳುಮ್**-ಭಕ್ತಿ ಯೋಗನಿಷ್ಠರು ಮತ್ತು ಭರನ್ಯಾಸನಿಷ್ಠರು ಆದ ಎರಡು ವಿಧ ಅಧಿಕಾರಿಗಳೂ

## ಇತ್ಥಂ ಶಾಸ್ತ್ರ ರೀತ್ಯಾ ಆಜ್ಞಾನುಜ್ಞಾ ಕೈಂಕರ್ಯಾನುಷ್ಠಾನೇ ದೇವತಾಸ್ತರ ಸಂಬಂಧೇನ ಪರಮೈಕಾನ್ತಿತ್ವ ಹಾನಿ ರಿತ್ಯತ್ರಾಹ

ಇರಣ್ಡಧಿಕಾರಿಗಳುಮ್ (೧) "ಪ್ರತಿಬುದ್ಧಾ ನ ಸೇವಂತೇ" (೨) "ಅನನ್ಯ ದೇವತಾ ಭಕ್ತಾಃ (೩) ನಾನ್ಯಂದೇವಂ ನಮಸ್ಕುರ್ಯಾತ್" ಇತ್ಯಾದಿಗಳಿಲ್ಪಡಿಯೇ ಪರಮೈಕಾಂತಿಗಳಾಯಿರುಕ್ಕ, ಇಙ್ಙು "ನಿಜಕರ್ಮಾದಿ ಭಕ್ತ್ಯಂತಂ" ಎನ್ರು ಅರುಳಿಚ್ಚೆಯ್ದಪಡಿಯೇ ವರ್ಣಾಶ್ರಮಾದಿ ಧರ್ಮಂಗಳೈ ಇವರ್ಗಳ್ ಅನುಷ್ಠಿಕ್ಕಪ್ಪುಕ್ಕಾಲ್, ಅಗ್ನೀಂದ್ರಾದಿ ದೇವತಾ ವ್ಯಾಮಿಶ್ರತೈಯಾಲೇ ಪರಮೈಕಾಂತಿತ್ವಂ ಕುಲೈಯಾದೋ? ವೆನ್ರು ವೇದಾನ್ತ ವ್ಯುತ್ಪತ್ತಿ ಪಣ್ಣಾದಾರ್

"ಪ್ರತಿಬುದ್ಧಾ ನ ಸೇವಂತೇ ಯಸ್ಮಾತ್ಪರಿಮಿತಂ ಫಲಮ್" ಅಲ್ಪಾಸ್ಥಿರ ಫಲಗಳನ್ನು ಕೊಡುವ ಬ್ರಹ್ಮರುದ್ರೇಂದ್ರಾದಿ ಸರ್ವ ದೇವತೆಗಳನ್ನು ಪ್ರಾಜ್ಞರು ಆರಾಧಿಸುವದಿಲ್ಲವೆಂಬ, ೬೭೫ ಮತ್ತು ೯೨೬ನೆಯ ಪುಟವನ್ನು ನೋಡಿ. (೨) "ಅನನ್ಯ ದೇವತಾಭಕ್ತಾಃ" ಇನ್ನು ಯಾವ ದೇವತೆಗಳನ್ನೂ ಅಲ್ಲದೆ ಶ್ರೀ ಮಹಾವಿಷ್ಣುವನ್ನು ಮಾತ್ರವೇ ಧ್ಯಾನಿಸುವ ಭಕ್ತರುಗಳು" ಎಂಬ (೩) "ನಾನ್ಯಂದೇವಂ ನಮಸ್ಕುರ್ಯಾತ್" "ಪರಮಪುರುಷನಲ್ಲದೆ ಬೇರೆ ಯಾವ ದೇವತೆಗೂ ನಮಸ್ಕರಿಸಬೇಡ" (      ನೆಯ ಪುಟ ನೋಡಿ) ಇತ್ಯಾದಿಗಳಿಲ್ಪಡಿಯೇ - ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವಹಾಗೆ ಪರಮೈಕಾಂತಿಗಳಾಗಿ ಇರುಕ್ಕ - ಪರಮಪುರುಷನಾದ ಶ್ರೀಮನ್ನಾರಾಯಣನೊಬ್ಬನಲ್ಲೇ ಯಾವಾಗಲೂ ಸಕ್ತವಾಗಿರುವ ಈ ಎರಡು ವಿಧ ಪ್ರಪನ್ನರೂ ಇರುವಾಗ, ಇಙ್ಙು - ಈ ಸಂದರ್ಭದಲ್ಲಿ, "ನಿಜಕರ್ಮಾದಿ ಭಕ್ತ್ಯಂತಂ" ಎನ್ರು ಅರುಳಿಚ್ಚೆಯ್ದಪಡಿಯೇ - ಎಂದು ಕೃಪಯಾ ಉಪದೇಶಿಸಿರುವಹಾಗೆ, ವರ್ಣಾಶ್ರಮಾದಿ ಧರ್ಮಗಳನ್ನು ಇವರುಗಳು ಅನುಷ್ಠಿಕ್ಕಪ್ಪುಕ್ಕಾಲ್ - ಅನುಷ್ಠಿಸುವುವೆಂದು ಹೊರಟರೆ, ಅಗ್ನೀಂದ್ರಾದಿ ಅಗ್ನಿ, ಇಂದ್ರ, ಸೂರ್ಯ, ಮೊದಲಾದ ದೇವತಾವ್ಯಾಮಿಶ್ರತೈಯಾಲೇ – ಪರಮಪುರುಷಾರಾಧನರೂಪ ಕೈಂಕರ್ಯದೊಂದಿಗೆ ಸೇರಿರುವದರಿಂದ, ಪರಮೈಕಾಂತಿತ್ವಂ ಕುಲೈಯಾದೋ - ಅವರುಗಳ ಪರಮೈಕಾಂತಿತ್ವಕ್ಕೆ ಅನ್ಯದೇವತಾ ಸಂಬಂಧವು ಸರ್ವಾತ್ಮನಾ ಕೂಡದಾಗಿರುವಾಗ, ಈ ನಿತ್ಯನೈಮಿತ್ತಿಕಗಳಲ್ಲಿ ಸೂರ್ಯ, ಅಗ್ನಿ, ಬ್ರಹ್ಮ ರುದ್ರೇಂದ್ರಾಗ್ನಿ ಮೊದಲಾದ ಸಂಬಂಧವು ಉಂಟಾಗುವದರಿಂದ ಆ ಪರಮೈಕಾಂತಿತ್ವಕ್ಕೆ ಭಂಗ ಉಂಟಾಗುವದಿಲ್ಲವೋ? ಎನ್ರು - ಎಂಬುದಾಗಿ, ವೇದಾಂತವ್ಯುತ್ಪತ್ತಿ ಪಣ್ಣಾದಾರ್ - ವೇದಾಂತಶಾಸ್ತ್ರದಲ್ಲಿ ಪಾಂಡಿತ್ಯವನ್ನು ಹೊಂದದವರು, ಚೋದ್ಯಂ ಪಣ್ಣುವರ್ಗಳ್ - ಆಕ್ಷೇಪಣೆಯನ್ನು ಮಾಡುವರು. ಸಂಧ್ಯಾವಂದನಾದಿ ಪಂಚ

(೧) ಭಾ. ಶಾನ್ತಿ ೩೫೦-೫೬ (೨) ವೈಷ್ಣವ ಧರ್ಮಶಾಸ್ತ್ರಮ್. (೩) ಭಾರತ

-ಚೋದ್ಯಂ ಪಣ್ಣುವರ್‌ಗಳ್. ಇವ್ವಿಡತ್ತಿಲ್ (೪) "ಸಾಕ್ಷಾದಪ್ಯವಿರೋಧಂ ಜೈಮಿನಿಃ" ಎಙ್ಗಿರ ಸೂತ್ರತ್ತಿನ್ ಪಡಿಯೇ ಅಗ್ರನಯನಾದಿ ವ್ಯುತ್ಪತ್ತಿಗಳಾಲೆ ಅಗ್ನ್ಯಾದಿ ಶಬ್ದಙ್ಗಳೈ ಸರ್ವೇಶ್ವರನುಕ್ಕು ಸಾಕ್ಷಾದ್ವಾಚಕಙ್ಗಳಾನ ನಿರ್ವಹಿಕ್ಕಲಾ ಮಿಡತ್ತಿಲ್, ಇವ್ವೈ ಶ್ರೀ ಸಹಸ್ರನಾಮತ್ತಿನ್ ತಿರುನಾಮಙ್ಗಳಿಲ್ ಪಡಿಯೇ ನಿರ್ಕ್ಕೈಯಾಲೇ ಇವತ್ತಿಲ್ ದೇವತಾಂತರ ಸ್ಪರ್ಶಮಿಲ್ಲೈ.

---

ಪುಹಾ ಯಜ್ಞಗಳಲ್ಲಿ ಸೂರ್ಯ, ಅಗ್ನಿ, ಮತ್ತು ಇತರ ದೇವತೆಗಳನ್ನು ಕುರಿತ ಧ್ಯಾನ ಪವಿಸ್ಸಮರ್ಪಣಾದಿಗಳಿವೆ; ಇಂತಹ ಕರ್ಮಗಳನ್ನು ಅನುಷ್ಠಿಸುವದು ಈ ಪ್ರಪನ್ನರ ಪರಮೈಕಾಂತಿತ್ವಕ್ಕೆ ಹಾನಿಯಲ್ಲವೇ ? ಆಗಲಿ, ತ್ಯಾಗ ಹೇಳುವದರಿಂದ ಆ ದೋಷವು ಹೋಗುತ್ತದೆ ಎಂದರೆ ಪ್ರಕ್ಷಾಳನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಮ್" ಎಂದು ಹೇಳಿರುವಹಾಗೆ ಕೆಸರನ್ನು ತುಳಿಯುವದೇತಕ್ಕೆ? ಅನಂತರ ಕಾಲು ತೊಳೆಯುವುದು ಏತಕ್ಕೆ? ಆದುದರಿಂದ ದೂರದಲ್ಲಿದ್ದು ಬಿಡುವದು ಯುಕ್ತವಲ್ಲವೋ ? ಹೀಗೆ ಅನ್ಯದೇವತಾ ಸಂಬಂಧವಿರುವ ಸಂಧ್ಯಾದಿ ಪಂಚಮಹಾಯಜ್ಞಗಳ ಅನುಷ್ಠಾನವೇತಕ್ಕೆ ? ಅನಂತರ ತ್ಯಾಗ ಹೇಳುವದು ಏತಕ್ಕೆ? ಎಂಬುದು ಪೂರ್ವಪಕ್ಷವು, ಈ ಪೂರ್ವಪಕ್ಷವು ವೇದಾಂತಶಾಸ್ತ್ರಪರಿಶ್ರಮವಿಲ್ಲದಿರುವ ಬಾಲಿಶರ ವಾದವಾಗಿರುತ್ತದೆಂಬ ಭಾವವು. ಈ ಪೂರ್ವಪಕ್ಷಕ್ಕೆ ಸಮಾಧಾನವನ್ನು ಹೇಳುತ್ತಾರೆ, ಇವ್ವಿಡತ್ತಿಲ್ - ಈ ಸಂದರ್ಭದಲ್ಲಿ, "ಸಾಕ್ಷಾದಪ್ಯವಿರೋಧಂ ಜೈಮಿನಿಃ", ಎಙ್ಗಿರಸೂತ್ರತ್ತಿನ್‌ಪಡಿಯೇ-ಎಂದು ಸೂತ್ರದಲ್ಲಿ ಹೇಳಿರುವಹಾಗೆ, ಅಗ್ರನಯನಾದಿ ವ್ಯುತ್ಪತ್ತಿಗಳಾಲೇ- ಅಗ್ರೇ ನಯತೀತ್ಯಗ್ನಿಃ ಎಂದರೆ ಮುಂದೆ ನಿಂತು ಸಿದ್ಧೋಪಾಯನಾಗಿ ಕರೆದುಕೊಂಡು ಹೋಗುವನು ಎಂಬಿವೇ ಮೊದಲಾದ ವ್ಯುತ್ಪತ್ತಿಗಳಿಂದ ಅಗ್ನ್ಯಾದಿ ಶಬ್ದಂಗಳೈ - ಅಗ್ನಿಯೇ ಮೊದಲಾದ ಶಬ್ದಗಳನ್ನು ಸರ್ವೇಶ್ವರನುಕ್ಕು – ಸರ್ವೇಶ್ವರನಿಗೆ, ಸಾಕ್ಷಾದ್ವಾಚಕಂಗಳಾನ – ಸಾಕ್ಷಾತ್ತಾಗಿ ಬೋಧಕಗಳಾಗಿ, ನಿರ್ವಹಿಕ್ಕಲಾ ಮಿಡತ್ತಿಲ್ - ನಿರ್ವಹಿಸಬಹುದೆಂದು ಶ್ರೀ ಜೈಮಿನ್ಯಾಚಾರ್ಯರು ಹೇಳಿದ ಸಂದರ್ಭದಲ್ಲಿ, ಇವು . ಈ ಅಗ್ನ್ಯಾದಿ ಶಬ್ದಗಳು ಆದಿಶಬ್ದದಿಂದ, ವೈಶ್ವಾನರ, ಸೂರ್ಯ, ಮಿತ್ರ, ಇಂದ್ರ ಮೊದಲಾದ ಶಬ್ದಗಳು ಹೇಳಲ್ಪಟ್ಟವು, ಶ್ರೀ ಸಹಸ್ರನಾಮತ್ತಿನ್ ತಿರುನಾಮಂಗಳಿಲ್‌ಪಡಿಯೇ - ಶ್ರೀ ವಿಷ್ಣು ಸಹಸ್ರನಾಮದಲ್ಲಿ ಶಬ್ದಗಳ ಹಾಗೆ, ನಿರ್ಕ್ಕೈಯಾಲೇ - ವ್ಯುತ್ಪತ್ತಿಯ ಮೂಲಕ ಅರ್ಥವನ್ನು ಬೋಧಿಸುವ ಸ್ಥಿತಿಯಲ್ಲಿರುವದರಿಂದ, ಇವೆಲ್ಲಾ ಪದಗಳೂ ವ್ಯುತ್ಪತ್ತಿಯ ಮೂಲಕ ಪರಮಪುರುಷನನ್ನೇ ಬೋಧಿಸುವದರಿಂದ, ದೇವತಾಂತರಗಳಾದ ಅಗ್ನಿ, ಸೂರ್ಯ, ಮೊದಲಾದ ಅನ್ಯ ದೇವತೆಗಳ, ಸ್ಪರ್ಶಮಿಲ್ಲೈ - ಸಂಬಂಧವಿಲ್ಲವು. ಇವೆಲ್ಲಾ ಪದಗಳೂ ಸರ್ವೇಶ್ವರನನ್ನೇ ಸಾಕ್ಷಾತ್ತಾಗಿ ಬೋಧಿ

---

(೪) ಶಾ. ಸೂ. ೧.೨-೨೮.

(೧) “ದೇವಾನ್ನೃಷೀನ್ಪಿತ್ರೄನ್ಭಗವದಾತ್ಮಕಾ೯ ಧ್ಯಾತ್ವಾ ಸಂತರ್ಪ್ಯ” ಎನ್ರು ನಿತ್ಯ ಪ್ರಭೃತಿಗಳಿಲ್ ಶ್ರೀ ಭಾಷ್ಯಕಾರರ್ ಅರುಳಿಚ್ಚೆಯ್ದ ಪಡಿಯೇ

---

ಸುತ್ತವೆಂದು ಜೈಮಿನ್ಯಾಚಾರ್ಯರಾದ ಶ್ರೀ ವ್ಯಾಸಶಿಷ್ಯರು ಹೇಳಿರುವದರಿಂದ ದೇವತಾಂತರದ ಸಂಬಂಧವೇ ಇಲ್ಲವೆಂದು ಭಾವಿಸಬಹುದೆಂಬ ತಾತ್ಪರ್ಯವು. ಈಸಾಕ್ಷಾದ್ಯಪ್ಯವಿರೋಧಂ ಜೈಮಿನಿಃ” ಎಂಬ ಬ್ರಹ್ಮಸೂತ್ರದ ಉಪಪಾದನೆಗೆ ೨೩೩-೩೩ನೆಯ ಪುಟಗಳನ್ನು ನೋಡಿ. ಈ ಸಮಾಧಾನಗಳೆಲ್ಲಾ ಹಿಂದೆಯೇ ಸಾಧ್ಯೋಪಾಯ ಶೋಧನಾಧಿಕಾರದಲ್ಲಿ ಉಪಪಾದಿತವಾಗಿದ್ದರೂ ಪ್ರಕರಣವು ಒದಗಿದುದರಿಂದ ಪುನಃ ಜ್ಞಾಪಕವನ್ನು ಕೊಟ್ಟಿರುತ್ತಾರೆ. ಇದು ಕೃತಕೃತ್ಯಾಧಿಕಾರದಲ್ಲೂ ಸಂಗ್ರಹವಾಗಿ ಬೋಧಿಸಲ್ಪಟ್ಟಿರುತ್ತದೆ. ೧೧೫೫ನೆಯ ಪುಟವನ್ನು ನೋಡಿ. ಹೀಗೆ ಪರ ಮಾತ್ಮನನ್ನೇ ಈ ಶಬ್ದಗಳು ಬೋಧಿಸುವದರಿಂದ, ದೇವತಾಂತರಸ್ಪರ್ಶಮ್ ಇಲ್ಲೈ ಎಂದು ಹೇಳಲ್ಪಟ್ಟಿತು,

ಮುಮುಕ್ಷುವಿಗೆ ಶ್ರಾದ್ಧಾದಿಕರ್ಮಗಳೂ ಅವಶ್ಯಕರ್ತವ್ಯಗಳಾದ ಕರ್ಮಗಳು. ಅಲ್ಲಿ ಪಿತೃದೇವತೆಗಳ ಆರಾಧನೆಯುಂಟಲ್ಲಾ, ಅಲ್ಲೆಲ್ಲಾ ದೇವತಾಂತರ ಸ್ಪರ್ಶವೇ ಇಲ್ಲವೆಂದು ಜೈಮಿನ್ಯಾಚಾರ್ಯರ ನ್ಯಾಯವನ್ನು ಹೇಗೆ ಹೇಳಲಾಗುತ್ತದೆ? ಅದೂ ಅಲ್ಲದೆ ಪ್ರತರ್ದನ ವಿದ್ಯೆಯಲ್ಲಿ ಇಂದ್ರನೇ ಮಾಮುಪಾಸ್ಸ್ವ ಎಂದು ಹೇಳಿರುತ್ತಾನಲ್ಲಾ? ಮತ್ತು “ಜೀವಮುಖ್ಯಪ್ರಾಣಲಿಙ್ಗಾತ್ ನೇತಿಚೇನ್ನ, ಉಪಾಸಾ ತ್ರೈವಿಧ್ಯಾತ್” ಎಂಬ ಸೂತ್ರದಲ್ಲಿ ಪರಮಾತ್ಮನು ಮೂರು ವಿಧವಾಗಿ ಉಪಾಸ್ಯನೆಂದು ಹೇಳಲ್ಪಟ್ಟಿರುತ್ತದೆ. ಹೇಗೆಂದರೆ—(೧) ನಿಖಿಲಕಾರಣಭೂತನಾದ ಪರಬ್ರಹ್ಮನನ್ನು ಸತ್ಯತ್ವಜ್ಞಾನತ್ವಾನಂತತ್ವ ದಿವ್ಯಮಂಗಳ ವಿಗ್ರಹ ವಿಶಿಷ್ಟನನ್ನಾಗಿ ಉಪಾಸಿಸೋಣವು; (೨) ಜೀವಾತ್ಮ ಶರೀರಕನನ್ನಾಗಿ ಉಪಾಸಿಸೋಣವು ಪ್ರತರ್ದನವಿದ್ಯೆಯಹಾಗೆ, (೩) ಭೋಗ್ಯಭೋಗೋಪಕರಣ ಶರೀರಕನಾಗಿ ಉಪಾಸಿಸೋಣವು. ಆದುದರಿಂದ ಮುಮುಕ್ಷುವಿಗೂ ಕೂಡ ಜೀವಶರೀರಕ ಪರಮಾತ್ಮನು ಉಪಾಸ್ಯನು ಎಂದು ಹೇಳಲ್ಪಟ್ಟಿದೆಯಲ್ಲಾ? ಇಲ್ಲಿಯೂ ಜೈಮಿನ್ಯಾಚಾರ್ಯರ ನ್ಯಾಯವು ಕೂಡುವದಿಲ್ಲವಲ್ಲಾ ? ಎಂದರೆ ಶ್ರೀ ವ್ಯಾಸನುಹರ್ಷಿಯ ಅಭಿಮತಾನುಸಾರವಾಗಿ ಇನ್ನೊಂದು ವಿಧವಾಗಿಯೂ ಸಮಾಧಾನವನ್ನು ಹೇಳಬಹುದೆಂದು ಸಪ್ರಮಾಣವಾಗಿ ಉಪದೇಶಿಸುತ್ತಾರೆ.—

(೧) “ದೇವಾ೯–ಬ್ರಹ್ಮಾದಿ ದೇವತೆಗಳನ್ನೂ, ಋಷೀ೯-ಕೃಷ್ಣದ್ವೈಪಾಯನಾದಿಋಷಿಗಳನ್ನೂ, ಪಿತ್ರೄನ್-ಪಿತೃಗಳನ್ನೂ ಇವರು ಎಂತವರೆಂದರೆ ಭಗವದಾತ್ಮಕಾ೯ - ಭಗವಂತನಿಗೆ ಶರೀರವಾಗಿ ಭಗವಂತನನ್ನೇ ಆತ್ಮಾವಾಗಿ ಉಳ್ಳವರು, ಇಂತವರನ್ನು ಧ್ಯಾನಿಸಿ, ಸಂತರ್ಪ್ಯ - ದೇವರ್ಷಿ ಪಿತೃತರ್ಪಣವನ್ನು ಅವರು

---

೧. ಶ್ರೀ ಭಾಷ್ಯಕಾರ ನಿತ್ಯ.

**ತತ್ತದ್ದೇವತಾ ಶರೀರಕನಾಕ ಪರಮಾತ್ಮಾವೈ ಅನುಸಂಧಿತ್ತುಕ್ಕೊಂಡು ತತ್ತತ್ಕರ್ಮಙ್ಗಳೈ ಅನುಷ್ಠಿಕ್ಕೈಯ್ ಶಾಸ್ತ್ರಸಿದ್ಧಮಾನ ವಿಡತ್ತಿಲ್ (೨) "ಉಪಾಸಾತ್ರೈವಿಧ್ಯಾತ್" ಎಙ್ಗಿರಪಡಿಯೇ ಪ್ರತರ್ದನ ವಿದ್ಯಾದಿಗಳಿಲ್, ವಿಶೇಷ್ಯಮಾನ ದಿವ್ಯಾತ್ಮಸ್ವರೂಪತ್ತಾಲುಮ್ ಚೇತನಾಚೇತನವಿಶಿಷ್ಟನಾಗವುಮ್ ಪರಮಾತ್ಮಾವೈ ಉಪಾಸೀಯಾ ನಿನ್ರಾಲುಮ್, ವಿಶೇಷಣಮಾನ ಚೇತನಾಚೇತನಙ್ಗಳಿಲ್ ಆರಾಧ್ಯತ್ವಮ್ ಇಲ್ಲಾದರ್ಪೋಲೇ ಇವ್ವಿಡತ್ತಿಲುಮ್, ವಿಶೇಷಣಮಾನ**

---

ಭಗವದಾತ್ಮಕರೆಂದು ಭಾವಿಸಿ ತರ್ಪಣವನ್ನು ಕೊಟ್ಟು, ದೇವತೆಗಳಿಂದಲೂ ಋಷಿಗಳಿಂದಲೂ ಪಿತೃಗಳಿಂದಲೂ ಉಂಟಾದ ಮಹೋಪಕಾರ ಋಣಕ್ಕಾಗಿ ಪ್ರತಿದಿನವೂ ಈ ತರ್ಪಣವನ್ನು ಮಾಡತಕ್ಕದ್ದು ; ಆದರೆ ಹೀಗೆ ತರ್ಪಿಸುವುದರಿಂದ ಅವರುಗಳಿಗೆ ಆತ್ಮಾವಾದ ಭಗವಂತನೇ ಇದರಿಂದ ಪ್ರೀತನಾಗುವನೆಂಬ ಭಾವವು. ೧೫೦ನೆಯ ಪುಟವನ್ನು ನೋಡಿ. **ಎನ್ರು ನಿತ್ಯ ಪ್ರಭೃತಿಗಳಿಲೇ** - ಎಂದು ಶ್ರೀಯತಿವರ್ಯರು ರಚಿಸಿರುವ ನಿತ್ಯವೇ ಮೊದಲಾದ ಗ್ರಂಥಗಳಲ್ಲಿ, ಪ್ರಭೃತಿ ಶಬ್ದದಿಂದ ಗೀತಾ ಭಾಷ್ಯಾದಿಗಳು ಹೇಳಲ್ಪಟ್ಟವು. ಗೀತಾಭಾಷ್ಯದಲ್ಲಿ ಎಲ್ಲಿ ಹೇಳುತ್ತದೆ ಎಂದರೆ "ವೇದಾಂತವಾಕ್ಯ ಜಾತಂ ಹಿ ಪರಮ ಪುರುಷ ಶರೀರತಯಾವಸ್ಥಿತಾನಾಂ ಇಂದ್ರಾದೀನಾ ಮಾರಾಧ್ಯತ್ವಂ ವಿದಧತ್ ಆತ್ಮಭೂತಸ್ಯ ಪರಮ ಪುರುಷಸ್ಯೈವ ಸಾಕ್ಷಾದಾರಾಧತ್ವಂ ವಿದಧಾತಿ" (ಗೀ. ೭.೨೩.) ಇತ್ಯಾದಿ ಸ್ಥಳಗಳಲ್ಲಿ ಪ್ರೋಕ್ತವು ಹೀಗೆ ಶ್ರೀಭಾಷ್ಯಕಾರರು ಹೇಳಿರುವ ಹಾಗೆ, **ತತ್ತದ್ದೇವತಾ ಶರೀರಕನಾನ** - ಆ ಆ ದೇವತೆಗಳನ್ನೇ ಶರೀರವಾಗಿವುಳ್ಳ, **ಪರಮಾತ್ಮನನ್ನೇ, ಅನುಸಂಧಿತ್ತುಕ್ಕೊಂಡು** - ಅನುಸಂಧಾನಮಾಡಿಕೊಂಡು, **ತತ್ತತ್ಕರ್ಮಙ್ಗಳೈ ಅನುಷ್ಠಿಕ್ಕೈಯ್** - "ಮಯಿಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮಚೇತಸಾ" (ಗೀ. ೩.೩೦) ಎಂಬಲ್ಲಿ ಹೇಳಿರುವ ಹಾಗೆ ಆಯಾ ಕರ್ಮಗಳನ್ನು ಅನುಷ್ಠಿಸೋಣವು, ಇಲ್ಲಿ ಆಜ್ಞಾನುಜ್ಞಾ ಕೈಂಕರ್ಯಗಳು ಪ್ರಕರಣಾನುಗುಣವಾಗಿ ಹೇಳಲ್ಪಟ್ಟವು, **ಶಾಸ್ತ್ರಸಿದ್ಧಮಾನ ವಿಡತ್ತಿಲ್** - ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವ ಸಂದರ್ಭದಲ್ಲಿ, **"ಉಪಾಸಾತ್ರೈವಿಧ್ಯಾತ್"** "ಉಪಾಸನೆಯು ಮೂರು ವಿಧವಾಗಿರುವದರಿಂದ" **ಎಂಗಿರಪಡಿಯೇ** - ಎಂದು ವ್ಯಾಸಸೂತ್ರದಲ್ಲಿ ಹೇಳಿರುವಹಾಗೆ, **ಪ್ರತರ್ದನ ವಿದ್ಯಾದಿಗಳಿಲೇ** - ಪ್ರತರ್ದನವಿದ್ಯೆ ಆದಿ ಶಬ್ದದಿಂದ ಮಧು ವಿದ್ಯೆ ಪಂಚಾಗ್ನಿ ವಿದ್ಯೆಗಳಲ್ಲಿ, **ವಿಶೇಷ್ಯಮಾನ** - ವಿಶೇಷ್ಯನಾಗಿ **ದಿವ್ಯಾತ್ಮ ಸ್ವರೂಪತ್ತಾಲುಮ್** – ದಿವ್ಯಪರಮಾತ್ಮ ಸ್ವರೂಪದಿಂದಲೂ, **ಚೇತನಾಚೇತನವಿಶಿಷ್ಟನಾಗವುಮ್** - ಚೇತನಾಚೇತನಗಳನ್ನು ಶರೀರವಾಗಿ ಹೊಂದಿರುವವನಾಗಿಯೂ, **ಪರಮಾತ್ಮಾವೈ ಉಪಾಸೀಯಾ ನಿನ್ರಾಲುಮ್** - ಪರಮಾತ್ಮನನ್ನೇ ಉಪಾಸಿಸಲ್ಪಟ್ಟರೂ, **ವಿಶೇಷ**

---

(೨) ಬ್ರ. ಸೂ. ೧.೧.೩೨.

ಣವೆಱಾನ ಚೇತನಾಚೇತನಙ್ಙಳಿಲ್ - ವಿಶೇಷಣಗಳಾದ ಚೇತನಾಚೇತನಗಳಲ್ಲಿ ಆರಾಧ್ಯತ್ವಂ ಇಲ್ಲಾದಾಪ್ಪೋಲೆ-ಆರಾಧಿಸಲ್ಪಡುವ ಭಾವವು ಹೇಗೆ ಇಲ್ಲವೋ ಹಾಗೆಯೇ, ಇವ್ವಿಡತ್ತಿಲುಮ್ – ಈ ಪ್ರಪನ್ನನು ಆಜ್ಞಾನುಜ್ಞಾ ಕೈಂಕರ್ಯಗಳನ್ನು ಹೊಡುವ ಸಂದರ್ಭದಲ್ಲಿ, ದೇವರ್ಷಿ ಪಿತೃಗಳೆನ್ನು ಇವರ್ - ಈ ಅನುಷ್ಠಿಸುವವನು ಆರಾಧಿಕ್ಕಿರಾನಲ್ಲ-ಆರಾಧಿಸುವದಿಲ್ಲವು. ದೇವರ್ಷಿ ಪಿತೃ ತರ್ಪಣಗಳನ್ನೂ ಸಂಧ್ಯಾ ವಂದನಾದಿಗಳನ್ನೂ ಪಂಚಮಹಾಯಜ್ಞರೂಪವಾದ ವೈಶ್ವದೇವವನ್ನೂ, ಪ್ರತಿದಿನವೂ ಪ್ರಪನ್ನನೂ ಮಾಡತಕ್ಕದ್ದಾಗಿರುತ್ತದೆ. ಅವುಗಳಲ್ಲಿ ಅನ್ಯದೇವತಾ ಪಿತೃ ಮೊದಲಾದ ವುಗಳ ಆರಾಧನೆಯು ಇರುತ್ತದೆಯಲ್ಲಾ, ಪ್ರಪನ್ನನು ಅಂತಹ ಕರ್ಮಗಳನ್ನೆಸಗುವದ ರಿಂದ ಅನ್ಯದೇವತಾರಾಧನೆಯ ಸಂಬಂಧ ಉಂಟಾಗುವದಿಲ್ಲವೋ ಎಂದರೆಈ ಆರಾಧನೆ ಗಳಲ್ಲಿ ಆ ಅನ್ಯದೇವತಾದಿಗಳಿಗೆಲ್ಲಾ ಆತ್ಮಾವಾದ ಪರಮಾತ್ಮನೇ ಆರಾಧಿಸಲ್ಪಡುವ ದರಿಂದ ದೋಷವಿಲ್ಲವು. ಶಾಸ್ತ್ರವಿಹಿತವಾದುದರಿಂದ ಮಾಡಲೇ ತೀರಬೇಕೆಂದು ಉಪದೇಶಿಸಿದರು. ಇಂತಹ ಭಾವನೆಯು ಬ್ರಹ್ಮವಿದ್ಯೆಯಾದ ಉಪಾಸನೆಗೆ ಉಂಟೆಂದು, "ಉಪಾಸಾತ್ರೈವಿದ್ಯಾತ್" ಎಂಬ ಬ್ರಹ್ಮ ಸೂತ್ರದಲ್ಲೇ ಉಪಪಾದಿ ತವಾಗಿದೆ ಎಂದು ತಿಳಿಸಿ, ಈ ಪ್ರಕ್ರಿಯೆಯೇ ಪ್ರತರ್ದನ, ವಿದ್ಯೆ, ಪಂಚಾಗ್ನಿ ವಿದ್ಯೆ ಗಳಲ್ಲೂ ಉಂಟೆಂದು ಹೇಳಿದರು. "ಉಪಾಸಾತ್ರೈವಿದ್ಯಾತ್" ಎಂಬ ಬ್ರಹ್ಮಸೂ ತ್ರದಲ್ಲಿ ಉಪಾಸನೆಯನ್ನು ಮೂರು ವಿಧ ಭಾವನೆಯಿಂದ ಮಾಡಲ್ಪಡಬಹುದೆಂದು ಹೇಳಲ್ಪಟ್ಟಿರುತ್ತದೆ. ಹೇಗೆಂದರೆ ನಿಖಿಲಕಾರಣಭೂತನಾದ ಪರಬ್ರಹ್ಮವನ್ನು ಸತ್ಯ ತ್ವಜ್ಞಾನತ್ವಾದಿಗಳೇನು ದಿವ್ಯಮಂಗಳವಿಗ್ರಹಯುಕ್ತತೆ ಏನು ಇವುಗಳಿಂದ ವಿಶಿಷ್ಟ ನನ್ನಾಗಿ ಉಪಾಸಿಸೋಣವು ಒಂದು ವಿಧ. ಭೋಕ್ತೃವರ್ಗ ಶರೀರಕನಾಗಿ ದಿವ್ಯ ಮಂಗಳವಿಗ್ರಹಯುಕ್ತನೆಂದು ಉಪಾಸಿಸೋಣವು. ಎರಡನೆಯದು. ಭೋಗ್ಯ ಭೋಗೋಪಕರಣ ಶರೀರಕನಾಗಿ ದಿವ್ಯಮಂಗಳ ವಿಗ್ರಹಯುಕ್ತನಾಗಿ ಉಪಾಸಿಸೋ ಣವು ಮೂರನೆಯದು. ಹೀಗೆ ಸರ್ವ ಚೇತನಾಚೇತನ ಶರೀರಕನಾಗಿರುವದರಿಂದ ಸರ್ವಚೇತನಾರಾಧನೆಯು ಕೇವಲ ಚೇತನಾರಾಧನೆಯು ಆಗುವದಿಲ್ಲವು. ತದಾತ್ಮ ನಾದ ಪರಮಾತ್ಮನ ಆರಾಧನೆಯೇ ಎಂಬ ಭಾವವು. ಪ್ರತರ್ದನ ವಿದ್ಯೆಯಲ್ಲಿ ಪ್ರತರ್ದನರು ಹೋಗಿ ಇಂದ್ರನನ್ನು ಕುರಿತು, ಹಿತತಮವಾಗಿ ಎಂದರೆ ಮುಕ್ತಿದಾ ಯಕವಾಗಿರುವದನ್ನು ಉಪದೇಶಿಸು ಎಂದು ಪ್ರಾರ್ಥಿಸುತ್ತಾರೆ. ಅದಕ್ಕೆ ಇಂದ್ರನು ಮಾಮುಪಾಸ್ಸ-ನನ್ನನ್ನು ಉಪಾಸನೆಮಾಡು ಎಂದು ಹೇಳಿದನು. ಇಂದ್ರನು ಜೀವನು, ದಿವ್ಯಮಂಗಳವಿಗ್ರಹರಹಿತನು, ಇಂತವನ ಉಪಾಸನೆಯು ಪ್ರತೀಕಾಲಂ ಬನವೆಂದು ಹೇಳಲ್ಪಟ್ಟು, ಅಂತಹ ಉಪಾಸನೆಗೆ ಮೋಕ್ಷವಿಲ್ಲವು, ಹಾಗಾದರೆ ಇಂದ್ರನು ನನ್ನನ್ನು ಉಪಾಸಿಸು ಎಂದು ಹೇಳಿದ್ದು ಹೇಗೆ? ಎಂದರೆ "ಶಾಸ್ತ್ರ ದೃಷ್ಟ್ಯಾತೂಪದೇಶೋವಾಮದೇವವತ್" ಎಂಬ ಸೂತ್ರದಲ್ಲಿ (ಬ್ರ. ಸೂ. ೧.೧.೩೧) ಹೇಳಿರುವ ಪ್ರಕಾರ, ಇಂದ್ರನು ಹೇಳಿದುದೇನೆಂದರೆ? ನಾನು ಎಂದರೆ

ಮಚ್ಛರೀರಕ ಪರಮಾತ್ಮನು, ಮಚ್ಛರೀರಕನಾದ ಪರಮಪುರುಷನ ದಿವ್ಯಮಂಗಳ ವಿಗ್ರಹವೇ ಉಪಾಸ್ಯವೆಂಬ ಭಾವವು. ಹೀಗೆಯೇ ಪರಮ ಭಾಗವತರಾದ ಪ್ರಹ್ಲಾದರು ಅಸುರಪುತ್ರರಿಗೆ ಉಪದೇಶಿಸಿರುತ್ತಾರೆ.—ಸರ್ವಗತ್ವಾ ದನಂತಸ್ಯ ಸ ಏವಾ ಹ ಮವಸ್ಥಿತಃ। ಮತ್ತಸ್ಸರ್ವಂ ಅಹಂಸರ್ವಂ ಮಯಿಸರ್ವಂ ಸನಾತನೇ" ಅನಂತನಾದ ಶ್ರೀ ಮಹಾವಿಷ್ಣುವು ಎಲ್ಲಕ್ಕೂ ಆತ್ಮಾವಾಗಿ ವ್ಯಾಪಿಸಿರುವದರಿಂದ, ಆತನು ಎಂದರೆ ಪರಮಪುರುಷನೇ ನಾನಾಗಿ ಇದ್ದಾನೆ, ಮಚ್ಛರೀರಕನಾಗಿ ಎಂದರೆ ಮದಾತ್ಮಕನಾಗಿದ್ದಾನೆ. ಆದುದರಿಂದಲೇ ನನ್ನಿಂದಲೇ ಎಲ್ಲವೂ ಎಂದರೆ ಮಚ್ಛರೀರಕ ಪರಮಾತ್ಮನೇ ಎಲ್ಲವು, ಅಹಂಸರ್ವಂ-ನಾನೇ ಎಲ್ಲವು ಎಂದರೆ ಮಚ್ಛರೀರಕ ಪರಮಾತ್ಮನೇ ಎಲ್ಲವು , ಮಯಿಸರ್ವಂ ಸನಾತನೇ - ಅನಾದಿಯಾಗಿರುವ ನನ್ನಲ್ಲೇ ಸರ್ವವು ಎಂದರೆ ಮಚ್ಛರೀರಕ ಪರಮಾತ್ಮನಲ್ಲೇ ಸರ್ವವು ಎಂಬುದು ಶ್ಲೋಕಾರ್ಥವು.

ಮಧುವಿದ್ಯೆಯಲ್ಲಿ ಹೇಳಿರುವದೇನೆಂದರೆ? ಆದಿತ್ಯನ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಊರ್ಧ್ವಾಂಶಗಳನ್ನು ವಸು ರುದ್ರ, ಆದಿತ್ಯ, ಮರುತ್, ಸಾಧ್ಯರುಗಳಿಗೆ ಭೋಗ್ಯವೆಂದೂ, ಆ ಆ ಆದಿತ್ಯಾಂಶಗಳೇ ಅವರಿಗೆ ಉಪಾಸ್ಯವೆಂದೂ, ಛಾಂದೋಗ್ಯದಲ್ಲಿ ಹೇಳಲ್ಪಟ್ಟಿರುತ್ತದೆ. ಈ ದೇವತೆಗಳಿಗೆಲ್ಲಾ ಪರಮಾತ್ಮೋಪಾಸನೆಯಲ್ಲಿ ಅಧಿಕಾರವುಂಟೇ ಇಲ್ಲವೇ ಎಂಬ ಚರ್ಚೆಯಲ್ಲಿ ವ್ಯಾಸಶಿಷ್ಯರಾದ ಜೈಮಿನ್ಯಾಚಾರ್ಯರು ಇಲ್ಲವೆಂದು ಅಭಿಪ್ರಾಯಪಟ್ಟರು. ಏಕೆಂದರೆ ತಮ್ಮನ್ನು ತಾವೇ ಉಪಾಸಿಸೋಣವೆಂಬುದು ಅಸಂಗತವೆಂಬ ಅಭಿಪ್ರಾಯದಿಂದ ಅಧಿಕಾರವಿಲ್ಲವೆಂದು ಹೇಳಿದರು. ಶ್ರೀ ವ್ಯಾಸರಾದರೋ " ಭಾವಂತು ಬಾದರಾಯಣೋಽಸ್ತಿಹಿ" (೧-೩-೩೨) ಎಂಬ ಬ್ರಹ್ಮಸೂತ್ರದಲ್ಲಿ, ಈ ವಸ್ವಾದಿ ಐದು ಪಂಗಡದವರಿಗೂ ಉಪಾಸನದಲ್ಲಿ ಅಧಿಕಾರವು ಉಂಟೆಂದು ಸ್ಥಾಪಿಸಿದರು. ಏಕೆಂದರೆ ಅಸ್ತಿಹಿ-ಉಪಾಸ್ಯತ್ವವೂ ಪ್ರಾಪ್ಯಪ್ರಾಪ್ತಿಯೂ ಉಂಟು. ಏಕೆಂದರೆ ವಸ್ವಾದಿತ್ಯಾದಿ ಶರೀರಕನಾದ ಪರಮಾತ್ಮನೇ ಅವರುಗಳಿಗೆ ಉಪಾಸ್ಯನು. ಅಂತಹ ಪರಮಪುರುಷನನ್ನು ಉಪಾಸಿಸಿದರೆ ಕಲ್ಪಾಂತದಲ್ಲಿ ಬ್ರಹ್ಮಪ್ರಾಪ್ತಿ ಎಂದು ಹೇಳಲ್ಪಟ್ಟಿರುತ್ತದೆ.

ಪಂಚಾಗ್ನಿವಿದ್ಯೆಯಲ್ಲಿ ಹೇಯಪ್ರಕೃತಿಗಿಂತ ವಿಲಕ್ಷಣವಾದ ಪರಿಶುದ್ಧಾತ್ಮಸ್ವರೂಪವನ್ನು ಪರಬ್ರಹ್ಮಾತ್ಮಕವೆಂದು ಉಪಾಸಿಸಲ್ಪಡುತ್ತದೆ. ಇದಕ್ಕೆ ಫಲವೇನೆಂದರೆ ಮಧುವಿದ್ಯೆಯಲ್ಲಿ ವಸ್ವಾದಿ ಪ್ರಾಪ್ತಿಯುಂಟಾಗಿ ಅನಂತರ ಮೋಕ್ಷಪ್ರಾಪ್ತಿ ಹೇಗೋ ಹಾಗೆಯೇ, ಸ್ವಾತ್ಮಾನುಭವವಾದ ಕೈವಲ್ಯಪ್ರಾಪ್ತಿಯುಂಟಾಗಿ ಅನಂತರ ಮೋಕ್ಷಪ್ರಾಪ್ತಿಯು. ಈ ಪಂಚಾಗ್ನಿ ವಿದ್ಯಾ ನಿಷ್ಠನನ್ನು ಜಿಜ್ಞಾಸುವೆಂದು ಗೀತೆಯಲ್ಲಿ ಹೇಳಲ್ಪಟ್ಟಿರುತ್ತದೆ.

ಅಗಲಿ, ದೇವರ್ಷಿ ಪಿತೃಗಳನ್ನೇ ಆರಾಧಿಸಿಬಿಟ್ಟು ತತ್ತಚ್ಛರೀರಕ ಪರಮಾತ್ಮನೇ ಆರಾಧಿಸಲ್ಪಟ್ಟನು ಎಂದು ಹೇಳಿದರೂ, ವಿಶೇಷ್ಯವೇನೋ ಆರಾಧಿಸಲ್ಪಟ್ಟ

ದೇವರ್ಷಿ ಪಿತ್ರಾದಿಗಳ್ಳೈ ಇವರ್ ಆರಾಧಿಕ್ಕಿರಾನಲ್ಲ- (೩) ಅಹಂಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವಚ" (೪) "ಹವ್ಯಕವ್ಯ ಭುಗೇಕಸ್ತ್ವಂ ಪಿತೃದೇವ ಸ್ವರೂಪಧೃತ್" (೫) "ಯೇ ಯಜನ್ತಿ ಪಿತೄನ್ ದೇವಾನ್ ಬ್ರಾಹ್ಮಣಾನ್ ಸಹುತಾಶನಾನ್ । ಸರ್ವಭೂತಾಂತರಾತ್ಮಾನಂ ವಿಷ್ಣುಮೇವ ಯಜನ್ತಿತೇ"

---

ಹಾಗೆ ಭಾವನೆಯಾದರೂ ವಿಶೇಷಣಗಳಾದ ದೇವರ್ಷಿ ಪಿತೃಗಳ ಆರಾಧನೆಯಿಂದ ದೇವತಾಂತರ ಸಂಬಂಧವು ಉಂಟಾಗಲಿಲ್ಲವೋ ? ಎಂದರೆ ಸರ್ವಾಂತರ್ಯಾಮಿಯಾದ ಸರ್ವೇಶ್ವರನ ಆರಾಧನೆಯೆಂದೇ ಈತನು ಭಾವಿಸುವಾಗ ಶಾಸ್ತ್ರವಿಧಿಗನುಗುಣವಾಗಿ ಮಾಡುವ ಕೈಂಕರ್ಯಗಳು ಎಂದಿಗೂ ದೇವತಾಂತರ ಆರಾಧನವಾಗುವದಿಲ್ಲವೆಂದು ಸಪ್ರಮಾಣವಾಗಿ "ಅಹಂಹಿ" ಎಂದಾರಂಭಿಸಿ, ಉಪಪಾದಿಸುತ್ತಾರೆ.

(೩) ಸರ್ವ ಯಜ್ಞಾನಾಂ - ಸಮಸ್ತಗಳಾದ ಶ್ರುತಿಗಳಲ್ಲಿ ಹೇಳಲ್ಪಟ್ಟ ಯಜ್ಞಗಳಿಗೂ, ಅಹಂಹಿ - ನಾನು ತಾನೇ, ಭೋಕ್ತಾಚ - ಹವಿಸ್ಸುಗಳನ್ನು ಸ್ವೀಕರಿಸಿ ಪ್ರೀತನಾಗುವವನೂನಾನೇ, ಪ್ರಭುರೇವಚ-ಸಮರ್ಥನಾಗಿ ಅವುಗಳಿಗೆಲ್ಲಾ ಸ್ವಾಮಿಯಾಗಿ ನಿರ್ವಾಹಕನು ನಾನೇ. ಆದರೆ ಇವುಗಳನ್ನು ಅನುಷ್ಠಿಸುವ ಕ್ರಮವು ಎರಡು ವಿಧವು. ಶಾಸ್ತ್ರದೃಷ್ಟಿಯಿಂದ ನಾನು ಅವರಿಗೆ ಆತ್ಮಾ ಎಂದು ಭಾವಿಸಿ ಇವುಗಳನ್ನು ಕರ್ಮಾರಂಭದಲ್ಲೂ ಕರ್ಮ ಸಮಾಪ್ತಿಯಲ್ಲೂ ತ್ಯಾಗವನ್ನು ಹೇಳಿ ಅನುಷ್ಠಿಸಿದರೆ ನಾನು ಪ್ರೀತನಾಗಿ ಬಂಧಕವಾಗುವ ಫಲವನ್ನು ಕೊಡುವದಿಲ್ಲವು. ಹೀಗೆ ಜ್ಞಾನವಿಲ್ಲದೆ ಅನುಷ್ಠಿಸುವವರು ಜಾರಿಬಿದ್ದು ಬಂಧವನ್ನು ಅನುಭವಿಸುವರೆಂದು ಉತ್ತರಾರ್ಧದಲ್ಲಿ ಹೇಳಲ್ಪಟ್ಟಿರುತ್ತದೆ.

(೪) ಪಿತೃದೇವ ಸ್ವರೂಪಧೃತ್-ಪಿತೃದೇವತೆಗಳಲ್ಲಿ ಸ್ವರೂಪವನ್ನು ಧರಿಸಿರುವ ಎಂದರೆ ಪಿತೃದೇವತಾತ್ಮಕನಾಗಿ ಆ ಕಾರಣದಿಂದ ಹವ್ಯಕವ್ಯ ಭುಗೇಕಸ್ತ್ವಂ - ಪೂರ್ವಾಪರಕರ್ಮಗಳಲ್ಲಿ ಹವಿಸ್ಸನ್ನೂ ಕವ್ಯವನ್ನೂ ಪರಿಗ್ರಹಿಸುವನು ನೀನೊಬ್ಬನೇ.

(೫) "ಯೇ - ಯಾರು, ಪಿತೃಗಳನ್ನೂ ಬ್ರಹ್ಮರುದ್ರೇಂದ್ರಾದಿದೇವತೆಗಳನ್ನೂ ಬ್ರಾಹ್ಮಣಾನ್ ಸಹುತಾಶನಾನ್ - ಔಪಾಸನಾದಿ ಅಗ್ನಿ ಕಾರ್ಯಗಳಿಂದ ಕೂಡಿದ ಬ್ರಾಹ್ಮಣರನ್ನೂ. ಯಜನ್ತಿ – ಆರಾಧಿಸುತ್ತಾರೋ, ತೇ - ಅವರೆಲ್ಲರೂ, ಸರ್ವಭೂತಗಳಿಗೂ ಆತ್ಮಾವಾಗಿ ವಿಷ್ಣುವನ್ನೇ ಆರಾಧಿಸುತ್ತಾರೆ. "ತ್ವಾಂ ಯೋಗಿನಶ್ಚಿನ್ತಯಂತಿ ತ್ವಾಂ ಯಜನ್ತಿಚ ಯಾಜಕಾಃ" ಎಂಬುದು ಇದರ ಪೂರ್ವಾರ್ಧವು.

---

(೩) ಗೀ. ೯.೨೪. (೪) ವಿ. ಪು. ೧.೧೯.೭೩.

**ಎಙ್ಗಿರಪಡಿಯೇ, ಸರ್ವಾಂತರ್ಯಾಮಿಯಾನವನೇ ಪ್ರತಿಬುದ್ಧನಾನ ಇವನುಕ್ಕು ಆರಾಧ್ಯನಾಗೈಯಾಲೇ ಇಪ್ಪಡಿ ತೆಳಿನ್ದು ಅನುಷ್ಠಿಕ್ಕುಮ್ ಅವನುಕ್ಕು, ಯಥಾ ಶಾಸ್ತ್ರ ಮನುಷ್ಠಿಕ್ಕಿರ ಕೈಙ್ಕರ್ಯಙ್ಗಳಾಮ್.**

**ದೇವತಾಂತರ ಸ್ಪರ್ಶದೋಷಂ ಕದಾ ನ ಪ್ರಸಜ್ಯೇತ ಕದಾಪ್ರಸಜ್ಯೇತ ಇತಿ ಉಪಪಾದಯತಿ**

---

**ಉಪಾಯಾನ್ತರಸ್ಪರ್ಶಂ ವಾರಾದಾರ್ಪೋಲವುಮ್, ಕೈಙ್ಕರ್ಯಾರ್ಥಙ್ಗಳಾನ ದ್ರವ್ಯಾರ್ಜನ ನಿವೇದಿತೋಪಯೋಗಾದಿಗಳಾಲ್ ಪ್ರಯೋಜನಾಂತರಸ್ಪರ್ಶಮ್**

---

**ಎಙ್ಗಿರಪಡಿಯೇ** - ಎಂದು ಹೇಳಿರುವಹಾಗೆ, **ಸರ್ವಾಂತರ್ಯಾಮಿಯಾದವನೇ**-ಈ ಅನ್ಯ ದೇವತೆಗಳಾದ ಸಮಸ್ತರಿಗೂ ಅಂತರ್ಯಾಮಿಯಾದ ಶ್ರೀ ಮಹಾವಿಷ್ಣುವೇ, ಪ್ರತಿಬುದ್ಧನಾನ - ಪ್ರಾಜ್ಞನಾದ, ಇವನುಕ್ಕು - ಈ ನಿತ್ಯನೈಮಿತ್ತಿಕಗಳನ್ನೂ ಆಜ್ಞಾನುಜ್ಞಾ ಕೈಂಕರ್ಯಗಳನ್ನೂ ಮಾಡುವ ಈ ಪ್ರಪನ್ನನಿಗೆ, **ಆರಾಧ್ಯನಾದುದರಿಂದ, ಇಪ್ಪಡಿ ತೆಳಿನ್ದು** - ಹೀಗೆ ಶಾಸ್ತ್ರಜ್ಞಾನವನ್ನು ಹೊಂದಿ, **ಅನುಷ್ಠಿಕ್ಕುಮ್ ಅವನುಕ್ಕು** - ಅನುಷ್ಠಿಸುವ ಅವನಿಗೆ, **ಯಥಾಶಾಸ್ತ್ರಮನುಷ್ಠಿಕ್ಕಿರ ಕೈಂಕರ್ಯಙ್ಗಳಾಮ್**-ಶಾಸ್ತ್ರಾನುಗುಣವಾಗಿ ಅನುಷ್ಠಿಸುವ ಪರಮ ಪುರುಷನ ಪ್ರೀತಿ ಸಂಪಾದಕಗಳಾದ ಕೈಂಕರ್ಯಗಳಾಗುತ್ತವೆ. ಅನ್ಯದೇವತಾರಾಧನವೆಂದಿಗೂ ಆಗುವದಿಲ್ಲವೆಂಬ ಭಾವವು. **ಅಹರಹಸ್ಸಂಧ್ಯಾಮುಪಾಸೀತ** - ಇತ್ಯಾದಿ ಶಾಸ್ತ್ರ ವಿಧಿಗಳಿಗನುಗುಣವಾಗಿ ಮಾಡುವದರಿಂದ ಪ್ರಪನ್ನನಿಗೆ ವಿರುದ್ಧವಾದ ಅನ್ಯದೇವತಾರಾಧನೆಯು ಎಂದಿಗೂ ಆಗುವದಿಲ್ಲವೆಂಬುದು ತಾತ್ಪರ್ಯವು. ಈ ವಿಧಿಯಲ್ಲಿ **ಸಂಧ್ಯಾಂ**-ಎಂಬುದು ಸಂಧ್ಯಾ ಶಬ್ದದ ದ್ವಿತೀಯವಲ್ಲವು. ಆಗ ಅನ್ಯದೇವತೆಯ ಉಪಾಸನೆ ಎಂಬರ್ಥವಾಗುತ್ತದೆ. ಆದು **ಸಂಧಿ** ಶಬ್ದದ ಸಪ್ತಮಿ. **ಸಂಧ್ಯಾಯಾಂ ಭಗವಂತಂ ಉಪಾಸೀತ** – ಎಂಬರ್ಥವು.

**ದೇವತಾಂತರ ಸ್ಪರ್ಶ ದೋಷವುಂಟಾಗದಿರುವದು ಯಾವಾಗ ?**
**ಉಂಟಾಗುವದು ಯಾವಾಗ ? ಎಂಬುದನ್ನು ತಿಳಿಸುತ್ತಾರೆ.**

ಮುಂದೆ ಎರಡು ವಾಕ್ಯಗಳ ಮೂಲಕ ಈ ವಿಧಿಪ್ರಾಪ್ತವಾದ ನಿತ್ಯನೈಮಿತ್ತಿಕಾದಿಗಳನ್ನು ಹೇಗೆ ಅನುಷ್ಠಿಸಿದರೆ ದೇವತಾಂತರ ಸ್ಪರ್ಶದೋಷವು ಪ್ರಾಪ್ತವಾಗುವದಿಲ್ಲವೆಂದೂ, ಇನ್ನು ಹೇಗೆ ಅನುಷ್ಠಿಸಿದರೆ ಅಂತಹ ದೋಷವು ಉಂಟಾಗುತ್ತದೆಂದೂ, ಹೇಳುತ್ತಾರೆ. ಮೊದಲು ವಾಕ್ಯದಿಂದ ಯಾವ ಸಂದರ್ಭದಲ್ಲಿ ದೋಷ ಪ್ರಾಪ್ತಿಯಿಲ್ಲವೆಂಬುದನ್ನು ತಿಳಿಸುತ್ತಾರೆ. **ಉಪಾಯಾನ್ತರಸ್ಪರ್ಶಮ್ ವಾರಾದಾರ್ಪೋಲುವುಮ್**–ಬೇರೆ ಉಪಾಯವಾದ ಅನ್ಯದೇವತೋಪಾಸನದಲ್ಲಿ ಸಂಬಂಧ ಉಂಟಾಗದ ಹಾಗೂ, **ಕೈಙ್ಕರ್ಯಾರ್ಥಙ್ಗಳಾನ** - ಕೈಂಕರ್ಯಗಳಿಗೆ ಪ್ರಯೋ

ವಾರಾದಾರ್ಥ್ಯೋಲವುಪು, ಆರಾಧ್ಯ ವಿಶೇಷಣವಾಗ ವಿಧಿ ಬಲ ಪ್ರಾಪ್ತಙ್ಗ ಳಾನ ಚೇತನಾಚೇತನಙ್ಗಳಾಲ್ ದೇವತಾನ್ತರ ಸ್ಪರ್ಶದೋಷಮ್ ವಾರಾದು.

(೧) "ನಾರಾಯಣಂ ಪರಿತ್ಯಜ್ಯ ಹೃದಿಸ್ಥಂ ಪ್ರಭುಮೀಶ್ವರಮ್। ಯೋಽನ್ಯ

---

ಜನಗಳಾಗಿರುವ ಎಂದರೆ ಕೈಂಕರ್ಯಗಳಿಗೆ ಬೇಕಾದ, ದ್ರವ್ಯಾರ್ಜನ - ದ್ರವ್ಯ ಸಂಪಾದನೆ ಮತ್ತು ನಿವೇದಿತೋಪಯೋಗಾದಿಗಳಾಲ್ - ಬ್ರಹ್ಮರುದ್ರಾಲಯಗಳಲ್ಲಿ ನಿವೇದನ ಮಾಡಲ್ಪಟ್ಟದುದನ್ನು ಸ್ವೀಕರಿಸುವದೇ ಮೊದಲಾದವುಗಳಲ್ಲದಹಾಗೆ, ಪ್ರಯೋಜನಾನಂತರಸ್ಪರ್ಶಂ ವಾರಾದಾರ್ಥ್ಯೋಲುವುಪು - ಮೋಕ್ಷೇತರಗಳಾದ ಐಹಿಕ ಪ್ರಯೋಜನಗಳ ಸಂಬಂಧ ಬಾರದ ಹಾಗೂ, ಎಂದರೆ ದೇಹಯಾತ್ರೆ ಭಗವದ್ಭಾಗವತ ನಿತ್ಯನೈಮಿತ್ತಿಕ ಕರ್ಮಗಳನುಷ್ಠಾನ ಇವುಗಳಿಗೆ ಬೇಕಾದ ದ್ರವ್ಯಾರ್ಜನೆ ಆಹಾರಸೇವನೆಯೇ ಮೊದಲಾದ ಪ್ರವೃತ್ತಿಗಳಲ್ಲಿ ಅನ್ಯದೇವತಾ ಸಂಬಂಧ ವಿಲ್ಲದ ಹಾಗೂ, ಲಿಪ್ತನಾಗದಹಾಗೂ, ಎಂಬ ತಾತ್ಪರ್ಯವು. ಆರಾಧ್ಯ ವಿಶೇಷಣ ವಾಗ - ಆರಾಧ್ಯನು ಶ್ರೀ ಮಹಾವಿಷ್ಣುವು, ಆತನಿಗೆ ವಿಶೇಷಣಗಳಾದ ಸೂರ್ಯ, ಅಗ್ನಿ ಬ್ರಹ್ಮರುದ್ರೇಂದ್ರಾದಿಗಳೇನು, ಮತ್ತು ದ್ರವ್ಯವೇ ಮೊದಲಾದ ಸಾಮಗ್ರಿ ಗಳೇನು ಹವ್ಯಕವ್ಯಗಳೇನು ಇವುಗಳಾದ, ವಿಧಿಬಲಪ್ರಾಪ್ತಙ್ಗಳಾನ - ಶಾಸ್ತ್ರ ವಿಧಿಯ ಮೂಲಕ ಉಂಟಾದ ಆದುದರಿಂದ ಆವಶ್ಯಕವಾಗಿ ವಿಧಿಸಲ್ಪಟ್ಟ ಯಜ್ಞ ರೂಪಗಳಾಗಿ ಅನುಷ್ಠಿಸಲೇಬೇಕಾದ, ಚೇತನಾಚೇತನಙ್ಗಳಾಲ್ — ಆ ಅನ್ಯ ದೇವತೆಗಳ ಮತ್ತು ಅಚೇತನಗಳಾದ ದ್ರವ್ಯಗಳ ಸಂಬಂಧದಿಂದ, ದೇವತಾಂತರ ಸ್ಪರ್ಶದೋಷವು, ವಾರಾದು - ಉಂಟಾಗಲಾರದು. ದೇಹ ಧಾರಣೆಗೂ, ಈತನು ಮಾಡಬೇಕಾದ ನಿತ್ಯನೈಮಿತ್ತಿಕಾದಿ ಭಗವದಾರಾಧನೆ ಪಂಚಮಹಾ ಯಜ್ಞಗಳಿಗೂ ಬೇಕಾದ ದ್ರವ್ಯವನ್ನು ಹವಿಸ್ಸೇ ಮೊದಲಾದವುಗಳನ್ನೂ ಸಂಪಾದಿಸುವದರಲ್ಲಿ ಈತನು ಲಿಪ್ತನಾಗದಿರಬೇಕು, ಮತ್ತು ಉಪಾಯಾನ್ತರ ಸಂಸರ್ಗವೂ ಕೂಡದು. ಹೀಗೆ ಇದ್ದುಕೊಂಡು "ಮಯಿಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮ ಚೇತಸಾ" ಎಂದೂ, "ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್। ಯತ್ತಪಸ್ಯಸಿ ಕೌನ್ತೇಯ ತತ್ಕುರುಷ್ವಮದರ್ಪಣಮ್" ಎಂದೂ ಹೇಳಿರುವಹಾಗೆ ನಡೆಸಿದರೆ ದೇವತಾಂತರಾದಿ ಸಂಬಂಧ ದೋಷವುಂಟಾಗುವದಿಲ್ಲವೆಂದು ಹೇಳಿದರು.

ಇನ್ನು ಹೇಗೆ ಅನುಷ್ಠಿಸಿದರೆ ಅಂತಹ ದೋಷವುಂಟಾಗುತ್ತದೆಂಬುದನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.—(೧) ನಾರಾಯಣಂ ಪರಿತ್ಯಜ್ಯ - ಶ್ರೀಮನ್ನಾರಾಯಣನನ್ನು ತ್ಯಜಿಸಿ, ಅವನು ಎಂತವನೆಂದರೆ ಹೇಳುತ್ತಾರೆ. ಹೃದಿಸ್ಥಂ- ಬಹಳ ದೂರ ಹೋಗಿ ಆಶ್ರಯಿಸಬೇಕೆಂಬ ಕಷ್ಟವೇನೂ ಇಲ್ಲದೆ, ತನ್ನ ಹೃದಯ ಗುಹೆಯಲ್ಲಿಯೇ ಇರುವವನನ್ನು ಪ್ರಭುಮ್ – ಏನೋ ಆಶ್ರಯಿಸಿದರೆ ತನ್ನ ಕಾಮ

---

(೧) ಪ್ರಜಾಸ್ಮೃತಿ

**ಮರ್ಚಯತೇ ದೇವಂ ಪರಬುದ್ಧ್ಯಾ ಸ ಪಾಪಭಾಕ್ । (೨) "ಯಸ್ತು ನಾರಾಯಣಂ ದೇವಂ ಸಾಮಾನ್ಯೇನಾ ಭಿಮನ್ಯತೇ । ಸ ಯಾತಿ ನರಕಂ ಘೋರಂ ಯಾವಚ್ಚಂದ್ರದಿವಾಕರಮ್" (೩) "ಬುದ್ಧರುದ್ರಾದಿ ವಸತಿಂ ಶ್ಮಶಾನಂ ಶವಮೇವಚ । ಅಟವೀಂ ರಾಜಧಾನೀಂಚ ದೂರತಃ ಪರಿವರ್ಜಯೇತ್"**

---

ನೆಯು ಸಿದ್ಧಿಸುತ್ತೋ ಇಲ್ಲವೋ ಎಂಬ ಸಂದೇಹಕ್ಕೆ ಕಾರಣವೇ ಇಲ್ಲದೆ ಸರ್ವ ಸಮರ್ಥನನ್ನು, ಈಶ್ವರಮ್ – ಆಶ್ರಯಿಸಿದರೆ, ಸೂಕ್ಷ್ಮ ಪರಮಹಿತ ಪ್ರವರ್ತನೆಯನ್ನೂ ಮಾಡುವನೆಂಬ ಸಙ್ಕಲ್ಪದಿಂದ ತನಗೆ ನಿಯಾಮಕನಾಗಿರುವವನನ್ನು ಇಂತವನನ್ನು ಮೌಢ್ಯದಿಂದ ತ್ಯಾಗಮಾಡಿ, ಯಃ - ಯಾವನು, **ಅನ್ಯಂದೇವಂ** – ಏನನ್ನೂ ಸ್ವತಃ ಕೊಡಲು ಯೋಗ್ಯತೆ ಇಲ್ಲದ ಅನ್ಯ ದೇವತೆಯನ್ನು, **ಪರಬುಧ್ಯಾ**- ಆತನೇ ಪರದೇವತೆಯು ಎಂದರೆ ಸರ್ವೇಶ್ವರನು, ಎಂಬ ಬುದ್ಧಿಯಿಂದ **ಅರ್ಚಯತೇ** . ಪೂಜಿಸುವನೋ, ಸಃ . ಅಂತವನು, **ಪಾಪಭಾಕ್** - ಪಾಪಿಷ್ಠನು"ಎಂದೂ (೨) ಯಸ್ತು–ಯಾವನಾದರೋ ದೇವನಾದ ನಾರಾಯಣನನ್ನು, **ಸಾಮಾನ್ಯೇನ**- ಇತರ ದೇವತೆಗಳಿಗೆ ಸಮಾನನೆಂಬದಾಗಿ, **ಅಭಿಮನ್ಯತೇ - ತಿಳಿಯುವನೋ, ಸಃ** – ಅವನು, **ಯಾವಚ್ಚಂದ್ರದಿವಾಕರಮ್** - ಸೂರ್ಯಚಂದ್ರರಿರುವವರೆಗೂ **ಘೋರವಾದ** ನರಕವನ್ನು, **ಯಾತಿ** . ಹೊಂದುವನು.

(೩) "**ಬುದ್ಧರುದ್ರಾದಿ ವಸತಿಂ** - ಬುದ್ಧನನ್ನೂ ರುದ್ರನನ್ನೂ ಆದಿಶಬ್ದದಿಂದ ಇತರ ದೇವತೆಗಳು ಹೇಳಲ್ಪಟ್ಟಿದು., ಇವರುಗಳ **ವಸತಿಂ** - ಗುಡಿಗಳನ್ನೂ, **ಶ್ಮಶಾನ**ವನ್ನೂ, **ಶವಮೇವಚ** – ಶವವನ್ನೂ ಸಹ, **ಅಡವಿ**ಯನ್ನೂ, **ರಾಜಧಾನಿ**ಯನ್ನೂ **ದೂರತಃಪರಿವರ್ಜಯೇತ್**" – ದೂರವಾಗಿದ್ದುಕೊಂಡು ಬಿಟ್ಟುಬಿಡ ತಕ್ಕವು. ಬ್ರಹ್ಮರುದ್ರಾದಿ ವಸತಿಯನ್ನು ಶೌಂಡಿಲ್ಯರು ಇವುಗಳಿಗೆಲ್ಲಾ ಸಮವೆಂಬ ಭಾವದಿಂದ ಹೇಳಿರುತ್ತಾರೆ. ಅವರುಗಳ ಆಲಯಕ್ಕೆ ಹೋಗಿ ಆಶ್ರಯಿಸುವದರಿಂದ ಶ್ಮಶಾನ ಶವ ಅಡವಿಗಳನ್ನಾಶ್ರಯಿಸಿದರೆ ಎಷ್ಟು ಫಲಪ್ರಾಪ್ತಿಯೋ, ಅಷ್ಟೇ ಅವರುಗಳ ಆಶ್ರಯದಿಂದಲೂ ಎಂಬ ಭಾವವು. ಅವರುಗಳೆಲ್ಲಾ ನಮ್ಮ ಹಾಗೆಯೇ ಬದ್ಧರು. ನಮ್ಮ ಹಾಗೆಯೇ ಅಸಮರ್ಥರು. ಅವರುಗಳು ಒಂದುವೇಳೆ ದಯಪಾಲಿಸಿದರೂ ಕ್ಷುದ್ರಗಳಾಗಿ ಕ್ಲೇಶಯುಕ್ತಗಳಾಗಿ ಇರುವ ಅಶಾಶ್ವತಫಲಗಳನ್ನು ಕೊಡುವವರು. ಆದುದರಿಂದ ಪ್ರಾಜ್ಞನು ಅನ್ಯದೇವತಾಲಯಗಳಿಂದ ದೂರವಿರತಕ್ಕದ್ದು ಯೋಗ್ಯವೆಂಬಭಾವವು. ಇವುಗಳೊಂದಿಗೆ ರಾಜಧಾನಿಯನ್ನೂ ಸೇರಿಸಿರುವದರ ಅಭಿಪ್ರಾಯವು, ಬಹುಶಃ ಪ್ರಪನ್ನನಿಗೆ ರಾಜಧಾನಿಯಲ್ಲಿದ್ದು ರಾಜಾಶ್ರಯದಿಂದ ಆಗತಕ್ಕದ್ದೇನೂ ಇಲ್ಲವೆಂದಾಗಲಿ, ಅಥವಾ ಏನಾದರೂ ಪ್ರಾಪ್ತವಾದರೆ ಅದೂ ಅಶಾಶ್ವತವೇ ಎಂಬ ಭಾವನೆಯಿಂದಲಾಗಲಿ, ಅಥವಾ ಒಂದೊಂದು ಸಂದರ್ಭದಲ್ಲಿ ರಾಜನ

---

(೨) (೩) ಶೌಂಡಿಲ್ಯಸ್ಮೃತಿ ೪-೧೯೧.

ಇತ್ಯಾದಿಗಳಿಲ್ ಪಡಿಯೇ ದೇವತಾಂತರಙ್ಗಳಿಲೇ ಪರತ್ವಬುದ್ಧಿ ಪಣ್ಣುದಲ್, ಸಮತ್ವಬುದ್ಧಿ ಪಣ್ಣುದಲ್. ನಿತ್ಯನೈಮಿತ್ತಿಕಙ್ಗಳಿಲ್ ತುವಕ್ಕತ್ತ ದೇವತಾಂತರಸ್ಥಲಂಗಳಿಲ್ ಶೆಲ್ಲುತಲ್, ಶೆಯ್‌ಯಿಲ್, ಪರವ್ಯೆಕಾಂತಿಕ್ಕು ದೋಷಮಾಮ್; ಅಲ್ಲದು, ನಿತ್ಯನೈಮಿತ್ತಿಕಙ್ಗಳಿಲ್ ಅರಾಧ್ಯನಾನ ಸರ್ವಾಂತರ್ಯಾ

---

ಕೋಪಕ್ಕೆ ವಶವಾಗಿ ಈತಿಬಾಧೆಯುಂಟು ಎಂಬ ಭಾವನೆಯಿಂದಲಾಗಲಿ, ಆಗಿರಬಹುದು. ಆದುದರಿಂದಲೇ ಶ್ರೀನಿಗಮಾಂತ ದೇಶಿಕರವರು ರಾಜ್ಯಾಂಗಕ್ಕೆ ಸೇರಿದ ವಿದ್ಯಾರಣ್ಯರವರು ರಾಜಸನ್ಮಾನ ಉಂಟಾಗುತ್ತದೆಂದು ಹೇಳಿಬರಬೇಕೆಂದು ಬಲವಂತಮಾಡಿದರೂ ಮತ್ತು ಶಿಂಗಭೂಪಾಲನು ತನ್ನ ರಾಜ್ಯಕ್ಕೆ ಬರಬೇಕೆಂದು ಬಹಳ ಪ್ರಾರ್ಥಿಸಿದರೂ ಅವುಗಳನ್ನು ನಿರಾಕರಿಸಿದರು.

ಇತ್ಯಾದಿಗಳಿಲ್ ಪಡಿಯೆ - ಇವೇ ಮೊದಲಾದವುಗಳಲ್ಲಿ ಹೇಳಿರುವಹಾಗೆ (೧) ದೇವತಾಂತರಗಳಲ್ಲಿ ಪರತ್ವಬುದ್ಧಿ ಪಣ್ಣುದಲ್-ಸರ್ವೇಶ್ವರನೇ ಅವರು ಎಂಬ ಭಾವನೆಯನ್ನು ಮಾಡಿದರೂ, (೨) ಸಮತ್ವಬುದ್ಧಿ ಪಣ್ಣುದಲ್ - ಈ ಅನ್ಯದೇವತೆಗಳೂ ಪರಬ್ರಹ್ಮನೂ ಎಲ್ಲಾ ಸಮವೆಂಬ ಭಾವನೆಯನ್ನು ಮಾಡಿದರೂ, ನಿತ್ಯನೈಮಿತ್ತಿಕಗಳಲ್ಲಿ, ತುವಕ್ಕತ್ತ-ಸಂಬಂಧವಿಲ್ಲದ, ದೇವತಾಂತರಸ್ಥಲಂಗಳಿಲ್ ಅನ್ಯದೇವತೆಗಳಿರುವ ಎಂದರೆ ಆರಾಧಿಸಲ್ಪಡುವ ಪ್ರದೇಶಗಳಲ್ಲಿ, ಶೆಲ್ಲುದಲ್ - ಹೋಗಿ ಸೇರುವದಾಗಲಿ, (೪) ಶೆಯ್ಗೈಲ್ – ಕೈಂಕರ್ಯ ಮಾಡುವದಾಗಲಿ, ಪರಮೈಕಾಂತಿಕ್ಕು – ಪರಮೈಕಾಂತಿಗೆ, ಎಂದರೆ ಪರಮಾತ್ಮನನ್ನು ಐಕಾಂತ ಭಕ್ತಿಯಿಂದ ಧ್ಯಾನಿಸುವನಿಗೆ, ದೋಷಮಾಮ್ – ದೋಷವಾಗುತ್ತದೆ, ಎಂದರೆ ಅಂತಹ ಪರಮೈಕಾಂತಿತ್ವಕ್ಕೆ ಭಂಗ ಉಂಟಾಗುತ್ತದೆಂಬ ಭಾವವು. ನಿತ್ಯನೈಮಿತ್ತಿಕತುವಕ್ಕತ್ತ . ದೇವತಾಂತರಸ್ಥಲಂಗಳಿಗೆ ಶೆಲ್ಲುತಲ್ ಎಂಬಲ್ಲಿ ನಿತ್ಯನೈಮಿತ್ತಿಕ ಸಂಬಂಧವಿಲ್ಲದೇ ಇರುವ ಎಂದು ಹೇಳಿರುವದರ ಅಭಿಪ್ರಾಯವೇನೆಂದರೆ ನಿತ್ಯನೈಮಿತ್ತಿಕಗಳಲ್ಲಿ ಅನ್ಯದೇವತೆಗಳ ಸಂಬಂಧವು ವೈಶ್ವದೇವ ಮುಂತಾದ ಕರ್ಮಗಳು ಶಾಸ್ತ್ರಸಿದ್ಧವಾಗಿ ತಪ್ಪಿದ್ದಲ್ಲವಾದುದರಿಂದ ದೋಷವಿಲ್ಲವು. ಇಂತಹ ನಿತ್ಯನೈಮಿತ್ತಿಕಗಳಲ್ಲಿ ಅಲ್ಲದೆ ರುದ್ರಾಲಯ ಮೊದಲಾದವುಗಳಿಗೆ ಹೋಗಿ ಆರಾಧಿಸುವದು ಶಾಸ್ತ್ರಸಿದ್ಧವಾದುದಲ್ಲವಾದುದರಿಂದ ದೋಷಾವಹವೆಂದು ಏರ್ಪಟ್ಟಿತು, ಆಗಲಿ, ನಿತ್ಯನೈಮಿತ್ತಿಕಗಳಲ್ಲಿ ವಿಶೇಷಣ ಸಂಬಂಧದಿಂದ ಐಕಾಂತ್ಯಕ್ಕೆ ಭಂಗವಲ್ಲವೆಂದು ಏರ್ಪಟ್ಟನಂತರ, ರುದ್ರಾದಿ ಆಲಯಗಳಿಗೆ ಹೋಗಿ ಆರಾಧಿಸಿದರೂ ವಿಶೇಷ್ಯನಾದ ಪರಮಪುರುಷನೇ, ಆರಾಧಿಸಲ್ಪಡುವನು, ಆದುದರಿಂದ ಅಂತಹ ಆಲಯ ಗಮನವು ನಿಷೇಧಿಸಲ್ಪಡಲು ಕಾರಣವೇನು ? ಎಂಬ ಪೂರ್ವಪಕ್ಷಕ್ಕೂ ಈ ವಾಕ್ಯವು ಸಮಾಧಾನವನ್ನು ಕೊಡುತ್ತದೆ. ನಿತ್ಯನೈಮಿತ್ತಿಕಗಳು ಶಾಸ್ತ್ರ ಸಿದ್ಧಗಳು, ಆದುದರಿಂದ ಆಗಬಹುದು ಅಂತಹ ಆಲಯಗಮನವು ಪ್ರಪನ್ನನಿಗೆ ಶಾಸ್ತ್ರಸಿದ್ಧವಲ್ಲವು, ಆದುದ

**ಮಿಕ್ಕು ಶರೀರವಾಯ್ ನಿರ್ಕ್ಕಿರ ನಿಲೈಯಿ ನಾ(ಲ್), ಇದ್ದೇವತೈಗಳ್ ಪಕ್ಕಲ್ ಪರತ್ವಬುದ್ಧಿಯುಮ್, ಸಾಮ್ಯ ಬುದ್ಧಿಯುಮ್, ಸ್ವನಿಷ್ಠತ್ವಬುದ್ಧಿಯುಮ್, ಆರಾಧ್ಯತ್ವ ಬುದ್ಧಿಯುಮ್, ಫಲಪ್ರದತ್ವ ಬುದ್ಧಿಯುಮ್, ಇಲ್ಲಾಮೈಯಾಲ್, ಉಪಾಸ್ಯ ವಿಶೇಷಣಙ್ಗಳಾನ ಪ್ರಾಣ ವೈಶ್ವಾನರ ತ್ರೈಲೋಕ್ಯಾದಿಗಳಾಲ್, ಇವನುಕ್ಕು ವ್ಯಭಿಚಾರಮ್ ವಾರಾದಾರ್ಪೋಲೆ, ಶಾಸ್ತ್ರಸಿದ್ಧಙ್ಗಳಾನ ಅಗ್ನೀಂದ್ರಾದಿ ವಿಶೇಷಣಙ್ಗಳಾಲುಮ್ ಇವನುಕ್ಕು ಐಕಾಂತ್ಯವಿರೋಧಮ್ ವಾರಾದು.**

---

ರಿಂದ ನಿರಾಕರಿಸಲ್ಪಟ್ಟಿತು. **"ಬ್ರಹ್ಮಾಣಂ ಶಿತಿಕಂಠಂಚ ಯೇಚಾನ್ಯಾದೇವತಾಸ್ಮೃತಾಃ। ಪ್ರತಿಬುದ್ಧಾ ನ ಸೇವಂತೇ ಯಸ್ಮಾತ್ಪರಿಮಿತಂ ಫಲಮ್"** ಎಂಬುದು ಅನುಸಂಧೇಯವು.

**ಅಲ್ಲದು** - ಮೇಲೆ ಹೇಳಿದ ನಾಲ್ಕು ವಿಧಗಳಿಂದಲೂ ಪರಮೈಕಾಂತಿತ್ವಕ್ಕೆ ಭಂಗಬಾರದ ಹಾಗೆ, ನಿತ್ಯನೈಮಿತ್ತಿಕಗಳಲ್ಲಿ, **ಆರಾಧ್ಯನಾನ** – ಆರಾಧಿಸಲ್ಪಡುವ, **ಸರ್ವಾಂತರ್ಯಾಮಿಕ್ಕು** - ಸರ್ವವನ್ನೂ ವ್ಯಾಪಿಸಿ ಅವುಗಳಿಗೆಲ್ಲಾ ಆತ್ಮಾವಾಗಿರುವ ಸರ್ವೇಶ್ವರನಿಗೆ, **ಶರೀರವಾಯ್ ನಿರ್ಕ್ಕಿರನಿಲೈಯಿ (ನಾ) ಲ್** . ಶರೀರವಾಗಿ ಈ ದೇವತಾಂತರಗಳಲ್ಲಿ ನಿಂತಿರುವದರಲ್ಲಿ, **ಇದ್ದೇವತೆಗಳ ಪಕ್ಕಲ್ ಪರತ್ವ ಬುದ್ಧಿಯುಮ್**-ಈ ಅನ್ಯದೇವತೆಗಳ ವಿಷಯದಲ್ಲಿ ಪರತತ್ವವೆಂಬ ಬುದ್ಧಿಯೂ, **ಸಾಮ್ಯ ಬುದ್ಧಿಯುಮ್** - ಎಲ್ಲಾ ದೇವತೆಗಳೂ ಶ್ರೀಮಹಾವಿಷ್ಣುವೂ ಸಮವೆಂಬ ಬುದ್ಧಿಯೂ, **ಸ್ವನಿಷ್ಠತ್ವಬುದ್ಧಿಯುಮ್** - ಭಗವಂತನಿಗೆ ತಾನು ಶೇಷಭೂತನೆಂಬ ಭಾವನೆಯಿಲ್ಲದೆ ತಾನೇ ಸ್ವತಂತ್ರನೆಂಬ ಬುದ್ಧಿಯೂ, **ಆರಾಧ್ಯತ್ವಬುದ್ಧಿಯುಮ್**- ಆ ಅನ್ಯದೇವತೆಗಳೇ ಆರಾಧಿಸಲು ಯೋಗ್ಯರೆಂಬ ಬುದ್ಧಿಯೂ ಅಥವಾ ಈಗ ತಾನು ಅನುಷ್ಠಿಸುವದರಿಂದ ಆ ಅನ್ಯದೇವತೆಗಳು ಆರಾಧಿಸಲ್ಪಡುವರೆಂಬ ಬುದ್ಧಿಯೂ, **ಫಲಪ್ರದತ್ವಬುದ್ಧಿಯೂ** – ಅವರುಗಳೇ ತಾನು ಮಾಡುವ ಕರ್ಮಗಳ ಫಲವನ್ನು ಕೊಡತಕ್ಕವರೆಂಬ ಭಾವನೆಯೂ, **ಇಲ್ಲಾಮೈಯಾಲ್** - ಪ್ರಪನ್ನನಲ್ಲಿ ಇವು ಯಾವ ದೋಷವೂ ಇಲ್ಲದಿರುವದರಿಂದ, **ಉಪಾಸ್ಯವಿಶೇಷಣಂಗಳಾನ** - ಉಪಾಸ್ಯನಾದ ಪರಬ್ರಹ್ಮನಿಗೆ ಅಪೃಥಕ್ಸಿದ್ಧ ವಿಶೇಷಣಗಳಾದ, ಮೇಲೆ ಹೇಳಿದ ಅನ್ಯದೇವತೆಗಳಾದ **ಪ್ರಾಣ ವೈಶ್ವಾನರ ತ್ರೈಲೋಕ್ಯಾದಿಗಳಾಲ್**-ಪ್ರಾಣ ಶಬ್ದವಾಚ್ಯವಾದುದನ್ನೂ, ಜಾಠರಾಗ್ನಿ ವಾಚ್ಯವಾದುದನ್ನೂ ಮತ್ತು ತ್ರೈಲೋಕ್ಯಾಧಿಪತಿಯಾದ ಇಂದ್ರಶಬ್ದ ವಾಚ್ಯವಾದುದನ್ನೂ ಉಪಾಸಿಸುವದರ ಮೂಲಕ,ಆದಿ ಪದದಿಂದ ವಸುವು ಉಪಾಸ್ಯವಾಗಿರುವದು ಹೇಳಲ್ಪಟ್ಟಿತು,ಈ ವಿದ್ಯೆಗಳಿಗೆಪ್ರಾಣವಿದ್ಯೆ,ವೈಶ್ವಾನರವಿದ್ಯೆ,ಪ್ರತರ್ದನ ವಿದ್ಯೆ, ಮಧುವಿದ್ಯೆ ಎಂಬ ಹೆಸರುಗಳು, **ಇವನುಕ್ಕು ವ್ಯಭಿಚಾರಮ್** - ಇವನಿಗೆ ಅನ್ಯದೇವತಾ ಸಂಬಂಧರೂಪದೋಷವು, **ವಾರಾತಾರ್ಪೋಲೇ** - ಬಾರದಹಾಗೆ ಎಂದರೆ ಹೇಗೆ ಪ್ರಾಣವಿದ್ಯೆ, ವೈಶ್ವಾನರ ವಿದ್ಯೆ ಪ್ರತರ್ದನ ವಿದ್ಯೆ ಇವುಗಳಿಂದ,

ದೋಷ ಉಂಟಾಗುವದಿಲ್ಲವೋ ಹಾಗೆ, ಎಂಬ ತಾತ್ಪರ್ಯವು, ಶಾಸ್ತ್ರಸಿದ್ಧಙ್ಗಳಾನ. ಶಾಸ್ತ್ರದಲ್ಲಿ ವಿಧಿಸಲ್ಪಟ್ಟ, ಅಗ್ನೀಂದ್ರಾದಿ ವಿಶೇಷಣಙ್ಗಳಾಲುಮ್ – ಜಾಠರಾಗ್ನಿ ಇಂದ್ರ, ಆದಿ ಶಬ್ದದಿಂದ ವಸು ಮೊದಲಾದ ಪರಮಾತ್ಮನಿಗೆ ಶರೀರಭೂತಗಳಾಗಿ ವಿಶೇಷಣಗಳಾಗಿರುವುಗಳ ಮೂಲಕವಾಗಿ, ಇವನುಕ್ಕು ಐಕಾಂತ್ಯವಿರೋಧಮ್- ವಾರಾದು - ಈ ನಿತ್ಯನೈಮಿತ್ತಿಕಗಳನ್ನು ಯಥಾಶಾಸ್ತ್ರಂ. ಯಥಾವಿಧಿ ಅನುಷ್ಠಿಸು ವವನಿಗೆ ಐಕಾಂತ್ಯಕ್ಕೆ ಭಂಗವು ಬರುವುದಿಲ್ಲವು. ಪ್ರಾಣ ವೈಶ್ವಾನರ ಪ್ರತರ್ದನ, ಮಧುವಿದ್ಯೆಗಳು ಶಾಸ್ತ್ರದಲ್ಲಿ ಪ್ರೋಕ್ತಗಳಾದ ಬ್ರಹ್ಮವಿದ್ಯೆಗಳು. ಇವು ಗಳ ವಿಚಾರವು ಹಿಂದೆ ಪುಟಗಳಲ್ಲಿ ಉಪಪಾದಿತವು. ಇವುಗಳಲ್ಲಿ ಹೇಗೆ ಅನ್ಯ ದೇವತಾ ಸಂಬಂಧವಿಲ್ಲವೋ, ಹಾಗೆಯೇ ನಿತ್ಯನೈಮಿತ್ತಿಕಗಳೂ ಶಾಸ್ತ್ರದಲ್ಲಿ ವಿಧಿಸ ಲ್ಪಟ್ಟು ಆವಶ್ಯಕವಾಗಿ ಅನುಷ್ಠಿಸಲ್ಪಡತಕ್ಕವುಗಳಾದುದರಿಂದ ಅವುಗಳ ಅನುಷ್ಠಾನ ದಲ್ಲೂ ದೇವತಾಂತರ ಸ್ಪರ್ಶಕಾರಣವಿಲ್ಲವು. ಮೇಲಿನ ಬ್ರಹ್ಮವಿದ್ಯೆಗಳಲ್ಲಿ ಅವುಗಳು ವಿಶೇಷಣಗಳಾಗಿ ಅವುಗಳಿಂದ ಸೇರಿದ ವಿಶೇಷ್ಯವೇ ಉಪಾಸ್ಯವಾಗಿರುವದರ ಮೂಲಕ ಐಕಾಂತ್ಯಹಾನಿ ಹೇಗೆ ಇಲ್ಲವೋ, ಹಾಗೆಯೇ ಈ ನಿತ್ಯನೈಮಿತ್ತಿಕಾನುಷ್ಠಾನ ಗಳಲ್ಲೂ ಸೂರ್ಯ, ಅಗ್ನಿ, ಬ್ರಹ್ಮೇಂದ್ರಾದಿ ವಿಶೇಷಣಗಳಿಂದ ಕೂಡಿದ ವಿಶೇಷ್ಯನಾದ ಪರಮಪುರುಷನೇ ಆರಾಧ್ಯನಾಗುವದರಿಂದ ದೇವತಾಂತರ ಸ್ಪರ್ಶವಿಲ್ಲವೆಂಬ ಭಾವವು. ಒಬ್ಬನು ಕಂಚುಕವನ್ನು ಧರಿಸಿರುವದರ ಮೇಲೆ ಹಾರವನ್ನು ಸಮರ್ಪಿ ಸಿದರೆ, ಅದು ವಿಶೇಷಣವಾದ ಕಂಚುಕಕ್ಕೆ ಹೇಗೆ ಅಲ್ಲದೆ ಆತನ ಆತ್ಮಾ ಹೇಗೆ ತೃಪ್ತಿ ಯನ್ನು ಹೊಂದುತ್ತದೋ ಹಾಗೆಯೇ ಇಲ್ಲೂ ಈ ವಿಶೇಷಣಗಳಾದ ಅನ್ಯದೇವತೆ ಗಳಿಗೆ ಸಂಬಂಧಿಸುವದಿಲ್ಲವೆಂಬ ಭಾವವು. ಪರತ್ವಬುದ್ಧಿಯುಮ್ ಸಾಮ್ಯಬುದ್ಧಿ ಯುಮ್ ಸ್ವನಿಷ್ಪತ್ತ್ವಬುದ್ಧಿಯುಮ್ ಆರಾಧ್ಯತ್ವಬುದ್ಧಿಯುಮ್, ಫಲಪ್ರ ದತ್ವಬುದ್ಧಿಯುಮ್ ಹೀಗೆ ಈ ಐದು ವಿಧ ಬುದ್ಧಿಯೂ ಪರಮೈಕಾಂತಿತ್ವಕ್ಕೆ ಬಾಧಕಗಳೆಂದು ಇಲ್ಲಿ ಹೇಳಲ್ಪಟ್ಟಿತು.

ನಿತ್ಯನೈಮಿತ್ತಿಕಾನುಷ್ಠಾನಗಳಿಂದ ಪ್ರಪನ್ನನಿಗೆ ಐಕಾಂತ್ಯಭಂಗವಿಲ್ಲವೆಂದು ಎರಡು ವಿಧವಾಗಿ ಉಪಪಾದಿಸಿ ಹೇಳಿದರು.—

೧. ನಿತ್ಯನೈಮಿತ್ತಿಕಗಳ ಅನುಷ್ಠಾನದಲ್ಲಿ ಬರುವ ಸೂರ್ಯ, ಅಗ್ನಿ, ವೈಶ್ವಾನರ ಇಂದ್ರ ಮೊದಲಾದ ಶಬ್ದಗಳು ಜೈಮಿನ್ಯಾಚಾರ್ಯರ ಅಭಿಪ್ರಾಯ ರೀತ್ಯಾ ವ್ಯುತ್ಪತ್ತಿ ಮೂಲಕ ಪರಮಪುರುಷನೇ ಹೇಳಲ್ಪಡುವ ಭಾವನೆಯಿಂದ ಐಕಾಂತ್ಯಕ್ಕೆ ಹಾನಿ ಇಲ್ಲವು.

೨. ಇಲ್ಲಿ ಉಚ್ಚರಿಸಲ್ಪಡುವ ಸೂರ್ಯ, ಅಗ್ನಿ, ವೈಶ್ವಾನರ ಬ್ರಹ್ಮರುದ್ರೇಂ ದ್ರಾದಿ ದೇವತೆಗಳೆಲ್ಲಾ ಪರಮಾತ್ಮನಿಗೆ ಶರೀರವಾಗಿ, ಅವರಿಗೆಲ್ಲಾ ಪರಮಾತ್ಮನೇ ಆತ್ಮಾವಾದುದರಿಂದ ಶರೀರಕ್ಕೆ ಮಾಡಿದ ಉಪಚಾರಗಳೂ ಶರೀರಕ್ಕಲ್ಲದೆ ಆತ್ಮಾವಿಗೆ ಸಲ್ಲುವದರಿಂದಲೂ ಆತನೇ ಪ್ರೀತನಾಗುವದರಿಂದಲೂ ಐಕಾಂತ್ಯಕ್ಕೆ ಭಂಗವಿಲ್ಲ

ಪೂರ್ವಾಚಾರ್ಯ ಸಂಪ್ರದಾಯಾನುಷ್ಠಾನಾಭ್ಯಾಂ ದೃಢೀಕರೋತಿ.

ವಂಗಿ ಪುರತ್ತ ನಂಬಿಯುಮ್ ಪ್ರಪನ್ನನುಕ್ಕು ಅಹೋರಾತ್ರ ಕೃತ್ಯ ಮಾನ ಭಗವತ್ಸಮಾರಾಧನತ್ತೈ ಚ್ಚೊಲ್ಲವಿಳಿನ್ದು (೧) "ಗಾಯತ್ರೀ ಜಪ ಪರ್ಯಂತಂ ಮನ್ತ್ರಾಚಮನ ಪೂರ್ವಕಮ್। ಸಾಧ್ಯಂ ಕರ್ಮಾಖಿಲಂ ಸಾಧು ಸಮಾಪ್ಯಚ ಯಥಾವಿಧಿ (೨) ಸಮಿದಾಜ್ಯಾದಿಭಿರ್ದ್ರವ್ಯೈರ್ಮನ್ತ್ರೈರಪಿ ಯಥೋದಿತೈಃ। ಹುತ್ವಾಗ್ನೀ ಅಗ್ನಿಹೋತ್ರಾದೌ ಉಕ್ತಂ ಕಾಲ ಮವಿಕ್ಷಿಪನ್

ವೆಂದೂ ಹೇಳಿದರು. ಆದುದರಿಂದ ನಿತ್ಯನೈಮಿತ್ತಿಕಗಳು ಆವಶ್ಯಕವಾಗಿ ಅನುಷ್ಠೇಯಗಳು ; ಬಿಟ್ಟರೆ ಪ್ರತ್ಯವಾಯುವೆಂಬ ಭಾವವು.

ಪೂರ್ವಾಚಾರ್ಯರುಗಳ ಸಂಪ್ರದಾಯಾನುಷ್ಠಾನಗಳ ಮೂಲಕ ದೃಢೀಕರಿಸುತ್ತಾರೆ.

ಹಾಗಾದರೆ ಪೂರ್ವಾಚಾರ್ಯರುಗಳ ಸಂಪ್ರದಾಯ ಹೇಗೆ? ಸಂಪ್ರದಾಯ ಬಲವುಂಟೋ? ಎಂದರೆ ಕೆಲವು ಪೂರ್ವಾಚಾರ್ಯರುಗಳು ನಿತ್ಯವೆಂಬ ಆಹ್ನಿಕ ಗ್ರಂಥಗಳನ್ನು ಉದಾಹರಿಸಿ,ಅವುಗಳ ಅನುಷ್ಠಾನಾವಶ್ಯಕತೆಯನ್ನು ಸ್ಥಾಪಿಸುತ್ತಾರೆ ಶ್ರೀವಾಸ್ ವಂಗಿಪುರತ್ತನಂಬಿ, ಕೂರತ್ತಾಳ್ವಾರ್, ಭಟ್ಟರ್ ನಂಜೀಯರ್‌ಗಳ ಗ್ರಂಥಗಳಿಂದ ಉದಾಹರಿಸುತ್ತಾರೆ.—ವಂಗಿಪುರದ ನಂಬಿಯುಮ್ - ಸ್ವಾಮಿಗಳು, ಪ್ರಪನ್ನನುಕ್ಕು - ಪ್ರಪನ್ನನಿಗೆ, ಅಹೋರಾತ್ರ ಕೃತ್ಯಮಾನ – ಹಗಲಿನಲ್ಲೂ ರಾತ್ರಿಯಲ್ಲೂ ಮಾಡಬೇಕಾದ, ಭಗವತ್ಸಮಾರಾಧನತ್ತೈ - ಭಗವಂತನ ಆರಾಧನಾರೂಪ ಕೈಂಕರ್ಯಗಳನ್ನು ಚ್ಚೊಲ್ಲವಿಳಿನ್ದು-ಹೇಳಲು ಆರಂಭಿಸಿ (೧) ಮನ್ತ್ರಾಚಮನ ಪೂರ್ವಕಮ್ – ಮಂತ್ರವನ್ನು ಹೇಳಿ ಆಚಮನವನ್ನು ಮಾಡಿದುದು ಪೂರ್ವಕವಾಗಿ, ಗಾಯತ್ರೀಜಪಪರ್ಯಂತಂ ಗಾಯತ್ರೀ ಜಪವನ್ನು ಮಾಡಿದ ಪರ್ಯಂತವಾಗಿ, ಅಖಿಲಂ - ಸಮಸ್ತವಾದ, ಸಾಂಧ್ಯಂ ಕರ್ಮ - ಸಂಧಿಗಳಲ್ಲಿ, ರಾತ್ರಿ ಪ್ರಾತಃ, ಮತ್ತು ಅಹಸ್ಸು, ರಾತ್ರಿ, ಇವುಗಳ ಸಂಧಿಗಳಲ್ಲಿ ಮಾಡಬೇಕಾದ ಸಂಧ್ಯಾವಂದನಾದಿ ಕರ್ಮವನ್ನು, ಯಥಾವಿಧಿ - ಶಾಸ್ತ್ರದಲ್ಲಿ ವಿಧಿಸಿರುವ ಪ್ರಕಾರ, ಸಾಧು-ಚನ್ನಾಗಿ, ಸಮಾಪ್ಯ - ಮುಗಿಸಿ" (೨) ಸಮಿದಾಜ್ಯಾದಿಭಿರ್ದ್ರವ್ಯೈಃ - ಸಮಿತ್ತು ತುಪ್ಪವೇ ಮೊದಲಾದ ಹೋಮದ್ರವ್ಯೈಃ ಆದಿಶಬ್ದದಿಂದ, ಅಕ್ಷತೆ, ನಿವೇದನಕ್ಕೆ ಬೇಕಾದ ಸಾಮಗ್ರೀ ಕುಶ, ಆಸ್ತರಣ ಮೊದಲಾದವುಗಳು ಹೇಳಲ್ಪಟ್ಟವು, ಯಥೋದಿತೈಃ – ಶಾಸ್ತ್ರಗಳಲ್ಲಿ ವಿಧಿಸಿರುವ, ಮನ್ತ್ರೈರಪಿ - ಮಂತ್ರಗಳಿಂದಲೂ ಕೂಡ, ಅಗ್ನಿಹೋತ್ರಾದೌ – ಅಗ್ನಿಹೋತ್ರವೇ ಮೊದಲಾದವುಗಳಲ್ಲಿ, ಅಗ್ನೀ - ಅಗ್ನಿಗಳನ್ನು, ಎಂದರೆ ಅಗ್ನಿಯಲ್ಲಿ, ಹುತ್ವಾ - ಹೋಮಮಾಡಿ, ಉಕ್ತಂ ಕಾಲಂ -

(೧) ವಂಗಿನಿತ್ಯಂ ೭೭ (೨) ವಂಗಿನಿತ್ಯಂ ೮೪, ೮೫.

(೩) "ತತೋ ಮಾಧ್ಯಂದಿನಂ ಕರ್ಮಸ್ವೋದಿತಂ ಶ್ರುತಿಚೋದಿತಮ್ । ಸ್ನಾನಾದಿ ಬ್ರಹ್ಮಯಜ್ಞಾಂತಂ ಕೃತ್ವಾ ಖಿಲ ಮತಂದ್ರಿತಃ" ಎನ್ರುಮ್,(೪) "ಹೋಮಂ ಪಿತೃಕ್ರಿಯಾಂ ಪಶ್ಚಾದನುಯಾಗಾದಿಕಂ ಯತ್" ಎನ್ರುಮ್, ಇಪ್ರಕಾರಙ್ಗಳಿಲೇ ತತ್ತನ್ಮನ್ತ್ರ ಪೂರ್ವಕಙ್ಗಳಾನ ವರ್ಣಾಶ್ರಮಧರ್ಮಙ್ಗಳೈ ಅರುಳಿಚ್ಚೆಯ್ದಾರ್.

---

ಹೇಳಲ್ಪಟ್ಟ ಕಾಲವನ್ನು, ಪ್ರಕರಣಾನುಗುಣವಾಗಿ ಪ್ರಾತಃಕಾಲವನ್ನು, ಅವಿಕ್ಷಿಪಃ. ಕಳೆಯುವವನಾಗಿ," ಎಂದೂ, (೩) ತತಃ - ಅನಂತರದಲ್ಲಿ ಸ್ವೋದಿತಮ್ – ತನಗಾಗಿ ಹೇಳಲ್ಪಟ್ಟ, ಮತ್ತು ಶ್ರುತಿಚೋದಿತಮ್ - ಶ್ರುತಿಗಳಲ್ಲಿ ವಿಧಿಸಲ್ಪಟ್ಟ, ಮಾಧ್ಯಂದಿನಂ ಕರ್ಮ - ಮಧ್ಯಾಹ್ನದಲ್ಲಿ ಮಾಡಬೇಕಾದ ಮಾಧ್ಯಾಹ್ನಿಕವನ್ನು ಸ್ನಾನಾದಿ ಬ್ರಹ್ಮಯಜ್ಞಾಂತಂ - ಮಾಧ್ಯಾಹ್ನಿಕನೇ ಮೊದಲಾದವುಗಳಿಗಾಗಿ ಸ್ನಾನವೇ ಮೊದಲುಗೊಂಡು ಬ್ರಹ್ಮಯಜ್ಞಪರ್ಯಂತನಾಗಿ. ಅಖಿಲಂ - ಎಲ್ಲಾ ಕರ್ಮವನ್ನೂ, ಅತಂದ್ರಿತಃ - ಮೈಮರೆಯದೆ ಜಾಗರೂಕನಾಗಿ, ಕೃತ್ವಾ - ಮಾಡಿ" ಎನ್ರುಮ್-ಎಂಬುದಾಗಿಯೂ, (೪) ಅನಂತರ ಹೋಮಂ - ವೈಶ್ವದೇವಹೋಮ ಕರ್ಮವನ್ನು, ಪಿತೃಕ್ರಿಯಾಂ - ಪಂಚಮಹಾಯಜ್ಞಗಳಲ್ಲಿ ಒಂದಾದ ಪಿತೃಯಜ್ಞವನ್ನು, ಪಶ್ಚಾತ್ – ಅನಂತರ. ಅನುಯಾಗಾದಿಕಂ - ಅನುಯಾಗವೇ ಮೊದಲಾದವುಗಳನ್ನುಳ್ಳ ಕರ್ಮವು; ಅನುಯಾಗ ಶಬ್ದಾರ್ಥವೇನೆಂದರೆ ವೈಶ್ವದೇವಕ್ಕೆ ಸೇರಿದವು ಪಂಚಮಹಾಯಜ್ಞಗಳು.—ದೇವಯಜ್ಞ. ಪಿತೃಯಜ್ಞ, ಭೂತಯಜ್ಞ ಮನುಷ್ಯಯಜ್ಞ, ಬ್ರಹ್ಮಯಜ್ಞ. ಇವುಗಳು ಯಾವುವು ಎಂಬುದಕ್ಕೆ ೧೧೫ನೆಯನೆಯ ಪುಟವನ್ನು ನೋಡಿ. ಇವೆಲ್ಲಾ ಆದ ನಂತರ ಅತಿಥಿಗಳೊಂದಿಗೆ ಭಗವನ್ನಿವೇದಿತಾನ್ನದ ಭೋಜನ ಅನುಯಾಗವೆನಿಸುತ್ತದೆ. ಯತ್ - ಯಾವುದೋ ? ತತ್ ಎಂದು ಇಟ್ಟುಕೊಳ್ಳತಕ್ಕದ್ದು, ಅವೆಲ್ಲವನ್ನೂ ಸಮಾಚರೇತ್ - ಸರಿಯಾಗಿ ಆಚರಿಸತಕ್ಕದ್ದು. ಹೀಗೆ ಸ್ನಾನ ಸಂಧ್ಯಾವಂದನಾದಿಗಳನ್ನೂ, ಪುನಃ ಮಾಧ್ಯಾಹ್ನಿಕ್ಕಾಗಿ ಸ್ನಾನ ಮಾಧ್ಯಾಹ್ನಿಕ. ಬ್ರಹ್ಮಯಜ್ಞ, ಭಗವದಾರಾಧನ. ವೈಶ್ವದೇವ ಹೀಗೆ ಎಲ್ಲಾ ನಿತ್ಯನೈಮಿತ್ತಿಕ ಕರ್ಮಗಳನ್ನೂ ಪ್ರಪನ್ನನು ದ್ವಿಜನಾದ ಪಕ್ಷದಲ್ಲಿ ಅವಶ್ಯಕವಾಗಿ ಅನುಷ್ಠಿಸಲೇಬೇಕೆಂದು ವಂಗಿಪುರದನಂಬಿಯವರು ರಚಿಸಿದ ನಿತ್ಯವೆಂಬ ಗ್ರಂಥ (೫೨೨ ಶ್ಲೋಕಗಳುಳ್ಳದ್ದು) ದಿಂದ ತೋರಿಸಿ, ಪೂರ್ವಾಚಾರ್ಯರ ಸಂಪ್ರದಾಯರೀತ್ಯಾ ನಿತ್ಯನೈಮಿತ್ತಿಕಗಳು ಅನುಷ್ಠೇಯಗಳೇ ವಿನಾ ಎಂದಿಗೂ ಬಿಡತಕ್ಕದ್ದಲ್ಲವು ಬ್ರಹ್ಮಯಜ್ಞಾನುಷ್ಠಾನವನ್ನು ಎರಡು ವಿಧವಾಗಿ ಅನುಷ್ಠಿಸುವ ಕ್ರಮವುಂಟು ಸ್ನಾನ, ಸಂಧ್ಯಾವಂದನ, ತದಂಗವಾಗಿ ಮೂಲ ಮಂತ್ರದ್ವಯ ಚರಮಶ್ಲೋಕ ಜಪಗಳು ಇದಾದನಂತರ ದೇವರ್ಷಿ, ಕಾಂಡರ್ಷಿ ಪಿತೃತರ್ಪಣವು ಅನಂತರ ಔಪಾ

---

(೩) ವಂಗಿ ನಿತ್ಯಂ. ೯೦. (೪) ವಂಗಿ ನಿತ್ಯಂ. ೪೯೬.

ಸನ, ಭಗವದಾರಾಧನ, ಆ ಮೇಲೆ ಮಾಧ್ಯಾಹ್ನಿಕಕ್ಕಾಗಿ ಸ್ನಾನ, ಮಾಧ್ಯಾಹ್ನಿಕ ವೈಶ್ವದೇವಗಳು. ಹೀಗೆ ಒಂದು ಕ್ರಮ. ಬ್ರಹ್ಮಯಜ್ಞವನ್ನು ಪ್ರಾತಃಮಾಡ ದಿದ್ದರೆ ಈ ನಿತ್ಯದಲ್ಲಿ ಹೇಳಿರುವಹಾಗೆ ಮಾಧ್ಯಾಹ್ನಿಕವಾದ ನಂತರ ಅನುಷ್ಠಿಸ ತಕ್ಕದ್ದು. ಇವುಗಳಲ್ಲಿ ಔಪಾಸನ, ಬ್ರಹ್ಮಯಜ್ಞ, ವೈಶ್ವದೇವಗಳನ್ನು ಪತ್ನೀ ಯುಕ್ತ ಗೃಹಸ್ಥನು ನಡೆಸತಕ್ಕದ್ದಾದುದರಿಂದ ಪತ್ನೀವಿಯೋಗವನ್ನು ಹೊಂದಿದ ವಿಧುರನಿಗೆ ಈ ಮೂರರಲ್ಲೂ ಅಧಿಕಾರವಿಲ್ಲವು. ಆದರೆ ಬ್ರಹ್ಮಚಾರಿಗೆ ಬ್ರಹ್ಮಯಜ್ಞ ದಲ್ಲಿ ಮಾತ್ರ ಅಧಿಕಾರವು, ಔಪಾಸನ, ವೈಶ್ವದೇವಗಳಿಲ್ಲವು. ಆತನಿಗೆ ವಿಧಿ ಸಿರುವ ಅಗ್ನಿಕಾರ್ಯವನ್ನು ಎಂದರೆ ಸಮಿದಾಧಾನವನ್ನು ಮಾಡತಕ್ಕದ್ದು. ಇಲ್ಲಿ ವಙ್ಗಿ ಪುರತ್ತು ನಂಬಿಯನ್ನು ಸಂಪ್ರದಾಯಸ್ಥಾಪನಾರ್ಥವಾಗಿ ಉದಾಹರಿಸಿರುವದು ಶ್ರೀ ಭಾಷ್ಯಕಾರರಿಗೆ ಸಾಕ್ಷಾತ್ ಶಿಷ್ಯರಾಗಿ ಶ್ರೀ ಭಾಷ್ಯಕಾರ ಸಂಪ್ರದಾಯ ರೀತ್ಯಾ ನಿತ್ಯಾನುಷ್ಠಾನಗಳನ್ನೆಲ್ಲಾ ವಿಶದವಾಗಿ ತಮ್ಮ ನಿತ್ಯ ಎಂಬ ಗ್ರಂಥದಲ್ಲಿ ವಿಸ್ತರಿಸಿ ಹೇಳಿರುವದರಿಂದ ಎಂದು ಭಾವಿಸತಕ್ಕದ್ದು. "ಇತ ಊರ್ಧ್ವಮಹಂ ತಾವದ್ಯಾವ ಜ್ಜೀವಂ ಶ್ರಿಯಃಶ್ರಿಯಃ । ಪದಯೋರರ್ಚನಂ ಕರ್ತುಂ ಯತಮಾನಸ್ಸಮಾ ಹಿತಃ । ಅಭಿಗಚ್ಛ ಹರಿಂ ಪ್ರಾತಃ ಪಶ್ಚಾದ್ದ್ರವ್ಯಾಣಿ ಚಾರ್ಜಯೇ । ಅಥ ಯಂಶ್ಚ ತತೋ ದೇವಂ ತತೋಽನುಸ್ತ್ರ ಜಪನ್ನಪಿ।ಧ್ಯಾಯನ್ನಪಿ ಪರಂದೇವಂ ಕಾಲೇಷೂಕ್ತೇಷು ಪಂಚಸು।ವರ್ತಮಾನ ಸ್ಸದಾ ಹ್ಯೇವಂ ಪಾಂಚಕಾಲಿಕ ವರ್ತ್ಮ ನಾ । ಸ್ವಾರ್ಜಿತೈ ರ್ಗಂಧಪುಷ್ಪಾದ್ಯೈಶ್ಶುಭೈಶ್ಶಕ್ತ್ಯನುರೂಪತಃ । ಆರಾಧಯೇ ಹರಿಂ ಭಕ್ತ್ಯಾ ಗಮಯಿಷ್ಯಾಮಿ ವಾಸರಾನ್" ಎಂಬ ಮುಖ್ಯ ಶ್ಲೋಕಗಳ ಮೂಲಕ ಎಲ್ಲರೂ ಪ್ರತಿದಿನವೂ ಮಾಡಬೇಕಾದ ದಿನಚರ್ಯದ ಸಙ್ಗ್ರಹವು ಉಪದೇಶಿಸ ಲ್ಪಟ್ಟಿರುತ್ತದೆ. ಇಲ್ಲಿ ಅಹೋರಾತ್ರಕೃತಮಾನವಾದುದೆಲ್ಲಾ, ಭಗವತ್ಸಮಾರಾಧನ ವೆಂದು ಹೇಳಿರುವದು. "ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ । ಯತ್ತಪಸ್ಯಸಿ ಕೌನ್ತೇಯ ತತ್ಕುರುಷ್ವ ಮದರ್ಪಣಮ್" ಎಂಬ ಹಿತೋಪ ದೇಶವನ್ನು ಸ್ಮರಿಸುತ್ತದೆ. (ಗೀ. ೯-೨೭) ಇಲ್ಲೆಲ್ಲಾ ವರ್ಣಾಶ್ರಮ ಧರ್ಮಗಳೆಲ್ಲಾ "ನ ತ್ಯಾಜ್ಯಂ ಕಾರ್ಯಮೇವ ತತ್" (ಗೀ.೧೮-೫) ಎಂಬುದು ಸ್ಥಾಪಿಸಲ್ಪಟ್ಟಿತು. ಎನ್ರುಮ್-ಎಂದೂ, ಇಪ್ಪ್ರಕಾರಙ್ಗಳಿಲೇ-ಈ ರೀತಿಯಾಗಿ, ತತ್ತನ್ಮಂತ್ರಪೂರ್ವಕಂ ಗಳಾನ ಆಯಾ ನಿತ್ಯಕರ್ಮಾನುಷ್ಠಾನಗಳನ್ನು ಅವವುಗಳಿಗೆ ವಿಧಿಸಿರುವ ಮನ್ತ್ರಪುರ ಸ್ಸರವಾಗಿ ವರ್ಣಾಶ್ರಮಧರ್ಮಗಳನ್ನು, ಅರುಳಿಚ್ಚೈಯ್‌ದಾರ್-ಕೃಪಯಾ ಅಪ್ಪಣೆ ಕೊಡಿಸಿದರು. ಈ ವಂಗಿವಂಗೇಶ್ವರರಿಗೆ ಶ್ರೀ ರಂಗನಾರಾಯಣಾಚಾರ್ಯರೆಂಬ ಹೆಸ ರುಂಟು. ಇವರು ರಚಿಸಿದ ನಿತ್ಯವು ೫೨ ಶ್ಲೋಕಗಳನ್ನುಳ್ಳ ಅಮೋಘಗ್ರಂಥವು. ಇದರಲ್ಲಿ ಮುಖ್ಯವಾಗಿ ಮೊದಲಿನ ಕೆಲವು ಶ್ಲೋಕಗಳು ನಿತ್ಯ ಪಠನೀಯಗಳಾಗಿ ಸ್ತೋತ್ರ ಜಾಲಗಳಲ್ಲಿ ಮುದ್ರಿಸಲ್ಪಟ್ಟಿವೆ.

ಭಟ್ಟರುಮ್, ಆಳ್ವಾನುಮ್ ತನ್ನಾಙ್ಗಳ್ ಅರುಳಿಚ್ಚೆಯ್ದ ನಿತ್ಯಙ್ಗಳಿಲೇ (೫) "ಶ್ರುತಿ ಸ್ಮೃತ್ಯುದಿತಂ ಕರ್ಮಯಾವಚ್ಛಕ್ತಿ ಪರಾತ್ಮನಃ । ಆರಾಧನತ್ವೇನಾಪಾದ್ಯ ಸೋರ್ಧ್ವ ಪುಂಡ್ರಶ್ಚ ತರ್ಪಯೇತ್" ಇತ್ಯಾದಿಗಳ್ಳೆ ಅರುಳಿಚ್ಚೆಯ್ದಾರ್ಗಳ್.

---

ಮುಂದೆ ಶ್ರೀ ಪರಾಶರ ಭಟ್ಟರು ಮತ್ತು ಶ್ರೀ ಭಾಷ್ಯಕಾರರ ಮುಖ್ಯ ಶಿಷ್ಯರಾದ ಕೂರತ್ತಾಳ್ವಾರವರ ನಿತ್ಯವೆಂಬ ಗ್ರಂಥಗಳಿಂದ ಉದಾಹರಿಸಿ, ನಿತ್ಯಾದಿಕರ್ಮಗಳು ಆವಶ್ಯಕವಾಗಿ ಅನುಷ್ಠೇಯಗಳೆಂದು ಹೇಳಿ ಪೂರ್ವಾಚಾರ್ಯ ಸಂಪ್ರದಾಯವನ್ನು ಸ್ಥಾಪಿಸುತ್ತಾರೆ. ಭಟ್ಟರುಮ್ - ಶ್ರೀ ಪರಾಶರ ಭಟ್ಟರೂ, ಆಳ್ವಾನುಮ್ - ಅವರ ತಂದೆಯಾದ ಶ್ರೀ ಕೂರತ್ತಾಳ್ವಾನರವರೂ, ತನ್ನಾಙ್ಗಳ್ – ಅವರವರುಗಳು, ಅರುಳಿಚೆಯ್ದ - ಕೃಪಯಾ ರಚಿಸಿದ, ನಿತ್ಯಂಗಳಿಲೇ - ನಿತ್ಯವೆಂಬ ಗ್ರಂಥಗಳಲ್ಲಿ (೫) "ಶ್ರುತಿ ಸ್ಮೃತ್ಯುದಿತಂ ಕರ್ಮ – ಶ್ರುತಿಸ್ಮೃತಿಗಳಲ್ಲಿ ವಿಧಿಸಲ್ಪಟ್ಟ ಕರ್ಮವನ್ನು, ಯಾವಚ್ಛಕ್ತಿ - ತನಗೆ ಶಕ್ತಿ ಇರುವ ತನಕ, ತನ್ನ ಶಕ್ತ್ಯನುಸಾರವಾಗಿ ಎಂಬರ್ಥವಲ್ಲವು : ಸಂಧ್ಯಾವಂದನೆಯ ಆಚರಣೆಗೆ ಮಾತ್ರ ಶಕ್ತಿಯುಂಟು, ಮಿಕ್ಕವುಗಳ ಅನುಷ್ಠಾನಕ್ಕೆ ಶಕ್ತಿ ಇಲ್ಲವೆಂದು ಅವುಗಳನ್ನು ಪರಿತ್ಯಾಗ ಮಾಡಬಹುದಾಗುವದರಿಂದ, ಪರಾತ್ಮನಃ - ಪರಮಾತ್ಮನ, ಆರಾಧನತ್ವೇನ – ಅವುಗಳನ್ನು ಅನುಷ್ಠಿಸುವದು, ಆತನ ಆರಾಧನವೆಂದು ಏರ್ಪಟ್ಟಿರುವದರಿಂದ, ಆಪಾದ್ಯ . ಅನುಷ್ಠಿಸಿ, ಎಂದರೆ ಎಲ್ಲಾ ಭಗವದಾರಾಧನವೆಂದು ಭಾವಿಸಿ, ಸೋರ್ಧ್ವ ಪುಂಡ್ರಃ - ದ್ವಾದಶೋರ್ಧ್ವ ಪುಂಡ್ರಗಳ ಸಹಿತನಾಗಿ ಎಂದರೆ ಧರಿಸಿ, ತರ್ಪಯೇತ್ - ದೇವರ್ಷಿ ಪಿತೃತರ್ಪಣವನ್ನು' ಅನುಷ್ಠಿಸತಕ್ಕದ್ದು" ಇತ್ಯಾದಿಗಳ್ಳೆ - ಇವೇ ಮೊದಲಾದ ನಿತ್ಯಕರ್ಮಾನುಷ್ಠಾನಗಳನ್ನು, ಅರುಳಿಚೆಯ್ದಾರ್ - ಕೃಪಯಾ ಉಪದೇಶಿಸಿದರು. ಪೂರ್ವಾಚಾರ್ಯರುಗಳಲ್ಲಿ ಮುಖ್ಯರಾದ ಶ್ರೀ ಪರಾಶರ ಭಟ್ಟರೂ, ಆಳ್ವಾರರವರೂ ಅವರುಗಳು ಅನುಗ್ರಹಿಸಿರುವ ನಿತ್ಯವೆಂಬ ಗ್ರಂಥದಲ್ಲಿ ಹೇಳಿರುತ್ತಾರೆಂಬ ತಾತ್ಪರ್ಯವು.

ಶ್ರೀ ಪರಾಶರ ಭಟ್ಟರು ಯಾರೆಂದರೆ—ಶ್ರೀ ಯಾಮುನಮುನಿಗಳ ಮೂರು ಸಂಕಲ್ಪಗಳಲ್ಲಿ ಒಂದಾದ ವಿಷ್ಣುಪುರಾಣ ಕರ್ತೃವಾದ ಶ್ರೀ ಪರಾಶರರ ಹೆಸರನ್ನು ಒಬ್ಬರಿಗಿಟ್ಟು ಮಾಹಾತ್ಮ್ಯೆಯನ್ನು ಕಾಪಾಡತಕ್ಕದ್ದೆಂಬುದನ್ನು ನಿರ್ವಹಿಸುವದಕ್ಕಾಗಿ ಶ್ರೀ ರಂಗನಾಯಿಕಿ ಶ್ರೀ ರಂಗನಾಥರುಗಳಲ್ಲಿ ಶ್ರೀ ಯತಿವರ್ಯರು ಮಾಡಿದ ಶರಣಾಗತಿಯ ಮೂಲಕ ಕೂರತ್ತಾಳ್ವಾರ್ ಅವರು ದೇವಿಯವರುಗಳಿಗೆ ಪುತ್ರರಾಗಿ ಜನಿಸಿದ ಮಹಾನುಭಾವರು. ಇವರು ಲಕ್ಷ್ಮೀನಾರಾಯಣರ ದಿವ್ಯಕಟಾಕ್ಷ ಬಲದಿಂದ ಹುಟ್ಟಿದವರು. ಜ್ಞಾನನಿಧಿಗಳಾದ ಶ್ರೀ ಕೂರೇಶರಪುತ್ರರು. ಆ ಕಾರಣದಿಂದ

---

(೫) ಭಟ್ಟರ್ ನಿತ್ಯಮ್.

ಇವರಿಗೆ ಶ್ರೀರಂಗನಾಥರೆಂಬ ಹೆಸರೂ ಉಂಟು. ಮಹಾಪ್ರಾಜ್ಞರಾದ ಎಂಬಾರರ ಶಿಷ್ಯರು. ಹೀಗಿರುವಾಗ ಇವರ ಪ್ರಾಜ್ಞತೆಯು ನಿರತಿಶಯವಾದುದೆಂಬುದು ಎಂದಿಗೂ ಅತಿಶಯೋಕ್ತಿಯಲ್ಲವು. ಇವರು ಸಹಸ್ರನಾಮಕ್ಕೆ ಶ್ರೀವಿಷ್ಣುಪುರಾಣೋಕ್ತಿಮೊದಲಾದವುಗಳನ್ನು ಉದಾಹರಿಸಿ ಅಮೋಘವಾದ ವಿಲಕ್ಷಣವಾದ ಭಾಷ್ಯವನ್ನು ಬರೆದಿರುತ್ತಾರೆ. ಇಂತಹ ಅಮೋಘ ಗ್ರಂಥದ ಸಂಗ್ರಹಾರ್ಥವನ್ನೂ ಕೂಡ ತಿಳಿದುಕೊಳ್ಳದೇ ಅನೇಕರು ಇರುತ್ತಾರಲ್ಲಾ ಎಂಬ ಪರಿತಾಪದಿಂದ ದಾಸನು ಅದಕ್ಕೆ ಸಂಗ್ರಹವಾಗಿ ಅವರ ವ್ಯಾಖ್ಯಾನವನ್ನನುಸರಿಸಿ, ಕನ್ನಡದಲ್ಲಿ ಅರ್ಥವನ್ನು ಬರೆದಿರುತ್ತೇನೆ. ಶ್ರೀಪರಾಶರಭಟ್ಟರವರು ಶ್ರೀಗುಣರತ್ನಕೋಶವೆಂಬ ಶ್ರೀಲಕ್ಷ್ಮಿಯ ಸ್ವರೂಪರೂಪಗುಣವಿಭವೈಶ್ವರ್ಯಾದಿಗಳನ್ನುಪಪಾದಿಸಿ ಲಕ್ಷ್ಮೀತತ್ತ್ವವನ್ನು ಸ್ಥಾಪಿಸುವ ಗ್ರಂಥವನ್ನು ಅನುಗ್ರಹಿಸಿರುತ್ತಾರೆ. ಇವರ ಮುಖ್ಯ ಶಿಷ್ಯರು ನಂಜೀಯರೆಂಬುವರು. ಇವರು ಮೊದಲು ಅದ್ವೈತಿಯಾಗಿ ನಮ್ಮ ಮೈಸೂರು ದೇಶದ ಶ್ರೀರಂಗಪಟ್ಟಣದಲ್ಲಿ ಅದ್ವೈತ ಸಿದ್ಧಾಂತದಲ್ಲಿ ಅಗ್ರಗಣ್ಯರಾಗಿದ್ದರು. ಇವರ ನಾಮಧೇಯವು ಆಗ ಮಾಧವಸೂರಿಗಳೆಂಬುದಾಗಿ. ಇವರಿಗೆ ವೇದಾಂತದಲ್ಲಿರುವ ಅಪಾರಜ್ಞಾನದಿಂದ ವೇದಾಂತೀ ಎಂದು ಹೆಸರಿತ್ತು. ಇವರನ್ನು ಶ್ರೀಪರಾಶರಭಟ್ಟರು ವಾದದಲ್ಲಿ ಜಯಿಸಿ ವಿಶಿಷ್ಟಾದ್ವೈತವನ್ನು ಅವಲಂಬಿಸಿ, ತಮಗೆ ಪ್ರಿಯಶಿಷ್ಯರಾಗಿ ಮಾಡಿಕೊಂಡು, ಅವರಿಗೆ ಮನ್ತ್ರೋಪದೇಶ, ರಹಸ್ಯತ್ರಯಾರ್ಥ ಮೊದಲಾದವುಗಳನ್ನು ಅನುಗ್ರಹಿಸಿ, ತಮ್ಮ ಹೆಸರಾದ ರಂಗನಾಥರೆಂಬ ದಾಸ್ಯನಾಮವನ್ನು ದಯಪಾಲಿಸಿದರು. ಇವರು ಅನಂತರ ಸನ್ಯಾಸಾಶ್ರಮವನ್ನು ಅವಲಂಬಿಸಿ ನಾರಾಯಣ ಮುನಿ ಎಂಬ ನಾಮವನ್ನಿಟ್ಟುಕೊಂಡರು. ಅನಂತರ ತಮ್ಮ ಗುರುಗಳಾದ ಶ್ರೀ ಪರಾಶರಭಟ್ಟರನ್ನು ಸೇವಿಸುವದಕ್ಕಾಗಿ ಶ್ರೀರಂಗಕ್ಕೆ ಬಂದು ನೆಲಸಿ ಉಪದೇಶಾದಿಗಳನ್ನು ಹೊಂದಿದನಂತರ ಇವರ ಪ್ರಜ್ಞಾರೂಪ ಮಹಿಮೆಯನ್ನು ಕಂಡು ಶ್ರೀ ಪರಾಶರ ಭಟ್ಟರವರು ನಂಜೀಯರ್, ಎಂದು ವಿಶೇಷಪ್ರೀತಿಯಿಂದ ನಮ್ಮ ಜೀಯರು ಎಂಬ ನಾಮದಿಂದ ಕರೆಯುತ್ತಿದ್ದರು. ಇವರು ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ. ಮುಖ್ಯವಾದುದು ಶ್ರೀಸೂಕ್ತ ಭಾಷ್ಯವು. ಉಭಯ ಕಲೆಯವರಿಗೂ ಈ ವ್ಯಾಖ್ಯಾನವು ಉಪಾದೇಯವು. ಶ್ರೀ ನಿಗಮಾಂತದೇಶಿಕರಿಗೆ ಇವರಲ್ಲಿ ವಿಶೇಷ ಗೌರವವು. ಆದರಿಂದ ಇವರನ್ನು ಪೆರಿಯಜೀಯರೆಂದು ಶ್ರೀಮದ್ರಹಸ್ಯತ್ರಯಸಾರದಲ್ಲೂ ಚತುಶ್ಲೋಕಿಯಭಾಷ್ಯದಲ್ಲೂ ಕೊಂಡಾಡಿ,ಉದಾಹರಿಸಿರುತ್ತಾರೆ. ಎಲ್ಲಿ ಎಂದರೆ ?ಸಿದ್ಧೋಪಾಯ ಶೋಧನಾಧಿಕಾರದ ೨೧೩ನೆಯ ಪುಟ ನೋಡಿ. ಅಲ್ಲಿ ಅವರ ಭಾಷ್ಯವು ಪರಮೋಪಾದೇಯವೆಂದು ಹೇಳಿರುತ್ತಾರೆ. ಶ್ರೀ ತತ್ತ್ವವಿಷಯವಾದ ಸರ್ವಸ್ವವನ್ನೂ ಇವರೂ ಮತ್ತು ಇವರ ಗುರುಗಳಾದ ಶ್ರೀ ಪರಾಶರಭಟ್ಟರೂ, ಶ್ರೀಯತಿವರ್ಯರಿಗೆ ಮಹಾನಸಕೈಂಕರ್ಯಪರರಾದ ಕಿಡಾಂಬಿ ಆಚ್ಚಾನ್ ಅಥವಾ ಮಡಪ್ಪಳ್ಳಿ ಆಚ್ಚಾರ್ ಅಥವಾ ಪ್ರಣತಾರ್ತ್ತಿ

**ಪೆರಿಯ ಜೀಯರುಮ್. (೬) "ಶ್ರೀ ಪರಾಶರ ಭಟ್ಟಾರ್ಯ ಚರಣೌ**

ಹರ್ರ ಎಂಬುವದರಿಂದ ಅಧಿಕರಿಸಿದರು. ಇವರು ತಮ್ಮ ಆಚಾರ್ಯರ ಉಪದೇಶಕ್ಕನುಗುಣವಾಗಿ ಆಳ್ವಾರಾಚಾರ್ಯರ ಚರಿತ್ರೆಯನ್ನು ಪ್ರಪನ್ನಾಮೃತವೆಂಬ ಹೆಸರಿನಿಂದ ರಚಿಸಿರುತ್ತಾರೆ. ಶ್ರೀಮದ್ಭಗವದ್ಗೀತೆಗೂ ಭಾಷ್ಯವನ್ನೂ ಬರೆದಿರುತ್ತಾರೆಂದೂ ಅಲ್ಲಿ ಅವರಿಗೆ ನಾರಾಯಣಾರ್ಯರೆಂಬ ಹೆಸರೆಂದು ಶ್ರೀಮಾನ್ ಎ. ಶ್ರೀನಿವಾಸರಾಘವನ್ ಎಂ.ಎ. ಯವರು ತಾವು ರಚಿಸಿರುವ ಶ್ರೀಸೂಕ್ತ ಭಾಷ್ಯದ ಪರಿವರ್ತನದಲ್ಲಿ ತಿಳಿಸಿರುತ್ತಾರೆ. ಶ್ರೀಮದ್ಭಗವದ್ಗೀತೆಯ ೭ನೆಯ ಅಧ್ಯಾಯದ ೨೩ನೆಯ ಶ್ಲೋಕದ **ಮದ್ಭಕ್ತಾಯಾನ್ತಿಮಾಮಪಿ** ಎಂಬುದಕ್ಕೆ **"ಭಗವತಿ ಫಲಾಂತರಾರ್ಥಿನಾಮಪಿ ಮೋಕ್ಷೇವಿಶ್ರಮೋ ನಾರಾಯಣಾರ್ಯೈರುಕ್ತಃ"** ಎಂದು ಶ್ರೀದೇಶಿಕರವರು ತಾತ್ಪರ್ಯಚಂದ್ರಿಕೆಯಲ್ಲಿ ಹೇಳಿರುತ್ತಾರೆ. ಆರ್ತನೂ ಅರ್ಥಾರ್ಥಿಯೂ ಮೋಕ್ಷೇತರ ಫಲಾಕಾಂಕ್ಷಿಗಳಾದರೂ ಭಗವಂತನನ್ನು ಉಪಾಸಿಸಿದ ಸುಕೃತಮೂಲಕ ಅವರಿಗೆ ಕೊನೆಗಾದರೂ ಮೋಕ್ಷದಲ್ಲಿ ಪರ್ಯವಸಾನವೆಂದು ಹೇಳಿರುತ್ತಾರೆ. ಶ್ರೀಮಾನ್ ನಂಜೀಯರಿಗೆ ದ್ರಾವಿಡ ಪ್ರಬಂಧಗಳಲ್ಲೂ ಅದ್ಭುತ ಜ್ಞಾನವು. ನಮ್ಮಾಳ್ವಾರ್ ತಿರುವಾಯ್‌ಮೊಳಿಗೂ ಒಂಬದನಾಯಿರಂಪಡಿ ಎಂಬ ವ್ಯಾಖ್ಯಾನವನ್ನು ದಯಪಾಲಿಸಿರುತ್ತಾರೆ. ಮೇಲಿನ ವಾಕ್ಯದಲ್ಲಿ "ಬಟ್ಟರುಮ್, ಆಳ್ವಾನುಮ್" ಎಂದು ಮಕ್ಕಳ ಹೆಸರನ್ನು ಮೊದಲು ಹೇಳಿ ಅನಂತರ ತಂದೆಯ ಹೆಸರನ್ನು ಹೇಳಿರುವದು, ಏಕೆಂದರೆ ಪುತ್ರರು ಶ್ರೀ ರಂಗನಾಯಕಿಯವರ ವರಪ್ರಸಾದದಿಂದ ಜನಸಿದವರಾಗಿ ಜ್ಞಾನನಿಧಿಗಳಲ್ಲಿ ಅಗ್ರಗಣ್ಯರು. ತಂದೆಯನ್ನು ಮೀರಿಸಿದವರು. ಶ್ರೀ ಪರಾಶರರಿಗಿಂತ ಅವರ ಮಕ್ಕಳಾದ ವ್ಯಾಸಮಹರ್ಷಿಗೆ ಪ್ರಾಶಸ್ತ್ಯವು ಹೇಗೋ ಹಾಗೆ ಎಂದು ಭಾವಿಸತಕ್ಕದ್ದು. ಶ್ರೀ ಪರಾಶರರೇ ತಮ್ಮ ಮಕ್ಕಳಾದ ವ್ಯಾಸರನ್ನು **"ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ । ಕೋಹ್ಯನ್ಯೋ ಭುವಿಮೈತ್ರೇಯ ಮಹಾಭಾರತಕೃದ್ಭವೇತ್"** ಎಂದು ಪ್ರಶಂಸಿಸಿರುತ್ತಾರೆ.

**ಪೆರಿಯ ಜೀಯರುಮ್** - ನಂಜೀಯರೂ ಇವರು ಶ್ರೀ ಲೋಕಾಚಾರ್ಯರ ಮತ್ತು ನಂಪಿಳ್ಳೈಯವರ ಆಚಾರ್ಯರು. ಇವರಿಗೆ ನಾರಾಯಣಮುನಿ ಎಂಬ ಹೆಸರುಂಟು. ಶ್ರೀ ನಿಗಮಾಂತರವರು ಪಾಂಚರಾತ್ರ ರಕ್ಷೆಯಲ್ಲಿ **"ನಾರಾಯಣಮುನಿಭಿರಪಿ ಪಂಚಕಾಲ ಕಲ್ಪನಯಾ ತತ್ತತ್ಕಾಲಾನುಷ್ಠೇಯಾನಿ ಯಥಾಕ್ರಮಂ ಪ್ರಪಂಚಿತಾನಿ"** ಎಂದು ಹೇಳಿ ಈ ಮುಂದಿನ ಪ್ರಮಾಣವನ್ನೇ ಉದಾಹರಿಸಿರುತ್ತಾರೆ.—**ಶ್ರೀ ಪರಾಶರ ಭಟ್ಟಾರ್ಯ ಚರಣೌ**—ತಮ್ಮ ಗುರುಗಳಾವ ಪೂಜ್ಯ

(೬) ಶ್ರೀ ನಂಜೀಯರ್ ನಿತ್ಯಮ್

ಸಂಶ್ರಯೇಮಹಿ” ಇತ್ಯಾದಿಯಾಲೇ ಸಂಪ್ರದಾಯ ವಿಶೇಷ ಜ್ಞಾಪನಾರ್ಥಮಾಕ ಗುರುನಮಸ್ಕಾರಾದಿಗಳೈಪ್ಪಣ್ಣಿ (೭) “ಭಗವಚ್ಚರಣಾಂಭೋಜಪರಿಚರ್ಯಾವಿಧಿಕ್ರಮಮ್ । ಏಕಾನ್ತಿಭಿರನುಷ್ಠೇಯಂ ನಿತ್ಯಂ ಸಮಭಿದಧ್ಮಹೇ ಎನ್ರು ತುಡಙ್ಗಿ (೮) “ಆಪೋಹಿಷ್ಠೇತ್ಯಾದಿಭಿರ್ಮನ್ತ್ರೈರ್ವಾಚಕೈಃ ಪರಮಾತ್ಮನಃ । ಸಂಪ್ರೋಕ್ಷ್ಯ ಮನ್ತ್ರಾಚಮನಂ ಮನ್ತ್ರೈಸ್ತತ್ಪ್ರತಿಪಾದಕೈಃ ॥ ಆದಿತ್ಯಾಂತಸ್ಸ್ಥಿತಸ್ಯಾರ್ಘ್ಯಂ ವಿತೀರ್ಯ ಪರಮಾತ್ಮನಃ । ಪ್ರತಿಪಾದಕಯಾ ವಿಷ್ಣೋಃ

---

ರಾದ ಶ್ರೀ ಪರಾಶರಭಟ್ಟರವರ ಪಾದಗಳನ್ನು ಸಂಶ್ರಯೇಮಹಿ - ಆಶ್ರಯಿಸುವೆವು; ಇತ್ಯಾದಿಯಾಲೇ – ಇವೇ ಮೊದಲಾದವುಗಳಿಂದ, ಸಂಪ್ರದಾಯವಿಶೇಷಜ್ಞಾಪನಾರ್ಥಮಾಹ - ಸಂಪ್ರದಾಯ ವಿಶೇಷವನ್ನು ಜ್ಞಾಪಿಗುವದಕ್ಕಾಗಿ, ಗುರುನಮಸ್ಕಾರಾದಿಗಳೈಪ್ಪಣ್ಣಿ - ಗುರು ನಮಸ್ಕಾರ, ಆದಿ ಶಬ್ದದಿಂದ ತನಯ ಪಠನ ಮೊದಲಾದವುಗಳನ್ನು ಮಾಡಿ, “ಏಕಾನ್ತಿಭಿಃ - ಅನ್ಯ ದೇವತಾ ಸಂಬಂಧವಿಲ್ಲದೆ ಭಗವಂತನಲ್ಲೇ ಸಕ್ತರಾದ ಪ್ರಪನ್ನರುಗಳಿಂದ, ನಿತ್ಯಂ-ಪ್ರತಿನಿತ್ಯವೂ, ಅನುಷ್ಠೇಯಂ-ಅನುಷ್ಠಿಸಲ್ಪಡತಕ್ಕ. ಭಗವಚ್ಚರಣಾಂ ಭೋಜಪರಿಚರ್ಯಾ ವಿಧಿಕ್ರಮಮ್ - ಭಗವಂತನ ಪಾದಕಮಲದ ಅರ್ಚನಾದಿ ರೂಪಕೈಂಕರ್ಯವನ್ನು ಮಾಡುವ ಶಾಸ್ತ್ರಕ್ರಮವನ್ನು ಸಮಭಿದಧ್ಮಹೇ - ಹೇಳುವೆವು.” ಎನ್ರು ತುಡಙ್ಗಿ-ಎಂದಾರಂಭಿಸಿ, (೭) ಪರಮಾತ್ಮವಾಚಕೈಃ -ಪರಮಾತ್ಮನನ್ನು ಹೇಳುವ, ಆಪೋಹಿತ್ಯಾದಿಭಿರ್ಮನ್ತ್ರೈಃ - ಆಪೋಹಿಷ್ಠಾ ಎಂಬಿವೇ ಮೊದಲಾದ ಮನ್ತ್ರಗಳಿಂದ, ಸಂಪ್ರೋಕ್ಷ್ಯ-ಪ್ರೋಕ್ಷಿಸಿಕೊಂಡು, ತತ್ಪ್ರತಿಪಾದಕೈಃ - ಆ ಪ್ರಸಿದ್ಧನಾದ ಪರಮಪುರುಷನನ್ನು ಪ್ರತಿಪಾದಿಸುವ, ಮನ್ತ್ರೈಃ - ಮನ್ತ್ರಗಳಿಂದ, ಮನ್ತ್ರಾಚಮನಮ್ . ಮನ್ತ್ರಾಚಮನವನ್ನು, ಕೃತ್ವಾ ಎಂದು ಇಟ್ಟುಕೊಳ್ಳಬೇಕು, ಮಾಡಿ, ಆದಿತ್ಯಾಂತಸ್ಥಿತಸ್ಯ - ಸೂರ್ಯನಲ್ಲಿ ಅಂತರ್ಯಾಮಿಯಾಗಿರುವ, ಪರಮಾತ್ಮನಃ - ಪರಮಾತ್ಮನಿಗೆ, ಅರ್ಘ್ಯಮ್ - ಅರ್ಘ್ಯವನ್ನು, ವಿತೀರ್ಯ - ಎರಚಿ ಎಂದರೆ ಕೊಟ್ಟು, ವಿಷ್ಣೋಃ ಪ್ರತಿಪಾದಕಯಾ - ವಿಷ್ಣುವನ್ನು ಪ್ರತಿಪಾದಿಸುವ, ಸಾವಿತ್ರ್ಯಾ - ಗಾಯತ್ರೀ ಮನ್ತ್ರದಿಂದ. ತಂ ಹರಿಮ್ - ಆ ಪ್ರಸಿದ್ಧವಾದ ಶ್ರೀ ಹರಿಯನ್ನು ಧ್ಯಾಯನ್ - ಧ್ಯಾನಿಸಿಕೊಂಡು, ಜಪೇತ್ : ಜಪಿಸತಕ್ಕದ್ದು. ಧ್ಯಾಯನ್ ಜಪ್ತ್ವಾ . ಹೀಗೆ ಶ್ರೀ ಹರಿಯನ್ನು ಮನಸಾ ಧ್ಯಾನಿಸಿದವನಾಗಿ ಗಾಯತ್ರೀ ಜಪವನ್ನು ಮಾಡಿದ ನಂತರ, ತಮೇವ ಪುರುಷೋತ್ತಮಮ್ - ಆ ಸೂರ್ಯ, ಮಧ್ಯಾನ್ಹವರ್ತಿಯಾದ ಪುರುಷೋತ್ತಮನನ್ನೇ, ಉಪತಿಷ್ಠೇತ - ಉಪಸ್ಥಾನವನ್ನು ಮಾಡತಕ್ಕದ್ದು. ಅನಂತರ, ನಾರಾಯಣಾತ್ಮಕಾನ್ – ಶ್ರೀಮನ್ನಾರಾಯಣನನ್ನೇ ಆತ್ಮವಾಗಿವುಳ್ಳ, ದೇವಾನ್, ಋಷೀನ್, ಪಿತೄನ್ - ದೇವತೆಗಳನ್ನೂ, ಋಷಿಗಳನ್ನೂ, ಪಿತೃಗಳನ್ನೂ, ತರ್ಪಯೇತ್ – ತರ್ಪಿಸತಕ್ಕದ್ದು, ಎಂದರೆ

ಸ್ಸಾವಿತ್ರ್ಯೃತಂ ಜಪೇದ್ಧರಿಮ್ ॥ ಧ್ಯಾಯನ್ ಜಪ್ತ್ವೋಪತಿಷ್ಠೇತ ತಮೇವ ಪುರುಷೋತ್ತಮಮ್ । ನಾರಾಯಣಾತ್ಮಕಾನ್ ದೇವಾನ್ ಋಷೀನ್ ಸಂತರ್ಪಯೇತ್ ಪಿತೄನ್ ॥" ಎನ್ರರುಳಿಚ್ಚೆಯ್ದಾರ್.

---

ದೇವರ್ಷಿ ಪಿತೃತರ್ಪಣವನ್ನು ಮಾಡತಕ್ಕದ್ದು. ಎನ್ರು ಅರುಳಿಚ್ಚೆಯ್ದಾರ್ - ಎಂದು ನಂಜೀಯರು ತಮ್ಮ ನಿತ್ಯವೆಂಬ ಗ್ರಂಥದಲ್ಲಿ ಕೃಪೆಯಾ ಅಪ್ಪಣೆ ಕೊಡಿಸಿರುತ್ತಾರೆ. ಹೀಗೆ ಮೇಲಿನ ಶ್ಲೋಕಗಳಿಂದ ಸ್ನಾನ, ದ್ವಾದಶೋರ್ಧ್ವ ಪುಂಡ್ರ ಧಾರಣಾನಂತರ ಪ್ರಾತಸ್ಸಂಧ್ಯಾವಂದನವನ್ನು, ಕ್ರಮವಾಗಿ ಮಂತ್ರಗಳೊಂದಿಗೆ ಸಂಕಲ್ಪ, ಆಚಮನ, ಪ್ರೋಕ್ಷಣ, ಅರ್ಘ್ಯ ಸಮರ್ಪಣ, ಶ್ರೀಮನ್ನಾರಾಯಣ ಧ್ಯಾನದೊಂದಿಗೆ ಗಾಯತ್ರೀ ಮಂತ್ರ ಜಪ, ಉಪಸ್ಥಾನ ಕ್ರಮದಿಂದ ಅನುಷ್ಠಿಸಿ, ಅನಂತರ ಮೂರು ಋಣಗಳನ್ನು ಈ ಪ್ರಪನ್ನನೂ ತೀರಿಸಬೇಕೆಂಬ ವಿಧಿಗನುಸಾರವಾಗಿ ದೇವರ್ಷಿ ಪಿತೃತರ್ಪಣವನ್ನು ಮಾಡತಕ್ಕದ್ದು ಎಂಬ ಸಂಪ್ರದಾಯವನ್ನು ಸ್ಥಾಪಿಸಿದರೆಂಬ ಭಾವವು. ಸೂರ್ಯನನ್ನೂ, ದೇವತೆಗಳನ್ನೂ ಋಷಿಗಳನ್ನೂ ಪಿತೃಗಳನ್ನೂ ಈ ಪ್ರಪನ್ನನು ಹೀಗೆ ಆರಾಧಿಸುವದು ನ್ಯಾಯವೋ ಎಂಬ ಆಕ್ಷೇಪಕ್ಕೆ ಕಾರಣವಿಲ್ಲವೆಂದು ಸಂಧ್ಯಾವಂದನೆಯಲ್ಲಿ ಸೂರ್ಯಾನ್ತರ್ವರ್ತಿಯಾದ ಭಗವಂತನೇ ಆರಾಧಿಸಲ್ಪಡುವನೆಂದು ಆದಿತ್ಯಾಂತ ಸ್ಥಿತಸ್ಯ ಪರಮಾತ್ಮನಃ - ಎಂಬ, ತತ್ಪ್ರತಿಪಾದಕೈರ್ಮನ್ತ್ರೈಃ ಎಂಬ "ಪ್ರತಿಪಾದಕೆಯಾ ವಿಷ್ಣೋಸ್ಸಾವಿತ್ರ್ಯಾ" ಇತ್ಯಾದಿ ಪ್ರಯೋಗಗಳು. ಹಾಗೆಯೇ ದೇವರ್ಷಿ ಪಿತೃತರ್ಪಣದಲ್ಲೂ ತದಾತ್ಮಕನಾದ ಭಗವಂತನೇ ಸುಪ್ರೀತನಾಗುವನೆಂದು ಹೇಳುವದಕ್ಕಾಗಿ ನಾರಾಯಣಾತ್ಮಕಾನ್ - ಎಂಬ ಪ್ರಯೋಗವು. ಹಾಗೆಯೇ ದರ್ಶಾದಿ ತರ್ಪಣಗಳಲ್ಲೂ, ಮಾತಾಪಿತೃ ಶ್ರಾದ್ಧಗಳಲ್ಲೂ ಅವರುಗಳು ಭಗವದಾತ್ಮಕರಾದುದರಿಂದ ಭಗವಂತನೇ ಪ್ರೀತನಾಗುವನೆಂಬ ಅಭಿಸಂಧಿ ಇರತಕ್ಕದ್ದೆಂಬುದೂ ಬೋಧಿತವು. ಇದರಿಂದ ನಿತ್ಯನೈಮಿತ್ತಿಕಾನುಷ್ಠಾನಗಳನ್ನೂ ನಮ್ಮ ಆಚಾರ್ಯರುಗಳು ಪ್ರಪನ್ನರಾದ ಕೃತಕೃತ್ಯರಿಗೂ ಶಾಸ್ತ್ರರೀತ್ಯಾ ಅನುಷ್ಠೇಯವೆಂಬ ಸಂಪ್ರದಾಯವನ್ನು ಸ್ಥಾಪಿಸಿದರೆಂಬುದು ಅಭಿಪ್ರಾಯವು.

ಮುಂದೆ ಶ್ರೀಭಾಷ್ಯಕಾರ್ರರವರ ಸಂಪ್ರದಾಯದಿಂದಲೂ ಅನ್ಯದೇವತೆಗಳನ್ನು ಕುರಿತ ಮನ್ತ್ರೋಚ್ಚಾರಣೆಗಳಿಂದಲೇ ತತ್ತದ್ದೇವತಾತ್ಮಕ ಶ್ರೀಮಹಾವಿಷ್ಣುವೇ ಆರಾಧಿಸಲ್ಪಡುವನಾದುದರಿಂದ ಉಪನಯನ ವಿವಾಹ ಪ್ರಕ್ರಿಯೆಯಲ್ಲಿನ ಮಂತ್ರಗಳಿಂದ ಅನ್ಯದೇವತಾರಾಧನಾರೂಪದೋಷವೇನೂ ಇಲ್ಲವೆಂದು ಮುಂದೆ ತಿಳಿಸುತ್ತಾರೆ.-ಶ್ರೀಭಾಷ್ಯಕಾರರವರ ಸಂಪ್ರನಾಯತ್ತಿಲುಳ್ಳ ಕುಲಂಗಳೆಲ್ಲಾ-ಶ್ರೀ ಯತಿವರ್ಯರ ಸಂಪ್ರದಾಯದಲ್ಲಿದ್ದ ಸಮಸ್ತ ಶ್ರೀವೈಷ್ಣವರುಗಳೂ ತದ್ವಂಶೀಯರು ಎಲ್ಲಾ;ಇನ್ರುಡಿಯಾಗ – ಇದುವರೆಗೂ, ಸ್ವಸೂತ್ರೋಕ್ತವಾನಪಡಿಯೇ – ತಮ್ಮ ತಮ್ಮ

ಭಾಷ್ಯಕಾರರ್‌ಸಂಪ್ರದಾಯತ್ತಿಲುಳ್ಳ ಕುಲಙ್ಗಳಿಲ್ಲಾಮ್ ಇನ್ರುಮ್ ಯಾಗ ಸ್ವಸೂತ್ರೋಕ್ತಮಾನಪಡಿಯೇ ತತ್ತದ್ದೇವತಾ ಮನ್ತ್ರಙ್ಗಳೈಕ್ಕೊಂಡು ವಿವಾಹೋಪನಯನಾದಿಗಳ್ ಅನುಷ್ಠಿಕ್ಕವುಮ್ ಕಾಣಾನಿನ್ರೋಮ್.

ಪೆರಿಯನಂಬಿ ಮುದಲಾನ ಪರಮಾಚಾರ್ಯರುಗಳುಮ್ ತನ್ತಾಮ್ ಸೂತ್ರಙ್ಗಳಿನ್ಪಡಿಯೇ ಯಜ್ಞಾದಿಗಳ್ ಪಣ್ಣಿನಾರ್‌ಗಳೆನ್ನುಮಿಡಮ್ ಸರ್ವರ್ಕ್ಕುಮ್ ಪ್ರಸಿದ್ಧಮ್.

---

ಸೂತ್ರಗಳಿಗೆ ಅನುಸಾರವಾಗಿ ಶಾಸ್ತ್ರಗಳಲ್ಲಿ ವಿಧಿಸಿರುವ ಹಾಗೆಯೇ, ತತ್ತದ್ದೇವತಾ ಮಂತ್ರಂಗಳೈಕ್ಕೊಂಡು - ಆಯಾಬ್ರಹ್ಮರುದ್ರೇಂದ್ರ ವರುಣ ಅಗ್ನ್ಯಾದಿಗಳನ್ನು ಕುರಿತ ಮಂತ್ರಗಳನ್ನೇ ಅಂಗೀಕರಿಸಿ ವಿವಾಹೋಪನಯನಾದಿಗಳನ್ನು. ಅನುಷ್ಠಿಕ್ಕವುಮ್ - ಅನುಷ್ಠಿಸೋಣವನ್ನು, ಕಾಣಾನಿನ್ರೋಮ್ – ಕಂಡಿರುವೆವುಯಷ್ಟೆ. ವಿವಾಹೋಪನಯನ ಹೋಮಾದಿಗಳಲ್ಲಿ ಅನ್ಯದೇವತೆಗಳನ್ನು ಕುರಿತ ಮಂತ್ರೋಚ್ಚಾರಣೆಯು ಉಂಟು. ಇಂತಹ ಮಂತ್ರಗಳನ್ನು ಹೇಳಿಯೇ ಅಂತಹ ಶುಭಕರ್ಮಗಳನ್ನು ಶ್ರೀಯತಿವರ್ಯರ ಸಂಪ್ರದಾಯಕ್ಕೆ ಸೇರಿದವರೆಲ್ಲರೂ ಈಗಲೂ ಅನುಷ್ಠಿಸಿರುತ್ತಾರೆ. ಇದು ಸರಿಯೇ? ಎಂಬ ಆಕ್ಷೇಪಕ್ಕೆ ಸಮಾಧಾನವಾಗಿ ತತ್ತದ್ದೇವತಾತ್ಮಕನಾದ ಶ್ರೀಮಹಾವಿಷ್ಣುವೇ ಆರಾಧಿಸಲ್ಪಡುವನಾದುದರಿಂದ ದೋಷವೇನೂ ಇಲ್ಲವೆಂದು ಹೇಳಲ್ಪಟ್ಟಿತು.

ಪೆರಿಯನಂಬಿ ಮುದಲಾನ ಪರಮಾಚಾರ್ಯರುಗಳುಮ್ - ಪೆರಿಯನಂಬಿಯು ಶ್ರೀಭಾಷ್ಯಕಾರ್ರವರ ಮುಖ್ಯ ಗುರುಗಳು, ಶ್ರೀಯಾಮುನ ಮುನಿಗಳ ಶಿಷ್ಯರು. ಇವರನ್ನು ಶ್ರೀಯತಿವರ್ಯರು ಶ್ರೀ ಕಾಂಚೀವರದನ ಆಜ್ಞಾನುಸಾರ ಆಶ್ರಯಿಸಿ ಮಧುರಾಂತಕದಲ್ಲಿ ಮಂತ್ರೋಪದೇಶ ಮುಂತಾದವುಗಳನ್ನು ಹೊಂದಿ ಶಿಷ್ಯರಾದರು. ಇಲ್ಲಿ ಮುದಲಾನ ಎಂಬುದರಿಂದ ಶ್ರೀ ಯಾಮುನ ಮುನಿಗಳ ಇತರ ಶಿಷ್ಯರು ಹೇಳಲ್ಪಟ್ಟರು, ಇಂತಹ ಪರಮಾಚಾರ್ಯರುಗಳೆಲ್ಲಾ, ತನ್ತಾಮ್ ಸೂತ್ರಂಗಳಿನ್ ಪಡಿಯೇ - ತಮ್ಮ ತಮ್ಮ ಸೂತ್ರಗಳನ್ನನುಸರಿಸಿ, ಯಜ್ಞಾದಿಗಳ್ ಪಣ್ಣಿನಾರ್‌ಗಳೆನ್ನುಮಿಡಮ್-ಅನ್ಯದೇವತಾಮಂತ್ರಗಳಿರುವ ಯಜ್ಞಾದಿಗಳನ್ನು ಪಂಚಮಹಾಯಜ್ಞಾದಿಗಳನ್ನು ಮಾಡಿದರು ಎಂಬುವದು, ಸರ್ವರುಕ್ಕುಮ್ ಪ್ರಸಿದ್ಧಮ್ - ಸರ್ವರಿಗೂ ಚೆನ್ನಾಗಿ ವೇದ್ಯವಾದ ವಿಷಯವು.

ಆಗಲಿ, ಪಾಂಚರಾತ್ರ ಸಂಹಿತಾವಿಶೇಷಗಳಲ್ಲಿ ಪುಂಸವನ ಮೊದಲುಗೊಂಡು ವಿವಾಹ ಪರ್ಯಂತವಾಗಿ ವಿಷ್ಣುಮಂತ್ರಗಳ ಮೂಲಕವಾಗಿಯೇ ನಡೆಸತಕ್ಕದ್ದೆಂದೂ, ಹೀಗೆ ನಡೆಸಿದರೆ ದೇವತಾಂತರ ಸ್ಪರ್ಶವೂ ಇರುವದಿಲ್ಲವೆಂದೂ ಹೇಳಿರುವಾಗ್ಯ, ಹಾಗೆ ನಡೆಸತಕ್ಕದ್ದು ನ್ಯಾಯವಲ್ಲವೋ? ಶ್ರೀಪಾಂಚರಾತ್ರದಲ್ಲಿ ಹೇಳಿರುವದೇನೆಂದರೆ—

**ಆನಪಿನ್ಪು, ಭಾಷ್ಯಕಾರರುಡೈಯುಮ್ ತಚ್ಛಿಷ್ಯ ಪ್ರಶಿಷ್ಯರ್‌ಗಳುಡೈಯುವುಮ್, ಉಪದೇಶಾನುಷ್ಠಾನಙ್ಗಳಿಲೇ ನಿಷ್ಠೈಯುಡೈಯಾರ್‌ಕು ಆಗಮಸಿದ್ಧಾನ್ತಾನುವರ್ತಿಗಳಾನ ಸಂಹಿತಾವಿಶೇಷಙ್ಗಳಿಲ್ ಪ್ರತಿನಿಯತಮಾಗಚ್ಚೊಲ್ಲುಮ್ ಮನ್ತ್ರವಿಶೇಷಙ್ಗಳೈಕ್ಕೊಂಡು ಕ್ರಿಯಾವಿಶೇಷಙ್ಗಳ್ ಅನುಷ್ಠಿಕ್ಕವೊಣ್ಣಾದು.**

---

**ನ್ಯಗ್ರೋಧಸ್ಯಾಙ್ಕುರಂ ಕ್ಷುತ್ವಾ ತಸ್ಯಾ ನಾಸಾಪುಟೇ ಪುನಃ ।**
**ಸಂಚಯೋ ದ್ದಕ್ಷಿಣೇ ಸವ್ಯಾಗಿದಂ ವಿಷ್ಣುರಿತಿ ಬ್ರುವನ್ ।**
**ಚತುರ್ಥೇ ಮಾಸಿ ಸೀಮಂತಂ ಪಂಚಮೇವಾಷ್ಟಮೇ ಪಿವಾ ।**
**ಹೋಮಂ ಪುರುಷ ಸೂಕ್ತೇನ ಕೃತ್ವಾಜ್ಯ ಸಮಿದೋದನೈಃ ।**
**ಶಿಖಾ ಸ್ಥಾಪನಮೇವಂತು ಪಶ್ಚಾದುಪನಯೋಚ್ಛ್ರಿತಾಮ್ ।**
**ಪಂಚ ಮೇ ಸಪ್ತಮೇ ವಾತು ನವಮೇ ವಾತು ವತ್ಸರೇ ।**
**ಋಗ್ಭಿಃ ಪುರುಷಸೂಕ್ತಸ್ಯ ವಿಷ್ಣುಸೂಕ್ತಸ್ಯ ಚ ಕ್ರಮಾತ್ ।**
**ಸಮಿದ್ಭಿಶ್ಚ ಘೃತೇನೈವ ತೈಲೈ ರನ್ಯೈಶ್ಚ ಹೋಮಯೇತ್ ।**
**ತತಸ್ತು ಮೇಖಲಾಂ ಬಧ್ವಾ ತ್ರಿಗುಣಾಂ ವಿಷ್ಣುನಿರ್ಮಿತಾಮ್ ।**
**ವಿಷ್ಣೋಃ ಕರ್ಮಾಣಿ ಮನ್ತ್ರೇಣ ಗುರುರಗ್ನೇ ಸ್ಸಮಿಪತಃ ।**
**ದದ್ಯಾದ್ದಂಡಂತು ಪಾಲಾಶಂ ಯೋ ಮೇ ದಂಡ ಇತಿ ಬ್ರುವನ್ ।**
**ಏವಂ ಭಾಗವತೋ ವೇದ ಮುಪನೀತೋಽಭ್ಯಸೇದ್ಗುರೋಃ ॥**

ಹೀಗೆ ಪುಂಸವನ ಮೊದಲುಗೊಂಡು ವಿವಾಹ ಪರ್ಯಂತವಾಗಿ ವಿಷ್ಣುಮನ್ತ್ರಗಳಿಂದಲೇ ಈ ಸಂಸ್ಕಾರಗಳನ್ನೆಲ್ಲಾ ಅನುಷ್ಠಿಸತಕ್ಕದ್ದೆಂದು ಹೇಳಿರುವಾಗ, ಅವುಗಳನ್ನು ಬಿಟ್ಟು ಅನ್ಯದೇವತೆಗಳನ್ನು ಕುರಿತ ಮನ್ತ್ರಗಳಿಂದ ಇವುಗಳನ್ನು ನಡೆಸುವದು ಸರಿಯೋ ? ಶುದ್ಧವಾದ ವೈಷ್ಣವ ಮನ್ತ್ರಗಳಿಲ್ಲದ ಪಕ್ಷದಲ್ಲಿ ಏನೋ ಒಂದು ವೇಳೆ ಆಗಲಿ ಎಂದು ಒಪ್ಪಬಹುದಾಗಿತ್ತು. ಮನ್ತ್ರಗಳೂ ಇವೆ ; ಪಾಂಚರಾತ್ರ ವಿಧಿ ವಾಕ್ಯಗಳೂ ಇವೆ. ಹೀಗಿರುವಾಗ ಅನ್ಯದೇವತಾ ಮನ್ತ್ರಗಳ ಪ್ರಯೋಗವು ಹೇಗೆ ಸಾಧುವು ? ಎಂಬ ಪೂರ್ವಪಕ್ಷಕ್ಕೆ **ಆನಪಿನ್ಪು** ಎಂದಾರಂಭಿಸಿದ ವಾಕ್ಯದ ಮೂಲಕ ಸಮಾಧಾನವನ್ನು ಹೇಳುತ್ತಾರೆ. **ಆನಪಿನ್ಪು**-ಹೀಗಾದ ನಂತರ ಎಂದರೆ ಹಿಂದಿನ ಆಚಾರ್ಯರುಗಳ ಸಂಪ್ರದಾಯಾನುಗುಣವಾಗಿ ನಿತ್ಯನೈಮಿತ್ತಿಕಗಳನ್ನು ಆಯಾ ನಿಯತ ಮನ್ತ್ರಗಳ ಮೂಲಕವೇ ಅನುಷ್ಠಿಸತಕ್ಕದ್ದೆಂದೂ ಅನಂತರ **ಭಾಷ್ಯಕಾರರುಡೈಯುಮ್** - ಶ್ರೀ ಯತಿವರ್ಯರ ಮತ್ತು ಅವರ ಶಿಷ್ಯರ ಮತ್ತು ಶಿಷ್ಯರ ಶಿಷ್ಯರಾದ ಪ್ರಶಿಷ್ಯರುಗಳ, **ಉಪದೇಶಾನುಷ್ಠಾನಙ್ಗಳಿಲೇ** - **ಉಪದೇಶ** ಮತ್ತು ಅನುಷ್ಠಾನಗಳಲ್ಲಿ, **ನಿಷ್ಠೈಯುಡೈಯಾರ್ಕುಮ್** - ಸಂಪ್ರದಾಯರೀತ್ಯಾ ಅನುಷ್ಠಾನವನ್ನು ಇಟ್ಟುಕೊಂಡಿರುವವರಿಗೆ **ಆಗಮಸಿದ್ಧಾನ್ತಾನುವರ್ತಿಗಳಾನ** –

ಪಾಂಚರಾತ್ರದಲ್ಲಿರುವ ನಾಲ್ಕು ವಿಧಗಳಾದ, ಆಗಮಸಿದ್ಧಾಂತ, ಮನ್ತ್ರಸಿದ್ಧಾಂತ, ತಂತ್ರಸಿದ್ಧಾಂತ, ತಂತ್ರಾನ್ತರ ಸಿದ್ಧಾಂತ್ತಗಳಲ್ಲಿ ಒಂದಾದ ಆಗಮಸಿದ್ಧಾಂತ ವನ್ನು ಅನುಸರಿಸಿ ಹೇಳಿರುವ **ಸಂಹಿತಾ ವಿಶೇಷಙ್ಗಳಿಲ್** – ಸಂಹಿತಾ ವಿಶೇಷ ಗಳಲ್ಲಿ **ಪ್ರತಿನಿಯತಮಾಗ ಚೊಲ್ಲುಮ್** – ವಿಶೇಷಿಸಿ ವಿಧಿಸಿ ಹೇಳಿರುವ **ಮನ್ತ್ರ ವಿಶೇಷಙ್ಗಳೈಕ್ಕೊಂಡು**–ವಿಷ್ಣುವನ್ನು ಬೋಧಿಸುವ ಮನ್ತ್ರಗಳ ಮೂಲಕವಾಗಿ, **ಕ್ರಿಯಾವಿಶೇಷಙ್ಗಳ್** - ಸೀಮಂತ ಮೊದಲುಗೊಂಡು ಉಪನಯನದವರೆಗೂ ಹೇಳಿರುವ ಕ್ರಿಯಾ ವಿಶೇಷಗಳನ್ನು, **ಅನುಷ್ಠಿಕ್ಕವೊಣ್ಣಾದು** - ಅನುಷ್ಠಿಸುವದು ಸರಿಯಲ್ಲವು. ಪೂರ್ವಾಚಾರ್ಯರುಗಳು ಚೆನ್ನಾಗಿ ವಿಮರ್ಶಿಸಿ ತಿಳಿದು ಅನುಷ್ಠಿಸಿದ ಸಂಪ್ರದಾಯವಿರುವಾಗ. ಅದಕ್ಕೆ ವಿರೋಧವಾಗಿ ಈ ಆಗಮಸಿದ್ಧಾನ್ತಗಳಲ್ಲಿ ಹೇಳಿ ರುವ ಮೇರೆಗೆ ಅನುಷ್ಠಿಸುವದು ಯುಕ್ತವಲ್ಲವೆಂಬ ಭಾವವು. ಪಾಂಚರಾತ್ರದಲ್ಲಿ ಹೇಳಿರುವದೇನೆಂದರೆ"**ನ್ಯಗ್ರೋಧಸ್ಯಾಂ ಕುರಂಕ್ಷುತ್ವಾ ತಸ್ಯಾ ನಾಸಾಪುಟೇಪುನಃ। ಸಿಂಚಯೇ ದ್ದಕ್ಷಿಣೇ ಸಮ್ಯಗಿದಂ ವಿಷ್ಣುರಿತಿ ಬ್ರುವನ್ ॥ ಚತುರ್ಥೆಮಾಸಿ ಸೀಮಂತಂ ಪಂಚಮೇ ವಾ ಷ್ಣಮೇವವಾ। ಹೋಮಂ ಪುರುಷಸೂಕ್ತೇನ ಕೃತಾಜ್ಯ ಸಮಿದೋದನ್ನೈಃ । ಶಿಖಾಸ್ಥಾಪನಮೇವಂತು ಪಶ್ಚಾದುಪನಯೇ ಚ್ಛಿ ಶುಮ್ । ವಿಷ್ಣೋಃ ಕರ್ಮಾಣಿ ಮನ್ತ್ರೇಣ ಗುರುರಗ್ನೇ ಸ್ಸಮಿಪತಃ। ದದ್ಯಾ ದ್ದಂಡಂತು ಪಾಲಾಶಂ ಯೋ ಮೇದಂಡ ಇತಿ ಬ್ರುವನ್।ಏವಂ ಭಾಗವತೋ ವೇದ ಮುಪನೀತೋ ಭ್ಯಸೇ ದ್ಗುರೋಃ**" ॥ ಎಂದು ವೈಷ್ಣವ ಮನ್ತ್ರಗಳು ಹೇಳಲ್ಪಟ್ಟಿವೆ.

ಆದರೆ ಹೀಗೆ ಶ್ರೀ ಭಾಷ್ಯಕಾರರ ಮತ್ತು ಅವರ ಶಿಷ್ಯ ಪ್ರಶಿಷ್ಯರ ಸಂಪ್ರದಾಯ ರೀತ್ಯಾ ಅನುಷ್ಠಿಸತಕ್ಕದ್ದೇ ನ್ಯಾಯವೆಂದು ತೀರ್ಮಾನಿಸಿದರೆ, ಆಗಮಸಿದ್ಧಾನ್ತಾದಿ ಗಳು ನಮಗೆ ಬೇಕಿಲ್ಲವೆಂದು ಏರ್ಪಡುವದಿಲ್ಲವೇ ! ಶ್ರೀ ಭಾಷ್ಯಕಾರರೇ ಶ್ರೀ ಪಾಂಚ ರಾತ್ರಾಧಿಕರಣದಲ್ಲಿ ಮುಮುಕ್ಷುವಿಗೆ ಪಾಂಚರಾತ್ರವು ವಿಶೇಷವಾಗಿ ಉಪಾದೇಯ ವೆಂದು ಸಮರ್ಥಿಸಿರುತ್ತಾರಲ್ಲಾ ? ಏಕೆಂದರೆ ಅದೂ ಮೋಕ್ಷದಾಯಕವೆಂದು "**ತದ್ವಿ ವಾಸುದೇವಾಖ್ಯಂ ಪರಂಬ್ರಹ್ಮ ಸಂಪೂರ್ಣಷಾಡ್ಗುಣ್ಯವಪು ಸ್ಸೂಕ್ಷ್ಮ ವ್ಯೂಹವಿಭವ ಭೇದಭಿನ್ನಂ ಯಥಾಧಿಕಾರಂ ಭಕ್ತ್ಯೈಃಜ್ಞಾನಪೂರ್ವೇಣ ಕರ್ಮಣಾ ಅಭ್ಯರ್ಚ್ಚಿತಂ ಸಮ್ಯಕ್ ಪ್ರಾಪತೇ, ವಿಭವಾರ್ಚ್ಚಚಾದ್ವ್ಯೂಹಂ ಪ್ರಾಪ್ಯವ್ಯೂಹಾ ರ್ಚ್ಚನಾತ್ಪರಂಬ್ರಹ್ಮ ವಾಸುದೇವಾಖ್ಯಂ ಸೂಕ್ಷ್ಮಂ ಪ್ರಾಪ್ಯತ ಇತಿ ವದಂತಿ**" ಎಂದು ಹೇಳಿರುವದರಿಂದ ಮೋಕ್ಷವನ್ನು ಹೊಂದಿಸುತ್ತದೆ ಎಂದು ಹೇಳುವದರಲ್ಲಿ ತಾತ್ಪರ್ಯವು. ಅದೂ ಅಲ್ಲದೆ, ಪಾದ್ಮದಲ್ಲಿ "**ಸದಾಗಮಾದಿ ಸಿದ್ಧಾನ್ತೇ ಚತುಷ್ಕೇ ಸತ್ಪದಪ್ರದೇ**" ಎಂದು ಈ ಪಾಂಚರಾತ್ರದ ನಾಲ್ಕು ಸಿದ್ಧಾನ್ತವೂ ಸತ್ಪದವೆಂದರೆ ಮೋಕ್ಷವನ್ನು ಕೊಡುವಂಥಾದ್ದೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಹಯಗ್ರೀವ ಸಂಹಿತೆಯಲ್ಲೂ, "**ಆಗಮಾಖ್ಯಂ ಹಿ ಸಿದ್ಧಾನ್ತಂ ಸನ್ಮೋಕ್ಷೈಕಫಲಪ್ರದಮ್ । ಮಂತ್ರಸಂಜ್ಞಂ ಹಿ ಸಿದ್ಧಾನ್ತಂ ಸಿದ್ಧಿ ಮೋಕ್ಷಪ್ರದಂ ನೃಣಾಂ** । ತಂತ್ರಸಂಜ್ಞಂ

## ವರ್ಣಾಶ್ರಮಧರ್ಮಾನುಷ್ಠಾನೇ ಪಾಂಚರಾತ್ರ ಶಾಸ್ತ್ರಸ್ಯ ನವಿರೋಧಃ

**ಅಧಿಕಾ (ರಿಗಳುಕ್ಕು) ಕಾರಾದಿಗಳಕ್ಕು ಅನುರೂಪಮಾಕ ಚತುರ್ವಿಧ ಪಂಚರಾತ್ರಂ ವಿಭಕ್ತಮಾಯ್ ನಿರ್ಕ್ಕುಮ್ ನಿಲ್ಕೈಯುಮ್ ವಚನವಿರೋಧ**

---

ಹಿ ಸಿದ್ಧಾನ್ತಂ ಚತುರ್ವರ್ಗಫಲಪ್ರದಮ್ । ತಂತ್ರಾಂತರಂ ಹಿ ಸಿದ್ಧಾನ್ತಂ ವಾಂಛಿತಾರ್ಥಫಲಪ್ರದಮ್ " । ನಾನ್ಯೋವಿಮುಕ್ತಯೇ ಪಂಥಾ ಮುಕ್ತ್ವಾತ್ರ ಶ್ರಮ ವಿಧಿಂ ಸುಖಮ್। ತಸ್ಮಾತ್ಕರ್ಮಾಣಿ ಕುರ್ವೀತ ತುಷ್ಟಯೇ ಪರಮೇಷ್ಠಿನಃ" ಎಂದು ಹೇಳಿರುವದರಿಂದ ಚತುರ್ವರ್ಗದಲ್ಲೂ, ವಾಂಛಿತಾರ್ಥದಲ್ಲೂ ಮೋಕ್ಷವೂ ಸೇರಿದುದರಿಂದ,ಎರಡೂ ಮೋಕ್ಷಪ್ರದವೆಂದೂ, ಈ ಎರಡೂ ಇತರ ಫಲಗಳೊಂದಿಗೆ ಮೋಕ್ಷಪ್ರದವೆಂದೂ ಹೇಳಲ್ಪಟ್ಟಿರುತ್ತದೆ. ಈ ನಾಲ್ಕು ಸಿದ್ಧಾನ್ತಗಳ ಸಂಕರವು ನಿಷೇಧಿಸಲ್ಪಟ್ಟು ಸಂಕರದಿಂದ ಪ್ರತ್ಯವಾಯುವೂ ಅದಕ್ಕೆ ಪ್ರಾಯಶ್ಚಿತ್ತವೂ ಸಹ ವಿಧಿಸಲ್ಪಟ್ಟಿರುತ್ತದೆ. ಹೀಗಿರುವಾಗ ಅಂತಹ ಅಮೋಘ ಶಾಸ್ತ್ರವನ್ನು ನಿರಾಕರಿಸಿ ಸಂಪ್ರದಾಯರೀತ್ಯಾ ಅಗ್ನೀಂದ್ರಾದಿಗಳನ್ನು ಬೋಧಿಸುವ ಮನ್ತ್ರವನ್ನೇ ಹೇಳಿ ಅನುಷ್ಠಿಸಿ ಭಗವದರ್ಪಣವನ್ನು ಮಾಡತಕ್ಕದ್ದೆಂದು ಸ್ಥಾಪಿಸಿದುದು ಹೇಗೆ ಎಂಬ ಪೂರ್ವಪಕ್ಷವು ಬಂದೀತೆಂದು ಭಾವಿಸಿ, ಅದಕ್ಕೆ ಸಮಾಧಾನವನ್ನು ಅನುಗ್ರಹಿಸುತ್ತಾರೆ. ಪಾಂಚರಾತ್ರಶಾಸ್ತ್ರವು ಪರಮ ಗ್ರಾಹ್ಯವು ; "ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಸ್ಸ್ವಯಮ್" ಎಂದು ಭಾರತ ಶಾನ್ತಿಪರ್ವದಲ್ಲಿ ಕೊಂಡಾಡಿರುವದರಿಂದಲೂ ಉಪಾದೇಯವು. ಆದುದರಿಂದ ಆ ಶಾಸ್ತ್ರಕ್ಕೆ ವಿರೋಧವಾಗಿ ಇಲ್ಲಿ ಹೇಳಲಿಲ್ಲವು. ಹೇಳಿದುದು ಏನೆಂದರೆ "ಅಧಿಕಾರಿಗಳುಕ್ಕು" ಎಂದಾರಂಭಿಸಿದ ನಾಲ್ಕು ವಾಕ್ಯಗಳ ಮೂಲಕ ತಿಳಿಸುತ್ತಾರೆ. ಪ್ರಥಮತಃ ತಾವು ಬರೆದ ಪಾಂಚರಾತ್ರ ರಕ್ಷೆಯಲ್ಲಿ, ಪಾಂಚರಾತ್ರ ಶಾಸ್ತ್ರವೂ ಆದರ ನಾಲ್ಕು ವಿಧಿಗಳೂ ಉಪಾದೇಯವೆಂದೇ ಹೇಳಿರುವದಾಗಿ ಅಪ್ಪಣೆ ಕೊಡಿಸುತ್ತಾರೆ.

### ವರ್ಣಾಶ್ರಮ ಧರ್ಮಾನುಷ್ಠಾನದಿಂದ ಪಾಂಚರಾತ್ರಶಾಸ್ತ್ರಕ್ಕೇನೂ ವಿರೋಧವಿಲ್ಲವು

ತಾವು ವರ್ಣಾಶ್ರಮ ಧರ್ಮಗಳನ್ನು ಅವಶ್ಯಾನುಷ್ಠೇಯವೆಂದು ಹಿಂದೆ ಸಿದ್ಧಾನ್ತಿಸಿದುದರಿಂದ, ಶ್ರೀ ಪಾಂಚರಾತ್ರಶಾಸ್ತ್ರವನ್ನೇನೂ ನಿರಾಕರಿಸಿ ಹೇಳಲಿಲ್ಲವು; ಶ್ರೀ ಪಾಂಚರಾತ್ರ ರಕ್ಷೆಯಲ್ಲಿ ಪಾಂಚರಾತ್ರಶಾಸ್ತ್ರವು ಪರಮೋಪಾದಾಯವೆಂದೇ ಉಪಪಾದಿಸಲ್ಪಟ್ಟಿರುತ್ತದೆಂದು ತಿಳಿಸುತ್ತಾರೆ. ಅಧಿಕಾರಾದಿಗಳುಕ್ಕು - ಆ ಶಾಸ್ತ್ರದ ನಾಲ್ಕು ವಿಭಾಗಗಳಾದ ಸಿದ್ಧಾನ್ತಗಳಿಗೆ ಯಾರು ಯಾರು ಅಧಿಕಾರಿಗಳು, ಆದಿ ಶಬ್ದದಿಂದ ಅನುಷ್ಠಾನಗಳೇನು, ಫಲಗಳೇನು, ಇವುಗಳಿಗೆ, ಅನುರೂಪಮಾಗ - ಅನುಗುಣವಾಗಿ (೧) ಚತುರ್ವಿಧ ಪಂಚರಾತ್ರಂ ವಿಭಕ್ತಮಾಯ್ ನಿರ್ಕ್ಕ ನಿಲೈಯುಮ್ - ಪಂಚರಾತ್ರವು ನಾಲ್ಕು ವಿಧವಾಗಿ ಆಗಮಸಿದ್ಧಾನ್ತ, ಮಂತ್ರ ಸಿದ್ಧಾನ್ತ, ತಂತ್ರ

ಪಾಂಚರಾತ್ರದಲ್ಲಿರುವ ನಾಲ್ಕು ವಿಧಗಳಾದ, ಆಗಮಸಿದ್ಧಾನ್ತ, ಮನ್ತ್ರಸಿದ್ಧಾನ್ತ, ತಂತ್ರಸಿದ್ಧಾಂತ, ತಂತ್ರಾನ್ತರ ಸಿದ್ಧಾಂತ್ತಗಳಲ್ಲಿ ಒಂದಾದ ಆಗಮಸಿದ್ಧಾಂತ ವನ್ನು ಅನುಸರಿಸಿ ಹೇಳಿರುವ ಸಂಹಿತಾ ವಿಶೇಷಙ್ಗಳಿಲ್ – ಸಂಹಿತಾ ವಿಶೇಷ ಗಳಲ್ಲಿ ಪ್ರತಿನಿಯತವಾಗ ಚೊಲ್ಲುಮ್ – ವಿಶೇಷಿಸಿ ವಿಧಿಸಿ ಹೇಳಿರುವ ಮನ್ತ್ರ ವಿಶೇಷಙ್ಗಳೈಕ್ಕೊಂಡು–ವಿಷ್ಣುವನ್ನು ಬೋಧಿಸುವ ಮನ್ತ್ರಗಳ ಮೂಲಕವಾಗಿ, ಕ್ರಿಯಾವಿಶೇಷಙ್ಗಳ್ - ಸೀಮಂತ ಮೊದಲುಗೊಂಡು ಉಪನಯನದವರೆಗೂ ಹೇಳಿರುವ ಕ್ರಿಯಾ ವಿಶೇಷಗಳನ್ನು, ಅನುಷ್ಠಿಕ್ಕೈವೊಣ್ಣಾದು - ಅನುಷ್ಠಿಸುವದು ಸರಿಯಲ್ಲವು. ಪೂರ್ವಾಚಾರ್ಯರುಗಳು ಚೆನ್ನಾಗಿ ವಿಮರ್ಶಿಸಿ ತಿಳಿದು ಅನುಷ್ಠಿಸಿದ ಸಂಪ್ರದಾಯವಿರುವಾಗ, ಅದಕ್ಕೆ ವಿರೋಧವಾಗಿ ಈ ಆಗಮಸಿದ್ಧಾನ್ತಗಳಲ್ಲಿ ಹೇಳಿ ರುವ ಮೇರೆಗೆ ಅನುಷ್ಠಿಸುವದು ಯುಕ್ತವಲ್ಲವೆಂಬ ಭಾವವು. ಪಾಂಚರಾತ್ರದಲ್ಲಿ ಹೇಳಿರುವದೇನೆಂದರೆ "ನ್ಯಗ್ರೋಧಸ್ಯಾಂ ಕುರಂಕ್ಷುತ್ವಾ ತಸ್ಯಾ ನಾಸಾಪುಟೇಪುನಃ। ಸಿಂಚಯೇ ದ್ದಕ್ಷಿಣೇ ಸಮ್ಯಗಿದಂ ವಿಷ್ಣುರಿತಿ ಬ್ರುವನ್ ॥ ಚತುರ್ಥೆಮಾಸಿ ಸೀಮಂತಂ ಪಂಚಮೇ ವಾ ಷ್ಟಮೇವವಾ । ಹೋಮಂ ಪುರುಷಸೂಕ್ತೇನ ಕೃತಾಜ್ಯ ಸಮಿದೋದನ್ಯೈಃ । ಶಿಖಾಸ್ಥಾಪನಮೇವಂತು ಪಶ್ಚಾದುಪನಯೇ ಚ್ಛಿ ಶುಮ್ । ವಿಷ್ಣೋಃ ಕರ್ಮಾಣಿ ಮನ್ತ್ರೇಣ ಗುರುರಗ್ನೇ ಸ್ಸಮಾಪತಃ। ದದ್ಯಾ ದ್ದಂಡಂತು ಪಾಲಾಶಂ ಯೋ ಮೇದಂಡ ಇತಿ ಬ್ರುವನ್।ಏವಂ ಭಾಗವತೋ ವೇದ ಮುಪನೀತೋ ಭ್ಯಸೇ ದ್ಗುರೋಃ" ॥ ಎಂದು ವೈಷ್ಣವ ಮನ್ತ್ರಗಳು ಹೇಳಲ್ಪಟ್ಟಿವೆ.

ಆದರೆ ಹೀಗೆ ಶ್ರೀ ಭಾಷ್ಯಕಾರರ ಮತ್ತು ಆವರ ಶಿಷ್ಯ ಪ್ರಶಿಷ್ಯರ ಸಂಪ್ರದಾಯ ರೀತ್ಯಾ ಅನುಷ್ಠಿಸತಕ್ಕದ್ದೇ ನ್ಯಾಯವೆಂದು ತೀರ್ಮಾನಿಸಿದರೆ, ಆಗಮಸಿದ್ಧಾನ್ತಾದಿ ಗಳು ನಮಗೆ ಬೇಕಿಲ್ಲವೆಂದು ಏರ್ಪಡುವದಿಲ್ಲವೇ ! ಶ್ರೀ ಭಾಷ್ಯಕಾರರೇ ಶ್ರೀ ಪಾಂಚ ರಾತ್ರಾಧಿಕರಣದಲ್ಲಿ ಮುಮುಕ್ಷುವಿಗೆ ಪಾಂಚರಾತ್ರವು ವಿಶೇಷವಾಗಿ ಉಪಾದೇಯ ವೆಂದು ಸಮರ್ಥಿಸಿರುತ್ತಾರಲ್ಲಾ ? ಏಕೆಂದರೆ ಅದೂ ಮೋಕ್ಷದಾಯಕವೆಂದು "ತದ್ಧಿ ವಾಸುದೇವಾಖ್ಯಂ ಪರಂಬ್ರಹ್ಮ ಸಂಪೂರ್ಣಷಾಡ್ಗುಣ್ಯವಪು ಸ್ಸೂಕ್ಷ್ಮ ವ್ಯೂಹವಿಭವ ಭೇದಭಿನ್ನಂ ಯಥಾಧಿಕಾರಂ ಭಕ್ತೈಃಜ್ಞಾನಪೂರ್ವೇಣ ಕರ್ಮಣಾ ಅಭ್ಯರ್ಚಿತಂ ಸಮ್ಯಕ್ ಪ್ರಾಪತೇ, ವಿಭವಾರ್ಚಚಾದ್ವ್ಯೂಹಂ ಪ್ರಾಪ್ಯವ್ಯೂಹಾ ರ್ಚ್ಚಾನಾತ್ಪರಂಬ್ರಹ್ಮ ವಾಸುದೇವಾಖ್ಯಂ ಸೂಕ್ಷ್ಮಂ ಪ್ರಾಪ್ಯತ ಇತಿ ವದಂತಿ" ಎಂದು ಹೇಳಿರುವದರಿಂದ ಮೋಕ್ಷವನ್ನು ಹೊಂದಿಸುತ್ತದೆ ಎಂದು ಹೇಳುವದರಲ್ಲಿ ತಾತ್ಪರ್ಯವು. ಅದೂ ಅಲ್ಲದೆ, ಪಾದ್ಮದಲ್ಲಿ "ಸದಾಗಮಾದಿ ಸಿದ್ಧಾನ್ತೇ ಚತುಷ್ಕೇ ಸತ್ಪದಪ್ರದೇ" ಎಂದು ಈ ಪಾಂಚರಾತ್ರದ ನಾಲ್ಕು ಸಿದ್ಧಾನ್ತವೂ ಸತ್ಪದವೆಂದರೆ ಮೋಕ್ಷವನ್ನು ಕೊಡುವಂಥಾದ್ದೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಹಯಗ್ರೀವ ಸಂಹಿತೆಯಲ್ಲೂ, "ಆಗಮಾಖ್ಯಂ ಹಿ ಸಿದ್ಧಾನ್ತಂ ಸನ್ಮೋಕ್ಷೈಕಫಲಪ್ರದಮ್ । ಮಂತ್ರಸಂಜ್ಞಂ ಹಿ ಸಿದ್ಧಾನ್ತಂ ಸಿದ್ಧಿ ಮೋಕ್ಷಪ್ರದಂ ನೃಣಾಂ । ತಂತ್ರಸಂಜ್ಞಂ

## ವರ್ಣಾಶ್ರಮಧರ್ಮಾನುಷ್ಠಾನೇ ಪಾಂಚರಾತ್ರ ಶಾಸ್ತ್ರಸ್ಯ ನವಿರೋಧಃ

**ಅಧಿಕಾ (ರಿಗಳುಕ್ಕು) ಕಾರಾದಿಗಳುಕ್ಕು ಅನುರೂಪಮಾಕ ಚತುರ್ವಿಧ ಪಂಚರಾತ್ರಂ ವಿಭಕ್ತಮಾಯ್ ನಿರ್ಕ್ಕುಮ್ ನಿಲೈಯುಮ್ ವಚನವಿರೋಧ**

---

ಹಿ ಸಿದ್ಧಾನ್ತಂ ಚತುರ್ವರ್ಗಫಲಪ್ರದಮ್ । ತಂತ್ರಾಂತರಂ ಹಿ ಸಿದ್ಧಾನ್ತಂ ವಾಂಛಿತಾರ್ಥಫಲಪ್ರದಮ್ ॥ ನಾನ್ಯೋऽವಿಮುಕ್ತಯೇ ಪಂಥಾ ಮುಕ್ತ್ವಾತ್ರಾಶ್ರಮ ವಿಧಿಂ ಸುಖಮ್। ತಸ್ಮಾತ್ಕರ್ಮಾಣಿ ಕುರ್ವೀತ ತುಷ್ಟಯೇ ಪರಮೇಷ್ಠಿನಃ" ಎಂದು ಹೇಳಿರುವದರಿಂದ ಚತುರ್ವರ್ಗದಲ್ಲೂ, ವಾಂಛಿತಾರ್ಥದಲ್ಲೂ ಮೋಕ್ಷವೂ ಸೇರಿದುದರಿಂದ,ಎರಡೂ ಮೋಕ್ಷಪ್ರದವೆಂದೂ, ಈ ಎರಡೂ ಇತರ ಫಲಗಳೊಂದಿಗೆ ಮೋಕ್ಷಪ್ರದವೆಂದೂ ಹೇಳಲ್ಪಟ್ಟಿರುತ್ತದೆ. ಈ ನಾಲ್ಕು ಸಿದ್ಧಾನ್ತಗಳ ಸಂಕರವು ನಿಷೇಧಿಸಲ್ಪಟ್ಟು, ಸಂಕರದಿಂದ ಪ್ರತ್ಯವಾಯುವೂ ಅದಕ್ಕೆ ಪ್ರಾಯಶ್ಚಿತ್ತವೂ ಸಹ ವಿಧಿಸಲ್ಪಟ್ಟಿರುತ್ತದೆ. ಹೀಗಿರುವಾಗ ಅಂತಹ ಅಮೋಘ ಶಾಸ್ತ್ರವನ್ನು ನಿರಾಕರಿಸಿ ಸಂಪ್ರದಾಯರೀತ್ಯಾ ಅಗ್ನೀಂದ್ರಾದಿಗಳನ್ನು ಬೋಧಿಸುವ ಮನ್ತ್ರವನ್ನೇ ಹೇಳಿ ಅನುಷ್ಠಿಸಿ ಭಗವದರ್ಪಣವನ್ನು ಮಾಡತಕ್ಕದ್ದೆಂದು ಸ್ಥಾಪಿಸಿದುದು ಹೇಗೆ ಎಂಬ ಪೂರ್ವಪಕ್ಷವು ಬಂದೀತೆಂದು ಭಾವಿಸಿ, ಅದಕ್ಕೆ ಸಮಾಧಾನವನ್ನು ಅನುಗ್ರಹಿಸುತ್ತಾರೆ. ಪಾಂಚರಾತ್ರಶಾಸ್ತ್ರವು ಪರಮ ಗ್ರಾಹ್ಯವು ; "ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಸ್ಸ್ವಯಮ್" ಎಂದು ಭಾರತ ಶಾನ್ತಿಪರ್ವದಲ್ಲಿ ಕೊಂಡಾಡಿರುವದರಿಂದಲೂ ಉಪಾದೇಯವು. ಆದುದರಿಂದ ಆ ಶಾಸ್ತ್ರಕ್ಕೆ ವಿರೋಧವಾಗಿ ಇಲ್ಲಿ ಹೇಳಲಿಲ್ಲವು. ಹೇಳಿದುದು ಏನೆಂದರೆ "ಅಧಿಕಾರಿಗಳುಕ್ಕು" ಎಂದಾರಂಭಿಸಿದ ನಾಲ್ಕು ವಾಕ್ಯಗಳ ಮೂಲಕ ತಿಳಿಸುತ್ತಾರೆ. ಪ್ರಥಮತಃ ತಾವು ಬರೆದ ಪಾಂಚರಾತ್ರ ರಕ್ಷೆಯಲ್ಲಿ, ಪಾಂಚರಾತ್ರ ಶಾಸ್ತ್ರವೂ ಅದರ ನಾಲ್ಕು ವಿಧಿಗಳೂ ಉಪಾದೇಯವೆಂದೇ ಹೇಳಿರುವದಾಗಿ ಅಪ್ಪಣೆ ಕೊಡಿಸುತ್ತಾರೆ.

### ವರ್ಣಾಶ್ರಮ ಧರ್ಮಾನುಷ್ಠಾನದಿಂದ ಪಾಂಚರಾತ್ರಶಾಸ್ತ್ರಕ್ಕೇನೂ ವಿರೋಧವಿಲ್ಲವು

ತಾವು ವರ್ಣಾಶ್ರಮ ಧರ್ಮಗಳನ್ನು ಅವಶ್ಯಾನುಷ್ಠೇಯವೆಂದು ಹಿಂದೆ ಸಿದ್ಧಾನ್ತಿಸಿದುದರಿಂದ, ಶ್ರೀ ಪಾಂಚರಾತ್ರಶಾಸ್ತ್ರವನ್ನೇನೂ ನಿರಾಕರಿಸಿ ಹೇಳಲಿಲ್ಲವು ; ಶ್ರೀ ಪಾಂಚರಾತ್ರ ರಕ್ಷೆಯಲ್ಲಿ ಪಾಂಚರಾತ್ರಶಾಸ್ತ್ರವು ಪರಮೋಪಾದಾಯವೆಂದೇ ಉಪಪಾದಿಸಲ್ಪಟ್ಟಿರುತ್ತದೆಂದು ತಿಳಿಸುತ್ತಾರೆ. ಅಧಿಕಾರಾದಿಗಳುಕ್ಕು - ಆ ಶಾಸ್ತ್ರದ ನಾಲ್ಕು ವಿಭಾಗಗಳಾದ ಸಿದ್ಧಾನ್ತಗಳಿಗೆ ಯಾರು ಯಾರು ಅಧಿಕಾರಿಗಳು, ಆದಿ ಶಬ್ದದಿಂದ ಅನುಷ್ಠಾನಗಳೇನು, ಫಲಗಳೇನು, ಇವುಗಳಿಗೆ, ಅನುರೂಪಮಾಗ - ಅನುಗುಣವಾಗಿ (೧) ಚತುರ್ವಿಧ ಪಂಚರಾತ್ರಂ ವಿಭಕ್ತಮಾಯ್ ನಿರ್ಕ್ಕುಂ ನಿಲೈಯುಮ್ – ಪಂಚರಾತ್ರವು ನಾಲ್ಕು ವಿಧವಾಗಿ ಆಗಮಸಿದ್ಧಾನ್ತ, ಮಂತ್ರ ಸಿದ್ಧಾನ್ತ, ತಂತ್ರ

ಮಿಲ್ಲಾದ ವಿಡತ್ತಿಲ್ "ಅನುಕ್ತಮನ್ಯತೋಗ್ರಾಹ್ಯಮ್" ಎಣ್ಗಿರ ನ್ಯಾಯಂ ನಡಕ್ಕುಮ್‌ಪಡಿಯುಮ್, ನಾಲು ಆಶ್ರಮತ್ತಾಲುಮ್ ಬ್ರಹ್ಮವಿದ್ಯೆಯುಮ್ ಮೋಕ್ಷಲಾಭಮುಮ್ ಉಂಡೆನ್ರು ಶಾರೀರಕಾದಿಗಳಿಲೇ ಸಮರ್ಥಿತ್ತಾರ್ಪ್ಪೋಲೆ ಆಗಮಸಿದ್ಧಾಂತಾದಿಗಳ್ ನಾಲಿಲುಮ್ ಸಾಕ್ಷಾನ್ಮೋಕ್ಷೋಪಾಯಮುಮ್, ಮೋಕ್ಷಪ್ರಾಪ್ತಿಯುಮ್ ಉಂಡೆನ್ರುಮ್ ಶ್ರೀ ಪಾಂಚರಾತ್ರರಕ್ಷೈಯಿಲ್ಯೆಯ ಮುಪಪಾದಿತ್ತೋಮ್.

---

ಸಿದ್ಧಾನ್ತ, ತಂತ್ರಾನ್ತರ ಸಿದ್ಧಾಂತವೆಂದೂ ವಿಭಾಗಿಸಲ್ಪಟ್ಟ ಇರುವಿಕೆಯನ್ನೂ (೨) ವಚನವಿರೋಧಮಿಲ್ಲಾದ ವಿಡತ್ತಿಲ್ "ಅನುಕ್ತಮನ್ಯತೋಗ್ರಾಹ್ಯಮ್" ಎಣ್ಗಿರ ನ್ಯಾಯಮ್ ನಡಕ್ಕುಮ್ ಪಡಿಯುಮ್. ಈ ನಾಲ್ಕು ಸಿದ್ಧಾನ್ತಗಳಲ್ಲಿ ಪರಸ್ಪರ ವಚನಗಳಿಗೆ ವಿರೋಧವಿಲ್ಲದ ಸಂದರ್ಭದಲ್ಲಿ ಒಂದು ಸಿದ್ಧಾನ್ತದಲ್ಲಿ ಹೇಳಿ ಇನ್ನೊಂದರಲ್ಲಿ ಹೇಳದಿದ್ದರೆ ಅಲ್ಲಿಗೂ ಅನ್ವಯಿಸುತ್ತದೆಂದು ಸ್ವೀಕರಿಸತಕ್ಕದ್ದು" ಎಂಬ ನ್ಯಾಯದ ಪ್ರಕಾರ ನಡೆದುಕೊಳ್ಳಬೇಕಾದ ಪ್ರಕಾರವನ್ನೂ, (೩) ನಾಲು ಆಶ್ರಮತ್ತಾಲುಮ್ ಬ್ರಹ್ಮವಿದ್ಯೆಯುಮ್ ಮೋಕ್ಷಲಾಭಮುಂಡೆನ್ರು ಶಾರೀರ ಕಾದಿಗಳಿಲೇ ಸಮರ್ಥಿತ್ತಾರ್ಪ್ಪೋಲೇ - ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳಾದ ನಾಲು ಆಶ್ರಮದಲ್ಲೂ ಎಂದರೆ ನಾಲ್ಕು ಆಶ್ರಮದ ಅಧಿಕಾರಿ ಗಳಿಗೂ ಬ್ರಹ್ಮವಿದ್ಯೆಯೂ ಮೋಕ್ಷಪ್ರಾಪ್ತಿಯೂ ಉಂಟೆಂದು ವ್ಯಾಸಸೂತ್ರಗಳಲ್ಲಿ ಸಮರ್ಥಿಸಲ್ಪಟ್ಟ ಹಾಗೆ, ಆಗಮಸಿದ್ಧಾನ್ತಾದಿಗಳ್‌ನಾಲಿಲುಮ್ - ಈ ಪಾಂಚ ರಾತ್ರ ಶಾಸ್ತ್ರಕ್ಕೆ ಸೇರಿದ ಆಗಮಸಿದ್ಧಾನ್ತವೇ ಮೊದಲಾದ ನಾಲ್ಕು ಸಿದ್ಧಾನ್ತ ಗಳಲ್ಲೂ, ಸಾಕ್ಷಾನ್ಮೋಕ್ಷೋಪಾಯಮುಮ್-ಸಾಕ್ಷಾತ್ತಾಗಿ ಮೋಕ್ಷಕ್ಕೆ ಉಪಾಯ ವಾದ ಭಕ್ತಿಪ್ರಪತ್ತಿಯೂ, ಮೋಕ್ಷಪ್ರಾಪ್ತಿಯೂ, ಉಂಡೆನ್ರು - ಉಂಟೆಂಬ ದಾಗಿ, ಶ್ರೀ ಪಾಂಚರಾತ್ರರಕ್ಷೈಯಿಲ್ಯೆ - ತಾವು ರಚಿಸಿರುವ ಶ್ರೀ ಪಾಂಚರಾತ್ರ ರಕ್ಷೆಯಲ್ಲಿ, ಉಪಪಾದಿತ್ತೋಮ್-ಸಮರ್ಥನೆ ಮಾಡಿ ಹೇಳಿರುವೆವು. ಈ ಮೂರರ ವಿಷಯಗಳನ್ನೂ ಸಮರ್ಥನೆಯನ್ನು ಮಾಡಿ ಹೇಳಿರುತ್ತೇವೆ ಎಂದು ಹೇಳಿರುವದ ರಿಂದ ಆ ಪಾಂಚರಾತ್ರ ಶಾಸ್ತ್ರವು ತಮಗೆ ಪರಮಗ್ರಾಹ್ಯವು. ನಿತ್ಯಕರ್ಮಾನುಷ್ಠಾನ ಗಳನ್ನು ಅವರವರುಗಳ ಆಚಾರ್ಯರುಗಳು ನಡೆಸಿಕೊಂಡು ಬಂದ ಸಂಪ್ರದಾಯ ರೀತ್ಯಾ ನಡೆಸತಕ್ಕದ್ದೆಂದು ಹೇಳಿದರೆ, ಈ ಶಾಸ್ತ್ರವನ್ನು ನಿರಾಕರಿಸಿದಹಾಗೆ ಹೇಗಾ ಯಿತು ಎಂಬ ಭಾವವು. ಈ ನಾಲ್ಕು ಸಿದ್ಧಾನ್ತದಲ್ಲೂ "ಅನುಕ್ತಮನ್ಯತೋ ಗ್ರಾಹ್ಯಮ್" ಎಂದು ಹೇಳಿರುವದರಿಂದ, ಉಕ್ತವಾದುವುಗಳನ್ನು ತನ್ನಿಷ್ಠಾನು ಸಾರ ನಡೆಸಿ, ಸಿದ್ಧಾನ್ತ ಸಾಂಕರ್ಯವನ್ನು ಎಂದಿಗೂ ಮಾಡತಕ್ಕದ್ದಲ್ಲವೆಂದೂ, ಹಾಗೆ ಮಾಡಿದುದಾದರೆ ಪ್ರಾಯಶ್ಚಿತ್ತಕ್ಕೆ ಗುರಿಯಾಗುವನೆಂಬ ಭಾವವೂ ಸೂಚಿ ತವು. ನಾರದೀಯದಲ್ಲಿ "ತಂತ್ರೇಣೈಕೇನ ಕರ್ತವ್ಯಂ ಕರ್ಷಣಾದಿಷು ನಾರದ।

ಯತ್ತಂತ್ರೇಣ ಸಮಾರಬ್ಧಂ ತತ್ತಂತ್ರೇಣೈವ ಕಾರಯೇತ್ । ಅನುಕ್ತಾಂಶ್ಚಾನ್ಯತಂತ್ರೇಷು ನಿರೀಕ್ಷ್ಯಾನ್ಯತ್ರಯೋಜಯೇತ್।ವಿಶೇಷಾಂಶ್ಚ ಮುನಿಶ್ರೇಷ್ಠ ತ್ವನ್ಯಥಾ ರಾಷ್ಟ್ರನಾಶಕೃತ್ ॥ ಎಂದು ಹೇಳಿರುತ್ತದೆ. ಒಂದು ತಂತ್ರದಲ್ಲಿ ಆರಂಭಿಸಿದ ಕಾರ್ಯವನ್ನು ಆ ತಂತ್ರದಿಂದಲೇ ಪೂರೈಸತಕ್ಕದ್ದೆಂದೂ,ತಾಂತ್ರಸಾಂಕರ್ಯ ಕೂಡದೆಂದೂ, ಒಂದರಲ್ಲಿ ಹೇಳಿದುದನ್ನು ಇನ್ನೊಂದರಲ್ಲಿ ಹೇಳದಿದ್ದರೆ, ಆಗ ಪರಿಶೀಲಿಸಿ ಆಗೀಗ ಆ ಭಾಗವನ್ನು ಅಂಗೀಕರಿಸತಕ್ಕದ್ದೆಂದೂ, ಹಾಗಲ್ಲದೆ ಒಂದರ ತಂತ್ರದ ಪ್ರಕ್ರಿಯೊಂದಿಗೆ ಇನ್ನೊಂದನ್ನು ನಡೆಸಿದರೆ ರಾಷ್ಟ್ರನಾಶವಾಗುವ ಪ್ರತ್ಯವಾಯವು ಪ್ರಾಪ್ತವಾಗುತ್ತದೆಂದೂ ಹೇಳಲ್ಪಟ್ಟಿತು. ಹಾಗೆಯೇ ಪಾರಮೇಶ್ವರದಲ್ಲೂ "ತತ್ರಸಿದ್ಧಾಂತಸಾಂಕರ್ಯಂ ನಾಚರ್ತವ್ಯಂ ಕೃತಾತ್ಮಭಿಃ । ಯದ್ಯದಿಷ್ಟತಮಂಲೋಕೇ ಪೂರ್ವಸಿದ್ಧಾ ವಿರೋಧಿತತ್ । ಪ್ರತಿಗ್ರಾಹ್ಯ ಮಥಾನ್ಯೋನ್ಯಂ ವಿರುದ್ಧಂ ಸಂತ್ಯಜೇತ್ ಬುಧಃ" ಎಂದು ಹೇಳಲ್ಪಟ್ಟಿರುತ್ತದೆ, ಇದರಭಿಪ್ರಾಯವೂ ಮೇಲಿನ ಪ್ರಮಾಣಾಭಿಪ್ರಾಯವೂ ಒಂದೇ. ಹೀಗೆಲ್ಲಾ ಶ್ರೀ ಪಾಂಚರಾತ್ರರಕ್ಷೆಯಲ್ಲಿ ಸಪ್ರಮಾಣವಾಗಿ ಸಿದ್ಧಾನ್ತಿಸಿರುತ್ತೇವೆ ಎಂದು ಹೇಳಿರುವದರಿಂದ, ಆ ನಾಲ್ಕು ವಿಧವಾದ ಪಾಂಚರಾತ್ರಶಾಸ್ತ್ರವೂ ಉಪಾದೇಯವಾದುದೇ ಎಂಬ ಭಾವವು. ಹಾಗೆಯೇ"ಸ್ವಕಂ ಕರ್ಮ ಪರಿತ್ಯಜ್ಯ ಯದನ್ಯತ್ಕುರುತೇ ದ್ವಿಜಃ । ಅಜ್ಞಾನಾ ದಥವಾ ಲೋಭಾತ್ತ್ಯಾಗೇನ ಪತಿತೋ ಭವೇತ್ । ಸ್ವಗೃಹ್ಯೇ ವಿದ್ಯಮಾನೇ ಯಃ ಪರಗೃಹ್ಯೋಕ್ತಮಾಚರೇತ್।ಭ್ರೂಣಹತ್ಯಾಸಮಂತಸ್ಯ ಸ್ವಗೃಹ್ಯಸ್ಯಾವಮಾನತಃ" ಎಂಬಲ್ಲೂ ಪ್ರೋಕ್ತವು. ತನಗೆ ಹೇಳಲ್ಪಟ್ಟ ಗೃಹಸೂತ್ರಾನುಸಾರ ನಡೆಯತಕ್ಕದ್ದು, ಅನ್ಯಥಾ ನಡೆದರೆ ದೋಷವು. ಹಾಗೆ ನಡೆದರೆ ಪ್ರಾಯಶ್ಚಿತ್ತವೂ ಉಂಟು. ಇವನ್ನೇ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. (೩) ನಾಲು ಆಶ್ರಮತ್ತಿಲುಮ್ ಬ್ರಹ್ಮವಿದ್ಯೆಯೂ ಮೋಕ್ಷಪ್ರಾಪ್ತಿಯೂ ಉಂಟೆಂದು ಶಾರೀರಕ ಸೂತ್ರದಲ್ಲಿ ಎಲ್ಲಿ ಹೇಳಿರುತ್ತದೆ ಎಂದರೆ "ಕೃತ್ಸ್ನಭಾವಾತ್ತು,ಗೃಹಿಣೋಪಸಂಹಾರಃ"(ಬ್ರ.ಸೂ. ೩-೪.೪೭) ಎಂಬ ಸೂತ್ರದಲ್ಲೂ ಉಪಪಾದಿತವು. ಗೃಹಸ್ಥಾದಿ ಆಶ್ರಮಗಳಲ್ಲಿ ಬ್ರಹ್ಮವಿದ್ಯೆಯೂ ಇರುವದರಿಂದ ಗೃಹಿಣಾಂ-ಗೃಹಸ್ಥಾಶ್ರಮದ ಮೂಲಕ, ಶ್ರುತಿಯು ಉಪಸಂಹಾರ ಮಾಡಿ ಹೇಳಿತು. ಎಲ್ಲಿ ಎಂದರೆ "ಸಖಲ್ವೇವಂ ವರ್ತಯನ್ಯಾವದಾಯುಷಂ ಬ್ರಹ್ಮಲೋಕ ಮಭಿಸಂಪದ್ಯತೇ, ನಚ ಪುನರಾವರ್ತತೇ" (ಛಾಂ.ಕೊನೆಯ ಮನ್ತ್ರವು.) ಆದುದರಿಂದ ಹೀಗೆ ಹೇಳಿರುವದು ಸರ್ವಾಶ್ರಮ ಪ್ರದರ್ಶನಾರ್ಥವಾಗಿ. ಹಾಗೆಯೆ ವಾಜಸನೇಯದಲ್ಲಿ "ಅಥಭಿಕ್ಷಾಚರ್ಯಂಚರೇತ್" ಎಂದು ಸನ್ಯಾಸಾಶ್ರಮಿಯನ್ನು ಕುರಿತು ಉಪಸಂಹಾರಮಾಡಿ ಹೇಳಿರುತ್ತದೆ. ಇದನ್ನು ಮನಸ್ಸಿನಲ್ಲಿಟ್ಟು ಶ್ರೀ ವ್ಯಾಸಮಹರ್ಷಿಯು "ಮೌನವದಿತರೇಷಾಂ" ಎಂಬ ಬ್ರಹ್ಮಸೂತ್ರದಲ್ಲೂ, ಹಾಗೆಯೆ "ಅಥಮುನಿಃ" ಎಂಬ ಬೃಹದಾರಣ್ಯಕ ವಾಕ್ಯದಲ್ಲೂ (ಬೃ. ೫-೫.೧) ಮತ್ತು ಮೇಲಿನ "ಅಥ,ಕ್ಷಾಚರ್ಯಂಚರೇತ್" ಎಂಬ ವಾಜಸನೇಯ ವಾಕ್ಯದಲ್ಲೂ, ಹೇ

ಮಿಲ್ಲಾದ ವಿಡತ್ತಿಲ್ "ಅನುಕ್ತಮನ್ಯತೋಗ್ರಾಹ್ಯಮ್" ಎಙ್ಗಿರ ನ್ಯಾಯಮ್ ನಡಕ್ಕುಮ್‌ಪಡಿಯುಮ್, ನಾಲು ಆಶ್ರಮತ್ತಾಲುಮ್ ಬ್ರಹ್ಮವಿದ್ಯೈಯುಮ್ ಮೋಕ್ಷಲಾಭಮುಮ್ ಉಂಡೆನ್ರು ಶಾರೀರಕಾದಿಗಳಿಲೇ ಸಮರ್ಥಿತ್ತಾರ್ಪ್ಪೋಲೆ ಆಗಮಸಿದ್ಧಾಂತಾದಿಗಳ್ ನಾಲಿಲುಮ್ ಸಾಕ್ಷಾನ್ಮೋಕ್ಷೋಪಾಯಮುಮ್, ಮೋಕ್ಷಪ್ರಾಪ್ತಿಯುಮ್ ಉಂಡೆನ್ರುಮ್ ಶ್ರೀ ಪಾಂಚರಾತ್ರರಕ್ಷೈಯಿಲ್ಯೈಯುಮುಪಪಾದಿತ್ತೋಮ್.

---

ಸಿದ್ಧಾನ್ತ, ತಂತ್ರಾನ್ತರ ಸಿದ್ಧಾಂತವೆಂದೂ ವಿಭಾಗಿಸಲ್ಪಟ್ಟು ಇರುವಿಕೆಯನ್ನೂ (೨) ವಚನವಿರೋಧಮಿಲ್ಲಾದ ವಿಡತ್ತಿಲ್ "ಅನುಕ್ತಮನ್ಯತೋಗ್ರಾಹ್ಯಮ್" ಎಙ್ಗಿರ ನ್ಯಾಯಮ್ ನಡಕ್ಕುಮ್ ಪಡಿಯುಮ್ . ಈ ನಾಲ್ಕು ಸಿದ್ಧಾನ್ತಗಳಲ್ಲಿ ಪರಸ್ಪರ ವಚನಗಳಿಗೆ ವಿರೋಧವಿಲ್ಲದ ಸಂದರ್ಭದಲ್ಲಿ ಒಂದು ಸಿದ್ಧಾನ್ತದಲ್ಲಿ ಹೇಳಿ ಇನ್ನೊಂದರಲ್ಲಿ ಹೇಳದಿದ್ದರೆ ಅಲ್ಲಿಗೂ ಅನ್ವಯಿಸುತ್ತದೆಂದು ಸ್ವೀಕರಿಸತಕ್ಕದ್ದು" ಎಂಬ ನ್ಯಾಯದ ಪ್ರಕಾರ ನಡೆದುಕೊಳ್ಳಬೇಕಾದ ಪ್ರಕಾರವನ್ನೂ, (೩) ನಾಲು ಆಶ್ರಮತ್ತಾಲುಮ್ ಬ್ರಹ್ಮವಿದ್ಯೈಯುಮ್ ಮೋಕ್ಷಲಾಭಮುಂಡೆನ್ರು ಶಾರೀರಕಾದಿಗಳಿಲೇ ಸಮರ್ಥಿತ್ತಾರ್‌ಪ್ಪೋಲೇ - ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳಾದ ನಾಲು ಆಶ್ರಮದಲ್ಲೂ ಎಂದರೆ ನಾಲ್ಕು ಆಶ್ರಮದ ಅಧಿಕಾರಿಗಳಿಗೂ ಬ್ರಹ್ಮವಿದ್ಯೆಯೂ ಮೋಕ್ಷಪ್ರಾಪ್ತಿಯೂ ಉಂಟೆಂದು ವ್ಯಾಸಸೂತ್ರಗಳಲ್ಲಿ ಸಮರ್ಥಿಸಲ್ಪಟ್ಟೆ,ಹಾಗೆ, ಆಗಮಸಿದ್ಧಾನ್ತಾದಿಗಳ್‌ನಾಲಿಲುಮ್ - ಈ ಪಾಂಚರಾತ್ರ ಶಾಸ್ತ್ರಕ್ಕೆ ಸೇರಿದ ಆಗಮಸಿದ್ಧಾನ್ತವೇ ಮೊದಲಾದ ನಾಲ್ಕು ಸಿದ್ಧಾನ್ತಗಳಲ್ಲೂ, ಸಾಕ್ಷಾನ್ಮೋಕ್ಷೋಪಾಯಮುಮ್-ಸಾಕ್ಷಾತ್ತಾಗಿ ಮೋಕ್ಷಕ್ಕೆ ಉಪಾಯವಾದ ಭಕ್ತಿಪ್ರಪತ್ತಿಯೂ, ಮೋಕ್ಷಪ್ರಾಪ್ತಿಯೂ, ಉಂಡೆನ್ರು - ಉಂಟೆಂಬದಾಗಿ, ಶ್ರೀ ಪಾಂಚರಾತ್ರರಕ್ಷೈಯಿಲ್ಯೈ - ತಾವು ರಚಿಸಿರುವ ಶ್ರೀ ಪಾಂಚರಾತ್ರರಕ್ಷೆಯಲ್ಲಿ, ಉಪಪಾದಿತ್ತೋಮ್-ಸಮರ್ಥನೆ ಮಾಡಿ ಹೇಳಿರುವೆವು. ಈ ಮೂರರ ವಿಷಯಗಳನ್ನೂ ಸಮರ್ಥನೆಯನ್ನು ಮಾಡಿ ಹೇಳಿರುತ್ತೇವೆ ಎಂದು ಹೇಳಿರುವದರಿಂದ ಆ ಪಾಂಚರಾತ್ರ ಶಾಸ್ತ್ರವು ತಮಗೆ ಪರಮಗ್ರಾಹ್ಯವು. ನಿತ್ಯಕರ್ಮಾನುಷ್ಠಾನಗಳನ್ನು ಅವರವರುಗಳ ಆಚಾರ್ಯರುಗಳು ನಡೆಸಿಕೊಂಡು ಬಂದ ಸಂಪ್ರದಾಯರೀತ್ಯಾ ನಡೆಸತಕ್ಕದ್ದೆಂದು ಹೇಳಿದರೆ, ಈ ಶಾಸ್ತ್ರವನ್ನು ನಿರಾಕರಿಸಿದಹಾಗೆ ಹೇಗಾಯಿತು ಎಂಬ ಭಾವವು. ಈ ನಾಲ್ಕು ಸಿದ್ಧಾನ್ತದಲ್ಲೂ " ಅನುಕ್ತಮನ್ಯತೋಗ್ರಾಹ್ಯಮ್" ಎಂದು ಹೇಳಿರುವದರಿಂದ, ಉಕ್ತವಾದುವುಗಳನ್ನು ತನ್ನಿಷ್ಠಾನುಸಾರ ನಡೆಸಿ, ಸಿದ್ಧಾನ್ತ ಸಾಂಕರ್ಯವನ್ನು ಎಂದಿಗೂ ಮಾಡತಕ್ಕದ್ದಲ್ಲವೆಂದೂ, ಹಾಗೆ ಮಾಡಿದುದಾದರೆ ಪ್ರಾಯಶ್ಚಿತ್ತಕ್ಕೆ ಗುರಿಯಾಗುವನೆಂಬ ಭಾವವೂ ಸೂಚಿತವು. ನಾರದೀಯದಲ್ಲಿ "ತಂತ್ರೇಣೈಕೇನ ಕರ್ತವ್ಯಂ ಕರ್ಷಣಾದಿಷು ನಾರದ।

ಯತ್ತಂತ್ರೇಣ ಸಮಾರಬ್ಧಂ ತತ್ತಂತ್ರೇಣೈವ ಕಾರಯೇತ್ । ಅನುಕ್ತಾಂಶಾನ್ಯ ತಂತ್ರೇಷು ನಿರೀಕ್ಷ್ಯಾನ್ಯತ್ರಯೋಜಯೇತ್।ವಿಶೇಷಾಂಶ್ಚ ಮುನಿಶ್ರೇಷ್ಠ ತ್ವನ್ಯಥಾ ರಾಷ್ಟ್ರನಾಶಕೃತ್ ॥ ಎಂದು ಹೇಳಿರುತ್ತದೆ. ಒಂದು ತಂತ್ರದಲ್ಲಿ ಆರಂಭಿಸಿದ ಕಾರ್ಯವನ್ನು ಆ ತಂತ್ರದಿಂದಲೇ ಪೂರೈಸತಕ್ಕದ್ದೆಂದೂ,ತಾಂತ್ರಸಾಂಕರ್ಯ ಕೂಡದೆಂದೂ, ಒಂದರಲ್ಲಿ ಹೇಳದುದನ್ನು ಇನ್ನೊಂದರಲ್ಲಿ ಹೇಳದಿದ್ದರೆ, ಆಗ ಪರಿಶೀಲಿಸಿ ಆಗೀಗ ಆ ಭಾಗವನ್ನು ಅಂಗೀಕರಿಸತಕ್ಕದ್ದೆಂದೂ, ಹಾಗಲ್ಲದೆ ಒಂದರ ತಂತ್ರದ ಪ್ರಕ್ರಿಯೊಂದಿಗೆ ಇನ್ನೊಂದನ್ನು ನಡೆಸಿದರೆ ರಾಷ್ಟ್ರನಾಶವಾಗುವ ಪ್ರತ್ಯವಾಯವು ಪ್ರಾಪ್ತವಾಗುತ್ತದೆಂದೂ ಹೇಳಲ್ಪಟ್ಟಿತು. ಹಾಗೆಯೇ ಪಾರಮೇಶ್ವರದಲ್ಲೂ "ಶತ್ರುಸಿದ್ಧಾಂತಸಾಂಕರ್ಯಂ ನಾಚರ್ತವ್ಯಂ ಕೃತಾತ್ಮಭಿಃ । ಯದ್ಯದಿಷ್ಟತಮಂಲೋಕೇ ಪೂರ್ವಸಿದ್ಧಾ ವಿರೋಧಿತತ್ । ಪ್ರತಿಗ್ರಾಹ್ಯ ಮಥಾನ್ಯೋನ್ಯಂ ವಿರುದ್ಧಂ ಸಂತ್ಯಜೇತ್ ಬುಧಃ" ಎಂದು ಹೇಳಲ್ಪಟ್ಟಿರುತ್ತದೆ, ಇದರಭಿಪ್ರಾಯವೂ ಮೇಲಿನ ಪ್ರಮಾಣಾಭಿಪ್ರಾಯವೂ ಒಂದೇ. ಹೀಗೆಲ್ಲಾ ಶ್ರೀ ಪಾಂಚರಾತ್ರರಕ್ಷೆಯಲ್ಲಿ ಸಪ್ರಮಾಣವಾಗಿ ಸಿದ್ಧಾನ್ತಿಸಿರುತ್ತೇವೆ ಎಂದು ಹೇಳಿರುವದರಿಂದ, ಆ ನಾಲ್ಕು ವಿಧವಾದ ಪಾಂಚರಾತ್ರಶಾಸ್ತ್ರವೂ ಉಪಾದೇಯವಾದುದೇ ಎಂಬ ಭಾವವು. ಹಾಗೆಯೇ "ಸ್ವಕಂ ಕರ್ಮ ಪರಿತ್ಯಜ್ಯ ಯದನ್ಯತ್ಕುರುತೇ ದ್ವಿಜಃ । ಅಜ್ಞಾನಾ ದಥವಾ ಲೋಭಾತ್ತ್ಯಾಗೇನ ಪತಿತೋ ಭವೇತ್ । ಸ್ವಗೃಹ್ಯೇ ವಿದ್ಯಮಾನೇ ಯಃ ಪರಗೃಹ್ಯೋಕ್ತಮಾಚರೇತ್।ಭ್ರೂಣಹತ್ಯಾಸಮಂತಸ್ಯ ಸ್ವಗೃಹ್ಯಸ್ಯಾವಮಾನತಃ" ಎಂಬಲ್ಲೂ ಪ್ರೋಕ್ತವು. ತನಗೆ ಹೇಳಲ್ಪಟ್ಟ ಗೃಹಸೂತ್ರಾನುಸಾರ ನಡೆಯತಕ್ಕದ್ದು. ಅನ್ಯಥಾ ನಡೆದರೆ ದೋಷವು. ಹಾಗೆ ನಡೆದರೆ ಪ್ರಾಯಶ್ಚಿತ್ತವೂ ಉಂಟು. ಇದನ್ನೇ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. (೩) ನಾಲು ಆಶ್ರಮತ್ತಿಲುಮ್ ಬ್ರಹ್ಮವಿದ್ಯೆಯೂ ಮೋಕ್ಷಪ್ರಾಪ್ತಿಯೂ ಉಂಟೆಂದು ಶಾರೀರಕ ಸೂತ್ರದಲ್ಲಿ ಎಲ್ಲಿ ಹೇಳಿರುತ್ತದೆ ಎಂದರೆ "ಕೃತ್ಸ್ನಭಾವಾತ್ತು ಗೃಹಿಣೋಪಸಂಹಾರಃ"(ಬ್ರ.ಸೂ. ೩-೪.೪೭) ಎಂಬ ಸೂತ್ರದಲ್ಲೂ ಉಪಪಾದಿತವು. ಗೃಹಸ್ಥಾದಿ ಆಶ್ರಮಗಳಲ್ಲಿ ಬ್ರಹ್ಮವಿದ್ಯೆಯೂ ಇರುವದರಿಂದ ಗೃಹಿಣಾಂ-ಗೃಹಸ್ಥಾಶ್ರಮದ ಮೂಲಕ, ಶ್ರುತಿಯು ಉಪಸಂಹಾರ ಮಾಡಿ ಹೇಳಿತು. ಎಲ್ಲಿ ಎಂದರೆ "ಸಖಲ್ವೇವಂ ವರ್ತಯನ್ಯಾವದಾಯುಷಂ ಬ್ರಹ್ಮಲೋಕ ಮಭಿಸಂಪದ್ಯತೇ, ನಚ ಪುನರಾವರ್ತತೇ" (ಛಾಂ.ಕೊನೆಯ ಮನ್ತ್ರವು.) ಆದುದರಿಂದ ಹೀಗೆ ಹೇಳಿರುವದು ಸರ್ವಾಶ್ರಮ ಪ್ರದರ್ಶನಾರ್ಥವಾಗಿ. ಹಾಗೆಯೇ ವಾಜಸನೇಯದಲ್ಲಿ "ಅಥಭಿಕ್ಷಾಚರ್ಯಂಚರೇತ್" ಎಂದು ಸನ್ಯಾಸಾಶ್ರಮಿಯನ್ನು ಕುರಿತು ಉಪಸಂಹಾರಮಾಡಿ ಹೇಳಿರುತ್ತದೆ. ಇದನ್ನು ಮನಸ್ಸಿನಲ್ಲಿಟ್ಟು ಶ್ರೀ ವ್ಯಾಸಮಹರ್ಷಿಯು "ಮೌನವದಿತರೇಷಾಂ" ಎಂಬ ಬ್ರಹ್ಮಸೂತ್ರದಲ್ಲೂ, ಹಾಗೆಯೇ "ಅಥಮುನಿಃ" ಎಂಬ ಬೃಹದಾರಣ್ಯಕ ವಾಕ್ಯದಲ್ಲೂ (ಬೃ. ೫-೫.೧) ಮತ್ತು ಮೇಲಿನ "ಅಥಭಿಕ್ಷಾಚರ್ಯಂಚರೇತ್" ಎಂಬ ವಾಜಸನೇಯ ವಾಕ್ಯದಲ್ಲೂ, ಹೇಳಿ

**ಇಶ್ಶಾಸ್ತ್ರ (ತ್ತಿಲ್) ಙ್ಗಳಿಲ್ ವ್ಯವಸ್ಥಿತಮಾಗ ವಿಧಿತ್ತಪಡಿಯೊಳಿಯ ತನ್ತಾಮುಕ್ಕು ರುಚಿತ್ತ ಮನ್ತ್ರಙ್ಗಳೈಕ್ಕೊಂಡು ಸರ್ವಕರ್ಮಙ್ಗಳೈಯುಮ್ ಅನುಷ್ಠಿತ್ತಾಲ್ ಪ್ರಾಯಶ್ಚಿತ್ತಾದಿಗಳುಮ್ ಪರಕ್ಕಚ್ಚೊಲ್ಲಪ್ಪಟ್ಟದು.**

---

ರುವದರಿಂದ, ಗೃಹಸ್ಥಾಶ್ರಮ ಮತ್ತು ಸನ್ಯಾಸಾಶ್ರಮವನ್ನು ಕುರಿತು ಉಪಸಂಹಾರ ಮಾಡಿರುವದರಿಂದ, ಸರ್ವಾಶ್ರಮಿಗಳಿಗೂ ಬ್ರಹ್ಮವಿದ್ಯೆಯೂ, ಅದರಿಂದುಂಟಾಗುವ ಮೋಕ್ಷಪ್ರಾಪ್ತಿಯುಂಟೆಂಬುದೂ ಸಿದ್ಧವು. ಆದುದರಿಂದಲೇ ಇಲ್ಲಿ **ನಾಲು ಆಶ್ರಮತ್ತಿಲುವ ಬ್ರಹ್ಮವಿದ್ಯೆಯುಮ್ ಮೋಕ್ಷಲಾಭಮುಮುಂಡೆನ್ರು ಶಾರೀರಕಾದಿಗಳಿಲೇ ಸಮರ್ಥಿತ್ತಾರ್‌ಪೋಲೇ"** ಎಂಬ ಪ್ರಯೋಗವು. ಈ ಮೇಲಿನ ವಾಕ್ಯದ ಮೂಲಕ ಶ್ರೀ ಗುರುಗಳವರು ಪಾಂಚರಾತ್ರಶಾಸ್ತ್ರದ ನಾಲ್ಕು ಸಿದ್ಧಾನ್ತಗಳಲ್ಲೂ ಮೋಕ್ಷೋಪಾಯವೂ ತತ್ಫಲವೂ ಹೇಳಲ್ಪಟ್ಟವೆ ಎಂದೂ ತಾವು ರಚಿಸಿದ ಪಾಂಚರಾತ್ರ ರಕ್ಷೆಯಲ್ಲಿ ಚನ್ನಾಗಿ ಸಮರ್ಥಿಸಿರುವದರಿಂದ ಅದು ಪ್ರಮಾಣವೆಂಬುದರಲ್ಲಿ ಸಂದೇಹವಿಲ್ಲವು. ಆದರೆ ಕೆಲವು ನಿತ್ಯನೈಮಿತ್ತಿಕಗಳು ಇತರ ಮನ್ತ್ರಗಳಿಂದ ಬಹುಕಾಲದಿಂದ ಅನುಷ್ಠೇಯಗಳಾಗಿ, ಅದನ್ನು ನಮ್ಮ ಪೂರ್ವಾಚಾರ್ಯರುಗಳೂ ಉಪಾದೇಯವೆಂದು ಭಾವಿಸಿ ಪರಿಗ್ರಹಿಸಿ ಸಂಪ್ರದಾಯರೀತ್ಯಾ ನಮಗೂ ಅನುಷ್ಠೇಯಗಳಾದುದರಿಂದಲೇ, ಈ ಸಿದ್ಧಾನ್ತಗಳಲ್ಲಿ ಹೇಳಿರುವ ವೈಷ್ಣವ ಮನ್ತ್ರಗಳನ್ನು ನಿರಾಕರಿಸಿದೆವೆಂದು ಭಾವಿಸುವದು ಉಚಿತವಲ್ಲವು. ಅವುಗಳಲ್ಲಿ ಕೆಲವು ಮನ್ತ್ರಗಳು ತೈತ್ತರೀಯಾದಿ ಉಪನಿಷತ್ತುಗಳಲ್ಲೇ ಪ್ರೋಕ್ತವಾಗಿರುವದರಿಂದಲೇ ಅವುಗಳೂ ಗ್ರಾಹ್ಯಗಳೇ.

ಈ ಪಾಂಚರಾತ್ರ ಶಾಸ್ತ್ರದ ನಾಲ್ಕು ಸಿದ್ಧಾನ್ತಗಳಲ್ಲಿ ಒಂದರಲ್ಲಿ ಮನ್ತ್ರವು ವಿಧಿಸಿದ್ದರೆ ಅದನ್ನು ಪರಿತ್ಯಾಗಮಾಡಿ ಇನ್ನೊಂದು ಸಿದ್ಧಾನ್ತದ ವಿಧಿಯನ್ನು ತನ್ನಿಷ್ಟಾನುಸಾರ ಪರಿಗ್ರಹಿಸುವದು ಹೇಗೆ ದೋಷಾವಹವಾಗಿ ಪ್ರಾಯಶ್ಚಿತ್ತಕ್ಕೆ ಗುರಿಯಾಗುತ್ತದೋ, ಹಾಗೆಯೇ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನೂ ಗರ್ಭಾದಾನ ಸೀಮಂತ ನಾಮಕರಣ, ಚೌಲ, ಉಪನಯನಾದಿಗಳನ್ನೂ ಅವುಗಳಿಗೆ ವಿಧಿಸಲ್ಪಟ್ಟಿರುವ ಮನ್ತ್ರಗಳನ್ನು ತ್ಯಾಗಮಾಡಿ ಇಷ್ಟ ಬಂದರೀತ್ಯಾ ಇತರ ಮನ್ತ್ರಗಳ ಮೂಲಕ ನಡೆಸುವದರಲ್ಲಿ ಪ್ರತ್ಯವಾಯ ಉಂಟೆಂದೂ, ಹಾಗೆ ನಡೆಸಿದುದಕ್ಕೆ ಪ್ರಾಯಶ್ಚಿತ್ತಾದಿಗಳೂ ಚನ್ನಾಗಿ ಹೇಳಲ್ಪಟ್ಟವೆ ಎಂದು ತಿಳಿಸುತ್ತಾರೆ.—**ಇಶ್ಶಾಸ್ತ್ರಙ್ಗಳಿಲ್** - ಈ ಶಾಸ್ತ್ರಗಳಲ್ಲಿ, **ವ್ಯವಸ್ಥಿತಮಾಗ** - ನಿರ್ಣಯಿಸಲ್ಪಟ್ಟು, **ವಿಧಿತ್ತಪಡಿಯೊಳಿಯ**—ವಿಧಿಸಿರುವ ಕ್ರಮವನ್ನು ಬಿಟ್ಟು, **ತನ್ತಾಮುಕ್ಕು ರುಚಿತ್ತ ಮನ್ತ್ರಙ್ಗಳೈ ಕೊಂಡು**-ತಮ್ಮತಮ್ಮಗಳಿಗೆ ಇಷ್ಟಬಂದ ಮನ್ತ್ರಗಳ ಮೂಲಕವಾಗಿ **ಸರ್ವಕರ್ಮಙ್ಗಳೈಯುಮ್**, **ಅನುಷ್ಠಿತ್ತಾಲ್** ಎಲ್ಲಾ ಕರ್ಮಗಳನ್ನೂ ಅನುಷ್ಠಿಸಿದರೆ, **ಪ್ರಾಯಶ್ಚಿತ್ತಾದಿಗಳುಮ್**-ಪ್ರಾಯಶ್ಚಿತ್ತವೇ ಮೊದಲಾದವುಗಳು, ಅದಿ ಶಬ್ದದಿಂದ ಪ್ರತ್ಯವಾಯವು ಹೇಳಲ್ಪಟ್ಟಿತು. ಅಥವಾ

**ಅನೆಪಿನ್ನು ಮುಕ್ತನಾಮುಳವುಮ್ ಸ್ವಾಧಿಕಾರಾನುಗುಣಮಾನ ಶಾಸ್ತ್ರಮ್ ಶೊನ್ನ ಕಟ್ಟಳೈಯನ್ರಿಕ್ಕೇ ಕೈಂಕರ್ಯಂ ಪಣ್ಣವಿರಗಿಲ್ಲೈ,**

---

ಸ್ವಸೂತ್ರದಲ್ಲಿ ಹೇಳಿರುವ ಮೇರಿಗೆ ಪುನಃ ಕರ್ಮಾನುಷ್ಠಾನವು ಹೇಳಲ್ಪಟ್ಟಿತೆಂದು ಭಾವಿಸಬಹುದು. **ಪರಕ್ಕಚ್ಚೊಲ್ಲಪಟ್ಟದು** - ಚನ್ನಾಗಿ ವಿಸ್ತರಿಸಿ ಹೇಳಲ್ಪಟ್ಟಿರುತ್ತದೆ. ಆದುದರಿಂದ ನಮಗೆ ಮನಸ್ಸು ಬಂದಹಾಗೆ ಯಾವ ಕೈಂಕರ್ಯವನ್ನಾಗಲಿ ಅನುಷ್ಠಿಸಲು ನಮಗೆ ಸ್ವಾತಂತ್ರ್ಯವಿಲ್ಲವು. ಶಾಸ್ತ್ರದಲ್ಲಿ ಹೇಳಿರುವ ರೀತ್ಯಾ ನಡೆಸತಕ್ಕದ್ದಾಗಿರುತ್ತದೆ. ಅನ್ಯಥಾ ನಡೆಸಿದುದಾದರೆ ಪ್ರತ್ಯವಾಯವು, ಪ್ರಾಯಶ್ಚಿತ್ತವನ್ನೂ ಆಚರಿಸಬೇಕಾಗುತ್ತದೆ. ಆದುದರಿಂದ ಶ್ರೀ ಕೃಷ್ಣಭಗವಾನ್ ರವರು ಅರ್ಜುನನಿಗೆ "ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ" ಎಂದು ಉಪದೇಶಿಸಿದರು. ಇದು ಮಾಡತಕ್ಕದ್ದು, ಇದು ಮಾಡತಕ್ಕದ್ದಲ್ಲವು. ಎಂಬ ನಿರ್ಣಯದಲ್ಲಿ ನಿನಗೆ ಶಾಸ್ತ್ರವೇ ಪ್ರಮಾಣವು ಎಂದು ಉಪದೇಶಿಸಿದರು. ಇಲ್ಲಿ ಕಾರ್ಯವ್ಯವಸ್ಥಿತಿಯಲ್ಲಿ ಶಾಸ್ತ್ರವೇ ಪ್ರಮಾಣವೆಂದು ಹೇಳಿರುವದರಲ್ಲಿ ಅನುಷ್ಠಾನಕ್ರಮದಲ್ಲೂ ಶಾಸ್ತ್ರವೇ ಪ್ರಮಾಣವೆಂದು ಹೇಳಿದಂತಾಯಿತು. ಯದ್ಯಪಿ ಶ್ರೀ ಕೃಷ್ಣಭಗವಾನ್ ರವರು ಪರಮಪುರುಷರಾದುದರಿಂದ ಶಾಸ್ತ್ರವಶ್ಯತೆ ಇಲ್ಲದಿದ್ದರೂ, ಯಾವಾಗ ಮನುಷ್ಯನಾಗಿ ಅವತರಿಸಿದರೋ ಆಗ ಮನುಷ್ಯನಿಗಿರುವ ಶಾಸ್ತ್ರವಶ್ಯತೆಯ ಪ್ರಕಾರ ತಾವೂ ನಡೆಯುತಕ್ಕವರೆಂದು ದುರ್ಯೋಧನನ ಎದುರಿಗೆ ಶಾಸ್ತ್ರಾತಿಕ್ರಮಣವನ್ನು ಎಂದಿಗೂ ಮಾಡುವನಲ್ಲವೆಂದು ಶಪಥವನ್ನು ಮಾಡಿರುತ್ತಾರೆ—"**ನಾಹಂ ಕಾಮಾನ್ನಸಂರಂಭಾನ್ನ ದ್ವೇಷಾನ್ನಾರ್ಥಕಾರಣಾತ್ । ನ ಹೇತುವಾದಾಲ್ಲೋಭಾದಾ ಧರ್ಮಂ ಜಹ್ಯಾಂ ಕಥಂಚನ**" (                ) ನೆಯ ಘಟವನ್ನು ನೋಡಿ. ಹೀಗೆ ಸರ್ವಸ್ವತಂತ್ರನಾದ ಸರ್ವೇಶ್ವರನೇ ಮನುಷ್ಯಾವತಾರಿಯಾದಾಗ ಮನುಷ್ಯರಂತೆ ಶಾಸ್ತ್ರಾತಿಕ್ರಮಣವನ್ನು ಎಂದಿಗೂ ನಡೆಸದಿದ್ದರೆ, ಮನುಷ್ಯರಾಗಿ ಕರ್ಮವಶ್ಯ ಮತ್ತು ಶಾಸ್ತ್ರವಶ್ಯರಾದ ನಾವು, ಶಾಸ್ತ್ರಾತಿಕ್ರಮಣವನ್ನು ಮಾಡಬಹುದೋ ? ಆದುದರಿಂದ ಶರೀರವಿರುವವರೆಗೂ ಆಯಾ ಶರೀರ ಧಾರಿಗಳಿಗೆ ವಿಧಿಸಲ್ಪಟ್ಟ ಶಾಸ್ತ್ರಾನುಗುಣವಾಗಿ ನಡೆಯತಕ್ಕದ್ದು ಆವಶ್ಯಕವಾಗಿ, ಹಾಗೆ ನಡೆಯದೇ ಇದ್ದರೆ ಪ್ರತ್ಯವಾಯ ಉಂಟಾದುದರಿಂದ **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ತಮಗೆ ವಿಧಿಸಲ್ಪಟ್ಟು ಯಾವಜ್ಜೀವವೂ ಅನುಷ್ಠಿಸಬೇಕಾದ ನಿತ್ಯನೈಮಿತ್ತಿಕರೂಪಗಳಾದ ಆಜ್ಞಾಕೈಂಕರ್ಯಗಳನ್ನೂ ಶಾಸ್ತ್ರವಶ್ಯರಾಗಿ ಶಾಸ್ತ್ರಗಳಲ್ಲಿ ವಿಧಿಸಿರುವ ಮೇರಿಗೆ ಪ್ರಪನ್ನರೂ ಸಹ ಅನುಷ್ಠಿಸಿಯೇತೀರಬೇಕೇ ವಿನಾ ತನಗೆ ಇಷ್ಟಬಂದಂತೇ ನಡೆಸಲು ಮಾರ್ಗವಿಲ್ಲವು ; ಮತ್ತು ತನ್ನ ಮನಬಂದಂತೆ ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವುಗಳನ್ನು ಪರಿತ್ಯಾಗಮಾಡಲು ಸಾಧ್ಯವಿಲ್ಲವೆಂದೂ, ಮುಂದಿನ ಎರಡು ವಾಕ್ಯಗಳ ಮೂಲಕ ಪೂರ್ವಪಕ್ಷಿಗಳಿಗೆ ಸಮಾಧಾನವನ್ನು ಹೇಳಿ ಸಿದ್ಧಾಂತಿಸಿರುತ್ತಾರೆ.

**ಇಪ್ಪಡಿ** ಪ್ರಪನ್ನನುಕ್ಕುಮ್ ಶಾಸ್ತ್ರವಶ್ಯನಾಯ್ ಶಾಸ್ತ್ರೋಕ್ತ ಕೈಂಕರ್ಯಮೇ ಪಣ್ಣವೇಣ್ಡುಗೈಯಾಲೇ (೧)ವಿಧಿನಿಷೇದ ಲಂಘನ ಪಕ್ಷಮುಮ್, (೨) ವಿಹಿತ ನಿಷಿದ್ಧತ್ಯಾಗಪಕ್ಷಮುಮ್ (೩) ವರ್ಣಾಶ್ರಮಧರ್ಮಙ್ಗಳ್ ಔಪಾಧಿಕಙ್ಗಳಾಗೈ

---

**ಅನಪಿನ್ನು** - ಶಾಸ್ತ್ರವಶ್ಯತೆಯು ಆವಶ್ಯಕವೆಂದಾದನಂತರ, **ಮುಕ್ತನಾಮಳವುಮ್** – ಈ ಪ್ರಪನ್ನನು ದೇಹತ್ಯಾಗಮಾಡಿ ಮುಕ್ತಿಯನ್ನು ಹೊಂದುವವರೆಗೂ ಕೃತಕೃತ್ಯನಿಗೆ ಮುಕ್ತಿಯು ಸಿದ್ಧವಾದುದರಿಂದ ಹಾಗೆ ಹೇಳಲ್ಪಟ್ಟಿತು ; **ಸ್ವಾಧಿಕಾರಾನುಗುಣಮಾಗ** - ತನ್ನ ಅಧಿಕಾರಕ್ಕೆ ಅನುಗುಣವಾಗಿ ತನ್ನ ವರ್ಣಾಶ್ರಮದಿಂದುಂಟಾದ ಅಧಿಕಾರಕ್ಕೆ, ತನ್ನ ಶಕ್ತ್ಯಶಕ್ತಿಗಳಿಗನುಗುಣವಾಗಿ ಉಂಟಾಗುವ ಉಪಾಯಾನುಷ್ಠಾನವೇನು, ಉತ್ತರಕೃತ್ಯಕ್ಕನುಗುಣವಾಗಿ, **ಶಾಸ್ತ್ರಮ್ ಶೊನ್ನ ಕಟ್ಟಳೈಯನ್ನಿಕ್ಕೇ** - ಶಾಸ್ತ್ರದಲ್ಲಿ ವಿಧಿಸಿರುವ ಪ್ರಕ್ರಿಯೆಗೆ ವಿರೋಧವಾಗಿ, **ಕೈಂಕರ್ಯಮ್ ಪಣ್ಣುವ**-ನಿತ್ಯಕರ್ಮಗಳನ್ನು ಕೈಂಕರ್ಯರೂಪವಾಗಿ ಮಾಡುವದಕ್ಕೆ, **ವಿರಗಿಲ್ಲೈ** - ಮಾರ್ಗವಿಲ್ಲವು, ಎಂದರೆ ಶಾಸ್ತ್ರವನ್ನು ತಿರಸ್ಕರಿಸಿ ಅನುಷ್ಠಿಸುವದಕ್ಕೆ ಸಾಧ್ಯವಿಲ್ಲವೆಂಬ ಭಾವವು.

ಆದುದರಿಂದ ಪ್ರಪನ್ನನೂ ಕೂಡ ಶಾಸ್ತ್ರವಶ್ಯನಾಯ್ - ಶಾಸ್ತ್ರದಲ್ಲಿ ಹೇಳಿರುವ ಗೆರೆಯನ್ನು ಮೀರದೆ, ಈತನಿಗೆ ದೇಹಾವಸಾನದವರೆಗೂ ಮಾಡಬೇಕಾದ ಕೈಂಕರ್ಯಗಳನ್ನೆಲ್ಲಾ, ಫಲಕರ್ತೃತ್ವ ಮಮತೆಗಳನ್ನು ತ್ಯಾಗಮಾಡಿ, ಭಗವದರ್ಪಣ ಬುದ್ಧಿಯಿಂದ ನಡೆಸಬೇಕಾದುದು ಸಾಂಪ್ರದಾಯಿಕವಾಗಿ ಬಂದಿರುವದರಿಂದ ನಡೆಸತಕ್ಕದ್ದೆಂದು ನಿಗಮನದಲ್ಲಿ ಹೇಳಿ, ಅದಕ್ಕೆ ವಿರುದ್ಧವಾದ ಅಭಿಪ್ರಾಯಗಳೆಲ್ಲಾ ಶಾಸ್ತ್ರ ಮತ್ತು ಸಂಪ್ರದಾಯ ವಿರುದ್ಧವಾದವುಗಳಾದುದರಿಂದ ಪ್ರಮಾಣ ಶರಣರಿಗೆ ಗ್ರಾಹ್ಯವಲ್ಲವೆಂದು ಹೇಳುತ್ತಾರೆ—**ಇಪ್ಪಡಿ** - ಮೇಲೆ ಉಪಪಾದಿಸಿದ ರೀತಿಯಲ್ಲಿ, **ಪ್ರಪನ್ನನಿಗೂ, ಶಾಸ್ತ್ರವಶ್ಯನಾಯ್** ಶಾಸ್ತ್ರಕ್ಕೆ ಅಧೀನನಾಗಿ, ಶಾಸ್ತ್ರೋಕ್ತ**ಕೈಂಕರ್ಯಮೇ ಪಣ್ಣವೇಣ್ಡುಗೈಯಾಲೇ** ಶಾಸ್ತ್ರದಲ್ಲಿ ವಿಧಿಸಿರುವ ಕೈಂಕರ್ಯವನ್ನು ಮಾಡುವದೇ ಕರ್ತವ್ಯವಾದುದರಿಂದ (೧) **ವಿಧಿನಿಷೇಧ ಲಂಘನ ಪಕ್ಷಮುಮ್** - ಪ್ರಪನ್ನನು ಶಾಸ್ತ್ರವಶ್ಯನಲ್ಲವು ; ಏಕೆಂದರೆ **ಕೃತಕೃತ್ಯನು**, ಅಂತವನಿಗೆ ವಿಧಿ ನಿಷೇಧವಾಕ್ಯಗಳು ಬಂಧಿಸುವದಿಲ್ಲವು ; ಆದುದರಿಂದ ಪ್ರಪನ್ನನು ಅವುಗಳನ್ನು **ಅತಿಕ್ರಮಿಸಿ ಇಷ್ಟಬಂದಹಾಗೆ** ನಡೆಯಬಹುದೆಂಬ ಪೂರ್ವಪಕ್ಷಾಭಿಪ್ರಾಯವೂ ಇದರಿಂದ **ಕೃತ್ಯಾಕರಣ ಅಕೃತ್ಯಕರಣ** ಎಂದರೆ ಮಾಡಬೇಕಾದುದನ್ನು ಬಿಡುವದು, ಮಾಡಬೇಡವೆಂದು ಹೇಳಿದುದನ್ನು ಮಾಡುವದು. ಹೇಳಲ್ಪಟ್ಟವು. ಎರಡೂ **ದೋಷಾವಹವು. ಶ್ರೀ ಯತಿವರ್ಯರೇ ಈ ದೋಷಗಳೇನಾದರೂ ಇದ್ದರೆ ಕ್ಷಮಸ್ವ** ಎಂದು ಶರಣಾಗತಿ ಗದ್ಯದಲ್ಲಿ **ಪ್ರಾರ್ಥಿಸಿರುತ್ತಾರೆ.** (೨) **ವಿಹಿತ ನಿಷಿದ್ಧ ತ್ಯಾಗಪಕ್ಷಮುಮ್ - ವಿಹಿತತ್ಯಾಗ ಯಾವುದೆಂದರೆ** ನಿತ್ಯನೈಮಿತ್ತಿಕಗಳು **ಕೃತಕೃತ್ಯನಿಗೆ ಬೇಕಿಲ್ಲವೆಂದು ಅವುಗಳ**

**ಯಾಲೇ ಸ್ವರೂಪಜ್ಞಾನಂ ಪಿರನ್ದವನುಕ್ಕು ತ್ಯಾಜ್ಯಙ್ಗಳ್ ಎಙ್ಗಿರಪಕ್ಷಮುಮ್ (೪) ಇವೈ ಶೆಯ್ಯವುಮಾಮ್ ತವಿರವುಮಾಮ್ ಎಙ್ಗಿರಪಕ್ಷಮುಮ್, (೫) ಇವೈ ತವಿರನ್ದಾಲುಮ್ ಉಕಪ್ಪಿಳಕ್ಕುಮತ್ತನ್ನೈಯೇ ವೇರೋರು ಪ್ರತ್ಯವಾಯ ಮಿಲ್ಲೈ ಎಙ್ಗಿರಪಕ್ಷಮುಮ್, (೬) ಇವೈ ಅನುಷ್ಠಿಯಾದಪೋದು ಲೋಕ**

---

ತ್ಯಾಗವು, ನಿಷಿದ್ಧದ ತ್ಯಾಗವು, ಅಸತ್ಯವನ್ನು ಹೇಳಬೇಡ ಪರಸ್ವತ್ತನ್ನು ಅಪಹರಿಸಬೇಡ, ಇತರರನ್ನು ಹಿಂಸಿಸಬೇಡ ಎಂದು ನಿಷೇಧಿಸಿ ಹೇಳಿರುವದರ ತ್ಯಾಗವು; ಎಂದರೆ ಸುಳ್ಳು ಹೇಳುವದು ಪರಸ್ವತ್ತನ್ನು ಅಪಹರಿಸುವದು ಇತ್ಯಾದಿ ಅಪರಾಧಗಳು ಕೃತಕೃತ್ಯನಿಗೆ ಅಂಟುವದಿಲ್ಲವೆಂದು ಭಾವಿಸಿ, ಅಂತಹ ಅಪರಾಧಗಳನ್ನು ಮನಃಪೂರ್ವಕವಾಗಿ ಮಾಡೋಣವು; (೩) **ವರ್ಣಾಶ್ರಮಧರ್ಮಗಳು ಔಪಾಧಿಕಙ್ಗಳಾಗೈಯಾಲೇ** - ಉಪಾಧಿಯ ಮೂಲಕ ಉಂಟಾಗುವವು; ಆದುದರಿಂದ, ಇಲ್ಲಿ ಉಪಾಧಿ ಯಾವುದು ಎಂದರೆ ಪ್ರಾರಬ್ಧ ಕರ್ಮಗಳು, ಪ್ರಾರಬ್ಧ ಕರ್ಮಾನುಭವಗಳಿಗಾಗಿ ಜನ್ಮ ಮತ್ತು ಶರೀರಗಳು, ಆ ಶರೀರಗಳಿಗೆ ವಿಧಿಸಲ್ಪಟ್ಟ ವರ್ಣಾಶ್ರಮಧರ್ಮಗಳು, **ಸ್ವರೂಪಜ್ಞಾನಪಿರನ್ದವುನಕ್ಕೇ** - ತನ್ನ ಸ್ವರೂಪ ಮತ್ತು ಪರಮಾತ್ಮಸ್ವರೂಪಗಳ ಜ್ಞಾನವು ಉಂಟಾಗಿರುವವರಿಗೆ **ತ್ಯಾಜ್ಯಂಗಳ್ ಎಙ್ಗಿರಪಕ್ಷಮುಮ್** - ಬಿಡಲು ಯೋಗ್ಯವಾದುವು; ಏಕೆಂದರೆ ಈ ವರ್ಣಾಶ್ರಮ ಧರ್ಮಗಳೆಲ್ಲಾ ಈತನನ್ನು ಪವಿತ್ರೀಕರಿಸಿ ಸ್ವರೂಪಜ್ಞಾನವನ್ನುಂಟುಮಾಡುವದಕ್ಕಾಗಿ ಅವುಗಳ ಅನುಷ್ಠಾನವು. ಈ ಸ್ವರೂಪಜ್ಞಾನ ಉಂಟಾದ ನಂತರ ಅವುಗಳ ಆವಶ್ಯಕತೆ ಇಲ್ಲವಾದುದರಿಂದ ತ್ಯಾಜ್ಯಗಳು ಎಂದು ಹೇಳುವ ಪಕ್ಷವೂ, (೪) **ಇವೈ ಶೆಯ್ಯವುಮಾಮ್ ತವಿರವುಮಾಮ್ ಎಙ್ಗಿರ ಪಕ್ಷಮುಮ್** - ಕೆಲವು ಸಾಮಾನ್ಯ ಧರ್ಮಗಳಾದ ಎಲ್ಲರಿಗೂ ಅನ್ವಯಿಸುವ ಸತ್ಯಂವದ ಇತ್ಯಾದಿಗಳನ್ನೇನೋ ಮಾಡತಕ್ಕವು. ವರ್ಣಾಶ್ರಮಧರ್ಮಗಳಾದರೋ ಸಾರ್ವತ್ರಿಕವಾಗಿ ಬೇಕಾದವಲ್ಲವಾದುದರಿಂದ ಅವುಗಳ ಅನುಷ್ಠಾನವನ್ನು ತ್ಯಾಗ ಮಾಡಬಹುದು ಎಂಬ ಪಕ್ಷವೂ; ಅಥವಾ **ಇವೈ** - ಈ ವರ್ಣಾಶ್ರಮಧರ್ಮಗಳನ್ನು **ಶಯ್ಯವುಮಾಮ್ ತವಿರಮಾಮ್ ಎಙ್ಗಿರಪಕ್ಷಮುಮ್** - ಮಾಡಿದರೆ ಮಾಡಬಹುದು, ಬಿಟ್ಟರೂ ಬಿಡಬಹುದು, ಎಂಬ ಅಭಿಪ್ರಾಯವೂ; ಹಾಗೆಂದರೆ ಮಾಡಿದರೇನೂ ಪ್ರಯೋಜನವಿಲ್ಲವು, ಬಿಟ್ಟರೂ ಏನೂ ಪ್ರತ್ಯವಾಯವೂ ಇಲ್ಲವು ಎಂಬ ವಾದವೂ ಎಂಬ ಭಾವವು; (೫) **ಇವೈ ತವಿರನ್ದಾಲುಮ್** - ಈ ನಿತ್ಯನೈಮಿತ್ತಿಕ ಕರ್ಮಾನುಷ್ಠಾನಗಳನ್ನು ಪರಿತ್ಯಾಗಮಾಡಿದರೂ, **ಉಕಪ್ಪಿಳಕ್ಕು ಮತ್ತನ್ನೈಯೇ** ಭಗವಂತನ ಪ್ರೀತಿ ಇಲ್ಲದೆ ಹೋಗುತ್ತದೆ ಅಷ್ಟು ಮಾತ್ರವೇ ವಿನಾ, **ವೇರೋರು ಪ್ರತ್ಯವಾಯಮ್ ಇಲ್ಲೈ ಎಙ್ಗಿರಪಕ್ಷಮುಮ್** - ಅದಲ್ಲದೆ ಇನ್ನು ಯಾವ ಪ್ರತ್ಯವಾಯವೂ ಇಲ್ಲವೆಂಬುವ ಪಕ್ಷವೂ ಎಂದರೆ ಭಗವಂತನು ಎಂದಿಗೂ ಈ ಪ್ರಪನ್ನನನ್ನು ನಿತ್ಯನೈಮಿತ್ತಿಕಗಳನ್ನು ಅನುಷ್ಠಿಸದೇ ಇರುವದರಿಂದ ನಿಗ್ರಹಿಸುವದಿಲ್ಲವು.

**ವಿರೋಧಮಾತ್ರಮೇ ಪ್ರತ್ಯವಾಯ ಮೆಞ್ಗಿರಪಕ್ಷಮುಮ್, (೭) ಮತ್ತುಮ್ ಇಪ್ಪಡ್ಯೈ ಕಳಿಲುಳ್ಳ ಪಕ್ಷಙ್ಗಳೆಲ್ಲಾಮ್ ಸಮ್ಯಙ್ನ್ಯಾಯಾನುಗೃಹಿತ ಶಾಸ್ತ್ರ ಸಂಪ್ರದಾಯ ವಿರುದ್ಧಙ್ಗಳಾನಪಡಿಯಾಲೇ ಸತ್ಪಸ್ಥರ್ಕ್ಕು ಅನುಪಾದೇಯಙ್ಗಳ್,**

---

ಎಂಬ ಪಕ್ಷವೂ ಎಂಬ ಭಾವವು. (೭) ಇವ್ವೈ - ಈ ನಿತ್ಯನೈಮಿತ್ತಿಕ ವರ್ಣಾಶ್ರಮ ಧರ್ಮಗಳನ್ನು **ಅನುಷ್ಠಿಯಾದಪೋದು**-ಅನುಷ್ಠಿಸದೇ ಹೋದಸಂದರ್ಭದಲ್ಲಿ,**ಲೋಕ ವಿರುದ್ಧಮಾತ್ರಮೇ ಪ್ರತ್ಯವಾಯುಮ್** - ಶಿಷ್ಟಮಂಡಲಿಗೆ ವಿರುದ್ಧವಾಗೋಣ ಮಾತ್ರವೇ ಪ್ರತ್ಯವಾಯವು, ಎಂದರೆ ಅವರುಗಳ ಅಭಿಮಾನವಿಲ್ಲದೆ ಅವರುಗಳು ನಿಂದಿಸೋಣ ಮಾತ್ರವೇ ಪ್ರತ್ಯವಾಯವು ಎಂಬ ಪಕ್ಷವೂ, **ಮತ್ತುಮ್** - ಇಷ್ಟು ಮಾತ್ರವೇ ಅಲ್ಲದೆ ಇನ್ನೂ, **ಇಪ್ಪಡ್ಯೈ ಕಳಿಲುಳ್ಳ ಪಕ್ಷಂಗಳೆಲ್ಲಾಮ್**-ಹೀಗೆ ಇವೇ ಮೊದಲಾದ ಅವಾಂತರ ಭೇದಗಳುಳ್ಳ ಪೂರ್ವಪಕ್ಷಗಳೆಲ್ಲಾ, ಇವುಗಳು ಯಾವುವೆಂದರೆ ಆವಶ್ಯಕಗಳಾಗಿ ಅನುಷ್ಠಿಸಬೇಕೆಂಬ ವಿಧಿ ಇರುವ ನಿತ್ಯನೈಮಿತ್ತಿಕಗಳಲ್ಲಿ, ಕೆಲವು ಮಾತ್ರ ಅಗತ್ಯವಾಗಿ ಮಾಡತಕ್ಕವು ; ಮಿಕ್ಕವು ಅನುಷ್ಠಿಸಬೇಕಾಗಿಲ್ಲವು ; ಎಂಬ ಪಕ್ಷವು ; ಹೇಗೆಂದರೆ ಸಂಕ್ರಮಣಗಳಲ್ಲಿ ನಾಲ್ಕು ಮಾತ್ರವೇ ಅನುಷ್ಠಿಸತಕ್ಕವು, ಮಿಕ್ಕವುಗಳನ್ನು ಅನುಷ್ಠಿಸುವ ಆವಶ್ಯಕವಿಲ್ಲವು ; ಶ್ರವಣದ್ವಾದಶಿಯನ್ನು ಅನುಷ್ಠಿಸಬೇಕಾಗಿಲ್ಲವು, ವಿವಾಹವನ್ನು ಐದು ದಿನ ನಡೆಸಬೇಕಾಗಿಲ್ಲವು, ಒಂದೇ ದಿನದಲ್ಲೇ ಎಲ್ಲವನ್ನೂ ನಡೆಸಬಹುದು, ಕನ್ಯಾಮಾಸದ ಪಿತೃಪಕ್ಷವನ್ನು ಶ್ರಾದ್ಧ ರೂಪದಲ್ಲಿ ಮಾಡಬೇಕಾದುದಿಲ್ಲವು, ಬ್ರಾಹ್ಮಣರಿಗೆ ಕಾಲು ತೊಳದು ಅನ್ನ ಹಾಕಿದರೆ ಸಾಕು. ಮತ್ತು ಗರ್ಭಾದಾನ, ಸೀಮಂತ, ನಾಮಕರಣಾದಿ ಸಂಸ್ಕಾರ ಗಳೆಲ್ಲಾ ಅನಾವಶ್ಯಕಗಳೆಂಬ ಪಕ್ಷಗಳು, ಇತ್ಯಾದಿಗಳೆಲ್ಲಾ ಈ ಆದಿಶಬ್ದದಿಂದ ಹೇಳಲ್ಪಟ್ಟವು. **ಸಮ್ಯಙ್ನ್ಯಾಯಾನುಗೃಹೀತ ಶಾಸ್ತ್ರಸಂಪ್ರದಾಯ ವಿರುದ್ಧಙ್ಗಳಾನ ಪಡಿಯಾಲೇ** – **ಸತ್**ತರ್ಕದಿಂದ ಅನುಗೃಹೀತವಾದ ಶಾಸ್ತ್ರವಿಧಿಗೂ ತದನುಗುಣವಾಗಿ ಆಚಾರ್ಯರುಗಳ ಅನುಷ್ಠಾನಕ್ಕೂ ವಿರುದ್ಧಗಳಾದ ಪ್ರಯುಕ್ತ **ಸತ್ಪಸ್ಥರ್ಕ್ಕುಮ್** - ಸತ್ಪಮಾರ್ಗದಲ್ಲಿರುವವರಿಗೂ ಸಹ **ಅನುಪಾದೇಯಙ್ಗಳ್** - ಅವಲಂಬಿಸಲು ಯೋಗ್ಯವಾದವುಗಳಲ್ಲವು.

ಶಾಸ್ತ್ರವು ವಿಧಿಸಿರುವ ಕರ್ಮಗಳಲ್ಲಿ ಕೆಲವು ಮಾತ್ರ ಅನುಷ್ಠಿಸತಕ್ಕವು, ಕೆಲವು ಬೇಕಾಗಿಲ್ಲವೆಂಬ ಪಕ್ಷವನ್ನು ಉದಾಹರಣೆಯ ಮೂಲಕ ಉಪಪಾದಿಸಿ ಖಂಡಿಸಿ, ಮಾಡಬೇಕಾಗಿ ವಿಧಿಸಿರುವವುಗಳನ್ನೆಲ್ಲಾ ತನ್ನ ತನ್ನ ವರ್ಣಾಶ್ರಮರೀತ್ಯಾ ಮತ್ತು ತನ್ನ ತನ್ನ ಗೃಹ್ಯದಲ್ಲಿ ವಿಧಿಸಿರುವ ಕರ್ಮಗಳನ್ನೆಲ್ಲಾ ಮಾಡಿಯೇ ತೀರಬೇಕೆಂದು ಉಪದೇಶಿಸುತ್ತಾರೆ. **ಸನ್ಯಾಸಾಶ್ರಮಸ್ಥರ್ಕ್ಕು** - ಸನ್ಯಾಸಾಶ್ರಮದಲ್ಲಿ ಇರುವವರಿಗೆ **ಪಣ್ಡುಳವೈ** - ಹಿಂದೆ ಎಂದರೆ ಹಿಂದಿನ ಗೃಹಸ್ಥಾಶ್ರಮದಲ್ಲಿ ಮಾಡುತ್ತಿದ್ದ. **ಶಿಲ ವತ್ತೈ** – ಕೆಲವು ನಿತ್ಯ ಕರ್ಮಗಳನ್ನು, **ನಿಷೇಧಿತ್ತು** - ನಿಷೇಧಿಸಿ ಹೇಳಿ, **ಔಪಾ**

**ಸನ್ನ್ಯಾಸಾಶ್ರಮಸ್ಥರ್ಕ್ಕು ಪಣ್ಣುಳ್ಳವೈ ಶಿಲವತ್ತ್ರೈ ನಿಷೇಧಿತ್ತು, ಪುದಿಶಾಕ ಶಿಲವತ್ತೈ ವಿಧಿಕ್ಕುಮಾಪ್ಪೋಲೇ ಭಾಗವತತ್ವಮಡಿಯಾಗ ಚ್ಚಿಲವತ್ತೈ ನಿಷೇಧಿತ್ತು ಚಿಲವತ್ತೈ ಅಪೂರ್ವಮಾಗ ವಿಧಿತ್ತಾಲುಮ್ (೧) "ಸಂಧ್ಯಾ ಹೀನೋಽಶುಚಿರ್ನಿತ್ಯ ಮನರ್ಹಸ್ಸರ್ವಕರ್ಮಸು" ಇತ್ಯಾದಿಗಳಾಲೇ ಅವಶ್ಯಕರ್ತ ವ್ಯಂಗಳಾಗ ಚ್ಚೊಲ್ಲಪ್ಪಟ್ಟ ಕರ್ಮಙ್ಗಳೈ ವಿಡಪ್ಪೊಣ್ಣಾದು.**

---

ಸನ, ಪಂಚಮಹಾ ಯಜ್ಞಾದಿಗಳಿಂದ ಕೂಡಿದ ವೈಶ್ವದೇವ, ಸ್ವಯಂಪಾಕ, ಇವು ಗಳನ್ನು ನಿಷೇಧಿಸಿ ಎಂಬ ಭಾವವು, **ಪುದಿಶಾಕ** - ಹೊಸದಾಗಿ, **ಶಿಲವತ್ತೈ ವಿಧಿಕ್ಕು ಮಾಪ್ಪೋಲೇ** - ಕೆಲವನ್ನು ವಿಧಿಸಿರುವ ಹಾಗೆ, ಭಿಕ್ಷಾಚರಣೆ, ಪರ್ವಕಾಲ ಮುಂಡನ ಮೊದಲಾದವುಗಳು ಇಲ್ಲಿ ಸೂಚಿತವು, ಹಾಗೆಯೇ **ಭಾಗವತತ್ವಮಡಿಯಾಗ** - ಈತನು ಈಗ ಪ್ರಪನ್ನನಾಗಿ ಭಾಗವತನಾಗಿರುವದರಮೂಲಕವಾಗಿ, **ಶಿಲವತ್ತೈ ನಿಷೇಧಿಪ್ಪು** - ಅನ್ಯದೇವತಾಲಯ ಪ್ರವೇಶಾದಿಗಳನ್ನು ಮತ್ತು ಕಾಮ್ಯಕರ್ಮಗಳೇ ಮೊದಲಾದವನ್ನು ನಿಷೇಧಿಸಿ, ಚಿಲವತ್ತೈ **ಅಪೂರ್ವಮಾಗ ವಿಧಿತ್ತಾಲುಮ್** - ಕೆಲವುಗಳನ್ನು ಹೊಸದಾಗಿ ವಿಧಿಸಿದ್ದರೂ ಹೇಗೆಂದರೆ ಆಚಾರ್ಯರುಗಳ ತನಿಯ ಗಳೊಂದಿಗೆ ರಹಸ್ಯತ್ರಯಗಳ ಜಪ ಮೊದಲಾದವುಗಳು ಇಲ್ಲಿ ಸೂಚಿಸಲ್ಪಟ್ಟವು. (೧) ಸಂಧ್ಯಾಹೀನಃ - ಮೂರು ಸಂಧಿಗಳಲ್ಲೂ ಸಂಧ್ಯಾವಂದನ ಮಾಧ್ಯಾಹ್ನಿಕ ಗಳನ್ನು ಅನುಷ್ಠಿಸದಿರುವವನು. **ನಿತ್ಯಂ** – ಯಾವಾಗಲೂ ಸ್ನಾನಮಾಡಲಿ, ಮಾಡ ದಿರಲಿ ಯಾವಾಗಲೂ, **ಅಶುಚಿಃ** - ಶುದ್ಧನಲ್ಲವು, **ಸರ್ವಕರ್ಮಸು** - ಸರ್ವ ಕರ್ಮಗಳಲ್ಲೂ ಎಂದರೆ ಎಲ್ಲಾ ಕರ್ಮಾನುಷ್ಠಾನಕ್ಕೂ ಅನರ್ಹನು" **ಇತ್ಯಾದಿಗಳಾಲೇ** - ಇವೇ ಮೊದ ಲಾದ ಶಾಸ್ತ್ರ ವಿಧಗಳಿಂದ, **ಅವಶ್ಯಕರ್ತವ್ಯಙ್ಗಳಾಗ** - ಅವಶ್ಯಮಾಡಬೇಕಾದವು ಗಳೆಂದು, **ಶೊಲ್ಲಪ್ಪಟ್ಟ** - ಹೇಳಲ್ಪಟ್ಟ, **ಕರ್ಮಙ್ಗಳೈ**-ಕರ್ಮಗಳನ್ನು, **ವಿಡಪ್ಪೊಣ್ಣಾದು**- ಬಿಡಲು ಸಾಧ್ಯವಿಲ್ಲವು. ಇಲ್ಲಿ ಸಂಧ್ಯಾವಂದನೆಯನ್ನು ಬಿಡತಕ್ಕದ್ದಲ್ಲವೆಂದು ಹೇಳಿ ದುದು ಬ್ರಹ್ಮಯಜ್ಞಾದಿ ಇತರ ನಿತ್ಯನೈಮಿತ್ತಿಕ ಕರ್ಮಗಳನ್ನಾದರೂ ಬಿಡಬಹುದು; ಸಂಧ್ಯಾವಂದನೆಗಳನ್ನು ಬಿಡತಕ್ಕದ್ದಲ್ಲವೆಂಬ ಅರ್ಥವಲ್ಲವು. ಸಂಧ್ಯಾವಂದನೆಯನ್ನು ಬಿದತಕ್ಕದ್ದಲ್ಲವೆಂದು ಹೇಳಿದುದು ಪ್ರಪನ್ನನು ಮಾಡಬೇಕಾದ ಎಲ್ಲಾ ನಿತ್ಯನೈಮಿ ತ್ತಿಕ ರೂಪ ವರ್ಣಾಶ್ರಮ ಧರ್ಮಗಳಿಗೂ ಉಪಲಕ್ಷಣವೆಂದು ಇಟ್ಟುಕೊಳ್ಳತಕ್ಕದ್ದು.

ಆದರೆ ಭಗವಚ್ಛಾಸ್ತ್ರ ಮೊದಲಾದವುಗಳಲ್ಲಿ ಈ ಸಂಧ್ಯಾವಂದನಾದಿ ಭೇದ ಗಳು ಹೇಳಲ್ಪಟ್ಟಿವೆಯಲ್ಲಾ ಅವುಗಳಲ್ಲಿ ಯಾವುದನ್ನು ಅನುಷ್ಠಿಸತಕ್ಕದ್ದು ? ಎಂಬ ಸಂದರ್ಭದಲ್ಲಿ ಹೇಳುತ್ತಾರೆ—ಹಾಗೆ ವಿಕಲ್ಪಗಳು ಹೇಳಲ್ಪಟ್ಟಿದ್ದರೆ ಅವರವರುಗಳ ಪೂರ್ವಾಚಾರ್ಯರುಗಳ ಅನುಷ್ಠಾನದಿಂದ ಬಂದ ಸಂಪ್ರದಾಯಾನುಗುಣವಾಗಿ ನಡೆ

---

(೧) ದಕ್ಷಸ್ಮೃತಿ

ಧರ್ಮಶಾಸ್ತ್ರ ಸೂತ್ರಭೇದಙ್ಗಳಿಲ್ಪೋಲೇ, ಭಗವಚ್ಛಾಸ್ತ್ರಸಂಹಿತಾಭೇದ ಙ್ಗಳಿಲುಮ್, ಇತಿಹಾಸಪುರಾಣಙ್ಗಳಿಲುಮ್, ಶೊಲ್ಲುಮ್ ಸನ್ಧ್ಯೋಪಾಸನಾ ಭೇದಙ್ಗ (ಳ್ಳೈ) ಳಪ್ಪೋ ಶಾಸ್ತ್ರಙ್ಗಳಿಲೇ ಇಳಿನ್ದವರ್‌ಗಳನುಷ್ಟಿಕ್ಕಕ್ಕಡವರ್ ಗಳ್.(೧)"ದೈವತಾನ್ಯಭಿಗಚ್ಛೇತ್ತು"ಎನ್ರುಮ್ "ದೇವಸ್ಥಾನ ಪ್ರಣಾಮನಮ್" ಎನ್ರು, ಮಿಪ್ಪಡೈಗಳಿಲೇ ಧರ್ಮಶಾಸ್ತ್ರೇತಿಹಾಸಾದಿಗಳಿಲ್ಶೊನ್ನ ಆಚಾರಮುಮ್. ಪರಮೈಕಾಂತಿಕ್ಕು ಶಾಸ್ತ್ರಬಲತ್ತಾಲೆ ಭಗವದ್ವಿಷಯತ್ತಿಲೇ ನಿಯತಮ್. ಅಗ್ನೈ

---

ಯುವದೇ ವ್ಯವಸ್ಥಾಪಕವೆಂದು ಉಪದೇಶಿಸುತ್ತಾರೆ.—ಧರ್ಮಶಾಸ್ತ್ರಸೂತ್ರಭೇದಙ್ಗ ಳಿಲ್‌ಪೋಲೆ - ಧರ್ಮಶಾಸ್ತ್ರ ಮನುಸ್ಮೃತಿ ಪರಾಶರಸ್ಮೃತಿ, ಮೊದಲಾದ ಧರ್ಮ ಶಾಸ್ತ್ರಗಳಲ್ಲೂ, ಆಪಸ್ತಂಬ ಬೋಧಾಯನಾದಿ ಸೂತ್ರಗಳಲ್ಲಿ ಹೇಳಿರುವ ಆಚಾರ ಭೇದಗಳ ಹಾಗೆ, ಭಗವಚ್ಛಾಸ್ತ್ರದ ನಾಲ್ಕು ಸಂಹಿತಾ ಭೇದಗಳಲ್ಲೂ, ಇತಿಹಾಸ ಪುರಾಣಗಳಲ್ಲೂ ಶೊಲ್ಲುಮ್ - ಹೇಳಲ್ಪಟ್ಟ, ಸನ್ಧ್ಯೋಪಾಸನಾಬೇಧಗಳನ್ನು ಅಪ್ಪೋಶಾಸ್ತ್ರಙ್ಗಳಿಲೇ ಇಳಿನ್ದವರ್ಗಳ್ - ಆಯಾ ಶಾಸ್ತ್ರಗಳನ್ನು ಅವಲಂಬಿಸಿರು ವರುಗಳು, ಅನುಷ್ಟಿಕ್ಕಕ್ಕಡವರ್‌ಗಳ್ - ಅನುಷ್ಠಿಸತಕ್ಕವರಾಗಿರುತ್ತಾರೆ. ಪೂರ್ವಾ ಚಾರ್ಯರುಗಳು ಯಾವುಗಳನ್ನನುಸರಿಸಿ ಹೇಗೆ ಅನುಷ್ಠಿಸಿದರೋ ಹಾಗೆಯೇ ತಚ್ಛಿಷ್ಯ ರುಗಳೂ ಅನುಷ್ಠಿಸತಕ್ಕದ್ದೆಂಬ ಭಾವವು. ಹೀಗೆ ನಡೆಸುವದರಿಂದ ಪ್ರಪನ್ನನ ಪಾರಮೈಕಾಂತ್ಯಕ್ಕೇನೂ ಭಂಗವಿಲ್ಲವೆಂಬ ಭಾವವು.

ಹೀಗೆ ಸ್ಮೃತಿ ಗೃಹ್ಯಸೂತ್ರಾದಿಗಳಲ್ಲಿ ಹೇಳಿರುವ ಆಚಾರಗಳನ್ನು ಅವ ಲಂಬಿಸಿದರೆ "ದೈವತಾನ್ಯಭಿಗಚ್ಛೇತ್ತು" ಇತ್ಯಾದಿಗಳಿಂದ ಹೇಳಲ್ಪಟ್ಟ ದೇವ ತಾಂತರ ಭಜನಗಳಿಂದ ಪ್ರಪನ್ನನ ಪಾರಮೈಕಾಂತ್ಯಕ್ಕೆ ಭಂಗವಲ್ಲವೋ ? ಎಂದರೆ ಇಲ್ಲವೆಂದು ಉಪಪಾದಿಸುತ್ತಾರೆ. ಪ್ರಪನ್ನನಾದುದರಿಂದ, ಅವೆಲ್ಲಾ ಅನ್ಯದೇವತಾ ವಿಷಯವಲ್ಲದೆ ಸಾಕ್ಷಾದ್ಭಗವಂತನನ್ನು ಕುರಿತದ್ದೇ ಆಗುತ್ತದೆಯೇ ವಿನಾ ಅನ್ಯಥಾ ಅಲ್ಲವೆಂದು ಹೇಳುತ್ತಾರೆ. "ದೇವತಾನ್ಯಭಿಗಚ್ಛೇತ್ತು" – ದೇವತೆಗಳ ಆರಾಧನೆ ಯನ್ನು ಮಾಡತಕ್ಕದ್ದು, ಎನ್ರುಮ್ - ಎಂದೂ, "ದೇವಸ್ಥಾನಪ್ರಣಾಮನಮ್- ದೇವಸ್ಥಾನದ ನಮಸ್ಕಾರವು" ಎನ್ರು – ಎಂಬದಾಗಿಯೂ, ಇಪ್ಪಡಿಗಳಿಲೇ - ಈ ರೀತಿಗಳಲ್ಲಿ, ಧರ್ಮಶಾಸ್ತ್ರ ಮತ್ತು ಇತಿಹಾಸಗಳಲ್ಲಿ, ಶೊನ್ನ - ಹೇಳಲ್ಪಟ್ಟ, ಆಚಾರವೂ, ಪರಮೈಕಾಂತಿಗೆ ಶಾಸ್ತ್ರಬಲತ್ತಾಲೇ - ಶಾಸ್ತ್ರದೃಷ್ಟಿಯಿಂದ ಪ್ರಾಪ್ತ ವಾದ ಶಕ್ತಿಯ ಮೂಲಕ, ನಿಯತಮ್ - ನಿಯತವಾದುದೇ, ನ್ಯಾಯುವಾದುದೇ. ಅನ್ಯದೇವತೆಗಳು ಹೇಳಲ್ಪಟ್ಟಿದ್ದರೂ ಅಗ್ನಿಹೋತ್ರಾದಿಗಳಹಾಗೆ, ಭಗವದಭಿಗಮ ನಾದಿಗಳಲ್ಲೇ ಪರ್ಯವಸಿತವು. ಅನ್ಯದೇವತಾಭಿಗಮನಗಳಾಗುವದಿಲ್ಲವು. ಶಾಸ್ತ್ರ ದೃಷ್ಟ್ಯಾ ಆ ದೇವತೆಗಳಿಗೆ ಅಂತರ್ಯಾಮಿಯಾದ ಭಗವಂತನನ್ನು ಉದ್ದೇಶಿ

---

(೧) ಭಾರತ

**ಯಾಲ್ ಒರುಶಾಸ್ತ್ರಙ್ಗಳುಕ್ಕು ವಿರೋಧಮಿಲ್ಲೈ.** (೧) **"ತಸ್ಮಾದಷ್ಟಾಕ್ಷರಂ ಮನ್ತ್ರಂ ಮದ್ಭಕ್ತೈರ್ವಿಗತಕಲ್ಮಷೈಃ। ಸಂಧ್ಯಾಕಾಲೇಷು ಜಪ್ತವ್ಯಂ ಸತತಂ**

---

ಮಾಡಿದ ಅಭಿಗವನಾದಿಗಳಾಗುವದರಿಂದ ಪ್ರಪನ್ನನ ಪಾರಮೈಕಾಂತ್ಯಕ್ಕೆ ಭಂಗವೇನೂ ಇಲ್ಲವಾದುದರಿಂದ ಉಪಾದೇಯವೇ ಎಂಬ ಭಾವವು. ಮನುಸ್ಮೃತಿಯ ಪೂರಾ ಶ್ಲೋಕವು ಯಾವುದೆಂದರೆ—"**ದೈವತಾನ್ಯಭಿಗಚ್ಛೇತ್ತು ಧಾರ್ಮಿಕಾಂಶ್ಚ ದ್ವಿಜೋತ್ತಮಾ। ಈಶ್ವರಂ ಚೈವ ರಕ್ಷಾರ್ಥಂ ಗುರೂನೇವಚ ಪರ್ವಸು॥**" ಎಂಬುದು. ಅಮಾವಾಸ್ಯಾದಿ ಪರ್ವಕಾಲಗಳಲ್ಲಿ ಇವರುಗಳಿಗೆ ಅಭಿಮುಖವಾಗಿ ಹೋಗತಕ್ಕದ್ದು.

ಆದುದರಿಂದ ಎಂದರೆ ತಮ್ಮ ತಮ್ಮ ಆಚಾರ್ಯರುಗಳ ಮೂಲಕ ಬಂದ ಸಂಪ್ರದಾಯಾನುಸಾರವಾಗಿ ನಡೆಯುವದು ಯುಕ್ತವೆಂದು ಉಪಪಾದಿತವಾದ ನಂತರ, **ಒರುಶಾಸ್ತ್ರಙ್ಗಳುಕ್ಕುಮ್** - ಒಂದು ಶಾಸ್ತ್ರಕ್ಕೂ, **ವಿರೋಧಮಿಲ್ಲೈ** - ವಿರೋಧವಿಲ್ಲವು. ಸಾಮಾನ್ಯವಾಗಿ "**ನಾನ್ಯಂ ದೇವಂ ನಮಸ್ಕುರ್ಯಾತ್**" ಎಂದು ನಿಷೇಧಿಸಿದ್ದರೂ, ಇದು ಅನ್ಯದೇವತಾಭಿಗಮನಾದಿಗಳ ಹಾಗೆ ತೋರಿದರೂ ಪ್ರಪನ್ನನ ವಿಷಯದಲ್ಲಿ ಆ ಅನ್ಯದೇವತಾತ್ಮಕನಾದ ಭಗವಂತನಲ್ಲೇ ಅವುಗಳು ಅನ್ವಯಿಸುವದರಿಂದ ಅನ್ಯದೇವತಾ ಸಂಬಂಧವು ಪ್ರಪನ್ನನಿಗೆ ಕೂಡದೆಂದು ಹೇಳುವ ಶಾಸ್ತ್ರಪಙ್ಕ್ತಿಗೇನೊಂದೂ ವಿರೋಧವಿಲ್ಲವೆಂಬುದು ಅಭಿಪ್ರಾಯವು.

ಆಗಲಿ, ಅಷ್ಟಾಕ್ಷರ ಮಂತ್ರವನ್ನೂ ಹಾಗೆಯೇ ದ್ವಯ ಚರಮಶ್ಲೋಕ ಮನ್ತ್ರಗಳನ್ನೂ ಸಂಧ್ಯಾವಂದನೆ ಕಾಲದಲ್ಲಿ ಜಪವನ್ನು ಮಾಡಬೇಕೆಂದು ಸೇರಿಸಿರುವದು ಹಿಂದಿನಿಂದ ಬಂದ ಸಂಪ್ರದಾಯಕ್ಕೆ ಸರಿಹೋಗುತ್ತದೆಯೇ? ಅಷ್ಟಾಕ್ಷರ ಮನ್ತ್ರವನ್ನು ಮುಂದೆ ಹೇಳಿರುವದು ಮಿಕ್ಕ ಎರಡು ಮಂತ್ರಗಳಿಗೂ ಉಪಲಕ್ಷಣವೆಂದು ಇಟ್ಟುಕೊಳ್ಳತಕ್ಕದ್ದು. ಸಂಧ್ಯಾಕಾಲದಲ್ಲಿ ರಹಸ್ಯತ್ರಯಗಳಾದ ಮೂರು ಮನ್ತ್ರಗಳನ್ನು ಜಪಿಸತಕ್ಕದ್ದು ಎಂದು ಪ್ರಪನ್ನನಿಗೆ ವಿಧಿಸಿರುವದರಿಂದ ಸಂಧ್ಯಾವಂದನೆಯನ್ನು ತ್ಯಜಿಸಬಹುದೆಂಬ ಅರ್ಥವಾಗುವದಿಲ್ಲವೋ? ಶ್ರೀ ಯತಿವರ್ಯರೂ "**ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ**" ಎಂದು ಹೇಳಿರುವದರಿಂದ ಪ್ರಪನ್ನನು **ಸದಾ** - ಎಂದಿರುವದರಿಂದ ಸಂಧ್ಯಾ ಕಾಲದಲ್ಲೂ ದ್ವಯಮನ್ತ್ರವನ್ನು ಉಚ್ಚರಿಸುವದು ಸಾಕೆಂಬ ಅಭಿಪ್ರಾಯವಾಗುವದಿಲ್ಲವೋ? ಎಂದರೆ, ಅದಕ್ಕೆ ಸಮಾಧಾನವಾಗಿ ಈ ಶಾಸ್ತ್ರದಲ್ಲಿ ವಿಧಿಸಲ್ಪಟ್ಟ ಆವಶ್ಯ ಕರ್ತವ್ಯಗಳಾದ ನಿತ್ಯನೈಮಿತ್ತಿಕಗಳ ಕಾಲದಲ್ಲಿ ಅನುಷ್ಠಿಸಿ ಅವುಗಳಿಗೆ ವಿರೋಧವಿಲ್ಲದ ಹಾಗೆ, ತದಿತರ ಕಾಲಗಳಲ್ಲಿ, ಅವುಗಳೂ ಸತ್ಸಂಪ್ರದಾಯ ರೀತ್ಯಾ ಬಂದವುಗಳಾದುದರಿಂದ! ಅವುಗಳನ್ನು ಅನುಷ್ಠಿಸತಕ್ಕದ್ದೆಂದು ಉಪದೇಶಿಸುತ್ತಾರೆ—(೧) "**ತಸ್ಮಾತ್** - ಆ ಕಾರಣದಿಂದ

---

(೧) ಮನುಸ್ಮೃತಿ ೪.-೫೩.

**ಚಾತ್ಮಶುದ್ಧಯೇ" ಎನ್ರು ಶ್ರೀ ವೈಷ್ಣವ ಧರ್ಮಶಾಸ್ತ್ರಙ್ಗಳಿಶ್ಶೊನ್ನದುವುಮ್ "ದ್ವಯ ಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ" ಎನ್ರು ಗದ್ಯತ್ತಿಲ್ ಅರುಳಿಚ್ಚೆಯ್‌ದದುವುಮ್, ಮತ್ತುಮ್ ಇಪ್ಪಡ್ಯೆಗಳಿಲುಳ್ಳವೈ ಯೆಲ್ಲಾಮ್ ಅವಶ್ಯ ಕರ್ತವ್ಯಙ್ಗಳಾನ ನಿತ್ಯನೈಮಿತ್ತಿಕಙ್ಗಳುಕ್ಕು ವಿರೋಧಮ್ ವಾರಾದ ಪಡಿ ಅವತ್ತುಕ್ಕು ಪ್ಪೋಕ್ಕಿ ಮಿಕ್ಕಕಾಲತ್ತಿಲೇ ಯಾಗಕ್ಕಡವದು.**

---

**ಅಷ್ಟಾಕ್ಷರಮನ್ತ್ರಮ್** – ಮೂಲಮನ್ತ್ರವು, **ವೀತಕಲ್ಮಷೈಃ** - ನಿತ್ಯನೈಮಿತ್ತಿಕಾನುಷ್ಠಾನದಿಂದಲೂ ಉಪಾಯಾನುಷ್ಠಾನದಿಂದಲೂ ಕಳೆದುಹೋದ ಪಾಪಗಳನ್ನುಳ್ಳ, **ಭಕ್ತೈಃ** – ಪ್ರಪನ್ನರುಗಳಿಂದ, **ಆತ್ಮಶುದ್ಧಯೇ** - ಪರಿಶುದ್ಧಾತ್ಮಪ್ರಾಪ್ತಿಗಾಗಿ, ಸತತಂ - ಯಾವಾಗಲೂ, ಸಂಧ್ಯಾಕಾಲಗಳಲ್ಲಿ, **ಜಪ್ತವ್ಯಮ್**–ಜಪಿಸತಕ್ಕದ್ದು, **ಎನ್ರು** - ಎಂಬುದಾಗಿ. **ವೈಷ್ಣವಧರ್ಮಶಾಸ್ತ್ರಙ್ಗಳಿಲ್** - ವೈಷ್ಣವ ಧರ್ಮಶಾಸ್ತ್ರಗಳಲ್ಲಿ, **ಶೊನ್ನದುವುಮ್** - ವಿಧಿಸಿರುವದೂ, ಮತ್ತು **"ದ್ವಯಮರ್ಥಾನುಸಂಧಾನೇನ** - ದ್ವಯಮನ್ತ್ರದಲ್ಲಿ ಹೇಳಲ್ಪಟ್ಟ ಅಭಿಪ್ರಾಯಗಳನ್ನೆಲ್ಲಾ ಸ್ಮರಿಸಿಕೊಳ್ಳುವದರೊಂದಿಗೆ **ಸದಾ**. ಯಾವಾಗಲೂ **ಏವಂ ವಕ್ತಾ** - ಈ ಪ್ರಕಾರವಾಗಿ ದ್ವಯಮನ್ತ್ರವನ್ನು ಜಪಿಸುತ್ತಾ ಎಂದರೆ ಪಠಿಸುತ್ತಾ" **ಎನ್ರು** - ಎಂಬದಾಗಿ, **ಗದ್ಯತ್ತಿಲ್** - ಶ್ರೀ ಯತಿವರ್ಯರು ಶರಣಾಗತಿಗದ್ಯದಲ್ಲಿ, **ಅರುಳಿಚ್ಚೆಯ್‌ದದುವುಮ್** - ಕೃಪಯಾ ಉಪದೇಶಿಸಿದುದೂ, ಮತ್ತು **ಇಪ್ಪಡ್ಯೆಗಳಿಲುಳ್ಳವೈ ಎಲ್ಲಾಮ್**-ಈ ಪ್ರಕಾರವಾಗಿಯೇ ಮಹನೀಯರಾದ ಆಚಾರ್ಯರುಗಳ ಉಪದೇಶವೆಲ್ಲವೂ,**ಅವಶ್ಯಕರ್ತವ್ಯಙ್ಗಳಾನ ನಿತ್ಯನೈಮಿತ್ತಿಕಙ್ಗಳುಕ್ಕು** - ಅವಶ್ಯವಾಗಿ ಶಾಸ್ತ್ರವಿಧಿಗನುಸಾರವಾಗಿ ಮಾಡಬೇಕಾದ ನಿತ್ಯನೈಮಿತ್ತಿಕಗಳಿಗೆ, **ವಿರೋಧಮ್ ವಾರಾದಪಡಿ** - ವಿರೋಧವು ಬಾರದಹಾಗೆ **ಅವತ್ತುಕ್ಕು ಪ್ಪೋಕ್ಕಿ**-ಅವುಗಳ ಅನುಷ್ಠಾನಕ್ಕೆ ಬೇಕಾದ ಕಾಲವು ಹೋಗಲಾಗಿ, **ಮಿಕ್ಕಕಾಲತ್ತಿಲೇ** - ನಿಂತ ಕಾಲದಲ್ಲಿ, **ಆಗಕ್ಕಡವದು** – ಹಿರಿಯರಾದ ಆಚಾರ್ಯರುಗಳು ಉಪದೇಶಿಸಿದ ಮನ್ತ್ರ ಜಪಗಳನುಷ್ಠಾನವು ಆಗತಕ್ಕದ್ದು. ನಿತ್ಯನೈಮಿತ್ತಿಕಗಳನ್ನು ತ್ಯಜಿಸಿ, ಆ ಕಾಲದಲ್ಲಿ ಅವುಗಳಿಗೆ ಬದಲಾಗಿ ಇವುಗಳನ್ನು ಜಪಿಸಬಹುದೆಂಬುದು ಅವರುಗಳ ಉಪದೇಶವಲ್ಲವು. ಯಥಾವಿಧಿಯಾಗಿ ಆ ಕಾಲಗಳಲ್ಲಿ ನಿತ್ಯನೈಮಿತ್ತಿಕಗಳಾದ ಆಜ್ಞಾಕೈಂಕರ್ಯಗಳನ್ನು ಅನುಷ್ಠಿಸಿಬಿಟ್ಟು ಮಿಕ್ಕ ಕಾಲಗಳಲ್ಲಿ ಈ ಮನ್ತ್ರಗಳ ಜಪವನ್ನು ಮಾಡತಕ್ಕದ್ದೆಂಬುದು ಶ್ರೀ ಯತಿರಾಜರೇ ಮೊದಲಾದ ಆಚಾರ್ಯರುಗಳ ಮತ್ತು ಮಹರ್ಷಿಗಳ ಉಪದೇಶವು. ಅದು ಹೇಗೆ ? ಎಂದರೆ ಇದನ್ನು ಉಪದೇಶಿಸುವ ಶ್ರೀ ನಿಗಮಾನ್ತಮಹಾದೇಶಿಕರವರೇ ಸಾರನಿಷ್ಕರ್ಷಾಧಿಕಾರದಲ್ಲಿ "ಶಾಖಾನಾಮುಪರಿಸ್ಥಿತೇನ ಮನುನಾಮೂಲೇನ ಲಬ್ಧಾತ್ಮಕಃ । ಸತ್ತಾ ಹೇತುಸಕೃಜ್ಜಪೇನ ಸಕಲಂ ಕಾಲಂದ್ವಯೇನಕ್ಷಿಪನ್" ಎಂಬಲ್ಲಿ ಸಕಲ ಕಾಲದಲ್ಲೂ ದ್ವಯಮನ್ತ್ರ ಪಠನಮಾಡಿಕೊಂಡು ಕಾಲವನ್ನು ಕಳೆಯಬೇ

**"ಶ್ರೌತಸ್ಮಾರ್ತಾ ವಿರುದ್ಧೇಷು ಕಾಲೇಷು ಜಪಮಾಚರೇತ್" ಎನ್ರು ನಾರದಾದಿಗಳುಮ್ ಶೊನ್ನಾರ್‌ಗಳ್. "ಹುತ್ವಾಗ್ನೀನಗ್ನಿಹೋತ್ರಾದಾವುಕ್ತಂ ಕಾಲಮ್ (ಪಿ) ವಿಕ್ಷಿಪನ್" ಎನ್ರು ನಜ್ಗಿಪುರತ್ತು ನಂಬಿ ಅರುಳಿಚ್ಚೆಯ್‌ದಾರ್.**

---

ಕೆಂದು ಹೇಳಿರುತ್ತಾರೆ. ಅಲ್ಲಿ ಹೇಳಿರುವಾಗಲೂ ಈಗ ತಾವು ಉಪದೇಶ ರೀತಿಯಲ್ಲೇ **"ಸಕಲಂ ಕಾಲಂ"** ಎಂಬುದಕ್ಕೆ ಅರ್ಥ ಮಾಡತಕ್ಕದ್ದೆಂದೂ **ಹೇಳಿದಂತಾಯಿತು.** ಆದುದರಿಂದ ನಿತ್ಯನೈಮಿತ್ತಿಕಗಳನ್ನು ಅನುಸ್ಠಿಸಿ ಮಿಕ್ಕ ಕಾಲಗಳಲ್ಲಿ ಎಂಬುದು ವ್ಯಕ್ತವು. ಮೇಲಿನ ವಾಕ್ಯದಲ್ಲಿ **"ಇಪ್ಪಡೈಗಳಿಲುಳ್ಳವೈ ಎಲ್ಲಾಮ್"** ಎಂಬುದರಿಂದ "ಗುರೋರ್ನಾಮ **ಸದಾ ಜಪೇತ್"** ಎಂಬಿವೇ ಮೊದಲಾದವುಗಳು **ಹೇಳಲ್ಪಟ್ಟವು.**

ಹೀಗೆ ಸದಾ **ಸತತಂ** ಎಂಬ ಪದಗಳಿದ್ದರೂ ಹೀಗೆ ಆ ಕಾಲಗಳನ್ನು ಬಿಟ್ಟು ಮಿಕ್ಕ ಕಾಲಗಳಲ್ಲಿ ಎಂದು ಅರ್ಥ ಮಾಡಿದರಲ್ಲಾ, ಅದಕ್ಕೆ ಪ್ರಮಾಣವುಂಟೋ ಎಂದರೆ ಈ ಅಭಿಪ್ರಾಯವು ನ್ಯಾಯಸಿದ್ಧವಾದುದೇಯಾದರೂ ಪ್ರಮಾಣವನ್ನು ಉದಾಹರಿಸುತ್ತಾರೆ—**ಶ್ರೌತಸ್ಮಾರ್ತಾ ವಿರುದ್ಧೇಷು**-ಶ್ರುತಿಯಲ್ಲೂ, ಸ್ಮೃತಿಯಲ್ಲೂ ಹೇಳುವ ಕರ್ಮಾನುಷ್ಠಾನಗಳಿಗೆ ವಿರೋಧವಿಲ್ಲದ, **ಕಾಲೇಷು** - ಕಾಲಗಳಲ್ಲಿ, **ಜಪಮಾಚರೇತ್** – ಅಷ್ಟಾಕ್ಷರ ಮನ್ತ್ರ ಜಪವನ್ನು ಇದು ದ್ವಯ ಚರಮಶ್ಲೋಕಕ್ಕೂ ಉಪಲಕ್ಷಣವು, ಆಚರಿಸತಕ್ಕದ್ದು, **ಎನ್ರು** - ಎಂಬದಾಗಿ **ನಾರದಾದಿಗಳುಮ್** – ನಾರದರೇ ಮೊದಲಾದವರು, **ಶೊನ್ನಾರ್‌ಗಳ್** - ಹೇಳಿದರು. ಈ ಅಭಿಪ್ರಾಯಕ್ಕೆ ಪೂರ್ವಾಚಾರ್ಯರುಗಳ ಸಮ್ಮತಿಯೂ ಉಂಟೆಂದು ಹೇಳಲು ತೊರಟು, **ಶ್ರೀ ಯತಿವರ್ಯರ** ಮುಖ್ಯ ಶಿಷ್ಯ**ರಾದ** ವಜ್ಗಿಪುರದ ನಂಬಿಯು ಶ್ರೀ ಭಾಷ್ಯಕಾರರ ಹೃದಯವನ್ನರಿತವರಾದ ಪ್ರಯುಕ್ತ, **"ದ್ವಯಮರ್ಥಾನುಸಂಧಾನೇನ ಸಹ ಸದೈವ ವಕ್ತಾ"** ಎಂದು ಶ್ರೀ ಯತಿವರ್ಯರವರು ಉಪದೇಶಿಸಿರುವದರ ತಾತ್ಪರ್ಯವು, ಅಗ್ನಿಹೋತ್ರಾದಿ ಕರ್ಮಗಳಿಗೆ, ಇದರಿಂದ ನಿತ್ಯನೈಮಿತ್ತಿಕ ಕರ್ಮಗಳು ಹೇಳಲ್ಪಟ್ಟವು, ವಿರೋಧವಿಲ್ಲದ ಕಾಲದಲ್ಲೇ, ಸದಾ ದ್ವಯೋಚ್ಚಾರಣೆಯನ್ನು ಮಾಡತಕ್ಕದ್ದೆಂಬುದೇ ತಾತ್ಪರ್ಯವೆಂದು ಆ ವಂಗಿಪುರನಂಬಿಯವರ ದಿವ್ಯಸೂಕ್ತಿಯಿಂದ ಪ್ರದರ್ಶಿಸುತ್ತಾರೆ. **ಅಗ್ನಿಹೋತ್ರಾದೌ** - ಅಗ್ನಿಹೋತ್ರಾದಿಗಳಲ್ಲಿ, **ಉಕ್ತಂ ಕಾಲಂ** - ಅವುಗಳಿಗೆ ವಿಧಿಸಿರುವ ಕಾಲವನ್ನು, **ಅವಿಕ್ಷಿಪನ್** - ಅತಿಕ್ರಮಿಸಿದವನಾಗಿ, **ಎನ್ರು** - ಎಂಬದಾಗಿ ವಂಗಿಪುರದ ನಂಬಿಯು **ಅರುಳಿಚ್ಚೆಯ್‌ದಾರ್** - ಕೃಪಯಾ ಅಪ್ಪಣೆ ಕೊಡಿಸಿರುತ್ತಾರೆ. ಇದು ಹಿಂದೆಯೇ ಉದಾಹರಿಸಲ್ಪಟ್ಟಿರುತ್ತದೆ. (    ) ನೆಯ ಪುಟ ನೋಡಿ. ಇದಕ್ಕೆ ಹಿಂದೆ **"ಸ್ವವರ್ಣಾಶ್ರಮಾರ್ಹೇಣ ವಿಧಿನಾ ಶ್ರದ್ಧಯಾನ್ವಿತಃ । ಸಮಿದಾಜ್ಯಾದಿಭಿರ್ದ್ರವ್ಯೈರ್ಮನ್ತ್ರೈರಪಿ ಯಥೋದಿತೈಃ"** ಎಂದು ಇರುವದರಿಂದಲೂ, ಮುಂದೆ **"ಹರ್ಯಾರಾಧನರೂಪೇಣ ಕೃತೇನೈವ ಸ್ವಕರ್ಮಣಾ। ಕೃತೇ**

**ಭಾಷ್ಯಕಾರರ್ ಅನ್ತಿಮದಶೈಯಿಲುಮ್ ವರುನ್ದಿಯೆಳುನ್ದಿರುನ್ದು ಸಂಧ್ಯಾ ಕಾಲತ್ತಿಲೇ ಜಲಾಂಜಲಿ ಪ್ರಕ್ಷೇಪಮ್ ಪಣ್ಣಿಯರುಳಿನಾರ್.**

---

**ನಿಷ್ಕಲ್ಮಷೇ ಶುದ್ಧೇ ಸ್ವಸ್ಥೇ ಮನಸಿ ಸುಸ್ಥಿತೇ। ಲಬ್ಧಾಧಿಕಾರೋ ದೇವಸ್ಯ ಧ್ಯಾನಾರ್ಚನ ಜಪಾದಿಷು"** ಎಂದೂ ಇರುವದರಿಂದಲೂ, ನಿತ್ಯನೈಮಿತ್ತಿಕರೂಪ ವರ್ಣಾಶ್ರಮಧರ್ಮಗಳನ್ನು ವಿಹಿತಕಾಲಗಳಲ್ಲಿ ಅನುಷ್ಠಿಸಿ,ಅದರಿಂದ ಪರಿಶುದ್ಧಾಂತಃ ಕರಣನಾಗಿ ಜಪಾದಿಗಳಿಗೆ ಅಧಿಕಾರವನ್ನು ಹೊಂದತಕ್ಕದ್ದೆಂದು ಹೇಳಿರುತ್ತದೆ. ಆದುದರಿಂದ ಸಂಧ್ಯಾವಂದನಾನಂತರ ಅಷ್ಟಾಕ್ಷರಾದಿ ಜಪವು ಶ್ರೀ ಯತಿವರ್ಯರ ಮುಖ್ಯ ಶಿಷ್ಯರು ಹೀಗೆ ಅವರ ನಿತ್ಯವೆಂಬ ಗ್ರಂಥದಲ್ಲಿ ಬರೆದಿರುವದರಿಂದ ಶ್ರೀ ಯತಿವರ್ಯರ ಅಭಿಪ್ರಾಯಾನುಸಾರವಾಗಿಯೇ ಅಪ್ಪಣೆಕೊಡಿಸಿರುತ್ತಾರೆಂಬುದು ಸುವ್ಯಕ್ತವು. ಮುಂದೆ ಶ್ರೀ ಯತಿವರ್ಯರ ಪ್ರವೃತ್ತಿಯಿಂದಲೂ ಸಹ ಈ ಅಭಿಪ್ರಾಯವನ್ನೇ ಗ್ರಹಿಸಬಹುದೆಂದು ಪ್ರದರ್ಶಿಸುತ್ತಾರೆ. **ಭಾಷ್ಯಕಾರರ್** - ಶ್ರೀ ಯತಿವರ್ಯರು, **ಅನ್ತಿಮದಶೈಯಿಲುಮ್** - ದೇಹವಿಯೋಗ ಕಾಲದಲ್ಲಿ **ವರುನ್ದಿ** - ತುಂಬಾ ಕಷ್ಟಪಟ್ಟು, ಆ ದಿನ ಎದ್ದು ನಿಂತು ಅರ್ಘ್ಯವನ್ನು ಕೊಡಲು ಸಾಧ್ಯವಿಲ್ಲದಿದ್ದರೂ, **ಎಳುನ್ದಿರುನ್ದು** - ಎದ್ದು ನಿಂತು ಅರ್ಘ್ಯವನ್ನು ಕೊಡತಕ್ಕದ್ದೆಂಬ ವಿಧಿ ಇರುವದರಿಂದ, ಶಿಷ್ಯರ ಸಹಾಯ ಮೂಲಕ ಎದ್ದು ನಿಂತು, **ಜಲಾಂಜಲಿ ಪ್ರಕ್ಷೇಪಮ್** - ಎರಡು ಕೈಗಳನ್ನೂ ಜೋಡಿಸಿ ಅಂಜಲಿಮಾಡಿಕೊಂಡು, ಅರ್ಘ್ಯಪ್ರದಾನವನ್ನು, **ಪಣ್ಣಿಯರುಳಿನಾರ್** – ಮಾಡಿ ಕೃಪಯಾ ಸಂಪ್ರದಾಯ ಕ್ರಮವನ್ನು ದಯಪಾಲಿಸಿದರು. ಬರೀ ಉಪದೇಶ ಮಾತ್ರವನ್ನೇ ಮಾಡತಕ್ಕವರಲ್ಲವು. ದೇಹಾವಸಾನದ ದಿನವಾದುದರಿಂದ ಕೂತುಕೊಂಡೇ ಅರ್ಘ್ಯವನ್ನು ಕೊಟ್ಟಿದ್ದರೂ ಸ್ವಾಮಿಯು ಏನೂ ಅನ್ಯಥಾ ಭಾವಿಸುತ್ತಿದ್ದಿಲ್ಲವು. ಹೀಗೆ ಕಷ್ಟವಾದ ಕಾಲದಲ್ಲೂ ಶಾಸ್ತ್ರಕ್ರಮವನ್ನು ಅನುಸರಿಸಿ ಸಂಪ್ರದಾಯವನ್ನು ಸ್ಥಾಪಿಸಿರುತ್ತಾರೆ, ಪೂರ್ವಪಕ್ಷಿಗಳು ಹೇಳುವ ಹಾಗೆ ದೇವತಾಂತರ ಮನ್ತ್ರಗಳಿದ್ದರೂ ಶಾಸ್ತ್ರಸಂಪ್ರದಾಯಗಳಿಗೆ ಕಟ್ಟುಬಿದ್ದು ದೇಹತ್ಯಾಗ ಮಾಡುವ ದಿನದಲ್ಲೂ ಕೂಡ ಶಾಸ್ತ್ರವಿಹಿತರೀತ್ಯಾ ಅನುಷ್ಠಿಸಿರುವದರಿಂದ, ಅವರ ಸಿದ್ಧಾನ್ತಕ್ಕೆ ಸೇರಿದವರು ಯಾರೂ ಪ್ರಪನ್ನನಿಗೆ ವರ್ಣಾಶ್ರಮ ಧರ್ಮಗಳು ಬೇಕಿಲ್ಲವೆಂದು ಈ ಚರಮ ಶ್ಲೋಕದಲ್ಲಿ ಹೇಳಲ್ಪಟ್ಟಿತೆಂದು ಅಭಿಪ್ರಾಯಪಡುವದು ಸರಿಯಲ್ಲವು. ಈ ವರ್ಣಾಶ್ರಮ ಧರ್ಮಗಳು ಆತ್ಮಾವಿಗೆ ಅಂಟಿದುದಲ್ಲವು. ಜನ್ಮಪ್ರಯುಕ್ತವಾದ ದೇಹ ಪ್ರಾಪ್ತಿರೂಪ ಉಪಾಧಿಯಿಂದ ಉಂಟಾಗಿ, ಜನ್ಮವಿರುವವರೆಗೂ ಅನುಷ್ಠಿಸತಕ್ಕವೇ ವಿನಾ ತ್ಯಾಗಮಾಡತಕ್ಕವುಗಳಲ್ಲವೆಂದೂ ಹಿಂದೆಯೂ ಹೇಳಿದುದನ್ನೇ ಪುನಃ ಸಿದ್ಧಾನ್ತಿಸಿ ಹೇಳುತ್ತಾರೆ. ಈ ಅಭಿಪ್ರಾಯಗಳನ್ನೇ ವಜ್ಞಿನಂಬಿಯವರ ಕಾರಿಕೆಯಲ್ಲಿ ಅನುಸಂಧಾನಮಾಡಬಹುದು. **"ಶ್ರುತಿಸ್ಮೃತ್ಯುದಿತಂ ಸರ್ವಂ**

**ಆಗೈಯಾಲ್ ವರ್ಣಾಶ್ರಮ ಧರ್ಮಙ್ಗಳ್ ಔಪಾಧಿಕಙ್ಗಳೆನ್ರು ತ್ಯಜಿಕ್ಕೈ ಪೂರ್ವಾನುಷ್ಠಾನಾದಿ ವಿರುದ್ಧಮ್. ಇಪ್ಪಡಿ ತ್ಯಜಿಕ್ಕಿಲ್ ದೇಹೇನ್ದ್ರಿಯಾದ್ಯುಪಾಧಿಗಳೈಯೊಳಿಯ ಮಾಲಾಕರಣ ದೀಪಾರೋಪಣಾದಿ ವಿಶೇಷ ಕೈಙ್ಕರ್ಯಙ್ಗಳುಮ್ ಅನುಷ್ಠಿಕ್ಕವೊಣ್ಣಾಮೈಯಾಲ್ ಅನೈಯುಮೆಲ್ಲಾಮ್**

---

ಸ್ವವರ್ಣ ಸ್ವಾಶ್ರಮೋಚಿತಮ್ । ಫಲಾಭಿಸಂಧಿ ರಹಿತಂ ಪರಬ್ರಹ್ಮಾರ್ಚನಾತ್ಮಕಮ್ । ನ್ಯಸ್ಯ ಕರ್ತೃತ್ವ ಭೋಕ್ತೃತ್ವೇ ಸ್ವಾಮಿತ್ವಂಚ ಪರಾತ್ಮನಿ । ನಿತ್ಯನೈಮಿತ್ತಿಕೈಃ ಕಾಮ್ಯೈಃ ಕರ್ಮಭಿಶ್ಚ ಸಮನ್ವಿತಃ" (೭೫-೭೬)

ಆದುದರಿಂದ ವರ್ಣಾಶ್ರಮ ಧರ್ಮಗಳನ್ನು ತ್ಯಾಗಮಾಡುವದು ಶಾಸ್ತ್ರ ಮತ್ತು ಸಂಪ್ರದಾಯಗಳಿಗೆ ವಿರುದ್ಧವೆಂದು ಸಿದ್ಧಾನ್ತಿಸಿ ಹೇಳುತ್ತಾರೆ.—**ಆಗೈಯಾಲ್** - ಹೀಗೆ ಶಾಸ್ತ್ರವಿರುದ್ಧ ಮಾತ್ರವೇ ಅಲ್ಲದೆ ಶ್ರೀ ಭಾಷ್ಯಕಾರರೂ ಮತ್ತು ತಚ್ಛಿಷ್ಯರ ಅನುಷ್ಠಾನಕ್ಕೆ ವಿರುದ್ಧವಾಗಿ, ಸಂಪ್ರದಾಯಕ್ಕೂ ಸಹ ವಿರುದ್ಧವಾದುದರಿಂದ, **ವರ್ಣಾಶ್ರಮಧರ್ಮಗಳು ಔಪಾಧಿಕಙ್ಗಳೆನ್ರು** - ಅಪ್ರಪನ್ನರಿಗೇ ಉಪಾಧಿ ಮೂಲಕ ಬಂದವೇ ವಿನಾ ಪ್ರಪನ್ನನಿಗೆ ಆದುದರಿಂದ ಬೇಕಿಲ್ಲವೆಂದು, **ತ್ಯಜಿಕ್ಕೈ** - ಅನುಷ್ಠಿಸದೇ ಇರೋಣವು, **ಪೂರ್ವಾನುಷ್ಠಾನಾದಿವಿರೋಧಮ್** - ಪೂರ್ವಾಚಾರ್ಯರುಗಳ ಅನುಷ್ಠಾನದಿಂದುಂಟಾದ ಸಂಪ್ರದಾಯಾದಿಗಳಿಗೆ ವಿರುದ್ಧವಾದುದು. ಇಲ್ಲಿ ಆದಿ ಶಬ್ದದಿಂದ ಅನುಷ್ಠಾನ ಮಾತ್ರವೇ ಅಲ್ಲದೆ ಅವರುಗಳ ದಿವ್ಯಸೂಕ್ತಿಗಳಿಗೂ ವಿರೋಧವೆಂದು ಹೇಳಲ್ಪಟ್ಟಿತು. ಅಥವಾ ಹಿಂದೆ ಉಪಪಾದಿಸಲ್ಪಟ್ಟ ಶಾಸ್ತ್ರವಿರುದ್ಧವೆಂಬುದೂ ಆದಿ ಪದದಿಂದ ಹೇಳಲ್ಪಟ್ಟಿತೆಂದು ಭಾವಿಸಬಹುದು.

ಹೀಗೆ ಶಾಸ್ತ್ರ ಮತ್ತು ಸಂಪ್ರದಾಯ ವಿರುದ್ಧವೆಂದು ಸ್ಥಾಪಿಸಿದನಂತರವೂ ಪೂರ್ವಪಕ್ಷಿಗಳು ವರ್ಣಾಶ್ರಮ ಧರ್ಮಾನುಷ್ಠಾನಗಳನ್ನು ತ್ಯಜಿಸಿದರೆ ಉಂಟಾಗುವ ಬಾಧಕವನ್ನು ಯುಕ್ತಿವಾದದ ಮೂಲಕ ಉಪಪಾದಿಸುತ್ತಾರೆ. **ಇಪ್ಪಡಿ ತ್ಯಜಿಕ್ಕಿಲ್** - ಹೀಗೆ ಶಾಸ್ತ್ರ ಸಂಪ್ರದಾಯವಿರುದ್ಧವಾದರೂ ಔಪಾಧಿಕಗಳಾಗಿ ತ್ಯಾಜ್ಯಗಳೆಂದು ಭಾವಿಸಿ ಈ ನಿತ್ಯನೈಮಿತ್ತಿಕ ಕರ್ಮಾನುಷ್ಠಾನಗಳನ್ನು ತ್ಯಜಿಸಿದರೆ, **ದೇಹೇಂದ್ರಿಯಾದ್ಯುಪಾಧಿಗಳೈಯೊಳಿಯ** - ದೇಹ ಇಂದ್ರಿಯ ಮೊದಲಾದ ಕಾರಣಗಳಿಂದ ಬಂದವು ಎಂಬ ಭಾವನೆ ಇಲ್ಲದೆ ಹೋದರೆ ಇಲ್ಲಿ ಆದಿಪದದಿಂದ ಜಾತಿ, ಸಂಸ್ಕಾರ, ಆಶ್ರಮ ಮೊದಲಾದವುಗಳು ಹೇಳಲ್ಪಟ್ಟವು; **ಮಾಲಾಕರಣ**- ಪುಷ್ಪಮಾಲಿಗಳನ್ನು ಕಟ್ಟಿ ಸಮರ್ಪಿಸುವದು, **ದೀಪಾರೋಪಣ** - ದೇವರಿಗೆ ದೀಪವನ್ನು ಹತ್ತಿಸುವ ಕೈಙ್ಕರ್ಯ, **ಆದಿ** ಇವೇ ಮೊದಲಾದ ಇಲ್ಲಿ ಪದದಿಂದ ಚಾಮರವನ್ನು ಹಾಕುವದು, ಬೀಸಣಿಗೆಯಿಂದ ಬೀಸುವದು ತೆಂಗಿನಕಾಯಿ ಬಾಳೇಹಣ್ಣು ಮೊದಲಾದವುಗಳನ್ನು ಸಮರ್ಪಿಸುವದು. ಅಭಿಷೇಕ ಉತ್ಸವ ಮೊದಲಾದವುಗಳೂ ಹೇಳಲ್ಪಟ್ಟವು; **ವಿಶೇಷ ಕೈಙ್ಕರ್ಯಙ್ಗಳುಮ್** - ಪ್ರಪನ್ನನು ಮುಖ್ಯವಾಗಿ

**ಔಪಾಧಿಕಙ್ಗಳಾಯ್ ತ್ಯಾಜ್ಯಙ್ಗಳಾವ್. ಅವೈ ಅನುಷ್ಠಿಕ್ಕ ಅಕ್ಶೈಪ್ಪಡಿಲ್, ಅವತ್ತುಕ್ಕು ಯೋಗ್ಯತಾಪಾದಕಙ್ಗಳಾನ ಶೌಚಾಚಾರ ಸಂಸ್ಕಾರಾದಿಗಳೈಯುಮ್ ವಿಡವೊಣ್ಣಾದು.**

---

ಮಾಡತಕ್ಕದ್ದೆಂದು ನೀವು ವಿಶೇಷಿಸಿ ಹೇಳಿರುವ ಅನುಜ್ಞಾ ಕೈಙ್ಕರ್ಯಗಳನ್ನೂ **ಅನುಷ್ಠಿಕ್ಕವೊಣ್ಣಾನ್ದ್ಯೆಯಾಲೇ** - ಅನುಷ್ಠಿಸಬೇಕಾಗಿಲ್ಲವಾದುದರಿಂದ **ಅವೈ ಎಲ್ಲಾಮ್**. ಅವುಗಳೆಲ್ಲವೂ, **ಔಪಾಧಿಕಙ್ಗಳಾಯ್**-ವ್ಯಾಜಮೂಲಕ **ಉಂಟಾ** ದವುಗಳಾದುದರಿಂದ, **ತ್ಯಾಜ್ಯಙ್ಗಳಾವ್** - ಬಿಡತಕ್ಕವುಗಳೆಂದು ಆಗುತ್ತವೆ. **ಇದು** ನಿಮಗೆ ಇಷ್ಟವಿಲ್ಲವಾದುದು ಎಂಬ ಭಾವವು. ಯಾವ **ಕಾರಣ**ದಿಂದ **ನಿತ್ಯನೈಮಿತ್ತಿಕ** ರೂಪ ಆಜ್ಞಾಕೈಙ್ಕರ್ಯಗಳೇ ಬೇಕಿಲ್ಲವೆಂದೂ ತ್ಯಾಜ್ಯಗಳೆಂದೂ ಹೇಳುತ್ತೀರೋ ಆ ಕಾರಣದಿಂದಲೇ ಈ ಮಾಲಾಕರಣಾದಿ ಅನುಜ್ಞಾಕೈಂಕರ್ಯಗಳೂ ತ್ಯಾಜ್ಯಗಳೇ ಎಂದು ಏರ್ಪಡುತ್ತದೆ. ಇದು ನಿಮ್ಮ ಅಭಿಪ್ರಾಯಕ್ಕೆ ಬಾಧಕವೆಂಬ **ಭಾವವು. ಈ** ಅನುಜ್ಞಾಕೈಂಕರ್ಯಗಳು ಮಾತ್ರ ಅವಶ್ಯಕವಾಗಿ ಮಾಡತಕ್ಕವೆಂದರೆ, **ಈ ಅನುಜ್ಞಾ** ಕೈಂಕರ್ಯಗಳನ್ನೆಸಗಲು ಬೇಕಾದ ಪಾರಶುದ್ಧ್ಯವನ್ನು ಉಂಟುಮಾಡುವ **ಆಜ್ಞಾ** ಕೈಙ್ಕರ್ಯಗಳೂ ಸಹ ಅವಶ್ಯಕವಾಗಿ ಅನುಷ್ಠೇಯಗಳೇ ಎಂದು ಮುಂದಿನ **ವಾಕ್ಯ**ದಿಂದ **ತಿ**ಳಿಸುತ್ತಾರೆ—**ಅವೈ ಅನುಷ್ಠಿಕ್ಕ ಅಕ್ಶೈಪಡಿಲ್** - ಅವುಗಳನ್ನು ಅನುಷ್ಠಿಸಬೇಕೆಂದು ಆಶೆಪಟ್ಟರೆ, **ಅವತ್ತುಕ್ಕು ಯೋಗ್ಯತಾಪಾದಕಙ್ಗಳಾನ** - ಅಂತಹ ಅನುಜ್ಞಾಕೈಂಕರ್ಯಗಳಿಗೆ ಯೋಗ್ಯತೆಯನ್ನುಂಟುಮಾಡುವ, **ಶೌಚಾಚಾರ ಸಂಸ್ಕಾರಾದಿಗಳೈಯುಮ್** – ಸ್ನಾನಸಂಧ್ಯಾವಂದನಾದಿಗಳ ಅನುಷ್ಠಾನ ಮತ್ತು ಸಂಸ್ಕಾರ ಮೊದಲಾದವುಗಳನ್ನೂ, **ವಿಡವೊಣ್ಣಾದು** - ಬಿಡುವದು ನ್ಯಾಯವಲ್ಲವು. ಸಂಸ್ಕಾರದಿಂದ ದ್ವಾದಶೋರ್ಧ್ವ ಪುಂಡ್ರ ಧಾರಣವೂ, ಆದಿಪದದಿಂದ ಮನ್ತ್ರೋಪದೇಶ, ಪ್ರಪನ್ನನಾಗಲು ಬೇಕಾದ ಸಂಸ್ಕಾರಾದಿಗಳಾದ ಆಚಾರ್ಯ ಉಕ್ತಿ ನಿಷ್ಠೆಗಳು ಮೊದಲಾದವೆಲ್ಲಾ ಹೇಳಲ್ಪಟ್ಟವು. ಅಥವಾ ಸಂಸ್ಕಾರ ಶಬ್ದದಿಂದಲೂ ನಿತ್ಯನೈಮಿತ್ತಿಕಗಳ ಅನುಷ್ಠಾನವೇ ಹೇಳಲ್ಪಟ್ಟಿತೆಂದೂ ಭಾವಿಸಬಹುದು. ಏಕೆಂದರೆ **"ಸಂಧ್ಯಾಹೀನೋಽಶುಚಿರ್ನಿತ್ಯಂ ಅನರ್ಹಸ್ಸರ್ವಕರ್ಮಸು"** ಎಂದು ಹೇಳಿರುವದರಿಂದ ನಿತ್ಯನೈಮಿತ್ತಿಕರೂಪ ಆಜ್ಞಾಕೈಙ್ಕರ್ಯಗಳನ್ನೆಸಗದ ಸಂಸ್ಕಾರವಿಲ್ಲದವನು, ಭಗವದಾರಾಧನೆ, ಕೈಙ್ಕರ್ಯ ಮೊದಲಾದವುಗಳಿಗೂ ಅನರ್ಹನೆಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ಆಜ್ಞಾ ಕೈಙ್ಕರ್ಯಗಳನ್ನು ತ್ಯಾಗಮಾಡಿ ಅನುಜ್ಞಾ ಕೈಙ್ಕರ್ಯಗಳನ್ನು ಮಾತ್ರ ಮಾಡುವೆನೆಂದು ಪ್ರಪನ್ನನು ಯತ್ನಿಸುವದು ನ್ಯಾಯವೇ ಅಲ್ಲವು. ಆಗ ಆತನು ಅಪವಿತ್ರನಾದುದರಿಂದ ಈ ಅನುಜ್ಞಾ ಕೈಂಕರ್ಯಗಳಿಗೆ ಬೇಕಾದ ಸಂಸ್ಕಾರವೇ ಅಧಿಕಾರವೇ, ಇಲ್ಲವೆಂದು ಹೇಳಿದಂತಾಯಿತು. ಆ ಕಾರಣ ದಿಂದಲೇ **ಅವತ್ತುಕ್ಕು ಯೋಗ್ಯತಾಪಾದಕಙ್ಗಳ್**, ಈ ನಿತ್ಯನೈಮಿತ್ತಿಕಗಳಾದ

ಆನಪಿಸ್ಸ್ವ,
ಆಹಾರಗ್ರು (ಗೃ) ಹ ಮನ್ತ್ರಾರ್ಥ ಜಾತ್ಯಾದಿ ನಿಯಮೈರ್ಯುತಃ ।
ಕುರ್ಯಾ ಲ್ಲಕ್ಷ್ಮೀಶ ಕೈಂಕರ್ಯಂ ಶಕ್ತ್ಯಾಽನನ್ಯ ಪ್ರಯೋಜನಃ ॥ ೧೨೨ ॥

---

ಅಜ್ಞಾ ಕೈಙ್ಕರ್ಯಗಳು ಅವುಗಳಿಗೆ ಯೋಗ್ಯತೆಯನ್ನುಂಟು ಮಾಡುವುವು ಎಂದು ಹೇಳಲ್ಪಟ್ಟವು. ಶೌಚ ವೆಂದರೆ ಅಂತರ್ಬಹಿ ಪಾರಿಶುದ್ಧ್ಯವು. ಬಹಿಶ್ಶೌಚವು ಸ್ನಾನ, ಮಡಿ ಬಟ್ಟೆಯ ಧಾರಣೆ, ವರುಣ ಮನ್ತ್ರ ಪಠನ, ಆಪೋಹಿಷ್ಠಾದಿ ಮನ್ತ್ರ ಸ್ನಾನಾದಿಗಳಿಂದುಂಟಾಗುತ್ತದೆ ಅಂತಶ್ಶೌಚವು ಸೂರ್ಯಶ್ಚಾದಿ ಮನ್ತ್ರಪಠನ ಮೂಲಕ ಪವಿತ್ರೀಕರಿಸಲ್ಪಟ್ಟ ತೀರ್ಥಾಪ್ರೋಶನ,ಗಾಯತ್ರೀಜಪ ಮೊದಲಾದವುಗಳಿಂದುಂಟಾಗುತ್ತದೆ. ಆಚಾರವೆಂದರೆ ಶಾಸ್ತ್ರವಿಹಿತರೀತಿಯಲ್ಲಿ ತನ್ನವರ್ಣಾಶ್ರಮ ಧರ್ಮಗಳನ್ನು ಸತ್ಸಂಪ್ರದಾಯಾನುಸಾರವಾಗಿ ನಡೆಸೋಣವು. ಇಂತಹ ಶೌಚಾಚಾರ ಸಂಸ್ಕಾರಾದಿಗಳನ್ನು ಹೊಂದದಿರುವವನು ಯಾವ ಕಾರ್ಯಕ್ಕೂ ಅನರ್ಹನೆಂದೂ, ಅಂತವನು ಮಾಡಿದ ಭಗವದ್ಭಾಗವತ ಕೈಙ್ಕರ್ಯಗಳಿಂದ ಭಗವಂತನು ಪ್ರೀತನಾಗನು ಎಂದು ಹೇಳಲ್ಪಟ್ಟಿತು. ಅಂತವನು ಮಾಡಿದ ಕೈಂಕರ್ಯವೆಲ್ಲಾ ನೀರಿನಲ್ಲಿ ಹೋಮಮಾಡಿದ ಹಾಗೆ ನಿರರ್ಥಕವೆಂದು ಹೇಳಲ್ಪಟ್ಟಿತು. ಈ ಸಂದರ್ಭದಲ್ಲಿ "ಏವಂ ವಿಲಂಘ್ಯ ಮರ್ತ್ಯೋ ಮರ್ಯಾದಾಂ ವೇದನಿರ್ಮಿತಾಂ । ಪ್ರಿಯೋಹಿ ನ ಪ್ರಿಯೋ ಮೇಽಸೌ ಮದಾಜ್ಞಾ ವ್ಯತಿವರ್ತನಾತ್" ಎಂಬ ಪ್ರಮಾಣವು ಅನುಸಂಧೇಯವು. ೧೪೬ನೆಯ ಪುಟವನ್ನು ನೋಡಿ. ಹಾಗೆಯೇ "ವರ್ಣಾಶ್ರಮಾಚಾರವತಾ ಪುರುಷೇಣ ಪರಃಪುಮಾನ್ । ವಿಷ್ಣುರಾರಾಧ್ಯತೇಪನ್ಥಾ ನಾನ್ಯಸ್ತತ್ತೋಷಕಾರಕಃ ಎಂಬುದೂ ಅನುಸಂಧೇಯವು.

ಹಿಂದೆ ನಿತ್ಯನೈಮಿತ್ತಿಕ ರೂಪ ಆಜ್ಞಾಕೈಙ್ಕರ್ಯಗಳು ಅವಶ್ಯಕಗಳಾಗಿ ಕರ್ತವ್ಯಗಳು ಬಿಡತಕ್ಕವುಗಳಲ್ಲವೆಂದು ಉಪಪಾದಿಸಲ್ಪಟ್ಟ ಅರ್ಥಗಳನ್ನೆಲ್ಲಾ ಮುಂದೆ ೧೫ ಕಾರಿಕೆಗಳ ಮೂಲಕ ಸ್ಥಾಪಿಸುತ್ತಾರೆ. ಇವುಗಳಲ್ಲಿ ಮೊದಲಿನ ಕಾರಿಕೆಯು ಪ್ರಭಾವ ವ್ಯವಸ್ಥಾಧಿಕಾರದಲ್ಲಿ ಅನುಗ್ರಹಿಸಲ್ಪಟ್ಟಿದ್ದರೂ ಪ್ರಕರಣಕ್ಕೆ ಆವಶ್ಯಕವಾಗಿ ಮುಖ್ಯವಾದುದರಿಂದ ಅದನ್ನೇ ಪುನಃ ಇಲ್ಲಿಯೂ ಉಪದೇಶಿಸ ತ್ತಾರೆ.—

ಆನಪಿಸ್ವ – ಹೀಗಾದ ನಂತರ ಎಂದರೆ ನಿತ್ಯನೈಮಿತ್ತಿಕಗಳಾದ ವರ್ಣಾಶ್ರಮ ಧರ್ಮಗಳನ್ನು ಅನುಷ್ಠಿಸಿಯೇ ತೀರಬೇಕೆಂದಾದ ನಂತರ, ನಮ್ಮ ಉಪದೇಶವೇನೆಂದರೆ ತಿಳಿಸುತ್ತಾರೆ.—

ಇದರ ಅರ್ಥಕ್ಕೆ ಹಿಂದೆ ೨೭೬ ರಿಂದ ೭೧ನೆಯ ಪುಟಗಳನ್ನು ನೋಡಿ. ಅಲ್ಲಿ ಗ್ರಹನಿಯಮಃ ಎಂಬುವಕ್ಕೆ ಅರ್ಥವನ್ನು ಬರೆದೆವು. ಪಾಠಾಂತರವಾದ ಗೃಹನಿಯಮಕ್ಕೆ ಅರ್ಥವೇನೆಂದರೆ ಪತಿತರೇ ನಾಸ್ತಿಕರೇ ಮೊದಲಾದವರು ಇರುವ ಮನೆಯು ಕೂಡದು, ಸತ್ಸಂಗವಿರುವ ಗೃಹವು ಉತ್ತಮವೆಂಬ ನಿಯಮವೆಂದು

ಮಙ್ಗಳ್ಯ ಸೂತ್ರ ವಸ್ತ್ರಾದೀನ್ ಸಂರಕ್ಷತಿ ಯಥಾವಧೂಃ ।
ತಥಾ ಪ್ರಪನ್ನ ಶ್ಯಾಸ್ತ್ರೀಯ ಪತಿಕೈಙ್ಕರ್ಯ ಪದ್ಧತಿಮ್ ॥ ೧೨೩ ॥

---

ಇಟ್ಟುಕೊಳ್ಳತಕ್ಕದ್ದು. ಹೀಗೆ ತಾನು ನಿತ್ಯವೂ ಮಾಡುವ ಆಜ್ಞಾನುಜ್ಞಾ ಸರ್ವ ಕರ್ಮಗಳನ್ನೂ ಅನುಷ್ಠಿಸಿ ಲಕ್ಷ್ಮೀನಾರಾಯಣರಲ್ಲಿ ಸಮರ್ಪಿಸತಕ್ಕದ್ದೆಂಬ ಭಾವವು. ಲಕ್ಷ್ಮಿಯು ಯಾವಾಗಲೂ ಪತಿಯೊಂದಿಗೇನೆ ನಿತ್ಯಯೋಗವನ್ನು ಹೊಂದಿರುವದರಿಂದಲೇ ಅವರಿಬ್ಬರಲ್ಲೂ ತ್ಯಾಗವನ್ನು ಹೇಳಿ ಸಮರ್ಪಿಸತಕ್ಕದ್ದೆಂಬ ಭಾವವು. ಈ ನಿತ್ಯಯೋಗವನ್ನು ಮನಸ್ಸಿನಲ್ಲಿಟ್ಟೇ ಹಿಂದೆಯೇ ನಿಗಮಾನ್ತ ಗುರುಗಳು **"ಶ್ರೀಮಾನ್ನಾರಾಯಣೋ ನಃ ಅಖಿಲತನುರ್ಮುಕ್ತಿದೋ ಮುಕ್ತಭೋಗ್ಯಃ"** ಎಂದು ಪರತತ್ತ್ವ ನಿರ್ಣಯವನ್ನು ಮಾಡಿರುತ್ತಾರೆ ಆದುದರಿಂದಲೇ ಇಲ್ಲಿ **ಲಕ್ಷ್ಮೀಶ ಕೈಂಙ್ಕರ್ಯಮ್** ಎಂದು ಪ್ರಯೋಗಿಸಿ ಅದಕ್ಕೆ ಇಬ್ಬರೂ **ಉದ್ದೇಶ್ಯ**ರೆಂದು ಉಪದೇಶಿಸಿರುತ್ತಾರೆ. **"ಮಯಿ ಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮ ಚೇತಸಾ"** (ಗೀ. ೩-೩೦) ರಲ್ಲಿ **ಮಯಿ** ಎಂದು ಹೇಳಲ್ಪಟ್ಟಿದ್ದರೂ, **ಮಯಿ** ಎಂಬುದಕ್ಕೆ **ಲಕ್ಷ್ಮೀಶೇ** ಎಂಬುದೇ ಅರ್ಥವು. ಇಲ್ಲಿ **ಅನನ್ಯಪ್ರಯೋಜನಃ** ಎಂಬುದಕ್ಕೆ ಪರಮಾತ್ಮನ ಪ್ರೀತಿ ಸಂಪಾದನವಲ್ಲದೇ ಬೇರೆ ಯಾವ ಪ್ರಯೋಜನವಿಲ್ಲವೆಂದು ಹೇಳಿದುದರಿಂದ ಐಹಿಕಾದಿ ಪ್ರಯೋಜನವೂ, ಅನ್ಯದೇವತಾದಿ ಪ್ರೀಣನ ಪ್ರಯೋಜನಾದಿಗಳು ವ್ಯಾವರ್ತಿಸಲ್ಪಟ್ಟವು. ಅನನ್ಯಪ್ರಯೋಜನವೆಂದು ಹೇಳಿರುವದರಿಂದ ನೀರನ್ನು ಬಡಿಯುವವರ ಹಾಗೆ ಯಾವ ಪ್ರಯೋಜನವೂ ಇಲ್ಲದೆ ಎಂಬರ್ಥವಲ್ಲವು ಭಗವತ್ಪ್ರೀತಿಯನ್ನುಂಟುಮಾಡುವದೇ ಪ್ರಯೋಜನವೆಂಬ ಭಾವವು.

ಹೀಗೆ ಶ್ರುತಿಸ್ಮೃತ್ಯಾದಿಗಳಲ್ಲಿ ವಿಧಿಸಲ್ಪಟ್ಟ ಆಚಾರಗಳಾದ ನಿತ್ಯನೈಮಿತ್ತಿಕಗಳು ಪ್ರಮಾಣ ಶರಣರಾದ ಪ್ರಪನ್ನರಿಗೂ ಅವಶ್ಯಕವಾಗಿ ಅನುಷ್ಠೇಯಗಳೆಂದೂ, ಹಾಗೆ ಅನುಷ್ಠಿಸದಿದ್ದರೆ ಪೂರ್ವಾಚಾರ್ಯರ ಸಂಪ್ರದಾಯಕ್ಕೆ ವಿರೋಧವಾಗುವದಲ್ಲದೇ ಭಗವನ್ನಿಗ್ರಹಕ್ಕೆ ಗುರಿಯಾಗುವರೆಂದೂ ಹೇಳಿ, ಮುಂದೆ ಅಂತಹ ಕೈಙ್ಕರ್ಯಗಳನ್ನೆಸಗುವದು ಪ್ರಪನ್ನನಿಗೆ ಸ್ವರೂಪವೆಂದು ಮುಂದಿನ ಎರಡು ಕಾರಿಕೆಗಳ ಮೂಲಕ ದೃಷ್ಟಾಂತಮೂಲಕ ಅನ್ವಯವ್ಯತಿರೇಕರೀತ್ಯಾ ಸಮರ್ಥಿಸುತ್ತಾರೆ.—
**ವಧೂಃ** - ಮದುವೆಯಾದ ಹೆಂಡತಿಯು, **ಮಙ್ಗಳ್ಯಸೂತ್ರವಸ್ತ್ರಾದೀನ್** - ವಿವಾಹಕಾಲದಲ್ಲಿ ಕೊಟ್ಟ ಮಾಂಗಲ್ಯವನ್ನೂ ಅದು ಕಟ್ಟಿರುವ ಸೂತ್ರವನ್ನೂ ಆಗ ಕೊಟ್ಟ ಶೀರೆ, ಕುಪ್ಪಸ ಆದಿಶಬ್ದದಿಂದ ಆಭರಣ ಕಾಲುಂಗರ ಮೊದಲಾದವುಗಳನ್ನೂ, **ಯಥಾಸಂರಕ್ಷತಿ** - ಪತಿಯ ಪ್ರೀತಿಯನ್ನು ಕಾಪಾಡಿಕೊಳ್ಳುವದಕ್ಕಾಗಿ ಹೇಗೆ ಧರಿಸಿರುವಳೋ, **ತಥಾ** – ಹಾಗೆಯೇ, **ಪ್ರಪನ್ನಃ** - ನೂತನ ವಿವಾಹ ಸ್ತ್ರೀ ಸ್ಥಾನೀಯನಾಗಿ ಮಹಾ ಪವಿತ್ರತೆಯಹಾಗೆ ಪತಿಪಾರಾರ್ಥ್ಯವುಳ್ಳ ಈ **ಪ್ರಪನ್ನನೂ,**

**ಯದ್ವನ್ಮಙ್ಗಳ್ಯ ಸೂತ್ರಾದೇ ಸ್ತ್ಯಾಗೇ ಸಂರಕ್ಷಣೇಪಿವಾ |**
**ರಕ್ಷೇನ್ನಿರೋಧ್ಯೈದ್ಭೋಗೈಸ್ತ್ಯಾಪತಿ ಸ್ತದ್ವದಿಹಾಪಿ ನಃ || ೧೨೪ ||**

---

**ಶಾಸ್ತ್ರೀಯ ಪತಿ ಕೈಂಕರ್ಯಪದ್ಧತಿಮ್** - ಶಾಸ್ತ್ರಗಳಲ್ಲಿ ವಿಹಿತಗಳಾದ ತನಗೆ ಪತಿ ಎಂದರೆ ಸ್ವಾಮಿಯಾದ, ಅಥವಾ " ಪತಿಂ ವಿಶ್ವಸ್ಯ " ಎಂಬಲ್ಲಿ ಹೇಳಿರುವ ಹಾಗೆ ಸರ್ವಶೇಷಿಯಾದ. ಅಥವಾ ಪತಿವ್ರತಾ ಧರ್ಮದಹಾಗೆ ಧರ್ಮಗಳುಳ್ಳ ತನಗೆ ಪತಿ ಸ್ಥಾನೀಯನಾದ ಭಗವಂತನ, **ಕೈಂಕರ್ಯ ಪದ್ಧತಿಮ್** - ಕೈಂಕರ್ಯ ಮಾಡುವ ಮರ್ಯಾದೆಯನ್ನು, ರೀತಿಯನ್ನು, **ಸಂರಕ್ಷತಿ** - ರಕ್ಷಿಸಿಕೊಳ್ಳುವನು. ವಧೂ ಕಾಲದಲ್ಲಿ ಪತಿಯು ದಯಪಾಲಿಸಿದ ಆಭರಣಾದಿಗಳು ಅನರ್ಘವಾದವುಗಳು. ಸಾಧ್ವಿಯು ಅದನ್ನು ಬಹಳ ಆದರದಿಂದ ಕಾಪಾಡಿಕೊಳ್ಳುವಳು ಎಂಬ ಭಾವವು. ಶ್ರೀರಾಮಚಂದ್ರ ಪ್ರಭುವೇ ವಿವಾಹ ಕಾಲದಲ್ಲಿ ತಮ್ಮ ಮಾವನಾದ ಜನಕ ಮಹಾ ರಾಜನಿಂದ ಸೀತೆಗೆ ಕೊಟ್ಟ ಆಭರಣವನ್ನು ಕುರಿತು ಶ್ಲಾಘಿಸಿರುವಾಗ ಇನ್ನು ಸಾಧ್ವಿಯಾದವಳು ತನ್ನ ಗಂಡನ ಮನೆಯಲ್ಲಿ ಕೊಟ್ಟ ಆಭರಣವನ್ನು ಅಮೋಘ ವಾಗಿ ಭಾವಿಸುವಳೆಂಬುದು ಕೈಮುತಿಕನ್ಯಾಯಸಿದ್ಧವು. ಸೀತೆಯು ಆಂಜನೇ ಯನ ಮೂಲಕ ಕಳುಹಿಸಿಕೊಟ್ಟ ಮಣಿ ರತ್ನವನ್ನು ಕಂಡು, ಶ್ರೀರಾಮಪ್ರಭುವು "ಹೃದಯೇಕೃತ್ವಾ ಪ್ರರುರೋದ ಸಲಕ್ಷ್ಮಣಃ" ಎಂದು ಬಹಳವಾಗಿ ಶೋಕಿಸಿ ದವರಾಗಿ ಹೇಳುತ್ತಾರೇನೆಂದರೆ—

**ಮಣಿರತ್ನ ಮಿದಂ ದತ್ತಂ ವೈದೇಹ್ಯಾ ಶ್ವಶುರೇಣ ಮೇ |**
**ವಧೂಕಾಲೇ ಯಥಾಬದ್ಧ ಮಧಿಕಂ ಮೂರ್ಧ್ನಿ ಶೋಭತೇ** || ಎಂಬದಾಗಿ

ಪ್ರಪನ್ನನನ್ನು ಶ್ರೀ ನಿಗಮಾಂತರವರು "ಶುದ್ಧಾನಾಂ ತು ಲಭೇಮಹಿ **ಸ್ಥಿರಧಿಯಾಂ ಶುದ್ಧಾನ್ತಸಿದ್ಧಾಂತಿನಾಂ**"(೧೪೧೩ನೆಯ ಪುಟ)ಎಂಬಲ್ಲಿ ಅಂತಃಪುರ ಸ್ತ್ರೀಯಹಾಗೆ ಸಿದ್ಧಾಂತವುಳ್ಳವಳೆಂದು ಪತಿಪಾರಾರ್ಥ್ಯವುಳ್ಳವರಾದುದರಿಂದ ಹೇಳಿ ರುತ್ತಾರೆ. (ಪುರುಷಾರ್ಥಕಾಷ್ಠಾಧಿಕಾರದ ೧೪೨ನೆಯ ಪುಟವನ್ನು ನೋಡಿ.)

ಹಿಂದೆ ಮಙ್ಗಳಸೂತ್ರಾದಿಗಳನ್ನು ಆದರದಿಂದ ರಕ್ಷಿಸಿದರೆ ಪತಿಯು ಪ್ರೀತನಾಗುವಹಾಗೆ, ಪ್ರಪನ್ನನಿಗೆ ಸ್ವರೂಪದಾಯಕವಾದ ಭಗವಂತನ ಆಜ್ಞಾ ನುಜ್ಞಾ ಕೈಂಕರ್ಯಗಳನ್ನೆಸಗಿದರೆ ಪ್ರೀತನಾಗುವನೆಂದು ಹೇಳಿದರು. ಈಗ ಹಾಗೆ ಕೈಂಕರ್ಯಗಳನ್ನು ಎಸಗದಿದ್ದರೆ, ಪತಿಯು ಮಾಂಗಲ್ಯಾದಿಗಳನ್ನು ತ್ಯಾಗ ಮಾಡಿದ ಪತ್ನಿಯನ್ನು ಹೇಗೆ ಶಿಕ್ಷಿಸಿ, ಹಾಗೂ ಹೇಗೆ ರಕ್ಷಿಸುವನೋ, ಅದೇ ರೀತಿ ಯಲ್ಲೇ ಲೋಕಪತಿಯೂ ಆಜ್ಞಾ ಕೈಂಕರ್ಯಗಳನ್ನು ತ್ಯಾಗಮಾಡಿದುದರಿಂದ ಶಿಕ್ಷಿಸಿ, ಪ್ರಪನ್ನನಾದುದರಿಂದ ರಕ್ಷಿಸುವನೆಂದು ಹೇಳುತ್ತಾರೆ. **ಮಙ್ಗಳಸೂತ್ರಾದೇಃ** - ಮಾಂಗಲ್ಯಸೂತ್ರ ಮೊದಲಾದವುಗಳ, **ತ್ಯಾಗೇ**-ಬಿಡೋಣದರಲ್ಲಿ ಎಂದರೆ

**ಅವಜ್ಞಾರ್ಥ ಮನರ್ಥಾಯ ಭಕ್ತಜನ್ಮಾದಿ ಚಿನ್ತನಮ್ ।**
**ಶಾಸ್ತ್ರವ್ಯವಸ್ಥಾಮಾತ್ರಾರ್ಥಂ ನತು ತದ್ದೂಷ್ಯತಿ ಕ್ವಚಿತ್ ॥ ೧೨೫ ॥**

---

ಬಿಟ್ಟರೆ ಎಂಬರ್ಥವು, **ಭೋಗೈ** - ಭೋಗಗಳಿಂದ, **ಪತಿಃ ನಿರುಂಧ್ಯಾತ್** - ಪತಿಯು ತಪ್ಪಿಸಿ ಬಿಡುವನು ; ಆದರೆ ಆಕೆಯನ್ನು ಬಿಡುವದಿಲ್ಲವು. **ಸಂರಕ್ಷಣೇ ಪಿವಾ** - ಸಂರಕ್ಷಣೆಯಲ್ಲೂ ಕೂಡ, **ರಕ್ಷೇದ್ವಾ** - ರಕ್ಷಿಸುವನೋ, **ಹಾಗೆಯೇ ಇಹಾಪಿ** - ಈ ಪ್ರಪನ್ನರ ಸಂದರ್ಭದಲ್ಲೂ, ಭಗವಂತನು, **ನಃ** - ನಮ್ಮಗಳನ್ನು ತ್ಯಾಗಮಾಡಿದರೆ ಶಿಕ್ಷಿಸಿ ರಕ್ಷಿಸುವನು ;ತ್ಯಾಗಮಾಡದಿದ್ದರೆ ಶಿಕ್ಷೆ ಇಲ್ಲದೆ ರಕ್ಷಿಸುವನು.

ಹಿಂದೆ **ಜಾತ್ಯಾದಿ ನಿಯಮ್ಯೈಃ** ಕೈಙ್ಕರ್ಯಗಳನ್ನು ಮಾಡಬೇಕೆಂದು ಉಪದೇಶಿಸಿದುದು ಸರಿಯೋ ? ಏಕೆಂದರೆ, "**ಯಃ ಶೂದ್ರಂ ಭಗವದ್ಭಕ್ತಂ ನಿಷಾದಂ ಶ್ವಪಚಂ ತಥಾ । ವೀಕ್ಷತೇ ಜಾತಿಸಾಮಾನ್ಯಾತ್ಸಯಾತಿ ನರಕಂ ನರಃ**" ಎಂಬಲ್ಲಿ ಜಾತಿಸಾಮಾನ್ಯದಿಂದ ಭಗವದ್ಭಕ್ತರನ್ನು ಕಾಣಕೂಡದೆಂದು ಹೇಳಿದೆಯಲ್ಲಾ ? ಎಂದರೆ ಹಾಗೆ ಜಾತಿಸಾಮಾನ್ಯದಿಂದ ಕಾಣುವದು ನರಕ ಹೇತುವೇ ನಿಶ್ಚಯವು- ಆದರೆ ಜಾತಿ ವ್ಯವಸ್ಥೆಯು ಏತಕ್ಕೆ ? ಎಂದರೆ ಶಾಸ್ತ್ರ ವ್ಯವಸ್ಥೆಗಾಗಿ ಮಾತ್ರವೇ ಜಾತಿಯು ಹೇಳಲ್ಪಟ್ಟಿರುವುದು. ಆದುದರಿಂದ **ಜಾತ್ಯಾದಿ ನಿಯಮ್ಯೈಃ** ಎಂದು ಹೇಳಿದೆವು. ದೂಷಣೆಗಾಗಿಯಲ್ಲವು. ದೂಷಣ ವೇನೋ ನಾರಕೀಯವೇ ಎಂಬ ಭಾವದಿಂದ ಹೇಳುತ್ತಾರೆ.—**ಅವಜ್ಞಾರ್ಥಂ** - ಅವಮಾನಮಾಡುವದಕ್ಕಾಗಿ, **ಭಕ್ತಜನ್ಮಾದಿ ಚಿನ್ತನಮ್**—ಭಕ್ತರುಗಳಾದ ವಿದು ರಾದಿಗಳ ಕೀಳು ಜನ್ಮವನ್ನು ಮನಸ್ಸಿಗೆ ತ ದುಕೊಳ್ಳೋಣವು. **ಅನರ್ಥಾಯ**- ಮೇಲಿನ ಪ್ರಮಾಣದಲ್ಲಿ ಹೇಳಿರುವಹಾಗೆ ನರಕಪ್ರಾಪ್ತಿ ಮೊದಲಾದ ಶಿಕ್ಷೆಗಳಿಗೆ ಗುರಿಪಡಿಸುವವಕ್ಕಾಗಿ, **ಭವತಿ** - ಎಂದು ಕ್ರಿಯಾಪದವನ್ನು ಇಟ್ಟುಕೊಳ್ಳಬಹುದು. **ಶಾಸ್ತ್ರವ್ಯವಸ್ಥಾಮಾತ್ರಾರ್ಥಂ** - ಶಾಸ್ತ್ರದಲ್ಲಿ ಹೇಳಿರುವ ಅನುಷ್ಠಾನಕ್ರಮದ ವ್ಯವ ಸ್ಥೆಯನ್ನು ತಿಳಿಯುವದಕ್ಕೆ ಮಾತ್ರವಾದ, **ತತ್** - ಅಂತಹ ವ್ಯವಸ್ಥಾಕ್ರಮವು, **ಕ್ವಚಿತ್** - ಯಾವ ಸಂದರ್ಭದಲ್ಲೂ, **ನದೂಷ್ಯತಿ** - ದೂಷಿಸಲ್ಪಟ್ಟಿಲ್ಲವು. ಶಾಸ್ತ್ರ ವ್ಯವಸ್ಥೆಮಾಡಿ ಕೇಳುವದಕ್ಕಾಗಿ ಅವರುಗಳ ಜನ್ಮವು ಯಾವುದೆಂದು ಇತಿಹಾಸ ಗಳಲ್ಲಿ ಹೇಳಲ್ಪಟ್ಟಿವೆಯೇ ವಿನಾ, ಅಂತಹ ಮಹಾನುಭಾವರುಗಳನ್ನು ನಿಕೃಷ್ಟತೆ ಯಿಂದ ಭಾವಿಸತಕ್ಕದ್ದೆಂಬ ಭಾವದಿಂದ ಅಲ್ಲಿ ಹೇಳಲ್ಪಡಲಿಲ್ಲವೆಂಬ ಭಾವವು. ಇವರುಗಳು ಮಹಾ ಪ್ರಾಜ್ಞರಾದರೂ ತಮ್ಮ ಜನ್ಮಗಳಿಗೆ ವಿಹಿತಗಳಾದ ಕರ್ಮಾನ ಷ್ಠಾನವನ್ನೇ ಮಾಡಿ ಸ್ವಾಮಿಕೃಪೆಯನ್ನು ಹೊಂದಿದವರಾದರೆಂದು ಹೇಳುವದಕ್ಕಾ ಗಿಯೇ ಅವರುಗಳ ಕೀಳು ಜನ್ಮವು ಇತಿಹಾಸಗಳಲ್ಲಿ ಪ್ರೋಕ್ತವೆಂಬ ಭಾವವು. ಈ ಅಭಿಪ್ರಾಯವನ್ನೇ ದೃಷ್ಟಾಂತಗಳನ್ನು ಕೊಟ್ಟು ಮುಂದಿನ ಕಾರಿಕೆಯಲ್ಲಿ ಉಪಪಾದಿ ಸುತ್ತಾರೆ.

**ಅತ ಏವಹಿ ಶಾಸ್ತ್ರೇಷು ತತ್ತಜ್ಜಾತ್ಯೈವದರ್ಶಿತಾಃ ।**
**ಧರ್ಮವ್ಯಾಧ ತುಲಾಧಾರ ಶಬರೀ ವಿದುರಾದಯಃ ॥ ೧೨೬ ॥**

---

**ಶಾಸ್ತ್ರವ್ಯವಸ್ಥಾನಮಾತ್ರಮ್** - ಶಾಸ್ತ್ರದಲ್ಲಿ ಹೇಳಿರುವ ವ್ಯವಸ್ಥೆಯನ್ನು ತಿಳಿಯುವದಕ್ಕೆ ಮಾತ್ರವೇ ಅದಪಕ್ಷದಲ್ಲಿ ಎಂದರೆ ಯಾವ ವರ್ಣದವರಿಗೂ ಯಾವ ಆಶ್ರಮಿಗಳಿಗೂ ನಿಯತವಾದ ಅನುಷ್ಠಾನಗಳು ಎಂಬುದನ್ನು ತಿಳಿಯುವುದಕ್ಕಾಗಿ ಮಾತ್ರವೇ; ಅದರೆ, ತತ್ - ಅಂತಹ ಜಾತ್ಯಾದಿ ನಿರೂಪಣೆಯೂ, **ಕ್ವಚಿತ್** – ಎಲ್ಲಿಯೂ, **ನದುಷ್ಯತಿ** – ದೋಷಯುಕ್ತವಾಗುವದಿಲ್ಲವು. ಬ್ರಾಹ್ಮಣನ ವಿಹಿತ ಕರ್ಮಗಳು ಯಾವುವು ? ಕ್ಷತ್ರಿಯ ವೈಶ್ಯಾದಿಗಳಿಗೆ ಸೇರಿದವು ಯಾವವು ? ಅವರುಗಳಿಗೆ ಯಾವ ಯಾವುದರಲ್ಲಿ ಅಧಿಕಾರವು? ಶೂದ್ರನಿಗೆ ವೇದಪಾಠವನ್ನು ಹೇಳಬಹುದೇ ? ಅವರುಗಳಿಗೆ ಮಂತ್ರಗಳ ಉಪದೇಶ ಹೇಗೆ ? ಬ್ರಾಹ್ಮಣನು, ಇತರ ಶೂದ್ರಾದಿಗಳು ಪ್ರಪನ್ನರಾದುದರಿಂದ ಅವರಿಗೆ ನಮಸ್ಕರಿಸಬಹುದೇ ? ಸಹಪಙ್ಕ್ತಿ ಭೋಜನಕ್ಕೆ ಯೋಗ್ಯರೇ ? ಇತ್ಯಾದಿಗಳ ವ್ಯವಸ್ಥೆಯಾಗಿ, ಜಾತ್ಯಾದಿಗಳ ಪ್ರಶ್ನೆ ಮೊದಲಾದವು ದೋಷಾವಹವಲ್ಲವೆಂಬ ತಾತ್ಪರ್ಯವು. ಹಾಗಲ್ಲದೆ ಅಂತವರು ಕೀಳು ಜಾತಿಗೆ ಸೇರಿದವರೆಂದು ತುಚ್ಛವಾಗಿ ಕಾಣುವದಕ್ಕಾಗಿ ಜಾತ್ಯಾದಿಗಳ ನಿರೂಪಣೆಯು ತುಂಬಾ ದೋಷಾವಹವೆಂಬ ಭಾವವು. ಅಂತವರನ್ನೂ ಭಾಗವತರೆಂದೇ ಭಾವಿಸಬೇಕೆಂಬ ಭಾವವು.

ಅನುಷ್ಠಾನವ್ಯವಸ್ಥೆಗಾಗಿ ಜಾತ್ಯಾದಿ ನಿರೂಪಣವು ದೋಷಾವಹವಲ್ಲವೆಂದು ಅಭಿಪ್ರಾಯಪಟ್ಟಿರಲ್ಲಾ; ಅದನ್ನು ಸಮರ್ಥಿಸಬಲ್ಲಿರಾ? ಎಂದರೆ ಅಂತಹ ಸಮರ್ಥನೆಗಾಗಿ ಮುಂದಿನ ಕಾರಿಕೆಯನ್ನು ಅನುಗ್ರಹಿಸಿ ಶಾಸ್ತ್ರಕಾರರಾದ ಮಹರ್ಷಿಗಳೇ ಅಂತಹ ಜಾತ್ಯಾದಿ ವ್ಯವಸ್ಥೆಯನ್ನು ಮಾಡಿರುತ್ತಾರೆಂದು ಅತಏವಹಿ ಎಂದಾರಂಭಿಸಿ ಹೇಳುತ್ತಾರೆ. ॥ ೧೨೫ ॥

**ಅರ್ಥ—ಅಥಏವಹಿ** - ಆ ಕಾರಣದಿಂದಲೇ ಎಂದರೆ ಅವಮಾನಕ್ಕಾಗಿ ಅಲ್ಲದೆ ಅನುಷ್ಠಾನಕ್ರಮ ವ್ಯವಸ್ಥೆಗಾಗಿ ಜಾತ್ಯಾದಿ ನಿರೂಪಣವು ಆವಶ್ಯಕವಾದುದರಿಂದಲೇ, **ಧರ್ಮವ್ಯಾಧರು**, ತುಲಾಧಾರರು, **ಶಬರಿಯು, ವಿದುರಾದಯಃ** ವಿದುರರೇ ಮೊದಲಾದವರು, ಆದಿ ಶಬ್ದದಿಂದ ಗುಹ, ವಿಭೀಷಣ, ಸುಗ್ರೀವಾದಿಗಳು ಹೇಳಲ್ಪಟ್ಟರು. **ತತ್ತಜ್ಜಾತ್ಯೈವದರ್ಶಿತಾಃ**-ಅವರವರುಗಳ ಜಾತಿಗಳನ್ನು ತಾವೇ ಪ್ರಕಟಿಸಿರುತ್ತಾರೆ : ಎಂದರೆ ಅವರವರುಗಳ ಜಾತ್ಯನುಸಾರವಾಗಿ ಅವರುಗಳ ಅನುಷ್ಠಾನ ಪ್ರವೃತ್ತಿಗಳನ್ನು ಪ್ರದರ್ಶಿಸಿರುತ್ತಾರೆಂಬ ಭಾವವು.

ಧರ್ಮವ್ಯಾಧರ ವೃತ್ತಾಂತಕ್ಕೂ ಶಬರಿ ವೃತ್ತಾಂತಕ್ಕೂ ೧೮೬೩-೬೪ ಮತ್ತು ೨೫೫೭ನೆಯ ಪುಟಗಳನ್ನು ನೋಡಿ. ೧೮೬೪ನೆಯ ಪುಟದಲ್ಲಿ ಒಂದು ತಪ್ಪು ವಾಕ್ಯವುಂಟು. ಅದು ಯಾವುದೆಂದರೆ "ವಿದುರನು ಶೂದ್ರನಾಗಿದ್ದರೂ ಹೇಗೆ

ಉಪಾಸನಾಧಿಕಾರಿಯಾದನೋ, ಹಾಗೆಯೇ ಶಬರಿಯು ಸ್ತ್ರೀಯಾಗಿದ್ದರೂ ಉಪಾಸ ಕಳು" ಎಂಬ ವಾಕ್ಯವು ತಪ್ಪು. ಇದನ್ನು ತೆಗೆದುಹಾಕತಕ್ಕದ್ದಾಗಿರುತ್ತದೆ. ಒಬ್ಬ ಪಂಡಿತರಾದ ದಾಸನ ಮಿತ್ರರು ಶ್ರೀ ನಿಗಮಾನ್ತ ದೇಶಿಕರ ಅಭಿಪ್ರಾಯದ ಪ್ರಕಾರ ಇವರುಗಳು ವಿಶೇಷಾಧಿಕಾರಿಗಳಾದುದರಿಂದ ಶಾಸ್ತ್ರಾತಿಕ್ರಮಣ ದೋಷವು ಇವರಿ ಗಿರುವದಿಲ್ಲವೆಂದು ತಿಳಿಸಿದುದರಿಂದ ಹಾಗೆ ಬರೆದೆನು. ಅದು ಸರಿಯಲ್ಲವೆಂದು ಈಗ ಈ ಕಾರಿಕೆಗಳಿಂದ ತೋರುತ್ತವೆ. " ಧರ್ಮವ್ಯಾಧಾದಯೋಽಪ್ಯನ್ಯೇ ಪೂರ್ವಾ ಭ್ಯಾಸಾಜ್ಜುಗುಪ್ಸಿತೇ । ವರ್ಣಾವರತ್ವೇ ಸಂಪ್ರಾಪ್ತಾ ಸ್ಸಂಸಿದ್ಧಿಂ ಶ್ರಮಣೀ ಯಥಾ ॥ " ಎಂಬ ವಿಷ್ಣುಧರ್ಮ ಶ್ಲೋಕಕ್ಕೆ ಮಾಡಿರುವ ತಪ್ಪಾದ ಅರ್ಥವೇ ಇದಕ್ಕೆ ಕಾರಣವು. ಅವರ ಅರ್ಥವೇನೆಂದರೆ ಪೂರ್ವಾಭ್ಯಾಸಾತ್ ಎಂದಿರುವದರಿಂದ ಹಿಂದಿನ ಉಪಾಸನದ ಅಭ್ಯಾಸವಿದ್ದುದರಿಂದ, ಈಗಲೂ ಅದನ್ನನುಸರಿಸಿ ಉಪಾ ಸನೆಯನ್ನು ಮಾಡಿದರೆಂದು ಅರ್ಥಮಾಡಿದರು. ಇದರ ಸರಿಯಾದ ಅರ್ಥವೇ ನೆಂದರೆ! ಈ ವಾಕ್ಯವು ಒಂದು ಅನುಮಾನ ಪ್ರಮಾಣ ವಾಕ್ಯದಹಾಗೆ ಇದೆ; ಧರ್ಮವ್ಯಾಧಾದಯಃ ಸಂಸಿದ್ಧಿಂ ಸಂಪ್ರಾಪ್ತಾಃ ಎಂಬುದು ಪ್ರತಿಜ್ಞಾವಾಕ್ಯವು. ಇದಕ್ಕೆ ಹೇತುವು ಪೂರ್ವಾಭ್ಯಾಸಾತ್ ಎಂದೂ, ದೃಷ್ಟಾಂತವು ಶ್ರಮಣೀಯಥಾ ಎಂದೂ, ಇರುತ್ತದೆ. ಅಭ್ಯಾಸವೆಂದರೆ ಅವರ ಅರ್ಥವಲ್ಲವು. ಶ್ರೀ ಯತಿವರ್ಯರು ಶ್ರೀ ಭಾಷ್ಯದಲ್ಲಿ, ಸಾಧನ ಸಪ್ತಕಗಳನ್ನು ವಿವರಿಸುವ ಸಂದರ್ಭದಲ್ಲಿ "ಆರಮ್ಭಣಂ ಸಂಶೀಲನಂ ಪುನಃಪುನರಭ್ಯಾಸ ಇತಿ" ಎಂದು ಅಪ್ಪಣೆ ಕೊಡಿಸಿರುತ್ತಾರೆ. ಒಂದು ಶುಭಾಶ್ರಯವೆನಿಸುವ ದಿವ್ಯಮಙ್ಗಳವಿಗ್ರಹದ ಪುನಃ ಪುನಃ ಸ್ಮೃತ್ಯಭ್ಯಾ ಸವೇ ಅಭ್ಯಾಸವೆನಿಸುತ್ತವೆ. ಸರ್ವವಾಕ್ಯವೂ ಸಾವಧಾರಣವೆಂಬ ಹೇಳಿಕೆಯ ಪ್ರಕಾರ ಪೂರ್ವಾಭ್ಯಾಸಾತ್ ಎಂಬುದು ಹೇತುವಾದುದರಿಂದ ಪೂರ್ವಾಭ್ಯಾಸಾದೇವ ಎಂಬರ್ಥವಾಗುತ್ತದೆ. ಹಿಂದಿನ ಜನ್ಮದಲ್ಲಿ ಮಾಡಿದ ಉಪಾಸನೆಯಿಂದಲೇ, ಸಂಸಿದ್ಧಿಯನ್ನು ಹೊಂದಿದರು. ಹೇಗೆ? ಎಂದರೆ ದೃಷ್ಟಾಂತವು ಶ್ರಮಣೀಯಥಾ ಶಬರಿಯಹಾಗೆ. ಶಬರಿಯು ಸ್ತ್ರೀಯಾದುದರಿಂದಲೂ, ನೀಚ ಜನ್ಮವಾದ ಶಬರತ್ವವು ಇದ್ದುದರಿಂದಲೂ ಹೇಗೆ ಮತಂಗಋಷಿಯನ್ನಾಶ್ರಯಿಸಿದ ಬ್ರಾಹ್ಮಣ ಸಂಶ್ರಯಣದಿಂದ ಮೋಕ್ಷವನ್ನು ಹೊಂದಿದಳೋ ಹಾಗೆ. ಈಕೆಯು ಹೇಗೆ ಉಪಾಸನಕ್ಕೆ ಅನರ್ಹಳಾದುದರಿಂದ ಶಾಸ್ತ್ರಮರ್ಯಾದೆಯನ್ನು ಹೇಗೆ ಅತಿಕ್ರಮಿಸ ಲಿಲ್ಲವೋ, ಹಾಗೆ ಧರ್ಮವ್ಯಾಧರೂ ತುಲಾಧಾರರೂ ವಿದುರರೂ ಸಹ ಹೀನಜಾತಿ ಯವರೆಂದೇ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವದರಿಂದ ಅವರುಗಳೂ ಕೂಡ ಶಾಸ್ತ್ರಾತಿ ಕ್ರಮಣವನ್ನು ಮಾಡಲಿಲ್ಲವು. ಇದು ವಿದುರರ ಪ್ರವೃತ್ತಿಯಲ್ಲಿ ಸುವ್ಯಕ್ತವು. ಈ ಧರ್ಮವ್ಯಾಧರೂ, ತುಲಾಧಾರರೂ ವಿದುರರೂ ಮೂವರೂ ತಮಗಿಂತ ಉತ್ಕೃ ಷ್ಟ ಜಾತಿಯವರಿಗೆ ಧರ್ಮವನ್ನು ಬೋಧಿಸಿರುತ್ತಾರೆ. ಮೊದಲಿನವರಿಬ್ಬರು ಬ್ರಾಹ್ಮ ಣರಿಗೂ, ಮೂರನೆಯವರು ಕ್ಷತ್ರಿಯನಾದ ಧೃತರಾಷ್ಟ್ರನಿಗೂ ಉಪದೇಶವನ್ನು ಮಾಡಿ

ರುತ್ತಾರೆ. ಇದರಲ್ಲಿ ಶಾಸ್ತ್ರಾತಿಕ್ರಮಣವೇನೂ ಇಲ್ಲವು. ಆ ಬ್ರಾಹ್ಮಣರೂ ಧೃತರಾಷ್ಟ್ರನೂ ತಮಗೆ ಉಪದೇಶಿಸಿದವರಿಗೆ ಪ್ರಣಾಮಾದಿಗಳನ್ನು ಮಾಡಿ ಶಾಸ್ತ್ರಾತಿಕ್ರಮಣವನ್ನು ಮಾಡಿದರೆಂದು ಎಲ್ಲಿ ಇತಿಹಾಸಗಳಲ್ಲಿ ಹೇಳಿದೆ? ಅವರುಗಳು ಪ್ರಾಜ್ಞರೆಂದು ಸಾಧಾರಣ ಮರ್ಯಾದೆಯನ್ನು ತೋರಿಸಿದರೆಂದು ಹೇಳಲ್ಪಟ್ಟಿರುತ್ತದೆ. ವಿದುರರಿಂದ ಧೃತರಾಷ್ಟ್ರನು ಧರ್ಮೋಪದೇಶವನ್ನೆಲ್ಲಾ ಕೇಳಿದ ನಂತರ, ಸನತ್ಸುಜಾತರು "ಮೃತ್ಯುರ್ನಾಸ್ತೀತಿ" ಎಂದು ಉಪದೇಶಿಸುತ್ತಾರೆ. ಎಂದರೆ ಸಂಸಾರನಾಶಕ ಬ್ರಹ್ಮವಿದ್ಯೆಯನ್ನು ಉಪದೇಶಿಸುತ್ತಾರೆ. ಅದೂ ತಿಳಿಯತಕ್ಕದ್ದಾಗಿರುತ್ತದೆ ಎಂದು ವಿದುರರು ಹೇಳಲು ಅದನ್ನು ನೀನೇ ಹೇಳು ಎಂದು ಧೃತರಾಷ್ಟ್ರನು ಕೇಳಲು; ಅದಕ್ಕೆ ವಿದುರರು ಶೂದ್ರಯೋನಾವಹಂಜಾತಃ ನಾತೋಽನ್ಯದ್ವಕ್ತು ಮುತ್ಸಹೇ" ಎಂದು ತನಗೆ ಉಪದೇಶಿಸುವ ಅಧಿಕಾರವಿಲ್ಲವೆಂದೂ, ಬ್ರಹ್ಮವಿದ್ಯೆಯೆಂದು ಹೇಳಲೂ ಕೂಡ ಯೋಗ್ಯತೆ ಇಲ್ಲವೆಂದು "ಅನ್ಯತ್" ಎಂಬ ಶಬ್ದ ಪ್ರಯೋಗಮಾಡಿದ ಮಹನೀಯರು ತಾವೇ ಶಾಸ್ತ್ರಾತಿಕ್ರಮಣವನ್ನು ಮಾಡಿ ತನಗೆ ಅಧಿಕಾರವಿಲ್ಲದ ಉಪಾಸನವನ್ನು ಮಾಡಿಯಾರೇ? ಭಾರತದಲ್ಲಿ ಎಲ್ಲೂ ಶ್ರೀ ವಿದುರರು ಉಪಾಸನವನ್ನು ಮಾಡಿದರೆಂಬ ಹೇಳಿಕೆ ಇಲ್ಲವು. ಆದುದರಿಂದ ವಿದುರರು ವಿಶೇಷಾಧಿಕಾರಿಯು, ಶೂದ್ರರಾದರೂ ಉಪಾಸನವನ್ನು ಮಾಡಿ ಮೋಕ್ಷವನ್ನು ಹೊಂದಿದರು ಎಂದು ಕೆಲವು ಪಂಡಿತರು ಹೇಳುವದು ಮತ್ತು ಹೇಳಿರುವದು ಶಾಸ್ತ್ರವಿರುದ್ಧ ವಿಷಯವು. ಆ ಹಿಂದಿನ ಉಪಾಸನದ ಸಂಸ್ಕಾರ ಬಲದಿಂದ ಹೀನ ಜನ್ಮದವರಿಗೆ ವಿಹಿತವಾಗಿರುವ ಭಾಗವತಸಂಶ್ರಯಣರೂಪಾನುಗ್ರಹದ ಮೂಲಕವೇ ಮೋಕ್ಷವನ್ನು ಹೊಂದಿದರು.

ಇದು ಶಬರಿಯ ವಿಷಯದಲ್ಲಿ ವ್ಯಕ್ತವು. ಶಬರತ್ವ ರೂಪ ನೀಚ ಜನ್ಮದಿಂದಲೂ ಸ್ತ್ರೀಯಾದುದರಿಂದಲೂ ಉಪಾಸನಕ್ಕೆ ಅಧಿಕಾರವಿಲ್ಲವು. ಮತಂಗ ಋಷಿಯನ್ನು ಆಶ್ರಯಿಸಿ ಭಾಗವತ ಸಂಶ್ರಯಣದ ಮಾಹಾತ್ಮ್ಯೆಯಿಂದ ಮುಕ್ತಿಯನ್ನು ಹೊಂದಿದಳು. ಶ್ರೀರಾಮನು ನೀನು ಯಾರು ಎಂದು ಕೇಳಿದುದಕ್ಕೆ "ಅಹಂತು ಪರಿಚಾರಿಣೀ" ನಾನು ಮತಂಗ ಋಷಿಗೆ ಕೈಂಕರ್ಯ ಮಾಡಿಕೊಂಡು ಇದ್ದವಳು. ಅವರು ಹೋದ ಸ್ಥಳಕ್ಕೇ ನಾನೂ ಹೋಗಬೇಕು ಎಂದು ಪ್ರಾರ್ಥಿಸುತ್ತಾಳೆ. ಆದರೆ "ಶತ್ಪುಣ್ಯಂ ಶಬರೀಸ್ಥಾನಂ ಜಗಾಮಾತ್ಮ ಸಮಾಧಿನಾ" ಎಂದು (ಅರಣ್ಯ ೭೪-೩೫) ಹೇಳಿದೆಯಲ್ಲಾ ಎಂದರೆ ಪರಮಾತ್ಮಧ್ಯಾನವನ್ನು ಮಾಡಿಕೊಂಡು ಉತ್ತಮ ಸ್ಥಾನವನ್ನು ಹೊಂದಿದಳು ಎಂಬರ್ಥವು. ಇವರ ವ್ಯಾಖ್ಯಾನದಲ್ಲಿ ಗೋವಿಂದ ರಾಜೀಯದಲ್ಲಿ "ಮತಂಗಶಿಷ್ಯೋಪದಿಷ್ಟಾ ಸಮಾಧಿಕಾ ಶಬರಿ" ಎಂದು ಹೇಳಿ ಸ್ತ್ರಿಯಾ ಅಪಿ ವಿದುರಾದೇ ರಿವ ಯೋಗಾಧಿಕಾರ ಸ್ಸಂಭವತಿ" ಎಂದು ಹೇಳಿರುತ್ತಾರೆ. ಇದು ಅಶಾಸ್ತ್ರೀಯ ವ್ಯಾಖ್ಯಾನವಾಗಿ ದಾಸನಿಗೆ ತೋರುತ್ತದೆ. ಹೀಗೆ ತನ್ನ ಜಾತಿಗೆ ವಿಹಿತವಾದ ಅನುಷ್ಠಾನದ ಅತಿ ಲಂಘನವನ್ನು ಸ್ವಾಮಿ ದೇಶಿಕರವರೇ "ಸ್ವಜಾತ್ಯನುಗುಣ್ಯೈ ವೃಷಾಂ ವಕ್ತಿರಷ್ಯೈತಿಹಾಸಿಕೀ" ಎಂಬಲ್ಲಿ ಮುಂದೆ

ನಿರಾಕರಿಸಿರುತ್ತಾರೆ. "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ" ಎಂದು ಉಪದೇಶಿಸಿ, ದುರ್ಯೋಧನನ ಸಭೆಯಲ್ಲಿ ಶಾಸ್ತ್ರವಿಟ್ಟ ಗೆರೆಯನ್ನು ಈಷದಪಿ ತಾನೂ ಉಲ್ಲಂಘಿಸುವದಿಲ್ಲವೆಂದೂ ಪ್ರತಿಜ್ಞೆಯನ್ನು ಮಾಡಿದ ಮಹಾ ಪ್ರಭುವಿನ ಆಜ್ಞೆಗೆ ವಿರೋಧವಾಗಿ ಮಹಾ ಪ್ರಾಜ್ಞರಾದ ವಿದುರರೂ, "ಶಬರೀಂ ಧರ್ಮಚಾರಿಣೀಂ" (ಬಾಲ. ೧-೫೭) ಎಂದು ಹೇಳಿಸಿಕೊಂಡು ಧರ್ಮವನ್ನು ತಿಳಿದ ಶಬರಿಯೂ, ಶಾಸ್ತ್ರಾತಿಕ್ರಮವನ್ನು ಎಂದಿಗಾದರೂ ಮಾಡುವರೇ ? ಹಾಗೆ ಉಪಾಸನವನ್ನು ಮಾಡಿದರು ಎಂದು ಹೇಳಿದರೆ " ಧರ್ಮೋವಿಗ್ರಹವಾನ್ " ಎಂದು ಪ್ರಸಿದ್ಧಿ ಹೊಂದಿದ ಶ್ರೀರಾಮಚಂದ್ರಪ್ರಭುವಿಗೆ ವೈಷಮ್ಯವನ್ನು ಆರೋಪಿಸಿದಂತಾಗುತ್ತದೆ. ಉಪಾಸನೆಯನ್ನು ಮಾಡಿದ ಈ ಶಬರ ಸ್ತ್ರೀಯು ಸ್ವಾಮಿಗೆ ಮಾನ್ಯಳಾದಳು. ಶೂದ್ರನಾದ ಶಂಬುಕನು ತಾಪಸವೇಷದಿಂದ ಉಪಾಸನೆಯನ್ನು ಮಾಡಿದುದಕ್ಕೆ, "ಶಿರಶ್ಛೇದರಾಘವಃ", ಅವನ ತಲೆಯನ್ನು ಕತ್ತರಿಸಿಬಿಟ್ಟನು. ಆದುದರಿಂದ ಶಬರಿಯೂ ವಿದುರರೂ ವಿಶೇಷಾಧಿಕಾರಿಗಳಾದುದರಿಂದ, ಉಪಾಸನೆಯನ್ನು ಮಾಡಿದರೆಂಬ ಹೇಳಿಕೆಯು ಸರಿಯಾದುದಲ್ಲವು. ಶಾಸ್ತ್ರಾತಿಕ್ರಮಣ ನಡೆದ ಒಂದೆರಡು ಸಂದರ್ಭಗಳಾದ ಯುಧಿಷ್ಠಿರನು ಶ್ರೀ ವಿದುರರಿಗೆ ಬ್ರಹ್ಮಮೇಧ ಸಂಸ್ಕಾರರೂಪ ಪ್ರೇತಕರ್ಮವನ್ನು ಮಾಡಿದುದೂ, ಅವರುಗಳೈವರು ಒಬ್ಬ ಕನ್ನೆಯನ್ನು ವಿವಾಹ ಮಾಡಿಕೊಂಡಿದುದೂ ಇಂತಹ ಸಂದರ್ಭಗಳಲ್ಲಿ ಪ್ರಬಲಕಾರಣವಾದ ಅಶರೀರ ವಾಕ್ಕುಗಳು ನಡೆದುದರಿಂದ ಅವುಗಳು ಯುಧಿಷ್ಠಿರರಿಗೆ ಉಪಾದೇಯುಗಳಾದವು.

ತುಲಾಧಾರರ ಇತಿಹಾಸಕ್ಕೆ ಭಾರತದ ಮೋಕ್ಷಧರ್ಮ ಪರ್ವದ ೨೬೪ ರಿಂದ ನಾಲ್ಕು ಸರ್ಗಗಳನ್ನು ಪರಾಂಬರಿಸಬಹುದು. ಇವರ ವೃತ್ತಾಂತವನ್ನು ಸಙ್ಗ್ರಹವಾಗಿ ಹಿಂದೆ ೨೫೩ನೆಯ ಪುಟದಲ್ಲಿ ಕಾಣಬಹುದು. ಶ್ರೀ ಭೀಷ್ಮರನ್ನು ಯುಧಿಷ್ಠಿರರು "ಧರ್ಮ" ವೆಂಬ ಶಬ್ದದ ಸರಿಯಾದ ಅರ್ಥವು ಮನಸ್ಸಿಗೆ ಬರಲಿಲ್ಲವು, ದಯಮಾಡಿ ಹೇಳಬೇಕೆಂದು ಪ್ರಶ್ನಿಸುತ್ತಾರೆ. ಆಗ ಜಾಜಲಿ ಎಂಬ ಬ್ರಾಹ್ಮಣರು ವಾಣಿಜ್ಯವೃತ್ತಿಯಲ್ಲಿರುವ ತುಲಾಧಾರರಿಂದ ಕೇಳಿ ತಿಳಿದ ಧರ್ಮಶಬ್ದಾರ್ಥದ ಇತಿಹಾಸವನ್ನು ಬೋಧಿಸುತ್ತಾರೆ. ಆಗ ಶ್ರೀ ವ್ಯಾಸರು ಈ ಇತಿಹಾಸವನ್ನು ಹೇಳುವದಕ್ಕೆ ಮೊದಲೇ ಧರ್ಮವು ಸದಾಚಾರರೂಪವಾಗಿಯೂ, ವೇದ ಪ್ರತಿಪಾದ್ಯವಾಗಿಯೂ, ಋಷಿಪ್ರೋಕ್ತವಾದ ಸ್ಮೃತಿಸಮ್ಮತಿಯುಳ್ಳದ್ದಾಗಿಯೂ, ಭಗವದ್ಭಾಗವತ ಕೈಙ್ಕರ್ಯಕ್ಕೆ ಬೇಕಾದ ನ್ಯಾಯಮಾರ್ಗದಲ್ಲಿ ದ್ರವ್ಯ ಸಂಪಾದಕವಾಗಿಯೂ ಇರತಕ್ಕದ್ದೆಂದು ಹೇಳಿ, ಈ ಜಾಜಲಿ ತುಲಾಧಾರ ಇತಿಹಾಸವನ್ನು ಹೇಳುತ್ತಾರೆ. ಜಾಜಲಿಯು ನೀರಿನಲ್ಲಿದ್ದುಕೊಂಡು ತಪಸ್ಸನ್ನು ಮಾಡುತ್ತಾ ಹೆಮ್ಮೆಯಿಂದ ನನಗೆ ಧರ್ಮವು ಯಾವುದೆಂಬುದು ಈಗ ತಿಳಿಯಿತೆಂದು ಕೂಗಿದನು. ಅದನ್ನು ಕೇಳಿ ಅಲ್ಲಿಂದ ರಕ್ಷಸ್ಸುಗಳು ನಿನಗೆಲ್ಲಿ ಧರ್ಮವು ತಿಳಿಯುವದು ? ತುಲಾಧಾರರೆಂದು ಒಬ್ಬ ವಣಿಕ್ಕು ವಾರಾಣಸಿಯಲ್ಲಿ ಇದ್ದಾರೆ. ಅತನಿಗೀಗ ಧರ್ಮವೆಂಬುದು ತಿಳಿಯುವದು ಎಂದು

ಪಿಶಾಚರು ಹೇಳಿದರು. ಅನಂತರ ಈ ಜಾಜಾಲಿಯು ವಾನಪ್ರಸ್ಥರಾಗಿ ಬಹು ಘೋರವಾದ ತಪಸ್ಸನ್ನು ಮಾಡಿದರು. ಆಗ ಎರಡು ಕುಲಿಂಗಪಕ್ಷಿಗಳು ದಾಂಪತ್ಯ ಭಾವದಿಂದ ಈ ಜಾಬಾಲಿಯ ಶಿರಸ್ಸಿನಲ್ಲಿ ಮೊಟ್ಟೆಗಳನ್ನಿಟ್ಟು ಮರಿಮಾಡಿಕೊಂಡು ಸಂತೋಷದಿಂದಿದ್ದವು. ಆ ಕಾಲದಲ್ಲೆಲ್ಲಾ ಕದಲದೇ ಇದ್ದುಕೊಂಡು ಪಕ್ಷಿಗಳಿಗೆ ಏನೊಂದೂ ತೊಂದರೆ ಮಾಡದೇ ಇದ್ದುದರಿಂದ ತನಗೆ ಧರ್ಮವೆಂಬುದು ಯಾವುದು ಎಂಬುದು ತಿಳಿಯಿತೆಂದು ಭುಜಗಳನ್ನು ತಟ್ಟಿದನು. ಆಗಲೂ ನೀನು ಕಾಶಿಯಲ್ಲಿರುವ ತುಲಾಧಾರರಿಂದ ಧರ್ಮದ ಭಾವವನ್ನು ತಿಳಿಯತಕ್ಕದ್ದಿರುವಾಗ ನಿನಗೆಲ್ಲಿ ತಿಳಿಯಿತು ಎಂದು ಆಕಾಶವಾಣಿಯು ಆಯಿತು. ಆಗ ಅವರಲ್ಲಿಗೆ ಹೋಗಿ ಆಗ ಸಾಮಾನುಗಳನ್ನು ತ್ರಾಸಿನಲ್ಲಿ ತೂಗಿ ಪಧಾರ್ಥಗಳನ್ನು ವಿಕ್ರಯಿಸುತ್ತಿದ್ದ ಈ ವೈಶ್ಯರನ್ನು ಕಂಡರು. ಆ ತುಲಾಭಾರರು ಈ ಬ್ರಾಹ್ಮಣನಿಗೆ ಪ್ರತ್ಯುತ್ಥಾನಾದಿಗಳನ್ನು ಮಾಡಿ. "ಸ್ವಾಗತೇನಾಜ್ಯಪೂಜಯತ್" ಪೂಜಿಸಿದರೆಂದು ಹೇಳಲ್ಪಟ್ಟಿರುತ್ತದೆ. ಆಗ ತುಲಾಧಾರರು ಬ್ರಾಹ್ಮಣರನ್ನು ಕುರಿತು ನೀವು ಬಂದ ವಿಷಯವು ವಿದಿತವಾಯಿತು. ಈ ನಾನು ಉಪಯೋಗಿಸುವ ತ್ರಾಸು ನನಗೆ ಧರ್ಮವನ್ನು ತಿಳಿಸಿತು. "ತುಲಾ ಮೇ ಸರ್ವ ಭೂತೇಷು ಸಮಾತಿಷ್ಠತಿ ಜಾಜಲೇ" ಎಂದೂ "ಕೃಪಾ ಮೇ ಸರ್ವ ಭೂತೇಷು ಸಮಾತಿಷ್ಠತಿ ಜಾಜಲೇ" ಎಂದೂ, ಹೇಳಲು ಆರಂಭಿಸಿ, ಧರ್ಮವನ್ನೆಲ್ಲಾ ತುಲಾಧಾರರು ಜಾಜಲಿಗೆ ತಿಳಿಸುತ್ತಾರೆ. ಅವರ ಉಪದೇಶದ ಸಾರಾಂಶವೇನೆಂದರೆ, ಸದಾಚಾರ, ವೇದ, ಸ್ಮೃತಿಗಳಿಗನುಸಾರವಾಗಿ—

" ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥ "

ಹೀಗೆ ನಡೆದು ಹಿಂಸಾತ್ಯಾಗಪೂರ್ವಕವಾಗಿ ತನ್ನ ಶರೀರಕ್ಕೂ ಕ್ಲೇಶವಿಲ್ಲದ ಹಾಗೆ ಸದಾಚಾರ, ವೇದ, ಸ್ಮೃತಿ ವಿಹಿತವಾದ ಮಾರ್ಗವೇ ಧರ್ಮವೆಂಬುದು.

ಆದುದರಿಂದ ನೀಚಜನ್ಮಪ್ರಾಪ್ತವಾದರೂ, ತನಗೆ ವಿಹಿತವಾದ ಕರ್ಮಗಳನ್ನನುಷ್ಠಿಸಿ ಧರ್ಮ ಪ್ರವೃತ್ತಿಮೂಲಕ ಯಾರಿಗೂ ಹಿಂಸೆ ಮಾಡದೆ ಇದ್ದುಕೊಂಡು ಸ್ವಾಮಿಯ ಅನುಗ್ರಹವನ್ನು ಹೊಂದಬಹುದು, ಇದರಲ್ಲಿ ಸಂಶಯವಿಲ್ಲವು. ಇದಕ್ಕಾಗಿಯೇ ಈ ಧರ್ಮವ್ಯಾಧ, ತುಲಾಧಾರ, ವಿದುರ ಶಬರಿ ಮೊದಲಾದವರು ತಮ್ಮ ತಮ್ಮ ವಿಹಿತವೃತ್ತಿಗಳಿದ್ದರು ಎಂಬುದನ್ನು ತಿಳಿಸುವದಕ್ಕಾಗಿಯೇ ಇತಿಹಾಸಗಳಲ್ಲಿ ಅವರುಗಳ ಅಪಕೃಷ್ಟಜನ್ಮವು ಹೇಳಲ್ಪಟ್ಟಿರುತ್ತದೆಂಬ ಭಾವವು. ಅವರುಗಳು ತಮಗೆ ವಿಹಿತಕರ್ಮಗಳನ್ನು ಎಂದಿಗೂ ಅತಿಕ್ರಮಿಸಲಿಲ್ಲವು.

ಹಾಗೆ ಅವರವರುಗಳ ಅನುಷ್ಠಾನಕ್ರಮವ್ಯವಸ್ಥೆಗಾಗಿಯೇ ಇತಿಹಾಸಗಳಲ್ಲೂ ಅವರುಗಳ ಜಾತಿಗಳ ನಿರೂಪಣೆಯು ಎಂದು ಹಿಂದೆ ಹೇಳಿದರು. ಹಾಗಾದರೆ ಅವರವರುಗಳ ಜಾತ್ಯನುಗುಣವಾಗಿ ಶಾಸ್ತ್ರಗಳಲ್ಲಿ ಹೇಳಿರುವಹಾಗೆಯೇ ಅವರುಗಳ ಪ್ರವೃತ್ತಿಯೇ? ಎಂದರೆ ಹೌದು ಎಂದು ಪೂರ್ವಾರ್ಧದಲ್ಲಿ ಸ್ಥಾಪಿಸುತ್ತಾರೆ.

**ಸ್ವಜಾತ್ಯನುಗುಣ್ಯೈ ನ್ಯೈಷಾಂ ವೃತ್ತಿರಪ್ಯೈತಿಹಾಸಿಕೀ ।**
**ವಿಶೇಷ ವಿಧಿ ಸಿದ್ಧಂತು ತದ್ಬಲಾತ್ತತ್ರ ಪ್ರಯುಜ್ಯತೇ ॥೧೨೭॥**

---

**ಏಷಾಂ** - ಈ ಧರ್ಮವ್ಯಾಧ, ತುಲಾಧಾರ, ವಿದುರ, ಶಬರಿ ಮೊದಲಾದವರುಗಳ, **ಐತಿಹಾಸಿಕೀ** - ಇತಿಹಾಸಗಳಾದ ಭಾರತ ರಾಮಾಯಣಾದಿಗಳಲ್ಲಿ ಹೇಳಿರುವ **ವೃತ್ತಿರಪಿ** - ಅನುಷ್ಠಾನವೂ ಕೂಡ, **ಸ್ವಜಾತ್ಯನುಗುಣ್ಯೈವ** - ತಮ್ಮ ತಮ್ಮ ಜಾತಿಗಳಿಗೆ ಶಾಸ್ತ್ರಗಳಲ್ಲಿ ಹೇಳಿರುವದಕ್ಕೆ ಅನುಗುಣವಾಗಿಯೇ. ಅವರೆಲ್ಲಾ ಶಾಸ್ತ್ರಕ್ಕೆ ಅನುಗುಣವಾಗಿ ನಡೆದುಕೊಂಡರೇ ವಿನಾ ಶಾಸ್ತ್ರಾತಿಕ್ರಮಣವನ್ನು ಈಷದಪಿ ಮಾಡಿದವರಲ್ಲವು ಎಂದು ಹೇಳಿದರು.

ಆಗಲಿ, ಕೆಲವು ಸಂದರ್ಭಗಳಲ್ಲಿ ಇತಿಹಾಸಗಳಲ್ಲಿ ಶಾಸ್ತ್ರಾತಿಕ್ರಮಣವೂ ಕೂಡ,ಹೇಳಿರುತ್ತೆ. ಯುಧಿಷ್ಠಿರರು ಶೂದ್ರರಾದ ವಿದುರರಿಗೆ ದೇಹಾವಸಾನಾನಂತರ ಬ್ರಹ್ಮಮೇಧ ಸಂಸ್ಕಾರವನ್ನ ಮಾಡೋಣವೇನು, ತಮ್ಮ ತಮ್ಮಂದಿರೊಂದಿಗೆ ಶಾಸ್ತ್ರಮರ್ಯಾದೆಯನ್ನು ಮೀರಿ ಒಬ್ಬ ಕನ್ಯೆಯನ್ನೇ ವಿವಾಹಮಾಡಿಕೊಂಡಿದುದೇನು? ಉಪಪಾದಿತವಾಗಿರುವುದು ಹೇಗೆ? ಎಂದು ಆಕ್ಷೇಪ ಬಂದೀತೆಂದು ಭಾವಿಸಿ ಅದಕ್ಕೆ ಸಮಾಧಾನವನ್ನು ಉತ್ತರಾರ್ಧದಿಂದ ಹೇಳುತ್ತಾರೆ. **ವಿಶೇಷ ವಿಧಿ ಸಿದ್ಧಂತು** - ವಿಶೇಷ ವಿಧಿಯಾದ ಆಕಾಶವಾಣಿಯೇ ಮೊದಲಾದವುಗಳಿಂದ ಸಿದ್ಧವಾದ ಶಾಸ್ತ್ರಾತಿಕ್ರಮಣವಾಗಿ ತೋರವದಾದರೇ, **ತದ್ಬಲಾತ್** - ಅಂತಹ ಆಕಾಶವಾಣಿಯೇ ಮೊದಲಾದ ಕಾರಣದ ಬಲದಿಂದ, **ತತ್ರ** ಆ ಸಂದರ್ಭದಲ್ಲಿ ಮಾತ್ರ, **ಪ್ರಯುಜ್ಯತೆ** ಸಂಬಂಧಿಸುತ್ತದೆ.

ಅರ್ಜುನನು ಮೀನ ಲಕ್ಷ್ಯವನ್ನು ಬೇಧಿಸಿ ಪಡೆದ ದ್ರೌಪದಿಯನ್ನು ಕರೆದುಕೊಂಡು ಬಂದು ತಮ್ಮ ತಾಯಿಯನ್ನು ಕುರಿತು ಈವತ್ತು ಒಂದು ಸೊಗಸಾದ ಭಿಕ್ಷೆಯನ್ನು ತಂದಿರುವೆವೆಂದು ಹೇಳಲು ; ದ್ರೌಪದಿ ಎಂದು ತಿಳಿಯದೆ ಎಲ್ಲರೂ ಅನುಭವಿಸಿರಿ ಎಂದು ಹೇಳಿದುದರಿಂದ, ಅರ್ಜುನನು ಹಾಗೆ ಸಮ್ಮತಿಸಿದರೂ, ಧರ್ಮರಾಜನೂ ದೈವದ ಮಹಾರಾಯನೂ ಸಹ ಒಬ್ಬ ಕನ್ಯೆಯನ್ನು ಐದು ಜನ ಸಹೋದರರು ಮದುವೆಯಾಗುವದು ಅಧರ್ಮವಾದುದರಿಂದ ಒಪ್ಪಲಿಲ್ಲವು. ಅನಂತರ ಶ್ರೀ ವ್ಯಾಸರು ಬಂದು ದ್ರೌಪದಿಯ ಪೂರ್ವ ಜನ್ಮ ವೃತ್ತಾಂತವನ್ನೂ ರುದ್ರನಿಂದ ಆಕೆಗೆ ಬಂದ ವರವನ್ನು ತಿಳಿಯಪಡಿಸಿ ಆ ಕಾರಣದಿಂದ ಈ ದ್ರೌಪದಿಯು ಪಂಚಪಾಂಡವರಿಗೂ ವಿವಾಹಿತಳಾಗುವದು ಈ ವಿಶೇಷ ಕಾರಣದಿಂದ ಅಧರ್ಮವಾಗುವದಿಲ್ಲವು. ಇತರ ಸ್ತ್ರೀಯರಿಗಾದರೋ ಅಧರ್ಮವಾಗುತ್ತದೆಂದು ಆ ಸಂದರ್ಭದಲ್ಲೇ ಹೇಳಲ್ಪಟ್ಟಿರುತ್ತದೆ.

ಶ್ರೀ ವಿದುರರಿಗೆ ಬ್ರಹ್ಮಮೇದ ಸಂಸ್ಕಾರವನ್ನು ಮಾಡಲು ಯುಧಿಷ್ಠಿರರು ಮೊದಲಿಗೆ ಒಪ್ಪಲಿಲ್ಲವು. ಆಕಾಶವಾಣಿಯಾದುದರಿಂದ ಇದಕ್ಕೆ ಕಟ್ಟು ಬಿದ್ದು

ನಡೆಸಿದರೆಂಬ ಇತಿಹಾಸವಿರುತ್ತದೆ. ಹಾಗೆಯೇ ಶ್ರೀರಾಮಚಂದ್ರಪ್ರಭುವು ಪಕ್ಷಿಯಾದ ಜಟಾಯುವಿಗೆ ಬ್ರಹ್ಮಮೇಧ ಸಂಸ್ಕಾರವನ್ನು ತಾನೇ ಸ್ವತಂತ್ರಿಸಿ ನಡೆಸಿದುದೂ ವಿಶೇಷ ವಿಧಿಸಿದ್ಧವಾದುದೆಂದು ಭಾವಿಸತಕ್ಕದ್ದಾಗಿರುತ್ತದೆ. ಸ್ತ್ರೀಹನನ ಮಾತುಲ ಹನನ, ಮಾತೃಹನನ, ಬ್ರಾಹ್ಮಣರಾದ ಭೀಷ್ಮರ ಮೇಲೆ ಶಸ್ತ್ರಪ್ರಯೋಗ ಇವೇ ಮೊದಲಾದ ಪ್ರವೃತ್ತಿಗಳೂ ಕೂಡ ವಿಶೇಷ ವಿಧಿಸಿದ್ಧವಾದುದರಿಂದ ಅನ್ಯತ್ರ ಉಪಾದೇಯವಾಗುವದಿಲ್ಲವೆಂಬ ತಾತ್ಪರ್ಯವು.

ಇದರಿಂದ ಹಿಂದಿನ ಕಾರಿಕೆಯಲ್ಲಿ ಹೇಳಲ್ಪಟ್ಟ ಧರ್ಮವ್ಯಾಧ, ತುಲಾಧಾರ, ಶಬರೀ, ವಿದುರರೇ ಮೊದಲಾದವರು ವಿಶೇಷಾಧಿಕಾರಿಗಳಿಗೆ ಶಾಸ್ತ್ರಾತಿಕ್ರಮಣವನ್ನು ಮಾಡಿದರೆಂಬುದು ಶ್ರೀ ದೇಶಿಕರವರ ಅಭಿಪ್ರಾಯವಲ್ಲವೆಂಬುದು ಇದರಿಂದ ಸಿದ್ಧವು. ಕೆಲವರು ಶಾಸ್ತ್ರಾತಿಕ್ರಮಣವನ್ನು ಇವರು ಮಾಡಿದರೆಂದು ಹೇಳುವದು ಶ್ರೀ ದೇಶಿಕರವರ ಅಭಿಪ್ರಾಯಕ್ಕೆ ವಿರುದ್ಧವಾದುದರಿಂದ ಉಪಾದೇಯವಿಲ್ಲವು. ಹಾಗೆ ಹೇಳುವವರು ಈ ಮೇಲಿನ ಮಹಾನುಭಾವರಾಗಿ ನಮ್ಮ ಗೌರವಕ್ಕೆ ಅರ್ಹರಾಗಿರುವವರನ್ನು ಶಾಸ್ತ್ರಾತಿಕ್ರಮಣಮಾಡಿದರೆಂಬ ದೋಷಕ್ಕೆ ಗುರಿಮಾಡಿ, ತಮ್ಮ ಸ್ವರೂಪಕ್ಕೂ ಕುಂದುಕವನ್ನು ಉಂಟುಮಾಡಿಕೊಳ್ಳುವರು. ಇವರೆಲ್ಲಾ ಮಹಾಪ್ರಾಜ್ಞರು. ಅತಿ ಸುಲಭ ಮಾರ್ಗವಾದ ಭಾಗವತ ಸಂಶ್ರಯಣದಿಂದಲೇ ಅವರಿಗೆ ಸಂಸಿದ್ಧಿಯು ಲಭಿಸುವಾಗ ಗುರುತರವಾದ ಉಪಾಸನಪೇಕ್ಷಕ್ಕೆ? ಹಾಗೂ ಉಪಾಸನ ಮಾಡಿದರೆಂಬುದು, ಶಾಸ್ತ್ರಾತಿಕ್ರಮಣ ಮಾತು ಹಾಗಿರಲಿ, ಅವರು ಪ್ರಾಜ್ಞರಲ್ಲವೆಂದು ಸ್ಥಾಪಿಸಿದಂತಾಗುವದು. ಮಹಾ ಭಾರತವನ್ನೆಲ್ಲಾ ಹುಡುಕಿದರೂ ಶ್ರೀ ವಿದುರರು ಉಪಾಸನವನ್ನು ಮಾಡಿದರೆಂಬುದಕ್ಕೆ ಪ್ರಮಾಣವು ಸಿಕ್ಕುವದಿಲ್ಲವು. ಆದರೆ ಪಂಚ ವ್ಯಾಖ್ಯಾನಗಳಲ್ಲಿ ಸಾರದೀಪಿಕಾಯವರು "ವಿದುರಾದಿಗಳಿಲ್ ಭಕ್ತಿಯೋಗಾದಿ ನಿಷ್ಠೆ ಕೇಳಕ್ಕಪಡುಮಾಗಿಲ್" ಎಂದು ವಿದುರರು ಉಪಾಸನವನ್ನು ಅನುಷ್ಠಿಸಿದರೆಂಬುದನ್ನು ಒಪ್ಪಿರುತ್ತಾರೆ. ಆದರೆ ಸಾರಾಸ್ವಾದಿನಿಯವರಿಗೆ ಈ ಅಭಿಪ್ರಾಯವು ಇಷ್ಟವಿಲ್ಲದೆ "ಶೂದ್ರಯೋನಾವಹಂ ಜಾತೋ ನಾತೋನ್ಯದ್ವಕ್ತುಮುತ್ಸಹೇ" ಎಂಬುದನ್ನು ಉದಾಹರಿಸಿ, "ಮರ್ಯಾದಾತಿ ಲಂಘನೇ ನಕೃತ ಮಿತಿದ್ಯೋತ್ಯತೇ" ಎಂದು ಶಾಸ್ತ್ರಾತಿಕ್ರಮಣಮಾಡಲಿಲ್ಲವೆಂದು ಹೇಳಲ್ಪಟ್ಟಿರುತ್ತದೆ. ಇತರರು, ವಿದುರರು ಉಪಾಸನವನ್ನು ಮಾಡಿದರೇ ಎಂಬ ವಿಷಯವಲ್ಲಿ ಏನನ್ನೂ ಹೇಳದೆ "ವಿಶೇಷ ವಿಧಿಸಿದ್ಧಂತು" ಎಂದು ಕಾರಿಕೆಯಲ್ಲಿರುವ ಪ್ರಯೋಗಕ್ಕೆ ವಿದುರರಿಗೆ ಯುಧಿಷ್ಠಿರರು ನಡೆಸಿದ ಬ್ರಹ್ಮಮೇಧ ಸಂಸ್ಕಾರ ಮಾತ್ರವೇ ದೃಷ್ಟಾಂತವಾಗಿ ಹೇಳಿರುತ್ತಾರೆ ಇದರಿಂದ ಸಾರಾಸ್ವಾದಿಗಳವರ ಅಭಿಪ್ರಾಯವೇ ಶ್ರೀ ದೇಶಿಕಾಭಿಪ್ರಾಯಕ್ಕೆ ಅನುಗುಣವಾದುದೆಂದು ನಾವು ನಿಸ್ಸಂಶಯವಾಗಿ ಇಟ್ಟುಕೊಳ್ಳಬಹುದು.

**ದೇಶಕಾಲಾದಿ ಕಾರ್ಯಾದಿ ವಿಶೇಷೇಷು ವ್ಯವಸ್ಥಿತಾಃ ।**
**ನ ಧರ್ಮಾಃ ಪ್ರಾಪ್ತಿಮರ್ಹನ್ತಿ ದೇಶಕಾಲಾನ್ತರಾದಿಷು ॥ ೧೨೪ ॥**

---

**ಅರ್ಥವು**—ಒಂದು ಕನ್ನಿಕೆಯನ್ನು ಐದು ಜನರು ಮದುವೆಮಾಡಿಕೊಳ್ಳು ವದೂ, ಶೂದ್ರನಿಗೆ ಬ್ರಹ್ಮಮೇಧ ಸಂಸ್ಕಾರವನ್ನು ಮಾಡಿದುದೂ, ಅಷ್ಟೇಕೆ, ಶ್ರೀ ರಾಮಚಂದ್ರಪ್ರಭುವೇ ಜಟಾಯು ಪಕ್ಷಿಗೆ ಬ್ರಹ್ಮಮೇಧ ಸಂಸ್ಕಾರವನ್ನು ಮಾಡಿದುದೂ, ಹೀಗೆ ಶಾಸ್ತ್ರಾತಿಕ್ರಮಣಗಳು ಒಂದೊಂದು ಸಂದರ್ಭದಲ್ಲಿ ನಡೆದಿದ್ದ ಪಕ್ಷದಲ್ಲಿ, ಇತರ ಸಂದರ್ಭದಲ್ಲೂ ಶಾಸ್ತ್ರಾತಿಕ್ರಮಣವು ಏಕೆ ಕೂಡದು ? ಎಂದಾ ಕ್ಷೇಪ ತಂದರೆ,ಅದಕ್ಕೆ ಸಮಾಧಾನವು ಹೇಳಲ್ಪಡುತ್ತದೆ—**ದೇಶಕಾಲಾದಿ ಕಾರ್ಯಾದಿ ವಿಶೇಷೇಷು** - ದೇಶವಿಶೇಷ, ಕಾಲವಿಶೇಷ, ಅಧಿಕಾರಿ ವಿಶೇಷ ಆದಿಪದದಿಂದ ಅವಸ್ಥಾ ವಿಶೇಷಗಳು ಹೇಳಲ್ಪಟ್ಟವು. ಹೇಗೆಂದರೆ ಶರೀರಾರೋಗ್ಯದ ಸ್ಥಿತಿ ಬಾಲ್ಯ, ವೃದ್ಧತೆ ಮೊದಲಾದ ಅವಸ್ಥೆಗಳು ಬೋಧಿತವು, ಇಂತಹ ಸಂದರ್ಭಗಳಲ್ಲಿ **ವ್ಯವಸ್ಥಿತಾಃ**-ವ್ಯವಸ್ಥೆಮಾಡಿ ಹೇಳಲ್ಪಟ್ಟ, **ಧರ್ಮಾಃ** - ಧರ್ಮಗಳು, **ದೇಶಕಾಲಾನ್ತರಾದಿಷು** - ಬೇರೆ ದೇಶ, ಬೇರೆ ಕಾಲ, ಬೇರೇ ಅಧಿಕಾರಿ, ಬೇರೆ ಅವಸ್ಥೆ ಮೊದಲಾದವುಗಳಲ್ಲಿ, **ಪ್ರಾಪ್ತಿಮ್** - ಅನ್ವಯಿಸೋಣವನ್ನು **ನಾರ್ಹನ್ತಿ** - ಹೊಂದುವದಿಲ್ಲವು. ಒಂದು ದೇಶ ವಿಶೇಷ, ಕಾಲವಿಶೇಷ, ಅಧಿಕಾರಿ ವಿಶೇಷ, ಅವಸ್ಥಾ ವಿಶೇಷಗಳಲ್ಲಿ ಹೇಳಲ್ಪಟ್ಟ ವಿಶೇಷ ಧರ್ಮಗಳನ್ನು ಬೇರೆ, ದೇಶ ಕಾಲ ಅಧಿಕಾರಿ ಅವಸ್ಥೆಗಳಿಗೂ ಅನ್ವಯಿಸುತ್ತೇವೆ ಎಂಬ ವಾದವು ಉಚಿತವಾದ ವಾದವಾಗುವದಿಲ್ಲವು. ಹೇಗೆಂದರೆ—

**ದೇಶಕ್ಕೆ ಉದಾಹರಣೆಯು**—ದೇವಸ್ಥಾನದಲ್ಲಿ ಶೂದ್ರ ಸ್ಪರ್ಶವಾದರೂ ಸ್ನಾನಮಾಡಕೂಡದು. ಮಾಡಿದರೆ ದೋಷವೆಂದು ಹೇಳಿರುತ್ತದೆ. ಇತರ ಕಡೆಯಲ್ಲಿ ಶೂದ್ರಸ್ಪರ್ಶಕ್ಕೆ ಇದು ಅನ್ವಯಿಸುವದಿಲ್ಲವು. ಇದಕ್ಕೆ ಪ್ರಮಾಣವು :—

ವಿಷ್ಣ್ವಾಲಯೇ ಸಮಾಪನ್ನಾನ್ ವಿಷ್ಣುಸೇವಾರ್ಥಮಾಗತಾನ್ ।
ಚಂಡಾಲಾನ್ ಪತಿತಾನ್ ವಾಪಿ ಸ್ಪೃಷ್ಟ್ವಾ ನಸ್ನಾನ ಮಾಚರೇತ್ ॥

ಎಂಬುದು. ಭಗವಂತನ ಸನ್ನಿಧಿಯಲ್ಲಿ ಶೂದ್ರಾದಿಗಳಿಂದ ನೋಡಲ್ಪಟ್ಟರೂ ಭಗವನ್ನಿವೇದಿತ ಪ್ರಸಾದವನ್ನು ಸ್ವೀಕರಿಸತಕ್ಕದ್ದೆಂಬ ವಿಶೇಷ ವಿಧಿ ಇದೆ. ಇದು ಇತರ ಪ್ರದೇಶದಲ್ಲಿ ಅನ್ವಯಿಸುವದಿಲ್ಲವು ನರ್ಮದೋತ್ತರ ದೇಶಾಚಾರವು ದಕ್ಷಿಣ ದೇಶಕ್ಕೆ ಉಚಿತವಲ್ಲವು. ಬದರಿಯಲ್ಲಿ ಛಳಿಯಿಂದ ಅಂಗಿಯನ್ನು ಧರಿಸಿ ದೇವತಾರ್ಚನೆಯನ್ನು ಮಾಡುವದು ಇತರ ಪುಣ್ಯಕ್ಷೇತ್ರಗಳಲ್ಲಿ ಸರಿಯಲ್ಲವು.

**ಕಾಲಕ್ಕೆ ಉದಾಹರಣೆಯು**—ಅಲ್ಪ ದ್ವಾದಶಿಯಲ್ಲಿ ಮಧ್ಯಾಹ್ನದಲ್ಲಿ ಮಾಡುವ ಮಾಧ್ಯಾಹ್ನಿಕವನ್ನು ಮೊದಲೇ ಮಾಡಬೇಕೆಂಬ ವಿಶೇಷ ವಿಧಿಯು ಸಾರ್ವತ್ರಿಕವಾಗಿ ಉಚಿತವಾಗುವದಿಲ್ಲವು. ಆಶೌಚಾದಿಗಳಲ್ಲಿ ಹೇಳಲ್ಪಟ್ಟ ಲಘು ಸಂಧ್ಯಾ

**ಕೇಚಿತ್ತು ದುಸ್ಸ್ವಾಖ್ಯಾನ ತಾತ್ಪರ್ಯಗ್ರಹಣಾಕ್ಷಮಾಃ ।**
**ಕಲಿಕೋಲಾಹಲಕ್ರೀಡಾಂ ವರ್ಧಯನ್ತಿ ರಮಾಪತೇಃ ॥ ೧೨೯ ॥**

---

ವಂದನೆಯೂ ಔಪಾಸನ, ಪಂಚಮಹಾದಿ ಲೋಪಗಳೂ, ಇತರ ಸರಿಯಾದ ಕಾಲಗಳಲ್ಲಿ ಅನ್ವಯಿಸುವದಿಲ್ಲವು. ಶ್ರವಣದ್ವಾದಶಿಯಲ್ಲಿ ವಿಧಿಸಿದ ಉಪೋಷ್ಯವು ಸಾಮಾನ್ಯ ದ್ವಾದಶಿಗೆ ಸಂಭವಿಸುವದಿಲ್ಲವು.

**ಅಧಿಕಾರಿಗೆ ಉದಾಹರಣೆಯು**—ರೋಗಿಷ್ಠನಿಗೆ ವಿಧಿಸಿದ ಮನ್ತ್ರಸ್ನಾನವು ಇತರರಿಗೆ ಉಚಿತವಾಗುವದಿಲ್ಲವು. ವಿದುರನಿಗೆ ಬ್ರಹ್ಮಯಜ್ಞ, ಔಪಾಸನ, ವೈಶ್ವದೇವಾದಿಗಳಿಲ್ಲವೆಂದು ಹೇಳಿದುದು ದಾಂಪತ್ಯಭಾವಗಲ್ಲಿರುವ ಬ್ರಾಹ್ಮಣಾದಿಗಳಿಗೆ ಅನ್ವಯಿಸುವದಿಲ್ಲವು. ಸ್ವಗುರುವಿಗೆ ತೋರಿಸಬೇಕೆಂದು ಹೇಳಿರುವ ವಿಶೇಷ ಮರ್ಯಾದೆಯು ಇತರ ಗುರುಗಳಿಗೆ ಸಂಬಂಧಿಸುವದಿಲ್ಲವು. ಭಾಗವತನಾದ ಶೂದ್ರನಿಗೆ ತೋರಿಸುವ ಮರ್ಯಾದೆಯು ಇತರ ಶೂದ್ರರಿಗೆ ಅನ್ವಯಿಸುವದಿಲ್ಲವು.

**ಆಪಸ್ಥಾದಿಗಳಿಗೆ**—ಬಾಲಕರನ್ನೂ ಗರ್ಭಿಣಿ ಸ್ತ್ರೀಯನ್ನೂ ಊಟಮಾಡಿಸಿ ಯಜಮಾನನು ಅನಂತರ ಊಟಮಾಡಬೇಕೆಂಬ ನಿಯಮವು, ಇತರ ಸ್ತ್ರೀ ಮೊದಲಾದವರುಗಳ ವಿಷಯದಲ್ಲಿ ಸಂಬಂಧಿಸುವದಿಲ್ಲವು. ಆಹಾರವಿಲ್ಲದೆ ಪ್ರಾಣ ಹೋಗುವ ಸಂದರ್ಭದಲ್ಲಿ ಶೂದ್ರ ಪಕ್ವವಾದವುಗಳನ್ನು ಬ್ರಾಹ್ಮಣನು ಸ್ವೀಕರಿಸಬಹುದೆಂಬುದು ಕಠೋಳರಿಗೆ ಮಾತ್ರ ಶ್ರುತಿಯು ವಿಧಿಸಿತೇ ವಿನಾ ಅವರ ಪತ್ನಿಗೆ ವಿಧಿಸಲಿಲ್ಲವು. ಹೀಗೆಯೇ ಇನ್ನೂ ಅನೇಕ ಸಂದರ್ಭಗಳನ್ನು ವಿಚಾರಿಸಿ ತಿಳಿಯಬಹುದು.

ಆದುದರಿಂದ ಒಂದೆರಡು ಸಂದರ್ಭಗಳಲ್ಲಿ ಶಸ್ತ್ರಾತಿಕ್ರಮಣವು ವಿಶೇಷ ವಿಧಿಯಿಂದ ಉಂಟಾಗಿದ್ದರೂ ಸಾರ್ವತ್ರಿಕವಾಗಿ ಅನ್ವಯಿಸುವದು ಸತ್ತರ್ಕವಲ್ಲವು. ಎಂಬ ಭಾವವು. ಆ ಕಾರಣದಿಂದ ಹಾಗೆ ತರ್ಕಮಾಡುವದು ಶಾಸ್ತ್ರವರ್ಯಾದೆಯನ್ನರಿಯದೆ, ಭ್ರಮಯುಕ್ತರಾಗಿ, ಈ ಕಲಿಯುಗದ ಮಾಹಾತ್ಮ್ಯಗೆ ಸಿಲುಕಿ ಕುತರ್ಕ ಮಾಡುವವರೆಂದು ಹೇಳುತ್ತಾರೆ. **ಕೇಚಿತ್** - ಕೆಲವರಾದರೋ, **ತದುಪಾಖ್ಯೇನ ತಾತ್ಪರ್ಯಗ್ರಹಣಾಕ್ಷಮಾಃ** - ಆ ಧರ್ಮವ್ಯಾಧ, ತುಲಾಧಾರ, ಶಬರೀ ವಿದುರಾದಿಗಳ ಉಪಾಖ್ಯಾನದ ಮುಖ್ಯ ತಾತ್ಪರ್ಯವೇನೆಂದು ಗ್ರಹಿಸುವ ಯೋಗ್ಯತೆ ಇಲ್ಲದವರಾಗಿ **ರಮಾಪತೇಃ** - ಲಕ್ಷ್ಮೀಪತಿಯ, **ಕಲಿಕೋಲಾಹಲಕ್ರೀಡಾಂ** - ಅಧರ್ಮವೇ ಧರ್ಮವಾಗಿರುವ ಕಲಿಪುರುಷನಿಗೆ ಸಂತೋಷವನ್ನುಂಟುಮಾಡುವ ಈ ಕಲಿನಾಯಕನ ಕ್ರೀಡೆಯನ್ನು, **ವರ್ಧಯನ್ತಿ** - ವೃದ್ಧಿಯನ್ನು ಹೊಂದಿಸುತ್ತಾರೆ. ಬೆಳಗುತ್ತಾರೆಂಬ ಭಾವವು. ಕಲಿಪುರುಷನ ವಿಷಯದಲ್ಲಿ ಹೇಳಲ್ಪಟ್ಟಿರುವದೇನೆಂದರೆ—

**ಕಲೌ ಕಾರ್ತಯುಗಂ ಧರ್ಮಂ ಕರ್ತುಮಿಚ್ಛತಿ ಯೋ ನರಃ ।**
**ಸ್ವಾಮಿದ್ರೋಹೀತಿ ತಂ ಮತ್ವಾ ತಸ್ಮೈ ಪ್ರದ್ವಿಷತೇ ಕಲಿಃ ॥**

ಎಂದರೆ ಕಲಿಯುಗದಲ್ಲಿ ಯಾವನಾದರೂ ಕೃತಯುಗ ಧರ್ಮವನ್ನು ನಡೆಸುವ ನೆಂದು ಹೊರಟರೆ ಆತನನ್ನು ಸ್ವಾಮಿದ್ರೋಹಿಯು ಎಂದು ಕಲಿಪುರುಷನು ಬಾವಿಸಿ, ಆತನನ್ನು ದ್ವೇಷಿಸಿ, ಅವನ ಕೈಯಲ್ಲೂ ಅಧರ್ಮವನ್ನೇ ನಡೆಸುವಹಾಗೆ ಮಾಡುವನು. ಇದಕ್ಕೆ ಈಗ ಹಿಟ್ಲರಾದಿಗಳು ದೃಷ್ಟಾಂತವು. ಕಲಿಯುಗದಲ್ಲಿ "ಅಧರ್ಮೋಗ್ರ ಸತೇ ಧರ್ಮಂ" ಎಂದು ಆದಿ ಕವಿಯು ಹೇಳಿರುತ್ತಾರೆ. ಶ್ರೀ ಪರಾಶರರೂ ವ್ಯಾಸ ರೂ ಸಹ ಕಲಿಯುಗದಲ್ಲಿ ಬಹಳ ಅಧರ್ಮಗಳು ನಡೆಯುತ್ತವೆಂದು ವಿಸ್ತರಿಸಿ ಹೇಳಿರು ವದರಿಂದ, **ಕಲಿಕೋಲಾಹಲಕ್ರೀಡೆ** ಎಂದು ಹೇಳಲ್ಪಟ್ಟಿತು.

ಕೆಲವರಿಗೆ ಈ ಸಂದರ್ಭದಲ್ಲಿ ಹೀಗೆ ಕಲಿಕಾಲದಲ್ಲಿ ಅಧರ್ಮಪ್ರವರ್ತನೆ ಯುಂಟುಮಾಡುವದು, ಶುದ್ಧ ಸತ್ವ ನಿಯಾಮಕನಾದ ಮಹಾಪ್ರಭುವಿಗೆ ಹೇಗೆ ಲೀಲೆಯಾದೀತು ? ಕೊಟ್ಟಿದ್ದು ನಡೆದಿದ್ದನ್ನು ನೋಡುವದು ಲೀಲೆಯೇ ? ಒಬ್ಬ ಸ್ತ್ರೀಯನ್ನು ಕೈ ಹಿಡಿದು ಪರಪುರುಷನು ಎಳೆದರೆ ನಾವೇ ಸಹಿಸಲಾರವು. ಇಂತಹ ಸಂದರ್ಭದಲ್ಲಿ ಈ ವ್ಯಾಪಾರವು ಪರಮಪುರುಷನಿಗೆ ಲೀಲೆ ಹೇಗೆ? ಎಂಬ ಪ್ರಶ್ನೆಯು ನ್ಯಾಯವಾದುದೇ. ಇದಕ್ಕೆ ಸಮಾಧಾನವನ್ನು ಹೇಳುವೆವು. ಸರ್ವೇ ಶ್ವರನು ಎರಡು ವಿಭೂತಿಯನ್ನು ನಿರ್ಮಿಸಿಕೊಂಡನು. ಒಂದು ದೃಷ್ಟಿಗೆ ಸಿಕ್ಕದ ವಿಭೂತಿ, ನಿತ್ಯ ವಿಭೂತಿಯು ; ಇನ್ನೊಂದು ದೃಷ್ಟಿಗೆ ಸಿಕ್ಕಿದುದು ಲೀಲಾವಿಭೂ ತಿಯು. ಸೃಷ್ಟಿಸುವಾಗ ಪರಮಪುರುಷನು ಜೀವಾತ್ಮರಿಗೆ ತುಂಬಾ ಕರುಣೆಯಿಂದ ಲೇ ಕರಣ ಕಳೇಬರಯೋಗವನ್ನುಂಟುಮಾಡಿ ಈ ಜೀವಾತ್ಮರು ಜ್ಞಾನಸ್ವರೂಪ ರಾಗಿ ಜ್ಞಾನಗುಣಕರಾದುದರಿಂದ ಅವರ ಸ್ವರೂಪವನ್ನೂ ಸ್ವಾಮಿಯಾದ ತನ್ನ ಸ್ವರೂಪವನ್ನೂ ಅರಿತು ತನ್ನಿಂದ ವಿಧಿಸಲ್ಪಟ್ಟ ಉಪಾಯಾನುಷ್ಠಾನವನ್ನು ಮಾಡಿ ತನ್ನಲ್ಲಿಗೆ ನಿತ್ಯವಿಭೂತಿಗೆ ಬರಲಿ ಎಂದು ಸಙ್ಕಲ್ಪಿಸಿದನು. ಇದಕ್ಕಾಗಿ ಸ್ವಾಮಿಯು ತನ್ನ ಶಾಸ್ತ್ರವಾದ ವೇದಗಳನ್ನೂ ಕಳುಹಿಸಿಕೊಟ್ಟು, ಅವುಗಳನ್ನು ಉಪಯೋಗಿಸುವ ಯೋಗ್ಯತೆಯುಳ್ಳವರು ಎಲ್ಲಾ ಕಾಲದಲ್ಲೂ ಈ ಭೂಲೋಕದಲ್ಲಿ ಸಂಚರಿಸುತ್ತಿರ ಲೆಂದೂ ಸಙ್ಕಲ್ಪಿಸಿದನು. ಹೀಗೆ ಈ ಉಪದೇಶಗಳನ್ನು ತಿಳಿಯಲು ಬೇಕಾದ ಇಂದ್ರಿಯಗಳನ್ನೂ ಮನಸ್ಸನ್ನೂ ವಿವೇಕಿಸುವ ಬುದ್ಧಿಯನ್ನೂ ಸರ್ವೇಶ್ವರನು ತನ್ನ ನಿರ್ಹೇತುಕ ಕೃಪೆಯಿಂದ ಕೊಟ್ಟಿದ್ದರೂ, ಈ ಚೇತನನು ಅವುಗಳನ್ನು ದುರುಪ ಯೋಗಪಡಿಸಿಕೊಂಡು ಕೆಟ್ಟ ಮಾರ್ಗಗಳಲ್ಲಿ ಪ್ರವರ್ತಿಸಿ ದುಷ್ಕರ್ಮಗಳನ್ನು ಮಾಡಿ ಕೆಟ್ಟುಹೋಗಿರುತ್ತಾನೆ. ಇಂತಹ ದುರವಸ್ಥೆಯನ್ನು ಹೊಂದಿರುವದು ಈ ಕಲಿ ಯುಗದಲ್ಲಿ ಹೆಚ್ಚು. ಆದುದರಿಂದ ಕೃಪಾನಿಧಿಯು ಪ್ರಳಯವನ್ನುಂಟುಮಾಡಿ, ಪುನಃ ಸೃಷ್ಟಿಯನ್ನು ಹೊಸಗಿ ಸರಿಮಾಡುವನು. ಮತ್ತು ಕೆಲವುಕಾಲ ಈ ಚೇತನ ರಿಗೆ ಏನೊಂದು ಕ್ಲೇಶವಿಲ್ಲದಹಾಗೆ ಪುನಸ್ಸೃಷ್ಟಿವರೆಗೂ ಇಡುವನು. ಆದುದರಿಂದ ಪ್ರಳಯವೂ ಕೃಪಾಪ್ರಭಾವದಿಂದುಂಟಾಗತಕ್ಕದ್ದೇ. ಭಗವಂತನು ಪರಿಪೂರ್ಣ ಕಾಮನು. ಆದುದರಿಂದ ಹೀಗೆ ಸೃಷ್ಟಿ, ಸ್ಥಿತಿ ಲಯಾದಿ ಪ್ರವೃತ್ತಿಗಳೆಲ್ಲಾ ಲೀಲಾ

**ಮಾತೃಭಿ ಪಿತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ ।**
**ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣ ಮೀಪ್ಸುಭಿಃ ॥ ೧೩೦ ॥**
**ಜಾಮಯೋ ಯಾನಿಗೇಹಾನಿ ಶಪಂತ್ಯ ಪ್ರತಿಪೂಜಿತಾಃ ।**
**ತಾನಿ ಕೃತ್ಯಾಹತಾನೀಷ ವಿನಶ್ಯನ್ತಿ ಸಮಂತತಃ ॥ ೧೩೧ ॥**
**ವಿವಹಾದಿಷು ಪೂಜ್ಯೋಕ್ತಿರ್ಯಥೌ ಚಿ (ತ್ಯಂ) ತಾಗ್ನಿಯಮ್ಯತೇ ।**
**ಭಕ್ತಮ್ಲೇಚ್ಛಾದಿ ಪೂಜೋಕ್ತಿ ರೇವ ಮೇವ ಸಿಯಮ್ಯತಾಮ್ ॥೧೩೨॥**

---

ರೂಪವಾದವು. ಆದುದರಿಂದಲೇ "**ಕೋಲಾಹಲ ಕ್ರೀಡಾಂ ವರ್ಧಯನ್ತಿ**" ಎಂದು ಹೇಳಲ್ಪಟ್ಟಿತು.

**ಅರ್ಥ**ವು—ಈ ಧರ್ಮವ್ಯಾಧಾದಿಗಳೆಲ್ಲಾ ಶಾಸ್ತ್ರಾನುಗುಣವಾಗಿಯೇ ಪ್ರವೃತ್ತಿಯನ್ನು ಹೊಂದಿದ್ದರೆಂದು ಹೇಳಲ್ಪಟ್ಟಿತಲ್ಲಾ ? ಹಾಗಾದರೆ ಅಂತವರುಗಳ ಹಾಗೆ ಮ್ಲೇಚ್ಛನೂ ಭಾಗವತನಾದ ಪಕ್ಷದಲ್ಲಿ "**ಸಚಪೂಜ್ಯೋ ಯಥಾಹ್ಯಹಮ್**" ಎಂಬ ಶ್ರೇಷ್ಠ ಸ್ಮೃತಿವಾಕ್ಯವಿದೆಯಲ್ಲಾ ಪರಮಾತ್ಮನಹಾಗೆ ಆತನನ್ನು **ಪೂಜಿಸೋಣ**ವು ಶಾಸ್ತ್ರವಿರುದ್ಧವಲ್ಲವೇ ? ಎಂದರೆ ಅದಕ್ಕೆ ಮುಂದಿನ ಮೂರು ಕಾರಿಕೆಗಳಿಂದ **ಸಮಾಧಾನ**ವನ್ನು ಹೇಳುತ್ತಾರೆ. **ಬಹುಕಲ್ಯಾಣಂ** - ಹೆಚ್ಚಾದ ಶ್ರೇಯಸ್ಸನ್ನು, **ಈಪ್ಸುಭಿಃ** - ಅಪೇಕ್ಷಿಸುವ, **ಮಾತೃಭಿಃ** – ತಾಯಿಗಳಿಂದಲೂ, **ಪಿತೃಭಿಃ** ತಂದೆಗಳಿಂದಲೂ, **ಪತಿಭಿಃ** - ಗಂಡಂದರಿಂದಲೂ, **ದೇವರೈಸ್ತಥಾ** - ಹಾಗೆಯೇ ಮೈದುನರಿಂದಲೂ **ಏತಾಃ** - ಈ ಸೊಸೆಯರು, **ಪೂಜ್ಯಾಃ**-ಪೂಜಿಸಲು ಯೋಗ್ಯರು, **ಭೂಷಯಿತವ್ಯಾಶ್ಚ** - ಮರ್ಯಾದೆಯನ್ನು ಮಾಡಲೂ ಸಹ ಅರ್ಹರು. ಹೀಗೆ ಹೇಳಿದುದರ ಅಭಿಪ್ರಾಯವೇನೆಂದರೆ ಅವರುಗಳು ಮರ್ಯಾದೆಯಿಂದ ನೋಡಲು ಯೋಗ್ಯರೆಂಬ ಅಭಿಪ್ರಾಯ ಮಾತ್ರವೇ ವಿನಾ, ತಾಯಿ, ತಂದೆ, ಗಂಡ, ಮೈದುನ ಮೊದಲಾದವರು ಈಕೆಯ ಕಾಲಿಗೆ ನಮಸ್ಕರಿಸಿ ಪಾದ ತೊಳೆದು ಪೂಜಿಸತಕ್ಕದ್ದೆಂಬ ಭಾವನಲ್ಲವು. **ಜಾಮಯಃ**—ಸೊಸೆಯರು, **ಅಪ್ರತಿಪೂಜಿತಾಃ**-ಮರ್ಯಾದೆ ಮಾಡಲ್ಪಡದೇ ಹೋದರೆ, **ಯಾನಿಗೇಹಾನಿ** . ಯಾವ ಅತ್ತೆ ಮಾವ ದರ ಮನೆಗಳನ್ನು, **ಶಪಂತಿ** - ಅನುಕೂಲವಿಲ್ಲದೆ, ಕಷ್ಟಪಡಿಸಿ, ಕಣ್ಣೀರನ್ನು ಬಿಡುವಹಾಗೆ ಮಾಡಿದುದ ಮೂಲಕ ಶಪಿಸುತ್ತಾರೋ, **ತಾನಿ** - ಅಂತಹ ಮನೆಗಳನ್ನು, **ಕೃತ್ಯಾಹತಾನೀವ**- ಮಾಟಮಾಡುವುದರ ಮೂಲಕ ನಾಶವಾಗುವಹಾಗೆ, **ಸಮಂತತಃ** - ಸಂಪೂರ್ಣವಾಗಿ, **ವಿನಶ್ಯನ್ತಿ** - ನಾಶವಾಗುವುವು. ಸಾಧ್ವಿಯಾದ ಸೊಸೆಯು ಅತ್ತೆ ಮಾವಂದಿರು ಮಾಡುವ ತೊಂದರೆಗಳಿಂದ ಕಣ್ಣೀರು ಸುರಿಸಿದರೆ ಆ ಮನೆಯು ಹಾಳಾಗುತ್ತದೆಂದು ಹೇಳಿದರು. ಹೇಗೆ ಎಂಬುದಕ್ಕೆ ಒಂದು ದೃಷ್ಟಾಂತವನ್ನು ಕೊಟ್ಟರು ಶತ್ರುವಿನ ಮನೆ ಹಾಳಾಗಬೇಕೆಂದು ಒಬ್ಬ ದುಷ್ಟ ದೇವತೆಯನ್ನಾರಾಧಿಸಿ, ಅಂತಹ ದುಷ್ಟದೇವತೆಯ ಮೂಲಕ ಆತನ ಮನೆಯು ಹಾಳಾಗುವ ಹಾಗೆ ಈ ದುಷ್ಟ ಅತ್ತೆ ಮಾವಂದಿರ ಮನೆಯೂ ಹಾಳಾಗುತ್ತದೆಂಬ ಭಾವವು. ॥ ೧೩೦ ॥

**ಏವಮಾದಿಷು** - ಇವೇ ಮೊದಲಾದ ದೃಷ್ಟಾಂತಗಳಲ್ಲಿ, **ಪೂಜೋಕ್ತಿಃ** - ಪೂಜಿಸಲು ಅರ್ಹವೆಂಬ ಹೇಳಿಕೆಯು, **ಔಚಿತ್ಯಾತ್** - ಯೋಗ್ಯವೆಂಬ ಭಾವದಿಂದ **ಯಥಾ** - ಹೇಗೆ, **ನಿಯಮ್ಯತೇ** - ಹೇಳಲ್ಪಟ್ಟಿರುತ್ತದೋ, ತನ್ನ ಮಗಳನ್ನು ಅತ್ತೆಯಾಗಲಿ ಮಾವನಾಗಲಿ ಹೇಗೆ ವಿಶ್ವಾಸದಿಂದ ಕಾಣಬೇಕೋ ಹಾಗೆ ಸೊಸೆ ಯನ್ನೂ ಸಹ ಆದರದಿಂದ ನೋಡತಕ್ಕದೆಂದು ಹೇಗೆ ಬೋಧಿಸುತ್ತದೋ, **ಭಕ್ತಮ್ಲೇಚ್ಛಾದಿಪೂಜೋಕ್ತಿಃ** - ಭಗವಂತನಲ್ಲಿ ಭಕ್ತರಾದ ಮ್ಲೇಚ್ಛಾದಿಗಳನ್ನು ಪೂಜಿಸತಕ್ಕದ್ದೆಂಬ ಶಾಸ್ತ್ರಗಳಲ್ಲಿ ಹೇಳಿರುವ **"ಸಚಪೂಜ್ಯೋ ಯಥಾ ಹ್ಯಹಮ್"** ಇತ್ಯಾದಿ ಸ್ಥಳಗಳಲ್ಲಿ ಹೇಳಿರೋಣವೂ, **ಏವಮೇವ** - ಮೇಲಿನ ದೃಷ್ಟಾಂತಗಳಲ್ಲಿ ಹೇಳಿರುವಹಾಗೆ, **ನಿಯಮ್ಯತಾಮ್** - ನಯನಮಾಡಿಕೊಳ್ಳ ತಕ್ಕದ್ದು ; ತಿಳಿಯತಕ್ಕದ್ದು ; ಎಂದರೆ ಅವರನ್ನು ನಿಕೃಷ್ಟಭಾವದಿಂದ ನೋಡತಕ್ಕದ್ದ ಲ್ಲವು. ಭಾಗವತರಾದುದರಿಂದ ವಿಶ್ವಾಸಾರ್ಹರು ಎಂದಿಷ್ಟುಮಾತ್ರವೇ ಅರ್ಥವಲ್ಲದೆ, ಅವರ ಕಾಲಿಗೆ ನಮಸ್ಕಾರ ಮಾಡುವದಕ್ಕಾಗಿಯಾಗಲಿ, ಸಹಪಙ್ಕ್ತಿ ಭೋಜನಾದಿ ಗಳಿಗಾಗಲಿ, ಕನ್ಯಾಪ್ರದಾನಕ್ಕಾಗಿ ಆಗಲಿ; ಇವೇ ಮೊದಲಾದವುಗಳಿಗೆ ಅರ್ಹರೆಂದು ಭಾವಿಸತಕ್ಕದ್ದಲ್ಲವು. ವಿದುರಾದಿಗಳು ಉತ್ಕೃಷ್ಟಪ್ರವೃತ್ತಿಯುಳ್ಳವರಾಗಿ ಭಾಗವ ತೋತ್ತಮರಾದರೂ, ತಮ್ಮ ನಿಕೃಷ್ಟ ಜಾತಿಗನುಗುಣವಾಗಿ ಸಂಪ್ರದಾಯವನ್ನಿಟ್ಟು ವಿವಾಹಾದಿಗಳನ್ನು ನಡೆಸಿಕೊಂಡರೆಂದು ಹಿಂದೆಯೇ ಪ್ರಭಾವವ್ಯವಸ್ಥಾಧಿಕಾರದಲ್ಲಿ ಹೇಳಲ್ಪಟ್ಟಿರುತ್ತದೆ. ( ಪುಟ) ಅಹಲ್ಯಾಶಾಪ ವಿಮೋಚನ ಸಂದರ್ಭದಲ್ಲಿ ಶಿಲೆ ಯಾಗಿದ್ದ ಅಹಲ್ಯೆಯು ಬಹು ಸುಂದರವಾದ ಸ್ತ್ರೀರೂಪವನ್ನು ಧರಿಸಿ ನಿಂತ ಒಡ ನೆಯೇ **"ರಾಘವೌತು ತತಸ್ತಸ್ಯಾಃ - ಪಾದೌ ಜಗೃಹತುಸ್ತದಾ"** ಮಹಾ ಪವಿತ್ರ ಳಾಗಿ, ಬ್ರಹ್ಮನ ಮಗಳಾಗಿ, ಬ್ರಹ್ಮವಿತ್ತಾದ ಗೌತಮಪತ್ನಿಯಾದುದರಿಂದ ಕ್ಷತ್ರಿಯ ರಾದ ರಾಮಲಕ್ಷ್ಮಣರು ಋಷಿಪತ್ನಿಯಾದ ಆಕೆಯ ಪಾದಗಳಿಗೆ ನಮಸ್ಕರಿಸಿದರೆಂದು ಹೇಳಲ್ಪಟ್ಟಿರುತ್ತದೆ. ಅನಂತರ ಗೌತಮರು ತಮ್ಮ ಪತ್ನಿಯೊಂದಿಗೆ **"ಗೌತಮೋಪಿ ಮಹಾತೇಜಾ ಅಹಲ್ಯಾ ಸಹಿತಸ್ಸುಖೀ। ರಾಮಂ ಸಂಪೂಜ್ಯವಿಧಿವತ್ತಪಸ್ತೇಪೇ ಮಹಾಯಶಾಃ"** ಎಂದು, ವಿಧ್ಯನುಸಾರವಾಗಿ ಮರ್ಯಾದೆ ಮಾಡಿದರು ಎಂದ ಇಷ್ಟು ಮಾತ್ರವೇ ಹೇಳಲ್ಪಟ್ಟಿರುತ್ತದೆ. ಹಾಗೆಯೇ ಶ್ರೀರಾಮಚಂದ್ರ ಪ್ರಭುವು ದಂಡಕಾರಣ್ಯವನ್ನು ಪ್ರವೇಶಿಸಿದಾಗ **"ಮಂಗಳಾನಿ ಪ್ರಯುಂಜಾನಾಃ ಪ್ರತ್ಯ ಗೃಹ್ಣನ್ ದೃಢವ್ರತಾಃ"** ಎಂದು ಅಲ್ಲಿದ್ದ ಮಹರ್ಷಿಗಳು ಮಂಗಳವನ್ನು ಹಾಡಿದರು ಎಂದು ಹೇಳಲ್ಪಟ್ಟಿತೇ ವಿನಾ, ಅವರು ಈ ಕ್ಷತ್ರಿಯರಾದ ರಾಮಲಕ್ಷ್ಮಣರಿಗೆ ಶಾಸ್ತ್ರ ಮರ್ಯಾದೆಗೆ ವಿರುದ್ಧವಾಗಿ ನಮಸ್ಕರಿಸಿದರೆಂದು ಶ್ರೀ ವಾಲ್ಮೀಕಿಯು ಹೇಳಲಿಲ್ಲವು. ಅವರು ವನ್ಯಗಳಾದ ಫಲಪುಷ್ಪಾದಿಗಳಿಂದ ಪೂಜಿಸಿ, **"ಗರ್ಭಭೂತಾಸ್ತಪೋಧನಾಃ"** ಎಂದು ಹೇಳಿಕೊಂಡರೇ ವಿನಾ ನಮಸ್ಕರಿಸಿದರೆಂಬ ಹೇಳಿಕೆ ಇಲ್ಲವು. ಶ್ರೀರಾಮ ಚಂದ್ರಪ್ರಭುವು ವಿಶ್ವಾಮಿತ್ರಭರದ್ವಾಜಾದಿಗಳಿಗೆ ನಮಸ್ಕಾರವನ್ನು ಮಾಡಿದರೆಂದು

ಹೇಳಲ್ಪಟ್ಟಿರುತ್ತದೆ. "ರಾಮಸ್ಸೌಮಿತ್ರಿಣಾಸಾರ್ಧಂ ಸೀತಯಾಚಾಭ್ಯವಾದಯತ್" (ಅಯೋಧ್ಯಾ ೫೪.೧೨). ಹಾಗೆಯೇ ಶ್ರೀ ಕೃಷ್ಣಭಗವಾನ್‌ರವರೂ ತಾವು ಕ್ಷತ್ರಿಯರಾದುದರಿಂದ ಬ್ರಾಹ್ಮಣರಾಗಿ ಬ್ರಹ್ಮವಿತ್ತಾದ ಕುಚೇಲರಿಗೆ "ಉಪಹೃತ್ಯಾವನಿಜ್ಯಾಸ್ಯ ಪಾದೌಪಾದಾವನೇಜನೀಃ" (ಭಾಗ. ೧೦-೮೦-೧೮) ಪಾದವನ್ನು ತೊಳೆದು ಶಿರಸ್ಸಿಗೆ ಪ್ರೋಕ್ಷಿಸಿಕೊಂಡರೆಂದು ಹೇಳಲ್ಪಟ್ಟಿದುತ್ತದೇ ವಿನಾ ಕುಚೇಲರು ಬ್ರಹ್ಮವಿತ್ತಾದರೂ ಶ್ರೀ ಕೃಷ್ಣರಿಗೆ ನಮಸ್ಕರಿಸಿದರೆಂದು ಹೇಳಲ್ಪಟ್ಟಿಲ್ಲವು. ಆದರೆ ವಿವಾಹ ಕಾಲದಲ್ಲಿ, ಶಿಶುಪಾಲನಿಗೆ ಪತ್ನಿಯಾಗುವದು ಇಷ್ಟವಿಲ್ಲದೆ ಶ್ರೀ ರುಕ್ಮಿಣಿಯು, ತನ್ನನ್ನು ಬಂದು ಒಡನೆ ಕರೆದುಕೊಂಡು ಹೋಗಬೇಕೆಂದು ಬರೆದ ಪತ್ರವನ್ನು ತಂದ ಬ್ರಹ್ಮವಿತ್ತು ಆ ಕಾಗದವನ್ನು ಸ್ವಾಮಿಪಾದದಲ್ಲಿಟ್ಟು ಆತನಿಗೆ ನಮಸ್ಕರಿಸಿದರೆಂದು ಹೇಳಲ್ಪಟ್ಟಿರುತ್ತದೆ. "ನಿಧಾಯ ಲಿಖಿತಂ ಪತ್ರಂ ಪಾದಯೋಃ ಪ್ರಣನಾಮ ತಮ್ । ತದಾದಾಯ ಜಗನ್ನಾಥಃ ಸ್ಮಿತಸುಂದರಲೋಚನಃ । ವಾಚಯಾಮಾಸ ಧರ್ಮಾತ್ಮಾ ಸಾದರಂ ಸ್ಪೃಹಯನ್ನಿವ" ಎಂದು ಹೇಳಲ್ಪಟ್ಟಿರುತ್ತದೆ. (ಭಾಗ. ೧೦ ) ಇದರ ಅರ್ಥವು ಸ್ಪಷ್ಟವು. ಆ ಪತ್ರವನ್ನು ಶ್ರೀ ಕೃಷ್ಣಭಗವಾನ್‌ವರು ಕೈಯಲ್ಲಿ ತೆಗೆದುಕೊಂಡು, ತಮ್ಮ ಸರ್ವಜ್ಞತೆಯಿಂದ ತಿಳಿದವರಾದ ಪ್ರಯುಕ್ತ, ನಗುತ್ತಾ ಸುಂದರ ಕಣ್ಣುಗಳನ್ನು ಹೊಂದಿದವರಾಗಿ ಆ ಬ್ರಹ್ಮವಿತ್ತನ್ನು ಕುರಿತು, ಶ್ರೀ ರುಕ್ಮಿಣಿಯು ತನ್ನ ಅಂತರಂಗ ದಾಸನನ್ನಾಗಿ ಭಾವಿಸಿದ ನಂತರ ನಿಮ್ಮ ವಿಷಯದಲ್ಲಿ ರಹಸ್ಯವೇನು, ನೀವೇ ಓದಿ ನೋಡೋಣವೆಂಬ ಭಾವನೆಯಿಂದ ಆ ಬ್ರಾಹ್ಮಣರ ಕೈಗೆ ಕೊಟ್ಟು ಓದಿಸಿದರೆಂದಿರುತ್ತದೆ. ಇಲ್ಲಿ ಬ್ರಾಹ್ಮಣರು ಕ್ಷತ್ರಿಯನಿಗೆ ನಮಸ್ಕರಿಸಿರುತ್ತಾರೆ. ಇದು ಶಾಸ್ತ್ರವಿರುದ್ಧವೆಂದು ಭಾವಿಸಿ ಈಚೆಗೆ ಅಚ್ಚಾಗಿರುವ ಪ್ರತಿಗಳಲ್ಲಿ ದಾಸರು ಉದಾಹರಿಸಿರುವ ಶ್ಲೋಕಗಳಿಲ್ಲವು. ಇಂತಹ ಈಗಿನ ಪಂಡಿತರುಗಳ ನಡತೆಯು ಶ್ಲಾಘ್ಯವಾದುದಲ್ಲವು. ಶ್ರೀ ವೀರರಾಘವೀಯದಲ್ಲೂ ಮತ್ತು ಶ್ರೀಧರೀಯ ವ್ಯಾಖ್ಯಾನಗಳಲ್ಲೂ ಈ ಶ್ಲೋಕಗಳ ಪ್ರತೀಕವನ್ನು ಹಿಡಿದು ವ್ಯಾಖ್ಯಾನಮಾಡಿರುತ್ತಾರೆ. ಆದುದರಿಂದ ಪ್ರಾಚೀನ ಗ್ರಂಥಗಳಲ್ಲಿ ಇವು ಉಂಟೆಂಬುದು ಸಿದ್ಧವು. ಇದು ಶಾಸ್ತ್ರವಿರುದ್ಧವೆಂದು ಭಾವಿಸಲು ಕಾರಣವಿಲ್ಲವು. ಶ್ರೀ ರುಕ್ಮಿಣಿ ಲಕ್ಷ್ಮಿಯೆಂದೂ, ಶ್ರೀ ಕೃಷ್ಣನನ್ನು ನಾರಾಯಣನೆಂದೂ ಚೆನ್ನಾಗಿ ತನ್ನ ಯೋಗಮಹಿಮೆಯಿಂದ ತಿಳಿದ ಬ್ರಹ್ಮವಿತ್ತು ಶ್ರೀ ಕೃಷ್ಣನಿಗೆ ನಮಸ್ಕರಿಸುವದು; ಶ್ರೀ ದೇಶಿಕರವರು ಅಪ್ಪಣೆಕೊಟ್ಟಹಾಗೆ ವಿಶೇಷ ವಿಧಿ ಪ್ರಾಪ್ತವು. ಆದುದರಿಂದ ಇಲ್ಲಿ ಸಮಂಜಸವೇ ಎಂದು ಭಾವಿಸತಕ್ಕದ್ದು. ಆದುದರಿಂದ ಶ್ರೀ ರಾಮಚಂದ್ರಪ್ರಭುವೇಯಾಗಲಿ, ಶ್ರೀಕೃಷ್ಣಭಗವಾನ್ ಆಗಲಿ ಶಾಸ್ತ್ರವಿರುದ್ಧವಾಗಿ ಎಲ್ಲಿಯೂ ನಡೆದಿಲ್ಲವು. ಹೀಗಿರುವಾಗ ಆ ಮೇಲುಪಜ್ಞ್ತಿಯನ್ನನುಸರಿಸಿ ನಾವೆಲ್ಲರೂ ಜಾತ್ಯನುಗುಣವಾದ ಪ್ರವೃತ್ತಿಯನ್ನು ಅವಲಂಬಿಸಬೇಕೇ ವಿನಾ ಶಾಸ್ತ್ರವಿರುದ್ಧವಾಗಿ ನಡೆಯಕೂಡದೆಂಬುದನ್ನು ಶ್ರೀ ದೇಶಿಕರವರು ಸ್ಥಾಪಿಸಿರುತ್ತಾರೆ.

**ಇನ್ನಿಯುಮಙ್ಗಳಿಲ್ಲಾನುಮ್ ಸಂಪ್ರತಿಪನ್ನ ಶಿಷ್ಟಾನುಷ್ಠಾನ ಪರಂಪರೈಯಾಲುಮ್ ಸಿದ್ಧಙ್ಗಳ್.**

ಪರಮೈಕಾಂತಿನಃ ವರ್ಣಾಶ್ರಮಧರ್ಮಾನುಷ್ಠಾನೇ ವೈಲಕ್ಷಣ್ಯಂ ದರ್ಶಯತಿ

---

**ಅಗ್ನೈಯಾಲ್, ತತ್ತ ವರ್ಣಾಶ್ರಮಾದಿಗಳುಕ್ಕದೈತ್ತ ನಿಯಮಙ್ಗಳೋಡೇ ಭಗವತ್ಕೈಙ್ಕರ್ಯವಾಗ ಪಣ್ಣುಗೈ ಪರಮೈಕಾಂತಿತ್ವ ವಿರುದ್ಧಮನ್ರು.**

---

ಆದುದರಿಂದ ಇಷ್ಟು ದೂರ ವಿಮರ್ಶಿಸಿ ಹೇಳಿದವೆಲ್ಲವೂ ಶಿಷ್ಟಾಚಾರ ಪ್ರತಿಪನ್ನವಾದುವೆಂದು ಹೇಳುತ್ತಾರೆ. ಈ ನಿಯಮಙ್ಗಳೆಲ್ಲವೂ, ಸಂಪ್ರತಿಪನ್ನ ಶಿಷ್ಟಾನುಷ್ಠಾನಪರಂಪರೈಯಾಲುಮ್ – ಶಾಸ್ತ್ರಸಮ್ಮತಿಯುಳ್ಳದ್ದಾಗಿ ನಮ್ಮ ಪೂರ್ವಾಚಾರ್ಯರುಗಳಾದ ಶಿಷ್ಟರ ಅನುಷ್ಠಾನದ ಪರಂಪರೆಯಿಂದಲೂ, ಎಂದರೆ ಅವರ ಶಿಷ್ಯರು ಪ್ರಶಿಷ್ಯರು ಹೀಗೆ ಪರಂಪರೆಯಾಗಿ ಬಂದ ಅನುಷ್ಠಾನದಿಂದಲೂ ಒಪ್ಪಲ್ಪಟ್ಟುದರಿಂದಲೂ, ಸಿದ್ಧಙ್ಗಳ್ - ಅನುಷ್ಠಿಸಲೇಬೇಕೆಂದು ಸ್ಥಾಪಿತವಾದವುಗಳು. ಮಹಾಭಕ್ತರಾದ ಶೂದ್ರ ಮ್ಲೇಚ್ಛಾದಿಗಳ ವಿಷಯದಲ್ಲಿ ಹೇಳಲ್ಪಟ್ಟ ಪೂಜೋಕ್ತಿಯು, ಅವರನ್ನು ತುಚ್ಛವಾಗಿ ಕಾಣಕೂಡದು; ಉತ್ಕೃಷ್ಟ ಜಾತಿಯವರು ಪೂಜಾರ್ಹರಾದ ಅಪಕೃಷ್ಟಜಾತಿಯವರನ್ನು ಬಹುಮಾನಿಸಬೇಕಾದುದು ಧರ್ಮವು. ಆದರೆ ಅವರುಗಳು ಸನ್ಮಾನಿಸಲು ಯೋಗ್ಯರೆಂದು ಇಷ್ಟುಮಾತ್ರ ಅಭಿಪ್ರಾಯವುಳ್ಳದೇ ವಿನಾ, ಶಾಸ್ತ್ರವಿರುದ್ಧಗಳಾದ ಸಹಪಙ್ಕ್ತಿ ಭೋಜನ, ವಿವಾಹ ಮೊದಲಾದ ಶುಭ ಶೋಭನಾದಿಗಳಿಗೆ ಅರ್ಹರೆಂಬ ಭಾವನೆಯಲ್ಲವು ಎಂಬುದು ತಾತ್ಪರ್ಯವು.

ಈಗ ಪ್ರಕೃತ ಪ್ರಕರಣವಾದ "**ಸರ್ವಧರ್ಮಾನ್ ಪರಿತ್ಯಜ್ಯ**" ಎಂಬಲ್ಲಿ ಮುಖ್ಯವಾಗಿ ಕೆಲವರ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ, ಪರಮ ಹಿತೋಪದೇಶವನ್ನು ಇದುವರೆಗೂ ಮಾಡಿದುದನ್ನು ನಿಗಮನಮಾಡಿ ಹೇಳುತ್ತಾರೆ. **ವರ್ಣಾಶ್ರಮ** ಧರ್ಮಗಳ ಅನುಷ್ಠಾನವು ಔಪಾಧಿಕವಾದರೂ ಪರಮೈಕಾಂತಿಯೂ ಶಾಸ್ತ್ರವಿಧ್ಯನುಸಾರ ಆವಶ್ಯಕವಾಗಿ ಮಾಡಲೇಬೇಕೆಂದು ಹೇಳಿ ಮುಗಿಸುತ್ತಾರೆ. ಹಾಗೆ ಹೇಳುವದರಲ್ಲಿ ಪ್ರಪನ್ನನು ಇವುಗಳನ್ನು ಅನುಷ್ಠಿಸುವದರಲ್ಲಿ ಇತರರ ಅನುಷ್ಠಾನಗಳಿಗಿಂತ ವೈಲಕ್ಷಣ್ಯ ಉಂಟೆಂದೂ ಮೂರು ಕಾರಿಕೆಗಳಿಂದ ತಿಳಿಸುತ್ತಾರೆ--

ಪರಮೈಕಾಂತಿಯು ವರ್ಣಾಶ್ರಮ ಧರ್ಮಾನುಷ್ಠಾನದಲ್ಲಿರುವ ವೈಲಕ್ಷಣ್ಯವನ್ನು ಪ್ರದರ್ಶಿಸುತ್ತಾರೆ,

**ಅಗ್ನೈಯಾಲ್** – ಶಾಸ್ತ್ರವಿಧಿಪ್ರಾಪ್ತವಾಗಿಯೂ ಮತ್ತು ಶಿಷ್ಟಾಚಾರಕ್ಕೆ ಅನುಗುಣವಾಗಿಯೂ ಇರುವದರಿಂದ, ತತ್ತ **ವರ್ಣಾಶ್ರಮಾದಿಗಳುಕ್ಕು** - ತನ್ನ ವರ್ಣ ಮತ್ತು ಆಶ್ರಮ, ಆದಿ ಪದದಿಂದ ಋಕ್ ಯಜುಸಾಮಶಾಖೆಗಳು ಹೇಳಲ್ಪಟ್ಟವು, ಇವುಗಳಿಗೆ **ಅದೈತ್ತ ನಿಯಮಙ್ಗಳೋಡೇ**-ಸಂಬಂಧಿಸಲ್ಪಟ್ಟ ನಿಯಮಗಳೊಂದಿಗೆ, ಶಾಸ್ತ್ರಪ್ರೋಕ್ತರೀತಿಯಲ್ಲಿ **ಭಗವತ್ಕೈಙ್ಕರ್ಯಪಣ್ಣುಗೈ** – ಭಗವ

**ಸಾಕ್ಷಾಲ್ಲಕ್ಷ್ಮೀಪತಾವೇವ ಕೃತಂ ಕೈಙ್ಕರ್ಯ ಮಞ್ಜಸಾ ॥**
**ಸಾರ ಕಲ್ಕ ವಿಭಾಗೇನ ದ್ವಿಧಾ ಸದ್ಭಿ ರುದೀರ್ಯತೇ ॥೧೩೨॥**

---

ತ್ಕೈಂಕರ್ಯವಾಗಿ ಮಾಡೋಣವು' ಪರವ್ಯೈಕಾಂತಿತ್ವವಿರುದ್ಧವುನ್ನು - ಪ್ರಪನ್ನನ ಪರವ್ಯೈಕಾಂತ್ವಕ್ಕೆ ವಿರುದ್ಧವಲ್ಲವು. ಆವಶ್ಯಕವಾಗಿ ಮಾಡತಕ್ಕದ್ದೆಂದು ಹೇಳದೆ ಪರವ್ಯೈಕಾಂತಿತ್ವಕ್ಕೆ ವಿರುದ್ಧವಲ್ಲವೆಂದು ಉಪದೇಶಿಸಲು ಕಾರಣವೇನು? ಎಂದರೆ ಕೆಲವರು ಹಾಗೆ ಅನುಷ್ಠಿಸುವದು ಪ್ರಪನ್ನನ ಪರವ್ಯೈಕಾಂತಿತ್ವಕ್ಕೆ ವಿರುದ್ಧವೆಂದು ಭಾವಿಸಿದರು. ಅದು ಸರಿಯಲ್ಲವೆಂದು ತಿಳಿಸುವದಕ್ಕಾಗಿ ಹಾಗೆ ಪ್ರಯೋಗವು.

ಸಾಕ್ಷಾತ್ – ಸಾಕ್ಷಾತ್ತಾಗಿ ನೆಟ್ಟಗೆ, **ಲಕ್ಷ್ಮೀಪತಾವೇವ** - ಶ್ರಿಯಃಪತಿಯಲ್ಲಿಯೇ, **ಕೃತಂ** – ಮಾಡಲ್ಪಟ್ಟ, **ಕೈಂಕರ್ಯಂ** - ಕೈಙ್ಕರ್ಯವೂ, **ಅಂಜಸಾ** - ಎಂದರೆ ಶೀಘ್ರವಾಗಿ ಎಂಬರ್ಥವಾಗುತ್ತದೆ- ಇಲ್ಲಿ ನಿರ್ಣಯದ ಮೂಲಕವಾಗಿ **ಸಾರಕಲ್ಕವಿಭಾಗೇನ** - ಸಾರವೆಂಬ ಕಲ್ಕವೆಂಬ ವಿಭಾಗದಿಂದ, **ದ್ವಿಧಾ** - ಎರಡು ವಿಧವಾಗಿ, **ಸದ್ಭಿಃ** - ಪ್ರಾಜ್ಞರಿಂದ **ಉದೀರ್ಯತೇ** - ಹೇಳಲ್ಪಟ್ಟಿರುತ್ತದೆ. ಸಾರವತ್ತಾದುದು ಸಾರವು ; ಸಾರವತ್ತಲ್ಲದೆ ನಿಸ್ಸಾರವಾದುದು ಕಲ್ಕವು. ಸಾರಕ್ಕೆ ಪ್ರತಿದ್ವಂದಿಯಾದುದು ಕಲ್ಕವು. ಆದುದರಿಂದ ನಿಸ್ಸಾರವೆಂದೇ ಅರ್ಥವು. ಒಂದು ಗಿಡಮೂಲಿಕೆಯನ್ನು ತಂದು ಕಷಾಯ ಹಾಕಿದರೆ, ಅದಕ್ಕೆ ಜಲದೊಂದಿಗೆ ಸಾರ ಬಂದಿರುತ್ತದೆ. ಹಿಂಡಿದ ಮೂಲಿಕೆಯು ನಿಸ್ಸಾರವಾದುದಾಗಿ ಕಲ್ಕವು. ಅಥವಾ ಕಬ್ಬನ್ನು ಆಲೆಯಾಡಿದರೆ ಕಬ್ಬಿನಹಾಲು ಸಾರವು, ಸಿಪ್ಪೆಯು ಕಲ್ಕವು. ಹಾಗೆಯೇ ಎಳ್ಳನ್ನು ಗಾಣವಾಡಿದರೆ ತೈಲವು ಸಾರವು, ಹಿಂಡಿಯು ಕಲ್ಕವು. "ತಿಲಕಲ್ಕೇಚ ಪಿಣ್ಯಾಕೋ" ಎಂದು ಅಮರನಿಘಂಟುವಿದೆ. ಕಲ್ಕ ಶಬ್ದಕ್ಕೆ "ಕಲ್ಕೋಸ್ತ್ರೀಶವ ಲ್ಯೈನಸೋಃ । ದಂಭೇಪಿ" ಎಂದು (೧) ದೇಹದಿಂದ ಹೊರಗೆ ಹೋಗುವ ಮಲರೂಪ ನಿಸ್ಸಾರ ಭಾಗ, (೨) ಪಾಪ, (೩) ದಂಭವೆಂದು ಮೂರರ್ಥಗಳು. ಇಲ್ಲಿ ನಿರರ್ಥಕವಾದ ನಿಸ್ಸಾರಭಾಗವೆಂಬರ್ಥವು. ಕಲ್ಕ ಶಬ್ದದ ಪ್ರಯೋಗವನ್ನು ಆದಿ ಪರ್ವದ ಪ್ರಥಮಾಧ್ಯಾಯದ ಕೊನೆಯ ಶ್ಲೋಕದಲ್ಲಿ ಕಾಣಬಹುದು.

**ತಪೋನಕಲ್ಕೋಽಧ್ಯಯ ನಂ ನಕಲ್ಕಃ ಸ್ವಾಭಾವಿಕೋ ವೇದವಿಧಿರ್ನಕಲ್ಕಃ ।**
**ಪ್ರಸಹ್ಯವಿತ್ತಾಹರಣಂ ನಕಲ್ಕ ಸ್ತಾನೇವ ಭಾವೋಪಹತಾನಿ ಕಲ್ಕಃ ॥**

ಇಲ್ಲಿ ಭಾರತ ವ್ಯಾಖ್ಯಾತೃವು ಕಲ್ಕ ಶಬ್ದಕ್ಕೆ ಪಾಪವೆಂದು ಅರ್ಥಮಾಡಿರುತ್ತಾರೆ. ನಿಸ್ಸಾರವಾದುದು ನಿರರ್ಥಕವಾದುದೆಂಬುದೇ ಇಲ್ಲಿಯೂ ಸಮಂಜಸವಾದ ಅರ್ಥವು. ತಪಸ್ಸೂ ತಾನೇ ಸ್ವತಂತ್ರಿಸಿ ಮೋಕ್ಷವನ್ನು ಕೊಡದಿದ್ದರೂ, ನಿಸ್ಸಾರವಾದುದಲ್ಲವು ; ಹಾಗೆಯೇ ವೇದಾಧ್ಯಯನವೂ ನಿಸ್ಸಾರವಾದುದಲ್ಲವು ; ವರ್ಣಾ

**ಕೃತಕೃತ್ಯಸ್ಯ ಕೈಂಕರ್ಯಂ ಯದನನ್ಯಪ್ರಯೋಜನಮ್ ।**
**ಗುರ್ವಾದಿ ರಕ್ಷಣಾರ್ಥಂ ವಾ ತತ್ಸಾರಂ ಸಂಪ್ರಚಕ್ಷತೇ ॥೧೩೩॥**

---

ಶ್ರಮಗಳಿಗೆ ವಿಹಿತಗಳಾಗಿ ವೇದಗಳಲ್ಲಿ ವಿಧಿಸಲ್ಪಟ್ಟ ನಿತ್ಯನೈಮಿತ್ತಿಕಾನುಷ್ಠಾನವೂ ನಿಸ್ಸಾರವಾದುದಲ್ಲವು; ಏಕೆಂದರೆ ಅವುಗಳು ಫಲಾಭಿಸಂಧಿ ರಹಿತವಾಗಿ ಭಗವದಾರಾಧನೆಯ ರೂಪದಲ್ಲಿ ಅನುಷ್ಠಿಸುವುದರಿಂದ ದೇಹಕ್ಕೆ ಉಂಟಾಗುವ ಅಸುಖಗಳನ್ನೂ ಸಹಿಸಿಕೊಂಡು ಭಗವದ್ಭಾಗವತ ಕೈಂಕರ್ಯಗಳಿಗಾಗಿಯೂ, ತನಗೂ ತನಗೆ ಸೇರಿದವರ ದೇಹಯಾತ್ರೆಗಾಗಿಯೂ ಕಷ್ಟದಿಂದ ದ್ರವ್ಯಾರ್ಜನೆಯೂ ನಿಸ್ಸಾರವಾದುದಲ್ಲವು. ಹಾಗಾದರೆ ಯಾವಾಗ ಇವುಗಳೆಲ್ಲಾ ನಿಸ್ಸಾರವಾದವುಗಳೆಂದರೆ ನಾಲ್ಕನೆಯ ಪಾದದಿಂದ ಹೇಳುತ್ತಾರೆ. ತಾನೇವ - ಅವುಗಳೇ **ಭಾವೋಪಹತಾನಿ** - ಫಲಾಭಿಸಂಧಿಯನ್ನು ತ್ಯಾಗಮಾಡಿ ಪರಮಾತ್ಮನ ಆರಾಧನರೂಪಭಾವವಿಲ್ಲದೆ ಫಲಾಶೆ ಇದ್ದರೆ ಕಲ್ಕಃ – ನಿಸ್ಸಾರವಾದವಾಗುತ್ತದೆಂಬುದು ಈ ಶ್ಲೋಕಾರ್ಥವು.

**ಅರ್ಥ**—ಹಿಂದಿನ ಕಾರಿಕೆಯಲ್ಲಿ ಸಾರನಿಸ್ಸಾರವಿಭಾಗವೆಂದು ವೈದಿಕ ಲೌಕಿಕಗಳಾದ ಎಲ್ಲಾ ಅನುಷ್ಠಾನಗಳನ್ನೂ ವಿಭಾಗಿಸಿ ಹೇಳಿದರು. ಈ ಕಾರಿಕೆಯಿಂದ ಸಾರವತ್ತಾದವು ಯಾವುವೆಂದು ತಿಳಿಸುತ್ತಾರೆ. **ಯತ್** - ಯಾವ, **ಕೃತಕೃತ್ಯಸ್ಯ** - ಪರಮಹಿತವಾಗಿ ಮೋಕ್ಷಸಾಧಕವಾಗಿರುವ ಸಾಧ್ಯೋಪಾಯವು ಯಾವುದೋ ಅದನ್ನು ಅನುಷ್ಠಿಸಿದವನು ಕೃತಕೃತ್ಯನು, ಅಂತಹ ಪ್ರಪನ್ನನು ಮಾಡುವ, **ಕೈಙ್ಕರ್ಯಂ** - ಭಗವತ್ಕೈಂಕರ್ಯವೋ ಎಂದರೆ ಭಗವಂತನ ಪ್ರೀತಿಗಾಗಿ ಆತನಲ್ಲಿ ಸಮರ್ಪಿಸಲ್ಪಟ್ಟ ಕೈಂಕರ್ಯವೋ ಅದು ಸಾರ ಹೇಗೆ? ಎಂದರೆ **ಅನನ್ಯಪ್ರಯೋಜನಮ್** - ಭಗವತ್ಪ್ರೀತಿಗಾಗಿ ಅಲ್ಲದೆ ಇನ್ನು ಯಾವ ಪ್ರಯೋಜನವುಳ್ಳದಲ್ಲದುದರಿಂದಲೂ, **ಗುರ್ವಾದಿ ರಕ್ಷಣಾರ್ಥಂ ವಾ** - ಇಲ್ಲಿ ವಾ ಶಬ್ದವು ಚ ಎಂಬ ಅರ್ಥದಲ್ಲಿ ಯಾದುದರಿಂದ ಸಮುಚ್ಚಯವನ್ನು ಬೋಧಿಸುತ್ತದೆ, ಆದುದರಿಂದ ಗುರುಗಳೇ ಮೊದಲಾದವರ ರಕ್ಷಣಾರ್ಥವಾಗಿಯೂ, ಮಾಡಲ್ಪಟ್ಟ ಕೈಂಕರ್ಯವು ಯಾವುದೋ, ತತ್ ಅದು, **ಸಾರಂ** - ಸಾರವತ್ತಾದ ಕೈಂಕರ್ಯವೆಂದು, **ಸಂಪ್ರಚಕ್ಷತೇ** - ಚೆನ್ನಾಗಿ ಹೇಳಿಕೊಳ್ಳಲ್ಪಡುತ್ತದೆ. ಇಲ್ಲಿ **ಅನನ್ಯಪ್ರಯೋಜನಂ** ಎಂದು ಹೇಳಿರುವದರಿಂದ ಅನ್ಯಪ್ರಯೋಜನವುಳ್ಳ ದೇವತಾಂತರ ಕೈಂಕರ್ಯವು ವ್ಯವಚ್ಛೇದಿಸಲ್ಪಟ್ಟು ಅಂತಹ ಕೈಙ್ಕರ್ಯವು ಕಲ್ಕವೆಂದೇ ಹೇಳಿದಂತಾಯಿತು. ಇಲ್ಲಿ **ಕೃತಕೃತ್ಯಸ್ಯ ಕೈಂಕರ್ಯಂ** ಸಾರವೆಂದು ಹೇಳಿದುದರಿಂದ, ಕೃತಕೃತ್ಯನಲ್ಲದವನ ಕೈಂಕರ್ಯವು ತನಗೆ ವಿಹಿತ ಭೋಗಾರ್ಥಗಳಿಗೆ ಮಾಡಿದುದಾಗಿ ಅಸಾರಫಲಕ್ಕಾಗಿ ಮಾಡಲ್ಪಟ್ಟದುದರಿಂದ ಅಸಾರವೆಂದೇ ಹೇಳಿದಂತಾಯಿತು. ಗುರುವಿನ ರಕ್ಷಣೆಯು ಯಾವುದು ಎಂದರೆ ಗುರುವಿನಿಂದ ಬಂದ ಜ್ಞಾನದ ರಕ್ಷ

ಐಹಿಕಗಳಲ್ಲಿ ಸಂಪೂರ್ಣ ವೈರಾಗ್ಯದಿಂದ ಪರಮಾತ್ಮನೊಬ್ಬನಲ್ಲೇ ಸಕ್ತವಾದ ಮನಸ್ಸುಳ್ಳವರು, ಪರಮೈಕಾನ್ತಿಗಳು ; ಅವರ ಕೈಂಕರ್ಯಗಳನ್ನೆಲ್ಲಾ ದೇವನು ಶಿರಸಾ ಅಂಗೀಕರಿಸುವನೆಂದು ಹೇಳಲ್ಪಟ್ಟಿತು ಎನ್ರ್ರುಮ್ - ಎಂಬದಾಗಿ, ಶ್ರೀ ವೇದವ್ಯಾಸರು, ಅರುಳಿಚ್ಚೆಯ್‌ದಾರ್ - ಕೃಪಯಾ ಭಾರತ ಮೋಕ್ಷಧರ್ಮದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ. ಹೀಗೆ ಅಪ್ರಪನ್ನರೂ ಮತ್ತು ಪ್ರಪನ್ನರೂ ಮಾಡುವ ಕೈಂಕರ್ಯಗಳಿಗೆ ತಾರತಮ್ಯವುಂಟೆಂದು ತಿಳಿಸಿದರು. ಹೀಗೆ ವ್ಯತ್ಯಾಸವನ್ನು ಹೇಳಿದವರು ಸಾಧಾರಣ ಮನುಷ್ಯರಲ್ಲವು. ಪೂಜ್ಯತಮರಾದ ಶ್ರೀ ವೇದವ್ಯಾಸ ಭಗವಾನ್ ರವರು ಹಾಗೆ ಹೇಳುತ್ತಾರೆಂಬ ಭಾವವು.

ಭಗವಚ್ಛಬ್ದಕ್ಕೆ ಮುಖ್ಯವೃತ್ತಿಯು ಪರಮಾತ್ಮನಲ್ಲಿ ; ಇತರರಲ್ಲಾದರೋ ಔಪಚಾರಿಕವೆಂದು ಶ್ರೀ ಪರಾಶರು ಮುಂದಿನ ಶ್ಲೋಕಗಳಿಂದ ಹೇಳಿರುತ್ತಾರೆ.—

**ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಶ್ಶ್ರಿಯಃ ।**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಿಣಾ ।**
**ವಸಂತಿ ತತ್ರಭೂತಾನಿ ಭೂತಾತ್ಮನ್ಯಖಿಲಾತ್ಮನಿ ।**
**ಸ ಚ ಭೂತೇಷ್ವಶೇಷೇಷು ವಕಾರಾರ್ಥಸ್ತತೋಽವ್ಯಯಃ ।**
**ಏವ ಮೇಷ ಮಹಾನ್ ಶಬ್ದೋ ಮೈತ್ರೇಯ ಭಗವಾನಿತಿ ।**
**ಪರಮಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗಃ ॥**

ಎಂಬುದರಿಂದ ಭಗವಚ್ಛಬ್ದವು ಮುಖ್ಯವೃತ್ತಿಯಿಂದ ಪರಮಪುರುಷನಲ್ಲೇ ಅನ್ವಯವೆಂದು ತಿಳಿಸಿದರು. ಅನಂತರ ಹೇಳುತ್ತಾರೇನೆಂದರೆ :—

**ತತ್ರಪೂಜ್ಯ ಪದಾರ್ಥೋಕ್ತಿ ಪರಿಭಾಷಾ ಸಮನ್ವಿತಃ ।**
**ಶಬ್ದೋಽಯಂ ನೋಪಚಾರೇಣ ತ್ವನ್ಯತ್ರ ಹ್ಯುಪಚಾರತಃ ।**
**ಉತ್ಪತ್ತಿಂ ಪ್ರಳಯಂಚೈವ, ಭೂತಾನಾ ಮಾಗತಿಂ ಗತಿಮ್**
**ವೇತ್ತಿವಿದ್ಯಾ ಮವಿದ್ಯಾಂಚ ಸ ವಾಚ್ಯೋ ಭಗವಾನಿತಿ ॥**

ಹೀಗೆ ಉತ್ಪತ್ತಿ ಪ್ರಳಯಾದಿಗಳನ್ನೆಲ್ಲಾ ತಿಳಿದ ಪ್ರಾಜ್ಞನ ವಿಷಯದಲ್ಲಿ ಔಪಚಾರಕವಾಗಿ ಭಗವಚ್ಛಬ್ದವು ಪ್ರಯೋಗಿಸಲ್ಪಡುತ್ತದೆಂದು ಹೇಳಿರುತ್ತಾರೆ.

ಶ್ರೀ ವೇದವ್ಯಾಸ ಭಗವಾನ್ ಎಂಬಲ್ಲಿರುವ ಭಗವಚ್ಛಬ್ದಕ್ಕೆ ಈ ಔಪಚಾರಿಕಾರ್ಥವೆಂದು ಭಾವಿಸತಕ್ಕದ್ದು. ಉತ್ಪತ್ತಿ ಪ್ರಳಯಾದಿ ಶಾಸ್ತ್ರವನ್ನೆಲ್ಲಾ ಕೂಲಂಕಷವಾಗಿ ಚನ್ನಾಗಿ ತಿಳಿದ ಮಹಾಪ್ರಾಜ್ಞರೆಂಬ ಭಾವವು.

ಆದುದರಿಂದ ಭಗವಚ್ಛಬ್ದವು ಪರಮಾತ್ಮನನ್ನು ಕುರಿತು ಹೇಳುವಾಗ ಅರ್ಥವೇನೆಂದರೆ ಷಾಡ್ಗುಣ್ಯ ಪರಿಪೂರ್ಣನು ಮತ್ತು ಹೇಯ ಗುಣರಹಿತನೆಂಬ ತಾತ್ಪರ್ಯವೆಂದು ಮುಂದಿನ ಶ್ಲೋಕದಿಂದ ತಿಳಿಸುತ್ತಾರೆ.

**ಜ್ಞಾನಶಕ್ತಿಬಲೈಶ್ವರ್ಯ ವೀರ್ಯತೇಜಾಂಸ್ಯಶೇಷತಃ**
**ಭಗವಚ್ಛಬ್ದವಾಚ್ಯಾನಿ ವಿನಾಹೇಯೈರ್ಗುಣಾದಿಭಿಃ ॥ (ವಿ. ಪು. ೬ ಅ.೭೪.೭೯)**

## ನೈರಪೇಕ್ಷ್ಯ ವಿಧಿಪಕ್ಷವಮುಪಸಂಹರತಿ

ಇಪ್ಪಡಿ ಇವರ್ ಭಗವದಾಜ್ಞೈಯಾಲೇಯನುಷ್ಠಿಕ್ಕಿರ ನಿತ್ಯನೈಮಿತ್ತಿಕಙ್ಗಳುಮ್ ಭಗವದನುಜ್ಞೈಯಾಲೇ ಯುವನುಕಪ್ಪೇ ಪ್ರಯೋಜನವಾಗವನುಷ್ಠಿಕ್ಕಿರ ವಿತ್ತವಾನ ಕೈಂಕರ್ಯಙ್ಗಳುವಮ್, ಇಪ್ಪ್ರಪತ್ತಿಯೋಡು ತುವಕ್ಕತ್ತು ನಿನ್ರನಿಲೈ ಸರ್ವಧರ್ಮಾ ಪರಿತ್ಯಜ್ಯ ಎಙ್ಗಿರವಿಧಾನತ್ತಾಲೇ ಸಿದ್ಧವಾಯ್ತ್ತು.

---

ಶ್ರೀ ವೇದವ್ಯಾಸ ಭಗವಾನ್ ಎಂದು ಪ್ರಯೋಗಿಸಿರುವದರಿಂದ ಅಂತಹ ಪ್ರಾಜ್ಞರ ಅಭಿಪ್ರಾಯವು ಪ್ರಮಾಣವಾಗಿ ವಿಶೇಷಾದರಣೀಯವೆಂಬ ಭಾವವು ದ್ಯೋತಿತವು.

**ಪ್ರಪದನಕ್ಕೆ ಸರ್ವ ಧರ್ಮಗಳ ನೈರಪೇಕ್ಷ್ಯವಿಧಿಪಕ್ಷವನ್ನು ಉಪಸಂಹಾರಮಾಡಿ ಹೇಳುತ್ತಾರೆ-**

ಮುಂದೆ **ಸರ್ವಧರ್ಮಾನ್** ಪರಿತ್ಯಜ್ಯ ಎಂಬಲ್ಲಿರುವ **ಪರಿತ್ಯಜ್ಯ** ಎಂಬುದು ವಿಧಿಯಾದ ಪಕ್ಷದಲ್ಲಿ, ಪ್ರಪದನದ ನೈರಪೇಕ್ಷ್ಯ ವಿಧಿಯನ್ನು ಪ್ರದರ್ಶಿಸುತ್ತದೆಂಬ **ತಾತ್ಪರ್ಯವೇ** ಉಚಿತವೆಂದು ಹೇಳಿ ನಿಗಮನ ಮಾಡುತ್ತಾರೆ. **ಇಪ್ಪಡಿ** - ಈ ರೀತಿಯಲ್ಲಿ, **ಇವರ್** - ಈ ಭರನ್ಯಾಸನಿಷ್ಠನಾದ ಪ್ರಪನ್ನನು, **ಭಗವದಾಜ್ಞೈಯಾಲೇ** "ಅಹರಹಸ್ಸಂಧ್ಯಾಮುಪಾಸೀತ" ಇತ್ಯಾದಿ ಭಗವಂತನ ಆಜ್ಞೆಯ ಮೂಲಕ, **ಅನುಷ್ಠಿಕ್ಕಿರ** – ಅನುಷ್ಠಿಸುವ, **ನಿತ್ಯನೈಮಿತ್ತಿಕ ಕೈಙ್ಕರ್ಯಗಳೂ** ಮತ್ತು **ಭಗವದನುಜ್ಞೈಯಾಲೇ** ಭಗವಂತನ ಅನುಜ್ಞೆಯಿಂದ ಎಂದರೆ ಭಗವಂತನು ಪ್ರಪನ್ನನ ಸ್ವರೂಪಕ್ಕೆ ಯೋಗ್ಯವಾದುದೆಂದು ಸಮ್ಮತಿಸಿರುವದರಿಂದ, **ಅವನುಗಪ್ಪೇ**-ಆತನ ಸುಪ್ರೀತಿಯೇ, **ಪ್ರಯೋಜನವಾಗಿ**, **ಅನುಷ್ಠಿಕ್ಕಿರ** – ಅನುಷ್ಠಿಸುವ, **ವಿತ್ತವಾನ ಕೈಙ್ಕರ್ಯಙ್ಗಳುಮ್** - ಅತಿಶಯಿತಗಳಾದ ಭಾಗವತಾರ್ಚನ, ಆಲಯ ನಿರ್ಮಾಣ, ದೀಪಾರೋಪಣ, ಪುಷ್ಪಾಹರಣಾದಿ ಅನುಜ್ಞಾಕೈಙ್ಕರ್ಯಗಳೂ. ಹೀಗೆ ಆಜ್ಞಾನುಜ್ಞಾ ಕೈಂಕರ್ಯಗಳೆಲ್ಲಾ ಹೇಳಲ್ಪಟ್ಟವು ; ಇವೆಲ್ಲವೂ, **ಇಪ್ಪ್ರಪತ್ತಿಯೋಡು** - ತಾನು ಅನುಷ್ಠಿಸಿದ ಭರನ್ಯಾಸದೊಂದಿಗೆ, **ತುವಕ್ಕತ್ತು** – ಸಂಬಂಧವಿಲ್ಲದೆ, **ನಿನ್ರನಿಲೈ** - ಇರುವ ಸ್ಥಿತಿಯನ್ನು, **ಸರ್ವಧರ್ಮಾ ಪರಿತ್ಯಜ್ಯ ಎಙ್ಗಿರವಿಧಾನತ್ತಾಲೇ** – **ಸರ್ವ ಧರ್ಮಾ ಪರಿತ್ಯಜ್ಯ** ಎಂಬುದು ವಿಧಿಪರವಾದುದೆಂದು ಭಾವಿಸೋಣದರಿಂದ, **ಸಿದ್ಧವಾಯ್ತ್ತು** - ಸ್ಥಾಪಿತವಾಯಿತು. **ಸರ್ವಧರ್ಮಾನ್** ಪರಿತ್ಯಜ್ಯ ಎಂಬುದರಿಂದ ನಿತ್ಯನೈಮಿತ್ತಿಕಗಳ ಅನುಷ್ಠಾನವು ಈ ಪ್ರಪದನಾನುಷ್ಠಾನಕ್ಕೆ ಸಂಬಂಧಿಸಿದುದಲ್ಲವಾಗಿ ಅವು ಅಂಗಗಳಲ್ಲವಾದುದರಿಂದ, ಅವುಗಳನ್ನು ಅಂಗವಾಗಿ ಏನೂ ಅನುಷ್ಠಿಸತಕ್ಕದಲ್ಲವು ಎಂಬ ಅರ್ಥವು ದ್ಯೋತಿತವು. ಆದರೆ ಪ್ರಪನ್ನನು ಸಂಪೂರ್ಣವಾಗಿ ತ್ಯಾಗಮಾಡಬಹುದೇ ಎಂದರೆ, ಪ್ರಪದನಕ್ಕಾಗಿ ಏನೂ ಬೇಕಾಗಿಲ್ಲವಾದರೂ ಬೇರೇ

ಏತೇನ ನೈರಪೇಕ್ಷ್ಯ ವಿಧಿ ಸಾಫಲಿತಾರ್ಥವಾಹ

**ಅತಶ್ಶಕ್ಯಾನಿ ಸರ್ವಾಣಿ ನಪ್ರಪತ್ತ್ಯರ್ಥ ಮಾಚರೇತ್ ।**
**ಅಶಕ್ಯೇಷು ಚ ಸಾಮರ್ಥ್ಯಂ ನತದರ್ಥಂ ಸಮಾರ್ಜಯೇತ್ ॥ ೧೩**

ವಿಧಿಗಳಿಂದ ಅನುಷ್ಠಾನವು ಪ್ರಾಪ್ತವಾದುದರಿಂದ ಅವುಗಳನ್ನು ಅನುಷ್ಠಿಸ
ಬೇಕೆಂದು ಏರ್ಪಟ್ಟಿತು. ಆದುದರಿಂದ "ಭಗವದಾಜ್ಞೆಯಾಲೇ ಯನುಷ್ಠಿ
ನಿತ್ಯನೈಮಿತ್ತಿಕಂಗಳುಮ್ ಎಂಬ ಪ್ರಯೋಗವು. ಇದನ್ನೇ ಮುಂದೆ
**ಧರ್ಮಾನ್ ಪರಿತ್ಯಜ್ಯ** ಎಂಬುದಕ್ಕೆ ನಾವು ಉಪಪಾದಿಸಿ ಹೇಳಿದ ಅರ್ಥಗೆ
ಒಂದಾದ ಈ ಅರ್ಥವನ್ನು ಮುಂದಿನ ಕಾರಿಕೆಗಳಲ್ಲಿ, **ಅನಂಗಭಾವೋ ಧರ್ಮಾ**
(ಕಾರಿಕೆ ) ಎಂಬಲ್ಲಿ ಸಂಗ್ರಹಿಸಿ ಹೇಳುತ್ತಾರೆ-

**ಅತಃ**. ಆ ಕಾರಣದಿಂದ ಎಂದರೆ ಪ್ರಪದನಕ್ಕೆ ಐದು ಸಂಬಂಧ
ಅಂಗಗಳಲ್ಲದೆ ಇನ್ನು ಯಾವುದೂ ಅಂಗಗಳಲ್ಲವಾದುದರಿಂಧ, ಈ **ಪರಿತ್ಯ**
ಎಂಬುದು ಪ್ರಪದನಕ್ಕೆ ಅಂಗನೈರಪೇಕ್ಷ್ಯವನ್ನು ವಿಧಿಸುತ್ತದೆ ಎಂದು ಒ
ನಂತರ, **ಶಕ್ಯಾನಿಸರ್ವಾಣಿ** - ತನಗೆ ಸಾಮರ್ಥ್ಯವುಳ್ಳ ಸಮರ್ಥ ಕರ್ಮಗಳ
**ನಪ್ರಪತ್ತ್ಯರ್ಥಮಾಚರೇತ್** . ಪ್ರಪತ್ತಿಗೆ ಅಂಗವೆಂಬ ಭಾವದಿಂದ ಆಚರಿಸ
ದ್ದಲ್ಲವು. ಇನ್ನು ಹೀಗೆ ಆಚರಿಸತಕ್ಕದ್ದೆಂದರೆ ಫಲಾದಿ ಕಾಮನೆಗಳಿಲ್ಲದೆ ಭ
ತ್ಪ್ರೀಣನಾರ್ಥವಾಗಿಯೇ ಶಾಸ್ತ್ರಬೋಧಿತರೀತಿಯಲ್ಲೇ ಮಾಡತಕ್ಕದ್ದೆಂಬ ಭಾವ
ಆಜ್ಞಾಕೈಂಕರ್ಯಗಳಾದರೆ ಮಾಡಿಯೇ ತೀರಬೇಕು. ಅನುಜ್ಞಾ ಕೈಂ
ವಾಗಿದ್ದರೆ ಶಕ್ಯವಾದವುಗಳನ್ನು ಮಾಡತಕ್ಕದ್ದು. ಆದರೆ ಅವು ಪ್ರಪದನಕ
ಅಲ್ಲವು. **ಅಶಕ್ಯೇಷುಚ** – ಒಂದುವೇಳೆ ಅವು ಅಶಕವಾದವುಗಳಾಗಿದ್ದರೆ
ಗಳಲ್ಲಿ, **ಸಾಮರ್ಥ್ಯಂ** - ಯೋಗ್ಯತೆಯನ್ನೂ, **ತದರ್ಥಂ** - ಆ ಪ್ರಪದನಕ್ಕಾಗಿ
**ನಸಮಾರ್ಜಯೇತ್**– ಸಂಪಾದಿಸಿಕೊಳ್ಳಬೇಕಾಗಿರುವದಿಲ್ಲವು. ಕೆಲವು ಅನು
ಕೈಂಕರ್ಯಗಳನ್ನು ಮಾಡಲು ಒಬ್ಬ ಪ್ರಪನ್ನನಿಗೆ ಯೋಗ್ಯತೆ ಇರಲಾರದು. ಬೇ
ದರೆ ಕಷ್ಟಪಟ್ಟು ಯೋಗ್ಯತೆಯನ್ನು ಸಂಪಾದಿಸಿಕೊಂಡು ಅನುಷ್ಠಿಸೋಣವೂ
ತಾನು ಅನುಷ್ಠಿಸಿದ ಭರನ್ಯಾಸಕ್ಕಾಗಿ ಬೇಕಾಗಿಲ್ಲವು. ಏಕೆಂದರೆ ಪ್ರಪದ
ತನ್ನ ಸ್ವಂತ ಅಂಗಗಳಲ್ಲದೆ ಇನ್ನು ಯಾವ ಅಂಗಗಳೂ ತತ್ಕಾಲದಲ್ಲೂ ಬೇ
ಗಿಲ್ಲವು. ಉತ್ತರ ಕಾಲದಲ್ಲೂ ಬೇಕಾಗಿಲ್ಲವು ಎಂಬ ತಾತ್ಪರ್ಯವು. ಆದ
ರಿಂದ ಆಜ್ಞಾಕೈಂಕರ್ಯಗಳನ್ನು ಬೇರೆ ವಿಧಿ ಬಲಪ್ರಾಪ್ತವೆಂದು ತದನುಗುಣವ
ಅನುಷ್ಠಿಸತಕ್ಕದ್ದು ; ಅನುಜ್ಞಾಕೈಂಕರ್ಯಗಳನ್ನೂ ಶಾಸ್ತ್ರೋಕ್ತರೀತಿಯಲ್ಲೇ ತ
ಶಕ್ಯವಾದುವುಗಳನ್ನು ಅನುಷ್ಠಿಸತಕ್ಕದ್ದು. ಅವುಗಳ ಫಲವನ್ನು ಕೋರದೆ
ವಂತನಲ್ಲಿ ಸಮರ್ಪಿಸಿದರೆ ಆತನು ಪ್ರೀತನಾಗುವನು ಎಂಬ ಭಾವವು. **ನತದರ್ಥ**
**ಸಮಾರ್ಜಯೇತ್** - ಎಂದು ಹೇಳಿರುವದರಿಂದ ಯೋಗ್ಯತೆಯನ್ನು ಸಂಪಾ

ಅಸ್ಮಿನ್ ವಿಧಿಪಕ್ಷೇ ಆಕಿಂಚನ್ಯರೂಪಾಧಿಕಾರವ್ ದರ್ಶಯತಿ

ಇನ್ದ ಯೋಜನೈಯಿಲ್ ಅಧಿಕಾರಸ್ಥಾನ ಆಕಿಂಚನ್ಯಮುಮ್ ಶೋಕಿಯಾದೇ ಕೊಳ್ಳಿನ್ನು, ತೋಳ್ಸ್ವಿಕ್ಕಿರ ವಾಕ್ಯತ್ತಾಲೇ ಸೂಚಿತಮ್.

ಅನುವಾದಪಕ್ಷೇ ಅಂಗನೈರಪೇಕ್ಷ್ಯಂ "ಏಕ" ಶಬ್ದೇನ ವಿವಕ್ಷಿತಮ್.

ಅನುವಾದ ಪಕ್ಷತ್ತಿಲ್ ತನ್ ಅಶಕ್ತಿಯಾಲೇ ಕಳಿನ್ದವೈಯೊಳಿಯ ಶಕ್ಯಮಾಯ್ ಚೆಯ್ಗಿರ ಆಜ್ಞಾನುಪಾಲನಾದಿಕಳುಮ್ ಪ್ರಪತ್ತಿಯಿಲ್ ತುವಕ್ಕೊಣ್ಣಾದೆನ್ರು ವಿಡಮುಮ್ ಏಕಶಬ್ದತ್ತಿಲೇ ವಿವಕ್ಷಿತಮಾಕಕ್ಕಡವದು

---

ಕೊಳ್ಳಲೇಬೇಕೆಂದು ವಿಧಿಸಲಿಲ್ಲವು. ಪ್ರಪದನಕ್ಕೆ ಅಂಗವೆಂದು ಭಾವಿಸಿ ಯೋಗ್ಯತೆಯು ಬೇಕಿಲ್ಲವೆಂದು ಹೇಳಿರುವದರಿಂದ. ಭಗವತ್ಪ್ರೀಣನಕ್ಕಾಗಿ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬಹುದೆಂಬುದರಲ್ಲಿ ತಾತ್ಪರ್ಯವು.

ಈ ಮೇಲಿನ ವಿಧಿ ಪಕ್ಷದಲ್ಲಿ ಆಕಿಂಚನ್ಯರೂಪವಾದ ಅಧಿಕಾರವು ತೋರಿಬರುವ ಸ್ಥಳವನ್ನು ವ್ಯಕ್ತಪಡಿಸುತ್ತಾರೆ.

ಇಂದ ಯೋಜನೈಯಿಲ್ - ಈ ವಿಧ ಪಕ್ಷವು ನೈರಪೇಕ್ಷ್ಯವನ್ನು ತಿಳಿಸುವ ಸಂದರ್ಭದಲ್ಲಿ, ಅಧಿಕಾರಸ್ಥಾನ - ಪ್ರಪದನಕ್ಕೆ ಮುಖ್ಯಾಂಗವಾದ, ಆಕಿಂಚನ್ಯವು, ಶೋಕಿಯಾದೇ ಕೊಳ್ಳಿನು ತೋಳ್ಸ್ವಿಕ್ಕಿರ ವಾಕ್ಯತ್ತಾಲೇ - ಮಾ ಶುಚಃ ಎಂಬ ಪ್ರಯೋಗದಿಂದ ಆಕಿಂಚನ್ಯದಿಂದ ಅಳುತ್ತಿರುವ ಅಧಿಕಾರಿಯನ್ನು ಕುರಿತಲ್ಲವೇ ಅಳಬೇಡವೆಂದು ಹೇಳಿ, ನನ್ನನ್ನು ಆಶ್ರಯಿಸು ಎಂದು ಹಿತವನ್ನು ಬೋಧಿಸುವ ವಾಕ್ಯದಿಂದ ಸೂಚಿತವು.

ಆಗಲಿ ಅನುವಾದ ಪಕ್ಷದಲ್ಲಿ ಸರ್ವಧರ್ಮಾನ್ ಪರಿತ್ಯಜ್ಯ ಎಂಬಲ್ಲೇ ಆಕಿಂಚನ್ಯವು ತೋರಿಬರುವದರಿಂದ ಆಗ ಮಾಶುಚಃ ಎಂಬ ಉಪದೇಶವು ನಿರರ್ಥಕವಲ್ಲವೋ? ಅ ಎವಾದ ಸಾಮರ್ಥ್ಯದಿಂದಲೇ ಅಶಕ್ಯನೈರಪೇಕ್ಷ್ಯವೇನೋ ಸಿದ್ಧವು. ಶಕ್ಯಗಳಾದ ನಿತ್ಯನೈಮಿತ್ತಿಕಗಳ ಅಂಗತ್ವೇನ ನೈರಪೇಕ್ಷ್ಯದ ಸಿದ್ಧಿಯು ಹೇಗೆ? ಎಂದರೆ ಅದು ಏಕ ವೆಂಬ ಶಬ್ದದಿಂದ ತೋರಿಬರುತ್ತದೆಂದು ತಿಳಿಸುತ್ತಾರೆ.—

ಅನುವಾದನೆಂಬ ಪಕ್ಷದಲ್ಲಿ ಅಂಗನೈರಪೇಕ್ಷ್ಯವು "ಏಕ" ಶಬ್ದದಿಂದ ತೋರಿಬರುತ್ತದೆ.

ಅನುವಾದಪಕ್ಷತ್ತಿಲ್ - ಪರಿತ್ಯಜ್ಯ ಎಂಬಲ್ಲಿ ಹೇಳಿದ ತ್ಯಾಗವು ಅನುವಾದವೆಂಬ ಪಕ್ಷದಲ್ಲಿ, ತನ್ ಅಶಕ್ತಿಯಾಲೇ ಕಳಿನ್ದವೈಯೊಳಿಯ - ತನ್ನ ಅಶಕ್ತಿಯಿಂದ ತ್ಯಾಗಮಾಡಬಹುದಾದ ಅನುಜ್ಞಾಕೈಂಕರ್ಯಗಳಲ್ಲದ, ಶಕ್ಯ

ಇಪ್ಪಕ್ಷತ್ತಿಲ್ "ಮಾಶುಚಃ" ಎಞ್ಗಿರವಾಕ್ಯಮ್ "ಸರ್ವಧರ್ಮಾನ್ ಪರಿತ್ಯಜ್ಯ" ಎನ್ರು ಉಕ್ತಮಾನ ಅಧಿಕಾರತ್ತೈವ್ಯಕ್ತಮಾಕ್ಕಿಕ್ಕೊಣ್ಡು ಮೇಲುಳ್ಳ ನಿರ್ಭರತ್ವಾದಿಗಳೈ ಮುನ್ನಿಟ್ಟು ಉತ್ತರಕಾಲತ್ತಿಲಿರುಕ್ಕಕ್ಕಡವ ಪಡಿಯೈ

---

ಮಾಯ್ ಚ್ಚೆಯ್ಗಿರ - ತನಗೆ ಅನುಷ್ಠಿಸಲು ಯೋಗ್ಯತೆ ಇದ್ದು ಮಾಡುವ, ಆಜ್ಞಾನುಪಾಲನಾದಿಗಳುಮ್ - ಭಗವದಾಜ್ಞೆಯನ್ನು ಸಲ್ಲಿಸುವ ನಿತ್ಯನೈಮಿತ್ತಿಕ ಮೊದಲಾದವುಗಳೂ, ಮತ್ತು ಪ್ರಪತ್ತಿಯಿಲ್ ತುವಕ್ಕೊಣ್ಣಾದೆನ್ರು ವಿಡುಮುಮ್ - ಅವು ಪ್ರಪತ್ತಿಗೆ ಅಂಗರೂಪಸಂಬಂಧವಾದುದಲ್ಲವೆಂಬ ವಿಷಯವೂ, ಏಕಂ-ನನ್ನೊಬ್ಬನನ್ನೇ ಎಂಬಲ್ಲಿರುವ ಏಕ ವೆಂಬ ಪದದಿಂದ, ವಿವಕ್ಷಿತಮಾಗೆಕ್ಕಡವದು - ಬೋಧಿತವಾಗುತ್ತದೆ. ಏಕ ಶಬ್ದದಿಂದ ಅನ್ಯನೈರಪೇಕ್ಷ್ಯವು ವ್ಯಕ್ತವು ಎಂಬ ಭಾವವು. ನನ್ನೊಬ್ಬನನ್ನೇ ಶರಣ ಹೊಂದು ಎಂದಿರುವದರಿಂದ ಇನ್ನು ಯಾವುದೂ ಬೇಕಿಲ್ಲವೆಂಬುದು ಸ್ಪಷ್ಟವಾಗಿ ತೋರುವ, ಅಂಗನೈರಪೇಕ್ಷ್ಯವು ಬೋಧಿಸಲ್ಪಟ್ಟಿತೆಂಬ ಭಾವವು. ಈ ಏಕ ಶಬ್ದದಿಂದ ಲಕ್ಷ್ಮೀಸಾಹಚರ್ಯವು ನಿರಾಕರಿಸಲ್ಪಡಲಿಲ್ಲವು.

ಆಗಲಿ ಈ ಅನುವಾದ ಪಕ್ಷದಲ್ಲಿ ಆಕಿಂಚನ್ಯವು ಸರ್ವಧರ್ಮಾನ್ ಪರಿತ್ಯಜ್ಯ ವೆಂಬುದರಿಂದಲೂ, ಅಂಗನೈರಪೇಕ್ಷ್ಯವು ಏಕಶಬ್ದದಿಂದಲೂ, ಬೋಧ್ಯವಾದ ನಂತರ, ಈ ಪಕ್ಷಕ್ಕೆ ಮಾಶುಚಃ ಎಂಬ ಪ್ರಯೋಗವು, ಹಾಗಾದರೆ ನಿರರ್ಥಕವೋ ಎಂದಾಕ್ಷೇಪ ತಂದರೆ, ಹಾಗಲ್ಲವೆಂದು ಅದರ ಪ್ರಯೋಜನವನ್ನು ತಿಳಿಸುತ್ತಾರೆ. ಪರಿತ್ಯಜ್ಯ ಎಂಬಲ್ಲಿ ತೋರಿಬಂದ ಆಕಿಂಚನ್ಯವನ್ನೇ ಈ ಮಾಶುಚಃ ಎಂಬುದು ಚೆನ್ನಾಗಿ ಸಮರ್ಥಿಸುವದೂ ಅಲ್ಲದೆ, ಪ್ರಪನ್ನನಿಗೆ ಉತ್ತರಕಾಲದಲ್ಲಿ ಉಂಟಾಗುವ ನಿರ್ಭರತ್ವ, ನಿರ್ಭಯತ್ವ, ನಿಸ್ಸಂಶಯತ್ವವೇ ಮೊದಲಾದವುಗಳೆಲ್ಲಾ ಸೂಚಿಸಿ ಅವುಗಳಿಗೆಲ್ಲಾ ಉಪಲಕ್ಷಣವಾಗಿ ಪ್ರಯೋಗಿಸಲ್ಪಟ್ಟಿದೆ ಎಂಬುದು ತೋರಿಬರುವದರಿಂದ ನಿರರ್ಥಕ ಪ್ರಯೋಗವಲ್ಲವೆಂದು ಅದರ ಪ್ರಯೋಜನವನ್ನು ಉಪದೇಶಿಸುತ್ತಾರೆ,—ಇಪ್ಪಕ್ಷತ್ತಿಲ್ - ಪರಿತ್ಯಜ್ಯವೆಂಬುದು ಅನುವಾದವೆಂದು ಹೇಳುವ ಸಂದರ್ಭದಲ್ಲಿ, "ಮಾಶುಚಃ" ಎಞ್ಗಿರವಾಕ್ಯಂ - ಎನ್ನುವ ವಾಕ್ಯವು, "ಸರ್ವಧರ್ಮಾನ್ ಪರಿತ್ಯಜ್ಯ" ಎನ್ರು - ಎಂಬದಾಗಿ, ಉಕ್ತಮಾನ - ಹೇಳಲ್ಪಟ್ಟ, ಅಧಿಕಾರತ್ತೈ - ಆಕಿಂಚನ್ಯಾಧಿಕಾರವನ್ನು, ವ್ಯಕ್ತಮಾಕ್ಕಿಕ್ಕೊಣ್ಡು-ವ್ಯಕ್ತವಾಗಿ ತಿಳಿಯಪಡಿಸುವದಾಗಿ, ಮೇಲುಳ್ಳ - ಪ್ರಪತ್ತ್ಯುತ್ತರ ಕಾಲದಲ್ಲಿ ಉಂಟಾಗುವ, ನಿರ್ಭರತ್ವಾದಿ - ನಿರ್ಭರತ್ವ, ಆದಿಪದದಿಂದ ನಿರ್ಭಯತ್ವ ಫಲಪ್ರಾಪ್ತಿಯಲ್ಲಿ ನಿಸ್ಸಂಶಯತ್ವ ಹೃಷ್ಟಮನೋಭಾವ ಮೊದಲಾದವುಗಳು ಹೇಳಲ್ಪಟ್ಟವು ಅವುಗಳನ್ನು ಮುನ್ನಿಟ್ಟು – ಮುಂದುಮಾಡಿಕೊಂಡು, ಎಂದರೆ ತತ್ಪೂರ್ವಕಗಳಾದ, ಉತ್ತರಕಾಲತ್ತಿಲಿರುಕ್ಕಪಡಿಯೈ ಎಲ್ಲಾಮ್ - ಉತ್ತರ ಕಾಲದಲ್ಲಿ ಪ್ರಪನ್ನನಿರುವ ರೀತಿ

**ಯೆಲ್ಲಾಮ್ ಉಪಲಕ್ಷಣಕ್ಕಿರದು. ತ್ಯಾಗವಿಧಿಪಕ್ಷತ್ತುಕ್ಕು ಪ್ರಮಾಣ ವಿರೋಧಮ್ ವಾರಾದಪಡಿ ಇನ್ನಮುಮ್ ಶಿಲಗತಿಗಳುಂಡು.**

**ತ್ಯಾಗ ವಿಧಿಪಕ್ಷೇತು ಅರ್ಥಾಂತರಾಣಿ ಉಪದಿಶತಿ.**

---

**ಆತ್ಮಾಶಕ್ಯ ವೃಥಾಯಾಸ ನಿವಾರಣ ಮಿಹಾಪಿವಾ ।**
**ಲಜ್ಜಾ ಪುರಸ್ಸರತ್ಯಾಗವಾದೋಽಸ್ಯತ್ರ ನಿಯಮ್ಯತಾಮ್ ॥ ೧೩೭ ॥**

---

ಯನ್ನೆಲ್ಲಾ, **ಉಪಲಕ್ಷಕ್ಕಿರದು** - ಉಪಲಕ್ಷಣರೀತಿಯಲ್ಲಿ, ಬೋಧಿಸುತ್ತದೆ. **ಮಾಶುಚಃ** - ಎಂಬುವದು ಪ್ರಪನ್ನಾಧಿಕಾರಿಗೆ ತತ್ಕಾಲದಲ್ಲಿರುವ ಆಕಿಂಚನ್ಯವನ್ನು ವ್ಯಕ್ತವಾಗಿ ಸಮರ್ಥಿಸಿ ಹೇಳುವದಲ್ಲದೆ, ಪ್ರಪತ್ತ್ಯನುಷ್ಠಾನದ **ಉತ್ತರ ಕಾಲದಲ್ಲಿ ಈ** ಅಧಿಕಾರಿಗೆ ಉಂಟಾಗುವ ನಿರ್ಭರತ್ವ, ನಿರ್ಭಯತ್ವ ನಿಸ್ಸಂಶಯತ್ವಾದಿಗಳಿಗೂ ಉಪಲಕ್ಷಣವಾಗಿ, ಹೇಳಲ್ಪಟ್ಟಿವೆಂಬೂ, ಭಾವಿಸಬಹುದು. **ಉತ್ತರಕಾಲದಲ್ಲಿ ಈ** ಪ್ರಪನ್ನನು ಮಾಡುವ ಆಜ್ಞಾನುಜ್ಞಾ ಕೈಂಕರ್ಯಗಳೆಲ್ಲಾ ಪರಮಪುರುಷನ ಮುಖೋಲ್ಲಾಸಕ್ಕಾಗಿ ಮಾತ್ರವೇ ಅಲ್ಲದೆ ಇನ್ನು ಯಾವ ಪ್ರಯೋಜನಕ್ಕಾಗಿಯೂ ಅಲ್ಲವೆಂಬ ಭಾವಕ್ಕೂ ಕೂಡ ಉಪಲಕ್ಷಣವೆಂದೂ ಬೋಧಿತವು. **ತ್ಯಾಗವಿಧಿ ಪಕ್ಷತ್ತುಕ್ಕು** - ಪರಿತ್ಯಜ್ಯ ಎಂಬಲ್ಲಿ ತ್ಯಾಗವು ವಿಧಿಸಲ್ಪಟ್ಟಿತೆಂಬ ಪಕ್ಷದಲ್ಲಿ **ಪ್ರಮಾಣವಿರೋಧಮ್** - ಶಾಸ್ತ್ರಪ್ರಮಾಣಕ್ಕೆ ವಿರೋಧವು, **ವಾರಾದಪಡಿ** - ಬಾರದಹಾಗೆ, **ಇನ್ನಮುಮ್** – ಹಿಂದೆ ಹೇಳಿದವಲ್ಲದೆ ಇನ್ನೂ ಬೇರೆ, **ಶಿಲಗತಿಗಳುಂಡು** – ಕೆಲವು ಯೋಜನೆಗಳುಂಟು. ಅವು ಯಾವುವೆಂದರೆ ! ಮೂರು ಕಾರಿಕೆಗಳ ಮೂಲಕ ಉಪದೇಶಿಸುತ್ತಾರೆ.—

ಹೀಗೆ ಅಂಗನೈರಪೇಕ್ಷ್ಯವಿಧಿಪಕ್ಷವನ್ನು ಉಪಪಾದಿಸಿ ಮುಂದೆ ತ್ಯಾಗವಿಧಿ ಪಕ್ಷದಲ್ಲಿ ತೋರುವ ಮೂರು ಅರ್ಥಗಳನ್ನು ಸಙ್ಗ್ರಹವಾಗಿ ಕಾರಿಕೆಗಳ ಮೂಲಕ ಉಪದೇಶಿಸುತ್ತಾರೆ. ಅವು ಯಾವುವೆಂದರೆ ಕೆಲವು ಕೈಙ್ಕರ್ಯಗಳಿಗೆ ಈ ಪ್ರಪನ್ನನು ಅಶಕ್ತನಾಗಿದ್ದರೆ, ಅದಕ್ಕಾಗಿ ಪ್ರಯತ್ನ ತ್ಯಾಗವನ್ನೂ, ಅಶಕ್ತತೆಯ ವಿಷಯದಲ್ಲಿ ಶಕ್ತಿಯನ್ನುಂಟುಮಾಡುವ ಸಾಧನರೂಪ ಕರ್ಮಾನುಷ್ಠಾನದಲ್ಲಿ ಇಚ್ಛೆಯ ತ್ಯಾಗವನ್ನೂ, ಉಪಾಯಾನ್ತರವಾದ ಉಪಾಸನದಲ್ಲಿ ಅನ್ವಯದ ತ್ಯಾಗವನ್ನೂ ಈ ತ್ಯಾಗವಿಧಿ ಬೋಧಿಸುತ್ತದೆಂದು ಹೇಳಲು ಮೂರು ಕಾರಿಕೆಗಳನ್ನು ದಯಪಾಲಿಸಿ ಅರ್ಥವನ್ನು ವ್ಯಕ್ತಪಡಿಸುತ್ತಾರೆ.

**ತ್ಯಾಗ ವಿಧಿಪಕ್ಷದಲ್ಲಿ ತೋರಿಬರುವ ಅರ್ಥಾಂತರಗಳನ್ನು ಬೋಧಿಸುತ್ತಾರೆ-**

**ಆತ್ಮಾಶಕ್ಯವೃಥಾಯಾಸ** ನಿವಾರಣಂ. **ಆತ್ಮ**–ತನಗೆ, **ಅಶಕ್ಯ** - ಅಶಕ್ಯಗಳಾದ ಕೈಂಕರ್ಯಗಳಲ್ಲಿ, **ವೃಥಾಯಾಸ** - ಪ್ರಯೋಜನವಿಲ್ಲದ ಆಯಾಸದ,

**ಸ್ವ (ಸು) ದುಷ್ಕರೇಷು ಧರ್ಮೇಷು ಕುಶಕಾಶಾವಲಂಬಿತಃ ।**
**ಆಶಾಲೇಶಾನುವೃತ್ತಿರ್ವಾ ತ್ಯಾಗೋಕ್ತ್ಯಾ ವಿನಿವಾರ್ಯತೇ ॥ ೧೩೭ ॥**
**ಅವಿಶಿಷ್ಟ ಫಲತ್ವೇನ ವಿಕಲ್ಪೋ ಯಸ್ತು ಸೂತ್ರಿತಃ ।**
**ತನ್ಮುಖೇನಾಪಿ ವಾ ತ್ರೇಷ್ಠಂ ಬ್ರಹ್ಮಾಸ್ತ್ರನ್ಯಾಯ ಸೂಚನಮ್ ॥ ೧೩೮ ॥**

---

**ನಿವಾರಣಂ ವಾ** - ತ್ಯಾಗವಾಗಲಿ, **ಇಹಾಪಿ** - ಈ ಸಂದರ್ಭದಲ್ಲೂ ಕೂಡ, **ಲಜ್ಜಾ ಪುರಸ್ಸರತ್ಯಾಗವಾದೋಪಿ** – ನಾಚಿಕೆಯನ್ನು ಮುಂದುಮಾಡಿಕೊಂಡು, ಎಂದರೆ ಮೊದಲು ಪ್ರಾರಂಭಿಸಿ, ಮುಗಿಸಲು ಯೋಗ್ಯತೆ ಇಲ್ಲದಿರುವದರಿಂದುಂಟಾಗ ಲಜ್ಜಾಪುರಸ್ಸರವಾಗಿ ಬಿಡತಕ್ಕದ್ದೆಂಬ ವಾದವನ್ನೂ ಕೂಡ, ಇದು ಪರಿತ್ಯಜ್ಯ ಎಂಬಲ್ಲಿರುವ ಪರಿ ಎಂಬ ಉಪಸರ್ಗದ ಅರ್ಥವು, ಅತ್ರ-ಈ ಸಂದರ್ಭದಲ್ಲಿ ಎಂದರೆ ತನಗೆ ಅಶಕ್ಯವಾದವುಗಳನ್ನು ಅನುಷ್ಠಿಸುವ ವೃಥಾಖ್ಯಾಸಪಡುವ ಸಂದರ್ಭದಲ್ಲಿ, **ನಿಯಮ್ಯತಾಮ್** . ಅಂಗೀಕರಿಸಬಹುದು. ಇತರರು ಸ್ವರೂಪತ್ಯಾಗವನ್ನು, **ಪರಿತ್ಯಜ್ಯ** ಎಂಬುದು ಬೋಧಿಸುತ್ತದೆಂದೂ ಆ ಸಂದರ್ಭದಲ್ಲಿ, ಲಜ್ಜೆ, ಅನುತಾಪ, ರುಚಿ, ವಾಸನಾ, ಭಯ, ಇವುಗಳೊಂದಿಗೆ ತ್ಯಾಗವಾಡತಕ್ಕದ್ದೆಂದೂ ಹೇಳಿದು ದನ್ನು ಹೀಗೆ ತನಗೆ ಅಶಕ್ಯಗಳಾದ ಕೈಂಕರ್ಯಗಳಲ್ಲಿ ಮಾತ್ರವೆಂದು ಇಟ್ಟುಕೊಂಡರೆ ಬಾಧಕವೇನೂ ಇಲ್ಲವೆಂಬ ಭಾವವು. **ಸರ್ವಧರ್ಮಾ** ಎಂಬುದಕ್ಕೆ ಎಲ್ಲಾ ಧರ್ಮ ಗಳೆಂದು ಅರ್ಥಮಾಡಿ ಅವುಗಳ ಸ್ವರೂಪ ತ್ಯಾಗವೆಂದೂ, ಮತ್ತು ಅವುಗಳಲ್ಲಿ ಲಜ್ಜಾ ಅನುತಾಪಾದಿಗಳ ತ್ಯಾಗವೆಂದೂ ಅರ್ಥಮಾಡಿದರೆ ಆಗೀಗ ಪ್ರಮಾಣಗಳಿಗೆ ಬಾಧಕವೆಂಬ ಭಾವವು. ಹೀಗೆ ಒಂದು ಅರ್ಥವನ್ನು ಹೇಳಬಹುದು.

**ಅರ್ಥ**—ಇನ್ನೊಂದು ಅಭಿಪ್ರಾಯವನ್ನು ತಿಳಿಸುತ್ತಾರೆ.—**ಸುದುಷ್ಕರೇಷು**- ತನಗೆ ಅತ್ಯಂತ ಕಷ್ಟಗಳಾದ, **ಧರ್ಮೇಷು** - ಅಷ್ಟಾಂಗಗಳಿಂದ ಕೂಡಿದ ಯೋಗಾ ಭ್ಯಾಸಗಳಲ್ಲಿ, **ಕುಶಕಾಶಾವಲಂಬಕಃ** - ಮಹಾ ಪ್ರವಾಹದಲ್ಲಿ ಕೊಚ್ಚಿ ಹೋಗು ತ್ತಿರುವವನು ಪ್ರಾಣಸಂರಕ್ಷಣೆಗಾಗಿ ಅಲ್ಲೇ ಹತ್ತಿರ ಬೆಳೆದಿರುವ ದರ್ಭೆಯನ್ನಾಗಲಿ ಹುಲ್ಲನ್ನಾಗಲಿ ಹಿಡಿದುಕೊಂಡರೆ ಹೇಗೆ ಕಾರ್ಯಕಾರಿಯಾಗುವದಿಲ್ಲವೋ, ಹಾಗೆಯೇ ತನ್ನಿಂದ ಅಶಕ್ಯಗಳಾದ ಪ್ರಾಣಾಯಾಮಾದಿ ಅಷ್ಟಾಂಗಯುಕ್ತ ಭಕ್ತಿಯೋಗಾವ ಲಂಬನದಿಂದ ಸಾಧಿಸುವೆನೆಂದು ನಿರರ್ಥಕನಾದ ಉಪಾಯ ಸಂಗ್ರಹದಿಂದ **ಆಶಾ ಲೇಶಾನುವೃತ್ತಿರ್ವಾ** - ಹೇಗಾದರೂ ಮಾಡಿ ಅಭ್ಯಾಸನ ಮೂಲಕ ಸಾಧಿಸುವನೆಂಬ ಸ್ವಲ್ಪ ಆಶೆಯು ಅನುಸರಿಸಿ ಬರೋಣವಾಗಲಿ. **ತ್ಯಾಗೋಕ್ತ್ಯಾ** - ಈ "ಪರಿತ್ಯಜ್ಯ" ಎಂಬ ತ್ಯಾಗ ಪ್ರಯೋಗದಿಂದ, **ವಿನಿವಾರ್ಯತೇ** - ನಿರೋಧಿಸಲ್ಪಡುತ್ತದೆ. ಪ್ರವಾ ಹದಲ್ಲಿ ಕೊಚ್ಚಿಹೋಗುತ್ತಿರುವವನ್ನು ಕೊಚ್ಚಿಹೋಗುತ್ತಿರುವಾಗ ಅಲ್ಲಿ ಹತ್ತಿರ ಬೆಳದಿರುವ ದರ್ಭೆ ಹುಲ್ಲನ್ನು ಹಿಡಿದುಕೊಂಡರೆ ತನ್ನ ರಕ್ಷಣ ರೂಪ ಇಷ್ಟ ಸಿದ್ಧಿ ಹೇಗೆ ಇಲ್ಲವೋ, ಅದೇ ನ್ಯಾಯದಿಂದ ತದಗೆ ಅಸಾಧ್ಯವಾದ ಅಷ್ಟಾಂಗಯುಕ್ತವಾದ

ಭಕ್ತಿಯೋಗವನ್ನು ಅವಲಂಬಿಸಿ ಸಾಧಿಸುತ್ತೇನೆಂಬ ಆಶಾಲೇಶವನ್ನು ಕೂಡ ತ್ಯಾಗಮಾಡಿ ಎಂದಾದರೂ ಅರ್ಥಮಾಡಬಹುದೆಂಬ ಭಾವವು.

ಮೂರನೆಯ ಅಭಿಪ್ರಾಯವನ್ನು ತಿಳಿಸುತ್ತಾರೆ.—ಮುವ್ವತ್ತೆರಡು ಬ್ರಹ್ಮವಿದ್ಯೆಗಳು ಉಪಪಾದಿಸಲ್ಪಟ್ಟಿವೆ. ಅವುಗಳಲ್ಲಿ ಯಾವುದಾದರೂ ಒಂದನ್ನು ಉಪಾಯವಾಗಿ ಅನುಷ್ಠಿಸಿದರೂ ಮೋಕ್ಷವೆಂದು "ವಿಕಲ್ಪೋಽವಿಶಿಷ್ಟಫಲತ್ವಾತ್" ಎಂಬ ಬ್ರಹ್ಮಸೂತ್ರದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ. ದಹರ, ಶಾಂಡಿಲ್ಯಾದಿ ವಿದ್ಯೆಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸಿದರೂ ಮೋಕ್ಷಫಲ ಉಂಟಾಗುವದರಿಂದ, ಇವುಗಳಿಗೆ ಪರಸ್ಪರ ನೈರಪೇಕ್ಷ್ಯವು ಉಂಟು. ಹಾಗೆಯೇ ಪ್ರಪತ್ತಿಗೂ ಸಹ ಇನ್ನು ಯಾವ ಬ್ರಹ್ಮವಿದ್ಯೆಗಳ ನೈರಪೇಕ್ಷ್ಯವೂ ಉಂಟು. ಆದುದರಿಂದ, ಆ ಬ್ರಹ್ಮವಿದ್ಯೆಗಳಲ್ಲಿ ಹೇಳಿರುವದನ್ನು ಯಾವುದನ್ನಾಗಲಿ ಪ್ರಪದನದೊಂದಿಗೆ ಅನುಷ್ಠಿಸಿದರೆ ಬ್ರಹ್ಮಾಸ್ತ್ರನ್ಯಾಯದ ಪ್ರಕಾರ ಪ್ರಪದನವು ವ್ಯರ್ಥವಾಗುತ್ತದಾದುದರಿಂದ ಆ ಬ್ರಹ್ಮವಿದ್ಯೆಗಳಲ್ಲಿ ಹೇಳಿರುವ ಯಾವುದನ್ನು ಈ ಪ್ರಪದನದೊಂದಿಗೆ ಉಪಯೋಗಿಸಬಾರದೆಂದು ಈ ಪರಿತ್ಯಜ್ಯ ಎಂಬಲ್ಲಿನ ತ್ಯಾಗ ವಿಧಿಯು ಬೋಧಿಸುತ್ತದೆಂದು ಮುಂದಿನ ಕಾರಿಕೆಯಿಂದ ಬೋಧಿಸುತ್ತಾರೆ. ಬ್ರಹ್ಮಾಸ್ತ್ರನ್ಯಾಯವು ಯಾವುದೆಂದರೆ—ಇಂದ್ರಜಿತುವು ಆಂಜನೇಯನೊಂದಿಗೆ ಯುದ್ಧಮಾಡಿ ಯಾವ ಆಯುಧ ಪ್ರಯೋಗವು ಕಾರ್ಯಕಾರಿಯಾಗದಿರಲು ಆಂಜನೇಯನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಚತುರ್ಮುಖನ ಅಸ್ತ್ರವಾದುದರಿಂದ ಆದಕ್ಕೆ ಮರ್ಯಾದೆಯನ್ನು ಮಾಡಬೇಕು ತನಗೆ ಸ್ವರೂಪವೆಂದು ಭಾವಿಸಿ ಆಂಜನೇಯನು ಅದರ ಬಂಧಕ್ಕೆ ಒಳಪಟ್ಟು ಕೆಳಗೆ ಬಿದ್ದನು. ಇದನ್ನು ನೋಡಿ ಇಂದ್ರಜಿತ್ತಿನ ಪರಿಜನರು ಬಂದು ಶಣಬು ಹಗ್ಗದಿಂದ ಹನುಮಂತನನ್ನು ಬಿಗಿದರು. ಇದು ಬ್ರಹ್ಮಾಸ್ತ್ರಕ್ಕೆ ಅವಮರ್ಯಾದೆಯಾದುದರಿಂದ ಆ ಬಂಧವು ಬಿಟ್ಟುಹೋಯಿತು. ಹಾಗೆಯೇ ಬ್ರಹ್ಮಾಸ್ತ್ರಸ್ಥಾನದಲ್ಲಿರುವ ಭಗವಂತನಲ್ಲಿ ಮಾಡಿದ ಪ್ರಪದನವು ಮೋಕ್ಷವನ್ನು ಹೊಂದಿಸುವ ಶಕ್ತಿಯುಳ್ಳದು. ಹೀಗಿರುವಾಗ ಇತರ ಬ್ರಹ್ಮವಿದ್ಯೆಗಳಿಗೆ ಸೇರಿದ ಅಂಶಗಳನ್ನು ಇದಕ್ಕೆ ಸೇರಿಸಿದರೆ ಮಹಾ ವಿಶ್ವಾಸ ಶೈಥಿಲ್ಯದಿಂದ, ಆ ಪ್ರಪದನದ ಸ್ವರೂಪಕ್ಕೆ ಕುಂದಕ ಉಂಟಾಗಿ, ಪ್ರಪದನವು ಅಂತವನಿಗೆ ಸಿದ್ಧಿಸದು ಎಂಬ ತಾತ್ಪರ್ಯವು ಆದುದರಿಂದ ಅಂತಹ ಇತರ ಬ್ರಹ್ಮವಿದ್ಯೆಗಳಿಗೆ ಸಂಬಂಧಿಸಿದವೆಲ್ಲವನ್ನೂ ಪರಿತ್ಯಾಗಮಾಡತಕ್ಕದ್ದೆಂದ ಪರಿತ್ಯಜ್ಯ ಎಂಬಲ್ಲಿನ ತ್ಯಾಗವಿಧಿಯು ಬೋಧಿಸುತ್ತದೆಂದು ಈ ಮೂರನೆಯ ಕಾರಿಕೆಯಿಂದ ತಿಳಿಸುತ್ತಾರೆ **ಅವಿಶಿಷ್ಟ ಫಲತ್ವೇನ** - ಬ್ರಹ್ಮವಿದ್ಯೆಗಳಿಗೆಲ್ಲಾ ಫಲವೆಲ್ಲಾ ಒಂದೇಯಾಗಿ ಫಲದಲ್ಲೇನೂ ವ್ಯತ್ಯಾಸವಿಲ್ಲದುದರಿಂದ, **ಯಃ** - ಯಾವ, **ವಿಕಲ್ಪಃ** - ವಿದ್ಯೆಗಳಲ್ಲಿ ಯಾವುದಾದರೂ ಒಂದು ಆಗಬಹುದೆಂಬ ವಿಕಲ್ಪವು, **ಸೂತ್ರಿತಃ** – "ವಿಕಲ್ಪೋಽವಿಶಿಷ್ಟಫಲತ್ವಾತ್ ( ) ಎಂಬ ಬ್ರಹ್ಮಸೂತ್ರದಲ್ಲಿ ಹೇಳಲ್ಪಟ್ಟಿತೋ, **ತನ್ಮುಖೇನ** -

(೧) ಅಶಕ್ಯತ್ತಿಲೇ ಪ್ರವೃತ್ತನೈ ತ್ತವಿರ ಎನ್ಗೈಯುಮ್, (೨) ತನಕ್ಕು ದುಷ್ಕರಙ್ಗಳಿಲ್ ಅಧಿನಿವೇಶ ಮುಡೈಯವನೈ ಇದುವೇಣ್ಡಾವೆನ್ಗೈಯುಮ್, (೩) ವಿಕಲ್ಪಿತ್ತ ಉಪಾಯಾನ್ತರಙ್ಗಳಿಲೇ ಒನ್ರೈ ಇಜ್ಗೀ ಕೂಟ್ಟಿಲ್ ಬ್ರಹ್ಮಾಸ್ತ್ರ(ಬಂಧ) ನ್ಯಾಯತ್ತಾಲೇ ವಿರೋಧಿಕ್ಕುಮೆನ್ರು ಕೆಳಿಕ್ಕೈಯುಮ್ ವಿಧಿಪ್ರಕಾರಙ್ಗಳ್.

---

ಆ ನ್ಯಾಯದ ಮೂಲಕವಾಗಿ, ಬ್ರಹ್ಮಾಸ್ತ್ರ ನ್ಯಾಯಸೂಚಿತಮ್ - ಈ ನ್ಯಾಯವು ಶ್ರೀಮದ್ರಾಮಾಯಣ ಸುಂದರಕಾಂಡದಲ್ಲಿ ಉಪಪಾದಿತವು. "ಸಬದ್ಧಸ್ತೇನ ವಲ್ಕೇನ ವಿಮುಕ್ತೋಽಸ್ತ್ರೇಣ ವೀರ್ಯವಾನ್ । ಅಸ್ತ್ರಬಂಧ ಸ್ಸಚಾನ್ಯಂ ಹಿ ನ ಬಂಧಮನುವರ್ತತೇ" (೪೮-೪೯) ಬ್ರಹ್ಮಾಸ್ತ್ರವು ಇನ್ನು ಯಾವ ಬೇರೆ ಬಂಧನ ವನ್ನೂ ಅನುವರ್ತಿಸಿಕೊಂಡು ಇರುವದಿಲ್ಲವಷ್ಟೇ ! ಎಂದರ ಬೇರೆ ಬಂಧನವು ತನಗೆ ಅವಮರ್ಯಾದೆಯೆಂದು ಭಾವಿಸಿ ಬ್ರಹ್ಮಾಸ್ತ್ರವು ಇನ್ನೂ ಯಾವ ಅಸ್ತ್ರದಿಂದಲೂ ಪ್ರತಿಹತಿ ಇಲ್ಲದಿದ್ದರೂ, ಅನ್ಯಬಂಧವನ್ನು ಪಯೋಗಿಸಿದರೆ ಅವರ ಮಾಹಾತ್ಮ್ಯಗೆ ಕುಂದಕವಾಗಿ ಅದು ಬಿಟ್ಟು ಹೋಗುತ್ತದೆಂಬ ಭಾವವು ಹಾಗೆಯೇ ಪ್ರಪದನವೂ ಇತರ ಉಪಾಯಗಳ ಸಂಬಂಧದಿಂದ ಕಾರ್ಯಕಾರಿಯಾಗದೆ ವಿಫಲವಾಗಬಹುದು, ಏಕೆಂದರೆ ಆಕಿಂಚನ್ಯಮಹಾ ವಿಶ್ವಾಸಗಳು ಇಲ್ಲವಾದುದರಿಂದ. ಆದುದರಿಂದ ಪ್ರಪದನನಿಷ್ಠನು ಇತರ ಬ್ರಹ್ಮವಿದ್ಯೆಗಳನ್ನವಲಂಬಿಸುವೆನೆಂದು ಪ್ರವರ್ತಿಸಕೂಡದು. ಆಂಜನೇಯನಮೇಲೆ ಪ್ರಯೋಗಿಸಿದ ಬ್ರಹ್ಮಾಸ್ತ್ರವು ವ್ಯರ್ಥವಾದಂಥಾ ನ್ಯಾಯವನ್ನು ಸೂಚಿಸೋಣವು ಅತ್ರ - ಈ ಪರಿತ್ಯಜ್ಯ ಎಂಬಲ್ಲಿನ ತ್ಯಾಗವಿಧಿಗೆ ಅರ್ಥ ಹೇಳುವದರಲ್ಲಿ, ಇಷ್ಟಂ-ಇಷ್ಟವಾದುದೇ, ಶಾಸ್ತ್ರಸಮ್ಮತವಾದುದೇ ಎಂಬ ಭಾವವು. ವಿಕಲ್ಪದಿಂದ ಹೇಳಲ್ಪಟ್ಟ ೩೨ ವಿದ್ಯೆಗಳಲ್ಲಿ ಯಾವುದನ್ನಾದರೂ ಇದರೊಂದಿಗೆ ಸೇರಿಸಿದರೆ ಆಗ ಬ್ರಹ್ಮಾಸ್ತ್ರವು ಹೇಗೆ ಶಣಬು ಹಗ್ಗದಿಂದ ನಿರರ್ಥಕವಾಯಿತೋ ಹಾಗೆಯೇ ಪ್ರಪದನವೂ ನಿರರ್ಥಕವಾಗುತ್ತದೆ. ಆದುದರಿಂದ ಹಾಗೆ ವಿಕಲ್ಪಿಸಿ ಹೇಳಿದ ಯಾವ ಬ್ರಹ್ಮವಿದ್ಯೆಯ ಸಂಬಂಧವೂ ಕೂಡದಾದುದರಿಂದ ಅವುಗಳನ್ನು ತ್ಯಾಗಮಾಡತಕ್ಕದ್ದೆಂದು ಈ ತ್ಯಾಗವಿಧಿಯು ತಿಳಿಸುತ್ತದೆ ಎಂಬ ಭಾವವು.

ಈ ಮೂರು ಕಾರಿಕೆಗಳಿಂದಲೂ ಬೋಧಿತಾಂಶವನ್ನು ಸಙ್ಗ್ರಹವಾಗಿ ತಿಳಿಸುತ್ತಾರೆ.—ಅಶಕ್ಯತ್ತಿಲೇ - ತನಗೆ ಅಸಾಧ್ಯವಾದ ಕರ್ಮಗಳಲ್ಲಿ, ಪ್ರವೃತ್ತನೈ - ಪ್ರವೃತ್ತಿಯುಳ್ಳವನನ್ನು, ತವಿರ ಎನ್ಗೈಯುಮ್ - ಅದನ್ನು ಬಿಟ್ಟುಬಿಡು ಎಂದು ವಿಧಿಸುವದೂ, ಇದು ಈ ಮೂರು ಕಾರಿಕೆಗಳಲ್ಲಿ ಮೊದಲಿನ ಕಾರಿಕೆಯ ಅರ್ಥವು. ತನಕ್ಕು - ಪ್ರಪನ್ನನಾದ ತನಗೆ, ದುಷ್ಕರಙ್ಗಳಿಲ್ - ತನಗೆ ಅಸಾಧ್ಯವಾದ ಕರ್ಮಗಳಲ್ಲಿ, ಅಧಿನಿವೇಶ ಮುಡೈಯವನ್ನೈ - ಸಙ್ಕಲ್ಪಮಾಡಿರುವವನಿಗೆ ಇದುವೇಣ್ಡಾವೆನ್ಗೈಯುಮ್ - ಆ ಕರ್ಮಗಳು ನಿನಗೆ ಬೇಡವೆಂದು ಹೇಳುವದರಲ್ಲೂ, ವಿಕಲ್ಪಿತ್ತ ಉಪಾಯಾನ್ತರಙ್ಗಳಿಲೇ - ಪ್ರಪದನವಲ್ಲದೆ ವಿಕಲ್ಪಿಸಿ ಹೇಳಿದ ೩೨ ವಿಧ ಬ್ರಹ್ಮ-

ಅಥ "ಸರ್ವಧರ್ಮಾ ಪರಿತ್ಯಜ್ಯ" ಇತ್ಯಸ್ಯ ಉಕ್ತಾರ್ಥಾ ಸುಖಾನು
ಸಂಧಾನಾರ್ಥಂ ಶ್ಲೋಕಾಭ್ಯಾಂ ಸಂಗೃಹ್ಣಾತಿ.

---

ಅತೋ ಶಕ್ತಾಧಿಕಾ (ರಿ) ರತ್ವ ಮಾಕಿಂಚನ್ಯ ಪುರಸ್ಕ್ರಿಯಾ ।
ಅನಂಗಭಾವೋ ಧರ್ಮಾಣಾ ಮಶಕ್ಯಾರಂಭ ವಾರಣಮ್ ॥ ೧೩ ॥

---

ವಿದ್ಯೆಗಳಲ್ಲಿ, ಒನ್ಱೈ - ಒಂದನ್ನು, ಇಚ್ಚೇರ್ಕೊಟ್ಟಿಲ್ - ಈ ಪ್ರಪತ್ತ್ಯನುಷ್ಠಾನ ದೊಂದಿಗೆ ಸೇರಿಸಿದರೆ, ಬ್ರಹ್ಮಾಸ್ತ್ರ (ಬಂಧ) ನ್ಯಾಯತ್ತಾಲೇ - ಆಂಜನೇಯ ನನ್ನು ಬಂಧಿಸಿದ ಬ್ರಹ್ಮಾಸ್ತ್ರವು, ಬೇರೆ ಶಣಬು ಹಗ್ಗದಿಂದ ಬಂಧಿಸಿದಾಗ ಹೇಗೆ ಅವಮಾನಿತವಾಗಿ ನಿರರ್ಥಕವಾಯಿತೋ, ಆ ನ್ಯಾಯದ ಪ್ರಕಾರ, ವಿರೋಧಿಕ್ಕು ಮೆನ್ರು - ವಿರೋಧಿಸುತ್ತದೆ ಎಂದು, ಕೞಿಕ್ಕೈಯುಮ್ – ಉಪಾಯಾನ್ತರಗಳಾದ ಬ್ರಹ್ಮವಿದ್ಯೆಗಳನ್ನು ತ್ಯಾಗಮಾಡತಕ್ಕದ್ದೆಂಬುದು, ವಿಧಿಪ್ರಕಾರಙ್ಗಳ್ - "ಸರ್ವ ಧರ್ಮಾ ಪರಿತ್ಯಜ್ಯ" ಎಂಬುದು ವಿಧಿಯೆಂಬ ಭಾವನೆಯಿಂದ ಉಂಟಾಗುವ ಅಭಿ ಪ್ರಾಯ ಪ್ರಕಾರಗಳು. ಹೀಗೆ ಹಿಂದೆ ಮೂರು ಕಾರಿಕೆಗಳಿಂದ ಹೇಳಿದ ಅರ್ಥ ಗಳನ್ನೇ ಇಲ್ಲಿ ಕ್ರಮವಾಗಿ ಸಙ್ಗ್ರಹಿಸಿ ತಿಳಿಸಿದರು.

**ಹಿಂದೆ ಸರ್ವಧರ್ಮಾ ಪರಿತ್ಯಜ್ಯ ಎಂಬುದಕ್ಕೆ ಹೇಳಿದ ಅರ್ಥಗಳೆನ್ನೆಲ್ಲಾ ಸುಖವಾಗಿ ಜ್ಞಾಪಕದಲ್ಲಿಡಲು ಎರಡು ಕಾರಿಕೆಗಳನ್ನು ಅನುಗ್ರಹಿಸುತ್ತಾರೆ.**

---

**ಅತಃ** - ಆ ಕಾರಣದಿಂದ ಎಂದರೆ ನಾವು ಹಿಂದೆ "ಸರ್ವಧರ್ಮಾ ಪರಿತ್ಯಜ್ಯ" ಎಂಬುದಕ್ಕೆ ಅರ್ಥಗಳನ್ನು ಉಪಪಾದಿಸಿದ ಅನುಸಂಧಾನಕ್ಕಾಗಿ, "ಸರ್ವಧರ್ಮಾ ಪರಿತ್ಯಜ್ಯ" ಎಂಬುದನ್ನು ಅನುವಾದವೆಂದು ಭಾವಿಸಿದರೆ ಉಂಟಾಗುವ ಒಂದರ್ಥ ವನ್ನೂ, ವಿಧಿ ಎಂದು ಭಾವಿಸಿದರೆ ಪ್ರಾಪ್ತವಾಗುವ ಐದು ಅರ್ಥಗಳನ್ನೂ ಹೀಗೆ ಆರರ್ಥಗಳನ್ನು ಸಂಗ್ರಹಿಸಿ ಹೇಳುತ್ತಾರೆ :—(೧) ಅಶಕ್ತಾಧಿಕಾರತ್ವಂ—ಅಶಕ್ತಾಧಿ ಕಾರವನ್ನು ಈ ಸಂದರ್ಭದಲ್ಲಿ ಸರ್ವಧರ್ಮಾ ಪರಿತ್ಯಜ್ಯ ಸ್ಥಿತಃ ಎಂದು ಇಟ್ಟುಕೊಂಡು ಮಾಡಿದ ಅರ್ಥವು ; ಉಪಾಯಾಂತರಗಳ ಮತ್ತು ಅವುಗಳ ಅಂಗಗಳ ನೈರಾಶ್ಯವೂ ಪರಿಶಬ್ದದಿಂದ ನೈರಾಶ್ಯಾತಿಶಯ ಬೋಧಿತವಾಗಿತ್ತಾದುದರಿಂದ, ಅಶಕ್ಯಾಧಿಕಾರೆ ಭಾವವು. ವಿಧಿಪ್ರಕಾರವಾಗಿ ಐದು ಅರ್ಥಗಳು :—

(೨) "ಆಕಿಂಚನ್ಯ ಪುರಸ್ಕ್ರಿಯಾ - ಆಕಿಂಚನ್ಯ ಪ್ರತಿಸಂಧಾನ ಪೂರ್ವಕ ವಾಗಿ ತ್ಯಾಗಮಾಡು ಎಂಬರ್ಥವು ; ನಿನಗೆ ಕರ್ಮಯೋಗ ಜ್ಞಾನಯೋಗ ಭಕ್ತಿ ಯೋಗಗಳನ್ನು ಅನುಷ್ಠಿಸಲು ಯೋಗ್ಯತೆ ಇಲ್ಲದೆ ಆಕಿಂಚನನಾಗಿರುವದರಿಂದ, ನೀನು ಶರಣಂ ವ್ರಜ ಎಂಬರ್ಥವು ; ಕಾರ್ಪಣ್ಯಪೂರ್ವಕದಿಂದ ತ್ಯಾಗಮಾಡಿ ಎಂಬರ್ಥವು. "ಅಹಮಸ್ಯ ಪರಾಧಾನಾಂ" "ನ ಧರ್ಮನಿಷ್ಠೋಽಸ್ಮಿ" ಇತ್ಯಾದಿ ಗಳಿಂದ ಬೋಧಿತಾರ್ಥವು.

**ತತ್ಪ್ರತ್ಯಾಶಾ ಪ್ರಶಮನಮ್ ಬ್ರಹ್ಮಾಸ್ತ್ರ ನ್ಯಾಯಸೂಚನಮ್ ।**
**ಸರ್ವಧರ್ಮ ಪರಿತ್ಯಾಗ ಶಬ್ದಾರ್ಥ (ರ್ಥಾ) ಸ್ಸಾಧು ಸಂಮತಃ (ತಾಃ) ॥೧೪೦॥**

---

(೩) **ಅನಂಗಭಾವೋ ಧರ್ಮಾಣಾಂ** - ನಿತ್ಯನೈಮಿತ್ತಿಕಾದಿ ಧರ್ಮಗಳ ಆವಶ್ಯಕತೆಯು ಇತರ ಉಪಾಯಗಳಾದ ಬ್ರಹ್ಮವಿದ್ಯೆಗಳಿಗೆ ಅಂಗವಾಗಿರುವಹಾಗೆ ಈ ಪ್ರಪತ್ತಿಗೆ ಅವುಗಳ ಅಂಗಭಾವವು ಬೇಕಿಲ್ಲ ಎಂಬ ಭಾವವು. ಆದರೆ ಆವುಗಳು ಪ್ರಪನ್ನನಿಗೆ ಬೇಡಲೇ ಬೇಡವೋ ? ಎಂದರೆ ಈತನಿಗೆ ಅನ್ಯವಿಧಿಗಳಾದ "ಅಹರಹ ಸ್ಸಂಧ್ಯಾಮುಪಾಸೀತ" ಇತ್ಯಾದಿಗಳಿಂದ ಪ್ರಾಪ್ತವಾದುದರಿಂದ ಅವು ಅವಶ್ಯಾನುಷ್ಠೇಯಗಳು. ಆದುದರಿಂದ ಈ ನಿತ್ಯನೈಮಿತ್ತಿಕಗಳ ಅಂಗಗಳಾಗಿರುವ ನೈರಪೇಕ್ಷ್ಯವು ವಿಧಿಸಲ್ಪಟ್ಟಿತು. ಪ್ರಪನ್ನನಿಗೆ ಸ್ನಾನಸಂಧ್ಯಾವಂದನಾದಿಗಳು ಬೇಕಿಲ್ಲವೆಂಬ ವಾದವು ನಿರಸ್ತವು.

(೪) **ಅಶಕ್ಯಾರಂಭವಾರಣಮ್** - ಅಶಕ್ಯವಾದವುಗಳಲ್ಲಿ ಪ್ರಾಜ್ಞತೆ ಇಲ್ಲದೆ ಆರಂಭಿಸಬೇಡವೆಂಬ ತ್ಯಾಗವಿಧಿಯು. ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಾದಿಗಳು ತನಗೆ ಅಶಕ್ಯವಾದವುಗಳೆಂದು ತೋರಿದರೆ ಅವುಗಳನ್ನು ತ್ಯಾಗಮಾಡಿ ಭರನ್ಯಾಸವನ್ನು ಆವಲಂಬಿಸಬಹುದೆಂಬ ಭಾವವನ್ನು ತೋರಿಸುತ್ತದೆ.

(೫) **ತತ್ಪ್ರತ್ಯಾಶಾ ಪ್ರಶಮನಂ** - ಅವುಗಳು ಅಶಕ್ಯಗಳು ಎಂದು ತೋರಿದ್ದರೂ, ಏನೋ ಪ್ರಯತ್ನಮಾಡಿ ನೋಡೋಣವೆಂಬ ಆಶೆಯನ್ನು ಕೂಡ ತ್ಯಾಗಮಾಡು ಎಂಬ ವಿಧಿಯು ತೋರಿಬರುತ್ತದೆಂಬ ತಾತ್ಪರ್ಯವು ಈಗೇನೋ ಅಶಕ್ತತೆಯಿಂದ ಭರನ್ಯಾಸಮಾಡಿದ್ದಾಯಿತು. ಕರ್ಮಯೋಗಾದಿಗಳಿಂದ ಕೂಡಿದ ಉಪಾಸನೆಯನ್ನು ಮಾಡಿ ನೋಡೋಣವೆಂಬ ಆಶೆಯನ್ನೂ ಸಹ ತ್ಯಾಗಮಾಡತಕ್ಕದ್ದೆಂಬ ಭಾವವು.

(೬) **ಬ್ರಹ್ಮಾಸ್ತ್ರನ್ಯಾಯಸೂಚನಮ್** – ಮೊದಲು ಭರನ್ಯಾಸವನ್ನು ಅನುಷ್ಠಿಸಿಬಿಟ್ಟು, ಅನಂತರ ಇತರೋಪಾಯವನ್ನು ಅನುಷ್ಠಿಸುವ ಯತ್ನಮಾಡಿದರೆ ಆಂಜನೇಯನ ಮೇಲೆ ಇಂದ್ರಜಿತು ಪ್ರಯೋಗಿಸಿದ ಬ್ರಹ್ಮಾಸ್ತ್ರವು ಶಣವಲ್ಕಲ ಬಂಧದಿಂದ ಹೇಗೆ ನಿರರ್ಥಕವಾದುದಾಯಿತೋ, ಹಾಗೆಯೇ ಭರನ್ಯಾಸವು ನಿಷ್ಪ್ರಯೋಜನವಾಗುವದರಿಂದ, ಆ ಬ್ರಹ್ಮಾಸ್ತ್ರನ್ಯಾಯದ ಪ್ರಕಾರ ಅವುಗಳ ತ್ಯಾಗವು ವಿಧಿಸಲ್ಪಟ್ಟಿತು ಎಂಬ ಭಾವವು.

ಹೀಗೆ **ಸರ್ವಧರ್ಮಪರಿತ್ಯಾಗಾರ್ಥಾಃ** - ಈ ಆರು ಅರ್ಥಗಳು **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ತೋರುವ **ಅರ್ಥಗಳೆಂಬುದು ಸಾಧುಸಮ್ಮತಾಃ** – ಪ್ರಾಜ್ಞರಿಗೆ ಸಮ್ಮತವಾದವುಗಳು. ಹೀಗೆ ಹೇಳಿರುವದರಿಂದ ಇತರರು ಹೇಳುವ ವಿಧೇಯಗಳಾದ ಧರ್ಮಗಳ ಸ್ವರೂಪತಃ ತ್ಯಾಗವೆಂಬರ್ಥವು ಸಾಧುಸಮ್ಮತವಾದುದಲ್ಲವೆಂದು ಹೇಳಿದಂತಾಯಿತು. ಸ್ನಾನಸಂಧ್ಯಾವಂದನಾದಿಗಳನ್ನು ಸ್ವರೂಪತಃ

**ವಿಧಿಪಕ್ಷೇ ಪಕ್ಷಾನ್ತರ ಮನೂದ್ಯ ತದ್ವಿವಕ್ಷಾಯಾ ಮನೌಚಿತ್ಯಂ ನಾಸ್ತೀತ್ಯಾಹ**

**ದೇವತಾಂತರ ಧರ್ಮಾದಿ ತ್ಯಾಗೋಕ್ತಿ ರವಿರೋಧಿನೀ |**
**ಉಪಾಸಕೇಽಪಿ ತುಲ್ಯತ್ವಾದಿಹಸಾ ನವಿಶೇಷಿಕಾ (ತಾ) || ೧೪೧ ||**

---

**ತ್ಯಾಗಮಾಡಬಹುದೆಂಬ** ಅರ್ಥವು ಸರ್ವಾತ್ಮನಾ ಕೂಡುವದಿಲ್ಲವೆಂಬ **ಭಾವವು.**

ಆಗಲಿ ದೇವತಾಂತರಗಳ ಆರಾಧನ ರೂಪ ಧರ್ಮಗಳ ಸ್ವರೂಪತಃ **ತ್ಯಾಗ ವೆಂದು** ಹೇಳುವದು ಸಮಂಜಸವಲ್ಲವೋ **?** ಅವುಗಳು ಕೂಡದಷ್ಟೇ **?** ಎಂದರೆ ಈ ಅರ್ಥವೇನೋ ಸಮಂಜಸವಾದುದೇ. ಆದರೆ ಎರಡು ವಿಧ ಉಪಾಯಗಳ ವಿಷಯದಲ್ಲೂ ಈ ಅರ್ಥವನ್ನು ಹೇಳಬಹುದಾದ ಪ್ರಯುಕ್ತ ಈ ಭರನ್ಯಾಸವನ್ನು ಕುರಿತು ಹೇಳುವ ಸಂದರ್ಭದಲ್ಲಿ ಆ ಅರ್ಥವು ಉಪಯುಕ್ತವಾದುದಲ್ಲವು. ಏಕೆಂದರೆ ಕರ್ಮಯೋಗಾದಿಗಳಿಂದ ಕೂಡಿದ ಭಕ್ತಿಯೋಗವಾದ ಉಪಾಯಾನ್ತರವು ವ್ಯಾವರ್ತಿಸಲ್ಪಡದೇ ಇರುವದರಿಂದ ಎಂದು ಮುಂದಿನ ಕಾರಿಕೆಯನ್ನು ಅನುಗ್ರಹಿಸುತ್ತಾರೆ.

**ವಿಧಿ ಎಂಬ ಪಕ್ಷದಲ್ಲಿ ಬೇರೆ ಅಭಿಪ್ರಾಯವನ್ನು ಅನುವಾದಮಾಡಿ ಅದು ಇಲ್ಲಿಗೆ ಉಪಯುಕ್ತವಾದುದಲ್ಲವೆನ್ನುತ್ತಾರೆ.**

**ದೇವತಾಂತರ ಧರ್ಮಾದಿ ತ್ಯಾಗೋಕ್ತಿಃ** - ಬ್ರಹ್ಮರುದ್ರೇಂದ್ರಾದಿಗಳಾದ ಅನ್ಯ ದೇವತಾರಾಧನವೇ ಮೊದಲಾದ ಧರ್ಮಗಳನ್ನು ತ್ಯಾಗಮಾಡಬೇಕೆಂಬ ವಿಧಿಯ ಹೇಳಿಕೆಯು, **ಅವಿರೋಧಿನೀ** – ಯದ್ಯಪಿ ಸರ್ವಧರ್ಮಾನ್ **ಪರಿತ್ಯಜ್ಯ** ಎಂಬುದಕ್ಕೆ ವಿರುದ್ಧವಲ್ಲದ ಅರ್ಥವಾದರೂ, ಎಂದರೆ ಆ ಅರ್ಥದಲ್ಲಿ ಶಾಸ್ತ್ರವಿರುದ್ಧವಾದುದು ಏನೂ ಇಲ್ಲದಿದ್ದರೂ, ಆ ಅರ್ಥವು ಉಪಯುಕ್ತವಾದುದಲ್ಲವೆಂದು ಉತ್ತರಾರ್ಧದಿಂದ ಹೇಳುತ್ತಾರೆ. ಇಲ್ಲಿರುವ ಆದಿಪದದಿಂದ ಕಾಮ್ಯವ್ರತಾದಿಗಳು ಹೇಳಲ್ಪಟ್ಟವು. ಹಾಗೆ ಶಾಸ್ತ್ರವಿರುದ್ಧವಲ್ಲದೆ ಶಾಸ್ತ್ರಸಮ್ಮತವಾಗಿದ್ದರೂ, **ಉಪಾಸಕೇಪಿ** - ಉಪಾಯಾನ್ತರವಾದ ಭಕ್ತಿಯೋಗನಿಷ್ಠನಲ್ಲೂಕೂಡ, ತುಲ್ಯತ್ವಾತ್ - ಆ ಅಭಿಪ್ರಾಯವು ಸಮವಾದುದರಿಂದ ಎಂದರೆ, ಉಪಾಸಕನೂ ಕೂಡ ಅನ್ಯದೇವತಾರಾಧನ ಧರ್ಮಗಳನ್ನು ಬಿಡಬೇಕಾಗಿ ಈ ತ್ಯಾಗವಿಧಿಯು ಇಬ್ಬರಿಗೂ ಸಮನಾದುದರಿಂದ, **ಇಹ** – ಈ ಆಕಿಂಚನ್ಯಾಧಿಕಾರಿಯಾದ ಭರನ್ಯಾಸನಿಷ್ಠನನ್ನು ಹೇಳುವ ಸಂದರ್ಭದಲ್ಲಿ, **ಸಾ** - ದೇವತಾಂತರ ಧರ್ಮಗಳ ತ್ಯಾಗವಿಧಿಯು, **ನವಿಶೇಷಿಕಾ** - ಉಪಾಸನರೂಪೋಪಾಯವನ್ನು ವ್ಯಾವರ್ತಿಸಿ, ಭರನ್ಯಾಸ ವಿಷಯದಲ್ಲಿ ಏನನ್ನೂ ವಿಶೇಷ ವಿಧಿಯಾಗಿ ಬೋಧಿಸುವದಿಲ್ಲವು. ಆ ಕಾರಣದಿಂದ ಈ ಅರ್ಥವು ಅಪ್ರಸ್ತುತವಾಗಿ ಅನುಪಾದೇಯವೆಂದು ತಿಳಿಸಿದರು.

ಆದರೆ, ಲಕ್ಷ್ಮೀತಂತ್ರದಲ್ಲಿ ಲಕ್ಷ್ಮಿಯಿಂದ ಪ್ರಶ್ನಿಸಲ್ಪಟ್ಟು ಭಗವಂತನು ಹೇಳುವ ವಾಕ್ಯವಾದ **"ಉಪಾಯಾಪಾಯಸಂತ್ಯಾಗೀ ಮಧ್ಯಮಾಂ ವೃತ್ತಿ**

(೧) " ಉಪಾಯೋಪಾಯ ಸಂತ್ಯಾಗೀ " ಇತ್ಯಾದಿಗಳಿಲ್ ಚೊನ್ನ ಉಪಾಯ ತ್ಯಾಗಮುಮ್ ಇಪ್ಪ್ರಕಾರಙ್ಗಳಿಲೇ ನಿರ್ವಾಹ್ಯಮ್.

---

ಮಾಸ್ಥಿತಃ । ಮಾಮೇಕಂ ಶರಣಂ ಪ್ರಾಪ್ಯ ಮಾಮೇವಾಂತೇ ಸಮಶ್ನುತೇ । ಷಡಂಗಂತ ಮುಪಾಯಂಚ ಶೃಣುಮೇ" ಎಂಬಲ್ಲಿ ಈ ಅರ್ಥವೇ ತೋರುವಹಾಗೆ ಇದೆಯಲ್ಲಾ ? ಅಲ್ಲಿ ತ್ಯಾಗ ಶಬ್ದವನ್ನು ಹೇಗೆ ನಿರ್ವಹಿಸತಕ್ಕದ್ದು ? ಎಂದರೆ ಮೇಲೆ ನಾವು ಉಪಪಾದಿಸಿದ ರೀತಿಯಲ್ಲೇ ನಿರ್ವಾಹಮಾಡತಕ್ಕದ್ದೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಹೇಗೆಂದರೆ ? ಉಪಾಯಗಳನ್ನು ಸಂತ್ಯಜ್ಯ ವೆಂದರೆ ಅನುವಾದಾರ್ಥವಾಗಿಯಾಗಲಿ ಅಥವಾ ಸ್ವೈರಪೇಕ್ಷ್ಯಾದಿ ಅರ್ಥಗಳನ್ನಾಗಲಿ ಹೇಳಿ ನಿರ್ವಾಹ ಮಾಡಬಹುದೆಂದು ತಿಳಿಸುತ್ತಾರೆ. ಸ್ವರೂಪತ್ಯಾಗ ಅರ್ಥವು ಇಲ್ಲಿಯೂ ಹೇಳಲ್ಪಡಲಿಲ್ಲವು. ಏಕೆಂದರೆ ಚರಮಶ್ಲೋಕದಲ್ಲಿ ಹೇಳಲ್ಪಟ್ಟ ಅಭಿಪ್ರಾಯಗಳೇ ಇಲ್ಲಿಯೂ ಹೇಳಲ್ಪಟ್ಟಿವೆ. ಎರಡಕ್ಕೂ ಪರಸ್ಪರ ಐಕಕಂಠ್ಯ ಉಂಟೇ ವಿನಾ ವಿರುದ್ಧಾರ್ಥಗಳು ಎಂದಿಗೂ ಇಲ್ಲವು. "ಉಪಾಯೋಪಾಯ ಸಂತ್ಯಾಗೀ" "ಇತರ ಉಪಾಯಗಳನ್ನೂ ಅಪಾಯಗಳನ್ನೂ ಸಹ ತ್ಯಾಗಮಾಡಿ" ಇತ್ಯಾದಿಗಳಿಲ್ ಚೊನ್ನ ಎಂಬಿವೇ ಮೊದಲಾದವುಗಳಲ್ಲಿ ಹೇಳಲ್ಪಟ್ಟ ಉಪಾಯ ತ್ಯಾಗವೂ, ಇಪ್ಪ್ರಕಾರಙ್ಗಳಿಲೇ - ಈಗ ನಾವು ಕಾರಿಕೆಗಳ ಮೂಲಕವೂ, ಹಿಂದೆ ಉಪಪಾದನೆಯ ಮೂಲಕವೂ ತಿಳಿಸಿದ ಅನುವಾದ ಮತ್ತು ಸ್ವೈರಪೇಕ್ಷ್ಯ ಅಭಿಪ್ರಾಯ ಗಳಿಂದ, ನಿರ್ವಾಹ್ಯಮ್ - ನಿರ್ವಹಿಸತಕ್ಕದ್ದಾಗಿರುತ್ತದೆ. ಇಲ್ಲಿ ಇತ್ಯಾದಿ ಎಂಬಲ್ಲಿ ರುವ ಆದಿಪದದಿಂದ ಈ ಚರಮಶ್ಲೋಕಾರ್ಥ ಉಪಪಾದನರೂಪವಾಗಿ ಇತಿಹಾಸ ದಲ್ಲಿರುವ ಪ್ರಮಾಣಗಳಾದ, "ತಸ್ಮಾತ್ತ್ವಮುದ್ಧವೋ ತ್ಸೃಜ್ಯ ಚೋದನಾಂ ಪ್ರತಿಚೋದನಾಮ್ " ಇತ್ಯಾದಿಗಳು ಹೇಳಲ್ಪಟ್ಟವು. ಇಲ್ಲಿ ಅಪಾಯವು ಯಾವುದು ಎಂದರೆ ಅನುಷ್ಠಿಸಿದ ಪ್ರಪತ್ತಿಗೆ ವಿಘಾತಕರವಾದುದು ; ಅದು ಯಾವು ದೆಂದರೆ ನನಗೆ ಕರ್ಮಯೋಗಕ್ಕೂ ಶಕ್ತಿಯಿಲ್ಲವು, ಜ್ಞಾನಯೋಗಕ್ಕೂ ಶಕ್ತಿ ಇಲ್ಲವು, ಆದುದರಿಂದ ಭಕ್ತಿಯೋಗಕ್ಕೂ ಶಕ್ತಿ ಇಲ್ಲವು ; ಆದ ದರಿಂದ ನಾನು ಅಕಿಂಚನು ಅನನ್ಯಗತಿಕನು ಎಂದು ಹೇಳಿಕೊಂಡು ಶರಣಾಗತಿಯನ್ನನುಷ್ಠಿಸಿ, ಅನಂತರ ಕರ್ಮ ಯೋಗಾದಿಗಳನ್ನು ಅನುಷ್ಠಿಸುವೆನು ಎಂದು ಆರಂಭಿಸುವದು; ಆಂಜನೇಯನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿ ಅನಂತರ ಶಣಬು ಹಗ್ಗದಿಂದ ಕಟ್ಟಿದ ತೆರದಿ, ಮೊದಲು ಅನುಷ್ಠಿಸಿದ ಶರಣಾಗತಿಗೆ ಅಪಾಯವು ಸಂಭವಿಸುತ್ತದೆ ; ಆದುದರಿಂದ ಅಂತಹ ಅಪಾಯ ಉಂಟಾಗುವ ಕರ್ಮಗಳನ್ನು ತ್ಯಾಗ ಮಾಡಿ ಎಂಬರ್ಥವು.

ಮುಂಧಿನ ಪಾಶುರದ ಅರ್ಥವು—(೧) ಅರಿಯದನಿಲ್–ಅಶಕ್ತಗಳಾದ ಕರ್ಮ ಗಳಲ್ಲಿ ಮೂಣ್ಡಾಲುಮ್-ದುಷ್ಕರಗಳಾದ ಕರ್ಮಯೋಗಾದಿ ಪರಂಪರೆಗಳಲ್ಲಿ ಮೊದ ಲೇ ಪ್ರವೃತ್ತಿ ಇದ್ದರೂ ಮುಯಲವೇಣ್ಡಾ-ಮುಂದಕ್ಕೆ ಅದರಲ್ಲಿ ಪ್ರವೃತ್ತಿ ಬೇಡ ·

## ಸರ್ವಧರ್ಮಾನ್ ಪರಿತ್ಯಜ್ಯೇತ್ಯಸ್ಯ ಷಡರ್ಥ ಸಙ್ಗ್ರಹೇಣ ಶರಣಾಗತಿರ್ಕರ್ತವ್ಯೇತ್ಯಾಹ

---

ಮೂಣ್ಡಾಲು ಮರಿಯತನಿಲೇ ಮುಯಲವೇಣ್ಡಾ, ಮುನ್ನಮತಿಲಾಶೈತನ್ನೈ ವಿಡುಗೈತ್ತಿಣ್ಮೈ। ವೇಣ್ಡಾತು ಶರಣನೆರಿ ವೇರೋರ್ ಕೂಟ್ಟು, ವೇಣ್ಡಿಲಯನತ್ತಿರಮ್ಪೋಲ್ ವೆಳ್ಕಿನಿರ್ಕುಮ್॥ ನೀಣ್ಡಾಕು ನಿರೈಮತಿಯೋರ್ ನೆರಿಯಿಲ್ಕೂಡಾ, ನಿನ್ರನಿವೃತ್ತಿ ಶೈಯ್ಯಾಗವೆನ್ರನ್ಪಾತಮ್। ಪೂಣ್ಡಾಲು (ಪ್ಪಿನ್ನೈಗಳಿಲ್ಲಾಮ್) ಪ್ಪಿಳ್ಳೈಕಳಿಲ್ಲಾಮ್ಪೋಲ್ಪ್ಪೇಸೆನ್ರ ಪುಣ್ಣಿಯನಾರ ಪುಕಳನೈತ್ತುಮ್ಪುಕಳ್ವೋಮೇ ॥ ೪೭ ॥

---

"ಆತ್ಮಾಶಕ್ಯ ನ್ಯಧ್ಯಾಯಾಸ ನಿವಾರಣಂ" ಎಂಬ ೧೩೫ನೆಯ ಕಾರಿಕೆಯ ಅರ್ಥವು ಸಂಗ್ರಹಿತವು. (೨) ಮುನ್ನಂ - ಮೊದಲೇ, ಅದಿಲ್ – ಆ ಅಶಕ್ಯವಾದ ಉಪಾಯದಲ್ಲಿ ಆಶೈತನ್ನೈ - ಆಶೆಯನ್ನೇ, ವಿಡುಗೈ - ತ್ಯಾಗಮಾಡೋಣವು, ತಿಣ್ಮೈ - ಬುದ್ಧಿಕೌಶಲವು, ಎಂದರೆ ಹಿಂದಿನ ಸಂದರ್ಭದಲ್ಲಿ ಹೇಳಿರುವ ಹಾಗೆ ಪ್ರಯತ್ನಿಸಿ ಅಶಕ್ಯವೆಂದು ತಿಳಿದು ಅದನ್ನು ತ್ಯಾಗಮಾಡುವದಕ್ಕಿಂತ ಮೊದಲಿನಿಂದಲೇ ಅಂತಹ ಅಶಕ್ಯವಾದ ಉಪಾಯಾನುಷ್ಠಾನದಲ್ಲಿ ಆಶೆಯನ್ನೇ ತ್ಯಾಗಮಾಡುವದು ಪ್ರಾಜ್ಞತೆಯು. ಇದರಿಂದ "ಅಶಾಲೇಶಾನುವೃತ್ತಿರ್ವ್ಯಾ ತಾಗೋ" ಎಂಬ ೧೩೭ನೆಯ ಕಾರಿಕೆಯ ತಾತ್ಪರ್ಯವು ಹೇಳಲ್ಪಟ್ಟಿತು. (೩) ಶರಣನೆರಿ – ಭರನ್ಯಾಸ ಮಾರ್ಗವು ಎಂದರೆ ಉಪಾಯವು, ವೆರು - ಅದಕ್ಕೆ ಪರಿಕರಗಳಾದ ಆನುಕೂಲ್ಯ ಸಂಕಲ್ಪಾದಿಗಳ ಹೊರತು, ಒರು - ಒಂದು, ಕೂಟ್ಟು - ಪರಿಕರದ ಸಹಾಯವು, ವೇಣ್ಡಾತು - ಅಪೇಕ್ಷಿಸುವದಿಲ್ಲವು. ಇದು ಮೂರನೆಯ ಅರ್ಥವು. ಆ ಭರನ್ಯಾಸಕ್ಕೆ ಬೇಕಾದ ಐದು ಅಂಗಗಳಲ್ಲದೆ ಇನ್ನು ಯಾವುದನ್ನೂ ಅದು ಸಹಾಯವಾಗಿ ಅಪೇಕ್ಷಿಸುವದಿಲ್ಲವು. "ಅನಂಗಭಾವೋ ಧರ್ಮಾಣಾಂ" ಎಂಬ ೧೩೬ನೆಯ ಕಾರಿಕೆಯ ಅರ್ಥವು. (೪) ವೇಣ್ಡಿಲ್ - ಭರನ್ಯಾಸಕ್ಕೂ ಇತರ ಬ್ರಹ್ಮವಿದ್ಯೆಗಳಲ್ಲಿ ಹೇಳಿರುವಹಾಗೆ ಉಪಾಸನವೂ ಆವಶ್ಯಕವೆಂಬ ಭ್ರಮೆಯಿಂದ ಅದನ್ನೂ ಅಪೇಕ್ಷಿಸಿದರೆ, ಅಯನ್ - ಚತುರ್ಮುಖ ಬ್ರಹ್ಮನ, ಅತ್ತಿರಂ ಪೋಲ್ - ಅಸ್ತ್ರದ ಹಾಗೆ, ಲಜ್ಜಿತರ್ಸ್ನ ತನ್ನನ್ನು ಈ ಅಧಿಕಾರಿಯು ಅವಮಾನಪಡಿಸಿದನೆಂದು ಈ ಪ್ರಪತ್ತಿಯು ನಾಚಿಕೆಯನ್ನು ಹೊಂದಿದಾಗಿ, ಎಂದರೆ ಈ ಅಧಿಕಾರಿಗೆ ಮಹಾವಿಶ್ವಾಸವೇ ಇಲ್ಲವೆಂದು ನಾಚಿಕೆಗೊಂಡು. ನಿರ್ಕುಮ್ - ನಿಲ್ಲುವದು ಎಂದರೆ ಬ್ರಹ್ಮಾಸ್ತ್ರವು ಹೇಗೆ ನಿರರ್ಥಕವಾಯಿತೋ, ಹಾಗೆ ಈ ಭರನ್ಯಾಸವೂ ನಿರರ್ಥಕವಾಗುವದು. ಬ್ರಹ್ಮಾಸ್ತ್ರನ್ಯಾಯಸೂಚನಮ್ ಎಂದು ೧೩೮ನೆಯ ಕಾರಿಕಾರ್ಥವು ಬೋಧಿತವು. (೫) ನೀಣ್ಡಾಗುಮ್ ನಿರೈಮತಿಯೋರ ನೆರಿಯಿಲ್ ಕೂಡಾ,

## ಅಥ "ಮಾಂ" ಮಿತಿ ಪದಸ್ಯ, ತಥಾ ಉತ್ತರಾರ್ಧಸ್ಯ "ಅಹಂ" ಶಬ್ದಸ್ಯ ಚ ಅರ್ಥಮಾಹ

**ಇಙ್ಗೇ "ಮಾಮಹಂ" ಎನ್ಗಿರ ಪದಙ್ಗಳುಕ್ಕು ಅಡೈವೇ ಅವತಾರ**

---

**ನೀಣ್ಡಾಮ್** — ಬಹುಕಾಲಕ್ಕೆ ಸಾಧ್ಯವಾದ, **ನಿರ್ವೃತಿಯೋರ್** - ಪರಿಪೂರ್ಣ ಜ್ಞಾನವುಳ್ಳ, **ನೆರಿಯಿಲ್** - ಮಾರ್ಗದಲ್ಲಿ ಎಂದರೆ ಭಕ್ತಿಯೋಗದಲ್ಲಿ, **ಕೂಡಾ** ಸಂಬಂಧವಿಲ್ಲದಿರುವ ನೀನು, ಇಲ್ಲಿ "**ಅಶಕ್ತಾಧಿಕಾರತ್ವಂ** ಎಂದು ೧೩ನೆಯ ಕಾರಿಕೆಯಲ್ಲಿರುವದು ಹೇಳಲ್ಪಟ್ಟಿತು. (೬) ನಿನ್ನ **ನಿವೃತ್ತಿಕ್ಕೈಯಾಗ - ನೀ** - ನಿನ್ನ, **ತನಿಮೈ** - ಆಕಿಂಚನ್ಯವನ್ನು, ಇದರಿಂದ ೧೪ನೆಯ ಪಾಶುರದಲ್ಲಿರುವ, **ಆಕಿಂಚನ್ಯ ಪುರಸ್ಕ್ರಿಯಾ** - ಎಂಬುದು ಉಪಪಾದಿಸಲ್ಪಟ್ಟಿತು.

**ಎನ್** - ನನ್ನ **ಪಾದಮ್** - ಪಾದವನ್ನು, **ಪೂಣ್ಡಾಲ್** – ಸ್ವೀಕರಿಸುವುದಾದರೆ **ಮಾಮೇಕಂ ಶರಣಂವ್ರಜ** ಎಂಬುದರ ಅರ್ಥವ. **ಉನ್ ಪಿಳ್ಳೈಗಳೆಲ್ಲಾಂ ಪೂರುಪ್ಪೇನ್** ಅಥವಾ **ಉನ್ ವಿನೈಗಳೆಲ್ಲಾಮ್ ಪೊರುಪ್ಪೇನ್** - ನಿನ್ನ ಪುಣ್ಯ ಪಾಪರೂಪ ಕರ್ಮಗಳನ್ನೆಲ್ಲಾ ಕ್ಷಮಿಸುವೆನು. **ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂಬುದರ ಅರ್ಥವು. **ಎನ್ರು** - ಎಂಬದಾಗಿ ಹೇಳುವ, **ಪುಣ್ಣಿಯಾನಾರ್** - **ಕೃಷ್ಣಂ ಧರ್ಮಂ ಸನಾತನಮ್** ಎಂಬಲ್ಲಿ ಹೇಳಿರುವ ಹಾಗೆ ಸಿದ್ಧೋಪಾಯನಾಗಿರುವ ಶ್ರೀ ಕೃಷ್ಣನ. **ಅನೈತ್ತುಂ** - ಸಮಸ್ತವಾದ, **ಪುಗಳ್** - "**ತಸ್ಯನಾಮ ಮಹದ್ಯಶಃ**" ಎಂದು ಶ್ರುತಿಯಲ್ಲಿ ಹೇಳಿರುವ ಕೀರ್ತಿಯನ್ನು ಅತ್ಯದ್ಭುತ **ಅತಿ**ಶಯಿತ ವಾತ್ಸಲ್ಯ ಸೌಶೀಲ್ಯ ಸೌಲಭ್ಯಾದಿ ಕಲ್ಯಾಣ ಗುಣಾಕರನನ್ನು **ಪುಗಳುವೋಮ್** — ತುಂಬಾ ಪ್ರೀತಿಯಿಂದ, ಪ್ರಶಂಸಿಸವೆವು, ಶ್ಲಾಘಿಸುವೆವು.

**ಮುಂದೆ "ಮಾಂ" ಎಂಬ ಪದದ ಮತ್ತು ಅದೇ ಅರ್ಥವುಳ್ಳ ಉತ್ತರಾರ್ಧದ "ಅಹಂ" ಎಂಬ ಪದದ ಅರ್ಥವನ್ನು ಉಪದೇಶಿಸುತ್ತಾರೆ.**

**ಇಙ್ಗೇ** - ಈ ಚರಮಶ್ಲೋಕದಲ್ಲಿ "**ಮಾಂ ಮಹಂ**" **ಪದಙ್ಗಳುಕ್ಕು** - ಮುಂದಿನ **ಮಾಂ** ಎಂಬ ಪದಕ್ಕೂ, ಹಾಗೆಯೇ ಉತ್ತರಾರ್ಧದಲ್ಲಿರುವ **ಅಹಂ** ಎಂಬ ಪದಕ್ಕೂ ಸಹ, **ಅಡೈವೇ** - ಕ್ರಮವಾಗಿ, **ಅವತಾರ ರಹಸ್ಯಪ್ರಕರಣತ್ತಿಲುಮ್** - ಶ್ರೀ ಭಗವದ್ಗೀತೆಯ ೪ನೆಯ ಅಧ್ಯಾಯದಲ್ಲಿ "**ಬಹೂನಿಮೇವ್ಯತೀತಾನಿ**" ಎಂದಾರಂಭಿಸಿ ಹೇಳಿರುವ ಐದು ಅವತಾರ ರಹಸ್ಯವನ್ನು ಬೋಧಿಸುವ **ಶ್ಲೋಕಗಳಲ್ಲೂ** ಮತ್ತು **ಪುರುಷೋತ್ತಮತ್ವ ಪ್ರಕರಣತ್ತಿಲುಮ್** – ಭಗವಂತನಾದ ತಾನು ಹೇಗೆ ಪುರುಷೋತ್ತಮನೆಂದು ತಿಳಿಸುವ "**ದ್ವಾವಿಮೌ ಪುರುಷೋ ಲೋಕೇ**" ಎಂದಾರಂಭಿಸಿ ಹೇಳುವ ೧೫ನೆಯ ಅಧ್ಯಾಯದ ನಾಲ್ಕು **ಶ್ಲೋಕ**ಗಳು, ಹೀಗೆ ಈ ಸಂದರ್ಭಗಳಲ್ಲಿ, **ಶೊಲ್ಲುಗಿರಪಡಿಯೇ** - ಹೇಳಿರುವ ಹಾಗೆ,

**ರಹಸ್ಯ (ಪ್ರಕರಣ) ತ್ತಿಲುಮ್, ಪುರುಷೋತ್ತಮತ್ವ (ಪ್ರತಿಪಾದನ) ಪ್ರಕರಣ ತ್ತಿಲುಮ್, ಶೊಲ್ಲುಗಿರಪಡಿಯೇ ಸೌಲಭ್ಯತ್ತಿಲುಮ್ ಸ್ವಾತಂತ್ರ್ಯತ್ತಿಲುಮ್ ಪ್ರಾಧಾನ್ಯೇನ ನೋಕ್ಕು.**

---

**ಸೌಲಭ್ಯತ್ತಿಲುಮ್ - "ತಸ್ಯಾಹಂ ಸುಲಭಂ ಪಾರ್ಥ" (ಗೀ. ) ಎಂಬಲ್ಲಿ** ಹೇಳಿರುವಹಾಗೆ, ತಾನು ಪ್ರಪನ್ನನಿಗೆ ಅತಿ ಸುಲಭನೆಂದು ಹೇಳುವದರಲ್ಲೂ ಮತ್ತು **ಸ್ವಾತಂತ್ರ್ಯತ್ತಿಲುಮ್** - ತಾನು ಸರ್ವ ಸ್ವತಂತ್ರನೆಂದು ಹೇಳುವದರಲ್ಲೂ, **ಪ್ರಾಧಾನ್ಯೇನನೋಕ್ಕು** - ಮುಖ್ಯವಾಗಿ ದೃಷ್ಟಿಯು ಎಂದರೆ ಉದ್ದೇಶವು. ಅಧೈಮ - ಎಂದು ಹೇಳರುವದರಿಂದ, ಅವತಾರ ರಹಸ್ಯೋಪದೇಶ ಪ್ರಕರಣದಲ್ಲಿ ಸೌಲಭ್ಯವು ಮುಖ್ಯವಾಗಿ ಪ್ರದರ್ಶಿಸಲ್ಪಟ್ಟಿತೆಂದೂ, ಪುರುಷೋತ್ತಮ ವಿದ್ಯೋಪದೇಶದಿಂದ ಸ್ವಾತಂತ್ರ್ಯವು ಮುಖ್ಯವಾಗಿ ಹೇಳುವದರಲ್ಲಿ ದೃಷ್ಟಿಯೂ ಪ್ರೋಕ್ತವು. ಅವತಾರರಹಸ್ಯಕ್ಕೆ ದಾಸನು ಬರೆದಿರುವ ಭಗವದ್ಗೀತೆಯ ೪ನೆಯ ಅಧ್ಯಾಯದ ೪೧೬-೪೩೯ ಪುಟಗಳಲ್ಲಿ ವಿಸ್ತಾರವಾದ ವ್ಯಾಖ್ಯಾನವನ್ನೂ ಸಙ್ಗ್ರಹವಾಗಿ ಬೇಕಾದರೆ ಆ ಶ್ಲೋಕಗಳ ಸಙ್ಗ್ರಹಾರ್ಥವನ್ನು ೨೪ನೆಯ ಪುಟದಲ್ಲೂ ಕಾಣಬಹುದು. ಮತ್ತು ತತ್ವತ್ರಯಾಧಿಕಾರದ ೫೬೯-೫೭೭ನೆಯ ಪುಟಗಳನ್ನೂ ಪರಾಂಬರಿಸಿ. ಅವತಾರ ರಹಸ್ಯಶ್ಲೋಕಗಳಲ್ಲಿ ಸೌಲಭ್ಯವು ಎಲ್ಲಿ ತೋರಿಬರುತ್ತದೆ ಎಂದರೆ **ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ** ಎಂಬಲ್ಲಿ ಸುವ್ಯಕ್ತವು. ಸಾಧು ಪರಿತ್ರಾಣವನ್ನೂ, ದುಷ್ಕೃತ ನಾಶವನ್ನೂ, ಯದ್ಯಪಿ ಸ್ವಸಙ್ಕಲ್ಪದಿಂದಲೇ ಮಾಡಿಬಿಡಬಹುದು. ಆದರೆ ಮಹಾ ಭಾಗವತೋತ್ತಮರಾಗಿ ಪರಮಭಕ್ತಿಯಿಂದ ಆತನನ್ನು ಧ್ಯಾನಿಸುವವರಿಗೆ ಇಷ್ಟುಮಾತ್ರವೇ ನಡೆಸಿಬಿಟ್ಟರೆ ಸ್ವಾಮಿಗೆ ತೃಪ್ತಿಯಿಲ್ಲವು. ಸರ್ವೇಶ್ವರನಾದ ತನ್ನ ಆಲಿಂಗನ, ಸರಸ ಸಲ್ಲಾಪಾದಿಗಳೇ ಮೊದಲಾದ ಭೋಗಗಳಿಲ್ಲದಿದ್ದರೆ ಇಂತಹ ಭಕ್ತರ ಪ್ರಾಣ ನಿಲ್ಲದು. ಶ್ರೀಕೃಷ್ಣನ ದಿವ್ಯಮಙ್ಗಳ ವಿಗ್ರಹದ ಲಾವಣ್ಯವನ್ನು ರೆಪ್ಪೆ ಪಾಟವಿಲ್ಲದೆ ನಿರಂತರ ಅನುಭವಿಸಬೇಕೆಂಬುದು ಗೋಪಸ್ತ್ರೀಯರುಗಳ ಇಷ್ಟವಾಗಿ, ಅದಕ್ಕೆ ವಿಚ್ಛಿತಿಯುಂಟಾಗುವಹಾಗೆ ದಡ್ಡನಾದ ಚತುರ್ಮುಖನು ರೆಪ್ಪೆ ಪಾಟವನ್ನ ಏರ್ಪಡಿಸಿದನೇ ಎಂದು ಆತನನ್ನು ನಿಂದಿಸಿರುತ್ತಾರೆ. ದ್ರೌಪದಿಗೆ ಮಾನಸಂರಕ್ಷಣೆಯೇನು, ಅರ್ಜುನನಿಗೆ ದೌತ್ಯವೇನು ಸಾರಥ್ಯವೇನು, ವಿದುರಾನ್ನ ಭೋಜನವೇನು, ಯಜ್ಞಪತ್ನಿಗಳ ಮೃಷ್ಟಾನ್ನವನ್ನು ಸ್ವೀಕರಿಸಿ ಅನುಗ್ರಹಿಸಿದುದೇನು, ರಾಮಾವತಾರಿಯಾಗಿ ಗುಹ, ಸುಗ್ರೀವ, ಆಂಜನೇಯ ವಿಭೀಷಣಾದಿಗಳ ಆಲಿಂಗನವೇನು, ಶಬರಿಗೆ ಅನುಗ್ರಹವೇನು, ಜಟಾಯುವಿಗೆ ಮೋಕ್ಷಪ್ರದತ್ವವೇನು ಇವುಗಳೆಲ್ಲಾ ಸರ್ವೇಶ್ವರನ ಸೌಲಭ್ಯ ಸೌಶೀಲ್ಯಾದಿಗಳನ್ನು ಉದ್ಘೋಷಿಸುತ್ತವೆ

ಹಾಗೆಯೇ ಕ್ಷರಾಕ್ಷರ ರೂಪ ಎರಡು ವಿಧ ಚೇತನರಿಗಿಂತಲೂ ವಿಲಕ್ಷಣನಾಗಿ

ಕಾ|| ಅವತಾರಸ್ಯ ಸತ್ಯತ್ವ ಮಜಹತ್ಸ್ವ ಸ್ವಭಾವತಾ
ಶುದ್ಧ ಸತ್ವ ಮಯತ್ವಂಚ ಸ್ವೇಚ್ಛಾ ಮಾತ್ರ ನಿದಾನತಾ || ೧೪೨ ||

---

ಶೇಷಿಯಾಗಿರುವ ಪರಮ ಪುರುಷನಿಗೆ ಅಘಟನಘಟನಾರೂಪ ಶಕ್ತಿಯನ್ನು ಹೊಂದಿರುವ ಸ್ವಾತಂತ್ರ್ಯವುಂಟು.. ಆ ಸ್ವಾತಂತ್ರ್ಯವಿರುವದರಿಂದಲೇ ಚೇತನರು ಎಷ್ಟು ಪಾಪಿಗಳಾಗಿದ್ದರೂ "ಯದಿವಾ ರಾವಣಸ್ಸ್ವಯಂ" ಎಂಬಲ್ಲಿ ಹೇಳಿರುವಹಾಗೆ ಶರಣಾಗತರಾದರೆ ಸಂರಕ್ಷಿಸಲ್ಪಡುವರು. ಕಾಕನಿಗಿಂತ ಮಹಾಪರಾಧಿಯು ಇಲ್ಲವು. ಅಂತವನೂ ಕೂಡ ರಕ್ಷಿಸಲ್ಪಟ್ಟನು. ಅವತಾರಗಳಲ್ಲೂ ಕೂಡ ಈ ಸ್ವಾತಂತ್ರ್ಯವು ವ್ಯಕ್ತವು. "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ | ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್" ಎಂಬಲ್ಲೂ ತಮ್ಮ ಸ್ವಾತಂತ್ರ್ಯವನ್ನೂ ಪ್ರಕಟಿಸಿರುತ್ತಾರೆ. ಇದು ಸಂಭವಾಮಿ ಯುಗೇಯುಗೇ ಎಂಬ ಸಂಕಲ್ಪದಿಂದ ಸ್ವಾತಂತ್ರ್ಯವು ವ್ಯಕ್ತವು. ನಾವು ಯಾವಾಗಲೂ ಸ್ವಾಮಿಗೆ ಶೇಷಭೂತರು. ಮತ್ತು ಕರ್ಮವಶ್ಯರಾದುದರಿಂದ ನಮಗೆ ಸ್ವಾತಂತ್ರ್ಯವಿಲ್ಲವು. ಆತನು ಅಕರ್ಮವಶ್ಯನು, ಸ್ವತಂತ್ರನು.

ಮುಂದೆ ಎರಡು ಕಾರಿಕೆಗಳ ಮೂಲಕ ಅವತಾರ ರಹಸ್ಯಾರ್ಥಗಳನ್ನು ಸಙ್ಗ್ರಹಿಸುತ್ತಾರೆ. – ಅವತಾರಸ್ಯ ಸತ್ಯತ್ವಮ್ - ಐಂದ್ರಜಾಲಿಕದಹಾಗೆ ಅಲ್ಲದೆ ಅವತಾರವು ಯಥಾರ್ಥವಾದುದೆಂಬ ಭಾವವು. ಹಾಗಲ್ಲದೆ ಮಿಥ್ಯಾವಾದರೆ ಈ ಅವತಾರ ಜ್ಞಾನವು ಮೋಕ್ಷಕ್ಕೆ ಸಾಧನಭೂತವಾದುದು ಹೇಗಾದೀತು? ಅಪಾರಮಾರ್ಥಿಕವಾದ ವಿಷಯಜ್ಞಾನವು ಸಂಸಾರಕ್ಕೆ ಹೇತುವು ; ಪರಮಾರ್ಥಜ್ಞಾನವು ಮೋಕ್ಷಕ್ಕೆ ಸಾಧನವು ; ಆದುದರಿಂದ ಯಾವಾಗ ಅವತಾರ ರಹಸ್ಯಜ್ಞಾನವು, ಗೀ. ೪-೯ ರಲ್ಲಿ "ಏವಂ ಯೋ ವೇತ್ತಿ ತತ್ವತಃ | ತ್ಯಕ್ತ್ವಾದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ"ಎಂದು ಮೋಕ್ಷಕ್ಕೆ ಸಾಧನನಾಯಿ ತೋರಿ ಆಗ ಅದು ಪರಮಾರ್ಥಜ್ಞಾನವೇ ಆಗಿರಬೇಕಾಗಿರುವದರಿಂದ ಶ್ರೀ ಯತಿವರ್ಯರು "ಬಹೂನಿ ಮೇ ವ್ಯತೀತಾನಿ" ಎಂಬ ಗೀ. ೪-೫) ವ್ಯಾಖ್ಯಾನದಲ್ಲಿ ಅನೇನ ಜನ್ಮನಃ ಸತ್ಯತ್ವಮುಕ್ತಮ್" ಎಂದು ಹೇಳಿರುತ್ತಾರೆ. ಇಲ್ಲಿ ಮೋಕ್ಷಕ್ಕೆ ಇದು ಸಾಧನವೆಂದರೆ ಅವ್ಯವಹಿತವಾದ ಉಪಾಯವೆಂಬ ಭಾವವಲ್ಲವು. ಸದ್ವಾರಕ ಸಾಧನನವು. ಶವಚ – ಎಂದು ದೃಷ್ಟಾಂತವಾಗಿ ಹೇಳಿರುವದರಿಂದಲೂ ಸತ್ಯವು.

ಅಜಹತ್ಸ್ವಸ್ವಭಾವತಾ – ಅವತಾರ ಕಾಲದಲ್ಲೂ ತನ್ನ ಸ್ವಭಾವಗಳನ್ನು ಬಿಡದೇ ಇರೋಣವು ; ಅವು ಯಾವುವೆಂದರೆ ಹೇಯಪ್ರತ್ಯನೀಕತ್ವವೂ, ಕಲ್ಯಾಣಗುಣಾಕರತ್ವವೂ, ಶುದ್ಧ ಸತ್ವಮಯತ್ವವು ಅಪ್ರಾಕೃತ ದಿವ್ಯಸ್ವರೂಪವು, ಅತಿಮಾನುಷಚೇಷ್ಟಿತವು. ಇದು (ಗೀ. ೪-೬ ರಲ್ಲಿ "ಅಜೋಽಪಿಸನ್ ಅವ್ಯಯಾತ್ಮಾ" ಭೂತಾನಾಮೀಶ್ವರೋಽಪಿಸನ್ | ಪ್ರಕೃತಿಂ ಸ್ವಾಮಧಿಷ್ಠಾಯ ಎಂಬ ಶ್ಲೋಕದಲ್ಲಿ

**ಧರ್ಮಗ್ಲಾನೌ ಸಮುದಯಃ ಸಾಧುಸಂರಕ್ಷಣಾರ್ಥತಾ ।**
**ಇತಿ ಜನ್ಮರಹಸ್ಯಂ ಯೋ ವೇತ್ತಿ ನಾಸ್ಯ ಪುನರ್ಭವಃ ॥ ೧೪೩ ॥**

---

ಉಪಪಾದಿತವು, ಇಲ್ಲಿ ಪ್ರಕೃತಿಂ ಸ್ವಾಂ ಅಧಿಷ್ಠಾಯ ಎಂಬುದಕ್ಕೆ ಶ್ರೀ ಯತಿವರ್ಯರು ಸ್ವಮೇವ ಸ್ವಭಾವಮಧಿಷ್ಠಾಯ ಎಂಬ ಭಾಷ್ಯವನ್ನು ಬರೆದಿರುತ್ತಾರೆ. ಸ್ವಾಮಿಯ ಅವತಾರ ಕಾಲದ ಶರೀರವು "**ನಭೂತಸಂಘಸಂಸ್ಥಾನೋ ದೇಹೋಸ್ಯ ಪರಮಾತ್ಮನಃ** ॥" ಎಂಬ ಶ್ರೀ ಪರಾಶರೋಕ್ತಿಯಿಂದ ವ್ಯಕ್ತವು, ಇಲ್ಲಿ **ಆತ್ಮಮಾಯಯಾ** ಎಂದರೆ ಐಂದ್ರಜಾಲಿಕ ವೃತ್ತಿಯಿಂದ ಎಂಬರ್ಥವಲ್ಲವು : ಸ್ವಸಙ್ಕಲ್ಪಮಾತ್ರದಿಂದಲೇ ಇನ್ನು ಯಾವುದರ ಅಪೇಕ್ಷೆ ಇಲ್ಲದೇ ಎಂಬರ್ಥವು. ಈ ಮೇಲಿನ ಶ್ಲೋಕದಿಂದಲೇ,

೩. **ಶುದ್ಧಸತ್ವಮಯತ್ವವೂ** ೪. **ಸ್ವೇಚ್ಛಾಮಾತ್ರನಿದಾನತಾ** ಉಪಪಾದಿಸಲ್ಪಟ್ಟವು. ಭಾರತ ಶಾನ್ತಿ ಪರ್ವದಲ್ಲಿ "**ತದೇವಕೃಷ್ಣೋ ದಾಶಾರ್ಹಃ ಶ್ರೀಮಾನ್ ಶ್ರೀವತ್ಸಲಕ್ಷಣಃ। ನಭೂತ ಸಂಘಸಂಸ್ಥಾನೋ ದೇಹೋऽಸ್ಯ ಪರಮಾತ್ಮನಃ** ಎಂಬಲ್ಲಿ ಅಪ್ರಾಕೃತ ಶರೀರವೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ವರಾಹ ಪುರಾಣದಲ್ಲೂ "**ನತಸ್ಯ ಪ್ರಾಕೃತಾಮೂರ್ತಿಃ ಮಾಂಸ ಮೇಧೋಸ್ಥಿ ಸಂಭವಾ**" ನಮ್ಮಹಾಗೆ ಮಾಂಸ ಮೇಧಸ್ಸೇ ಮೊದಲಾದವುಗಳನ್ನುಳ್ಳ ಶರೀರವಲ್ಲವೆಂದು ಬೋಧಿತವು. ಸ್ವಸಙ್ಕಲ್ಪಮಾತ್ರದಿಂದಲೇ ಸ್ವೀಕರಿಸಲ್ಪಟ್ಟ ಶರೀರವೆಂದು "**ಇಚ್ಛಾಗೃಹೀತಾಭಿಮತೋರುದೇಹಃ**" ಎಂಬ ಶ್ರೀ ಪರಾಶರವಾಕ್ಯದಿಂದ ವ್ಯಕ್ತವು. ನಮಗಾದರೋ ದೇಹಪ್ರಾಪ್ತಿಯು ಪ್ರಾರಬ್ಧಕರ್ಮಗಳಿಗನುಸಾರವಾಗಿ ಉಂಟಾಗುತ್ತದೆ. ಸರ್ವೇಶ್ವರನಾದರೋ ಸ್ವರಾಟ್, ಅಕರ್ಮವಶ್ಯನು. ಆದುದರಿಂದ ಸ್ವೇಚ್ಛೆಯೇ ಕಾರಣವು.

೫. ಧರ್ಮಗ್ಲಾನೌ ಸಮುದಯಃ - ಧರ್ಮಕ್ಕೆ ಹಾನಿಯುಂಟಾದಾಗ ಅವತಾರವು. ಇದು "**ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ**" (ಗೀ. ೪-೭) ಎಂಬಲ್ಲಿ ಹೇಳಲ್ಪಟ್ಟಿರುತ್ತದೆ.

೬. **ಸಾಧು ಸಂರಕ್ಷಣಾರ್ಥತಾ** - ಇದರಿಂದ ಅವತಾರ ಪ್ರಯೋಜನವು ಹೇಳಲ್ಪಟ್ಟಿತು. ಅವತಾರದ ಮುಖ್ಯೋದ್ದೇಶವು, ಸಾಧುಗಳ ಸಂರಕ್ಷಣವೇ. ಇದು ದುಷ್ಕೃತ ವಿನಾಶವಿಲ್ಲದೆ ಆಗಲಾರದಾದುದರಿಂದ ಆಗ ದುಷ್ಕೃತಿಗಳ ವಿನಾಶವೂ, ಅದರೊಂದಿಗೆ ಧರ್ಮಸಂಸ್ಥಾಪನೆಯೂ ನಡೆಯುತ್ತವೆ. **ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ** (ಗೀ. ೪.೮) ಎಂಬುದರ ಸಙ್ಗ್ರಹವು.

**ಇತಿ** - ಈ ಪ್ರಕಾರವಾಗಿ, ಎಂದರೆ ಈ ಆರು ಅರ್ಥಗಳುಳ್ಳದ್ದೆಂದು, **ಜನ್ಮರಹಸ್ಯಂ**-ಪರಮಪುರುಷನ ಅವತಾರ ರಹಸ್ಯವನ್ನು ಯಃ . ಯಾವ ಪ್ರಾಜ್ಞನು

## ಭಕ್ತ ಪ್ರಪನ್ನಯೋರವತಾರ ರಹಸ್ಯಜ್ಞಾನಸ್ಯ ಪ್ರಯೋಜನಮಾಹ

**ಇವ್ವವತಾರ ರಹಸ್ಯಜ್ಞಾನಮ್ ಸದ್ವಾರಕಪ್ರಪತ್ತಿನಿಷ್ಠನುಕ್ಕು ಉಪಾಯಪೂರಕಮ್. ಸ್ವತಂತ್ರಪ್ರಪತ್ತಿನಿಷ್ಠನುಕ್ಕು ಸ್ವತಂತ್ರನುಡೈಯ ಸೌಲಭ್ಯತ್ತೈ ಕ್ಕಾಟ್ಟುಮ್.**

---

**ವೇತ್ತಿ** - ಯಥಾರ್ಥವಾಗಿ ತಿಳಿದು ಉಪಾಸಿಸುವನೋ, **ಅಸ್ಯ** - ಅಂತವನಿಗೆ. **ನಪುನರ್ಭವಃ** - ಪುನಸ್ಸಂಸಾರವಿಲ್ಲವು. ಇದು "ಜನ್ಮಕರ್ಮಚಮೇದಿವ್ಯ ಮೇವಂ ಯೋ ವೇತ್ತಿ ತತ್ತ್ವತಃ। ತ್ಯಕ್ತ್ವಾದೇಹಂ ಪುನರ್ಜನ್ಮ ನೈತಿ ಮಾ ಮೇತಿ ಸೋಽರ್ಜುನ" (ಗೀ. ೪-೯) ಎಂಬುದರ ಸಜ್ಗ್ರಹವು. ಇಲ್ಲಿ **ವೇತ್ತಿ** ಎಂದರೆ ಬರೀ ತಿಳಿಯುವದು ಎಂದಿಷ್ಟು ಮಾತ್ರವೇ ಅರ್ಥವಲ್ಲವು. ಈ ಅವತಾರ ರಹಸ್ಯದ ಯಥಾರ್ಥವನ್ನು ತಿಳಿದು ಉಪಾಸಿಸುತ್ತಾನೋ ಅಥವಾ ಶರಣಾಗತಿಯನ್ನು ಅನುಷ್ಠಿಸುತ್ತಾನೋ ಅವನಿಗೆ ಪುನಸ್ಸಂಸಾರಭಯವಿಲ್ಲದೆ ನನ್ನನ್ನೇ ಬಂದು ಸೇರುತ್ತಾನೆಂಬ ಭಾವವು.

ಮುಂದಿನ ವಾಕ್ಯದಿಂದ ಈ ಅವತಾರ ರಹಸ್ಯಜ್ಞಾನವು ಹೇಗೆ ಎರಡು ವಿಧ ಉಪಾಯನಿಷ್ಠರಿಗೂ ಉಪಕಾರಕವೆಂಬುದನ್ನು ತೋರ್ಪಡಿಸುತ್ತಾರೆ.

## ಭಕ್ತಿಯೋಗನಿಷ್ಠರಿಗೂ ಪ್ರಪತ್ತಿನಿಷ್ಠರಿಗೂ ಅವತಾರರಹಸ್ಯಜ್ಞಾನದ ಪ್ರಯೋಜನವನ್ನು ತಿಳಿಸುತ್ತಾರೆ.

**ಇವ್ವವತಾರ ರಹಸ್ಯಜ್ಞಾನಮ್** - ಶ್ರೀ ಕೃಷ್ಣಭಗವಾನರವರು ೪ನೆಯ ಅಧ್ಯಾಯದ ಐದರಿಂದ ಒಂಭತ್ತನೆಯ ಶ್ಲೋಕಗಳಲ್ಲಿ ಉಪದೇಶಿಸಿರುವ ತಮ್ಮ ಅವತಾರ ರಹಸ್ಯಜ್ಞಾನವು, **ಸದ್ವಾರಕ ಪ್ರಪತ್ತಿನಿಷ್ಠನುಕ್ಕು** - ಶರಣಾಗತಿಯನ್ನು ಅಂಗವಾಗಿ ಭಾವಿಸಿ ಉಪಾಸಿಸುವನಿಗೆ, **ಉಪಾಯಪೂರಕಮ್** – ಉಪಾಯವನ್ನು ಪೂರ್ಣಮಾಡಿಕೊಡುತ್ತದೆ. ಎಂದರೆ ವಿನಿಷ್ಪನ್ನಸಮಾಧಿಯು ಆಗುತ್ತಾನೆ. ಅನಭ್ಯುಪಗತ ಪ್ರಾರಬ್ಧವಿದ್ದರೂ ಪುನರ್ಜನ್ಮವಿಲ್ಲದೆ ಆ ಜನ್ಮದಲ್ಲೇ ಮುಕ್ತಿಯನ್ನು ಹೊಂದುತ್ತಾನೆಂಬ ಅರ್ಥವು. **ವಿನಿಷ್ಪನ್ನ ಸಮಾಧಿಸ್ತು ಮುಕ್ತಿಂ ತತ್ರೈವಜನ್ಮನಿ। ಪ್ರಾಪ್ನೋತಿ ಯೋಗೀಯೋಗಾಗ್ನಿದಗ್ಧ ಕರ್ಮಚಯೋಽಚಿರಾತ್"** ಎಂಬ ಪರಾಶರೋಕ್ತಿಯು ಇರುತ್ತದೆ. ಅವತಾರರಹಸ್ಯಜ್ಞಾನದ ಮಹಿಮೆಯಿಂದ ಯಾವಾಗ ಭಕ್ತಿಯೋಗವು ಸಿದ್ಧಿಸಿ,ವಿನಿಷ್ಪನ್ನಸಮಾಧಿಯಾದನೋ ಆಗ ಆತನಿಗೆ ಅದೇ ಜನ್ಮದಲ್ಲೇ ಮುಕ್ತಿಯು ಎಂದು ಇಲ್ಲಿ ಹೇಳಲ್ಪಟ್ಟಿರುತ್ತದೆ. **ಸ್ವತಂತ್ರಪ್ರಪತ್ತಿನಿಷ್ಠನುಕ್ಕು**—ಈತನು ಅದ್ವಾರಕ ಪ್ರಪತ್ತಿನಿಷ್ಠನು,ಈ ಭರನ್ಯಾಸನಿಷ್ಠನಿಗಾದರೋ, **ಸ್ವತಂತ್ರನುಡೆಯ ಸೌಲಭ್ಯತ್ತೈ ಕ್ಕಾಟ್ಟುಮ್** - ಸ್ವತಂತ್ರನಾದ ಪರಮಪುರುಷನ ಸೌಲಭ್ಯವನ್ನು ಪ್ರದರ್ಶಿಸುತ್ತದೆ. ಈ **ಸ್ವಾತಂತ್ರ್ಯ**

**ಇಪ್ಪ್ರಕರಣಙ್ಗಳಿರಣ್ಡಿಲ್ ಸಿದ್ಧಮಾನ ಸೌಲಭ್ಯಮುಮ್, ಸ್ವಾತಂತ್ರ್ಯಮುಮ್, ಒನ್ರುಕೊನ್ರು, ತುಣೈಯಾಯಿರುಕ್ಕುಮ್,**

---

ಸೌಲಭ್ಯಗಳಿಂದ ಈತನಿಗೆ ಆಗತಕ್ಕ ಪ್ರಯೋಜನವೇನು? ಎಂದರೆ ಅವು ಈತನ ನಿರ್ಭರತ್ವ ನಿರ್ಭಯತ್ವಗಳಿಗೆ ಕಾರಣಭೂತವಾಗಿ ಮಹಾ ವಿಶ್ವಾಸದ ದಾರ್ಢ್ಯವನ್ನುಂಟುಮಾಡಿಕೊಡುತ್ತದೆ. ಚರಮಶ್ಲೋಕದ ಪೂರ್ವಾರ್ಧದ **ಮಾಂ** ಎಂಬುದು ಸೌಲಭ್ಯವನ್ನೂ, ಉತ್ತರಾರ್ಧದ **ಅಹಂ** ಎಂಬ ಪದವು ಸ್ವಾತಂತ್ರ್ಯವನ್ನೂ ಪ್ರದರ್ಶಿಸುತ್ತದೆ ಎಂಬ ಭಾವವು. ಹರೆಮೋದಾರಿಯಾಗಿ ಪರಮ ಶ್ರೇಯಸ್ಸನ್ನುಂಟುಮಾಡುವ ಪರಮಪುರುಷನಿಗೆ ಈ ಸೌಲಭ್ಯ ಸ್ವಾತಂತ್ರ್ಯಗುಣಗಳೆರಡೂ ಆವಶ್ಯಕವೋ? ಎಂದರೆ ಒಂದೊಂದೇ ಕಾರ್ಯಕಾರಿಯಾಗುವದಿಲ್ಲವು. ಸೌಲಭ್ಯವಿಲ್ಲದ ಸ್ವಾತಂತ್ರ್ಯವೂ, ಸ್ವಾತಂತ್ರ್ಯವಿಲ್ಲದ ಸೌಲಭ್ಯವೂ ಎರಡೂ ನಿರರ್ಥಕಗಳಾಗವುವೆಂದು ಮುಂದಿನ ಕಾರಿಕೆಗಳಿಂದ ಉಪದೇಶಿಸುತ್ತಾರೆ. ಆದುದರಿಂದ ಈ ಎರಡೂ ಒಂದಕ್ಕೊಂದು ಮಿಳಿತವಾಗಿದ್ದರೇನೇ ಪರಸ್ಪರ ಸಹಕಾರಿತ್ವದಿಂದ ವಿಶೇಷ ಫಲದಾಯಕವೂ ಅಲ್ಲದೆ ಈ ಪ್ರಪನ್ನನು ಮಾಡುವ ಕೈಂಕರ್ಯರೂಪ ಕಾರ್ಯವು ಹಿತವಾದುದಾಗುತ್ತದೆಂದು ಅದಕ್ಕೆ ಪೂರ್ವಭಾವಿಯಾಗಿ ಒಂದು ವಾಕ್ಯದಿಂದ ಬೋಧಿಸುತ್ತಾರೆ. **ಇಪ್ಪ್ರಕರಣಙ್ಗಳಿಲ್** - ಈ ಸಂದರ್ಭಗಳಲ್ಲಿ **ಇರಣ್ಡಿಲ್ ಸಿದ್ಧಮಾನ ಸೌಲಭ್ಯಮುಮ್ ಸ್ವಾತಂತ್ರ್ಯಮುಮ್** - "ಮಾಂ" "**ಅಹಂ**" ಎಂಬೆರಡು ಪದಗಳಿಂದ ಕ್ರಮವಾಗಿ ತೋರಿಬರುವ ಸೌಲಭ್ಯವೂ, ಸ್ವಾತಂತ್ರ್ಯವೂ ಸಹ, **ಒನ್ರುಕೊನ್ರು** - ಒಂದಕ್ಕೊಂದು, ಪರಸ್ಪರ **ತುಣೈಯಾಯಿರುಕ್ಕುಮ್** ಸಹಾಯಭೂತವಾಗಿರುತ್ತದೆ. ಇದರಿಂದ ಆತನಿಗೆ ಮಹಾ ದಯಾಳುವು ಎಂಬ ಸರ್ವೋತ್ಕೃಷ್ಟತೆಯೂ, ನಮಗೆ ನಿರತಿಶಯ ನಿಶ್ಶ್ರೇಯಸದ ಪ್ರಾಪ್ತಿಯೂ ಕಾರಣಭೂತವಾಗುತ್ತದೆಂಬ ಭಾವವು. ಅವತಾರವು ಸೌಲಭ್ಯದ ಕಾರ್ಯವಾದುದರಿಂದ ತಾನು ಪ್ರಪನ್ನನಿಗೆ ಅತಿ ಸುಲಭನೆಂಬುದು ತೋರಿಬರುತ್ತದೆ. ಅಂತಹ ಸೌಲಭ್ಯದಿಂದಲೇ ಮಾಂ ಶರಣಂ ವ್ರಜ ಎಂದು ಉಪದೇಶಿಸಿರುತ್ತಾರೆ. ಸುಲಭನಲ್ಲದೆ ದುರ್ಲಭನಾದರೆ ಹತ್ತಿರ ಹೋಗುವದೂ ಸಾಧ್ಯವಿಲ್ಲವು. ಆಶ್ರಯಣಕ್ಕೆ ಮಾರ್ಗವಿಲ್ಲವು. ಒಂದುವೇಳೆ ಕಷ್ಟಪಟ್ಟು ಆಶ್ರಯಿಸಿ ಪ್ರಪನ್ನನಾದರೂ ಈ ಪ್ರಪನ್ನನು ಆಶೆಪಡುವ ಕೈಂಕರ್ಯಗಳನ್ನು ಎಸಗಲು ಭಯಪಡುವನು ಅದು ಇಬ್ಬರಿಗೂ ಹೃದ್ಯವಾಗುವದಿಲ್ಲವು

**ಸ್ವತಂತ್ರನಾಗಿ ಸೌಲಭ್ಯವಿಲ್ಲದಿದ್ದರೆ ಆಶ್ರಯಣವೇ ಕಷ್ಟವು.**
**ಸೌಲಭ್ಯವಿದೆ ಸ್ವಾತಂತ್ರ್ಯವಿಲ್ಲವಾದರೆ ಫಲವೇ ಇಲ್ಲವು.**

---

ಮುಂದೆ ಈ ಅಭಿಪ್ರಾಯಗಳನ್ನೇ ಕಾರಿಕಾದ್ವಯದಿಂದ ಉಪದೇಶಿಸುತ್ತಾರೆ. **ಸ್ವತಂತ್ರಸ್ಯಾಪಿ** - ಸ್ವತಂತ್ರನಾಗಿದ್ದರೂ ಕೂಡ, **ದುರ್ಲಭಸ್ಯತು** - ಸೌಲಭ್ಯ

**ಸ್ವತಂತ್ರಸ್ಯ ದೌರ್ಲಭ್ಯೇ ಆಶ್ರಯಣ ಮೇವ ನ ಘಟತೇ. ಸುಲಭಸ್ಯಾ ಸ್ವಾತಂತ್ರ್ಯೇ ಆಶ್ರಯಣಫಲಂ ನಾಸ್ತಿ.**

---

**ಸ್ವತಂತ್ರಸ್ಯಾ ಪಿ ನೈವಸ್ಯಾದಾ ಶ್ರಯೋ ದುರ್ಲಭಸ್ಯ ತು**
**ಅಸ್ವತಂತ್ರಾ ತ್ಫಲಂ ನಸ್ಯಾತ್ಸುಲಭಾ ದಾಶ್ರಿತಾದಪಿ || ೧೪೪ ||**
**ಅಸ್ವತಂತ್ರೇ ನ ಕೈಙ್ಕರ್ಯಂ ಸಿದ್ಧ್ಯೇತ್ಸ್ವೈರಪ್ರಸಂಗತಃ |**
**ದುರ್ಲಭೇ ಸಾಧ್ಯಮಪ್ಯೇತನ್ನ ಹೃದ್ಯಂ ಲೋಕನೀತಿತಃ ||೧೪೫||**

---

ವಿಲ್ಲದೆ ದುರ್ಲಭನಾದರೆ, ಆಶ್ರಯೋ ನಸ್ಯಾತ್ - ಆಶ್ರಯವೇ ಇಲ್ಲವು ಎಂದರೆ ಯಾರೂ ಆಶ್ರಯಿಸುವದೇ ಇಲ್ಲವು. ಸುಲಭಾದಾಶ್ರಯಾದಪಿ-ಆಶ್ರಯಿಸಲ್ಪಟ್ಟವನು ಸುಲಭನಾಗಿದ್ದರೂ ಕೂಡ, ಅಂತವನು ಅಸ್ವತಂತ್ರಾತ್ - ಸ್ವತಂತ್ರನಲ್ಲದುದರಿಂದ ಫಲಂ ನ ಸ್ಯಾತ್ - ಫಲವೇ ಇಲ್ಲವು, ಎಂದರೆ ಫಲವನ್ನು ಕೊಡಲೇಲಾರನು ಸ್ವಾತಂತ್ರ್ಯವಿಲ್ಲದುದರಿಂದ. ರಾವಣನಿಗೆ ಸ್ವಾತಂತ್ರ್ಯವಿದ್ದರೂ ಸೌಲಭ್ಯವಿಲ್ಲದುದ ರಿಂದ ಬಂಧದಿಂದ ತಪ್ಪಿಸು ಎಂಬ ಸೀತೆಯ ಮನೋರಥವು ಈಡೇರಲಿಲ್ಲವು. ಹಾಗೆಯೇ ರಾವಣನಲ್ಲಿ ಸೌಲಭ್ಯವಿಲ್ಲದುದರಿಂದ ವಿಭೀಷಣನು ಅದಕ್ಕಾಗಿ ಆತ ನನ್ನು ಆಶ್ರಯಿಸುವದು ಕಷ್ಟವಾಯಿತು. ಬ್ರಹ್ಮರುದ್ರೇಂದ್ರಾದಿಗಳು ಸುಲಭರಾ ದರೂ ಕಾಕನ ಕೋರಿಕೆಯನ್ನೂ ಮತ್ತು ದೂರ್ವಾಸಋಷಿಗೆ ಉಂಟಾದ ಸುದರ್ಶನ ಚಕ್ರದ ಭಯನಿವರ್ತಿಯನ್ನೂ ಸ್ವಾತಂತ್ರ್ಯವಿಲ್ಲದುದರಿಂದ, ಉಂಟುಮಾಡಲು ಸಮರ್ಥರಾಗದೇ ಹೋದರು. ಸರ್ವೇಶ್ವರನಿಗೆ ಸೌಲಭ್ಯ ಸ್ವಾತಂತ್ರ್ಯವೆರಡೂ ಇರುವದರಿಂದ ವಿಭೀಷಣ ಸುಗ್ರೀವಾದಿಗಳ ಕೋರಿಕೆಗಳು ಸಫಲವಾದವು.

ಈ ಕಾರಿಕೆಯಿಂದ ಈತನು ಮಾಡುವ ಕೈಂಕರ್ಯವು ಸುಲಭನಾಗಿರುವ ಅಸ್ವತಂತ್ರನಲ್ಲೂ, ದುರ್ಲಭನಾದ ಸ್ವತಂತ್ರನಲ್ಲೂ, ಹೇಗೆ ಪರಿಣಮಿಸುತ್ತದೆಂಬು ದನ್ನು ತಿಳಿಸುತ್ತಾರೆ. ಅಸ್ವತಂತ್ರೇ . ಸ್ವಾತಂತ್ರ್ಯವಿಲ್ಲದವನ ವಿಷಯದಲ್ಲಿ ಕೈಂಕರ್ಯಂ - ಕೈಂಕರ್ಯವೇ, ನಸಿದ್ಧ್ಯೇತ್ - ಸಿದ್ಧಿಸುವದಿಲ್ಲವು. ಏಕೆಂದರೆ ? ಅಂತವನಿಗೆ ಯಾರೂ ಕೈಂಕರ್ಯಮಾಡಲಾರರು. ಸ್ವೈರಪ್ರಸಂಗತಃ - ತನ್ನ ಸಙ್ಕಲ್ಪವೇ ಹಾಗಿರುವದರಿಂದ ; ಈತನು ಏನನ್ನೂ ಮಾಡಲು ಯೋಗ್ಯ ನಲ್ಲವು, ಸ್ವಾತಂತ್ರ್ಯವೇ ಇಲ್ಲವು. 'ಇಂತವನು ನಮಗೆ ಏನು ಪ್ರಯೋಜನವ ನ್ನುಂಟುಮಾಡುವನು ? ಅಂತವನಿಗೆ ಕೈಂಕರ್ಯಮಾಡುವದು ನಿರರ್ಥಕವೆಂದು ಭಾವಿಸಿದವನಾಗಿ ಕೈಂಕರ್ಯವನ್ನು ಎಂದಿಗೂ ಮಾಡುವದಿಲ್ಲವೆಂಬುದು ತಾತ್ಪರ್ಯವು.

ಕೈಂಕರ್ಯವನ್ನು ಮಾಡುವವನು ಮೃದುಪ್ರಜ್ಞನಾಗಿದ್ದ ಪಕ್ಷದಲ್ಲಿ ಒಂದು ವೇಳೆ ತನ್ನ ಸ್ವಾಮಿಯು ಅಸ್ವತಂತ್ರನಾಗಿದ್ದರೂ ಕೈಂಕರ್ಯ ವನ್ನು ಮಾಡಿದರೂ ಮಾಡಬಹುದು. ಕಠಿನಸ್ವಭಾವನಾದವನು, ಇಂತಹ ಅಸ್ವ

ತಂತ್ರ ಸ್ವಾಮಿಗೆ ನಾನು ಕೈಂಕರ್ಯ ಮಾಡದೇ ಇದ್ದ,ಪಕ್ಷದಲ್ಲಿ ಏನನ್ನು ಮಾಡ ಬಲ್ಲನು ಎಂದು ಭಯರಹಿತನಾಗಿ ಕೈಂಕರ್ಯವನ್ನು ಎಂದಿಗೂ ಮಾಡುವದಿಲ್ಲ ವೆಂಬುದೂ ಸೂಚಿತವು.

**ದುರ್ಲಭೇ** - ಸ್ವತಂತ್ರನೇನೋ ಆಗಿರಬಹುದು. ಆದರೆ ಸೌಲಭ್ಯವಿಲ್ಲದುದ ರಿಂದ ದುರ್ಲಭನಾಗಿದ್ದರೆ, ಸಾಧ್ಯಮಪಿ - ಕೈಂಕರ್ಯ ಮಾಡಲ್ಪಟ್ಟರೂ ಕೂಡ, **ಏತತ್** - ಈ ಕೈಂಕರ್ಯವು, **ಲೋಕನೀತಿತಃ** – ಲೋಕನೀತಿಯ ಪ್ರಕಾರ **ನಹೃದ್ಯಮ್** - ಆತನಿಗೆ ಇಷ್ಟವಿಲ್ಲದೇ ಹೋಗುತ್ತದೆ ; ಈ ಕೈಂಕರ್ಯ ಮಾಡು ವವನಿಗೂ ಸಹಕೈಂಕರ್ಯಮಾಡುವದರಲ್ಲಿ ಹರ್ಷವಿರುವದಿಲ್ಲವು ದುರ್ಲಭನಾದ ಪ್ರಯುಕ್ತ. ಆದುದರಿಂದ ಸ್ವಾತಂತ್ರ್ಯ ಸೌಲಭ್ಯವೆರಡೂ ಇರುವ ಅಧಿಕಾರಿಯೇ ಆಶ್ರಯಣೀಯನು ; ಅಂತವನೇ ಫಲಪ್ರದನಾಗಲು ಅರ್ಹನು. ಅಂತವನನ್ನೇ ಕೈಂಕರ್ಯಮಾಡಿ ಮೆಚ್ಚಿಸಬಹುದು, ಕೈಂಕರ್ಯ ಮಾಡುವದೂ ಸಹ ತುಂಬಾ ಇಷ್ಟವಾಗುವದು, ಎಂಬ ತಾತ್ಪರ್ಯವು. ಸದಾ ಕೋಪಿಸುತ್ತಿರುವ ಕಠಿಣ ಸ್ವಭಾವನಾದ ಅಧಿಕಾರಿಯ ಹತ್ತಿರಕ್ಕೆ ಹೋಗಲು ಗುಮಾಸ್ತನು ಅಂಜುವನು ; ಅಂತಹ ಕಠಿಣಸ್ವಭಾವವುಳ್ಳ ಪಿತಾವಿನ ಹತ್ತಿರಕ್ಕೆ ಮಗನು ಹೋಗಲು ಭಯ ಪಡುವನು. ಹೀಗಿರುವ ಸಂದರ್ಭದಲ್ಲಿ ಕೈಂಕರ್ಯವೆಲ್ಲಿಯದು ? ಇವರುಗಳಿಗೆ ಕೈಂಕರ್ಯಮಾಡಲು ಯಾರಿಗೂ ಮನಸ್ಸೇ ಇಲ್ಲವು. ಒಂದು ವೇಳೆ ಮಾಡಿದರೂ ಆ ಕಠಿಣ ಸ್ವಭಾವನಾದ ಅಧಿಕಾರಿಯಾಗಲಿ, ಪಿತಾವಾಗಲಿ ಸಂತೋಷಿಸನು. ಆದುದರಿಂದಲೇ **ಲೋಕನೀತಿತಃ** - ಎಂಬ ಪ್ರಯೋಗವು. ಆದರೆ ಶಾಸ್ತ್ರವಿಷ ಯಕ್ಕೂ ಲೋಕನ್ಯಾಯಕ್ಕೂ ಏನು ಸಂಬಂಧವು ? ಈ ಸಂದರ್ಭದಲ್ಲಿ ಲೋಕ ನ್ಯಾಯವನ್ನು ತರಬಹುದೋ ? ಎಂದರೆ ಶ್ರೀ ಯತಿವರ್ಯರ ಅಭಿಪ್ರಾಯಾನು ಸಾರ ವೇದದಲ್ಲಿ ಹೇಳಿರುವದು ಲೋಕನ್ಯಾಯಕ್ಕೆ ಎಂದಿಗೂವಿರುದ್ಧವಾಗಿ ಅಲ್ಲ ವೆಂದು ತಿಳಿಯತಕ್ಕದ್ದು. ಸೌಲಭ್ಯವಿಲ್ಲದೆ ಬಹು ದೂರದಲ್ಲಿರುವ ರಾಜನಿಗೆ ಮಾಡುವ ಸ್ತುತಿಯು ಸ್ತೋತಾವಿಗೆ ಏನೊಂದು ಪ್ರಯೋಜನಕಾರಿಯಾಗಲಾರದು. ಆತನು ಎಂದಿಗೂ ಪ್ರೀತನಾಗುವದಿಲ್ಲವು. ರಾಜನಲ್ಲಿ ಸೌಲಭ್ಯವಿಲ್ಲದೆ ಹೋದರೆ ಪ್ರಜೆಗಳ ದುಃಖಗಳನ್ನು ಎಂದಿಗೂ ತಿಳಿಯಲಾರನು. ಬೆಳೆದ ಸಾಮಾನುಗಳನ್ನು ರೈತರು, ಕೃಷ್ಣಾನದಿ, ತುಂಗಾ ಭದ್ರ ನದಿಗಳಿಗೆ ಸೇತುವೆಗಳಿದ್ದರೆ ಸುಲಭವಾಗಿ ತಮ್ಮ ಗಾಡಿಗಳ ಮೂಲಕ ರವಾನಿಸಬಹುದು. ಹೆಚ್ಚಾದ ರೈಲು ಛಾರ್ಜುಗಳನ್ನು ಕೊಡಲು ಅವರಿಗೆ ಗತಿಯಿಲ್ಲವು. ಈ ವಿಷಯವನ್ನು ಹೇಳಿಕೊಳ್ಳಲು ಸಾಧ್ಯವಿಲ್ಲದ ಅಧಿಕಾರಿಯು ಸುಲಭನಲ್ಲದೆ ಹೋದರೆ, ರೈತರಿಗೆ ಹೇಗೆ ಆಶ್ರಯಣೀಯನಾಗನೋ ಹಾಗೆ ಎಂಬ ಭಾವವು. ಲಾರ್ಡ್ ರಿಪನ್, ಇರ್ವಿನ್ ಮೊದಲಾದ ಪಾಶ್ಚಾತ್ಯರೂ ಕೂಡ ತಮ್ಮ ಸೌಲಭ್ಯದಿಂದ ಪ್ರಜಾನುರಾಗವನ್ನು ಸಂಪಾದಿಸಿಕೊಂಡು ದೇಶಕ್ಕೆ ಹಿತವ

**ಅಗ್ಗೈಯಾಲೇ ಕೇವಲ ಸುಲಭಮಾನ ತೃಣಾದಿಗಳೈಪ್ಪೋಲನ್ರಿಕ್ಕೇ ಶ್ಲಾಘ್ಯಮಾಯ್, ದುರ್ಲಭಮಾನ ಮೇರುವೈಪ್ಪೋಲುಮನ್ರಿಕ್ಕೇ ಸುಲಭನುಮಾಯ್ ಪರನುಮಾನ ಶರಣ್ಯನ್ ಆಶ್ರಯಣೀಯನುಮಾಯ್ ಪ್ರಾಪ್ಯನುಮಾಕಿರ್ರಾನ್. ಇವ್ವಿರಣ್ಡು ಪದತ್ತಿಲುಮ್ ಸರ್ವರಕ್ಷಕನಾನ ಸರ್ವಶೇಷೀ ರಕ್ಷಣ**

---

ನ್ನುಂಟುಮಾಡಿದರು. ಕೆಲವರು ಸೌಲಭ್ಯವಿಲ್ಲದುದರಿಂದ ಪ್ರಜೆಗಳಿಗೆ ಹಿತರಲ್ಲದೇ ಹೋದರು. ಶ್ರೀ ರಾಮಚಂದ್ರಪ್ರಭುವಿನ ಗುಣಗಳನ್ನು ವರ್ಣಿಸುವ ಸಂದರ್ಭದಲ್ಲಿ, "**ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ**" ಎಂದೂ, "**ಅನುರಕ್ತಃ ಪ್ರಜಾಭಿಶ್ಚ ಪ್ರಜಾಶ್ಚಾಪ್ಯನುರಜ್ಯತೇ**" ಎಂದೂ, "**ವ್ಯಸನೇಷು ಮನುಷ್ಯಾಣಾಂ ಭೃಶಂಭವತಿ ದುಃಖಿತಃ**" ಎಂದೂ, "**ಶಾಂತ್ಯೈಸ್ಸರ್ವ ಪ್ರಜಾಕಾಂತ್ಯೈಃ ಪ್ರೀತಿಸಂಜನನೈರ್ನೃಣಾಮ್ । ಗುಣೈರ್ವಿರುರುಚೇ ರಾಮೋ**" ಎಂದೂ ಹೀಗೆಲ್ಲಾ ಹೇಳಲ್ಪಟ್ಟಿರುವದರಿಂದ ಸೌಲಭ್ಯವು ವ್ಯಕ್ತವು. ಶ್ರೀಕೃಷ್ಣಭಗವಾನ್‌ರವರು ತಾವೇ ಗೀತೆಯಲ್ಲಿ "**ತಸ್ಯಾಹಂ ಸುಲಭಃ ಪಾರ್ಥನಿತ್ಯಯುಕ್ತಸ್ಯ ಯೋಗಿನಃ**"(೮-೧೪)ಎಂದು ಹೇಳಿಕೊಂಡಿರುತ್ತಾರೆ. ಈ ಗುಣವೇ "**ಕಣ್ಣಿ ನುಣ್ ಶಿರುತಾಂಬಿನಾಲ್**" ಎಂಬ ಮಧುರಕವಿ ಪಾಶುರದಲ್ಲೂ, "**ಗೋಪ್ಯಾದದೇತವಕ್ತ್ರೈತಾಗಸಿ**" ಎಂಬ ಭಾಗವತ ಶ್ಲೋಕದಲ್ಲೂ ಕೊಂಡಾಡಲ್ಪಟ್ಟಿರುತ್ತದೆ. ಕೃಷ್ಣಾವತಾರದಲ್ಲೆಲ್ಲಾ ಈ ಪರಮಪುರುಷನ ಗುಣವೇ ಪ್ರದರ್ಶಿತವು. ಗೋಪಿಕಾಸ್ತ್ರೀಯರೂ, ವಿದುರ, ಉದ್ಧವ, ಅಕ್ರೂರಾದಿಗಳೆಲ್ಲಾ ಇದಕ್ಕೆ ಸಾಕ್ಷಿಗಳು.

ಅದುದರಿಂದ ನಿಗಮನಮಾಡಿ ಹೇಳುತ್ತಾರೆ. **ಅಗ್ಗೈಯಾಲೇ** - ಮೇಲೆ ನಾವು ಉಪಪಾದಿಸಿದ ರೀತಿಯಲ್ಲಿ ಸರ್ವಶಕ್ತನ ಸ್ವಾತಂತ್ರ್ಯವೂ ಸೌಲಭ್ಯವೂ ಎರಡೂ ಆಶ್ರಯಣೀಯತ್ವಕ್ಕೆ ಮುಖ್ಯವಾದುದರಿಂದ, **ಕೇವಲ ಸುಲಭಮಾನತೃಣಾದಿಗಳೈಪ್ಪೋಲನ್ರಿಕ್ಕೇ** - ಯಾವುದನ್ನು ಮಾಡಲು ಶಕ್ತಿ ಸ್ವಾತಂತ್ರ್ಯಗಳಿಲ್ಲದಿರುವ ಸುಲಭವಾಗಿರುವ ಹುಲ್ಲುಕಡ್ಡಿ ಮೊದಲಾದುವುಗಳ ಹಾಗಲ್ಲದೆ, **ಶ್ಲಾಘ್ಯಮಾಯ್** - ಪರತ್ವ ಸ್ವಾತಂತ್ರ್ಯಗಳಿಂದ ಶ್ಲಾಘ್ಯವಾಗಿ, **ದುರ್ಲಭಮಾನ ಮೇರುವೈಪ್ಪೋಲುಮನ್ರಿಕ್ಕೇ**-ಹತ್ತಿರಕ್ಕೆ ಹತ್ತಿಹೋಗಲು ಕಷ್ಟವಾಗಿ ಸೌಲಭ್ಯವಿಲ್ಲದ ಮೇರುಪರ್ವತದ ಹಾಗೆಯೂ ಅಲ್ಲದೆ ಸುಲಭನಾಗಿಯೂ, **ಪರನುಮಾನ** - ಪರತ್ವಸ್ವಾತಂತ್ರ್ಯಗಳನ್ನುಳ್ಳ, **ಶರಣ್ಯನ್** - ಸರ್ವರಕ್ಷಕನು, **ಆಶ್ರಯಣೀಯನುಮಾಯ್** - ಶ್ರೇಯಃಪ್ರಾಪ್ತಿಗಾಗಿ ಆಶ್ರಯಿಸಲು ಯೋಗ್ಯನಾಗಿಯೂ, ಪ್ರಾಪ್ಯನಾದವನಾಗಿಯೂ, **ಆಗಿರ್ರಾನ್** - ಆಗಿರುತ್ತಾನೆ. **ಇವ್ವಿರಣ್ಡು ಪದತ್ತಿಲುಮ್** - "**ಮಾಂ ಅಹಂ**" ಎಂಬ ಎರಡು ಪದಗಳಲ್ಲೂ, **ಸರ್ವರಕ್ಷಕನಾನ** - ಆಶ್ರಿತರಿಗೆಲ್ಲ ರಕ್ಷಕನಾದ, **ಸರ್ವಶೇಷಿಯಾದ** ಶ್ರಿಯಃಪತಿಯು, **ರಕ್ಷಣತ್ತುಕ್ಕು** - ರಕ್ಷಿಸುವದಕ್ಕಾಗಿ, **ಅವಸರಂಪಾರ್ತು** - ಸಮಯವನ್ನು ನಿರೀಕ್ಷಿಸಿಕೊಂಡು, **ನಿರ್ಕಿರನಿಲೈ**-ನಿಂತಿರುವ ಸ್ಥಿತಿಯನ್ನು, **ತೋತ್ತುಕಿರದು** - ಪ್ರದರ್ಶಿಸುತ್ತದೆ. ಸರ್ವ ಸ್ವತಂತ್ರ

ತ್ತುಕ್ಕು ಅವಸರಂ ಪಾರ್ತು ನಿರ್ಕಿರ ನಿಲೈತೋತ್ತುಗಿರದು. ಇಪ್ಪಡಿ ಅವಸರ ಪ್ರತೀಕ್ಷನಾನ ಈಶ್ವರರ್ (೧) "ರಕ್ಷ್ಯ(ಕ್ಷಾ) ಪೇಕ್ಷಾಂ ಪ್ರತೀಯತೇ" ಎನ್ಗಿರ ಪಡಿಯೇ ಎನ್ನೋ ನಮ್ಮೈ ಇವರ್‌ಗಳ್ ಅಪೇಕ್ಷಿಪ್ಪದೆನ್ಗಿರ ಅಭಿಪ್ರಾಯ ತ್ತಾಲೇ ಅಭಿಮುಖನಾಯ್ ನಿರ್ಕಿರ ನಿಲೈ "ಮಾಂ" ಎನ್ಗಿರ ಪದತ್ತಾಲೇ ಸೂಚಿತದ್ ; ಎನ್ನೈ ನಾಮ್ ಇವರ್‌ಗಳ್ ಅಳುಕ್ಕೈಕ್ಕಳೈತ್ತಿನ ಅಭರಣತ್ತೈ ಪ್ಪೋಲೇ ಅಂಗೀಕರಿಪ್ಪರೆನ್ಗಿರ ಅಭಿಪ್ರಾಯತ್ತಾಲೇ ಸತ್ವರನಾಯ್ ಈಶ್ವರ ನಾಯ್ ತರ ಪೇರಾಗ ಫಲಂ ಕೊಡುಕ್ಕ ನಿರ್ಕಿರನಿಲೈ "ಅಹಂ" ಎನ್ಗಿರ ಪದತ್ತಾಲೇ ಕಾಟ್ಟಪ್ಪಡುಗಿರದು.

---

ನಾಗಿ ಪರತ್ವ ಸೌಲಭ್ಯಗಳಿಂದ ಶೋಭಿಸುವ ದಯಾರ್ದ್ರನಾದ ಶ್ರಿಯಃಪತಿಯೇ ನಮಗೆಲ್ಲಾ ಸರ್ವ ರಕ್ಷಕನಾಗಿಯೂ, ಸರ್ವ ಶೇಷಿಯಾಗಿಯೂ ರಕ್ಷಿಸಲು ಸಮಯ ವನ್ನು ಎದುರು ನೋಡುತ್ತಾನೆಂಬುದು ಈ ಮಾಂ ಅಹಂ ಎಂಬೆರಡು ಪದಗಳಿಂದ ತೋರಿಬರುತ್ತದೆಂದು ಹೇಳಿದರು. ಮುಂದಿನ ವಾಕ್ಯದಿಂದ ಈ ಎರಡು ಪದಗಳಲ್ಲಿ ಯಾವ ಪದವಲ್ಲಿ ಯಾವ ಅರ್ಥವು ತೋರಿಬರುತ್ತದೆ? ಎಂದರೆ ಮಾಂ - ಎಂಬ ಪದದಲ್ಲೂ, ಫಲಪ್ರಧಾನಸಮಯದ ನಿರೀಕ್ಷಣೆಗೆ ಬೇಕಾದ ಅಭಿಮುಖ್ಯವೂ ಫಲ ವನ್ನು ಕೊಡುವ ದಾತಾ ಎಂದು ತೋರುವ ಅಹಂ - ಎಂಬ ಪದದಲ್ಲೂ, ತೋರಿ ಬರುತ್ತದೆ ಎಂದು ಮುಂದಿನ ವಾಕ್ಯದಿಂದ ಉಪದೇಶಿಸುತ್ತಾರೆ.—

ಇಪ್ಪಡಿ - ಹಿಂದೆ ಉಪಪಾದಿಸಿದಹಾಗೆ, ಅವಸರಪ್ರತೀಕ್ಷನಾದ ಈಶ್ವರರ್- ಸಮಯವನ್ನು ಎದುರು ನೋಡುವ ಸರ್ವೇಶ್ವರನು, ಸಮಯವು ಯಾವುದೆಂದರೆ, ಚೇತನನು ನನ್ನನ್ನು ಸಿದ್ಧೋಪಾಯನನ್ನಾಗಿ ಭಾವಿಸಿ ಸಾಧ್ಯೋಪಾಯವಾದ ಶರಣಾಗತಿಯನ್ನು ಅನುಷ್ಠಿಸಿದರೆ ಸಾಕೆಂದು ಅವಸರ ಪ್ರತೀಕ್ಷೆಯು, " ರಕ್ಷಾ ಪೇಕ್ಷಾಂ ಪ್ರತೀಯತೇ " "ನನಗೆ ಯಾರೂ ರಕ್ಷಕರಿಲ್ಲವು, ನೀನೇ ರಕ್ಷಕನು, ಆದುದರಿಂದ ನೀನೇ ರಕ್ಷಿಸಬೇಕೆಂಬ ಪ್ರಾರ್ಥನೆಯನ್ನು ತೋರ್ಪಡಿಸುತ್ತದೆ. ಎನ್ಗಿರಪಡಿಯೇ ಎನ್ನೋ-ಎಂಬಲ್ಲಿ ಹೇಳಿರುವಹಾಗೆ ಅಲ್ಲವೇ, ನಮ್ಮೈ ಇವರ್ ಗಳ್ ಅಪೇಕ್ಷಿತ್ತು - ನಮ್ಮನ್ನು ಈ ಪ್ರಪನ್ನರು ಅಪೇಕ್ಷಿಸುವರು, ಎನ್ಗಿರ ಅಭಿಪ್ರಾಯತ್ತಿಲೇ - ಎಂಬ ಅಭಿಪ್ರಾಯದಿಂದ, ಅಭಿಮುಖನಾಯ್ - ಅಂತಹ ಪ್ರಪನ್ನರ ಅನುಗ್ರಹಕ್ಕಾಗಿ ಅಭಿಮುಖನಾಗಿ, ನಿರ್ಕಿರನಿಲೈ - ನಿಂತಿರುವ ಸ್ಥಿತಿಯು ಮಾಂ ಎನ್ಗಿರ ಪದತ್ತಾಲೇ - ಎಂಬುವ ಪದದಿಂದ, ಸೂಚಿತಮ್ - ಸೂಚಿಸ ಲ್ಪಟ್ಟಿತು. ಎನ್ನೈ - ಎಂಬದಾಗಿ, ಇವರ್‌ಗಳೈ - ಈ ಪ್ರಪನ್ನರನ್ನು, ಅಳುಕ್ಕೈ ಕ್ಕಳೈತ್ತಿನ - ಮಾಲಿನ್ಯವನ್ನು ಹೋಗಲಾಡಿಸುವ ಹಾಗೆ ಚೆನ್ನಾಗಿ ತೊಳೆದ, ಆಭರ ಣತ್ತೈ -ಪ್ಪೋಲೇ - ಆಭರಣದಹಾಗೆ ಅಙ್ಗೀಕರಿಪ್ಪರೆನ್ಗಿರ - ಸ್ವೀಕರಿಸುವರು

---

(೧) ಲಕ್ಷ್ಮೀತಂತ್ರ ೧೭-೭೯.

ಎಂಬ ಅಭಿಪ್ರಾಯೆತ್ತಾಲೇ - ಅಭಿಪ್ರಾಯದಿಂದ, ಶತ್ತರನಾಯ್ - ತ್ವರಿಪಡಿಸುವ, ತ್ತಪೇರಾಗ - ತಾನೇ ಸ್ವತಂತ್ರಿಸಿ ನಿಂತು, ಫಲಂಕೊಡುಕ್ಕನಿರ್ಕಿರನಿಲೈ- ತಾನೇ ಫಲವನ್ನು ಕೊಡುವದಕ್ಕಾಗಿ ಕಾದಿರುವಸ್ಥಿತಿಯು,ಅಹಂಎಞ್ಗಿರಪದತ್ತಾಲೇ ಕಾಟ್ಟಪ್ಪಡುಗಿರದು – "ಅಹಂ" ಎಂಬ ಶಬ್ದದ ಮೂಲಕವಾಗಿ ತೋರಿಸಲ್ಪಡುತ್ತದೆ. ಮೋಕ್ಷಯಿಷ್ಯಾಮಿ ಎಂಬ ಉತ್ತಮ ಪುರುಷಕ್ರಿಯೆಯಿಂದಲೇ ಅಹಂ ಎಂಬ ನಾಮಪದವು ತೋರಿಬರುವಾಗ ಅಹಂ – ಎಂಬ ಬೇರೆ ಪದದ ಆವಶ್ಯಕತೆ ಏನು ? ಎಂದರೆ ಈ ಅಹಂ ಎಂಬ ಪದದಿಂದ ವಿಶೇಷಾರ್ಥವು ದ್ಯೋತವಾದುದರಿಂದ, ಇದರ ಆವಶ್ಯಕತೆಯುಂಟು. ನಾನೇ ಸ್ವತಃ ನಿಂತು, ಇನ್ನೊಬ್ಬರ ಮೂಲಕವೂ ಇಲ್ಲದೆ ಇತರರೇನಾದರೂ ಪ್ರತಿಬಂಧಕಮಾಡಿದರೂ ಕೂಡ ಪರಿಗಣಿಸದೆ ಅಙ್ಗೀಕರಿಸುವೆನು, ಸುಗ್ರೀವಾದಿಗಳು ವಿಭೀಷಣನ ಪರಿಗ್ರಹಕ್ಕೆ ತೊಂದರೆ ಮಾಡಿದರೂ ಅದನ್ನು ಪರಿಗಣಿಸದೇ "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ" ಎಂದು ಹೇಗೆ ಸ್ವೀಕರಿಸಿದೆನೋ, ಹಾಗೆಯೇ ಚೇತನನು ಆಶ್ರಯಿಸಿದರೆ ಸಾಕು ಎಂದು ಕಾದಿದ್ದು, ಆತನನ್ನು ಪರಿಗ್ರಹಿಸತಕ್ಕವನು ಎಂದು ಈ ಅಹಂ ಎಂಬ ಶಬ್ದವು ವ್ಯಕ್ತಪಡಿಸುತ್ತದೆ. ಸ್ವಾಮಿಯು ಅಹಂ ಎಂದು ಎದೆಯನ್ನು ಮುಟ್ಟಿ ಪ್ರತಿಜ್ಞೆಯನ್ನು ಮಾಡುವಹಾಗೆ ತೋರುತ್ತದೆ. ಒಬ್ಬನು ಸೊಗಸಾಗಿರುವ ತನ್ನ ಆಭರಣವನ್ನು ಎರವಲಾಗಿ ತೆಗೆದುಕೊಂಡು ಹೋಗಿ, ಅದನ್ನು ತುಂಬಾ ಕೊಳೆಯೆಲ್ಲಾ ಹತ್ತುವಹಾಗೆ ಉಪಯೋಗಿಸಿಬಿಟ್ಟು, ಹಿಂತಿರುಗಿ ಅದನ್ನು ತಂದು ಕೊಟ್ಟರೆ ಅದನ್ನು ಪರಿಗ್ರಹಿಸದೆ, ನಾನು ಕೊಟ್ಟಾಗ ಹೇಗೆ ಧಳಥಳಾವೆಂದು ಪ್ರಕಾಶಿಸುತ್ತಾ ಇತ್ತು, ಈಗ ಮಶಿಮುಚ್ಚಿದಹಾಗೆ ಇದೆ, ಆದುದರಿಂದ ನಾನು ತೆಗೆದುಕೊಳ್ಳುವದಿಲ್ಲವು, ಅದನ್ನು ಚೆನ್ನಾಗಿ ತೊಳೆದು ತಂದುಕೊಟ್ಟರೆ ತೆಗೆದುಕೊಳ್ಳುವೆನು ಎಂದು ತಿರಸ್ಕರಿಸಿ, ಅದು ಪರಿಶುದ್ಧವಾದ ನಂತರ ಹೇಗೆ ಸ್ವೀಕರಿಸುವನೋ ಹಾಗೆಯೇ ಈ ಸರ್ವೇಶ್ವರನೂ ಸಹ ಎಂದು ತಿಳಿಯತಕ್ಕದ್ದು. ಈ ಆತ್ಮನು ಸರ್ವೇಶ್ವರನ ಸ್ವಯಂಪ್ರಕಾಶವಾಗಿರುವ ಮಹಾಜ್ಯೋತಿಸ್ಸಿನಿಂದ ಕೂಡಿರುವ ಆಭರಣವು ; ಅದನ್ನು ಈ ಚೇತನನು ತನ್ನದೆಂದೇ ಭಾವಿಸಿ ತನ್ನ ದುಷ್ಕೃತ್ಯವೆಂಬ ಕೆಸರಿನಲ್ಲಿ ಜನ್ಮಜನ್ಮಗಳಲ್ಲೂ ಬೀಳಿಸಿ, "ಅಳುಕ್ಕು" ಹತ್ತಿಕೊಳ್ಳುವಹಾಗೆ ಮಾಡಿರುತ್ತಾನೆ ; ಅಂತಹ ಸ್ಥಿತಿಯಲ್ಲಿ ಸರ್ವೇಶ್ವರನು ಅದನ್ನು ಸ್ವೀಕರಿಸುವದಿಲ್ಲವು. ಅದಕ್ಕೆ ಶರಣಾಗತಿ ಎಂಬ ಸಂಸ್ಕಾರದ ಮೂಲಕ. "ಸ್ವಚ್ಛಸ್ವಾದುಸ್ವದಾವದಾತಸುಭಗಾಂ ದೈವಾದಯಂ ದೇಹಭೃನ್ಮಾಲಿನ್ಯ ಪ್ರಶಮಾಯ ಮಾಧವದಯಾ ಮಂದಾಕಿನೀಂ ವಿಂದತಿ" (೧೪೪೮ನೆಯ ಪುಟವನ್ನು ನೋಡಿ) ಎಂಬಲ್ಲಿ ಹೇಳಿರುವ ಹಾಗೆ ದೇವಗಂಗೆಯ ನಿರ್ಮಲವಾಗಿ ಸ್ವಾದುವಾದ ನದಿಯ ನೀರಿನಲ್ಲಿ ತೊಳೆದರೆ ಆಗೀಗ ಪರಿಗ್ರಹಿಸುವನು ಎಂಬ ಭಾವವನ್ನು, ಅಳುಕ್ಕುಕ್ಕಳಿತ್ತಿನ ಆಭರಣತ್ತೈ

ಪ್ರೋಲಿ ಎಂಬ ಉಪಸಂಪಿಯಿಂದ ತಿಳಿಸಿರುತ್ತಾರೆ- ಹೀಗೆ ಶರಣಾಗತಿಯ ಮೂಲಕ ಪಾಪಗಳು ತೊಲಗಿದರೇನೇ ಆಗ "ಸ್ವೇನರೂಪೇಣಾಭಿನಿಷ್ಪದ್ಯತೇ" ತನ್ನ ಮೊದಲಿನ ತೇಜೋಮಯವಾದ ಸ್ವರೂಪವನ್ನು ಹೊಂದುವನು ; ಅಂತಹ ಸ್ಥಿತಿಯಲ್ಲೀಗ ನಿರಂಜನನಾದುದರಿಂದ "ಪರಮಂ ಸಾಮ್ಯಮುಪೈತಿ" ಎಂದು ಹೇಳಲ್ಪಟ್ಟಿರುತ್ತದೆ. ಈ ಅಭಿಪ್ರಾಯವನ್ನೆಲ್ಲಾ ಈ ಅಹಂ ಎಂಬ ಪದವು ಪ್ರದರ್ಶಿಸುತ್ತದೆಂಬ ಭಾವವು. ಇವನು ಶರಣಾಗತಿಯನ್ನು ಮಾಡಿದರೇನೇ ಸರ್ವೇಶ್ವರನು ಶರಣಾಗತವತ್ಸಲನಾದುದರಿಂದ, ಆಗೀಗ ಈತನಿಗೆ ಪ್ರಸನ್ನನಾಗುವನು ; ಈ ಅಭಿಪ್ರಾಯವನ್ನು "ಅಭಿಮುಖನಾಯ್ ನಿರ್ಕ್ಕಿರ ನಿಲೈ" ಎಂಬ ಪ್ರಯೋಗವು ಸೂಚಿಸುತ್ತದೆ. ಹಾಗೆ ಶರಣಾಗತಿಯನ್ನು ಮಾಡದವನಿಗೆ ಅಭಿಮುಖನಲ್ಲವು ಎಂಬ ಭಾವವೂ ಇದರಿಂದ ವ್ಯಕ್ತವು. "ಯಶ್ಚರಾಮಂ ನಪಶ್ಯೇತ್ತು" ಯಾವನು ಶರಣಾಗತಿಯಮೂಲಕ ಶ್ರೀರಾಮಚಂದ್ರಪ್ರಭುವು ತನಗೆ ರಕ್ಷಕನೆಂದು ನೋಡುವದಿಲ್ಲವೋ, ಆ ಕಾರಣದಿಂದ ಅಂತವನನ್ನು "ಯಂ ಚ ರಾಮೋ ನಪಶ್ಯತಿ" (ರಾ. ಅಯೋಧ್ಯಾ) ಈ ಸರ್ವ ರಕ್ಷಕನೂ ಅನುಗ್ರಹರೂಪವಾದ ಕಣ್ಣೆತ್ತಿ ನೋಡನು ಎಂದು ಹೇಳಲ್ಪಟ್ಟಿರುತ್ತದೆ.

ಹಿಂದಿನ ವಾಕ್ಯದಲ್ಲಿ "ರಕ್ಷಾಪೇಕ್ಷಾಂ ಪ್ರತೀಯತೇ" ಎಂಬಲ್ಲಿ ತೋರಿಬರುವ ಅಭಿಪ್ರಾಯವು ಶ್ರೀಮದ್ರಾಮಾಯಣದಲ್ಲಿ ದಂಡಕಾರಣ್ಯದಲ್ಲಿರುವ ಋಷಿಗಳ ರಕ್ಷಾಪೇಕ್ಷೆಗಾಗಿಯಲ್ಲವೇ ಶ್ರೀ ರಘುನಾಥನು ಯೌವರಾಜ್ಯಾಭಿಷೇಕವನ್ನು ತಿರಸ್ಕರಿಸಿ, ಮಂಥರೆಯು ಮಹಾ ಧರ್ಮಿಷ್ಠಳಾದ ಕೈಕೆಯಿಯನ್ನು ವಂಚಿಸುವ ಹಾಗೆ ಮಾಡಿ, ಆ ಮಹರ್ಷಿಗಳಿಗೆ ಅಭಿಮುಖನಾಗಿ"ರಾಜ್ಯೋ ವಾ ವನವಾಸೋ ವಾ ವನವಾಸೋ ಮಹೋದಯಃ" ಎಂದು ಹೇಳಿಕೊಳ್ಳುತ್ತಾ ಹೊರಟ ಮಹಾನುಭಾವನ ದಿವ್ಯಚೇಷ್ಟಿತೆಯು ಸ್ಮಾರಿತವು. ಅವರಲ್ಲಿ ರಕ್ಷಾಪೇಕ್ಷೆಯು ಇದ್ದುದರಿಂದಲೇ ಶ್ರೀರಾಮಪ್ರಭುವು ಯಾವಾಗ ಅವರಿಗೆ ಅಭಿಮುಖನಾದನೋ ಒಡನೆಯೇ "ರಕ್ಷಿತವ್ಯಾ ಸ್ತ್ವಯಾ ಶಶ್ವದ್ಗರ್ಭಭೂತಾಸ್ತಪೋಧನಾಃ" (ಅರಣ್ಯ, ೧.೨೧) ಎಂದು ಪ್ರಾರ್ಥಿಸಿ, "ದೃಷ್ಟ್ವ ಏವಹಿ ನಶ್ಶೋಕಂ ವ್ಯಪನೇಷ್ಯತಿ ರಾಘವಃ" (ಅರಣ್ಯ) ಎಂದು ನಂಬಿದವರಾದರು. ಹೀಗಲ್ಲವೇ "ನಮ್ಮೈ ಇವರ್‌ಗಳ್ ಅಪೇಕ್ಷಿಕ್ಕ್ರದ." ಎಂಬ ಪ್ರಯೋಗವನ್ನು ಈ ಇತಿಹಾಸವು ಬಹು ಸ್ವಾರಸ್ಯನಾಗಿ ತೋರ್ಪಡಿಸುತ್ತದೆ. ಹಾಗೆಯೇ ದ್ರೌಪದಿಯ ರಕ್ಷಾಪೇಕ್ಷೆಯನ್ನು ಸರ್ವಜ್ಞನು ತಿಳಿದು ಆಕೆಗೆ ಅಭಿಮುಖನಾಗಿ ರಕ್ಷಿಸಿದನು. ಹಾಗೆಯೇ ಅರ್ಜುನನ ರಕ್ಷಾಪೇಕ್ಷೆಯಿಂದಲೇ ಲೀಲಾಸಾರಥ್ಯವನ್ನು ಅಂಗೀಕರಿಸಿದನು. "ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ । ನಿವೇದಯತ ಮಾಂ ಕ್ಷಿಪ್ರಂ" ಎಂದು ವಿಭೀಷಣನ ರಕ್ಷಾಪೇಕ್ಷೆಯ ಪ್ರಾರ್ಥನದಿಂದಲೇ ಆತನಿಗೆ ಅಭಿಮುಖನಾದನು.

**"ಮಾಮೇಕಂ" ಸಿದ್ಧೋಪಾಯ ಪ್ರದರ್ಶನಪರಂ. "ಅಹಂ" ಸಾಧ್ಯೋಪಾಯೇನ ಪ್ರಸನ್ನೇಶ್ವರಸ್ಯ ಫಲಪ್ರದಾತೃತ್ವಪರಮ್.**

---

**ಇಪ್ಪಡಿ ಅಕಿಂಚನನಾನ ಅಧಿಕಾರಿಕ್ಕು ಯಥಾವಿಧಿರಕ್ಷಾಪೇಕ್ಷಾ ಪೂರ್ವ್ವಕ ಭರನ್ಯಾಸತ್ತೈಯೊಳಿಯ ವೇರೊನ್ರಾಲ್ ಅಪೇಕ್ಷೈಯಿಲ್ಲಾದ ಸಿದ್ಧೋಪಾಯ**

---

**ಸತ್ವರನಾಯ್ ಫಲಂ ಕೊಡುಕ್ಕ ನಿರ್ಕಿರನಿಲೈಗೆ** ದೃಷ್ಟಾಂತವನ್ನು "ಗಜೇಂದ್ರಮೋಕ್ಷದ" ಇತಿಹಾಸದಲ್ಲಿ ಶ್ರೀ ಗರುಡಾಳ್ವಾರ್ರವರ ಶೈಘ್ರ್ಯವೂ ಕೂಡ ಸಾಲದೇ ಹೋಯಿತೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ರಾವಣ ವಧಾನಂತರ ವಿಭೀಷಣನು,ಒಂದುದಿನವಾದರೂ ಲಂಕೆಯಲ್ಲಿದ್ದು ಯುದ್ಧ ಶ್ರಮ ಪರಿಹಾರಮಾಡಿಕೊಂಡು ಹೋಗಬೇಕೆಂದು ವಿಶೇಷ ದೈನ್ಯದಿಂದ ಪ್ರಾರ್ಥಿಸಿದರೂ ಒಡಂಬಡದೆ,

**"ತಂತು ಮೇ ಭ್ರಾತರಂ ದ್ರಷ್ಟುಂ ಭರತಂ ತ್ವರತೇ ಮನಃ ।**
**ಮಾಂ ನಿವರ್ತಯಿತುಂ ಯೋ ಸೌ ಚಿತ್ರಕೂಟೇ ಮಮಾಗತಃ ।**
**ಶಿರಸಾ ಯಾಚಿತೋ ಯಸ್ಯ ವಚನಂ ನಕೃತಂ ಮಯಾ ॥"**

(ಯುದ್ಧ ೧೨೫-೧೯, ೨೦)

ನನ್ನನ್ನು ಕರೆದುಕೊಂಡು ಹೋಗಬೇಕೆಂಬ ಆಶೆಯಿಂದ ಬಂದು ತಲೆಬಾಗಿ ಶರಣಾಗತನಾಗಿ ಬೇಡಿಕೊಂಡ ಪ್ರಿಯತಮನಾದ ತಮ್ಮನಾದ ಭರತನ ಮಾತನ್ನು ನಡೆಸಲಿಲ್ಲವೇ ? ಆದುದರಿಂದ ನನ್ನ ಮನಸ್ಸು ತ್ವರೆಗೊಳ್ಳುತ್ತದೆ. ಎಂದು ಹೇಳಿ ಒಡನೆಯೇ ಶೀಘ್ರವಾಗಿ ಪುಷ್ಪಕ ವಿಮಾನದಲ್ಲಿ ತೆರಳಿದ ಇತಿಹಾಸವನ್ನು ಈ ಸತ್ವರನಾಗಿ ಎಂಬ ಪ್ರಯೋಗವು ಸ್ಮರಿಸುವಹಾಗೆ ಮಾಡುತ್ತದೆ.

ಆದುದರಿಂದ "ಮಾಂ" ಎಂಬ ಪದ ಮತ್ತು "ಅಹಂ" ಎಂಬ ಪದಗಳಿಂದ ಪುನರುಕ್ತಿ ಏನೂ ಇಲ್ಲವು ; ಎರಡು ಪಾದಗಳೂ ಬೇರೆ ಬೇರೆ ಪ್ರಶಸ್ತಾರ್ಥಗಳುಳ್ಳವೆಂದು ಪ್ರತಿಪಾದಿಸಿ ಹೇಳಿದರು. ಆದನ್ನೇ ನಿಗಮನದಲ್ಲಿ ಎರಡು ಪದಗಳೂ ಭಿನ್ನವಾದ ವಿಶೇಷಾರ್ಥ ಬೋಧಕಗಳೆಂಬುದನ್ನು ಇನ್ನೊಂದು ವಿಧವಾಗಿಯೂ ಭಾವಿಸಬಹುದೆಂದು ಉಪದೇಶಿಸುತ್ತಾರೆ.—

**"ಮಾಮೇಕಂ" ಎಂಬುದು ಸಿದ್ಧೋಪಾಯನನ್ನು ಬೋಧಿಸುತ್ತದೆ; "ಅಹಂ" ಎಂಬುದು ಶರಣಾಗತಿಯಾದ ಸಾಧ್ಯೋಪಾಯದಿಂದ ಪ್ರಸನ್ನನಾದ ಈಶ್ವರನೇ ಫಲಪ್ರದಾತಾ ವೆಂದು ಬೋಧಿಸುತ್ತದೆ.**

ಇಪ್ಪಡಿ ಅಕಿಂಚನನಾನ ಅಧಿಕಾರಿಕ್ಕು–ಹೀಗೆ ಭಕ್ತಿಯೋಗದಲ್ಲಿ ತನಗೆ ಶಕ್ತಿ ಇಲ್ಲವೇ ಎಂಬ ದೈನ್ಯದಿಂದಿರುವ ಮೋಕ್ಷಾರ್ಥಿಗೆ, ಯಥಾವಿಧಿ - ಶಾಸ್ತ್ರದಲ್ಲಿ ಹೇಳಿರುವ ಹಾಗೆ, ರಕ್ಷಾಪೇಕ್ಷಾಪೂರ್ವಕ ಭರನ್ಯಾಸತ್ತೈ - "ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ಎಂಬ ಮತ್ತು ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ"ಎಂಬ ಭರತವಾಕ್ಯದಲ್ಲೂ ಅಹಿರ್ಬುಧ್ನ್ಯಸಂಹಿತಾ

**ತ್ತೈ "ಮಾಮೇವ" ಮೆನ್ರು ಕಾಟ್ಟಿ, ಅದಿನುಡೈಯ ವಶೀಕರಣಾರ್ಥಮಾನ ಸಾಧ್ಯೋಪಾಯತ್ತೈ ಶರಣಂ ವ್ರಜ" ಎನ್ರು ವಿಧಿಯಾಲೇ ಕಾಟ್ಟುಕಿರದು. ಇಪ್ಪಡಿ ವಿಧಿಕ್ಕಿರ ಪ್ರಪತ್ತಿರೂಪ ವಿದ್ಯೈಕ್ಕು ಶರಣ್ಯಪ್ರಸಾದನಮಾಗ ಚೋದಿತತ್ವತ್ತಾಲೇ ವರುಗಿರ ಉಪಾಯತ್ವಮ್ ಭಕ್ತಿಯೋಗತ್ತೋಡು ತುಲ್ಯಮ್. (ಇದಿ**

---

ವಾಕ್ಯದಲ್ಲೂ ಹೇಳಿರುವಂತಾಗೆರಕ್ಷಿಸಬೇಕೆಂಬಅಪೇಕ್ಷಾಪೂರ್ವಕವಾದಚರನ್ಯಾಸವನ್ನು ಹೊರತು, **ವೇರೊನ್ರಾಲ್ ಅಪೇಕ್ಷೈಯಿಲ್ಲಾದ ಸಿದ್ಧೋಪಾಯತ್ತೈ** - ಇನ್ನು ಯಾವುದರಿಂದಲೂ ಅಪೇಕ್ಷೆ ಇಲ್ಲದ ಸಿದ್ಧೋಪಾಯನನ್ನು, ಮಾಮೇಕವೆನ್ರು ಕಾಟ್ಟಿ - ಮಾಮೇಕಂ ನಾನೊಬ್ಬನೇ ಎಂದು ತೋರಿಸಿಕೊಟ್ಟು, ಅದಿನುಡೈಯ ವಶೀಕರಣಾರ್ಥಮಾನ - ಆ ಮೋಕ್ಷಪ್ರಾಪ್ತಿಗೆ ಸಿದ್ಧೋಪಾಯನನ್ನು ಸಾಧ್ಯೋಪಾಯದ ಮೂಲಕ ವರಿಸದ ಹೊರತು ಅದು ದೊರೆಯುವದಿಲ್ಲವು. ಇಲ್ಲಿ ಸಿದ್ಧೋಪಾಯನು ಸರ್ವೇಶ್ವರನೇ ವಿನಾ ಅನ್ಯದೇವತೆಗಳಲ್ಲವು. ಅಂತಹ ಸಿದ್ಧೋಪಾಯನೇ ನಾನು ಎಂಬುದನ್ನು "ಮಾಮೇಕಂ" ಎಂಬುದರಿಂದ ಹೇಳಿ, ಸಾಧ್ಯೋಪಾಯವನ್ನು ಶರಣಂ ವ್ರಜ ಎಂದು ಹೇಳಿ ಅನಂತರ ಅಹಂ ಎಂಬುವರಿಂದ ಫಲಪ್ರದಾತಾ ಶ್ರೀಮನ್ನಾರಾಯಣನಾದ ತಾನೇ ಎಂದು ಹೇಳಿದರು ಎಂಬ ಭಾವವು.

ಆಗಲಿ, ಶ್ರುತಿಗಳಲ್ಲಿ ಹೇಳಲ್ಪಟ್ಟಿರುವ ಪುರುಷಸೂಕ್ತದಲ್ಲಿ "ತಮೇವಂ ವಿದ್ವಾನ್ ಅಮೃತ ಇಹಭವತಿ ನಾನ್ಯಃ ಪನ್ಥಾ ವಿದ್ಯತೇ ಅಯನಾಯ" ಎಂಬಲ್ಲೂ ಮತ್ತು "ನಾಹಂ ವೇದೈರ್ನತಪಸಾ ನದಾನೇನ ನಚೇಜ್ಯಯಾ । ಶಕ್ಯ ಏವ ಮುಹಂ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥ ಭಕ್ತ್ಯಾತ್ವನನ್ಯಯಾ ಶಕ್ಯ ॥"(ಗೀ ೧೧) ಎಂದೂ ಹೇಳಿರುವದರಿಂದ ಭಕ್ತಿಯೋಗರೂಪವಾದ ಉಪಾಸನಮಾತ್ರದಿಂದಲೇ ಮೋಕ್ಷವಲ್ಲವೋ? ಸಾಧ್ಯೋಪಾಯವು ಇದು ಒಂದೇ ಅಲ್ಲವೋ? ಎಂದರೆ ಉಪಾಸನವು ಹೇಗೆ ಉಪಾಯವೋ ಹಾಗೆಯೇ ಚರನ್ಯಾಸವೂ ಸಹ ಉಪಾಯವೇ ಎಂದು ಹೇಳುತ್ತಾರೆ. **ಇಪ್ಪಡಿ ವಿಧಿಕ್ಕಿರ** – ಹೀಗೆ ಈ ಚರಮಶ್ಲೋಕದಲ್ಲೇ ಅವ್ಯವಹಿತ ಸ್ವಸಂತೋಷೋಪಾಯವೆಂದು ಗೀತಾಚಾರ್ಯರೇ ವಿಧಿಸಿರುವ, **ಪ್ರಪತ್ತಿರೂಪವಿದ್ಯೈಕ್ಕು** - ಪ್ರಪದನವೆಂಬ ನ್ಯಾಸವಿದ್ಯೆಗೆ, **ಶರಣ್ಯಪ್ರಸಾದನಮಾಗ** - ಶರಣ್ಯನಾದ ಶ್ರೀ ಕೃಷ್ಣನ ಅನುಗ್ರಹ ಸಂಪಾದಕವಾಗಿ, **ಚೋದಿತತ್ವತ್ತಾಲೇ** - ಪ್ರೇರಿಸಿರುವದರಿಂದ, **ವರುಗಿರ ಉಪಾಯತ್ವಂ** – ಉಂಟಾಗುವ ಉಪಾಯವೆಂಬ ಭಾವವು, **ಭಕ್ತಿಯೋಗತ್ತೋಡು ತುಲ್ಯಂ** – ಭಕ್ತಿಯೋಗವು ಎಂದರೆ ಪರಭಕ್ತಿಯುತ ಉಪಾಸನವು, ಹೇಗೆ ಉಪಾಯವೋ, ಹಾಗೆಯೇ ಇದೂ ಉಪಾಯವೆಂದು ವಿಧಿಸಿರುವವರಿಂದ ಉಪಾಯವಾಗುವದರಲ್ಲಿ ಭಕ್ತಿಯೋಗದೊಂದಿಗೆಸಮಾನವು. "ಭಕ್ತ್ಯಾಲಭ್ಯಸ್ತ್ವನನ್ಯಯಾ" ಇತ್ಯಾದಿ ವಾಕ್ಯಗಳಿಂದ ಭಕ್ತಿಯೋಗದಿಂದ ಹೇಗೆ ಲಭ್ಯನೆಂದು ಹೇಳಿತೋ ಹಾಗೆಯೇ "ಭಕ್ತ್ಯಾ ಪರಮಯಾವಾಪಿ ಪ್ರಪತ್ತ್ಯಾವಾ ಮಹಾಮುನೇ ।

**ನಾಲೇ) ಪ್ರಸನ್ನನಾನ ಈಶ್ವರನ್ ಮೋಕ್ಷತ್ತುಕ್ಕು ಸಾಕ್ಷಾದುಪಾಯಮ್.
ಇವ್ವಿದ್ಯೈಕ್ಕು ವಿಶೇಷಿತ್ತು ವೇದ್ಯಾಕಾರಮ್ ನಿರಪೇಕ್ಷೋಪಾಯತ್ವಮ್.**

---

**ತೇನತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮತೇ"** ಭರನ್ಯಾಸದಿಂದಲೂ ಪ್ರಾಪ್ಯನೆಂದು ಹೇಳಿರುವದರಿಂದ ಭಕ್ತಿಯೋಡು ತುಲ್ಯಮ್ ಎಂದು ಹೇಳಲ್ಪಟ್ಟಿತು. (ಗೀ. ೧೮-೬೫ ೬೬ ಶ್ಲೋ) ಈ ಎರಡು ಉಪಾಯಗಳು ಹೇಳಲ್ಪಟ್ಟವು.

ಹೀಗೆ ಎರಡೂ ಮೋಕ್ಷಸಾಧಕ ಸಾಧ್ಯೋಪಾಯಗಳಾದರೂ, ಈ ಪ್ರಪದನಕ್ಕೆ ಭಕ್ತಿಯೋಗಕ್ಕಿಲ್ಲದ ಒಂದು ವಿಶೇಷವಾದ ವಿಷಯವುಂಟೆಂದು ತಿಳಿಸುತ್ತಾರೆ— **ಇದಿನಾಲೇ** - ಹೀಗೆ ಇವೆರಡೂ ಉಪಾಯವಾಗುವದರಲ್ಲಿ ಸಮಭಾವವಿರುವದರಿಂದ, **ಪ್ರಸನ್ನನಾನ ಈಶ್ವರನ್** - ಈ ಯಾವುದಾದರೂ ಒಂದು ಸಾಧ್ಯೋಪಾಯದಿಂದ ಪ್ರೀತನಾದ ಸರ್ವೇಶ್ವರನೇ, **ಮೋಕ್ಷತ್ತುಕ್ಕು ಸಾಕ್ಷಾದುಪಾಯಮ್** - ಮೋಕ್ಷಕ್ಕೆ ಸ ಕ್ವಾತ್ತಾಗಯೇ ಮಾಮೇಕಂ ಎಂಬಲ್ಲಿ ಹೇಳಿರುವ ಹಾಗೆ ಸಿದ್ಧೋಪಾಯನು, ಇನ್ನು ಯಾರೂ ಅಲ್ಲವು ; ಗುರು ಮೊದಲಾದವರು ಪುರುಷಕಾರರೂಪದಲ್ಲಿ ಉಪಾಯಕ್ಕೆ ಸಹಕಾರಿಗಳಾಗಬಹುದು. ಆದರೆ ಸಾಕ್ಷಾದುಪಾಯಭೂತನು ಶ್ರಿಯಃಪತಿಯೊಬ್ಬನೇ ಎಂಬ ಭಾವವು. ಬ್ರಹ್ಮರುದ್ರಾದಿಗಳಲ್ಲವು. **ಇವಿದ್ಯೈಕ್ಕು** – ಈ ನ್ಯಾಸವಿದ್ಯೆಗೆ, **ವಿಶೇಷಿತ್ತು ವೇದ್ಯಾಕಾರಮ್** - ಭಕ್ತಿಯೋಗರೂಪ ಉಪಾಸನೆಗೆ ಇಲ್ಲದೆ, ಪ್ರಪದನಕ್ಕೆ ಮಾತ್ರ ವಿಲಕ್ಷಣವಾಗಿ ತಿಳಿಯತಕ್ಕ ಅಂಶವು, **ನಿರಪೇಕ್ಷೋಪಾಯತ್ವಮ್** - ಮೇಲೆ ವಿವರಿಸಲ್ಪಟ್ಟ ಪಂಚಾಂಗಗಳು ಮಾತ್ರವಲ್ಲದೆ ಇನ್ನು ಯಾವುದರ ಅಪೇಕ್ಷೆಯೂ ಇಲ್ಲದಿರುವ ಉಪಾಯಭಾವವು. ಭಕ್ತಿಯೋಗಕ್ಕಾದರೋ ನಿತ್ಯನೈಮಿತ್ತಿಕಾನುಷ್ಠಾನಗಳಿಂದ ಕರ್ಮಯೋಗದ ಸಾಪೇಕ್ಷತ್ವ ಉಂಟು. ಆದುದರಿಂದ ಅದಕ್ಕೆ ಸಾಪೇಕ್ಷೋಪಾಯತ್ವವು ; ಈ ಭರನ್ಯಾಸಕ್ಕಾದರೋ ನಿರಪೇಕ್ಷೋಪಾಯತ್ವವು. ಇದೀಗ ಈ ಭರನ್ಯಾಸದ ವಿಶೇಷವಾಗಿ ತಿಳಿಯತಕ್ಕ ವಿಷಯವು ಎಂದು ಹೇಳಲ್ಪಟ್ಟಿತು.

**ಮಾಮೇಕಂ ಎಂಬಲ್ಲಿ ತೋರುವ ಸಮಸ್ತಾಂಶಗಳನ್ನು ಬೋಧಿಸುತ್ತಾರೆ.**

ಹಿಂದೆ ಈ ಉಪಾಯತ್ವದಲ್ಲಿ ನಿರಪೇಕ್ಷತ್ವ ಉಂಟೆಂದು, **"ನಜಾತಿ ಭೇದಂ ನಕುಲಂ ನ ಲಿಂಗಂ ನ ಗುಣಕ್ರಿಯಾಃ । ನದೇಶಕಾಲೌ ನಾವಸ್ಥಾಂ ಯೋಗೋಹ್ಯಯಮಪೇಕ್ಷತೇ"** ಎಂಬಲ್ಲಿ ಹೇಳಲ್ಪಟ್ಟಿತು. ಭಕ್ತಿಯೋಗಕ್ಕಾದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯಜಾತಿ ಕುಲಗಳಲ್ಲಿ ಒಂದರ ಅಪೇಕ್ಷೆಯುಂಟು; ಇದಕ್ಕಿಲ್ಲವು. ಪುರುಷರೇ ಅಧಿಕಾರಿಗಳು ಭಕ್ತಿಯೋಗಕ್ಕೆ, ಸ್ತ್ರೀಯರಲ್ಲವು. ಇದಕ್ಕೆ ಹಾಗಲ್ಲವು. ಸಾತ್ವಿಕಾದಿ ಗುಣಯುಕ್ತನಾಗಿಯೂ, ನಿತ್ಯನೈಮಿತ್ತಿಕ ಕರ್ಮಗಳಿಂದ ಕೂಡಿದ ಕರ್ಮಯೋಗನಿಷ್ಠನಾಗಿಯೂ ಉಪಾಸಕನಿರತಕ್ಕದ್ದು. ಇಂತಹ ಯಾವುದರ ಸಾಪೇಕ್ಷ್ಯವೂ ಭರನ್ಯಾಸಕ್ಕೆ ಬೇಕಿಲ್ಲವು. ಶುಚಿಯಾದ ಪ್ರದೇಶದಲ್ಲಿ ಕೂತು ಪೂರ್ವಾಹ್ಣ

## “ಮಾಮೇಕ” ವಿತ್ಯತ್ರ ವೇದ್ಯಾಕಾರಾಣಿ ಸರ್ವಾಣ್ಯಾಹ

ಇದುಕ್ಕು ಉಪಯುಕ್ತಾಕಾರಙ್ಗಳೆಲ್ಲಾಮ್ "ಮಾಮೇಕಂ" ಪದಙ್ಗಳಿಲೇ ವಿವಕ್ಷಿತಙ್ಗಳ್ (೧) "ವಿಷ್ಣುನಾರಾಯಣಶ್ರೀಮಾನ್" ಇತ್ಯಾದಿಗಳಿಲೇ ನಿರ್ದಿಷ್ಟಪ್ರಕಾರನಾನ ಶರಣ್ಯನೈ ಶೊಲ್ಲುಗಿರ "ಮಾಮ್" ಎಙ್ಗಿರ ಪದತ್ತಾಲೇ ತಿರುಮನ್ತ್ರತ್ತಿಲುಮ್ ದ್ವಯತ್ತಿಲುಮ್ ಪ್ರಕಾಶಿತಮಾನ ಸರ್ವರಕ್ಷಕತ್ವಮುಮ್ ಸರ್ವಶೇಷಿತ್ವಮುಮ್ ಶ್ರಿಯಃಪತಿತ್ವಮುಮ್, ನಾರಾಯಣತ್ವ

---

ಕ್ರಿಯೆಗಳೆಲ್ಲಾ ಮುಗಿದ ನಂತರ, ಆಸನ ನಿರ್ಮಾಣ ಮಾಡಿಕೊಂಡು ಕ್ಲಿಪ್ತಕಾಲದಲ್ಲಿ ಸಾಯುವ ತನಕ ಉಪಾಸಿಸುವ ಆವಶ್ಯಕತೆಯುಂಟು. ಇದಕ್ಕೆ ಅಂತಹ ಅಪೇಕ್ಷೆ ಯಾವುದೂ ಇಲ್ಲವು. ಹೀಗೆ ಭರನ್ಯಾಸಕ್ಕೆ ಯಾವುದರ ಅಪೇಕ್ಷೆ ಇಲ್ಲದೇ ಇರುವುದರಿಂದ ಸರ್ವಾಧಿಕಾರತ್ವವು, **ಮಾಮೇಕಂ** ಶರಣಂ **ವ್ರಜ** ಎಂದು ಸಾಮಾನ್ಯವಾಗಿ, **ಸತ್ಯಂ** ವದ ಎಂಬುದಕ್ಕೆ ಹೇಗೆ ಸರ್ವಾಧಿಕಾರತ್ವವುಂಟೋ ಹಾಗೆ ಎಂದು ಹೇಳಲ್ಪಟ್ಟಿತು. ಮುಂದೆ ಯಾವ ಕಲ್ಯಾಣ ಗುಣಜಾತವು **ಮಾಮೇಕಂ** ಎಂಬುದ ನಿಂದ ತೋರಿಬರುತ್ತದೆಂಬುದನ್ನು ಬೋಧಿಸುತ್ತಾರೆ.

ಇದುಕ್ಕು - ಹೀಗೆ ಭರನ್ಯಾಸಕ್ಕೆ ನಿರಪೇಕ್ಷ ಉಪಾಯತ್ವವು ಉಂಟಾಗುವದಕ್ಕೆ, **ಉಪಯುಕ್ತಾಕಾರಙ್ಗಳೆಲ್ಲಾಮ್** - ಬೇಕಾದ ಸ್ವಾಮಿಯಲ್ಲಿರುವ ಕಲ್ಯಾಣ ಗುಣರೂಪ ವಿಶೇಷಗಳೆಲ್ಲವೂ, ಮಾಮೇಕಂ ಪದಙ್ಗಳ್ - **ಮಾಮೇಕಂ** ಎಂಬ ಪದಗಳಲ್ಲಿ, **ವಿವಕ್ಷಿತಙ್ಗಳ್** - ಹೇಳತಕ್ಕವುಗಳಾಗಿವೆ ಎಂದರೆ ಆ ಎಲ್ಲಾ ಆಕಾರಗಳೂ ತೋರಿಬರುತ್ತವೆ ಎಂಬ ತಾತ್ಪರ್ಯವು. (೧) **ವಿಷ್ಣುನಾರಾಯಣಶ್ರೀಮಾನ್ ಕ್ಷೀರಾರ್ಣವ ನಿಕೇತನಃ । ನಾಗಪರ್ಯಂಕಮುತ್ಸೃಜ್ಯ ಹ್ಯಾಗತೋ ಮಧುರಾಂ ಪುರೀಮ್"** ಇತ್ಯಾದಿಗಳಿಲೇ - ಇವೇ ಮೊದಲಾದ **ಪ್ರಮಾಣಗಳಲ್ಲಿ**, ಇಲ್ಲಿ ಆದಿ ಪದದಿಂದ **"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"** ಎಂಬಿವೇ ಮೊದಲಾದ ಅವತಾರೋದ್ದೇಶ ಮಾಹಾತ್ಮ್ಯಾದಿಗಳನ್ನು ಕುರಿತು ಹೇಳುವ ಪ್ರಮಾಣಗಳು ಸೂಚಿಸಲ್ಪಟ್ಟವು. **ನಿರ್ದಿಷ್ಟಪ್ರಕಾರನಾನ** - ಹೇಳಲ್ಪಟ್ಟ ವಿಶೇಷಣಗಳನ್ನುಳ್ಳ **ಶರಣ್ಯನೈ** - ಲೋಕರಕ್ಷಕನನ್ನು, **ಶೊಲ್ಲುಗಿರ** - ಹೇಳುವ, "ಮಾಂ" ಎಙ್ಗಿರಪದ **ತ್ತಾಲೆ** ಎಂಬ ಪದದಿಂದ, **ತಿರುಮನ್ತ್ರತ್ತಿಲುಮ್** - ಮೂಲಮನ್ತ್ರದಲ್ಲೂ, **ದ್ವಯತ್ತಿಲುಮ್** - ಶರಣಾಗತಿ ಮನ್ತ್ರದಲ್ಲೂ, ಹಾಗೆಯೇ ಈ ಚರಮಶ್ಲೋಕದಲ್ಲಿ "ಮಾಂ" ಎಂಬ ಪದದಲ್ಲೂ **ಪ್ರಕಾಶಿತಮಾನ** - ವ್ಯಕ್ತಪಡಿಸಲ್ಪಟ್ಟ ಕಲ್ಯಾಣ ಗುಣಗಳು ಯಾವುವೆಂಬುದನ್ನು ತಿಳಿಸುತ್ತಾರೆ.

(೧) **ಸರ್ವರಕ್ಷಕತ್ವಮುಮ್** - ಮೂಲಮನ್ತ್ರದಲ್ಲಿ ಇದು ಅಕಾರದಲ್ಲಿರುವ **ಅವ ರಕ್ಷಣೆ** ಎಂಬ ಧಾತ್ವರ್ಥದಿಂದ ತೋರಿಬರುತ್ತದೆ. ಪ್ರಣವದ **ಅಕಾರದಿಂದ**

**ಮುವಮ್ ಇವತ್ತಾಲ್ ಅಕೃಷ್ಟವಮಾಯ್ ಪರತ್ವ ಸೌಲಭ್ಯಙ್ಗಳುಕ್ಕುರುಪ್ಪಾಯ್ ವರುಗಿರ ಸರ್ವಜ್ಞತ್ವ ಸರ್ವಶಕ್ತಿತ್ವಾದಿಗಳುಮ್, ಪರಮಕಾರುಣಿಕತ್ವಂ**

---

ನಾಲ್ಕು ಅರ್ಥಗಳು ತೋರಿಬರುತ್ತದೆ. "ಏವ ಮಕ್ಷರರೂಪೇಣ ಕಾರಣತ್ವಮಿಹೋದಿತಮ್ । ರಕ್ಷಕತ್ವಂಚ ಧಾತ್ವರ್ಥಾತ್ ಶೇಷಿತ್ವಂ ಪದಗೂಪತಃ॥ ಶ್ರೀಶತ್ವಂ ವಾಚ್ಯಗತ್ಯಾಚ ಯುಜ್ಯತೇ ಪರಮಾತ್ಮನಃ" ಜಗತ್ಕಾರಣತ್ವ, ಸರ್ವರಕ್ಷಕತ್ವ, ಶ್ರಿಯಃಪತಿತ್ವ ಶೇಷಿತ್ವವು ಅಕಾರದ ಲುಪ್ತಚತುರ್ಥಿಯಿಂದಲೂ ವ್ಯಕ್ತ ಚತುರ್ಥಿಯಿಂದಲೂ ವ್ಯಕ್ತವು. ಶ್ರಿಯಃಪತಿತ್ವವು ಉಕಾರದಿಂದ ತೋರಿಬರುತ್ತದೆ. ದ್ವಯ ಮನ್ತ್ರದಲ್ಲಿ—ಶ್ರಿಯಃಪತಿತ್ವವೂ, ನಾರಾಯಣತ್ವವೂ ತುಂಬಾ ವ್ಯಕ್ತವು. (೨) ಸರ್ವ ಶೇಷಿತ್ವವೂ (೩) ಶ್ರಿಯಃಪತಿತ್ವವೂ (೪) ನಾರಾಯಣತ್ವವೂ ಇದು ಎರಡರಲ್ಲೂ ಶಬ್ದತಃ ವ್ಯಕ್ತವು ; ನಾರಾಯಣತ್ವ ಎಂದರೆ ನಾರಾಯಣ ಶಬ್ದದಲ್ಲಿ ತತ್ಪುರುಷ ಬಹುವ್ರೀಹ್ಯರ್ಥಗಳಿಂದ ತೋರಿಬರುವ ಗುಣಗಳು ಹೇಳಲ್ಪಟ್ಟವು. ಇವತ್ತಾಲ್ - ಈ ನಾಲ್ಕು ಅರ್ಥಗಳಿಂದ, ಅಕೃಷ್ಟವಮಾಯ್-ಅರ್ಥವಾಗಿ ಸೂಚಿತಗಳಾದ, (೫) ಪರತ್ವವೂ - "ಭೂತಾನಾಂ ಈಶ್ವರೋಽಪಿಸನ್" (ಗೀ. ೪-೬) ಎಂಬಲ್ಲಿ ಹೇಳಿರುವ ನಿಸ್ಸಮಾಭ್ಯಧಿಕತ್ವವೂ ಸರ್ವಲೋಕ ಶರಣ್ಯತೆ ಯಾವಾಗ ಉಂಟೋ ಆಗ ಪರತ್ವ ಉಂಟೆಂಬುದು ಏರ್ಪಟ್ಟಿತು. (೬) ಸೌಲಭ್ಯಙ್ಗಳುಕ್ಕು - ಪ್ರಪನ್ನರಿಗೆಲ್ಲಾ ಅತಿ ಸುಲಭನಾಗಿರೋಣವು, "ತಸ್ಯಾಹಂ ಸುಲಭಃ ಪಾರ್ಥ॥" (ಗೀ. ) ಎಂಬಲ್ಲಿ ಹೇಳಲ್ಪಟ್ಟಿತು. ಈ ಗುಣಗಳಿಗೆ ಉರುಪ್ಪಾಯ್‌ವರುಗಿರ - ಸಂಬಂಧಿಸಿ ಬರುವ, ಸರ್ವಜ್ಞತ್ವ-ಎಲ್ಲವನ್ನೂ ತಿಳಿದಿರುವಿಕೆ, ಸರ್ವರಕ್ಷಕನಾಗಬೇಕಾದರೆ, ಅವರುಗಳ ಯೋಗ್ಯತಾಯೋಗ್ಯತೆಗಳಿಗೆ ಸರಿಯಾಗಿ ರಕ್ಷನಾಗಬೇಕಾದರೆ, ಅವರುಗಳ ಪ್ರವೃತ್ತಿಗಳನ್ನೆಲ್ಲಾ ತಿಳಿಯುವ ಸರ್ವಜ್ಞತೆಯು ಇರಬೇಕು. ಸರ್ವಶಕ್ತಿತ್ವಾದಿಗಳುಮ್ - ಸರ್ವ ಶಕ್ತಿಯೇ ಮೊದಲಾದವುಗಳೂ ಸರ್ವ ಶಕ್ತಿತ್ವವು ಏತಕ್ಕೆಂದರೆ ಮಹಾಪರಾಧಿಯು ಶರಣಾಗತನಾದರೆ "ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ। ವಿಭೀಷಣೋ ವಾ ಸುಗ್ರೀವ ಯದಿವಾ ರಾವಣಸ್ಸ್ವಯಮ್"ಎಂಬಲ್ಲಿ(ರಾಮಾ. ಯುದ್ಧ೧೮-೩೪)ಹೇಳಿರುವ ಹಾಗೆ ಮಹಾಪರಾಧಿಗೂಕೂಡ ಮೋಕ್ಷವನ್ನುಹೊಂದಿಸುವ ಮತ್ತು ಅಂತಹ ಪ್ರಪನ್ನರನ್ನೂ ಕಾಪಾಡುವ ಅಘಟಿತ ಘಟನಾಶಕ್ತಿಯು ಆವಶ್ಯಕವು. ಇಲ್ಲಿ ಆದಿಪದದಿಂದ ಸತ್ಯಸಙ್ಕಲ್ಪತೆಯು ಹೇಳಲ್ಪಟ್ಟಿತು. ವಿಭೀಷಣನು ಶರಣಾಗತನಾದನೋ ಇಲ್ಲವೋ ಒಡನೆ ಆವನಿಗೆ ಏನಾದರೂ ಅನುಗ್ರಹಿಸತಕ್ಕದ್ದು ನ್ಯಾಯವೆಂದು ಭಾವಿಸಿ, ಲಂಕಾ ರಾಜ್ಯಾಭಿಷೇಕವನ್ನು ಲಕ್ಷ್ಮಣನ ಮೂಲಕ ಮಾಡಿಸಿ, ಅದನ್ನು ತನ್ನ ಸತ್ಯಸಙ್ಕಲ್ಪತೆಯಿಂದ ನಡೆಸಿದನು. ಹಾಗೆಯೇ ಭರತನಿಗೆ ಕೊಟ್ಟ ಮಾತನ್ನು ನಡೆಸಿಕೊಡುವದು ಇತ್ಯಾದಿ. (೮) ಪರಮಕಾರುಣಿಕತ್ವವು ತನಗೆ ಏನೊಂದೂ ಪ್ರಯೋಜನ

**ಸೌಶೀಲ್ಯ ವಾತ್ಸಲ್ಯಾದಿಗಳುಮ್, ದ್ವಯತ್ತಿಲ್ ದ್ವಿವಚನಾಂತ ಪದತ್ತಾಲೇ ತೋತ್ತಿನ ಶುಭಾಶ್ರಯಮಾಯ್, ಪರತ್ವ ಸೌಲಭ್ಯ ವ್ಯಂಜಕಮಾನ ಪಾರ್ಥ ಸಾರಥಿನ ಡೈಯ ದಿವ್ಯಮಙ್ಗಳವಿಗ್ರಹ ವಿಶೇಷಮುಮ್ ಕಾಟ್ಟಪ್ಪಡುಗಿರದು.**

---

ವಿಲ್ಲದಿದ್ದರೂ ಪ್ರಪನ್ನನನ್ನು ರಕ್ಷಿಸಬೇಕೆಂಬ ಕಾರುಣ್ಯವು. ಈ ಗುಣವಿಲ್ಲದಿದ್ದರೆ ಶರಣಾಗತವತ್ಸಲತ್ವವೇ ಇಲ್ಲವಾಗುತ್ತದೆ ಮಿಕ್ಕ ಎಲ್ಲಾ ಕಲ್ಯಾಣಗಳೂ ನಿರರ್ಥಕವಾದವುಗಳಾಗುವವೆಂದು ಶ್ರೀ ವೇದಾಂತದೇಶಿಕರವರು ದಯಾಶತಕದಲ್ಲಿ ಹೇಳಿರುತ್ತಾರೆ "**ವೃಷಗಿರಿ ಗೃಹಮೇಧಿ ಗುಣಾ ಬೋಧ ಬಲೈಶ್ವರ್ಯ ವೀರ್ಯಶಕ್ತಿಮುಖಾಃ । ದೋಷಾಭವೇಯುಃ ರೇತೇ ಯದಿನಾನು ತ್ವಯಾವಿನಾ ಭೂತಾಃ (೯) ಸೌಶೀಲ್ಯ**-ಬಹು ಕೀಳ ಜನ್ಮಾದಿಗಳನ್ನು ಹೊಂದಿದ ಪ್ರಪನ್ನನೊಂದಿಗೆ ಸೇರಿರೋಣವು. ಇದು "ಸರ್ವಲೋಕೈಕಶರಣ್ಯ" ನೆಂದೆನಿಸುವದಕ್ಕೆ ಮುಖ್ಯವಾದ ಗುಣವು, ಶಬರನಾದ ಗುಹನನ್ನೂ, ವಾನರನಾದ ಆ ಜನೇಯನನ್ನೂ ಆಲಿಂಗಿಸಿದುದೂ, ಪಕ್ಷಿಯಾದ ಜಟಾಯುವಿಗೆ ಔರ್ಧ್ವದೇಹಿಕ ಕ್ರಿಯೆಯನ್ನು ನಡೆಸಿದುದೂ, ಇನ್ನೊಬ್ಬ ವಾನರನಾದ ಸುಗ್ರೀವನನ್ನು ಆಶ್ರಯಿಸಿದುದೂ, ಎಲ್ಲವೂ ಸೌಶೀಲ್ಯ ನಿದರ್ಶನಗಳು. "**ನಿಷಾದಾನಾಂ ನೇತಾ**" ಎಂಬ ದಯಾ ಶತಕ ಶ್ಲೋಕವೂ "**ಗೋಪ್ಯಾದದೇ**" ಎಂಬ ಭಾಗವತ ದಶಮಸ್ಕಂದ ಶ್ಲೋಕವೂ **ಕಣ್ಣಿ ಗುಣ್ ಶಿರತ್ತಾಂಬು** ಎಂಬ ಮಧುರಕವಿ ಸೂಕ್ತಿಯೂ, ಮತ್ತು ಕುಚೇಲಾದಿಗಳ ಆರಾಧನೆಯೂ ಇವೆಲ್ಲವೂ, ಈ ಸೌಶೀಲ್ಯವನ್ನು ಕೊಂಡಾಡುತ್ತವೆ. **ವಾತ್ಸಲ್ಯಾದಿಗಳುಮ್**–ವಾತ್ಸಲ್ಯವೆಂದರೆ ದೋಷವಿದ್ದರೂ ಕೂಡ ಅದನ್ನು ಪರಿಗಣಿಸದೆ ಆಶ್ರಿತನನ್ನು ಪರಿಗ್ರಹಿಸೋಣವು. ಇದು "**ಯದಿವಾ ರಾವಣಸ್ಸ್ವಯಮ್**" ಎಂಬಲ್ಲೂ "**ಸುದುಷ್ಟೋ ವಾಪ್ಯದುಷ್ಟೋಪಾ**"-ಮಹಾ ಕೆಟ್ಟ ನಡತೆಯುಳ್ಳವನಾಗಲಿ ಒಳ್ಳೆಯ ನಡತೆಯುಳ್ಳವನಾಗಲಿ ಎಂಬ ಶ್ರೀ ರಾಮಸೂಕ್ತಿಯಲ್ಲೂ (ರಾ. ಯುದ್ಧ ೧೮-೨೨) **ನಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ**" (ರಾ. ಅಯೋಧ್ಯಾ) ಇತ್ಯಾದಿಗಳಲ್ಲಿ ಪ್ರದರ್ಶಿತವು. ಹಾಗೆಯೇ ದ್ವಿವಚನಾಂತ **ಪದತ್ತಾಲೇ ತೋತ್ತಿನ** - **ಚರಣೌ** ಎಂಬುದು ದ್ವಿವಚನಾಂತ ಪದವು, ಆ ಪದದಿಂದ ತೋರಿಬರುವ **ಶುಭಾಶ್ರಯಮಾಯ್** - ದಿವ್ಯಮಙ್ಗಳವಿಗ್ರಹವಾಗಿ, ಪರತ್ವ ಮತ್ತು ಪರತ್ವವಿದ್ದರೂ, **ಸೌಲಭ್ಯವೂ ವ್ಯಂಜಕಮಾನ** - ತೋರಿಬರುವ ಅವುಗಳನ್ನು ಪ್ರದರ್ಶಿಸುವ, **ಪಾರ್ಥಸಾರಥಿಯಿನ್ನುಡೈಯ** - ಅರ್ಜುನನಿಗೆ ಸಾರಥಿಯಾಗಿರುವ, ಅಂತಹ ಪರತ್ವವನ್ನು ಹೊಂದಿರುವವನು ಅರ್ಜುನನಿಗೆ ಲೀಲಾಸಾರಥಿಯಾದನು ಎಂಬುದರಿಂದಲೇ ಪರಮ ಕಾರುಣಿಕತ್ವ, ಸೌಲಭ್ಯ, ಸೌಶೀಲ್ಯ, ವಾತ್ಸಲ್ಯಾದಿಗಳು ವ್ಯಕ್ತವು, ಇಂತಹ **ಲೀಲಾಸಾರಥಿಯ ದಿವ್ಯಮಙ್ಗಳವಿಗ್ರಹ ವಿಶೇಷಮುಮ್**-ವಿಶೇಷವನ್ನು, **ಕಾಟ್ಟಪ್ಪಡುಗಿರದು**-ಈ **ಮಾಂ** ಎಂಬ ಪದವು ಇವೆಲ್ಲಾ ಕಲ್ಯಾಣಗುಣಗಳನ್ನೂ ಎಂದರೆ ಆತ್ಮ

**ಇಜ್ಜಿಕ್ಕೇ (೧) "ನಿಗರಿಲ್ ಪುಗಳಾಯ್" ಇತ್ಯಾದಿಗಳಿಲ್ ಚೊಲ್ಲುಗಿರ ವಾತ್ಸಲ್ಯ ಸ್ವಾಮಿತ್ವ ಸೌಶೀಲ್ಯ ಸೌಲಭ್ಯರೂಪವಾನ ಇದ್ಗುಣ ಚತುಷ್ಟಯ ಮುವಾ್ ಅಡಿಯಿಲೇ ಅಸ್ಥಾನ ಸ್ನೇಹಾದಿಗಳಾಲೇ ಕಲಙ್ಗಿನ ಅರ್ಜುನನ್ಕೆ**

---

ಗುಣಗಳನ್ನೂ ರೂಪಗುಣಗಳನ್ನೂ ಪ್ರದರ್ಶಿಸುತ್ತದೆ. ಮಾಂ ಎಂಬ ಶಬ್ದದಲ್ಲಿ ಇಷ್ಟು ಅರ್ಥಗಳನ್ನೂ ಗ್ರಹಿಸತಕ್ಕದ್ದೆಂಬ ಉಪದೇಶವು. ಇಂತಹ ಉಪದೇಶ ವೆಲ್ಲಾ ಶ್ರೀ ನಿಗಮಾಂತರನ್ನು ಬಿಟ್ಟರೆ ಇನ್ನು ಯಾರು ವ್ಯಕ್ತವಾಗಿ ಹೇಳಲಾರರು.

ವಿಷ್ಣನಾರಾಯಣಶ್ರೀಮಾನ್ ಎಂಬಲ್ಲಿ ಈ ರೂಪಗುಣಗಳೂ ಆತ್ಮಗುಣಗಳೂ ಎಲ್ಲವೂ ತೋರಿಬರುತ್ತವೆ ಎಂಬ ತಾತ್ಪರ್ಯದಿಂದ ಆ ಶ್ಲೋಕವನ್ನು ಉದಾಹರಿಸಿರುತ್ತಾರೆ. ಶ್ರೀಮಾನ್ ಎಂಬುದರಿಂದ ಲಕ್ಷ್ಮೀಸಾನ್ನಿಧ್ಯದಿಂದ ತೋರಿಬರುವ ಪರಮಕಾರುಣಿಕತ್ವವೂ ನಾರಾಯಣ ಶಬ್ದದಿಂದ ಸಮಸ್ತ ಕಲ್ಯಾಣ ಗುಣಾಕರತ್ವವೂ, ಇವೆರಡು ಪದಗಳಿಂದ ಮಹತ್ತಾದ ವಿಭೂತಿಮತ್ತ್ವವೂ, ನಾಗಪರ್ಯಂಕವನ್ನು ಬಿಟ್ಟು ಇಲ್ಲಿಗೆ ಬಂದುದರಿಂದ ಪರಮ ಸೌಲಭ್ಯ, ವಾತ್ಸಲ್ಯ, ಸೌಶೀಲ್ಯಾದಿ ಆಶ್ರಿತ ಜನ ರಕ್ಷಣೋಪಯುಕ್ತಗಳೂ, ದಿವ್ಯಮಙ್ಗಳ ವಿಗ್ರಹ ಲಾವಣ್ಯವೂ ಬೋಧಿತವು. ಹೀಗೆ ಸಾಕ್ಷಾನ್ಮನ್ಮಥ ಮನ್ಮಥನಾದ ಕೃಷ್ಣಾವತಾರಿಯೇ "ಹ್ಯಾಗತೋ ಮಧುರಾಂ ಪುರೀಮ್" ಹೀಗೆ ಬಂದವನಾಗಿ ಲೀಲಾಸಾರಥಿಯಾಗಿ, ಇಂತಹ ಅತಿ ಮಧುರವಾದ ಚರಮಶ್ಲೋಕರೂಪ ಉಪದೇಶವನ್ನು ಕೈಕೊಂಡನು ಎಂಬುದು ತೋರಿಬರುತ್ತದೆ. ಹೀಗೆ "ಮಾಮ್" ಎಂಬ ಪದವು ಬಹ್ವರ್ಥವನ್ನು ಸ್ವಾರಸ್ಯವಾಗಿ ಪ್ರದರ್ಶಿಸುತ್ತದೆ.

ಈ ಕಲ್ಯಾಣಗುಣಜಾತದಲ್ಲಿ ಆಶ್ರಿತರಕ್ಷಣಕ್ಕೆ ಮುಖ್ಯವಾದವು ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯಗಳೆಂದು ಶ್ರೀ ನಮ್ಮಾಳ್ವಾರ್ರವರ ಪಾಶುರವನ್ನನುಸರಿಸಿ, ಎಂಬದಾಗಿ ಹೇಳಿ, ಶ್ರೀ ಕೃಷ್ಣಭಗವಾನ್ರವರ ಪ್ರವೃತ್ತಿಗಳ ಮೂಲಕ ಅವುಗಳನು ವ್ಯಕ್ತಪಡಿಸುತ್ತಾರೆ.

ಇಜ್ಜಿಕ್ಕೇ - ಈ ಮಾಂ - ಎಂಬಲ್ಲಿ ತೋರುವ ಅರ್ಥಗಳಲ್ಲಿ "ನಿಗರಿಲ್ ಪುಗಳಾಯ್" ಲಕ್ಷ್ಮೀಯೊಂದಿಗೆ ನೇರಿರುವ ಸಾಹಚರ್ಯದಿಂದ ಬಂದ "ಪ್ರಮೋಯಂ ಹಿ ತತ್ತ್ವೇಜಃ" ಎಂಬ ಮಾರೀಚೋಕ್ತಿಯ ಪ್ರಕಾರ ಉಂಟಾದ ನಿರುಪಮೆಯುನ್ನುಳ್ಳ, ನಿರವಧಿಕ ವಾತ್ಸಲ್ಯಯುಕ್ತನೆಂಬ ಅಗಾಧ ಕೀರ್ತಿಯನ್ನುಳ್ಳವನೆಂದು ದ್ವಯಾರ್ಥ ಪ್ರಕಾಶಕವಾದ "ಅಗಲಗಿಲ್ಲೇನ್" ಎಂಬ ನಮ್ಮಾಳ್ವಾರ ಪಾಶುರದಲ್ಲಿ, ಇತ್ಯಾದಿಗಳಿಲ್ - ಇವೇ ಮೊದಲಾದವುಗಳಲ್ಲಿ ಚೊಲ್ಲುಗಿರ - ಉಪಪಾದಿತವಾದ, ವಾತ್ಸಲ್ಯ, ಸ್ವಾಮಿತ್ವ, ಸೌಲಭ್ಯ ಸೌಶೀಲ್ಯಗಳೆಂಬ ಇಗ್ಗುಣ ಚತುಷ್ಟಯುಮುಮ್- ಈ ನಾಲ್ಕು ಗುಣಗಳೂ, ಅಡಿಯಿಲೇ ಅಸ್ಥಾನ

---

(೧) ತಿರು ೬-೧೦-೧೦

**ಅನಾದರಿಯಾನ್ವೈಯಾಲುಮ್ (೧) "ಮತ್ತಃ ಪರತರಂ ನಾನ್ಯತ್" ಎನ್ರು ತಾನೇ ಅರುಳಿಚ್ಚೆಯ್ಗೈಯಾಲುಮ್ (೨) "ಹೇ ಕೃಷ್ಣ ಹೇ ಯಾದವ" (೩) "ರಥಂಸ್ಥಾಪಯಮೇಽಚ್ಯುತ" ಎನ್ರುವ್ಪಡಿ ನಿನ್ರುಸಾರಥ್ಯಾದಿಗಳೈಪ್ಪಣ್ಣಿ ಗೈಯಾಲುಮ್ ಕಾಣವೇಣುಮೆನ್ರು ಸ್ವವೈಶ್ವರೂಪತ್ತೈ ಕ್ಕಾಟ್ಟಿವಿಟ್ಟಾಣ್ಣುಮ್**

---

**ಸ್ನೇಹಾದಿಗಳಾಲೇ ಕಲಙ್ಗಿನ**-ಯುದ್ಧಾರಂಭದಲ್ಲಿ, ಯೋಗ್ಯವಲ್ಲದ ದುರ್ಮಾರ್ಗರಲ್ಲಿ ಉಂಟಾದ ನಮ್ಮವರು ಬಾಂಧವರು ಎಂಬ ಸ್ನೇಹವೇನು, ಆದಿಶಬ್ದದಿಂದ ಕಾರುಣ್ಯವೇನು, ಇವುಗಳಿಂದ ಮನಸ್ಸಿನಲ್ಲಿ ಪರಿತಾಪ ಹೊಂದಿದ **ಅರ್ಜುನನ್ನೈ** - ಅರ್ಜುನನನ್ನು **ಅನಾದರಿಯಾನ್ವೈಯಾಲುಮ್** - ತಿರಸ್ಕರಿಸದೇ ಇರುವದರಿಂದಲೂ,ಇದರಿಂದ ವಾತ್ಸಲ್ಯವು ಹೇಳಲ್ಪಟ್ಟಿತು. **"ಮತ್ತಃ ಪರತರಂನಾನ್ಯತ್"** (೧) ನನಗಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲವು. (ಗೀ. ೭-ಅನ್ನು ನೋಡಿ) **ಎನ್ರು**-ಎಂಬದಾಗಿ **ತಾನೇ ಅರುಳಿಚ್ಚೆಯ್ಗೈಯಾಲುಮ್** – ತಾನೇ ಕೃಪಯಾ ಹೇಳಿಕೊಂಡಿರುವದರಿಂದಲೂ, (ಇದರಿಂದ ಸ್ವಾಮಿತ್ವವು ವ್ಯಂಜಿತವು, (**ಹೇ ಕೃಷ್ಣ ಹೇಯಾದವ"** (ಗೀ. ೧೧-೪೩) ಓ ಕೃಷ್ಣನೇ ಯಾದವನೇ ಎಂದು ಸ್ನೇಹಿತನಹಾಗೆ ಸಂಬೋಧಿಸಿ ಅರ್ಜುನನು ಕರೆದುದರಿಂದಲೂ ಮತ್ತು **"ರಥಂ ಸ್ಥಾಪಯ"** (**ಗೀ ೧.೨೧**)ರಥವನ್ನು ಶತ್ರು **ಸೈನ್ಯದ** ಎದುರಿಗೆ ನಿಲ್ಲಿಸು ಎಂದು ಅರ್ಜುನನು ಆಜ್ಞಾಪಿಸುವ, ಎನ್ರುಂಪಡಿ-ಆಜ್ಞಾಪಿಸುವಹಾಗೆ.ನಿನ್ರು-ನಿಂತು,**ಸಾರಥ್ಯಾದಿಗಳೈ ಪಣ್ಣಿಗೈಯಾಲುಮ್** - ರಥವನ್ನು ನಡೆಸುವದೇ ಮೊದಲಾದ ಕೆಲಸಗಳನ್ನು ಶನ್ನಆಶ್ರಿತರಿಗೆ ನಡೆಸಿದುದರಿಂದಲೂ: (ಇಲ್ಲಿ ಸೌಲಭ್ಯ, ಸೌಶೀಲ್ಯಾದಿಗಳು ಪ್ರಕಟಿತವು. **ಕಾಣವೇಣುಮೆನ್ರು ಸ್ವವೈಶ್ವರೂಪತ್ತೈಕಾಟ್ಟಿ**-ಭಕ್ತನಾದ ಅರ್ಜುನನು ನೋಡಬೇಕೆಂದು ಪ್ರಾರ್ಥಿಸಿದ ವಿಶ್ವರೂಪವನ್ನೂ ಪ್ರದರ್ಶಿಸಿ (ಇದರಿಂದ ಕಾರುಣ್ಯ, ಸೌಲಭ್ಯ, ಸ್ವಾಮಿತ್ವಗಳು ವ್ಯಕ್ತವು.) **ವಿಟ್ಟಾಣ್ಣುಮ್** – ಮತ್ತು, ಪಳಿಯ - ಹಿಂದೆ ತನಗೆ ಪರಿಚಿತವಾದ, **ಸೌಮ್ಯವಿಗ್ರಹತ್ತೈ** – ಕ್ರೂರವಾದ ಮತ್ತು ಭಯಂಕರವಾದ ವಿಶ್ವರೂಪವನ್ನು ಬಿಟ್ಟು ಸೌಮ್ಯವಾದ ಮಾನುಷವಿಗ್ರಹವನ್ನು **ಕಾಟ್ಟವೇಣುಮೆನ್ರುಪ್ಪೋದೆ** - ತೋರಿಸಬೇಕೆಂದು ಕೇಳಿಕೊಂಡ ಒಡನೆಯೇ **ಸಾರಥಿರೂಪನಾಯ್‌ಕ್ಕೊತ್ತಿ** - ಪುನಃ ಸಾರಥಿರೂಪವನ್ನೇ ಹೊಂದಿರುವ ಹಾಗೆ ತೋರಿಸಿಕ್ಕೊಂಡು. **ನಿಕ್ಕೈಯಾಲುಮ್** - ನಿಂತಿದ್ದರಿಂದಲೂ, **ವ್ಯಂಜಿತಮಾಯ್‌ತ್ತು** - ಪ್ರದರ್ಶಿಸಲ್ಪಟ್ಟವು. ಇದಕ್ಕೆ ಕರ್ತೃಪದವು **"ಇಗ್ಗುಣಚತುಷ್ಟಯವೆಂಬುದು. ಮಾಂ** - ಎಂಬುವನು ಶ್ರೀ ಕೃಷ್ಣನಾದುದರಿಂದ, **ಶ್ರೀ ಕೃಷ್ಣ ಪ್ರವೃತ್ತಿ**ಗಳಿಂದಲೇ ಆಶ್ರಿತ ರಕ್ಷಣೆಗೆ ಬೇಕಾದ ಈ **ಗುಣಚತುಷ್ಟ**ಯುಗಳನ್ನೂ ಪ್ರದರ್ಶಿಸಿದರು. **"ನಿಗರಿಲ್ ಪುಗಳಾಯ್"** ಎಂದು ಬರುವ ಪಾಶುರವು ಹಿಂದೆ ಅನೇಕಾ

---

(೧) ಗೀ. ೭.೭. (೨) ಗೀ. ೧೧-೪೧ (೩) ಗೀ. ೧-೨೧

**ಪಳಯುಸೌವ್ಯವಿಗ್ರಹತ್ತೈಕ್ಕಾಟ್ಟವೇಣುಮೆನ್ರು ಪೋದೇ ಸಾರಥಿರೂಪನಾಯ್ ತೋತ್ತಿ ನಿರ್ಕ್ಕೈಯಾಲುಮ್ ವ್ಯಂಜಿತಮಾಯಿತ್ತು. ಉಕ್ತಮಾನ ಶರಣ್ಯ**

---

ವರ್ತಿ ಉದಾಹೃತವು. ಹಿಂದೆ ನೆಯ ಪುಟವನ್ನು ನೋಡಿ. ಈ ಪಾಶುರ ದಲ್ಲಿ **ನಿಗರಿಲ್ ಪುಗಳಾಯ್** ಎಂಬುದರಿಂದ ಜಗತ್ಕಾರಣತ್ವ ಸ್ವಾಮಿತ್ವ ಹೇಳ ಲ್ಪಟ್ಟಿದುದರಿಂದ ಪರತ್ವವೂ, **ಎನ್ನೈ ಆಳ್ವಾನೇ** ಎಂಬುದರಿಂದ **ಸೌಶೀಲ್ಯವೂ ತಿರುವೇಙ್ಗಡತ್ತಾನೇ** - ಎಂಬುದರಿಂದ ಸೌಲಭ್ಯವೂ ಹೇಳಲ್ಪಟ್ಟವೆಂದು ಸಾರ ದೀಪಿಕೆಯವರು ಹೇಳಿರುತ್ತಾರೆ. ಈ ಪ್ರಯೋಗದ ಅರ್ಥವೇನೆಂದರೆ "ತನ್ನ ದಿವ್ಯ ಮಂಗಳ ವಿಗ್ರಹವೇ ನಿರುಪಮವಾದ ಉಪಾಯವು ಎಂಬುದು" ಈ ಪಾಶುರದ ಈಡೆಂಬ ವ್ಯಾಖ್ಯಾನದಲ್ಲಿ ಮಹಾ ಪ್ರಾಜ್ಞರು ಈ ಪ್ರಯೋಗದ ಭಾಷ್ಯದಲ್ಲಿ ಬರೆ ದಿರುವದೇನೆಂದರೆ, "**ತಿರುವೇಙ್ಗಡವೊಡೈಯಾನ್ಕಾಗಿರುವ ದಿವ್ಯಮಙ್ಗಳವಿಗ್ರಹ ದಲ್ಲಿ ಗುಣಯೋಗಮುಮ್** (ವಾತ್ಸಲ್ಯವು), **ಶೇಷಿತ್ವಮುಮ್** (ಪರತ್ವ) **ವಿಶೇಷ ಕಟಾಕ್ಷಮುಮ್** (ಸೌಶೀಲ್ಯವು) **ಸೌಲಭ್ಯಮುಮ್ ಇವೈ ಇತ್ತನೆ ಯುಮ್ ಉಣ್ಡರೇ ಇಪ್ಪದತ್ತುಕ್ಕು**" ಎಂದು ಹೇಳಿ, **ನಿಗರಿಲ್ ಪುಗಳಾಯ್** ಎಂಬಲ್ಲಿ ಹೇಳಲ್ಪಟ್ಟ ಉಪಾಯಕ್ಕೆ **ಸಹಕಾರಿ** ಹೇಗೆ ? ಎಂದು ಎಲ್ಲಿ ಹೇಳಲ್ಪಟ್ಟಿದೆ; ಎಲ್ಲಿ ವಿಶದವಾಗಿ ತೋರಿಬರುತ್ತದೆ, ಎಂದರೆ "**ಮಾಮೇಕಂ ಎಙ್ಗಿರವಿಡತ್ತಿಲ್ ಸಾರಥ್ಯವೇಷತ್ತೈ ಕಾಟ್ಟುಗಿರದು**" ಎಂದು ಉಪದೇಶಿಸಿರುತ್ತಾರೆ. ಅರ್ಜುನ ಸಾರಥಿಯಾಗಿರುವ ದಿವ್ಯಮಙ್ಗಳವಿಗ್ರಹ ಧಾರಿಯಾಗಿ ಶ್ರೀ ಅರ್ಜುನಾದಿಗಳೊಂದಿಗೆ ಸೇರಿರುವ ಪರಮ ವಾತ್ಸಲ್ಯವು ಪ್ರಣವದ ಅಕಾರರೂಪನಾಗಿ ರಥದಲ್ಲಿ ಮುಂದೆ ಕೂತು, ಮಕಾರರೂಪಿಯಾದ ಅರ್ಜುನನಿಗೆ ಶೇಷಿಯಾಗಿಯೂ ರಕ್ಷಕನಾಗಿಯೂ ಇರುವದರಿಂದ ಪರತ್ವವೂ ಸಾರಥಿಯಾಗಿರುವ ಸೌಶೀಲ್ಯವೂ ಮತ್ತು ಅವತಾರಿ ಯಾಗಿ ಸರ್ವರಿಗೂ ದೃಗ್ಗೋಚರನಾಗಿ ಸರ್ವಸಾಕ್ಷಿಕನಾಗಿರುವದರಿಂದ ಸೌಲಭ್ಯವೂ, ಇವೆಲ್ಲವೂ, "**ಮಾಮೇಕಂ**" ಎಂಬಲ್ಲಿ ತೋರಿಬರುತ್ತವೆಂಬ ಭಾವವು. ಹೀಗೆ ಈ ಗುಣಗಳೆಲ್ಲಾ **ವ್ಯಂಜಿತಮಾಯಿತ್ತು** - ಪ್ರದರ್ಶಿಸಲ್ಪಟ್ಟವೆಂಬ ಕ್ರಿಯಾಪದವು ಇರುತ್ತದೆ.

ಅದು ಹೇಗೆ **ವ್ಯಂಜಿತಮಾಯಿತ್ತು** ಎಂಬುದನ್ನು ಈ ಮೇಲಿನ ವಾಕ್ಯ ದಿಂದ ಉಪಪಾದಿಸಿ ತಿಳಿಸಿದರು.

**ಅಸ್ಥಾನ ಸ್ನೇಹಾದಿಗಳಾಲೇ ಕಲಙ್ಗಿನ** ಎಂಬುದರಿಂದ ತನಗೆ ಧರ್ಮ ವಾದುದನ್ನು ಅಧರ್ಮವೆಂದು ಭಾವಿಸಿದುದರಿಂದ ದೋಷಯುಕ್ತನಾದನು ; ಅಂತ ವನನ್ನೂ ಅನಾದರ ಮಾಡದೆ ಬಹು ಕೃಪೆಯಿಂದ ಆತನ ಭ್ರಮಜ್ಞಾನವನ್ನು ಉಪದೇಶಮೂಲಕ ಹೋಗಲಾಡಿಸಿದುದರಿಂಡ ವಾತ್ಸಲ್ಯವು ತೋರಲ್ಪಟ್ಟಿತು. **ಮತ್ತಃ ಪರತರಂ ನಾಸ್ತಿ** - ಎಂದು ನಿಸ್ಸಮಾಭ್ಯಧಿಕತ್ವವನ್ನು ಉಪಪಾದಿಸಿ **ಹೇಳಿ**

ಗುಣಙ್ಗಳಿಲ್ ಆಶ್ರಿತ ರಕ್ಷಣತ್ತುಕ್ಕು ಪ್ರಧಾನತಮಙ್ಗಳ್ (೧) "ಸರ್ವಜ್ಞೋಽಪಿ ಹಿ ವಿಶ್ವೇಶ ಸ್ಸದಾಕಾರುಣಿಕೋಽಪಿಸರ್" ಎನ್ರು ಭಗವಚ್ಛಾಸ್ತ್ರತ್ತಿಲುಮ್ (೨) "ತ್ವದ್ಜ್ಞಾನಶಕ್ತಿ ಕರುಣಾಸು ಸತೀಷು" ಎಙ್ಗಿರ ಅಭಿಯುಕ್ತ ವಾಕ್ಯತ್ತಿಲುಮ್ ಸಙ್ಗ್ರಹಿಕ್ಕಪ್ಪಟ್ಟನ.

---

ದುದರಿಂದ ಪರತ್ವವೂ ಸ್ವಾಮಿತ್ವವೂ ಹೇಳಲ್ಪಟ್ಟಿತು. ಅರ್ಜುನನೊಂದಿಗೆ ಆಟದ ಸ್ನೇಹಿತನಾಗಿ ನಿಂತು ಅವನಿಂದ ಸಾಮಾನ್ಯನಂತೆ ಹೇ ಕೃಷ್ಣ ಹೇ ಯಾದವ ಎಂದು ಸಂಬೋಧಿಸಲ್ಪಟ್ಟು, ಆತನಿಗೆ ಸಾರಥಿಯಾಗಿ, ರಥವನ್ನು ಮುಂದೆ ಸ್ಥಾಪಯ ಎಂದು ಆಜ್ಞಾಪಿಸಲ್ಪಟ್ಟವನಹಾಗೆ ತೋರ್ಪಡಿಸಿಕೊಂಡುದರಿಂದ ಸೌಶೀಲ್ಯವು ಪ್ರದರ್ಶಿತವು. ಅರ್ಜುನನು ವಿಶ್ವರೂಪವನ್ನು ನೋಡಬೇಕೆಂದರೆ ಅದನ್ನು ತೋರಿ ಅನಂತರ ಪರರೂಪವನ್ನು ತೋರು ಎಂದರೆ ಅದನ್ನು ತೋರಿಸಿ, ಅನಂತರ ಮಾನುಷರೂಪವನ್ನೂ ಧರಿಸಿದುದರಿಂದ ಪರಮಸೌಲಭ್ಯವು ಸೂಚಿತವು.

ಈ ಮೇಲೆ ಹೇಳಿದ ನಾಲ್ಕು ಗುಣಗಳು ಜಗದ್ರಕ್ಷಕನಿಗೆ ಇತರ ಕಲ್ಯಾಣ ಗುಣಗಳಿಗಿಂತ ಆಶ್ರಿತರನ್ನು ರಕ್ಷಿಸುವದಕ್ಕೆ ಮುಖ್ಯವಾದ ಗುಣಗಳೆಂದು ಸಪ್ರಮಾಣವಾಗಿ ಉಪಪಾದಿಸುತ್ತಾರೆ. ಉಕ್ತಮಾನ ಶರಣ್ಯಗುಣಙ್ಗಳಿಲ್ - ಹೇಳಲ್ಪಟ್ಟ ಜಗದ್ರಕ್ಷಕನ ಗುಣಗಳಲ್ಲಿ ಆಶ್ರಿತ ಸಂರಕ್ಷಣತ್ತುಕ್ಕು – ಸಾಧ್ಯೋಪಾಯಗಳ ಮೂಲಕ ತನ್ನನ್ನು ಆಶ್ರಯಿಸಿದವರ ರಕ್ಷಣೆಗೆ, ಪ್ರಧಾನತಮಙ್ಗಳ್ - ಅತ್ಯಂತ ಮುಖ್ಯವಾದುವುಗಳೆಂದು (೧) "ಸರ್ವಜ್ಞೋಽಪಿ ಹಿ ವಿಶ್ವೇಶ ಸ್ಸದಾಕಾರುಣಿಕೋಽಪಿಸರ್" ಎನ್ರು - ಎಂಬದಾಗಿ ಭಗವಚ್ಛಾಸ್ತ್ರದಲ್ಲೂ, (೨) "ತ್ವದ್ಜ್ಞಾನಶಕ್ತಿ ಕರುಣಾಸು ಸತೀಷು" ಎಙ್ಗಿರ - ಎನ್ನುವ ಅಭಿಯುಕ್ತ ವಾಕ್ಯತ್ತಿಲುಮ್ - ಪೂಜ್ಯರಾದ ಶ್ರೀ ಕೂರನಾಥರ ವಾಕ್ಯದಲ್ಲೂ, ಸಙ್ಗ್ರಹಿಕ್ಕಪಟ್ಟನ - ಸಙ್ಗ್ರಹಿಸಿ ಹೇಳಲ್ಪಟ್ಟವು, ಉಕ್ತಮಾನ ಶರಣ್ಯಗುಣಙ್ಗಳಲ್ಲಿ ಇವು ನಾಲ್ಕು ಪ್ರಧಾನ ಗುಣಗಳು ಎಂದು ಹೇಳಿರುವದರಿಂದ ಉಕ್ತವಾದ ಶರಣ್ಯಗುಣಗಳು ಇವು ನಾಲ್ಕು ಅಲ್ಲದೆ ಬೇರೆ ಉಂಟೆಂಬುದನ್ನು ಶರಣ್ಯಗುಣಾನಾಂ ಪ್ರಧಾನತಮಾಃ ಎಂಬ ನಿರ್ಧಾರಣ ಷಷ್ಠಿಯ ಭಾವವು ತೋರಿಬರುವದರಿಂದ ಗ್ರಹಿಸಬಹುದು. ಅವು ಯಾವುವೆಂದರೆ ಸರ್ವಜ್ಞತೆ - ಇದು ಪ್ರಪನ್ನನು ತನ್ನನ್ನು ಹೇಗೆ ಆಶ್ರಯಿಸಿದನೆಂದು ತಿಳಿಯಲು ಆವಶ್ಯಕವು. ಕಾರುಣ್ಯ – ಹಿಂದಿನ ಅಪರಾಧಗಳನ್ನು ಹೋಗಲಾಡಿಸಲು ಬೇಕಾದುದು. ಅಘಟಿತಘಟನಾಶಕ್ತಿ - ಎಂತಹ ಮಹಾ ಪಾಪಿಯಾದರೂ ಅದನ್ನು ಪರಿಗಣಿಸದೆ ಕ್ಷಮಿಸಿ ಅಂತವನಿಗೂ ಮೋಕ್ಷವನ್ನು ದಯಪಾಲಿಸುವ ಉದಾರ ಭಾವವು. ಇವುಗಳಿಂದ ಕ್ಷಮೌದಾರ್ಯಗುಣಗಳು ಹೇಳಲ್ಪಟ್ಟವು.

---

(೧) ಲಕ್ಷ್ಮೀತನ್ತ್ರ ೧೭-೭೮ (೨) ಅತಿಮಾನುಷ ೬೧.

**ಅಥಸರ್ವಗುಣೇಭ್ಯಃ ದಯಾಯಾಃ ಸರ್ವಾತಿಶಯತ್ವಂ ಉಪಪಾದಯತಿ**

ಇವೈ ಮೂನ್ರಿಲುಮ್ ಜ್ಞಾನಶಕ್ತಿಗಳ್ ನಿಗ್ರಹಾನುಗ್ರಹ ಸಾಧಾರಣಙ್ಗಳ್. ಸ್ವಾಮಿತ್ವಮುಮ್ ಲೀಲೋಪಕರಣ ಮಾಕ್ಕೈಕ್ಕೈವುಮ್,

---

ಹೀಗೆ ನಿರತಿಶಯ ಫಲವನ್ನು ಕೊಡುವಾಗ ತಾನು ಯಾವ ಫಲವನ್ನು ಅಪೇಕ್ಷಿಸದೆ ಇರುವಹಾಗೆ ಪರಿಪೂರ್ಣಕಾಮನಾಗಿರುವಿಕೆಯು. ಇತ್ಯಾದಿ ಗುಣಗಳೂ ಸಹ ಶರಣ್ಯೋಪಯುಕ್ತಗುಣಗಳೇ. ಆದರೂ ಅವು ನಾಲ್ಕು ಪ್ರಧಾನತಮಗಳೆಂದು ಹೇಳಲ್ಪಟ್ಟವು. "ಸರ್ವಜ್ಞೋಪಿಹಿ" ಎಂಬ ಶ್ಲೋಕವು ಹಿಂದೆ ಪರಿಕರವಿಭಾಗಾಧಿಕಾರದಲ್ಲ ಉದಾಹೃತವು. ೧೦-ಇಲನೆಯ ಪುಟವನ್ನು ನೋಡಿ) ಇಲ್ಲಿ ಸರ್ವಜ್ಞತೆಯೂ ಶರಣ್ಯಗುಣವಾಗಿ ಹೇಳಲ್ಪಟ್ಟಿತು. **ಸದಾಕಾರುಣಿಕೋಪಿಸ** ಎಂಬುದರಿಂದ ಕರುಣೆಯೂ, ಅದರ ಪ್ರಭೇದಗಳಾದ ವಾತ್ಸಲ್ಯ, ಸೌಶೀಲ್ಯ ಸೌಲಭ್ಯಗಳು ಸಂಗ್ರಹೀತವು; ವಿಶ್ವೇಶ ಎಂಬುದರಿಂದ ಪರತ್ವಸ್ವಾಮಿತ್ವಗಳು ಬೋಧಿತವು. "**ತದ್ಜ್ಞಾನ ಶಕ್ತಿಕರುಣಾಸು**" ಎಂಬುದು "**ಸಾಪೀಯಸೋಪಿ**" ಎಂಬ ಅತಿ ಮಾನುಷಸ್ತವದ ಅಂತ್ಯಶ್ಲೋಕವು. ಇದೂ ಅಧಿಕಾರಿ ವಿಭಾಗಾಧಿಕಾರದಲ್ಲಿ ಹಿಂದೆಯೇ ಉದಾಹೃತವು. (೮೦೭-೮ನೆಯ ಪುಟಗಳನ್ನು ನೋಡಿ ಪೂರ್ವಾರ್ಧದಿಂದ ಇಲ್ಲಿ ವಾತ್ಸಲ್ಯವು ಉಪಪಾದಿಸಲ್ಪಟ್ಟಿತು. ಉತ್ತರಾರ್ಧದಿಂದ ಸರ್ವಜ್ಞತೆ, ಶಕ್ತಿ, ಕರುಣೆ, ಅದರ ಪ್ರಭೇದಗಳಾದ ಸೌಶೀಲ್ಯ ಸೌಲಭ್ಯಗಳು ಹೇಳಲ್ಪಟ್ಟವು.

**ಅನಂತರ ಸರ್ವೇಶ್ವರನ ಎಲ್ಲಾ ಗುಣಗಳಿಗಿಂತಲೂ ದಯಾಗುಣಕ್ಕಿರುವ ಸರ್ವಾತಿಶಯವನ್ನು ತಿಳಿಸುತ್ತಾರೆ.**

---

ಇವೈ ಮೂನ್ರಿಲುಮ್ - ಈ ಜ್ಞಾನಶಕ್ತಿ ಕರುಣೆ ಮೂರು ಗುಣಗಳಲ್ಲೂ **ಜ್ಞಾನಶಕ್ತಿಗಳ್**-ಸರ್ವಜ್ಞತೆ ಮತ್ತು ಸರ್ವಶಕ್ತಿತ್ವವೂ. **ನಿಗ್ರಹಾನುಗ್ರಹ ಸಾಧಾರಣಙ್ಗಳ್**-ಚೇತನರ ನಿಗ್ರಹಕ್ಕೂ ಅನುಗ್ರಹಕ್ಕೂ ಬೇಕಾದವು. ಸುಕೃತಿಗಳ ಅನುಗ್ರಹಕ್ಕೆ ಸರ್ವಜ್ಞತೆ ಸರ್ವಶಕ್ತಿತ್ವಗಳು ಬೇಕಾದವು ಹಾಗೆಯೇ ದುಷ್ಕೃತಿಗಳನ್ನು ಶಿಕ್ಷಿಸುವದಕ್ಕೂ ಆ ಗುಣಗಳು ಅವಶ್ಯಕವು. ಆದುದರಿಂದ ನಿಗ್ರಹಾನುಗ್ರಹ ಸಾಧಾರಣಙ್ಗಳೆಂದು ಹೇಳಲ್ಪಟ್ಟವು. ದುಷ್ಕೃತಿಯ ರಕ್ಷಣೆಗೆ ಅವು ಉಪಯುಕ್ತವಾಗಲಾರವೆಂಬ ಭಾವವು. ಕರುಣೆ ಈಗ ಉಪಯುಕ್ತವಾದ ಗುಣವೆಂದು ಮುಂದೆ ಹೇಳುತ್ತಾರೆ. ಆಗಲಿ ಸರ್ವೇಶ್ವರನ ಸ್ವಾಮಿತ್ವ ಉಂಟಲ್ಲಾ ಅದು ರಕ್ಷಿಸಲಾರದೋ ? ಎಂದರೆ ಅದು ಪರಮಾತ್ಮನ ಲೀಲೆ ಭೋಗಗಳಿಗೆ ಉಪಯುಕ್ತವಾಗಬಹುದೇ ವಿನಾ ರಕ್ಷಣೆಗೆ ಪ್ರೇರಕಗಳಾಗಲಾರವೆಂದು ಹೇಳುತ್ತಾರೆ.—**ಸ್ವಾಮಿತ್ವವು, ಲೀಲೋಪಕರಣಮಾಕ್ಕೈಕ್ಕೈವ್** - ಸ್ವಾಮಿಯ ಲೀಲೆಗೆ ಸಹಾಯ

**ಭೋಗೋಪಕರಣ ನೂಕ್ಕುಗೈಕ್ಕುವು ಪೊದುವಾಗೈಯಾಲೇ ಜ್ಞಾನಶಕ್ತಿಗಳೈ ರಕ್ಷಣೈಕಾಂತಙ್ಗಳಾಗ ನಿಯಮಿಕ್ಕವೊಣ್ಣಾದು. ಕಾರುಣ್ಯಮುವ್ ಇದಿಲ್ ಕವಡುಗಳಾನ ಸೌಶೀಲ್ಯ ವಾತ್ಸಲ್ಯಾದಿಗಳುವ್ ಅನುಗ್ರಹತ್ತುಕ್ಕು ಏಕಾನ್ತಙ್ಗಳ್.**

---

ವಾಗುವದಕ್ಕೂ, ತನ್ನ ಮೂಲಕ ಭೋಗಕ್ಕೆ ಸಹಾಯವಾಗಿ ಆಗುವದಕ್ಕೂ ಸಹ, ಪೊದುವಾಗೈಯಾಲೇ ಸಮಾನಾದುದಾದುದರಿಂದ, ಜ್ಞಾನಶಕ್ತಿಗಳೈ ಆತನ ಸರ್ವಜ್ಞತೆ, ಸರ್ವಶಕ್ತಿಗಳನ್ನು, ರಕ್ಷಣೈಕಾಂತಙ್ಗಳಾಗ - ಪ್ರಪನ್ನರ ರಕ್ಷಣೆಯನ್ನೇ ಮುಖ್ಯವಾಗಿ ಭಾವಿಸುವಹಾಗೆ, ನಿಯಮಿಕ್ಕವೊಣ್ಣಾದು - ನಿಯಮಿಸಲಾರದು. ಸ್ವಾಮಿಯಾಗುವದರಿಂದ ಸರ್ವ ನಿಯಮನವೇನೋ ಉಂಟು. ಆದರೆ ಆ ನಿಯಮನವು ಚೇತನ ರಕ್ಷಣೆಯಲ್ಲೇ ಪರ್ಯವಸಾನವನ್ನು ಹೇಗೆ ಹೊಂದೀತೆಂಬ ಭಾವವು. ಒಬ್ಬನು ವಿಪುಲಧನಕ್ಕೆ ಸ್ವಾಮಿಯಾಗಿರಬಹುದು, ಆತನಿಗೆ ಕಾರುಣ್ಯವಿಲ್ಲದೇ ಹೋದರೆ, ಹೇಗೆ ಬಡವರ ರಕ್ಷಣೆಗಾಗಿ ಆ ಧನವನ್ನು ನಿಯಮಿಸುವನು ? ಹಾಗೆಯೇ ಇಲ್ಲಿಯೂ ಕೂಡ ಸರ್ವೇಶ್ವರನ ಸ್ವಾಮಿತ್ವವು ಚೇತನ ರಕ್ಷಣೆಗೆ ಅಷ್ಟು ಉಪಯುಕ್ತವಲ್ಲವು.

ಹಾಗಾದರೆ ಎಲ್ಲಾ ಗುಣಗಳಿಗಿಂತ ವಿಶೇಷೋಪಯುಕ್ತವಾಗಿ ಯಾವ ಗುಣವು ಚೇತನ ರಕ್ಷಣೆಗೆ ಮುಖ್ಯವಾಗಿ ಅನ್ವಯಿಸುತ್ತದೆ? ಎಂದರೆ ಹೇಳುತ್ತಾರೆ— ಕಾರುಣ್ಯಮುವ್ - ದಯೆಯೂ, ಇದಿಲ್ ಕವಡುಗಳಾನ - ಇವುಗಳ ಪ್ರಭೇದಗಳಾದ ಸೌಶೀಲ್ಯ, ವಾತ್ಸಲ್ಯ, ಆದಿಶಬ್ದದಿಂದ ಸೌಲಭ್ಯಾದಿಗಳು ಹೇಳಲ್ಪಟ್ಟವು. ಅನುಗ್ರಹತ್ತುಕ್ಕು-ಚೇತನರನ್ನು ಅನುಗ್ರಹಿಸುವದಕ್ಕೆ, ಏಕಾನ್ತಿಗಳ್ - ಪ್ರಧಾನತಮಗಳು. ಅದುದರಿಂದ ಸರ್ವೇಶ್ವರನ ದಯೆಯೇ ಎಲ್ಲಾ ಕಲ್ಯಾಣ ಗುಣಗಳಿಗಿಂತ ಅತಿ ಶ್ರೇಷ್ಠವಾಗಿ ಚೇತನ ಸಂರಕ್ಷಣೆಗೆ ಅತ್ಯಂತ ಮುಖ್ಯವಾದುದು. ಸ್ವಾಮಿ ನಿಗಮಾನ್ತ ದೇಶಿಕರವರು ಶ್ರೀನಿವಾಸನ ದಯೆಯನ್ನು ಕುರಿತು ೧೦೮ ಶ್ಲೋಕಗಳಿಂದ ಕೊಂಡಾಡಿರುವದರಲ್ಲಿ ೧೫ನೆಯ ಶ್ಲೋಕದಲ್ಲಿ ಹೇಳಿರುತ್ತಾರೇನೆಂದರೆ—

"ವೃಷಗಿರಿ ಗೃಹಮೇಧಿಗುಣಾಬೋಧ ಬಲೈಶ್ವರ್ಯ ವೀರ್ಯಶಕ್ತಿಮುಖಾಃ ।
ದೋಷಾಭವೇಯುರೇತೇ ಯದಿನಾಮ ದಯೇ ತ್ವಯಾವಿನಾ ಭೂತಾಃ॥"

ಓ ಶ್ರೀನಿವಾಸನ ದಯೆಯೇ ನೀನು ಮಾತ್ರವಿಲ್ಲದಿದ್ದರೆ ಶ್ರೀನಿವಾಸನ ಷಾಡ್ಗುಣ್ಯವೆಂಬ ಸಮೂಹವು ಇನ್ನೂ ಇತರ ಕಲ್ಯಾಣಗುಣಗಳೂ ಎಲ್ಲವೂ ನಿರರ್ಥಕಗಳಾಗುವವಲ್ಲದೆ ದೋಷಯುಕ್ತಗಳಾಗಿ ಪರಮಾತ್ಮನಿಗೆ ಹೇಯಪ್ರತ್ಯನೀಕತ್ವವೂ ಕೂಡ ದೂರೀಕೃತವಾಗುತ್ತಿತ್ತು. ಅದುದರಿಂದ ದಯೆಗೆ ಸರ್ವಾತಿಶಯತ್ವವು.

**ಇಪ್ಪಡಿ ಇಕ್ಕಾರುಣ್ಯತ್ತಿನುಡೈಯ ವಾಶಿಯೈಕ್ಕಣ್ಣ ಪೂರ್ವರ್‌ಗಳ್ (೧) "ಸೋಽಹಂ ತೇ ದೇವದೇವೇಶ ನಾರ್ಚನಾದೌ ಸ್ತುತೌ ನಚ। ಸಾಮರ್ಥ್ಯ ವಾನ್ ಕೃಪಾಮಾತ್ರ ಮನೋವೃತ್ತಿಃ ಪ್ರಸೀದಮೇ " ಎನ್ರುವರ್.**

---

**ಇಪ್ಪಡಿ** - ಈ ರೀತಿಯಲ್ಲಿ, **ಇಕ್ಕಾರುಣ್ಯತ್ತಿನುಡೈಯ** - ಈ ಕಾರುಣ್ಯದ, **ವಾಶಿಯೈ** - ವೈಲಕ್ಷಣ್ಯವನ್ನು, ಮಹಿಮೆಯನ್ನು ಎಂಬ ತಾತ್ಪರ್ಯವು, **ಕಂಡ ಪೂರ್ವರ್‌ಗಳ್** - ತಿಳಿದ ಪೂರ್ವಾಚಾರ್ಯರುಗಳು, (೧) ಇದು ಶ್ರೀ ಕೃಷ್ಣನನ್ನು ಕುರಿತು ಮಾಡುವ ತಾಳೀಯ ಸರ್ಪದ ಉಕ್ತಿಯು, ಹಿಂದಿನ ಶ್ಲೋಕದಲ್ಲಿ ಯೋಗಿಗಳು ನಿನ್ನನ್ನು ಸಙ್ಕಲ್ಪಿಸಿ ಯಾವ ನಿನ್ನ ದಿವ್ಯ ಮಙ್ಗಳ ವಿಗ್ರಹವನ್ನು ಧ್ಯಾನಿಸಿ, ಅಹಿಂಸಾದಿ ಭಾವನಾದಿಪುಷ್ಪಗಳಿಂದ ಅರ್ಚಿಸುತ್ತಾರೆ. ಅಂತಹ ಯೋಗ ಮಾಡಲು ಶಕ್ತಿ ಇಲ್ಲದ, **ಸೋಽಹಂ** – ಅಂತಹ ನಾನು, **ಓ ದೇವದೇವೇಶ** - ದೇವತೆಗಳಿಗೂ ಸ್ವಾಮಿಯಾದವರಿಗೂ ಕೂಡ ನಿಯಾಮಕನಾದ ಶ್ರೀ ಕೃಷ್ಣನೇ, **ತೇ** - ನಿನ್ನ **ಅರ್ಚನಾದೌ** – ಅಹಿಂಸಾದಿ ಎಂಟು ಭಾವ ಪುಷ್ಪಗಳಿಂದ ಪೂಜಿಸುವದೇ ಮೊದಲಾದವುಗಳಲ್ಲೂ, **ಸ್ತುತೌ** - ಸ್ತೋತ್ರದಲ್ಲೂ, **ನಸಾಮರ್ಥ್ಯಃ** - ಸಾಮರ್ಥ್ಯವನ್ನು ಹೊಂದಿದವನಲ್ಲವು ; **ಕೃಪಾಮಾತ್ರ ಮನೋವೃತ್ತಿಃ** – ನಾನು ಹಿಂದಿನ ಜನ್ಮಗಳಲ್ಲೂ ಈಗಲೂ ಸಹ ಎಷ್ಟು ಅಪರಾಧ ಮಾಡಿದ್ದೇನೆಂದು ನೀನು ವಿಚಾರ ಮಾಡಿದರೆ ನೀನು ರಕ್ಷಿಸಲು ಆಗುವದೇ ಇಲ್ಲವಾದುದರಿಂದ ನೀನು ಕೃಪಮಾತ್ರವೇ ಉಳ್ಳ ಮನೋವ್ಯಾಪಾರವುಳ್ಳವನಾಗಿ, **ಮೇ** - ನನಗೆ, **ಪ್ರಸೀದ** - ಪ್ರಸನ್ನನಾಗು, ಅನುಗ್ರಹಿಸು, ಈ ಈ ಅಪರಾಧ ಮಾಡಿದವರಿಗೆ ಈ ಈ ಶಿಕ್ಷೆಗಳೆಂದು ನನ್ನ ಶಾಸನ ಉಂಟು. ತದನುಗುಣವಾಗಿ ನಡೆಯುವನೆಂದು ನಿರ್ಧರಿಸಿದುದಾದರೆ ಪ್ರಯೋಜನವಿಲ್ಲವು. ನನಗೆ ಎಂದಿಗೂ ರಕ್ಷಣೆಯಿಲ್ಲವು. ಆದುದರಿಂದ ನೀನು ಕೃಪಾಮಾತ್ರವನ್ನೇ ಮನೋವೃತ್ತಿಗೆ ಸಾಧಕವಾಗಿಟ್ಟುಕೊಂಡು, ನನ್ನನ್ನು ರಕ್ಷಿಸು ಎಂದು ಸರ್ಪನು ಬೇಡುವ ಪ್ರಕರಣವು." **ಎನ್ರುವರ್** - ಎಂಬದಾಗಿಯೂ.

ಈ ಶ್ಲೋಕದ ವಿಷ್ಣುಪುರಾಣದ ಹಿಂದಿನ ಶ್ಲೋಕವು **"ಸ್ವಮತಿಸಂಕಲ್ಪ್ಯ ಯದ್ರೂಪಂ ಧ್ಯಾನೇನಾರ್ಚಂತಿ ಯೋಗಿನಃ । ಭಾವಪುಷ್ಪಾದಿನಾ ನಾಥ ಸೋಽರ್ಚ್ಯತೇ ವಾ ಕಥಂ ಮಯಾ "** ಎಂದು ಇರುತ್ತದೆ. ಯೋಗಿಗಳು ಯಾವ ನಿನ್ನ ದಿವ್ಯಮಙ್ಗಳ ವಿಗ್ರಹವನ್ನು, ಸಂಕಲ್ಪಿಸಿ ಭಾವ ಪುಷ್ಪಗಳೇ ಮೊದಲಾದವುಗಳಿಂದ ಅಭಿಷೇಕ, ಊರ್ಧ್ವಪುಂಡ್ರ, ಶ್ರೀ ಚೂರ್ಣ, ಗಂಧ, ಭಾವಪುಷ್ಪ ದೀಪ ನಿವೇದನ ಮಂಗಳಾರತಿ ಮೊದಲಾದವುಗಳನ್ನು ಅರ್ಪಿಸಿದ ಹಾಗೆ ಮಾನಸಿಕಾರಾಧನೆಯನ್ನು ಮಾಡುವರೋ ಅಂತಹ ನಿನ್ನ ರೂಪವು ನನ್ನಿಂದ ಹೇಗೆ ಅರ್ಚಿಸಲ್ಪಡಲು ಸಾಧ್ಯವು ಎಂದಿರುತ್ತದೆ. ಎಂಟು ಭಾವಪುಷ್ಪಗಳು ಯಾವುವೆಂದರೆ

---

(೧) ವಿ.ಪು. ೫-೭-೭೦

(೨) "ನಿನ್ನರುಳೇ ಪುರಿನ್ದಿರುನ್ದೇನ್" ಎನ್ರುಮ್, (೩) "ತುಣಿಯೇ ನಿನಿ ನಿನ್ರರುಳಲ್ಲದೆನಕ್ಕು" ಎನ್ರುಮ್,

---

"ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯ ನಿಗ್ರಹಃ । ಸರ್ವಭೂತ ದಯಾ ಪುಷ್ಪಂ ಕ್ಷಮಾಪುಷ್ಪಂ ವಿಶಿಷ್ಯತೇ । ಶಮಃಪುಷ್ಪಂ ತಪಃ ಪುಷ್ಪಂ ಧ್ಯಾನಂ ಪುಷ್ಪಂ ತಥೈವಚ । ಸತ್ಯಂಚೈವಾಷ್ಟಮಂ ಪುಷ್ಪಂ ಏತೈಸ್ತುಷ್ಯತಿ ಕೇಶವಃ" ಬರೀ ಅಷ್ಟೋತ್ತರಶತನಾಮುಗಳನ್ನು ಹೇಳಿಕೊಂಡು ಅರ್ಚನೆಮಾಡಿದರೆ ಸ್ವಾಮಿಯು ಸಂತೋಷಪಡುವದಿಲ್ಲವು. ಆದರೊಂದಿಗೆ ಮೇಲೆ ಹೇಳಿದ ಎಂಟು ಭಾವ ಪುಷ್ಪ ಗಳು ಅರ್ಚನೆಮಾಡುವನಲ್ಲಿದ್ದರೆ ಪುಷ್ಪಾರ್ಚನೆಯಿಂದ ಸಂತೋಷಪಡುವನು. ಪುಷ್ಪಾರ್ಚನೆಗೆ ಒಂದು ವೇಳೆ ಭಾವಪುಷ್ಪಗಳು ಮಾತ್ರವೇ ಇದ್ದರೂ ಆಗಲೂ ಶ್ರೀ ಕೇಶವನು ಸಂತೋಷಪಡುವನೆಂಬ ಭಾವವು. ಹೀಗೆಲ್ಲಾ ಮಾಡುವದು ದುಸ್ತರ ವಾದುದರಿಂದ ನೀನು ಯಾವುದನ್ನೂ ಅಪೇಕ್ಷಿಸದೆ, ಕೃಪಾಮಾತ್ರದಿಂದ ಅನಾ ಲೋಚಿತ ಶರಣ್ಯನಾಗು ಎಂಬ ಭಾವವು.

(೨) "ನಿನ್ನರುಳೇ ಪುರಿನ್ದಿರುನ್ದೇನ್" ಈ ಪೂರಾ ಪಾಶುರವು ಯಾವುದೆಂದರೆ—

"ಶನ್ನಿಯೋಂಗು ತಣ್ ತಿರುವೇಙ್ಗಡ ಮುಡೈಯಾಯುಲಕು ।
ತನ್ನೈವಾಳ ನಿನ್ರ ನಂಬಿ ದಾಮೋದರಾ ಚದಿರಾ ।
ಎನ್ನೈಯುಂ ಮೆನ್ನುಡೈ ಮೈಯುಮ್ ಚಕರಪ್ಪೊರಿಯೋಱ್ರಿಕ್ಕೊಂಡು ।
ನಿನ್ನರುಳೇ ಪುರಿನ್ದಿರುನ್ದೇ ನಿನಿಯೋನ್ ತಿರುಕ್ಕುರಿಪ್ಪೇ ॥೧॥

ಅವತಾರಿಕೆ—ತಿರುಮಲೈಯಲ್ಲಿ ಕಲ್ಯಾಣಗುಣಪೂರ್ಣನಾಗಿ ಬಂದು, ನನ್ನನ್ನು ವಿಷಯೀಕರಿಸಿ, ನಿನ್ನ ಕೃಪೆಯನ್ನು ನನಗೆ ಆಶ್ರಯವಾಗಿ ಮಾಡಿದೆ. ಇನ್ನು ಮೇಲೆ ಸ್ವಾಮಿಯವರ ಅಭಿಪ್ರಾಯವೇನು ಎಂದು ಕೇಳುತ್ತಾರೆ.

ಅರ್ಥವು—ಶೆನ್ನಿಯೋಂಗು ತಣ್ ತಿರುವೇಙ್ಗಡಮುಡೈಯಾಯ್ – ಎತ್ತರವಾದ ಕೊಟೆಯನ್ನು ಹೊಂದಿದುದಾಗಿ ಶ್ರಮಪರಿಹಾರವಾದ ತಿರುಮಲೈ ಯನ್ನು ಆವಾಸವಾಗಿ ಮಾಡಿಕೊಂಡವನೇ, (ಸೌಲಭ್ಯವು)ಉಭಯವಿಭೂತಿಗಳಲ್ಲದೆ ಇದನ್ನೇ ಮೂರನೆಯ ವಿಭೂತಿಯಾಗಿ ಮಾಡಿಕೊಂಡವನೇ ಎಂಬ ಭಾವವು. ಉಗಂತನ್ನೈವಾಳ ನಿನ್ರನಂಬಿ - ಏನೊಂದೂ ವ್ಯತ್ಯಾಸವಿಲ್ಲದೆ ಲೋಕದ ಜನ ರೆಲ್ಲರೂ ತನ್ನನ್ನು ಆಶ್ರಯಿಸಿ ಬಾಳುವ ಹಾಗೆ ನೆಲಸಿರುವ ಕಲ್ಯಾಣಗುಣಸಾಗರನೇ ಇದರಿಂದ ಸರ್ವೇಶ್ವರನ ವಾತ್ಸಲ್ಯ ಪ್ರಬೋಧಿತವು. "ಸರ್ವಸ್ಯ ಶರಣಂ ಸುಹೃತ್" "ಸಮೋಹಂ ಸರ್ವಭೂತೇಷು" ಸರ್ವಲೋಕಶರಣ್ಯಾಯ ರಾಘವಾಯ ಮಹಾ ತ್ಮನೇ" "ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ" ಇತ್ಯಾದಿಗಳು ಸ್ಮಾರಿತವು. ದಾಮೋದರ – ನಿನ್ನ ತುಂಟತನವನ್ನು ತಗ್ಗಿಸುವ

---

(೨) ಪೆರಿ ತಿರು ೫-೪. (೩) ಪೆರಿ. ತಿರು. ೧೧-೮.೮.

ದಕ್ಕಾಗಿ ಯಶೋದೆಯು ನಿನ್ನ ಸೊಂಟಕ್ಕೆ ಹಗ್ಗವನ್ನು ಬಿಗಿದುದರಿಂದ ದಾಮೋದರನೆಂಬ ಹೆಸರನ್ನು ಹೊಂದಿದವನೇ ಗೋಪ್ಯಾದದೇ ಎಂಬ ಭಾಗವತ ಶ್ಲೋಕದಲ್ಲೂ, ಕಣ್ಣಿನುಣ್ ಚ್ಚಿರುತ್ತಾಂಬಿನಾಲ್" ಎಂಬ ಪಾಶುರದಲ್ಲೂ ಉಪಪಾದಿತವಾದ ಹಾಗೆ ಸೌಶೀಲ್ಯ, ಸೌಲಭ್ಯ, ಭಕ್ತಾನುರಕ್ತತೆಯನ್ನು ಹೊಂದಿದವನೇ, ಚದಿರಾ – ಆಶ್ರಿತ ದೋಷಗಳನ್ನು ತಿಳಿಯದಹಾಗೆ ಉಪಾಯವನ್ನುಳ್ಳವನೇ ! ಎನ್ನೈಯ್ಯುಮ್ ಎನ್ ಉಡಮೈಯ್ಯೈಯುಮ್ - ನಿನ್ನ ವಸ್ತುವಾದ ಆತ್ಮಾವನ್ನು, ನನ್ನ ಆತ್ಮಾವಿಗೆ ಸೇರಿದ ಶರೀರ ಸಂಬಂಧಿಗಳು ಮೊದಲಾದವನ್ನೆಲ್ಲಾ, ಚಕ್ಕರಪ್ಪೊರಿ ಒಟ್ರು ಕೊಂಡು-ಚಕ್ರದ ಮೂಲಕ ಮುದ್ರಿಸಿಕೊಂಡು, ಎಂದರೆ ಶಂಖ ಚಕ್ರಗಳ ಮೂಲಕ ಮನ್ತ್ರೋಪದೇಶ ಸಂಸ್ಕಾರವನ್ನುಂಟುಮಾಡಿಕೊಂಡು, ನಿನ್ನರುಳ್ಳೈ ಪುರನ್ದಿರುನ್ದೇನ್ - ನಿನ್ನ ನಿರ್ಹೇತುಕ ಕೃಪೆಯನ್ನೇ ನಿರಪೇಕ್ಷಿತವಾದ ಉಪಾಯವನ್ನಾಗಿ ತಿಳಿದು ನಿರ್ಭರೋ ನಿರ್ಭಯೋಽಸ್ಮಿ ಎಂದು ಹೇಳಿರುವಹಾಗೆ ಇದ್ದೇನೆ. ತಿರುಕ್ಕಿರುಪ್ಪು ಇನಿಯೇನ್-ಈ ನಿನ್ನ ಕೃಪೆಯು ನನಗೆ ಬೇಕಾದ ಜ್ಞಾನವನ್ನಿತ್ತು ಮಹರ್ಗಗಳ ಮೂಲಕ ನಿನ್ನಲ್ಲಿ ಶರಣಾಗತಿಯ ಮೂಲಕ ವಿರೋಧ ನಿವೃತ್ತಿಯನ್ನು ಉಂಟುಮಾಡಿದ ನಂತರ ಇನ್ನು ಯಾವುದು ಅಪೇಕ್ಷಿತವಾದುದು ಉಂಟು. ಇಲ್ಲಿ ಕೃಪಯಾ, ಅದರ ಕವಡುಗಳಾದ ಸೌಲಭ್ಯ ಸೌಶೀಲ್ಯ ವಾತ್ಸಲ್ಯಗಳು ಕೊಂಡಾಡಲ್ಪಟ್ಟವು." ಎನ್ರುಮ್ - ಎಂಬದಾಗಿಯೂ, (೩) ಇದರ ಪೂರಾ ಪಾಶುರವು.

ಅಣಿಯಾರ್ ಪೊಳಿಲ್ ಶೊಳರಂಗನಗರಪ್ಪಾತುಣಿಯೇನೆನಿ ನಿನ್ನರುಳಲ್ಲದೆನಕ್ಕು। ಮಣಿಯೇ ಮಣಿಮಾಣಿಕ್ಕಮೇ ಮತುಶೂತಾ ಪಣಿಯಾ ಯೆನಕ್ಕುಯ್ಯುವಕ್ಕೈ ಪರಂಜ್ಯೋತಿ ॥

ಅರ್ಥವು—ಅಣಿಯಾರ್ ಪೊಳಿಲ್ ಶೊಳ್ - ಸೌಂದರ್ಯವು ಹೆಚ್ಚಾಗಿರುವ ತೋಟಿಗಳಿಂದ ತುಂಬಿರುವ, ಅರೆಜ್ಞನಗರಪ್ಪಾ - ನಿರುಪಾಧಿಕ ಬಂಧುವಾಗಿ ನಿತ್ಯವಾಸವನ್ನು ಮಾಡಿಕೊಂಡು ನಿರತಿಶಯಭೋಗ್ಯವಾದ, ದಿವ್ಯ ಶ್ರೀರಂಗಕ್ಕೆ ನಾಯಕನಾದವನೇ ! ತುಣಿಯೇ ನಿನಿ ನಿನ್ನರುಳಲ್ಲದೆನಕ್ಕು - ನೀವಾಗಿಯೇ ಅಯೋಧ್ಯೆಯಿಂದ ಇಲ್ಲಿಗೆ ಬಂದು ನಿಂತು ಇಲ್ಲಿಯವರಿಗೆ ಉಜ್ಜೀವಿಸಿಕೊಳ್ಳುವ ಹಾಗೆ ಸೌಹಾರ್ದ್ರವುಳ್ಳ ಮಹಾಸ್ವಾಮಿಯ ಪ್ರೀತಿಯೇ ಮಾರ್ಗದರ್ಶಿಯಲ್ಲದೆ ಇನ್ನು ಯಾವುದೂ ನನಗೆ ಉಪಕಾರಕವಾದುದಿಲ್ಲವೆಂಬ ಭಾವವು, ಹೀಗೆ ನಿನಗೆ ಸ್ವಾಮಿಕೃಪೆಯೇ ಉಪಕಾರಕವೆಂದು ತೋರಿಸಿದವರು ಯಾರೆಂದರೆ ? ಶ್ರೀ ರಂಗನಾಥನೇ ಸಿದ್ಧೋಪಾಯನೆಂದು ಹೇಳುತ್ತಾರ. ಶ್ರೀ ರಂಗನಾಥನು ಬರೀ ಸುಂದರನಾಗಿ ಲಾವಣ್ಯ ಮಹೋದಧಿ ಅಷ್ಟು ಮಾತ್ರವೇಯೋ ? ಎಂದರೆ ಹಾಗಲ್ಲವು. ಆತನು ಮಣಿಯೇ - ನೀಲಮಣಿಯಹಾಗೆ ತಾಪಹರನೇ ! ಎನ್ನುತ್ತಾರೆ. ಅಷ್ಟುಮಾತ್ರವೇ ಅಲ್ಲದೆ ಮಣಿಮಾಣಿಕ್ಕಮೇ - ಹೆಚ್ಚಾದ ಬೆಲೆಯುಳ್ಳ ರತ್ನಗಳಿಗೆ ಹೇಗೆ ಮಹಿಮೆಯೋ ಹಾಗೆ ಮಹಿಮೆಯುಳ್ಳವನೇ ಹೇಗೆ ಮಹಿಮೆ

(೪) "ಉನದರುಳೇ ಪಾರ್ಪನಡಿಯೇ" ಎನ್ಸ್ರಮ್ (೫) ತಿರುಮಾ

---

ಎಂಬುದಕ್ಕೆ ಸ್ವಾಮಿ ದೇಶಿಕರವರ "ಅರಾದ ವರುಳಮುದಮ್ ಪೊದಿನ್ದ ಕೋಯಿಲ್" ಎಂಬ ಪಾಶುರವನ್ನೂ ಅದರ ಅರ್ಥವನ್ನೂ ನೋಡಿ. (೧೬೩೪-೪೫ ಪುಟಗಳು) ಶ್ರೀ ರಂಗನಾಥನು ದಯೆಮಾಡುವ ಮಾತು ಹಾಗಿರಲಿ. ಸಹಸ್ರಾಪರಾಧರೂಪ ವಿರೋಧಿವರ್ಗವಿದೆಯಲ್ಲಾ ಎಂದರೆ ನೀವು ಮಧುಸೂದಾ ವಲ್ಲವೇ ? ಮಧುವೆನ್ನುವ ಪ್ರಚಂಡ ರಾಕ್ಷಸನನ್ನೇ ಕೊಂದವರು, ಅಶ್ರಿತನ ವಿರೋಧವರ್ಗವನ್ನು ನಾಶಮಾಡಲಾರರೇನು ಎನ್ನುತ್ತಾರೆ. ಆಗಲಿ ತಮಗೆ ಇನ್ನೇನಾಗತಕ್ಕದ್ದು ಎಂದರೆ, ಪಣಿಯಾಯ್ ಎನುಕ್ಕುಯ್ಯುಂವಗೈ - ಪಾಪಗಳೆಲ್ಲಾ ಹೋಗುವ ಮಾರ್ಗ ಹೇಗೆ ? ನೀವು ಆಜ್ಞಾಪಿಸಿದ ರೀತಿಯಲ್ಲಿ ಏಕಾನ್ತ್ಯಭಕ್ತಿಯಿಂದ ಉಪಾಸನೆಯನ್ನು ಮಾಡಲು ನಾನು ಅಶಕ್ತನಲ್ಲವೇ ? ನನಗೆ ಮಾರ್ಗ ಹೇಗೆ ? ಎಂದು ಶೋಕಿಸಿದ ಅರ್ಜುನನಿಗೆ ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂದು ಹೇಳಿ ಅತನ ಶೋಕವನ್ನು ಹೋಗಲಾಡಿಸಿ, ಮಾಶುಚಃ ಎಂದು ಹೇಳಿದವರಲ್ಲವೇ ತಾವು, ಹಾಗೆಯೇ ತನಗೂ ಕೂಡ ಆತ್ಮೋಜ್ಜೀವನ ಮಾಡಿಕೊಳ್ಳುವ ಉಪಾಯವನ್ನು ತಿಳಿಸಿರಿ, ನೀವು ಸರ್ವಜ್ಞರಾದ ಪರಂಜ್ಯೋತಿಸ್ಸಲ್ಲವೇ ? ತಸ್ಯ ಭಾಸಾ ಸರ್ವಮಿದಂ ವಿಭಾತಿ ಎಂದಲ್ಲವೇ ಹೇಳಿರುವದು.

(೪) "ವಾಳಾಲರುತ್ತು ಚ್ಚುಡಿನುಮ್ ಮರುತ್ತು ವನ್ಪಾಲ್ ।
ಮಾಳಾದಕಾದಲ್ ನೋಯಾಳನ್ ಪೋಲೆ ; ಮಾಯತ್ತಾಲ್ ।
ಮಿಾಳಾತ್ತುಗುರ್ ತರಿಲುಮ್ ವಿತ್ತುವ ಕೋಟ್ಟಮ್ಮಾ ! ನೀ ।
ಆಳಾವುನದರುಳೇ ಪಾರ್ಪ್ಪನಡಿಯೇನೇ ॥೪॥

ವಾಳಾಲ್ ಅರುತ್ತು - ವೈದ್ಯನು ಹುಣ್ಣನ್ನು ತನ್ನ ಕತ್ತಿಯಿಂದ ಭೇದಿಸಿ, ಶುಡಿನುಮ್ - ಆತನು ಕತ್ತಿ ಸೂಜಿ ಮೊದಲಾದವನ್ನು ಕಾಸಿ ದೇಹದ ಹುಣ್ಣನ್ನು ಸುಟ್ಟರೂ, ಮರುತ್ತುವನ್ಪಾಲ್ - ವೈದ್ಯನ ಮೂಲಕವಾಗಿ, ಮಾಳಾದ ಕಾದಲ್- ಅವನಿಗೆ ವಿಶೇಷ ದ್ರವ್ಯವನ್ನು ಸಮರ್ಪಿಸಿ, ಅತಿಶಯ ಪ್ರೇಮವನ್ನು ಹೊಂದಿರುವ ನೋಯಾಳಾನ್ ಪೋಲೇ - ವಿಷಯಲಂಪಟನಾಗಿದ್ದುದರಿಂದ ವ್ಯಾಧಿಗ್ರಸ್ತರಾದವರ ಹಾಗೆ, ಓ ವಿತ್ತುವ ಕೋಟ್ಟಮ್ಮಾ – ಓ ಆ ಊರಿಗೆ ಸ್ವಾಮಿಯಾದವನೇ, ಅರ್ಚಾವತಾರ ಮೂರ್ತಿಯೇ ! ನೀ - ನೀವು, ಮಾಯತ್ತಾಲ್ - "ಮಾಯಾಂತು ಪ್ರಕೃತಿಂ ವಿದ್ಧಿ" ಎಂಬಲ್ಲಿ ಹೇಳಿರುವಹಾಗೆ ಪ್ರಕೃತಿಸಂಬಂಧದಿಂದ, ಮಿಾಳಾ - ಒಂದು ಕಾಲದಲ್ಲೂ ಬಿಟ್ಟಿರದಹಾಗೆ, ತರ್ಯ್ರ ತರಿಲುಮ್ - ಪುನಃಪುನಃ ಅನೇಕ ಜನ್ಮಗಳ ಮೂಲಕ "ಕ್ಷಿಪಾಮ್ಯಜಸ್ರಂ" ಎಂಬಲ್ಲಿ ಹೇಳಿರುವಹಾಗೆ ದುಃಖವನ್ನು

---

(೪) ಪೆರುಮಾಳ್ ತಿರು ೫-೪. (೫) ಪೆರುಮಾಳ್ ತಿರು ೯-೧೦.

ಮಕಳೈಪ್ಪೆತ್ತು ವೆನ್ನೆಞ್ಜಮ್ ಕೋಯಿಲ್‌ಕೊಂಡ ಪೇರರುಳಾಳನ್ ಎನ್ರು ಮ್, (೬) "ನಿನ್ತಿರುವರುಳಾಲನ್ರಿಕ್ಕಾಪರಿತು" ಎನ್ರುಮ್, (೭) "ನಿನ್ತಿರು

---

ಕೊಟ್ಟರೂ, ಅಡಿಯೇನ್ - ತಮ್ಮಲ್ಲಿ ಶರಣಾಗತಿಯನ್ನು ಅನುಷ್ಠಿಸಿದ ದಾಸನು, ಆಳಂ - ಆ ದಾಸವೃತ್ತಿಗೆ ಸಹಜವಾದ ನಿತ್ಯ ಕೈಙ್ಕರ್ಯವನ್ನು ಮಾಡುವ ಸುಕೃತ ವನ್ನು ಹೊಂದಲು, ಉನದರುಳ್ - ನಿನ್ನ ಕೃಪೆಯೊಂದನ್ನೇ ಮುಖ್ಯವಾದುದಾಗಿ ಪಾರ್‌ಪನ್ - ಅರಿತು ಎದರು ನೋಡುತ್ತಿದ್ದೇನೆ. ಹೀಗೆ ಅನೇಕಾಪರಾಧ ಗಳನ್ನು ಮಾಡಿದವನಿಗೆ ಈ ದೇಹಕ್ಕೆ ಮಾಡಿಸಿದ ದರಿದ್ರೌಷಧಿಗಳಲ್ಲಿ ಪ್ರೇಮವನ್ನು ಬಿಟ್ಟು ಹೀಗೆ ನಿನ್ನನ್ನು ಮರೆತು ವಿಷಯಲಂಪಟನಾದ ನಿನಗೆ ನಿನ್ನ ಕೃಪೆಯೇ ಸರ್ವೌಷಧಿಯು, ಕುಪ್ಪಿಯು ಮಾತ್ರೆಯು ಎಂದು ಈಗ ಭಾವಿಸಿ, ನಿನ್ನನ್ನು ನಂಬಿ, ಆಶ್ರಯಿಸಿರುತ್ತೇನೆ ಎಂಬ ಭಾವವು "ಎನ್ರುಮ್ - ಎಂಬದಾಗಿಯೂ, (೫) ಇದರ ಪೂರಾ ಪಾಶುರವು ದೊರೆಯಲಿಲ್ಲವು. ತಿರುಮಾಮಗಳ್ - ಶ್ರೇಷ್ಠಳಾದ ಮಹಾಲಕ್ಷ್ಮಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿಕೊಂಡು, ಎನ್ನೆಞ್ಜಮ್ - ನನ್ನ ಹೃದಯವನ್ನು, "ಕೋಯಿಲ್‌ಕೊಂಡ "ವಿಶ್ವಸ್ಯಾಯತನಂ ಮಹತ್" ಎಂಬಲ್ಲಿ ಹೇಳಿರುವ ತನಗೆ ದೇವಾಲಯವನ್ನು ಮಾಡಿಕೊಂಡ, ಪೇರರುಳಾಳನ್ - ಮಹಾ ಕೃಪಾ[illegible] ರಂಗನಾಥನು, "ಈಶ್ವರಸ್ಸರ್ವಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ" (ಗೀ. ೧೮) "ಸರ್ವಸ್ಯಚಾಹಂ ಹೃದಿ ಸನ್ನಿವಿಷ್ಟಃ" ಇತ್ಯಾದಿಗಳು ಅನು ಸಂಧೇಯವು.

(೬) ನಿನ್ತಿರುವರುಳಾಲ್ ಪೂರಾ ಪಾಶುರವು—

ಇರ್ರೈಯೋ ವಿರುಕ್ಕಿನು ವಿಾಜಿನ್ಗೇರ್ ಪೆಣ್ಪಾಲೆನವುಮ್ಮಿರಙ್ಗಾತು
ಅರ್ರೈಯೋ ವೆನನಿನ್ರತಿರುವಮ್ ಕೆರುಙ್ಗಡಲ್। ಈಙ್ಗವಳ್ ತನ್ ।
ನಿರ್ರೈಯೇ ವೆನಿಯುನ್ರಿರುವರಳಾಲ್ ಅನ್ರಿಕ್ಕಾಪ್ಪರಿಕಾಲ್
ಮುರ್ರೈಯೋ ಅರವಣೆಮೇರ್ಪ್ಪಳ್ಳಿಕೊಂಡ ಮುಕಿಲ್ವಣ್ಣನೇ ॥ ೬೭ ॥

ಕೆರುಂಕಡಿಲ್ - ಕಪ್ಪಾದ ಸಮುದ್ರವು, ಜ್ಞಾನಶೂನ್ಯವಾಗಿ ದುಃಖವನ್ನುಂಟು ಮಾಡುವ ಸಂಸಾರ ಸಮುದ್ರವು, ಇರುಕ್ಕಿನುವಮ್-ರಕ್ಷಿಸು ಎಂದು ಪ್ರಾರ್ಥಿಸಿದರೂ ಓರ್‌ಪೆಣ್ಪಾಲೆನವುಮ್ - ಅಶಕ್ತಳಾಗಿರುವ ಬಾಲೆಯಾಗಿರುವ ಒಬ್ಬ ಹೆಂಗಸು ಎಂದು ಹೇಳಿ, ಈಙ್ಗ - ಈ ವಿಷಯದಲ್ಲಿ, ಇರ್ರೈ - ಸ್ವಲ್ಪವೂ ಕೂಡ, ಇರಙ್ಗದು- ದಯೆ ಮಾಡಲಾರದು ; ಅರಿಯೋೇಯೆನ . ಘೋಷವನ್ನು ಮಾಡುತ್ತಾ, ನಿನ್ರು - ಸ್ಥಿರವಾಗಿ ನಿಂತು, ಅತಿರುವಮ್ - ಘೋಷಿಸುತ್ತಲೇ ಇರುತ್ತದೆ ; ಓ ಇದೇನು ಕ್ರೌರ್ಯವೋ ? ಸಮುದ್ರನು ರಕ್ಷಿಸುವ ಶಕ್ತಿಯಿಲ್ಲದವನು. ಇದಕ್ಕೆ ದೃಷ್ಟಾಂತವು ಸಮುದ್ರವನ್ನು ದಾಟಲು, ಸಹಾಯ ಮಾಡು ಎಂದು ಸರ್ವಶಕ್ತನಾದ ಶ್ರೀರಾಮನು

---

(೬) ತಿರುವಿರುತ್ತಂ. ೬೨. (೭) ತಿರು ೯-೨-೧.

ವರುಳುಮ್ ಪಙ್ಗಯತ್ತಾಲ್ ತಿರುವರುಳುಮ್" ಎನ್ರುಮ್, (೮) ಆವಾವೆನ್ರ

ಅಶಕ್ತನಾದ ಸಮುದ್ರವನ್ನು ಪ್ರಾರ್ಥಿಸಿದ ಹಾಗೆ. ಸಂಸಾರ ಸಮುದ್ರವೂ ಹಾಗೆಯೇ ವಿಷಯೋಪಭೋಗಗಳಲ್ಲಿ ಮುಳಗಿ ಘೋಷಿಸುವ ಹಾಗೆ ಮಾಡುವಂಥಾದ್ದು. ಆದುದರಿಂದ ಅರವು ಅಣ್ಣೈಮೇಲ್ - ಮೃದುವಾಗಿರುವ ಆದಿಶೇಷನೆಂಬ ಸುಪ್ಪತ್ತಿಗೆಮೇಲೆ, ಪಳ್ಳಿಕೊಂಡ - ಮಲಗಿರುವ, ಮುಗಿಲ್ ವಣ್ಣನೇ - ಸುಂದರನಾದ ಮೇಘಶ್ಯಾಮನೇ, ಈಙ್ಗು - ನೀನು ಕೃಷ್ಣಾವತಾರಿಯಾಗಿರುವ ಕಾಲದಲ್ಲಿ ಜನ್ಮವಿಲ್ಲದೆ, ಈಗಿರುವ, ಇವಳ್ ತನ್ ನಿರೈಯೋ - ಈ ಬಾಲೆಯು ಸ್ತ್ರೀಲಕ್ಷಣ ಪರಿಪೂರ್ಣಳು, ಇನಿ - ಇನ್ನು ಮುಂದೆ, ಉನ್ ತಿರುವರುಳನ್ರಿ - ನಿನ್ನ ಕರುಣೆಯಲ್ಲದೆ ಕಾಪ್ಪು ಅರಿದು - ರಕ್ಷಿಸಲು ಸಾಧ್ಯವಿಲ್ಲವು, ಮುರೈಯೋ - ಇದು ನ್ಯಾಯವೋ ? ನೀನು ಸುಖವಾಗಿ ಶೇಷಶಾಯಿಯಾಗಿ ಮಲಗಿರುವದೂ, ನಿನ್ನಲ್ಲಿ ಶರಣಾಗತಿಯನ್ನಾಶ್ರಯಿಸಿದ ಅಶಕ್ತರಾದ ನಿನ್ನನ್ನೇ ನಂಬಿರುವ ಬಾಲೆಯಹಾಗೆ ನಿನ್ನನ್ನೇ ಪ್ರೀತಿಸುತ್ತಿರುವ ಈ ಆಳ್ವಾರ್ರಲ್ಲಿ ನೀನು ಕೃಪೆಮಾಡದಿರುವದು ನ್ಯಾಯವೇ ಎಂದು ಪುರುಷಕಾರಭೂತೆಯಾದ ತಾಯಿಯು ಹೇಳುತ್ತಾಳೆ.

(೭) ಪಣ್ಡೈ ನಾಳಾಲೇ ನಿನ್ತಿರುವರುಳುಮ್ ಪಙ್ಗಯತ್ತಾಲ್ ತಿರುವರುಳುಙ್ಗೊಣ್ಡು, ನಿನ್ಕೋಯಿಲ್ ಶೀಯ್ತ್ತು ಪ್ಪಲ್ ಪಡಿಕಾಲ್ ಕುಡಿಕುಡಿವಳಿವನ್ದಾಟ್ಚೆಯ್ಯುಮ್ ತೊಣ್ಡರೋರ್ಕ್ಕರುಳಿಚ್ಚೋತ್ತಿವಾಯ್ ತಿರುನ್ದುನ್ರಾಮರೈಕಣ್ಗಳಾನೋಕ್ಕಾಯ್ । ತೆಣ್ಣಿರ ಪ್ಪೊರುನತ್ತಣ್ಪಣೈ ಶೂಳನ್ದ ತಿರುಪ್ಪುಳಿಙ್ಗುಡಿ ಕಿಡನ್ದಾನೇ ॥ ೧ ॥

ಅರ್ಥವು—ತೆಣ್, ತಿರೈ, ಪ್ಪೊರುನಲ್ – ನಿರ್ಮಲವಾದ ತೆರೆಗಳುಳ್ಳ, ತಾಮ್ರಪರ್ಣೀ ನದಿಯನ್ನು ಹೊಂದಿದಾಗಿ, ತಣ್, ಪಣೈ, ಶೂಳ್ನ್ದ - ತಂಪಾಗಿರುವ ಜಲಸಮೃದ್ಧಿ ಇರುವ ಗದ್ದೆಗಳಿಂದ ತುಂಬಿರುವ, ತಿರುಪ್ಪುಳಿಙ್ಗುಡಿ ಕಿಡನ್ದಾನೇ - ತಿರುಪ್ಪುಳಿಙ್ಗುಡಿ ಎಂಬ ದಿವ್ಯಕ್ಷೇತ್ರದಲ್ಲಿ ಬಿಜಮಾಡಿಸಿರುವವನೇ ! ನಿನ್ ತಿರುವರುಳುಮ್ - ನಿರುಪಾಧಿಕ ಬಂಧುವಾದ ನಿನ್ನ ದಯೆಯನ್ನು, ಮತ್ತು ಪಙ್ಗಯತ್ತಾಲ್ ತಿರುವರುಳುಮ್ - ಕಮಲವಾಸಿನಿಯಾದ ನಿನ್ನ ಪತ್ನಿಯಾದ ಲಕ್ಷ್ಮಿಯ ಪರಮ ದಯೆಯನ್ನೂ, ಪಣ್ಡೈನಾಳಾಲೇ ಕೊಂಡು – ಬಹು ಕಾಲದಿಂದಲೂ ಬಂದಿರುವ, ನಿನ್ನ ಕೋಯಿಲ್ ಶೀಯ್ತ್ತು-ನೀನು ಬಿಜಮಾಡಿಸಿರುವ ದಿವ್ಯಾಲಯದಲ್ಲಿ ಉಚಿತ ಕೈಙ್ಕರ್ಯವನ್ನು ಮಾಡಿ. ಪಲ್‌ಪಡಿಕಾಲ್ . ಅನೇಕ ಪೂರುಷವಾಗಿ ಬಹುಕಾಲದಿಂದಲೂ, ಕುಡಿಕುಡಿ ವಳಿವನ್ದು - ಕುಲಕ್ರಮವಾಗಿ ಪುತ್ರ ಪೌತ್ರಾದಿಗಳೊಂದಿಗೆ, ಶಾಸ್ತ್ರೋಕ್ತರೀತಿಯಲ್ಲಿ, ಅಟ್ಚೆಯ್ಯುಮ್ - ಕೈಙ್ಕರ್ಯವನ್ನು ಮಾಡುತ್ತಿರುವ, ತೊಂಡರೋರ್ಕು ಅರುಳ್ - ನಿನಗೆ ಶೇಷಭೂತರಾದ ಭಕ್ತರಿಗೆ ನಿರವಧಿಕ ಕೃಪೆಯನ್ನು ಮಾಡಿ, ಶೋದಿವಾಯ್ ತಿರನ್ದು - ಪ್ರಕಾಶಮಾನವಾದ

ನಿನ್ನ ಬಾಯನ್ನು ತೆರೆದು, ನನ್ನ ಉಜ್ಜೀವನೆಗಾಗಿ ಒಂದು ವೇಳೆ ಮಾತನಾಡಿ, ಉನ್ ತಾಮರೈ ಕಣ್ಗಳಾಯ್ - ಆಶ್ರಿತರಿಗೆ ಪರಮ ವಾತ್ಸಲ್ಯವನ್ನೂ ದಯೆಯನ್ನೂ ತೋರುವ ನಿನ್ನ ಪುಂಡರೀಕ ಸದೃಶ ಕಣ್ಣುಗಳಿಂದ, ನೋಕ್ಕಾಯ್ - ಕಟಾಕ್ಷಿಸು ಎಂದು ಪ್ರಾರ್ಥಿಸುವನು. ಇಲ್ಲಿಯೂ ಲಕ್ಷ್ಮಿಯ ದಯೆಯೂ ಸ್ವಾಮಿಯ ದಯೆಯೂ ಸಹ ಕೊಂಡಾಡಲ್ಪಟ್ಟಿತು. ಪರಮ ಕರುಣಾನಿಧಿಯು ಮುಗುಳುನಗೆಯಿಂದ ಕೂಡಿದ ದಿವ್ಯವದನದ ಮೂಲಕ ಒಂದು ಮಾತನ್ನು ಹೇಳಿದುದಾದರೆ ಆಶ್ರಿತನ ತ್ರಿವಿಧ ಆರ್ತಿಗಳಿಂದ ಬೆಂದ ತಾಪವೆಲ್ಲಾ ಕಳೆದುಹೋಗಿ, ಹಾಗೆಯೇ ದಿವ್ಯ ಕಟಾಕ್ಷದಿಂದ ನೋಡಿದರೆ ಈತನಿಗೆ ಸರ್ವ ಶಾನ್ತಿಯೂ, ಲಭಿಸುತ್ತದೆ. ಹೇಗೆಂದರೆ ವಿಭೀಷಣನು ತನ್ನ ಕಷ್ಟದೆಶೆಯನ್ನು

"ಅನುಜೋ ರಾವಣಸ್ಯಾಹಂ ತೇನ ಚಾಪ್ಯವಮಾನಿತಃ ।
ಭವಂತಂ ಸರ್ವಭೂತಾನಾಂ ಶರಣ್ಯಂ ಶರಣಾಗತಃ ॥

ಎಂದು ಹೇಳಿಕೊಂಡು ಯಾವಾಗ ಎದುರಿಗೆ ನಿಂತನೋ ಆಗ ಶರಣಾಗತ ವತ್ಸಲನು, ವಚಸಾ ಸಾಂತ್ವಯಿತ್ವೈನಂ ಲೋಚನಾಭ್ಯಾಂ ಪಿಬನ್ನಿವ॥ ಆತನನ್ನು ಮಾತಾಡಿಸಿ ದಿವ್ಯ ಕೋಮಲ ಕಟಾಕ್ಷದಿಂದ ಈಕ್ಷಿಸಿರುತ್ತಾನೆ. ಈ ಅಭಿಪ್ರಾಯವೇ ಇಲ್ಲಿಯೂ ಉಪಪಾದಿತವು. ಆ ಮಾತೂ ಆ ಕಟಾಕ್ಷವೂ ದಯಾ ಪ್ರೇರಿತವಾಗಿ ಈತನ ತಾಪತ್ರಯಗಳನ್ನೆಲ್ಲಾ ಹೋಗಲಾಡಿಸಿ ಆನಂದವನ್ನು ಕೊಡುವಂತಾವುಗಳು ಎಂಬ ಭಾವವು.

(೮) "ಆವಾವೆನ್ರು" ಪೂರಾ ಪಾಶುರವು ಯಾವುದೆಂದರೆ—

ಆವಾರಾರ್ ತುಣೈಯೆನ್ರಲೈ ನೀರ್ಕಡಲುಳಳುನ್ದು
ನಾವಾಯ್‌ಪೋಲ್ ಪಿರವಿಕ್ಕಡ ಲುಳಿನ್ರು ನಾನ್ರುಳಙ್ಗ
ತ್ತೇವಾರ್ ಕೋಲತ್ತೊಡನ್ದಿ ರುಚ್ಚಕ್ಕರಮ್ ಶಙ್ಗೊಡು
ಮಾವಾವೆನ್ರರುಳ್ ಶೆಯ್‌ತಡಿಯೇ ನೊಡುಮಾನಾನೇ ॥೯॥

ಅರ್ಥ—ನಾನು ಸಂಸಾರ ಸಾಗರದಲ್ಲಿ ಬಿದ್ದು ಪಟ್ಟ ಕ್ಲೇಶವೆಲ್ಲಾ ತೀರುವ ಹಾಗೆ ಸರ್ವೇಶ್ವರನು ತನ್ನ ಶಂಖ ಚಕ್ರಾದಿ ದಿವ್ಯಾಯುಧಗಳೊಂದಿಗೆ ಕೃಪೆಯಿಂದ ಬಂದು ಸೇವೆ ಇತ್ತಿರುತ್ತಾನೆಂದು ಹೇಳುತ್ತಾರೆ.—

ಆದಾರಾರ್‌ತುಣೈ - ನಿನಗೆ ಪರಮ ಸುಹೃತ್ತು ಯಾರು ಎಂದು ಹೇಳಿ, ಅಲೈನೀರ್ ಕಡಲುಳ್-ಅಲೆಗಳು ಹೊಡೆಯುತ್ತಿರುವ ಅಗಾಧ ನೀರುಳ್ಳ ಸಮುದ್ರದಲ್ಲಿ, ಅಳನ್ದುಂ ನಾವಾಯ್ ಪೋಲೇ – ಮುಳುಗುತ್ತಿರುವ ನಾವೆಯಹಾಗೆ, ಪಿರವಿಕ್ಕಡಲುಳ್ - ಸಂಸಾರ ಸಮುದ್ರ ಮಧ್ಯದಲ್ಲಿ, ನಾ - ಆಚೇ ದಡವನ್ನು ಸೇರಲು ಉಪಾಯವಿಲ್ಲದೆ ಕಷ್ಟಪಡುತ್ತಿರುವ ನಾನು, ಕುಳಙ್ಗನಡಗಲಾಗಿ, ತೇವು

**ಆರ್ ಕೋಲತ್ತೋಡು** . (ಆ ಸಮಯದಲ್ಲಿ) ದಿವ್ಯ ಲಾವಣ್ಯಯುಕ್ತವಾದ ದಿವ್ಯ ಮಙ್ಗಳವಿಗ್ರಹದಿಂದ ಯುಕ್ತನಾಗಿ, **ತಿರುಚಕ್ಕರಮ್ ಶಙ್ಗೊಡು** - ದಿವ್ಯ ಚಕ್ರಾಳ್ವಾರ್ ಶಂಖಾಳ್ವಾರ್‌ರೊಡಗೂಡಿ, **ಅ ಆ ಎನ್ರು** - ಅಯ್ಯೋ ಅಯ್ಯೋ ಅದು ಕಷ್ಟಪಡುವದನ್ನು ನೋಡಿ, **ಅರುಳ್‌ಶೆಯ್ದ** – ಕೃಪೆ ಮಾಡಿದ, **ಅಡಿಯೇನೋಡುಮ್ ಆನಾನ್** - ಮಹಾಪರಾಧಿಯಾದ ನನ್ನಂತವನೊಂದಿಗೂ ಬಂದು ಸೇರಿದನು. ಸ್ವಾಮಿಕೃಪೆಯ ಮಹಿಮೆಯು ಎಷ್ಟು ದೊಡ್ಡದು ಎಂಬ ಭಾವವು. ಆತನ ಸೌಲಭ್ಯ ಸೌಶೀಲ್ಯ ಕಾರುಣ್ಯಾದಿಗಳು ಎಷ್ಟು ಮಹಿಮೆಯುಳ್ಳವು! ಈ ಸಂಸಾರ ಸಾಗರದಲ್ಲಿ ಬಿದ್ದು ಕ್ಲೇಶಪಡುತ್ತಿರುವನನ್ನು ನೋಡಿ ಕನಿಕರದಿಂದ ಪರಮ ಸುಹೃತ್ತಾಗಿ ಬಂದು ಸಂಸಾರದ ಆಚೇ ದಡವನ್ನು ಸೇರುವಹಾಗೆ ಮಾಡುವದಕ್ಕಾಗಿ ಸಿದ್ಧೋಪಾಯನಾಗಿ, ಪರಮ ಲಾವಣ್ಯದಿಂದ ಕೂಡಿದ ದಿವ್ಯ ಮಙ್ಗಳ ವಿಗ್ರಹದೊಂದಿಗೆ ಶಂಖಚಕ್ರಗಳನ್ನು ಧರಿಸಿ ಬಂದಿದ್ದಾನಲ್ಲಾ, ಅತನು ಎಂತಹ ಕೃಪಾಮಹೋದಧಿಯು ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಈ ಭಾಗವತ ಶ್ಲೋಕವು ಅನುಸಂಧೇಯವು.

**ದಿಷ್ಟ್ಯಾತ್ವನೋ ಭಗವಾನ್ದೃಷ್ಟೋ ಮಗ್ನಾನಾಂ ವ್ಯಸನಾರ್ಣವೇ ।**
**ಕರ್ಣಧಾರ ಇವಾಪಾರೇ ಭಗವಾನ್ ಪಾರದರ್ಶನಃ** ॥ (೧–೧೩-೪೦)

೯. ಹೀಗೆ ಮೇಲೆ ಆಳ್ವಾರುಗಳೆಲ್ಲಾ ಸ್ವಾಮಿಯ ದಯೆಯನ್ನೇ ಪ್ರಧಾನ ಗುಣವೆಂದು ಭಾವಿಸಿರುತ್ತಾರೆಂದು ಹೇಳಿ ಸಂಪ್ರದಾಯವನ್ನು ಪ್ರದರ್ಶಿಸಿದರು. ಅದನ್ನೇ ಮುಂದೆ ಪರಮಾಚಾರ್ಯರುಗಳ ಅಪ್ರಮಾಣಗಳ ಮೂಲಕ ಸಮರ್ಥಿಸುತ್ತಾರೆ. ಈ ಶ್ಲೋಕವು ಯಾವುದೆಂದರೆ—

**ಅಪರಾಧ ಸಹಸ್ರ ಭಾಜನಂ ಪತಿತಂ ಭೀಮ ಭವಾರ್ಣವೋದರೇ ।**
**ಅಗತಿಂ ಶರಣಾಗತಂ ಹರೇ ಕೃಪಯಾ ಕೇವಲ ಮಾತ್ಮಸಾತ್ಕುರು** ॥

ತನ್ನ ಸಹಸ್ರಾಪರಾಧವನ್ನು ನೋಡಿದರೆ ತನಗೆ ಗತಿಯು ಎಂದಿಗೂ ಇಲ್ಲವಾಗುತ್ತದೆ. ಹೀಗೆ ಗತಿಯೇ ಕಾಣದಿರುವ ತನಗೆ ಓ ಹರಿಯೇ ನಿನ್ನ ಕೇವಲ ಕೃಪೆಯೇ ಗತಿಯಲ್ಲದೆ ಅನ್ಯಥಾ ಇಲ್ಲವಾದುದರಿಂದ ತನ್ನ ಸರ್ವಾಪರಾಧಗಳನ್ನೂ ಹೋಗಲಾಡಿಸುವ ಶಕ್ತಿಯುಳ್ಳ ಶ್ರೀ ಹರಿಯೇ ಕೃಪೆಯಾ ನನ್ನನ್ನು ಅನುಗ್ರಹಿಸಿ ನಿನ್ನ ಕೈಙ್ಕರ್ಯದಲ್ಲೇ ಸದಾ ನಿರತನಾಗಿರುವಹಾಗೆ ಮಾಡು ಎಂದು ಪ್ರಾರ್ಥಿಸುತ್ತಾರೆ.

**ಹೇ ಹರೇ** - "**ಹರರ್ಹರತಿ ಪಾಪಾನಿ ದುಷ್ಟಚಿತ್ತೈರಪಿಸ್ಮೃತಃ**" ಎಂದೂ "**ದೇವಪ್ರಪನ್ನಾರ್ತಿಹರ**" ಎಂದೂ, "**ಹರಣಾದೇವ ದುಃಖಾನಾಂ ಹರಿರಿತ್ಯಭಿಧೀಯತೇ** ಎಂದೂ, "**ಮಹತೀ ಮಾಪದಂ ಪ್ರಾಪ್ಯ ಸ್ಮರ್ತವ್ಯೋ ಭಗವಾನ್‌ಹರಿಃ**"

---

(೮) ತಿರು. ೫-೧೯ (೯) ಆಳ. ಸ್ತೋ. ೪೮

ಎನ್ರುಮ್, (೧೦) "ಕರೀಶ ತೇಷಾಮಪಿ ತಾವಕೀ ದಯಾ ತಥಾ ಕೃತ್ಸ್ನೈವ ತುಮೇ ಬಲಂ ಮತಮ್" ಎನ್ರುಮ್.

---

ಎಂದೂ, "ಪರಮಾಪದಮಾಪನ್ನೋ ಮನಸಾ ಚಿನ್ತಯೇದ್ಧರಿಮ್" ಎಂದೂ, ಪ್ರಮಾಣಗಳಿರುವದರಿಂದ ತಾವು ಮಾಡಿರುವ ಅಸಂಖ್ಯೇಯ ಪಾಪಗಳನ್ನೆಲ್ಲಾ ಪ್ರಪನ್ನನು ಈತನು, ರಕ್ಷಿಸಲು ಯೋಗ್ಯನೆಂದು ಭಾವಿಸಿ, ನಾಶಪಡಿಸುವನಾದುದರಿಂದ. ಹೇ ಹರೇ ಎಂದು ಸಂಬೋಧಿಸುತ್ತಾರೆ. ಅಪರಾಧ ಸಹಸ್ರಭಾಜನಂ- ಅಸಂಖ್ಯೇಯ ಅಪರಾಧಗಳನ್ನು ಮಾಡಿದ ಮತ್ತು ಭೀಮಭವಾರ್ಣವೋದರೇ "ಸಂಸಾರಸಾಗರಂ ಘೋರ ಮನನ್ತಕ್ಲೇಶಭಾಜನಂ" ಎಂದು ಹೇಳಿರುವ ಹಾಗೆ ಸಂಸಾರ ಸಾಗರದ ಮಧ್ಯದಲ್ಲಿ, ಪತಿತಂ ಬಿದ್ದಿರುವ, ಸಾಗರದ ದಡದ ಹತ್ತಿರವಾದರೂ ಬಿದ್ದಿದ್ದರೆ ಅಂತವನನ್ನು ಸುಲಭವಾಗಿ ಎತ್ತಬಹುದು; ಸಮುದ್ರದ ನಡುನೀರೊಳು ಬಿದ್ದವರನ್ನು ಎತ್ತುವದು ಕಷ್ಟವು. ಹಾಗೆ ಬಿದ್ದವನನ್ನೂ ಅಗತಿಂ - ಅನನ್ಯಗತಿಕನಾಗಿ ದೀನನಾಗಿರುವ, ಆ ಕಾರಣದಿಂದ ಶರಣಾಗತಂ– ನೀನಲ್ಲದೆ ನನಗೆ ಇನ್ನು. ಯಾರೂ ರಕ್ಷಕರಿಲ್ಲ, ನೀನೇ ರಕ್ಷಕನೆಂದು ಮಹಾ ವಿಶ್ವಾಸದಿಂದ ಶರಣಾಗತನಾದವನನ್ನು, ಹೀಗೆ ಅನೇಕಾಪರಾಧಗಳನ್ನು ಮಾಡಿ ಮಹಾ ಪಾಪಿಷ್ಟನಾದುದರಿಂದ, ಮಾಂ ಎಂದು ಹೇಳಿಕೊಳ್ಳಲೂ ಕೂಡ ಅನರ್ಹನಾದವನನ್ನು, ಕೇವಲಂ ಕೃಪಯಾ – ಬರೀ ನಿನ್ನ ಕೃಪೆಯಿಂದಲೇ, ಶರಣಾಗತಿಯನ್ನು ನಿನ್ನ ಪಾದಕಮಲವನ್ನು ಹಿಡಿದುಕೊಳ್ಳುವದೊಂದು ವಿನಾ ಇನ್ನು ಯಾವ ನನ್ನ ಪ್ರಕೃತಿಯನ್ನೂ ಎದುರು ನೋಡದೆ ಕೇವಲ ನಿನ್ನ ಕೃಪಾ ಮಾತ್ರದಿಂದಲೇ, ಆತ್ಮಸಾತ್ಕುರು - ನಿನ್ನೊಂದಿಗೆ ಸೇರಿಸಿಕೊಂಡು ನಿನಗೆ ಯಾವಾಗಲೂ ಕೈಙ್ಕರ್ಯವನ್ನು ಮಾಡುವಹಾಗೆ ಅನುಗ್ರಹಿಸು, ಅಥವಾ ಲಬ್ಧ ಸತ್ತೆಯನ್ನುಳ್ಳವನನ್ನಾಗಿ ಮಾಡು ಎನ್ರುಮ್ – ಎಂಬದಾಗಿಯೂ,

(೧೦) "ಸ್ವಕೈರ್ಗುಣೈಸ್ಸ್ವೈಶ್ಚರಿತ್ರೈ ಸ್ವವೇದನಾದ್ಭಜಂತಿ ಯೇ ತ್ವಾಂ ತ್ವಯಿ ಭಕ್ತಿತೋಽಥವಾ। ಕರೀಶ ತೇಷಾಮಪಿ ತಾವಕೀ ದಯಾ ತಥಾತ್ವಕೃತ್ಸ್ನೈವತು ಮೇ ಬಲಂಮತಮ್" ॥ ೯೪ ॥

ಇದರರ್ಥವು—ಸ್ವಕೈರ್ಗುಣೈಃ - ನಿನ್ನ ಕಲ್ಯಾಣಗುಣಗಳಿಂದಲೂ, ಸ್ವೈಶ್ಚರಿತ್ರೈಃ - ನಿನ್ನ ಸ್ವಕೀಯವಾದ ದಿವ್ಯ ಚೇಷ್ಟಿತೆಗಳಿಂದಲೂ ಕೂಡಿ, ಯೇ - ಯಾವ ಮೋಕ್ಷಾರ್ಥಿಗಳು, ಸ್ವವೇದನಾತ್ - ನಿನ್ನನ್ನು ಉಪಾಸಿಸುವದರ ಮೂಲಕ ಭಜಂತಿ - ಸೇವಿಸುತ್ತಾರೋ, ಅಥವಾ ತ್ವಯಿ – ನಿನ್ನಲ್ಲಿ, ಭಕ್ತಿತಃ - ಮಹತ್ತಾದ ವಿಶ್ವಾಸದಿಂದ, ಭಜಂತಿ - ಭರನ್ಯಾಸವನ್ನು ಅನುಷ್ಠಿಸುತ್ತಾರೋ, ತೇಷಾಮಪಿ - ಅಂತವರು ಕೂಡ, ಹೇ ಕರೀಶ – ಓ ಹಸ್ತಗಿರಿಸ್ವಾಮಿಯಾದ ವರದನೇ

---

(೧೦) ವರದಸ್ತವ ೯೪.

**ಇಪ್ಪ್ರಕಾರಙ್ಗಳಿಲೇ ಇಕ್ಕೃಪಾಗುಣತ್ತೈ ತಙ್ಗ್ಣ ಮಾಹ ಅನುಸಂಧಿತ್ತು ಸಂಬಂಧತ್ತೈಯುಮ್, ಗುಣಾನ್ತರಙ್ಗಳೈಯುಮ್, ಕಾರುಣ್ಯತ್ತುಕ್ಕುಚ್ಚೊಲ್ಲಿತ್ತುಚ್ಚೆಯ್ವಾರಾಕ್ಕಿತ್ತಾಙ್ಗಳ್ ಕಾರುಣ್ಯೈಕಾನ್ತಿಗಳಾಯ್ ಪೋನ್ದಾರ್‌ಗಳ್.**

---

**ತಾವಕೀದಯಾ** - ನಿನ್ನ ಸಂಬಂಧವಾದ ದಯೆಯು, **ತಥಾತು ಅಕೃತ್ವೈವ** - ಪೂರ್ವಾರ್ಧದಲ್ಲಿ ಹೇಳಿರುವಹಾಗೆ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳ ಮೂಲಕ ಉಪಾಸನೆಯನ್ನು ಮಾಡದೇನೇ **ಸೈವ-ಅ- ಮೇ ಬಲಂ ಮತಮ್** - ನನಗೆ ಶ್ರೇಷ್ಠವಾದ ಬಲವೆಂಬುದು ನನ್ನ ಅಭಿಪ್ರಾಯವು, ನನ್ನ ದೃಢವಾದ ನಂಬಿಕೆಯು. ಕರ್ಮಯೋಗ ಭಕ್ತಿಯೋಗಗಳನ್ನು ಅನುಷ್ಠಿಸುವನಿಗೂ ಕೃಪೆಯೇ ನನಗಾದರೋ ಅಂತಹ ಉಪಾಸನೆಯನ್ನು ಅನುಷ್ಠಿಸದೇನೇ ಆತನನ್ನು ಶರಣಾಗತಿಯ ಮೂಲಕ ಭಜಿಸಿದವನಿಗಾದರೋ ಆ ದಯೆಯೇ ಉತ್ಕೃಷ್ಟ ಬಲವು. ಹಾಗೀಗ ನಾನು ನಂಬಿರುವೆನು ಎಂಬ ತಾತ್ಪರ್ಯವು. ಆ ಭಗವಂತನ ಕೃಪೆಗೆ ಸಾಧನಭೂತವಾಗಿ ಏನೂ ಬೇಕಾಗಿಲ್ಲವು. ಅದು ನಿರ್ಹೇತುಕವಾದುದೆಂಬ ಭಾವವು. ಸಾರಾಸ್ವಾದಿನಿಯವರು **ತಥಾತ್ವಕೃತ್ವಾ** - ಎಂಬುದಕ್ಕೆ ಹಿಂದಿನ ೯೩ನೆಯ ಶ್ಲೋಕದಲ್ಲಿ "ಪ್ರಾಪಯ ದಾಸ್ಯಮೇವ ತೇ" ಎಂದು ದಾಸನನ್ನಾಗಿ ಮಾಡಿಕೋ ಎಂಬ ಪ್ರಾರ್ಥನೆ ಇರುವದರಿಂದ **ದಾಸಕೃತ್ಯಕೃತ್** - ದಾಸಕೃತ್ಯವಾದ ಕೈಂಕರ್ಯವನ್ನು ಮಾಡುವನಾಗಿ ಎಂದು ಅರ್ಥವನ್ನು ಬರೆದಿರುತ್ತಾರೆ. ಮೇಲೆ ಬರೆದಿರುವ ಅರ್ಥವು ಸಾರವಿವರಣಿಯವರದು. ಸಾರಾಸ್ವಾದಿನಿಯವರು ಈ ಎರಡು ಅರ್ಥಗಳನ್ನು ಕೊಟ್ಟಿರುತ್ತಾರೆ.

**ಇಪ್ಪ್ರಕಾರಙ್ಗಳಿಲೇ** - ಈ ಮೇಲಿನ ಪ್ರಮಾಣಗಳಲ್ಲಿ ಉಪಪಾದಿಸಿದ ರೀತಿಯಲ್ಲಿ, **ಇಕ್ಕೃಪಾಗುಣತ್ತೈ** – ಈ ಭಗವಂತನ ಕೃಪಾಗುಣವನ್ನು, **ತಙ್ಗ್ಣಮಾಗ**- ಸರ್ವೋತ್ತಾರಕವಾಗಿ ಸರ್ವ ಶ್ರೇಷ್ಠ ಗುಣವೆಂದು, **ಅನುಸಂಧಿತ್ತು** - ಅನುಸಂಧಾನ ಮಾಡಿ, ಪದೇ ಪದೇ ಸ್ಮರಿಸುವವರಾಗಿ, **ಸಂಬಂಧತ್ತೈಯುಮ್** - ಸ್ವಸ್ವಾಮಿಭಾವ ಸಂಬಂಧವನ್ನೂ **ಗುಣಾಂತರಙ್ಗಳೈಯುಮ್** - ಜ್ಞಾನಶಕ್ತಿ ಬಲ ಮೊದಲಾದ ಗುಣಗಳನ್ನೂ, **ಕಾರುಣ್ಯತ್ತುಕ್ಕು** ಕೃಪಾಗುಣಕ್ಕೆ, **ಚೊಲ್ಲಿತ್ತುಚ್ಚೆಯ್ವಾರಾಕ್ಕಿ** - ಆ ಕೃಪಾಗುಣವು ಹೇಳಿದಹಾಗೆ ಮಾಡುವುಗಳನ್ನಾಗಿ, ಕೃಪಾಗುಣವು ಹೇಳಿದಹಾಗೆ ಕೇಳುವುವುಗಳಾಗಿ ಎಂದರೆ ಅದಕ್ಕೆ ಆಧೀನವಾಗಿ, ಭಾವಿಸಿ, **ಚೊಲ್ಲಿತ್ತುಚೆಯ್‌ವರ್‌ಗಳ್**, ಸೇವಕರು. ಅವರೀಗ ಹೇಳಿದ ಹಾಗೆ ಕೇಳುವವರು, ಇದರಿಂದ ತಾತ್ಪರ್ಯಾರ್ಥವು ಅಧೀನವಾಗುವ ಎಂಬುದು ; **ತಾಙ್ಗಳ್** - ತಾವು, **ಕಾರುಣ್ಯೈಕಾನ್ತಿಗಳಾಯ್** – ಸ್ವಾಮಿಯ ಕಾರುಣ್ಯವನ್ನೇ ಸದಾ ಸ್ಮರಿಸುವವರಾಗಿ **ಪೋನ್ದಾರ್‌ಗಳ್** – ಹೋದರು ಎಂದರೆ ಪ್ರವೃತ್ತಿಯುಳ್ಳವರಾದರು ಎಂಬ ಭಾವವು. ತಾತ್ಪರ್ಯವೇನೆಂದರೆ ಯದ್ಯಪಿ ಶೇಷಶೇಷೀ ಸಂಬಂಧವೂ ಷಾಡ್ಗು

**ಪಿರಾಟ್ಟಿಯುಮ್ ಗುಣಾನ್ತರಗಳಿರುಕ್ಕ (೧) "ವಧಾರ್ಹಮಪಿ ಕಾಕು ತ್ಸ್ಥಃ ಕೃಪಯಾ ಪರ್ಯಪಾಲಯತ್" ಎನ್ರರುಳಿಚ್ಚೆಯ್‌ದಾಳ್.**

---

ಣ್ಯಾದಿಗಳೂ ಸದಾ ಸ್ಮರಿಸಲು ಯೋಗ್ಯವಾಗಿದ್ದರೂ, ಅವು ಪರಮಪುರುಷನ ದಯೆಗೆ ಅಧೀನವಾದುವುಗಳೂ ಎಂದು ಭಾವಿಸಿ ಆತನ ಕರುಣೆಯನ್ನೇ ಪ್ರಪನ್ನ ರೆಲ್ಲಾ ಮುಖ್ಯವಾದುದೆಂದು ಭಾವಿಸಿ. ಆತನ ಕಾರುಣ್ಯವನ್ನೇ ಸದಾ ಚಿಂತಿಸುವವ ರಾಗಿ ಕಾಲವನ್ನು ಕಳೆದರು ಎಂಬುದು. ಈ ಅಭಿಪ್ರಾಯವನ್ನೇ ಶ್ರೀ ನಿಗಮಾನ್ತ ದೇಶಿಕರವರು ದಯಾಶತಕದಲ್ಲಿ ಉಪಪಾದಿಸಿರುತ್ತಾರೆ.—

"ಅನುಚರ ಶಕ್ತ್ಯಾದಿ ಗುಣಾಮಗ್ರೇಸರ ಬೋಧವಿರಚಿತಾಲೋಕಾಮ್ ।
ಸ್ವಾಧೀನ ವೃಷಗಿರೀಶಾಂ ಸ್ವಯಂ ಪ್ರಭೂತಾಂಪ್ರಮಾಣಯಾಮಿ ದಯಾಮ್॥

**ಅನುಚರ**-ಸೇವಕರಹಾಗಿ ಅನುಸರಿಸಿ ನಡೆಯುವ, **ಶಕ್ತ್ಯಾದಿಗುಣಾಂ** - ಭಗವಂತನ ಕಲ್ಯಾಣಗುಣಗಳಾದ ಶಕ್ತ್ಯಾದಿಗಳನ್ನುಳ್ಳ **ಅಗ್ರೇಸರಬೋಧ ವಿರ ಚಿತಾಲೋಕಾಮ್** - ಮುಂದಾಗಿರುವ ಜ್ಞಾನಾದಿ ಗುಣಗಳಿಂದ ಉಂಟುಮಾಡ ಲ್ಪಟ್ಟ ಕೃಪಾಯೋಗ್ಯವಾದ ಚೇತನನನ್ನು ಪ್ರಕಾಶಗೊಳಿಸುವ **ಸ್ವಾಧೀನ ವೃಷ ಗಿರೀಶಾಮ್** - ಸ್ವಾಧೀನ ಮಾಡಿಕೊಂಡ ತಿರುಮಲೆಗೆ ನಾಯಕನಾದ ಶ್ರೀನಿವಾಸ ನನ್ನುಳ್ಳ, **ಸ್ವಯಂಪ್ರಭೂತಮ್** - ತಾನಾಗಿಯೇ ಆವಿರ್ಭವಿಸಿದ ಎಂದರೆ ನಿರ್ಹೇ ತುಕವಾದ, **ದಯಾಂ** . ಶ್ರೀನಿವಾಸನ ಕಾರುಣ್ಯವನ್ನು, **ಪ್ರಮಾಣಯಾಮಿ** - ಪ್ರಮಾಣವಾಗಿ ಭಾವಿಸುವೆನು. ಭರ್ತಾವನ್ನು ವಶಮಾಡಿಕೊಂಡ ಕಾಂತೆಯನ್ನಾಗಿ ದಯಾರಸವನ್ನು ಭಾವಿಸಿ, ಅದೇ ನನಗೆ ಎಲ್ಲಾ ಅವಸ್ಥೆಯಲ್ಲೂ ಅನುಗ್ರಹ ವನ್ನುಂಟುಮಾಡುವದೆಂದು ಭಾವಿಸಿರುವೆನು ಎಂಬ ತಾತ್ಪರ್ಯವು. ಹಿತ ಪ್ರಾಪ್ತಿಗೂ ಅಹಿತ ನಿವೃತ್ತಿಗೂ ಶ್ರೀನಿವಾಸನ ದಯೆಯೇ ಉತ್ತಾರಕವೆಂದು ನಂಬಿರುವೆನು ಎಂಬುದು ಮುಖ್ಯಾರ್ಥವು.

ಹಿಂದಿನ ವಾಕ್ಯದಲ್ಲಿ "**ಪೂರ್ವರ್‌ಗಳ್** ಇಕ್ಕೃಪಾಗುಣತ್ತೈತ್ತ್ಞಮಾಹ **ಅನುಸಂಧಿತ್ತು**, ಕಾರುಣ್ಯೈಕಾನ್ತಿಗಳಾಗಿ **ಪೋನ್ದಾರ್‌ಗಳ್**" ಎಂಬುದು ಹೇಳ ಲ್ಪಟ್ಟಿತಲ್ಲಾ ಇದಕ್ಕೆ ಪ್ರಮಾಣವೇನು? ಎಂದರೆ ಶ್ರೀ ಮಹಾಲಕ್ಷ್ಮಿಯೇ ಆಂಜನೇ ಯನನ್ನು ಕುರಿತು ಹೇಳುವಾಗ ಪರಮಪುರುಷನಾದ ತನ್ನ ವಲ್ಲಭನ ಕೃಪಾಗುಣವೇ ಅಷ್ಟು ಮಹತ್ತಾದುದೆಂದು ಹೇಳುತ್ತಾಳೆ.-**ಪಿರಾಟ್ಟಿಯುಮ್**-ಇಲ್ಲಿ ಸೀತಾದೇವಿಯು **ಗುಣಾನ್ತರಗಳಿರುವ** – ಬೇರೇ ಅನೇಕ ಲಾವಣ್ಯಗುಣಗಳೆಲ್ಲವೂ **ಇದ್ದರೂ** (೧) "**ವಧಾರ್ಹಮಪಿ** - ತನ್ನ ಸ್ತನವನ್ನು ಬಗೆದು ರಕ್ತ ಸುರಿಯುವಹಾಗೆ ಮಾಡಿದ ಪಾಪಕೃತ್ಯದಿಂದ ಕೊಲ್ಲಲ್ಪಡಲು **ಕಾಕಾಸುರನು** ಯೋಗ್ಯನಾಗಿದ್ದರೂ, ಅವನನ್ನು **ಕಾಕುತ್ಸ್ಥಃ** - ಶರಣಾಗತರಕ್ಷಣೆಯನ್ನೇ ಮಹತ್ತಾಗಿ ಭಾವಿಸಿದ ಕುಕುತ್ಸ್ಥ ವಂಶದಲ್ಲಿ ಹುಟ್ಟಿದ ಶ್ರೀರಾಮನು ಇದರಿಂದ ಎಷ್ಟು ದುರಳನೇಯಾಗಿದ್ದರೂ ಶರಣಾ ಗತನಾದರೆ ರಕ್ಷಿಸಿಬಿಡುವೆನೆಂಬ ವ್ರತವನ್ನು ತಾಳಿದ ಶ್ರೀರಾಮಪ್ರಭುವು, **ಕೃಪಯಾ**-

**ಗದ್ಯತ್ತಿಲುಮ್ (೨) "ಮದೀಯ ಯೈವ ದಯಯಾ" ಎನ್ಗೈಯಾಲೇ ಇಕ್ಕೃಪೆಯಿನ್ ಪ್ರಾಧಾನ್ಯಮ್ ವಿವಕ್ಷಿತಮ್.**

---

ಕೃಪಾ ಮಹಾತ್ಮ್ಯೆಯಿಂದ, **ಪರ್ಯಪಾಲಯತ್** - ಸಂರಕ್ಷಿಸಿದನು." ಸೀತೆಯು ಈ ಗೋಪ್ಯವಾದ ವೃತ್ತಾಂತವನ್ನು ತನ್ನ ಪತಿಯಲ್ಲಿ ತಿಳಿಸು ಎಂದು ಹೇಳಿ ಕಳುಹಿಸುವ ಪ್ರಕರಣವು. ಹಾಗೆ ಪರಿಪಾಲನೆಗೆ ಕಾರಣವೇನು ಎಂಬುದು ಪೂರ್ವಾರ್ಧದಲ್ಲಿ ವ್ಯಕ್ತವು.—

**"ಸತಂ ನಿಪತಿತಂ ಭೂಮೌ ಶರಣ್ಯ ಶ್ಶರಣಾಗತಮ್"** ಶರಣಾಗತರಿಗೆ ತಾನು ಶರಣ್ಯನಾದುದರಿಂದ, ಆತನು ಬಂದು ತನ್ನ ಪಾದಾರವಿಂದದಲ್ಲಿ ಬಿದ್ದುದರಿಂದ, ಶ್ರೀರಾಮನ ಕೋಪವು ಕರುಣೆಯ ರೂಪವನ್ನು ಹೊಂದಿತು. ಏಕೆಂದರೆ ಅದು ಕುಲೋಚಿತವಾದ ಧರ್ಮವಾಗಿದ್ದರೆ, ಪರತತ್ವವಾದ ತಾನು ಅಂತಹ ಧರ್ಮವನ್ನೇ ಅವಲಂಭಿಸಬೇಡವೇ ? ಆದುದರಿಂದಲೇ ವಧಾರ್ಹನಾಗಿದ್ದರೂ ರಕ್ಷಿಸಲ್ಪಟ್ಟನು. ಆ ಕಾರುಣ್ಯದ ಪ್ರಭಾವವು ಅಷ್ಟು ಮಹತ್ತಾದುದೆಂದು ಸೀತೆಯೇ ಆಂಜನೇಯನಿಗೆ ಹೇಳಿರುತ್ತಾಳೆಂಬುದು ತಾತ್ಪರ್ಯವು

ಇಷ್ಟು ಮಾತ್ರವೇ ಅಲ್ಲದೆ, ಭಗವಂತನೇ ತಮ್ಮ ಪ್ರಿಯ ಭಕ್ತರಾದ ಶ್ರೀ ಯತಿವರ್ಯರಿಗೆ ತಮ್ಮ ದಯೆಯೇ ಮಹತ್ತಾದುದೆಂದು ತಿಳಿಸುವ ಪ್ರಕರಣವನ್ನು ಶ್ರೀ ಶರಣಾಗತ ಗದ್ಯವಾಕ್ಯದಿಂದ ಉದಾಹರಿಸುತ್ತಾರೆ —**ಗದ್ಯತ್ತಿಲುಮ್** - ಪೃಥುಗದ್ಯಾಧಿಕಾರದಲ್ಲಿ **"ಮದೀಯಯೈವ ದಯಯಾ"** - ಇದರ ಹಿಂದೆ, **ಕೇವಲಂ** ಎಂದು ಇದೆ, ನನ್ನ ನಿರ್ಹೇತುಕ ಕೃಪಾಮಾತ್ರದಿಂದಲೇ, **"ಅತಿ ಪ್ರಬುದ್ಧೋ ಮಾಮೇವಾವಲೋಕಯ ನ್ನಪ್ರಚ್ಯುತ ಪೂರ್ವ ಸಂಸ್ಕಾರ ಮನೋರಥಃ ಜೀರ್ಣಮಿವ ವಸ್ತ್ರಂ ಸುಖೇನೇz ಮಾಂ ಪ್ರಕೃತಿಂ ಸ್ಥೂಲಸೂಕ್ಷ್ಮರೂಪಂ ವಿಸೃಜ್ಯ"** ಎಂದು ಹೇಳಿ ಅನಂತರ **"ನಿತ್ಯಕಿಂಕರೋ ಭವಿಷ್ಯಸಿ"** ಎಂದು ಇದೆ.

ಹೀಗೆ ತಮ್ಮ ಕೃಪಾ ಪ್ರಭಾವದಿಂದ ನೀನು (ಶ್ರೀ ಯತೀಶ್ವರರು) ಅನುಗ್ರಹೀತನಾಗಿ ಪ್ರಾಜ್ಞನಾಗಿ ನನ್ನನ್ನು ಸ್ಮರಿಸುತ್ತಾ ಸ್ಥೂಲರೂಪವಾದ ದೇಹವನ್ನು ತ್ಯಜಿಸಿ, ಅಲ್ಲಿಂದ ಪ್ರಾಪ್ತವಾಗುವ ಸೂಕ್ಷ್ಮಪ್ರಾಕೃತ ಶರೀರವನ್ನು ಅರ್ಚಿರಾದಿಗತಿ ಮಧ್ಯದಲ್ಲಿ ತ್ಯಜಿಸಿ, ನನಗೆ ನಿತ್ಯಕೈಂಕರ್ಯವನ್ನು ಮಾಡುವ ಸುಕೃತವನ್ನು ಹೊಂದುವಿ ಎಂದು ಶ್ರೀ ರಂಗನಾಥನು ಅಪ್ಪಣೆ ಕೊಡಿಸಿರುತ್ತಾರೆ ಇವೆಲ್ಲಾ ಸುಕೃತಕ್ಕೂ ಕೇವಲ ಸ್ವಾಮಿಯ ದಯೆಯೇ ಮುಖ್ಯಕಾರಣವೆಂಬ ಭಾವವು.

**"ಮಾಂ" ಎಂಬ ಪದದ ಅರ್ಥವನ್ನು ನಿಗಮನಮಾಡಿ ಹೇಳಿ "ಏಕಂ" ಎಂಬ ಶಬ್ದಕ್ಕೆ ಅರ್ಥವನ್ನು ಅನುಗ್ರಹಿಸುತ್ತಾರೆ.**

---

**ಇಪ್ಪಡಿ** - ಹೀಗೆ ಮೇಲೆ ಅನೇಕ ಪ್ರಮಾಣಗಳಿಂದಲೂ, ಸಂಪ್ರದಾಯೋಕ್ತಿಗಳಿಂದಲೂ ಉಪಪಾದಿಸಿದ ರೀತಿಯಲ್ಲಿ **ಆಶ್ರಿತ ರಕ್ಷಣತ್ತುಕ್ಕು** - ತನ್ನನ್ನು ಉಪಾ

**"ಮಾ" ಮಿತಿ ಪದಸ್ಯಾರ್ಥಂ ನಿಗಮಯತಿ. ಅಥ ಏಕಂ ಶಬ್ದಂ ವ್ಯಾಚಷ್ಟೇ**

---

**ಇಪ್ಪಡಿ ಆಶ್ರಿತ ರಕ್ಷಣತ್ತುಕ್ಕು ಪ್ರಧಾನ ಮಾಯುಮ್, ಪರಿಕರ ಮಾಯುಮ್, ಉಳ್ಳ ಸರ್ವಾಕಾರಙ್ಗಳಾಲುಮ್, ವಿಶಿಷ್ಟನಾನ ತನ್ನೈ ಅಭಿಮುಖ ಸ್ಥಿತಿಯಿಲೇ, "ಮಾಂ" ಎನ್ರು ನಿರ್ದೇಶಿತ್ತರುಳಿನಾನ್.**

---

ಯಾನುಷ್ಠಾನದ ಮೂಲಕ ಆಶ್ರಯಿಸಿದವರನ್ನು ರಕ್ಷಿಸುವದಕ್ಕೆ **ಪ್ರಧಾನ ಮಾಯುಮ್** - ಮುಖ್ಯವಾದುದಾಗಿಯೂ, **ಪರಿಕರಮಾಯುಮ್** - ಸರ್ವಜ್ಞತ್ವ, ಸರ್ವಶಕ್ತಿತ್ವ, ಪರತ್ವಸೌಲಭ್ಯಾದಿಗಳಾಗಿ ಅದಕ್ಕೆ ಸಹಾಯಭೂತಗಳಾಗಿಯೂ, **ಉಳ್ಳ ಸರ್ವಾಕಾರಙ್ಗಳಾಲುಮ್** - ಇರುವ ಸಮಸ್ತ ಲಕ್ಷ್ಮೀ ಕಲ್ಯಾಣಗುಣಗಳೇ ಮೊದಲಾದ ವಿಶೇಷಣಗಳಿಂದಲೂ, **ವಿಶಿಷ್ಟನಾನ** - ಯುಕ್ತನಾದ, **ತನ್ನೈ** - ಸರ್ವೇಶ್ವರನಾದ ತನ್ನನ್ನು, **ಅಭಿಮುಖಸ್ಥಿತಿಯಿಲೇ** - ಪ್ರಪನ್ನನು ಅಭಿಮುಖನಾಗಿ ನಿಂತು ತನ್ನನ್ನು ಎದುರು ನೋಡುವ ಸ್ಥಿತಿಯಲ್ಲಿ, **ಮಾಂ ಎನ್ರು** - "**ಮಾಂ**" ಎಂಬದಾಗಿ, **ನಿರ್ದೇಸಿತ್ತರುಳಿನಾನ** - ಮಾಂ ಎಂಬದಾಗಿ ಹೇಳಿ ಕೃಪೆ ಗೈದರು. ತನಗೆ ಎದುರಿಗೆ ಪ್ರಪನ್ನನು ನಿಂತಿರುವದರಿಂದ "**ತಂ ಶರಣಂ ಗಚ್ಛ**" ಎಂದು ಹೇಳದೆ "**ಮಾಂ ಶರಣಂ ವ್ರಜ**" ಎಂದು ಹೇಳಿದರು ಎಂಬುದು **ಅಭಿಮುಖಸ್ಥಿತಿಯಿಲೇ** ಎಂಬ ಪ್ರಯೋಗದ ಅಭಿಪ್ರಾಯವು

ಎದುರಿಗೆ ನಿಂತಿರುವ ಪ್ರಪನ್ನನಾಗುವನನ್ನು ಕುರಿತು, **ಮಾಂ** ಶರಣಂ ವ್ರಜ ಎಂದು ಹೇಳುವದರಿಂದ, **ಮಾಂ** ಎಂಬುದರಿಂದ ತನ್ನ ಸಮಸ್ತ ವಿಶೇಷಗಳಿಂದಲೂ ಕೂಡಿರುವನನ್ನು ಬೋಧಿಸುತ್ತದೆ ಎಂಬ ಭಾವವು. ಅಜಹತ್ಸ್ವಸ್ವಭಾವನಾಗಿ, ಅಪ್ರಾಕೃತ ದಿವ್ಯ ಮಙ್ಗಳಯುಕ್ತನಾಗಿ, ತನಗೆ ಸಹಚರಿಯಾದ ಲಕ್ಷ್ಮಿಯಿಂದ ಕೂಡಿದವನಾಗಿ, ದಯಾ, ಸೌಲಭ್ಯ ಸೌಶೀಲ್ಯ ವಾತ್ಸಲ್ಯ ಪರತ್ವಾದಿ ಕಲ್ಯಾಣಗುಣಗಳಿಂದ ಯುಕ್ತನಾಗಿ ಪರಿಪೂರ್ಣಸರ್ವೈಶ್ವರ್ಯ ವಿಭೂತಿ ಯುಕ್ತವಾಗಿರುವ ತನ್ನನ್ನು ಬೋಧಿಸಿತು ಎಂಬ ತಾತ್ಪರ್ಯವು

**ಮಾಂ** - ಎಂಬ ಮತ್ತು ಉತ್ತರಾರ್ಧದ "**ಅಹಂ**" ಎಂಬ ಶಬ್ದಗಳಿಂದ ಬೋಧಿತವಾದ ಅರ್ಥಗಳೆಂದು ಉಪಪಾದಿಸಲ್ಪಟ್ಟವು ಯಾವುವೆಂದರೆ—

೧. **ಮಾಂ** - ಎಂಬುದರಿಂದ ಅವತಾರ ರಹಸ್ಯ ಶ್ಲೋಕಗಳಲ್ಲಿ ಉಪಪಾದಿಸಲ್ಪಟ್ಟ ಅರ್ಥಗಳೂ, ಅವತಾರ ಸತ್ಯತ್ವ, ಅಜಹತ್ ಸ್ವಸ್ವಭಾವತ್ವ, ಅಪ್ರಾಕೃತ ದಿವ್ಯಮಙ್ಗಳ ವಿಗ್ರಹತ್ವ ಸ್ವಸಂಕಲ್ಪಾನುಗುಣವಾಗಿ ನಡೆಯುವ ಸ್ವಾತಂತ್ರ್ಯ, ಮುಖ್ಯವಾಗಿ ಸೌಲಭ್ಯಾದಿ ಆಶ್ರಯೋಪಯುಕ್ತಗುಣಗಳು ಇವುಗಳ ಯುಕ್ತತೆಯು. **ಅಹಂ** - ಎಂಬುದರಿಂದ ಗೀತೆಯಲ್ಲಿ ಪುರುಷೋತ್ತಮತ್ವವನ್ನು ಸ್ಥಾಪಿಸುವ, ಪರತ್ವ ಸ್ವಾತಂತ್ರ್ಯಾರ್ಥಗಳು. ಈ ಎರಡು ಶಬ್ದಗಳಿಂದ ತೋರುವ **ಸೌಲಭ್ಯ** ಪರತ್ವಗಳೆರಡೂ ಎರಡು ವಿಧ ಪ್ರಪನ್ನರಿಗೂ ಪ್ರಯೋಜನಕರವಾದವು.

ಇದರ ಜ್ಞಾನವು ಭಕ್ತಿಯೋಗನಿಷ್ಠನಿಗೆ **ಉಪಾಯಪೂರಕವು ;** ಭರನ್ಯಾಸ ನಿಷ್ಠನಿಗೆ **ಸೌಲಭ್ಯ ಪ್ರದರ್ಶಕವು.** ಆದುದರಿಂದ ಈ ಪದವು, ತಾನು ಸರ್ವಶೇಷಿ ಯಾಗಿ, ರಕ್ಷಕನಾಗಿ, ಅವಸರ ಪ್ರತೀಕ್ಷನಾಗಿ, ಆತನು ತನ್ನನ್ನು ಆಶ್ರಯಿಸಲಿ, ರಕ್ಷಿಸುವೆನು ಎಂಬ ವ್ರತವನ್ನು ತಾಳಿ ಆತನಿಗೆ ಅಭಿಮುಖನಾಗಿರುವದನ್ನು ಬೋಧಿ ಸುತ್ತದೆ **ಅಹಂ -** ಹಾಗೆ ಆಶ್ರಯಿಸಿದವನಿಗೆ ನಾನೇ ಫಲವನ್ನು ಕೊಡುವವನು, ನಾನೇ ಪ್ರಾಪ್ಯನೆಂದು ತಿಳಿಸುತ್ತದೆ ಕೇವಲ ಸೌಲಭ್ಯವಾಗಲಿ, ಕೇವಲ ಪರತ್ವ ಅಥವಾ ಸ್ವಾತಂತ್ರ್ಯವಾಗಲಿ ರಕ್ಷಣೋಪಯುಕ್ತವಾಗಲಾರದು ಇವೆರಡರ ಸಮ್ಮೇ ಳನವೂ ಆವಶ್ಯಕವೆಂಬ ಭಾವವು ಪ್ರದರ್ಶಿತವು

೨. ತಾನೇ ಸಿದ್ಧೋಪಾಯನೆಂದು **ಮಾಂ** ಎಂಬುದು ಬೋಧಿಸಿ ಸಾಧ್ಯೋ ಪಾಯದಿಂದ ಪ್ರೀತನಾದ ನಾನೇ ಫಲಪ್ರದಾತಾ ಎಂದು **ಅಹಂ** ಎಂಬುದು ತೋರಿಸುತ್ತದೆ "**ಮಾಂ** ಎಂಬುದು ಆಶ್ರಿತನಿಗೆ ಅವಸರ ಪ್ರತೀಕ್ಷಣವನ್ನು ಎದುರು ನೋಡುತ್ತಾನೆಂಬುದನ್ನೂ, **ಅಹಂ** - ಎಂಬುದು ಫಲಪ್ರದಾನಾವಸರ ಪ್ರತೀಕ್ಷಣ ಆಭಿಮುಖ್ಯವನ್ನೂ ಪ್ರದರ್ಶಿಸುತ್ತವೆ

೩ **ಮಾಂ** ಎಂಬುದು ತಾನು ಕಲ್ಯಾಣಗುಣಾಕರನೆಂದು ಬೋಧಿಸುತ್ತದೆ ಮುಖ್ಯವಾಗಿ ಸರ್ವರಕ್ಷಕನೂ ಸರ್ವಶೇಷೀ ಶ್ರಿಯಃಪತಿ, ನಾರಾಯಣಶಬ್ದ ಬೋಧಿತ ಸರ್ವಾಭಿಪ್ರಾಯಗಳನ್ನುಳ್ಳವನು ಪರತ್ವವನ್ನು ಹೊಂದಿದವನು, ಸರ್ವಜ್ಞನು, ಸರ್ವಶಕ್ತನು, ಪರಮಕಾರುಣಿಕನು, ಸೌಶೀಲ್ಯವಾತ್ಸಲ್ಯಯುಕ್ತನು, ದಿವ್ಯಮಙ್ಗಳ ವಿಗ್ರಹ ಯುಕ್ತನು, ಇವುಗಳನ್ನೆಲ್ಲಾ ಶ್ರೀ ಕೃಷ್ಣನು ಪಾರ್ಥಸಾರಥಿಯಾಗಿ ನಡೆಸಿದ ಪ್ರವೃತ್ತಿಗಳಿಂದ ವ್ಯಕ್ತವು

೪. ಈ ಎಲ್ಲಾ ಗುಣಗಳಿಂದ ಯುಕ್ತನೆಂದು ಸಾಮಾನ್ಯವಾಗಿ ತೋರಿದರೂ ಮುಖ್ಯವಾಗಿ ತಾನು ಕಾರುಣ್ಯಸಾಗರನೆಂದು ಈ **ಮಾಂ** ಎಂಬ ಪದವು ಪ್ರಕ ಟಿಸುತ್ತದೆ.

೫ ಹೀಗೆ ದಯಾಂಭೋನಿಧಿಯಾಗಿರುವದಕ್ಕೆ ಮುಖ್ಯಕಾರಣವು ಲಕ್ಷ್ಮೀ ವಿಶಿಷ್ಟತೆಯೂ ಎಂಬುದು ವ್ಯಕ್ತವು ಇದು ಪ್ರಮಾಣಗಳಿಂದಲೂ ಸಾಂಪ್ರದಾ ಯೋಕ್ತಿಗಳಿಂದಲೂ ಉಪಪನ್ನವು

ಮುಂದೆ **ಏಕ** ಶಬ್ದಕ್ಕೆ ವ್ಯಾಖ್ಯಾನವನ್ನು ದಯಪಾಲಿಸುತ್ತಾರೆ —

**ಮಾಂ** ಎಂಬ ಶಬ್ದವು ಏಕವಚನದಲ್ಲಿದೆ. ಹಾಗಿದ್ದರೂ **ಮಾಮೇಕಂ** ಎಂಬ ಪ್ರಯೋಗದ ಆವಶ್ಯಕತೆ ಏನು ? ಹಾಗೆ ಆವಶ್ಯಕವೆಂದರೆ ಅದರ ಪ್ರಯೋ ಜನವೇನು ? ಎಂದರೆ **ಆರುವಿಧವಾಗಿ** ಅದರ ಪ್ರಯೋಜನವನ್ನು ಉಪಪಾದಿ ಸುತ್ತಾರೆ.—

೧. ಪ್ರಾಪಕನೂ ತಾನೇ, ಪ್ರಾಪ್ಯನೂ ತಾನೇ ಹೀಗೆ ಎರಡೂ ಒಬ್ಬನೇ ಎಂಬ ಅರ್ಥವನ್ನು ಉಪಪಾದಿಸುತ್ತದೆಂದು ಪ್ರಥಮತಃ ಉಪದೇಶಿಸುತ್ತಾರೆ.—

## ಅಥ ಏಕ ಶಬ್ದಂವ್ಯಾಚಷ್ಟೇ.

"ನಾಂ" ಎಙ್ಗಿರ ಪದತ್ತಿಲೇ ಏಕವಚನತ್ತಾಲೇ ಏಕತ್ವತೋಽತ್ತಾ ನಿರ್ಕ ಪಿನ್ಬು "ಏಕ" ಶಬ್ದಂ (೧) "ಎನಕ್ಕೇ ತನ್ನೈ ತನ್ದಕರ್‍ಪಕಮ್" ಎಙ್ಗಿರಪಡಿಯೇ ಪ್ರಾಪ್ಯನಾನ ಅರ್ವ ತಾನೇ ಪ್ರಾಪಕನಾನಪಡಿಯಾಲೇ ಉಪಾಯಫಲೈಕ್ಯತ್ತೈ ಚ್ಚೊಲ್ಲುಗಿರದೆನ್ರುಮ್ ಯೋಜಿಪ್ಪರ್‍ಗಳ್.

**ನಾಂ ಎಙ್ಗಿರ ಪದತ್ತಿಲೇ** - ನಾಂ ಎಂಬ ಶಬ್ದದಲ್ಲೇ, **ಏಕವಚನತ್ತಾಲೇ** - ಏಕವಚನವಿರುವದರಿಂದ, **ಏಕತ್ವ ತೋಽತ್ತಾನಿರ್ಕ** - ಏಕತ್ವವು ಚೆನ್ನಾಗಿ ತೋರಿ ಬರುತ್ತಿದ್ದರೂ, **ಏಕಶಬ್ದವುಮ್** - ಏಕಂ ಎಂಬ ಶಬ್ದವು, "**ಎನಕ್ಕೇ** - ನನಗೇ, **ತನ್ನೈತಂದ** - ತನ್ನನ್ನೇ ಕೊಟ್ಟುಬಿಟ್ಟ, **ಕರ್ಪಕಮ್** - ವಿಲಕ್ಷಣವಾದ ಪರಮ ದಾತಾವಾದ ಕಲ್ಪವೃಕ್ಷವು ಸರ್ವೇಶ್ವರನು" **ಎಙ್ಗಿರಪಡಿಯೇ** - ಎಂದು ನಮ್ಮಾಳ್ವಾರವರು ಅಪ್ಪಣೆಕೊಡಿಸಿರುವಹಾಗೆ, **ಪ್ರಾಪ್ಯನಾನ ಅರ್ವತಾನೇ** - **ಅಹಂ** ಎಂದು ಉತ್ತರಾರ್ಧದಲ್ಲಿ ಹೇಳಿಕೊಂಡ ಪ್ರಾಪ್ಯನಾದ ತಾನೇ, **ಪ್ರಾಪಕನಾನಪಡಿಯಾಲೇ** - **ನಾಂ** ಎಂಬ ಶಬ್ದದಲ್ಲಿ ಬೋಧಿತನಾದ ಪ್ರಾಪಕನೂ ತಾನೇ ಯಾದುದರಿಂದ, **ಉಪಾಯ ಫಲೈಕ್ಯತ್ತೈ ಚ್ಚೊಲ್ಲುಗಿರದೆನ್ರು** - ಸಿದ್ಧೋಪಾಯನೂ ತಾನೇ, ಫಲಪ್ರದಾತಾವು ತಾನೇ, ಎಂದು ಹಾಗೆ ಐಕ್ಯಭಾವವನ್ನು ಹೇಳುತ್ತದೆಂದು, **ಯೋಜಿಪ್ಪರ್‍ಗಳ್** - ಅನ್ವಯಿಸಿ ಕೆಲವು ಮಹನೀಯರು ಹೇಳುವರು ಸಿದ್ಧೋಪಾಯನೂ ನಾನೇ ಮತ್ತು ಸಾಧ್ಯೋಪಾಯದಿಂದ ಪ್ರೀತನಾಗಿ ಫಲಪ್ರದಾತಾವು ನಾನೇ, ಹೀಗೆ ಎರಡನ್ನೂ ಮಾಡುವವನು ನಾನೊಬ್ಬನೇ ಎಂದು ಹೇಳಬೇಕಾದುದು ಆವಶ್ಯಕವಾದುದರಿಂದ **ಏಕಂ** - ಎಂಬ ಪ್ರಯೋಗವು. **ನಾಂ** ಎಂಬ ಏಕವಚನದಿಂದಲೇ ಈ ಅರ್ಥವು ವ್ಯಕ್ತವಾಗಲಾರದಾದುದರಿಂದ, **ಏಕಂ** ಎಂಬ ಶಬ್ದದ ಆವಶ್ಯಕತೆಯು ಎಂಬ ಭಾವವು ಪ್ರಾಪಕನೂ ಪ್ರಾಪ್ಯನೂ ತಾನೊಬ್ಬನೇ ಎಂಬ ಅರ್ಥವು ಏಕ ಶಬ್ದದಿಂದ ತೋರಿಬರುತ್ತದೆಂಬುದು ಮುಖ್ಯಾಭಿಪ್ರಾಯವು. **ಎನಕ್ಕೆ ತನ್ನೈತಂದ ಕರ್ಪಕಮ್** ಎಂಬ ಪಾಶುರವು ಯಾವುದೆಂದರೆ--

**ಪರ್ಪನಾಪನುಯರ್ವರವುಯರುಮ್ ಪೆರುನ್ದಿರಲೋ ।**
**ನೆರ್ಪ್ಪರನೆ ನ್ನೈಯಾಕ್ಕಿಕೊಂಡೆ ನಕ್ಕೇ ತನ್ನೈತ್ತಂದ ।**
**ಕರ್ಪ್ಪಗಮ್, ಎನ್ನಮುತಮ್ ಕಾರ್ಮುಗಿಲ್ ಪೋಲುಮ್ ವೇಙ್ಗಡನಲ್ ।**
**ವೆರ್ಪ್ಪ, ವಿಶುಮ್ಬೋರ್ ಪಿರಾ ನೆನ್ದೈ ತಾಮೋತರನೇ ॥ ೧೧ ॥**

ಶ್ರೀ ತಿರುವೇಙ್ಗಡ ಮೊಡೈಯಾನನೇ ತನಗೆ ಸರ್ವ ಪ್ರಕಾರದಲ್ಲೂ ಉಪಕಾರಕನೆಂದು ಸ್ತುತಿಸುತ್ತಾರೆ.—**ಪರ್ಪನಾಪ** - ಜಗತ್ತಿನ ಉತ್ಪತ್ತಿಗೆ ಕಾರಣವಾಗಿ

(೧) ತಿರು. ೨ ೭. ೧೧.

**ಇದುಕ್ಕು (೨) "ಮಾಮೇಕ ಮೇವ ಶರಣಮ್" ಎನ್ಗಿರ ಸಮಾನ ಪ್ರಕರಣವಾಕ್ಯಮುಮ್ ಅನುಗುಣಮ್.**

---

ರುವನಾ ಛೀಕಮಲವನ್ನು ಧರಿಸಿರುವ ಪದ್ಮನಾಭನು, **ಉಯರ್ವ್ವರ** - ಬೇರೆ ಯಾವ ಉಪಾಯುಗಳೂ ಇಲ್ಲದಹಾಗೆ, **ಉಯರುಮ್** - ವೃದ್ಧಿಯನ್ನು ಹೊಂದಿ, **ಪೆರುಮ್ ತಿರಲೋನ್** - ಅಪರಿಚ್ಛಿನ್ನವಾದ ಇತರರು ಯಾರಿಂದಲೂ ಪರಾಭವ ವನ್ನು ಹೊಂದದೇ ಇರುವ ನಿರತಿಶಯ ಶಕ್ತಿಯುಳ್ಳವನಾದ, **ಎರ್ಪರ್** - ನನ್ನೊಂದಿಗೆ ಇದ್ದು ನನ್ನಲ್ಲೇ ಆಸಕ್ತಿಯುಳ್ಳವನಾಗಿ, **ಎನ್ನೈ ಆಕ್ಕಿಕೊಂಡು** - ನನಗೆ ಸತ್ತಾದಾಯಕನಾಗಿ, ತನಗೆ ಶೇಷಭೂತನಾಗಿ ಸ್ವೀಕರಿಸಿ, **ಎನಕ್ಕೇ ತನ್ನೈ ತಂದ** - ತನ್ನನ್ನು ಆಶ್ರಯಿಸಿದನೇ ಎಂಬ ಪರಮ ಪ್ರೀತಿಯಿಂದ ತನ್ನನ್ನೇ ಉದಾರ ಭಾವದಿಂದ ಕೊಟ್ಟ, **ಕರ್ಪಗಮ್** - ವಿಜಾತೀಯ ಕಲ್ಪವೃಕ್ಷ ಸಮಾನನು ; ಕಲ್ಪ ವೃಕ್ಷವಾದರೋ ತಾನಲ್ಲದೆ ಕೇಳಿದುದನ್ನು ಮಾತ್ರ ಕೊಡುತ್ತದೆ ; ಈ ಪರಮ ಪುರುಷ ಕಲ್ಪವೃಕ್ಷವಾದರೋ ಮಹಾ ಮೇಘದಹಾಗೆ ಸರ್ವಶ್ರೇಯಸ್ಸನ್ನೂ ವರ್ಷಿಸು ವದಲ್ಲದೆ, ತನ್ನನ್ನೇ ಕೊಟ್ಟುಬಿಡುವನು ಎಂದರೆ ತನ್ನನ್ನೇ ಅನುಭವಿಸಿ ಆನಂದ ಪಡುವ ಹಾಗೆ ಮಾಡುವ ಪರಮೌದಾರ್ಯವುಳ್ಳವನಾದುದರಿಂದ ವಿಜಾತೀಯವಾದ ಕಲ್ಪವೃಕ್ಷವು ಶ್ರೀನಿವಾಸನು ಎಂಬ ಭಾವವು **ಎನ್ನಮುತಮ್** - ಆದುದರಿಂದಲೇ ಹಾಗೆ ತನ್ನನ್ನು ಕೊಟ್ಟಿದ್ದರಿಂದಲೇ ನನಗೆ ಭೋಗ್ಯಭೂತನು, **ಕಾರ್ಮುಗಿಲ ಪೋಲುಮ್** - ಕಪ್ಪಾದ ಮೇಘದ ಹಾಗೆ ಇರುವ, **ವೇಙ್ಗಡಂ** - ವೇಙ್ಕಟಾದ್ರಿ ಎಂಬ, **ನಲ್ವೆರ್ಪ್ಪ** - ವಿಲಕ್ಷಣವಾದ ಪರ್ವತವನ್ನು ಆಶ್ರಯಿಸಿದವನು ; ಇದರಿಂದ ಕಾಲಮೇಘವು ಪರ್ವತದ ಮೇಲೆ ವರ್ಷಿಸಿದರೆ, ಸದಾಸ್ವಾದುವಾದ ನೀರು ಹೇಗೆ ಪ್ರವಹಿಸುತ್ತಾ ಇರುತ್ತದೋ ಹಾಗೆ ಆಶ್ರಿತ ಜನಕ್ಕೆ ಸರ್ವಶ್ರೇಯಸ್ಸುಗಳನ್ನು ಕಾಮಿತಾರ್ಥಗಳನ್ನು ಸತತ ವರ್ಷಿಸುವವನು ಶ್ರೀನಿವಾಸನು ಎಂಬ ಭಾವವು ; **ವಿಶುಮ್ಬೋರ್ ಪಿರಾ** - ದಿವ್ಯ ವೈಕುಂಠದಲ್ಲಿರುವ ನಿತ್ಯಸೂರಿಗಳಿಗೂ ನಿರ್ವಾಹಕ ನಾಗಿ ಅವರಿಗೂ ಪರಮೋಪಕಾರಕನಾಗಿರುವವನು ; **ಎನ್ದೈ ದಾಮೋದರನ್ನೈ** - ನನಗೂ ಸ್ವಾಮಿಯಾಗಿರುವ ದಾಮೋದರನೇ,

ಉಪಾಯಭೂತನು, ಉಪೇಯನೂ ಒಬ್ಬನೇ ಎಂದು ಹೇಳಿ ಅರ್ಥಮಾಡಲು ಸಾಧಕವೇನು ? ಎಂದರೆ ಉಂಟು ಎಂದು ಪ್ರಮಾಣವನ್ನು ಉದಾಹರಿಸುತ್ತಾರೆ — **ಇದುಕ್ಕು** - ಈ ಯೋಜನೆಗೆ, ಈ ಅಭಿಪ್ರಾಯಕ್ಕೆ ಎಂಬ ಭಾವವು **"ಮಾಮೇಕ ಮೇವ ಶರಣಮ್"** "ನನ್ನೊಬ್ಬನನ್ನೇ ಇನ್ನು ಯಾರೂ ಬೇಕಿಲ್ಲದೆ ನನ್ನೊಬ್ಬನನ್ನೇ ಉಪಾಯವಾಗಿ" **ಎನ್ಗಿರ** - ಎಂದು ಹೇಳುವ **ಸಮಾನ ಪ್ರಕರಣವಾಕ್ಯ ಮುಮ್** - ಸಮಾನವಾದ ಸಂದರ್ಭದಲ್ಲಿನ ವ್ಯಾಕ್ಯವೂ, **ಅನುಗುಣಮ್** - ಈ

---

(೨) ಭಾಗ. ೧೧. ೧೨ ೧೮-೫.

**ಅಭಿಪ್ರಾಯವನ್ನೇ** ಅನುಸರಿಸಿದುದಾಗಿರುತ್ತದೆ. **"ಮಾಮೇಕ ಮೇವ ಶರಣಮ್"** ಎಂಬ ಪೂರಾ ಶ್ಲೋಕವು —**"ಮಾಮೇಕ ಮೇವ ಶರಣ ಮಾತ್ಮಾನಂ ಸರ್ವದೇಹಿನಾಮ್ । ಯಾಹಿ ಸರ್ವಾತ್ಮಭಾವೇನ ಯಾಸ್ಯಸ್ಯ ಕುತೋ ಭಯಮ್'** - ನನ್ನೊಬ್ಬನನ್ನೇ ನೀನು ಸರ್ವ ಶರೀರಗಳಿಗೂ ಆತ್ಮಾವಾಗಿರುವವನನ್ನು ಸಿದ್ಧೋಪಾಯನನ್ನಾಗಿ ವರಿಸಿದರೆ, ಎಲ್ಲಿಂದಲೂ ಭಯಸಂಸಾರ ಬಂಧಪ್ರಾಪ್ತಿ ರೂಪ ವಿಲ್ಲದಿರುವ ದಿವ್ಯವೈಕುಂಠವನ್ನು ನೇರುವಿ ಈ ಪ್ರಮಾಣದಲ್ಲಿ ಪ್ರಾಪಕನೂ ತಾನೇ ಪ್ರಾಪ್ಯನೂ ತಾನೇ ಎಂದು ಹೇಳಲ್ಪಟ್ಟಿತು ಈ ಶ್ಲೋಕವು ಹಿಂದೆಯೇ **ಉದಾಹೃತವು** ೨೬೪-೫ ನೆಯ ಪುಟಗಳನ್ನು ನೋಡಿ ಈ ಉಪಾಯೋಪೇಯೈಕ್ಯವನ್ನು ಏಕ ಶಬ್ದವು ಪ್ರಕಟಿಸುತ್ತದೆಂಬ ಅಭಿಪ್ರಾಯವೂ ಹಿಂದೆಯೇ ಉಪ ಪಾದಿತವು ೨೬೦-೧ ನೆಯ ಪುಟಗಳನ್ನು ನೋಡಿ. **"ಮಾಮೇಕ ಮೇವ ಶರಣಂ"** ಎಂಬುದು ಸಮಾನ ಪ್ರಕರಣವಾಕ್ಯವು ಹೇಗೆ? ಎಂದರೆ, ಇಲ್ಲಿ ಶ್ರೀಕೃಷ್ಣ ಭಗವಾನ್ ಹೇಗೆ ಅರ್ಜುನನಿಗೆ ಮುಖ್ಯೋಪಾಯವನ್ನು ಉಪದೇಶಿಸಿದನೋ **ಹಾಗೆಯೇ ಅಲ್ಲಿಯೂ** ಶ್ರೀ ಕೃಷ್ಣಭಗವಾನ್‌ರವರು ಪರಮ ಭಾಗವತರಾದ ಉದ್ಧವ **ರಿಗೆ ಮೋಕ್ಷೋಪಾಯವನ್ನು** ಉಪದೇಶಿಸಿರುತ್ತಾರೆ ಆದುದರಿಂದಲೇ **ಸಮಾನ ಪ್ರಕರಣವು.** ಇಲ್ಲಿ ಅರ್ಜುನನಿಗೆ ಉಪದೇಶಿಸುವ ಸಂದರ್ಭದಲ್ಲಿ ಚರಮ **ಶ್ಲೋಕವು** ಎರಡು ವಿಧ ಉಪಾಯಗಳಾದ ಭಕ್ತಿ ಪ್ರಪತ್ತಿಗಳಿಗೂ ಅನ್ವಯಿಸುತ್ತದೆ. **ಉದ್ಧವರಿಗೂ** ಉಪದೇಶಿಸುವ **"ತಸ್ಮಾತ್ತ್ವ ಮುದ್ಧವೋತ್ಸೃಜ್ಯ"** ಎಂಬ ವಾಕ್ಯವು **ಈ** ಚರಮ ಶ್ಲೋಕದ **ಉಪಪಾದನೆಯೇ** ಆದರೂ ಕೇವಲ ಲಘೂಪಾಯವನ್ನು **ಕುರಿತು** ಹೇಳುವ ಪ್ರಕರಣವು **ಅನುಗುಣಮ್'** ಎಂದು ಹೇಳಿರುವದು ಇಲ್ಲಿನ **ಅರ್ಥದ** ಅನುಸಾರವಾಗಿಯೇ ಭಾಗವತದಲ್ಲೂ ಈ ಚರಮ ಶ್ಲೋಕದ ಉಪಪಾದ **ನೆಯು** ಎಂಬುದನ್ನು ಸೂಚಿಸುತ್ತದೆ

**ಈ** ಚರಮಶ್ಲೋಕದಲ್ಲಿ **ಮಾಮೇಕಂ** ಎಂದು ಇಷ್ಟು ಮಾತ್ರವಿರುತ್ತದೆ. ಇದರ ವ್ಯಾಖ್ಯಾನವಾದ ಭಾಗವತ ಶ್ಲೋಕದಲ್ಲಿ **"ಮಾಮೇಕ ಮೇವ ಶರಣಂ"** **ಎಂದು** ಅವಧಾರಣವೂ ಇರುತ್ತದೆ ಇಲ್ಲಿ ಅವಧಾರಣವು ಏಕ ಶಬ್ದವೂ ಎರಡೂ ಇರುವದರಿಂದ ಏಕ ಶಬ್ದಕ್ಕೆ ಅವಧಾರಣಾರ್ಥವಲ್ಲದೇ ಬೇರೆ ಅರ್ಥವನ್ನು ಹೇಳು **ವದೇ** ಉಚಿತವೆಂದು ಹೀಗೆ ಸಿದ್ಧೋಪಾಯವೂ ಫಲಕೊಡುವ ಪ್ರಾಪ್ಯನೂ ಒಬ್ಬನೇ ಎಂದು ಅರ್ಥಮಾಡುವದೇ ಉಚಿತವೆಂದು ಮುಂದಿನ ವಾಕ್ಯವಾದ **"ಏವಕಾರಮುಂಡಾಯಿರುಕ್ಕ"** ಎಂಬುದರಿಂದ ಉಪದೇಶಿಸುತ್ತಾರೆ —

**೨. ಇಙ್ಗನನ್ರಿಕ್ಕೇ** - ಈ ಅರ್ಥ ಬೇಡದಿದ್ದರೆ, ಬೇರೆ ಅರ್ಥವನ್ನು ಹೇಳಬ **ಹುದೆಂದು** ತಿಳಿಸಿ, ಅವಧಾರಣಾರ್ಥವನ್ನೇ ಇಲ್ಲಿ ಹೇಳುತ್ತೇವೆ ; ಏಕೆಂದರೆ ಅವಧಾ **ರಣವು ಇಲ್ಲಿ** ಇಲ್ಲವು ಭಾಗವತ ಶ್ಲೋಕದಲ್ಲಿಯಾದರೋ, ಅವಧಾರಣವೂ ಏಕ **ಶಬ್ದವೂ** ಇರುವದರಿಂದ, ಅವಧಾರಣಾರ್ಥಕ್ಕಿಂತ ಬೇರೆ ಅರ್ಥವನ್ನು ಹೇಳಬೇ

**“ಏವ”ಕಾರ ಮುಂಡಾ ಯಿರುಕ್ಕ, “ಏಕ” ಶಬ್ದಮ್ ಕಿಡನ್ದಾಲಿ ದುಕ್ಕು ಅವಧಾರಣ ಮೊಳಿಯು ವೇರೇ ಪ್ಪೊರುಳ್ಕೊಳ್ಳುಗೈ ಉಚಿತ ಮಿರೆ.**

**೨. ಇಙ್ಙನನ್ರಿಕ್ಕೇ, “ಮುಖ್ಯಾನ್ಯ ಕೇವಲೇಷ್ವೇಕಮ್” ಎಙ್ಗಿರಪಡಿಯೇ ಬಹ್ವರ್ಥಮಾನ “ಏಕ” ಶಬ್ದಮಿಙ್ಙು ಕೇವಲಪರ್ಯಾಯಮಾಯ್, (೩) “ಮಾಮೇವ ಯೇ ಪ್ರಪದ್ಯತೇ” (೪) “ತಮೇವ ಶರಣಂ ಗಚ್ಛ”**

---

ಕಾಯಿತು ಇಲ್ಲಿ ಅವಧಾರಣವು ಇಲ್ಲದುದರಿಂದ, ಏಕಶಬ್ದಕ್ಕೆ ಅವಧಾರಣಾರ್ಥವನ್ನೇ ಏಕೆ ಹೇಳಕೂಡದು ಎಂದರೆ, ಹೇಳಬಹುದು ಎನ್ನುತ್ತಾರೆ **ಏವ** ಎಂಬ **ಅವಧಾರಣವು** ವ್ಯವಚ್ಛೇದಕಾರ್ಥದಲ್ಲಿ ಪ್ರಯೋಗಿಸುವದರಿಂದ, ಇಲ್ಲಿ **ಯಾವು**ದನ್ನು ವ್ಯವಚ್ಛೇದಿಸಿದ ಅರ್ಥವನ್ನು ಹೇಳುವದು ಉಚಿತವು? ಎಂದರೆ ತನ್ನ ಸ್ವತಂತ್ರ ಕೈಂಕರ್ಯತ್ವವನ್ನು ವ್ಯವಚ್ಛೇದಿಸಿ ಹೇಳುತ್ತದೆಂದು ಹೇಳಬಹುದು **ಇದು** ಕೆಲವರ ಅಭಿಪ್ರಾಯವೆಂದು ತಿಳಿಸುತ್ತಾರೆ.—

**“ಮುಖ್ಯಾನ್ಯ ಕೇವಲೇಷ್ವೇಕಮ್”** ಏಕ ಶಬ್ದವು ಮೂರರ್ಥಗಳಲ್ಲಿ ಪ್ರಯೋಗಿಸಲ್ಪಡುವದು (೧) ಮುಖ್ಯವಾದುದು - ಜಗದೇಕಕಾರಣನು ಎಂದ ಹಾಗೆ (೨) ಈಗ ಹೇಳಿದುದಕ್ಕೆ ಬೇರೆ, **ಇತ್ಯೇಕೇಪ್ರಾಹುಃ** ಎಂಬುದು ಉದಾಹರಣೆಯು, (೩) ಕೇವಲ ಇದು ಒಂದೇ ಎಂಬರ್ಥವು - ಓ ಮಿತ್ಯೇಕಾಕ್ಷರಮ್. ಅಮರದಲ್ಲಿ ನಾನಾರ್ಥವರ್ಗದಲ್ಲಿ “**ಏಕೇಮುಖ್ಯಾನ್ಯ ಕೇವಲಾಃ**” ಎಂದು ಈ ಅಭಿಪ್ರಾಯವೇ ಹೇಳಲ್ಪಟ್ಟಿರುತ್ತದೆ” **ಎಙ್ಗಿರಪಡಿಯೇ** ಎಂದು ನಿಘಂಟಿನಲ್ಲಿ ಹೇಳಿರುವ ಹಾಗೆ, **ಬಹ್ವರ್ಥಮಾನ “ಏಕ” ಶಬ್ದಂ**-ಅನೇಕಾರ್ಥಗಳುಳ್ಳ **ಈ** ಏಕಶಬ್ದವು, ಇಙ್ಙು **ಕೇವಲಪರ್ಯಾಯಮಾಯ್** - ಇಲ್ಲಿ **ಕೇವಲ** ಎಂಬರ್ಥವನ್ನುಳ್ಳದ್ದಾಗಿ, **(೩)“ಮಾಮೇವ ಯೇ ಪ್ರಪದ್ಯಂತೇ”** “ನನ್ನೊಬ್ಬನನ್ನು ಮಾತ್ರವೇ **ಯಾರು** ಶರಣಾಗತಿಯ ಮೂಲಕ ಆಶ್ರಯಿಸುತ್ತಾರೋ, **(೪) “ತಮೇವ ಶರಣಂ ಗಚ್ಛ”** ಆ ಶರಣಾಗತವತ್ಸಲನಾದ ಕೇವಲ ಆ ಪರಮಪುರುಷನನ್ನೇ ಉಪಾಯವನ್ನಾಗಿ ಹೊಂದು” **ಇತ್ಯಾದಿಗಳಿಲ್ ಪಡಿಯೇ**-ಇವೇ ಮೊದಲಾದ ಪ್ರಯೋಗಗಳಲ್ಲಿ ಹೇಳಿರುವ ಹಾಗೆ, **ಅವಧಾರಣಾರ್ಥಮಾಯ್** - ಕೇವಲ ಶಬ್ದಪರ್ಯಾಯವಾದ ಏವ ಎಂಬ ಅರ್ಥವನ್ನು ಹೊಂದಿದುದಾಗಿ, **ಶರಣ್ಯಗುಣಸಾಕಲ್ಯತ್ತಾಲೇ** - ಪ್ರಪನ್ನ ಜನರಕ್ಷಣೆಯ ವ್ರತವನ್ನು ಕೈಕೊಂಡಿರುವ ಭಗವಂತನ, ಆಶ್ರಿತರ ರಕ್ಷಣೋಪಯುಕ್ತ ಸರ್ವಜ್ಞತ್ವ, ಸತ್ಯಸಂಕಲ್ಪತ್ವ, ಸರ್ವಶಕ್ತಿತ್ವ, ಪರತ್ವ, ಸ್ವಾತಂತ್ರ್ಯ, ಸೌಲಭ್ಯ, ಸೌಶೀಲ್ಯ, ವಾತ್ಸಲ್ಯ ಕಾರುಣ್ಯಾದಿ ಕಲ್ಯಾಣಗುಣಗಳ ಪರಿಪೂರ್ಣತೆಯಿಂದ, **ಸ್ವಸ್ವಾತಂತ್ರ್ಯಾದಿಗಳೈ** - ಪ್ರಪನ್ನನಾದ ತನ್ನ ಸ್ವಾತಂತ್ರ್ಯವೇ ಮೊದಲಾದವುಗಳನ್ನು, ಈ ಏಕ ಶಬ್ದವು ವ್ಯವಚ್ಛೇದಿಸಿ ಹೇಳುತ್ತದೆ ಇದರ ತಾತ್ಪರ್ಯ

---

(೩) ಗೀ. ೭. ೧೪

**ಇತ್ಯಾದಿಗಳಿರ್‌ಪದಿಯೇ, ಅವಧಾರಣಾರ್ಥಮಾಯ್, ಶರಣ್ಯಗುಣಪೌಷ್ಕಲ್ಯತ್ತಾಲೇ ಸ್ವಸ್ವಾತಂತ್ರ್ಯಾದಿಗಳೈ ನಿವರ್ತ್ತಿಪ್ಪಿಕ್ಕಿರದೆನ್ರು ಶೊಲ್ಲುವರ್‌ಗಳ್. ಎಙ್ಙನೇ ಎನ್ನಿಲ್ ? ಸ್ವರಕ್ಷೈಕ್ಕು ಉಪಯುಕ್ತಙ್ಗಳಾನ ವಶೀಕರಣಙ್ಗಳ್ಳೆ ಶಾಸ್ತ್ರನಿಯುಕ್ತನಾನ ತಾನ್**

---

ವನ್ನು ವಿಶದವಾಗಿ ಮುಂದೆ ಉಪಪಾದಿಸಿ ತಿಳಿಸುತ್ತಾರೆ. ಮೇಲಿನ ವಾಕ್ಯಾರ್ಥ ವಿಷ್ಟೇ—ಇಲ್ಲಿ **ಏಕ** ಶಬ್ದಕ್ಕೆ ಕೇವಲ ಎಂಬರ್ಥವಾದರೆ ಅದು ಮಾತ್ರವೇ ಎಂಬರ್ಥವು ಇದು **ಏವ** ಎಂಬ ಪರ್ಯಾಯ ಪದವಾದ ಅವಧಾರಣವಾಗುತ್ತದೆ ಇದೇ ಈ ಪ್ರಮಾಣಗಳಲ್ಲಿ ವ್ಯಕ್ತವೆಂದು ಅವುಗಳನ್ನು ಉದಾಹರಿಸಿರುತ್ತಾರೆ **"ಮಾಮೇವ ಯೇ ಪ್ರಪದ್ಯನ್ತೆ"** ಎಂಬುದು **"ಮಾಮೇಕಂ ಯೇ ಪ್ರಪದ್ಯಂತೇ"** ಎಂಬುದರ ಬದಲಾಗಿಯೂ, **"ತಮೇವ ಶರಣ ಗಚ್ಛ"** ಎಂಬುದು **"ತಮೇಕಂ ಶರಣಂ ಗಚ್ಛ"** ಎಂಬುದರ ಬದಲಾಗಿಯೂ ಪ್ರಯೋಗಿಸಲ್ಪಟ್ಟಿರುತ್ತದೆ. ಹೀಗೆ ಅವಧಾರಣಾರ್ಥಕ್ಕೆ ಸಮನಾಗಿ **ಏಕ** ಶಬ್ದ ಪ್ರಯೋಗವೆಂದರೆ, ಕೆಲವರು ಹೇಳುವ ಅಭಿಪ್ರಾಯವನ್ನು ತಿಳಿಸುತ್ತಾರೆ ಕೇವಲ ನನ್ನೇ ಎಂದರೆ ಸರ್ವಸ್ವತಂತ್ರನಾದ ನನ್ನನ್ನೇ ಇದರಿಂದ ನೀನು ಅಸ್ವತಂತ್ರನಾದುದರಿಂದ ನಿನ್ನ ಸ್ವತಂತ್ರ ಪ್ರವೃತ್ತಿಯಿಂದ ಸಾಧಿಸಿದೆನೆಂಬ ಬುದ್ಧಿಯನ್ನು ವ್ಯಾವರ್ತ್ತಿಸಿ ಹೇಳಿತೆಂಬ ಭಾವವು. ಕೇವಲ ನನ್ನ ಕೃಪಾ ಬಲದಿಂದಲೇ ವಿನಾ ನಿನ್ನ ಸ್ವತಂತ್ರ ಪ್ರವೃತ್ತಿಯಿಂದಲ್ಲವೆಂಬರ್ಥವು ಉಂಟಾಗುತ್ತದೆಂಬ ಭಾವವು **ಸ್ವಸ್ವಾತಂತ್ರ್ಯಾದಿ** ಎಂಬಲ್ಲಿ ಆದಿಪದವು ಉಪಾಯಾನುಷ್ಠಾನಕ್ಕೆ ಬೇಕಾದ ಆಚಾರ್ಯರುಗಳಿಂದುಂಟಾದ ಜ್ಞಾನ, ಸ್ವಗುರುವಿನ ಉಪದೇಶವು ಇವೆಲ್ಲವೂ ಆದಿಶಬ್ದಾರ್ಥವು ಇವೆಲ್ಲಾ ಅಪ್ರಧಾನವಾಗಿ, **ಮಾಮೇಕಂ** - ತನ್ನನ್ನು ಮಾತ್ರವೇ **ಶರಣಂ ವ್ರಜ** ಎಂಬ ಭಾವವು. ಹಾಗೆ ಶರಣಾಗತಿಯನ್ನು ಅನುಷ್ಠಿಸುವದಕ್ಕೂ ತಾನೇ ಪ್ರೇರಕನಾದುದರಿಂದ, **ಮಾಮೇಕಂ** ಎಂದರೆ ಕೇವಲ ನನ್ನನ್ನೇ ಎಂಬರ್ಥವು

**ಎಙ್ಙನೇ ಎನ್ನಿಲ್** - ಅದು ಹೇಗೆ ? ಎಂದರೆ ಉಪಪಾದಿಸಿ ತಿಳಿಸುತ್ತಾರೆ— ಶ್ರೀ ಭಗವದ್ಗೀತೆಯು **ಅಧಿಷ್ಠಾನಂ ತಥಾ ಕರ್ತಾ** ಎಂದು ಆರಂಭಿಸಿದ ಶ್ಲೋಕದಲ್ಲಿ ಅಧಿಕಾರಿಯ ಕರ್ತೃತ್ವವೂ ಆವಶ್ಯಕವೆಂದು ಈ ಚೇತನನ ಸಙ್ಕಲ್ಪವೂ ಪರಮಾತ್ಮ ಸಙ್ಕಲ್ಪವೂ ಪ್ರತಿಯೊಂದು ಪ್ರವೃತ್ತಿಗೂ ಆವಶ್ಯಕವೆಂಬುದು ತೋರಿಬರುವಾಗ, ಹಾಗೆಯೇ **"ಕರ್ತಾ ಶಾಸ್ತ್ರಾರ್ಥವತ್ವಾತ್"** ಎಂಬ ಬ್ರಹ್ಮಸೂತ್ರದಲ್ಲೂ ಈ ಅಧಿಕಾರಿಗೆ ಕರ್ತೃತ್ವ ಉಂಟೆಂದು ಹೇಳಿರುವಾಗಲೂ, ಮತ್ತು ಸಾಧ್ಯೋಪಾಯಾನುಷ್ಠಾನವೂ ಮೋಕ್ಷಾರ್ಥಿಗೆ ಆವಶ್ಯಕವೆಂದು ಹೇಳಿರುವಾಗಲೂ, ಉಪಾಯದ್ವಿತ್ವವೂ ಆವಶ್ಯಕವಲ್ಲವೋ ? **ಮಾಮೇಕಂ** ಎಂಬುದಕ್ಕೆ ಕೇವಲ ನನ್ನನ್ನು ಮಾತ್ರವೇ

**ನುಷ್ಠಿಕ್ಕೈಯಾಲೇ ರಕ್ಷೈಯಿಲೇ** ತನಕ್ಕುಮ್ ಕರ್ತೃತ್ವಮ್ ತೋತ್ತ್ರಿ ಸಿದ್ಧೋಪಾಯಭೂತನಾನ **ಶರಣ್ಯನೋಡೊಕ್ಕ ತನ್ನೈಯುಮ್** ಉಪಾಯ ಮಾಕ **ಎಣ್ಣುಪ್ಪುಗ ಇಪ್ಪಡಿ ಪ್ರಸಕ್ತಮಾನ ಉಪಾಯದ್ವಿತ್ವತ್ತೈ ಕಳಿಕ್ಕಿರದು ಏಕಶಬ್ದಮ್.**

---

ಎಂದು ಹೇಗೆ ಅರ್ಥಮಾಡಲ್ಪಟ್ಟಿತು? ಎಂಬ ಪೂರ್ವ ಪಕ್ಷಕ್ಕೆ ಸಮಾಧಾನವನ್ನು "ಸ್ವರಕ್ಷೈಕ್ಕು" ಎಂದಾರಂಭಿಸಿದ ಮೂರು ವಾಕ್ಯಗಳ ಮೂಲಕ ತಿಳಿಸುತ್ತಾರೆ.— ಇದೂ ಅಲ್ಲದೆ **"ತಮೇವ ಶರಣಂ ಗಚ್ಛ" ಮಾಮೇವ ಯೇ ಪ್ರಪದ್ಯಂತೇ"** **ಇತ್ಯಾದಿ** ಪ್ರಮಾಣಗಳಲ್ಲಿ ಏವಕಾರಾರ್ಥವು ತೋರಿದರೂ **"ಶರಣಂಗಚ್ಛ"** **"ಯೇ ಪ್ರಪದ್ಯನ್ತೇ"** ಎಂಬ ಪ್ರಯೋಗಗಳಿಂದ ಮೋಕ್ಷಾರ್ಥಿಯ ಕರ್ತೃತ್ವದ ಆವಶ್ಯಕತೆಯು ತೋರಿಬರುತ್ತದಲ್ಲಾ? ಎಂದರೆ ಸಮಾಧಾನವನ್ನು ಹೇಳುತ್ತಾರೆ ಸ್ವರಕ್ಷೈಕ್ಕು - ತನ್ನ ರಕ್ಷಣೆಗ, ಉಪಾಯಮಾಕ ವಿಧಾನ - ಪ್ರಯೋಜನಕಗಳಾದ, ವಶೀಕರಣಙ್ಗಳ್ - ಯಾವುವುಗಳನ್ನು ವಶಮಾಡಿಕೊಳ್ಳಬೇಕೆಂದು ಹೇಳಲ್ಪಟ್ಟಿವೆಯೋ ಅವುಗಳನ್ನು, ಶಾಸ್ತ್ರಸಿದ್ಧಮಾನ ಶಾಸ್ತ್ರದಲ್ಲಿ ಹೇಳಲ್ಪಟ್ಟ ತಾನು **ಅನುಷ್ಠಿಕ್ಕೈಯಾಲ್** - ಅನುಷ್ಠಿಸಬೇಕಾಗಿರುವದೆಂದ ಅವು ಯಾವುವೆಂದರೆ ಶರಣಾಗತಿಯನ್ನು ಅನುಷ್ಠಿಸೋಣವು ರಕ್ಷೈಯಿಲೇ - ತನ್ನನ್ನು ರಕ್ಷಿಸಿಕೊಳ್ಳುವದಕ್ಕೆ, **ತನುಕ್ಕುಮ್ ಕರ್ತೃತ್ವಮುಮ್ ತೋತ್ತ** ತನಗೂ ಕರ್ತೃತ್ವವಿರುವದು **ತೋರಿಬಂದು, ಸಿದ್ಧೋಪಾಯಭೂತನಾನ** ಶರಣ್ಯನೋ **ಡೊಕ್ಕ** – ಸಿದ್ಧೋಪಾಯನಾಗಿರುವ ಸರ್ವಶರಣ್ಯನೊಂದಿಗೆ, **ತನ್ನೈಯುಮ್** ತನ್ನನ್ನೂ ಸಹ, **ಉಪಾಯಮಾಗ** - ಉಪಾಯವಾಗಿ, **ಎಣ್ಣುಪುಗ** – ಭಾವಿಸುವವ ನಾಗಿ, **ಅಪ್ಪಡಿ** – ಹೀಗೆ ಭಾವಿಸುವದರಮೂಲಕ, **ಪ್ರಸಕ್ತಮಾನ**-ಉಂಟಾಗುವ, **ಉಪಾಯದ್ವಿತ್ವತ್ತೈ** – ಇಬ್ಬರು ಉಪಾಯವಾಗಿರುವ ಭಾವವನ್ನು **ಕಳಿಕ್ಕಿರದು** **ಏಕಶಬ್ದಮ್** - ಈ ಏಕ ಶಬ್ದವು ಹೋಗಲಾಡಿಸುತ್ತದೆ. ಇತರರು ಯಾರೂ ಸಿದ್ಧೋಪಾಯವಾಗಲಾರರೆಂದು ವ್ಯಾವರ್ತಿಸಿ ಹೇಳುತ್ತದೆಂಬ ಭಾವವು. ಎಂದರೆ ಈ ಏಕಶಬ್ದವು, ಸಿದ್ಧೋಪಾಯನು ತಾನು ಒಬ್ಬನೇ ಎಂಬುದನ್ನು ಸ್ಥಿರಪಡಿಸುತ್ತದೆಂಬ ಭಾವವು. ಇಬ್ಬರು ಇದಕ್ಕೆ ಸಿದ್ಧೋಪಾಯರಲ್ಲವು, ಒಬ್ಬನಾದ ಜಗದೀಶ್ವರನು ತಾನೇ **"ಯೇ ಚ ವೇದವಿದೋ ವಿಪ್ರಾಃ ಯೇ ಚಾಧ್ಯಾತ್ಮವಿದೋ ಜನಾಃ । ತೇ ವದನ್ತಿ ಮಹಾತ್ಮಾನಂ ಕೃಷ್ಣಂ ಧರ್ಮಂ ಸನಾತನಮ್"** ಎಂಬಲ್ಲಿ ಹೇಳಿರುವ ಹಾಗೆ ಸಿದ್ಧೋಪಾಯನು ಎಂದು ತಿಳಿಸುತ್ತಾರೆ.—ಶಾಸ್ತ್ರದಲ್ಲಿ ಹೇಳಿರುವ ವಶೀಕರಣೋಪಾಯಗಳು ಯಾವುವು ಎಂಬುದು ಒಂದಯೇ ಉಪಾಯವು ಅರ್ಥಪಂಚಕಾಧಿಕಾರದ ೪೧೩-೧೪ನೆಯ ಪುಟಗಳನ್ನು ನೋಡಿ. ಇದರ ಕರದಲ್ಲಿ

---

• ( ) ಗೀ ೧೨-೬೨.

ಬಿದ ಕಳಿನ್ನಹಡಿ ಯೆನ್ಸ್ರಿಲ್ (೧) "ಕರ್ತಾಶಾಸ್ತ್ರಾರ್ಥವತ್ತ್ವಾತ್" ಎಙ್ಗಿರಪಡಿಯೇ ಜೀವನುಕ್ಕು ಕರ್ತೃತ್ವಮ್ ಪ್ರಾಮಾಣಿಕಮೇಯಾಗಿಲುಮ್. ಇದು ಪರಾಧೀನಮುಮಾಯ್, ಅಲ್ಪವಿಷಯಮುಮಾಯ್

---

ಉಪಪಾದಿತವು. "ಇಂದ್ರಿಯೇಭ್ಯಃ ಪರಾಹ್ಯರ್ಥಾ ಅರ್ಥೇಭ್ಯಶ್ಚ ಪರಂಮನಃ" (ಕಠ ೧-೩-೧೦) ಎಂದಾರಂಭಿಸಿದ ವಾಕ್ಯಗಳು ಇಲ್ಲಿ ಪರಮಾತ್ಮನನ್ನು ವಶಮಾಡಿಕೊಳ್ಳುವದು ಉತ್ತಮವೆಂದು ಹೇಳಿತು. ಆತನನ್ನು ವಶಮಾಡಿಕೊಳ್ಳುವದು ಹೇಗೆ ? ಎಂದರೆ "ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ" ಎಂಬುದು. ವಶೀಕರಣಙ್ಗಳೈ ಅನುಷ್ಠಿಕ್ಕೈಯಾಲೇ ಎಂಬುದರಿಂದ ಇಂದ್ರಿಯ ಮನಸ್ಸು ಬುದ್ಧಿ ಮುಂತಾದವುಗಳನ್ನೆಲ್ಲ ಕ್ರಮವಾಗಿ ಜಯಿಸಿ ವೈರಾಗ್ಯಯುಕ್ತನಾಗಿ ಕೊನೆಗೆ ಪರಮಪುರುಷನನ್ನು ವಶಮಾಡಿಕೊಳ್ಳುವದಕ್ಕಾಗಿ ಶರಣಾಗತಿಯನ್ನೂ ಅನುಷ್ಠಿಸುವನೆಂಬುದು ತಾತ್ಪರ್ಯವು.

ಹಿಂದಿನ ವಾಕ್ಯದಲ್ಲಿ ಸಿದ್ಧೋಪಾಯತ್ವ ದ್ವಿತ್ವ ಬುದ್ಧಿಯನ್ನು ನಿವರ್ತಿಸುತ್ತದೆ [illegible] ಎಂಬ ಸಂದೇಹ ಹೇಳಿದರು. ಅದು ಹೇಗೆ ಹೋಗಲಾಡಿಸುತ್ತದೆಂಬುದನ್ನು ಉಪಪಾದಿಸಿ ತಿಳಿಸುತ್ತಾರೆ. ಮೊದಲು ಈ ಸಂದರ್ಭದಲ್ಲಿ ಉಂಟಾಗುವ [illegible] ಪ್ರಶ್ನೆಗಳನ್ನು [illegible] ಸಮಾಧಾನವನ್ನು ತಿಳಿಸುತ್ತಾರೆ. ಸಿದ್ಧೋಪಾಯನು ಆತನೊಬ್ಬನೇ ಎಂದು ಹೇಳಿದರಲ್ಲಾ ಅದು ಮಾತ್ರವೇ ಸಾಕೇ ? ಈತನು ಏನನ್ನೂ ಮಾಡುವ ಆವಶ್ಯಕವಿಲ್ಲವೇ ? ಈತನಿಗೂ ಕರ್ತೃತ್ವ ಉಂಟೆಂದು ಶ್ರುತಿಸ್ಮೃತಿ [illegible] ಸೂತ್ರ ಮೊದಲಾದವುಗಳಲ್ಲಿ ಹೇಳಲ್ಪಟ್ಟಿದೆಯಲ್ಲಾ ಎಂದರೆ ಸಮಾಧಾನವನ್ನು ಹೇಳುತ್ತಾರೆ. ಕರ್ತೃತ್ವವೇನೋ ಉಂಟು, ಇಲ್ಲವೆಂದು ಹೇಳಲಿಲ್ಲವು. "ಪರಾತ್ತು ತಚ್ಛ್ರುತೇಃ"—ಎಂಬ (ಬ್ರ.ಸೂ.) ಸೂತ್ರದಲ್ಲಿ ಆ ಕರ್ತೃತ್ವವು ಪರಮಾತ್ಮಾಧೀನವೆಂದು ಹೇಳಿರುವದರಿಂದ, ಈ ಕರ್ತೃತ್ವವೂ ಕೂಡ ಈಶ್ವರ ಸಂಕಲ್ಪಾಧೀನವಾಗಿ ಪರಃಯುಕ್ತವಾಗಿಯೂ, ವ್ಯಾಜರೂಪವಾಗಿಯೂ ಇರುವದರಿಂದ ಕೇವಲ ಪರಮಪುರುಷನೇ ಸಿದ್ಧೋಪಾಯನೇ ವಿನಾ ತಾನಲ್ಲವೆಂದು ಹೇಳುತ್ತಾರೆ.— ಇದು - ಈ ಸಿದ್ಧೋಪಾಯದಲ್ಲಿ ದ್ವಿತ್ವ ಬುದ್ಧಿಯು ಕಳಿನ್ನಹಡಿ ಎನ್ನಸ್ರಿಲ್–ನಿವರ್ತಿಸೋಣವು ಹೇಗೆ ? ಎಂದು ಕೇಳಿದರೆ, ಕರ್ತಾ ಶಾಸ್ತ್ರಾರ್ಥವತ್ತ್ವಾತ್ ಜೀವಾತ್ಮನಿಗೆ ಜ್ಞಾತೃತ್ವ ಉಂಟೆಂದು ಸ್ಥಾಪಿತವಾದಹಾಗೆ ಕರ್ತೃತ್ವವು ಉಂಟೋ ? ಎಂಬ ಸಂದರ್ಭದಲ್ಲಿ "ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ" (ಗೀ. ೧೪-೧೯) ಇತ್ಯಾದಿ ಪ್ರಮಾಣಗಳಲ್ಲಿ ಕರ್ತೃತ್ವವು ದೇಹಕ್ಕೇ ವಿನಾ ಆತ್ಮನಿಗೆ ಇಲ್ಲವೆಂಬ ಪೂರ್ವಪಕ್ಷ ಬಂದರೆ, ಅದರ ಸಮಾಧಾನಾರ್ಥವಾಗಿ ಜೀವಾತ್ಮನೇ ಕರ್ತಾ ದೇಹವಲ್ಲವು. ಏಕೆಂದರೆ "ಯಜೇತ ಸ್ವರ್ಗಕಾಮಃ" – "ಸ್ವರ್ಗಕಾಮನು ಯಜ್ಞವನ್ನು ಮಾಡತಕ್ಕದ್ದು" "ಮುಮುಕ್ಷು

---

(೧) ಬ್ರಹ್ಮಸೂತ್ರ ೨-೩-೩೩

ಬ್ರಹ್ಮೋಪಾಸೀತ" - ಮೋಕ್ಷಾರ್ಥಿಯು ಪರಬ್ರಹ್ಮನನ್ನು ಉಪಾಸಿಸತಕ್ಕದ್ದು." ಇತ್ಯಾದಿ ಶಾಸ್ತ್ರವಿಧಿಗಳಿರುವದರಿಂದ ಎಂದು ಸೂತ್ರವು, ಎಙ್ಗಿರಪಡಿಯೇ - ಹೇಳಿರುವಹಾಗೆ, ಚೇತನುಕ್ಕು ಕರ್ತೃತ್ವಮ್ - ಜೀವನಿಗೆ ಕರ್ತೃತ್ವ ಉಂಟೆಂಬುದು, ಪ್ರಾಮಾಣಿಕಮೇ ಯಾಗಿಲುಮ್ - ಸತ್ಯವಾದುದೇಯಾದರೂ ಇದು - ಈ ಕರ್ತೃತ್ವವು, ಪರಾಧೀನಮುಮಾಯ್ - ಸ್ವತಂತ್ರಕರ್ತೃತ್ವವಿಲ್ಲದೆ "ಪರಾತ್ತು ತಚ್ಛ್ರುತೇಃ" ಈ ಕರ್ತೃತ್ವವು "ಅನ್ತಃ ಪ್ರವಿಷ್ಟಶ್ಶಾಸ್ತಾ ಜನಾನಾಮ್" ಎಂದೂ "ಯ ಆತ್ಮಾನ ಮನ್ತರೋ ಯಮಯತಿ' ಎಂದು ಹೇಳಿರುವ ಹಾಗೆ, ಹೃಷೀಕೇಶನಾದ ಪರಮಪುರುಷ ಸಙ್ಕಲ್ಪಾಧೀನವಾಗಿಯೂ, ಅಲ್ಪ ವಿಷಯಮುಮಾಯ್ - ಆ ಕರ್ತೃತ್ವವೇ ಫಲ ಕೊಡಲು ಯೋಗ್ಯತೆ ಇಲ್ಲದೆ ವ್ಯಾಜ ಮಾತ್ರವಾದುದರಿಂದ ಅಲ್ಪ ವಿಷಯವಾದುದಾಗಿ, ಪ್ರತಿಹತಿಯೋಗ್ಯಮುಮಾಯ್ - ಪರಮಪುರುಷನ ಸಙ್ಕಲ್ಪಾನುಗ್ರಹಗಳಿಲ್ಲವಾದರೆ ಕಾರ್ಯವು ಪ್ರತಿಬಂಧಕಗಳನ್ನು ಹೊಂದಲು ಯೋಗ್ಯವಾದುದಾಗಿಯೂ, ಇರುಕ್ಕುಮ್ - ಇರುತ್ತದೆ ಈ ಜೀವನಿಗೆ ಕರ್ತೃತ್ವವೇನೋ ಉಂಟು ಅದು ಒಪ್ಪತಕ್ಕದ್ದೇ. ಇದರಿಂದ ಸಿದ್ಧೋಪಾಯತ್ವಕ್ಕೆ ದ್ವಿತ್ವ ಭಾವವನ್ನು ಏರ್ಪಡಿಸಲು ಸಾಧ್ಯವಿಲ್ಲವು. ಏಕೆಂದರ ಮೂರು ಕಾರಣಗಳನ್ನು ಹೇಳಿದರು.

(೧) ಈ ಕರ್ತೃತ್ವವೇ ಪರಮಪುರುಷನ ಸಙ್ಕಲ್ಪಕ್ಕೆ ಅಧೀನವಾದುದು.
(೨) ಈ ಕರ್ತೃತ್ವವೇ ಫಲವನ್ನು ಸಾಧಿಸಲಾರದು. ಫಲವನ್ನು ಕೊಡುವನು ಪರಮ ಪುರುಷನು.
(೩) ಪ್ರತಿಬಂಧಕಗಳಿಗೆ ಈತನ ಕರ್ತೃತ್ವರೂಪ ಪ್ರಯತ್ನವು ಒಳಗಾಗಬಹುದು. ಕಾರ್ಯನಿಷ್ಪತ್ತಿಗೆ ಆತನ ಅನುಗ್ರಹವು ಆವಶ್ಯಕವು.

ಆದುದರಿಂದ ಈತನ ಕರ್ತೃತ್ವವೇ ಸ್ವತಂತ್ರವಾದುದಲ್ಲದುದರಿಂದ ಕಾರ್ಯಕಾರಿಯಾಗಲಾರದು. ಆ ಕಾರಣದಿಂದ ಸಿದ್ಧೋಪಾಯನು ಕೇವಲ ಆತನೇ ಎಂದು ಏಕ ಶಬ್ದವು. ಈ ಸಂದರ್ಭನಲ್ಲಿ ಒಂದು ಶಂಕಾ ಉದಿಸಬಹುದ. ಏನೆಂದರೆ—ಕರ್ತೃತ್ವವೇನೋ ಉಂಟು ಎಂದು ಶಾಸ್ತ್ರವು ಹೇಳುತ್ತವೆಂದೂ, ಆ ಶಾಸ್ತ್ರವೇ ಅದು ಪರಮ ಪುರುಷಾಯತ್ತವೆಂದೂ ಹೇಳಿದರೆ, ಈತನಿಗೆ ಕರ್ತೃತ್ವವಿದ್ದು ಏನು ಫಲ ? ಈತನು ಏತಕ್ಕೆ ಪ್ರಯತ್ನಮಾಡಬೇಕು. ಕಾಲುಕೈ ಎಲ್ಲಾ ಕಟ್ಟಿಹಾಕಿಬಿಟ್ಟು, ಆತನನ್ನು ದೇವಾಲಯಕ್ಕೂ ಕ್ಷೇತ್ರಯಾತ್ರೆಗೂ ಹೋಗು ಎಂದು ಹೇಳಿದಂತಾಗಲಿಲ್ಲವೇ ? ಎಂದರೆ, ಇಲ್ಲವು. ಏಕೆಂದರೆ ಮುಂದೆ ಬ್ರಹ್ಮಸೂತ್ರ ೩-೨-೩-೪೧ "ಕೃತಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧಾ ವೈಯರ್ಥ್ಯಾದಿಭ್ಯಃ" ಎಂಬಲ್ಲಿ ಈ ಪೂರ್ವಪಕ್ಷಕ್ಕೆ ಸಮಾಧಾನವು ದೊರೆಯುತ್ತದ. ಜೀವನು ಕಾರ್ಯವನ್ನು ಮಾಡಲು ತೊಡಗಿದಾಗ ಪ್ರಥಮ ಸಙ್ಕಲ್ಪದಲ್ಲಿ ಈತನನ್ನು ಸ್ವತಂತ್ರನಾಗಿ ಬಿಟ್ಟು ಬಿಟ್ಟು, ಆಮೇಲೆ ಆತನಿಂದ ಸಙ್ಕಲ್ಪಿಸಲ್ಪಟ್ಟದುದನ್ನು ಪರಮಪುರು-

ಪ್ರತೀಕ್ಷಿತಿಯೊನ್ಱುಮುಮಾಯ್ ಇರುಕ್ಕುಮ್. ಅಗ್ಯೈಯಾಲ್ ಇವನ್ತಾನ್ ಉಪಾಯಾನುಷ್ಠಾನಂ ಪಣ್ಣಿತ್ತುಮ್ (೧) "ವರದ ತವ ಖಲು ಪ್ರಸಾದಾದೃತೇ ಶರಣಮಿತಿ ವಚೋಽಪಿ ಮೇ ನೋದೀಯಾತ್" ಎನ್ರು ಶೊಲ್ಲುಗಿರಪಡಿಯೇ ಅವನ್ ಕಟಾಕ್ಷ ಮಡಿಯಾಗ ವಱುಗೈಯಾಲೇ ಅವನಾಲೇ ಪ್ರೇರಿತನಾಯ್, ಅವನ್ ಸಹಕಾರಿಯಾದಪ್ಪೋದು ನೀಟ್ಟ ಮುಡುಕ್ಕಮಾಟ್ಟಾದೇ ಅವನ್ ಕುಡುತ್ತ ಕರಣ ಕಳೇಬರಙ್ಗಳೈಕೊಂಡು, ಅವನ್

---

ಪ... ಅವನ ಹಿಂದಿನ ಸುಕೃತ ದುಷ್ಕೃತಾನುಸಾರವಾಗಿ ಪ್ರೇರಿಸುತ್ತಾನಾದುದರಿಂದ ಹೀಗೆ ಮಾಡು ಹೀಗೆ ಮಾಡಬೇಡವೆಂದು ಶಾಸ್ತ್ರದಲ್ಲಿ ಹೇಳಿರುವದಕ್ಕೆ ವೈಯರ್ಥ್ಯವಿಲ್ಲವು

ಈ ಅಭಿಪ್ರಾಯವನ್ನೆಲ್ಲಾ ಸ್ಪಷ್ಟತರವಾಗಿ ಉಪಪಾದಿಸಿ, ಆ ಕಾರಣದಿಂದ ಸಿದ್ಧೋಪಾಯದ್ವಿತ್ವವೆಂಬ ಭಾವನೆಯು ಮುಮುಕ್ಷುವಿಗೆ ಎಂದಿಗೂ ಉಂಟಾಗುವದಿಲ್ಲವು, ಈ ಪರಮಪುರುಷನೇ ಮೊದಲಿನಿಂದಲೂ ಎಲ್ಲಾ ಪ್ರವೃತ್ತಿಗಳಿಗೂ ಸಹಕಾರಿಯಾಗಿ ಅತನೇ ಸಿದ್ಧೋಪಾಯನೆಂದು ಉಪಪಾದಿಸಿ ತಿಳಿಸುತ್ತಾರೆ —ಆದುದರಿಂದ ಇದು ಏಕ ಶಬ್ದದಿಂದ ಹೇಳಲ್ಪಟ್ಟಿತೆಂದು ಮುಂದಿನ ವಾಕ್ಯದಿಂದ ವ್ಯಕ್ತವಾಗುತ್ತದೆ. ಅಗ್ಯೈಯಾಲ್ - ಆ ಕಾರಣದಿಂದ, ಇವನ್ತಾನ್ - ಈ ಉಪಾಯಾನುಷ್ಠಾನಕ್ಕೆ ಕರ್ತೃತ್ವವನ್ನು ಹೊಂದಿದ ಅಧಿಕಾರಿಯು ಉಪಾಯಾನುಷ್ಠಾನವನ್ ಪಣ್ಣಿತ್ತುಮ್ - ಉಪಾಯಾನುಷ್ಠಾನವನ್ನು ಮಾಡಿರುವದೂ ಕೂಡ (೧) ಹೇ ವರದ - ಓ ಕಾಂಚೀಪುರದ ವರದರಾಜನೇ, ತವ - ನಿನ್ನ, ಪ್ರಸಾದಾದೃತೇ - ಅನುಗ್ರಹವಿಲ್ಲದೆ, ಮೇ - ನನಗೆ, ಶರಣಮಿತಿವಚೋಽಪಿ - ನೀನೇ ನನಗೆ ಉಪಾಯವು, ಗತಿಯು ಎಂದು ಬಾಯಿಂದ ಹೇಳುವದೂ ಕೂಡ, ನೋದೀಯಾತ್ - ಉಂಟಾಗಲಾರದು ಖಲು – ನಿಶ್ಚಯವು, ನಿನ್ನ ಅನುಗ್ರಹವಿಲ್ಲದೆ, ನಿನ್ನ ಪಾದಕಮಲವೇ ನನಗೆ ಗತಿ ಎಂದು ಹೇಳಲೂ ಕೂಡ ಸಾಧ್ಯವಿಲ್ಲವು ಎಂಬ ಭಾವವು. "ಎನ್ರು ಶೊಲ್ಲುಗಿರಪಡಿಯೇ - ಎಂದು ಹೇಳಿರುವಹಾಗೆ, ಅವನ್ ಕಟಾಕ್ಷಮಡಿಯಾಗ ವಱುಗೈಯಾಲೇ - (ಈ ಉಪಾಯಾನುಷ್ಠಾನವು ಕೂಡ ಎಂದು ಹಿಂದೆ ಇದೆ.) ಸರ್ವೇಶ್ವರನ ಕಟಾಕ್ಷ ಮೂಲಕವಾಗಿ ಬರುವದರಿಂದ ಅವನಾಲೇ ಪ್ರೇರಿತನಾಯ್- ಆ ಪರಮಪುರುಷನಿಂದ ಪ್ರೇರಿತನಾಗಿ, ಅವನ್ ಸಹಕಾರಿಯಾದಪ್ಪೋದು - ಅವನು ದಿವ್ಯ ಕಟಾಕ್ಷದಿಂದ ನೋಡಿ ಸಹಾಯಭೂತನಾಗಿ ನಿಲ್ಲದೆ ಹೋದಾಗ, ನೀಟ್ಟವುಡಕ್ಕಮಾಟ್ಟಾದೇ - ಕೈಕಾಲುಗಳನ್ನು ಚಾಚುವದಕ್ಕೂ ಮಡಿಸುವದಕ್ಕೂ ಶಕ್ತಿ ಇಲ್ಲದೆ ಅವನ್ ಕುಡುತ್ತ ಕರಣಕಳೇಬರಙ್ಗಳೈಕೊಂಡು - ಅವನು ಅನುಗ್ರಹಿಸಿ ಕೊಟ್ಟ ಇಂದ್ರಿಯಗಳು ಮತ್ತು ದೇಹದ ಮೂಲಕವಾಗಿ,

---

(೧) ವರದರಾಜಸ್ತವ...

**ಕಾಟ್ಟಿನ ಉಪಾಯತ್ತೈ ಅವನ್ ತುಣೈ ಶೆಯ್ಯ ಅನುಷ್ಠಿತ್ತು, ಅವನ್ ಕೊಡುಕ್ಕಪ್ಪುಗುಗಿರ ಫಲತ್ತುಕ್ಕು ಚಾತಕಮ್ಪೋಲೇ ಅಙ್ಙಾನ್ದಿರುಕ್ಕಿರ ಇವನೈ ಸ್ವಾಧೀನ ಸರ್ವವಿಷಯಾ ಪ್ರತಿಹತ ಕರ್ತೃತ್ವಮುಡೈಯವನೋಡೆ ತುಲ್ಯವಾಗ ಇರಣ್ಡಾಮ್, ಸಿದ್ಧೋಪಾಯಮಾಗವೆಣ್ಣುಗೈ ವಿವೇಕಿಯಾನ ಮುಮುಕ್ಷುವುಕ್ಕು ಉಚಿತಮನ್ರೆನ್ರು "ಏಕ" ಶಬ್ದತ್ತಾಲೇ ಶೊಲ್ಲಿತ್ತಾಯಿತ್ತು-**

### ೩- ಸಾಧ್ಯೋಪಾಯ ವ್ಯವಚ್ಛೇದ ಪರತ್ವಮುಮ್ ಏಕ ಶಬ್ದ ತಾತ್ಪರ್ಯಮ್

**ಇಕ್ಕಟ್ಟಳೈಯಿಲೇ ಸಾಧ್ಯೋಪಾಯಮಾನ ಪ್ರಪತ್ತಿಯೈಯುಮ್ ಸಿದ್ಧೋ**

---

**ಅವನ್ ಕಾಟ್ಟಿನ ಉಪಾಯತ್ತೈ** - ಅವನು ತೋರಿಸಿದ ಉಪಾಯವನ್ನು, ಭಕ್ತಿಯೋ, ಪ್ರಪತ್ತಿಯೋ, ಎರಡರಲ್ಲಿ ಯಾವುದೋ ಒಂದನ್ನು. **ಅವನ್ ತುಣೈಶೆಯ್ಯ ಅನುಷ್ಠಿತ್ತು** - ಆತನೇ ಸಹಾಯಕ್ಕೆ ನಿಂತು ನಡೆಸಿಕೊಟ್ಟಿದುದರ ಮೂಲಕ ಅನುಷ್ಠಿಸಿ, **ಅವನ್ ಕೊಡುಕ್ಕಪ್ಪುಗುಗಿರ ಫಲತ್ತುಕ್ಕು** - ಆತನು ದಯಪಾಲಿಸುವದಾಗಿ ಸಙ್ಕಲ್ಪಿಸಿರುವ ಫಲವಾದ ಮೋಕ್ಷಕ್ಕೆ, **ಜಾತಕಮ್ಪೋಲೇ** - ಚಾತಕಪಕ್ಷಿಗೆ ನೆಲದಮೇಲೆ ಎಷ್ಟು ಯಥೇಚ್ಛವಾಗಿ ನೀರು ಇದ್ದರೂ ಅದು ಯಾವದನ್ನೂ ಬಯಿಸದೆ, ಮೇಘದಿಂದ ಬೀಳುವ ನೀರನ್ನೇ ಪಾನಮಾಡಬೇಕೆಂದು ಕಾದುಕೊಂಡಿರುವ ಚಾತಕ ಪಕ್ಷಿಯುಹಾಗೆ, **ಅಙ್ಙಾನ್ದಿರುಕ್ಕಿರ ಇವನೈ** - ಮುಖವನ್ನು ಎಂದರೆ ಬಾಯನ್ನು ತೆರೆದುಕೊಂಡಿರುವ ಈ ಮೋಕ್ಷಾರ್ಥಿಯನ್ನು, **ಸ್ವಾಧೀನ ಸರ್ವವಿಷಯಾಪ್ರತಿಹತ ಕರ್ತೃತ್ವಮುಡೈಯವನೋಡೆ**- ಸಮಸ್ತ ವಿಷಯವೂ ತನಗೆ ಸ್ವಾಧೀನವಾಗಿ ಏನೊಂದೂ ತಡೆಯಿಲ್ಲದ ಸ್ವತಂತ್ರ, ಕರ್ತೃತ್ವವುಳ್ಳವನಾದ ಸರ್ವಶಕ್ತನಾದ ಪರಮಪುರುಷನೊಂದಿಗೆ, **ತುಲ್ಯವಾಗ** - ಸಮಾನವಾದ, **ಇರಂಡಾಮ್ ಸಿದ್ಧೋಪಾಯಮಾಗ ವೆಣ್ಣುಗೈ** - ಎರಡನೇ ಸಿದ್ಧೋಪಾಯವಾಗಿ ಭಾವಿಸೋಣವು, **ವಿವೇಕಿಯಾನ ಮುಮುಕ್ಷುವುಕ್ಕು**-ವಿವೇಕಿಯಾದ ಈ ಮೋಕ್ಷಾರ್ಥಿಗೆ, **ಉಚಿತಮನ್ರೆನ್ರು** - ಯೋಗವಾದುದಲ್ಲವೆಂದು **"ಏಕ"ಶಬ್ದತ್ತಾಲೇ**- ಈ "ಏಕ" ಶಬ್ದದ ಮೂಲಕ, **ಶೊಲ್ಲಿತ್ತಾಯಿತ್ತು** ಹೇಳಿದಂತಾಯಿತು.

### ೩- "ಏಕ" ಶಬ್ದದಿಂದ ಸಾಧ್ಯೋಪಾಯದ ಪ್ರಾಧಾನ್ಯದ ನಿರಾಕರಣೆಯು. ಅದು ವ್ಯಾಜಮಾತ್ರವು.

---

**ಇಕ್ಕಟ್ಟಳೈಯಿಲೇ** - ಈ ಪ್ರಕಾರದಲ್ಲಿ **ಸಾಧ್ಯೋಪಾಯವಾದ ಪ್ರಪತ್ತಿಯೈಯುಮ್** – ಪ್ರಪತ್ತಿಯನ್ನು, **ಸಿದ್ಧೋಪಾಯತ್ತೋಡು** - ಸಿದ್ಧೋಪಾಯನೊಂದಿಗೆ, **ಒರುಕೋರ್ವೈಯಾಗ** - ಒಂದಾಗಿ ಸಂಬಂಧಿಸಿಕೊಂಡಿರುವದಾಗಿ, **ಎಣ್ಣಾಪ್ಪೈಕ್ಕಾಗ** - ಅಭಿಪ್ರಾಯ ಪಡವೇ ಇರುವದಕ್ಕಾಗಿ; **ಏಕಶಬ್ದಮೆನ್ರುಮ್**-

**ಪಾಯುಕ್ಕೋಡೊರು ಕೋರ್ವೈಯಾಗ ವೇಣ್ಣಾನ್ಮೈಕ್ಕಾಕ "ಏಕ" ಶಬ್ದಮೆನ್ನುಮ್ ಶೊಲ್ಲುವರ್ಗಳ್ ಅದು ಎಙ್ಙನೇ ಎನ್ನಿಲ್ ? ಇಪ್ಪತ್ತಿಯುಮ್ ಭಕ್ತಿಯೋಗಂಪೋಲೇ ಪ್ರಸಾದನಮಾಗ ವಿಧಿಕ್ಕಪ್ಪಟ್ಟದುದೇಯಾಗಿಲುಮ್ ಸಹಜಕಾರುಣ್ಯಾದಿ ವಿಶಿಷ್ಟನಾನ ಸರ್ವೇಶ್ವರನುಡೈಯ ಕಾಲುಷ್ಯ ಶಮನಮಾತ್ರಾರ್ಥಮಾಯ್ ಸಾಕ್ಷಾತ್ಫಲತ್ತುಕ್ಕು ಸಹಜ ಸಾಮರ್ಥ್ಯಕಾರುಣ್ಯ ವಿಶಿಷ್ಟನಾನ ಅವನ್ನಿನ್ನೈವೇ ಕಾರಣಮಾಂ ಪಡಿಯಾಯ್ ಅವನ್ನಾನೇ ಅತ್ಯಂತಾ ಕಿಂಚನನಾನ**

---

ಏಕಶಬ್ದದ ಪ್ರಯೋಗವೆಂದು, **ಶೊಲ್ಲುವರ್ಗಳ್** - ಹೇಳುವರು. ತಾತ್ಪರ್ಯವೇನೆಂದರೆ ಸಿದ್ಧೋಪಾಯದ ಹಾಗೆ ಸಾಧ್ಯೋಪಾಯವು ಪ್ರಧಾನ್ಯವಾದ ಉಪಾಯವಲ್ಲವ, ನಾಮಮಾತ್ರವಾದುದು. ಭರನ್ಯಾಸವನ್ನು ವ್ಯಾಜಮಾಡಿಕೊಂಡು ಸಿದ್ಧೋಪಾಯನೇ ಫಲಪ್ರದನಾದುದರಿಂದ ಏಕ ಶಬ್ದವು ಸಾಧ್ಯೋಪಾಯಕ್ಕೆ ಪ್ರಾಧಾನ್ಯವನ್ನು ವ್ಯಾವರ್ತಿಸಿ ಹೇಳುತ್ತದೆಂಬ ಭಾವವು. ಮುಂದೆ "ಅದು ಎಙ್ಙನೇ ಎನ್ನಿಲ್" - ಎಂಬ ವಾಕ್ಯದ ಮೂಲಕ ಈ ಅಭಿಪ್ರಾಯವನ್ನು ಉಪಪಾದಿಸಿ ಹೇಳುತ್ತಾರೆ.

ಅದು ಎಙ್ಙನೇ ಎನ್ನಿಲ್ - ಅದು ಹೇಗೆ ? ಎಂದರೆ, **ಇಪ್ಪತ್ತಿಯುಮ್** - ಈ ಪ್ರಪತ್ತಿಯೂ, **ಭಕ್ತಿಯೋಗಂಪೋಲೇ** - ಇನ್ನೊಂದು ಸಾಧ್ಯೋಪಾಯವಾದ ಭಕ್ತಿಯೋಗವೆಂಬ **ಉಪಾಸನದಹಾಗೆ, ಪ್ರಸಾದನಮಾಗ** - ಪ್ರೀತಿಯ ಪ್ರಸನ್ನತೆಯನ್ನು ಸಂಪಾದಿಸಿಕೊಡುವದೆಂದು, **ವಿಧಿಕ್ಕಪ್ಪಟ್ಟದುತಾನೇಯಾಗಿಲುಮ್** - ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿದ್ದರೂ, **ಸಹಜಕಾರುಣ್ಯಾದಿ ವಿಶಿಷ್ಟನಾನ ಸರ್ವೇಶ್ವರನುಡೈಯ** - ಸಹಜವಾಗಿ ನಿರ್ಹೇತುಕಕಾರುಣ್ಯ, ಆದಿಶಬ್ದದಿಂದ ವಾತ್ಸಲ್ಯಾದಿ ಗುಣಗಳಿಂದ ಕೂಡಿದ ಸರ್ವೇಶ್ವರನ, **ಕಾಲುಷ್ಯಶಮನಮಾತ್ರಾರ್ಥಮಾಯ್** - ಇಂತಹ ಅಪರಾಧ ಮಾಡಿದನೇ ಎಂದು ನಿಗ್ರಹಿಸುವ ಕೋಪವನ್ನು ಹೋಗಲಾಡಿಸುವದಕ್ಕೆ ಮಾತ್ರಕ್ಕಾಗಿ, **ಸಾಕ್ಷಾತ್ಫಲತ್ತುಕ್ಕು ಸಹಜಸಾಮರ್ಥ್ಯಕಾರುಣ್ಯವಿಶಿಷ್ಟನಾನ** - ಸಾಕ್ಷಾತ್ತಾಗಿ ಫಲವನ್ನು ಕೊಡುವದಕ್ಕೆ ಬೇಕಾದ ಸಹಜವಾದ ಶಕ್ತಿಕಾರುಣ್ಯಗಳಿಂದ ಕೂಡಿದ, **ಅವನ್ನಿನ್ನೈವೇ** - ಭಗವಂತನ ಸನ್ನಿಧಿಯೇ, **ಕಾರಣಮಾಮ್ ಪಡಿಯಾಯ್** - ಕಾರಣವಾಗಿ, ಇದರಿಂದ ಭಕ್ತಿಯೋಗವಾಗಲಿ ಭರನ್ಯಾಸವಾಗಲಿ ಏನುಮಾಡುತ್ತದೆ ಎಂದರೆ, ಈ ಪ್ರಪನ್ನನು ತುಂಬಾ ಅಪರಾಧಿಯಾಗಿದ್ದರೂ, ಭಗವನ್ನಿಗ್ರಹ ರೂಪ ಕೋಪವನ್ನು ಆರಿಸಿ, ಆತನ ಸಹಜ ಕಾರುಣ್ಯವು ಈತನನ್ನು ಅನುಗ್ರಹಿಸುವ ಹಾಗೆ ಮಾಡುತ್ತದೆಂಬ ಭಾವವು, ಹೀಗೆ ಸರ್ವೇಶ್ವರನಿಗೆ ಕಾರು[illegible] ಎಂಬ[illegible]ಗಿ ಅನುಗ್ರಹಿಸುವ ಪ್ರಸನ್ನತೆಯನ್ನುಂಟುಮಾಡಿ, **ಅವನ್ನಾನೇ** - ಆ ಸರ್ವೇಶ್ವರನೇ **ಅತ್ಯಂತಾಕಿಂಚನನಾನ ಪ್ರಪನ್ನನುಕ್ಕು** -

**ಪ್ರಪನ್ನನುಕ್ಕು ಭರಸ್ವೀಕಾರತ್ತಾಲೇ ಭಕ್ತಿಯೋಗಾದಿಗಳಾನ ಗುರುತರೋಪಾಯಙ್ಗಳಿನ್ನಿರೇ ನಿನ್ರು ಇವ್ವಾನುಕೂಲ್ಯ ಸಂಕಲ್ಪಾದಿಯುಕ್ತ ಪ್ರಪತ್ತಿಮಾತ್ರ ವ್ಯಾಜ ಸಾಪೇಕ್ಷನಾಯ್, ವೇರೊನ್ರಾಲ್ ಅಪೇಕ್ಷೈಯಿಲ್ಲಾಮೈಯಾಲ್ ನಿರಪೇಕ್ಷೋಪಾಯತ್ವಮೇ ಇನ್ನ್ಯಾಸವಿದ್ಯೈಕ್ಕು ಸೇದ್ಯಾಕಾರಮಾಗಕ್ಕೊಂಡು, (೧) "ತ್ವಮೇವೋಪಾಯ ಭೂತೋಮೇ ಭವ" ಎನ್ರು ಅಪೇಕ್ಷಣೀಯನಾಯಿರುಕ್ಕ (೨) "ಎನ್ನುಣರ್ವಿನುಳ್ಳೇಯಿರುತ್ತಿನೇನತುವುಮವನಿನ್ನರುಳೇ" ಎನ್ರುಮ್ (೩) "ಇಶ್ವೈವಿತ್ತೈಸ್ಸ್ವಯಮಾತ್ಮಸ್ವೈಕ್ಯೇಳಿರುಕ್ಕು ವು**

ಅತ್ಯಂತ ಅಕಿಂಚನನಾದ ಎಂದರೆ ಬೇರೆ ಇನ್ನು ಯಾವ ಗತಿಯೂ ಇಲ್ಲದ ಪ್ರಪನ್ನನಿಗೆ **ಭರಸ್ವೀಕಾರತ್ತಾಲೇ** - ಈತನು ಮಾಡಿದ ಭರನ್ಯಾಸವನ್ನು ಅಂಗೀಕರಿಸಿ, **ಭಕ್ತಿಯೋಗಾದಿಗಳಾನ** – ಕರ್ಮಯೋಗ ಜ್ಞಾನಯೋಗಗಳಿಂದ ಸಹಕೃತವಾದ ಭಗವದುಪಾಸನವಾದ, **ಗುರುತರೋಪಾಯಙ್ಗಳಿನ್** - ಇಂತಹ ಶ್ರೇಷ್ಠತರವಾದ ಕರ್ಮಜ್ಞಾನ ಸಹಕೃತ ಭಕ್ತಿಯೋಗದ, **ನಿನ್ರು**-ಸ್ಥಾನದಲ್ಲಿ ಕರುಣಾಪೂರ್ಣ ಹೃದಯನು ತಾನೇ ನಿಂತು, **ಇವ್ವಾನುಕೂಲ್ಯಸಂಕಲ್ಪಾದಿಯುಕ್ತ**-ಈ ಆನುಕೂಲ್ಯ ಸಂಕಲ್ಪ, ಪ್ರಾತಿಕೂಲ್ಯ ವರ್ಜನ, ಮಹಾ ವಿಶ್ವಾಸ, ಕಾರ್ಪಣ್ಯ, ಗೋಪ್ತೃತ್ವವರಣ ಹೀಗೆ ಐದು ಅಂಗಗಳಿಂದ ಸೇರಿದ, **ಪ್ರಪತ್ತಿಮಾತ್ರ**-ಭರನ್ಯಾಸ ಮಾತ್ರವಾದ, **ವ್ಯಾಜಸಾಪೇಕ್ಷನಾಯ್** - ಈ ವ್ಯಾಜವನ್ನು ಅಪೇಕ್ಷಿಸದಿದ್ದರೆ ಸ್ವತಂತ್ರ ಸ್ವೈರ್ಯರೂಪ ಅಪವಾದವು ಉಂಟಾಗಬಹುದಾದುದರಿಂದ ವ್ಯಾಜವನ್ನು ಅಪೇಕ್ಷಿಸುವವನಾಗಿ, **ವೇರೊನ್ರಾಲ್ ಅಪೇಕ್ಷೈಯಿಲ್ಲಾಮೈಯಾಲೇ** - ಇದಲ್ಲದೆ ಬೇರೆ ಇನ್ನು ಯಾವುದರ ಅಪೇಕ್ಷೆ ಇಲ್ಲದವನಾಗಿ, **ನಿರಪೇಕ್ಷೋಪಾಯತ್ವಮೇ** - ಯಾವುದರ ಅಪೇಕ್ಷೆ ಇಲ್ಲದ ಇಂತಹ ಉಪಾಯ ಭಾವವೇ, **ಇನ್ನ್ಯಾಸವಿದ್ಯೈಕ್ಕು** - ಈ ಭರನ್ಯಾಸವೆನ್ನುವ ಬ್ರಹ್ಮವಿದ್ಯೆಗೆ, **ಸೇದ್ಯಾಕಾರಮಾಗಕ್ಕೊಂಡು** - ಇದೇ ಮುಖ್ಯವಾಗಿ ತಿಳಿಯುತಕ್ಕ ವಿಶೇಷವೆಂದು ಗ್ರಹಿಸಿ, (೧) "**ತ್ವಮೇವೋಪಾಯಭೂತೋ ಮೇ ಭವ**" ಕರ್ಮಯೋಗಾದಿಗಳಿಂದ ಕೂಡಿದ, ಭಕ್ತಿಯೋಗಕ್ಕೆ ನಾನು ಅಸಮರ್ಥನಾದುದರಿಂದ ನೀನೇ ಉಪಾಯಸ್ಥಾನದಲ್ಲಿ ನಿಂತು ಅನುಗ್ರಹಿಸಬೇಕು. ಎನ್ರು - ಎಂಬುದಾಗಿ **ಅಪೇಕ್ಷಣೀಯನಾಯಿರುಕ್ಕ** - ಭಗವಂತನು ಪ್ರಾರ್ಥಿಸಲ್ಪಟ್ಟಿರುವವರ ಮೂಲಕ, (೨) **ಎನ್** - **ನನ್ನ**, **ಉಣರ್ವಿನುಳ್ಳೇ** - "**ತ್ವಮೇವೋಪಾಯ ಭೂತೋಭವ**" ಎಂದು ಹೇಳಿರುವಹಾಗೆ ಬುದ್ಧಿಯಲ್ಲೇ **ಇರುತ್ತಿನೇನ್** – ಮನಸ್ಸಿನ ಮೂಲಕವಾಗಿ ಬುದ್ಧಿಗೆ ವಿಷಯವಾಗಿ ಸ್ಥಾಪಿಸಿದೆನು. **ಅದುವುಮ್** - ನೀನೇ ಎಲ್ಲಾ ವಿಷಯದಲ್ಲಿ ನನಗೆ ಉಪಾಯನೆಂಬ ಬುದ್ಧಿಯೂ ಕೂಡ, **ಅವನದು** - ಭಗವಂತನದು ಅವನಿಗೆ ಸಂಬಂಧಿಸಿದ, **ಇನ್** - ಬಹು

(೧) ಅಹಿ ಸಂ. ೩೭-೨೯. (೨) (೩)

ವ್ಮ್ಮಾನೇಃ ಎನ್ರುಮ್ ಶೊಲ್ಲುಗಿರಪಡಿಯೇ ಉಪಾಯಭೂತನಾನ ಅವರ್ ಶೆಯ್ವಿಕ್ಕಚ್ಚೆಯ್ಗಿರವ್ಯಾಜಮಾತ್ರತ್ತೈಯವನೋಡೊಕ್ಕ ಉಪಾಯಮಾಕ ಎಣ್ಣುಕೈ ಉಚಿತಮನ್ರೆನ್ರು "ಏಕ" ಶಬ್ದತ್ತುಕ್ಕು ತಾತ್ಪರ್ಯಮ್.

---

ಭೋಗ್ಯವಾದ, ಅರುಳ್-ಕೃಪಾಪ್ರಭಾವವೇ, ನೀನೇ ಸರ್ವವಿಧ ಉಪಾಯವಾಗತಕ್ಕದ್ದೆಂದು ಶರಣಾಗತಿಯನ್ನನುಷ್ಠಿಸಿದ ವಿವೇಕಬುದ್ಧಿಯೂಕೂಡ ನಿನ್ನ ನಿರತಿಶಯವಾದ ಕೃಪಾಪ್ರಭಾವವೇ ಎಂಬ ಬಾವವು- ಎನ್ರುಮ್-ಎಂದೂ,"ಇಶೈವಿತ್ತು – ವಿಶ್ವಾಸವನ್ನುಂಟುಮಾಡಿ, ಎನ್ನೈ - ಅಕಿಂಚನನಾದ, ನನ್ನನ್ನು ಎಂದರೆ ನನ್ನ ಆತ್ಮಾವಿನ ರಕ್ಷಾ ಭರವನ್ನು, ಉನ್ ತಾಳಿಣೈಕ್ಕೀಳ್-ಉದಾರಿಯಾಗಿಯೂ ಸೌಲಭ್ಯ ವಾತ್ಸಲ್ಯ ಕಾರುಣ್ಯಗಳಿಂದ ಯುಕ್ತನಾಗಿಯೂ ಇರುವ ನಿನ್ನ ಪಾದದ್ವಂದ್ವಗಳ ಕೆಳಗೆ, ಪ್ರತಿಷ್ಠಿತಮಾಗಪ್ಪಣ್ಣಮ್ - ಸ್ಥಿರವಾಗಿ ನಿಲ್ಲುವ ಹಾಗೆ ಮಾಡು, ಅಮ್ಮಾನೇ - ಸ್ವಾಮಿಯೇ, ಎನ್ರುಮ್ - ಎಂಬದಾಗಿ ಶೊಲ್ಲುಗಿರಪಡಿಯೇ . ಹೇಳಿರುವಹಾಗೆ ಉಪಾಯಭೂತನಾನ ಅವರ್ - ಸಿದ್ಧೋಪಾಯನಾದ ಭಗವಂತನು ಶೆಯ್ವಿಕ್ಕಚ್ಚೆಯ್ಗಿರ- ಮಾಡಿಸುವಹಾಗೆ ಅನುಗ್ರಹಿಸುವ, ತಾನೇ ಅನುಷ್ಠಿಸಬಹುದಾದ ವ್ಯಾಜಮಾತ್ರತ್ತೈ – ಸಾಧ್ಯೋಪಾಯವಾದ ಭರನ್ಯಾಸ ರೂಪ ವ್ಯಾಜಮಾತ್ರವನ್ನು, ಅವನೋಡೊಕ್ಕ - ಆ ಪ್ರಧಾನೋಪಾಯನಾದ ಭಗವಂತನೊಂದಿಗೆ ಉಪಾಯಮಾನ ಎಣ್ಣುಗೈ - ತಾನು ಅನುಷ್ಠಿಸಿದುದನ್ನು ಉಪಾಯವಾಗಿ ಭಾವಿಸೋಣವು, ಉಚಿತಮನ್ರೆನ್ರು – ಯೋಗ್ಯವಾದುದಲ್ಲವೆಂಬುದು, ಏಕಶಬ್ದತ್ತುಕ್ಕು ತಾತ್ಪರ್ಯಮ್ - ಇಲ್ಲಿರುವ "ಏಕ" ಶಬ್ದದ ತಾತ್ಪರ್ಯವು, ಭರನ್ಯಾಸಾನುಷ್ಠಾನಕ್ಕೂ ಕೂಡ ಸ್ವಾಮಿಯ ಅನುಗ್ರಹವು ಅತ್ಯಾವಶ್ಯಕವು. ಕರುಣಾಸಾಗರನು ಪ್ರೇರಿಸಿ, ಭರನ್ಯಾಸಾನುಷ್ಠಾನವನ್ನು ಮಾಡಿದರೆ ಸಾಧ್ಯವೇ ವಿನಾ ಅನ್ಯಥಾ ಅಲ್ಲವು. ಹೀಗೆ ಅದೂ ಅವನ ಅಧೀನವು. ಅದೂ ಅಲ್ಲದೆ ಈ ಜಡರೂಪವಾದ ಭರನ್ಯಾಸ ಕರ್ಮವು ತಾನೇ ಫಲವನ್ನು ಕೊಡಲಾದರು. ಅದರಿಂದ ಸರ್ವೇಶ್ವರನು ಪ್ರೀತನಾಗಿ ಭರನ್ಯಾಸವನ್ನು ಸ್ವೀಕರಿಸಿದರೆ ಫಲಪ್ರಾಪ್ತಿಯು. ಆ ಕಾರಣದಿಂದ ಅದು ವ್ಯಾಜಮಾತ್ರವು. ಇಂತಾದ್ದನ್ನು ಉಪಾಯವಾಗಿ ಎಣಿಸಿ, ಸಿದ್ಧೋಪಾಯನೊಂದಿಗೆ ಪ್ರಧಾನವನ್ನು ಅದಕ್ಕೆ ಕೊಡುವದು ಉಚಿತವಲ್ಲವು. ಆತನೊಬ್ಬನೇ ಪ್ರಧಾನೋಪಾಯವು ಎಂಬುದು ಈ ಏಕ ಶಬ್ದದಿಂದ ತೋರುವ ಅಭಿಪ್ರಾಯವು ಎಂದು ಹೇಳಲ್ಪಟ್ಟಿತು. ಇದರಿಂದ "ಪ್ರಪತ್ತೇರ್ವ್ಯಾಜಮಾತ್ರತ್ವಮ್" ಎಂಬ ಮೂರನೆಯ ಅಭಿಪ್ರಾಯವು ಉಪದಿಷ್ಟವು. ಇಲ್ಲಿ ಪ್ರಪದನವು ವ್ಯಾಜಮಾತ್ರವೆಂದು ಹೇಳಿದುದರಿಂದ ಅದು ಬೇಡವೇಬೇಡವೆಂದು ನಿರರ್ಥಕವಾದುದೆಂದಾಗಲಿ, ಮೋಕ್ಷಪ್ರಾಪ್ತಿಗೆ ಅದು ಅವಶ್ಯಕವಿಲ್ಲವೆಂದಾಗಲಿ ಭಾವಿಸಕೂಡದು ; ಮಾಡಬೇಕೆಂದು ವಿಧಿವಾಕ್ಯವು. ಮುಂದೆ ಶರಣಂ ವ್ರಜ ಎಂದಿರುವದರಿಂದ ಮಾಡಿಯೇತೀರಬೇಕು. ಆದರೆ ಆ :ೀ

**ಇಪ್ಪಡಿ ಸಿದ್ಧೋಪಾಯತ್ತೈಪತ್ತ ಸಾಧ್ಯೋಪಾಯಂ ವ್ಯಾಜಮಾತ್ರಮಾಯ್ ಪ್ರಧಾನಮನ್ರಿಕ್ಕೇನಿರ್ಕಿರನಿಲೈಯೈಪ್ಪತ್ತ (೧) ಸಂಬಂಧಜ್ಞಾನಮಾತ್ರಮ್ (೨) ಸಿದ್ಧೋಪಾಯ ಪ್ರತಿಪತ್ತಿಮಾತ್ರಮ್ (೩) ಅನಿವಾರಣ**

---

ಫಲಕೊಡುತ್ತದೆಂದು ಭಾವಿಸತಕ್ಕದ್ದಲ್ಲವು ಫಲಪ್ರದನು ಸಿದ್ಧೋಪಾಯನಾದ ಭಗವಂತನೇ ಆದುದರಿಂದ ಪ್ರಪದನವು ವ್ಯಾಜಮಾತ್ರವು ವ್ಯಾಜವಾದರೂ ಮಾಡಿಯೇ ತೀರಬೇಕು. ಇಲ್ಲದಿದ್ದರೆ "**ಪ್ರಪನ್ನಾದನ್ಯೇಷಾಂನದಿಶತಿ ಮುಕುಂದೋ ನಿಜಪದಮ್**" ಎಂಬಲ್ಲಿ ಹೇಳಿರುವ ಹಾಗೆ ಮೋಕ್ಷವಿಲ್ಲವು ಒಬ್ಬ ಶ್ರೀಮಂತನು ಮಗನಿಗೆ ಮದುವೆಯನ್ನು ಮಾಡಿ ಪುರೋಹಿತನಿಗೆ ಶಾಲು ಜೋಡಿಯನ್ನೂ ದ್ರವ್ಯ ಮೊದಲಾದ ಮರ್ಯಾದೆಯನ್ನೂ ಮಾಡಿದನೆಂದು ಭಾವಿಸೋಣ. ಮದುವೆಯು ವ್ಯಾಜವಾಗಿ ನಡೆದಿದ್ದರಿಂದಲೇ ಅಲ್ಲವೇ ಪುರೋಹಿತನಿಗೆ ಫಲವು. ಆದರೆ ಮದುವೆಯು ಕೊಡಲಿಲ್ಲ ಕೊಟ್ಟವನು ಶ್ರೀಮಂತನು ಹೇಗೋ ಹಾಗೆ. ಹಾಗೆಯೇ ಇಲ್ಲಿ ಮೋಕ್ಷಪ್ರದನು ಮುಕುಂದನು ವ್ಯಾಜವಾದ ಪ್ರಪದನವೂ ಆವಶ್ಯಕವು.

ಈ ಪ್ರಪತ್ತಿಯು ವ್ಯಾಜರೂಪಮಾತ್ರವೆಂದು ಹೇಳುವ ಅಭಿಪ್ರಾಯವನ್ನು ಅತಿವಾದದ ಮೂಲಕ ಬೇರೆ ಅಭಿಪ್ರಾಯಗಳಾಗಿ ತಿಳಿಸುತ್ತಾರೆ ಅವುಗಳು ಸರಿಯಲ್ಲವೆಂದು ಉಪಪಾದಿಸಿ ಹೇಳುತ್ತಾರೆ ಹಾಗೆಲ್ಲಾ ಅರ್ಥ ಹೇಳಿಬಿಟ್ಟರೆ ಭರನ್ಯಾಸವನ್ನು ಅನುಷ್ಠಿಸಿದರೆ ಅನುಷ್ಠಿಸಬಹುದು, ಬೇಡವಾದರೆ ಬಿಟ್ಟುಬಿಡಬಹುದು ಎಂದಾಗುತ್ತದೆ ಆದರೆ ಮುಂದೆ ವಿಧಿರೂಪದಲ್ಲಿ "ಶರಣಂವ್ರಜ" ಎಂದು ಹೇಳಿರುವದನ್ನು ಐಚ್ಛಿಕಾನುಷ್ಠಾನವನ್ನಾಗಿ ಭಾವಿಸಬಹುದೋ? ಆದುದರಿಂದ ಅತಿವಾದವೆಂದು ಹೇಳುತ್ತಾರೆ ಹೀಗೆ ಹೇಳುವವರು ಯಾರೆಂಬುದನ್ನು ಹೇಳದೆ ಅಭಿಪ್ರಾಯಗಳು ತಪ್ಪು ಎಂದು ಇಷ್ಟು ಮಾತ್ರ ಗಂಭೀರವಾಗಿ ಹೇಳಿರುತ್ತಾರೆ. **ಇಪ್ಪಡಿ**-ಈಗ ಹಿಂದೆ ಉಪಪಾದಿಸಿದ ರೀತಿಯಲ್ಲಿ, **ಸಿದ್ಧೋಪಾಯತ್ತೈಪತ್ತ**-ಸಿದ್ಧೋಪಾಯವನ್ನು ಕುರಿತು, **ಸಾಧ್ಯೋಪಾಯಂ**-ಈ ಸಾಧ್ಯೋಪಾಯವಾದ ಭರನ್ಯಾಸವು, **ವ್ಯಾಜಮಾತ್ರಮಾಯ್**-ನೆಪಮಾತ್ರವಾಗಿ, ಸಿದ್ಧೋಪಾಯನು ಅನುಗ್ರಹಿಸುವದಕ್ಕೆ ಒಂದು ನೆಪಮಾತ್ರವಾಗಿ, **ಪ್ರಧಾನಮನ್ರಿಕ್ಕೇ**-ಸಿದ್ಧೋಪಾಯದ ಹಾಗೆ ಮುಖ್ಯವಾದುದಲ್ಲದೆ, **ನಿರ್ಕಿರನಿಲೈಯೈ**-ಇರುವ ಸ್ಥಿತಿಯನ್ನು ಕುರಿತು ಹೇಳುವ ಸಂದರ್ಭದಲ್ಲಿ (೧) **ಸಂಬಂಧಜ್ಞಾನಮಾತ್ರಂ** ತನಗೂ ಮತ್ತು ಪರಮಪುರುಷನಿಗೂ ಇರುವ ಶೇಷಶೇಷಿ ಜ್ಞಾನವುಂಟಾಗುವದಕ್ಕಾಗಿ ಮಾತ್ರವೇ ಪ್ರಪದನಾನುಷ್ಠಾನವೆಂದೂ, (೨) **ಸಿದ್ಧೋಪಾಯ ಪ್ರತಿಪತ್ತಿಮಾತ್ರಂ**-ಸಿದ್ಧೋಪಾಯನುಭಗವಂತನೇ ಎಂಬ ನಂಬಿಕೆಯುಂಟಾಗುವದಕ್ಕಾಗಿ ಮಾತ್ರವೇ ಪ್ರಪದನಾನುಷ್ಠಾನವೆಂದೂ, (೩) **ಅನಿವಾರಣಂ ಮಾತ್ರಂ**-ಆ ಭರನ್ಯಾಸಾನಂತರ

**ಮಾತ್ರಮ್ (೪) ಅನುಮತಿಮಾತ್ರಮ್ (೫) ಅಚಿದ್ವ್ಯಾವೃತ್ತಿಮಾತ್ರಮ್ (೬) ಚೈತನ್ಯಕೃತ್ಯಮ್ (೭) ಚಿತ್ತ ಸಮಾಧಾನಮ್ (೮) ಅಧಿಕಾರಿ ವಿಶೇಷಣಮ್ ಎನ್ರಿಪ್ಪುಡೈಗಳಿಲೇ ಅತಿವಾದಂ ಪಣ್ಣಿನಾರ್‌ಗಳ್. ಇಷ್ಟ್ಯ ಪಹೋ**

ಸ್ವರಕ್ಷಣೆಗಾಗಿ ಇನ್ನೇನನ್ನೂ ಮಾಡಬೇಕಾದುದಿಲ್ಲವೆಂಬ ಬೋಧಕ್ಕಾಗಿ ಪ್ರಪದನವೆಂದೂ, (೪) **ಅನುಮತಿಮಾತ್ರಂ**-ಭಗವಂತನು ರಕ್ಷಿಸುವದಕ್ಕೆ ಅನುಮತಿಯನ್ನು ಕೊಡುವದಕ್ಕಾಗಿಮಾತ್ರವೇ ಪ್ರಪದನವೆಂದೂ, (೫) **ಅಚಿದ್ವ್ಯಾವೃತ್ತಿಮಾತ್ರಮ್**-ಸ್ವಾಮಿಯು ತಾನಾಗಿಯೇ ರಕ್ಷಿಸಲು ಕಾದಿರುವನು, ಆದರೂ ತಾನು ಬರೀ ಜಡ ವಸ್ತುವಲ್ಲವು, ತಾನು ಚೇತನನಾದುದರಿಂದ ರಕ್ಷಣಾಕ್ಕಾಗಿ ಸ್ವಲ್ಪ ಪ್ರಯತ್ನ ಮಾಡಿದನೆಂದಾಗುವದಕ್ಕಾಗಿ ಮಾತ್ರವೇ ಪ್ರಪದನವು ಎಂದೂ, (೬) **ಚೈತನ್ಯ ಕೃತ್ಯಮ್**-ಚೇತನನು ಮಾಡುವ ಕೃತ್ಯವು ಎಂದು ಇಷ್ಟುಮಾತ್ರ ತೋರಿಸುವದಕ್ಕಾಗಿ ಪ್ರಪದನವು ಎಂದೂ (೭) **ಚಿತ್ತಸಮಾಧಾನಮ್**-ತನಗೆ ರಕ್ಷಣೆಯುಂಟು ಎಂಬ ಸ್ಥೈರ್ಯ ಉಂಟಾಗುವದಕ್ಕಾಗಿ ಪ್ರಪದನವು ಎಂದೂ, (೮) **ಅಧಿಕಾರಿ ವಿಶೇಷಣಮ್**-ಅದನ್ನು ಅನುಷ್ಠಿಸಿಬಿಟ್ಟರೆ ಮೋಕ್ಷಾಧಿಕಾರಿ ಎಂದು ಹೇಳಿಸಿಕೊಳ್ಳುವದಕ್ಕೆ ಮಾತ್ರವೇ ಭರನ್ಯಾಸವೆಂದೂ, **ಎನ್ರಿಪ್ಪುಡೈಗಿಳಲೇ** - ಎಂದು **ಅತಿವಾದಂ ಪಣ್ಣಿನಾರ್‌ಗಳ್** - ವಸ್ತುಸ್ಥಿತಿಯನ್ನು ತ್ಯಜಿಸಿ ಪ್ರಶಂಸಾರೂಪವಾಗಿ ಹೇಳಿದರು. ಯಥಾರ್ಥವಾದ ಅಭಿಪ್ರಾಯವಲ್ಲದೆ ಮನಸ್ಸು ಬಂದಹಾಗೆ ಪ್ರಶಂಸಿಸಿ ಹೇಳಿರುವದರಿಂದ ಅತಿವಾದವೆಂಬ ಭಾವವು ಈ ಅತಿವಾದಗಳೆಲ್ಲಾ ಸಮಂಜಸವಾದುವಲ್ಲವೆಂದು ಹೇಳಿ ಹೇಗೆ ದೋಷಯುಕ್ತವೆಂಬುದನ್ನು ಉಪಪಾದಿಸುತ್ತಾರೆ ಮುಖ್ಯವಾದ ಅಭಿಪ್ರಾಯವು ತನ್ನ ರಕ್ಷಾಭರ ಸಮರ್ಪಣವು ಇದು ವ್ಯಾಜ ಮಾತ್ರವೇ, ಏಕೆಂದರೆ ಅದು ತಾನೇ ಫಲಕಾರಿಯಾಗಲು, ಜಡವಾದ ಅನುಷ್ಠಾನ ಪ್ರಕ್ರಿಯೆಯು, ಫಲದಾತಾವಾದರೋ ಸಿದ್ಧೋಪಾಯನಾದ ಭಗವಂತನು ಇದು ವ್ಯಾಜವಾದರೂ, ಭಗವಂತನು ಅಂತಹ ಅನುಷ್ಠಾತಾವನ್ನೇ ಪರಿಗ್ರಹಿಸುತ್ತೇನೆಂಬ ವ್ರತಸಙ್ಕಲ್ಪಯುಕ್ತನಾದುದರಿಂದ ಅನುಷ್ಠಿಸಲೇ ಬೇಕು ಆದುದರಿಂದ ಈ ಅಭಿಪ್ರಾಯಕ್ಕಿಂತ ಭಿನ್ನವಾದ ಈ ಮೇಲೆ ವಿವರಿಸಿದ ಎಂಟು ಅಭಿಪ್ರಾಯಗಳೂ ಅತಿವಾದಗಳು ಎಂಬ ತಾತ್ಪರ್ಯವು ಆದರೆ ಆಚಾರ್ಯರುಗಳೆಲ್ಲಾ ಹೀಗೆ ಅಭಿಪ್ರಾಯ ಪಡುವದಕ್ಕೆ ಕಾರಣವೇನೆಂದರೆ? ಆ ಭರನ್ಯಾಸವು ಪ್ರಧಾನೋಪಾಯವಲ್ಲವೆ ವ್ಯಾಜವೆಂದು ಪ್ರಾಜ್ಞರು ಹೇಳುವದರಿಂದ, ಹೀಗೆಲ್ಲಾ ಭಿನ್ನ ಭಿನ್ನಗಳಾದ ಅಭಿಪ್ರಾಯಗಳನ್ನು ಹೇಳಿದರೆಂಬ ಭಾವವು ಹೀಗೆ ಆಪಾತತಃ ತೋರುವ ಅಭಿಪ್ರಾಯಗಳನ್ನು ವಿಮರ್ಶಿಸದೆ ಹೇಳಿಬಿಡುವದು ದೋಷಯುಕ್ತವಾದುವೆಂದು ಹಿಂದೆ ಸಾಧ್ಯೋಪಾಯ ಶೋಧನಾಧಿಕಾರದಲ್ಲಿ ಹೇಳಿದುದನ್ನೇ ಇಲ್ಲಿ ವಿವರಿಸಿ ಹೇಳುತ್ತಾರೆ. **ಇವ್ವನ್ಯಪರೋಕ್ತಿಯ್ಕೈಕೊಣ್ಡು** - ಯಥಾರ್ಥಾಭಿಪ್ರಾಯಕ್ಕೆ ವಿರುದ್ಧ

**ಕ್ತಿಯ್ಕೈಕ್ಕೊಂಡು ಇವೈತಾನೇ ಅರ್ಥಮೆನ್ರುತಿಯಿಡವೊಣ್ಣಾದು. ಇವೈಯೆಲ್ಲಾಮ್ "ಶರಣಂವ್ರಜ" ಎಙ್ಗಿರ ವಿಧಿಕ್ಕು ವಿರುದ್ಧಙ್ಗಳಾಮ್. ಅತಿಪ್ರಸಙ್ಗಾದಿ ದೋಷಙ್ಗಳೂ ಉಂಡು.**

**ಅದೆಙ್ಗನೇ ಎನ್ನಿಲ್— (೧) ಸಂಬಂಧಜ್ಞಾನಮಾತ್ರಮೆನ್ರಾಲುಮ್, (೨) ಸಿದ್ಧೋಪಾಯ ಪ್ರತಿಪತ್ತಿಮಾತ್ರಮೆನ್ರಾಲುಮ್, ಅದುವಾಕ್ಯಮಾತ್ರ**

ವಾದ ಇವುಗಳ ತಾತ್ಪರ್ಯ ಮೂಲಕನಾಗಿ, **ಇವೈತಾನೇ**- ಈ ಅತಿವಾದಗಳಾದ ಅಭಿಪ್ರಾಯಗಳೇ **ಅರ್ಥಮೆನ್ರು**-ಸರಿಯಾದ ಅಭಿಪ್ರಾಯವೆಂದು, **ಅರುದಿಯಿಡವೊಣ್ಣಾದು**-ಸಿದ್ಧಾನಿಸಿ ಹೇಳುವದು ಅನುಚಿತವು ಅದಕ್ಕೆ ಕಾರಣವನ್ನು ಹೇಳುತ್ತಾರೆ ಆಗ ಪ್ರಮಾಣ ವಿರುದ್ಧವಾದ ಅಭಿಪ್ರಾಯವಾಗುತ್ತದೆಂದು ತಿಳಿಸುತ್ತಾರೆ. **ಇವೈಯೆಲ್ಲಾಮ್** - ಈ ಅಭಿಪ್ರಾಯಗಳೆಲ್ಲಾ **"ಶರಣಂ ವ್ರಜ"** - ಈ ಚರಮಶ್ಲೋಕದಲ್ಲಿ ಮುಂದೆಯೇ ಇರುವ, ಶರಣವನ್ನು ಹೊಂದು, **ಎಙ್ಗಿರ ವಿಧಿಕ್ಕು**-ಎಂದು ಹೇಳಿರುವ **ವಿಧಿವಾಕ್ಯಕ್ಕೆ, ವಿರುದ್ಧಙ್ಗಳಾಮ್**-ವಿರುದ್ಧವಾದುದಾಗುತ್ತವೆ. ಯಾವ ಅಭಿಪ್ರಾಯಗಳೇ ಆಗಲಿ ಶಾಸ್ತ್ರಪ್ರಮಾಣಕ್ಕೆ ವಿರುದ್ಧವಾದುದಾಗಿರಕೂಡದು ವಿರುದ್ಧವಾದರೆ ತ್ಯಾಜ್ಯಗಳು ಹೀಗೆಲ್ಲಾ ಅಭಿಪ್ರಾಯಗಳಾದರೆ, ಭರನ್ಯಾಸನನ್ನು ಅನುಷ್ಠಿಸಲೇ ಬೇಕೆಂಬ ವಿಧಿಗೆ ವಿರುದ್ಧವಾಗುತ್ತದೆಂದು ಹೇಳಿದರು ಅವನ್ನೇ ಮುಂದೆ ಉಪಪಾದಿಸುತ್ತಾರೆ ಕೆಲವು ಸಂದರ್ಭಗಳಲ್ಲಿ ಹೀಗೆ ವಿಧಿವಾಕ್ಯಕ್ಕೆ ವಿರೋಧಾಭಿಪ್ರಾಯವೇನೂ, ಹಾಗೆ ವಿಧಿ ಎಂದು ಭಾವಿಸದೇ ಶರಣಾಗತಿಯನ್ನು ಅನುಷ್ಠಿಸವೇ ಇದ್ದರೂ ಮೋಕ್ಷಪ್ರಾಪ್ತಿಯುಂಟೆಂಬ ಅಶಾಸ್ತ್ರೀಯಾಭಿಪ್ರಾಯವೂ ಉಂಟಾಗುತ್ತೆಂದು ಹೇಳುತ್ತಾರೆ ಇಷ್ಟು ಮಾತ್ರವೂ ಅಲ್ಲದೆ **ಅತಿಪ್ರಸಙ್ಗಾದಿ ದೋಷಙ್ಗಳೂ ಉಂಡು**- ಸರಿಯಾಗಿ ತೋರಿಬರುವ ಅರ್ಥಗಳನ್ನು ಮೀರಿ ಇಲ್ಲದಿರುವವನ್ನು ಉಪಪಾದಿಸಿ ಹೇಳಿದ ದೋಷಗಳೂ ಉಂಟಾಗುತ್ತವೆ ಕೆಲವು ಶಾಸ್ತ್ರದ ವಿಧಿ ಪ್ರಮಾಣಕ್ಕೆ ವಿರೋಧವು; ಇನ್ನು ಕೆಲವು ಯಥಾರ್ಥವಲ್ಲದೆ ಅಭಿಪ್ರಾಯಗಳನ್ನು ಹೇಳಿದ ದೋಷಯುಕ್ತವಾದವು ಎಂಬ ಭಾವವು.

ಮುಂದೆ ಇದನ್ನೇ ಉಪಪಾದಿಸಿ ಹೇಳುತ್ತಾರೆ (೧) **ಸಂಬಂಧ ಜ್ಞಾನಮೆನ್ರಾಯ್**-ಪ್ರವದನವು ಪರಮಾತ್ಮನ ಶೇಷಿಭಾವವನ್ನೂ ಜೀವಾತ್ಮನ ಶೇಷಭಾವವನ್ನೂ ಪ್ರದರ್ಶಿಸುವ ಜ್ಞಾನವನ್ನುಂಟುಮಾಡುತ್ತದೆಂದು ಹೇಳಿದರೂ, (೨) ಮತ್ತು, **ಸಿದ್ಧೋಪಾಯ ಪ್ರತಿಪತ್ತಿಮಾತ್ರಮೆನ್ರಾಲುಮ್**-ಪರಮಾತ್ಮನೇ ಸಿದ್ಧೋಪಾಯನಾಗಿ ಪ್ರಧಾನೋಪಾಯವೆಂದು ಇಷ್ಟುಮಾತ್ರ ಜ್ಞಾನಪ್ರಾಪ್ತಿಪ್ರಪದನದ ಅಭಿಪ್ರಾಯವೆಂದು **ಹೇಳಿದರೂ, ಅದು**-ಅಂತಹ ಅಭಿಪ್ರಾಯವು ಇವೆರಡು ಸಂದರ್ಭದಲ್ಲೂ, **ವಾಕ್ಯಮಾತ್ರ ಜನ್ಯ** - ಶಾಸ್ತ್ರವಾಕ್ಯದ ಜ್ಞಾನದಿಂದ

**ಟನ್ಯವಾಂಗಿಲ್ ವಿಧಿವಿಷಯು ಮಾಗಮೊಟ್ಟಾದು. ಅದು ಅವಿಧೇಯಜ್ಞಾನ ತ್ತಾಲೇ ಮೋಕ್ಷಮೆನ್ನಾರ್ಕ್ಕು ಉಪಾಸನಾದಿ ವಿಧಿವಿರೋಧಮ್ ಭಾಷ್ಯಾದಿ**

ಉಂಟಾದುದು ಎಂದು ಹೇಳಿಬಿಟ್ಟರೆ, **ಆಗಮಾಟ್ಟಾದು**-ವಿಧಿ ವಾಕ್ಯವಾಗಿ ಅನು ಷ್ಠಿಸಲೇ ಬೇಕೆಂದಾಗುವದಿಲ್ಲವು ಈ ಎರಡು ಸಂದರ್ಭಗಳಲ್ಲೂ ಎರಡು ದೋಷ ಗಳನ್ನು ತೋರ್ಪಡಿಸಿದರು ಹೇಗೆಂದರೆ (೧) ಪ್ರಪದನವು, ಪರಮಾತ್ಮನ ಶೇಷಿತ್ವದ ಮತ್ತು ತನ್ನ ಶೇಷತ್ವದ ಜ್ಞಾನವನ್ನುಂಟುಮಾಡಿದರೆ ತನ್ಮೂಲಕ ಮೋಕ್ಷಪ್ರಾಪ್ತಿ ಯುಂಟಾದರೆ, ಓಂ ಇತ್ಯಾದಿ ವಾಕ್ಯಜನ್ಯ ಜ್ಞಾನದಿಂದ ಮೋಕ್ಷವೆಂದು ಹೇಳಿ ದಂತಾಯಿತು ಅದ್ವೈತಿಗಳು **ತತ್ತ್ವಮಸಿ** ಇತ್ಯಾದಿ ವಾಕ್ಯಜನ್ಯ ಜ್ಞಾನದಿಂದ ಮೋಕ್ಷವೆಂದು ಹೇಳುವರು, ಅವರನ್ನು ನಿರಾಕರಿಸುವದು ಏತಕ್ಕೆ ? ನೀವೂ ಅವರ ಹಾಗೆಯೇ ಆಗುತ್ತೀರಿ ಒರೀ ವಾಕ್ಯಜನ್ಯಜ್ಞಾನದಿಂದ ಮೋಕ್ಷವಿಲ್ಲವು (೨) ಉಪಾಯಾನುಷ್ಠಾನವನ್ನು ಮಾಡಿದರೇ ಮೋಕ್ಷವೆಂದು ವಿಧಿಸಿದೆ ಎಂಬ ನಮ್ಮ ಶ್ರುತಿಸಿದ್ಧಸಿದ್ಧಾಂತಕ್ಕೆ ವಿರೋಧವು **ಸಿದ್ಧೋಪಾಯ ಪ್ರತಿಪತ್ತಿಯನ್ನುಂಟು** ಮಾಡುವದೇ ಪ್ರಪದನವು ಎಂದರೂ ಈ ಎರಡು ದೋಷಗಳೂ ಉಂಟು (೧) ಪ್ರತಿಪತ್ತಿ ಜ್ಞಾನಮಾತ್ರದಿಂದಲೇ ಮೋಕ್ಷವೆಂದಾಗುವದರಿಂದ, ಅದ್ವೈತಿಗಳ ಸಿದ್ಧಾಂತದ ಹಾಗೆ ವಾಕ್ಯಜನ್ಯಜ್ಞಾನದಿಂದ ಮೋಕ್ಷವೆಂದಾಗುತ್ತದೆ (೨) ಪ್ರಪ ದನವು ಆಗ ವಿಧಿಯಾಗುವದಿಲ್ಲವು ಏಕೆಂದರೆ ಉಪಾಯಾನುಷ್ಠಾನವಿಲ್ಲವಾದುದ ರಿಂದ ಅದು ಹೇಗೆ ಎಂಬುದನ್ನು ಇನ್ನೂ ವ್ಯಕ್ತವಾಗ ಇತರೋಪಾಯವಾದ ಉಪಾಸನದ ಮೂಲಕ ವ್ಯಕ್ತಪಡಿಸಿ ಶ್ರೀ ಯತಿವರ್ಯರ ಭಾಷ್ಯಾದಿಗಳಲ್ಲಿನ ದಿವ್ಯ ಸೂಕ್ತಿಗಳಿಗೆ ವಿರುದ್ಧವೆಂದು ಹೇಳುತ್ತಾರೆ. **ಅವಿಧೇಯಜ್ಞಾನತ್ತಾಲೇ**-ಪ್ರಪದ ನವು ವಿಧಿರೂಪವಲ್ಲವು, ಹೀಗೆ ಶೇಷಿಶೇಷತ್ವಜ್ಞಾನವನ್ನಾಗಲಿ, ಸಿದ್ಧೋಪಾಯನೇ ಪ್ರಧಾನೋಪಾಯವೆಂಬ ಜ್ಞಾನವನ್ನಾಗಲಿ ಉಂಟುಮಾಡತಕ್ಕದ್ದೆಂಬ ಜ್ಞಾನದಿಂದ, **ಮೋಕ್ಷಮೆನ್ನಾರ್ಕ್ಕು** - ಮೋಕ್ಷಪ್ರಾಪ್ತಿಯಾಗುತ್ತದೆಂಬ ಅಭಿಪ್ರಾಯವುಳ್ಳವರಿಗೆ, **ಉಪಾಸನಾದಿ ವಿಧಿ ವಿರೋಧಮ್** - "**ಉಪಾಸೀತ**" ಆದಿಪದದಿಂದ **ಶರಣಂ ವ್ರಜ** ಇಂತಹ ವಿಧಿಗಳಿಗೆ ವಿರೋಧವು, **ಭಾಷ್ಯಾದಿ ಸಿದ್ಧಮ್** -ಇಂತಹ ವಿರೋಧ ರೂಪದೋಷವು **ಭಾಷ್ಯಾದಿ ಸಿದ್ಧಮ್** - ಶ್ರೀ ಭಾಷ್ಯಾದಿಗಳಲ್ಲಿ ಸುವ್ಯಕ್ತವು ಆದಿ ಶಬ್ದದಿಂದ ಗೀತಾಭಾಷ್ಯ ಶರಣಾಗತಿ ಗದ್ಯ ಮೊದಲಾದವು ಹೇಳಲ್ಪಟ್ಟವು ಶ್ರೀ ಭಾಷ್ಯದಲ್ಲಿ ಎಲ್ಲಿ ಹೇಳಲ್ಪಟ್ಟಿದೆ ಎಂದರೆ—"**ಯದುಕ್ತಂ ಅವಿದ್ಯಾನಿವೃತ್ತಿರೇವ ಮೋಕ್ಷಃ, ಸಾಚ ಬ್ರಹ್ಮವಿಜ್ಞಾನಾದೇವ ಭವತೀತಿ ತದಭ್ಯುಪಗಮ್ಯತೇ. ಅವಿದ್ಯಾನಿವೃತ್ತಯೇ ವೇದಾನ್ತವಾಕ್ಯೈರ್ವಿಧಿತ್ಸಿತಂ ಜ್ಞಾನಂಕಿಂ ರೂಪಮಿತಿ ವಿವೇಚನೀಯಂ. ಕಿಂ ವಾಕ್ಯಾದ್ವಾಕ್ಯಾರ್ಥಜ್ಞಾನಮಾತ್ರಂ; ಉತ ತನ್ಮೂಲಕ**

**ಸಿದ್ಧಮ್. ತತ್ವಜ್ಞಾನ ಮುಡೈಯುವನಕ್ಕು ಪಿನ್ಪು ಕರ್ತವ್ಯಮಾನ ಜ್ಞಾನಾ ನ್ತರಮಾಗಿಲ್, ಪ್ರವೃತ್ತಿಯಿನುಡೈಯ ವಿಧಿ ಲಕ್ಷಣಾನುಷ್ಠಾನ ವಾಕ್ಯಙ್ಗಳ್ ಶೊಲ್ಲುಗಿರ ಪಡಿಯೇ, ಇದಿನ್ ಸ್ವರೂಪಂ ಅಙ್ಗೀಕರಿಪ್ಪವೇಣುಮ್.**

---

**ಮುಪಾಸನಾತ್ಮಕಂ ಜ್ಞಾನಮ್"** ಹೀಗೆ ಮೋಕ್ಷಪ್ರಾಪ್ತಿಗೆ ಯಾವುದು ಆವಶ್ಯ ಕವು, ವಾಕ್ಯಜನ್ಯ ಜ್ಞಾನವೇ ಇಲ್ಲವೇ ಉಪಾಸನ ರೂಪಜ್ಞಾನವೇ ಎಂದು ವಿಕಲ್ಪಿಸಿ, **"ತದಿದಮುಪವರ್ಗ ಸಾಧನತಯಾ ವಿಧಿತ್ಸಿತಂ ವೇದನ ಮುಪಾ ಸನ ಮಿತ್ಯವಗಮ್ಯತೇ"** ಮೋಕ್ಷಸಾಧನವೆಂದು ವಿಧಿಸಿರುವದು ವೇದನ ಉಪಾ ಸನ ಶಬ್ದಗಳಿಂದ ತೋರಿಬರುವ ಪರಮಾತ್ಮನ ಧ್ಯಾನವು, ಹಾಗೆಯೇ ಗೀತಾ ಭಾಷ್ಯದ ತೃತೀಯಾಧ್ಯಾಯದ ಅವತಾರಿಕೆಯಲ್ಲಿ **"ಏವಂ ಮುಮುಕ್ಷುಭಿಃ ಪ್ರಾಪ್ಯತಯಾ ವೇದಾನ್ತೋದಿತ ನಿರಸ್ತ ನಿಖಿಲಾ ವಿದ್ಯಾದಿ ದೋಷಗಂಧಾಪ ವರ್ಧಿಕಾವಿಧಯಾ ಸಂಖ್ಯೇಯ ಕಲ್ಯಾಣಗುಣಗಣ ಪರಬ್ರಹ್ಮ ಪುರುಷೋತ್ತ ಮ ಪ್ರಾಪ್ತ್ಯುಪಾಯಭೂತ ವೇದನೋಪಾಸನ ಧ್ಯಾನಾದಿ ಶಬ್ದವಾಚ್ಯ"**ವೆಂದು ಹೇಳಿರುವದರಿಂದ, ವೇದಾನ್ತೋದಿತವೆಂಬುದರಿಂದ ಪರಮಪುರುಷನ ಉಪಾಸನವೇ ವೇದಾನ್ತದಲ್ಲಿ ತತ್ಪ್ರಾಪ್ತಿಗೆ ಉಪಾಯವಾಗಿ ವಿಧಿಸಿದೆ ಎಂದು ಹೇಳಲ್ಪಟ್ಟಿರುತ್ತದೆ.

ಅಗಲಿ ಪೂರ್ವಾಚಾರ್ಯರು ಈ ಸಿದ್ಧೋಪಾಯದ ಪ್ರಾಧಾನ್ಯವನ್ನು ಈ ಭರನ್ಯಾ ಸವು ಪ್ರಕಟಿಸುತ್ತದೆಂದು ಹೇಳಿರುತ್ತಾರಲ್ಲಾ, ಅದರ ಅಭಿಪ್ರಾಯವೇನು? ಎಂದು ಪ್ರಶ್ನಿಸಿದರೆ, ಅದರ ಅಭಿಪ್ರಾಯವನ್ನೂ ತಿಳಿಸುತ್ತಾರೆ ನೀವು ಹೇಳಿದ ಹಾಗೆ ಸಾಧ್ಯೋಪಾಯವು ವಿಧಿಯೇ ಅಲ್ಲವು; ಸಂಪೂರ್ಣವಾಗಿ ಅಪ್ರಧಾನವಾದುದೆಂದು ಅವರ ಅಭಿಪ್ರಾಯವಲ್ಲವೆಂದು ತಿಳಿಸುತ್ತಾರೆ **ತತ್ವಜ್ಞಾನ ಮುಡೈಯುವನಕ್ಕು**-ತಾನು ಪರಮಾತ್ಮನಿಗೆ ಶೇಷಭೂತನು ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಂಪೂರ್ಣ ವಾಗಿ ಅಸಮರ್ಥನು, ಪರಮಾತ್ಮನೊಬ್ಬನೇ ಕರುಣಾಳುವಾಗಿ ಸಮರ್ಥನು **ಇತ್ಯಾ** ದಿ ಯಥಾರ್ಥ ಜ್ಞಾನಾಧಿಕಾರಿಗೆ, **ಪಿನ್ಪು ಕರ್ತವ್ಯಮಾನ**-ಅಂತಹ ಜ್ಞಾನವುಂಟಾದ ನಂತರ ಅವಶ್ಯಕವಾಗಿ ಅನುಷ್ಠಿಸಬೇಕಾದ, **ಜ್ಞಾನಾನ್ತರಮಾಗಿಲ್**-ಬೇರೆ ಜ್ಞಾನ ರೂಪ ವಾದುದು ಈ ಸಾಧ್ಯೋಪಾಯವಾದ ಭರನ್ಯಾಸವಾದರೆ, **ಪ್ರವೃತ್ತಿಯಿನು ಡೈಯ**-ಈ ಭರನ್ಯಾಸದ, **ವಿಧಿ ಲಕ್ಷಣಾನುಷ್ಠಾನ ವಾಕ್ಯಙ್ಗಳ್**-ವಿಧಿಸುವ ವಾಕ್ಯ ಗಳು, ಅದರ ಲಕ್ಷಣಗಳನ್ನೂ ತಿಳಿಸುವ ವಾಕ್ಯಗಳು, ಅನುಷ್ಠಿಸುವ ಕ್ರಮವನ್ನೂ ತಿಳಿಸುವ ವಾಕ್ಯಗಳು, ಇವೆಲ್ಲಾ, **ಶೊಲ್ಲುಗಿರ ಪಡಿಯೇ**-ಹೇಳುವಹಾಗೆ, **ಇದಿನ್ ಸ್ವರೂಪಂ**-ಇ ಭರನ್ಯಾಸದ ಸ್ವರೂಪವನ್ನೂ, **ಅಙ್ಗೀಕರಿಪ್ಪವೇಣುಮ್**-ಸ್ವೀಕರಿಸ ತಕ್ಕದ್ದು ಭರನ್ಯಾಸವನ್ನು ಎಂತವನು ಅನುಷ್ಠಿಸುವನು ಎಂದರೆ ಮೊದಲು ಈ ಗ್ರಂಥದಲ್ಲೇ ಹೇಳಿರುವ ಪ್ರಧಾನ ಪ್ರತಿ ತಂತ್ರಾಧಿಕಾರ ಮೊದಲು ಗೊಂಡು ಪರದೇ

ವತಾ ಪಾರಮಾರ್ಥ್ಯಾಧಿಕಾರದವರೆಗೂ ಉಪದೇಶಿಸಲ್ಪಟ್ಟ ತತ್ವಜ್ಞಾನವುಳ್ಳ ಅಂತ ನನು ಏನನ್ನು ಗ್ರಹಿಸುವನು ಎಂದರೆ, ತಾನು ಪರಮಪುರುಷನಿಗೆ ದಾಸಭೂತನು, ಆತನಿಗೆ ಪರತಂತ್ರನು, ತನಗೆ ಈಗ ಸಂಸಾರದಲ್ಲಿ ಸಿಕ್ಕಿರುವ ದೀನದಶೆಯು ಪ್ರಾಪ್ತವಾಗಿದೆ ಇದರಿಂದ ತಪ್ಪಿಸಿಕೊಳ್ಳಲು ತನಗೆ ಸಾಮರ್ಥ್ಯವಿಲ್ಲವು ಆದುದ ರಿಂದ ಸರ್ವೇಶ್ವರನು ಕಾಪಾಡುವ ಹಾಗೆ ಮಾಡಲು ಏನನ್ನು ಮಾಡಬೇಕಾದ ಕರ್ತವ್ಯ ವೆಂದು ತಿಳಿಯುವನು; ಅದಕ್ಕೆ ಉಪಾಯವು ವೇದಾಂತಗಳಲ್ಲಿ ಹೇಳಿರುವದು ಭರ ನ್ಯಾಸವು ಇದೂಕೂಡ ಜ್ಞಾನ ರೂಪವಾದುದೆಂದು ಹಿಂದೆಯೇ ಉಪದೇಶಿಸಲ್ಪ ಟ್ಟಿರುತ್ತದೆ ೮೫೭-೮ನೆಯ ಪುಟಗಳನ್ನು ನೋಡಿ ಮತ್ತೂ ೧೦೪೪ನೆಯ ಪುಟ ದಲ್ಲೂ ಆತ್ಮನಿಕ್ಷೇಪ ಎಂದರೇನು ಎಂಬುದಕ್ಕೆ ಉತ್ತರವಾಗಿ "ಆಕ್ಕಾತ್ತೀಯ ರಕ್ಷಣತ್ತಿಲುಮ್" ಎಂದಾರಂಭಿಸಿ, "ಭರನ್ಯಾಸ ಪ್ರಧಾನಮಾನ ವ್ಯತ್ಯಸ್ತ ಪಾರ ತಂತ್ರ ವಿಶಿಷ್ಟ ಶೇಷತ್ವಾನು ಸಂಧಾನ ವಿಶೇಷಮ್" ಎಂದು ಮುಗಿಸಿರುವದರಿಂದ, ಅಂತಹ ಅನುಸಂಧಾನವು ಜ್ಞಾನ ರೂಪವಾದುದರಿಂದ ಇಲ್ಲಿ "ಕರ್ತವ್ಯಮಾನ ಜ್ಞಾನಾಸ್ತರ ಮಾಗಿಲ್" ಎಂಬ ಪ್ರಯೋಗವೆಂದು ಭಾವಿಸತಕ್ಕದ್ದು ಪ್ರವತ್ತಿಯ ವಿಧಿವಾಕ್ಯಗಳಿಗೆ ಈ ಚರಮ ಶ್ಲೋಕದಲ್ಲೇ **"ಶರಣಂ ವ್ರಜ"** ವೆಂದೂ **"ತಮೇವ ಶರಣಂಗಚ್ಛ"** ವೆಂದೂ ಇವೆ **"ಓಮಿತ್ಯಾತ್ಮಾನಂಯುಂಜೀತ" "ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿನಿಕ್ಷಿಪೇತ್" "ಗಚ್ಛಧ್ವಮೇನಂ ಶರಣಮ್" "ಮಾಮೇಕಮೇವ ಶರಣಂ ಮಾತ್ಮಾನಂ ಸರ್ವದೇಹಿನಾಂ! ಯಾಹಿ ಸರ್ವಾತ್ಮಭಾವೇನ ಯಾಸ್ಯಸ್ಯಕುತೋಭಯಮ್.** (ಭಾಗ ೧೧, ೧೨, ೧೫,) **ಲಕ್ಷಣವಾಕ್ಯಗಳು**-ಆನುಕೂಲ್ಯಸ್ಯಸಙ್ಕಲ್ಪ ಪ್ರಾತಿಕೂಲ್ಯಸ್ಯವರ್ಜನಂ। ರಕ್ಷಿಷ್ಯತೀ ವಿಶ್ವಾಸೋ ಗೋಪ್ತೃತ್ವವರಣಂತಥಾ। ಆತ್ಮನಿಕ್ಷೇಪ ಕಾರ್ಪಣ್ಯೇಷಡ್ವಿಧಾಶರಣಾ ಗತಿಃ" ಇತ್ಯಾದಿಗಳು **ಅನುಷ್ಠಾನ ವಾಕ್ಯಗಳು**- "ಅನನ ಸಾಧ್ಯೇಸ್ವಾಭೀಷ್ಟೇ ಮಹಾ ವಿಶ್ವಾಸಪೂರ್ವಕಂ। ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ಮತ್ತೂ "ತ್ವಮೇವೋಪಾಯ ಭೂತೋಮೇ ಭವೇತಿ ಪ್ರಾರ್ಥನಾಮತಿಃ। ಶರಣಾ ಗತಿರಿತ್ಯುಕ್ತಾ, ಸಾದೇವೇಸ್ಮಿನ್ಪ್ರಯುಜ್ಯತಾಮ್" "ಅಹಮದ್ಯೈವ ಮಯಾ ಸಮ ರ್ಪಿತಃ" ಮತ್ತೂ "ಶ್ರೀ ಮನ್ನಾರಾಯಣ ಅಶರಣ್ಯ ಶರಣ್ಯ ಅನನ್ಯ ಶರಣ ಸ್ತ್ವತ್ಪಾದಾರವಿಂದಯುಗಳಂ ಶರಣ ಮಹಂ ಪ್ರಪದ್ಯೇ" ಮತ್ತು ದ್ವಯೋಚ್ಚಾ ರಣೆಯು; "ನಿತ್ಯಕಿಂಕರೋ ಭವಾನಿ" ಇತ್ಯಾದಿಗಳು. ಹೀಗೆ ಈ ಪ್ರಮಾಣಗಳ ನ್ನೆಲ್ಲಾ ಚನ್ನಾಗಿ ಪರಿಶೀಲಿಸಿದರೆ ಪ್ರಪದನವು ಗುರು ಮುಖೇನ ವಿಧ್ಯನುಸಾರವಾಗಿ ಕೆಲವು ಪರಿಕರಗಳೊಂದಿಗೆ ಸೇರಿ ಅನುಷ್ಠಿಸತಕ್ಕ ಮೋಕ್ಷಸಾಧನವೆಂಬ ಭಾವವು ಇದನ್ನೇ ಮುಂದಿನ ವಾಕ್ಯದಿಂದ ವಿಶದೀಕರಿಸುತ್ತಾರೆ

**ಸಿದ್ಧೋಪಾಯ ಸ್ವೀಕಾರಮೆನ್ರ ಪಾಶುರತ್ತುಕ್ಕುಮ್ ಸಿದ್ಧೋಪಾಯತ್ತೈ ಅರಿನ್ದು ಅದುರ್ಕ್ಕನಕ್ಕು ಕಾತಕರಮಾಮ್ಪಡಿ ಪಣ್ಣುಗಿರ ವಿಧಿ ಪ್ರಾರ್ಥನ ಪೂರ್ವಕ ಭರನ್ಯಾಸ ರೂಪಾಧಿಕಾರಿ ಕೃತ್ಯತ್ತಿಲೇಯಿರೆ ತಾತ್ಪರ್ಯಮ್. ಅನಿವಾರಣ ಮಾತ್ರಮೆನ್ರದು ವಿಲಕ್ಕಾದ ಮಾತ್ರಮಾನಾಲ್, ರಕ್ಷಕನಾದ ಈಶ್ವರನೈ ಇವನ್ ಮುನ್ಬು ಪ್ರಬಲನಾಯ್ ವಿಲಕ್ಕಿನಾ ನಾಗಿಲ್, ಈಶ್ವರನುಡೈಯ ಈಶ್ವರತ್ವಮ್ ಸಂಕುಚಿತಮಾಮ್**

---

ಹಿಂದೆ ಭರನ್ಯಾಸವೆಂಬುದು ಸಿದ್ಧೋಪಾಯ ಪ್ರತಿಪತ್ತಿ ರೂಪವಾದುದೆಂದು ಕೆಲವರು ಅತಿವಾದ ಮಾಡುವರೆಂದು ಹೇಳಿದರು, ಹಾಗೆ ಹೇಳುವವರ ಅಭಿಪ್ರಾಯವನ್ನು ಹೇಗೆ ಭಾವಿಸಿದರೆ ಸಮಂಜಸವಾದುದೇ ಆಗುತ್ತದೆಂದು ಹೇಳುತ್ತಾರೆ - ಹೇಗೆಂದರೆ, **ಸಿದ್ಧೋಪಾಯ ಸ್ವೀಕಾರಮೆನ್ರ ಪಾಶುರತ್ತುಕ್ಕು** - ಸಿದ್ಧೋಪಾಯನು ನಮ್ಮ ರಕ್ಷಾಭರವನ್ನು ಸ್ವೀಕರಿಸುವನು ಎಂಬ ಅವರ ಹೇಳಿಕೆಗೆ ಹೇಗೆ ತಾತ್ಪರ್ಯವನ್ನಾಗಿ ಭಾವಿಸತಕ್ಕದ್ದೆಂದರೆ ತಿಳಿಸುತ್ತಾರೆ - **ಅದು ತನಕ್ಕು ಕಾರ್ಯಕರಮಾಮ್ಪಡಿ**-ಅದು ತನಗೆ ಫಲಕಾರಿಯಾಗುವ ಹಾಗೆ, **ಪಣ್ಣುಗಿರ**-ಮಾಡುವ, **ವಿಧಿ ಪ್ರಾರ್ಥನಪೂರ್ವಕ** - ವಿಧಿಯು ಮತ್ತುತವನು ಗುಣವಾಗಿ, **ಭರನ್ಯಾಸರೂಪಾಧಿಕಾರ ಕೃತ್ಯತ್ತಲೇ** - ಭರನ್ಯಾಸವೆಂದು ಹೇಳಿಕೊಳ್ಳುವ ಮೋಕ್ಷಾಧಿಕಾರಿಯು ಮಾಡುವ ಪ್ರವೃತ್ತಿಯಲ್ಲಿ, **ತಾತ್ಪರ್ಯಯಿರೇ**-ತಾತ್ಪರ್ಯವುಳ್ಳದಷ್ಟೇ ?

ಮುಂದೆ ಕೆಲವರು **ಅನಿವಾರಣ** ಮಾತ್ರವೇ ಭರನ್ಯಾಸವೆಂದು ಹೇಳಿದುದು ಅತಿವಾದವೆಂಬುದು ಹೇಗೆ ಎಂಬುದನ್ನು ತಿಳಿಸುತ್ತಾರೆ **ಅನಿವಾರಣ ಮಾತ್ರಮೆನ್ರದು**- ಸರ್ವೇಶ್ವರನು ಮೋಕ್ಷಪ್ರಾಪ್ತಿಗೆ ಈ ಅಧಿಕಾರಿಯು ಅನರ್ಹನೆಂದು ಭಾವಿಸದೇ ಇರುವದಕ್ಕಾಗಿ ಮಾತ್ರವೇ ಎಂದು ಹೇಳುವದು, ಸರಿಯಲ್ಲವೆಂದು ಮೂರು ವಿಧವಾಗಿ ವಿಕಲ್ಪಿಸಿ ದೂಷಿಸುತ್ತಾರೆ ಹೇಗೆಂದರೆ ನಿವಾರಣವೆಂದರೆ ಮೋಕ್ಷಪ್ರಾಪ್ತಿರೂಪ ರಕ್ಷಣೆಗೆ ಮೊದಲು ಅನರ್ಹನಾಗಿದ್ದನೆಂದೂ, ಈಗ ಅನಿವಾರಣವೆಂದರೆ ಈಗ ಅರ್ಹನಾದನು ಎಂದೂ ಅರ್ಥವಾಗುತ್ತದೆ ಮೊದಲು ರಕ್ಷಣೆಗೆ ಅನರ್ಹನಾಗಿದ್ದನಲ್ಲಾ ಅದು ಏಕೆ ? ಎಂದರೆ (೧) ಸರ್ವೇಶ್ವರನನ್ನು ಮರೆತು ತ್ಯಜಿಸಿ ತಾನೇ ರಕ್ಷಕನಾಗಿರಲು ಪ್ರಬಲನಾಗಿದ್ದನು ಎಂಬುದರಿಂದ ಅನರ್ಹತೆಯೋ ? (೨) ಅಥವಾ ತುಂಬಾ ಅಪರಾಧಗಳನ್ನೆಸಗುವದರ ಮೂಲಕ ಸರ್ವೇಶ್ವರನಿಂದುಂಟಾದ ನಿಗ್ರಹದ ಮೂಲಕವಾದ ಅನರ್ಹತೆಯೋ, (೩) ಅಥವಾ ತನ್ನನ್ನು ರಕ್ಷಿಸಿಕೊಳ್ಳುವ ಪ್ರವೃತ್ತಿಯುಳ್ಳವನಾದುದರಿಂದಲೇ ಎಂದು ಮೂರು ವಿಧವಾಗಿ ವಿಕಲ್ಪಿಸಿ ಕೇಳಬೇಕಾಗುತ್ತದೆ (೧) ಪ್ರಥಮ ವಿಕಲ್ಪದಲ್ಲಾದರೆ **ವಿಲಕ್ಕಾದ ಮಾತ್ರ ಮಾನಾಲ್**-ಹಿಂದೆ ಈಶ್ವರನನ್ನು ತ್ಯಜಿಸಿದ್ದನು, ಈಗ ತ್ಯಜಿಸಲಿಲ್ಲವೆಂದು ಅಭಿಪ್ರಾಯವಾದರೆ,

**ಅಪರಾಧತ್ತಾಲೇ ನಿಗ್ರಹತ್ತೈಯುಂಡಾಕ್ಕಿ ವಿಲಕ್ಕಿನಾ ನಾಗಿಲ್ ಇವನ್ ಪಣ್ಣುಗಿರ ಪ್ರಪತ್ತಿ ಪ್ರಸಾದನಮೇ ಯಾಗವೇಣುಮ್. ಸ್ವರಕ್ಷಣಾರ್ಥ**

**ರಕ್ಷಕನಾದ ಈಶ್ವರನೈ**-ಸರ್ವ ರಕ್ಷಕನಾಗಿ ಸರ್ವರಿಗೂ ನಿಯಾಮಕನಾಗಿ ಪ್ರೇರಕನಾಗಿರುವ ಭಗವಂತನನ್ನು, **ಮುನ್ನು**-ಇದಕ್ಕೆ ಹಿಂದೆ, **ಪ್ರಬಲನಾಯ್**-"ಅಥ್ಯೋಽಹರಿ ಬಲವಾನ್" ಎಂಬಲ್ಲಿ ಹೇಳಿರುವ ಹಾಗೆ, ತನ್ನನ್ನು ರಕ್ಷಿಸಿಕೊಳ್ಳಲು ತಾನೇ ಸಮರ್ಥನೆಂದು ಭಾವಿಸಿ, **ವಿಲಕ್ಕಿನಾ ನಾಗಿಲ**-ಅನಾದರಣೆಯನ್ನು ಮಾಡಿದ್ದನೆಂದಾದರೆ, **ಈಶ್ವರನುಡೈಯ**-ಸರ್ವನಿಯಾಮಕನಾದ ಸರ್ವೇಶ್ವರನ, **ಈಶ್ವರತ್ವಮು**-ನಿಯಮನತ್ವವು, **ಸಂಕುಚಿತಮಾಮು**-ಸಙ್ಕೋಚವನ್ನು ಹೊಂದಿದುದಾಗುತ್ತದೆ ಹಿಂದೆ ಈಶ್ವರನಿಯಮನತ್ವ ವಿರಲಿಲ್ಲ, ಈಗ ಉಂಟು ಎಂದಾಗುತ್ತದೆಂಬ ಭಾವವು

(೨) ಎರಡನೆಯ ವಿಕಲ್ಪವನ್ನು ಚರ್ಚಿಸುತ್ತಾರೆ ಹಿಂದೆ ನಿವಾರಣೆಗೂ ಈಗ ಅನಿವಾರಣೆಗೂ ಕಾರಣವಾಗಿ ಹೇಳಲ್ಪಟ್ಟಿದುದು ಏನೆಂದರೆ? ಹಿಂದೆ ಅಧಿಕಾರಿಯು ತುಂಬಾ ಅಪರಾಧಕ್ಕೆ ಒಳಗಾಗಿ ತನ್ಮೂಲಕ ಭಗವನ್ನಿಗ್ರಹ ಉಂಟಾಗಿದ್ದುದರಿಂದ ಭಗವಂತನಲ್ಲಿ ಅನಾದರಣೆಯು ಉಂಟಾಗಿತ್ತು; ಈಗ ಪ್ರಪತ್ತಿಮಾಡಿದುದರಿಂದ ಭಗವದನುಗ್ರಹ ಉಂಟಾಯಿತು ಎಂದರೆ ನಮ್ಮ ಅಭಿಪ್ರಾಯವೇ ಆಯಿತು ಎಂದು ಹೇಳುತ್ತಾರೆ, **ಅಪರಾಧತ್ತಾಲೇ**-ಹಿಂದೆ ಮಾಡಿದ ಅಪರಾಧ ಮೂಲಕವಾಗಿ **ನಿಗ್ರಹತ್ತೈಯುಂಡಾಕ್ಕಿ**-ಅದರಿಂದ ಭಗವನ್ನಿಗ್ರಹವು ಉಂಟಾಗಿ, ತನ್ಮೂಲಕವಾಗಿ **ವಿಲಕ್ಕಿನಾ ನಾಗಿಲ**-ಅಧಿಕಾರಿಯು ನ್ಯಾಮಿಯನ್ನು ನಿರಾಕರಿಸಿದ್ದನೆಂದರೆ, **ಇವನ ಪಣ್ಣುಗಿರ ಪ್ರಪತ್ತಿ**-ಈ ಅಧಿಕಾರಿಯು ಮಾಡಿದ ಪ್ರಪತ್ತಿ, **ಪ್ರಸಾದನಮೇ ಯಾಗವೇಣುಮು** - ಅನಿಗ್ರಹಸಙ್ಕಲ್ಪವು ಹೋಗಿ ಅನುಗ್ರಹಸಙ್ಕಲ್ಪವು ಈಗ ಉಂಟಾಯಿತೆಂದು ಹೇಳಬೇಕಾದುದರಿಂದ, **ಪ್ರಪತ್ತಿ ಪ್ರಸಾದನಮೇ ಆಗವೇಣುಮು**-ಪ್ರಪತ್ತಿಯು ಈಶ್ವರನ ಪ್ರಪನ್ನತೆಯನ್ನುಂಟುಮಾಡುವ ವ್ಯಾಪಾರವೆಂದು ನಾವು ಹೇಳುವ ಹಾಗೆ ಅನುಗ್ರಹ ಜನಕವಾದುದು ಆಗಲೇಬೇಕು.

(೩) ತನ್ನನ್ನೂ ರಕ್ಷಿಸಿಕೊಳ್ಳಲು ಅಸಮರ್ಥನಾದವನು ಸ್ವರಕಣೆಗಾಗಿ ಪ್ರಯತ್ನವುಳ್ಳವನಾಗಿ ಹಿಂದೆ ಇದ್ದುದರಿಂದ ಭಗವಂತನು ರಕ್ಷಿಸಲಿಲ್ಲ ಈಗ ಅಂತಹ ವ್ಯಾಪಾರವಿಲ್ಲದವನಾದುದರಿಂದ ರಕ್ಷಿಸಲ್ಪಡುವನು ಎಂಬ ಮೂರನೆಯ ವಿಕಲ್ಪದ ಅಭಿಪ್ರಾಯವೇನಾಯಿತು ಎಂದರೆ, ಹಿಂದೆ ಸ್ವರಕ್ಷಣ ಪ್ರಯತ್ನವಿತ್ತು ಅದರಿಂದ ಭಗವಂತನನ್ನು ನಿರಾಕರಿಸಿದುದರಿಂದ ಭಗವಂತನು ರಕ್ಷಿಸಲಿಲ್ಲವೆಂದಾಯಿತು; ಸ್ವರಕ್ಷಣ ಪ್ರಯತ್ನವನ್ನು ಈ ಪ್ರಪದನ ಮೂಲಕ ಬಿಟ್ಟನಾದುದರಿಂದ, ಅನಿವಾರಣೆಯುಂಟಾಗಿ ಭಗವಂತನು ರಕ್ಷಿಸಿ ಮೋಕ್ಷಪ್ರಾಪ್ತಿಯನ್ನು ಕೊಡುವನು

**ವ್ಯಾಪಾರತ್ತಾಲೇ ವಿಲಕ್ಕಿನಾನೆನ್ರಿಲ್ ನಿರ್ವ್ಯಾಪಾರ ಸುಷುಪ್ತಿ ಪ್ರಳಯಾದ್ಯ ವಸ್ಥೈಗಳಿಲುಮ್ ವ್ಯಾಪಿರುಕ್ಕ ಯೋಗ್ಯದಾಯಿರುಕ್ಕಿರ ಜಾಗ್ರದವಸ್ಥೈ ಯಿಲ್ ವಿಲಕ್ಕಾದೇ ಇರಕ್ಕೊಂವೋದು ಈಶ್ವರ್ರ್ ಮೋಕ್ಷ ಪ್ರದಾನಂ ಪಣ್ಣ ಪ್ರಸಜ್ಗತ್ಕುಮ್.**

---

ಎಂದೂ ಆಯಿತು ಆದುದರಿಂದ ಸ್ವರಕ್ಷಣಪ್ರವೃತ್ತಿಯಿಲ್ಲವಾದರೆ ಮೋಕ್ಷಪ್ರಾಪ್ತಿಯು ಎಂದು ಇದರಿಂದ ಹೇಳಿದಂತಾಗುವದರಿಂದ, ನಿದ್ರೆಯ ಕಾಲದಲ್ಲೂ ಪ್ರಳಯ ಕಾಲ ದಲ್ಲೂ ಚೇತನರು ಅಂತಹ ವಿಷಯದಲ್ಲೂ ನಿರ್ವ್ಯಾಪಾರ ರಾಗುವದರಿಂದ ಅಂತಹ ಅವಸ್ಥೆಯು ಹೋಗಿ ಜಾಗ್ರದವಸ್ಥೆಯು ಬಂದ ಒಡನೆಯೇ ಸರ್ವರಿಗೂ ಮೋಕ್ಷ ಪ್ರಾಪ್ತಿಯುಂಟಾಗ ಬೇಕಾದೀತು, ಇದು ಸರಿಯಲ್ಲವೆಂದು ಹೇಳುತ್ತಾರೆ. **ಸ್ವರ ಕ್ಷಣಾ ವ್ಯಾಪಾರತ್ತಾಲೇ**-ತನ್ನನ್ನು ರಕ್ಷಿಸಿಕೊಳ್ಳ ಬೇಕೆಂಬ ಪ್ರವೃತ್ತಿಧರ್ಮವನ್ನವ ಲಂಬಿಸಿದುದರಿಂದ, **ವಿಲಕ್ಕಿನಾ ನೆನ್ರಿಲ್**-ಪರಮಾತ್ಮನು ನಿರಾಕರಿಸಿದನು, **ನಿರ್ವ್ಯಾ ಪಾರನಾನ**-ಅಂತಹ ಯಾವ ವ್ಯಾಪಾರಗಳೂ ಇಲ್ಲದ, **ಸುಷುಪ್ತಿ ಪ್ರಳಯಾದ್ಯ ವಸ್ಥೈಗಳಿಲುಮ್**-ನಿದ್ರಾ ಪ್ರಳಯ ಆದಿ ಶಬ್ದದಿಂದ ಮೂರ್ಛೆಯು ಹೇಳಲ್ಪಟ್ಟಿತು, **ವ್ಯಾಪಿರುಕ್ಕ ಯೋಗ್ಯ ನಾಯಿರುಕ್ಕಿರ**-ವ್ಯಾಪಿಸಿರುವದಕ್ಕೆ ಯೋಗ್ಯನಾಗಿರುವ, **ಈಶ್ವರ್ರ್** - ಸರ್ವೇಶ್ವರನು, **ಜಾಗ್ರದವಸ್ಥೈಯಿಲ್** - ಜಾಗ್ರದವಸ್ಥೆಯನ್ನು ಈ ಅಧಿಕಾರಿಗಳು ಹೊಂದಿ ಹಿಂದಿನ ಹಾಗೆಯೇ ಇರುವಾಗ, **ವಿಲಕ್ಕಾದೆ ಇರು ಕ್ಕೊಂವೋದು**-ಸರ್ವೇಶ್ವರನನ್ನು ನಿರಾಕರಿಸದೇ ಇರುವಾಗ, **ಮೋಕ್ಷಪ್ರದಾನಂ ಪಣ್ಣ ಪ್ರಸಂಗಿಕ್ಕುಮ್**-ಮೋಕ್ಷವನ್ನು ಕೂಡ ಬೇಕಾಗಿ ಬಂದೀತು ಇದಕ್ಕೆ ದ್ರೌಪದಿಯ ವೃತ್ತಾಂತವನ್ನು ದೃಷ್ಟಾಂತವಾಗಿ ಹೇಳುವರು. ದುರುಳ ದುಶ್ಶಾಸ ನನು ಸಭೆಯಲ್ಲಿ ದ್ರೌಪದಿಯ ಸೀರೆಯನ್ನು ಸೆಳೆದಾಗ ಸಾಧ್ವಿಯು ಕೈ ಯಲ್ಲಿ ಶೀರೆಯನ್ನು ಹಿಡಿದುಕೊಂಡು, ಶ್ರೀಕೃಷ್ಣಭಗವಾನನ್ನು ಎಷ್ಟು ಆರ್ತಸ್ವರ ದಿಂದ ಕೂಗಿಕೊಂಡರು ಸ್ವರಕ್ಷಣ ವ್ಯಾಪಾರವು ಆಕೆಗೆ ಇದ್ದುದ್ದರಿಂದ ಆತನು ರಕ್ಷಿಸ ಲಿಲ್ಲವು; ಸ್ವರಕ್ಷಣ ವ್ಯಾಪಾರವನ್ನು ತ್ಯಾಗ ಮಾಡಿ ಬಿಟ್ಟು ಸೀರೆಯನ್ನು ಬಿಟ್ಟು ಎರಡು ಕೈಗಳಿಂದಲೂ ಅಂಜಲಿ ಮಾಡಿ ಪ್ರಾರ್ಥಿಸಿದಳೋ, ಆಗ ರಕ್ಷಿಸಲ್ಪಟ್ಟಳು, ಎಂದು ಹೇಳುವರು "ದ್ರೌಪದಿ ಲಜ್ಜೈಯುಂ ವಿಟ್ಟಾಳ್" ಎಂದು ಅವರುಗಳು ಹೇಳಿ, ಅದಕ್ಕೆ ವ್ಯಾಖ್ಯಾನವಾಗಿ **"ಇರಣ್ಡು ಕೈಯುಮ್ ವಿಡುಗೈ"** ಎಂದು ಹೇಳ ಲ್ಪಟ್ಟಿರುತ್ತದೆ ಈ ಇತಿಹಾಸವು ಮಹಾ ಭಾರತದಲ್ಲಿಲ್ಲವು; ದ್ರೌಪದಿಗೆ ಶ್ರೀ ವ್ಯಾಸ ಭಗವಾನರವರ ಹಿತೋಪದೇಶದಂತೆ ಆಪತ್ಕಾಲದಲ್ಲಿ ಶ್ರೀ ಕೃಷ್ಣನಲ್ಲಿ ಶರಣಾಗತಿ ಯನ್ನು ಅನುಷ್ಠಿಸು ಎಂಬುದನ್ನು ಆಕೆಯು ಸ್ಮರಿಸಿದ ಹಾಗೆ, ಶರಣಾಗತ ವತ್ಸಲನ ಶರಣವನ್ನು ಹೊಂದಿದಳು; **"ಶಂಖಚಕ್ರ ಗಧಾಪಾಣೇ ದ್ವಾರಕಾನಾಥಅಚ್ಯುತ"**

**(೪) ಅನುಮತಿ ಮಾತ್ರ ಮೆನ್ನಾಲ್, ಅದು ಉಪಾಸನಕ್ಕೊತುಲ್ಯಮ್**

ಎಂದಾರಂಭಿಸಿ "ಪ್ರಪನ್ನಂಪಾಹಿಗೋವಿಂದ ಕುರುಮಧ್ಯೇಪಸೀದತಾಮ್" ಎಂದು ಹೇಳಿ ಯಾವಾಗ ಪ್ರಾರ್ಥಿಸಿದಳೋ, ಆಗ "ವಸ್ತ್ರವು ಪ್ರಾದುರಾಸೀದನೇಕಶಃ" ಎಂದು ಹೇಳಲ್ಪಟ್ಟಿರುತ್ತದೆ ಅಥವಾ ಈ ಇತಿಹಾಸವನ್ನು ಒಂದು ವೇಳೆ ನಂಬಿ ದರೂ ಅದರಿಂದ, ಸ್ವರಕ್ಷ ರಕ್ಷಣದಿಂದ ಪ್ರಿತನಾಗಲಿಲ್ಲವು, ಅದುವರೆಗೂ ಅಕೇರು, ಅನನ್ಯಗತಿತ್ವರೂಪಾಂಗವು ಸಂಪೂರ್ಣವಾಗಿರಲಿಲ್ಲವು, ಅಂಜಲಿ ಕರಣದಿಂದ ಆ ಅಂಗವು ಪೂರ್ಣವಾಯಿತೆಂದು ಭಾವಿಸಿ ಒಹುದು "ಸರ್ವಾತ್ರಾರ್ಥವತ್ವಾತಾ" "ಪರಾತ್ತುತಚ್ಛ್ರುತೇಃ," "ಕೃತ ಪ್ರಯತ್ನ ವೇಕ್ಷಸ್ತು" ಎಂಬ ಒಹ್ಮ ಸೂತ್ರ ಗಳಿಗೆ ಅನುಗುಣವಾಗಿ ತಾನು ಮಾಡುವದನ್ನೆಲ್ಲಾ ಭಗವತ್ಪ್ರೀಣನಾರ್ಥನಾಗಿ ಮಾಡಿ, ತ್ಯಾಗವನ್ನು ಹೇಳಿ, ಅನಂತರ ಆ ಆಪನ್ನಿವಾರಣಕ್ಕಾಗಿ ಭಗವಂತನಲ್ಲಿ ಶರ ಣಾಗತಿಯನ್ನು ಅನುಷ್ಠಿಸುವದರಲ್ಲಿ ಪ್ರಪದನ ಶಾಸ್ತ್ರಕ್ಕೇನೂ ವಿರೋಧವಿಲ್ಲವು ಹಾಗೆ ಮಾಡದ ಬರೀ ಸ್ವವ್ಯಾಪಾರ ತ್ಯಾಗದಿಂದಲೇ ಸ್ವಾಮಿಯು ಪ್ರೀತನಾಗು ವನು ಎಂದರೆ ತನ್ನ ಪತ್ನಿಯನ್ನು ಋತುಕಾಲದಲ್ಲಿ ಸ್ವೀಕರಿಸದೇ ಪುತ್ರ ಪ್ರಾಪ್ತಿಗೆ ಶರಣಾಗತಿಯನ್ನು ಮಾಡಿದಂತಾಗುವುದು ಇದೂ ಅಲ್ಲದೆ ಮೊಗುವಿಗೆ ರೋಗ ಪ್ರಾಪ್ತಿಕಾಲದಲ್ಲಿ ಸರ್ವೇಶ್ವರನನ್ನು ಆಶ್ರಯಿಸಿ ಆರೋಗ್ಯಪ್ರಾಪ್ತಿಯನ್ನು ಮೊಗುವಿಗೆ ಸಂಪಾದಿಸ ಬೇಕೆಂದಿರುವವರೆಲ್ಲಾ ಮೊಗುವಿಗೆ ಏನೊಂದು ಔಷಧಗಳನ್ನು ಕುಡಿಸ ಕೊಡವೆಂದ್ಪಡುವದು ಸ್ವಾಮಿಯನ್ನಾ ಶ್ರಯಿಸಿ ದೇಹ ಯಾತ್ರೆಯನ್ನು ಸಂಪಾ ದಿಸಿ ಕೊಳ್ಳಬೇಕೆಂದಿರುವವನು, ಧನಾರ್ಜನೆಯನ್ನು ಅಡಿಗೆಯನ್ನೂ ಮಾಡಕೊಡ ದೆಂದಾಗುತ್ತದೆ ಇಂತಹ ದೋಷಗಳು ಈ ವಿಕಲ್ಪದಿಂದುಂಟಾಗುವುದು ಎಂದು ವ್ಯಕ್ತ ಪಡಿಸಿದರು "ತಿರುಕ್ಕಣ್ಣಮುಚ್ಚೈಯೊಂಡ್ರಾ ಸ್ವವ್ಯಾಪಾರತ್ತೈವಿಟ್ಟಾಲ್" ಎಂದರೆ ಸ್ವರಕ್ಷಣ ಹೇತುವಾದ ಸ್ವವ್ಯಾಪಾರವನ್ನು ಬಿಟ್ಟರೆ, ಎಂದೂ ಹೇಳಲ್ಪಟ್ಟಿರು ತ್ತದೆ ಒಬ್ಬ ಸೇವಕನ ನಾಯಿಯನ್ನು ಇನ್ನೊಬ್ಬ ಸೇವಕನು ಹೊಡಿಯುತ್ತಾನೆ ಆಗ ಮೊದಲಿನವನು ಅದನ್ನು ನೋಡದೆ ಹೊಡೆದವನನ್ನು ಕೊಂದು ತಾನೂ ಆತ್ಮ ಹತ್ಯವನ್ನೂ ಮಾಡಬೇಕೆಂದಿರುವುದನ್ನೂ ಕಂಡು,

ಮುಂದೆ ಅನುಮತಿ ಮಾತ್ರವೇ ಪ್ರಪತ್ತಿಯು ಎಂಬ ಅಭಿಪ್ರಾಯವನ್ನು ನಿರಾ ಕರಿಸುತ್ತಾರೆ **(೪) ಅನುಮತಿ ಮಾತ್ರ ಮೆನ್ನಾಲ್** ಭಗವಂತನು ಪ್ರಪನ್ನ ನಾಗಲು ಅನುಮತಿಯನ್ನು ಕೊಡುವಷ್ಟು ಮಾತ್ರವೇ ಪ್ರಪತ್ತಿಯು ಎಂದರೆ, **ಅದು**- ಅನುಮತಿ ಕೊಟ್ಟು, ಪ್ರಪನ್ನನಾಗಿರಲು ಅರ್ಹವೆಂಬ ಭಾವವು **ಉಪಾಸನಕ್ಕೊ ತುಲ್ಯಮ್** - ಇನ್ನೊಂದು ಉಪಾ [illegible] ಉಪಾಸನಕ್ಕೊ [illegible]ವು ಆಗ ಪ್ರಪತ್ತಿಯು [illegible] ಎಂದು

**(೫) ಅಚಿದ್ವ್ಯಾವೃತ್ತಿ ಮಾತ್ರತ್ತೈ ಪ್ರತಿಕೂಲ ದಶೈಯಿಲುಮ್ ಉಂಡಾಗ್ಗೈ ಯಾಲೇ ಇವ್ವಳವೇ ರಕ್ಷಣೀಯತ್ತುಕ್ಕು ತ್ತೈಕ್ಕುರುಪ್ಪಾಕಾದು. (೬)**

ಭೂಷಣವು ಶ್ರೀ ವಚನ ಭೂಷಣದಲ್ಲಿ ಹೇಳಿರುವದು "ರಕ್ಷಣತ್ತುಕ್ಕಪೇಕ್ಷಿತಮ್ ರಕ್ಷಕತ್ವಾನು ಮತಿಯೇ" ಎಂಬುದು; ಇದಕ್ಕೆ ಶ್ರೀ ಪಿಳ್ಳೈಲೋಕಾಚಾರ್ಯರವರು "ನೀ ಎನಕ್ಕು ರಕ್ಷಕನ್ನಾಮ್ ಎನ್ನಾಲ್, ಅಲ್ಲೇನ್ ಎನ್ನಾದೇ ತನ್ನುಡೈಯ ರಕ್ಷತ್ವತ್ತೈ ಇಶೈಯುಮಪ್ಪಳವೇ ಎನ್ಗೈ", "ರಕ್ಷ್ಯಾಪೇಕ್ಷಾಂ ಪ್ರತೀಕ್ಷತೆ" ಎನ್ಗಿರ ವಿಡತ್ತಿಲ್ ಶೊಲ್ಲುಗಿರ ಅಪೇಕ್ಷೈ ರಕ್ಷ್ಯತ್ವಾನುಮತಿ ದ್ಯೋತಕ ಮಿತ್ತನ್ನೈ ಎನ್ರುಕರುತ್ತು" ಎಂದು ವ್ಯಾಖ್ಯಾನದಲ್ಲಿ ಹೇಳಿರುತ್ತಾರೆ

(೫) ಅಚಿದ್ವ್ಯಾವೃತ್ತಿ ಮಾತ್ರವೇ ಪ್ರಪತ್ತಿ ಎಂಬ ಅಭಿಪ್ರಾಯವನ್ನು ಖಂಡಿಸುತ್ತಾರೆ **ಅಚಿದ್ವ್ಯಾವೃತ್ತಿ ಮಾತ್ರಮ್**-ತಾನು ಅಚಿತ್ತಿನ ಹಾಗೆ ಅಲ್ಲವು ಎಂದು ತೋರಿಸಿಕೊಳ್ಳುವದಕ್ಕಾಗಿ ಪ್ರಪತ್ತಿಯ ಅನುಷ್ಠಾನವು, ಇಷ್ಟು ಮಾತ್ರವೇ ಅದು ಎಂದರೆ, **ಪ್ರತಿಕೂಲ ದಶೈಯಿಲುಮ್**-ಈ ಅಧಿಕಾರಿಯು ಭಗವಂತನಿಗೆ ಪ್ರತಿಕೂಲನಾಗಿರುವ ಅವಸ್ಥೆಯಲ್ಲೂ, **ಉಂಡಾಗ್ಗೈಯಾಲೇ**-ಅಚಿದ್ವ್ಯಾವೃತ್ತಿಯು ಉಂಟಾಗುವದರಿಂದ, **ಇವ್ವಳವೇ** - ಇಷ್ಟು ಮಾತ್ರವೇ, **ರಕ್ಷಣೀಯತ್ತುಕ್ಕು**-ಭಗವಂತನು ಮೋಕ್ಷವನ್ನು ಕೊಟ್ಟು ಕಾಪಾಡಲು ಯೋಗ್ಯನಾಗುವದಕ್ಕೆ, **ಉರುಪ್ಪಾಗಾದು**-ಕಾರಣವಾಗಲಾರದು, ಪ್ರತಿಕೂಲನಾಗಿರುವದೂ ಸಹ ಅಚಿದ್ವ್ಯಾವೃತ್ತಿಯನ್ನು ತೋರಿಸುವ ವ್ಯಾಪಾರವಾಗುತ್ತದೆ ಅಂತಹ ಪ್ರತಿಕೂಲರೂ ಕೂಡ ಮೋಕ್ಷ ಹೊಂದ ಬೇಕಾಗುತ್ತದೆ ಆಗ ಪಂಚಪರಿಕರಗಳೂ ಪ್ರಪತ್ತಿಗೆ ಇರಬೇಕೆಂಬ ನಿಯಮವಿಲ್ಲದೇ ಹೋಗುತ್ತದೆ ಇಲ್ಲಿ ಪ್ರತಿಕೂಲ್ಯವರ್ಜನ ಒಂದನ್ನು ಉಪಪಾದಿಸಿ ಹೇಳಿದುದು ಮಿಕ್ಕ ಪರಿಕರಗಳ ಅಭಾವದಲ್ಲೂ ಅಚಿದ್ವೈಲಕ್ಷಣ್ಯವು ಇರಬಹುದು ಗೋಪ್ತೃತ್ವವರಣವು, ಮಹಾ ವಿಶ್ವಾಸ, ಕಾರ್ಪಣ್ಯವೂ ಇಲ್ಲದೆ ಅಚಿದ್ವ್ಯಾವೃತ್ತಿ ಇರಬಹುದು ಇಂತಹ ಎಲ್ಲಾ ಅಧಿಕಾರಿಗಳಿಗೂ ಹಾಗಾದರೇ ಮೋಕ್ಷವೆ ಎಂಬ ಭಾವವು "ಈ ಅಚಿದ್ವ್ಯಾವೃತ್ತಿ ವೇಷತ್ತೈ ಸಾಧನಮಾಕ್ಕವೊಣ್ಣಾದು" ಎಂದು ಶ್ರೀ ವಚನ ಭೂಷಣ ವಾಕ್ಯವಿರುತ್ತದೆ ಅವರ ಅಭಿಪ್ರಾಯವೇನಿರಬಹುದು ಎಂದರೆ ಸಿದ್ಧೋಪಾಯನೇ ಪ್ರಧಾನವು, ಈ ಪ್ರಪತ್ತಿಯು ಅಚಿದ್ವ್ಯಾವೃತ್ತಿ ವೇಷವನ್ನು ಹೊಂದಿ ರಕ್ಷಣಕ್ಕೆ ಸಾಧನವಾಗಲಾರದೆಂಬುದು ಹಾಗಾದರೆ ಈ ಅಚಿದ್ವ್ಯಾವೃತ್ತಿ ವೇಷಕ್ಕೆ ಏನು ಪ್ರಯೋಜನವೆಂದರೆ ಹೇಳುತ್ತಾರೇನೆಂದರೆ "ಅಚಿದ್ವ್ಯಾವೃತ್ತಿಕ್ಕು ಪ್ರಯೋಜನಮ್, ಉಪಾಯತ್ತಿಲೆ ಉಪಕಾರಸ್ಮೃತಿಯುಮ್, ಉಪೇಯತ್ತಿಲ್ ಉಗಪ್ಪುಮ್" (೬೫) ಎಂದರೆ ಭಗವಂತನಲ್ಲಿ ಉಪಕಾರ ಸ್ಮರಣೆಯು, ಮತ್ತೂ ತಾನು ಮಾಡುವ ಕೈಂಕರ್ಯಗಳಿಂದ ಭಗವತ್ಪ್ರೀಣವ ಉಂಡಾ

**ಚೈತನ್ಯ ಕೃತ್ಯಮಾತ್ರ ಮೆನ್ನಾಲ್, ಉಪಾಸನಾದಿಗಳುಮ್, ಮತ್ತು ಮುಳ್ಳ ಚೇತನ ವೃತ್ತಿಗಳು ಮೆಲ್ಲಾಮ್ ಚೈತನ್ಯ ಕೃತ್ಯಮಾಗೈಯಾಲೇ ಇದುಕ್ಕೊರು ವಾಶಿ ಶೊಲ್ಲಿತ್ತಾಗಾದು. ಚೇತನನುಕ್ಕೊ ತಾನೇ ವರು ಮದೆನ್ರು ವಿವಕ್ಷಿಕ್ಕಿಲ್, ಉಪದೇಶಾದಿಗಳ್ ವೇಣ್ಡಾದೊಳಿಯುಮ್. (೭) ಫಲಾನುಪಯುಕ್ತ ಚಿತ್ತ**

---

ಗುವದರ ಮೂಲಕ ತನಗೆ ಪ್ರಾಪ್ತವಾಗುವ ಸಂತೋಷವೆಂದು ವ್ಯಾಖ್ಯಾನಮಾಡಿರುತ್ತಾರೆ ಇದು ಎರಡು ವಿಧ ಉಪಾಯಗಳಲ್ಲೂ ಉಂಟೆಂಬುದು ಒಂದು ಆಕ್ಷೇಪವು ಇನ್ನೊಂದುಆಕ್ಷೇಪಣೆಯು ಪ್ರಥಮದಲ್ಲೇ ಈ ಎಲ್ಲಾ ಅಭಿಪ್ರಾಯಗಳಿಗೂಅನ್ವಯಿಸುವ ಹಾಗೆ ಹೇಳಿದುದು ಪ್ರವೃತ್ತಿಯು ವಿಧಿ ಎಂದು ಹೇಳಿರುವದಕ್ಕೆ ವಿರೋಧವಾಗುತ್ತದೆ

(೬) **ಚೈತನ್ಯ ಕೃತ್ಯ ಮಾತ್ರ ಮೆನ್ರಾಲ್**-ಚೈತನ್ಯ ಕೃತ್ಯ ಮಾತ್ರವೇ ಪ್ರಪದನವು ಎಂದು ಹೇಳಿದರ ಪ್ರಾಪ್ತವಾಗುವ ದೋಷಗಳನ್ನು ತೋರ್ಪಡಿಸುತ್ತಾರೆ ಆ ಸಂದರ್ಭದಲ್ಲಿ ಎರಡು ವಿಧವಾಗಿ ವಿಕಲ್ಪಿಸುತ್ತಾರೆ ೧ ಬರೀ ಚೈತನ್ಯ ಕೃತ್ಯವೇ ? ಅಥವಾ ೨. ತಾನಾಗಿಯೇ ಪ್ರಾಪ್ತರಾಗುವ ಚೈತನ್ಯ ಕೃತ್ಯವೇ ಎಂಬುದಾಗಿ; ೧ನೆಯ ವಿಕಲ್ಪದ ವಿಷಯದಲ್ಲಿ ದೂಷಣವು ಹೇಗೆ ? ಎಂದರೆ, **ಉಪಾಸನಾದಿಗಳುಮ್**-ಇನ್ನೊಂದು ಉಪಾಯವಾದ ಉಪಾಸನವೂ, ಅದಕ್ಕೆ ಅಂಗಗಳಾದ ಕರ್ಮಯೋಗ ಜ್ಞಾನಯೋಗಗಳೂ ನಿತ್ಯನೈಮಿತ್ತಿಕಾನುಷ್ಠಾನಗಳೂ, **ಮತ್ತು ಮುಳ್ಳ ಚೇತನ ವೃತ್ತಿಗಳೆಲ್ಲಾಮ್**-ನಡೆಯುವರು, ಆಹಾರ ತೆಗೆದು ಕೊಳ್ಳುವದು, ದ್ರವ್ಯ ಸಂಪಾದನೇ ಮೊದಲಾದ ಸಮಸ್ತ ಚೇತನ ವ್ಯಾಪಾರಗಳೆಲ್ಲಾ, **ಚೈತನ್ಯ ಕೃತ್ಯ**-ವಾದುದರಿಂದ, **ಇದಕ್ಕು**-ಈ ಪ್ರಪದನಕ್ಕೆ, **ಒರುವಾಶಿ**-ಯಾವ ಒಂದು ವೈಲಕ್ಷಣ್ಯವನ್ನೂ, ವ್ಯತ್ಯಾಸವನ್ನು, **ಶೊಲ್ಲಿತ್ತಾಗಾದು**-ಹೇಳಿದಂತಾಗುವುದಿಲ್ಲವು ಆ ವ್ಯಾಪಾರಗಳಿಗೆಲ್ಲಾ ಏಕೆ ಮೋಕ್ಷವಿಲ್ಲವು, ಪ್ರಪದನವಾದ ಚೈತನ್ಯ ವ್ಯಾಪಾರಕ್ಕೆ ಮಾತ್ರ ಏಕೆ ಮೋಕ್ಷವೆಂದರೆ ನಿರುತ್ತರವಾಗುತ್ತದೆಂಬ ಭಾವವು, ಬಹು ಗಂಭೀರವಾಗಿ ಈ ವಿಕಲ್ಪಕ್ಕೆ ಉತ್ತರವನ್ನು ಕೊಟ್ಟಿರುತ್ತಾರೆ ಸ್ವಾಮಿ ನಿಗಮಾನ್ತ ದೇಶಿಕರವರಿಗೆ ಇತರರ ತೇಜೋವಧೆಯಲ್ಲಿ ಯಾಗಲಿ ನಿಂದೆಯಲ್ಲಿ ಯಾಗಲಿ ಇಷ್ಟ ವಿಲ್ಲವು ಆದರೆ ಶಾಸ್ತ್ರ ವಿರುದ್ಧಾಭಿಪ್ರಾಯವನ್ನು ಮಾತ್ರ ಸರಿಯಲ್ಲವೆಂದು ಹೇಳದೆ ಇರುವದಿಲ್ಲವು. ೨ ಮುಂದೆ ಎರಡನೆಯ ವಿಕಲ್ಪದಿಂದುಂಟಾಗುವ ಅಸಾಮಂಜಸ್ಯವನ್ನು ತಿಳಿಸುತ್ತಾರೆ **ಚೇತನನಕ್ಕೊ ತಾನೇ ವರುಮುದೆನ್ರು ವಿವಕ್ಷಿಕ್ಕಿಲ್**-ಮೊದಲಿಲ್ಲದೆ ಆಮೇಲೆ ತಾನಾಗಿಯೇ ಬರುವ ಜ್ಞಾನವೆಂದು ಹೇಳಿದರೆ, **ಉಪದೇಶಾದಿಗಳ್** - ಶಾಸ್ತ್ರಗಳಿಂದಲಾಗಲಿ, ಗುರುಗಳಿಂದಾಗಲಿ, ಹಿರಿಯರಿಂದಾಗಲಿ, ಉಪದೇಶವೇ ಮೊದಲಾದವು **ವೇಣ್ಡಾದೊಳಿಯುಮ್** - ಬೇಡವೆಂದಾಗುವದು ಅಥವಾ ಉಂಟಾಗುವ ಜ್ಞಾನವು ಪ್ರತಿಕೂಲರೂಪವಾದುದೂ ಆಗಬಹುದು.

**ಸಮಾಧಾನಮಾತ್ರಮೇಯೆನ್ನಿಲ್, ತನ್ತಾನ್ ರುಚ್ಯನುರೂಪಮಾಗ ಪ್ರತಿ ಪುರುಷಮ್ ವೇರ್‌ಪಡುಮ್.** (೮) **"ವ್ರಜ"** ಎನ್ರು ವಿಧೇಯಮಾಯ್ ಫಲ

---

ಆಗಲೂ ಮೋಕ್ಷಪ್ರಾಪ್ತಿಯನ್ನು ಹೇಳಬೇಕಾದೀತು ಇಲ್ಲಿ ಆದಿಶಬ್ದದಿಂದ ಆಚಾರ್ಯ ಪ್ರಾಪ್ತಿ, ಅದರಿಂದುಂಟಾಗುವ ಸಂಸ್ಕಾರ ಮೊದಲಾದವುಗಳು ಹೇಳಲ್ಪಟ್ಟವು

(೭) **ಫಲಾನುಪಯುಕ್ತ ಚಿತ್ತಸಮಾಧಾನಮಾತ್ರಮೇಯೆನ್ನಿಲ್** — ಮೋಕ್ಷಪ್ರಾಪ್ತಿ ರೂಪಫಲಕ್ಕೆ ಬೇಕಾಗದಿರುವಂತಾದ್ದಾಗಿ, ಚಿತ್ತ ಸಮಾಧಾನವನ್ನು ಮಾತ್ರ ಉಂಟುಮಾಡುತ್ತದೆ ಈ ಪ್ರಪತ್ತಿಯು ; ಇಷ್ಟೇ ಇದರ ಪ್ರಯೋಜನವು ಎಂದರೆ, **ತನ್ತಾಮ್ ರುಚ್ಯನು ರೂಪಮಾಗ** – ಅವರವರುಗಳ ಇಷ್ಟಾನುಸಾರ ವಾಗಿ, **ಪ್ರತಿಪುರುಷಮ್ ವೇರ್‌ಪಡುಮ್** – ಪುರುಷ ಪುರುಷರಿಗೂ ಬೇರೆ ಬೇರೆ ಯಾಗಿ ಏರ್ಪಡಬೇಕಾಗುತ್ತದೆ ಎಂದರೆ ಪುರುಷ ಪುರುಷರಿಗೂ ಚಿತ್ತ ಸಮಾಧಾನವು ಬೇರೆ ಬೇರೆ ವಿಧವಾಗಿ ಉಂಟಾಗಬಹುದು ಅದಕ್ಕೆ ಪ್ರತಿಯೊಬ್ಬರಿಗೂ ಪ್ರಪದ ನವೇ ಏತಕ್ಕೆ ? ಎಂಬ ದೂಷಣವುಂಟಾದೀತು ಎಂಬ ಭಾವವು ಇಲ್ಲಿ ಸಮಾ ಧಾನ ಮಾತ್ರವೆಂದು ಹೇಳಿದರೆ ಇದನ್ನು ಎರಡು ವಿಧವಾಗಿ ವಿಕಲ್ಪಿಸಬಹುದು ; (೧) ಫಲಕ್ಕೆ ಉಪಯುಕ್ತವಾದ ಚಿತ್ತ ಸಮಾಧಾನಮಾತ್ರವೇ (೨) ಫಲಕ್ಕೆ ಅನುಪ ಯುಕ್ತ ಚಿತ್ತ ಸಮಾಧಾನಮಾತ್ರವೇ? ಎಂಬದಾಗಿ ಮೊದಲನೆಯ ವಿಕಲ್ಪವನ್ನು ಒಪ್ಪಿದರೆ, ಅದು ನಾವು ಹೇಳುವಂತೆ ಆಗುತ್ತದೆ ಶರಣಾಗತಿಯನ್ನು ಮಾಡಿದ ಪ್ರಪನ್ನನು ಚಿತ್ತ ಸಮಾಧಾನವನ್ನು ಹೊಂದುವನು ಏಕೆಂದರೆ ಆತನು ನಿರ್ಭಯ ನಾಗಿ ಕೃತಕೃತ್ಯನಾಗುವದರ ಮೂಲಕ ಚಿತ್ತ ಸಮಾಧಾನ ಉಂಟು ಇದು ತಮ್ಮ ಅಭಿಪ್ರಾಯಕ್ಕೆ ಸರಿಹೋಗುವದರಿಂದ ಆ ವಿಕಲ್ಪವನ್ನು ತ್ಯಜಿಸಿ, ಎರಡನೆಯ ವಿಕಲ್ಪದ ಪ್ರಕಾರ ಫಲಕ್ಕೆ ಅನುಪಯುಕ್ತವಾದುದಾಗಿ ಚಿತ್ತ ಸಮಾಧಾನವನ್ನು ಮಾತ್ರ ಉಂಟುಮಾಡುತ್ತದೆ ಎಂದರೆ ಆಗ ಪ್ರಾಪ್ತವಾಗುವ ಅಸಾಮಂಜಸ್ಯವನ್ನು ವ್ಯಕ್ತಪಡಿಸಿರುತ್ತಾರೆಂದು ಭಾವಿಸತಕ್ಕದ್ದು ಅಸಾಮಂಜಸ್ಯವು ಇಷ್ಟೇ – ಪ್ರತಿ ಯೊಬ್ಬರಿಗೂ ಚಿತ್ತ ಸಮಾಧಾನವು ಬೇರೇ ಬೇರೆ ವಿಧವಾಗಿ ಉಂಟಾಗತಕ್ಕದ್ದಾ ಗಿರುವಾಗ ಈ ಪ್ರಪತ್ತಿಯೇ ಎಲ್ಲರಿಗೂ ಚಿತ್ತ ಸಮಾಧಾನವುಂಟುಮಾಡುತ್ತದೆಂಬ ಹೇಳಿಕೆಯು ಸರಿಯಲ್ಲವಲ್ಲಾ ಎಂದು ಆಕ್ಷೇಪಿಸುತ್ತಾರೆ

(೮) ಮುಂದೆ ಪ್ರಪದನವು ಅಧಿಕಾರಿ ವಿಶೇಷಣವೆಂಬ ಅಭಿಪ್ರಾಯವು ಸರಿ ಯಲ್ಲವೆಂದು ತಿಳಿಸುತ್ತಾರೆ **ಅಧಿಕಾರಿ ವಿಶೇಷಣ**ವೆಂದರೆ ಈ ಪ್ರಪದನದಿಂದ ತಾನು ಮೋಕ್ಷವನ್ನು ಹೊಂದಲು ಅಧಿಕಾರಿಯು ಎಂದು ತೋರ್ಪಡಿಸಿಕೊಳ್ಳುವನು ಎಂಬರ್ಥವು ಆದುದರಿಂದ ಪ್ರಪತ್ತಿಯು ಅಧಿಕಾರಿ ವಿಶೇಷಣವು ಎಂದರೆ ಅಧಿ ಕಾರಿಯು ಮೋಕ್ಷಾಧಿಕಾರಿ ಎಂದು ವಿಶೇಷಿಸಿ ಹೇಳುವದಕ್ಕೆ ಮಾತ್ರವೇ ಎಂದಾ

**ತತ್ಕಾಮನಾದಿಗಳನ್ರಿಕ್ಕೇ ಇರುಕ್ಕಿರವಿತ್ತೈ ಅಧಿಕಾರವಿಶೇಷಣಮೆನ್ರ ವೊಣ್ಣಾದು. ಕರ್ತವ್ಯಮಾಗವಿಧಿಕ್ಕಿರ ಪ್ರಪತ್ತಿತನಕ್ಕೆ ಇಪ್ಪಡಿ ಏತೇನುಮೊರುಕಣ್ಣಳಿವು ಪಣ್ಣಿಲ್ ಉಪಾಸನಾದಿಗಳ್ಕೈಯುಂ ಇಪ್ಪಡಿ ಕಣ್ಣಳಿಕ್ಕಲಾಂ.**

ಯಿತು ಇದು ತನ್ನಿಷ್ಟಾನುಗುಣವಾಗಿ ಇರುವ ಒಂದು ಕ್ರಿಯೆಯು ಎಂದು ಏರ್ಪಟ್ಟಿತು ಸ್ವಾಮಿಯಾದವನು ಅವರವರ ಯೋಗ್ಯತಾನುಸಾರವಾಗಿ ಮೋಕ್ಷವನ್ನು ಕೊಡಬಹುದು, ತಾನು ಮೋಕ್ಷಾಧಿಕಾರಿ ಎಂದು ಹೇಳಿಕೊಳ್ಳುವವನಿಗೂ ಕೊಡಬಹುದು, ಇತರರಿಗೂ ಸ್ವಾಮಿಗೆ ಇಷ್ಟವಿದ್ದರೆ ಕೊಡಬಹುದು ಎಂದು ಆಯಿತು ಆಗ ಪ್ರಪತ್ತಿಯು ಮೋಕ್ಷಪ್ರಾಪ್ತಿಗೆ ವಿಧಿಯೆಂದಾಗಲಿಲ್ಲವು ಆದರೆ **"ಶರಣಂ ವ್ರಜ" "ಓಮಿತ್ಯಾತ್ಮಾನಂಯುಂಜೀತ"** ಇತ್ಯಾದಿ ವಿಧಿವಾಕ್ಯಗಳಿಗೆ ಈ ಅಭಿಪ್ರಾಯವು ವಿರೋಧವಾಗುತ್ತದೆಂದು ತಿಳಿಸುತ್ತಾರೆ **"ವ್ರಜ" ಎನ್ರು ವಿಧೇಯಮಾಯ್**-ಮುಂದೆ **ಶರಣಂ ವ್ರಜ** ಶರಣವನ್ನು ಹೊಂದು ಎಂದು ಪ್ರಪತ್ತಿಯು ವಿಧಿಸಲ್ಪಟ್ಟಿರುವದರಿಂದಲೂ, **ಫಲತತ್ಕಾಮನಾದಿಗಳನ್ರಿಕ್ಕೇ**-ಫಲವೇನು ಮತ್ತೂ ಆ ಫಲದ ಕಾಮನೆಯು ಅಲ್ಲದೆ, **ಇರುಕ್ಕಿರವಿತ್ತೈ** - ಇರುವ ಈ ಪ್ರಪತ್ತಿಯನ್ನು, **ಅಧಿಕಾರವಿಶೇಷಣಮೆನ್ರ ವೊಣ್ಣಾದು** - ಮೋಕ್ಷಾಧಿಕಾರಿಯೆ ಫಲವನ್ನಾಗಲಿ ತತ್ಕಾಮನೆಯನ್ನಾಗಲಿ ಅಧಿಕಾರಿಯ ವಿಶೇಷಣವೆಂದು ಹೇಳಬಹುದು **ಶರಣಂವ್ರಜ** ಎಂದು ವಿಧಿ ಇರುವಾಗ ಅಧಿಕಾರವಿಶೇಷಣವಾಗದು ಶ್ರೀ ಯಾಮುನಮುನಿಗಳು **ಪ್ರಪತ್ತಿಯು** ಅಧಿಕಾರವಿಶೇಷಣವಾಗುವದಿಲ್ಲವೆಂದು **"ಫಲಾದಿಭ್ಯೋ ವಿಭಿನ್ನತ್ವಾತ್ ಪ್ರಪತ್ತೇರ್ವಿಧ್ಯನನ್ವಯಾತ್। ವಿಧೇಯಾಸ್ತ್ರರಹಾನೇಕ್ಷ ನಾಧಿಕಾರ ವಿಶೇಷಣಮ್"** ಎಂದು ಹೇಳಿರುತ್ತಾರೆ ವಿಧಿಯು ಎಂದಿಗೂ ಅಧಿಕಾರಿ ವಿಶೇಷಣವಾಗಲಾರದು ಎಂಬ ಅಭಿಪ್ರಾಯವು

ಮುಂದೆ ಈ ಮೇಲೆ ಹೇಳಿರುವ ಎಂಟು ವಿಧ ಅಭಿಪ್ರಾಯಗಳಿಗೂ ಸಾಧಾರಣ ದೂಷಣೆಯನ್ನು **ಕರ್ತವ್ಯಮಾಗವಿಧಿಕ್ಕಿರ** ಎಂಬ ಎರಡುವಾಕ್ಯಗಳ ಮೂಲಕವಾಗಿ, ಹೇಳುತ್ತಾರೆ **ಕರ್ತವ್ಯಮಾಗ**-ಮಾಡಲೇಬೇಕೆಂದು, **ವಿಧಿಕ್ಕಿರ**-**"ಶರಣಂವ್ರಜ"** ಎಂದು ವಿಧಿಸಿರುವ, **ಪ್ರಪತ್ತಿತನಕ್ಕೇ**-ಪ್ರಪತ್ತಿಗೇನೇ, **ಇಪ್ಪಡಿ**-ಈ ಮೇಲೆ ಉಪಪಾದಿಸಿಹೇಳಿದ ರೀತಿಯಲ್ಲಿ, **ಏತೇನುಮೊರು**-ಮೇಲೆ ಹೇಳಿದಲ ವಿಧದಲ್ಲಿ ಯಾವುದಾದರೂ ಒಂದು, **ಕಣ್ಣಳಿವುಪಣ್ಣಿಳ್** -ಅತಿವಾದರೂಪವಾದ ನೆಪಗಳನ್ನು ಏರ್ಪಡಿಸಿದರೆ, ಉಪಚ್ಛಂದನಕ್ಕಾಗಿ ಪ್ರಪತ್ತಿಯು ಎಂದು ಹೇಳಿದರೆ, **ಉಪಾಸನಾದಿಗಳ್ಕೈಯುಂ**-ಉಪಾಸನ ಮೊದಲಾದವುಗಳನ್ನೂ, **ಇಪ್ಪಡಿ**-ಹೀಗೆಯೇ, **ಕಣ್ಣಳಿಕ್ಕಲಾಂ** -ತಿಳಿಯದ ಬಾಲನಿಗೆ ಉಪಚ್ಛಂದನರೂಪದಲ್ಲಿ ಹೇಳಿದುದು ಎಂದು ಭಾವಿಸಬಹುದಾಗುತ್ತದೆ. **ಆದಿ** ಶಬ್ದದಿಂದ ಕರ್ಮಯೋಗವು ಹೇಳಲ್ಪಟ್ಟಿತು. ಪ್ರಪತ್ತಿಯು

**ಅಪ್ಪೋದು ಇಪ್ಪುಕ್ಕುಜ್ಗಳಾಲೇ ಉಪಾಸನಾದಿಗಳಿಲ್ ಕಾಟಿಟಲ್ ಪ್ರಪತ್ತಿಕ್ಕುವ್ಯಾ ಪ್ಯತ್ತಿ ಶೊಲ್ಲನಿನೈತ್ತದು ತಲ್ಲೈಕಟ್ಟಾದು. ಸ್ವವಿಷಯ ಸ್ವೀಕಾರ ವಿಶಿಷ್ಟವಾಯ ಕೊಣ್ಡು ಫಲಪ್ರದವಾಕಾನಿರ್ಕಚ್ಚೆಯ ದೇ ಇಸ್ಸಿದ್ಧೋಪಾಯುವ್ ಸ್ವೀಕಾರತ್ತಾಲುಮ್ ನಿರಪೇಕ್ಷನೆನ್ರು ಬುದ್ಧಿಪಣ್ಣವೇಣುಮೆನ್ರಿಲ್, ಇದು**

---

ತಿಳಿಯದೇ ಇರುವರನ್ನು ವಂಚನಮಾಡಿ ಹೇಳಿದ ವಿಷಯವಾಗುವದಿಲ್ಲವು ಅದು ವಿಧಿಯೇ ಮಾಡಿಯೇ ತೀರಬೇಕೆಂಬ ಭಾವವು **ಅಪ್ಪೋದು**-ನೀವು ಹೇಳಿರುವ ಸಂಬಂಧಜ್ಞಾನಮಾತ್ರ ಮೊದಲಾದವುಗಳನ್ನು ಒಪ್ಪಿಕೊಂಡರೆ, **ಉಪಾಸನಾದಿಗಳಿಲ್ಕಾಟಿಲ್** ಉಪಾಸನವೇ ಮೊದಲಾದವುಗಳಿಗಿಂತ, **ಪ್ರಪತ್ತಿಕ್ಕು** ಪ್ರಪತ್ತಿಗೆ, **ವ್ಯಾನೃತ್ತಿಶೊಲ್ಲನಿನೈತ್ತದು**- ಮಹಾತ್ಮ್ಯೆಯನ್ನು ನೀವೇ ಹೇಳಲು ಯೋಚಿಸಿದುದು, **ತಲ್ಲೈಕ್ಕಟ್ಟಾದು**-ಸಿದ್ಧಿಸುವದಿಲ್ಲವು ನೀವು ಹೇಳಿದ ಉಪಚ್ಛಂದನರೂಪ ಅತಿವಾದಗಳು ಉಪಾಸನಾದಿಗಳಿಗೂ ಏರ್ಪಡುವದರಿಂದ ಎರಡೂ ಒಂದೇಯಾಯಿತು ಪ್ರಪತ್ತಿಯು ಉಪಾಸನಕ್ಕಿಂತ ಅತಿಶಯ ಮಹಾತ್ಮ್ಯೆಯುಳ್ಳದೆಂಬ ವಾಕ್ಯಸಿದ್ಧಿಯು ಏರ್ಪಡುವದಿಲ್ಲವೆಂಬ ಭಾವವು ನೀವೇ ಪ್ರಪತ್ತಿಗೆ ಮಹಾತ್ಮ್ಯೆಯನ್ನು ಹೇಳಿ, ಅದು ಆವಶ್ಯಕವಾಗಿ ಬೇಕಾಗಿಲ್ಲವೆಂಬ ವಾದವು ಸರಿಹೋಗುವದಿಲ್ಲವೆಂಬ ತಾತ್ಪರ್ಯವು **ಶರಣಂವ್ರಜ** ಎಂಬ ಉಪದೇಶವು ಆಗ ಉಪಯೋಗವಾಗುವದಿಲ್ಲವು ಈಗ ಮೇಲೆ ಹೇಳಿದ ೮ ವಿಧ ಸಂಬಂಧಜ್ಞಾನಾದಿಗಳೇ ಮುಕ್ತಿಹೇತುಗಳಾದರೆ ಉಪಾಸನಾದಿ ಗುರುತರೋಪಾಯಗಳಲ್ಲಿ ಅಶಕ್ತ್ಯತೆಯಿಂದ ಶೋಕಿಸುತ್ತಿದ್ದ ಅರ್ಜುನನಿಗೆ ಪರಮ ಸುಲಭೋಪಾಯವನ್ನು ಹೇಳುವೆನು ಕೇಳು ಎಂದು ಹೇಳಿದ ಉಪದೇಶವು ನಿರರ್ಥಕವಾದುದಾಗುತ್ತದೆಂಬ ಭಾವವು ಸಿದ್ಧೋಪಾಯನು ತಾನೇ, ತನ್ನನ್ನು ಪರಿಗ್ರಹಿಸಿ ಫಲಕೊಡುವನು ಆದುದರಿಂದ ನಿರಪೇಕ್ಷ ಬುದ್ಧಿಯನ್ನು ಮಾಡತಕ್ಕದ್ದೆಂಬು **ಏಕ** ಶಬ್ದತಾತ್ಪರ್ಯವೆಂಬ ಪೂರ್ವಪಕ್ಷವನ್ನು ಅನುವದಿಸಿ ನಿರಾಕರಿಸುತ್ತಾರೆ --**ಸ್ವವಿಷಯಸ್ವೀಕಾರ ವಿಶಿಷ್ಟಮಾಯ್ ಕ್ಕೊಂಡು**-ತನ್ನ ವಿಷಯದಲ್ಲಿ ಸಿದ್ಧೋಪಾಯನು ಪ್ರಸನ್ನನಾಗಲಾಗಿ, **ಫಲಪ್ರದಮಾಗಾನಿರ್ಕ**-ಫಲಪ್ರದನಾಗಿರುವಾಗ (ಪೂರ್ವಪಕ್ಷಿಯು ಸಿದ್ಧಾಂತಾಭಿಪ್ರಾಯವನ್ನು ಒಪ್ಪಿಕೊಂಡು ತನ್ನ ಪೂರ್ವಪಕ್ಷವನ್ನು ತಿಳಿಸುವನು) **ಇಸ್ಸಿದ್ಧೋಪಾಯುಮ್** - ಇಸ್ಸಿದ್ಧೋಪಾಯನು, **ಸ್ವೀಕಾರತ್ತಾಲುಮ್**-ಪ್ರಪನ್ನನಾದರೂ ಕೂಡ, **ನಿರಪೇಕ್ಷನೆನ್ರು ಬುದ್ಧಿಪಣ್ಣವೇಣುಮೆನ್ರಿಲ್**-ಹಾಗೆ ಪ್ರಪನ್ನನಾಗುವದಕ್ಕೆ ತನಗೆ ಇನ್ನು ಯಾವುದರ ಅಪೇಕ್ಷೆಯು ಬೇಕಿಲ್ಲವೆಂಬ ಬುದ್ಧಿಯನ್ನು ಮಾಡಬೇಕೆಂಬುದು ಏಕಶಬ್ದ ತಾತ್ಪರ್ಯವೆಂದು ಹೇಳಿದರೆ, **ಇದು** ಈ ಅಭಿಪ್ರಾಯವು, **ದೃಷ್ಟಿವಿಧಿಪೋಲೆ** "ಮನೋಬ್ರಹ್ಮೇತ್ಯುಪಾಸೀತ", ಮನಸ್ಸು ಮುಂತಾದ ಬ್ರಹ್ಮವಲ್ಲದೇ ಇರುವದರಲ್ಲಿ ಪರಬ್ರಹ್ಮವೆಂಬ

**ದೃಷ್ಟಿವಿಧಿಪ್ಪೋಲೆಆರೋಪಿತಮಾದಲ್ ಸ್ವವಚನವಿರೋಧಮಾಡಲ್ ಆಮ್**
**ಅಥ ಏಕಶಬ್ದಸ್ಯ ಸಿದ್ಧಾನ್ತಾರ್ಥಮಾಹ**
**ಆಗೈಯಾಲ್ ಈಶ್ವರ ಪ್ರಸಾದನೀಯನಾಯ್ ಪ್ರಧಾನಮಾನ**

ಭಾವನೆಯನ್ನು ವಿಧಿಸಿರುವಹಾಗೆ, **ಆರೋಪಿತಮಾಡಲ್**-ಇಲ್ಲದೇ ಇರುವದಕ್ಕೆ ಆರೋಪಿಸಿ ಹೇಳುವ ಅಯಥಾರ್ಥಜ್ಞಾನವಾಗಲಿ, ಅಥವಾ **ಸ್ವವಚನ ವಿರೋಧ ಮಾದಲ್**-ತಾವು ಹೇಳಿದುದಕ್ಕೆ ವಿರುದ್ಧವಾದುದಾಗಲಿ, **ಆಮ್**-ಆಗುತ್ತದೆ ಸರ್ವೇಶ್ವರನು ಪರಮದಯಾಳುವು, ಆತನಿಗೆ ಏನೊಂದೂ ಈ ಜೀವಾತ್ಮನಲ್ಲಿ ಅಪೇಕ್ಷಿತವಿಲ್ಲವು, ಇಷ್ಟದೆ ಪ್ರಸನ್ನನಾಗುವನು, ಪ್ರಪದನ ತಾನೆ ಏತಕ್ಕೆ **ಮಾಮೇಕಂ** ನಾನೊಬ್ಬನೇ ಪ್ರಪನ್ನನಾಗಿ ಫಲಪ್ರದನು ಪ್ರಪದನ ಏತಕ್ಕೆ? ಎಂದರೆ ಪ್ರಪದನಕ್ಕೆ ಮೋಕ್ಷ ಸಂಪಾದಕ ಶಕ್ತಿಯಿಲ್ಲವು, ಅದು ಆರೋಪಿತವಾಗುತ್ತದೆ ಎಂಬ ಭಾವವು ಅಥವಾ ಸಿದ್ಧೋಪಾಯನೇ ಶರಣಾಗತಿಯನ್ನು ಎದುರುನೋಡದೇನೇ ಮೋಕ್ಷವನ್ನು ದಯಪಾಲಿಸುವನು ಎಂಬುದು **ಏಕ** ಶಬ್ದಾರ್ಥವೆಂದರೆ ಮುಂದಿರುವ **ಶರಣಂ ವ್ರಜ** ಎಂಬ ವಿಧಿಗೆ ವಿರೋಧವಾಗಿ **ಸ್ವವಚನ ವಿರೋಧ** ವಾಗುತ್ತದೆಂಬ ಭಾವವು ಸಿದ್ಧಾನ್ತಾರ್ಥವೇನೆಂದರೆ ಶರಣಾಗತಿಯು ನಿರಪೇಕ್ಷವಲ್ಲವು ಶರಣಾಗತ್ಯನಂತರವೇ ಪ್ರಸನ್ನತೆಯೂ ಮೋಕ್ಷವೂ ಆದುದರಿಂದಲೇ ಸ್ವಾಮಿದೇಶಿಕರವರು ಒಂದೆಯೇ "**ಪ್ರಪನ್ನಾದನ್ಯೇಷಾಂ ನದಿಶತಿಮುಕುಂದೋ ನಿಜಪದಮ್**" ಎಂದು ಹೇಳಿರುತ್ತಾರೆ ಆದುದರಿಂದ ಸಿದ್ಧೋಪಾಯನು ಸಾಧ್ಯೋಪಾಯವನ್ನು ಎದುರುನೋಡುತ್ತಾನೆ ಆದುದರಿಂದ ಅದು ನಿರಪೇಕ್ಷವಾದುದಲ್ಲವು ಸಾಪೇಕ್ಷವಾದುದೇ ಆದುದರಿಂದ ರಾಮ-ಚಂದ್ರಪ್ರಭುವು ಹೇಳುತ್ತಾರೇನೆಂದರೆ "**ಸಕೃದೇವ ಪ್ರಪನ್ನಾಯತವಾಸ್ಮೀತಿ ಚಯಾಚತೇ। ಅಭಯಂ ಸರ್ವಭೂತೇಭ್ಯೋದದಾಮ್ಯೇತದ್ವ್ರತಂಮಮ॥**" ಸಕೃಚ್ಛರಣಾಗತಿಮಾಡಿ ಪ್ರಪನ್ನನಾದರೇನೇ ಅಭಯವು ಎಂಬ ಅಭಿಪ್ರಾಯವು. **ಸರ್ವಭೂತೇಭ್ಯಃ** ಎಂದು ಹೇಳಿದಿರುವದರಿಂದ ಇನ್ನು ಮಿಕ್ಕದ್ದೆಲ್ಲವೂ (ಪರಿಕರವ್ಯತಿರಿಕ್ತ) ನಿರಪೇಕ್ಷವು ಅದನ್ನೇ "**ನಜಾತಿಭೇದಂ ನಕುಲಂ ನಲಿಂಗಂನ ಗುಣಕ್ರಿಯಾಃ। ನದೇಶಕಾಲಾನಾವಸ್ಥಾಂ ಯೋಗೋಹ್ಯಯಮಪೇಕ್ಷತೇ**" ಇಲ್ಲಿ **ಯೋಗೋಹ್ಯಯಂ** ಎಂಬುದರಿಂದ ಶರಣಾಗತಿಯು ಹೇಳಲ್ಪಟ್ಟು ಇವೆಲ್ಲಾ ಅದಕ್ಕೆ ನಿರಪೇಕ್ಷವೆಂಬ ಭಾವವು (ಅಭೀತಸ್ತವ ೨೬ನೆಯ ಪುಟವನ್ನು ನೋಡಿ)

**ಆದುದರಿಂದ ಈ ಏಕಶಬ್ದದ ಸಿದ್ಧಾನ್ತಾರ್ಥವನ್ನು ಹೇಳುತ್ತಾರೆ.** **ಆಗೈಯಾಲ್**-ಆದುದರಿಂದ, ಎಂದರೆ ನೀವು ಹೇಳಿದ ಹಾಗೆ ನಿರಪೇಕ್ಷವೆಂದು **ಏಕ** ಶಬ್ದಕ್ಕೆ ತಾತ್ಪರ್ಯ ಹೇಳಿದರೆ ಬಾಧಕಾರ್ಥಗಳು ಒದುಗುವದರಿಂದ, ಏಕ

**ಸಿದ್ಧೋಪಾಯುನ್. ಭಕ್ತಿ ಪ್ರಪತ್ತಿಗಳಿರಣ್ಡುನ್ ಪ್ರಸಾದಜ್ಗಳಾಯ್ ಕ್ಕೊಂಡು ಪ್ರಧಾನನುಲ್ಲಾದ ಸಾಧ್ಯೋಪಾಯುಜ್ಗಳ್.**

---

ಶಬ್ದಾಭಿಪ್ರಾಯವೇನೆಂದರೆ? **ಈಶ್ವರನ್** - ಸರ್ವೇಶ್ವರನು, **ಪ್ರಸಾದನೀಯನಾನ್**-ಪರಮ ಕರುಣಾಳುವಾಗಿ ಯಾವಾಗ ಸಾಧ್ಯೋಪಾಯಾನುಷ್ಠಾನವನ್ನು ಮಾಡುವನು ಎಂದು ನಿರೀಕ್ಷಿಸುವನಾಗಿರುವ, **ಪ್ರಧಾನಮಾನ** ಮುಖ್ಯನಾದ, ಸಿದ್ಧೋಪಾಯನು **ಏಕ** ಶಬ್ದಕ್ಕೆ ಮುಖ್ಯ ಎಂಬ ಅರ್ಥವು ಈಶ್ವರನೊಬ್ಬನಿಗೇನೆ ಮೋಕ್ಷವನ್ನು ಕೊಡುವ ಶಕ್ತಿಯು, ಬ್ರಹ್ಮರುದ್ರೇಂದ್ರಾದಿಗಳು ಮೋಕ್ಷೇತರ ಫಲವನ್ನು ಕೊಡುವದೂ ಕೂಡ, ಈ ಸರ್ವೇಶ್ವರಾಜ್ಞಾ ಮೂಲಕವಾಗಿಯೇ ಆದುದರಿಂದ ಸರ್ವೇಶ್ವರನೇ ಪ್ರಧಾನ ಸಿದ್ಧೋಪಾಯವೆಂದು **ಏಕ** ಶಬ್ದವು ತಿಳಿಸುತ್ತದೆಂದು ಹೇಳಿದರು **"ಏಕೇಮುಖ್ಯಾನ್ಯಕೇವಲಾಃ"** ಏಕ ಶಬ್ದಕ್ಕೆ ಮುಖ್ಯ, ಅನ್ಯ, ಕೇವಲ ಎಂಬದಾಗಿ ನಾನಾರ್ಥವರ್ಗದಲ್ಲಿದೆ ಆದುದರಿಂದ ತಾನೇ ಪ್ರಧಾನನಾದ ಸಿದ್ಧೋಪಾಯನು ಆದರೆ ಸಾಧ್ಯೋಪಾಯುಗಳು ಬೇಡವೋ? ಅವುಗಳೂ ಬೇಕು, ಆದರೆ **ಅವು ಪ್ರಧಾನನುಲ್ಲಾದ ಸಾಧ್ಯೋಪಾಯುಜ್ಗಳ್** ಅವೇಕೆ ಪ್ರಧಾನ ಮಲ್ಲಾದ ಎಂದು ಹೇಳಿದರು ಎಂದರೆ ಅವೂ ಬೇಕೇ ಬೇಕು. ಅವುಗಳೇ ಫಲವನ್ನು ಕೊಡಲಾರವು ಫಲಕೊಡುವವನು ಈಶ್ವರನಾದುದರಿಂದ, ಆದುದರಿಂದ ಪ್ರಪತ್ತಿಯು ವ್ಯಾಜಮಾತ್ರವು ಆದರೂ ಅನುಷ್ಠಿಸಲೇ ಬೇಕೆಂಬ ಭಾವವು, ಮೋಕ್ಷಾರ್ಥಿಯು ಭಕ್ತಿ ಪ್ರಪತ್ತಿಗಳಾದ ಎರಡು ಸಾಧ್ಯೋಪಾಯುಗಳಲ್ಲಿ ಯಾವುದಾದರೂ ಒಂದನ್ನು ಅನುಷ್ಠಿಸಲೇಬೇಕೆಂದು ಸ್ಥಾಪಿಸಿದರು **ಇವ್ವೈ ಇರಂಡತ್ತೊನ್ರಿಲೇ**-ಇವೆರಡೂ ಬೇಕಾಗಿಲ್ಲವಾದುದರಿಂದ ಯಾವುದಾದರೂ ಒಂದರಲ್ಲಿ, **ಯಥಾಧಿಕಾರಮ್ - ಅಧಿಕಾರಾನು** ಗುಣವಾಗಿ, ಬ್ರಾಹ್ಮಣ ಕ್ಷತ್ರಿಯ ವೈಶ್ಯನಾಗಿ, ಶಕ್ತನಾಗಿದ್ದರೆ ಗುರೂಪಾಯವಾದ ಭಕ್ತಿಮಾರ್ಗವೂ, ಹಾಗಲ್ಲದೆ ಶೂದ್ರಾದಿಗಳಿಗೂ ಆಶಕ್ತರಿಗೂಲಘೂಪಾಯವೂ, ಹೀಗೆ ಯಥಾಧಿಕಾರವಾಗಿ **ನಿಲ್ಕೈಯಾಗಕ್ಕಡವದು** - ವ್ಯವಸ್ಥೆಮಾಡಿ ಕೊಳ್ಳತಕ್ಕದ್ದು, ಇದರಿಂದ **ಪ್ರವತ್ತೇರ್ವ್ಯಾಜಮಾತ್ರತ್ವಮ್**-ಎಂಬುದೂ ವ್ಯಾಖ್ಯಾನ ಮಾಡಲ್ಪಟ್ಟಿತು, ಮೇಲೆ ಹೇಳಿದ ಎಂಟು ವಿಧ ತಾತ್ಪರ್ಯಗಳೂ ಸರಿಯಲ್ಲವೆಂದು ನಿರಾಕರಿಸಿದರಲ್ಲವೇ; ಪ್ರಾಜ್ಞರೇ ಹಾಗೆ ಅಭಿಪ್ರಾಯಪಟ್ಟಿರಲ್ಲಾ, ಅವರುಗಳ ತಾತ್ಪರ್ಯವೇನು? ಎಂದರೆ,

(೧) **ಸಂಬಂಧ ಜ್ಞಾನವು,** ಸ್ವರೂಪ ರಕ್ಷಾಫಲ ಭರಸಮರ್ಪಣಕ್ಕೆ ಈ ಶೇಷಶೇಷಿ ಸಂಬಂಧ ಜ್ಞಾನವು ತುಂಬಾ ಮುಖ್ಯವಾದುದೆಂಬುದರಿಂದ ಹಾಗೆ ಅಭಿಪ್ರಾಯಪಟ್ಟರು ಶ್ರೀ ಪರಾಶರ ಭಟ್ಟರು ಅಷ್ಟಶ್ಲೋಕಿಯಲ್ಲಿ **"ನಿಶ್ಚಿತ್ಯತ್ವದಧೀನತಾಂ"** ಎಂಬ ಶ್ಲೋಕದಲ್ಲಿ ನಿಪುಣತರವಾಗಿ ತಿಳಿಸಿರುತಾರೆ.

**ಇನ್ನೈ ಇರಣ್ಡುತ್ತೊನ್ರಿಲೇ ಯಥಾಧಿಕಾರ ಮ್ ನಿಲೈಯಾಗಕ್ಕಡವದು.**
**ಅಥ ಏಕ ಶಬ್ದಸ್ಯಾನ್ಯೋಪಾತಯಾ ನ್ಯ ಪರತ್ವಮಾಹ**

---

**ಅಪೇಕ್ಷಿತ ಫಲತ್ತುಕ್ಕು ಉಪಾಯಮಾಗ ವಿಧಿತ್ತ ಸಾಧನಾಂತರಙ್ಗಳೈ ಯಿಡ್ಡೈಯಿಡವೇಣ್ಡಾದ ಪಡಿ ಪ್ರಪತ್ತಿಕ್ಕು ಅನಂತರಮ್ ಭರಸ್ವೀಕಾರಂ**

---

(೨) **ಅನಿವಾರಣ**ವೆಂದು ಹೇಳಲು ಕಾರಣವೇನೆಂದರೆ? ಪ್ರಪತ್ತಿಗೆ ಮೊದಲು ಅಪರಾಧ ಬಾಹುಳ್ಯದಿಂದ ನಿವಾರಣೆಯು, ಈಗ ಪ್ರಪತ್ತ್ಯನಂತರ ಅನುಗ್ರಹ ರೂಪದಲ್ಲಿ ಅನಿವಾರಣವು, ಮುಂದಕ್ಕೆ ಸ್ವಯತ್ನವು ಯಾವುದೂ ಬೇಕಿಲ್ಲವು

(೩) ಈಗ ಸ್ವಾಮಿಯು **ಅನುಮತಿ**ಯನ್ನಿತ್ತನು, ಹಾಗೆ ಅನುಮತಿಯನ್ನೀಯುದೇ ಪ್ರಪತ್ತಿಯು ಎಂದು ಹೇಳಿರುವದರಿಂದ, ಭಗವಂತನ ಶರಣಾಗತಿಯ ಮೂಲಕ ಲಭಿಸುವ ಸಿದ್ಧೋಪಾಯನ ಅನುಗ್ರಹದ ಮಾಹಾತ್ಮ್ಯೆಯನ್ನು ಹೇಳಿದಹಾಗೆ

(೪) **ಅಚಿದ್ವ್ಯಾವೃತ್ತಿ** ಎಂದು ಹೇಳಲು ಕಾರಣವು ಏನೆಂದರೆ? ಚಿತ್ತಿಗೇನೇ ದೇವ ಮನುಷ್ಯ ಶರೀರಗಳು ಉಂಟಾದಾಗ ಮಾತ್ರವೇ ಜ್ಞಾನ ವಿವೇಕಾದಿಗಳು ಲಭಿಸುವದರಿಂದ, ಅಂತಹ ಸಮಯದಲ್ಲಿ ಮಾಡುವ ಪ್ರಯತ್ನವಾದುದರಿಂದ **ಅಚಿದ್ವ್ಯಾವೃತ್ತಿಯು** ಪ್ರಪತ್ತಿಯು ಎಂದು ಹೇಳಲ್ಪಟ್ಟಿತು

(೫) **ಚೈತನ್ಯ ಕೃತ್ಯವೇ** ಪ್ರಪತ್ತಿ ಎಂದು ಹೇಳಲು ಕಾರಣವು ಏನೆಂದರೆ - ಪ್ರಪದನವು ಜ್ಞಾನ ರೂಪಯಾಚ್ನಾ ಎಂದರೆ ಪ್ರಾರ್ಥನೆಯಾದುದರಿಂದ

(೬) **ಚಿತ್ತಸಮಾಧಾನ** ವೆಂದು ಹೇಳಲು ಕಾರಣವು, ತನಗೆ ಅಪರಾಧ ಬಾಹುಳ್ಯ ವಿದ್ದುದರಿಂದ ಹೇಗೆ ರಕ್ಷಿಸುವನೆಂಬ, ಭಯ ಶೋಕಾದಿಗಳಿದ್ದವು ಈಗ ಮಹಾ ವಿಶ್ವಾಸ ಉಂಟಾಗುವದರಿಂದ ನೈರ್ಭರ್ಯ ಪ್ರಾಪ್ತಿಯು ಎಂಬುದು

**ಏಕ ಶಬ್ದಕ್ಕೆ ಅನ್ಯೋಪಾಯದ ಸಂಬಂಧ ವಿಲ್ಲವೆಂಬ ಅರ್ಥವಾಗಲಿ**
**ಆಗಬಹುದು ಎನ್ನುತ್ತಾರೆ**

---

**ಏಕೆ** ಶಬ್ದಕ್ಕೆ ಮುಖ್ಯ ಅಥವಾ ಪ್ರಧಾನವೆಂಬರ್ಥದಿಂದ ಕೋರುವ ಅಭಿಪ್ರಾಯವನ್ನು ಹೇಳಿದರು ಈಗ ಇನ್ನೊಂದರ್ಥನಾದ ಅವಧಾರಣ ಅಥವಾ **ಕೇವಲ** ಎಂಬರ್ಥದಿಂದ ಕೋರುವ ಅರ್ಥವನ್ನಾದರೂ ಹೇಳಬಹುದೆಂದು ತಿಳಿಸುತ್ತಾರೆ **ಶರಣ್ಯಃ** - ರಕ್ಷಿಸಲು ಕಾದಿರುವ ಸಿದ್ಧೋಪಾಯನಾದ ಭಗವಂತನು, **ಅಪೇಕ್ಷಿತ ಫಲತ್ತುಕ್ಕು** - ಸ್ವೇಚ್ಛೆಯಿಂದ ಚತುರ್ವಿಧ ಪುರುಷಾರ್ಥ ಪ್ರಾಪ್ತಿಗಾಗಿ ಮಾಡಬಹುದಾದುದರಿಂದ ಕೋರಿದ ಫಲಕ್ಕೆ, **ಉಪಾಯಮಾಗಿ ವಿಧಿತ್ತ** - ಉಪಾಯವಾಗಿ ವಿಧಿಸಿದ **ಸಾಧನಾಂತರಗಳ್** - ಕರ್ಮಯೋಗ ಭಕ್ತಿಯೋಗ ಮೊದಲಾದವುಗಳ, **ಯಿಡ್ಡೈಯಿಡ ವೇಣ್ಡಾದುವಟ** - ಸಹಾಯವನ್ನು ಕೋರದೆ

**ಪಣ್ಣಿನ ಶರಣ್ಯರ್ ತನಿತ್ತು ನಿಱ್ಕುಮ್ ನಿಲೈಯೈಪ್ಪತ್ತ “ಏಕ” ಶಬ್ದಮೆನ್ರುಮ್ ಶೊಲ್ಲುವರ್ ಗಳ್. ಅದೆಙ್ಗನೆಯೆನ್ರಿಲ್ :—ಪ್ರಪತ್ತಿಯುಮ್ಪಣ್ಣಿ ಅನಂತರಮು ದಡಿಯಾಗ ಉಪಾಸನಾದಿಗಳುಮ್ ಅನುಷ್ಠಿತ್ತಾಲ್ ಫಲೋಪಾಯ ಮಾಗಕ್ಕಡವನಾನ ಶರಣ್ಯರ್ ಅಕಿಂಚನನಾಯ್ ವಿಳಂಬ ಕ್ಷಮನಲ್ಲಾತ ಇವನ್ತಿರತ್ತಿಲ್ ಪ್ರಪತ್ತಿಕ್ಕುಮ್ ತನಕ್ಕುಮ್ ನಡುವೆ ನಿಱ್ಪದೊರು ಶುಮೈಶುಮತ್ತಾದೆ ಇವನ್ ಶುಮೈಯೈತ್ತ ಗುಣಙ್ಗಳಿನ್ ಮೇಲೆಯೇ**

ಎಂಬ ತಾತ್ಪರ್ಯವು, **ಪ್ರಪತ್ತಿಕ್ಕನಂತರಂ**-ಶರಣಾಗತಿಯನ್ನು ಅನುಷ್ಠಿಸಿದ ನಂತರ, **ಭರಸ್ವೀಕಾರಪ್ಪಣ್ಣಿನ** - ತನ್ನನ್ನು ರಕ್ಷಿಸುವ ಭರವನ್ನು ಸ್ವೀಕಾರ ಮಾಡಿದ, **ತನಿತ್ತು ನಿಱ್ಕು ನಿಲೈಯೇಪ್ಪತ್ತ** - ಹೀಗೆ ಇನ್ನೇನೂ ಬೇಕಿಲ್ಲವೆಂದೂ ತಾನೊಬ್ಬನೇ ಒಡೆಯನಾಗಿ ನಿಂತಿರುವ ಸ್ಥಿತಿಯನ್ನು ಕುರಿತದ್ದು, **ಏಕ ಶಬ್ದಾರ್ಥ ಮೆನ್ರು**-ಏಕ ಶಬ್ದಾರ್ಥವೆಂದು **ಶೊಲ್ಲುವರ್ ಗಳ್**-ಹೇಳುವರು **ಮಾಮೇಕಂ** ಎಂದರೆ **ಮಾಮೇಕಂ** - ನನ್ನೊಬ್ಬನನ್ನೇ **ಶರಣಂವ್ರಜ** ಎಂಬುದು ಅರ್ಥವೆಂಬ ಭಾವವು ಇನ್ನು ಉಪಾಸನಾದಿಗಳು ಯಾವುವೂ ಬೇಕಾಗಿಲ್ಲವೆಂಬ ಭಾವವು ಬ್ರಹ್ಮ ರುದ್ರೇಂದ್ರಾದಿ ದೇವತೆಗಳನ್ನು ಶರಣ ಹೊಂದ್ಬವದೂ ಬೇಕಿಲ್ಲವು ; ಅಥವಾ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳ ಸಹಾಯವು ಅನಂತರ ಬೇಕಿಲ್ಲವು ನನ್ನೊಬ್ಬನನ್ನೇ ಆಶ್ರಯಿಸಿದರೆ ಸಾಕು ಇನ್ನು ಯಾವುದೂ ಅನಂತರ ಬೇಕಿಲ್ಲವು **ಮೋಕ್ಷ** ಪ್ರಾಪ್ತಿಗೆ ಏನನ್ನು **ಮಾಡಬೇಕೋ** ಕೆವಲ ಅದನ್ನೇ ಮಾಡಿದ್ದಾಯಿತು ಅನಂತರ ಉಪಾಸನಾದಿಗಳು ಯಾವುವು ಬೇಕಿಲ್ಲವೆಂಬ ತಾತ್ಪರ್ಯವು ಇದನ್ನೇ ಮುಂದಿನ ವಾಕ್ಯದಿಂದ ಉಪಪಾದಿಸುತ್ತಾರೆ - **ಅದೆಙ್ಗನೇ ಎನ್ರಿಲ್** - ಅದು ಹೇಗೆ ಎಂದರೆ ಹೇಳುತ್ತಾರೆ **ಪ್ರಪತ್ತಿಯುಮ್ ಪಣ್ಣಿ**-ಸ್ವತಂತ್ರ ಪ್ರಪತ್ತಿಯನ್ನೂ ಅನುಷ್ಠಿಸಿ, **ಅನಂತರ, ಅದಡಿಯಾಗ** - ತನ್ಮೂಲಕವಾಗಿ, **ಉಪಾಸನಾದಿಗಳುಮ್** - ಕರ್ಮಯೋಗಾದಿಗಳಿಂದ ಸಹಕೃತವಾದ ಭಕ್ತಿರೂಪೋಪಾಸನೆಗಳನ್ನು ಅನುಷ್ಠಿಸಿದರೆ **ಫಲೋಪಾಯ ಮಾಗಕ್ಕಡವನಾನ**-ಫಲೋಪಾಯನಾಗಿ ನಿಂತಿರುವ **ಶರಣ್ಯನು, ಅಕಿಂಚನನಾಯ್** - ಬೇರೆ ಗತಿ ಯಾರೂ ಇಲ್ಲದೆ, **ವಿಳಂಬ ಕ್ಷಮನಲ್ಲಾದ** - ವಿಳಂಬವನ್ನು ಸಹಿಸದೇ ಇರುವ, **ಇವನ್ತಿರುತ್ತಿಲ್** - ಇವನ ವಿಷಯದಲ್ಲಿ, ಪ್ರಪತ್ತಿಗೂ ತನಗೂ **ನಡುವೆ** - ಮಧ್ಯದಲ್ಲಿ, **ನಿಱ್ಪದೊರು ಶೊಮೈ ಶುಮತ್ತಾದೇ** - ಇರುವ ಈ ಭಕ್ತಿಯೋಗ ರೂಪವಾದ ಉಪಾಸನವೆಂಬ ಒಂದು ಹೊರೆಯನ್ನು **ಶುಮತ್ತಾದೆ** - ಹೊರಲು ಆತನಿಗೆ ಸಾಧ್ಯವಿಲ್ಲದ ಒಂದು ಭಾರವನ್ನು ಹೊರಸದೇ, **ಇವನ್ ಶುಮೈಯೈ** - ಮೋಕ್ಷಾರ್ಥಿಯು ಹೊರಬೇಕಾಗಿದ್ದ ಹೊರೆಯನ್ನು, **ತ್ತಗುಣಙ್ಗಳಿನ್ ಮೇಲೆಯೇರಿಟ್ಟು**-

**ರಿಟ್ಟು "ಶರಣಂತ್ವಾ । ಪ್ರಪನ್ನಾಯೇ ಧ್ಯಾನಯೋಗ ವಿವರ್ಜಿತಾಃ। ತೇಪಿ ಮೃತ್ಯು ಮತಿಕ್ರಮ್ಯಯಾನ್ತಿ ತದ್ವೈಷ್ಣವಂ ಪದಮ್" ಎನ್ರುಮ್ "ಆರೆ ನಕ್ಕುನ ಪಾದಮೇ ಶರಣಾಗ ತಂದೊಳಿಂದಾಯ್" ಎನ್ರುಮ್, ಶೊಲ್ಲುಗಿರಪಡಿಯೇ ಗುಣವಿಶಿಷ್ಟತಾನೇ ನಿರಪೇಕ್ಷ ಫಲಪ್ರದನಾಯ್**

---

ತನ್ನ ಕೃಪೌದಾರ್ಯ ಗುಣಗಳಿಂದ ಆ ಭಾರವನ್ನು ತಾನೇ ಹೊತ್ತು ಎಂದರೆ ಆ ಉಪಾಸನ ಸ್ಥಾನದಲ್ಲಿ ತಾನೇ ತನ್ನ ಕೃಪೌದಾರ್ಯಗಳಿಂದ, ನಿಂತು, ಅಂತಹ ಸಂದರ್ಭದಲ್ಲಿ ಶರಣ್ಯನು ಉಪಾಸನ ಮೊದಲಾದವುಗಳ ನಿರಪೇಕ್ಷವಾಗಿ ಮೋಕ್ಷಫಲವನ್ನು ಕೊಡುವನು ಎಂದು ಅನುಸಂಧಾನ ಮಾಡಿಕೊಂಡು ಶರಣವನ್ನು ಹೊಂದು ಎಂದು ವಾಕ್ಯವನ್ನು ಮುಂದೆ ಮುಗಿಸಿತ್ತಾರೆ ಉಪಾಸನ ಮೊದಲಾದವು ಬೇಕಿಲ್ಲ ವೆಂಬುದಕ್ಕೆ ಎರಡು ಪ್ರಮಾಣಗಳನ್ನು ಉದಾಹರಿಸುತ್ತಾರೆ

ಅವು ಯಾವುವೆಂದರೆ ?—**ಧ್ಯಾನಯೋಗ ವಿವರ್ಜಿತಾಃ**- ಉಪಾಸನಕ್ಕೆ ಅಧಿಕಾರವಿಲ್ಲದೆ ಭಕ್ತಿಯೋಗ ನಿಷ್ಠೆ ಇಲ್ಲದವರಾದ, ಭಕ್ತಿಯೋಗಕ್ಕೆ ಅಧಿಕಾರ ವಿದ್ದರೂ ಆ ಭಕ್ತಿಯೋಗಕ್ಕೆ ಅಸಮರ್ಥರಾದವರೂ ಕೂಡ, **ತೇಪಿ**-ಅಂತಹ ಸ್ತ್ರೀ ಶೂದ್ರ ಪಂಚಮರೂ ಕೂಡ, ತ್ವಾ-ನಿನ್ನನ್ನು, **ಶರಣಂ**-ಉಪಾಯವಾಗಿ ಭಾವಿಸಿದ, **ಪ್ರಪನ್ನಾಃ**—ಶರಣಾಗತಿಯ ಮೂಲಕ ಆಶ್ರಯಿಸಿದವರು, **ಮೃತ್ಯುಂ ಅತಿಕ್ರಮ್ಯ**-ಸಂಸಾರ ಸಾಗರವನ್ನು ದಾಟಿ, ಪುನಸ್ಸಂಸಾರವನ್ನು ಹೊಂದದೆ, **ತದ್ವೈಷ್ಣವಂ ಪದಮ್**-ಆ ಭಗವಂತನ ದಿವ್ಯ ವೈಕುಂಠ ಪದವನ್ನು ಹೊಂದುವರು **ಎನ್ರುಮ್**-ಎಂದೂ, ಮುಂದಿನ ಪ್ರಮಾಣವು ನಮ್ಮಾಳ್ವಾರ್ ಪಾಶುರವು (೫. ೭. ೧೦) ಪೂರಾ ಪಾಶುರವೂ ಅರ್ಥವೂ ಹಿಂದೆ ಸಾಙ್ಗ ಪ್ರಪದನಾಧಿಕರದಲ್ಲಿ **ಉ**ದಾಹೃತವು, ೧೦೮೭ ನೆಯ **ಪು**ಟ ನೋಡಿ,

**ಶೊಲ್ಲುಗಿರಪಡಿಯೇ**-ಹೇಳಿರುವ ಹಾಗೆ, **ಗುಣವಿಶಿಷ್ಟತಾನೇ**-ದ್ವಯಮನ್ತ್ರದಲ್ಲಿ ಪ್ರಪದನ ಸ್ವೀಕಾರಕ್ಕೆ ಬೇಕಾದ ಕಾರುಣ್ಯಾದಿ ಕಲ್ಯಾಣಗುಣಗಳಿಂದ ಕೂಡಿದ ತಾನೇ, **ನಿರಪೇಕ್ಷಫಲಪ್ರದಾನಮ್**-ಇನ್ನು ಯಾವುದರ ಅಪೇಕ್ಷೆಯನ್ನು ಎದುರುನೋಡದೆ ಫಲವನ್ನು ಕೊಡುವನಾಗಿ, **ನಿರ್ಕುಂ ನಿಲೈಯೈ**-ಇರುವ ಸ್ಥಿತಿಯನ್ನು, **ಅನುಸಂಧಿತ್ತುಕೊಂಡು**-ಅನುಸಂಧಾನಮಾಡಿಕೊಂಡು, **ಶರಣಮಾಗ ವಡೈ**-ನನ್ನನ್ನೇ ಉಪಾಯವಾಗಿ ಹೊಂದತಕ್ಕದ್ದು; ಎಂದರೆ ನಿನ್ನ ಆತ್ಮವನ್ನು ನನ್ನಲ್ಲಿ ಸಮರ್ಪಿಸಿಕೊಳ್ಳತಕ್ಕದ್ದು ಎಂದು, ಇಙ್ಗು **ಶೊಲ್ಲಿತ್ತಾಯಿತ್ತು**-ಈ ಸಂದರ್ಭದಲ್ಲಿ ಹೇಳಿದ್ದಾಯಿತು ಆದುದರಿಂದ ಶರಣಾಗತ್ಯನಂತರ ಭಕ್ತಿಯೋಗಾನುಷ್ಠಾನವು ಕೂಡದು ಎಂದು ಹೇಳಿದಂತಾಯಿತು ಪ್ರಪದನಾನಂತರ ಇನ್ನು ಯಾವುದನ್ನು ಅಪೇಕ್ಷಿಸದೆ ಶ್ರಿಯಃಪತಿಯು ಫಲವನ್ನು ಕೊಡುವನು ಎಂಬಭಾವವು.

**ನಿರ್ಕ್ಕುಂ ನಿಲೆಯೈ ಅನುಸಂಧಿತ್ತುಕ್ಕೊಂಡು ಶರಣ (ಮ್ಪುಕೆಕ್ಕಡವೈ) ಮಾಗ ವಡೈಯೆನ್ರು ಇಚ್ಚೆ ಶೊಲ್ಲಿತ್ತಾಯಿತ್ತು.**

**ಏಕಶಬ್ದಸ್ಯ ಉಪಾಯಾನ್ತರಾಂಗಾನನ್ವಯ ಪರತ್ವಂಚಾಹ.**

**ಇಪ್ಪಡಿ ಪರಿಪೂರ್ಣನಾನತನ್ನೈ ಪ್ರಪತ್ತಿ ಪಣ್ಣುಂಪೋದು ಆನ್ಕುಕೂಲ್ಯ ಸಂಕಲ್ಪಾದಿ ವಿಶಿಷ್ಟಮಾನ ವಿತ್ತೈಯೊಳಿಯವೇರೊರು ಪರಿಕರತ್ತೆಯಿದಿಲೆ ವಿದ್ಯಾನ್ತರತ್ತಿಲ್ಪೋಲೆ ಶೊರಿಗಿಕೊಂಡು ಅದುವುಮ್ ಪ್ರಸಾದನಮಾನ ಉಪಾಯಕೋಟಿಯಿಲೆ ನಿರ್ಕ್ಕಿರದೆನ್ರುಮ್, ನಿನೈವೈಕ್ಕಳಿಕ್ಕೈಕ್ಕಾಗ "ಏಕ" ಶಬ್ದಮೆನ್ರುಶೊಲ್ಲುವರ್‌ಗಳ್. ಆಜ್ಞಾನುಜ್ಞೈಗಳಾಲೆ**

**ಏಕಶಬ್ದಕ್ಕೆ ಉಪಾಯಾನ್ತರಾಂಗದ ಅನ್ವಯವಿಲ್ಲವೆಂಬುದೂ ಅರ್ಥವು**

**ಇಪ್ಪಡಿಯೇ**-ಉಪಾಯಾನ್ತರವಾದ ಭಕ್ತಿಯೋಗದ ಸ್ವರಪೇಕ್ಷೆಯನ್ನು ತೋರಿಸಿದ ರೀತಿಯಲ್ಲೇ, **ಪರಿಪೂರ್ಣನಾನತನ್ನೈ** - ಏನೂ ಬೇಕಾಗದೆಪರಿಪೂರ್ಣನಾಗಿರುವ ತನ್ನೈ ಎಂದರೆ ನಮ್ಮಿಂದ ಆಗತಕ್ಕದ್ದೇನೂ ಇಲ್ಲದವನೆಂಬ ಭಾವವು, ಆದರೆ ಪ್ರಪತ್ತಿಗೆ ಐದು ಅಂಗಗಳು ಮಾತ್ರವೇ ಅಪೇಕ್ಷಿತವೆಂದು ಹೇಳುತ್ತಾರೆ:-**ಅನುಕೂಲ್ಯ ಸಙ್ಕಲ್ಪಾದಿವಿಶಿಷ್ಟಮಾನವಿತ್ತೈ**-ಆನುಕೂಲ್ಯವೇ ಮೊದಲಾದ ಪಂಚಪರಿಕರಗಳಿಂದಕೂಡಿದುದನ್ನು, **ಒಳಿಯ-ಬಿಟ್ಟು ವೇರೋರು ಪರಿಕರತ್ತೈ**-ಬೇರೇಯಾವ ಇತರಪರಕರಗಳನ್ನೂ **ವಿದ್ಯಾನ್ತರತ್ತಿಲ್ಪೋಲೇ**-ಬೇರೇ ಉಪಾಯವಾದ ಇತರ ಬ್ರಹ್ಮವಿದ್ಯೆಗಳಲ್ಲಿರುವ ಹಾಗೆ, ಬೇರೆವಿದ್ಯೆಗಳಿಗೆ ನಿತ್ಯನೈಮಿತ್ತಿಕಾದಿಗಳು ಪರಿಕರಗಳಾಗಿ ಆವಶ್ಯಕವಾಗಿ ಬೇಕು, ಹಾಗೆ ಬೇಕಾಗಿಲ್ಲದೆ, ಎಂಬ ಭಾವವು; **ಶೊರಗಿಕೊಂಡು**-ಪರಿಕರವಾಗಿ ಈ ಪ್ರಪತ್ತಿಯೊಂದಿಗೆ ಸೇರಿಕ್ಕೊಂಡು, **ಅದುವುಮ್**-ಆ ನಿತ್ಯನೈಮಿತ್ತಿಕಾದಿಗಳೂ, **ಪ್ರಸಾದನಮಾನ**-ಶ್ರಿಯಃಪತಿಯ ಪ್ರಸನ್ನತೆಯನ್ನು ಸಾಧಿಸಿಕೊಡುವ, **ಉಪಾಯಕೋಟಿಯಿಲೆ** - ಉಪಾಯಭಾಗದಲ್ಲೇ ಸೇರಿ **ನಿರ್ಕ್ಕಿರವೆನ್ರುಮ್**-ನಿಲ್ಲುತ್ತದೆಂದು, **ನಿನವೈ - ಜ್ಞಾಪಕವನ್ನು ಕಳಿಕ್ಕೈಕ್ಕಾಗ**-ನಿವಾರಣೆ ಮಾಡುವದಕ್ಕಾಗಿ, **ಏಕಶಬ್ದ** ಪ್ರಯೋಗವೆಂದೂ, **ಶೊಲ್ಲುವರ್‌ಗಳ್**-ಹೇಳುವರು ಆಜ್ಞಾನುಜ್ಞಾ ಕೈಂಕರ್ಯಗಳು ಈ ಪ್ರಪತ್ತಿಗೆ ಅಂಗವಾಗಿ ಬೇಕಿಲ್ಲವು ಆದರೆ ಅವುಗಳನ್ನೆಲ್ಲಾ ತ್ಯಾಗಮಾಡಬಹುದೋ ? ಎಂದರೆ ಇತರ ವಿಧಿವಾಕ್ಯಗಳಿಗೆ ಕಟ್ಟುಬಿದ್ದು ಮಾಡಲೇಬೇಕು ಈ ತಾತ್ಪರ್ಯವನ್ನು ಈ ಚರಮಶ್ಲೋಕದ ಏಕಶಬ್ದಾರ್ಥದಿಂದ ಗ್ರಹಿಸಬಹುದೆಂದು ಕೆಲವರು ಹೇಳುತ್ತಾರೆ ಈ ಅಭಿಪ್ರಾಯದಲ್ಲಿ ಹಿಂದಿನ ವರೆಲ ವಿಧ ಅಭಿಪ್ರಾಯಗಳಲ್ಲಿ ವಿರೋಧಗಳು ತೋರುವ ಹಾಗೆ ಏನೂ ವಿರೋಧಗಳಿಲ್ಲವಾದುದರಿಂದ ಈ ಅಭಿಪ್ರಾಯವನ್ನು ಅನುಮೋದಿಸಬಹುದೆಂಬ ಭಾವದಿಂದ ಕೆಲವರು **ಶೊಲ್ಲುವರ್‌ಗಳ್** ಎಂದು ಹೇಳಿದರು.

**ಆಜ್ಞಾನುಜ್ಞೈಗಳಾಲೇ ಅನುಷ್ಟಿಕ್ಕುಮ್ ಕರ್ತವ್ಯಾಂತರಙ್ಗಳನೆಲ್ಲಾಮ್ ಪ್ರಪತ್ತಿಕ್ಕು ತುಣೈಯನ್ರು. ಇಪ್ಪ್ರಪತ್ತಿಯಾಲೇ ವಶೀಕೃತನಾಯ್ ಫಲಂತರುವಿಕ್ಕಿರನಾನೊರುವನುಮೇ ಇಕ್ಷಣಿಕೋಪಾಯತ್ತುಕ್ಕು ಪ್ರತಿಭೂವಾಯ್ ನಿನ್ರೇನ; ಇಪ್ರಪತ್ತಿಫಲತ್ತೈಪ್ಪತ್ತ ವೇರೊರುತೇವೈಶೆಯ್ಯವೇಣ್ಡಾ; ಅತ್ತೈವೈಯ್ಯೆತ್ತುಣೈಯಾಗಕೊಂಡುಉನ್ನೈ ನಾನ್ ರಕ್ಷಿಕ್ಕಪ್ಪುಗುಗಿರೇನಲ್ಲೇನೆನ್ರು ತಾತ್ಪ**

ಈ ತಮಗೆ ಸಮ್ಮತವಾದ ಅಭಿಪ್ರಾಯವನ್ನು ಬೇರೆ ಉಪಪಾದಿಸಿ ಹೇಳುತ್ತಾರೆ- **ಆಜ್ಞಾನುಜ್ಞೈಗಳಾಲೇ**-ಸ್ನಾನ ಸಂಧ್ಯಾವಂದನಾದಿ ನಿತ್ಯನೈಮಿತ್ತಿಕ ಕೈಂಕರ್ಯಗಳೂ ಮತ್ತು ಭಗವದ್ಭಾಗವತ ಕೈಂಕರ್ಯಗಳೂ, ಹೀಗೆಯೇ **ಅನುಷ್ಟಿಕ್ಕುಮ್ ಕರ್ತವ್ಯಾಂತರಙ್ಗಳನೆಲ್ಲಾಮ್**-ಅನುಷ್ಠಿಸಬೇಕೆಂದು ವಿಧಿವಾಕ್ಯಗಳಿಂದ ಮಾಡಬೇಕಾದವೆಲ್ಲಾ ಗುರು ಶುಶ್ರೂಷ, ಮಾತಾಪಿತೃ ಶುಶ್ರೂಷಾ, ಗತಿಚಿನ್ತನ ಮೊದಲಾದವೆಲ್ಲಾ, ಹೇಳಲ್ಪಟ್ಟವು **ಪ್ರಪತ್ತಿಕ್ಕು ತುಣೈಯನ್ರು**-ಇವು ಯಾವುವು ಪ್ರಪದನಕ್ಕೆ ಪರಿಕರಗಳಲ್ಲವು **ಇಪ್ಪಪತ್ತಿಯಾಲೇ ವಶೀಕೃತನಾಯ್**-ಈ ಪ್ರಪದನದಿಂದ ಸೇರಿದ ಶ್ರಿಯಃಪತಿಯು ವಶೀಕೃತನಾಗಿ ಎಂದರೆ ಪ್ರಸನ್ನನಾಗಿ, **ಫಲಂತರುವಿಕ್ಕಿರ**-ಶರಣಾಗತನು ಕೋರಿದ ಫಲವನ್ನು ದಯಪಾಲಿಸುವ, **ನಾನೊರುವನೇ**-ಲಕ್ಷ್ಮೀಸಹಿತನಾದ ನಾನೊಬ್ಬನೇ **ಇಕ್ಷಣಿಕೋಪಾಯತ್ತುಕ್ಕು**-ಒಂದು ಕ್ಷಣಕಾಲದಲ್ಲೇ ಅನುಷ್ಠಿಸಬಹುದಾದ ಈ ಪ್ರಪತ್ತಿಗೆ, **ಪ್ರತಿಭೂವಾಯ್**-ಜಾಮೀನ್‌ದಾರನಾಗಿ, ಹೊಣೆಗಾರನಾಗಿ ಎಂಬ ಭಾವವು, **ನಿನ್ರೇನ**-ನಿಂತಿದ್ದೇನೆ, **ಇಪ್ರಪತ್ತಿಫಲತ್ತೈಪತ್ತಿ**-ಶರಣಾಗತನು ಅಪೇಕ್ಷಿಸುವ ಈ ಪ್ರಪತ್ತಿಯ ಫಲವನ್ನು ಕುರಿತು **ವೇರೊರುತೇವೈ**-ಬೇರೆಯಾವ ವ್ರತವನ್ನಾಗಲೀ ತಪಸ್ಸನ್ನಾಗಲಿ, **ಶೆಯ್ ವೇಣ್ಡಾ**-ಮಾಡಬೇಕಾಗಿಲ್ಲವು **ಅತ್ತೈವೈಯ್ಯೆ**-ಆ ವ್ರತವನ್ನು, **ತುಣೈಯಾಗಕ್ಕೊಂಡು**-ಅದಕ್ಕೆ ಸೇರಿದ ಪರಿಕರವೆಂದುಭಾವಿಸಿ, **ಉನ್ನೈರಕ್ಷಿಕ್ಕಪುಗುಗಿರೇನಲ್ಲೇನ್**-ನಿನ್ನನ್ನು ರಕ್ಷಿಸಲು ಯತ್ನಿಸುವವನಲ್ಲವು, **ಎನ್ರು ತಾತ್ಪರ್ಯಮ್**-ಎಂದು ಏಕಶಬ್ದ ತಾತ್ಪರ್ಯವು ಹಿಂದಿನನಾಲ್ಕು ವಾಕ್ಯಗಳಿಂದಲೂ ಏಕಶಬ್ದ ತಾತ್ಪರ್ಯವನ್ನು ಅರ್ಥವಾಗಿ ತಿಳಿಸಿದರು

ಈ ಪ್ರಪತ್ತಿಯಿಂದ ಶ್ರಿಯಃಪತಿಯು ನಮಗೆ ವಶೀಕೃತನೆಂದು ಹೇಳಲ್ಪಟ್ಟಿತು ಶ್ರುತಿಯು **"ಇಂದ್ರಿಯಾಣಿಪರಾಣ್ಯಾಹುಃ"** ಎಂದು ವಶೀಕರಣ ಪರಂಪರೆಯನ್ನು ಇಂದ್ರಿಯ, ಮನಸ್ಸು, ಬುದ್ಧಿ, ಆತ್ಮಾ, ಪರಮಾತ್ಮಾ ಹೀಗೆ ಒಂದಕ್ಕಿಂತ ಒಂದು ಉತ್ತಮವೆಂದು ಹೇಳಿತು ಈ ಪರಂಪರೆಗೆ ಶ್ರೀ ಭಾಷ್ಯಕಾರರು ಇನ್ನೊಂದು ವಾಕ್ಯವಾದ **"ತಸ್ಯಚ ವಶೀಕರಣಮ್ ತಚ್ಛರಣಾಗತಿರೇವ"** ಎಂದು ಅವಧಾರಣೆಯಿಂದ ಸೇರಿಸಿ ಸ್ವಾರಸ್ಯವಾಗಿ ಹೇಳಿರುತ್ತಾರೆ ಈ ಶರಣಾಗತಿಯು ಎರಡು ಉಪಾಯಗಳಿಗೂ ಆವಶ್ಯಕವು. ಅಂಗವಾಗಿ ಉಪಾಸನಕ್ಕೂ ಸ್ವತಂತ್ರವಾಗಿ

**ರ್ಯನ್' ಇತ್ತಾಲ್', ಆನುಕೂಲ್ಯ ಸಂಕಲ್ಪಾದಿ ವಿಶಿಷ್ಟಪ್ರಪತ್ತಿಯೊಳಿಯು ಪ್ರಪತ್ತಿ ಪರಿಕರವೆನ್ರು ಪೇರಿಟ್ಟು ತನಕ್ಕು ವೇರೊರು ಸಹಕಾರಿ ಕಾರಣತ್ತೈಕ್ಕೊಟ್ಟ ವೇಣ್ಡಾವೆನ್ರು ಶೊಲ್ಲಿತ್ತಾಯಿತ್ತು.**

---

ಭರನ್ಯಾಸಕ್ಕೂ ಆವಶ್ಯಕವು ಇವೆಲ್ಲಾ ಹಿಂದೆಯೇ ಸದ್ವಾರಕ, ಅದ್ವಾರಕ ಪ್ರಪತ್ತಿಗಳೆಂದು ಉಪಪಾದಿಸಲ್ಪಟ್ಟವು ಆದುದರಿಂದ **ಇಷ್ಟಪ್ರಪತ್ತಿನಾಲೇ ವಶೀಕೃತನಾನ-** ಎಂಬ ಪ್ರಯೋಗವು ಇಲ್ಲಿ ಮುಖ್ಯವಾಗಿ ಮೋಕ್ಷಫಲವನ್ನು ಕುರಿತೇ ಹೇಳಿರುವದರಿಂದ **ನಾನೊರವನೇ** ಫಲದಾಯಕನು ಎಂದು ಹೇಳಲ್ಪಟ್ಟಿತು ಇತರ ದೇವತೆಗಳಿಗೆ ಮೋಕ್ಷವನ್ನು ಕೊಡುವ ಶಕ್ತಿಯಿಲ್ಲವಾದುದರಿಂದ ಮುಕ್ತಿಯನ್ನು **ಕೊಡುವ** ಶಕ್ತಿಯಿಂದ **ಮುಕುಂದ**ನೆನಿಸಿರುವನು ತಾನೊಬ್ಬನೇ ಎಂಬ ಅಭಿಪ್ರಾಯವು **ಕ್ಷಣಿಕೋಪಾಯು**ವೆಂಬ ಪ್ರಯೋಗದಿಂದ **ಸಕೃದನುಷ್ಠೇಯು**ವೆಂಬ ಭಾವವನ್ನು ತೋರಿಸಿ ಯಾವಜ್ಜೀವವೂ ಅನಕೃದನುಷ್ಠಿಸಬೇಕಾದ ಉಪಾಸನಕ್ಕಿಂತ ವೈಲಕ್ಷಣ್ಯವು ಪ್ರದರ್ಶಿಸಲ್ಪಟ್ಟಿತು **ಪ್ರತಿಭೂಃ** ಎಂದರೆ ಜಾಮೀನುದಾರ (surety)ನಿಗೆ ಹೆಸರು ಆತನು ಪ್ರಪತ್ತಿಯನ್ನು ಅನುಷ್ಠಿಸಿದುದರಿಂದ ಮೋಕ್ಷ ಫಲಕ್ಕೆ ತಾನು ಜಾಮೀನುದಾರನಾದನೆಂಬ ಭಾವವು **ದದಾಮ್ಯೇತ ದ್ವ್ರತಂಮುಮ** ಎಂಬುದನ್ನು ಈ ಪ್ರಯೋಗವು ಸ್ಮರಿಸುತ್ತದೆ ಭಕ್ತಿಯೋಗಸ್ಥಾನದಲ್ಲಿ ತಾನೇ ನಿಂತು, ಅದು ಕೊಡುವ ಫಲವನ್ನು ತಾನೇ ಕೊಡುವನೆಂದು ಹಿಂದೆ ಹೇಳಿರುವುದರ ಅಭಿಪ್ರಾಯವು ಇಲ್ಲಿ ತೇವೈ ಶಬ್ದವು ತೈತ್ತರೀಯ ನಾರಾಯಣೀಯವಾಕ್ಯವನ್ನು ಸ್ಮರಿಸುತ್ತದೆ. **"ತಸ್ಮಾನ್ನ್ಯಾಸಮೇಷಾಂತಪಸಾನುತಿರಿಕ್ತಮಾಹುಃ"** ಎಲ್ಲಾ ತಪಸ್ಸುಗಳಿಗೂ ಮೇಲಾದ ತಪಸ್ಸು ಈ ಪ್ರಪತ್ತಿಯು ಎಂದು ಹೇಳಿ, ಮುಂದಿನ ಯುಕ್ತಿನಿಂದ ಈ ಅತಿರಿಕ್ತ ತೇವೆಯು ಶರಣಾಗತಿಯೇ, ಆದುದರಿಂದ ಇನ್ನು ಯಾವ ತೇವೆಯ ಅಪೇಕ್ಷೆಯು ಬೇಕಿಲ್ಲವೆಂದು ತಿಳಿಸಿ, ಅದು ಯಾವುದುಎಂದರೆ **ಓಂ ಇತ್ಯಾತ್ಮಾನಂಯುಂಜೀತ** ಎಂದುಉಪದೇಶಿಸಲ್ಪಟ್ಟಿರುತ್ತದೆ ಆದುದರಿಂದ ಮುಂದಿನ ವಾಕ್ಯದಿಂದ **ಏಕ** ಶಬ್ದ ತಾತ್ಪರ್ಯವನ್ನು ನಿಗಮನಮಾಡಿ ಹೇಳುತ್ತಾರೆ **ಇತ್ತಾಲ್**-ಈ ಮೇಲಿನ ಉಪಪಾದನೆಯಿಂದ, **ಆನುಕೂಲ್ಯಸಙ್ಕಲ್ಪಾದಿ ವಿಶಿಷ್ಟಪ್ರಪತ್ತಿಯೊಳಿಯು-** ಆನುಕೂಲ್ಯಸಙ್ಕಲ್ಪವೇ ಮೊದಲಾದ ಐದು ಪರಿಕರಗಳಿಂದ ಸೇರಿದ ಪ್ರಪತ್ತಿಯನ್ನು ಬಿಟ್ಟು, **ಪ್ರಪತ್ತಿ ಪರಿಕರವೆನ್ರು**-ಈ ಪ್ರಪತ್ತಿಗೆ ಬೇರೊಂದು ಪರಿಕರ ಉಂಟು ಎಂದು, **ಪೇರಿಟ್ಟು**-ಅದಕ್ಕೆ ಹೆಸರುಕೊಟ್ಟು, **ತನಕ್ಕು**-ಮೋಕ್ಷಾರ್ಥಿಯಾದತನಗೆ, **ವೇರೊರು ಸಹಕಾರಿಕಾರಣತ್ತೈ**-ಬೇರೊಂದು ಸಹಕಾರಿ ಕಾರಣವನ್ನು **ಕೊಟ್ಟವೇಂಡಾ**-ನೇರಿಸಬೇಕು, **ಎನ್ರು** - ಎಂಬದಾಗಿ, **ಶೊಲ್ಲಿತ್ತಾಯಿತ್ತು**-ಈ **ಏಕ** ಶಬ್ದದಿಂದ ಹೇಳಿದಂತಾಯಿತು. ಅರ್ಥವಾಗಿ ತೋರಿಬರುತ್ತದ ಈ ಅಭಿಪ್ರಾಯ

**"ಯೇನಕೇನಾಪಿ ಪ್ರಕಾರೇಣ ದ್ವಯವಕ್ತಾ ತ್ವಂ" ಎನ್ರುಮ್ "ಪ್ರಪತ್ತಿ ವಾಚೈವ ನಿರೀಕ್ಷಿತುಂವೃಣೇ" ಎನ್ರುಮ್ ಶೊಲ್ಲಗಿರಪಡಿಯೇ ಪೂರ್ಣ**

---

ವನ್ನೇ ಮುಂದೆ ಎರಡು ಪ್ರಮಾಣಗಳನ್ನು ಉದಾಹರಿಸಿ ಸ್ಥಾಪಿಸುತ್ತಾರೆ — **ಯೇನಕೇನಾಪಿಪ್ರಕಾರೇಣ**-ಯಾವುದೋ ಒಂದು ರೀತಿಯಿಂದಲಾಗಲಿ, **ದಯ ವಕ್ತಾತ್ವಮ್** - ದ್ವಯಮನ್ತ್ರವನ್ನು ಉಚ್ಚರಿಸುವನಾಗಿ, ಆಚಾರ್ಯರ ಮೂಲಕ ವಾಗಲಿ, ಅವರು ಹೇಳಿಕೊಟ್ಟಿದುದನ್ನು ನೀನು ಅರ್ಥಸ್ವಾರಸ್ಯ ತಿಳಿಯದೆ ಕಷ್ಟದಿಂದ ಸುಮ್ಮನೆ ಉಚ್ಚರಿಸುವದರಿಂದಾಗಲಿ; ಇಲ್ಲಿ ಅಪಿ ಶಬ್ದವು ಮನ್ತ್ರೋ ಚ್ಚಾರಣೆಯಾದರೆ ಸಾಕು, ಅದರ ಸೂಕ್ಷ್ಮಾರ್ಥಗಳ ತಿಳುವಳಿಕೆಯೂ ಬೇಕಿಲ್ಲ ವೆಂಬ ತಾತ್ಪರ್ಯವು ಇದು ಶ್ರೀ ಯತಿವರ್ಯರ ಶರಣಾಗತಿಯಲ್ಲಿರುವ ಶ್ರೀರಙ್ಗನಾಥನ ಉಕ್ತಿಯು ಹಾಗೆ **ಯೇನಕೇನಾಪಿ** - ದ್ವಯವಕ್ತಾ ಆಗುವದರಿಂದ ನೀನು **"ನಿತ್ಯಕಿಂಕರೋಭವ"** ಎಂಬ ಪ್ರತಿವಚನವು ಇದಕ್ಕೆ ಶ್ರೀ ದೇಶಿಕವರ್ಯರ ವ್ಯಾಖ್ಯಾನವು ಹೇಗೆಂದರೆ? **"ಆರ್ತೋವಾಯದಿವಾದೃಪ್ತಃ" "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ" "ವಿಭೀಷಣೋವಾ ಸುಗ್ರೀವಯದಿ ವಾರಾವಣಸ್ಸ್ವಯಮ್"** ಇಂತಹ ಅಧಿಕಾರಿ ವಿಶೇಷಣ ನಿಯಮವಿಲ್ಲದಿರೋಣ ವನ್ನು ಹೇಳುವವರಲ್ಲಿ ತಾತ್ಪರ್ಯವನ್ನು ಬೋಧಿಸುತ್ತದೆ. ಹೇಗಾದರೂಮಾಡಿ ದ್ವಯ ಮನ್ತ್ರೋಚ್ಚಾರಣೆ ಮಾಡಿದರೆ ಸಾಕು, ಇನ್ನೇನೂ ಬೇಕಾಗಿಲ್ಲವೆಂಬುವರಿಂದ ಎರಡು ವಿಷಯಗಳು ಸೂಚಿತವು (೧) ಶ್ರಿಯಃಪತಿಗ, ಈ ವಿಧವಾಗಿ ಪ್ರಪತ್ತಿಯನ್ನುಷ್ಠಿಸಿದ ಪ್ರಪನ್ನನ ವಿಷಯದಲ್ಲಿರುವ ಆದರಾತಿಶಯವನ್ನು ಪ್ರಕಟಿಸುತ್ತದೆ (೨) ಅಧಿಕಾ ರಿಯು ದ್ವಯಮನ್ತ್ರವನ್ನಾಗಲಿ ಆಚಾರ್ಯರಮೂಲಕ ಉಚ್ಚರಿಸಬೇಕು ಎಂಬುದು ಇದೂಬೇಕಿಲ್ಲದೆ ಶ್ರಿಯಃಪತಿಯು ತಾನೇ ರಕ್ಷಿಸುವನೆಂಬ ವಾದವು ಇದರಿಂದ ನಿರ ಸ್ತವು ಅಲ್ಪಸ್ವಲ್ಪ ಏನಾದರನ್ನು ಬರೆದವರಲ್ಲವೇ ಎಕ್ಸಾಮಿನರ್ ಮಾರ್ಕ್ಸನ್ನು ಕೊಟ್ಟು ಪ್ಯಾಸ್ ಮಾಡಿಸಬಹುದು; ಏನನ್ನೂ ಬರೆಯದಿದ್ದರೆ ಹೇಗೆ ಕೃತಾರ್ಥನನ್ನಾಗಿ ಮಾಡಲು ಸಾಧ್ಯವು? **"ಯಮೇವೈಷ ವೃಣುತೇ ತೇನಲಭ್ಯಃ"** ಎಂಬುದು ಅನುಸಂಧೇಯವು.

**ಪ್ರಪತ್ತಿವಾಚೈವ** - ಪ್ರಪತ್ತಿವಾಕ್ಕು ದ್ವಯಮನ್ತ್ರೋಚ್ಚಾರಣೆಯಿಂದ ಮಾತ್ರವೇ, ಏಕ ಎಂಬ ಅವಧಾರಣವಿರುವದರಿಂದ, ಅಷ್ಟಾದರೆ ಸಾಕು ಇನ್ನೇನೂ ಪಂಚಪರಿಕರಗಳು ವಿನಾ, ಬೇಕಿಲ್ಲವೆಂಬ ತಾತ್ಪರ್ಯವು. ಅದು ಇತರ ಪರಿಕರಗಳ ಆವಶ್ಯಕತೆಯನ್ನು ವ್ಯಾವರ್ತಿಸಿ ಹೇಳುತ್ತದೆ **ನಿರೀಕ್ಷಿತುಂ**-ನಿತ್ಯಕೈಂಕರ್ಯಮಾಡುವ ಫಲಪ್ರಾಪ್ತಿಗಾಗಿ **ವೃಣೇ**-ವರಿಸುತ್ತೇನೆ

**ಎನ್ರುಮ್**-ಎಂಬದಾಗಿ, **ಶೊಲ್ಲುಗಿರಪಡಿಯೇ**-ಹೇಳಿರುವ ಹಾಗೆ **ಪೂರ್ಣ**

**ಪ್ರಪತ್ತಿಕ್ಕು ಅಪೇಕ್ಷಿತ ಜ್ಞಾನ ತೆಳಿವಿಲ್ಲಾವಿಡಲುಮ್ ಯಥಾಕಥಂಚಿದನು ಷ್ಠಾನತ್ತಾಲೆ ಕಾರ್ಯಂಶೆಯ್ಕಿರ ಇವ್ವುಪಾಯತ್ತುಕ್ಕು ವೇರೊಂರು ಪರಿ ಕರತ್ತಾಲ್ ತ್ತೇಡ ಪ್ರಸಙ್ಗಮಿಲ್ಲೈಯಿರೇ.**

**ಪ್ರಪತ್ತಿಗೆ, ಅಪೇಕ್ಷಿತವಾನ ತೆಳಿವಿಲ್ಲಾವಿಡಲುಮ್** - ಬೇಕಾದ ದ್ವಯದ ಸೂಕ್ಷ್ಮಾರ್ಥಗಳ ಜ್ಞಾನವಿಲ್ಲದೆ ಇದ್ದರೂ, ಎಂದರೆ ಯಥಾಕಥಂಚಿತ್ ಸಮುದಾಯ ಜ್ಞಾನದೊಂದಿಗೆ ದ್ವಯವಕ್ತಾ ಆವನ ನಾಕು ಎಂಬ ಭಾವವು **ಅನುಷ್ಠಾನತ್ತಾಲೇ**- ಆಚಾರ್ಯರು ಹೇಳಿಕೊಡುವ ಈ ದ್ವಯಮಂತ್ರವನ್ನು ಉಚ್ಚರಿಸುವವರ **ಮೂಲಕ, ಕಾರ್ಯಂಶೆಯ್ಗಿರ**-ಬೇಕಾದ ಫಲವನ್ನು ಕೊಡುವ, **ಇಪ್ಪುಪಾಯತ್ತುಕ್ಕು**-ಈ ಪ್ರಪತ್ತಿಗೆ **ವೇರೊರುಪರಿಕರತ್ತೈ**-ಬೇರೆ ಇತರ ಪರಿಕರ ಯಾವುದನ್ನೂ, **ತೇಡ ಪ್ರಸಙ್ಗಮಿಲ್ಲೈಯಿರೆ**-ಹುಡುಕಬೇಕಾದ ವಿಷಯವೇನೂ ಇಲ್ಲವಷ್ಟೇ **"ಮಾಮೇಕಂ ಶರಣಂ ವ್ರಜ"** ಎಂದಿರುವದರಿಂದ ಇದು ಪರಿಕರಗಳೊಂದಿಗೆ ಪ್ರಪತ್ತಿಯನ್ನು ಅನುಷ್ಠಿಸಿದರೆ ಪ್ರಪತ್ತಿ ಪೂರ್ಣವಾಯಿತೆಂದೂ ಅನ್ಯನಿರಪೇಕ್ಷವೆಂದೂ ಸ್ಥಾಪಿಸಿದರು. **ಅಗಲಿ, ರಾಘವ ಬ್ರಹ್ಮದತ್ತರು ಅನುಷ್ಠಿಸಿದ ಪ್ರಪತ್ತಿಯಲ್ಲಿ ಅನ್ಯಪರಿಕರಗಳ ಅನ್ವಯವಿದೆಯಲ್ಲಾ ಎಂದರೆ ಅದನ್ನು ಪರಿಹರಿಸುತ್ತಾರೆ.** ಶ್ರೀರಾಮಚಂದ್ರ ಪ್ರಭುವು ಮಾಡಿದ ಸಮುದ್ರ ಶರಣಾಗತಿಯಲ್ಲಿ ಕಲವು ಅಂಗಗಳು ತೋರಿಬರುತ್ತವೆಯಲ್ಲಾ, ದರ್ಭಾಸ್ತರಣ, ಪೂರ್ವಾಭಿಮುಖವಾಗಿರುವದು, ಅಂಜಲಿ ಮಾಡುವದು, ಅನ್ನವಿಲ್ಲದ ಮೂರು ರಾತ್ರಿ ಮಲಗಿರುವದು, ಇವೆಲ್ಲಾ ಈ ಶರಣಾಗತಿಗೆ ಅಂಗವಲ್ಲವೋ? ಎಂಬ ಆಕ್ಷೇಪತಂದರೆ ಇವುಗಳು ಅಂಗವಲ್ಲವೆನ್ನುತ್ತಾರೆ ಪ್ರಥಮತಃ ಶರಣಾಗತಿಯನ್ನು ಹೇಳುವ **ಪ್ರಪದ್ಯೇಶರಣಾಗತೋಸ್ಮಿ** ಇತ್ಯಾದಿ ಪದಗಳೇ ಇಲ್ಲವು ಆದರೆ **ಅಂಜಲಿಂಕೃತ್ವಾ** ಎಂದು ಇದೆಯಲ್ಲಾ ಅಂಜಲಿಯು ಶರಣಾಗತಿ ಸೂಚಕವಲ್ಲವೋ? ಎಂದರೆ ಅಂಜಲಿಯು ಪ್ರಾರ್ಥನಾಸೂಚಕಮಾತ್ರವೇ ಈ ಸಂದರ್ಭವಲ್ಲಿ ಪ್ರಾರ್ಥನೆಯೇನು? ಎಂದರೆ ಹರಿಸೈನ್ಯವು ಲಂಕೆಗೆ ಹೋಗುವದಕ್ಕೆ ಸಹಾಯ ಮಾಡೋಣವು ಲೋಕದಲ್ಲಿ ಹೀಗೆಲ್ಲಾ ಮಾಡಿದರೆ ಶಕ್ತಪುರುಷನ ವಶನಾಗುವನು ಎಂಬುದನ್ನು ಗ್ರಹಿಸಬಹುದು ಇದು ಸತ್ಯಾಗ್ರಹವೆಂಬ ಹೆಸರಿನಲ್ಲಿ ಈಗಲೂ ನಡೆಯುತ್ತಲಿದೆ ಇದ ಲೋಕವಿಡಂಬನಾರ್ಥವಾಗಿ, ಭೂಮಿಪಾಲನಾದ ತಾನು ಸಮುದ್ರಾಧಿಪತಿಯನ್ನು ಎದುರುಗೊಂಡು ಸಸೈನ್ಯನಾಗಿ ಬಂದರೆ ಸಾಗರಾಧಿಪತಿಯು ಎದುರುಗೊಂಡು ಬಂದು ಮರ್ಯಾದೆಮಾಡಿ ವಿಚಾರಿಸತಕ್ಕದ್ದು ನ್ಯಾಯವು ಹಾಗೆ ಮಾಡದಿದ್ದುದರಿಂದ ಅಪರಾಧಿಯು, ಆದುದರಿಂದ **ಚಾಪಮಾನಯ ಸೌಮಿತ್ರೇ** ಎಂದು ಹೇಳಿ ಬ್ರಹ್ಮಾಸ್ತ್ರವನ್ನು ಕೊಟ್ಟರು ಅವನ್ನು ಬಿಡುವದು ಬರುವದು ಸರಿಯಿಲ್ಲವಾಗಿ ದ್ರುಮಕುಲ್ಯವೆಂಬ ಸಾಗರನು ತೋರಿದ ಸ್ಥಳ

**ನನು ರಾಘು ಃ ಬ್ರಹ್ಮದತ್ತ ಶರಣಾಗತ್ಯೋಃ ಅನ್ಯಪರಿಕರಾಪೇಕ್ಷಾ ದೃಷ್ಟಃ ಇತಿಪೂರ್ವಪಕ್ಷಂ ಕೃತ್ವಾ ಪರಿಹರತಿ.**

---

ದಲ್ಲಿ ಬಿಟ್ಟರು ಆದುದರಿಂದ ಸಾರ ವಿವರಣೆಯವರು ಇದು ಶರಣಾಗತಿಯೇ ಅಲ್ಲ ವೆಂದು ವ್ಯಾಖ್ಯಾನ ಬರೆದಿರುತ್ತಾರೆ. ಈ ಅಭಿಪ್ರಾಯವು ಗ್ರಾಹ್ಯವು ಏಕೆಂದರೆ ಶರಣಾಗತಿಯಲ್ಲಿ ಅಸಮರ್ಥನು ಸಮರ್ಥನನ್ನು ಕುರಿತು ಯಾಚಿಸೋಣವು ಈ ಸಂದರ್ಭದಲ್ಲಿ ಸಮರ್ಥನು ಅಸಮರ್ಥನನ್ನು ಕುರಿತು ಯಾಚಿಸೋಣವಾಗಿರುತ್ತದೆ. ಆದುದರಿಂದ ಆಕಿಂಚನ್ಯ ಪರಿಕರವೇ ಇಲ್ಲವಾಗಿ ಶರಣಾಗತಿಯೇ ಅಲ್ಲವು ಹಾಗಾದರೆ ದರ್ಭಾಸನಶಯನಾದಿಗಳು ಏತಕ್ಕೆ? ಭೂಮಿಗೆ ಪತಿಯಾದವನು, ಸಮುದ್ರಕ್ಕೆ ಅಧಿಪತಿಯಾದವನನ್ನು ಸೇನಾತರಣಕ್ಕಾಗಿ ಸ್ಥಳವನ್ನು ಬೇಡುವದು ನ್ಯಾಯವಾದುದರಿಂದ ಹಾಗೆ ಪ್ರಾರ್ಥನೆಯು ಮಂದಮತಿಯು ಶ್ರೀರಾಮ ಕೋಪಕ್ಕೆ ಬೆದರಿ ಅನಂತರ ಬಂದು ನಳನುಸ್ಸೇತುವನ್ನು ಬಂಧಿಸಲಿ, ಸಹಾಯಮಾಡುವೆನೆಂದು ಅಭಯವನ್ನು ಬೇಡುತ್ತಾನೆ ಯದ್ಯಪಿಸಾಗರನು ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಸಗರಚಕ್ರವರ್ತಿಯು ಮಾಡಿದ ಉಪಕಾರಕ್ಕೆ ಕೃತಜ್ಞತಾಭಾವವನ್ನು ಹೊಂದಿದವನೆಂದು ನಾವು ಸುಂದರಕಾಂಡದಲ್ಲಿ ಗ್ರಹಿಸಬಹುದು ಆಂಜನೇಯನು ವಾಯು ಮಾರ್ಗ್ಗದ ಸಾರಿಯಾಗಿ ಸಮುದ್ರವನ್ನು ದಾಟುತ್ತಿರುವಾಗ ಸಾಗರನು ತನ್ನಲ್ಲಿ ರಕ್ಷ್ಯನಾಗಿ ಅಡಗಿದ್ದ ಮೈನಾಕನೆಂಬ ಪರ್ವತವನ್ನು ಸಂಬೋಧಿಸಿ ಹೇಳುತ್ತಾನೇ ನೆಂದರೆ :- **"ಅಹಂ ಇಕ್ಷ್ವಾಕು ನಾಥೇ ನ ಸಗರೇಣ ವಿ ವರ್ಧಿತಃ....। ತಸ್ಯಸಾಹ್ಯಂ ಮಯಾಕಾರ್ಯಂ ಇಕ್ಷ್ವಾಕುಕುಲ ವರ್ತಿನಃ। ಮಮ ಹೀಕ್ಷ್ವಾಕವಃ ಪೂಜ್ಯಾಃ"** ಎಂದು ಮೈನಾಕನನ್ನು ಕುರಿತು, ನೀನು ನೀರಿನಿಂದ ಮೇಲಕ್ಕೆ ಬಂದು, ಶ್ರೀ ರಾಮ ಕೆಲಸಕ್ಕಾಗಿ ಅಸ್ಖಲಿತ ಪ್ರವೃತ್ತಿಯುಳ್ಳ ಈ ರಾಮದೂತನಿಗೆ ವಿಶ್ರಮಿಸಿಕೊಳ್ಳಲು ನಿನ್ನ ಶೃಂಗಗಳನ್ನು ತೋರು ಎಂದು ಪ್ರಾರ್ಥಿಸಿರುತ್ತಾನೆ ಇಷ್ಟು ಗೌರವ ಕೃತಜ್ಞತೆ ಯುಳ್ಳ ಸಾಗರನು ಈ ಸಂದರ್ಭದಲ್ಲಿ ಬಂದು ಕಾಣಿಸಿಕೊಳ್ಳದೇ ಇರುವದನ್ನು ನೋಡಿ ದರೆ ಲಜ್ಜಾ, ಭಯ, ಅಶಕ್ತತೆಗಳಿಂದ ಪ್ರೇರಿತನಾಗಿ ಬರಲಿಲ್ಲವೇ ವಿನಾ ಅಹಂಕಾರ ದಿಂದ ಬರಲಿಲ್ಲವೆಂಬ ಭಾವವು ಕೂಡುವುದಿಲ್ಲವು **"ಚಾಪಮಾನಯ ಸೌಮಿತ್ರೇ" "ಸಾಗರಂಶೋಷಯಿಷ್ಯಾಮಿ"** ಇತ್ಯಾದಿ ಕೋಪ ಪ್ರದರ್ಶನಾದಿ ವಾಕ್ಯಗಳಿಂದ ನಾವು ತಿಳಿಯ ತಕ್ಕದ್ದೇನು? ಎಂದರೆ ಲೋಕನಾಥನಾದ ತಾನು ಬಂದು ಎದುರಿಗೆ ನಿಂತರೆ, ಸೇವಕನಾದ ಸಾಗರನು ವಿಚಾರಿಸದೇ ಇರುವದು ರಾಜ ಮರ್ಯಾದೆಗೆ ಕುಂದಕವಾದುದರಿಂದ ಸ್ವಾಮಿಯ ಕೋಪವೂ ನಮ್ಮಗಳ ಕೋಪದ ಹಾಗೆ ಅಶ್ರೇಯಸ್ಸಿಗೆ ಕಾರಣವಾಗದೆ ಪರಮಾನುಗ್ರಹಕ್ಕೇ ಹೇತುವಾಗಿ ಮರುಕಾಂತಾರ ದೇಶವು ಪರಮ ಪವಿತ್ರವಾದ ಸುಭಿಕ್ಷ ದೇಶವಾಗಿ ಪರಿಣಮಿಸಿರುತ್ತದೆ.

**"ತತಸ್ಸಾಗರವೇಲಾಯಾಂ ದರ್ಭಾನ್ ಆಸ್ತೀರ್ಯ ರಾಘವಃ । ಬಾಹುಂ ಭುಜಗ ಭೋಗಾಭಂ ಉಪಧಾಯಾರಿಸೂದನಃ । ಅಂಜಲಿಂ ಪ್ರಾಙ್ಮುಖಃ ಕೃತ್ವಾ ಪ್ರತಿಶಿಶ್ಯೇ ಮಹೋದಧೇಃ" ಎನ್ರು ಪೆರುಮಾಳ್ ಸಮುದ್ರತ್ತೈಪ್ಪತ್ತ ಶರಾಗತಿ ಪಣ್ಣಿನವಿಡತ್ತಿಲುಮ್,**

**"ಸರಾಜಾ ಪರಮಾಪನ್ನೋ ದೇವ ಶ್ರೇಷ್ಠಮಗಾತ್ತದಾ ।**
**ಶರಣ್ಯಂ ಸರಭೂತಾನಾಂ ಭಕ್ತ್ಯಾ ನಾರಾಯಣಂ ಹರಿಮ್ ।**

---

ಈ ಇತಿಹಾಸವನ್ನು ಮಹರ್ಷಿಯು ಉಪದೇಶಿಸಿರುವದರ ಮುಖ್ಯೋದ್ದೇಶ್ಯವೇನೆಂದರೆ ? ಈ ಶರಣಾಗತಿ ಶಾಸ್ತ್ರಜ್ಞರಾದ ಅಶಕ್ತನಲ್ಲಿ ಮಾಡುವ ಶರಣಾಗತಿಯು ಶರಣಾಗತಿಯೇ ಆಗುವದಿಲ್ಲವೆಂಬುದಾಗಿ ಪ್ರದರ್ಶಿಸುವದಕ್ಕಾಗಿ ; ಏಕೆಂದರೆ ಈತನು ಕೋರುವ ಫಲವನ್ನು ಆ ಅಶಕ್ತನು ಕೊಡಲಾರನಾದುದರಿಂದ

ಹೀಗೆ ಪೂರ್ವಾಭಿಮುಖವಾಗಿ ಮಲಗಿ, ನಿರಾಹಾರವಾಗಿ, ಅಂಜಲಿಯನ್ನು ಮಾಡಿದುದು ಇವೆಲ್ಲವೂ ಪ್ರಪತ್ತಿಯ ಅಂಗವಲ್ಲವೆಂಬ ತಾತ್ಪರ್ಯವು,

**ತತಃ**-ಅನಂತರವಲ್ಲಿ, **ಸಾಗರವೇಲಾಯಾಂ**-ಸಮುದ್ರನ ಉತ್ತರ ದಡದಲ್ಲಿ, **ದರ್ಭಾನ್ಆಸ್ತೀರ್ಯ** - ದರ್ಭೆಗಳನ್ನು ಹಾಸಿಕೊಂಡು, **ಭುಜಗಭೋಗಾಭಂ** - ಆದಿ ಶೇಷನ ಹೆಡೆಯಹಾಗೆ ಕಾಂತಿಯುಳ್ಳ, **ಬಾಹುಂ**-ತೋಳನ್ನೇ, **ಉಪಧಾಯ**-ತಲೆ ದಿಂಬನ್ನು ಮಾಡಿಕೊಂಡು, **ಪ್ರಾಙ್ಮುಖಃ** - ಪೂರ್ವಾಭಿಮುಖವಾಗಿ, **ಅಂಜಲಿ ಕೃತ್ವಾ**-ಅಂಜಲಿಯನ್ನು ಮಾಡಿ, **ಅರಿಸೂದನಃ**-ಶತ್ರುನಾಶಕನಾದ ಶ್ರೀ ರಾಮನು, **ಮಹೋದಧೇಃ** - ಮಹತ್ತಾದ ಸಮುದ್ರನ, **ಪ್ರತಿಶಿಶ್ಯೇ** - ಎದುರಿಗೆ ಮಲಗಿದನು. ಶ್ರೀ ರಾಮನು ಮಾಡಿದುದು ಪ್ರಪದನವೇ ಅಲ್ಲದಿರುವಾಗ, ಪೂರ್ವಾಭಿಮುಖವಾಗಿ ಅಂಜಲಿ ಮಾಡಿಕೊಂಡು ದರ್ಭಾಸನವನ್ನು ಮಾಡಿಕೊಂಡು ಮಲಗಿರುವದು ಅಂಗ ವೇ ಆಗುವದಿಲ್ಲವು

(೨) ಇನ್ನೊಂದು ಸಂದರ್ಭದಲ್ಲೂ ಬ್ರಹ್ಮದತ್ತನೆಂಬ ರಾಜನ ವಿಷಯದಲ್ಲಿ ಹರಿವಂಶ (೨೭-೧೧, ೧೨, ೧೩) ದಲ್ಲಿ ಹೇಳಿರುವದು, ಆರು ರಾತ್ರಿ ನಿರಾಹಾರನಾಗಿ ದರ್ಭಾಸನವಲ್ಲಿ ಮಲಗಿರುವದೂ ಮೊದಲಾದವು ಪ್ರಪದನಕ್ಕೆ ಅಂಗವಲ್ಲವು ಎಂದು ಹೇಳುತ್ತಾರೆ—**ಸರಾಜಾ** - ಬ್ರಹ್ಮದತ್ತನೆಂಬ ಆ ರಾಜನ, **ಪರಮಾಪನ್ನಃ**-ವಿಶೇಷ ದೈನ್ಯರನ್ನು ಹೊಂದಿದವನಾಗಿ, **ತದಾ**-ಆಗ, **ದೇವಶ್ರೇಷ್ಠಂ**-ದೇವತೆಗಳಿಗಿಂತಲೂ ಶ್ರೇಷ್ಠನಾದ, **ಸರ್ವಭೂತೇಶಂ**-ಎಲ್ಲಾ ಪ್ರಾಣಿಗಳಿಗೂ ನಿಯಾಮಕನಾದ **ಶರಣ್ಯಂ** - ಸರ್ವರಕ್ಷಕನಾದ, **ಹರಿಂ** - ಸರ್ವ ಪಾಪಹರನಾದ, **ನಾರಾಯಣಂ** - ನಾರಾಯಣ ನನ್ನು, **ಭಕ್ತ್ಯಾ**-ಭಕ್ತಿಯಿಂದ, **ಅಗಾತ್**-ಶರಣ ಹೊಂದಿದನು **ಷಡ್ರಾತ್ರೇಣ**-ಆರು ರಾತ್ರಿಗಳಿಂದ, **ನಿರಾಹಾರಃ**-ಆಹಾರವನ್ನು ತ್ಯಜಿಸಿದವನಾಗಿ, **ಸಮಾದಿತಃ**-ಆದರೂ

**ಸ ಸಾಹಿತೋ ನಿರಾಹಾರ ಸ್ಸ್ವಾತ್ರಾತೇಣ ಮಹಾಯಶಾಃ।**
**ದದರ್ಶ ದರ್ಶನೇ ರಾಜಾ ದೇವಂ ನಾರಾಯಣಂ ಪ್ರಭುಂ ॥**

**ಎನ್ರು ಸಪ್ತ ವ್ಯಾಧೋಪಾಖ್ಯಾನತ್ತಿಲೇ ಬ್ರಹ್ಮದತ್ತ ಚರಿತತ್ತಿಲುಮ್ ಶೊನ್ನ ಪ್ರಕಾರಙ್ಗಳೆಲ್ಲಾಮ್ ಪ್ರಪತ್ತಿಕ್ಕು ಅಙ್ಗಮನ್ರು.**

**ಇವ್ವಿರಣ್ಡಿಡಮುಮ್ ಸಪರಿಕರ ಪ್ರತಿಶಯನಾದಿ ಪ್ರಧಾನವಾಗೈಯಾ**

---

ಧ್ಯಾನಕ್ಕೆ ಬೇಕಾದ ಶಾನ್ತ ಚಿತ್ತನಾಗಿ, **ಪ್ರಭುಮ್**-ಸರ್ವಶಕ್ತನಾದ, **ದೇವಂನಾರಾಯಣಂ** - ಪರದೇವತೆಯಾದ ಶ್ರೀಮನ್ನಾರಾಯಣನನ್ನು, **ಅದರ್ಶನೇ**- ಧ್ಯಾನ ಮಾಡುವಾಗ ಹೊರಗಿನ ವಸ್ತುಗಳನ್ನು ನೋಡದೇ ಇರುವಲ್ಲಿ ಎಂದರೆ ಹಾಗೆ ಧ್ಯಾನ ದಲ್ಲಿ ಇರುವಾಗ, **ದದರ್ಶ**-ಪ್ರತ್ಯಕ್ಷಿಸಿದನು " **ಎನ್ರು** ಎಂಬುದಾಗಿ, **ಸಪ್ತವ್ಯಾಧೋಪಾಖ್ಯಾನ**-ಏಳು ವ್ಯಾಧರ ಉಪಾಖ್ಯಾನದಲ್ಲಿ, **ಬ್ರಹ್ಮದತ್ತ ಚರಿತತ್ತಿಲುಮ್**-ಬ್ರಹ್ಮದತ್ತರ ಚರಿತ್ರೆಯಲ್ಲೂ, **ಶೊನ್ನ**-ಹೇಳಲ್ಪಟ್ಟ, **ಪ್ರಕರಣಗಳೆಲ್ಲಾ ಪ್ರಪತ್ತಿಕ್ಕು ಅಙ್ಗಮನ್ರು**-ಪ್ರಪತ್ತಿಗೆ ಅಂಗವಲ್ಲವು, ಆದುದರಿಂದ **ಏಕ** ಶಬ್ದದಿಂದ ಪ್ರಪತ್ತಿಯ ಇತರ ಅಂಗ ನೈರಪೇಕ್ಷ್ಯೆಯು ಹೇಳಲ್ಪಟ್ಟಿತೆಂಬ ಭಾವವು ಹಾಗೆ ಶ್ರೀ ಪುರ್ಣ ಶೆಟ್ಟಿಲೂರು ನರಸಿಂಹಾಚಾರ್ಯರವರು **ಅದರ್ಶನೇ ದದರ್ಶ** ಎಂಬುದಾಗಿ ಪದಮಾಡಿ ಅರ್ಥ ಮಾಡಿರುತ್ತಾರೆ, **ಆದದರ್ಶನೇ ದದರ್ಶ** ಎಂದೂ ಪದಚ್ಛೇದ ಮಾಡ ಬಹುದು. **ಆದರ್ಶ ಆದರ್ಶನ** ಎರಡೂ ಕನ್ನಡಿಗೆ ಹೆಸರು ಕನ್ನಡಿಯಲ್ಲಿ ನೋಡುವ ಹಾಗೆ ನೋಡಿದನು ಎಂದರೆ ಸ್ವಾಮಿ ಕೃಪೆಯಿಂದ ಪ್ರತ್ಯಕ್ಷಿಸಿದನು ಎಂದು ಅರ್ಥ ವಾಗುತ್ತದೆ ಈ ಅರ್ಥವೂ ಸರಿಯಾಗಿ ತೋರುತ್ತದೆ

ಹಿಂದಿನ ಇತಿಹಾಸದಲ್ಲಿ ಶ್ರೀ ರಾಮಚಂದ್ರ ಪ್ರಭುವು ಆಚರಿಸಿದುದು ಪ್ರಪದನವೇ ಅಲ್ಲವೆಂದು ಹೇಳಿ, ಅಂಜಲಿ ಬಂಧನ, ಪ್ರಾಙ್ಮುಖನಾಗಿ ದರ್ಭಾಸನದಲ್ಲಿ ಮಲಗುವದು ನಿರಾಹಾರಾದಿಗಳು ಅಂಗವಲ್ಲವೆಂದು ಹೇಳಿದಿರಿ ಆದರೆ ಈ ಬ್ರಹ್ಮದತ್ತ ವೃತ್ತಾಂತದಲ್ಲಿ ರಾಜನು ಶರಣಾಗತಿಯನ್ನೇ ಮಾಡಿ, ನಿರಾಹಾರಾದಿಗಳನ್ನು ಆಚರಿಸಿದ್ದಾನಲ್ಲಾ ಎಂದರೆ ರಾಜನು ಮಾಡಿದ್ದು ಪ್ರಪದನವಾದರೂ ಇವುಗಳೆಲ್ಲಾ ಅದಕ್ಕೆ ಅಂಗವಲ್ಲವೆಂದು ಹೇಳುತ್ತಾರೆ ಅದರ ಸಮರ್ಥನೆಗಾಗಿ, ಅನೇಕರು ಮಾಡಿರುವ ಶರಣಾಗತಿಯಲ್ಲಿ ಇವು ಯಾವುವು ಹೇಳಿಲ್ಲವೆಂದು ಕೆಲವನ್ನು ಮುಂದೆ ಉದಾಹರಿಸುತ್ತಾರೆ:—

**ಇವ್ವಿರಣ್ಡುಮುಮ್**-ಶ್ರೀರಾಮಚಂದ್ರನೂ ಮತ್ತು ಬ್ರಹ್ಮದತ್ತನೂ ನಡೆಸಿದ ಮೇಲೆ ಹೇಳಿದ ಎರಡು ಪ್ರಕರಣಗಳಲ್ಲಿ ಹೇಳಿರುವ ಪ್ರಕ್ರಿಯೆಗಳೆಲ್ಲಾ **ಸಪರಿಕರ ಪ್ರತಿಶಯನಾದಿ**-ನಿರಾಹಾರ ಮೊದಲಾದ ಅಂಗಗಳಿಂದ ಕೂಡಿದ ಪ್ರಾಯೋಪವೇಶ ಮೊದಲಾದವೇ, **ಪ್ರಧಾನವಾಗೈಯಾಲೇ** - ಮುಖ್ಯವಾಗಿರುವದರಿಂದ, **ಅಙ್ಗ**-

**ಲೇ ಅಜ್ಞು ಅನ್ಧ ನಿಯಮಙ್ಗಳ್ ಶೊಲ್ಲ ಪ್ರಾಪ್ತಮ್. ಇಪ್ಪಡಿ ಸುಕೃತ ಪ್ರಣಾಮತ್ತಿಲುಮ್ ಕಂಡುಕೊಳ್ವದು. ಇಜ್ಞು ಪ್ರಪತ್ತ್ಯಧ್ಯಾಯಾದಿಗಳಿಲ್ ಚೊನ್ನವಾನುಕೂಲ್ಯ ಸಙ್ಕಲ್ಪಾದಿ ಪರಿಕರಙ್ಗಳೊಳಿಯ ವೇರೊರು**

ಆ ಸಂದರ್ಭಗಳಲ್ಲಿ, **ಅನ್ದನಿಯಮಙ್ಗಳ್**-ಅಲ್ಲಿ ಹೇಳಿರುವ ಆಚಮನ ದರ್ಭಾಸನ ದಲ್ಲಿ ಮಲಗುವದು, ನಿರಾಹಾರ ನಿಯಮಗಳನ್ನು, **ಶೊಲ್ಲಪ್ರಾಪ್ತಮ್**-ಹೇಳಬೇಕಾದುದು ಪ್ರಾಯೋಪವೇಶ ವ್ರತವಾದುದರಿಂದ ಆಸಂದರ್ಭಗಳಲ್ಲಿ ಆಪರಿಕರಗಳನ್ನು ಹೇಳುವದು ಸರಿ ಆದರೆ ಅವು ಪ್ರಪತ್ತ್ಯನುಷ್ಠಾನವಲ್ಲವು ಆದುದರಿಂದ ಪ್ರಪತ್ತಿಗೆ ಪಂಚ ಪರಿಕರಗಳು ವಿನಾ ಮಿಕ್ಕ ಯಾವ ಅಂಗಗಳು ಬೇಕಾಗಿಲ್ಲವೆಂಬ ತಾತ್ಪರ್ಯವು

**ಇಪ್ಪಡಿ**-ಹೀಗೆಯೇ, **ಸುಕೃತಪ್ರಣಾಮತ್ತಿಲುಮ್**-ಚನ್ನಾಗಿ ಅನುಷ್ಠಿಸಲ್ಪಟ್ಟ ಪ್ರಣಾಮದಲ್ಲೂ, **ಕಂಡುಕೊಳ್ವದು**-ತಿಳಿದುಕೊಳ್ಳುವದು **ಸುಕೃತ ಪ್ರಣಾಮವು ಯಾವುದೆಂದರೆ "ಬಾಹೂ ಭ್ರ್ಯಾಂತ್ರಿರಾಯಾಮ ಮಂಜಲೀಕರಣಂ ತ್ರಿರಾಜಾನು ಪ್ರಸಾರಣಂ, ಲಲಾಟ ನಾಸಾ ಕಪೋಲಾನಾಂ ತ್ರಿರ್ಭೂಸ್ಪರ್ಶನಮ್ ಯಥಾ ಭವತಿ ತಥಾ ಸಾಷ್ಟಾಂಗ ಪ್ರಣಾಮನ್ಯದ್ವಾದಶಾವೃತ್ತಿಃ"** ಎಂದರೆ ಎರಡು ಬಾಹುಗಳನ್ನು ಮುಂದಕ್ಕೆ ಮೂರುಸಲ ಚಾಚಿ, ಮೂರು ಸಲ ಅಂಜಲಿಯನ್ನು ಮಾಡಿ, ಮೂರುಸಲ ಮೊಣಕಾಲನ್ನು ಹಿಂದಕ್ಕೆ ಚಾಚಿ ಹಣೆ, ಮೂಗು, ಕಪೋಲ ಇವುಗಳು ಮೂರು ಸಲ ಭೂಮಿಯನ್ನು ಸ್ಪರ್ಶಿಸುವ ಹಾಗೆ ಮಾಡಿ, ಹಾಗೆ ಮಾಡಿ, ಹೀಗೆ ಸಾಷ್ಟಾಂಗ ನಮಸ್ಕಾರವನ್ನು ೧೨ ಸಲ ಮಾಡುವದು, ಸುಕೃತ ಪ್ರಣಾಮವು- ಚೆನ್ನಾಗಿ ಮಾಡಲ್ಪಟ್ಟ ಪ್ರಣಾಮವು ಕೆಲವರು ಶರಣಾಗತಿಯನ್ನು ಆಚಾರ್ಯರ ಮೂಲಕ ಅನುಷ್ಠಿಸುವಾಗ ಆಚಾರ್ಯರು ಈ ಶಿಷ್ಯನಿಗಾಗಿ ಪ್ರಾರ್ಥಿಸುವ ಕಾಲದಲ್ಲಿ ಶಿಷ್ಯನು ಸುಮ್ಮನೆ ಏಕೆ ಇರತಕ್ಕದ್ದು ಎಂದು ಈ ಸುಕೃತ ಪ್ರಣಾಮವನ್ನು ಕೃತಜ್ಞತಾ ಭಾವದಿಂದ ಅನುಷ್ಠಿಸುವರು ಇದು ಪ್ರಪತ್ತಿಗೆ ಬೇಕಾದ ಅಂಗರಲ್ಲವು ಏಕೆಂದರೆ ಅನೇಕರು ಪ್ರಪತ್ತಿಯನ್ನು ಅನುಷ್ಠಿಸುವಾಗ ಈ ಸುಕೃತ ಪ್ರಣಾಮವನ್ನು ಮಾಡಿಲ್ಲವು ಆದುದರಿಂದ ಈ ಸುಕೃತ ಪ್ರಣಾಮವೂ ಬೇಕಿಲ್ಲವೆಂಬ ತಾತ್ಪರ್ಯವು ಹೀಗೆ ಪ್ರಣಾಮವನ್ನು ಚನ್ನಾಗಿ ಮಾಡುವವರ ಮಾಹಾತ್ಮ್ಯೆಯು ಅನೇಕ ಕಡೆ ಕೊಂಡಾಡಲ್ಪಟ್ಟಿದೆ, **"ಏಕೋಽಪಿ ಕೃಷ್ಣೇ ಸುಕೃತಃ ಪ್ರಣಾಮೋದಶಾಶ್ವಮೇಧಾಂ ವಭೃತೇನ ತುಲ್ಯಂ । ದಶಾಶ್ವಮೇಧೀ ಪುನರೇತಿ ಜನ್ಮ ಕೃಷ್ಣ ಪ್ರಣಾಮೀನ ಪುನರ್ಭವಾಯ"** ಕೃಷ್ಣನಲ್ಲಿ ಒಂದು ಸುಕೃತ ಪ್ರಣಾಮ ಮಾಡಿದರೆ ದಶಾಶ್ವಮೇಧ ಮಾಡಿ ಅವಭೃತ ಸ್ನಾನಗಳಿಗೆ ಸಮಾನವು ಎಂದರೂ ಅದಕ್ಕೂ ಹೆಚ್ಚು ಮಹಿಮೆಯುಳ್ಳದು ಸುಕೃತ ಪ್ರಣಾಮ ವೆನ್ನುತ್ತಾರೆ ಅಶ್ವಮೇಧವು ಉಪಾಯಕ್ಕೆ ಸಾಧನವೇರಿನಾ ಉಪಾಯವಲ್ಲದುದರಿಂದ ಅನುಷ್ಠಿಸಿದವನು ಪುನರ್ಜನ್ಮ

**ನಿಯಮಙ್ಗಳ್ ವೇಣ್ಡಾ. ಆಕಿಂಚನ್ಯೈಕ ಧನ್ಯರಾದ ದ್ರೌಪದಿ, ದಮಯಂತೀ,**

ವನ್ನು ಹೊಂದಬಹುದು ಸುಕೃತಪ್ರಣಾಮಿಯು ಕೃಷ್ಣಾನುಗ್ರಹದಿಂದ ಪ್ರಪತ್ತನುಷ್ಠಿಸುವವರ ಮೂಲಕ ಪುನರ್ಜನ್ಮವಿಲ್ಲದೆ ಮುಕ್ತಿ ಹೊಂದುವವನು ಎಂದು ಹೇಳಲ್ಪಟ್ಟಿದೆ.

**ಇಜ್ಙು** - ಈ ಸಂದರ್ಭದಲ್ಲಿ, **ಪ್ರಪತ್ತ್ಯಧ್ಯಾಯಾದಿಗಳಿಲ್ ಚೊನ್ನ**-ಶಾಸ್ತ್ರಗಳಲ್ಲಿ ಎಲ್ಲೆಲ್ಲಿ ಪ್ರಪದನವು ಉಪಾಯವೆಂದು ಹೇಳಿರುತ್ತದೋ ಅಲ್ಲೆಲ್ಲಾ ವಿಸ್ತರಿಸುವ, **ಆದಿ** ಶಬ್ದದಿಂದ ಉಪಾಯಘಟ ಹೇಳಿರುವ ಶ್ರುತಿವಾಕ್ಯಗಳು ತಿಳಿಸಲ್ಪಟ್ಟವು, ಅವುಗಳು ಯಾವುವು ಎಂಬುದಕ್ಕೆ ದ್ವಯಾಧಿಕಾರ ೨೪೭-೩ ಪುಟಗಳನ್ನು ಪರಾಂಬರಿಸಿ **ಆನುಕೂಲ್ಯ ಸಙ್ಕಲ್ಪಾದಿಗಳೊಳಿಯು** ಆನುಕೂಲ್ಯಸಙ್ಕಲ್ಪ, ಪ್ರಾತಿಕೂಲ್ಯ ವರ್ಜನವೇ ಮೊದಲಾದ ೫ ಪರಿಕರಗಳು ಒಂದು ಅಂಗಿ, ಇವುಗಳಲ್ಲದೆ, **ವೇರೊರು**-ಬೇರೆಯೊಂದು, **ನಿಯಮಙ್ಗಳ್**-ಆಚಮನ, ದರ್ಭಾಸನ ನಿರಾಹಾರ, ಸುಕೃತ ಪ್ರಣಾಮ ಮೊದಲಾದ ನಿಯಮಗಳು, **ವೇಣ್ಡಾ**-ಬೇಕಾಗಿಲ್ಲವು ಎಂದು ಸಿದ್ಧಾನ್ತಮಾಡಿದರು. ಅದಕ್ಕೆ ದೃಷ್ಟಾಂತವಾಗಿ ೧೫ ಸಂದರ್ಭದಲ್ಲ ಈ ನಿಯಮಗಳು ಯಾವವೂ ನಡೆಯಲಿಲ್ಲವೆಂದು ಆ ಶರಣಾಗತರ ಹೆಸರುಗಳನ್ನು ತಿಳಿಸುತ್ತಾರೆ:-

**ದ್ರೌಪದಿ** - ಆಕೆಯ ಪತಿಗಳು ಆಕೆಯನ್ನು ದ್ಯೂತದಲ್ಲಿ ಪಣವಾಗಿ ಇಟ್ಟು ಸೋತು, ಆಕೆಯು **ರಜಸ್ವಲೆಯಾಗಿರುವ ಕಾಲದಲ್ಲಿ** ದುಶ್ಶಾಸನನು ಬಂದು ಆಕೆಯ ಕೂದಲನ್ನು ಹಿಡಿದು ಎಳೆದುಕೊಂಡು ಬಂದು ನಿಲ್ಲಿಸಿ ಶೀರೆಯನ್ನು ಸೆಳೆದು ಮಾನಭಂಗ ಮಾಡಬೇಕೆಂದು ಯತ್ನಿಸಿದಾಗ, ನಿನಗೇನಾದರೂ ಕಷ್ಟ ಒದಗಿದರೆ ಆಗ ಶರಣಾಗತಿಯನ್ನು ಶ್ರೀ ಕೃಷ್ಣನಲ್ಲಿ ಅನುಷ್ಠಿಸು ಎಂದು ವ್ಯಾಸರು ಹೇಳಿಕೊಟ್ಟಿದ್ದ ಉಪದೇಶವನ್ನು ಜ್ಞಾಪಿಸಿಕೊಂಡು ಶರಣಾಗತಿಯನ್ನು ಅನುಷ್ಠಿಸುತ್ತಾಳೆ. ರಜಸ್ವಲೆಯಾಗಿರುವಾಗ, ಯಾವ ನಿಯಮಗಳೂ ಸಾಧ್ಯವಿಲ್ಲವಷ್ಟೇ ಒಡನೆ ಶ್ರೀ ಕೃಷ್ಣಾನುಗ್ರಹದಿಂದ ಅವಮಾನದಿಂದ ಕಾಪಾಡಲ್ಪಟ್ಟಳು.

**ದಮಯಂತೀ**-ಸ್ವಯಂವರ ಕಾಲದಲ್ಲಿ ದೇವತೆಗಳನ್ನು ಸರಿಯಾದ ವರನಾದ ನಳನು ದೊರೆಯುವದಕ್ಕಾಗಿ ಶರಣಾಗತಿಯನ್ನು ಅನುಷ್ಠಿಸಿದಳೆಂದು ಹೇಳಲ್ಪಟ್ಟಿದೆ. ನಳೋಪಾಖ್ಯಾನಾಧ್ಯಾಯದಲ್ಲಿ ಹೇಳಿರುವದೇನೆಂದು ನಾರದ ವಾಕ್ಯದಿಂದ ಇಂದ್ರಾದಿ ದಿಕ್ಪಾಲಕರೆಲ್ಲರೂ ದಮಯನ್ತಿಯ ರೂಪಗುಣಗಳಿಂದ ಮೋಹಿತರಾಗಿ ಸ್ವಯಂವರ ಸಭೆಯಲ್ಲಿ ನಳ ರೂಪವನ್ನೇ ಧರಿಸಿ ಕುಳಿತಿರುತ್ತಾರೆ ಆಗ ದಮಯಂತಿಯು ವಿಷಾದದಿಂದ ದೇವತೆಗಳಲ್ಲೇ ಶರಣಾಗತಿಯನ್ನು ಮಾಡುತ್ತಾಳೆ **"ಶರಣಂ ಪ್ರತಿ ದೇವಾನಾಂ ಪ್ರಾಪ್ತಕಾಲ ಮಮನ್ಯತ। ವಾಚಾಚ ಮನಸಾಚೈವ ನಮಸ್ಕಾರಂ ಪ್ರಯೋಜಸಾ। ದೇವೇಭ್ಯಃ ಪ್ರಾಂಜಲಿ ರ್ಭೂತ್ವಾ ವೇಪಮಾನೇದ ಮಬ್ರ**

ಭಾರತವನ. ೫೪-೧೫, ೧೭

**ರಾಕ್ಷಸೀ, ವಿಭೀಷಣ, ಕ್ಷತ್ರಬಂಧು, ಮುಚುಕುಂದ, ಗಜೇಂದ್ರ, ಪಾಂಡವ,**

**ವೀತ್। ಹಂಸಾನಾಂವಚನಂ ಶ್ರುತ್ವಾಯಥಾ ಮೇನೈಷಧೋ ವೃತಃ। ಪತಿತ್ವೇ ತೇನ ಸತ್ಯೇನ ದೇವಾಸ್ತಂ ಪ್ರದಿಶನ್ತುಮೇ"** ಇವರ ಅರ್ಥವೇನೆಂದರೆ? ಹಂಸಗಳು ಬಂದು ನಳನ ಸದ್ಗುಣ ಕಥನಮಾಡಿದುದರಿಂದ ಆತನನ್ನೇ ವರಿಸಿ ಮದುವೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿರುವೆನು; ಓ ದೇವತೆಗಳಿರಾ ನಿಮ್ಮನ್ನು ವಾಕ್ಕಿನಿಂದಲೂ ಮನಸ್ಸಿನಿಂದಲೂ ನಮಸ್ಕಾರ ಮಾಡಿ ಕೇಳಿಕೊಳ್ಳುತ್ತೇನೆ, ನನ್ನ ಪತಿ ನಳನು ಯಾರೆಂಬುದನ್ನು ತೋರಿಸಿರಿ ಎಂದು ನಡುಗುತ್ತಾ ದೈನ್ಯದಿಂದ ಬೇಡಿದಳು" ಎಂದಿದೆ, ಸ್ವಯಂವರವಾದುದರಿಂದ ಇನ್ನು ಯಾವ ಪರಿಕರಗಳೂ ಶರಣಾಗತಿಗೆ ಹೇಳಿಲ್ಲವೆಂಬ ಭಾವವು

**ರಾಕ್ಷಸೀ**-ತ್ರಿಜಟೆಯು, ವಿಭೀಷನ ಮಗಳು ಆಕೆಯು ಮಲಗಿದ್ದು ಎದ್ದು ಸೀತೆಗೆ ಭರ್ತ್ಸನಾದಿ ತೊಂದರೆ ಕೊಟ್ಟ ರಾಕ್ಷಸ ಸ್ತ್ರೀಯರನ್ನು ಕುರಿತು ಸ್ವಪ್ನಾಭಿಪ್ರಾಯವನ್ನು ಸೀತಾ ಶರಣಾಗತಿಯ ಮೂಲಕ ತಿಳಿಸುವವರ ಸಂದರ್ಭವು ರಾಕ್ಷಸರಿಗೆ ವಿನಾಶವನ್ನೂ ರಾಘವನಿಗೆ ಜಯವನ್ನೂ ಸ್ವಪ್ನದಲ್ಲಿ ಕಂಡಿರುವದರಿಂದ **"ಅಭಿಯಾಚಾಮ ವೈದೇಹೀಂ** ಎಂದೂ, **ಪ್ರಣಿಪಾತ ಪ್ರಸನ್ನಾ ಹಿಮೈಥಿಲೀ ಜನಕಾತ್ಮಜ್"** ಎಂದು ಇರುವದರಿಂದ ಪ್ರಣಿಪಾತವೂ ಯಾಚ್ಞಾವೂ ಎರಡೂ ಶರಣಾಗತಿ ಬೋಧಕವಾದುದರಿಂದ ಶರಣಾಗತಿಯನ್ನು ತ್ರಿಜಟೆಯು ಅನುಷ್ಠಿಸಿದಳು ಎಂದಿಷ್ಟೇ ಹೇಳಿರುವದರಿಂದ, ನಿದ್ರೆಯಿಂದ ಎಚ್ಚೆತ್ತು ಒಡನೇ ಸ್ವಪ್ನವನ್ನು ತಿಳಿಸಿದಳೆಂದೂ ಹೇಳಿರುವದರಿಂದ ಇನ್ನು ಯಾವ ಪರಿಕರಗಳು ನಡೆದವೆಂದು ಊಹಿಸಲು ಸಾಧ್ಯವಿಲ್ಲವು

**ವಿಭೀಷಣ**-ಈತನು ತನ್ನ ಅಣ್ಣನಿಗೆ ಸಭೆಯಲ್ಲಿ ಹಿತೋಪದೇಶವನ್ನು ಮಾಡಿ, ಇತರರ ಪತ್ನಿಯನ್ನು ನೀನು ತಂದಿರುವದು ಸರಿಯಲ್ಲವು ಆದುದರಿಂದ **ಪ್ರದೀಯತಾಂ ದಾಶರಥಾಯ ಮೈಥಿಲೀಂ** ಸೀತೆಯನ್ನು ಶ್ರೀ ರಾಮನಿಗೆ ಸಮರ್ಪಿಸಿಬಿಟ್ಟು ಸುಖವಾಗಿ ಬಾಳೋಣ ಎಂದು ತುಂಬಾ ದೂರ ಬೋಧಿಸಿದರೂ ಕೇಳದೆ, **"ವಿದ್ಯತೇ ಜ್ಞಾತಿತೋಭಯಂ"** ಎಂದು ಹೇಳಿ, **ತ್ವಾಂತು ಧಿಕ್ಕುಲಪಾಂಸನಂ** ಎಂದು ರಾವಣನಿಂದ ನಿಂದಿತನಾಗಿ ಒಡನೆಯೇ **"ಅಂತರಿಕ್ಷಗತನಾಗಿ"** ರಾಮಗೋಷ್ಠಿಯನ್ನು ಸೇರಿದುದರಿಂದ ಇತರ ಪರಿಕರಗಳು ನಡೆದವು ಎಂದು ಊಹಿಸಲು ಸಾಧ್ಯವಿಲ್ಲವು.

**ಕ್ಷತ್ರಬಂಧು-** ಈ ವೃತ್ತಾಂತಕ್ಕೆ ಇದೇ ಗ್ರಂಥದ           ನೆಯ ಪುಟವನ್ನು ನೋಡಿ ನಾರದಸಮಾಗಮ ಆದ ಒಡನೆಯೇ ಶರಣಾಗತಿಯನ್ನು ಅನುಷ್ಠಿಸಿರುತ್ತಾನೆ ಆದರೆ ಸಾರ ಪ್ರಕಾಶಿಕಾವ್ಯಾಖ್ಯಾತೃವು ಕ್ಷತ್ರಬಂಧುವು ಅರ್ಧರಾತ್ರಿಯಲ್ಲಿ ಶ್ರೀಕೃಷ್ಣನಲ್ಲಿಗೆ ಬಂದು ಶರಣಾಗತರಾದರು ಎಂದು ಬೇರೆ ಸಂದರ್ಭವನ್ನು ತಿಳಿಸಿರುತ್ತಾರೆ.

**ಮುಚುಕುಂದ**- ಕಾಲಯುವನನೆಂಬ ರಾಕ್ಷಸ ಸಂಹಾರಕ್ಕಾಗಿ, ಶ್ರೀ ಕೃಷ್ಣನು ತಾನು ಸೋತು ಓಡಿ ಹೋಗುವ ಹಾಗೆ ನಟಿಸಿ, ಮುಚುಕುಂದರು ಮಲಗಿರುವ ಸ್ಥಳಕ್ಕೆ ಬಂದು ಮಾಯವಾದನು ಅಸುರನು ಶ್ರೀ ಕೃಷ್ಣನು ಸೋತು ಆಯಾಸ ದಿಂದ ಮಲಗಿದ್ದಾನೆಂದು ಭಾವಿಸಿ ಕಾಲಿನಿಂದ ಕಿರಿಯುತ್ತಾನೆ ಮುಚುಕುಂದರು ಕಣ್ಣು ಬಿಟ್ಟು ನೋಡಿದ ಒಡನೆಯೇ ಅಸುರನು ಭಸ್ಮವಾಗುತ್ತಾನೆ ಅನಂತರ ಮುಚುಕುಂದರು ಶ್ರೀ ಕೃಷ್ಣನಲ್ಲಿ ಶರಣಾಗತಿಯನ್ನು ಅನುಷ್ಠಿಸುತ್ತಾರಾದುದರಿಂದ ಇತರ ಪರಿಕರಗಳಿಗೆ ಯಾವುದಕ್ಕೂ ಅವಕಾಶವಿಲ್ಲ

**ಗಜೇಂದ್ರ**-ಮೊಸಳೆಯಿಂದ ಗೃಹೀತನಾಗಿ ಅದರಿಂದ ಬಿಡಿಸಿಕೊಳ್ಳಲು ಸಾಧ್ಯ ವಿಲ್ಲದೆ ಇರುವ ದುಸ್ಥಿತಿಯಲ್ಲಿ ಶರಣಾಗತಿಯನ್ನು ಅನುಷ್ಠಿಸುವದರಿಂದ ಇತರ ಪರಿ ಕರಗಳ ಅನುಷ್ಠಾನವಿಲ್ಲವೆಂಬುದು ವ್ಯಕ್ತವು

**ಪಾಂಡವ - ಅರ್ಜುನನು,** ಯುದ್ಧರಂಗದಲ್ಲಿ ಎರಡು ಸಲ ಶ್ರೀ ಕೃಷ್ಣ ಶರಣಾಗತಿಯನ್ನು ಮಾಡಿರುವದರಿಂದ ಇತರ ಪರಿಕರಗಳು ಯಾವುವು ನಡೆಯಲಿಲ್ಲ ವೆಂಬ ಭಾವವು ಶ್ರೀ ಕೃಷ್ಣನು ಧರ್ಮಸಂಸ್ಥಾಪನೆಯನ್ನು ನಡೆಸುವದಕ್ಕಾಗಿ ಅರ್ಜುನನಿಗೆ ವಿಷಾದವನ್ನುಂಟು ಮಾಡುತ್ತಾನೆ ಏಕೆಂದರೆ ಭೀಷ್ಮ ದ್ರೋಣಾದಿ ಗುರುಗಳ ಹನನದ ಪ್ರೇರಣೆಯು ಹೇಗೆ ' ಎಂದು ಅರ್ಜುನನು ಕೇಳುತ್ತಾನೆ ಸರಿ ಯಾದ ಜ್ಞಾನವನ್ನುಪದೇಶಿಸು ಎಂದು **"ಶಾಧಿಮಾಂ ತ್ವಾಂಪ್ರಪನ್ನಮ್"** ಎಂದು ಶರಣಾಗತನಾಗಿ ಬೇಡುತ್ತಾನೆ ಆಗ ದೇಹಾತ್ಮಭ್ರಮ, ಸ್ವತಂತ್ರಾತ್ಮಭ್ರಮ ಜೀವೇ ಶೈಕ್ಯಭ್ರಮಗಳನ್ನು ಹೋಗಲಾಡಿಸಿ ಸಮುಪದೇಶವನ್ನು ಮಾಡುತ್ತಾನೆ

ಎರಡನೆಯ ಸಲ ಶ್ರೀ ಕೃಷ್ಣನು ವಿಶ್ವರೂಪವನ್ನು ತೋರಿಸಿದನಂತರ ತುಂಬಾ ಭೀತ ನಾಗಿ ಹೇಳುತ್ತಾನೆಂದರೆ ಈ ರೂಪವನ್ನು ಮರೆಸಿ **"ತದೇವಮೇ ದರ್ಶಯ ದೇವರೂಪಂ ಪ್ರಸೀದ ದೇವೇಶ ಜಗನ್ನಿವಾಸ"** ಎಂದು ಶರಣಾಗತಿಯನ್ನು ಅನುಷ್ಠಿಸಿ ಪರವಾಸುದೇವ ರೂಪವಾದ ವ್ಯಾಪ್ಯ ರೂಪವನ್ನು ತೋರು ಎಂದು ಪ್ರಾರ್ಥಿ ಸುತ್ತಾನೆ. ಇದನ್ನೇ **"ಪರಂ ರೂಪಂ ದರ್ಶಯಾಮಾಸ ಭೂಯಃ"** ಎಂಬ ಸಂಜಯ ವಾಕ್ಯದಿಂದ ವ್ಯಕ್ತ ಪಡಿಸುತ್ತಾರೆ.

ಸಾರ ಪ್ರಕಾಶಿಯವರು **ಪಾಂಡವ** ಎಂದು ಇರುವದನ್ನು ಪಾಂಡವಾಃ ಎಂದು ಮಾಡಿ' ಮಾರ್ಕಂಡೇಯರು ಕಮಲ ನಯನನ ಕಣ್ಣಿನ ಸೊಬಗನ್ನು ನೋಡಿ, ತಮಗೆ ಪ್ರಳಯದಲ್ಲಿ ತೋರಿದ ಕಣ್ಣಿನಲಾವಣ್ಯಕ್ಕೆ ಸರಿಯಾಗಿರುವದು ಶ್ರೀಕೃಷ್ಣನು ಪರಮ ಪುರುಷನ ಅವತಾರವೆಂದುಹೇಳಿದುದರಿಂದ ಪಾಂಡವರೂ ದ್ರೌಪದಿಯೂ **ಒಡನೆಯೇ** ಶರಣಾಗತರಾದರೆಂದು'**ನಮುಶ್ಚಕ್ರುರ್ಜನಾರ್ದನಂ**'ಎಂದು ಭಾರತದಲ್ಲಿರುವದರಿಂದ ಬೇರೇ ಪರಿಕರಾನುಷ್ಠಾನಕ್ಕೆ ಅವಕಾಶವಿಲ್ಲವೆಂದು ವ್ಯಾಖ್ಯಾತೃವು ಬರೆದಿರುತ್ತಾರೆ.

**ದೇವ, ಸುಮುಖ, ತ್ರಿಶಂಕು, ಶುನಶ್ಶೇಪ, ಕಿರಾತ, ಕಾಕ, ಕಪೋತಾದಿಗಳಿನ್ ಶರಣಾಗತರಾಗಿರಪ್ಪೋದೆ ಅಪ್ಪ್ರೋಧೆ ಆನುಕೂಲ್ಯಾದಿಗಳ್ಳೈಯೊಳಿಯು ವೇರೊರು ಇತಿಕರ್ತವ್ಯತೈಯ್ಯು ಶೊಲ್ಲಕಂಡಿಲೋವುಮ್**

**ದೇವ**.– ದೇವತೆಗಳು ಯಜ್ಞ ಭಾಗಗಳ ಶರಣಾರ್ಥನಾಗಿ ಬಂದವರು ಯಾವಾಗ ಭಾಗಗಳೆಲ್ಲಾ ವಿಷ್ಣುವನ್ನೇ ಸೇರಿದುವನ್ನು ಕಂಡರೋ, ಆಗ ಒಡನೆಯೇ ವಿಷ್ಣುವನ್ನು ಶರಣಹೊಂದಿದರು.

**ಸುಮುಖನು:**–ಈತನು ಸರ್ಪನು. ಗರುಡನು ಅಟ್ಟಿಸಿಕೊಂಡು ಬಂದಾಗ ಒಡನೆ ಉಪೇಂದ್ರನಲ್ಲಿ ಶರಣಾಗತಿಯು ಅನುಷ್ಠಿಸಲ್ಪಟ್ಟಿತು.

**ತ್ರಿಶಂಕವು.**– ಸಶರೀರನಾಗಿ ಸ್ವರ್ಗಾರೋಹಣ ಮಾಡಬೇಕೆಂಬ ಅಭಿಲಾಷೆಯಿಂದ ವಿಶ್ವಾಮಿತ್ರರ ಶರಣಹೊಂದಿದನು. **ಶುನಶೇಪನು** ತನ್ನನ್ನು ನರಪಶುವಾಗಿ ಕೊಂಡುಹೋದ ಸಮಯದಲ್ಲಿ ವಿಶ್ವಾಮಿತ್ರರ ಶರಣಹೊಂದಿದನು.

**ಕಿರಾತನು**– ಬೇಡನ. ಕಪೋತ ಶರಣಾಗತಿಯನ್ನು ನಡಾಡಿದನ. ಈ ವಿಷಯವು ಶ್ರೀಮದ್ರಾಮಾಯಣ ಯುದ್ಧಕಾಂಡದಲ್ಲಿ ವಿಭೀಷಣ ಶರಣಾಗತಿ ಪ್ರಶಂಸೆಯಲ್ಲಿ ಶ್ರೀರಾಮಪ್ರಭುವಿನಿಂದ ಉಪಪಾದಿತವು.

**ಕಾಕನು**– ಸೀತೆಯಲ್ಲಿ ಮಾಡಿದ ಅಪರಾಧಕ್ಕಾಗಿ ಶ್ರೀರಾಮನ ಬ್ರಹ್ಮಾಸ್ತ್ರ ಭಯದಿಂದ ರಕ್ಷಿಸುವರು ಯಾರೂಯಿಲ್ಲದೆ, ಶ್ರೀರಾಮನನ್ನೇ ಶರಣಹೊಂದುತ್ತಾನೆ. ಇದು ಸುಂದರಕಾಂಡದಲ್ಲಿನ ಇತಿಹಾಸವು.

ಹೀಗೆ ಇವರೆಲ್ಲಾ ಶರಣಾಗತರಾದ ಪ್ರಕರಣದಲ್ಲಿ ಶರಣಾಗತಿಗೆ ಬೇಕಾದ ಆನುಕೂಲ್ಯಾದಿ ಪಂಚಪರಿಕರಗಳಲ್ಲದೆ ಇನ್ನೂ ಯಾವ ವ್ರತಾದಿಗಳನ್ನೂ ಅನುಷ್ಠಿಸಲು ಸಮಯವೇ ಇಲ್ಲದೆ ಕ್ಷಣಕಾಲದಲ್ಲಿ ಶರಣಾಗತಿಯು ನಡೆದುದರಿಂದ ಇನ್ನು ಯಾವುದರ ಅಪೇಕ್ಷೆಯೂ ಈ ಪ್ರಪತ್ತಿಗೆ ಇಲ್ಲವು. ಇನ್ನು ಯಾವ ಪ್ರವೃತ್ತಿಯೂ ಬೇಕಿಲ್ಲದೇ ಫಲಸಿದ್ಧಿಸಿತು ಎಂದು ಮುಂದೆ ಹೇಳುತ್ತಾರೆ.–

ಇವರುಗಳು **ಶರಣಾಗತರಾಗಿರಪ್ಪೋದು**- ಶರಣಾಗತರಾಗುವಾಗ **ಅಪ್ಪೋದೆ**-- ಆ ಸಮಯದಲ್ಲೇ, **ಆನುಕೂಲ್ಯಾದಿಗಳೊಳಿಯು**- ಆನುಕೂಲ್ಯ ಸಂಕಲ್ಪವೇ ಮೊದಲಾದ ಪಂಚಪರಿಕರಗಳಲ್ಲದೆ, **ವೇರೋರು ಇತಿಕರ್ತವ್ಯತೇ**- ಬೇರೆ ಇನ್ನು ಮಾಡಬೇಕಾದ ಆವಶ್ಯಕತೆ ಇರುವ ಪ್ರವೃತ್ತಿಯನ್ನು, **ಶೊಲ್ಲ ಕಂಡಿಲೋವುಮ್**- ಯಾವ ಆಚಾರ್ಯರೂ ಉಪದೇಶಿಸಿದುದನ್ನು ಕಂಡಿಲ್ಲವು

ಒಂದು ಕ್ಷಣಕಾಲದಲ್ಲಿ ಶರಣಾಗತಿಯನ್ನು ಅನುಷ್ಠಿಸುವಾಗ ಇನ್ನು ಯಾವುದನ್ನೂ ಅನುಷ್ಠಿಸುವುದಕ್ಕೆ ಕಾಲವೇ ಸಾಲದೇ ಇರುವಾಗ ಯಾವುದನ್ನೂ ಅವರುಗಳು ಅನುಷ್ಠಿಸಲಿಲ್ಲವೆಂಬ ಭಾವವು.

ಇವರುಗಳು ಇನ್ನು ಏನನ್ನೂ ಅನುಷ್ಠಿಸಲಿಲ್ಲವೆನ್ನುವುದಕ್ಕೆ ಕಾರಣವನ್ನು

**ಕ್ಷಣಕಾಲ ಸಾಧ್ಯಮಾಯ್, ನಿರಪೇಕ್ಷಮಾನ ಪ್ರಪತ್ತಿ ಮಾತ್ರತ್ತಾಲೇ ಕಡುಗ ಅಪ್ಪೋಶರಣಾಗತರ್ಕ್ಕು ಅಪ್ಪೋ ಅಪೇಕ್ಷಿತಸಿದ್ಧಿಯುಮ್ ಕಣ್ಡೋಮ್.**

**ಇಪ್ಪಡಿ ಮೋಕ್ಷಾರ್ಥ ಪ್ರಪತ್ತಿಯಿಲುಮ್ ಇವ್ವ ಕೋಲಿನ ಫಲಸಿದ್ಧಿಕ್ಕು ಕುಕ್ಕರೈಯಿಲ್ಲೈ.**

---

ತಿಳಿಸುತ್ತಾರೆ– **ಕ್ಷಣಕಾಲ ಸಾಧ್ಯಮಾಯ್**- ಅತ್ಯಲ್ಪಕಾಲದಲ್ಲೇ ಸಿದ್ಧಿಸುವಂತಹ ಆದುದರಿಂದ ಇನ್ನೂ ಏನನ್ನೂ ಅನುಷ್ಠಿಸಲು ಕಾಲ ಸಾಲದೆಂಬ ತಾತ್ಪರ್ಯವು, **ನಿರಪೇಕ್ಷಮಾನ**— ಸಂಚಪರಿಕರಗಳಿಲ್ಲದೆ ಇನ್ನು ಯಾವುದೂ ಬೇಕಾಗದಿರುವ, **ಪ್ರಪತ್ತಿಮಾತ್ರದಿಂದ, ಕಡುಗ,** —ಶೀಘ್ರವಾಗಿ, **ಅಪ್ಪೋ ಶರಣಾಗತರ್ಕ್ಕು**— ಆಯಾಯಾ ಶರಣಾಗತರಿಗೆ, **ಅಪ್ಪೋ ಅಪೇಕ್ಷಿತಸಿದ್ಧಿಯುಮ್**— ಅವರವರುಗಳು ಅಪೇಕ್ಷಿಸಿದ ಫಲವನ್ನು, **ಕಂಡೋಮ್** —ಶಾಸ್ತ್ರದಲ್ಲಿ ಹೇಳಿರುವುದನ್ನು ತಿಳಿದಿರುವೆವು. ಹೇಗೆಂದರೆ **ದ್ರೌಪದಿಯು** ಸಭೆಯಲ್ಲಿ ಮಾನಭಂಗವಾಗದಿರಲು ಕಾಪಾಡು ಎಂದು "ಶಂಖಚಕ್ರಗದಾಪಾಣೇ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ। ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ॥ ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ। ಕೌರವಾರ್ಣವಮಗ್ನಾಂ ಮಾಮುದ್ಧರಸ್ವ ಜನಾರ್ದನ॥ ಇನಾಮುವನ್ನಾಂ ಸಂಪ್ರಾಪ್ತಾನುನಾಥಾಂ ಕಿಮುಪೇಕ್ಷಸೇ। ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇವ ಸೀದತೀಮ್" ಎಂದು ಕೂಗಿಕೊಂಡುದರಿಂದ ಅಚ್ಯುತನು ವಸ್ತ್ರರಾಶಿಯನ್ನು ಕೊಟ್ಟು ಮಾನಸಂರಕ್ಷಣೆ ಮಾಡಿದನು. ಹಾಗೆಯೇ ಇತರ ಶರಣಾಗತರ ವಿಷಯದಲ್ಲೂ ಅವರವರ ಮನೋರಥಕ್ಕನುಗುಣವಾದ ಫಲವು ಸಿದ್ಧಿಸಿರುತ್ತವೆ ಎಂಬುದು ಪುರಾಣೇತಿಹಾಸಗಳಲ್ಲಿ ಪ್ರಸಿದ್ಧವು.

ಆಗ ದೃಷ್ಟಾಂತಿಸಿ ಹೇಳಿದ ಶರಣಾಗತಿಗಳಲ್ಲಿ ಅನೇಕವು ಮೋಕ್ಷೇತರ ಫಲಗಳಿಕ್ಕಾಗಿ ಆದುದರಿಂದ, ಇತರ ಪ್ರವೃತ್ತಿಗಳು ಯಾವುವೂ ಇಲ್ಲದಿರಬಹುದು, ಆದರೆ ಮೋಕ್ಷಾರ್ಥಪ್ರಪತ್ತಿಯಲ್ಲಿ ಏನಾದರೂ ಉಂಟೋ ಎಂಬ ಶಙ್ಕಾನಿವಾರಣಕ್ಕಾಗಿ ಅಂತಹ ಶರಣಾಗತಿಗೂ ಕೂಡ ಇನ್ನು ಯಾವುದರ ಅಪೇಕ್ಷೆಯೂ ಇಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಆದರೆ ಹಿಂದೆ ಉದಾಹರಿಸುವರಲ್ಲಿ ಕೆಲವರು ಮೋಕ್ಷಕ್ಕಾಗಿಯೂ ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ ಯಾರೆಂದರೆ ವಿಭೀಷಣ, ಕ್ಷತ್ರಬಂಧು, ಮುಚುಕುಂದರು ವಿಭೀಷಣನು ಮೋಕ್ಷಕ್ಕಾಗಿ ಎಂದು ಶ್ರೀನಿಗಮಾಂತ ದೇಶಿಕರು ಅಭಯಪ್ರದಾನಸಾರದಲ್ಲಿ ನಿಪುಣತರವಾಗಿ ಉಪಪಾದಿಸಿರುತ್ತಾರೆ. ಕ್ಷತ್ರಬಂಧುವು ಶ್ರೀನಾರದರನ್ನು ಆಚಾರ್ಯರನ್ನಾಗಿ ವರಿಸಿ ಪ್ರಪದನವನ್ನೂ ಅನುಷ್ಠಿಸಿರುತ್ತಾರೆ ಇದು ಗುರುಪರಂಪರಾಸಾರದಲ್ಲಿ **ಪಾಪಿಷ್ಠಃ ಕ್ಷತ್ರಬಂಧುಶ್ಚ ಪುಂಡರೀಕಶ್ಚ ಪುಣ್ಯಕೃತ್। ಆಚಾರ್ಯವತ್ತಯಾ ಮುಕ್ತೌ ತಸ್ಮಾದಾಚಾರ್ಯವಾನ್ ಭವೇತ್**" ಎಂಬಲ್ಲಿ ವ್ಯಕ್ತವು.

ಇಪ್ಪಡಿ— ಇದೇ ರೀತಿಗೆ, **ಮೋಕ್ಷಾರ್ಥ ಪ್ರಪತ್ತಿಯಿಲುಮ್** — ಮೋಕ್ಷಕ್ಕಾಗಿ ಮಾಡುವ

ಇದು “ಮಾಶುಚಃ” ಎನ್ಗಿಱ ವಾಕ್ಯತ್ತುಕ್ಕು ತಾತ್ಪರ್ಯಮ್. “ಪರಿತ್ಯಜ” ಎನ್ಗಿಱ ಇಡತ್ತಿಲೇ ಪರಿಕರಾನ್ತರ ನೈರಪೇಕ್ಷ್ಯಮ್ ಶೊನ್ನಪೊಳುದೇ - ಏಕ ಶಬ್ದತ್ತಿಲ್ ಇಂದ ಯೋಜನೈ ದೃಢೀಕರಣಾರ್ಥಮಾಗಕ್ಕಡವದು. ಇದಕ್ಕು ಅರ್ಥಾನ್ತರಮ್ ವಿವಕ್ಷಿತಮಾಗವುಮಾಮ್. “ಏಕಶಬ್ದತ್ತುಕ್ಕಿದು ಪೊರುಳಾನಾಲ್ “ಪರಿತ್ಯಜ್ಯ” ಎನ್ಗಿಱ ಇಡತ್ತುಕ್ಕುಚ್ಚೊನ್ನ ಅರ್ಥಾನ್ತರಙ್ಗಳೈ ಕೊಳ್ಳವುಮಾಮ್.

---

ಶರಣಾಗತಿಯಲ್ಲೂ, ಇವರ್ ಕೋಲಿನ ಕಾಲತ್ತಿಲೇ - ಈ ಪ್ರಪನ್ನನು ಅಪೇಕ್ಷಿಸಿದ ಕಾಲದಲ್ಲಿ, ಆರ್ತನಾಗಿ ಪ್ರಾರ್ಥಿಸಿದರೆ ಒಡನೆಯೇ ದೇಹಾವಸಾನದ ಮೂಲಕ ಅಥವಾ ದೃಪ್ತನಾಗಿ ದೇಹಾವಸಾನವು ನಿಧಾನವಾಗಿ ಉಂಟಾದ ನಂತರ ಎಂದು ಅಪೇಕ್ಷಿಸಿದರೆ ಅನಂತರ, ಫಲಸಿದ್ಧಿಕ್ಕುಕ್ಕುರೈ ಇಲ್ಲೈ - ಮೋಕ್ಷಪ್ರಾಪ್ತಿಯುಂಟಾಗುವದರಲ್ಲಿ ಏನೊಂದೂ ನ್ಯೂನತೆಯಿಲ್ಲವು ಎಂದರೆ ಅಭಿಪ್ರಾಯವು.

ಹಿಂದಿನ ಐಹಿಕಾದಿ ನಿದರ್ಶನಗಳಲ್ಲಿ ಫಲಸಿದ್ಧಿ ಯಾವಾಗ ಉಂಟಾಯಿತೋ, ತುಲ್ಯನ್ಯಾಯದಿಂದ ಮೋಕ್ಷಾರ್ಥಿಯ ಶರಣಾಗತಿಯಲ್ಲೂ ಫಲಸಿದ್ಧಿಯುಂಟೆಂಬುದು ನಂಬಿಕೆಗೆ ಅರ್ಹವೇ. ಅತೀಂದ್ರಿಯ ವಿಷಯದಲ್ಲಿ ಶಾಸ್ತ್ರವೇ ಪ್ರಮಾಣವಾದುದರಿಂದ, ಈ ಸಂದರ್ಭದಲ್ಲೇ ಮಾಶುಚಃ ಎಂದು ಹೇಳಿರುವದರಿಂದಲೇ ವ್ಯಕ್ತವೆಂದು ಹೇಳುತ್ತಾರೆ. ಇದು ಮೋಕ್ಷಾರ್ಥಿಯ ಶರಣಾಗತಿಯಲ್ಲೂ ಫಲಸಿದ್ಧಿಯುಂಟೆಂಬುದು ಮಾಶುಚಃ ಎನ್ಗಿಱ ವಾಕ್ಯತ್ತುಕ್ಕು - ಎನ್ನುವ ವಾಕ್ಯಕ್ಕೆ, ತಾತ್ಪರ್ಯಮ್ - ತಾತ್ಪರ್ಯವು.

ಆಗಲಿ, ಮಾಮೇಕಂ - ಎಂಬದರಿಂದ ಅನ್ಯಪ್ರವೃತ್ತಿ ನೈರಪೇಕ್ಷ್ಯವನ್ನೇನೋ ಸ್ಥಾಪಿಸಿದಿರಿ. ಇದನ್ನೇನೋ ಒಪ್ಪೋಣ. ಆದರೆ ಹಿಂದೆ “ಪರಿತ್ಯಜ್ಯ” ಎಂಬುದರ ವ್ಯಾಖ್ಯಾನದಲ್ಲೇ ಅನ್ಯನೈರಪೇಕ್ಷ್ಯವನ್ನು ಸಾಧಿಸಿ, ಪುನಃ ಮಾಮೇಕಂ ಎಂಬಲ್ಲೂ ಆ ಅಭಿಪ್ರಾಯವನ್ನೇ ಹೇಳಬಹುದೋ? ಪುನರುಕ್ತಿ ದೋಷ ಉಂಟಾಗುವದಿಲ್ಲವೇ? ಎಂದರೆ ಪರಿತ್ಯಜ್ಯ ಎಂಬಲ್ಲಿ ಉಪಪಾದಿತವಾದ ಅನ್ಯನೈರಪೇಕ್ಷ್ಯದ ದೃಢೀಕರಣವು ಇಲ್ಲಿ ಹೇಳಲ್ಪಟ್ಟಿತೆಂದು ಭಾವಿಸಬಹುದೆಂದು ಸಮಾಧಾನವನ್ನು ಹೇಳುತ್ತಾರೆ “ಪರಿತ್ಯಜ್ಯ” ಎನ್ಗಿಱವಿಡತ್ತಿಲೇ - ಪರಿತ್ಯಜ್ಯವೆಂಬ ಸ್ಥಳದಲ್ಲಿ, ಪರಿಕರಾಂತರ ನೈರಪೇಕ್ಷ್ಯಂ - ಬೇರೆ ಇನ್ನು ಯಾವ ಅಂಗದ ಅಪೇಕ್ಷೆಯೂ ಇಲ್ಲವೆಂದು, ಶೊನ್ನ ಪೊಳುದಿಲೇ - ಎಂದು ಹೇಳಿದ ಅರ್ಥದಲ್ಲಿ ಏಕಶಬ್ದತ್ತಿಲ್ - ಈ “ಏಕ” ಶಬ್ದದಿಂದ, ಇಂದ ಯೋಜನೈ - ಈ ಅನ್ವಯವು, ದೃಢೀಕರಣಾರ್ಥಮಾಗಕ್ಕಡವದು - ಸಮರ್ಥನೆ ಮಾಡಿ ಹೇಳುವದಕ್ಕಾಗಿ ಎಂದು ಭಾವಿಸತಕ್ಕದ್ದಾಗಿರುತ್ತದೆ. ಇದುಕ್ಕು - ಆ ಸಂದರ್ಭದಲ್ಲಿ, ಈ ಏಕ ಶಬ್ದಕ್ಕೆ ಅರ್ಥಾಂತರಮ್ - ಈಗ ನಾವು ಉಪಪಾದಿಸಿದ ಇತರ ಅರ್ಥಗಳೆಂದರೆ ಪ್ರಾಪ್ಯಸ್ಯೈವ ಪ್ರಾಪಕತ್ವಂ ಪ್ರಾಪ್ಯನೂ ಪ್ರಾಪಕನೂ ಒಂದೇ ಎಂಬುದು, ವಿವ

ಸಪರಿಕರ ಪ್ರಪತ್ತಿಕ್ಕು ಉಪಾಸನಾದಿಗಳಾನ ಅಂಗಿಗಳೈಯುಮ್ ಇವತ್ತಿನ್ ಪರಿಕರಙ್ಗಳಾನ ಧರ್ಮಾನ್ತರಙ್ಗಳೈಯುಮ್ ಕಳಿಕ್ಕಿರ ಪೊರುಳ್ಗಳಿಲ್ ಇವ್ವೇಕಶಬ್ದಮ್ ಶರಣ್ಯನೈ ವಿಶೇಷಿತ್ತಪಡಿ ಯೆನ್ರೆನ್ನಿಲ್? ಆಕಿಂಚನ

---

ಕ್ಷಿತವಾಗವುಮಾಮ್ - ಹೇಳಬೇಕಾದ ಅಭಿಪ್ರಾಯವಾಗಬಹುದು. ಏಕ ಶಬ್ದಕ್ಕೆ ಹೇಳಲ್ಪಟ್ಟಿರುವದು ಆರು ಅರ್ಥಗಳು. ಪರಿತ್ಯಜ್ಯ ಎಂಬಲ್ಲಿ ಹೇಳಿದ ಅನ್ಯನೈರಪೇಕ್ಷ್ಯಾರ್ಥವು ಪುನರುಕ್ತಿ ದೋಷವುಳ್ಳದೆಂದು ಭಾವಿಸಿದರೆ, ಆ ಅರ್ಥವನ್ನು ತ್ಯಜಿಸಿ ಮಿಕ್ಕ ಐದು ಅರ್ಥಗಳಲ್ಲಿ ಒಂದನ್ನು ಹೇಳಬಹುದೆಂಬ ಭಾವವು. ಅಥವಾ ಏಕ ಶಬ್ದಕ್ಕೆ ಈ ಅನ್ಯ ನೈರಪೇಕ್ಷ್ಯವೆಂಬ ಅರ್ಥವನ್ನೇ ಹೇಳಿದರೆ ಆಗ ಪರಿತ್ಯಜ್ಯ ವೆಂಬುದಕ್ಕೆ ಈ ಅರ್ಥವನ್ನು ಬಿಟ್ಟು ಮಿಕ್ಕ ಅರ್ಥಗಳನ್ನು ಹೇಳಬಹುದೆಂದು ತಿಳಿಸುತ್ತಾರೆ ಏಕಶಬ್ದತ್ತುಕ್ಕು ಇದು ಪೊರುಳಾನಾಲ್-ಏಕ ಶಬ್ದಕ್ಕೆ ಈ ಅನ್ಯ ಪರಿಕರ ನೈರಪೇಕ್ಷ್ಯಾರ್ಥವು ಅರ್ಥವಾದರೆ,ಪರಿತ್ಯಜ್ಯ ಎನ್ಗಿರವುದುಕ್ಕು-ಪರಿತ್ಯಜ್ಯವೆಂಬುವದಕ್ಕೆ, ಅಙ್ಗುಚ್ಚೊನ್ನ – ಅಲ್ಲಿ ಹೇಳಿದ, ಅರ್ಥಾನ್ತರಙ್ಗಳೈ - ಬೇರೆ ಅರ್ಥಗಳನ್ನು, ಕೊಳ್ಳುವುಮಾಮ್ - ಅಙ್ಗೀಕರಿಸಬಹುದು. ಸರ್ವಧರ್ಮಾನ್ ಪರಿತ್ಯಜ್ಯ ಎಂಬಲ್ಲೂ ಆರು ಅರ್ಥಗಳು ಹೇಳಲ್ಪಟ್ಟವು- ಅವು ಯಾವುವೆಂದರೆ ಅಶೋಕತ್ವಾಧಿಕಾರತ್ವ ಮಾಕಿಂಚನ್ಯ ಪುರಸ್ಕ್ರಿಯಾ । ಅನಂಗಭಾವೋ ಧರ್ಮಾಣಾಂ ಅಶಕ್ಯಾರಂಭವಾರಣಮ್ । ತತ್ಪ್ರತ್ಯಾಶಾ ಪ್ರಶಮನಂ ಬ್ರಹ್ಮಾಸ್ತ್ರನ್ಯಾಯಸೂಚನಮ್ । ಸರ್ವಧರ್ಮ ಪರಿತ್ಯಾಗ ಶಬ್ದಾರ್ಥಾಸ್ಸಾಧುಸಮ್ಮತಾಃ” ಎಂದು ಹೇಳಿರುವ ಆರು ಅರ್ಥಗಳಲ್ಲಿ ಅನಂಗಭಾವೋ ಧರ್ಮಾಣಾಂ ಎಂಬರ್ಥವನ್ನು ಬಿಟ್ಟು ಮಿಕ್ಕ ಐದು ಅರ್ಥಗಳನ್ನು ಮಾತ್ರ ಅಲ್ಲಿ ಭಾವಿಸಬಹುದು.

ಏಕಶಬ್ದದಿಂದ ಪ್ರಪತ್ತಿಗೆ ಅನ್ಯನೈರಪೇಕ್ಷ್ಯವೆಂಬರ್ಥವನ್ನು ಹೇಳಿದ.ದಾದರೆ ಆಗ ಏಕಂ ಎಂಬ ಶಬ್ದಕ್ಕೂ ಮಾಂ ಎಂಬುದಕ್ಕೂ ಸಾಮಾನಾಧಿಕರಣ್ಯವನ್ನು ಭಗವಂತನಿಗೆ ವಿಶೇಷಣವಾಗಿ ಹೇಳಿರುವದು ಹೇಗೆ ? ಎಂದರೆ ಸಮಾಧಾನವನ್ನು ಹೇಳುತ್ತಾರೆ.—

ಸಪರಿಕರ ಪ್ರಪತ್ತಿಕ್ಕು - ಅನುಕೂಲ್ಯಸಙ್ಕಲ್ಪಾದಿ ಐದು ಅಂಗಗಳಿಂದ ಕೂಡಿದ ಭರನ್ಯಾಸಕ್ಕೆ, ಉಪಾಸನಾದಿಗಳಾನ ಅಂಗಿಗಳೈಯುಮ್-ಉಪಾಸನ, ಪರಜ್ಞಾನವೇ ಮೊದಲಾದ ಅಂಗಿಗಳನ್ನೂ, ಇವತ್ತಿನ್ ಪರಿಕರಙ್ಗಳಾನ ಧರ್ಮಾನ್ತರಙ್ಗಳೈಯುಮ್ - ಈ ಉಪಾಸನದ ಅಂಗಗಳಾದ ಕರ್ಮಯೋಗಕ್ಕೆ ಸೇರಿದ ನಿತ್ಯನೈಮಿತ್ತಿಕ ರೂಪ ಆಜ್ಞಾ ಕೈಂಕರ್ಯಗಳನ್ನೂ, ಕಳಿಕ್ಕಿರ - ಅಪೇಕ್ಷಿತಗಳಲ್ಲವೆಂದು ಭಾವಿಸುವ, ಪೊರುಳ್ಗಳಿಲ್ - ಅರ್ಥಗಳಲ್ಲಿ, ಇವ್ವೇಕ ಶಬ್ದಮ್ - ಈ ಏಕವೆಂಬ ಶಬ್ದವು, ಶರಣ್ಯನೈ - ಸರ್ವ ರಕ್ಷಕನನ್ನು, ವಿಶೇಷಿತ್ತಪಡಿ ಯೆನ್ರೆನ್ನಿಲ್ - ಅದು ಮಾಂ ಎಂಬ ಪದಕ್ಕೆ ವಿಶೇಷಣವಾಗಿ ಅದರೊಂದಿಗೆ ಸಾಮಾನಾಧಿಕರಣ್ಯ

ಪಕ್ಕಲಿಲೇ, ಇದು ಪ್ರಸಾದನ ಮಾಯ್‌ಕ್ಕೊಂಡು ಶರಣ ನೋಡು ತುವಕ್ಕ ತ್ತವೈ ಕಾಟ್ಟುಕ್ಕೈಕ್ಕಾಗ "ಮಾಮೇಕಂ" ಎಙ್ಗಿರದು

---

ವನ್ನು ಹೊಂದಿರುವಹಾಗೆ ಪ್ರಯೋಗವು ಹೇಗೆ? ಮಾಮೇಕಂ ಎಂದಿರುವದರಿಂದ ಶರಣ್ಯನಿಗೆ ಇನ್ನು ಯಾವುದರ ಆಪೇಕ್ಷೆಯೂ ಇಲ್ಲವೆಂದು ಅರ್ಥವಾದರೆ, ಪ್ರಪದ ನಕ್ಕೂ ಇನ್ನು ಯಾವುದರ ಸಹಾಯವೂ ಬೇಡ ಎಂದು ಹೇಗೆ ಅರ್ಥವಾಗುತ್ತದೆ? ಪ್ರಪದನಕ್ಕೆ ಇನ್ನು ಯಾವುದರ ಅಪೇಕ್ಷೆಯೂ ಇಲ್ಲವೆಂದು ಅರ್ಥಮಾಡಿದರೆ, ಆಗ ಏಕಂ ಎಂಬುವದು ಮಾಂ ಎಂಬುದಕ್ಕೆ ವಿಶೇಷಣ ಹೇಗೆ? ಎಂಬುದು ಆಕ್ಷೇಪವು. ಎಂದರೆ, ಅಕಿಂಚನ ಪಕ್ಕಲಿಲೇ – ಅನನ್ಯಗತಿಕನ ವಿಷಯದಲ್ಲಿ, ಇದು ಪ್ರಸಾದನ ಮಾಯ್‌ಕ್ಕೊಂಡು-ಭಗವಂತನ ಅನುಗ್ರಹವನ್ನು ಸಂಪಾದಿಸಿಕೊಡುವಂತಾದ್ದಾಗಿ ಶರಣ್ಯನೋಡು – ಆ ಸರ್ವರಕ್ಷಕನೊಂದಿಗೆ, ತುವಕ್ಕುತ್ತವೈ – ಒಂದು ವ್ಯಾಜ ಮಾತ್ರವೇ ಆಗಿ, ಆ ಕಾರಣದಿಂದ ಆತನೊಂದಿಗೆ ಇನ್ನು ಯಾವ ಉಪಾಯಾನ್ತರದ ಅಥವಾ ಅದರ ಅಂಗಗಳು ಅನ್ವಯ ಅಥವಾ ಸಂಬಂಧವಿಲ್ಲದಿರೋಣವನ್ನು ಕಾಟ್ಟುಗೈಕ್ಕಾಗ - ಪ್ರದರ್ಶಿಸುವದಕ್ಕಾಗಿ, " ಮಾಮೇಕಂ " ಎಙ್ಗಿರದು. ಮಾಮೇಕಂ ಎಂಬದಾಗಿ ಹೇಳಿರುವುದು. ಏಕಂ ಎಂಬುದು ಮಾಂ ಎಂಬುದಕ್ಕೆ ವಿಶೇಷಣವಾಗಿ ಹೇಳಿರುವುದು ಎಂಬ ಭಾವವು. ಈ ಏಕಂ ಎಂಬ ಪದವು ಸಪರಿಕರವಾದ ಪ್ರಪತ್ತಿಗೆ ಉಪಾಸನಾದಿಗಳಾಗಲಿ ತದಂಗಗಳಾಗಲಿ ಬೇಕಾಗಿಲ್ಲ ವೆಂಬ ಆರ್ಥವಾದರೆ ಅ ಪದವು ಮಾಂ ಎಂಬುದು ಸರ್ವ ಶರಣ್ಯನನ್ನು ಬೋಧಿಸುವ ಪದಕ್ಕೆ ಹೇಗೆ ವಿಶೇಷಣವೆಂದರೆ, ಇದರಿಂದ ಈ ಭರನ್ಯಾಸ ಮಾತ್ರವೇ ಶರಣ್ಯನ ಅನುಗ್ರಹ ಸಂಪಾದನೆಗೆ ಸಾಕು ; ಅದರೊಂದಿಗೆ ಸಹಕಾರಿತ್ವೇನ ಉಪಾಸನಾದಿಗಳೇ ಯಾಗಲಿ, ಅದರ ಪರಿಕರಗಳೇ ಯಾಗಲಿ, ಶರಣ್ಯನಿಗೆ ಬೇಕಾಗಿಲ್ಲವೆಂಬುದನ್ನು ಪ್ರದರ್ಶಿಸುವದಕ್ಕಾಗಿ ಹಾಗೆ ಮಾಂ ಎಂಬುದಕ್ಕೆ ಈ ಏಕಂ ಎಂಬುದನ್ನು ವಿಶೇಷಣವಾಗಿ ಪ್ರಯೋಗಿಸಿರುತ್ತದೆಂಬ ಭಾವವು. ಸಾರವಿವರಣೆಯವರು ಇನ್ನೊಂದು ವಿಧವಾಗಿಯೂ ಅರ್ಥಮಾಡಿರುತ್ತಾರೆ. ಹೇಗೆಂದರೆ ಅಕಿಂಚನನ ವಿಷಯದಲ್ಲಿ, ಇದು ಕೇವಲ ಪ್ರಪದನವೇ ಪ್ರಸಾದನ ಮಾಯ್‌ಕೊಂಡು – ಭಗವದನುಗ್ರಹವನ್ನುಂಟುಮಾಡುವದಾಗಿ, ಅಪೇಕ್ಷಿತಮ್ ಎಂದು ಇಟ್ಟುಕೊಳ್ಳತಕ್ಕದ್ದು, ಆಪೇಕ್ಷಿತವಾಗುದು. ಶರಣ್ಯನೋಡೇ ತುವಕ್ಕ. ತ್ತವೈ . ಶರಣ್ಯನೊಂದಿಗೆ, ಭರನ್ಯಾಸಮಾಡಿದ ಸಂಬಂಧವಿಲ್ಲದ ಭಾವವನ್ನು ಎಂದರೆ ಇತರ ಯಾವುದರ ಅಪೇಕ್ಷೆ ಇಲ್ಲದಿರೋಣವನ್ನು, ಕಾಟ್ಟುಗೈಕ್ಕಾಗ – ಪ್ರದರ್ಶಿಸುವದಕ್ಕಾಗಿ, ಎಂದರೆ ಶರಣ್ಯನಿಗೆ ಇನ್ನು ಯಾವುದರ ಅಪೇಕ್ಷೆಯೂ ಬೇಕಿಲ್ಲವೆಂದು ತಿಳಿಸುವದಕ್ಕಾಗಿ ಮಾಮೇಕಂ ಎಙ್ಗಿರದು - "ಮಾಮೇಕಂ" ಎಂಬ ಪ್ರಯೋಗವು.

**(೬) ಅಥ "ಏಕ" ಶಬ್ದಸ್ಯ ಸರ್ವಫಲ ಸಾಧನಂ ಮಾಮಿತ್ಯರ್ಥಾನ್ತರಮಾಹ—**

"ಸರ್ವಧರ್ಮಾನ್" ಎನ್ಗಿರ ಕೀೞಿಲ್ "ಸರ್ವ" ಶಬ್ದತ್ತೈಯುಮ್, "ಸರ್ವಪಾಪೇಭ್ಯಃ" ಎನ್ಗಿರ ಮೇಲಿಲ್ "ಸರ್ವ" ಶಬ್ದತ್ತೈಯುಮ್ ಮಾರ್ತ್ತಿವ್ವೇಕ ಶಬ್ದಮ್, ಸರ್ವಶಬ್ದತ್ತುಕ್ಕು ಪ್ರತಿಸಂಬಂಧಿಯಾಯ್ ನಿರ್ಕಿರದೆನ್ರುಮ್ ಶೊಲ್ಲುವರ್ಗಳ್. ಅಪ್ಪೋದು, "ಸಂದುಷ್ಕರೇಣ ಶೋಚೇದ್ಯೋ ಯೋನ ಯೇನೇಷ್ಟಹೇತುನಾ । ಸ ಸ ತಸ್ಯಾಹಮೇವೇತಿ ಚರಮಶ್ಲೋಕ ಸಂಗ್ರಹಃ ॥"

---

**(೬) ಮುಂದೆ ಏಕಶಬ್ದಕ್ಕೆ ಸರ್ವಫಲಸಾಧನಭೂತನಾದ ನಾನು ಎಂಬ ಆರನೆಯ ಅರ್ಥ**

**ಸರ್ವಧರ್ಮಾನ್** ಪರಿತ್ಯಜ್ಯ ಎಂಬಲ್ಲಿ ಸಮಸ್ತ ಧರ್ಮಗಳ ಅನಾವಶ್ಯಕತೆಯನ್ನು ಹೇಳಿ, ಸರ್ವಪಾಪೇಭ್ಯಃ ಸಮಸ್ತ ಪಾಪಗಳಿಂದಲೂ ಬಿಡಿಸುವೆನು ಎಂದು ಮುಂದೆ ಹೇಳಿರುವದರಿಂದ, ಹೀಗೆ ಸಮಸ್ತ ರೋಗಗಳನ್ನೂ ಹೋಗಲಾಡಿಸುವ ಶಕ್ತಿಯುಳ್ಳವನು ನಾನೊಬ್ಬನೇ ನಾನೊಬ್ಬನೇ ಶರಣಾಗತನು ಕೋರಿದ ಸರ್ವ ಫಲಪ್ರದನು. ಎಂಬರ್ಥವೂ ಈ ಏಕ ಶಬ್ದದಿಂದ ತೋರಿಬರುತ್ತದೆಂದು ಉಪದೇಶಿಸುತ್ತಾರೆ. ಹಿಂದಿನ ಸರ್ವಧರ್ಮಾನ್ ಎಂಬಲ್ಲಿರುವ ಸರ್ವ ಶಬ್ದಕ್ಕೂ, ಮುಂದಿನ **ಸರ್ವಪಾಪೇಭ್ಯಃ** ಎಂಬಲ್ಲಿರುವ ಸರ್ವ ಶಬ್ದಕ್ಕೂ ಪ್ರತಿಯಾಗಿ ಇಲ್ಲಿ ಏಕ ಶಬ್ದ ಪ್ರಯೋಗವಿರುವದರಿಂದ ತಾನೊಬ್ಬನೇ ಸರ್ವವನ್ನೂ ನಿರ್ವಹಿಸಿಕೊಡತಕ್ಕವನೆಂಬ ಅರ್ಥವು ಏರ್ಪಡುತ್ತದೆಂದ, ಮುಂದಿನ ವಾಕ್ಯದಿಂದ ತಿಳಿಸುತ್ತಾರೆ—ಸರ್ವಧರ್ಮಾನ್ ಎನ್ಗಿರ - ಎಂದಿರುವ ಕೀೞಿಲ್ ಸರ್ವಶಬ್ದತ್ತೈಯುಮ್ - ಹಿಂದೆ ಬಂದ ಸರ್ವ ಶಬ್ದವನ್ನೂ ಮತ್ತು ಸರ್ವ ಪಾಪೇಭ್ಯಃ ಎಂದು, ಮೇಲಿಲ್ ಸರ್ವಶಬ್ದತ್ತೈಯುಮ್ - ಮುಂದೆ ಬರುವ ಸರ್ವ ಶಬ್ದವನ್ನೂ, ಮಾರ್ತ್ತು - ವಿವರಿಸಿ, ಇವ್ವೇಕಶಬ್ದಮ್ - ಈ "**ಏಕಂ**" ಎಂಬ ಶಬ್ದವು, ಸರ್ವಶಬ್ದತ್ತುಕ್ಕು - ಈ ಎರಡು ಸರ್ವ ಶಬ್ದಗಳಿಗೂ, **ಪ್ರತಿಸಂಬಂಧಿಯಾಯ್** - ಪ್ರತಿಪದವಾಗಿ, ವಿರೋಧಾರ್ಥವುಳ್ಳ ಶಬ್ದವಾಗಿ, ನಿರ್ಕಿರದು - ನಿಂತಿದೆ ಎಂದರೆ ಅವೆಲ್ಲಕ್ಕೂ ಈ ಶರಣ್ಯನೊಬ್ಬನೇ ಸರ್ವವನ್ನೂ ಸಾಧಿಸಿಕೊಡುವನು ಎಂಬರ್ಥವು ಏರ್ಪಡುವದು, ಎನ್ರು - ಎಂಬದಾಗಿ, **ಶೊಲ್ಲುವರ್ಗಳ್** - ಇನ್ನೊಂದರ್ಥವನ್ನು ಪ್ರಾಜ್ಞರು ಹೇಳುವರು.

ಹೀಗೆ ಸರ್ವಫಲ ಸಾಧಕನೂ ತಾನೊಬ್ಬನೇ ಎಂದರ್ಥವಾದರೆ, ಚರಮಶ್ಲೋಕಕ್ಕೆ ಆಗ ಹೀಗೆ ಅರ್ಥವೆಂಬ ವಿಷಯದಲ್ಲಿ ಒಂದು ಅಮೋಘವಾದ ಕಾರಿಕೆಯನ್ನು ಅನುಗ್ರಹಿಸುತ್ತಾರೆ. **ಅಪ್ಪೋದು** – ಹೀಗೆ ಸರ್ವಫಲಸಾಧಕನು ತಾನು ಒಬ್ಬನೇ ಎಂಬರ್ಥವಾದರೆ, ಚರಮಶ್ಲೋಕದ ಸಂಗ್ರಹಾರ್ಥವು ಏನೆಂದರೆ ತಿಳಿಸುತ್ತಾರೆ.—

ಇತ್ಯಾಲೇ ಎನ್ ಶೊಲ್ಲಿತ್ತಾಯ್ತ್ತೆನ್ನಿಲ್ ?-(೧) "ಯೋ ಹ್ಯೇಷ ಕಾಮ ಯೋನ ಯೆನ್ಸೇನ ಹಿ [illegible] ಇಷ್ಟಪ್ರಾಪ್ತಿಗಾಗಿ [illegible] ಯಾವ ಶರಣಾಗತನಾಗ್ರೆ [illegible] ಶೋಕಿಸ [illegible] ನಾಗಿ ಸಾಧಿಸುವದು ಶುಂಬಾ ಕಷ್ಟವೇ ಎಂದು ಶೋಕಿಸಿದರೆ, ತಸ್ಯ - ಅಂತಹ ಅಧಿಕಾರಿಗೆ, ಸಃ ಸಃ - ಅಂತಹ ಇಷ್ಟಪ್ರಾಪ್ತಿಗೆ ಹೇತುವು ಅಹಮೇವ - ನಾನೊಬ್ಬನೇ ಎಂಬುದು, ಚರಮಶ್ಲೋಕಾರ್ಥ ಸಙ್ಗ್ರಹಃ - ಈ ಚರಮಶ್ಲೋಕದ ಸಙ್ಗ್ರಹಾರ್ಥವು. ಈಗ ಹೇಳುವ ವಿಶೇಷಾರ್ಥವೇ ಚರಮಶ್ಲೋಕದ ಸಙ್ಗ್ರಹಾರ್ಥವೆಂದು ಉಪದೇಶಿಸುತ್ತಾರೆ — ಈ ಅರ್ಥವು ಚರಮಶ್ಲೋಕದಲ್ಲಿ ವಕವೆಂದು ಶ್ರೀ ಭಾಷ್ಯಕಾರರವರು ಈ ಶ್ಲೋಕ ಭಾಷ್ಯದಲ್ಲಿ ಎರಡನೆಯ ಯೋಜನೆಯಿಂದ ವ್ಯಕ್ತಪಡಿಸಿರುತ್ತಾರೆ.—ಅನಾದಿ ಪರಾಂಬರಿಸೇಹುದು ಭಕ್ತಿಯೋಗಾರಂಭಕ್ಕೆ ಪ್ರತಿಬಂಧಕವಾಗಿ ಅನೇಕ ಪಾಪಗಳುಂಟು ; ಅವುಗಳಿಗೆಲ್ಲಾ ಪ್ರಾಯಶ್ಚಿತ್ತಗಳು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ ಸಗಿಮಿತ ಕಾಲಗಳಲ್ಲಿ ಅವುಗಳನ್ನು ಅನುಷ್ಠಿಸಲು ಸಾಧ್ಯವಿಲ್ಲವಲ್ಲಾ. ಆ ಪಾಪಗಳೆಲ್ಲಾ ನಷ್ಟವಾಗುವ ಬಗೆ ಹೇಗೆ ಎಂದು ಶೋಕಿಸುತ್ತಿರುವ ಅರ್ಜುನನನ್ನು ಕಂಡು ನೀನು ಶೋಕಿಸಬೇಡವೆಂದು ಪರಲೋಕ ಶರಣ್ಯನ ಭರವಸೆಯು. ಇಲ್ಲಿ ಮಾಶುಚಃ - ಎಂದು ಅರ್ಜುನನನ್ನು ಕುರಿತು ಹೇಳಿದರೆ ಅರ್ಜುನನು ಅಳುತ್ತಿದನೆಂಬುದು ವ್ಯಕ್ತವು ಆ ಶೋಕವು ಏತಕ್ಕಾಗಿ ಎಂದು ವಿಚಾರ ಮಾಡಿದರೆ ಪಾಪೇಭ್ಯೋ ಮೋಕ್ಷಯಿಷ್ಯಾಮಿ - ಎಂದು ಹೇಳಿರುವದರಿಂದ, ಪಾಪಗಳು ಹೋಗುವ ಬಗೆ ಹೇಗೆ ಎಂದು ಅಳುತ್ತಿದನೆಂದಾಯಿತು. ಆದಕ್ಕಾಗಿ ಅಳಬೇಡ, ನನ್ನನ್ನು ಶರಣ ಹೊಂದ ; ಎಲ್ಲಾ ಪಾಪಗಳೂ ತೊಲಗುತ್ತವೆ ಎಂದು ಭಗವಂತನು ತನ್ನ ಸಖನವನು ತಿಳಿಸಿರುತ್ತಾನೆ ಹಾಗೆಯೇ ಇನ್ನು ಯಾವು ಯಾವುದಕ್ಕಾಗಿಯಾದರೂ ಅಳುತ್ತಾ ಇರುವವನು ಶರಣಾಗತಿಯನ್ನು ಮಾಡಿದರೂ, ಅಂತಹ ಇಷ್ಟಪ್ರಾಪ್ತಿಯನ್ನುಂಟುಮಾಡಿಕೊಡುವವನೂ ನಾನೇ ಅಳಬೇಡವೆಂದೂ ಹೇಳಿದಂತಾಯಿತು ಈ ಸಂಸಾರದಲ್ಲಿ ದುಸ್ತರ ಕಷ್ಟಕ್ಕೆ ಸಿಕ್ಕಿರುತ್ತೇನೆಯೋ, ಆ ಬಂಧದಿಂದ ಬಿಡಿಸಬಾರದೇ ಎಂದು ಶೋಕಿಸಿದರೆ, ಶೋಕಿಸಬೇಡ ; ಅಂತಹ ಇಷ್ಟವನ್ನು ನೆರವೇರಿಸಿಕೊಡುವೆನು ನಾನು ಎಂಬರ್ಥವು ಸರಸವಾಗಿ ಉಂಟಾಗುತ್ತದೆ. ಇದೇ ಚರಮಶ್ಲೋಕ ಸಙ್ಗ್ರಹಾರ್ಥವೆಂದು ಕಾರಿಕೆಯನ್ನು ಅನುಗ್ರಹಿಸಿರುತ್ತಾರೆ.

ಈ ಕಾರಿಕೆಯ ಅಭಿಪ್ರಾಯವು ಅಹಿರ್ಬುಧ್ನ್ಯ ವಾಕ್ಯದ ಅಭಿಪ್ರಾಯವೇ ಎಂದು ಅದನ್ನು ಉದಾಹರಿಸಿ ಉಪಪಾದಿಸುತ್ತಾರೆ.—

ಇತ್ಯಾಲೇ - ಹೀಗೆ ಚರಮಶ್ಲೋಕದ ಸಂಗ್ರಹಾರ್ಥವು ಹೇಳಿದ ನಂತರ

(೧) ಅಹಿರ್ಬುಧ್ನ್ಯ, ೩೭-೨೫, ೨೬, ೨೭.

ಕಾರ್ಯೇಣ ನ ಸಾಧ್ಯಂ ಸಾಧನಾನ್ತರೈಃ । ಮುಮುಕ್ಷುಣಾ ಯತ್ಸಾಂಖ್ಯೇನ ಯೋಗೇನ ನಚ ಭಕ್ತಿತಃ । ಪ್ರಾಪ್ಯತೇ ಪರಮಂಧಾಮ ಯತೋ ನಾವರ್ತತೇ (ಯತಿಃ) ಪುನಃ । ತೇನ ತೇನಾಪ್ಯತೇ ತತ್ತು ನ್ಯಾಸೇನೈವ ಮಹಾಮುನೇ । ಪರಮಾತ್ಮಾ ಚ ತೇನೈವ ಸಾಧ್ಯತೇ ಪುರುಷೋತ್ತಮಃ ॥" ಎಙ್ಗಿರ ಕಟ್ಟಳೈಯಿಲೇ ತನಕ್ಕು ಅಭಿಮತಙ್ಗಳಾಯಿರುಪ್ಪದೇದೇನು ಮೊರುಫಲಙ್ಗಳೈಪ್ಪತ್ತಿ ಅವತ್ತುಕ್ಕು ಅನುಗುಣಮಾಗ ತನಿತ್ತನಿಯೇ ಶಾಸ್ತ್ರಙ್ಗಳಾಲೇ ವಿಧಿಕ್ಕಪ್ಪಟ್ಟ ಉಪಾಯಙ್ಗಳಿಲ್, ಜ್ಞಾನಾಭಾವತ್ತಾಲೇಯಾದಲ್, ಜ್ಞಾನಮುಂಡಾಯಿರುಕ್ಕ ಶಕ್ತ್ಯಭಾವತ್ತಾಲೇಯಾದಲ್, ಇವ್ವಿರಣ್ಡುಮುಂಡಾಯಿರುಕ್ಕ ವಿಳಂಬಾಕ್ಷಮತ್ವತ್ತಾಲೆಯಾದಲ್ ಶೋಕಿತ್ತ ಅಧಿಕಾರಿಯೈಪ್ಪತ್ತಿ ಅವ್ವ

---

**ಎನ್ ಶೊಲ್ಲಿತ್ತಾಯಿತ್ತೆನ್ನಿಲ್** - ಏನನ್ನು ಹೇಳಿದಂತಾಯಿತು ಎಂದರೆ ? ಸಂಹಿತಾ ವಾಕ್ಯದ ಮೂಲಕ ವ್ಯಕ್ತಪಡಿಸುತ್ತಾರೆ. — ಈ ಮೂರು ಶ್ಲೋಕಗಳೂ ಹಿಂದೆಯೇ ಸಾಧ್ಯೋಪಾಯ ಶೋಧನಾಧಿಕಾರದಲ್ಲಿ ಉದಾಹೃತವು. ಪ್ರತಿ ಪದಾರ್ಥಕ್ಕೆ ೨೬೧-೬೨ನೆಯ ಪುಟಗಳನ್ನು ಪರಾಂಬರಿಸಿ ಯಾವ ಬುಭುಕ್ಷುವು ತನಗೆ ಬೇಕಾದ ಕಾಮ್ಯ ಫಲಗಳನ್ನು ಬೇರೆ ಸಾಧನಗಳಿಂದ ಹೊಂದಲಾರನೋ ಮತ್ತು ಯಾವ ಮೋಕ್ಷಾರ್ಥಿಯು ಕರ್ಮಯೋಗಜ್ಞಾನಯೋಗಗಳಿಂದ ಸಹಕೃತವಾದ ಭಕ್ತಿಯೋಗದಿಂದಲೂ ತನಗೆ ಬೇಕಾದ ಮುಕ್ತಿಯನ್ನು ಹೊಂದಲಾರನೋ ಓ ಮಹಾಮುನಿಯೇ ಈ ಭರನ್ಯಾಸದಿಂದಲೇ ಕಾಮ್ಯಾಧಿಕಾರಿಯಾಗಲಿ ಮೋಕ್ಷಾಧಿಕಾರಿಯಾಗಲಿ, ಅವರವರ ಇಷ್ಟಾರ್ಥವನ್ನು ಹೊಂದುವರು ; ಇಂದ್ರಿಯವನ್ನು ನಿಗ್ರಹಿಸಿ ವೈರಾಗ್ಯನಿಧಿಯು ಯಾವ ದಿವ್ಯ ವೈಕುಂಠವನ್ನು ಸೇರಿ ಹಿಂತಿರುಗುವದಿಲ್ಲವೋ ಅಂತಹ ಸ್ಥಾನವನ್ನು ಹೊಂದುವನು, ಪರಮಾತ್ಮನೇ ಸಿದ್ಧೋಪಾಯನಾಗಿ ನಿಂತು ಪ್ರಾಪ್ಯವಾಗಿ ಹೊಂದಲ್ಪಡುವನು ಎಂಬುದು ತಾತ್ಪರ್ಯವು. **ಎಙ್ಗಿರ ಕಟ್ಟಳೈಯಿಲೇ** – ಎಂದು ಹೇಳಿರುವ ರೀತಿಯುಳ್ಳ, **ತನಕ್ಕು ಅಭಿಮತಙ್ಗಳಾಯ** – ತನಗೆ ಇಷ್ಟಗಳಾಗಿರುವ, **ಏದೇನು ಒರು ಫಲಙ್ಗಳೈಪ್ಪತ್ತಿ** – ಯಾವುದಾದರೂ ಒಂದು ಫಲವನ್ನು ಕುರಿತ, **ಅವತ್ತುಕ್ಕು ಅನುಗುಣಮಾಗ** - ಆ ಫಲಗಳಿಗೆ ಅನುಗುಣವಾಗಿ **ತನಿತ್ತನಿಯೇ ಶಾಸ್ತ್ರಙ್ಗಳಾಲೇ ವಿಧಿಕ್ಕಪ್ಪಟ್ಟ** – ಶಾಸ್ತ್ರಗಳಲ್ಲಿ ಬೇರೇ ಬೇರೆಯಾಗಿ ವಿಧಿಸಿರುವ, **ಉಪಾಯಙ್ಗಳಿಲ್** – ಸಾಧನಗಳಲ್ಲಿ, **ಜ್ಞಾನಾಭಾವತ್ತಾಲೇ ಯಾದಲ್** - ಜ್ಞಾನವಿಲ್ಲದಿರುವದರಿಂದಲಾಗಲಿ, **ಜ್ಞಾನಮುಂಡಾಯಿರುಕ್ಕ ಶಕ್ತ್ಯಭಾವತ್ತಾಲೇಯಾದಲ್**-ಒಂದುವೇಳೆ ಜ್ಞಾನವಿದ್ದರೂ ಆ ಸಾಧನಗಳನ್ನು ಅನುಷ್ಠಿಸುವ ಶಕ್ತಿ ಇಲ್ಲದುದರಿಂದಲಾಗಲಿ, **ಇವ್ವಿರಣ್ಡುಮುಂಡಾಯಿರುಕ್ಕ** - ಜ್ಞಾನವೂ ಶಕ್ತಿಯೂ ಎರಡೂ ಒಂದು ವೇಳೆ ಇದ್ದರೂ, **ವಿಳಂಬಾಕ್ಷಮತ್ವತ್ತಾಲೆಯಾದಲ್** ಫಲಪ್ರಾಪ್ತಿಯಲ್ಲಿ ವಿಳಂಬವನ್ನು ಸಹಿಸದೇ ಇರುವದರಿಂದ

ಸಾಯುಜ್ಯಕೊಾಣ್ಣಿಲುಮ್, ನೀ ಯಾನಿಕ್ಕವೇಣ್ಡಾ, ಅವೈ ತನಿತ್ತನಿಯೇ ತರುಮ್ ಫಲಙ್ಗಳುಕ್ಕೆಲ್ಲಾವುಮ್ ಪ್ರಪತ್ತಿ ವಶೀಕೃತನಾನ ನಾನೊರುವನೇ ಅವ್ವೈ

---

ಲಾಗಲಿ, ಶೋಕಿತ ಅಧಿಗಾರಿಯೈಕ್ಕುಪ್ಪತ್ತು - ಶೋಕಿಸುತ್ತಿರುವ ಅಧಿಕಾರಿಯನ್ನು ಕುರಿತು, ಅವ್ವುಸಾಯುಜ್ಯಕೊಾಣಿಲುಮ್ – ಆ ಕಷ್ಟಸಾಧಗಳಾದ ಸಾಧನಗಳಲ್ಲಿ ಯಾವ ಒಂದರಲ್ಲೂ ಸರ್ವಧರ್ಮಾನ್ ಪರಿತ್ಯಜ್ಯ-ಎಂಬುದರ ಅರ್ಥವು. ನೀಅಲ್ಕೈಯು ವೇಣ್ಡಾ - ನೀನು ಶೋಕಿಸಿ ಕಷ್ಟಪಡಬೇಡ; (ಮಾಶುಚಃ) ಅವ್ವೈ - ಆ ಸಾಧನಗಳು, ತನಿತ್ತನಿಯೇ - ಬೇರೆಬೇರೆಯಾಗಿ, ತರುಮ್ - ಕೊಡುವ, ಫಲಙ್ಗಳುಕ್ಕೆಲ್ಲಾವುಮ್ - ಫಲಗಳನ್ನು ಕೊಡುವದಕ್ಕೆಲ್ಲಾ, ಪ್ರಪತ್ತಿ ವಶೀಕೃತನಾನ - ಭರನ್ಯಾಸದಿಂದ ಪ್ರೀತನಾಗಿ ನಿನಗೆ ವಶನಾದ, ನಾನೊರುವನೇ - ನಾನೊಬ್ಬನೇ (ಮಾಮೇಕಂ ಎಂಬುದರರ್ಥವು.) ಅವ್ವೈಯುಮೆನ್ನು ಕೊಲ್ಲಿತ್ತಾಯಿತ್ತು - ನಾಕೆಂದು ಹೇಳಿದಂತಾಯಿತು. ಸಂಹಿತೆಯ ಮೂರು ಶ್ಲೋಕಗಳಿಂದಲೂ, "ಸುದುಷ್ಕರೇಣ" ಎಂಬ ತಮ್ಮ ಕಾರಿಕೆಯಿಂದಲೂ, ಮಾಮೇಕಂ ಎಂಬುದರ ಅರ್ಥವೇ ಉಪಪಾದಿಸಿವೆಂದು ವ್ಯಕ್ತಪಡಿಸಿದರು. ಅನೇಕ ಕಾಮ್ಯ ಫಲಗಳಾದ ಪುತ್ರ, ಧನ, ಆಯುಸ್ಸು ಮೊದಲಾದ ಅಪೇಕ್ಷೆಯುಳ್ಳವರು ಅವುಗಳಿಗೆ ಶಾಸ್ತ್ರಗಳಲ್ಲಿ ವಿಧಿಸಿರುವ ಯಜ್ಞ, ಯಾಗ, ಹೋಮಗಳನ್ನು ಅನುಷ್ಠಿಸತಕ್ಕದ್ದಾಗಿರುತ್ತದೆ. ಮೋಕ್ಷಾಪೇಕ್ಷೆಯುಳ್ಳವರು ಕಷ್ಟತರವಾದ ನಿತ್ಯನೈಮಿತ್ತಿಕಗಳ ಅನುಷ್ಠಾನದಿಂದ ಸೇರಿದ, ಉಪಾಸನವನ್ನು ಅನುಷ್ಠಿಸತಕ್ಕದ್ದಾಗಿರುತ್ತದೆ. ಇವುಗಳನ್ನು ಅನುಷ್ಠಿಸುವದಕ್ಕೆ ಆ ಶಾಸ್ತ್ರ ವಿಧಿಗಳ ಸರಿಯಾದ ಜ್ಞಾನವು ಅವಶ್ಯಕವು. ಒಂದು ವೇಳೆ ಜ್ಞಾನವಿದ್ದರೂ ಅದನ್ನು ಅನುಷ್ಠಿಸುವ ದ್ರವ್ಯಸಹಾಯಾದಿ ಶಕ್ತಿ ಇರುವದಿಲ್ಲವು. ಒಂದು ವೇಳೆ ಜ್ಞಾನವೂ ಸಾಮರ್ಥ್ಯವೂ ಎರಡೂ ಇದ್ದರೂ, ಫಲಪ್ರಾಪ್ತಿಯಲ್ಲಿ ವಿಳಂಬ ಉಂಟಾಗುವುದು. ಇಂತಹ ತೊಂದರೆಗಳುಂಟೇ ಎಂದು ಅಧಿಕಾರಿಯು ಶೋಕಿಸುವ ಕೆಲಸವಿಲ್ಲದೆ, ಯಾವ ಯಾವ ಫಲಗಳು ತನಗೆ ಬೇಕೋ ಅದಕ್ಕಾಗಿ ಈ ಭರನ್ಯಾಸ ಒಂದನ್ನು ಅನುಷ್ಠಿಸಿದುದಾದರೆ ಆ ಫಲಗಳನ್ನೆಲ್ಲಾ ಭರನ್ಯಾಸ ಪ್ರೀತನಾದ ತಾನೊಬ್ಬನೇ ನಿಂತು ಸಾಧಿಸಿಕೊಡುವೆನು ನೀನು ಶೋಕಿಸುವ ಅವಶ್ಯಕವಿಲ್ಲವೆಂಬುದು "ಮಾಮೇಕಂ" ಎಂಬುದರ ಮತ್ತು ಚರಮಶ್ಲೋಕದ ಸಾರಭೂತಾರ್ಥವೆಂಬ ಭಾವವು.

ಅನೇಕ ಸಾಧನಗಳು ಕೊಡುವ ಫಲಗಳನ್ನೆಲ್ಲಾ ಭಿನ್ನ ಭಿನ್ನ ಅಧಿಕಾರಿಗಳಿಗೆ ಈ ಭರನ್ಯಾಸವೆಂಬ ಸಾಧನ ಒಂದೇ ಸಾಧಿಸಿಕೊಡುತ್ತದೆ ಎಂಬುದು ಹೇಗೆ? ಎಂಬ ಶಙ್ಕೆಯನ್ನು ಮೂಲೋತ್ಪಾಟನ ಮಾಡುವದಕ್ಕಾಗಿ ಒಂದು ದೃಷ್ಟಾಂತವನ್ನು ಹೇಳುತ್ತಾರೆ. ಒಂದೊಂದು ದೇಹದಲ್ಲಿನ ರೋಗಕ್ಕೆ ಒಂದೊಂದು ಔಷಧಿಯು ಆಯುರ್ವೇದದಲ್ಲಿ ಹೇಳಲ್ಪಟ್ಟಿರುತ್ತದೆ. ಅವುಗಳನ್ನೆಲ್ಲಾ ಮಾಡಿಕೊಡುವ ಜ್ಞಾನ

ಯುಮೆನ್ರು ಶೋಚಿತ್ತಾಯಿತ್ತು. ಪಲ ಔಷಧಙ್ಗಳ್ ತರವಲ್ಲ ಆರೋಗ್ಯತ್ತೈಯೆಲ್ಲಾಮ್, ಇಸ್ಸಿದ್ಧೌಷಧ ಮೊನ್ರುಮೇ ತರವತ್ತಾಗ್ಯಯಾಲೇ, ನೀ ಔಷಧಾಂತರಙ್ಗಳುಕ್ಕು ಅಲಮರವಾದೇ ಇನ್ದ ಔಷಧಮೊನ್ರುಮೇ ಉಪಜೀವಿಕ್ಕವೈಯುಮ್; ಇದು ಉನಕ್ಕನ್ದ ಔಷಧಙ್ಗಳಾಲೇ ಕಳಿಕ್ಕಪಡುಮ್ ವ್ಯಾಧಿ

---

ವಿರುವದು ಕಷ್ಟವು. ಜ್ಞಾನವಿದ್ದರೂ ಅವುಗಳನ್ನು ಮಾಡುವದು ಇನ್ನೂ ಕಷ್ಟವು ರೋಗಿಯು ತುಂಬಾಕಾಲ ವ್ಯಾಧಿಪೀಡಿತನಾಗಿರಲಾರನು. ಇಂತಹ ಸಂದರ್ಭದಲ್ಲಿ ವೈದ್ಯಶ್ರೇಷ್ಠರು ಕುಪ್ಪಿ ಮಾತ್ರೆ, ಎಂದೊಂದನ್ನು ಮಾಡಿಟ್ಟಿರುವದುಂಟು. ಅದೊಂದನ್ನು ಸ್ವಲ್ಪ ತೇದು ಕೊಟ್ಟುಬಿಟ್ಟರೆ ಸರ್ವ ವ್ಯಾಧಿಗಳೂ ನಾಶವಾಗುತ್ತವೆ. ಅದರ ಹಾಗೆಯೇ ಈ ಭರನ್ಯಾಸ ಒಂದನ್ನು ಅನುಷ್ಠಿಸಿದರೆ ಸರ್ವೇಶ್ವರನು ಅದರಿಂದ ವಶೀಕೃತನಾಗಿ ತಾನೊಬ್ಬನೇ ನಿಂತು ಅಧಿಕಾರಿಯ ಕೋರಿಕೆಯನ್ನೆಲ್ಲಾ ಅನುಗ್ರಹಿಸುವನೆಂದು ಮುಂದೆ ಉಪದೇಶಿಸುತ್ತಾರೆ — ಪಲ ಔಷಧಙ್ಗಳ್ - ಕೆಲವು ಔಷಧಗಳು, ತರವಲ್ಲ - ಕೊಡತಕ್ಕ, ಆರೋಗ್ಯತ್ತೈಯೆಲ್ಲಾಮ್ - ರೋಗನಿವೃತ್ತಿಯನ್ನುಂಟುಮಾಡಿಕೊಡುವ ಆರೋಗ್ಯವನ್ನೆಲ್ಲಾ ಈ ಸಿದ್ಧೌಷಧಮೊನ್ರುಮೇ - ಸಿದ್ಧೌಷಧ ರೂಪದಲ್ಲಿರುವ ಈ ಸಿದ್ಧೋಪಾಯನಾದ ಪರಮಾತ್ಮನೊಬ್ಬನೇ, ತರವತ್ತಾಗ್ಯಯಾಲೇ - ಕೊಡಬಲ್ಲನಾದುದರಿಂದ ನೀನು ದೈನ್ಯದಿಂದ ಶೋಕಿಸುತ್ತಿರುವ ನೀನು, ಔಷಧಾನ್ತರಙ್ಗಳುಕ್ಕು - ಬೇರೆ ಔಷಧಗಳಿಗಾಗಿ ಅಲಮರವಾದೇ ಕ್ಲೇಶಪಡದೇನೇ, ಇನ್ದ ಔಷಧಮೊನ್ರುಮೇ - ಈ ಸಿದ್ಧೌಷಧಿ ಒಂದೇ, ಉಪಜೀವಿಕ್ಕವೈಯುಮ್ - ಬದುಕಿಸುವದಕ್ಕೆ, ಸಾಕಾದುವು ಎಂದರೆ ಆ ಎಲ್ಲಾ ಔಷಧಗಳು ಕೊಡುವ ಫಲವನ್ನೆಲ್ಲಾ ಈ ಸಿದ್ಧೌಷಧಿ ಒಂದೇ ಕೊಡಬಲ್ಲದೆಂಬ ತಾತ್ಪರ್ಯವು. ಒಂದೊಂದು ರೋಗದ ಪರಿಹಾರಕ್ಕೂ ಒಂದೊಂದು ಬೇರೆ ಬೇರೆ ಔಷಧಿಯುಂಟು. ಈ ಸಿದ್ಧೌಷಧ ವಿಷಯದಲ್ಲಾದರೋ ಎಲ್ಲಾ ರೋಗಗಳೂ ಈ ಒಂದೇ ಔಷಧಿಯಿಂದ ಪರಿಹಾರವಾಗುತ್ತವೆ ಆದುದರಿಂದ ಕ್ಲೇಶಕರಗಳಾದ ಅನೇಕ ವಿಧ ಔಷಧಗಳಿಗೆ ಬದಲಾಗಿ ಇದೊಂದು ಸಿದ್ಧೌಷಧವನ್ನು ಸೇವಿಸಿದರೆ, ಸರ್ವ ರೋಗಗಳೂ ಪರಿಹಾರವಾಗುತ್ತವೆಂಬ ಭಾವವು. ಸಿದ್ಧೌಷಧ ಸೇವನೆಯ ಸ್ಥಾನದಲ್ಲಿ ಮಾಮೇಕಂ ಶರಣಂವ್ರಜ ಎಂದು ಹೇಳಲ್ಪಟ್ಟಿರುತ್ತದೆ. ಒಂದೊಂದು ಬೇರೆ ಬೇರೆ ಪಾಪಕ್ಕೂ ಬೇರೆಬೇರೆ ಪ್ರಾಯಶ್ಚಿತ್ತಗಳು ಉಂಟು; ಅವುಗಳ ಬದಲಾಗಿ ಸರ್ವ ಪ್ರಾಯಶ್ಚಿತ್ತರೂಪವಾದುದೇ ತನ್ನೊಬ್ಬನನ್ನೇ ಶರಣಹೊಂದುವದು ಎಂಬ ತಾತ್ಪರ್ಯವು. ಸರ್ವ ಪ್ರಾಯಶ್ಚಿತ್ತ ಹೋಮಂ ಹೋಷ್ಯಾಮಿ ಎಂದು ಸಙ್ಕಲ್ಪಿಸಿ ಓಂಭೂರ್ಭುವಸ್ಸುವಸ್ಸ್ವಾಹಾ ಎಂದು ಹೋಮ ಮಾಡುವ ರೀತಿಯು ಹೇಗೋ,ಹಾಗೆ ಎಂದು ಭಾವಿಸತಕ್ಕದ್ದು. "ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃ ಕರ್ಮಾತ್ಮಕಾನಿವೈ । ಯಾನಿ ತೇಷಾ ಮಶೇಷಾಣಾಂ ಕೃಷ್ಣಾನುಸ್ಮರಣಂ

ಗಳಿಲ್ಲಾತ್ತೈಯುಮ್ ತಳಿಕ್ಕುಮ್ ; ಉನಕ್ಕು ಪಿನ್ಬು ಸರ್ವಭೋಗಙ್ಗಳೈಯುಮ್ ಭುಜಿಕ್ಕಲಾಮ್ ; ನೀ ಆರೋಗ್ಯತ್ತೈಯುಮ್ ಭೋಗಙ್ಗಳೈಯುಮ್ ಇಳಕ್ಕಿರೋಮೆನ್ನು ವೆರುಕ್ಕವೇಂಡಾವೆನ್ರು ಶೊಲ್ಲುಮಾಪ್ಪೋಲೇ ಇರುಕ್ಕಿರದು. ಇಚ್ಚರಮಶ್ಲೋಕಮ್. "ಸರ್ವ" ಶಬ್ದ ಪ್ರತಿಸಂಬಂಧಿಯಾನ "ಏಕ" ಶಬ್ದಂ ಸಿದ್ಧೋಪಾಯ ಪ್ರಾಧಾನ್ಯತ್ತಾಲೇ ಶರಣ್ಯನ್ನೈ ವಿಶೇಷಿತ್ತುಕ್ಕೊಂಡು ನಿನ್ರಾಲುಮ್, "ನ್ಯಾಸೇನೈವ" ಎಙ್ಗಿರಪಡಿಯೇ ಪ್ರಪತ್ತಿಯೊನ್ರು

---

ಪರಮ್" ಎಂಬುದೂ ಅನುಸಂಧೇಯವು. ಇದು-ಈ ಸಿದ್ಧೌಷಧವ ಉನಕ್ಕು - ನಿನಗೆ, ಅನ್ಯ ಔಷಧಙ್ಗಳಾಲೇ - ಬೇರೆ ಬೇರೆ ರೋಗನಿವೃತ್ತಿಗೆ ಹೇಳಿರುವ ಬೇರೆ ಬೇರೆ ಔಷಧಗಳಿಂದ, ತಳಿಕ್ಕಪ್ಪಡಾದ್ ನಿವರ್ತಿಸಲ್ಪಡದ, ವ್ಯಾಧಿಗಳಿಲ್ಲಾತ್ತೈಯುಮ್ - ರೋಗಗಳೆಲ್ಲವನ್ನೂ, ತಳಿಕ್ಕುಮ್ - ನಿವರ್ತಿಸುವ ಶಕ್ತಿಯುಳ್ಳದು. ಪಿನ್ಬು-ಈ ಸಿದ್ಧೌಷಧಿಯ ಸೇವನೆಯಾದನಂತರ ಉನಕ್ಕು - ನಿನಗೆ, ಸರ್ವ ಭೋಗಗಳನ್ನೂ, ಭುಜಿಕ್ಕಲಾಮ್ ಅನುಭವಿಸಬಹುದು ಹಾಗೆಯೇ ನನ್ನೊಬ್ಬನನ್ನೇ ನೀನು ಶರಣ ಹೊಂದರೆ ಬೇರೆ ಬೇರೆ ಎಷ್ಟು ಪಾಪಗಳಿವೆಯೋ ಅವೆಲ್ಲವೂ ಕಳೆದು ಹೋಗುತ್ತವೆ. ಅನಂತರ ನೀನು ನಿನ್ನ ಇಷ್ಟಾರ್ಥವನ್ನು ಅನುಭವಿಸಬಹುದು. ಎಂಬ ತಾತ್ಪರ್ಯವು. ನೀ - ನೀನು, ಆರೋಗ್ಯವನ್ನೂ ಭೋಗಗಳನ್ನೂ, ಇಳಕ್ಕಿರೋಮೆನ್ರು - ಅನುಭವಿಸುವ ಯೋಗ್ಯತೆ ಇಲ್ಲವೆಂದು, ವೆರುಕ್ಕವೇಂಡಾ - ಶೋಕಿಸಬೇಡ, ಎನ್ರು, ಶೊಲ್ಲುಮಾಪ್ಪೋಲೆ, ಎಂದು ಹೇಳುವಹಾಗೆ, ಇರುಕ್ಕಿರದು ಇಚ್ಚರಮಶ್ಲೋಕಮ್ - ಈ ಚರಮಶ್ಲೋಕವಿರುತ್ತದೆ. ತಮ್ಮ ಕಾರಿಕೆಯ ಮತ್ತು ಸಂಹಿತಾವಾಕ್ಯದ ಅಭಿಪ್ರಾಯವನ್ನು ವಿಸ್ತರಿಸಿ, ಎಙ್ಗಿರಕಟ್ಟಳೈಯಾಲೇ - ಎಂದಾರಂಭಿಸಿ, ಇಚ್ಚರಮಶ್ಲೋಕಮ್ - ಎಂದು ಮುಗಿಸಿ, ಉಪಪಾದಿಸಿರುತ್ತಾರೆ. ಈ ಸಿದ್ಧೌಷಧಿಯ ಸ್ಥಾನದಲ್ಲಿ ಮಾಮೇಕಂ - ಎಂಬಲ್ಲಿ ಹೇಳಲ್ಪಟ್ಟ ಶರಣ್ಯನನ್ನೇ ಪ್ರಾಧಾನ್ಯವಾಗಿ, "ಕೃಷ್ಣಂ ಧರ್ಮಂ ಸನಾತನಮ್" ಎಂಬಲ್ಲಿ ತೋರಿಬರುವಹಾಗೆ ಹೇಳಿದರೆ ಸಂಹಿತಾವಾಕ್ಯಕ್ಕೆ ವಿರೋಧವಾಗುವದಿಲ್ಲವೇ ? "ತೇನತೇನಾಪ್ಯತೇತತ್ತನ್ನ್ಯಾಸೇನೈವ ಮಹಾಮುನೇ" ಎಂದು ಅವಧಾರಣದೊಂದಿಗೆ ಹೇಳಿರವದಕ್ಕೆ ಸಾಮಂಜಸ್ಯವಿಲ್ಲದೆ ಹೋಗುವದಿಲ್ಲವೋ ಎಂದರೆ ಸರ್ವಧರ್ಮಾನ್ ಎಂಬಲ್ಲಿರುವ ಸರ್ವ ಶಬ್ದಕ್ಕೆ ಪ್ರತಿದ್ವಂದಿಯಾಗಿ ಈ ಏಕಶಬ್ದವು ಪ್ರಯೋಗಿಸಲ್ಪಟ್ಟಿದ್ದರೂ ಸರ್ವ ಧರ್ಮಗಳ ಸ್ಥಾನದಲ್ಲಿ ಈ ನ್ಯಾಸವೇ ನಿಂತು ಆ ಧರ್ಮಗಳು ಸಾಧಿಸಬಹುದಾದವನ್ನೆಲ್ಲಾ ಸಾಧಿಸುತ್ತದೆಂಬುದು ದ್ಯೋತಿತವೆಂದು ತಿಳಿಸುತ್ತಾರೆ. "ಸರ್ವ" ಶಬ್ದ ಪ್ರತಿಸಂಬಂಧಿಯಾನ ಏಕಶಬ್ದಮ್ ಸರ್ವವೆಂಬ ಶಬ್ದದ ಪ್ರತಿಪ್ರಯೋಗವಾದ ಏಕ ಶಬ್ದವು, ಸಿದ್ಧೋಪಾಯ ಪ್ರಾಧಾನ್ಯತ್ತಾಲೇ ಈ ಸಂದರ್ಭದಲ್ಲಿ ಸಿದ್ಧೋಪಾಯನೇ ಮುಖ್ಯ ಮಾರ್ಗದರ್ಶಿಯಾಗಿಯೂ ಸಹಾಯಕನಾಗಿಯೂ

**ಮೋ ಸರ್ವಧರ್ಮಾಂತರ ಸ್ಥಾನತ್ತಿಲುಮ್ ವಿಧಿಕ್ಕಪ್ಪಡಾಗಿರದೆನ್ರು ಫಲಿಕ್ಕುಮ್. ಇತ್ತಾಲ್ ತ್ರಿವರ್ಗಾದಿಗಳುಮ್ ಇಭ್ಯಗವತ್ಪ್ರಪತ್ತಿ ಪಣ್ಣಲಾಮೆನ್ರದಾಯಿತ್ತು. ಅಪ್ಪೋದು (೧) ತ್ವಯಾಪಿ ಪ್ರಾಪ್ತಮೈಶ್ವರ್ಯಂ ಯತಸ್ತಂ ತೋಷಯಾಮ್ಯಹಂ। ನಾಹಮಾರಾಧಯಾಮಿ ತ್ವಾಂ ತವ ಬದ್ಧೋಯಮಂಜಲಿಃ। ಸ ತ್ವಂ ಪ್ರಹರ ವಾ ಮಾ ವಾ ಮಯಿ ವಜ್ರಂ ಪುರಂದರ। ನಾಹಮುತ್ಸೃಜ್ಯ ಗೋವಿಂದ**

---

ಫಲಪ್ರದನಾಗಿಯೂ ಪ್ರಾಪ್ಯನಾಗಿಯೂ ಇರುವ ಪ್ರಾಧಾನ್ಯದಿಂದ, **ಶರಣ್ಯನ್ನೆ** ವಿಶೇಷಿಸ್ತು ಕೊಂಡು - **ಮಾಂ** ಎಂಬಲ್ಲಿ ತೋರುವ ಶರಣ್ಯನಿಗೆ ವಿಶೇಷಣವಾಗಿ **ಮಾಮೇಕಂ** ಎಂದು ಹೇಳಲ್ಪಟ್ಟು, **ನಿಸ್ರಾಲುಮ್** ಇದ್ದರೂ, **ನ್ಯಾಸೇನೈವ** - ಎಙ್ಗಾರಪಡಿಯೇ - ನ್ಯಾಸೇನೈವ ಎಂಬಲ್ಲಿ ಸಂಹಿತೆಯಲ್ಲಿ ಹೇಳಿರುವಹಾಗೆ, **ಪ್ರಪತ್ತಿಯೊನ್ರುಮೇ** - ಈ ಪ್ರಪತ್ತಿಯೊಂದೇ, **ಸರ್ವಧರ್ಮಾಂತರಸ್ಥಾನತ್ತಿಲುಮ್** ಉಪಾಸನಾದಿ ಬೇರೆ ಧರ್ಮಗಳ ಸ್ಥಾನದಲ್ಲೂ, ಅಥವಾ ಪಾಪಪರಿಹಾರಗಳಾದ **ಪ್ರಾಯಶ್ಚಿತ್ತ**ರೂಪ ಧರ್ಮಗಳಸ್ಥಾನದಲ್ಲೂ, **ವಿಧಿಕ್ಕಪ್ಪಡಾಗಿರದೆನ್ರು**-ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುತ್ತದೆಂದು, **ಫಲಿಕ್ಕುಮ್** – ಬೋಧಿತವಾಗುತ್ತದೆ. **ಇತ್ತಾಲ್** - ಹೀಗೆ ಅನ್ವಯಿಸುವದರಿಂದ, **ತ್ರಿವರ್ಗಾದಿಗಳುಮ್** - ಧರ್ಮ, ಅರ್ಥ, ಕಾಮಗಳು ತ್ರಿವರ್ಗಗಳು, ಅವುಗಳನ್ನು ಅಪೇಕ್ಷಿಸುವವರಿಗೂ ಎಂದು ಅಶಾಶ್ವತ ಫಲಗಳನ್ನು ಕೋರುವ ಬುಭುಕ್ಷುಗಳಿಗೂ, **ಇಭ್ಯಗವತ್ಪ್ರಪತ್ತಿ ಪಣ್ಣಲಾಮ್**–ಈ ಭಗವಂತನಲ್ಲಿ ಶರಣಾಗತಿಯನ್ನು ಮಾಡಬಹುದು. **ಎನ್ರದಾಯಿತ್ತು** - ಎಂದು ಹೇಳಿದಂತಾಯಿತು. ಹೀಗೆ ಭಗವಂತನಲ್ಲಿ ಮಾಡುವ ಶರಣಾಗತಿಯು ಮೋಕ್ಷಮಾತ್ರವಲ್ಲದೆ ಅಧಿಕಾರಿಯ ಇಷ್ಟಾನುಸಾರ ಸರ್ವ ಫಲವನ್ನೂ ಕೊಡಬಲ್ಲದು ಎಂದು ಹೇಳಲ್ಪಟ್ಟಿತು. ಆದರೆ ಈ ಭಗವಚ್ಛರಣಾಗತಿಗೆ ಅನ್ಯದೇವತಾಶ್ರಯಣವು ಕೂಡದೆಂದು ತಿಳಿಸುತ್ತಾರೆ, ಅದಕ್ಕಾಗಿ ವಿಷ್ಣುಧರ್ಮ ವಾಕ್ಯಗಳನ್ನು ಉದಾಹರಿಸುತ್ತಾರೆ **ಅಪ್ಪೋದು**-ಆಸಂದರ್ಭದಲ್ಲಿ(೧)ಇದು ಭಗವದ್ಭಕ್ತನಾದ ವೃತ್ರಾಸುರನು ಇಂದ್ರನಿಗೆ ಹೇಳುವ ವಾಕ್ಯವು, ವೃತ್ರಾಸುರನು ಸಂಕರ್ಷಣೋಪಾಸಕನು, **ಯತಃ**-ಯಾವ ಭಗವಂತನ ಮೂಲಕವಾಗಿ, **ಹೇ ಪುರಂದರ**-ಓ ಇಂದ್ರನೇ **ತ್ವಯಾಪಿ** - ನಿನ್ನಿಂದಲೂ ಕೂಡ, **ಐಶ್ವರ್ಯಂ**-ಇಂದ್ರಲೋಕ ಭೋಗಸಂಪತ್ತು, **ಪ್ರಾಪ್ತಂ**-ಹೊಂದಲ್ಪಟ್ಟಿತೋ, **ತಂ**-ಅಂತಹ ಸರ್ವಾಭೀಷ್ಟಫಲಪ್ರದನನ್ನು, **ಅಹಂ**-ನಾನು, **ತೋಷಯಾಮಿ**-ಧ್ಯಾನಾರಾಧನೆಗಳಿಂದ ಸಂತೋಷಪಡಿಸುವೆನು. **ಅಹಂ** - ನಾನು, **ತ್ವಾಂ** – ಅಶಾಶ್ವತಫಲಪ್ರದನಾದ ನಿನ್ನನ್ನು, **ನಾರಾಧಯಾಮಿ** – ಆಶ್ರಯಿಸಿ ಆರಾಧಿಸುವವನಲ್ಲವು. **ತವ** - ಅಂತಹ ನಿನಗೆ, **ಸಿದ್ಧೋಯಮಂಜಲಿಃ** - ಅಂಜಲಿಪೂರ್ವಕವಾದ ಒಂದು ನಮಸ್ಕಾರವು; ಏತಕ್ಕೆಂದರೆ ನಿನ್ನ ಸಂಬಂಧವುಂಟಾದರೆ ಸಂಸಾರ ಬಂಧವು ತಪ್ಪಿ

---

(೧) ವಿ. ಧ. ೨ ೧೪.೮ ೨೪

ಮನ್ಯ ಮಾರಾಧಯಾಮಿ ಭೋಃ॥" ಇತ್ಯಾದಿಗಳಿಲ್ ಪಡಿಯೋ ನಿತ್ಯನೈಮಿತ್ತಿ ಕಙ್ಗಳಿಲ್ ವಿಶೇಷಣಮಾಯ್ ಪ್ರಕಾಶಿಕ್ಕಿನ್ರವುಮ್ ಮುತ್ತುಮ್ ಸರ್ವಾ ವಸ್ಥೈಯಿಲುಮ್ ದೇವತಾಂತರ ಸ್ಪರ್ಶಮ್ ಅತ್ತಿರಕ್ಕೈ ಉಚಿತಮ್.

---

ದ್ದಲ್ಲವು. ಆದುದರಿಂದ ನಿನಗೊಂದು ನಮಸ್ಕಾರವು ; ಪರಿತ್ಯಾಗ ಭಾವನೆಯಿಂದ ಅಂಜಲಿಯು ಎಂಬ ಭಾವವು. ಪತ್ವಂ – ಅಂತಹ ಅಶಾಶ್ವತ ಫಲವನ್ನು ಕೊಡುವ ನೀನು, ಮಯಿ - ನನ್ನಲ್ಲಿ, ವಜ್ರಂ - ವಜ್ರಾಯುಧವನ್ನು ಪ್ರಹರವಾ-ಬೇಕಾದರೆ ಪ್ರಯೋಗಿಸು, ಅಥವಾ ಮಾವಾ-ಪ್ರಯೋಗಿಸದೆ ಬಿಟ್ಟುಬಿಡು ; ಅಹಂ - ನಾನು, ಗೋವಿಂದಮುತ್ಸೃಜ್ಯ - ಗೋವಿಂದನನ್ನು ಬಿಟ್ಟು, ಭೋಃ – ಓ ಇಂದ್ರನೇ ಅನ್ಯಂ - ಅನ್ಯ ದೇವತೆಯನ್ನು, ನಾರಾಧಯಾಮಿ – ಆರಾಧಿಸುವನಲ್ಲವು. ಇತ್ಯಾದಿಗಳಿಲ್ - ಇವೇ ಮೊದಲಾದ ವಾಕ್ಯಗಳಲ್ಲಿ, ಪಡಿಯೋ - ಹೇಳಿರುವಹಾಗೆ ನಿತ್ಯನೈಮಿತ್ತಿಕಙ್ಗಳಿಲ್ - ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳಲ್ಲಿ, ವಿಶೇಷಣ ಮಾಯ್ ಪ್ರಕಾಶಿಕ್ಕಿನ್ರ - ಕಾಣುತ್ತಿರುವ ದೇವತಾಂತರಗಳು, ಭಗವಂತ ನಿಗೆ ಶರೀರವಾಗಿ ತನ್ಮೂಲಕ ಭಗವಂತನಿಗೆ ವಿಶೇಷಣವಾಗಿರುವ ಸಂಭವದಿಂದುಂ ಟಾಗುವ ಮರ್ಯಾದೆಯನ್ನು ಬಿಟ್ಟು, ಮುತ್ತುಮ್ ಸರ್ವಾವಸ್ಥೈಯಿಲುಮ್ ಮಿಕ್ಕ ಎಲ್ಲಾ ಸಂದರ್ಭಗಳಲ್ಲಿಯೂ, ದೇವತಾಂತರಸ್ಪರ್ಶಮ್ ದೇವತಾಂತರ ಸಂಬಂಧ ವನ್ನು, ಅತ್ತಿರುಕ್ಕೈ - ತ್ಯಾಗ ಮಾಡುವುದು, ಉಚಿತಮ್ - ಶರಣಾಗತನಿಗೆ ಯೋ ಗ್ಯವಾದುದು. ತ್ರಿವರ್ಗಾರ್ಥಿಗಳು ಅಶಾಶ್ವತಫಲಗಳಿಗಾಗಿ ಭಗವಂತನಲ್ಲಿ ಶರಣಾ ಗತಿಯನ್ನೂ ಮಾಡಬಹುದು. ಆದುದರಿಂದ ಅಂತಹ ಸಂದರ್ಭಗಳಲ್ಲಿ ದೇವ ತಾಂತರವನ್ನು ಆಶ್ರಯಿಸುವನು ಎಂದಿಗೂ ಉಚಿತವಲ್ಲವು. ಆದರೆ ನಿತ್ಯನೈಮಿ ತ್ತಿಕಗಳಲ್ಲಿ ಅನ್ಯದೇವತಾ ಸಂಬಂಧವಿದೆಯಲ್ಲಾ, ಆಗಬಹುದೇನು ? ಎಂದರೆ ವಿಧಿ ಪ್ರಾಪ್ತವಾಗಿ ಬಂದುದರಿಂದ, ಆ ದೇವತಾಂತರಗಳು ಪರಮಾತ್ಮನಿಗೆ ಶರೀರವಾಗಿ ವಿಶೇಷಣಗಳಾದುದರಿಂದ, ಅಂತಹ ಸಂದರ್ಭಗಳಲ್ಲಿ ತತ್ಛರೀರಕ ಪರಮಾತ್ಮನೇ ಆರಾಧಿಸಲ್ಪಡುವದರಿಂದ ಬಾಧಕವಿಲ್ಲವು. ಅನುಷ್ಠಾನಾನಂತರ ಸಾತ್ವಿಕ ತ್ಯಾಗ ವನ್ನು ಹೇಳುವದರಿಂದಲೂ ಪ್ರತ್ಯವಾಯವಿಲ್ಲವು. ಆದುದರಿಂದ ಈ ನಿತ್ಯನೈಮಿ ತ್ತಿಕಗಳಲ್ಲದೆ ಬೇರೆ ಸಂದರ್ಭಗಳಲ್ಲಿ ಅನ್ಯದೇವತಾಶ್ರಯಣವು ಸರಾತ್ಮನಾ ಕೂಡ ದೆಂದು ಹೇಳಿದರು. ಮುಖ್ಯನಾಗಿ ಮೋಕ್ಷಾರ್ಥವಾಗಿ ಮಾಡಿದ ಭರನ್ಯಾಸವನ್ನು ಮಾಡಿದ ಕೃತಕೃತ್ಯನಿಗೆ ತ್ಯಾಜ್ಯವು ಯಾವುದು, ಸಶಂಕ್ಯನಿಧಿಪ್ರಾಪ್ತವಾಗಿ ಕರ್ತ ವ್ಯವು ಯಾವುದು, ಅನುಸಂಧೇಯವಾಗಿಯೂ ಪ್ರಾರ್ಥನೀಯವಾಗಿಯೂ ಇರು ವದು ಯಾವುದು ಎಂಬುದನ್ನು ನ್ಯಾಸವಿಂಶತಿಯಲ್ಲಿ (೧೯ನೆಯ ಶ್ಲೋಕ) ಹೇಳಿ ರುತ್ತಾರೆ. ಅದು ಇಲ್ಲಿ ಅನುಸಂಧೇಯವು

**ಮೋಕ್ಷತ್ತುಕ್ಕು ಉಪಾಯಾನ್ತರಾರ್ಥಿಗಳಾಯ್ ಉಪಾಯ ವಿರೋಧಿಗಳೈಕ್ಕಳಿಕ್ಕ ವೇಣ್ಡುವಾರ್ಕ್ಕುಮ್ ಇಪ್ಪ್ರಪತ್ತಿ ಪಣ್ಣಲಾಮ್. ಪ್ರಾಪ್ತಿವಿರೋಧಿಯೈ**

---

ತ್ಯಕ್ತ್ವೋಪಾಯಾನುಪಾಯಾನಪಿ ಪರಮಜಹನ್ ಮಧ್ಯಮಾಂ ಸ್ವಾರ್ಹವೃತ್ತಿಂ।
ಪ್ರಾಯಶ್ಚಿತ್ತಂ ಚ ಯೋಗ್ಯಂ ವಿಗತ ರುಚಿ ತತಿರ್ದ್ವಂದ್ವಮಾತ್ಯಾಂ ತಿತಿಕ್ಷುಃ ।
ಭಕ್ತಿಜ್ಞಾನಾದಿವೃದ್ಧಿಂ ಪರಿಚರಣಗುಣಾನ್ ಸತ್ಸಮೃದ್ಧಿಂ ಚ ಯುಕ್ತ್ಯಾ ।
ನಿತ್ಯಂ ಯಾಚೇದನನ್ಯಸ್ತದಪಿ ಭಗವತಸ್ತಸ್ಯ ಯದ್ವಾऽಪವರ್ಗಾತ್ ॥ ೨

ಕಾಮ್ಯಧರ್ಮಗಳನ್ನೂ ಪ್ರತ್ಯವಾಯ ಹೇತುಗಳಾದ ಉತ್ತರಾಘಗಳನ್ನೂ ತ್ಯಜಿಸತಕ್ಕದ್ದು. ಪ್ರಪತ್ತ್ಯುತ್ತರ ಕಾಲದಲ್ಲಿ ಮೇಲೆ ಹೇಳಿದ ಎರಡು ವಿಧ ಪ್ರವೃತ್ತಿಗಳಲ್ಲದ ತನಗೆ ಯೋಗ್ಯಗಳಾಗಿರುವ ಮತ್ತು ಸ್ವತಂತ್ರ ವಿಧಿ ಮೂಲಕ ಮಾಡಬೇಕಾದ ನಿತ್ಯನೈಮಿತ್ತಿಕಗಳನ್ನೂ ಬಿಡತಕ್ಕದ್ದಲ್ಲವು. ಉತ್ತರಾಘಪ್ರಾಪ್ತವಾದರೆ "ಅಪಾಯ ಸಂಪ್ಲವೇ ಸದ್ಯಃ ಪ್ರಾಯಶ್ಚಿತ್ತಂ ಸಮಾಚರೇತ್" ಎಂದು ಹೇಳಿರುವಹಾಗೆ ಯೋಗ್ಯವಾದ ಪ್ರಾಯಶ್ಚಿತ್ತವನ್ನು ಅನುಷ್ಠಿಸತಕ್ಕದ್ದು. "ದೇವರ್ಷಿಭೂತಾತ್ಮನೃಣಾಂ ಪಿತೄಣಾಂ ನ ಕಿಂಕರೋ ನಾಯಮೃಣೀ ಚ ರಾಜನ್" ಎಂಬಲ್ಲಿ ಹೇಳಿರುವ ಹಾಗೆ ಪ್ರಪನ್ನನು ಋಣತ್ರಯವನ್ನು ಕಳಕೊಂಡವನಾಗಿ ದ್ವಂದ್ವಾತೀತ ನಾಗಿ ಬಿಸಿಗಾಳಿಯನ್ನು ಸಹಿಸಿಕೊಂಡು ಪ್ರಾರಬ್ಧ ಕರ್ಮಕ್ಷಯ ಉಂಟಾಗಿದೆಯೆಂಬ ಹರ್ಷಯುಕ್ತನಾಗಿ ಪರಮಾತ್ಮನಲ್ಲಿ ಭಕ್ತಿಯನ್ನೂ ತನ್ನ ಜ್ಞಾನದ ಅಭಿವೃದ್ಧಿಯನ್ನೂ ಮತ್ತು ಸ್ವಾಮಿ ಕೈಂಕರ್ಯಕ್ಕೆ ಬೇಕಾದ ಫಲಪುಷ್ಪ ಮೊದಲಾದ ಉಪಕರಣಗಳನ್ನೂ. ಅವುಗಳ ಸಮೃದ್ಧಿಯನ್ನೂ ಪ್ರತಿನಿತ್ಯವೂ ಪ್ರಾರ್ಥಿಸುತ್ತಾ ಭಗವಂತನನ್ನೇ ಅನನ್ಯ ಮನಸ್ಕನವನಾಗಿ, ಅನ್ಯದೇವತಾಶ್ರಯಣವನ್ನು ಸರ್ವಾತ್ಮನಾ ತ್ಯಜಿಸಿ ಎಂದು ಹೇಳಲ್ಪಟ್ಟಿರುತ್ತದೆ.

ಈ ಶರಣಾಗತಿಯನ್ನು ಚತುರ್ವಿಧ ಪುರುಷಾರ್ಥಕ್ಕಾಗಿಯೂ ಎಲ್ಲರೂ ಅನುಷ್ಠಿಸಬಹುದೆಂದೂ, ಮೋಕ್ಷಾರ್ಥಿಯೂ ಸರ್ವಪಾಪ ಪರಿಹಾರದೊಂದಿಗೆ ಪ್ರಾಪ್ಯವನ್ನು ಹೊಂದಬಹುದೆಂದೂ ಹೇಳಿದರು. ಈಗ ಭಕ್ತಿಯೋಗನಿಷ್ಠರೂ ಶರಣಾಗತಿಯನ್ನು ಉಪಾಸನಕ್ಕೆ ಅಂಗವಾಗಿ, ಸರ್ವಪಾಪಪರಿಹಾರಕ್ಕಾಗಿ ಅನುಷ್ಠಿಸಬಹುದೆಂದು ತಿಳಿಸುತ್ತಾರೆ. ಈ ಅರ್ಥವೂ ಶ್ರೀ ಯತಿವರ್ಯರ ಎರಡನೆಯ ಯೋಜನೆಯಿಂದ ವಿಶದವಾಗುತ್ತದೆ. **ಮೋಕ್ಷತ್ತುಕ್ಕು** - ಮೋಕ್ಷಪ್ರಾಪ್ತಿಗೋಸ್ಕರ, **ಉಪಾಯಾನ್ತರ ಪ್ರಾಪ್ತಿಗಳಾಯ್** - ಉಪಾಯವಾದ ಭಕ್ತಿಯೋಗವನ್ನು ಅವಲಂಬಿಸಿದವರಿಗೆ **ಉಪಾಯ ವಿರೋಧಿಗಳೈ**-ಭಕ್ತಿಯೋಗಾರಂಭಕ್ಕೆ ವಿರೋಧಿಗಳಾದ ಪಾಪಗಳನ್ನು, **ಕಳಿಕ್ಕವೇಣ್ಡುವಾರ್ಕ್ಕು**-ಹೋಗಲಾಡಿಸಿಕೊಳ್ಳಬೇಕೆಂದಿರುವವರೂ **ಇಪ್ಪ್ರಪತ್ತಿ ಪಣ್ಣಲಾಮ್** - ಈ ಪ್ರಪತ್ತಿಯನ್ನು ಭಕ್ತಿಯೋಗಾರಂಭಕ್ಕೆ ಅಂಗವಾಗಿ ಅನುಷ್ಠಿಸಬಹುದು. ಹೀಗೆ ಶರಣಾಗತಿಯು ಎರಡು ವಿಧ ಉಪಾಯಗಳಿಗೂ ಅವ

**ಕಳಿಕ್ಕವೇಣ್ಡು ವಾರ್ಕ್ಕುಮ್ ಇಪ್ಪ್ರಪತ್ತಿ ಪಣ್ಣಲಾಮ್ ತಾನೇಯುಮನ್ಯೈಯುಮೆನ್ರು ಪ್ರಪತ್ತಿಯುಡೈಯ ಸಕಲಾಭಿಮತ ಸಾಧನತವಮ್ ಇಙ್ಗೇ ಶೊಲ್ಲಿತ್ತಾಯಿತ್ತು.**

---

ಶ್ಯಕವು ಅದ್ವಾರಕವಾಗಿ ಭರನ್ಯಾಸನಿಷ್ಠಗೂ ಆವಶ್ಯಕವು. ಆದುದರಿಂದಲೇ ಎರಡು ಉಪಾಯಗಳಿಗೂ ಆವಶ್ಯಕವಾದುದರಿಂದಲೇ ಶ್ರೀಯತಿವರ್ಯರು 'ತಸ್ಯಚವಶೀಕರಣಂ ತಚ್ಛರಣಾಗತಿರೇವ' ಎಂದು ಭಾಷ್ಯದಲ್ಲಿ ಅನ್ವಯಕೊಡಿಸಿರುತ್ತಾರೆ. ಯಾವ ಉಪಾಯ ಮೂಲಕವಾಗಿಯಾಗಲಿ ಭಗವಂತನನ್ನು ವಶಮಾಡಿಕೊಳ್ಳುವದಕ್ಕೆ ಶರಣಾಗತಿಯು ಆವಶ್ಯಕವೆಂದು ಹೇಳಿದರು. ಭಕ್ತಿಯೋಗದಲ್ಲಿ ಅಂಗವಾಗಿರಬೇಕು ಭರನ್ಯಾಸದಲ್ಲಿ ಅಂಗಿಯಾಗಿಯೇ ಆವಶ್ಯಕವು ಎಂಬ ಭಾವವು

[illegible] ಪ್ರಾಪ್ತಿವಿರೋಧಿಗಳಾದ ಪಾಪಗಳನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಪ್ರಪತ್ತಿಯು ಆವಶ್ಯಕವಾದ ಹಾಗೆ, ಭರನ್ಯಾಸನಿಷ್ಠನಿಗೆ ಸರ್ವ ಪಾಪಪರಿಹಾರಕ್ಕೂ ಈ ಪ್ರಪತ್ತಿಯೇ ಸಾಕು ಎಂದು ಮುಂದೆ ತಿಳಿಸುತ್ತಾರೆ. **ಪ್ರಾಪ್ತಿ ವಿರೋಧಿಯೈ ಕಳಿಕ್ಕವೇಣ್ಡುವಾರ್ಕ್ಕುಮ್**- ಪ್ರಾಪ್ತಿವಿರೋಧಿಗಳಾದ ಪಾಪಗಳನ್ನು ಹೋಗಲಾಡಿಸಿಕೊಳ್ಳಬೇಕೆಂದಿರುವವರಿಗೂ, **ಇಪ್ಪ್ರಪತ್ತಿತಾನೇ** - ಈ ಪ್ರಪತ್ತಿಯು ಸ್ವತಂತ್ರವಾಗಿಯೇ, **ಅನ್ಯೈಯುಮ್**-ಸಾಕು, **ಎನ್ರು**-ಎಂಬದಾಗಿ **ಪ್ರಪತ್ತಿಯಿನುಡೈಯೆ**- ಈ ಪ್ರಪತ್ತಿಯು, **ಸಕಲಾಭಿಮತಸಾಧನತವಂ**-ಎಲ್ಲ ತನಗೆ ಬೇಕಾದ ಪುರುಷಾರ್ಥಗಳಿಗೂ ಸಾಧನವಾಗಿರೋಣವು, **ಶೊಲ್ಲಿತ್ತಾಯಿತ್ತು** - ಹೇಳಿದಂತಾಯಿತು. ಶರಣಾಗತಿಯು ಅಂಗವಾಗಿ ಉಪಾಸನಾರಂಭಕ್ಕೆ ಪ್ರತಿಬಂಧಕವಾದ ಪಾಪಗಳನ್ನೆಲ್ಲಾ ಹೋಗಲಾಡಿಸಲು ಉಪಯುಕ್ತವು. ಅಂಗಿಯಾಗಿ ಮುಕ್ತಿಗೆ ಪ್ರತಿಬಂಧಕವಾದ ಪಾಪಗಳನ್ನೆಲ್ಲಾ ಹೋಗಲಾಡಿಸಬಲ್ಲದು. ಇದರಿಂದ ಶರಣಾಗತಿಯು ಸಕಲಪುರುಷಾರ್ಥಸಾಧನವೆಂದು ಹೇಳಲ್ಪಟ್ಟಿತು. ಹೀಗೆ ತನಗೆ ಬೇಕಾದ ಯಾವ ಯಾವ ಪುರುಷಾರ್ಥಗಳು ಇಲ್ಲವೇ ಎಂದು ಯೋಚಿಸುತ್ತಿರುವವನಿಗೆ ಶರಣಾಗತಿಯ ಮೂಲಕ ಆ ಪುರುಷಾರ್ಥಗಳನ್ನು ನಾನೇ ಸಾಧಿಸಿಕೊಡುವನೆಂದು ಹೇಳಿದಂತಾಯಿತು.

ಈ ಅಭಿಪ್ರಾಯವು ಹೇಗೆ ಆದರಣೀಯವು? ಎಂದರೆ, ತದ್ದರ್ಶನಸ್ಥಾಪಕರು ಹಾಗೆಯೇ ಅಭಿಪ್ರಾಯಪಟ್ಟಿರುತ್ತಾರೆಂದು ಹೇಳುತ್ತಾರೆ. ಈ ಶರಣಾಗತಿಯು ಎರಡು ಉಪಾಯಗಳಾದ ಭಕ್ತಿ ಪ್ರಪತ್ತಿಗಳಿಗೂ ಆವಶ್ಯಕವೆಂದು ಶ್ರೀಯತಿವರ್ಯರು ಹೇಳಿರುತ್ತಾರೆ. ಈ ಚರಮಶ್ಲೋಕದ ಭಾಷ್ಯದಲ್ಲಿ ಎರಡನೆಯ ಯೋಜನೆಯಲ್ಲಿ ಭಕ್ತ್ಯಂಗಕ ಶರಣಾಗತಿಯನ್ನು ಉಪಪಾದಿಸಿ ಹೇಳಿದರು. ಶರಣಾಗತಿಗದ್ಯದಲ್ಲಿ ಅಂಗಿಯಾದ ಸ್ವತಂತ್ರಪ್ರಪತ್ತಿಯನ್ನು ಉಪಪಾದಿಸಿ ಹೇಳಿದರು. ಹೀಗೆ ಎರಡು

ಪ್ರಪತ್ತಿಃ ವಿರೋಧಿ ನಿವರ್ತನೇನ ಭಕ್ತಿನಿಷ್ಪಾದಕತ್ವಂ ಸಾಕ್ಷಾನ್ಮೋಕ್ಷ ಸಾಧನಂ ಚ ಅಸ್ತೀತಿ ಶ್ರೀಭಾಷ್ಯಕಾರ ಸಂಮತಮಿತ್ಯಾಹ

ಇದಿಲ್ ಪ್ರಪತ್ತಿ ಉಪಾಯವಿರೋಧಿಯ್ಯೈ ಕಳಿಕ್ಕುಮ್ ಕಟ್ಟಳೈಯ್ಯೈ ಶ್ರೀಗೀತಾ ಭಾಷ್ಯತ್ತಿಲೇ ದ್ವಿತೀಯ ಯೋಜನೈಯಿಲೇ ಅರುಳಿಚ್ಚೆಯ್ದಾರ್ ಪ್ರಾಪ್ತಿವಿರೋಧಿಯ್ಯೈ ಕಳಿಕ್ಕುಮ್ ಕಟ್ಟಳೈಯ್ಯೈ ಗದ್ಯತ್ತಿಲೇ ಯರುಳಿಚ್ಚೆಯ್‌ದಾರ್

ಪ್ರಪತ್ತಿಯು ವಿರೋಧಿ ನಿವರ್ತನದ್ವಾರಾ ಭಕ್ತಿಯ ನಿಷ್ಪಾದಕವೂ ಮತ್ತು ಸಾಕ್ಷಾತ್ತಾಗಿಯೂ ಮೋಕ್ಷಸಾಧನವೂ ಎಂಬುದು ಶ್ರೀಭಾಷ್ಯಕಾರರ ಅಭಿಪ್ರಾಯವು.

ಸಂದರ್ಭಗಳಲ್ಲೂ ಪ್ರಪತ್ತಿಯು ಪಾಪಪರಿಹಾರಕ್ಕೆ ಆವಶ್ಯಕವೆಂದು ಮುಂದಿನ ವಾಕ್ಯಗಳಿಂದ ತಿಳಿಸುತ್ತಾರೆ —

**ಇದಿಲ್**-ಈಗ ನಾವು ಉಪಪಾದಿಸಿದ ಸಂದರ್ಭದಲ್ಲಿ, ಅದು ಯಾವುದು ಎಂಬುದನ್ನು ತಾವೇ ಮುಂದಿನ ವಾಕ್ಯಖಂಡದಿಂದ ತಿಳಿಸುತ್ತಾರೆ. **ಪ್ರಪತ್ತಿ**-ಶರಣಾಗತಿಯು, **ಉಪಾಯ ವಿರೋಧಿಯ್ಯೈ**-ಭಕ್ತ್ಯುಪಾಯಾರಂಭಕ್ಕೆ ವಿರೋಧಿಗಳಾದ ಪಾಪಿಗಳನ್ನು, **ಕಳಿಕ್ಕುಮ್ ಕಟ್ಟಳೈಯ್ಯೈ**-ಹೋಗಲಾಡಿಸುವ ಮರ್ಯಾದೆಯನ್ನು, ಶ್ರೀಗೀತಾ ಭಾಷ್ಯದಲ್ಲಿ, **ದ್ವಿತೀಯಯೋಜನೆಯಿಲೆ**-ಎರಡನೆಯ ಯೋಜನೆಯಲ್ಲಿ **ಅಥವಾ** ಎಂದಾರಂಭಿಸಿ "ಶರಣಂ ವ್ರಜ ಇತಿ" ಎಂದು ಮುಗಿಸಿಹೇಳಿದ ಯೋಜನೆಯಲ್ಲಿ, **ಅರುಳಿಚ್ಚೆಯ್‌ದಾರ್**–ಕೃಪಯಾ ಅಪ್ಪಣೆಕೊಡಿಸಿದರು. **ಪ್ರಾಪ್ತಿವಿರೋಧಿಯ್ಯೈ** ಭಗವತ್ಪ್ರಾಪ್ತಿಗೆ ವಿರೋಧವಾದ ಅಪರಾಧಗಳನ್ನೆಲ್ಲಾ, **ಕಳಿಕ್ಕುಮ್ ಕಟ್ಟಳೈಯ್ಯೈ** ಹೋಗಲಾಡಿಸುವ ಮರ್ಯಾದೆಯ ವಿಷಯವಾಗಿ, **ಗದ್ಯತ್ತಿಲೇ**–ಶರಣಾಗತಿಗದ್ಯದಲ್ಲಿ, **ಅರುಳಿಚ್ಚೆಯ್‌ದಾರ್**–ಕೃಪಯಾ ಅಪ್ಪಣೆ ಕೊಡಿಸಿದರು ಅದೆಲ್ಲಿ? ಎಂದರೆ "ಮನೋವಾಕ್ಕಾಯೈಃ" ಎಂದಾರಂಭಿಸಿದ ವಾಕ್ಯದಿಂದ ಸರ್ವಪಾಪಪರಿಹಾರವನ್ನು ಪ್ರಾರ್ಥಿಸಿರುತಾರೆ. ಹೀಗೆ ಹೇಳಿರುವುದು ಸಾಧಾರಣವಾಗಿ ಗ್ರಹಿಸುವ ಶಕ್ತಿಯುಳ್ಳವರಿಗೆ ದ್ವಿತೀಯಯೋಜನೆಯಲ್ಲಿ ಶ್ರೀಭಾಷ್ಯಕಾರರ ಅಭಿಪ್ರಾಯವು ಅಂಗಶರಣಾಗತಿ ಮಾತ್ರವೇ ಈ ಚರಮಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆಂದು ತೋರಿಬರಬಹುದು. ಹಾಗಾದರೆ ಶ್ರೀ ಯತಿವರ್ಯರ ಅಭಿಪ್ರಾಯವೂ ಮತ್ತು ಶ್ರೀದೇಶಿಕರವರ ಅಭಿಪ್ರಾಯವೂ ಪರಸ್ಪರ ವ್ಯತ್ಯಸ್ತವಾದುವಲ್ಲವು. ಚರಮಶ್ಲೋಕವು ಎರಡು ವಿಧ ಪ್ರಪತ್ತಿಗೂ ಅನ್ವಯಿಸುತ್ತದೆಂಬುವದು ಇಬ್ಬರ ಮಹನೀಯರ ಅಭಿಪ್ರಾಯವೆಂಬುದನ್ನು ಈ ಹಿಂದೆಯೇ ಉಪಪಾದಿಸಿರುವೆವು.

ಒಂದುಸಂದರ್ಭದಲ್ಲಿ ಶರಣಾಗತಿಯು "**ಭಕ್ತಿಯೋಗಸ್ಯತದಾರಂಭ ವಿರೋಧಿ ಪಾಪಾನಾಮಾನನ್ತ್ಯಾತ್ ತತ್ಪ್ರಾಯಶ್ಚಿತ್ತರೂಪಧರ್ಮೈಃ ದುಸ್ತರತಯಾ**

ಇನ್ನೈ ಇರಣ್ಡಿಡತ್ತಿಲುಮ್ ಒನ್ನೈ ಅನಂದರಿತ್ತೊನ್ನೈಯರುಳಿಚ್ಚೆಯ್ದ ಪಡಿಯನ್ರು. ಇರಣ್ಡಿಡಮುಮ್ ಸರ್ವಾಭಿಮತಸಾಧನಮಾನ ಇವ್ವುಪಾಯತ್ತಿನ್ ಪ್ರಭಾವತ್ತುಕ್ಕು ಉದಾಹರಣಪರಮ್. ಪ್ರಣವಂ ಮನ್ತ್ರಾಂ

ಆತ್ಮನೋಭಕ್ತಿಯೋಗಾರಂಭಾನರ್ಹತಾಮಾಲೋಚ್ಯ ಶೋಚಿತೋಽರ್ಜುನಸ್ಯಶೋಕಮಪನುದನ್ ಶ್ರೀ ಭಗವಾನುವಾಚ-ಸರ್ವಧರ್ಮಾನ್ ಪರಿತ್ಯಜ್ಯಮಾಮೇಕ ಶರಣಂ ವ್ರಜ-ಇತಿ'' ಭಕ್ತಿಯೋಗಾರಂಭಕ್ಕೆ ವಿರೋಧಿಗಳಾದ ಪಾಪಗಳ ಬಹುತ್ವದಿಂದ, ಅವುಗಳಿಗೆಲ್ಲಾ ಪ್ರಾಯಶ್ಚಿತ್ತಗಳನ್ನು ಪರಿಮಿತಕಾಲದಲ್ಲಿ ನಡೆಸುವದು ದುಸ್ತರವಾದುದರಿಂದ, ಅಂತಹ ಪ್ರಾಯಶ್ಚಿತಗಳನ್ನೆಲ್ಲಾ ತ್ಯಜಿಸಿ, ನನ್ನೊಬ್ಬನನ್ನೇ ಸಿದ್ಧೋಪಾಯನನ್ನಾಗಿಭಾವಿಸಿ ನನ್ನನ್ನು ಶರಣುಹೊಂದು ಎಂಬ ಶ್ರೀ ಭಾಷ್ಯಾಕಾರರವರ ಭಾಷ್ಯದಪ್ರಕಾರ, ಭಕ್ತಿಯೋಗಪ್ರತಿಬಂಧಕ ಪಾಪಗಳ ನಿವಾರಣೆಯನ್ನು ಉಂಟುಮಾಡುತ್ತದಂದು ಹೇಳಲ್ಪಟ್ಟಿತು. ಶರಣಾಗತಿಗದ್ಯದಲ್ಲಾದರೋ ''ಮನೋವಾಕ್ಕಾಯೈ" ಎಂಬ ವಾಕ್ಯ ಮೂಲಕ ಮೋಕ್ಷಪ್ರಾಪ್ತಿಗೆ ವಿರೋಧಿಗಳಾದ ಸರ್ವಪಾಪಗಳ ನಿವೃತ್ತಿಯನ್ನು ಪ್ರಾರ್ಥಿಸಿ ಶರಣಾಗತಿಯನ್ನು ಅನುಷ್ಠಿಸುವದರಿಂದ ಆದರಿಂದ ಸುಪ್ರೀತನಾದ ಶ್ರೀ ರಂಗನಾಥರು ''ಅನನ್ತತದ್ವಿರೋಧಿಪಾಪಾಕ್ರಾನ್ತೋಽಪಿ ಅನನ್ತಮದೀಯಾಪಚಾರಯುಕ್ತೋಽಪಿ, ಅನನ್ತಾಸಹ್ಯಾಪಚಾರಯುಕ್ತೋಽಪಿ" ಹೀಗೆ ಪ್ರಾಪ್ತಿವಿರೋಧಿಗಳಾದ ಅನಂತಪಾಪಗಳಿಂದ ನೀನು ಯುಕ್ತನಾಗಿದ್ದರೂ ಕೂಡ ''ನಿತ್ಯಕಿಂಕರೋಭವ'' ಎಂದು ಅನುಗ್ರಹಿಸಿದರೆಂದು ಹೇಳಲ್ಪಟ್ಟಿರುತ್ತದೆ.

ಹೀಗೆ ಒಂದುಕಡೆಯಲ್ಲಿ ಉಪಾಯಾರಂಭಕವಿರೋಧಿ ಪಾಪಗಳು ಪ್ರಪತ್ತಿಯಿಂದ ಕಳೆಯುತ್ತವೆ ಎಂದೂ, ಇನ್ನೊಂದು ಕಡೆಯಲ್ಲಿ ಪ್ರಾಪ್ತಿವಿರೋಧಿ ಪಾಪಗಳೆಲ್ಲ ಕಳೆಯುತ್ತವೆ ಎಂದೂ ಹೇಳಿರುವದೇನೂ ಪರಸ್ಪರ ವಿರುದ್ಧಾಭಿಪ್ರಾಯಗಳೇ ? ಅಥವಾ ಒಂದನ್ನು ನಿರಾಕರಿಸಿ ಇನ್ನೊಂದು ಮುಖ್ಯವಾದುದೆಂಬ ಅಭಿಪ್ರಾಯದಿಂದ ಹೇಳಿದುದೇ ? ಎಂದರೆ, ಹಾಗೇನೂ ಇಲ್ಲವೆಂದು ಸಮಾಧಾನವನ್ನು ಹೇಳುತ್ತಾರೆ. ಪ್ರಪತ್ತಿಗೆ ಸರ್ವಫಲಸಾಧನತ್ವ ಉಂಟೆಂಬುದು ಅವರ ಅಭಿಪ್ರಾಯವು. ಉಪಾಸನಕ್ಕೆ ಅಧಿಕಾರ ಸಾಮರ್ಥ್ಯಗಳನ್ನುಳ್ಳವನಿಗೆ ಉಪಾಯಾರಂಭಕ್ಕೆ ವಿರೋಧಿಪಾಪಗಳ ನಿವಾರಣೆಯನ್ನು ಈ ಉಪಾಸನಾಂಗಶರಣಾಗತಿಯು ಉಂಟುಮಾಡುತ್ತದೆಂದು ಶ್ರೀ ಭಗವದ್ಗೀತೆಯಲ್ಲಿ ಹೇಳಿದರು. ಆ ಉಪಾಯಕ್ಕೆ ಅಧಿಕಾರಸಾಮರ್ಥ್ಯಗಳಿಲ್ಲದ ಅಕಿಂಚನಾಧಿಕಾರಿಗೆ ಪ್ರಪದನವೇ ಅಂಗಿಯಾಗಿ ಮೋಕ್ಷವನ್ನು ಕೊಡುವ ಶಕ್ತಿಯಿರುವದರಿಂದ ಪ್ರಾಪ್ತಿವಿರೋಧಿಗಳಾದ ಸರ್ವಪಾಪಗಳ ನಾಶವು ಎಂದು ಗದ್ಯವಲ್ಲಿ ಹೇಳಲ್ಪಟ್ಟಿತು ; ಆದುದರಿಂದ ಇವೆರಡು ಉಪಪಾದನೆಗಳಲ್ಲೂ ಏನೊಂದು ಅಸಾಮಂಜಸ್ಯವೂ ಇಲ್ಲವೆಂದು ಮುಂದಿನ ವಾಕ್ಯಗಳಿಂದ ತಿಳಿಸುತ್ತಾರೆ. ಗೀತಾಭಾಷ್ಯದಲ್ಲಿ ಉಪಾಸನದ ಅಂಗ ಶರಣಾಗತಿಯನ್ನು ಮಾತ್ರ ಹೇಳಿ, ಅಂಗಿ ಶರಣಾಗತಿಯ ವಿಷಯವಾಗಿ ಹೇಳಿರುವದೂ, ಗದ್ಯದಲ್ಲಿ ಅಂಗ ಶರಣಾಗತಿಯನ್ನು ಮಾತ್ರ ಹೇಳಿ,

ಅಂಗಿ ಶರಣಾಗತಿಯನ್ನು ಹೇಳದಿರುವದು ಅನಾದರಭಾವದಿಂದಲ್ಲನ್ನು, ಪ್ರಕರಣಾನುಗುಣವಾಗಿ ಹೇಳಿದರೆ ವಿನಾ, ಅನ್ಯಥಾ ಅಲ್ಲವೆಂದು ತಿಳಿಸುತ್ತಾರೆ. **ಇವೈ ಇರಣ್ಡಿತ್ತಿಲುವಮ್**—ಈ ಎರಡು ವಿಧ ಶರಣಾಗತಿಯ ಉಪಪಾದನೆಯಲ್ಲೂ, **ಒನ್ನೈ ಅನಾದರಿತ್ತೊನ್ನೈ**—ಒಂದನ್ನು ಅನಾದರಣೆ ಮಾಡಿ ಇನ್ನೊಂದನ್ನು **ಕ್ಕೊಂಡಾಡಿಯ್ಯದ ಪಡಿಯನ್ರು**—ಶ್ಲಾಘಿಸಿ ಹೇಳಿದರೆಂಬರ್ಥವಲ್ಲವು. **ಇರಣ್ಡಿಡಮುಮ್**—ಎರಡು ಸಂದರ್ಭದಲ್ಲೂ, **ಸರ್ವಾಭಿಮತಸಾಧನಮಾನ**—ಸರ್ವಾಭೀಷ್ಟಗಳನ್ನೂ ಸಾಧಿಸಿಕೊಡುವ, **ಇವ್ವುಪಾಯತ್ತಿನ್ ಪ್ರಭಾವತ್ತುಕ್ಕು**—ಈ ಉಪಾಯವಾದ ಶರಣಾಗತಿಯ ಮಾಹಾತ್ಮ್ಯಕ್ಕೆ, **ಉದಾಹರಣಪರಮ್**-ನಿದರ್ಶನ ರೂಪವಾದುದು.

ಆಗಲಿ, ಪ್ರಪತ್ತಿಯು ಒಂದು ಸಂದರ್ಭದಲ್ಲಿ ಸದ್ವಾರಕವಾಗಿಯೂ, ಒಂದು ಸಂದರ್ಭದಲ್ಲಿ ಅದ್ವಾರಕವಾಗಿಯೂ, ಒಂದು ಸಂದರ್ಭದಲ್ಲಿ ವ್ಯವಹಿತಸಾಧನವಾಗಿಯೂ, ಒಂದು ಸಂದರ್ಭದಲ್ಲಿ ಅವ್ಯವಹಿತವಾಗಿಯೂ, ಎಂದರೆ ಒಂದು ಸಂದರ್ಭದಲ್ಲಿ ಅಂಗವಾಗಿಯೂ, ಇನ್ನೊಂದು ಸಂದರ್ಭದಲ್ಲಿ ಅಂಗಿಯಾಗಿಯೂ ಎಲ್ಲಿಯಾದರೂ ಇರುತ್ತದೆಯೋ ? ಅದು ಒಪ್ಪತಕ್ಕ ಮಾತೇ ? ಎಂಬ ಶಂಕಾವಿಗೆ ಸಮಾಧಾನವಾಗಿ ಒಂದು ದೃಷ್ಟಾಂತ ಮೂಲಕ ಶಂಕಾವನ್ನು ಪರಿಹರಿಸುತ್ತಾರೆ. ದೃಷ್ಟಾಂತವು ಯಾವುದೆಂದರೆ ಪ್ರಣವವು ಇತರ ಮನ್ತ್ರಗಳೊಂದಿಗೆ ಸೇರಿ ಪ್ರಯೋಗಿಸಲ್ಪಟ್ಟರೆ, ಪ್ರಣವಕ್ಕೆ ಆಗ ಕೇವಲ ಪ್ರಾಶಸ್ತ್ಯಪರತ್ವವು ವ್ಯಕ್ತವು. ಹಾಗಲ್ಲದೆ ಪ್ರಣವೋಪಾಸನೆಯನ್ನೇ ತ್ರಿಮಾತ್ರೆಯಿಂದ ಉಚ್ಚರಿಸಿ ನಡೆಸಿದರೆ ಸ್ವತಂತ್ರವಾಗಿಯೇ ಮೋಕ್ಷದಾಯಕವು. ಹೀಗೆ ಪ್ರಮಾಣಗಳಿವೆ. **ಪ್ರಣವಂ**—ಓಂಕಾರವು, **ಮನ್ತ್ರಾಂತರತ್ತಿಲ್ ಪ್ರವೇಶಿತ್ತೂನಿನ್ರು**—ಬೇರೆ ಮನ್ತ್ರಕ್ಕೆ ಸೇರಿ ಇದ್ದುಕೊಂಡೂ, **ಮನ್ತ್ರಸ್ವತಂತ್ರಮಾಯುಮ್**—ಹಾಗೆ ಸೇರದೆ ಸ್ವತಂತ್ರವಾಗಿಯೂ, **ನಿರ್ಕುಮಾಪ್ಪೋಲೇ**—ಇರುವಹಾಗೆ, **ಇಪ್ರಪತ್ತಿ**—ಈ ಪ್ರಪತ್ತಿಯು, **ಅಧಿಕಾರಿ ವಿಶೇಷತ್ತಿಲೇ**—ತ್ರೈವರ್ಣಿಕರಲ್ಲಿ ಒಬ್ಬನಾದ ಯೋಗನಿಷ್ಠನಿಗೆ **ಭಕ್ತ್ಯಂಗಮುಮಾಯ್**—ಭಕ್ತಿಯೋಗಕ್ಕೆ ಅಂಗವಾಗಿಯೂ, **ಅಧಿಕಾರ್ಯಂತರತ್ತಿಲೇ**—ಅದಕ್ಕೆ ಅಶಕ್ತನಾದ ಬೇರೆ ಅಧಿಕಾರಿಯಲ್ಲಿ, **ಸ್ವತಂತ್ರವಾಗಿಯೂ, ಇರುಕ್ಕೈ**—ಇರೋಣವು, **ವಚನಬಲತ್ತಾಲೇ**—ಶಾಸ್ತ್ರಪ್ರಮಾಣದ ಬಲದಿಂದ, **ಸಿದ್ಧವು**. ಪ್ರಣವವು ಛಾಂದೋಗ್ಯದಲ್ಲಿ ಉದ್ಗೀಥ ಶಬ್ದದಿಂದ ಹೇಳಲ್ಪಟ್ಟು, ಅದು ಅನ್ಯ ಮನ್ತ್ರಗಳೊಂದಿಗೆ ಸೇರಿದಾಗ **"ಯದೇವ ವಿದ್ಯಯಾಕರೋತಿ ತದೇವ ವೀರ್ಯವತ್ತರಂ ಭವತಿ"** ಎಂದು ಒಂದುಕಡೆಯಲ್ಲೂ, ಇನ್ನೊಂದು ಸ್ಥಳದಲ್ಲಿ **"ಅನ್ನವಾನ್ ಅನ್ನಾದೋ ಭವತಿ"** ಇನ್ನೊಂದು ಸ್ಥಳದಲ್ಲಿ **"ದೇವಾ ಅಮೃತಾ ಅಭಯಾ ಅಭವನ್"**

ರತ್ತಿಲ್ ಪ್ರವೇಶಿತ್ತು, ನಿನ್ರು ಸ್ವತಂತ್ರಮಾಯುಮ್ ನಿರ್ವಹಿಪ್ಪೋಲೆ, ಇಪ್ಪ್ರಪತ್ತಿ ಅಧಿಕಾರಿ ವಿಶೇಷತ್ತಿಲೇ ಭಕ್ತ್ಯಂಗಮುಮಾಯ್, ಅಧಿಕಾರ್‍ಯಂತರತ್ತಿಲೇ ಸ್ವತಂತ್ರಮುಮಾಯ್, ಇರುಕ್ಕೈ ವಚನ ಬಲತ್ತಾಲೇ ಸಿದ್ಧಮ್.

---

ಇತ್ಯಾದಿ ಫಲಗಳು ಅಂಗವಾಗಿರುವ ಸಂದರ್ಭದಲ್ಲಿ ಹೇಳಲ್ಪಟ್ಟಿರುತ್ತದೆ. ಮತ್ತು ಪ್ರಶ್ನೋಪನಿಷತ್ತಿನಲ್ಲಿ **ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತಾಕ್ಷರಂ ಪರಂ ಪುರುಷಮಭಿಧ್ಯಾಯೀತ**" ಎಂದಾರಂಭಿಸಿ "**ಸ ಏತಸ್ಮಾಜ್ಜೀವಘನಾತ್ಪರಾತ್ಪರಂ ಪುರಿಶಯಂ ಪುರುಷ ಮೀಕ್ಷತೇ**" ಎಂದು ತ್ರಿಮಾತ್ರೆಯಿಂದ ಉಪಾಸನೆಗೆ ಮೋಕ್ಷ ಫಲವು ಹೇಳಲ್ಪಟ್ಟಿರುತ್ತದೆ. ದಾಸನ ಭಗವದ್ಗೀತೆಯ ದ್ವಿತೀಯಪಟ್ಟದ ೯೪೬ನೆಯ ಪುಟವನ್ನು ನೋಡಿ. ಭಗವದ್ಗೀತೆಯ ೮-೧೩ನೆಯ ಶ್ಲೋಕವು ಈಸಂದರ್ಭದಲ್ಲಿ ಅನುಸಂಧೇಯವು:— **ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಂ ಅನುಸ್ಮರನ್। ಯಃ ಪ್ರಯಾತಿ ತ್ಯಜಂ ದೇಹಂ ಸಯಾತಿ ಪರಮಾಂ ಗತಿಮ್**" ಪ್ರಣವವು ಹೇಗೆ ಅಂಗವಾಗಿಯೂ ಅಂಗಿಯಾಗಿಯೂ ಭಿನ್ನ ಫಲದಾಯಕವೋ, ಹಾಗೆಯೇ ಪ್ರಪತ್ತಿಯು ಅಂಗವಾಗಿ ಉಪಾಸನಾರಂಭಕ ವಿರೋಧಿ ಪಾಪಪರಿಹಾರವನ್ನೂ, ಅಂಗಿಯಾಗಿ ಸ್ವತಂತ್ರಿಸಿ, ಮೋಕ್ಷಪ್ರಾಪ್ತಿ ವಿರೋಧಿ ಸರ್ವಪಾಪಗಳ ಪರಿಹಾರವನ್ನೂ ಕೊಡಬಲ್ಲದು ಎಂಬ ಭಾವವು. ಈ ವಿಷಯದಲ್ಲಿ ಅಸಾಮಂಜಸ್ಯ ಉಂಟೆಂಬ ಶಂಕಾವಿಗೆ ಕಾರಣವಿಲ್ಲವೆಂಬ ತಾತ್ಪರ್ಯವು. ಹೀಗೆ ಎರಡು ವಿಧವಾಗಿ ಪ್ರಪತ್ತಿಯ ಫಲವೆಂಬುದು ಶಾಸ್ತ್ರಪ್ರಮಾಣದಿಂದಲೇ ಸಿದ್ಧವೆಂದು ಹೇಳಿದರು ಅದು ಯಾವುದೆಂದರೆ:— "**ಸಾಧನಾನ್ತರಯುಕ್ತಾವಾ ಪ್ರಪತ್ತಿ ಸ್ಸ್ವಯಮೇವ ವಾ ಸಾಧಯೇನ್ಮುಕ್ತಿ ಕಾಮಾನಾಂ ವಿಮುಕ್ತಿಂ ಪ್ರಣವೋ ಯಥಾ**" ಎಂಬುದು. ಬೇರೆ ಸಾಧನವಾದಭಕ್ತಿಯೋಗದಿಂದ ಸೇರಿಯಾಗಲಿ, ಅಥವಾ ಸ್ವತಂತ್ರವಾಗಿಯಾಗಲಿ, ಮುಕ್ತಿಕಾಮರಿಗೆ ಮುಕ್ತಿಯನ್ನು ಕೊಡಬಲ್ಲದು, ಪ್ರಣವವು ಹೇಗೋಹಾಗೆ ಎಂದು ಹೇಳಲ್ಪಟ್ಟಿತು. ಪ್ರಣವದ ಉಪಾಸನೆಯು ವಿದ್ಯಾಂಗವಾಗಿಯಾಗಲಿ ಸ್ವತಂತ್ರವಾಗಿಯಾಗಲಿ ಹೇಗೆ ಮೋಕ್ಷವನ್ನು ಸಾಧಿಸಬಲ್ಲದೋ ಹಾಗೆ ಎಂಬ ಭಾವವು. ಹಾಗೆಯೇ ಗೀತಾವಚನಗಳಲ್ಲೂ ಪ್ರಪತ್ತಿಯು ಅಂಗಿಯಾಗಿಯೂ ಅಂಗವಾಗಿ ಉಪಾಯ ನಿಷ್ಪಾದನದ್ವಾರಾ ಮೋಕ್ಷದಾಯಿಕವೆಂಬುದು ಸಿದ್ಧವು. ಗೀತಾ ೭.೧೪ ನೆಯ ಶ್ಲೋಕವಾದ "**ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂತರನ್ತಿತೇ**" ಎಂಬಲ್ಲಿ ಶರಣಾಗತಿಯು ಅಂಗವಾಗಿ ಸದ್ವಾರಕವಾಗಿಯೂ, ಅಂಗಿಯಾಗಿ ಅದ್ವಾರಕವಾಗಿಯೂ ಮಾಯಾತರಣಕ್ಕೆ ಒಳ್ಳೇ ಉಪಾಯವೆಂದು ಹೇಳಲ್ಪಟ್ಟಿತು. ಹಾಗೆಯೇ ಈ ಚರಮಶ್ಲೋಕದಲ್ಲೂ ಎರಡು ವಿಧ ಉಪಾಯಗಳಿಗೂ ಈ ಪ್ರಪದನವು ಅವಶ್ಯಕವೆಂದು ಹೇಳಲ್ಪಟ್ಟಿರುತ್ತದೆ. ದಾಸನು ಬರೆದಿರುವ ಭಗವದ್ಗೀತೆಯ ೭-೧೪ನೆಯ ವ್ಯಾಖ್ಯಾ

ನವನ್ನು ಪರಾಂಬರಿಸಿ (ಪುಟ ೮೨೪), ಭಗವದ್ಗೀತೆಯಲ್ಲಿ ಒಂದೇ ವಿಧವಾದ ಉಪಾಯವಾದ ಭಕ್ತಿಯೋಗಮಾತ್ರವೇ ಹೇಳಲ್ಪಟ್ಟಿದೆಂಬುದು ಸರಿಯಾದ ಅಭಿಪ್ರಾಯವಲ್ಲವು. ಎರಡು ವಿಧ ಉಪಾಯಗಳೂ ಅಲ್ಲಲ್ಲೇ ಉಪಪಾದಿತವೆಂದು ತಿಳಿಯತಕ್ಕದ್ದು. ಈ ಸಂದರ್ಭದಲ್ಲಿ "ಸಾಧ್ಯಭಕ್ತಿಸ್ತು ಸಾಹಂತ್ರೀ ಪ್ರಾರಬ್ಧಸ್ಯಾಪಿ ಭೂಯಸೀ" ಎಂಬ, "ಯದ್ಯೇನ ಕಾಮಕಾಮೇನ" ಎಂದು ಹಿಂದೆಯೇ ಉದಾಹರಿಸಲ್ಪಟ್ಟ ವಚನಗಳೂ ಅನುಸಂಧೇಯಗಳು.

ಹೀಗೆ ಪ್ರಪತ್ತಿಯೂ ಉಪಾಯಾಂಗವಾಗಿಯೂ ಸ್ವತಂತ್ರವಾಗಿಯೂ ಮೋಕ್ಷಸಾಧಕವೆಂಬುದು ಶ್ರೀನಿಗಮಾನ್ತದೇಶಿಕರ ಅಭಿಪ್ರಾಯವಾದರೆ, ಶ್ರೀ ಯತಿವರ್ಯರು ಏತಕ್ಕೆ ವ್ಯಕ್ತವಾಗಿ ಈ ಅಭಿಪ್ರಾಯವನ್ನೇ ಈ ಚರಮ ಶ್ಲೋಕಭಾಷ್ಯದಲ್ಲಿ ಹೇಳಲಿಲ್ಲವು. ಬಹುಶಃ ಶ್ರೀಯತಿವರ್ಯರು ಗದ್ಯದಲ್ಲೂ ಉಪಾಯಾಂಗವಾಗಿಯೇ ಅನುಷ್ಠಿಸಿರಬಹುದ ; ಏಕೆಂದರೆ ಪರಭಕ್ತಿ ಪರಜ್ಞಾನ ಪರಮಭಕ್ತಿಯುತಂ ಮಾಂ ಕುರುಷ್ವ ಎಂದು ಪ್ರಾರ್ಥಿಸಿರುವದರಿಂದ ಅದೂ ಅಂಗ ಶರಣಾಗತಿ ಎಂದೇ ಏಕೆ ಭಾವಿಸಕೂಡದು ?

ಹೀಗೆ ಆಕ್ಷೇಪಗಳನ್ನು ತಂದರೆ, ಗದ್ಯದಲ್ಲಿ ಉಪಾಸನೆಯ ಪ್ರಸಕ್ತಿಯೇ ಇಲ್ಲದುದರಿಂದಲೂ, ಪರಭಕ್ತಿ ಪರಜ್ಞಾನ ಪರಮಭಕ್ತಿಗಳು ಸ್ವತಂತ್ರಪ್ರಪತ್ತಿಯನ್ನು ಅನುಷ್ಠಿಸಿದ ಅಧಿಕಾರಿಗೆ ಶ್ರೀ ನಮ್ಮಾಳ್ವಾರ್ರವರು ಉಪಪಾದಿಸಿರುವದರಿಂದಲೂ,ಗದ್ಯ ಶರಣಾಗತಿಯು ಸ್ವತಂತ್ರವಾದ ಅಂಗಿ ಶರಣಾಗತಿಯೇ ವಿನಾ ಅಂಗಶರಣಾಗತಿಯಲ್ಲವು. ಈ ಚರಮ ಶ್ಲೋಕ ಭಾಷ್ಯದಲ್ಲಿ ವ್ಯಕ್ತವಾಗಿ ಏಕೆ ಶ್ರೀಯತಿವರ್ಯರು ಹೇಳಲಿಲ್ಲವೆಂದರೆ ? ಅರ್ಜುನನು ವಿಳಂಬವನ್ನು ಸಹಿಸುವವನಾಗಿಯೂ ಅರ್ಥಿತ್ವಸಾವರ್ಥ್ಯಗಳುಳ್ಳ ಅಧಿಕಾರಿಯಾದುದರಿಂದಲೂ ಹಾಗೆ ವ್ಯಕ್ತವಾಗಿ ಅಂಗ ಶರಣಾಗತಿಯೆಂದೇ ಹೇಳಿದರು. ಆದರೆ ಆ ಉಪಪಾದನೆಯಲ್ಲಿ, "ಯಾವ ಯಾವ ಫಲವನ್ನು ಕೋರುವವನಾಗಿ ಯಾವಯಾವ ಅಧಿಕಾರಿಯು ದೈನ್ಯದಿಂದ ಶೋಕಿಸುವವನೋ ಅವನು ಶರಣಾಗತನಾದರೆ ಆತನ ಕೋರಿಕೆಯನ್ನು ಸಲ್ಲಿಸುವೆನು, ಶೋಕಿಸಬೇಡ" ಎಂಬರ್ಥವು ಸ್ವತಃ ತೋರುವದರಿಂದ ಮೋಕ್ಷವಿಲ್ಲವೇ ಎಂದು ಶೋಕಿಸುವವನು ಪುನರ್ಜನ್ಮ ವಿಳಂಬವನ್ನು ಸಹಿಸದವನಾದುದರಿಂದ, ಪ್ರಪದನವು ಸ್ವತಂತ್ರವಾಗಿ ಮೋಕ್ಷವನ್ನೂ ಕೊಡಬಲ್ಲದೆಂಬುದು ಶ್ರೀಯತಿವರ್ಯರ ಭಾಷ್ಯದಿಂದಲೂ ಊಹ್ಯವು.

ಗೀತೆಯಲ್ಲೂ ಸ್ವತಂತ್ರ ಪ್ರಪತ್ತಿಯು ಅನೇಕ ಸ್ಥಳಗಳಲ್ಲಿ ಉಪಪಾದಿತವು. ೨ನೆಯ ಅಧ್ಯಾಯದ ೭ನೆಯ ಶ್ಲೋಕದಲ್ಲಿ ಶ್ರೇಯಸ್ಸಿಗೆ ಕಾರಣಭೂತವಾದ ಯಥಾರ್ಥಜ್ಞಾನೋಪದೇಶಕ್ಕಾಗಿ ಅರ್ಜುನನು ಶರಣಾಗತಿಯನ್ನು ಅನುಷ್ಠಿಸುತ್ತಾನೆ. ಹಾಗೆಯೇ ೩-೩೦ ನೆಯ ಶ್ಲೋಕದಲ್ಲೂ "ಸನ್ಯಸ್ಯಾಧ್ಯಾತ್ಮ ಚೇತಸಾ"

ಎಂಬ ಪ್ರಯೋಗವು ಸಾರ್ಥವತ್ತಾದುದು. ಗೀತಾ ೮–೧೦ ರಲ್ಲಿ "ಮಾಮುಪಾಶ್ರಿತಾ:" ಎಂಬ ಪ್ರಯೋಗದಲ್ಲೂ, ೪–೧೧ ರಲ್ಲೂ "ಯೇ ಯಥಾ ಮಾಂ ಪ್ರಪದ್ಯನ್ತೇ" ಎಂಬ ಪ್ರಯೋಗದಲ್ಲೂ, ಈ ಪ್ರಪತ್ತಿಯೇ ಹೇಳಲ್ಪಟ್ಟಿರುತ್ತದೆ. ೭-೧೪ ರಲ್ಲಿ "ಮಾ ಮೇವ ಯೇ ಪ್ರಪದ್ಯನ್ತೇ" ಎಂದು ಈ ಪ ಪದನವು ಎರಡು ವಿಧ ಪ್ರಪತ್ತಿಗೂ ಅನ್ವಯಿಸುತ್ತದೆ. ಹಾಗೆಯೇ ೭-೧೫ ನೆಯ ಶ್ಲೋಕದಲ್ಲಿರುವ "ಪ್ರಪದ್ಯನ್ತೇ" ಎಂಬ ಪ್ರಯೋಗವು ಎರಡಕ್ಕೂ ಅನ್ವಯಿಸುತ್ತದೆ. ೭ ೧೬ನೆಯ ಶ್ಲೋಕದಲ್ಲಿ, ಹಿಂದಿನ ಶ್ಲೋಕದ ಪ್ರಪದ್ಯಂತೇ ಎಂಬ ಪ್ರಯೋಗಕ್ಕೆ ಅನುಗುಣವಾಗಿ, "ಭಜನ್ತೇ ಮಾಂ" ಎಂಬುದಕ್ಕೆ ಅರ್ಥ ಹೇಳಬೇಕಾಗಿರುವವರಿಂದ, ಭಜಂತೇ ಎಂಬ ಶಬ್ದವು ಅಂಗಶರಣಾಗತಿ ಅಂಗಿಶರಣಾಗತಿ ಎರಡನ್ನೂ ಬೋಧಿಸುತ್ತದೆ ; ಹಾಗಿಲ್ಲವಿದ್ದರೆ ಉಪಾಸತೇ ಎಂಬ ಪ್ರಯೋಗವನ್ನು ಉಪಯೋಗಿಸುತ್ತಿದ್ದರು. ಈ ನಾಲ್ಕು ವಿಧ ಭಕ್ತರು ಎರಡು ವಿಧ ಉಪಾಯಾನುಷ್ಠಾನಾಧಿಕಾರಿಗಳಲ್ಲೂ ಉಂಟು. ೯–೧೨ನೆಯ ಶ್ಲೋಕದಲ್ಲಿ "ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇ ಪಿ ಸ್ಯುಃ ಪಾಪಯೋನಯಃ । ಸ್ತ್ರಿಯೋ ವೈಶ್ಯಾ ಸ್ತಥಾ ಶೂದ್ರಾಃ ತೇಽಪಿ ಯಾನ್ತಿ ಪರಾಂಗತಿಮ್" ಎಂಬಲ್ಲಿ ಸ್ವತಂತ್ರ ಪ್ರಪತ್ತಿಯೇ ಮುಖ್ಯವಾಗಿ ಹೇಳಲ್ಪಟ್ಟಿತು. ಹಿಂದಿನ ಜನ್ಮದಲ್ಲಿ ಯೋಗಾಸಕ್ತರಾಗಿದ್ದ, ಈಗ ಸ್ತ್ರೀ ವೈಶ್ಯ ಶೂದ್ರರ ವಿಷಯದಲ್ಲಿ ಇಲ್ಲಿ ಹೇಳಲ್ಪಟ್ಟಿದುದು ಎಂದು ಹೇಳಿದರೂ, ಈಗಿನ ಜನ್ಮಾನುಸಾರವಾಗಿ ಉಪಾಯಾನುಷ್ಠಾನವಾದುದರಿಂದ ಸ್ತ್ರೀಶೂದ್ರಾದಿಗಳಿಗೆ ಉಪಾಸನವು ವಿಹಿತವಲ್ಲದುದರಿಂದ ಸ್ವತಂತ್ರಪ್ರಪತ್ತಿಯೆಂದೇ ಅರ್ಥಮಾಡತಕ್ಕದ್ದಾಗಿರುತ್ತದೆ. ಈ ವಿಷಯವು ಭಾಗವತದಲ್ಲಿ ವ್ಯಕ್ತವು. ೯ ೩೩, ೩೪ನೆಯ ಶ್ಲೋಕಗಳಲ್ಲೂ "ಭಜಸ್ವ" "ಮದ್ಭಕ್ತೋ" ಇತ್ಯಾದಿ ಪ ಯೋಗಗಳು ಎರಡಕ್ಕೂ ಅನ್ವಯಿಸುತ್ತವೆ. ಮುಖ್ಯವಾಗಿ ಭಜ ಧಾತುವು ಎಲ್ಲೆಲ್ಲಿ ಉಪಯೋಗಿಸಲ್ಪಟ್ಟಿರುತ್ತದೋ ಅಲ್ಲೆಲ್ಲಾ ಎರಡು ವಿಧ ಪ್ರಪತ್ತಿಗೂ ಅನ್ವಯಿಸಿ ಎರಡು ವಿಧವಾದ ಉಪಾಯಗಳೂ ಉಪಪಾದಿಸಲ್ಪಡಬೇಕೆಂಬುದೇ ಮಹರ್ಷಿಯ ಆಶಯವು. ಮುಂದೆ ಹನ್ನೊಂದನೆಯ ಅಧ್ಯಾಯದಲ್ಲಿ ೪೪, ೪೫ನೆಯ ಶ್ಲೋಕಗಳಲ್ಲಿ ಅರ್ಜುನನು ಅಂಗಿಶರಣಾಗತಿಯನ್ನೇ ಅನುಷ್ಠಿಸುತ್ತಾನೆ.— ಪ್ರಣಿಧಾಯ ಕಾಯಂ ಎಂದು ಪ್ರಣಾಮಪೂರ್ವಕ ಶರಣಾಗತಿಯನ್ನು ಮಾಡಿ, ಹೇ ಕೃಷ್ಣ ಹೇ ಯಾದವ ಎಂದು ಸಖನನ್ನಾಗಿ ಭಾವಿಸಿ ಪರತತ್ತ್ವವೆಂಬ ಜ್ಞಾನವಿಲ್ಲದೆ ಮಾಡಿದ ಮಹಾಪರಾಧಗಳಿಂದ ಕ್ಷಮಿಸು ಎಂದು ಬೇಡುತ್ತಾನೆ. ಹಾಗೆಯೇ ಸ್ವತಂತ್ರ ಶರಣಾಗತಿಯ ಮೂಲಕವಾಗಿಯೇ ಆ ಪ್ರಸಿದ್ಧವಾದ ಪ್ರಾಪ್ಯರೂಪವಾದ ವಾಸುದೇವ ರೂಪವನ್ನು ತೋರಿಸು ಎಂದು ೧೧-೪೫ರಲ್ಲಿ ಬೇಡುತ್ತಾನೆ. ಈ ಶರಣಾಗತಿಯು ಮೋಕ್ಷಪ್ರಾಪ್ತಿಗಾಗಿ ಅಲ್ಲವು. ಇದನ್ನು ಒಡನೆಯೇ ಪ್ರಸನ್ನನಾದ ಶ್ರೀಕೃಷ್ಣನು ಅನುಗ್ರಹಿಸಿ ಈ "ಪರರೂಪ"ವನ್ನೂ

ಸಹ ನೋಡು ಎಂದು ಹೇಳುತ್ತಾರೆ. ೧೫ನೆಯ ಅಧ್ಯಾಯದ ೪ನೆಯ ಶ್ಲೋಕದಲ್ಲಿ "ತಮೇವ ಚಾದ್ಯಂ ಪುರುಷಂ ಪ್ರಪದ್ಯೇದ್ಯತಃ ಪ್ರವೃತ್ತಿಃಪ್ರಸೃತಾಪುರಾಣೀ" ಅಜ್ಞಾನನಿವೃತ್ತಿಗಾಗಿಯೂ ಯಥಾರ್ಥಜ್ಞಾನಪ್ರಾಪ್ತಿಗಾಗಿಯೂ ಸ್ವತಂತ್ರಪ್ರಪತ್ತಿಯೇ ವಿಧಿಸಲ್ಪಟ್ಟಿರುತ್ತದೆ. ಈ ಶ್ಲೋಕದ ಭಾಷ್ಯದಲ್ಲಿ ಶ್ರೀಯತಿವರ್ಯರು "ಪುರಾತನಾನಾಂ ಮುಮುಕ್ಷೂಣಾಂ ಪ್ರವೃತ್ತಿಃ ಪುರಾಣೀ—ಪುರಾತನಾಹಿ ಮುಮುಕ್ಷವೋ ಮಾಮೇವ ಶರಣಮುಪಗಮ್ಯ ನಿರ್ಮುಕ್ತಬಂಧಾಸ್ಸಂಜಾತಾ ಇತ್ಯರ್ಥಃ" ಎಂದು ವ್ಯಾಖ್ಯಾನಮಾಡಿರುವದರಿಂದ ಮೋಕ್ಷಕ್ಕಾಗಿಯೂ ಸ್ವತಂತ್ರ ಪ್ರಪತ್ತಿಯು ವಿಹಿತವೆಂಬುದೇ ಅವರ ಅಭಿಪ್ರಾಯವು. ೧೫-೧೯ರಲ್ಲಿರುವ ಭಜತಿಮಾಂ ಎಂಬ ಪ್ರಯೋಗವು ಎರಡು ವಿಧ ಶರಣಾಗತಿಯನ್ನೂ ಸೂಚಿಸುತ್ತದೆ ೧೮ನೆಯ ಅಧ್ಯಾಯದ ೬೨ನೆಯ ಶ್ಲೋಕದಲ್ಲಿ "ತಮೇವ ಶರಣಂಗಚ್ಛ ಸರ್ವಭಾವೇನ ಭಾರತ" ಎಂಬುವುದರ ಮೂಲಕ ಪ್ರಾರಬ್ಧ ಕರ್ಮ ನಿವೃತ್ತಿಗಾಗಿ ಎಂದರೆ ಅನಿಷ್ಟ ನಿವೃತ್ತಿ ಮತ್ತು ಇಷ್ಟಪ್ರಾಪ್ತಿಗಾಗಿ ಸ್ವತಂತ್ರ ಪ್ರಪತ್ತಿಯೇ ಹೇಳಲ್ಪಟ್ಟಿರುತ್ತದೆ. ಮುಂದಿನ ೬೫ನೆಯ ಶ್ಲೋಕದಲ್ಲಿ ಗೀತೆಯ ಸಾರಾಂಶವನ್ನು ಇನ್ನೊಂದು ಸಲ ಮುಖ್ಯವಾಗಿ ಹೇಳಿ, ಅಮೇಲೆ ೬೬ನೆಯ ಶ್ಲೋಕವಾದ ಚರಮ ಶ್ಲೋಕದಿಂದ ಈ ಎರಡು ವಿಧ ಉಪಾಯಗಳಿಂದ ಉಪಯುಕ್ತವಾಗಿ ಅಂಗವಾಗಿಯೂ ಅಂಗಿಯಾಗಿಯೂ ಶರಣಾಗತಿಯು ವಿಧಿಸಲ್ಪಟ್ಟಿತು. ಆದುದರಿಂದ ಭಗವದ್ಗೀತೆಯು ಉಪಾಸನವನ್ನು ಮಾತ್ರ ಮೋಕ್ಷಪ್ರಾಪ್ತಿಗೆ ಸಾಧನವೆಂದು ಹೇಳಿತೆಂಬುದು ಅಶಾಸ್ತ್ರೀಯವಾದ ಅಭಿಪ್ರಾಯವು. ಅದೂ ಅಲ್ಲದೆ ಸರ್ವೇಶ್ವರನ ಕೃಪಾ ಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಾರ್ಯಾದಿಗಳಿಗೆ ವಿಶೇಷ ಕುಂದಕವು. ಮಹಾಭಾಗವತಶ್ರೋತ್ತಮರಾದ ಉದ್ಧವರಿಗೆ ಭಕ್ತಿಯೋಗವಾದ ಉಪಾಸನದ ಮಾಹಾತ್ಮ್ಯೆಯನ್ನೆಲ್ಲಾ ಹೇಳಿ ಆನಂತರ ತನ್ನ ಭಕ್ತರಾದ ಉದ್ಧವರು ಎಲ್ಲಿ ತಮ್ಮ ದಯಾದಿ ಗುಣಗಳ ಮಾಹಾತ್ಮ್ಯೆಯನ್ನು ಅರಿಯದೇ ಹೋಗುವರೋ ಎಂದು ಭಾವಿಸಿ, ಅಯ್ಯಾ ಉದ್ಧವರೇ ಬರೇ ದ್ವಿಜರು ಮಾತ್ರವೇ ನನ್ನನ್ನು ಆಶ್ರಯಿಸಿ ಮುಕ್ತಿ ಹೊಂದುವರೆಂದು ಭಾವಿಸ ತಕ್ಕದ್ದಲ್ಲವು. ಖಗಾಃ, ಮೃಗಾಃ, ಪಾಪಜೀವಾಃ, ಶೂದ್ರಾಃ, ಹೀಗೆ ಇಂತವರೆಲ್ಲರೂ ಮೋಕ್ಷವನ್ನು ಹೊಂದಿರುತ್ತಾರೆ. ಭಾಗವತರನ್ನಾಶ್ರಯಿಸಿ, ಅವರುಗಳು ಇವರುಗಳಿಗಾಗಿ ಮಾಡಿದ ಶರಣಾಗತಿಯ ಮೂಲಕ ಮುಕ್ತಿಯುಂಟು ಎಂದು ಹೇಳಿ, ಸ್ವತಂತ್ರ ಪ್ರಪತ್ತಿಯ ಮಾಹಾತ್ಮ್ಯೆಯನ್ನು "ತಸ್ಮಾತ್ತ್ವಂ ಉದ್ಧವೋತ್ಸೃಜ್ಯ" ಎಂದಾರಂಭಿಸಿದ ಶ್ಲೋಕಗಳ ಮೂಲಕ ಈ ಚರಮಶ್ಲೋಕಾರ್ಥವನ್ನು ಉಪಪಾದಿಸಿ ಹೇಳಿರುತ್ತಾರೆ ಇದರಿಂದಲೂ ಚರಮಶ್ಲೋಕದಲ್ಲಿ ಎರಡು ವಿಧ ಫಲಗಳಿಗಾಗಿಯೂ, ಉಪಾಯಾರಂಭ ವಿರೋಧಿ ಪಾಪ ನಿವೃತ್ತಿಗಾಗಿಯೂ, ಮೋಕ್ಷಪ್ರಾಪ್ತಿಗೆ ವಿರೋಧಿಪಾಪ ನಿವೃತ್ತಿಗಾಗಿಯೂ ಎಂದರೆ ಅಂಗವಾಗಿಯೂ

**ಆಕ್ಕೈಯೊಲ್ " ಸಮ್ಯಕ್ ಜ್ಞಾನೇನವಾ ಮೋಕ್ಷಂ ಗಂಗಾಯಾಂ ಮರಣೇನವಾ । ಪ್ರಣಾಮಾದ್ವಾಪಿ ಸುಕೃತಾತ್ಪಕ್ತ್ಯಾವಾ ಲಭತೇ ನರಃ ॥ ಇತ್ಯಾದಿಗಳಿಲೇ ಸಾಕ್ಷಾದುಪಾಯತ್ತೋಡೇ**

ಅಂಗಿಯಾಗಿಯೂ ಶರಣಾಗತಿಯನ್ನು ಅನುಷ್ಠಿಸಬಹುದೆಂದು ಹೇಳಲ್ಪಟ್ಟಿದೆ. ಹೀಗೆ ತಾವು ಸಿದ್ಧಾಂತಿಸಿದುದು ತಮ್ಮ ಸ್ವಂತ ಕಲ್ಪನೆಯಲ್ಲವು, ಪ್ರಬಲ ಪ್ರಮಾಣ ಗಳ ಮೂಲಕವಾಗಿ ಎಂದು ತಿಳಿಸುವದಕ್ಕಾಗಿ **ವಚನ ಬಲತ್ತಾಲೇ ಸಿದ್ಧಮ್** ಎಂದು ಹೇಳಿದರು ಇದಕ್ಕೆ **ಪ್ರಣವ** ನಿದರ್ಶನವನ್ನು ಕೊಟ್ಟರು ಪ್ರಣವವನ್ನು ಏಕಮಾತ್ರ ದ್ವಿಮಾತ್ರ ತ್ರಿಮಾತ್ರಗಳಿಂದ ಉಚ್ಚರಿಸಿ ಉಪಾಸನೆಯನ್ನು ನಡೆಸಿದರೆ ಐಹಿಕ ಸ್ವರ್ಗ ಮೋಕ್ಷ ಪ್ರಾಪ್ತಿಗಳನ್ನು ಉಂಟುಮಾಡಿ ಅವ್ಯವಹಿತ ಎಂದರೆ ಅಂಗಿ ಯಾಗಿ ಪರಿಣಮಿಸುತ್ತದೆ ಅಂಗವಾಗಿ ಯಜ್ಞ ಯಾಗಾದಿಗಳಿಗೆ ವ್ಯವಹಿತ ಉಪಾಯ ಎಂದರೆ ಅಂಗವಾಗಿ ಅವುಗಳು ವೀರ್ಯವತ್ತರವಾಗಿ ನಡೆಯುವ ಹಾಗೆ ಮಾಡುತ್ತ ದೆಂದು ಉಪನಿಷತ್ತು ಹೇಳುತ್ತದೆ.

ಈಗ ಆಚಾರ್ಯರವರು ಭಕ್ತಿ ಪ್ರಪತ್ತಿಗಳೇ ಎರಡೇ ಉಪಾಯಗಳು ಎಂದು ಸ್ಥಾಪಿಸಿದರು ಶಾಸ್ತ್ರದಲ್ಲಿ ಇನ್ನೂ ಕೆಲವನ್ನು ದಿವ್ಯ ದೇಶಯಾತ್ರಾ, ಪುಣ್ಯ ತೀರ್ಥ ಗಳಲ್ಲಿ ಅವಗಾಹನ, ದಿವ್ಯಾರ್ಚನಾ, ಪುಷ್ಪಮಾಲಿಕಾ ಸಮರ್ಪಣವೇ ಮೊದಲಾದ ವೆಲ್ಲಾ ಈ ಎರಡು ಉಪಾಯಗಳಿಗೆ ಸಾಧನಗಳೇ ವಿನಾ ಅವೇ ಸಾಕ್ಷಾತ್ತಾಗಿ ಮೋಕ್ಷದಾಯಕವಲ್ಲವು ಇದನ್ನು ಹಿಂದೆಯೇ **ಪ್ರಪನ್ನಾದನ್ಯೇಷಾಂನದಿಶತಿ ಮುಕುಂದೋ ನಿಜಪದಮ್ । ಪ್ರಪನ್ನಶ್ಚ ದ್ವೇಧಾಸುಚರಿತ ಪರೀಪಾಕಬಿ ಧಯಾ** ಎಂಬಲ್ಲಿ ಹೇಳಿದ್ದರು ಅದನ್ನೇ ಪ್ರಸಂಗಾತ್ ಅನುವಾದ ರೂಪದಲ್ಲಿ ಪುನಃ ತಿಳಿಸಿರುತ್ತಾರೆ ಅಜಾಮಿಳನು ತನ್ನ ಮಗನನ್ನು ನಾರಾಯಣ ಎಂದು ಕೂಗಿದ್ದುದರಿಂದ ಮುಕ್ತಿ ಹೊಂದಿದನು ಎಂದರೆ ಮುಕ್ತ್ಯುಪಾಯಾನುಷ್ಠಾನಕ್ಕೆ ಅದು ಸಾಧನವಾಯಿತು ಎಂಬದಾಗಿ ತಿಳಿಯತಕ್ಕದ್ದಾಗಿರುತ್ತದೆ ಕರ್ಮಯೋಗ ಜ್ಞಾನಯೋಗಗಳು ಉಪಾಸನವಾದ ಮುಖ್ಯೋಪಾಯಕ್ಕೆ ಪ್ರಬಲ ಸಾಧನಗಳಾ ದುದರಿಂದ ಗೀತೆಯ ಎರಡನೆ ಅಧ್ಯಾಯಾನ್ತ್ಯ ಶ್ಲೋಕದಲ್ಲಿ **ಬ್ರಹ್ಮನಿರ್ವಾಣ ಮೃಚ್ಛತಿ** ಎಂದು ಹೇಳಲ್ಪಟ್ಟಿತು ಅವುಗಳೇ ಅವ್ಯವಹಿತ ಉಪಾಯಗಳೆಂದು ತಿಳಿದು ಮೋಕ್ಷವನ್ನು ಹೊಂದುವರು ಎಂದು ಕೆಲವರು ಅರ್ಥಮಾಡಿ ಜೀವ ನ್ಮುಕ್ತಿಯು ಲಭಿಸುತ್ತದೆ ಎಂಬ ಅಭಿಪ್ರಾಯವನ್ನು ನಿರಾಕರಿಸುವದಕ್ಕಾಗಿ ಶ್ರೀಯತಿವರ್ಯರು, ಅವು ಉಪಾಯ ಸಾಧನಗಳೇ ವಿನಾ ಕೇವಲ ಉಪಾಯಗಳೇ ಅಲ್ಲವೆಂದು ತಿಳಿಸುವದಕ್ಕಾಗಿ " **ನಿರ್ವಾಣಮಯಂ ಬ್ರಹ್ಮಗಚ್ಛತಿ, ಸುಖೈಕತಾನ**

**ಕೂಡ ಪರಂಪರೋಪಾಯಙ್ಗಳ್ಯೆಯುಡುತ್ತತ್ತದುವುಮ್ ಅವತ್ತಿ ನುಶೈಯು ಪ್ರಾಶಸ್ತ್ಯಾತಿಶಯುಂತೋತ್ತುಗೈಕ್ಕಾಗವತ್ತನೈ.**

**ವಾತ್ಮಾನಮಾಪ್ನೋತಿ**" ಎಂದರೆ ಆನಂದಮಯನಾದ ಪರಿಶುದ್ಧ ಜೀವ ಸ್ವರೂಪವನ್ನು ಹೊಂದುವನು ಎಂದು ಭಾಷ್ಯವನ್ನು ಬರೆದಿರುತ್ತಾರೆ. ಮುಂದೆ ಮುಕ್ತ್ಯುಪಾಯಗಳೇ ಭಕ್ತಿ ಪ್ರಪತ್ತಿಗಳೆರಡೇ ಸಾಕ್ಷಾದುಪಾಯಗಳಾದುದರಿಂದ ಇವಲ್ಲದೆ ಮಿಕ್ಕ ಕೆಲವೂ ಮುಕ್ತ್ಯುಪಾಯಗಳೆಂದು ಪುರಾಣೇತಿಹಾಸಗಳಲ್ಲಿ ಹೇಳಿದ್ದರೆ ಅವು ಈ ಎರಡು ಉಪಾಯಾನುಷ್ಠಾನಗಳಿಗೂ ಸಾಧನಗಳೆಂದು ಭಾವಿಸ ತಕ್ಕದ್ದೆಂದು ಉಪದೇಶಿಸುತ್ತಾರೆ

**ಆಗೈಯಾಲ್** - ಹೀಗೆ ಶಾಸ್ತ್ರದಲ್ಲಿ ಭಕ್ತಿ ಪ್ರಪತ್ತಿಗಳೆರಡೇ ಸಾಕ್ಷಾತ್ತಾದ ಉಪಾಯಗಳಾದುದರಿಂದ. **ಸಮ್ಯಕ್ ಜ್ಞಾನೇನವಾ** - ಒಳ್ಳೇ ಜ್ಞಾನದಿಂದಲಾಗಲಿ, **ಗಂಗಾಯಾಂ ಮರಣೇನವಾ** - ಗಂಗೆಯಲ್ಲಿ ಮರಣ ಹೊಂದುವದರಿಂದಲಾಗಲಿ, **ಪ್ರಣಾಮಾದ್ವಾಪಿ ಸುಕೃತಾತ್**–ಚನ್ನಾಗಿ ಅಷ್ಟಾಂಗ ಪ್ರಣಾಮವನ್ನು ಮಾಡುವದ ರಿಂದಲಾಗಲಿ, **ನರಃ - ನರಮತೀತಿ ನರಃ** ಎಂಬ ವ್ಯುತ್ಪತ್ತಿಯಿಂದ ಐಹಿಕಾಶೆಯನ್ನು ತೊರೆದ ಮನುಷ್ಯನು, **ಮುಕ್ತಿಂ ಲಭತೇ** ಮುಕ್ತಿಯನ್ನು ಹೊಂದುವನು ಎಂಬುದು ಶ್ಲೋಕಾರ್ಥವು. ಇಲ್ಲಿ **ಸಮ್ಯಕ್ ಜ್ಞಾನ** ವೆಂದು ಹೇಳಿರುವದರಿಂದ ಉಪಾಯಾ ನುಷ್ಠಾನಕ್ಕೆ ಸಾಧಕವಾದ ಜ್ಞಾನವು ಹೇಳಲ್ಪಟ್ಟಿತು. ಶ್ರೀ ಪರಾಶರರು ವಿಷ್ಣು ಪುರಾಣದಲ್ಲಿ ಒಳ್ಳೇ ಸಮೀಚೀನವಾದ ಜ್ಞಾನವು ಎಂತಾದ್ದೆಂದರೆ ಹೇಳುತ್ತಾರೆ:— **ಸಜ್ಞಾಯತೇ ಯೇನ ತದಸ್ತ ದೋಷಂ ಶುದ್ಧಂ ಪರಂ ನಿರ್ಮಲ ಮೇಕ ರೂಪಂ । ಸಂದೃಶ್ಯತೇ ವಾ ಪ್ಯವಗಮ್ಯತೇ ವಾ ತತ್ ಜ್ಞಾನ ಮಜ್ಞಾನ ಮನ್ಯದುಕ್ತಮ್** || (೬–೫–೮೭) ಇದು ತುಂಬಾ ಅರ್ಥಸ್ವಾರಸ್ಯವುಳ್ಳ ಶ್ಲೋಕವು. ಪ್ರಕೃತಾರ್ಥ ಮಾತ್ರ ತಿಳಿಸುವೆವು. ಪ್ರಕೃತಿ ಬದ್ಧ ಮುಕ್ತ ನಿತ್ಯರುಗಳಿಗಿಂತ ವಿಲಕ್ಷಣನಾಗಿ ಹೇಯ ಪ್ರತ್ಯನೀಕನಾಗಿರುವ ಪರಮ ಪುರುಷನನ್ನು ಯಾವ ಆಗ ಮೋತ್ಥಜ್ಞಾನದಿಂದ ತಿಳಿಯುವದಕ್ಕೂ ವಿವೇಕೋತ್ಥಜ್ಞಾನದಿಂದ ಸಾಕ್ಷಾತ್ಕರಿಸು ವದಕ್ಕೂ ಅವನನ್ನು ಹೊಂದುವದಕ್ಕೂ ಹೇತುವಾಗುತ್ತದೋ ಅದೀಗ ಒಳ್ಳೇ ಜ್ಞಾನವು. ಮಿಕ್ಕ ಎಲ್ಲಾ ಜ್ಞಾನವು ಅಜ್ಞಾನವೆಂದು ಹೇಳಲ್ಪಟ್ಟಿರುತ್ತದೆ. **ಇತ್ಯಾದಿಗಳಿಲೇ** ಇವೇ ಮೊದಲಾದ ಪ್ರಮಾಣಗಳಲ್ಲಿ, ಆದಿ ಶಬ್ದದಿಂದ "**ಯಾದ ವಾದ್ರಿಗಿರಿಂದೃಷ್ಟ್ವಾ ದೂರಂಗಚ್ಛತಿ ದುಷ್ಕೃತಮ್**" ವಿಷ್ಣು ಸಹಸ್ರನಾಮ ಪಠನದಿಂದ **ಬದ್ಧೋ ಮುಚ್ಯೇತ ಬಂಧನಾತ್** ಇವೇ ಮೊದಲಾದವು ಹೇಳಲ್ಪ ಟ್ಟವು. **ಸಾಕ್ಷಾದುಪಾಯತ್ತೋಡೆ ಕೂಡ** – ಅವ್ಯವಹಿತ ಉಪಾಯಗಳಾದ

**ಏಕ ಶಬ್ದಸ್ಯ ಉಕ್ತಾರ್ಥಾನ್ ಕಾರಿಕಯಾ ಸಂಗೃಹ್ಣಾತಿ ಪ್ರಾಪ್ಯಸ್ಯೈಕ ಪ್ರಾಪಕತ್ವಂ ಸ್ವಪ್ರಾಧಾನ್ಯ ನಿವಾರಣಮ್ | ಪ್ರಪತ್ತೇರ್ವ್ಯಾಜ್ಯ**

ಭಕ್ತಿಯೋಗ ಪ್ರಪತ್ತಿಗಳೊಂದಿಗೆ ಅಂಗಗಳಾದ ಉಪಾಯಗಳು ಎಂಬ ಭಾವವು, **ಪರಂಪರೋಪಾಜ್ಙಳೈ** – ಅವುಗಳಿಗೆ ಸಾಧನವಾಗಿ ಒಂದಾದನಂತರ ಇನ್ನೊಂದು ಹೀಗೆ ಅನುಷ್ಠಿಸಬೇಕಾದ ಅಂಗಗಳನ್ನೂ, **ಎಡತ್ತೊದುವುಮ್** – ಮುಖ್ಯವಾಗಿ ತೆಗೆದು ಹೇಳುವದೂ, **ಅವತ್ತಿನುಡ್ರೆಯು**–ಈ ಅಂಗಗಳ, **ಪ್ರಾಶಸ್ತ್ಯಾತಿಶಯಂ**– ಹೆಚ್ಚಿನ ಪ್ರಾಧಾನ್ಯವನ್ನೂ **ತೋತ್ತ್ರೊಗೈಕ್ಕಾಕವತ್ತನ್ನೈ** = ಪ್ರದರ್ಶಿಸುವದಕ್ಕಾಗಿ, ಅಷ್ಟು ಮಾತ್ರಕ್ಕಾಗಿಯೇ. **ಕರ್ಮಯೋಗವು** ಮೋಕ್ಷಪ್ರದವೆಂಬ ಹೇಳಿಕೆಯು ಕೆಲವು ಕಡೆಗಳುಂಟು ಶ್ರೀರಾಮಚಂದ್ರ ಪ್ರಭುವು ಜಟಾಯುವಿಗೆ ಊರ್ಧ್ವದೇಹಿಕ ಕರ್ಮಗಳನ್ನು ನಡೆಸಿ, ಆತನನ್ನು ಕುರಿತು ಮೋಕ್ಷವನ್ನು ಹೊಂದು ಎಂದು ಹೇಳುವ ಸಂದರ್ಭದಲ್ಲಿ **"ಯಾಗತಿ ರ್ಯಜ್ಞಶೀಲಾನಾಂ ಆಹಿತಾಗ್ನೇಶ್ಚಯಾಗತಿಃ ಅಪರಾವರ್ತಿನಾಂ ಯಾಚ ಯಾಚ ಭೂಮಿ ಪ್ರದಾಯಿನಾಂ | ಮಯಾ ತ್ವಂ ಸಮನುಜ್ಞಾತಃ ಗಚ್ಛಲೋಕಾ ನನುತ್ತಮಾ"** ಎಂದು ಯಜ್ಞದಾನ ತಪಸ್ಸುಗಳಾದ ಕರ್ಮಗಳನ್ನು ಅನುಷ್ಠಿಸಿದವರಿಗೆ ಹೇಗೆ ದಿವ್ಯ ವೈಕುಂಠ ಗತಿಯೋ ಅಂತಹ ಶ್ರೇಷ್ಠವಾದ ವೈಕುಂಠಲೋಕವನ್ನು ಹೊಂದು ಎಂದು ಅನುಜ್ಞೆ ಯನ್ನು ಕೊಟ್ಟಿರುತ್ತಾರೆ. ಇಲ್ಲಿ ಕರ್ಮಯೋಗಗಳೇ ಮೋಕ್ಷವನ್ನು ಕೊಡುತ್ತವೆ ಎಂದು ಹೇಳಿರುವದು, ಅವುಗಳು ಸಾಕ್ಷಾತ್ ಮೋಕ್ಷಪ್ರದಗಳೇ? ಎಂದರೆ ಹಾಗಲ್ಲವು. ಶ್ರೀ ಕೃಷ್ಣಭಗವಾನರೇ **"ನಾಹಂ ವೇದೈರ್ನತಪಸಾ ನದಾನೇನ ನಚೇಜ್ಯಯಾ | ಶಕ್ಯ ಏವಂ ವಿಧೋದ್ರಷ್ಟುಮ್"** ಕೇವಲ ಕರ್ಮಯೋಗದಿಂದ ಮೋಕ್ಷವಿಲ್ಲವೆಂದು ಹೇಳಿರುತ್ತಾರೆ. ಹಾಗೆಯೇ ಶ್ರೀ ವೇದಾನ್ತ ದೇಶಿಕರವರೂ ನ್ಯಾಯ ಸಿದ್ಧಾಂಜನದಲ್ಲಿ **"ನಕೇವಲಂ ಕರ್ಮಜ್ಞಾನ ಮುಚ್ಚಿತೋಽಪಿ ಮೋಕ್ಷ ಹೇತುಃ"** ಎಂದರೆ ಬರೀ ಕರ್ಮಯೋಗವೇ ಜ್ಞಾನಯೋಗದಿಂದ ಸೇರಿದ್ದರೂ ಮೋಕ್ಷಕ್ಕೆ ಕಾರಣವಾಗಲಾರದೆಂದು ಹೇಳಿರುವರು. ಹಾಗಾದರೆ ಶ್ರೀರಾಮಚಂದ್ರ ವಾಕ್ಯದಲ್ಲಿ ಅಸಾಮಂಜಸ್ಯವೇ ಎಂದರೆ ಹಾಗಲ್ಲವು, ಕರ್ಮಯೋಗವು ಪರಂಪರಯಾ ಸಾಕ್ಷಾದುಪಾಯವಾದ ಭಕ್ತಿಯೋಗವನ್ನು ಸಾಧಿಸಿಕೊಟ್ಟು ಮೋಕ್ಷಹೇತುವಾಗು ವದರಿಂದ ಅದರ ಪ್ರಾಶಸ್ತ್ಯಾತಿಶಯುವನ್ನು ತೋರಿಸುವದಕ್ಕಾಗಿ ಹಾಗೆ ಪ್ರಯೋಗವು. ಇದಕ್ಕೆ ಶ್ರೀ ಗೋವಿಂದ ರಾಜೀಯ ವ್ಯಾಖ್ಯಾನವು ಹಾಗೆಯೇ ಇದೆ. ದಾಸನ ಭಗವದ್ಗೀತೆಯ ೨೩೨ ನೆಯ ಪುಟವನ್ನು ನೋಡಿ.

ಇನ್ನೊಂದು ಉಪಾಯವಾದ ಶರಣಾಗತಿಗೆ ಆಕಿಂಚನ್ಯವು ಪ್ರಧಾನಾಂಗವು.

ಆದುದರಿಂದ ಆಕಿಂಚನ್ಯವೇ ಮೋಕ್ಷ ಹೇತುವು ಎಂದು ಹೇಳುವದರಲ್ಲೂ ಏನೊಂದೂ ಅಸಾಮಂಜಸ್ಯವಿಲ್ಲವೆಂಬ ಭಾವವು.

**"ಏಕ" ಶಬ್ದಕ್ಕೆ ಹಿಂದೆ ಉಪಪಾದಿಸಿದ ಅರ್ಥಗಳನ್ನು ಜ್ಞಾಪಕದಲ್ಲಿಡುವದಕ್ಕಾಗಿ ಕಾರಿಕೆಗಳ ಮೂಲಕ ಸಙ್ಗ್ರಹಿಸುತ್ತಾರೆ.**

೧. **ಪ್ರಾಪ್ಯಸ್ಯೈವ ಪ್ರಾಪಕತ್ವಂ**-ಪ್ರಾಪ್ಯನಾಗಿ ದಿವ್ಯ ವೈಕುಂಠದಲ್ಲಿ ಶ್ರೀ ಮಹಾ ಲಕ್ಷ್ಮಿಯೊಂದಿಗೆ ಸೇರಿ ಮುಕ್ತಿಯನ್ನು ಕೊಟ್ಟು ಕಾಪಾಡುವ ನಾನೇ ಪ್ರಾಪಕನೂ ಸಿದ್ಧೋಪಾಯನು. ಇದನ್ನು ಉಪಪಾದಿಸುವ ಮನ್ತ್ರವು ದ್ವಯವು. ಇದನ್ನೇ ಚರಮಶ್ಲೋಕವೂ ಉಪಪಾದಿಸುತ್ತದೆ **"ಕೃಷ್ಣಂ ಧರ್ಮಂ ಸನಾತನಮ್"** ಎಂಬಲ್ಲಿ ಹೇಳಿರುತ್ತದೆ ಈ ಅಮೋಘ ಶ್ಲೋಕವನ್ನು ಉಪದೇಶಿಸುವಾಗಲೂ ಆತನೇ ಸಿದ್ಧೋಪಾಯನು **"ಪ್ರೇರಿತಾರಂಚ ಮತ್ವಾ"** **"ಯಮೇವೈಷ ವೃಣುತೇ"** "ಈಶ್ವರ ಪ್ರೇರಿತೋ ಗಚ್ಛೇತ್" **"ಈಶ್ವರ ಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ" "ಶಾಸ್ತಾಜನಾನಾಂ" "ಈಶತೇ ಭಗವಾನೇಕಃ" "ಯದ್ಧಿತಂ ಮಮದೇವೇಶತದಾಜ್ಞಾಪಯ ಮಾಧವ"** ಇತ್ಯಾದ್ಯನೇಕ ಪ್ರಮಾಣಗಳು ಶ್ರಿಯಃಪತಿಯೇ ಸಿದ್ಧೋಪಾಯನೆಂದು ಸಾರುತ್ತವೆ.

ಅದೂ ಅಲ್ಲದೆ **"ತೇನವಿನಾ ತೃಣಮಪಿ ನಚಲತಿ"** ಎಂಬಲ್ಲಿ ಹೇಳಿರುವ ಹಾಗೆ **ಮತ್ತು ದೈವಂಚೈವಾತ್ರ ಪಂಚಮಮ್** ಎಂಬಲ್ಲಿ ಹೇಳಿರುವ ಹಾಗೂ ಸ್ವಾಮಿ ಸಙ್ಕಲ್ಪವಿಲ್ಲದೆ ಯಾವು ಪ್ರವೃತ್ತಿಯೂ ಇಲ್ಲವು ಆದುದರಿಂದ ಆತನೇ ಉಪಾಯವು. ಆತನೇ ಉಪೇಯವು ಎಂಬುದೂ ಅನೇಕ ಕಡೆಗಳಲ್ಲಿ ಉಪಪಾದಿತವು:—**"ನಿರಂಜನಃ ಪರಮಂ ಸಾಮ್ಯ ಮುಪೈತಿ"! "ಮದ್ಭಕ್ತಾಯಾನ್ತಿ ಮಾಮಪಿ" "ವೈಕುಂಠೇತುಪರೇ ಲೋಕೇಶ್ರಿಯಾಸಾರ್ಧಂ ಜಗತ್ಪತಿಃ। ಆಸ್ತೇ ವಿಷ್ಣುರಚಿನ್ತ್ಯಾತ್ಮಾಭಕ್ತೈಃಭಾಗವತೈಸ್ಸಹ" "ಮಮಸಾಧರ್ಮ್ಯಮಾಗತಾಃ" "ಪರಾತ್ಪರಂ ಬ್ರಹ್ಮ ಮುಪೈತಿದಿವ್ಯಮ್" "ಸಾಯುಜ್ಯಮನ್ಯೇ ಸತುಮೋಕ್ಷ ಉಕ್ತಃ" "ಮಾಮುಪೇತ್ಯಪುನರ್ಜನ್ಮದುಃಖಾಲಯಮಶಾಶ್ವತಂ। ನಾಪ್ನುವಂತಿ""ಸೋಶ್ನುತೇ ಸರ್ವಕಾಮನ್ ಬ್ರಹ್ಮಣಾವಿಪಶ್ಚಿತಾ" "ಪರಂ ಜ್ಯೋತಿಪರುಪಸಂಪದ್ಯಸ್ವೇನರೂಪೇಣಾಭಿನಿಷ್ಪದ್ಯತೇ" "ನಾರಾಯಣ ಸಾಯುಜ್ಯಮವಾಪ್ನೋತಿ"** ಇತ್ಯಾದ್ಯನೇಕ ಪ್ರಮಾಣಗಳು ಶ್ರಿಯಃಪತಿಯೇ ಉಪೇಯನೆಂದು ಸಾರುತ್ತವೆ. ಕೌಷೀತಕೀಶ್ರುತಿಯೂ ಶ್ರೀ ಭಾಷ್ಯಕಾರರ ವೈಕುಂಠಗದ್ಯವೂ ಈ ಅಭಿಪ್ರಾಯವನ್ನೇ ವಿಶದನಾಗಿ ಉಪಪಾದಿಸುತ್ತವೆ.

## ಪ್ರಪತ್ತೇರ್ವ್ಯಾಜ ಮಾತ್ರತ್ವ ಮನ್ಯೋಪಾಯೈರನನ್ವಯಃ ।

೨. **ಸ್ವಪ್ರಾಧಾನ್ಯ ನಿವಾರಣಂ**–ಸ್ವಪ್ರಯತ್ನವೇನೋ ಬೇಕು. ಆದರೆ ಅದು ಅಷ್ಟು ಪ್ರಧಾನವಾದುದಲ್ಲವು. ನಮ್ಮ ಸಂಕಲ್ಪ, ಪ್ರಯತ್ನ, ಕರ್ಮಗಳು ಇಲ್ಲದೆ ಆಗುವುದಿಲ್ಲವು. ಅದಕ್ಕಾಗಿಯೇ **ಶರಣಂವ್ರಜ** ಎಂದು ಹೇಳಿದರು. ಆದರೂ ಅದು ಫಲಪ್ರಾಪ್ತಿಯಲ್ಲಿ ಪ್ರದಾನವಾದುದಲ್ಲವು. ಆತನು ಪ್ರೀತನಾದರೇನೇ ಅನುಗ್ರಹವು ಸಿದ್ಧಿಸುತ್ತದೆ. ಆದುದರಿಂದ "**ಯಮೇವೈಷವೃಣುತೇ ತೇನಲಭ್ಯಃ**" ಎಂದು ಹೇಳಲ್ಪಟ್ಟಿರುತ್ತದೆ. ತಾನೊಬ್ಬನು ಪ್ರೀತನಾದರೇ ನಿನಗೆ ಮುಕ್ತಿಯು ಎಂದು **ಏಕ** ಶಬ್ದವನ್ನು ಪ್ರಯೋಗಿಸಿರುತ್ತಾರೆ, ಆಗ **ಏಕ** ಶಬ್ದವು **ಏಕ ಏವ** ಅವಧಾರಣಯುಕ್ತವಾಗಿ ಭಾವಿಸಿದರೆ ಈ ಅರ್ಥವು ಸಿದ್ಧಿಸುತ್ತದೆ. ಆಗಲಿ, ಸ್ವಪ್ರಯತ್ನವೂ ಬೇಕಾಗಿರುವಾಗ **ಪ್ರಾಧಾನ್ಯ ನಿವಾರಣ** ಹೇಗೆ? "**ಅಧಿಷ್ಠಾನಂ ತಥಾಕರ್ತಾ**" ಎಂಬ ಶ್ಲೋಕದಲ್ಲಿ (ಗೀ. ೧೮.) ಹೇಳಿರುವ ಕರಣ ಕಳೇಬರಯೋಗ, ವಿವೇಕ ಜ್ಞಾನ ಪ್ರದಾನ, ಪ್ರವೃತ್ತಿಗೆ ಸಹಾಯ ಇವೆಲ್ಲವೂ ಹೃಷೀ ಕೇಶನಿಂದಲೇ ಆಗತಕ್ಕದ್ದಾದುದರಿಂದ ಸ್ವಪ್ರಾಧಾನ್ಯ ನಿವಾರಣವು. ಇಷ್ಟೇ ಅಲ್ಲವು; **ಏಕ ಏವ** ಆಶಕ್ತಿಯುಳ್ಳವನುನಾನೇ, ಇನ್ನು ಯಾರೂ ಅಲ್ಲವು. ಆದುದರಿಂದ ಹರಿವಂಶದಲ್ಲಿ "**ಬ್ರಹ್ಮಾಣಂ ಶಿತಿಕಂಠಂಚ ಯಾಶ್ಚಾನ್ಯಾ ದೇವತಾ ಸ್ಮೃತಾಃ । ಪ್ರತಿಬುದ್ಧಾನ ಸೇವಂತೇ ಯಸ್ಮಾತ್ಪರಿಮಿತಂ ಫಲಮ್**" ಎಂದು ಹೇಳಲ್ಪಟ್ಟಿರುತ್ತದೆ.

(೩) **ಪ್ರಪತ್ತೇರ್ವ್ಯಾಜ ಮಾತ್ರತ್ವಂ**–ಈ ಏಕ ಶಬ್ದವು ಪ್ರಪತ್ತಿಯು ವ್ಯಾಜ ಮಾತ್ರವೆಂದೂ ಹೇಳುತ್ತದೆ. ನನ್ನನ್ನು ಶರಣ ಹೊಂದುವದು ಒಂದೇ ನಿನ್ನ ಕಾರ್ಯವು. ಆದರೆ ಅದುವೇ ಮುಕ್ತಿ ಕೊಡಲಾರದು. ನಾನೊಬ್ಬನೇ ಕೊಡುವವನು. ನಾನೇ ಮುಕ್ತಿದಾಯಕನಾಗಿ ಮುಕುಂದನು, ಆಗಲಿ ಪರಮ ದಯಾಳುವಾಗಿ ನೀನಿರುವಾಗ ಈ ಅಜಾಗಳಸ್ತನದೋಪಾದಿಯಲ್ಲಿರುವ ಈ ವ್ಯಾಜತಾನೇ ಏಕೆ? ಎಂಬ ವಾದವನ್ನು ತಂದು ನಮ್ಮಲ್ಲೇ ಕೆಲವರು ಭರನ್ಯಾಸವನ್ನು ಅನುಷ್ಠಿಸುವದಿಲ್ಲವು. ಇದು ಸರಿಯಾದ ಅಭಿಪ್ರಾಯವಾಗುವದಿಲ್ಲವು – ವ್ಯಾಜವಿಲ್ಲದೆ ಸ್ವಾಮಿಯು ರಕ್ಷಿಸಿಬಿಟ್ಟರೆ ಎಲ್ಲರನ್ನೂ ರಕ್ಷಿಸಬೇಕಾಗಿ ಬಂದು ವೈಷಮ್ಯಕ್ಕೆ ಗುರಿಯಾಗುವನು. ಆದುದರಿಂದ ನನ್ನ ಪಾದಾರವಿಂದದಲ್ಲಿ ಶರಣಾಗತಿಯನ್ನನುಷ್ಠಿಸಿ, ವಿಭೀಷಣನ ಹಾಗೆ **ಮಹಾಪ್ರಾಜ್ಞ**ನಾದರೆ. ರಕ್ಷಿಸುವೆನು ಎಂದು ಪ್ರತಿಜ್ಞೆ ಮಾಡಿರುತ್ತಾರೆ. ಆದುದರಿಂದ ಭರನ್ಯಾಸವು ಅವಶ್ಯಕವು.

(೪) **ಅನ್ಯೋಪಾಯೈರನನ್ವಯಃ**— ಬೇರೆ ಉಪಾಯವಾದ ಭಕ್ತಿಯೋಗ (ಭಗವದುಪಾಸನ)ವೂ ಅದರ ಪರಿಕರಗಳೂ ಯಾವುದರ ಸಹಾಯವೂ ಈ ಭರ

**ತದಙ್ಗೈರಸ್ಯ ಸಂಬಂಧಃ ಸರ್ವಸಾಧ್ಯೇಷ್ವಭಿನ್ನತಾ ।**
**ಇತ್ಥಮರ್ಥಾ ಷಡಾಚಾರ್ಯೈರ್ದೈಕಶಬ್ದಸ್ಯದರ್ಶಿತಾಃ॥**

---

ನ್ಯಾಸಕ್ಕೆ ಬೇಕಿಲ್ಲವೆಂಬುದೂ ಏಕ ಶಬ್ದಾರ್ಥವು ಪ್ರಪದನಾನುಷ್ಠಾನ ಮಾಡಿದ ನಂತರ ಭಕ್ತಿಯೋಗವನ್ನು ಅನುಷ್ಠಿಸುವೆನೆಂದು ಯತ್ನಿಸಕೂಡದು ಏಕೆಂದರೆ ಆಗ ಪ್ರಪತ್ತಿಯಲ್ಲಿ ಮಹಾ ವಿಶ್ವಾಸ ರೂಪಾಂಗವೇ ಇಲ್ಲವಾಗಿ ಹೋಗುತ್ತದೆ ಆಗ ಭರನ್ಯಾಸವು ಸಿದ್ಧಿಸದೇ ಹೋಗಬಹುದು. ಆಂಜನೇಯನನ್ನು ಬಂಧಿಸಿದ್ದ ಬ್ರಹ್ಮಾಸ್ತ್ರವು ಆತನನ್ನು ಹಗ್ಗದಿಂದ ಕಟ್ಟಿದ ಒಡನೆಯೇ ಬಿಟ್ಟುಹೋಯಿತು. ಈ ಭರನ್ಯಾಸ ನಿಷ್ಠನು ಅಕಿಂಚನನು, ವಿಳಂಬವನ್ನು ಸಹಿಸಿದವನು. ಆದುದರಿಂದ ಈ ಏಕ ಶಬ್ದದಿಂದ ಈ ಪ್ರಪತ್ತಿಗೆ ಇನ್ನು ಯಾವ ಸಾಧನಗಳೂ ಬೇಕಿಲ್ಲವು **ನಜಾತಿ ಭೇದಂ ನಕುಲಂ ನಲಿಂಗಂ ನಗುಣ ಕ್ರಿಯಾಃ । ನದೇಶ ಕಾಲಾ ನಾವಸ್ಥಾಂ ಯೋಗೋಹ್ಯಯಮುಪೇಕ್ಷತೇ.** ಅರ್ಥವು ಸ್ಪಷ್ಟವು.

(೫) **ತದಙ್ಗೈರಸ್ಯ ಸಂಬಂಧಃ**—ಯಾವಾಗ ಇನ್ನೊಂದು ಉಪಾಯದ ಸಂಬಂಧ ಬೇಕಿಲ್ಲವೋ ಆಗ ಆ ಉಪಾಯದ ಪರಿಕರಗಳಾದ ಕರ್ಮಯೋಗ ಜ್ಞಾನ ಯೋಗಗಳ ಸಂಬಂಧವು ಅಂಗಗಳಾಗಿ ಬೇಕಿಲ್ಲವು ಎಂದು ಏಕಶಬ್ದವು ಸೂಚಿಸುತ್ತದೆ. ನಿತ್ಯ ನೈಮಿತ್ತಿಕಗಳು ಪ್ರಪತ್ತಿಗೆ ಬೇಕಾಗಿಲ್ಲವಾದರೆ, ಅವುಗಳು ಕರ್ಮಯೋಗಕ್ಕೆ ಸೇರಿದವುಗಳಾಗಿ ತ್ಯಜಿಸಬಹುದೋ? ಎಂದರೆ ಕೆಲವರು ತ್ಯಜಿಸಬಹುದೆಂದು ಹೇಳುವರು. ಇದು ಸರಿಯಲ್ಲವು ನಿತ್ಯ ನೈಮಿತ್ತಿಕಗಳು ಸ್ವಾಮಿಯ ಆಜ್ಞಾಕೈಂಕರ್ಯಗಳು; **ಅಹರಹಸ್ಸಂಧ್ಯಾ ಮುಪಾಸೀತ** ಇತ್ಯಾದಿ ಪ್ರಮಾಣಗಳಿರುವದರಿಂದ ಅನುಷ್ಠಿಸಲೇಬೇಕು, ಬಿಡತಕ್ಕದಲ್ಲವು, ಬಿಟ್ಟರೆ ಆಜ್ಞಾಭೇದಿಯಾಗಿ ಭಗವನ್ನಿಗ್ರಹಕ್ಕೆ ಒಳಗಾಗಬೇಕಾಗುತ್ತದೆ.

**ಸರ್ವಸಾಧ್ಯೇಷ್ವಭಿನ್ನತಾ**—ನಾಲ್ಕು ವಿಧ ಪುರುಷಾರ್ಥಗಳಿಗಾಗಿಯೂ ಈ ಪ್ರಪತ್ತಿಯೇ ಉಪಾಯವೆಂದೂ, ಅವುಗಳಿಗೆ ಏನೂ ಭೇದವಿಲ್ಲೆಂದೂ ಈ ಏಕ ಶಬ್ದವು ಸೂಚಿಸುತ್ತದೆ. ಈ ಅಭಿಪ್ರಾಯವನ್ನೇ ಒಂದು ಕಾರಿಕೆಯಾಗಿ ಅನುಗ್ರಹಿಸಿರುತ್ತಾರೆ—"**ಸುದುಷ್ಕರೇಣ ಶೋಚೇದ್ಯಃ ಯೇನಯೇನೇಷ್ಟಹೇತುನಾ। ಸಸತಸ್ಯಾಹಮೇವೇತಿ ಚರಮ ಶ್ಲೋಕ ಸಙ್ಗ್ರಹಃ**"ಎಂಬದಾಗಿ. ಯಾವನು ಏನೇನು ಬೇಕೆಂದು ಶೋಕಿಸುವನೋ ಆವವುಗಳನ್ನು ಹೊಂದಲು ನಾನೇ ಕಾರಣನು ಎಂಬುದು ಚರಮ ಶ್ಲೋಕ ಸಙ್ಗ್ರಹಾರ್ಥವೆಂದಾಗಿ ಹೇಳಿರುತ್ತಾರೆ. ನಾನೇ ಕಾರಣನು ಎಂದರೆ ನನ್ನಲ್ಲಿ ಮಾಡುವ ಶರಣಾಗತಿಯೇ ಕಾರಣವೆಂಬ ಭಾವವು. "**ಯದ್ಯೇನ ಕಾಮ ಕಾಮೇನ ನಸಾಧ್ಯಂ ಸಾಧನಾನ್ತರೈಃ।**

**ಮುಮುಕ್ಷುಣಾಯತ್ಸಾಂಖ್ಯೇನ ನಯೋಗೇನ ನಭಕ್ತಿತಃ। ಪ್ರಾಪ್ಯತೇ ಪರಮಂಧಾಮ ಯತೋನಾವರ್ತತೇ ಪುನಃ। ತೇನತೇನಾಪ್ಯತೇ ತತ್ತ್ವನ್ನ್ಯಾಸೇನೈವ ಮಹಾಮುನೇ,** ಎಂದರೆ ಯಾವ ಉಪಾಯಾನ್ತರವಾದ ಭಕ್ತಿಯೋಗವನ್ನವಲಂಬಿಸಿ, ಚತುರ್ವಿಧ ಪುರುಷಾರ್ಥಗಳನ್ನು ಅಪೇಕ್ಷಿಸುವ ಆರ್ತನೂ, ಅಧಾರ್ಥಿಯೂ, ಕೇವಲನೂ, ಜ್ಞಾನಿಯೂ ಹೊಂದಲು ಕಷ್ಟಸಾಧ್ಯವೋ, ಅಂತಹ ಕೋರಿಕೆಗಳನ್ನೆಲ್ಲಾ ಈ ನ್ಯಾಸವಿದ್ಯೆಯಿಂದಲೇ ಹೊಂದಬಹುದು ಎಂಬ ತಾತ್ಪರ್ಯವು.

**ಇತ್ಥಂ**–ಈ ಪ್ರಕಾರವಾಗಿ, ಷಡರ್ಥಾಃ–ಆರು ಅರ್ಥಗಳು **ಏಕಶಬ್ದಸ್ಯ**–ಇಲ್ಲಿರುವ ಏಕ ಶಬ್ದಕ್ಕೆ, **ಆಚಾರ್ಯೈಃ**:—ತಮ್ಮ ಗುರುಗಳಿಂದ, **ದರ್ಶಿತಾಃ**–ತೋರಿಸಲ್ಪಟ್ಟವು. ಆಚಾರ್ಯರು ಹೇಳಿಕೊಟ್ಟ ಅರ್ಥಗಳೇ ವಿನಾ, ತಾವು ಕಲ್ಪಿಸಿ ಹೇಳಿದುದಲ್ಲವೆಂಬ ತಾತ್ಪರ್ಯವು.

**ಇನ್ನೊಂದು ಮುಖ್ಯವಾದ** ಏಕ ಶಬ್ದಾರ್ಥವನ್ನು ಮುಂದೆ ಉಪಪಾದಿಸುತ್ತಾರೆ ಅದು ಯಾವುದೆಂದರೆ ಆಶ್ರಯ ಸಂರಕ್ಷಣೆಗೆ ಉಪಯುಕ್ತವಾದ ಕಲ್ಯಾಣಗುಣಯುಕ್ತಳಾಗಿ ಕಾರುಣ್ಯಮಯಳಾದ ಲಕ್ಷ್ಮಿಯಿಂದ ಯುಕ್ತನಾದವನು ಎಂಬುದೂ ಏಕ ಶಬ್ದಾರ್ಥವು. ಸರ್ವ ವಿಶೇಷಣಯುಕ್ತನಾದ ನಾನೊಬ್ಬನೇ ಎಂಬರ್ಥವು. ಹೀಗಿರುವಾಗ ಏಳು ಅರ್ಥಗಳೆಂದು ಹೇಳದೆ ಆರು ಎಂದು ಹೇಳಿದುದು ಏಕೆ? ಎಂದು ಪ್ರಶ್ನಿಸಬಹುದು. ಏಕೆಂದರೆ ಪರಮ ಪುರುಷನಾದ ತನಗೆ ಯಾವಾಗಲೂ ಜೊತೆಯಲ್ಲೇ ಇರುವದರಿಂದ ಪರತತ್ವಕ್ಕೇ ಸೇರಿದ ಲಕ್ಷಣವಾದುದರಿಂದ, ಯಾವಾಗ ತಾನು ಎಲ್ಲೆಲ್ಲಿ ಹೇಳಲ್ಪಟ್ಟನೋ ಅಲ್ಲೆಲ್ಲೆಲ್ಲಾ ಲಕ್ಷ್ಮಿ ವಿಶಿಷ್ಟನೇ ಹೇಳಲ್ಪಡುವದರಿಂದ ಇದನ್ನು ಸೇರಿಸಿ ಹೇಳಬೇಕಾದ ಆವಶ್ಯಕವಿಲ್ಲವು ಆದುದರಿಂದ ಅನುವಾದ ರೂಪದಲ್ಲಿ ಜ್ಞಾಪಕಕ್ಕೆ ತರುತ್ತಾರೆ. ಈ ಕಾರಿಕೆಗಳ ಮೂಲಕ ಪೂರ್ವಪಕ್ಷರೂಪದಲ್ಲಿ ನಮ್ಮಲ್ಲೇ ಕೆಲವರು ಹೇಳುವ ಅಭಿಪ್ರಾಯವನ್ನು ಕಾರಿಕೆಯ ಮೂಲಕ ಹೇಳಿ, ಅನಂತರ ಸಿದ್ಧಾನ್ತ ರೂಪದಲ್ಲಿ ಲಕ್ಷ್ಮಿಗೆ ಪರಮಾತ್ಮನೊಂದಿಗೆ ಉಪಾಯತ್ವದಲ್ಲೂ ಉಪೇಯತ್ವದಲ್ಲೂ ಅನ್ವಯ ಉಂಟೆಂದು ತಿಳಿಸುತ್ತಾರೆ. ಹಿಂದೆ ಅನೇಕ ಕಡೆಗಳಲ್ಲಿ ಈ ಅಭಿಪ್ರಾಯವು, ಸಿದ್ಧೋಪಾಯ ಶೋಧನಾಧಿಕಾರ; ಮೂಲಮನ್ತ್ರದ್ವಯಾಧಿಕಾರಗಳಲ್ಲಿ ಉಪಪಾದಿತವಾಗಿದ್ದರೂ, ಈ ಚರಮ ಶ್ಲೋಕದಲ್ಲೂ. ವ್ಯಕ್ತವೆಂದು ಹೇಳುವುದು ಆವಶ್ಯಕವಾದುದರಿಂದ **ಏಕ** ಶಬ್ದದಲ್ಲಿ ಈ ಅರ್ಥವು ಬೋಧಿತವೆಂದು ಉಪದೇಶಿಸುತ್ತಾರೆ. ಶ್ರೀ ಯಾಮುನ ಮುನಿಗಳು ಲಕ್ಷ್ಮೀತತ್ವವನ್ನು ಸಙ್ಗ್ರಹವಾಗಿ ಚತು ಶ್ಲೋಕಿಯಲ್ಲಿ ಉಪಪಾದಿಸಿರುವ ಹಾಗೂ, ಶ್ರೀ ಯತಿವರ್ಯರು ಶರಣಾಗತಿ ಗದ್ಯದಲ್ಲಿ ಭಗವನ್ನಾರಾಯಣವೆಂದು ಆರಂಭಿಸಿದ

ಚೂರ್ಣಿಕೆಯಲ್ಲೂ ನಿರ್ಣಯಿಸಿದ ಹಾಗೂ, ಶ್ರೀ ಶುಕರೂ ಭಾಗವತ ೬ನೆಯ ಸ್ಕಂದದ ಕೊನೆಯ ಅಧ್ಯಾಯದಲ್ಲಿ ಪುಂಸವನ ವ್ರತಾಚರಣೆಯಲ್ಲಿ ದ್ವಾದಶಾಹುತಿಯ ಪ್ರಸಙ್ಗದಲ್ಲಿ ತಿಳಿಸಿರುತ್ತಾರೆ.–ಏನೆಂದರೆ

**ವಿಷ್ಣು ಪತ್ನಿ ಮಹಾಮಾಯೇ ಮಹಾಪುರುಷ ಲಕ್ಷಣೇ ।**
**ಪ್ರಿಯಧಾಮೇ ಮಹಾ ಭಾಗೇ ಲೋಕಮಾತರ್ನಮೋಸ್ತುತೇ ॥**
**ಶ್ರಿಯಂ ವಿಷ್ಣುಂಚ ವರದಾ ವಾಶಿಷಾಂ ಪ್ರಭವಾ ವುಭೌ।**
**ಯುವಾಂಹಿ ವಿಶ್ವಸ್ಯ ವಿಭೂ ಜಗತಃ ಕಾರಣಂ ಪರಮ್ ॥**
**ಇಯಂಹಿ ಪ್ರಕೃತಿ ಸ್ಸೂಕ್ಷ್ಮಾ ಮಾಯಾ ಶಕ್ತಿರ್ದುರತ್ಯಯಾ ।**
**ತಸ್ಯಾ ಅಧೀಶ್ವರ ಸಾಕ್ಷಾತ್ತ್ವಮೇವ ಪುರುಷೋತ್ತಮ ॥**

ಇಲ್ಲಿ **ಮಹಾಪುರುಷಲಕ್ಷಣೇ** ಎಂಬುದರಿಂದ ಮಹಾಪುರುಷನಾದ ಶ್ರೀ ಮಹಾ ವಿಷ್ಣುವಿಗೆ ಯಾವ ಸ್ವರೂಪ ಸ್ವಭಾವಾದಿಗಳೋ ತದನುಗುಣವಾದ ಸ್ವರೂಪ ಸ್ವಭಾವ ರೂಪಾದಿಗಳುಳ್ಳವಳೆಂದು ಹೇಳಿರುತ್ತಾರೆ **ಪ್ರಿಯಧಾಮೇ** ತನ್ನ ಪತಿಯ ವಕ್ಷಸ್ಥಳವೇ ತನಗೆ ವಾಸವಾಗಿ ಉಳ್ಳವಳೆಂದೂ, **ವರದೌ** ಚತುರ್ವಿಧ ಪುರುಷಾರ್ಥ ಗಳನ್ನು ಕೊಡುವವರು ಇಬ್ಬರೂ ಎಂದೂ, **ಆಶಿಷಾಂ ಪ್ರಭವಾ ಉಭೌ** – ಸರ್ವ ಶ್ರೇಯಸ್ಸುಗಳಿಗೂ ಉಪಾಯ ಭೂತರೆಂದೂ, **ಯುವಾಂಹಿ ವಿಶ್ವಸ್ಯ ವಿಭೂ,** ಎಂಬುದರಿಂದ ಲಕ್ಷ್ಮಿಯು ಪರಮ ಪುರುಷನಿಗೆ ಅಪೃಥಕ್ಸಿದ್ಧ ವಿಶೇಷಣವಾದುದ ರಿಂದ ಸರ್ವವ್ಯಾಪ್ತಿ ಮತ್ತು ಪರಸ್ಪರ ವ್ಯಾಪ್ತಿಯೂ ಹೇಳಲ್ಪಟ್ಟಿತು. ಇಬ್ಬರೂ ಹೀಗೆ ಎಲ್ಲಾ ವಿಧದಲ್ಲೂ ಸಮವಾದರೆ ನ್ಯೂನಾಭ್ಯಧಿಕ ಶ್ರುತಿಗೆ ವಿರೋಧವೇ ? ಎಂದರೆ **ತಸ್ಯಾ ಅಧೀಶ್ವರ ಸಾಕ್ಷಾತ್** ಎಂಬುದರಿಂದ ಪತಿ ಶೇಷತ್ವವು ನಿರೂಪಿಸಲ್ಪ ಟ್ಟಿರುತ್ತದೆ

**ಜಗತಃ ಕಾರಣಂ ಪರಂ** ಎಂಬುದರಿಂದ ಜಗತ್ಕಾರಣತ್ವವೂ ಲೀಲಾ ವಿಭೂತಿಯಲ್ಲಿ ಪ್ರೀತ್ಯತಿಶಯವೂ ಹೇಳಲ್ಪಟ್ಟಿತು. ಭಾಗವತದಲ್ಲಿ ತುಂಬಾ ಆದರ ವುಳ್ಳ ಶ್ರೀ ಆನಂದ ತೀರ್ಥಿಯರ ಶಿಷ್ಯರುಗಳೂ ನಮ್ಮಲ್ಲೀ ಕೆಲವರೂ ಸಹ ಏಕೆ ಈ ಅಭಿಪ್ರಾಯಗಳನ್ನು ಮನ್ನಿಸಲಿಲ್ಲವೋ ತಿಳಿಯದು.

ಆದುದರಿಂದ ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವು ಶ್ರೀ ನಿಗಮಾನ್ತ ದೇಶಿಕರವರಿಗೆ ಇಷ್ಟವಿಲ್ಲವಾಗಿ ಆ ಅಭಿಪ್ರಾಯಗಳನ್ನು ನಿರಾಕರಿಸುತ್ತಾರೆ. **ಕೇಚಿತ್** ಎಂದು ಆರಂಭಿಸಿದ ಕಾರಿಕೆಯ ಮೂಲಕವಾಗಿ.

ಚಂಪಾ ಅಂಡ್ ಕೋ., ಮುದ್ರಣಾಲಯ, ಅರಳೇಪೇಟೆ, ಬೆಂಗಳೂರು ಸಿಟಿ.

**ಅಥ ಲಕ್ಷ್ಮೀವಿಶಿಷ್ಟ ಏಕಏವಶರಣ್ಯ ಇತ್ಯಾಹ ನವಭಿಃಕಾರಿಕೈಃ**
**ಕೇಚಿತ್ತ್ವಿಹೈಕ ಶಬ್ದಾರ್ಥಂ ಶರಣ್ಯೈಕ್ಯಂ ಪ್ರಚಕ್ಷತೇ ।**
**ವಿಶಿನಷ್ಟಿ ತಥಾಪಿ ಶ್ರೀರ್ಗುಣ ವಿಗ್ರಹವತ್ಪ್ರಭುಮ್** ॥ ೧೪೮ ॥

---

ಇತ್ಯಾದಿ ಪ್ರಮಾಣಗಳಿಂದಲೂ ಈ ಅಭಿಪ್ರಾಯವು ವ್ಯಕ್ತವು. ಹಾಗೆಯೇ **"ಶ್ರದ್ಧಯಾ ದೇವೋ ದೇವತ್ವ ಮಶ್ನುತೇ"** ಎಂಬ ಶ್ರುತಿಪ್ರಮಾಣವು. ಶ್ರೀ ವ್ಯಾಸಮಹರ್ಷಿಯು **ಏಕಾಕೀ ವಿದ್ಯಯಾ ಸಾರ್ಧಂ** (ಮೋಕ್ಷಧರ್ಮ) ಎಂದು ಏಕ ಶಬ್ದವನ್ನೇ ಪ್ರಯೋಗಿಸಿರುತ್ತಾರೆ ಇವುಗಳಿಗೆಲ್ಲಾ ಗಮನಕೊಡದೆ, ಈ **ಏಕ** - ಶಬ್ದಕ್ಕೆ ಲಕ್ಷ್ಮೀ ವಿಶಿಷ್ಟತೆಯನ್ನೂ ಹೇಳದೆ ಕೇವಲ ನಾರಾಯಣನು ಮಾತ್ರವೇ ಸಿದ್ಧೋಪಾಯನೆಂದು ಭಾವಿಸುವರು. ಈ ಅಭಿಪ್ರಾಯಗಳನ್ನು ೯ ಕಾರಿಕೆಗಳಿಂದ ನಿರಾಕರಿಸುತ್ತಾರೆ

**ಲಕ್ಷ್ಮೀವಿಶಿಷ್ಟನಾಗಿರುವ ತಾನೊಬ್ಬನೇ ಶರಣ್ಯನು ಎಂಬುದೂ ಏಕ ಶಬ್ದಾರ್ಥವೆಂದು ೯ ಕಾರಿಕೆಗಳಿಂದ ಹೇಳುತ್ತಾರೆ**

ಕೆಲವರು ಇಲ್ಲಿನ ಏಕಶಬ್ದದಿಂದ ನಾರಾಯಣನೊಬ್ಬನೇ ಸಿದ್ಧೋಪಾಯನೇ ವಿನಾ ಲಕ್ಷ್ಮಿಗೆ ಉಪಾಯತ್ವದಲ್ಲಿ ಸಂಬಂಧವಿಲ್ಲವೆನ್ನುವರು ಎಂದು ಹೇಳಿ, ಅಭಿಪ್ರಾಯ ವನ್ನು ನಿರಾಕರಿಸುತ್ತಾರೆ. **ಕೇಚಿತ್** - ಕೆಲವರು, ಇಲ್ಲಿಕೆಲವರು ಎಂಬುದರಿಂದ ಸಾಧಾರಣ ಜನರು ಹೇಳಲ್ಪಡಲಿಲ್ಲವು ಹಾಗೆ ಸಾಧಾರಣರಾದರೆ ಅವರ ಅಭಿ ಪ್ರಾಯಕ್ಕೆ ಗಮನ ಕೊಡುವ ಆವಶ್ಯಕತೆಯಿಲ್ಲವು ; ಮಹನೀಯರಾಗಿಯೂ ಶಾಸ್ತ್ರ ಸಾಮಂಜಸ್ಯವಿಲ್ಲದ ಅರ್ಥವನ್ನು ಹೇಳಿದರೆ, ಆಗೀಗ ನಿರಾಕರಿಸದೇ ಬಿಡುವದು ಸರಿಯಲ್ಲವು; ಆದುದರಿಂದ **ಕೇಚಿತ್** - ಕೆಲವು ನಮ್ಮ ಸಿದ್ಧಾಂತಕ್ಕೆ ಸೇರಿದ ಆಚಾರ್ಯರುಗಳು, **ಇಹ** - ಈ ಚರಮಶ್ಲೋಕದಲ್ಲಿ, **ಏಕ ಶಬ್ದಾರ್ಥಂ** - ಏಕ ಶಬ್ದಾರ್ಥವು **ಶರಣ್ಯೈಕ್ಯಂ** - ಶರಣ್ಯನಾಗಿ ಎಂದರೆ ಸಿದ್ಧೋಪಾಯನಾಗಿ ರಕ್ಷಕನು ಒಬ್ಬನಾದ ನಾರಾಯಣನೊಬ್ಬನೇ, ಲಕ್ಷ್ಮಿಯು ಅಲ್ಲವೆಂಬ, ಭಾವವನ್ನು, **ಪ್ರಚಕ್ಷತೇ** - ವ್ಯಕ್ತವಾಗಿ ಹೇಳುತ್ತಾರೆ. **ತಥಾಪಿ** - ಹೀಗೆ ಏಕಶಬ್ದ ಪ್ರಯೋಗ ವಿದ್ದರೂ, **ತದಾಪಿ** ಎಂಬುದು ಪಾಠಾಂತರವು, ಆಕಾಲದಲ್ಲೂ ಕೂಡ ಎಂದರೆ ಭಗವಂತನು ಉಪಾಯನಾಗುವಾಗಲೂ ಕೂಡ ಎಂಬರ್ಥವು **ಶ್ರೀಃ** - ಲಕ್ಷ್ಮಿಯೂ **ಗುಣವಿಗ್ರಹವತ್** - ಸ್ವಾಮಿಗೆ ಕಲ್ಯಾಣಗುಣಗಳ ಮತ್ತು ದಿವ್ಯಮಙ್ಗಳ ವಿಗ್ರಹ ಗಳ ಹಾಗೆ, **ಪ್ರಭುಮ್** - "ಪತಿಂವಿಶ್ವಸ್ಯ" ಎಂಬಲ್ಲಿ ಹೇಳಿರುವಹಾಗೆ, ಸರ್ವಸ್ವಾಮಿ ಯಾದ ಪರಮಪುರುಷನನ್ನು, **ವಿಶಿನಷ್ಟಿ** - ವಿಶೇಷಿಸುತ್ತಾಳೆ. ಪರಮಪುರುಷ ನೆಂದರೆ ಹೇಗೆ ಕಲ್ಯಾಣಗುಣಗಳಿಂದಲೂ ಮತ್ತು ದಿವ್ಯಮಙ್ಗಳ ವಿಗ್ರಹದಿಂದಲೂ ಯುಕ್ತನೆಂದು, ಆತನ ವಿಶೇಷಣಗಳಿಂದ ಹೇಳಲ್ಪಡುವನೋ, ಹಾಗೆಯೇ ಲಕ್ಷ್ಮಿ

**ಈಶ್ವರೀ ಸರ್ವಭೂತಾನಾ ಮಿಯಂ ಭಗವತಃಪ್ರಿಯಾ ।**
**ಸಂಶ್ರಿತ ತ್ರಾಣದೀಕ್ಷಾಯಾಂ ಸಹಧರ್ಮಚರೀ ಸ್ಮೃತಾ ॥೧೪೯॥**

ಯಾ ವಿಶೇಷಣವಾದುದರಿಂದ ಲಕ್ಷ್ಮೀಯುಕ್ತನಾದ ಭಗವಂತನು ಎಂಬರ್ಥವೂ ತೋರಿಬರುವದರಿಂದ, **ಮಾಮೇಕಂ** - ಎಂದಿದ್ದರೂ ಲಕ್ಷ್ಮೀಕಲ್ಯಾಣಗುಣ, ದಿವ್ಯ ಮಙ್ಗಳವಿಗ್ರಹ ಇತ್ಯಾದಿ ಸರ್ವವಿಶೇಷಣಯುಕ್ತನಾದ ನಾನೊಬ್ಬನೇ ಎಂಬ ತಾತ್ಪರ್ಯವೆಂದು ಹೇಳಿದರು ದ್ವಯದಲ್ಲಿ **ಶ್ರೀಮನ್ನಾರಾಯಣ ಚರಣೌ** ಎಂಬಲ್ಲಿ ಲಕ್ಷ್ಮೀಯುಕ್ತನಾದ ನಾರಾಯಣನ ಪಾದಕಮಲಗಳಲ್ಲಿ ಶರಣವನ್ನು ಹೊಂದುವೆನು ಎಂದು ಹೇಳಿರುವದರಿಂದ **ಮಾಮೇಕಂ ಶರಣಂವ್ರಜ** ವೆಂಬಲ್ಲೂ ಲಕ್ಷ್ಮೀಯುಕ್ತತೆಯನ್ನೇ ಹೇಳತಕ್ಕದ್ದು ವಿಶೇಷಣದೊಂದಿಗೇ ಯಾವಾಗಲೂ ಇರುವ ವಿಶೇಷ್ಯನಾದುವರಿಂದ ಎಂದರೆ ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣಳಾದುದರಿಂದ, **ಸರ್ವೇಶ್ವರನು** ಉಪಾಯನಿಷ್ಠನಿಗೆ, ಸಿದ್ಧೋಪಾಯನಾಗುವಾಗಲೂ, ಸಹಧರ್ಮಚರಿಯಾದ ಲಕ್ಷ್ಮಿಯ ಜೊತೆಯಲ್ಲೇ ಇರುವದರಿಂದ ಸಿದ್ಧೋಪಾಯತ್ವದಲ್ಲಿ ಆಕೆಗೂ ಅನ್ವಯವುಂಟೆಂಬ ಭಾವವು

ಆಗಲಿ, ಸಿದ್ಧೋಪಾಯನಿಗೆ ವಿಶೇಷಣವೆಂದೂ, ಆ ವಿಶೇಷಣವು ಯಾವಾಗಲೂ ಒಟ್ಟಿಗೆ ಇರುವದೆಂದೂ, ಮಾತ್ರ ಹೇಳಿದಿರಿ; ಇದರಿಂದ ಸಿದ್ಧೋಪಾಯತ್ವದಲ್ಲಿ ಅನ್ವಯವೂ ಉಂಟೆಂದು ಹೇಗಾಯಿತು ? ಎಂದಾಕ್ಷೇಪ ತಂದರೆ ಭಗವಂತನಹಾಗೆ ಲಕ್ಷ್ಮಿಯೂ ಈಶ್ವರಕೋಟಿಗೆ ಸೇರಿದವಳೆಂಬುದು ಶಾಸ್ತ್ರಸಮ್ಮತವಾದ ವಿಷಯವಾದುದರಿಂದ, ಮುಕ್ತಿಗೆ ಉಪಾಯವಾಗುವದೂ ಮುಕ್ತಿಯನ್ನೂ ಕೊಡುವದೂ, ಸಹ ಇಬ್ಬರಿಗೂ ಸೇರಿದುದು ; ಯಜಮಾನನು ಮತ್ತು ಆತನ ಪತ್ನಿಗೂ ಸೇರಿದುದಾಗಿ ಆ ಸಂದರ್ಭದಲ್ಲಿ ಆಶ್ರಿತ ತ್ರಾಣದೀಕ್ಷೆಯನ್ನೂ ಇಬ್ಬರೂ ರಚಿಸಿರುತ್ತಾರೆಂದು ಮುಂದಿನ ಕಾರಿಕೆಯಿಂದ ತಿಳಿಸುತ್ತಾರೆ

ಮುಖ್ಯವಾಗಿ ಎರಡು ಕಾರಣಗಳಿಂದ ಆಕೆಗೆ ಉಪಾಯತ್ವವೂ ಉಂಟೆಂದು ಹೇಳುತ್ತಾರೆ **ಈಶ್ವರೀ ಸರ್ವಭೂತಾನಾಂ** - ಸಮಸ್ತ ನಿಯಾಮ್ಯವರ್ಗವಾದ ಪ್ರಾಣಿಗಳಿಗೂ, **ಈಶ್ವರೀ** - ಈಶ್ವರಿಯು ಎಂದು ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ ಶ್ರೀ ಸೂಕ್ತದಲ್ಲಿ **ಈಶ್ವರೀಂ ಸರ್ವಭೂತಾನಾಂ** - ಎಂಬ ಪ್ರಯೋಗವೇ ಇರುತ್ತದೆ. ಈಶ್ವರೀಯಾಗಬೇಕಾದರೆ ಎಲ್ಲವನ್ನೂ ವ್ಯಾಪಿಸಿ, ಭರಿಸಿ, ಅವಕ್ಕೆಲ್ಲಾ ಆತ್ಮಾವಾಗಿ ಅವುಗಳಿಗೆ ಸ್ವಾಮಿನಿಯಾಗಬೇಕು ಇಂತಹ ಶಕ್ತಿಯೆಲ್ಲಾ ಲಕ್ಷ್ಮಿಗೆ ಉಂಟೆಂದು ವಿಷ್ವಕ್ಸೇನ ಸಂಹಿತೆಯಲ್ಲಿ ಹೇಳಿರುವದರಿಂದ ಆಕೆಯು ಸರ್ವಭೂತಗಳಿಗೂ ಈಶ್ವರಿಯು ಹಾಗಾದರೆಎಲ್ಲಾ ಪ್ರಾಣಿವರ್ಗಕ್ಕೂ ನಿಯಾಮಕರು ಇಬ್ಬರೂ ಒಬ್ಬನು ನಾರಾಯಣನು,ಇನ್ನೊಬ್ಬಳು ಲಕ್ಷ್ಮಿಯು. ಇದರಿಂದ ಪರಸ್ಪರ ವ್ಯಾಘಾತವಲ್ಲವೊ ?

ಎಂದರೆ, (೨) ಹಾಗಲ್ಲವೆಂದು **ಇಯಂ ಭಗವತಃಪ್ರಿಯಾ** - ಈ ಲಕ್ಷ್ಮಿಯು ಭಗವಂತನಿಗೆ ವಾಲ್ಲಭ್ಯಾತಿಶಯದಿಂದ ತುಂಬಾ ಪ್ರಿಯಳು ಪರಸ್ಪರ ಇಬ್ಬರೂ ಸರ್ವಜ್ಞರು ; ಪರಸ್ಪರ ಮನೋಂಗಿತವನ್ನು ತಿಳಿದವರು ; ಅಂತವರಲ್ಲಿ ವ್ಯಾಘಾತ ವುಂಟೇ ? ವ್ಯಾಘಾತವೆಲ್ಲಾ ಪರಸ್ಪರ ಇಂಗಿತವನ್ನು ತಿಳಿಯುವ ಶಕ್ತಿಯಿಲ್ಲದ ಲೋಕ ದಂಪತಿಗಳಲ್ಲಿ ಮಾತ್ರವೇ ಆದುದರಿಂದ ಶ್ರೀ ಯಾಮುನಮುನಿಗಳು **ನಿತ್ಯಾನುಕೂಲಂ ಸ್ವತಃ** - ಎಂದು ಪ್ರಯೋಗಿಸಿರುತ್ತಾರೆ ಆದುದರಿಂದ ಸೀತೆಯು ಶ್ರೀ ರಾಮನಲ್ಲಿ ಪ್ರತಿಜ್ಞೆಯನ್ನು ಮಾಡುತ್ತಾಳೆ ಏನೆಂದರೆ **" ನತೇ ದುಃಖಂ ಕರಿಷ್ಯಾಮಿ ನಿವಸಂತೀ ತ್ವಯಾ ಸಹ "** ಎಂದು (ರಾ ಅಯೋಧ್ಯಾ) ಹೀಗೆ ಈ ಎರಡು ಕಾರಣಗಳಿಂದ, **ಸಂಶ್ರಿತತ್ರಾಣ ದೀಕ್ಷಾಯಾಂ**-ಚನ್ನಾಗಿ ಶರಣಾಗತಿಯ ಮೂಲಕ ಆಶ್ರಯಿಸಿದವರ ಸಂರಕ್ಷಣವೆಂಬ ಯಜ್ಞದೀಕ್ಷೆಯಲ್ಲಿ, **ಸಹಧರ್ಮಚರೀ ಸ್ಮೃತಾ** - ಭಗವಂತನಿಗೆ ಸಹಧರ್ಮಚಾರಿಣೀ ಎಂದು ಸ್ಮೃತಿಯಾದ ಶ್ರೀ ಮದ್ರಾ ಮಾಯಣದಲ್ಲಿ "ಇಯಂ ಸೀತಾ ಮಮಸುತಾ ಸಹಧರ್ಮಚರೀತವ । ಪ್ರತೀಕ್ಷ ಚೈನಾಂ ಭದ್ರಂತೇ ಪಾಣಿಂಗೃಣ್ಹೀಷ್ವಪಾಣಿನಾ" ಎಂಬಲ್ಲಿ ಹೇಳಲ್ಪಟ್ಟಿತು ಆಶ್ರಿತ ರಾದ ಋಷಿಗಳ ರಕ್ಷಣೆಗಾಗಿ ಕಂಕಣಬದ್ಧನಾಗಿ ಶ್ರೀರಾಮಚಂದ್ರ ಪ್ರಭುವು ಹೊರ ಟರೆ, ತತ್ಸಹಾಯಕಳಾಗಿ ವನಕ್ಕೆ ತಾನೂ ಜೊತೆಯಲ್ಲಿ ಬಂದು, ಋಷಿಗಳ ಶತ್ರು ನಾಶನ ಮತ್ತೂ ಸಾಧುರಕ್ಷಣವೆಂಬ ಯಜ್ಞದೀಕ್ಷೆಯಲ್ಲಿ ಮುಖ್ಯಪಾತ್ರವನ್ನು ವಹಿಸಿ ಸೀತೆಯು ತಾನೇ ಮೂಲಕಾರಣವಾದುದರಿಂದ **ಸಹಧರ್ಮಚಾರಿಣಿಯು. ಸಂಶ್ರಿತ ತ್ರಾಣದೀಕ್ಷಾಯಾಂ**ಎಂಬ ದೀಕ್ಷಾಶಬ್ದ ಸ್ವಾರಸ್ಯದಿಂದ ಆಶ್ರಿತರಕ್ಷಣವೆಂಬ ಯಜ್ಞ ದೀಕ್ಷಾ ಸಂಕಲ್ಪಕ್ಕೆ ಪತ್ನೀಇಲ್ಲದೇ ಇದ್ದರೆ, **"ಪತ್ಯುರ್ನೋಯಜ್ಞ ಸಂಯೋಗೇ** ಎಂಬ ಉಕ್ತ್ಯನುಸಾರವಾಗಿ, ಅವಕಾಶವೇ ಇಲ್ಲವಾಗುತ್ತದೆ ಆದುದರಿಂದಲೇ ಶ್ರುತಿಯಲ್ಲಿ **"ಅಸ್ಯೇಶಾನಾ ಜಗತೋ ವಿಷ್ಣುಪತ್ನೀ"** ಎಂದು ಹೇಳಲ್ಪಟ್ಟಿತು ಈ ಅಭಿಪ್ರಾಯವೇ **ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ** ರಕ್ಷಕಃ**"** ಎಂಬಲ್ಲಿ ಉಪಪಾದಿತವು ಆಗಲಿ ಲಕ್ಷ್ಮಿಯು ಪತಿಗೆ ಶೇಷಭೂತಳೆಂದು ಶಾಸ್ತ್ರದಲ್ಲಿ ಹೇಳಿರುವಾಗ ಸ್ವಾತಂತ್ರ್ಯವಿಲ್ಲದವಳಿಗೆ ಉಪಾಯತ್ವದಲ್ಲಿ ಅನ್ವಯ ವನ್ನು ಹೇಗೆ ಹೇಳಬಹುದು ? ಎಂಬ ಶಂಕಾವಲ್ಲಿ **ಸಂಶ್ರಿತ ತ್ರಾಣದೀಕ್ಷಾಯಾಂ** ಎಂದು ಹೇಳಲ್ಪಟ್ಟಿತು. ಯಜ್ಞದಲ್ಲಿ ಅಧಿಕಾರವು ಹೇಗೆ ಪತಿ ಪತ್ನೀಗಳಿಬ್ಬರಿಗೂ ಉಂಟೋ, ಹಾಗೆಯೇ ಸಮಸ್ತ ಜಗದ್ವ್ಯಾಪಾರಗಳಲ್ಲೂ ಲಕ್ಷ್ಮಿಯೊಂದಿಗೆ ನಾರಾ ಯಣನಿಗೆ ಅಧಿಕಾರವೆಂಬ ತಾತ್ಪರ್ಯವು ಆದುದರಿಂದ **ಏಕಂ** - ಎಂಬುದರ ತಾತ್ಪರ್ಯವು ವಿಶೇಷಣ ವಿಶಿಷ್ಟನಾದ **ಏಕಂ** - ಎಂಬ ತಾತ್ಪರ್ಯವೆಂದು ಹೇಳಲ್ಪಟ್ಟಿತು.

**ಏಕಂ ಜಗದುಪಾದಾನ ಮಿತ್ಯುಕ್ತೇಽಪಿ ಪ್ರಮಾಣತಃ।**
**ಯಥಾಪೇಕ್ಷಿತ ವೈಶಿಷ್ಟ್ಯಂ ತಥಾತ್ರಾಪಿ ಭವಿಷ್ಯತಿ ॥ ೧೫೦ ॥**

ಉಪಾಯತ್ವದಲ್ಲೂ ಲಕ್ಷ್ಮಿಗೆ ಅನ್ವಯ ಉಂಟೆಂಬುದನ್ನು ಎರಡು ನಿದರ್ಶನ ಗಳಮೂಲಕ ಉಪಪಾದಿಸುತ್ತಾರೆ ವಿಶೇಷ್ಯವನ್ನು ಹೇಳುವಾಗ ವಿಶೇಷಣ ವಿಶಿಷ್ಟ ತೆಯೆ ಹೇಳಲ್ಪಡುತ್ತದೆಂಬುದಕ್ಕೆ ನಿದರ್ಶನವನ್ನು ದಯಪಾಲಿಸುತ್ತಾರೆ ಹೇಗೆಂದರೆ ಛಾಂದೋಗ್ಯದಲ್ಲಿ **"ಸದೇವ ಸೋಮ್ಯೇದಮಗ್ರ ಆಸೀತ್ ಏಕಮೇವಾ ದ್ವಿತೀಯಮ್"** ಸೃಷ್ಟಿಗೆ ಮೊದಲು ಉಪಾದಾನಕಾರಣವಾಗಿ ಸತ್ತೆಂಬುದೊಂದೇ ಇತ್ತು, ಎರಡನೆಯದೇ ಇರಲಿಲ್ಲವು ಎಂದು **ಏಕ** ಶಬ್ದವಿದ್ದರೂ, ಚಿದಚಿತ್ತುಗಳಿಂದ ಪರಮಾತ್ಮನೆಂದು ಹೇಗೆ ಅರ್ಥಮಾಡಲೇಬೇಕೋ, ಹಾಗೆಯೇ ಇಲ್ಲಿಯೂ ಪರಮ ಪುರುಷನೊಬ್ಬನೇ ಸಿದ್ಧೋಪಾಯನೆಂದು ಇದ್ದರೂ,ಈ ಚರಮಶ್ಲೋಕದ **ಏಕ**ಶಬ್ದವು ಲಕ್ಷ್ಮೀವಿಶಿಷ್ಟತೆಯನ್ನೇ ಬೋಧಿಸುತ್ತದೆಂದು ಹೇಳುತ್ತಾರೆ ಆಗಲಿ ಸತ್ ಎಂಬುದಕ್ಕೆ ಸೂಕ್ಷ್ಮ ಚಿದಚಿತ್ತುಗಳಿಂದ ವಿಶಿಷ್ಟನಾದ ಪರಮಾತ್ಮನೆಂದು ಏಕೆಅರ್ಥಮಾಡಬೇಕು? ಸತ್ ಎಂಬ ಶಬ್ದಕ್ಕೆ ಸುಮ್ಮನೆ ಪರಬ್ರಹ್ಮವೆಂಬ ಅರ್ಥವನ್ನು ಏಕೆ ಹೇಳಕೂಡದು? ಎಂದರೆ ಚಿದಚಿತ್ತುಗಳು, ಇಲ್ಲದೆ ಇರುವುವು ಉತ್ಪನ್ನವಾದವೆಂದು ಅಸತ್ಕಾರ್ಯವಾದ ಅಪಾರ್ಥವನ್ನು ಅವಲಂಬಿಸಬೇಕಾಗುತ್ತದೆ ಅದೂ ಅಲ್ಲದೇ ಈ ಶ್ರುತಿಯೇ ಅನ್ಯತ್ರ ಉಪಪಾದಿಸಲ್ಪಟ್ಟಿರುತ್ತದ; ಹೇಗೆಂದರೆ **"ಆನೀತವಾದಗ್ಂ ಸ್ವಧ ಯಾತದೇಕಂ। ಯಸ್ಮಾದ್ಧಾನ್ಯ ನಪರಃಕಿಂಚನಾಸ। ತಮ ಆಸೀತ್ತಮಸಾ ಗೂಡ ಮಗ್ರೇಪ್ರಕೇತಮ್"** ಎಂಬುದರಿಂದ ಸೃಷ್ಟಿಗೆ ಮೊದಲು ಲಕ್ಷ್ಮಿಯೊಂದಿಗೆ ಪರಬ್ರಹ್ಮನೊಬ್ಬನೇ ಇದ್ದನೆಂದು ಹೇಳಿ, ಅನಂತರ ಅವರೊಂದಿಗೆ ಸೂಕ್ಷ್ಮದೆಶೆ ಯಲ್ಲಿ ತಮಸ್ಸಿತ್ತೆಂದೂ ಹೇಳಲ್ಪಟ್ಟಿರುತ್ತದೆ ತಮಸ್ಸು ಎಂಬದು ಸೂಕ್ಷ್ಮ ಚಿದ ಚಿದ್ವಿಶಿಷ್ಟದ್ರವ್ಯವೆಂಬುದು ಶ್ರುತ್ಯಂತರ ಸಿದ್ಧವು ಇದು "ಸದೇವಸೋಮ್ಯ ಎಂಬ ಶ್ರುತಿಯು ಉಪಪಾದನೆಯಾದುದರಿಂದ ವಿಶೇಷ್ಯವು ಹೇಳಲ್ಪಟ್ಟರೂ, ಅಪೃಥಕ್ಸಿದ್ಧ ವಿಶೇಷಣದೊಂದಿಗೆ ಹೇಳಲ್ಪಟ್ಟಿತೆಂದೇ ಭಾವಿಸಬೇಕಾದುದರಿಂದ, ಏಕಶಬ್ದದಿಂದ ಲಕ್ಷ್ಮೀವೈಶಿಷ್ಟ್ಯವೂ ಬೋಧಿತವು ಎಂದು ಹೇಳುತ್ತಾರೆ **ಏಕಂ** - ಒಬ್ಬನಾದ ಪರಬ್ರಹ್ಮನೇ, **ಜಗದುಪಾದಾನಮಿತಿ** - ಜಗತ್ತಿಗೆ ಉಪಾದಾನಕಾರಣನೆಂದು, **ಉಕ್ತೇಽಪಿ** - ಛಾಂದೋಗ್ಯದಲ್ಲಿ **"ಸದೇವ ಸೋಮ್ಯೇದ ಮಗ್ರಆಸೀತ್, ಏಕ ಮೇವಾದ್ವಿತೀಯಂ"** ಎಂಬ ವಾಕ್ಯದಲ್ಲಿ ಏಕಮೇವ ಎಂಬಲ್ಲಿ ಹೇಳಲ್ಪಟ್ಟಿದ್ದರೂ, **ಪ್ರಮಾಣತಃ** - ಇತರ ಪ್ರಮಾಣಗಳಿಂದ, ಮೇಲೆ ಉದಾಹರಿಸಲ್ಪಟ್ಟ ಶ್ರುತಿ ಪ್ರಮಾಣ ಮತ್ತು "ಯಸ್ಯ ಸರ್ವಾಣಿ ಭೂತಾನಿ ಶರೀರಮ್" ಇವೇ ಮೊದಲಾದ ಪ್ರಮಾಣಗಳಿಂದ, **ಅಪೇಕ್ಷಿತ ವೈಶಿಷ್ಟಂ** - ಲೋಕಕ್ಕೆ ಉಪಾದಾನಕಾರಣನಾಗಿರ

**ಏಕೋಽಪಾಸ್ತಿ ವಿಧಾನೇಽಪಿ ಗುಣಾದೀನಾಂ ಯಥಾನ್ವಯಃ ।**
**ತಥೈಕಶರಣಂ ವ್ರಜ್ಯಾ ವಿಧಾನೇಽಪ್ಯನು ಮಾನ್ಯತಾಮ್ ॥ ೧೫೧ ॥**

ಬೇಕೆಂದು ಹೇಳುವದಕ್ಕೆ ಬೇಕಾದ ಸೂಕ್ಷ್ಮಚಿದಚಿತ್ತುಗಳಿಂದ ನೇರಿರೋಣವು, **ಯಥಾ** - ಹೇಗೆ ವ್ಯಕ್ತವೋ, **ತಥಾ** - ಹಾಗೆಯೇ, **ಅತ್ರಾಪಿ** - ಈ ಸಂದರ್ಭವಲ್ಲೂ, ಎಂದರೆ ಮಾಮೇಕಂ ಎಂಬಲ್ಲಿರುವ ಏಕಶಬ್ದ ಪ್ರಯೋಗದಲ್ಲೂ, **ಭವಿಷ್ಯತಿ**- ಉಂಟಾಗುತ್ತದೆ, ಎಂದರೆ ಲಕ್ಷ್ಮೀವೈಶಿಷ್ಟವೇ ಹೇಳಲ್ಪಟ್ಟಿತೆಂದೇ ಭಾವಿಸತಕ್ಕದ್ದಾಗಿರುತ್ತದೆಂಬ ಭಾವವು ಹಾಗೆಯೇ ಸಚ್ಛಬ್ದದಲ್ಲೂ ಲಕ್ಷ್ಮೀವೈಶಿಷ್ಟವೂ ಸಹ ಬೋಧಿತವೆಂಬುದೂ ಸಹ ಮೇಲೆ ಉದಾಹರಿಸಿರುವ ಬೇರೆ ಶ್ರುತಿಯಿಂದಲೂ ವ್ಯಕ್ತವೆಂಬುದೂ ಸಹ ಸೂಚಿತವು ಇದನ್ನನುಸರಿಸಿ, ಭಾಗವತದಲ್ಲಿ **"ಯುವಾಸ್ತು ವಿಶ್ವಸ್ಯವಿಭೂ ಜಗತಃಕಾರಣಂಪರಮ್,"** ಎಂದು ಇದೆ ಹಾಗೆಯೇ ಸಾತ್ವತದಲ್ಲೂ **"ಲಕ್ಷ್ಮೀನಾರಾಯಣಾಖ್ಯಂತದತೋ ಬ್ರಹ್ಮಸನಾತನಮ್** । ತದೇದತ್ಸೂಕ್ಷ್ಮಮಿಥುನಮ್" ಎಂದು ಹೇಳಲ್ಪಟ್ಟಿದುತ್ತದೆ ಭಗವಂತನಿಗೆ ಉಪಾದಾನಕಾರಣತ್ವವನ್ನು ಬೋಧಿಸುವ ಈ ಶ್ರುತ್ಯರ್ಥದಲ್ಲಿ ವಿಶೇಶಣಗಳಾದ ಸೂಕ್ಷ್ಮಚಿದಚಿದ್ವಿಶಿಷ್ಟ ವಿಶೇಷ್ಯನೆಂದು **ಏಕಮೇವ** ಎಂಬಸ್ಥಳದಲ್ಲಿ ಒಪ್ಪುವದಾದರೆ, ಇಲ್ಲಿ **ಮಾಮೇಕಂ** ಎಂಬಲ್ಲಿರುವ ವಿಶೇಷಣವಾದ ಲಕ್ಷ್ಮಿಯಿಂದ ಕೂಡಿದ ವಿಶೇಷ್ಯನಾದ ಭಗವಂತನೆಂದು ಅರ್ಥವನ್ನು ಒಪ್ಪಲು ಪ್ರತಿಬಂಧಕವೇನು ? ಆದುದರಿಂದ ಭಗವಂತನು ಲಕ್ಷ್ಮಿಯೊಂದಿಗೆ ನೇರಿಯೇ ಮೋಕ್ಷೋಪಾಯನೆಂದೇ ಭಾವಿಸತಕ್ಕದ್ದು

ಉಪಾಯರೂಪನಾದ ಭಗವಂತನ ಧ್ಯಾನೋಪಾಸನೆಗಳಿಗೆ ಐಕಾಂತ್ಯವು ಅವಶ್ಯಕವು ಲಕ್ಷ್ಮೀನಾರಾಯಣರಿಬ್ಬರೂ ಉಪಾಸನಾದಿಗಳಲ್ಲಿ ಉದ್ದೇಶ್ಯರೆಂದರೆ ಐಕಾಂತ್ಯಕ್ಕೆ ಹಾನಿ ಎಂಬುದು ಕೆಲವರ ಪೂರ್ವ ಪಕ್ಷವು ಆ ಅಭಿಪ್ರಾಯವನ್ನೂ ಒಂದು ದೃಷ್ಟಾಂತಮೂಲಕ ನಿರಾಕರಿಸುತ್ತಾರೆ ಹೇಗೆಂದರೆ—ಗುಣೋಪಸಂಹಾರ ಪಾದದಲ್ಲಿ, ಪರಬ್ರಹ್ಮನು ಯಾವಾಗಲೂ ಉಭಯ ಲಿಂಗತ್ವಯುಕ್ತನು ಎಂದರೆ ಹೇಯಪ್ರತ್ಯನೀಕನು ಕಲ್ಯಾಣ ಗುಣಾಕರನೆಂದೂ, "ಆನನ್ದಾದಯಃ ಪ್ರಧಾನಸ್ಯ" (೩ ೩ ) ಎಂಬ ಸೂತ್ರದಲ್ಲಿ ಉಪಪಾದಿತವಾಗಿರುವಹಾಗೆ ಆನನ್ದತ್ವ, ಸತ್ಯತ್ವ, ಜ್ಞಾನತ್ವ, ಅನನ್ತತ್ವ ಅಮಲತ್ವ, ಶ್ರೀಯಃ ಪತಿತ್ವರೂಪಗಳಾದ ಸ್ವರೂಪ ನಿರೂಪಕಧರ್ಮಗಳು, ಸಮಸ್ತಗಳಾದ ಉಪಾಸನ ವಿದ್ಯೆಗಳಲ್ಲೂ ಈ ವಿಶೇಷಣಗಳು **ಪ್ರಧಾನ** ಗಳಾಗಿ ಉಪಾಸ್ಯ ದೇವತೆಗೆ ಇರಬೇಕೆಂದು ಹೇಗೆ ವ್ಯವಸ್ಥಿತವೋ, ಹಾಗೆಯೇ **"ಏಕಂಶರಣಂ ವ್ರಜ** ಎಂದು ಹೇಳಿರುವ ಸಂದರ್ಭದಲ್ಲೂ ಲಕ್ಷ್ಮೀವಿಶಿಷ್ಟನಾದ ಶ್ರೀ ಕೃಷ್ಣನೇ ಶರಣ್ಯನೆಂಬುದು ವ್ಯಕ್ತವೆಂದು ಬೋಧಿಸುತ್ತಾರೆ—**ಏಕೋಽಪಾಸ್ತಿ ವಿಧಾನೇಽಪಿ**-ಬ್ರಹ್ಮವಿದ್ಯೆಗಳಲ್ಲಿ ಪರಬ್ರಹ್ಮನೊಬ್ಬನೇ ಉಪಾಸಿಸ

ತಕ್ಕದ್ದೆಂದು ವಿಧಿಸಿರುವದರಲ್ಲೂ ಕೂಡ, **ಗುಣಾದೀನಾಂ** - ಕಲ್ಯಾಣಗುಣಗಳಾದ ಆನಂದತ್ವ, ಸತ್ಯತ್ವ, ಜ್ಞಾನತ್ವಾದಿ ಗುಣಗಳ **ಯಥಾ ಅನ್ವಯಃ** - ಗುಣೋಪ ಸಂಹಾರ ಪಾದದಲ್ಲಿ ಹೇಳಿರುವಹಾಗೆ, ಹೇಗೆ ಸಂಬಂಧ ವುಂಟೋ, **ತಥಾ** - ಹಾಗೆಯೇ, **ಏಕಶರಣ ವ್ರಜ್ಯ ವಿಧಾನೇಪಿ** - ನನ್ನೊಬ್ಬನನ್ನೇ ಶರಣವನ್ನೂ ಹೊಂದು ಎಂದು ವಿಧಿಸಿರುವವರಲ್ಲೂ, **ಅನುಮಾನ್ಯತಾಮ್**-ಒಪ್ಪತಕ್ಕದ್ದಾಗಿರುತ್ತದೆ ಇಲ್ಲಿ ಆದಿ ಪದದಿಂದ ದಿವ್ಯ ಮಙ್ಗಳ ವಿಗ್ರಹತ್ವವೂ, ಶ್ರಿಯಃ ಪತಿತ್ವವೂ ಬೋಧಿತವು ಸಮಸ್ತ ಬ್ರಹ್ಮ ವಿದ್ಯೆಗಳಲ್ಲೂ ಪರಬ್ರಹ್ಮ ಸ್ವರೂಪವು ಅನುಸಂಧೇಯವಾದುದರಿಂದ, ಇಂತಹ ಆನಂದಾದಿ ವಿಶೇಷಣಗಳಾದ ಗುಣಗಳಿಲ್ಲದೆ ಪರಬ್ರಹ್ಮೋಪಾಸನವು ಸಾಧ್ಯವಿಲ್ಲದುದರಿಂದ ವಿಶೇಷ್ಯವು ವಿಶೇಷಣಗಳೊಂದಿಗೇನೇ ಉಪಾಸ್ಯವು, **ಆನನ್ದಾದಯಃ ಪ್ರಧಾನಸ್ಯ** ಎಂಬ ಬ್ರಹ್ಮ ಸೂತ್ರದಲ್ಲಿ, ಆನನ್ದವೇ ಮೊದಲಾದ ಗುಣ ವಿಶೇಷಣಗಳೂ ಹೇಳಲ್ಪಟ್ಟಿದುದಲ್ಲದೆ ಆದಿ ಪದದಿಂದ **ಶ್ರಿಯಃ ಪತಿತ್ವರೂಪ** ವಿಶೇಷಣವೂ ಸಹ ಸೂಚಿಸಲ್ಪಟ್ಟಿತೆಂದು ಶ್ರೀ ಕೂರತ್ತಾಳ್ವಾರವರು **ಶಾರೀರ ವಿವರಣ** ವೆಂಬ ಗ್ರಂಥದಲ್ಲಿ ಹೇಳಿರುತ್ತಾರೆಂದು ಸ್ವಾಮಿನಿಗಮಾನ್ತ ದೇಶಿಕರವರು ತಮ್ಮ ನ್ಯಾಯ ಸಿದ್ಧಾಂಜನದಲ್ಲಿ ಬೋಧಿಸಿರುತ್ತಾರೆ **"ತಮೇವೈಕಂ ಜಾನತಾತ್ಮಾನಂ" "ತಮೇವಂ ವಿದಿತ್ವಾತಿಮೃತ್ಯುಮೇತಿ"** "ಮಾಮೈ ವಿಷ್ಯಸಿ" ಇತ್ಯಾದ್ಯನೇಕ ಶ್ರುತಿವಾಕ್ಯಗಳಲ್ಲೂ ವಿಶೇಷನೊಬ್ಬನೇ ಹೇಳಲ್ಪಟ್ಟಿದ್ದರೂ ಅಪೃಥಕ್ಸಿದ್ಧ ವಿಶೇಷಣಗಳಿಂದ ಕೂಡಿದ ವಿಶೇಷ್ಯವೆಂಬುದೇ ಅರ್ಥವು. ಶ್ರೀ ವೇದ ವ್ಯಾಸರ ಅಭಿಪ್ರಾಯವೂ ಹಾಗೆಯೇ ಎಂಬುದನ್ನು ನಾವು ಮೋಕ್ಷಧರ್ಮ ವಾಕ್ಯಗಳಿಂದ ಊಹಿಸಬಹುದು

**ಕೃತ್ವಾಮತ್ಸ್ಥಾನಿ ಭೂತಾನಿ ಚರಾಣಿ ಸ್ಥಾವರಾಣಿಚ ।**
**ಏಕಾಕೀ ವಿದ್ಯಯಾಸಾರ್ಧಂ ವಿಹರಿಷ್ಯೇದ್ವಿಜೋತ್ತಮ ।**
**ತತೋ ಭೂಯೋ ಜಗತ್ಸೃಷ್ಟಿಂ ಕರಿಷ್ಯಾಮೀಹ ವಿದ್ಯಯಾ**

ಎಂದು ಭಗವಂತನೇ ಶ್ರೀ ನಾರದರಿಗೆ ಉಪದೇಶಿಸಿ, ಏಕಾಕೀ ಎಂದು ಶ್ರುತಿಯಲ್ಲಿ ಹೇಳಿರುವ ಪರಬ್ರಹ್ಮನ ಏಕತ್ವಕ್ಕೆ ಲಕ್ಷ್ಮೀ ವಿಶಿಷ್ಟತೆಯೇ ಅರ್ಥವೆಂದು ಉಪದೇಶಿಸಿರುತ್ತಾರೆ ಏಕಾಕೀ ಎಂದರೆ **ವಿದ್ಯಯಾ ಸಾರ್ಧಂ**-ಲಕ್ಷ್ಮಿಯೊಂದಿಗೆ ಒಬ್ಬನೆಂದು ಹೇಳಲ್ಪಟ್ಟಿರುತ್ತದೆ **ಏಕ** ಶಬ್ದಕ್ಕೆ ಇದೇ ಅರ್ಥವೆಂಬುದನ್ನು ಪಾದ್ಮಪುರಾಣ ವಾಕ್ಯದಿಂದಲೂ ಗ್ರಹಿಸಬಹುದು **"ಮಾಮೇಕಂಚ ಶ್ರಿಯಾ ಯುಕ್ತಂ ಭಕ್ತಿಯುಕ್ತೋ ನರೋತ್ತಮದ್ವಯೇನ ಮನ್ತ್ರ ರತ್ನೇನ ಮತ್ಪ್ರಿಯೇಣ ಭಜೇತ್ಸದಾ"** ಇದರಿಂದ **ಮಾಮೇಕಂ** ಎಂಬುದಕ್ಕೆ ಲಕ್ಷ್ಮೀ ವಿಶಿಷ್ಟನಾದ ಒಬ್ಬನನ್ನೇ ಎಂಬುವೇ ಅರ್ಥವು ಪರಬ್ರಹ್ಮನನ್ನು ಹೇಳುವಾಗ ಆನಂದಾದಿ ಸ್ವರೂಪ ನಿರೂಪಕ

**ಯಥಾ ಗುಣಾದಿ ವೈಶಿಷ್ಟ್ಯೇಸಿದ್ಧೋಪಾಯೈಕ ಮಕ್ಷತಮ್ ।**
**ಏವಂ ಪತ್ನೀವೈಶಿಷ್ಟ್ಯೇಪಿ ಮ್ಯಭೀಷ್ಟಂ ಶಾಸ್ತ್ರಚಕ್ಷುಷಾಮ್ ॥ ೧೫೨ ॥**

ಧರ್ಮಗಳನ್ನು ಬಿಟ್ಟು ಪರಬ್ರಹ್ಮನು ಹೇಗೆ ಬೋಧಿತನಾಗುವದಿಲ್ಲವೋ ಹಾಗೆಯೇ ತೈತ್ತರೀಯವು **"ಹ್ರೀಶ್ಚ ತೇ ಲಕ್ಷ್ಮೀಶ್ಚಪತ್ನ್ಯೌ"** ಎಂಬುವರಿಂದ ಶ್ರಿಯಃಪತಿತ್ವವೂ ಸ್ವರೂಪನಿರೂಪಕ ಧರ್ಮವಾದುದರಿಂದ ಲಕ್ಷ್ಮೀ ವಿಶಿಷ್ಟನಾಗಿಯೇ ಉಪಾಸ್ಯನು ಎಂಬ ಭಾವವು ಆದರೆ ಉಪಾಸಕನಿಗೆ ಈ ಗುಣಗಳ ಅನುಸಂಧಾನವು ತಾನೇ ಏಕೆ ? ಎಂದರೆ ಆಗ ಪರಮಾತ್ಮನನ್ನು ನಿರ್ಗುಣನೆಂದು ಅದ್ವೈತಿಗಳು ಹೇಳಿದ ಹಾಗೆ ಭಾವಿಸಬೇಕಾಗುತ್ತದೆಂಬುದೂ ಸೂಚಿತವು

ಆಗಲಿ, ಸತ್ಯತ್ವ, ಆನಂದತ್ವಾದಿ ಸ್ವರೂಪನಿರೂಪಕ ಧರ್ಮಗಳನ್ನು ಬಿಟ್ಟು ಪರಮಪುರುಷನು ಹೇಗೆ ಇಲ್ಲವೋ ಹಾಗೆಯೇ ಲಕ್ಷ್ಮೀ ಪತಿತ್ವವೂ ಸ್ವರೂಪ ನಿರೂಪಕ ಧರ್ಮವಾಗಿರುವದರಿಂದ ಲಕ್ಷ್ಮಿಯಿಲ್ಲದೆ ಪರಮಪುರುಷನಿಲ್ಲವೆಂಬಂಶವ ನ್ನೇನೋ ಒಪ್ಪೋಣ ಆಗ ಲಕ್ಷ್ಮೀ ವಿಶಿಷ್ಟನೇ ಉಪಾಸ್ಯನೆಂದು ಹೇಳಿದಂತಾಯಿತು. ಉಪಾಸನಕ್ಕೆ ಐಕಾಂತ್ಯವು ಆವಶ್ಯಕವಾಗಿರುವಾಗ ಆ ಐಕಾಂತ್ಯದ ಹಾನಿಯು ಲಕ್ಷ್ಮೀ ವಿಶಿಷ್ಟತೆಯಿಂದುಂಟಾಗುವದಿಲ್ಲವೋ? ಎಂದರೆ, ಏಕತ್ವಕ್ಕೇನೂ ಕುಂದಕವಿಲ್ಲವೆನ್ನುತ್ತಾರೆ —**ಗುಣಾದಿವೈಶಿಷ್ಟ್ಯೇ**-ಪರಬ್ರಹ್ಮನು ಸತ್ಯತ್ವ, ಜ್ಞಾನತ್ವ ಆನಂದತ್ವಾದಿಗುಣಗಳಿಂದ ಸೇರಿಯಿದ್ದರೂ, **ಸಿದ್ಧೋಪಾಯದ** ಏಕತ್ವವು, **ಯಥಾ** - ಹೇಗೆ **ಅಕ್ಷತಮ್** - ಹಾನಿಯನ್ನು ಹೊಂದಲಿಲ್ಲವೋ, ಅಂತಹ ಕಲ್ಯಾಣ ಗುಣಗಳಿಂದ ಯುಕ್ತನಾದ ಒಬ್ಬನೇ ಉಪಾಸ್ಯನಾಗಲು ಅರ್ಹನೆಂಬ ಭಾವನೆಯಿಂದ ಏಕತ್ವಕ್ಕೇನೂ ಹೇಗೆ ಚ್ಯುತಿಯಿಲ್ಲವೋ ಎಂಬಭಾವವು, **ಏವಂ** ಹಾಗೆಯೇ, **ಪತ್ನೀ ವೈಶಿಷ್ಟ್ಯೇಪಿ**- ಯಾವಾಗಲೂ ತನಗೆ ಸ್ವರೂಪನಿರೂಪಕ ವಿಶೇಷಣವಾದ ಪತ್ನಿಯೊಡನೆ ಶೇರಿರುವದರಲ್ಲೂ ಕೂಡ, **ಶಾಸ್ತ್ರಚಕ್ಷುಷಾಂ**-ಶಾಸ್ತ್ರಗಳೇ ಕಣ್ಣಾಗಿಯುಳ್ಳವರಿಗೆ ಎಂದರೆ ಶಾಸ್ತ್ರಜ್ಞರಿಗೆ, **ಅಭೀಷ್ಟಮ್**-ಸಿದ್ಧೋಪಾಯದ ಏಕತ್ವವು ಸಮ್ಮತವಾದುದೇ, ಎಂದರೆ ಐಕಾಂತ್ಯಕ್ಕೆ ಹಾನಿಯಿಲ್ಲವು ಪರಮಪುರುಷನು ಯಾವಾಗಲೂ ಲಕ್ಷ್ಮಿಯುಕ್ತನಾಗಿಯೇ ಇರುವದರಿಂದಲೂ, ಲಕ್ಷ್ಮಿಯನ್ನು ಬಿಟ್ಟಿರುವ ಅವಸ್ಥೆಯೇ ಇಲ್ಲದುದರಿಂದಲೂ ಶಾಸ್ತ್ರಜ್ಞರು ಐಕಾಂತ್ಯಕ್ಕೆ ಹಾನಿಯಿಲ್ಲವೆನ್ನುವರು ಆ ಶಾಸ್ತ್ರ ಪ್ರಮಾಣಗಳು ಯಾವುವೆಂಬುದು ಹಿಂದೆಯೇ ಸೂಚಿಸಲ್ಪಟ್ಟವು **"ಆನೀದವಾತಗ್ಂ ಸ್ವಧಯಾ ತದೇಕಂ" "ಮಾಮೇಕಂ ವಿದ್ಯಯಾಸಾರ್ಧಂ" "ಲಕ್ಷ್ಮ್ಯಾ ಸಹ ಹೃಷೀಕೇಶಃ" "ಮಾಮೇಕಂಚ ಶ್ರಿಯಾಯುಕ್ತಂ"** ಇತ್ಯಾದಿಗಳು.

ಮುಂದೆ ಸನ್ನಿಯೋಗ ಶಿಷ್ಟನ್ಯಾಯವನ್ನುಪಪಾದಿಸಿ, ಅಪೃಥಕ್ಸಿದ್ಧ ವಿಶೇಷಣ ಭಾವದಿಂದ ಕೂಡಿರುವ ವಿಶೇಷಣ ವಿಶೇಷಗಳಲ್ಲಿ ಒಂದನ್ನು ಹೇಳಿದರೆ

**ಪ್ರಭಾಪ್ರಭಾವತೋಃ ಯದ್ವದೇಕೋಕ್ತಾ ವಿತರಾ ಸ್ವಯಃ ।**
**ಏವಮನ್ಯತರೋಕ್ತೌ ಸ್ಯಾತ್ಸಹವೃತ್ತ್ಯ ಭಿಧಾನತಃ ॥ ೧೫೩ ॥**

ಇನ್ನೊಂದನ್ನು ಹೇಳಿದಂತಾಗುವದು ಆ ಕಾರಣದಿಂದ ಏಕತ್ವಕ್ಕೇನೂ ನ್ಯೂನತೆಯಿಲ್ಲವು ಏಕೆಂದರೆ ಅಂತವುಗಳಿಗೆ ಪ್ರವೃತ್ತಿ ನಿವೃತ್ತಿಗಳೂ ಒಟ್ಟಿಗೆಯೇ ಯಾದುದರಿಂದ ಅಲ್ಲಿ ಏಕತ್ವವೇ ದ್ವಿತ್ವ ಎಂಬ ಭಾವನೆಗೆ ಅವಕಾಶವಿಲ್ಲವೆಂದು ದೃಷ್ಟಾಂತದಿಂದ 'ಪ್ರಭಾಪ್ರಭಾತೋಃ' ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ —

ಅರ್ಥವು **ಪ್ರಭಾಪ್ರಭಾವತೋಃ**-ಕಾನ್ತಿಯನ್ನೂ ಕಾನ್ತಿಹೊಂದಿದ ವಸುಗಳೆರಡುಗಳಲ್ಲಿ ಎಂದರೆ ಬೆಳಕು ದೀಪ, ಸೂರ್ಯಕಿರಣ ಸೂರ್ಯನು, ಬೆಳತಿಂಗಳು ಚಂದ್ರ, ಕಾನ್ತಿಯು ರತ್ನವೂ, ಇಂತವುಗಳಲ್ಲಿ, **ಏಕೋಕ್ತೌ** - ಒಂದನ್ನು ಹೇಳುವದರಲ್ಲಿ, **ಇತರಾನ್ವಯಃ** – ಇನ್ನೊಂದೂ ಸಹ ಹೇಳಿದಂತಾಗುತ್ತದೋ, **ಏವಂ** - ಹಾಗೆಯೇ, ಅಪೃಥಕ್ಸಿದ್ಧ ವಿಶೇಷಣ ಆ ವಿಶೇಷ ಭಾವದಿಂದಿರುವುವುಗಳಲ್ಲಿ **ಅನ್ಯತರೋಕ್ತೌ** – ಒಂದನ್ನು ಹೇಳಿರುವ ಸಂದರ್ಭದಲ್ಲಿ, ಇನ್ನೊಂದೂ ಹೇಳಿದಂತೆ, **ಸ್ಯಾತ್** - ಆಗುತ್ತದೆ, ಏಕೆಂದರೆ, **ಸಹವೃತ್ತ್ಯ ಭಿಧಾನತಃ** – ಎರಡೂ ಒಟ್ಟಿಗೆ ಅಪೃಥಕ್ಸಿದ್ಧ ವಿಶೇಷಣ ವಿಶೇಷ್ಯ ಭಾವದಿಂದ ಯಾವಾಗಲೂ ಒಟ್ಟಿಗೆ ಇದ್ದು ಪ್ರವೃತ್ತಿಯುಳ್ಳವೆಂದು ಹೇಳಿರುವದರಿಂದ, ಸೂರ್ಯನು ಉದಸಿದನು, ಮುಳಿಗಿದನು ಎಂದರೆ ಸೂರ್ಯಕಿರಣವೂ ಉದಿಸಿತು, ಮುಳಿಗಿತು ಎಂದು ಹೇಳುವ ಅವಶ್ಯಕವಿಲ್ಲವೆಂಬ ಭಾವವು ಚಂದ್ರನು ಉದಯಿಸಿದನು ಎಂದರೆ ಬೆಳದಿಂಗಳೂ ಬಂತು ಎಂದು ಹೇಳುವ ಕೆಲಸವಿಲ್ಲವು, ದೀಪವು ಬಂತು ಎಂದರೆ ಬೆಳಕೂ ಬಂತು ಎಂದು ಹೇಳಬೇಕಾದ ಕೆಲಸವಿಲ್ಲವು ಮಲ್ಲಿಗೆ ಹೂವನ್ನು ತಂದನು ಎಂದರೆ ಅದರೊಂದಿಗೇನೇ ಯಾವಾಗಲೂ ಇರುವ ಪುಷ್ಪ ಮಕರಂದವು ಅದರೊಂದಿಗೆ ಬಂತು ಎಂದು ಹೇಳತಕ್ಕ ಅವಶ್ಯಕವಿಲ್ಲವು ಹಾಗೆಯೇ ಶ್ರುತಿಗಳಲ್ಲಿ ಅನೇಕ ಕಡೆಗಳಲ್ಲಿ **"ಏಕೋಹವೈನಾರಾಯಣ ಆಸೀತ್"** ಎಂದು ಹೇಳಿದ್ದರೂ, **ಲಕ್ಷ್ಮೀ ವಿಶಿಷ್ಟ ನಾರಾಯಣಃ ಏಕಃ** ಎಂದೇ ಹೇಳಲ್ಪಟ್ಟನೆಂದು ಅರ್ಥಮಾಡಬೇಕಾದುದರಿಂದ ಶ್ರೀ ಪರಾಶರಭಟ್ಟರವರು "ನಪೃಥಗ ಭಿದತ್ತೇ ಶ್ರುತಿರಪಿ"ಎಂದು ಹೇಳಿದರು ಹಾಗೆಯೇ ತಾಪನೀಯದಲ್ಲಿ **"ಮಾಯಾವಾ ಏಷಾ ನಾರಸಿಂಹಾ ಸರ್ವಮಿದಂ ಸೃಜತಿ ಸರ್ವಮಿದಂ ರಕ್ಷತಿ ಸರ್ವಮಿದಂ ಸಂಹರತಿ"** ಎಂದು ಲಕ್ಷ್ಮಿಗೇನೇ ಜಗತ್ಸೃಷ್ಟಿಪಾಲನ ಪ್ರಳಯಗಳು ಹೇಳಲ್ಪಟ್ಟಿದ್ದರೂ ಲಕ್ಷ್ಮಿ ಸಹಿತನಾದ ನಾರಾಯಣನಿಗೂ ಅನ್ವಯ ಉಂಟೆಂದು ಭಾವಿಸತಕ್ಕದ್ದು ಹೀಗೆ ಸನ್ನಿಯೋಗ ಶಿಷ್ಟ ನ್ಯಾಯದ ಪ್ರಕಾರ ಎಲ್ಲಾ ಪ್ರವೃತ್ತಿಗಳಲ್ಲೂ ಲಕ್ಷ್ಮಿನಾರಾಯಣರಿಬ್ಬರಿಗೂ ಅನ್ವಯ ಉಂಟು. ಈ ಅಪೃಥಕ್ಸಿದ್ಧ ಭಾವವನ್ನು ಮಹರ್ಷಿಯೇ ಸೀತಾ ರಾಮರುಗಳ ವಾಕ್ಯಗಳಿಂದ

**ಸ್ಮರನ್ತಿ ಚೈನಾಂ ಮುನಯಃ ಸಂಸಾರಾರ್ಣವತಾರಿಣೀಮ್ ।**
**ಊಚತು ಸ್ವಯಮೇವೇತತ್ಸಾತ್ವತಾದಿಷು ತಾವುಭೌ ॥ ೧೫೪ ॥**

ವ್ಯಕ್ತಪಡಿಸಿರುತ್ತಾರೆ "ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ' ಮತ್ತು "ಅನನ್ಯಾಹಿ ಮಯಾಸೀತಾ ಭಾಸ್ಕರೇಣ ಪ್ರಭಾಯಥಾ" ಎಂಬ ಪ್ರಯೋಗಗಳನ್ನು ಕಾಣಬಹುದು ಹಾಗೆಯೇ ವಿಷ್ಣು ಪುರಾಣದಲ್ಲಿ "**ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ**" ಹೇಳಲ್ಪಟ್ಟಿರುತ್ತದೆ ಈ ಉಪಪಾದನೆಗಳಿಗೆ ಶ್ರೀ ಪರಾಶರಭಟ್ಟರ ಶ್ರೀ ಗುಣರತ್ನ ಕೋಶದ ಶ್ಲೋಕಗಳು ಅನುಸಂಧೇಯಗಳು ಆಗಲಿ, ಅಪೃಥಕ್ಸಿದ್ಧ ವಿಶೇಷಣವೆಂದರೇನೋ ಒಪ್ಪಿದರು ಆದರೆ ಜೊತೆಯಲ್ಲಿ ಇದ್ದ ಮಾತ್ರಕ್ಕೇನೆ ಇಬ್ಬರಿಗೂ ಸಿದ್ಧೋಪಾಯತ್ವ ಅನ್ವಯ ಉಂಟೆಂದು ಹೇಳಲು ಹೇಗ ಆಗುತ್ತದೆ, ಪ್ರಮಾಣವೇನು, ಬರೀ ತರ್ಕವು ಪ್ರಯೋಜನವಿಲ್ಲವಷ್ಟೆ, ಎಂಬ ಶಙ್ಕಾದಲ್ಲಿ ಪ್ರಮಾಣಗಳುಂಟೆಂದು ಹೇಳುತ್ತಾರೆ —

**ಮುನಯಃ**-ಕಾಶ್ಯಪ ಪರಾಶರಾದಿ ಋಷಿಗಳು, **ಏನಾಂ**-ಪರಮ ಪುರುಷನಿಗೆ ಅನುರೂಪವಾದ ಸ್ವರೂಪ ರೂಪಗುಣಾದಿಗಳನ್ನುಳ್ಳ ಈ ಲಕ್ಷ್ಮಿಯನ್ನು, "**ಸಂಸಾರಾರ್ಣವತಾರಿಣೀಮ್**" ಸಂಸಾರಸಾಗರವನ್ನು ದಾಟಿಸುವಳು ಎಂದರೆ ತನ್ನ ಪತಿಯೊಂದಿಗೆ ಸಿದ್ಧೋಪಾಯಳಾಗಿ ಮುಕ್ತಿಯನ್ನು ಕೊಡುವವಳೆಂದು, **ಸ್ಮರನ್ತಿ**-ತಾವು ರಚಿಸಿದ ಸ್ಮೃತಿಗಳಲ್ಲಿ ಹೇಳಿರುತ್ತಾರೆ **ಏತತ್** - ಈ ಅಭಿಪ್ರಾಯವು, ಹೀಗೆ ಲಕ್ಷ್ಮೀ ನಾರಾಯಣರು ಇಬ್ಬರೂ ಸೇರಿಯೇ ಸಿದ್ಧೋಪಾಯವೆಂಬುದು, ಇದನ್ನೇ ವ್ಯಕ್ತಪಡಿಸಿ ಹೇಳುತ್ತಾರೆ **ತಾವುಭೌ** - ಈಇಬ್ಬರೂ, **ಸ್ವಯಮೇವ** - ತಾವಾಗಿಯೇ **ಸಾತ್ವತಾದಿಷು**-ಸಾತ್ವತ ಮೊದಲಾದ ಸಂಹಿತೆಗಳಲ್ಲಿ, **ಊಚತುಃ**-ಕಂಠೋಕ್ತನಾಗಿ ಇಬ್ಬರೂ ಹೇಳಿರುತ್ತಾರೆ ಎಲ್ಲಿ ಎಂದರೆ? "**ಮಾಂಚ ಸುರೇಶೇಕಂದಯೋ ನಶರಣಂ ಗತಃ। ಮಲ್ಲೋಕ ಮಚಿರಾಲ್ಲಬ್ಧ್ವಾಮತ್ಸಾಯುಜ್ಯಂ ಸಗಚ್ಛತಿ**" 'ಮಾಮೇಕಾಂ ದೇವದೇವಸ್ಯ ಮಹಿಷೀಂ ಶರಣಂವ್ರಜೇತ್" ಇತಿ ಎಂಬುದಾಗಿ ಊಚತುಃ ಹೇಳಿರುತ್ತಾರೆ ಹೀಗೆ ಲಕ್ಷ್ಮೀನಾರಾಯಣರಿಬ್ಬರೂ ಉಪಾಯ ಭೂತರೆಂದು ಸಾತ್ವತಗಳಲ್ಲಿ ಹೇಳಿರುತ್ತಾರೆ ಇನ್ನೂ ಇತರ ಪ್ರಮಾಣಗಳೂ ಉಂಟು

**(೧) ತತೋಽವ ಲೋಕಿತಾ ದೇವಾಹರಿವಕ್ಷಸ್ಥಲಾಲಯಾ**
**ಲಕ್ಷ್ಮ್ಯೈಮೈತ್ರೇಯ ಸಹಸಾಪರಾಂ ನಿರ್ವೃತಿಮಾಗತಾಃ**(ವಿ ಪು ೧೮ ೧೫)

ಇಲ್ಲಿ ಮಾಮೇಕಂ ಎಂಬುದರಿಂದ ಲಕ್ಷ್ಮಿಯಾದ ತಾನೊಬ್ಬಳೇ ಸಾಕು, ತನ್ನ ಪತಿಯು ಬೇಕಾಗಿಲ್ಲವೆಂಬ ತಾತ್ಪರ್ಯವಲ್ಲವು ಈ ಏಕ ಶಬ್ದದಿಂದ ಭೂದೇವಿಯು ವ್ಯಾವರ್ತಿಸಲ್ಪಟ್ಟಳೆಂದು ಭಾವಿಸಬಹುದು. ಮತ್ತು "**ಆತ್ಮವಿದ್ಯಾ ಚ ದೇವಿತ್ವಂ**

**ವಿಮುಕ್ತಿ ಫಲಿದಾಯಿನೀ"** ಶ್ರೀ ಕಾಶ್ಯಪ ಮಹರ್ಷಿಗಳ ತಂದೆಯಾದ ಮರೀಚಿ ಮಹರ್ಷಿಗಳಿಂದ ನಾನು ಕೇಳಿ ತಿಳಿದ ಲಕ್ಷ್ಮಿಯ ವಿಷಯದಲ್ಲಿನ ಇತಿಹಾಸವನ್ನು ಕೇಳು ಎಂದು ಶ್ರೀ ಪರಾಶರರು ತಮ್ಮ ಶಿಷ್ಯರಾದ ಮೈತ್ರೇಯರಿಗೆ ಹೇಳುವ ಪ್ರಕರಣವು (ವಿ ಪು ೧ ೯ ೧೨೦) ಬ್ರಾಹ್ಮ ಪುರಾಣದಲ್ಲಿ **"ಐಹಿಕಾಮುಷ್ಮಿಕಾಂ ಸಿದ್ಧಿಂಲಭತೇ ಶ್ರೀ ಪ್ರಸಾದತಃ".** ಸ್ವಯಂಭುವ ಸ್ಮೃತಿಯಲ್ಲಿ **"ಸರ್ವಕಾಮ ಪ್ರದಾಂರಮ್ಯಾಂ ಸಂಸಾರಾರ್ಣವತಾರಿಣೀಮ್" । ಕ್ಷಿಪ್ರಪ್ರಸಾದಿನೀಂ ಲಕ್ಷ್ಮೀಂ ಶರಣ್ಯಾಮನುಚಿನ್ತಯೇತ್"** ಚತುರ್ವಿಧ ಪುರುಷಾರ್ಥಗಳನ್ನೂ ಕೊಡುವಅಧಿಕಾರಉಂಟೆಂದು ಹೇಳಲ್ಪಟ್ಟಿರುತ್ತದೆ ಹಾಗೆಯೇ"ಆರ್ಯಾಯ**ಶೋಮಾ ವಸುದಾ ಸರ್ವಕಾಮಾರ್ಥಮೋಕ್ಷದಾ । ಅಪ್ರಮೇಯಾತ್ಮಿಕಾ ಸೂಕ್ಷ್ಮಾ ಪರ ನಿರ್ವಾಣದಾಯಿನೀ । ಮಾಚಃ ಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತಂ ಶ್ರಿಯಂ"** ಇವೇ ಮೊದಲಾದವುಗಳನಲ್ಲಿ **ಸ್ಮರನ್ತಿ** ಎಂಬ ಭಾವವು ಸಾತ್ವತದಲ್ಲಿ **"ಯಾಮಾಲಂಭ್ಯ ಸುಖೇನೇಮಂ ದುಸ್ತರಂ ಹಿ ಗುಣೋದಧಿಮ್ । ನಿಸ್ತ ರಂತ್ಯಚಿರೇಣೈವ ವ್ಯಕ್ತಧ್ಯಾನಪರಾಯಣಾಃ.** ಸನತ್ಕುಮಾರ ಸಂಹಿತೆಯಲ್ಲಿ —

**ತತ್ಸಾರ್ಶಸ್ಥಾಂ ಶ್ರೀಯಂದೇವೀಂ ಸಂಪೂಜ್ಯ ಶ್ರೀಧರಪ್ರಿಯಾಮ್ ।**
**ತತೋ ನಾಮಸಹಸ್ರೇಣ ತೋಷಯೇತ್ ಪರಮೇಶ್ವರಮ್**

ಇದರಿಂದುಂಟಾಗುವ ಫಲವು —**"ಪ್ರಸಾದಾಭಿಮುಖೀ ಲಕ್ಷ್ಮೀಃ ಸರ್ವಮಸ್ಮೈ ಪ್ರಯಚ್ಛತಿ"** ಎಂದು ಸರ್ವ ಪುರುಷಾರ್ಥಗಳನ್ನೂ ಕೊಡುವಳೆಂದು ಹೇಳಲ್ಪಟ್ಟಿರುತ್ತದೆ ಇದಲ್ಲದೆಶ್ರೀ ಸೂಕ್ತಖಿಲದಲ್ಲಿ **"ಶ್ರಿಯಂವಸಾನಾ ಅಮೃತತ್ವಮಾಯನ್"** ಶ್ರದ್ಧಾಸೂಕ್ತದಲ್ಲಿ"ಕಾಮವತ್ಸಾzಮೃತಂದುಹಾನಾ" ಸರ್ವಾಭೀಷ್ಟಗಳನ್ನು ಅಪೇಕ್ಷಿಸುವ ಕರುಗಳನ್ನುಳ್ಳವಳು, ಅವರಿಗೆ **ಅಮೃತ** ವೆಂಬ ಹಾಲನ್ನು ಕರೆಸುವವಳೆಂದು ಹೇಳಲ್ಪಟ್ಟಿರುತ್ತದೆ ಮೇಧಾಸೂಕ್ತದಲ್ಲಿ **"ತ್ವಯಾ ಜುಷ್ಟಶ್ಚಿತ್ರಂ ವಿನ್ದತೇವಸು"** ಎಂದೂ, ಅದಿತಿಸೂಕ್ತದಲ್ಲಿ **ಅವನ್ತೀದೇವೀ** - ಲಕ್ಷ್ಮಿಯು ಎಲ್ಲಾವಿಧದಲ್ಲೂ ರಕ್ಷಕಳು ಎಂದು, ಹಾಗೆಲ್ಲಾ ಅನೇಕ ಪ್ರಮಾಣಗಳಲ್ಲಿ ಲಕ್ಷ್ಮಿಯೂ ಪರಮಾತ್ಮನೊಂದಿಗೇ ಸಿದ್ಧೋಪಾಯಳೆಂಬುದು ವ್ಯಕ್ತವು ಈ ಕಾರಿಕೆಯಲ್ಲಿ **ಊಚತುಃ** ಎಂಬ ಪ್ರಯೋಗವು ಸಾರ್ಥವತ್ತಾದುದು ಸೂಕ್ತಗಳು ಋಷಿಗಳು ಮೊದಲಾದವರು ಹೇಳುವದು ಹಾಗಿರಲಿ, ಲಕ್ಷ್ಮಿಯೂ ನಾರಾಯಣನೂ ಇಬ್ಬರೂ ತಾವೇ ಹಾಗೆ ಹೇಳಿಕೊಂಡಿರುತ್ತಾರೆಂಬ ಭಾವವು ದ್ವಿವಚನ ಪ್ರಯೋಗದಿಂದ ತೋರಿಬರುತ್ತದೆ

ಪ್ರಾಪ್ಯದೆಶೆಯಲ್ಲಿ ಲಕ್ಷ್ಮೀಯುಕ್ತನಾದ ವಾಸುದೇವನೇ ಉಪೇಯನೆಂದೇನೋ ಒಪ್ಪುತ್ತಾರೆ ಕರಣ ಮನ್ತ್ರವಾದ ದ್ವಯವು ಉಪಾಯತ್ವದಲ್ಲೂ ಉಪೇಯತ್ವ

**ಉಪಾಯೋ ಪೇಯದಶಯೋರ್ದ್ವಯೇಪಿ ಶ್ರೀ ಸ್ಸಮನ್ವಿತಾ ।**
**ಇಷ್ಟಾಚ ಶೇಷಿಣೇ ದ್ವಂದ್ವೇಶೇಷವೃತ್ತಿ ರ್ಯಥೋಚಿತಾ ॥ ೧೫೫ ॥**

ದಲ್ಲೂ ಲಕ್ಷ್ಮೀಯುಕ್ತತೆಯನ್ನು ಸ್ಫುಟವಾಗಿ ಹೇಳುವಾಗ, ಉಪೇಯತ್ವದಲ್ಲಿ ಮಾತ್ರ ಒಪ್ಪಿಕೊಂಡು ಉಪಾಯತ್ವ ಪಾತ್ರದಲ್ಲಿಲ್ಲವೆಂದು ಇಷ್ಟಪ್ರಮಾಣಗಳಿಗೆ ವಿರೋಧ ವಾಗಿ ಹೇಳುವದು ಪಕ್ಷಪಾತವಲ್ಲವೋ ? ಇದು ಏತಕ್ಕೆ ಎಂಬ ಭಾವನೆಯಿಂದ ಮುಂದಿನ ಕಾರಿಕೆಯನ್ನು ಅನುಗ್ರಹಿಸಿರುತ್ತಾರೆ — **ದ್ವಯೇಪಿ** - ಭರನ್ಯಾಸಾನು ಷ್ಠಾನವನ್ನು ಮಾಡುವಾಗ ಹೇಳತಕ್ಕ ದ್ವಯ ಮನ್ತ್ರದಲ್ಲೂ ಕೂಡ, ಅಪಿ ಶಬ್ದ ಸ್ವಾರಸ್ಯದಿಂದ, ಈ ದ್ವಯಮನ್ತ್ರ ಪ್ರಮಾಣ ಒಂದೇ ನಾಲದೇ ? ಇತರ ಪ್ರಮಾಣ ಗಳು ಬೇಕೇ ಎಂಬ ಭಾವವು ತೋರಿಬರುತ್ತದೆ **ಉಪಾಯೋಪೇಯದಶಯೋಃ** - ಪೂರ್ವ ಖಂಡದಲ್ಲಿ ಉಪಾಯತ್ವವನ್ನು ಬೋಧಿಸುವ ಅವಸ್ಥೆಯಲ್ಲೂ ಉತ್ತರ ಖಂಡದಲ್ಲಿ ಉಪೇಯತ್ವವನ್ನು ಬೋಧಿಸುವ ಅವಸ್ಥೆಯಲ್ಲೂ, ಹೀಗೆ ಎರಡರಲ್ಲೂ, ಶ್ರೀಃ - ಲಕ್ಷ್ಮೀಯು, **ಸಮನ್ವಿತಾ** - ನಾರಾಯಣನೊಂದಿಗೆ ಸೇರಿರುವವಳಾಗಿ, **ಮಯಟ್** - ಪ್ರತ್ಯಯಯುಕ್ತವಾಗಿ ಪೂರ್ವ ಖಂಡದಲ್ಲಿ **ಶ್ರೀಮನ್ನಾರಾಯಣ** ವೆಂದೂ ಉತ್ತರ ಖಂಡದಲ್ಲಿ **ಶ್ರೀಮತೇನಾರಾಯಣಾಯ** ಎಂದು ಹೇಳಲ್ಪಟ್ಟಿರು ತ್ತದೆ. ಹೀಗೆ ಎರಡು ಕಡೆಯಲ್ಲೂ ಲಕ್ಷ್ಮೀಯುಕ್ತತೆಯು ಸಮನಾಗಿ ಹೇಳಿದ್ದರೂ ಕೂಡ, ನಿಮಗೆ **ಶೇಷಿಣೆದ್ವಂದ್ವೇ - ಉಭಯಾಧಿಷ್ಠಾನಂಚೈಕ ಶೇಷಿತ್ವಂ"** ಮತ್ತು **"ದ್ವಾಚಸದೈಕ ಶೇಷೀ" "ಅಸ್ಯಾಮಮಚ ಶೇಷಂಹಿ ವಿಭೂತಿ ರುಭ ಯಾತ್ಮಿಕಾ"** ಇತ್ಯಾದಿ ಪ್ರಮಾಣಗಳಿಗನುಸಾರವಾಗಿ, ಪ್ರಾಪ್ಯ ಸ್ಥಿತಿಯಲ್ಲೂ ಇಲ್ಲೂ ಸಹ ನಾವುಗಳು ಮಾಡುವ **ಶೇಷವೃತ್ತಿಃ** - ಕೈಂಕರ್ಯವು, ಯಥಾ - ಹೇಗೆ, **ಇಷ್ಟಾಚ** - ನಿಮಗೆ ಇಷ್ಟವೋ, ತಥಾ ಎಂದು ಅಧ್ಯಾಹಾರಮಾಡಿಕೊಳ್ಳಬೇಕು, ಹಾಗೆಯೇ, ಲಕ್ಷ್ಮೀ ಅನ್ವಯವು ಎರಡು ಅವಸ್ಥೆಗಳಲ್ಲೂ, **ಉಚಿತಾ** - ಯೋಗ್ಯವಾ ದುದೇ ಎರಡು ಕಡೆಯಲ್ಲೂ ಮಯಟ್ ಪ್ರತ್ಯಯವು ಉಪಯೋಗಿಸಲ್ಪಟ್ಟು ಲಕ್ಷ್ಮೀ ಸಂಬಂಧವು ಕರಣ ಮನ್ತ್ರದಲ್ಲೇ ವ್ಯಕ್ತವಾಗಿ ಉಪಾಯೋಪೇಯಗಳಾದ ಎರಡು ಅವಸ್ಥೆಗಳಲ್ಲೂ ಹೇಳಲ್ಪಟ್ಟಿರುವಾಗ, ಕೈಂಕರ್ಯ ಮಾಡುವ ಪ್ರಾಪ್ಯದೆಶೆ ಯಲ್ಲಿ ಲಕ್ಷ್ಮೀ ಅನ್ವಯವು ಹೇಗೆ ನಿಮಗೆ ಇಷ್ಟವೋ ಹಾಗೆಯೇ ಉಪಾಯದೆಶೆ ಯಲ್ಲೂ ಒಪ್ಪಿಕೊಳ್ಳುವದು ಉಚಿತವು ಇದೂ ಅಲ್ಲದೆ ಉಪಾಯವನ್ನು ಬೋಧಿ ಸುವ ಸಂದರ್ಭದಲ್ಲೇ **ಶ್ರೀಮನ್ನಾರಾಯಣ ಚರಣೌ** ಸಮಾಸ ಪದವಾಗಿ ಅಪೃ ಥಕ್ಸಿದ್ಧ ವಿಶೇಷಣೆಂಬುದನ್ನು ಬೋಧಿಸುತ್ತದೆ ಪ್ರಾಪ್ಯದೆಶೆಯನ್ನು ಬೋಧಿಸು ವಾಗಲೇ ಬೇರೆ ಬೇರೆ ಪದಗಳಾಗಿ **ಶ್ರೀಮತೇ ನಾರಾಯಣಾಯ** ಎಂದು ಇರು ತ್ತದೆ. ಈ ಮನ್ತ್ರದ ಉಪಬ್ರಹ್ಮಣವಾದ "ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ

**ಅತೋಽನನ್ಯ ಪರಾನೇಕ ಶ್ರುತಿಸ್ಮೃತ್ಯನುಸಾರತಃ ।**
**ಪತ್ನೀವಿಶಿಷ್ಟ ಏವೈಕಃ ಪ್ರಪತ್ತವ್ಯ ಇಹೋದಿತಃ ॥೧೫೬॥**

**ಕಾರುಣ್ಯರೂಪಯಾ ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗೀಯತೇ”** ಎಂಬ ಲಕ್ಷ್ಮೀ ತಂತ್ರವಾಕ್ಯದಲ್ಲಿ ಉಪಾಯತ್ವವು ಇಬ್ಬರಿಗೂ ಎಂಬುದು ಸುಸ್ಪಷ್ಟವು.

ಈ ಶ್ಲೋಕಕ್ಕೆ ಅನ್ವಯವನ್ನು ಇನ್ನೊಂದು ವಿಧವಾಗಿಯೂ ಹೇಳಬಹುದು, ಹೇಗೆಂದರೆ **ಶೇಷಿಣೋ ದ್ವಂದ್ವೇ ಶೇಷವೃತ್ತಿ ಯಥಾ ಇಷ್ಟಾಚ** - ದಿವ್ಯದಂಪತಿಗಳಿಬ್ಬರಿಗೂ ದಾಸ್ಯದೆಸೆಯಲ್ಲಿ ಉಚಿತವಾದ ಕೈಂಕರ್ಯವು ತಮ್ಮಗಳಿಗೆ ಹೇಗೆ ಇಷ್ಟವಾಗುವುದೋ ಹಾಗೆಯೇ **ಉಪಾಯೋಪೇಯ ದಶಯೋಃ ದ್ವಯೋಪಿ ಶ್ರೀಸಮನ್ವಿತಾ** ಎರಡು ದಶೆಯಲ್ಲಿಯೂ ಲಕ್ಷ್ಮಿಗೆ ಸಂಬಂಧವುಂಟೆಂದು ದ್ವಯಮಂತ್ರದಲ್ಲಿ ಹೇಳಲ್ಪಟ್ಟಿರುತ್ತದೆಂದು ಅರ್ಥಮಾಡಬಹುದು. **ಯಥಾ** ಎಂಬ ಪ್ರಯೋಗವು **ತಥಾ** ಎಂಬುದನ್ನು ಅಪೇಕ್ಷಿಸುತ್ತದೆ. ಹಾಗೆ ಅನ್ವಯಿಸಲು ಇಷ್ಟವಿಲ್ಲದಿದ್ದರೆ ಮುಂದಿನ ಉಪಸಂಹಾರ ಶ್ಲೋಕದೊಂದಿಗ ಇದನ್ನು ಸೇರಿಸಿ ಅನ್ವಯಿಸಬಹುದು. **ಅತಃ** ಎಂದು ಮುಂದಿರುವುದು ತಥಾ ಎಂಬ ಪ್ರಯೋಗಾರ್ಥವನ್ನೇ ಉಳ್ಳದು ಎಂದೂ ಭಾವಿಸಬಹುದು.

ಮುಂದಿನ ಕಾರಿಕೆಯಿಂದ ನಿಗಮನ ಮಾಡುವ ಸಂದರ್ಭದಲ್ಲಿ ಪೂರ್ವಾಚಾರ್ಯರುಗಳು ಹೇಳಿದ ಆರು ಅರ್ಥಗಳೊಂದಿಗೆ **ಮಾಮೇಕಂ ಶರಣಂ ವ್ರಜ** ಎಂಬಲ್ಲಿ ಲಕ್ಷ್ಮೀವಿಶಿಷ್ಟನಾದ ನನ್ನೊಬ್ಬನನ್ನೇ ಶರಣವನ್ನು ಹೊಂದು ಎಂಬ ತಾವು ಹೇಳುವ ವಿಶೇಷ ಅರ್ಥವು ನಮ್ಮ ಶಾಸ್ತ್ರಸಮ್ಮತವಾದುದೆಂದೂ ಪ್ರಪದನವನ್ನು ಇಬ್ಬರಲ್ಲೂ ಅನುಷ್ಠಿಸುವುದೇ ಸಂಪ್ರದಾಯವೆಂದು ಶ್ರೀ ಯತಿವರ್ಯರೇ ಶರಣಾಗತಿ ಗದ್ಯದಲ್ಲಿ ಮೇಲುಪಜ್ಞೆಯನ್ನು ಹಾಕಿರುವುದರಿಂದ ಪ್ರಪದನವು ಪತ್ನೀ ವಿಶಿಷ್ಟನಾದ ಒಬ್ಬನಾದ ನಾರಾಯಣನಲ್ಲೇ ಮಾಡತಕ್ಕದ್ದೆಂದು ವಿಧಿಸುತ್ತಾರೆ.

**ಅತಃ** - ಆ ಕಾರಣದಿಂದ, ಈಗ ನಾವು ಶಾಸ್ತ್ರಯುಕ್ತವಾಗಿಯೂ ಯುಕ್ತಿಮತ್ತಾಗಿಯೂ ಉಪಪಾದಿಸಿದ ಕಾರಣದಿಂದ, ಅದನ್ನೇ ವ್ಯಕ್ತಪಡಿಸುತ್ತಾರೆ **ಅನನ್ಯ ಪರಾನೇಕಶ್ರುತಿಸ್ಮೃತ್ಯನುಸಾರತಃ** - ಬೇರೆ ವಿಧವಾಗಿ ಪ್ರತಿಕಕ್ಷಿಗಳೂ ಕೂಡ ಅರ್ಥಮಾಡಲು ಸಾಧ್ಯವಿಲ್ಲದಿರುವ, ಉಪಾಯತ್ವದಲ್ಲಿ ಲಕ್ಷ್ಮಿಗೂ ಸಹ ಅನ್ವಯವುಂಟೆಂದು ಹೇಳುವ ಎಂಬ ಭಾವವು, ಅನೇಕಗಳಾದ ಶ್ರುತಿ ಸ್ಮೃತಿ ಪ್ರಮಾಣಗಳಿಗನುಸಾರವಾಗಿ, **ಪತ್ನೀ ವಿಶಿಷ್ಟ ಏವೈಕಃ**-ಲಕ್ಷ್ಮೀವಿಶಿಷ್ಟನಾದ ಭಗವಂತನಾದ ನಾನೊಬ್ಬನೇ, **ಪ್ರಪತ್ತವ್ಯಃ** - ಶರಣಹೊಂದಲ್ಪಡಲು ಯೋಗ್ಯನು, ಎಂದರೆ **ಭರನ್ಯಾಸಕ್ಕೆ** ಲೋಕದಂಪತಿಗಳಿಬ್ಬರೂ ಉದ್ದೇಶ್ಯರು, ಎಂಬದಾಗಿ, **ಇಹ** - ಈ ಚರಮಶ್ಲೋಕದ **ಮಾಮೇಕಂ** ಎಂಬ ಪ್ರಯೋಗದ ಪ್ರಕರಣದಲ್ಲಿ, **ಉದಿತಃ** -

## ಅಥಶರಣ ಶಬ್ದಾರ್ಥಮಾಹ

**ಇಙ್ಗತ್ತೈ "ಶರಣ" ಶಬ್ದತ್ತುಕ್ಕೊನ್ರು ದ್ವಯಾಧಿಕಾರತ್ತಿಲ್ಸೊನ್ನ ಪೊರುಳೈ ಅನುಸನ್ಧಿತ್ತುಕೊಳ್ಳದು ಇಪ್ಪ ಶರಣವರಣಮ್ ಅರ್ಜುನನ್ನುಕ್ಕು ರಿತು ಉಪದೇಶಿಕ್ಕಪ್ಪಟ್ಟಿಲೆಯಾಗಿ, ಅನಾಲೋಚಿತ ವಿಶೇಷಾಶೇಷ ಲೋಕಶರಣ್ಯ"**

ಹೇಳಲ್ಪಟ್ಟಿತು ಶರಣಂಪ್ರಜ ಎಂಬುದು ವಿಧಿಯಾದುದರಿಂದ ವಿಧಿಸಲ್ಪಟ್ಟಿತೆಂಬ ತಾತ್ಪರ್ಯವು ಅನೇಕ ಶ್ರುತಿ ಸ್ಮೃತಿ ಪ್ರಮಾಣಗಳು ಲಕ್ಷ್ಮೀಗೂ ಉಪಾಯತ್ವವನ್ನು ವ್ಯಕ್ತವಾಗಿ ಬೋಧಿಸುವುದರಿಂದ, ಇದಕ್ಕೆ ಪ್ರತಿಕಕ್ಷಿಗಳು ಬೇರ ವಿಧವಾಗಿ ಅರ್ಥ ಮಾಡಲು ಸಾಧ್ಯವೇ ಇಲ್ಲವೆಂಬ ಭಾವವು ಈ ಶ್ಲೋಕದಲ್ಲಿ ತೋರಿಬರುತ್ತದೆ ಹಾಗೆ **ವಾಮೋಳಂ** ಎಂಬುದಕ್ಕ ಆಚಾರ್ಯರುಗಳೇ ಆರರ್ಥಗಳನ್ನು ಉಪ ಪಾದಿಸಿ, ಏಳನೆಯದಾದ ಮುಖ್ಯವಾದ ತಮ್ಮ ಅರ್ಥವನ್ನು ಸ್ಥಾಪಿಸಿ ಉಪದೇಶಿಸಿ ದರು ಒಂಬೆಯೋ ಅನೇಕ ಪ್ರಮಾಣಗಳನ್ನು ಉದಾಹರಿಸಿರುವವು ಅವುಗಳನ್ನು ಅನುಸಂಧಾನಮಾಡಬಹುದು **ಇಲ್ಲಿ "ಚಂದ್ರಾಂ ಪ್ರಭಾಸಾಂಯಶಸಾಂಜ್ವಲಂ ತೀಂ" "ಕಾಮುವತ್ಸಾzಮ್ಮೃತಂದುಹಾನಾ" "ಸಾನೋ ಲೋಕಮಮೃತಂದ ಧಾತು" ಶ್ರೀಯಂ ವಸಾನಾ ಅಮೃತತ್ವಮಾಯನ್** ಇತ್ಯಾದಿ ಪ್ರಮಾಣ ಗಳನ್ನು ಉದಾಹರಿಸಿರುತ್ತಾರೆ

**ಮುಂದೆ ಶರಣಶಬ್ದಾರ್ಥವನ್ನು ಬೋಧಿಸುತ್ತಾರೆ.**

**ಇಙ್ಗತ್ತೈ** - ಇಲ್ಲಿರುವ, **"ಶರಣ" ಶಬ್ದತ್ತುಕ್ಕು** - **ಶರಣಂ** ಎಂದಿರುವ ಶಬ್ದಕ್ಕೆ, **ದ್ವಯಾಧಿಕಾರತ್ತಿಲ್ಸೊನ್ನ** - ದ್ವಯಾಧಿಕಾರದಲ್ಲಿ ಉಪಪಾದಿಸಿರುವ, **ಪೊರುಳೈ** - "ಶರಣಮಹಂ ಪ್ರಪದ್ಯೇ" ಎಂಬಲ್ಲಿರುವ ಶರಣಶಬ್ದದ ಅರ್ಥವನ್ನೇ, **ಅನುಸನ್ಧಿತ್ತುಕೊಳ್ಳದು** - ಅನುಸಂಧಾನಮಾಡತಕ್ಕದ್ದು ಅಲ್ಲಿ ಹೇಳಿದ ಅರ್ಥವೇ ಇಲ್ಲಿಯೂ ಸಹ ಎಂಬ ಭಾವವು ಅಲ್ಲಿ ಹೇಳಿರುವದು ಏನೆಂದರೆ **ಶರಣ** ಶಬ್ದಕ್ಕೆ ಗೃಹ, ರಕ್ಷಕ, ಉಪಾಯವೆಂಬ ಮೂರು ಅರ್ಥಗಳಿದ್ದರೂ, **"ಉಪಾಯೇ ಗೃಹ ರಕ್ಷಿತ್ರೋಶ್ಶಬ್ದಶ್ಶರಣ ಮಿತ್ಯಯಮ್ । ವರ್ತತೇ ಸಾಂಪ್ರತಂತ್ವೇಷ ಉಪಾಯಾರ್ಥೈಕವಾಚಕಃ"** ಎಂದು ಅಹಿರ್ಬುಧ್ನಸಂಹಿತೆಯಲ್ಲಿ ಹೇಳಿರುವಹಾಗೆ ಉಪಾಯಾರ್ಥದಲ್ಲೇ ಉಪಯೋಗಿಸಲ್ಪಟ್ಟಿತೆಂದೂ, ಉಪಾಸನಕ್ಕೆ ಶಕ್ತಿಯಿಲ್ಲ ದೆಯೂ ಅಧಿಕಾರವಿಲ್ಲದೆಯೂ ಶೋಕಿಸುವ ಭರನ್ಯಾಸನಿಷ್ಠನಿಗೆ ಉಪಾಸನ ಸ್ಥಾನ ದಲ್ಲಿ ಸಿದ್ಧೋಪಾಯನಾಗಿ ಆ ಉಪಾಸನಮೂಲಕ ಉಂಟಾಗುವ ಫಲ ವನ್ನು ತಾನೇ ನಿಂತು ಉಂಟುಮಾಡುವವನಾದುದರಿಂದ, **ಶರಣಂ** 'ಎಂಬ

---

(೧) ಚರಮಶ್ಲೋಕ ಭಾಷ್ಯ, ಮತ್ತು ಶರಣಾಗತಿಗದ್ಯ

ಬ್ದಕ್ಕೆ ಸಿದ್ಧೋಪಾಯನನ್ನಾಗಿ **ಅಹಂ ಪ್ರಪದ್ಯೇ** ಎಂದು ಅರ್ಥವೆಂದು ಅಲ್ಲಿ ಹೇಳಲ್ಪಟ್ಟಿತು ಹಾಗೆಯೇ ಇಲ್ಲಿಯೂ **ಶರಣಂವ್ರಜ** – ಸಿದ್ಧೋಪಾಯನನ್ನಾಗಿ ಭರನ್ಯಾಸದ ಮೂಲಕ ಹೊಂದು ಎಂಬರ್ಥವು

ಆಗಲಿ, **ಶರಣಂವ್ರಜ** ಎಂದು ಹೇಳಿದುದು ಅರ್ಜುನನನ್ನು ಕುರಿತು ಅಲ್ಲವೋ? ಆತನು ಕ್ಷತ್ರಿಯನಲ್ಲವೇ ? ಹಾಗಾದರೆ **ಈ ಶರಣಂವ್ರಜ** ಎಂಬುದು ಹೇಗೆ ಸರ್ವ ರಿಗೂ ಎಂದರೆ ಉಪಾಸನಕ್ಕೆ ಶಕ್ತಿ ಅಧಿಕಾರವಿಲ್ಲದವರಿಗೂ ಹೇಗೆ ಅನ್ವಯಿಸು ತ್ತದೆ ? ಎಂಬ ಪೂರ್ವ ಪಕ್ಷಕ್ಕೆ ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳು ತ್ತಾರೆ—**ಇನ್ದ ಶರಣ ವರಣಂ** ಇಲ್ಲಿ ಹೇಳಿರುವ, ಭಗವಂತನಾದ ನನ್ನನ್ನು ಸಿದ್ಧೋಪಾಯನನ್ನಾಗಿ ವರಿಸು ಎಂದು ಹೇಳಿರೋಣವು, **ಅರ್ಜುನನ್ನೈಕುರಿತು ಉಪದೇಶಿಕ್ಕಪ್ಪಟ್ಟದೇಯಾಗಿಲುಮ್** - ಕ್ಷತ್ರಿಯನಾಗಿ ಉಪಾಸನಾಧಿಕಾರಿಯಾದ ಅರ್ಜುನನ್ನು ಕುರಿತು ಉಪದೇಶಿಸಲ್ಪಟ್ಟಿದ್ದರೂ, **"ಅನಾಲೋಚಿತವಿಶೇಷಾಶೇಷ ಲೋಕಶರಣ್ಯ"** - ಯಾವನೊಬ್ಬನಲ್ಲೂ ವಿಶೇಷಾಧಿಕಾರವನ್ನು ಅಪೇಕ್ಷಿಸದೆ ಸಮಸ್ತಲೋಕಕ್ಕೂ ಶರಣ್ಯನೇ," **ಎಜ್ಗಿರಪಡೆಯೇ** - ಎಂದು ಹೇಳಿರುವಹಾಗೆ **ಸರ್ವವಿಷಯವಮ್** - ಸಮಸ್ತರನ್ನೂ ಎಂದರೆ ಜಾತಿಕುಲ ಗುಣ ಮೊದಲಾದವು ಗಳ ಉತ್ಕರ್ಷೆಯನ್ನಪೇಕ್ಷಿಸದೆ ಸಮಸ್ತರನ್ನೂ ಕುರಿತದ್ದು, **ಎನ್ರುಮಿಡವಮ್** - ಎಂಬ ಸಂದರ್ಭದಲ್ಲಿ **ಶ್ವೇತಾಶ್ವತರ ಶ್ರುತಿಯಲ್ಲಿ ಪ್ರಸಿದ್ಧವು.** ಅದು ಯಾವುದೆಂ ದರೆ-**"ಸರ್ವಸ್ಯ ಪ್ರಭುಮೀಶಾನಂ ಸರ್ವಸ್ಯಶರಣಂ ಸುಹೃತ್"**(ಶ್ವೇ ತಾ ೩ ೧೭)

> **ಯೋಬ್ರಹ್ಮಾಣಂ ವಿದಧಾತಿ ಪೂರ್ವಂ ಯೋವೈವೇದಾಂಶ್ಚ ತಸ್ಮೈ ।**
> **ತಂಹ ದೇವಮಾತ್ಮ ಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ"**

ಇಲ್ಲಿಯೂ **ಶರಣ** ಶಬ್ದಕ್ಕೆ ಉಪಾಯವೆಂಬರ್ಥವು (ಶ್ವೇ ೬ ೧೮) ಸಿದ್ಧೋಪಾಯ ನೆಂಬ ಅಭಿಪ್ರಾಯವು ಆದುದರಿಂದ ಅರ್ಜುನನನ್ನು ಕುರಿತು **ಶರಣಂವ್ರಜ** ಎಂದು ಹೇಳಿರುವುದು ಉಪಲಕ್ಷಣವೆಂದು ಭಾವಿಸಿ, ಸಮಸ್ತ ಮೋಕ್ಷಾರ್ಥಿಗಳನ್ನೂ ಕುರಿತ ದ್ದೆಂದು ಅರ್ಥಮಾಡತಕ್ಕದ್ದು **"ತತ್ವಮಸಿ ಶ್ವೇತಕೇತೋ"** ಎಂಬ ಉಪದೇಶವು, ಅದು ಯಾವುದೆಂದರೆ ಎಲ್ಲಾ ಚಿದಚಿತ್ತುಗಳೂ ಭಗವಂತನಿಗೆ ಶರೀರವಾಗಿ, ಭಗವ ದಾತ್ಮಕಗಳಾಗಿರುವದರಿಂದ, ಸಮಸ್ತ ಚೇತನರೆಂದು ಹೇಳಿದರೂ, ತತ್ತಚ್ಛರೀರಕ ಪರಮಾತ್ಮನೇ ಹೇಳಲ್ಪಡುವದರಿಂದ, **ತ್ವಂ** - ನೀನೂ ಶರೀರಕ ಪರಮಾತ್ಮನೇ ಶ್ವೇತಕೇತುವೇ, ಎಂಬ ಉಪದೇಶವು, ಸಮಸ್ತರಿಗೂ ಹೇಗೆ ಅನ್ವಯಿಸುತ್ತದೋ, ಹಾಗೆಯೇ ಇಲ್ಲು ಎಂಬ ಭಾವವು ಹಾಗೆಯೇ **ಸತ್ಯಂವದ** ಎಂಬ ಆಜ್ಞೆಯು ವೇದಾಧ್ಯಾಯಿಯನ್ನು ಕುರಿತು ಹೇಳಲ್ಪಟ್ಟಿದ್ದರೂ ಸರ್ವತ್ರ ಹೇಗೆ ಅನ್ವಯಿಸ

ತ್ತದೋ ಹಾಗೆಯೇ ಎಂಬ ಭಾವವು ಶ್ರೀ ನಿಗಮಾಂತದೇಶಿಕರವರು ಪ್ರಪತ್ತಿಗೆ ಸರ್ವಾಧಿಕಾರತ್ವ ಉಂಟೆಂದು ಹೇಳುವ ಸಂದರ್ಭದಲ್ಲಿ **"ಸತ್ಯಾದಿಷ್ವಪಿ ನೈಗಮೇಷ್ವಧಿಕೃತಿಸ್ಸರ್ವಾಸ್ಪದೇ ಸತ್ಪಥೇ"** ಇನ್ನೊಂದು ದೃಷ್ಟಾಂತವನ್ನೂ ಕೆ ಒಟ್ಟಿದುತ್ತಾರೆ - ಸತ್ಯಂವದ ಎಂಬುದು ಶ್ರುತಿಯಲ್ಲಿ ಹೇಳಿದ್ದರೂ ಸತ್ಯವನ್ನೇ ಹೇಳುವದರಲ್ಲಿ ಎಲ್ಲರಿಗೂ ತಾರತಮ್ಯವಿಲ್ಲದೆ ಹೇಗೆ ಅಧಿಕಾರ ಉಂಟೋ, ಹಾಗೆಯೇ ಭರನ್ಯಾಸವು ಶ್ರುತಿಗಳಲ್ಲಿ ಉಪಪಾದಿತವಾಗಿದ್ದರೂ ಎಲ್ಲರಿಗೂ ಅದರಲ್ಲಿ ಅಧಿಕಾರ ಉಂಟೆಂದು ಹೇಳಲ್ಪಟ್ಟಿರುತ್ತದೆ ( ನೆಯ ಪುಟವನ್ನು ನೋಡಿ ) ಸಂಹಿತೆಯಲ್ಲಿ **ಉಪಾಯಾರ್ಥೈಕವಾಚಕಃ** ಎಂದು ಹೇಳಿರುವದರಿಂದ ಬೇರೆ ವಿಧವಾದ ರಕ್ಷಿತಾ ಮೊದಲಾದ ಅರ್ಥವೆಲ್ಲಾ ಸರಿಯಲ್ಲವೆಂದು ಪ್ರಮಾಣಪೂರ್ವಕವಾಗಿ ಹೇಳಲ್ಪಟ್ಟಿತು ಈ ಶ್ವೇತಾಶ್ವತರಶ್ರುತಿಯ ಉಪಬ್ರಹ್ಮಣವೇ, **"ಸರ್ವಲೋಕೇ ಶರಣ್ಯಾಯ ರಾಘವಾಯ ಮಹಾತ್ಮನೇ"** (ರಾ ಯುದ್ಧ) ಎಂಬ ಮಹರ್ಷಿಯ ವಾಕ್ಯವು, ಇಲ್ಲಿಯೂ ಮತ್ತು **ಅನಾಲೋಚಿತ ವಿಶೇಷ ಲೋಕಶರಣ್ಯ** ಎಂಬಲ್ಲೂ **ಶರಣ್ಯ** ಶಬ್ದವಿರುತ್ತದೆ. ಶ್ರೀ ಗೋವಿಂದರಾಜೀಯದಲ್ಲಿ **"ಶರಣಂಭವಿತುಂ ಅರ್ಹಃ ಶರಣ್ಯ ಇತಿ ನಿರುಕ್ತಿಃ, ಅನಾಲೋಚಿತ ಕುಲವಿದ್ಯಾವೃತ್ತಾದಿ ವಿಶೇಷಾ ಶೇಷಲೋಕ ಶರಣ್ಯಾಯೇತ್ಯರ್ಥಃ** - ಸಿದ್ಧೋಪಾಯನಾಗಿರಲು ಅರ್ಹನು ಯಾರೋ ಅವನು ಶರಣ್ಯನು ಕುಲ, ವಿದ್ಯೆ, ಆತನ ಪ್ರವೃತ್ತಿ, ಮೊದಲಾದವು ಯಾವುದನ್ನೂ ಪರಿಗಣಿಸದೇ ಸಮಸ್ತ ಲೋಕದ ಜನರಿಗೂ ಸಿದ್ಧೋಪಾಯನಾದವನಿಗೆ ಎಂಬರ್ಥವೆಂದು ಸಮಂಜಸಾರ್ಥವನ್ನು ಬರೆದಿರುತ್ತಾರೆ ಇದಲ್ಲದೆ **ಶರಣೇರಕ್ಷಣೇ ಸಾಧುರಿತಿಶರಣ್ಯಃ** ಎಂದು ಇನ್ನೊಂದು ವ್ಯುತ್ಪತ್ತಿಯನ್ನೂ ಪ್ರದರ್ಶಿಸಿರುತ್ತಾರೆ ಇದಕ್ಕಿಂತ ಹಿಂದಿನ ಅರ್ಥವೇ ಸಾರ್ಥವತ್ತಾದುದು

**"ಸರಸ್ಯ ಶರಣಂ ಸುಹೃತ್"** ಎಂಬ ಶ್ವೇತಾಶ್ವತರ ಶ್ರುತಿಯು ಸಿದ್ಧಪರವಾಕ್ಯವಾಗಿತೋರುತ್ತದಲ್ಲಾ; ವಿಧಿಯಾಗಿದ್ದ ಪಕ್ಷದಲ್ಲಿ ಒಪ್ಪಬಹುದಾಗಿತ್ತು ಎಂದು ಆಕ್ಷೇಪವನ್ನು ತಂದರೆ, ಸಿದ್ಧವತ್ ನಿರ್ದೇಶ ಸ್ಥಲದಲ್ಲೂ ವಿಧಿಯನ್ನು ಕಲ್ಪಿಸತಕ್ಕದ್ದೆಂಬ ಮೀಮಾಂಸಕ ನ್ಯಾಯದಿಂದ, ಆಕ್ಷೇಪವು ನಿಲ್ಲತಕ್ಕದಲ್ಲವೆಂದು ಹೇಳಲ್ಪಟ್ಟಿತು. **ಶರಣಂವ್ರಜ** ವೆಂದು ಅರ್ಜುನನನ್ನು ಕುರಿತು ಹೇಳಲ್ಪಟ್ಟಿದ್ದರೂ, ಸರ್ವರಿಗೂ ಆ ವಿಧಿಯು ಅನ್ವಯಿಸುವದರಿಂದ ಶರಣಾಗತಿಗೆ ಸರ್ವಾಧಿಕಾರತ್ವವುಂಟೆಂಬುದು ಸಿದ್ಧವೆಂದು ಶ್ರೀ ನಿಗಮಾನ್ತದೇಶಿಕರವರು ನಿಕ್ಷೇಪರಕ್ಷೆ ಎಂಬ ಗ್ರಂಥದಲ್ಲಿ ಸಮರ್ಥಿಸಿರುತ್ತಾರೆ - **"ಪ್ರಥಮಪುರುಷವನ್ಮಧ್ಯಮ ಪುರುಷೇಪಿ ವಿಧಿಶಕ್ತೇರನಪಾಯಾದ್ಯುದ್ದೇಶ ಪ್ರವೃತ್ತಾವಪ್ಯರ್ಥತಸ್ಸಾಧಾರಣ್ಯಾತ್ ; ಅನ್ಯಥಾ ಏವಂವಿಧೇಷು ಸರ್ವೇಷ್ವನಾಶ್ವಾಸ ಪ್ರಸಂಗಾತ್"** ಎಂದು ಹೇಳುತ್ತಾರೆ.

**ಎಂಬ ರಹಸ್ಯರಹಿತವಾದ ಸರ್ವವಿಷಯವಿರುವುದು ಶ್ವೇತಾಶ್ವತರ ಶ್ರುತಿಯಲ್ಲೇ ಪ್ರಸಿದ್ಧವು (೧) "ಕೃಷ್ಣಂ ಧರ್ಮಂ ಸನಾತನಮ್" (೨) "ಶರಣ್ಯಂ ಶರಣಂ ಚ ತ್ವಾಮ್"**

ಮುಂದೆ ಯಾವಾಗ ಉಪಾಧಿರೂಪವಾದ ಹೇಳಿಕೆಗೆ ಏನೊಂದು ಉಪಾಧಿ ಎಂದು ರೂಪವಲ್ಲದಯಾಗಲಿ ವಿಶೇಷಣ ರೂಪವಸ್ತ್ರೀಯಾಗಲಿ ಸ್ವೋಕ್ತಿಯಿಲ್ಲದ ಪಕ್ಷದಲ್ಲಿ ಆ ವಿಧಿಗೆ ಸರ್ವಾಧಿಕಾರತ್ವ ಉಂಟೆಂದು ಮುಂದೆ ಉಪಪಾದಿಸುತ್ತಾರೆ **"ಅನೌಪಾಧಿಕನಿರ್ದೇಶೇಷ್ವಸಂಕೋಚೋ ಮುನೀಷಿಭಿಃ"** ಎಂದು ಪ್ರಾಜ್ಞರು ಹೇಳುವ ನ್ಯಾಯರೀತ್ಯಾ ಯಾವಾಗ ಒಂದು ವಿಧಿಗೆ ಯಾವ ಉಪಾಧಿಯೂ ಹೇಳಲ್ಪಡಲಿಲ್ಲವೋ, ಆಗ ಆ ವಿಧಿಗೆ ಸಂಕೋಚವನ್ನು ಹೇಳದ ಸರ್ವಾಧಿಕಾರತ್ವವನ್ನೇ ಒಪ್ಪತಕ್ಕದ್ದೆಂಬುದನ್ನು ಪ್ರಮಾಣ ಪೂರ್ವಕವಾಗಿ ಸ್ಥಾಪಿಸುತ್ತಾರೆ (೧) **"ಕೃಷ್ಣಂ ಧರ್ಮಂ ಸನಾತನಮ್"** ಇದರ ಪೂರಾ ಶ್ಲೋಕಕ್ಕೂ ಅರ್ಥಕ್ಕೂ ೨೦೪೩ ನೆಯ ಪುಟವನ್ನು ನೋಡಿ ಅನಾದಿಯಾಗಿ ಸಿದ್ಧೋಪಾಯನಾಗಿರುವವನು ಶ್ರೀ ಕೃಷ್ಣನೆಂದು ಹೇಳಲ್ಪಟ್ಟಿರುತ್ತದೆ ಇಲ್ಲಿ ಧರ್ಮಶಬ್ದಕ್ಕೆ **ಅಲೌಕಿಕಶ್ರೇಯಸ್ಸಾಧನ** ವೆಂಬ ಅರ್ಥವು (೨) ತ್ವಾಂ - ನಿನ್ನನ್ನು **ಶರಣ್ಯಮ್** - ಸಿದ್ಧೋಪಾಯನಾಗಿರಲು ಯೋಗ್ಯನಾದ, ಹೇಗೆ ಯೋಗ್ಯನು, ಆಶ್ರಯೋಚಿತ ಜ್ಞಾನಶಕ್ತಿ ದಯಾ, ವಾತ್ಸಲ್ಯ ಸೌಲಭ್ಯ ಸೌಶೀಲ್ಯಾದಿ ಗುಣಾಕರನೆಂಬ ಭಾವವು **ಶರಣಂ ಚ** - ಸಿದ್ಧೋಪಾಯನಾಗಿ ನಿಂತಿರುವವನನ್ನಾಗಿ, **ಆಹುರ್ದಿವ್ಯಾ ಮಹರ್ಷಯಃ"** ಎಂದು ಪಾದಪೂರಣವು, ಇದು ಶ್ರೀ ರಾಮನನ್ನು ಕುರಿತು ಚತುರ್ಮುಖನು, ಸೀತಾಗ್ನಿ ಪ್ರವೇಶಾನಂತರ ಹೇಳುವ ವಾಕ್ಯವು **ದಿವ್ಯಾ ಮಹರ್ಷಯಃ** - ಶ್ರೇಷ್ಠರಾದ ಸನಕಾದಿಮಹರ್ಷಿಗಳು ಹೇಳುತ್ತಾರೆ, ಅಥವಾ **ದಿವ್ಯಾ ಮಹರ್ಷಯಃ** ಎಂದರೆ **"ಯತ್ರರ್ಷಯಃ ಪ್ರಥಮಜಾಯೇ ಪುರಾಣಾಃ"** ಎಂಬಲ್ಲಿ ಮತ್ತು **"ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಗಂಸ್"** ಎಂದರೆ ಮೇಧಾವಿಗಳಾಗಿ ಪ್ರಜ್ಞಾಶಾಲಿಗಳಾಗಿರುವ ನಿತ್ಯಸೂರಿಗಳು ಹಾಗೆ ಹೇಳುತ್ತಾರೆಂದೂ ಅರ್ಥಮಾಡಬಹುದು

(೩) **"ಯೋಗೋ ಯೋಗ ವಿದಾಂ ನೇತಾ ಮ್"-ಯೋಗಃ** ಎಂದರೆ ಮೋಕ್ಷಕ್ಕೆ ಉಪಾಯಭೂತನಾಗಿ ಮೋಕ್ಷವನ್ನು ಹೊಂದಿಸುವವನು ಸರ್ವಫಲಕ್ಕೂ ಉಪಾಯಭೂತನು, **ಯೋಗವಿದಾಂ ನೇತಾಂ**- ಉಪಾಯಗಳು ಯಾವುವೆಂದು ತಿಳಿದನುತ್ತು ತಾನೇ ಸಿದ್ಧೋಪಾಯನೆಂದು ಅರಿತವರಿಗೆ ಅವರಲ್ಲಿ ಒಂದನ್ನು ಅನುಷ್ಠಿಸುವಹಾಗೆ ಮಾಡಿ ಫಲಪರ್ಯಂತವಾಗಿ ನಿರ್ವಾಹಕನು "ಮೃತ್ಯು ಸಂಸಾರನಾಗ

(೧) ಭಾರತ ವನ ೬೧ ೧೨೩ (೨) ರಾಮಾ ಯುದ್ಧ ೧೨೦ ೧೮.

**(೩) "ಯೋಗೋ ಯೋಗವಿದಾಂನೇತಾ" (೪) ಅಮೃತಂ ಸಾಧನಂ ಸಾಧ್ಯಮ್"**

**(೩) "ಯೋಗೋ ಯೋಗವಿದಾಂನೇತಾ" ಯೋಗಃ** ಎಂದರೆ ಮೋಕ್ಷಕ್ಕೆ ಉಪಾಯಭೂತನಾಗಿ ಮೋಕ್ಷವನ್ನು ಹೊಂದಿಸುವವನು, ಸರ್ವಫಲಕ್ಕೂ ಉಪಾಯ ಭೂತನು, ಉಪಾಯಗಳು ಯಾವುವೆಂದು ತಿಳಿದು ತಾನೇ ಸಿದ್ಧೋಪಾಯ ನೆಂದು ಅರಿತವರಿಗೆ ಅವರಲ್ಲಿ ಒಂದನ್ನು ಅನುಷ್ಠಿಸುವ ಹಾಗೆ ಮಾಡಿ ಫಲಪರ್ಯಂತ ವಾಗಿ ನಿರ್ವಾಹಕನು **"ತೇಷಾ ಮಹಂಸ ಮುದ್ಧರ್ತಾ ಮೃತ್ಯು ಸಂಸಾರಸಾಗ ರಾತ್"** ಎಂಬ ಗೀತಾವಾಕ್ಯವು (ಗೀ ೧೨ ೭) ಅನುಸಂಧೇಯವು ಈ ಶ್ಲೋಕವು, ಎರಡು ಉಪಾಯಗಳಿಗೂ ಅನುಕೂಲಿಸುವಹಾಗೆ ಇದರ ಹಿಂದಿನ ಶ್ಲೋಕದಲ್ಲಿ **ಧ್ಯಾಯನ್ತ ಉಪಾಸತೇ** ಎಂಬ ಎರಡು ಕ್ರಿಯೆಗಳಿರುವದರಿಂದ ಎರಡು ವಿಧ ಉಪಾಯನಿಷ್ಠರೂ ಹೇಳಲ್ಪಟ್ಟಿರುವರು ದಾಸನ ಗೀತೆಯ ವ್ಯಾಖ್ಯಾನದ ೧೫೬೩ ನೆಯ ಪುಟವನ್ನು ಪರಾಂಬರಿಸಿ, ಎರಡಕ್ಕೂ ಅನನ್ಯ ಯೋಗವು ಆವಶ್ಯಕವು. (೪) **ಅಮೃತಂ**-ಪರಮಪುರುಷನೇ ಮೋಕ್ಷದಾಯಕನಾಗಿ ಪ್ರಾಪ್ಯನು, **ಸಾಧನಂ**-ಅದನ್ನು ನಿರ್ವಹಿಸುವ ಉಪಾಯಭೂತನೂ ಅವನೇ, **ಸಾಧ್ಯಮ್** - ವ್ಯಾಜರೂಪ ಉಪಾಯಾನುಷ್ಠಾನ ಸಾಧಿಸಲು ಯೋಗ್ಯನಾದವನೂ ಅವನೇ

ಇಲ್ಲಿ "ಕೃಷ್ಣಂಧರ್ಮಂ" ಎಂಬ ಪ್ರಮಾಣದಿಂದ ಅವನು ಸಿದ್ಧೋಪಾಯ ನೆಂಬುದು ಮಾತ್ರ ಹೇಳಲ್ಪಟ್ಟಿತು ಹಾಗೆ ಹೇಳಲ್ಪಟ್ಟರೆ ಸರ್ವಮುಕ್ತಿಪ್ರಸಂಗ ಬಂದೀತೆಂದು ಭಾವಿಸಿ, **"ಯೋಗೋ ಯೋಗವಿದಾಂನೇತಾ"**ಎಂದೂ **"ಶರಣ್ಯಂ ಶರಣಂಚತ್ವಾಮ್" "ಸಾಧನಂ ಸಾಧ್ಯಮ್"** ಇತ್ಯಾದಿ ಪ್ರಮಾಣಗಳು ಉದಾ ಹರಿಸಲ್ಪಟ್ಟವು ವ್ಯಾಜರೂಪ ಸಿದ್ಧೋಪಾಯದ ಆವಶ್ಯಕತೆಯಿಂದ, ಈಗಿನ ಸುಕೃತ ಕರ್ಮವನ್ನು ಮುಂದುಮಾಡಿಕೊಂಡು ಉಪಾಯಾನುಷ್ಠಾನವನ್ನು ಮಾಡಿಸಿ, ಫಲ ವಾದ ತನ್ನನ್ನೇ ಹೊಂದುವ ಪ್ರಾಪ್ತಿಯನ್ನೂ ಉಂಟುಮಾಡುವ ಸಿದ್ಧೋಪಾ ಯನೇ ತಾನು ಎಂದು ಹೇಳಲ್ಪಟ್ಟಿತು ಇಂತಹ ಅನುಗ್ರಹಕ್ಕೆ ಸರ್ವರೂ ಅರ್ಹರೇ ಎಂದು ಈ ಪ್ರಮಾಣಗಳಿಂದ ವ್ಯಕ್ತವು ಏಕೆಂದರೆ ಹಿಂದೆಯೇ ಉಪಪಾದಿಸಿದ ಹಾಗೆ "ಅನುಪಾಧಿಕ ನಿರ್ದೇಶೇಹ್ಯಸಂಕೋಚೋ ಮನೀಷಿಭಿಃ" ಎಂಬ ನ್ಯಾಯದ ಪ್ರಕಾರ, ಈ ಪ್ರಮಾಣಗಳಲ್ಲಿ ಇಂತವರು ಮಾತ್ರವೇ ಎಂದು ವಿಶೇಷಿಸಿ ನಿರ್ದೇಶಿಸ ಲ್ಪಡದೇ ಇರುವದರಿಂದ ಪ್ರಾಜ್ಞರು ಅದಕ್ಕೆ ಸಂಕೋಚಾರ್ಥವನ್ನು ಕಲ್ಪಿಸದೆ, ಸರ್ವರಿಗೂ ಅನ್ವಯಿಸುತ್ತದೆಂದು ಹೇಳುತ್ತಾರೆ. ಹೀಗೆ ಶಾಸ್ತ್ರ ಸಜ್ಜಾಗಿ ಹೇಳಿರುವ ದನ್ನು ಮರೆತು ಶ್ರೀ ಸೋಮೇಶಯಾಂಡಾರವರು ಮಹಾಪ್ರಾಜ್ಞರಾದರೂ, ಭರ

(೩) ವಿಷ್ಣು ಸಹ ೧೮-೧೯ ನೆಯ ನಾಮಗಳು (೪) ವಿ ಧ ೭೨. ೪

**ಇತ್ಯಾದಿಗಳಿಲುಮ್ ಸಙ್ಕೋಚಮಿಲ್ಲಾಮೈಯಾಲೇ ಸರ್ವವಿಷಯತ್ವಂ ವಿವಕ್ಷಿತಮ್. ಇಪ್ಪಡಿ ಇವರ್ ಶರಣಮಾಕ ವರಣೀಯನಾಂಪೋದೈಕ್ಕು ತಾನ್ ಅನನ್ಯ ಶರಣನಾಗವೇ ವೇಣ್ಡುವದು.**

ನ್ಯಾಸವು ಶೂದ್ರಾದಿಗಳಿಗೆ ಅನ್ವಯಿಸುವದಿಲ್ಲವೆಂದು ಅಭಿಪ್ರಾಯಪಟ್ಟರು ಇದು ಸರ್ವಾಧಿಕಾರಯುತವಾದುದೆಂದು ಶ್ರೀ ದೇಶಿಕರವರು ಹೇಳುತ್ತಾರೆ—**ಇತ್ಯಾದಿಗಳಿಲುಮ್**-ಇವೇ ಮೊದಲಾದ ಪ್ರಮಾಣಗಳಲ್ಲಿ, **ಸಂಕೋಚಮಿಲ್ಲಾಮೈಯಾಲೇ**-ಏನೊಂದೂ ವಿಶೇಷ, ಮೂಲಕ ಸಂಕೋಚಿಸಿ ಹೇಳಲಿಲ್ಲವಾದುದರಿಂದ, **ಸರ್ವವಿಷಯತ್ವಮ್** - ಸಮಸ್ತರ ವಿಷಯವಾಗಿ ಹೇಳಿದುದೆಂಬುದು, **ವಿವಕ್ಷಿತಮ್** - ಇಲ್ಲಿ ಉಪದೇಶಿಸತಕ್ಕದ್ದಾಗಿರುತ್ತದೆ ಅಶಕ್ತರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೂ, ಶೂದ್ರರೂ, ಪಂಚಮರೂ ಮೊದಲಾದ ಸಮಸ್ತರಿಗೂ ಈ ಶರಣಾಗತಿಯಲ್ಲಿ ಅನ್ವಯ ಉಂಟೆಂಬುದು ವ್ಯಕ್ತವು **ಶರಣಂವ್ರಜ** ಎಂದು ಹೇಳಿರುವದು ಏನೊಂದೂ ವಿಶೇಷೋಕ್ತಿಯಿಲ್ಲದೆ, **ಈ** ಮೇಲಿನ ಪ್ರಮಾಣಗಳ ಹಾಗೆ ಇರುವದರಿಂದ, **ಶರಣವೆಂ**ದರೆ ಭಗವಂತನನ್ನು ಸಿದ್ಧೋಪಾಯನಾಗಿ ವರಿಸಲು ಸಮಸ್ತರಿಗೂ ಯೊಗ್ಯತಯುಂಟು ಎಂಬ ತಾತ್ಪರ್ಯವು

ಪರಮಪುರುಷನು ಹೀಗೆ ಸರ್ವರಿಗೂ ಕಂಕಣ ಬದ್ಧನಾಗಿ ಸರ್ವರಿಗೂ ಸಿದ್ಧೋಪಾಯನಾಗಿ ನಿಂತಿದ್ದರೂ, ಎಲ್ಲರಿಗೂ ಏತಕ್ಕೆ ಮುಕ್ತಿಪ್ರಸಂಗವಿಲ್ಲವು ' ಕರುಣಾಸಾಗರನು ಎಂದು ಕೊಂಡಾಡುತ್ತೀರಿ ಹಾಗಿದ್ದರೂ ಏಕೆ ಸರ್ವಾನುಗ್ರಹವಿಲ್ಲವು ? ಎಂಬ ಶಂಕಾವಿಗೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ ನಾನು ಅನನ್ಯಗತಿಕನು, ಬೇರೆ ಉಪಾಯವು ನನಗಿಲ್ಲವು ಎಂದು ಆತನನ್ನು ಶರಣ ಹೊಂದಿ ಪ್ರಾರ್ಥಿಸಿದರೆ ಸಿದ್ಧೋಪಾಯನಾಗುವನೇ ವಿನಾ ಅನ್ಯಥಾ ಇಲ್ಲವು ಇಂತಹ ಯಾಚನೆಯೇ ಭರನ್ಯಾಸರೂಪವಾದ ಸಾಧ್ಯೋಪಾಯವು ಇದಿಲ್ಲದೆ ಆತನು ಸಿದ್ಧೋಪಾಯನಾಗಿ ನಿಲ್ಲುವದಿಲ್ಲವು ಹಾಗೆ ಎಲ್ಲರಿಗೂ ಸಿದ್ಧೋಪಾಯನಾಗಿ ನಿಂತರೆ ಸರ್ವಮುಕ್ತಿಪ್ರಸಂಗ ಬಂದು ಅರ್ಹಾನರ್ಹ ವಿವೇಚನೆಯಿಲ್ಲದೇ ಹೋಗುವದರಿಂದ ಸ್ವಾಮಿಗೆ ವೈಷಮ್ಯವು ಏರ್ಪಡುತ್ತದೆಂದು ಸಂಗ್ರಹವಾಗಿ ತಿಳಿಸುತ್ತಾರೆ—**ಇಪ್ಪಡಿ** - ಈ ಮೇಲಿನ ಪ್ರಮಾಣಗಳಲ್ಲಿ ಉಪಪಾದಿಸಲ್ಪಟ್ಟ ರೀತಿಯಲ್ಲಿ, **ಇವರ್** - ಈ ಸಿದ್ಧೋಪಾಯನಾಗಿ ಕಂಕಣ ಬದ್ಧನಾಗಿ ನಿಂತಿರುವ ಪರಮಪುರುಷನು, **ಶರಣಮಾಗ ವರಣೀಯನಾಂಪೋದೈಕ್ಕು** - ಆತನನ್ನು ಸಿದ್ಧೋಪಾಯನನ್ನಾಗಿ ಭರನ್ಯಾಸದ ಮೂಲಕ ವರಿಸುವದಶೈಯಲ್ಲಿ, **ತಾನ್** - ಇಂತಹ ಪ್ರಪನ್ನನು ಅವನು ಯಾರೇ ಆಗಲಿ, **ಅನನ್ಯ ಶರಣನಾಗವೇ** - ನನಗೆ ಇನ್ನು ಬೇರೆ ಉಪಾಯದಲ್ಲಿ ಅನ್ವಯವಿಲ್ಲದ ಅನನ್ಯಗತಿಕನು ಎಂದೇ, **ವೇಣ್ಡುವದು** - ಶರಣಾ

## ಅಥ "ವ್ರಜ" ಶಬ್ದಾರ್ಥಮಾಹ

**"ವ್ರಜ" ಎಙ್ಗಿರ ಶಬ್ದಮುಮ್, "ಪ್ರಪದ್ಯೇ" ಎಙ್ಗಿರ ಇಡತ್ತಿಲ್ ಅರುತಿಯಿಟ್ಟ ಸಪರಿಕರಾತ್ಮಾ ನಿಕ್ಷೇಪತ್ತೈಯೇ ಶೊಲ್ಲುಗಿರದು. ಅವ್ವಿಡಮ್ ಅನುಷ್ಠಾತಾವಿನುಡೈಯ ಅನುಸಂಧಾನ ಮಾನಪಡಿಯಾಲೇ ಉತ್ತಮನಾಯಿತ್ತು. ಇವ್ವಿಡಂ (೧) "ಶಿಷ್ಯಸ್ತೇಽಹಂ ಶಾಧಿಮಾಂ"**

---

ಗತಿಯ ಮೂಲಕ ಪ್ರಾರ್ಥಿಸುವದು (ಇದೇ ಗೋಪ್ತೃತ್ವವರಣವು) ಇತರವಾದ ಉಪಾಯಕ್ಕೆ ತಾನು ಅಶಕ್ತನು, ಆ ಕಾರಣದಿಂದ ಅನಧಿಕಾರಿ ಎಂದು ಹೇಳಿ ಪ್ರಾರ್ಥನೆಯೇ ಶರಣಾಗತಿ ಎನಿಸುತ್ತದೆ ಇದಕ್ಕೆ **"ಅನನ್ಯ ಸಾಧ್ಯೇ ಸ್ವಾಭೀಷ್ಟೇ ಮಹಾ ವಿಶ್ವಾಸಪೂರ್ವಕಮ್। ತದೇಕೋಪಾಯತಾಯಾಚ್ಞಾ ಪ್ರಪತ್ತಿ ಶ್ಶರಣಾಗತಿಃ"** ಎಂಬ ಭರತಮುನಿಯ ವಾಕ್ಯವೂ, **"ತ್ವಮೇವೋಪಾಯ ಭೂತೋ ಮೇಭವೇತಿ ಪ್ರಾರ್ಥನಾ ಮತಿಃ। ಶರಣಾಗತಿರಿತ್ಯುಕ್ತಾ ಸಾದೇವೇಸ್ಮಿನ್ಪ್ರಯುಜ್ಯತಾಮ್"** ಎಂಬ ಸಂಹಿತಾವಾಕ್ಯವೂ ಅನುಸಂಧೇಯಗಳು ೧೦೫೩ ನೆಯ ಪುಟವನ್ನು ನೋಡಿ **ಯಾಚ್ಞಾ,** ಮತ್ತು **ಪ್ರಾರ್ಥನಾಮತಿಃ** ಎಂಬ ಪ್ರಯೋಗಗಳು **ಶರಣಮಾಗ ವರಣೀಯ** ಎಂಬುದನ್ನು ಸಮರ್ಥಿಸುತ್ತವೆ ಆದುದರಿಂದ **ಶರಣಂ** ಎಂಬಲ್ಲಿ ತೋರಿಬರುವ ಉಪಾಯ ಭಾವದಲ್ಲಿ ಸರ್ವರಿಗೂ ಅಧಿಕಾರ ಉಂಟೆಂಬುದು ಸ್ಥಾಪಿತವು ಈ ಅಭಿಪ್ರಾಯವು **"ಮಾಂಹಿ ಪಾರ್ಥವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ।** ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿಯಾನ್ತಿ ಪರಾಂಗತಿಮ್" ಎಂಬಲ್ಲೂ, ಮತ್ತು **"ತೇಽಪ್ಯತಿತರನ್ತ್ಯೇವ ಚ ದೇವ ಮಾಯಾಂ ಸ್ತ್ರೀ ಶೂದ್ರಹೂಣಶಬರಾ ಅಪಿ ಪಾಪಜೀವಾಃ"** ಎಂಬಲ್ಲೂ, ಈ ಸರ್ವಾಧಿಕಾರತ್ವವು ಉಪಪಾದಿತವು ಹಾಗೆಯೇ **"ಸರ್ವಲೋಕ ಶರಣ್ಯಾಯ"** ಎಂಬಲ್ಲೂ **"ಅಭಯಂ ಸರ್ವಭೂತೇಭ್ಯೋದದಾಮ್ಯೇತದ್ವ್ರತಂಮಮ"** ಎಂಬಲ್ಲೂ ಸಹ ವ್ಯಕ್ತವು ತ್ರೈವರ್ಣಿಕರಿಗೆ ಮಾತ್ರವೇ ಉಪಾಯಾನುಷ್ಠಾನದಲ್ಲಿ ಅಧಿಕಾರವೆಂದು ಭಾವಿಸತಕ್ಕದ್ದಲ್ಲವು

### ವ್ರಜ ಶಬ್ದದ ಅರ್ಥವನ್ನು ಹೇಳುತ್ತಾರೆ.

ಇಲ್ಲಿರುವ **ವ್ರಜ** ಶಬ್ದವೂ ದ್ವಯದಲ್ಲಿರುವ **ಪ್ರಪದ್ಯೇ** ಎಂಬ ಶಬ್ದವೂ, ಸಮಾನಾರ್ಥಕಗಳು; ಆದರೆ ಇಲ್ಲಿ ಮಧ್ಯಮಪುರುಷವೂ, ಅಲ್ಲಿ ಉತ್ತಮಪುರುಷವೂ ಇರುವದರ ಅಭಿಪ್ರಾಯವೇನು ಎಂಬುದನ್ನು ತಿಳಿಸುತ್ತಾರೆ—**ವ್ರಜ ಎಙ್ಗಿರ ಶಬ್ದಮುಮ್** - ವ್ರಜ ಎಂಬ ಶಬ್ದವೂ, **ಪ್ರಪದ್ಯೇ ಎಙ್ಗಿರ ಇಡತ್ತಿಲ್** **ಪ್ರಪದ್ಯೇ** ಎಂಬುವ ಸ್ಥಳದಲ್ಲಿ ಎಂದರೆ ಪದದಲ್ಲಿ, **ಅರುದಿಯಿಟ್ಟ**-ಉಪದಿಷ್ಟವಾದ,

---

೧೯ ೭೪ ೭.

**ಎನ್ರು ಅಭಿಮುಖವಾಗ ನಿನ್ರವನೈ ಕುರಿತ್ತು ವಿಧಿಕ್ಕಿರದಾಗೈಯಾಲೇ ಮಧ್ಯಮನಾಯಿತ್ತು. ಇವ್ವಾನುಕೂಲ್ಯ ಸಂಕಲ್ಪಾದ್ಯಂಗಾಂತರಙ್ಗಳುಮ್**

---

ಹೇಳಲ್ಪಟ್ಟ, **ಸಪರಿಕರಾತ್ಮಾ ನಿಕ್ಷೇಪತ್ತೈಯೇ**-ಅನುಕೂಲ್ಯಾದಿ ಐದು ಅಂಗಗ ಳಿಂದ ಕೂಡಿದ ಆತ್ಮಾ ಭರಸಮರ್ಪಣವನ್ನೇ, **ಶೊಲ್ಲುಗಿರದು** - ಹೇಳುತ್ತದೆ **ವ್ರಜ** ಎಂಬುದೂ **ಪ್ರಪದ್ಯೇ** ಎಂಬುದೂ ಒಂದೇ ಅರ್ಥ ವುಳ್ಳವು ಎಂಬ ಭಾವವು ಸಪರಿಕರ ಆತ್ಮನಿಕ್ಷೇಪವೆಂದು ಹೇಳಲ್ಪಟ್ಟಿತಲ್ಲಾ, ಸಪರಿಕರವೆಂದು ಹೇಗೆ ತಿಳಿಯ ಬಹುದು ಎಂಬುದನ್ನು ಮುಂದೆ ಉಪಪಾದಿಸಿ ಹೇಳುತ್ತಾರೆ ಎರಡಕ್ಕೂ ಅಂಗ ಗಳಿಂದ ಕೂಡಿದ ಆತ್ಮರಕ್ಷಾಭರ ಸಮರ್ಪಣೆಯೆಂಬುದೇ ಅರ್ಥವು ಇದು ಧಾತ್ವ ರ್ಥದಿಂದಲೂ ಏರ್ಪಡುತ್ತದೆ ವ್ರಜ ಧಾತುವಿಗೆ ಗತ್ಯರ್ಥವು ಅದರಿಂದ ಜ್ಞಾನಾರ್ಥ ತೋರಿಬರುತ್ತದೆ ಪ್ರಪದ್ಯೇ ಎಂಬಲ್ಲಿ ಪ್ರ ಎಂಬುದು ಉಪಸರ್ಗವಾಗಿ, ಪದಿ ಧಾತುವಿಗೆ ಜ್ಞಾನಾರ್ಥವುಂಟು ಹೀಗೆ ಸಮಾನಾರ್ಥವುಳ್ಳವು ಎರಡು ಶಬ್ದಗಳೂ ಎಂಬ ಭಾವವು ಆದರೆ **ಅವ್ವಿಡಮ್** - ದ್ವಯದ ಪ್ರಪದ್ಯೇ ಎಂಬಲ್ಲಿ, **ಅನುಷ್ಠಾ ತಾವಿನುಡೈಯ** - ಆತ್ಮಾನಿಕ್ಷೇಪವನ್ನು ಅನುಷ್ಠಿಸುವ ಅಧಿಕಾರಿಯ, **ಅನು ಸಂಧಾನರೂಪಮಾಯಿರುಕ್ಕೈಯಾಲೇ** - ಅನುಸಂಧಾನರೂಪವಾದುದರಿಂದ, **ಉತ್ತಮ ನಾಯಿತ್ತು** - ನಾನು ಹೀಗೆ ಭರನ್ಯಾಸವನ್ನು ಅನುಷ್ಠಿಸುತ್ತೇನೆಂದು ಹೇಳಬೇಕಾ ಗಿರುವದರಿಂದ **ಪ್ರಪದ್ಯೇ** ಎಂಬುದು ಉತ್ತಮಪುರುಷವಾಯಿತು **ಇವ್ವಿಡಂ** - ಈ ಚರಮ ಶ್ಲೋಕದಲ್ಲಿರುವ **ವ್ರಜ** ಎಂಬಲ್ಲಿಯಾದರೋ (೧) ಅಹಂ ನಾನು, **ತೇಶಿಷ್ಯಃ** - ಆಚಾರ್ಯರಾದ ತಮಗೆ ಶಿಷ್ಯನು, **ಪ್ರಪನ್ನಾಂ** - ಸರಿಯಾದ ಜ್ಞಾನಪ್ರಾಪ್ತಿಗಾಗಿ ಶರಣಾಗತಿಯನ್ನನುಷ್ಠಿಸಿದ ನನ್ನನ್ನು, **ಶಾಧಿ** - ಸರಿಯಾದ ಉಪದೇಶದ ಮೂಲಕ ಶಿಕ್ಷಿಸಿ" **ಎನ್ರು** ಎಂಬುದಾಗಿ, **ಅಭಿಮುಖವಾಗ ನಿನ್ರವನೈ ಕುರಿತ್ತು** - ಎದುರಿಗೆ ನಿಂತಿರುವ ಅರ್ಜುನನನ್ನು ಕುರಿತು, **ವಿಧಿಕ್ಕಿರದಾಗೈ ಯಾಲೇ** - ವಿಧಿಸುವಪ್ರಕರಣವಾದುದರಿಂದ, **ಮಧ್ಯಮನಾಯಿತ್ತು** - **"ವ್ರಜ"** ಎಂದು ಮಧ್ಯಮಪುರುಷಪ್ರಯೋಗವು ಮಾಡಲ್ಪಟ್ಟಿತು ಧಾತ್ವರ್ಥವು, ವ್ರಜ ಎಂಬ ಇಲ್ಲಿನ ಶಬ್ದಕ್ಕೂ, ದ್ವಯದಲ್ಲಿರುವ **"ಪ್ರಪದ್ಯೇ"** ಎಂಬ ಶಬ್ದಕ್ಕೂ ಒಂದೇ ಯಾದು ದರಿಂದ, ಇಲ್ಲಿ ತನ್ನ ಪ್ರಿಯ ಶಿಷ್ಯನನ್ನು ಕುರಿತ ಪರಮ ಹಿತೋಪದೇಶವಾದುದ ರಿಂದ ಮಧ್ಯಮಪುರುಷವು ಈ ಹಿತೋಪದೇಶಾನುಗುಣವಾಗಿ ನಡೆಸುವ ಅನು ಷ್ಠಾನವಾದುದರಿಂದ ಉತ್ತಮ ಪುರುಷಪ್ರಯೋಗವು ಹೀಗೆ ಮಾಡತಕ್ಕದ್ದೆಂದು ವಿಧಿಯು ಇಲ್ಲಿ ಅಲ್ಲಿ ಹಾಗೆಯೇ ಮಾಡಿರುತ್ತೇನೆ ಎಂಬ ಉಪಾಯಾನುಷ್ಠಾನವು ಎರಡು ಸಂದರ್ಭದಲ್ಲೂ ಜ್ಞಾನಾರ್ಥವೇ ಉದ್ದಿಶ್ಯವಾದುದರಿಂದ, ಎರಡು ಪದ ಗಳೂ ಸಮಾನಾರ್ಥವನ್ನೇ ಬೋಧಿಸುತ್ತವೆ

**ಇಙ್ಗೇ ಸೂಚಿತಮಾನಪಡಿಯ್ಕೈ ದ್ವಯತ್ತಿಲ್ಪೋಲೇ ಉಚಿತಪದಙ್ಗಳಿಲೇ ಕಣ್ಡುಕೊಳ್ವದು**

ಇಲ್ಲಿ **ವ್ರಜ** ಎಂಬ ಶಬ್ದವು ಆತ್ಮನಿಕ್ಷೇಪಪರವಾದರೆ, ಅದು ಸಪರಿಕರವಾಗಿಯೇ ಇರತಕ್ಕದ್ದು. ಹಾಗಾದರೆ ಪರಿಕರಗಳನ್ನು ಬೋಧಿಸುವ ಪದಗಳು ಯಾವುವು ಎಂಬ ಸಂದರ್ಭದಲ್ಲಿ ಹೇಳುತ್ತಾರೆ. ದ್ವಯಮಂತ್ರದಲ್ಲಿ ಎಲ್ಲಿ ಈ ಪರಿಕರಗಳು ಸೂಚಿತವೆಂದು ತೋರ್ಪಡಿಸಿದೆವೋ, ಅದೇ ರೀತಿಯಲ್ಲಿ ಯಾವ ಪದಗಳಲ್ಲಿ ಇವು ಬೋಧಿತವೆಂಬುದನ್ನು ವಿಮರ್ಶಿಸಿ ತಿಳಿಯಬಹುದೆಂದು ಉಪದೇಶಿಸುತ್ತಾರೆ — **ಇವ್ವಾನುಕೂಲ್ಯ ಸಙ್ಕಲ್ಪಾದ್ಯಂಗಾಂತರಙ್ಗಳುಂ** - ಈ ಭರನ್ಯಾಸಕ್ಕೆ ಬೇಕಾದ ಅನುಕೂಲ್ಯ ಸಙ್ಕಲ್ಪವೇ ಮೊದಲಾದ ಬೇರೆ ಪರಿಕರಗಳನ್ನೂ, **ಇಙ್ಗೇ** - ಈ ಚರಮಶ್ಲೋಕದಲ್ಲೇ, **ಸೂಚಿತಮಾನಪಡಿಯ್ಕೈ** - ಸೂಚಿಸಲ್ಪಟ್ಟಿರುವ ಪ್ರಕಾರವನ್ನು, ದ್ವಯಮನ್ತ್ರದಲ್ಲಿ ಹೇಗೆ ಈ ಅನುಕೂಲ್ಯ ಸಂಕಲ್ಪಾದಿ ಅಂಗಗಳು ಸೂಚಿಸಲ್ಪಟ್ಟಿರುವವೋ ಹಾಗೆಯೇ, **ಉಚಿತಪದಙ್ಗಳಿಲೇ** - ಆ ಅಂಗಗಳು ತೋರಿಬರುವ ಯೋಗ್ಯವಾದ ಪದಗಳಲ್ಲಿ, **ಕಣ್ಡುಕೊಳ್ವದು** - ತಿಳಿದುಕೊಳ್ಳತಕ್ಕದ್ದು. ಅದು ಹೇಗೆ ಎಂದರೆ **ಸರ್ವಧರ್ಮಾನ್ಪರಿತ್ಯಜ್ಯ** ಎಂಬಲ್ಲಿ ಪ್ರಾತಿಕೂಲ್ಯಸ್ಯವರ್ಜನಂ ಎಂಬ ಅಂಗವು ವ್ಯಕ್ತವು. ಅದರಿಂದಲೇ ಆನುಕೂಲ್ಯಸ್ಯ ಸಂಕಲ್ಪವೂ ದ್ಯೋತಿತವು. ಯಾವಾಗ ಪ್ರಾತಿಕೂಲ್ಯವಿಲ್ಲವೋ ಆಗ ಅನುಕೂಲ್ಯವುಂಟೆಂದು ಹೇಳಬಹುದು. **ರಕ್ಷಿಷ್ಯತಿ** - ಎಂಬ ಮಹಾವಿಶ್ವಾಸವು, **ಮಾಂ** ಎಂದರೆ ರಕ್ಷಣೋಪಯುಕ್ತ ಕಲ್ಯಾಣಗುಣಾಕರನೆಂಬುದರಿಂದಲೂ, ಮತ್ತು **ವ್ರಜ** ಎಂಬ ಪರಮಹಿತೋಕ್ತಿಯಿಂದಲೂ ತೋರಿಬರುತ್ತದೆ. **ಶರಣಂವ್ರಜ** ಎಂಬುದರಿಂದ ಗೋಪ್ತೃತ್ವವರಣವು ಹೇಳಲ್ಪಟ್ಟಿತೆಂದು ಹಿಂದೆಯೇ ಉಪಪಾದಿಸಿರುತ್ತೇವೆ. **ಕಾರ್ಪಣ್ಯವು ಮಾಶುಚಃ** ಎಂಬಲ್ಲಿ ಪ್ರದರ್ಶಿತವು. ಆದುದರಿಂದ **ವ್ರಜ** ಶಬ್ದದಿಂದ ಸೂಚಿಸಲ್ಪಟ್ಟ ಮುಖ್ಯಾಭಿಪ್ರಾಯವೇನೆಂದರೆ—ಪ್ರಾಪ್ಯನೂ ಪ್ರಾಪಕನೂ ಆಗಿರುವ ನನ್ನೊಬ್ಬನನ್ನೇ, ಮತ್ತು ಆಶ್ರಿತರ ವಿಷಯದಲ್ಲಿ ಕೃಪಾವಾತ್ಸಲ್ಯ ಸೌಲಭ್ಯ ಸೌಶೀಲ್ಯಾದಿ ಕಲ್ಯಾಣಗುಣಾಕರನಾದ ನನ್ನನ್ನೇ ಅಕಿಂಚನನಾದ ನೀನು, ಸಪರಿಕರವಾದ ಆತ್ಮರಕ್ಷಣಾಭರ ನಿಕ್ಷೇಪರೂಪ ಜ್ಞಾನಾನುಸಂಧಾನವನ್ನು ಮಾಡು ಎಂಬ ಅಮೋಘವಾದ ಹಿತೋಪದೇಶವನ್ನು ಮಾಡಿದರು ಎಂಬರ್ಥವಾಗುತ್ತದೆ.

ಆಗಲಿ **"ವ್ರಜ"** ಶಬ್ದದಿಂದ ಸಪರಿಕರವಾದ ಆತ್ಮರಕ್ಷಾಭರ ಸಮರ್ಪಣರೂಪ ಹಿತೋಪದೇಶವು ಮಾಡಲ್ಪಟ್ಟಿತೆಂದೇನೋ ಒಪ್ಪೋಣ. ಇಂತಹ ಭರನ್ಯಾಸವು ಸಕೃತ್ ಅಲ್ಲವೇ ಅನುಷ್ಠಿಸತಕ್ಕದ್ದು. ಹಾಗೆ ಹೇಳಲ್ಪಡಲಿಲ್ಲವಲ್ಲಾ. ಎಂದರೆ

---

ಶ್ರೀ **ಭಾಷ್ಯ** ೪. ೧ ೧

**(೧) "ಸಕೃತ್ಕೃತ ಶ್ಶಾಸ್ತ್ರಾರ್ಥಃ" ಎಙ್ಗಿರ ನಿರ್ಣಯತ್ತುಕ್ಕು ಉಪಾಸನತ್ತಿಲ್ ಪೋಲ್ ಇಙ್ಗು ಆವೃತ್ತಿ ವೇಣ್ಡುಮ್ಪಡಿ ಅಪವಾದ ಮಿಲ್ಲೈ.**

ಸಮಾಧಾನವನ್ನು ಹೇಳುತ್ತಾರೆ ಇನ್ನೊಂದು ಉಪಾಯವಾದ ಉಪಾಸನಕ್ಕೆ ದೇಹಾವಸಾನದವರೆಗೂ ಆವೃತ್ತಿ ಹೇಳಿರುವಹಾಗೆ ಈ ಭರನ್ಯಾಸದಲ್ಲೂ ವ್ರಜ ಎಂದು ಹೇಳಿರುವಲ್ಲಿ ಆವೃತ್ತಿಶಂಕಾ ಉಂಟೋ ಎಂದರೆ ಇಲ್ಲವೆಂದು ಹೇಳುತ್ತಾರೆ. ಶಾಸ್ತ್ರನಿರ್ಣಯವು ಸಕೃತ್ತೆಂದು ಹೇಳಿರುವದರಿಂದ ಆವೃತ್ತಿ ಶಂಕಾವಿಗೆ ಕಾರಣ ವಿಲ್ಲವೆನ್ನುತ್ತಾರೆ—"**ಶಾಸ್ತ್ರಾರ್ಥಃ** - ಶಾಸ್ತ್ರದಲ್ಲಿ ಹೇಳಿರುವದೆಲ್ಲಾ, **ಸಕೃತ್ಕೃತಃ**- ಒಂದು ಸಲ ಮಾಡತಕ್ಕವುಗಳು," **ಎನ್ಗಿರ ನಿರ್ಣಯತ್ತುಕ್ಕು** - ಶ್ರೀ ಭಾಷ್ಯ ಕಾರವಾಕ್ಯ ಪ್ರಮಾಣ ನಿರ್ಣಯಕ್ಕೆ, **ಉಪಾಸನತ್ತಿಲ್ ಪೋಲೇ** - ಉಪಾಸನದಲ್ಲಿ ಪ್ರತಿದಿನವೂ ಮಾಡತಕ್ಕದ್ದಾಗಿ ಹೀಗೆ **ಆವೃತ್ತಿ** ಇರುವಹಾಗೆ **ಆವೃತ್ತಿ ವೇಣ್ಡುಮ್ಪಡಿ** - ಪುನಃ ಪುನಃ ಮಾಡತಕ್ಕದ್ದೆಂಬುವದಕ್ಕೆ, **ಅಪವಾದ ಮಿಲ್ಲೈ** - ವಿರುದ್ಧಪ್ರಮಾಣವಿಲ್ಲವು ಉಪಾಸನಕ್ಕಾದರೋ, ದೇಹಾವಸಾನದ ವರೆಗೂ ಪ್ರತಿದಿನವೂ ಅನುಷ್ಠೇಯವೆಂಬುದು **"ಆವೃತ್ತಿರಸಕೃದುಪದೇಶಾತ್"** ಎಂಬ ಬ್ರಹ್ಮ ಸೂತ್ರದಲ್ಲಿ ಉಪಪಾದಿತವು **"ಆ ಪ್ರಯಾಣಾತ್ತತ್ರಾಪಿ ಹಿದೃಷ್ಟಮ್"** (ಛಾಂ ೮ ೧) ದೇಹಾವಸಾನವವರೆಗೂ ಉಪಾಸನವು ಮಾಡತಕ್ಕದ್ದು. ಉಪಾಸನಾರಂಭದಿನ ಮೊದಲು, ಅವಸಾನ ಉಂಟಾಗುವವರೆಗೂ ನಡೆಸತಕ್ಕದ್ದೆಂಬುದು ಮುಂದೆ ಉದಾಹರಿಸುವ ಛಾಂಧೋಗ್ಯ ಶ್ರುತಿಯಿಂದ, ಅದು ವಿಧಿರೂಪದಲ್ಲಿ ಹೇಳಿದ್ದರೂ, **ಏವಂವರ್ತಯನ್** ಎಂಬ ಪ್ರಯೋಗವು ವಿಧಿಗೆ ಸಮಾನವೇ (೪ ೧ ೧) ಉಪಾಸನವು ಅಸಕೃತ್ ಮಾಡಬೇಕೆಂಬುದು **"ಸಖಲ್ವೇವಂ ವರ್ತಯನ್ ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ"** (ಛಾಂ. ೮ ೧೫ ೧೦ )ಎಂಬಲ್ಲಿ ಸ್ಥಾಪಿತವು ಮರಣದವರೆಗೂ ಹೀಗೆಯೇ ಉಪಾಸಿಸುತ್ತಾ ಇರುವವನು ದಿವ್ಯವೈಕುಂಠಲೋಕವನ್ನು ಹೊಂದುವನೆಂದು ಹೇಳಲ್ಪಟ್ಟಿರುತ್ತದೆ ಶ್ರೀ ವಿದುರರು ಧೃತರಾಷ್ಟ್ರನಿಗೆ **"ಯಾವಜ್ಜೀವಂತುತತ್ಕುರ್ಯಾತ್ ಯೇನ ಪ್ರೇತ್ಯಸುಖಂವಸೇತ್"** ಎಂದು ಹಾಗೆಯೇ ತಿಳಿಸಿರುತ್ತಾರೆ ಹಾಗೆ ವಿಶೇಷವಿಧಿಗಳು **ಆವೃತ್ತಿ**ಗೆ ಉಂಟು ಆದರೆ ಹೀಗೆ ವಿಶೇಷ ವಿಧಿಗಳಿಲ್ಲದ ಶಾಸ್ತ್ರಾರ್ಥಗಳೆಲ್ಲಾ ಸಕೃದನುಷ್ಠೇಯಗಳು ; **ಅಷ್ಟವರ್ಷಂ ಬ್ರಾಹ್ಮಣ ಮುಪನಯೀತ** ಎಂಟು ವರುಷದ ಬ್ರಾಹ್ಮಣ ಬಾಲನಿಗೆ ಉಪನಯನವನ್ನು ಮಾಡತಕ್ಕದ್ದೆಂದರೆ, ಒಂದು ಸಲವೇ ಮಾಡತಕ್ಕದ್ದೆಂಬುದು ನಿರ್ಣೀತವು ಸಾಯುವತನಕ ಉಪನಯವನ್ನು ಮಾಡುತ್ತಲೇ ಇರಬೇಕೆಂಬ ಅರ್ಥವು ಹೇಗೆ ಸರಿಯಲ್ಲವೋ ಹಾಗೆಯೇ, **"ಓಮಿತ್ಯಾತ್ಮಾನಂಯುಂಜೀತ," "ಶರಣಂವ್ರಜ" "ಸ್ವಾತ್ಮಾನಂ ಮಯಿ**

**ಇನ್ವರ್ಥಂ (೨)"ಸಕೃದೇವ ಪ್ರಪನ್ನಾಯ" ಇತ್ಯಾದಿ ವಚನತ್ತಾಲುಮ್ ನಿಕ್ಷಿಪೇತ್" ಶರಣಮಹಂ ಪ್ರಪದ್ಯೇ "ತಂಗಚ್ಛ ಶರಣಂಹರಿಮ್" ಇತ್ಯಾದಿ** ಗಳೆಲ್ಲಾ ಸಕೃತ್ಕೃತಗಳು ಎಂದು ಹೇಳಲ್ಪಟ್ಟಿವೆ ಎಂಬ ಭಾವವು ಸಕೃತ್ಕೃತಗಳಲ್ಲವು ಅಸಕೃತ್ಕೃತಗಳೆಂಬುವದಕ್ಕೆ ಏನೊಂದೂ ಪ್ರಮಾಣವಿಲ್ಲವು ಎಂದು ತಿಳಿಸುವದಕ್ಕಾಗಿಯೇ, **ಸಕೃತ್ಕೃತ ಎಙ್ಗ್ರ ನಿರ್ಣಯತ್ತುಕ್ಕು ಅಪವಾದ ಮಿಲ್ಲೈ"** ಎಂದು ಹೇಳಿದರು

ಆಗಲಿ **ಸಕೃತ್ಕೃತ** ವೆಂಬುದಕ್ಕಾಗಲಿ ಪ್ರಮಾಣಗಳುಂಟೋ ಎಂದರೆ ಅನೇಕ ಪ್ರಮಾಣಗಳುಂಟೆಂಬ ಭಾವದಿಂದ ಶ್ರೀ ವಾಲ್ಮೀಕಿಯ ದಿವ್ಯಸೂಕ್ತಿಯನ್ನು ಉದಾಹರಿಸುತ್ತಾರೆ —(೨) **ಇನ್ವರ್ಥಂ** - ವಿಶೇಷವಿಧಿಗಳಿಲ್ಲದ ಶಾಸ್ತ್ರಾರ್ಥವು ಒಂದೇ ಸಲ ಅನುಷ್ಠಿಸತಕ್ಕದ್ದೆಂಬ ನಿರ್ಣಯವು, (೨) **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ"** (ರಾ ಯುದ್ಧ ೧೮ ೩೩) ಉಪಾಯಾನ್ತರವಾದ ಉಪಾಸನದಲ್ಲಿ ಯಾದರೋ ಉಪಾಸನಕ್ಕೆ ಆವೃತ್ತಿಯುಂಟು, ಈ ಭರನ್ಯಾಸಕ್ಕಾದರೋ ಅನಾವೃತ್ತಿಯು, ಒಂದೇ ಸಲ ಅನುಷ್ಠಿಸತಕ್ಕದ್ದು ಇದೇ ಈ ಶ್ಲೋಕದಲ್ಲಿ ಶ್ರೀ ರಾಮಚಂದ್ರ ಪ್ರಭುವಿಂದ ಹೇಳಲ್ಪಡುತ್ತದೆ—ನಾನು ನಿನ್ನ ದಾಸನು, ನನ್ನನ್ನು ನೀನೆ ರಕ್ಷಿಸತಕ್ಕದೆಂದು ಪ್ರಣಾಮವನ್ನು ಮಾಡಿ ಬೇಡಿಕೊಂಡರೆ ಅಂತಹ ಆಶ್ರಿತರಾದ ಸರ್ವಪ್ರಾಣಿಗಳಿಗೂ ಭಯವನ್ನು ಹೋಗಲಾಡಿಸಿ ಅಭಯವಾದ ದಿವ್ಯವೈಕುಂಠ ಪ್ರಾಪ್ತಿಯನ್ನು ಕೊಟ್ಟು ರಕ್ಷಿಸತಕ್ಕದ್ದೇ ನನ್ನ ವ್ರತವಾಗಿದೆ" ಎಂಬುದು ಶ್ಲೋಕ ತಾತ್ಪರ್ಯವು.

**ಇತ್ಯಾದಿ ವಚನತ್ತಾಲುಮ್**—ಇವೇ - ಮೊದಲಾದ ಅನೇಕ ಪ್ರಮಾಣಗಳಿಂದಲೂ **ಪ್ರತಿಷ್ಠಿತಮ್** - ಸ್ಥಾಪಿಸಲ್ಪಟ್ಟಿತು ಆದಿ ಪದದಿಂದ ಹೇಳಲ್ಪಟ್ಟ ಪ್ರಮಾಣಗಳು ಯಾವುದೆಂದರೆ—**"ಸಕೃದೇವಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರಮ್"** (೧೯೬ ನೆಯ ಪುಟನೋಡಿ) ಮತ್ತು **"ಸಕೃದೇವ ಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ" "ಶರಣಂತ್ವಾಂ ಪ್ರಪನ್ನಾಯೇ ಧ್ಯಾನಯೋಗ ವಿವರ್ಜಿತಾಃ"** ಇವೇ ಮೊದಲಾದವು

ಹಿಂದೆ ಉಪಾಸನಕ್ಕಿಂತ ಭರನ್ಯಾಸದಲ್ಲಿ ವೈಲಕ್ಷಣ್ಯವನ್ನು ಹೇಳಿದರು. (೧) ಉಪಾಸನವು ಅಸಕೃತ್ ಅನುಷ್ಠಿಸತಕ್ಕದ್ದೆಂದೂ, ಭರನ್ಯಾಸವು ಸಕೃದನುಷ್ಠೇಯವೆಂದೂ ಹೇಳಿದರು (೨) ಉಪಾಸನದಲ್ಲಿ ದೇಹಾವಸಾನವಾದರೂ ಅನಭ್ಯುಪಗತ ಪ್ರಾರಬ್ಧವಿದ್ದುದಾದರೆ ಬೇರೆ ಜನ್ಮಪ್ರಾಪ್ತಿಯುಂಟಾಗಿ ವಿಳಂಬದಿಂದ **ಮೋಕ್ಷ** ಪ್ರಾಪ್ತಿಯುಂಟಾಗಬಹುದು, ಭರನ್ಯಾಸದಲ್ಲಾದರೋ ವಿಳಂಬವಿಲ್ಲದೆ ದೇಹಾವಸಾ

**ಪ್ರತಿಷ್ಠಿತಮ್. ಇಪ್ಪಡಿ ಮಹೋದಾರನಾನ ಸರ್ವಶಕ್ತಿ ಪಕ್ಕಲೀಲೇ ಭರನ್ಯಾಸಂ ಪಣ್ಣುವನುಕ್ಕುಮ್ ಸ್ವಾಭಿಪ್ರಾಯವಿಶೇಷ ವೊಳಿಯ ಫಲ ವಿಳಂಬತ್ತುಕ್ಕು ಹೇತುವಿಲ್ಲೈ.**

ನವಾದ ಒಡನೆಯೇ ಪ್ರಾಪ್ತಿ ಎಂದು ಹೇಳುತ್ತಾರೆ **ಇಪ್ಪಡಿ** ಈ ಪ್ರಕಾರವಾಗಿ, **ಮಹೋದಾರನಾನ** - **ಯದಿವಾ ರಾವಣಸ್ಸ್ವಯಮ್** ಎಂದು ಹೇಳಿ ಶರಣಾಗತನು ಮಹಾಪರಾಧಿಯಾಗಿದ್ದರೂ, ಆತನ ಹಿಂದಿನ ಪಾಪಗಳನ್ನೆಲ್ಲಾ ಹೋಗಲಾಡಿಸುವಹಾಗೇ ತುಂಬಾ ಉದಾರನಾದ, **ಸರ್ವಶಕ್ತಿ ಪಕ್ಕಲಿಲೇ** - ಅಘಟಿತಘಟನಾಶಕ್ತಿಯುಳ್ಳ ಭಗವಂತನಲ್ಲಿ, **ಭರನ್ಯಾಸಂಪಣ್ಣುವನಕ್ಕುಮ್** - ಭರನ್ಯಾಸವನ್ನು ಮಾಡುವವನಿಗೆ, **ಸ್ವಾಭಿಪ್ರಾಯ ವಿಶೇಷವೊಳಿಯ** - ಆ ಪ್ರಪನ್ನನಾದವನ ಅಭಿಪ್ರಾಯ ವಿಶೇಷವನ್ನು ಬಿಟ್ಟು, **ಫಲವಿಳಂಬತ್ತುಕ್ಕು ಹೇತುವಿಲ್ಲೈ**-ದೇಹಾವಸಾನವಾದ ಒಡನೆಯೇ ಮೋಕ್ಷಪ್ರಾಪ್ತಿರೂಪ ಫಲಕ್ಕೆ ಸಾವಕಾಶವಿರುವದಿಲ್ಲವು ಪರಮಪುರುಷನು ಪರಮೋದಾರನಾದರೆ ಭರನ್ಯಾಸವಾದ ಒಡನೆಯೇ ಮೋಕ್ಷಪ್ರಾಪ್ತಿಯಾಗಬೇಕಲ್ಲವೇ ? ವಿಳಂಬವೇತಕ್ಕೆ ? ಎಂದಾಕ್ಷೇಪ ತಂದರ ಅದಕ್ಕೆ ಸಮಾಧಾನವಾಗಿ **ಸ್ವಾಭಿಪ್ರಾಯ ವಿಶೇಷವೊಳಿಯ** ಎಂದು ಹೇಳಿದರು ಸ್ವಾಭಿಪ್ರಾಯವು ಯಾವುದು ? ಎಂದರೆ ಕೆಲವರು ಆರ್ತರಾಗಿ ಒಡನೆಯೇ ದೇಹಾವಸಾನವನ್ನೂ ಮೋಕ್ಷಪ್ರಾಪ್ತಿಯನ್ನೂ ಕೋರಬಹುದು ; ಇನ್ನೂ ಕೆಲವರು ಹಾಗಲ್ಲದೆ ದೃಪ್ತರಾಗಿ ದೇಹಾವಸಾನವನ್ನು ಒಡನೆಯೇ ಅಪೇಕ್ಷಿಸದೆ, ಪ್ರಾರಬ್ಧಾನುಗುಣವಾಗಿ ದೇಹಾವಸಾನವಾದನಂತರ ಮೋಕ್ಷಪ್ರಾಪ್ತಿಯನ್ನು ಬೇಡುವರು ; ಆದುದರಿಂದ ಶರಣಾಗತನ ಇಷ್ಟಾನುಸಾರ ನಡೆಯಬೇಕಾಗಿರುವದರಿಂದ ಆರ್ತನಾಗಿದ್ದರೆ ಪ್ರಪದನವಾದ ಒಡನೆಯೇ, ಹಾಗಲ್ಲದೆ ಇದ್ದರೆ, ಸ್ವಲ್ಪ ಸಾವಕಾಶವಾಗಿ ದೇಹಾವಸಾನವುಂಟಾಗಿ, ಅಂತೂ ಇನ್ನೊಂದು ಜನ್ಮದ ವಿಳಂಬವಿಲ್ಲದೆ ಮುಕ್ತಿಯುಂಟಾಗುತ್ತದೆ ಆದರ ಭಕ್ತಿಯೋಗದ ಉಪಾಸನದಲ್ಲಾದರೋ ಅನಭ್ಯುಪಗತ ಪ್ರಾರಬ್ಧವಿದ್ದರೆ, ಅದರ ಫಲವಾಗಿ ಬೇರೆಜನ್ಮ ಉಂಟಾಗಿ ವಿಳಂಬಿಸಬಹುದೆಂಬ ತಾತ್ಪರ್ಯವು ಆದುದರಿಂದ ಭಕ್ತಿಯೋಗದ ಉಪಾಸನದಲ್ಲಿ ಪುನರ್ಜನ್ಮವು ಒಂದು ವೇಳೆ ಉಂಟಾದರೂ ಉಂಟಾಗಬಹುದು ಭರನ್ಯಾಸದಲ್ಲಾದರೋ ದೇಹಾವಸಾನಾನಂತರವೇ ಮೋಕ್ಷವು ಎಂದು ವೈಲಕ್ಷಣ್ಯವನ್ನು ಬೋಧಿಸುವದಕ್ಕಾಗಿ **ಫಲವಿಳಂಬತ್ತುಕ್ಕು ಹೇತುವಿಲ್ಲೈ** ಎಂಬ ಪ್ರಯೋಗವು ಈ ವೈಲಕ್ಷಣ್ಯವನ್ನೇ ಮುಂದಿನ ವಾಕ್ಯದಿಂದ ಬೋಧಿಸುತ್ತಾರೆ - **ಆಗೈಯಾಲ್** - ಆದುದರಿಂದ, **ಇನ್ಯಾಸ ವಿದ್ಯೈಕ್ಕು** - ಈ ಭರನ್ಯಾಸಕ್ಕೆ, **ಪ್ರಾರಬ್ಧ ನಿವರ್ತಕತ್ವಂ** - ಅನಭ್ಯುಪಗತ ಪ್ರಾರಬ್ಧವನ್ನೂ ಕೂಡ ಹೋಗಲಾಡಿಸೋಣವು, **ವಿಶೇಷಮಾಗಿರತು.—**

**ಆಗೈಯಾಲೇ ಇನ್ನ್ಯಾಸ ವಿದ್ಯೈಕ್ಕು ಪ್ರಾರಬ್ಧನಿವರ್ತಕತ್ವಂ ವಿಶೇಷಮಾಗಿರದು**

ಅತಿಶಯವಾದುದಾಗಿರುತ್ತದ ಅಥವಾ, ಪ್ರಾರಬ್ಧವೂ ಕಳಿಯುವವಕ್ಕಾಗಿಯೂ ಶೋಕಿಸಿ ಶರಣಾಗತಿಯನ್ನನುಷ್ಠಿಸಿದರೆ ಅದೂ ಕಳೆದುಹೋಗುತ್ತದೆ ಅಥವಾ ಶರಣಾಗತಿಯನ್ನು ಅನುಷ್ಠಿಸುವಾಗಲೇ ಪ್ರಾರಬ್ಧವೂ ಕಳೆಯಲಿ ಎಂದು ಸಙ್ಕಲ್ಪಿಸಿದ್ದರೆ, ಅದೂ ಕಳೆಯಬಹುದಾಗಿತ್ತು

ಆದರೆ ಶ್ರೀ ನಿಗಮಾಂತ ದೇಶಿಕರವರು ಅಪರಾಧ ಪರಿಹಾರಾಂತ್ಯಶ್ಲೋಕದಲ್ಲಿ **"ಪ್ರಾರಬ್ಧೇತರ ಪೂರ್ವಪಾಪಮಖಿಲಂ ಪ್ರಾಮಾದಿಕಂಚೋತ್ತರಂನ್ಯಾಸೇನ ಕ್ಷಪಯನ್"** ಎಂಬ ಶ್ಲೋಕದಲ್ಲಿ ಪ್ರಾರಬ್ಧವಲ್ಲದ ಇತರ ಪೂರ್ವಪಾಪಗಳೆಲ್ಲಾ ಈ ಪ್ರಪದನದಿಂದ ನಷ್ಟವಾಗುತ್ತವೆಂದು ಹೇಳಿರುವದು, ಇಲ್ಲಿ ಹೇಳಿರುವವಕ್ಕೆ ವಿರುದ್ಧವಾಗುವದಿಲ್ಲವೇ ಎಂದರೆ ಇಲ್ಲವು ಈ ನ್ಯಾಸದಿಂದ **ಪ್ರಾರಬ್ಧಖಂಡಂಚನಃ**- ಇದೂ ನಾಶವಾಗುತ್ತದೆಂದು ಹೇಳಲ್ಪಟ್ಟಿರುವದು, ಇಲ್ಲಿ ಪ್ರಾರಬ್ಧಶಬ್ದದಿಂದ ಬೋಧಿತವಾದುದು, ಅದು ಅನಭ್ಯುಪಗತ ಪ್ರಾರಬ್ಧವು ಇದೂ ಭರನ್ಯಾಸದಿಂದ ನಾಶವಾಗುತ್ತದೆ ಆದರೆ ಭಕ್ತಿಯೋಗದಲ್ಲಾದರೋ ಇವನ್ನೂ ಮುಂದೆ ಜನ್ಮವನ್ನೆತ್ತಿ ಅನುಭವಿಸಲೇ ಬೇಕು ಇದೀಗ ಈ ಎರಡಕ್ಕೂ ಇರುವ ವ್ಯತ್ಯಾಸವು ಆಗಲಿ **ಅನಭ್ಯುಪಗತಪ್ರಾರಬ್ಧ**ವೆಂದು ಹೇಳದೆ ಸುಮ್ಮನೆ ಪ್ರಾರಬ್ಧವೆಂದು ಪ್ರಯೋಗಿಸಿರುತ್ತಾರಲ್ಲಾ ಅದು ಹೇಗೆ ? ಎಂದರೆ ಈಗ ಜನ್ಮವನ್ನೆತ್ತಿರುವ ಪ್ರಾರಬ್ಧಾಂಶದ ದುಃಖಭಾಗವೂ ಕಳೆಯಲೆಂದು ಸೇರಿಸಿ ಪ್ರಪದನಕಾಲದಲ್ಲೇ ಅನುಷ್ಠಿಸಿದರೆ ಅದೂ ಕೂಡ ನಿವೃತ್ತಿಸಿಹೋಗುತ್ತದೆಂದು ಹಿಂದೆಯೇ ಉಪದೇಶಿಸಿರುತ್ತಾರೆ ಇದನ್ನೂ ಮನಸ್ಸಿನಲ್ಲಿಟ್ಟೇ ಅಭ್ಯುಪಗತ ಪ್ರಾರಬ್ಧವೂ ಅನಭ್ಯುಪಗತ ಪ್ರಾರಬ್ಧವೂ ಎರಡೂ ನಿವೃತ್ತಿಯನ್ನು ಹೊಂದುತ್ತವೆಂದೂ, ಇದೀಗ ಭರನ್ಯಾಸಕ್ಕೆ ವಿಶೇಷ ವೈಲಕ್ಷಣ್ಯವೆಂದೂ ಇಲ್ಲಿ ಉಪದೇಶಿಸಿದರು ಆದುದರಿಂದಲೇ **"ಸಾಧ್ಯಭಕ್ತಿಸ್ತು ಸಾಹನ್ತ್ರೀ ಪ್ರಾರಬ್ಧಸ್ಯಾಪಿಭೂಯಸೀ"** ಎಂಬ ಪ್ರಮಾಣವಚನವು ಅನುಸಂಧೇಯವು

**ಅತ್ಯಂತ ಪರತಂತ್ರನಾದವನ ವಿಷಯದಲ್ಲಿ ಶರಣಂವ್ರಜ ಎಂಬ ವಿಧಿ ವಾಕ್ಯವೇ ಸರಿಯಲ್ಲವೆಂಬವಾದದ ನಿರಾಸವು**

ಇಲ್ಲಿ **ವ್ರಜ** ಎಂಬ ವಿಧಿಯೇ ಅನುಪಪನ್ನವಲ್ಲವೇ ? ಏಕೆಂದರೆ **"ಅಜ್ಞೋಜಂತು ರನೀಶೋಽಯಂ ಆತ್ಮನ ಸ್ಸುಖದುಃಖಯೋಃ। ಈಶ್ವರಪ್ರೇರಿತೋಗಚ್ಛೇತ್ ಸ್ವರ್ಗಂ ವಾ ಶ್ವಭ್ರ ಮೇವವಾ। ಸ್ವಯಂಮೃತ್ಪಿಂಡ ಭೂತಸ್ಯ ಪರತಂತ್ರಸ್ಯ ದೇಹಿನಃ। ನಾಹಮುಮುಸ್ವತಂತ್ರೋಽಹಂ ಸಾಸ್ಮೀತ್ಯಸ್ಯಾರ್ಥಉಚ್ಯತೇ"** ಈ ಚೇತನನು ಅಜ್ಞನು ತನ್ನ ಸುಖದುಃಖಗಳ ವಿಷಯದಲ್ಲೂ

## ಅತ್ಯನ್ತಪಾರತಂತ್ರ್ಯೇ ವಿಷಯೇ ಶರಣಂವ್ರಜ ಇತಿವಿಧಿರನುಪಪನ್ನ ಇತ್ಯಾಶಂಕಾ ಮನೂದ್ಯ ಪರಿಹರತಿ

**ಇವ್ವಿಡತ್ತಿಲ್ ಶಿಲರ್‌ಸ್ವತಂತ್ರನೈಕುರಿತನ್ರೋ ಒನ್ಱೈವಿಧಿಪ್ಪದು, ಅತ್ಯಂತ ಪರತನ್ತ್ರನಾಕ ಅಧ್ಯಾತ್ಮಶಾಸ್ತ್ರಙ್ಗಳಿಲುಮ್, ಮೂಲಮನ್ತ್ರಾದಿಗಳಿಲುಮ್ ಶಿಕ್ಷಿತನಾನ ಅಧಿಕಾರಿಯೈಕ್ಕುರಿತ್ತು ; 'ವ್ರಜ' ಎನ್ರೋರು ಕರ್ತ**

ಸಂಪೂರ್ಣ ಪರಾಧೀನತೆಯು ; ತನ್ನ ಕರ್ಮಾನುಸಾರ ಈಶ್ವರನಿಂದ ಪ್ರೇರಿತನಾಗಿಯೇ ಸ್ವರ್ಗವನ್ನೋ ನರಕವನ್ನೋ ಕುರಿತುಹೋಗುವನು ಮಣ್ಣಿನ ಮುದ್ದೆಯ ಹಾಗೆ ಇದ್ದುಕೊಂಡು ಸ್ವಲ್ಪವೂ ಸ್ವಾತಂತ್ರ್ಯವಿಲ್ಲದೆ ಪರತನ್ತ್ರನಾಗಿರುವನು ; ನಾನು ಸನ್ನನನೂ ಅಲ್ಲವು, ಸ್ವತಂತ್ರನೂ ಅಲ್ಲವು" ಹೀಗೆ ಮೂಲಮನ್ತ್ರದ ನಮಶ್ಶಬ್ದದಿಂದ ತೋರಿಬರುವಾಗ ಇಂತಹ ಪರಾಧೀನನಾಗಿರುವವನನ್ನು ಕುರಿತು **ಶರಣಂವ್ರಜ** ಎಂದು ವಿಧಿಸಬಹುದೋ ? ಅಂತಹ ವಿಧಿಯು ನಿರರ್ಥಕವಲ್ಲವೋ? ಸರ್ವೇಶ್ವರನೇ ಸಂಪೂರ್ಣ ಸರ್ವಜ್ಞನು ತನಗೆ ಅಧೀನನಾಗಿ ದಾಸನಾಗಿಯೂ ಸಂಪೂರ್ಣ ಅಶಕ್ತನಾಗಿಯೂ ಇರುವ ಚೇತನನನ್ನು ಕುರಿತು ತಾನೇ ಅನುಗ್ರಹಿಸ ತಕ್ಕದ್ದು ನ್ಯಾಯವು; ವ್ರಜ ಎಂದು ವಿಧಿಸುವದೇ ನ್ಯಾಯವಲ್ಲವು ಎಂದು ಕೆಲವರು ಆಕ್ಷೇಪಿಸುವರು "ಕೆಲವರು" ಎಂದು ಶ್ರೀ ದೇಶಿಕರವರೇ ಹೇಳಿರುವಾಗ ನಾವು ಅವರು ಯಾರೆಂದು ತಿಳಿಸುವದು ನ್ಯಾಯವಲ್ಲವು ಅಭಿಪ್ರಾಯವು ಶಾಸ್ತ್ರರೀತ್ಯಾ ಸಮಂಜಸವಲ್ಲವೆಂದು ಹೇಳಬಹುದು ಇದು ಶಾಸ್ತ್ರಪದ್ಧತಿಗಳನ್ನು ಪರಿಶೀಲಿಸಿ ತಿಳಿಯದಿರುವ ಆಕ್ಷೇಪಣೆಯು ಇದನ್ನು ಚೆನ್ನಾಗಿ ಉಪಪಾದಿಸಿ, ಈ ಆಕ್ಷೇಪಣೆಗೆ ಇದು ಪಾರತಂತ್ರ್ಯಕಾಷ್ಠೈಯೈ" ಎಂದಾರಂಭಿಸಿದ ವಾಕ್ಯ ಮೊದಲುಮಾಡಿಕೊಂಡು, **"ಆಗೈಯಾಲ್ ಇಙ್ಗು 'ವ್ರಜ' ಎನ್ರವಿಧಿಕ್ಕುಕ್ಕುರೈಯಿಲ್ಲೈ"** ಎಂದು ಮುಗಿಸಿಹೇಳಿದ ವಾಕ್ಯಗಳವರೆಗೂ ಸಮಾಧಾನವು

**ಇವ್ವಿಡತ್ತಿಲ್** - ಈ ಸ್ಥಳದಲ್ಲಿ, ಈ ಸಂದರ್ಭದಲ್ಲಿ, **ಶಿಲರ್** - ಕೆಲವರು **ಸ್ವತಂತ್ರನೈಕುರಿತ್ತನ್ರೋ** - ಸ್ವತಂತ್ರನಾಗಿರುವವನನ್ನು ಕುರಿತ್ತು ಅಲ್ಲವೇ **ಒನ್ಱೈವಿಧಿಪ್ಪದು** - ಯಾವುದೋ ಒಂದನ್ನು ಮಾಡು ಎಂದು ವಿಧಿಸತಕ್ಕದ್ದು, **ಅತ್ಯಂತಪರತಂತ್ರನಾಕ**-ಪರಮಪುರುಷನಿಗೆ ಅತ್ಯಂತ ಪರತಂತ್ರನಾಗಿ, **ಅಧ್ಯಾತ್ಮಶಾಸ್ತ್ರಙ್ಗಳಿಲುಮ್** - ಜೀವಾತ್ಮನಸ್ವರೂಪವನ್ನು ಬೋಧಿಸುವ ಶಾಸ್ತ್ರಗಳಲ್ಲಿ, ಮತ್ತೂ **ಮೂಲ ಮನ್ತ್ರಾದಿಗಳಿಲುಮ್** - ಮೂಲಮನ್ತ್ರಾದಿಗಳಲ್ಲಿಯೂ **ಶಿಕ್ಷಿತನಾನ** - ಉಪದೇಶಿಸಲ್ಪಟ್ಟ, **ಅಧಿಕಾರಿಯೈಕ್ಕುರಿತ್ತು** - ಅಧಿಕಾರಿಯನ್ನು ಕುರಿತು, **'ವ್ರಜ' ಎನ್ರೋರು ಕರ್ತವ್ಯತ್ತೈ** - ವ್ರಜ ಎಂಬುದಾಗಿ ಒಂದು **ಕರ್ತ**

**ವ್ಯತ್ತೈ ವಿಧಿಕ್ಕೊ ವ್ವುಡಿಯೆನ್ನನ್ರೋ ಶೊಲ್ಲುವರ್ಗಳ್. ಇದು ಪಾರತಂತ್ರ ಕಾಷ್ಠ್ಯೈಯೈ ಪರಾ ಮರ್ಶಿಯಾಮಲ್ ಶೊನ್ನಪಡಿ.**

**ಎಙ್ಙನೇಎನ್ರಿಲ್ (೧) "ಕರ್ತ್ತಾಶಾಸ್ತ್ರಾರ್ಥವತ್ವಾತ್" (೨) "ಪರಾ**

---

**ವ್ಯಾಂಶ - ವಿಧಿಕ್ಕುನ್ನುಡಿಯುನ್ನನ್ರೋ** ವಿಧಿಸುವಂತಾದ್ದು, **ಎನ್ರುಶೊಲ್ಲುವರ್ಗಳ್** - ಎಂದು ಆಕ್ಷೇಪಿಸುವರು ವ್ಯತ್ತಿಂಡರೂಪದಲ್ಲಿ ಪರತಂತ್ರನಾಗಿರುವವನನ್ನು ಕುರಿತು, **ವ್ರಜ** ಎಂದು ಕರ್ತೃವ್ಯಾಂಶವನ್ನು ವಿಧಿಸಬಹುದೋ? ಸ್ವತಂತ್ರನಾಗಿದ್ದರೆ ವಿಧಿಸಬಹುದು ಎಂಬುದು ಕೆಲವರ ಆಕ್ಷೇಪವು ಶರಣಹೊಂದುವದಕ್ಕೆ ಕೂಡ ಸಾಮರ್ಥ್ಯವಿಲ್ಲದವನನ್ನು ಶರಣಹೊಂದು ಎಂದು ವಿಧಿಸುವದು ಅಸಂಗತವೆಂಬ ಭಾವವು ಇದು ಪಾರತಂತ್ರದ ಮಹಿಮೆಯನ್ನು ಚನ್ನಾಗಿ ವಿಮರ್ಶಿಸಿ ತಿಳಿಯದವರ ಆಕ್ಷೇಪವೆನ್ನುತ್ತಾರೆ **ಇದು** - ಈ ಆಕ್ಷೇಪವು, **ಪಾರತಂತ್ರ್ಯಕಾಷ್ಠ್ಯೈಯೈ**- ಈ ಚೇತನನ ಪಾರತಂತ್ರದ ಮಹಿಮೆಯನ್ನೂ, **ಪರಾಮರ್ಶಿಯಾಮಲ್** - ವಿಚಾರಮಾಡಿ ತಿಳಿಯದೆ, **ಶೊನ್ನಪಡಿ** - ಹೇಳಿದಹಾಗೆ ಎಂದು ಭಾವಿಸತಕ್ಕದ್ದಾಗಿರುತ್ತದ ಈ ಚೇತನನಿಗೆ ವಿದ್ಯ್ಯನುಸಾರವಾಗಿ ಭಗವಂತನಿಗೆ ಅಧೀನವಾದ ಕರ್ತೃವ್ಯ ಉಂಟೆಂಬುದನ್ನು ವಿಮರ್ಶಿಸಿ ತಿಳಿಯದೇ ಹೇಳಿದ ಆಕ್ಷೇಪವೆಂದು ಹೇಳಿದರು ಇದನ್ನು ಚೆನ್ನಾಗಿ ಉಪಪಾದಿಸಿ, ಸಂದೇಹವೆಲ್ಲಾ ಹೋಗುವಹಾಗೆ ತಿಳಿಸುತ್ತಾರೆ —

**ಎಙ್ಙನೇಎನ್ರಿಲ್** - ಹೇಗೆ ಎಂದರೆ—ಈ ವಿಷಯದಲ್ಲಿ ಮೂರು ಬ್ರಹ್ಮಸೂತ್ರಗಳುಂಟು; ಅವುಗಳಲ್ಲಿ ಪರಸ್ಪರ ವಿರೋಧವಿರುವ ಎರಡು ಸೂತ್ರಗಳನ್ನೂ ಇಲ್ಲಿ ಉದಾಹರಿಸಿರುತ್ತಾರೆ. ಮೂರನೆಯ ಸೂತ್ರಾಭಿಪ್ರಾಯವು ಇವೆರಡಕ್ಕೂ ಸಮಾಧಾನವಾದುದರಿಂದ ಅದನ್ನು ಮುಂದೆ ಉಪಪಾದಿಸಿರುತ್ತಾರೆ **(೧) "ಕರ್ತ್ತಾಶಾಸ್ತ್ರಾರ್ಥವತ್ವಾತ್"** - "ಆತ್ಮಾನಿಗೆ ಕರ್ತೃತ್ವವೇ ವಿನಾ, ಅಚಿತ್ತಿಗೆ ಇಲ್ಲವು ಹಾಗಾದರೆ **ಯಜೇತ ಉಪಾಸೀತ** ಎಂದು ವಿಧಿಸುವ ಶಾಸ್ತ್ರಗಳಿಗೆ ಏನುಪ್ರಯೋಜನ ಉಂಟಾಯಿತು? ಇದನ್ನು ಮಾಡು ಇದನ್ನು ಮಾಡಬೇಡವೆಂದು ಶಾಸ್ತ್ರವು ಹೇಳಬಹುದು ಎಂಬ ಭಾವವು" **(೨) ಪರಾತ್ತುತಚ್ಛ್ರುತೇಃ** ಎಂಬ ಸೂತ್ರದಲ್ಲಿ ಹೇಳುವದೇನೆಂದರೆ—ಮೇಲೆ ಹೇಳಿದ ಚೇತನನಿಗಿರುವ ಕರ್ತೃತ್ವವೇನು ಸರ್ವಸ್ವತಂತ್ರವಾದುದೇ ಎಂಬ ಸಂದೇಹದಲ್ಲಿ ತೋರುವದೇನೆಂದರೆ; ಹೀಗೆ ಮಾಡು, ಹೀಗೆ ಮಾಡಬೇಡ ಎಂದು ಹೇಳಬೇಕಾದರೆ, ಮಾಡುವದಕ್ಕೂ ಬಿಡುವದಕ್ಕೂ ಸಹ ಸ್ವಾತಂತ್ರ್ಯಬೇಕಲ್ಲವೇ ಎಂಬ ಸಂದೇಹದಲ್ಲಿ, ಈ ಸೂತ್ರದಲ್ಲಿರುವ **ತು** ಶಬ್ದವು ಆ ಶಂಕಾವನ್ನು ನಿರಾಕರಿಸುತ್ತದೆ-ಆ ಜೀವನಗಿರುವ ಕರ್ತೃತ್ವವು, **ಪರಾತ್** -

---

(೧) ಬ್ರ ಸೂ ೨ ೩ ೩೩ (೨) ಬ್ರ ಸೂ ೨ ೩. ೪೦

**ತ್ತೊತಚ್ಛ್ರುತೇಃ" ಎನ್ರು ವೇದಾಂತತ್ತಿಲ್ ಅರುದಿಯಿಟ್ಟಪಡಿಯೇ, ಇವನಕ್ಕು ಭಗವದಧೀನ ಕರ್ತೃತ್ವಮುಂಡಾಗೈಯಾಲೇ ಇವನೈಪ್ಪತ್ತ ವಿಧಿಸ್ಕಕ್ಕುರೈಯಿಲ್ಲೈ**

---

ಸ್ವತಂತ್ರವಾದುದಲ್ಲವು, ಪರಮಪುರುಷನಿಗೆ ಅಧೀನವಾಗಿರುವದರ ಜೆಶೆಯಿಂದ ಈತ ನಿಗೆ ಕರ್ತೃತ್ವವು ಎಂಬರ್ಥವು **ತತ್** - ಅದು, ಆ ಅಭಿಪ್ರಾಯವು **ಶ್ರುತೇಃ** - ಶ್ರುತಿಯಲ್ಲೇ ಹೇಳಿರುತ್ತದೆಯಾದುದರಿಂದ, ಎಲ್ಲಿ ಎಂದರೆ **"ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ,"** ಸರ್ವವನ್ನೂ ವ್ಯಾಪಿಸಿ, ಎಲ್ಲಕ್ಕೂ ಆತ್ಮವಾಗಿ, ಎಲ್ಲಾ ಚೇತನರಿಗೂ ನಿಯಾಮಕನು ಎಂಬ ಅರ್ಥವು **"ಯಆತ್ಮಾನ ಮಂತರೋ ಯಮಯತಿ"** ಆತ್ಮಾವನ್ನು ಅನುಪ್ರವೇಶಮಾಡಿರುವವರಿಂದ ಆತನಿಗೂ ನಿಯಾಮಕನು ಎಂಬರ್ಥವು ಹಾಗೆಯೇ **"ಪ್ರೇರಿತಾರಂಚಮತ್ವಾ"** ಎಂದೂ ಹೇಳಲ್ಪಟ್ಟಿರುತ್ತದೆ" ಹೀಗೆ ಎಲ್ಲರೂ ಪರಮಾತ್ಮಾಧೀನವಾದರೆ ಶ್ರುತಿಯ ವಿಧಿನಿಷೇಧ ವಾಕ್ಯಗಳು ನಿರರ್ಥಕವಲ್ಲವೋ? ಶಾಸ್ತ್ರವೈಯರ್ಥವೇನೂ ಇಲ್ಲವೆಂದು ಹೇಳುವದಾದರ, ಪರಮಪುರುಷಾಧೀನವೆಂದು ಹೇಳಿದ ನಂತರ ವಿಧಿ ನಿಷೇಧ ವಶ್ಯತ್ವವೂ ಪರಮಪುರುಷನಿಗೇನೇ ಹೇಳಬೇಕಾಗುತ್ತದ ಹಾಗೆ ಪರಮಪುರುಷವಶ್ಯವಾದರೆ ಲೋಕದಲ್ಲಿ ಎಲ್ಲರೂ ಸನ್ಮಾರ್ಗಿಗಳಾಗಬೇಕೇ ವಿನಾ ದುರ್ಮಾರ್ಗಿಗಳೇ ಕೂಡದು ಏಕೆಂದರೆ ಪರಮಪುರುಷನಿಗೆ ಜೀವಕರ್ತೃತ್ವವು ಅಧೀನವಾದರ, ಪರಮಪುರುಷನೂ ಸರಿಯಾದ ಮಾರ್ಗದಲ್ಲೇ ನಡೆಯುವಹಾಗೆ ಪ್ರೇರಿಸಬೇಕಲ್ಲವೋ,? ಲೋಕದಲ್ಲಿ ಅಧರ್ಮವು ಹೆಚ್ಚಾಗಿರುತ್ತದಲ್ಲಾ ಎಂಬೀ ಆಕ್ಷೇಪಣಗಳಿಗೆ ಸಮಾಧಾನವಾಗಿ ಮುಂದಿನ ಸೂತ್ರವಾದ **"ಕೃತಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧಾ ವೈಯರ್ಥ್ಯಾದಿಭ್ಯಃ"** (೨ ೩ ೪೧) ಹೇಳುತ್ತದೆ; ಏನೆಂದರೆ—ಇಲ್ಲಿಯೂ **ತು** ಶಬ್ದವು **ಈ** ಆಕ್ಷೇಪವನ್ನು ನಿರಾಕರಿಸುವದಕ್ಕಾಗಿ ಪ್ರಥಮ ಪ್ರವೃತ್ತಿಯಲ್ಲಿ ಜೀವನ ಸಙ್ಕಲ್ಪ, ಪ್ರಯತ್ನಗಳನ್ನು ಅಪೇಕ್ಷಿಸಿ ಪರಮ ಪುರುಷನು ಚೇತನನನ್ನು ಪ್ರವರ್ತಿಸುವಹಾಗೆ ಮಾಡುತ್ತಾನೆ, ಆದುದರಿಂದ ಪ್ರಥಮ ಪ್ರವೃತ್ತಿಯಲ್ಲಿ ತನ್ನ ಶಾಸ್ತ್ರಾನುಸಾರ ನಡೆಯುವ ಸ್ವಾತಂತ್ರವನ್ನೂ ಕೊಟ್ಟಿರುತ್ತಾನೆ ಹೀಗೆ ಸ್ವಾತಂತ್ರ್ಯವನ್ನು ಕೊಡದೇ ಹೋದರೆ ಹೀಗೆ ಮಾಡು, ಹೀಗೆ ಮಾಡಬೇಡ, ಇತ್ಯಾದಿ ವಿಧಿ ನಿಷೇಧ ಶಾಸ್ತ್ರಗಳಿಗೆ ವೈಯರ್ಥ್ಯವುಂಟಾಗುತ್ತದೆ ಆದುದರಿಂದ ಸರ್ವೇಶ್ವರನು ಈ ಚೇತನನಿಗೆ ಪ್ರಥಮ ಪ್ರವೃತ್ತಿಯಲ್ಲಿ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆ ಈ ಚೇತನನ ಸಂಕಲ್ಪ ಪ್ರವೃತ್ತಿಗಳು ಆತನ ಪೂರ್ವಕರ್ಮಾಧೀನವಾದವೆಂದು ತಿಳಿಯತಕ್ಕದ್ದು ಇವುಗಳನ್ನೆಲ್ಲಾ ಮುಂದಿನ ವಾಕ್ಯಗಳಿಂದ ಉಪದೇಶಿಸುತ್ತಾರೆ" **ಎನ್ರು ವೇದಾಂತತ್ತಿಲ್ ಅರುದಿಯಿಟ್ಟಪಡಿಯೇ** - ಎಂಬುದಾಗಿ ವೇದಾಂತದಲ್ಲಿ ಎಂದರೆ ಬ್ರಹ್ಮ

**ಅಚಿತ್ತುಕ್ಕಳ್ ಶಬ್ದಾದಿಗಳೈ ಈಶ್ವರ ಮುಂಡಾಕ್ಕ ಚ್ಚುಮಕ್ಕಿರಾಪ್ಪೋಲೆ ಇಪ್ಪೊಳವು ಸ್ವಾತಂತ್ರ್ಯತ್ತೈ ಯೆಡುತ್ತು (ಕುಡಕ್ಕ) ಚ್ಚುಮಕ್ಕೈಯುಮ್ ಇವನುಕ್ಕು ಭಗವತ್ಪಾರತಂತ್ರ್ಯ ಕಾಷ್ಠೈಯಿರುನ್ದಪಡಿ.**

ವಿಸ್ತೈಯಲ್ಲಿ ಹೇಳುವಹಾಗೆ, **ಇವನುಕ್ಕು** - ಈ ಅಧಿಕಾರಿಗೆ **ವ್ರಜ** ಎಂದು ಹೇಳಿದ ಅಧಿಕಾರಿಗೆ, **ಉಂಡಾಗೈಯಾಲೇ** - ಉಂಟಾಗುವದರಿಂದ **ಇವನೈಪ್ಪತ್ತ** - ಈತ ನನ್ನು ಕುರಿತು, **ವಿಧಿಕ್ಕಕ್ಕುರಿಯಿಲ್ಲೈ** - ವಿಧಿಸುವದರಲ್ಲಿ ಏನೊಂದೂ ನ್ಯೂನತೆ ಯಿಲ್ಲವು, ಅನಾಮಂಜಸ್ಯವೇನೂ ಇಲ್ಲವೆಂಬ ತಾತ್ಪರ್ಯವು

**ಪರಾತ್ತುತಚ್ಛ್ರುತೇಃ** ಎಂಬ ಸೂತ್ರದಲ್ಲಿ ಹೇಳಿರುವಹಾಗೆ ಸ್ವಾಮಿದತ್ತ ವಾದ ಸ್ವಾತಂತ್ರ್ಯವನ್ನು ವಹಿಸಿ, ಆತನ ವಿಧಿ ನಿಷೇಧ ವಾಕ್ಯಗಳಿಗೆ ಅನುಗುಣ ವಾಗಿ ನಡೆಯುವವೇ ಪಾರತಂತ್ರ್ಯಕಾಷ್ಠೆಯೆಂದೂ, ಹಾಗೆ ನಡೆಯದೇ ಇರುವದು ಚೇತನನ ಶೇಷತ್ವರೂಪ ಪಾರತಂತ್ರ್ಯಕ್ಕೆ ಭಂಗವೆಂದು ಉಪದೇಶಿಸುತ್ತಾರೆ ಆದುದರಿಂದ ಸ್ವಾಮಿದತ್ತವಾದ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು, ಸ್ವಾಮಿದತ್ತವಿವೇಕ ಜ್ಞಾನಾನುಸಾರ ಆತನ ವಿಧಿ ನಿಷೇಧ ವಾಕ್ಯಗಳಿಗೆ ಅನುಗುಣ ವಾಗಿಯೇ ನಡೆಯತಕ್ಕದ್ದೆಂದು ಹೇಳಿ, ಇದರಿಂದ **ವ್ರಜ** ಎಂದು ವಿಧಿಸಿರುವವರ ಲ್ಲೇನೂ ಅನಾಮಂಜಸ್ಯವಿಲ್ಲವೆಂದು ಮುಂದೆ ಹೇಳುತ್ತಾರೆ ಅದು ವ್ಯಕ್ತಪಡು ವದಕ್ಕೆ ಒಂದು ದೃಷ್ಟಾಂತವನ್ನೂ ತಿಳಿಸುತ್ತಾರೆ—**ಅಚಿತ್ತುಕ್ಕಳ್** - ಪೃಥಿವೀ ಅಪ್ಪು ಮೊದಲಾದವುಗಳು, **ಶಬ್ದಾದಿಗಳೈ**-ಗಂಧರೂಪರಸಾದಿ ವಿಷಯಗಳನ್ನೂ, **ಈಶ್ವರಣ್ ಉಂಡಾಕ್ಕ** - ಸರ್ವೇಶ್ವರನು ಉಂಟುಮಾಡಲಾಗಿ, **ಚುಮಕ್ಕಿರಾಪ್ಪೋಲೆ** - ವಹಿಸುವಹಾಗೆ, **ಇಪ್ಪೊಳವು** - ಈ ಸಂದರ್ಭದಲ್ಲೂ, **ಸ್ವಾತಂತ್ರ್ಯತ್ತೈ ಕುಡುಕ್ಕ**-ಸ್ವಾತಂತ್ರ್ಯವನ್ನು ಸ್ವಾಮಿಯು ಕೊಡಲಾಗಿ, **ಚ್ಚುಮಕ್ಕೈಯುಮ್** - ಅದನ್ನು ಶಿರಸಾವಹಿಸೋಣವೂ, **ಭಗವತ್ಪಾರತಂತ್ರ್ಯ ಕಾಷ್ಠೈ ಯಿರುನ್ದಪಡಿ** - ಭಗವತ್ಪಾರತಂತ್ರ್ಯದ ಯಥಾರ್ಥವಾದ ಸ್ಥಿತಿಯು ಚೇತನನ ವಿಷಯವು ಹಾಗಿರಲಿ, ಅಚೇತನವಾದ ಪಂಚಭೂತಗಳ ವಿಷಯವನ್ನು ವಿಮರ್ಶಿಸಿ ನೋಡಿದರೆ ಈ ವಿಷಯವು ವ್ಯಕ್ತವೆನ್ನುತ್ತಾರೆ ಪಂಚಭೂತಗಳಿಗೆ ರೂಪರಸ ಗಂಧಾದಿಗುಣಗ ಳನ್ನು ಸ್ವಾಮಿಯು ಉಂಟುಮಾಡಲು, ಅವುಗಳನ್ನು ಈ ಪಂಚಭೂತಗಳು ಹೇಗೆ ವಹಿಸಿ ಇವೆಯೋ ಎಂದರೆ ವಿವೇಕ ಜ್ಞಾನವಿಲ್ಲದೇ ಇರುವ ಈ ಅಚಿತ್ತುಗಳೇ ಸ್ವಾಮಿ ದತ್ತವಾದುವಾಗಿ ಹೇಗೆ ವಹಿಸಿರುತ್ತವೆಯೋ ಹಾಗೆಯೇ ಈ ಚೇತನನು ಸಹ ಪರಮ ಪುರುಷನಿಗೆ ಅಧೀನವಾಗಿರುವದೇ ಸಹಜ ಸ್ವಭಾವವಾಗಿ ಸ್ವಾಮಿದತ್ತವಾದ ಈ ಸ್ವಾತಂತ್ರವನ್ನು ತನ್ನ ಪ್ರಥಮ ಪ್ರವೃತ್ತಿಯಲ್ಲಿ ವಹಿಸಿ, ಆತನ ವಿಧಿ ನಿಷೇಧ ವಾಕ್ಯಗಳಿಗನುಗುಣವಾಗಿ ನಡೆಸುವದೇ ತನ್ನ ಪಾರತಂತ್ರ್ಯದ ಪರಾಕಾಷ್ಠೆಯ ದಶೆ ಯೆಂದು ಉಪದೇಶಿಸಲ್ಪಟ್ಟಿತು

**ಇವನುಕ್ಕೊರುವಳಿಯಾಲುಮ್ ಕರ್ತೃತ್ವಮಿಲ್ಲೈ ಎನ್ರಿಲ್ ಪ್ರಕೃತ್ಯ ವಿದ್ಯಾದಿಗಳುಕ್ಕು ಕರ್ತೃತ್ವಂಶೊಲ್ಲಗಿರ ಸಿದ್ಧಾಂತ ತುಲ್ಯಮಾಂ ಕರ್ತೃತ್ವಂಸ್ವಾಧೀನ**

ಸ್ವಾತಂತ್ರ್ಯವು ಸ್ವತಃ ಪ್ರಾಪ್ತವಾದರೆ ಈ ಚೇತನನ ಪಾರತಂತ್ರ್ಯಕ್ಕೆ ವಿರೋಧಿಯು ಈಶ್ವರನೇ ಕೊಟ್ಟದಾದರೆ ವಿರೋಧಿಯಲ್ಲವು ಆತನು ಹೇಳಿದ ಹಾಗೆ ನಡೆಸಿ ಬಿಟ್ಟರೆ ಅದು ಪಾರತಂತ್ರ್ಯಕಾಷ್ಠೆ ಎನಿಸುತ್ತದೆಂಬ ಭಾವವು ಈಶ್ವರನು ಚೇತನನಿಗೆ ಸ್ವಾತಂತ್ರ್ಯವನ್ನು ಕೊಡಬಹುದು, ಆದರೆ ಚೇತನನಿಗೆ ಅದು ಇಷ್ಟವಿಲ್ಲದುದಾದರೆ, ಅಂತಹ ಪ್ರವೃತ್ತಿಯು ಪಾರತಂತ್ರವುಳ್ಳದೆಂದೆನಿಸುವದಿಲ್ಲವು

ಆದರೆ ಭಗವಂತನಿಗೆ ಅಧೀನ ಕರ್ತೃತ್ವವು ಚೇತನನಿಗಿಲ್ಲವೆಂದು ವಾದತಂದರೆ ಆಗ ಸಾಂಖ್ಯರ ಮತ್ತು ಮಾಯಾವಾದಿಗಳ ಅಭಿಪ್ರಾಯವಾಗುತ್ತದೆಂದು ಹೇಳುತ್ತಾರೆ ಹೇಗೆಂದರೆ—ಹೀಗೆ ಚೇತನನಿಗೆ, ಪರಾಧೀನವಾಗಿಯೂ ಸ್ವಪ್ರಯತ್ನಾಶ್ರಯರೂಪವಾಗಿಯೂ ಇರುವ ಕರ್ತೃತ್ವವಿಲ್ಲವೆಂದರೆ, ಅದೇನು (೧) ಕರ್ತೃತ್ವವೇ ಚೇತನನಿಗಿರುವದಿಲ್ಲವೆಂಬ ಅಭಿಪ್ರಾಯದಿಂದಲೇ, ಅಥವಾ (೨) ಪರಾಧೀನವಾಗಿರುವದರಿಂದ ಸ್ವಪ್ರಯತ್ನಕ್ಕೆ ಅವಕಾಶವೆಲ್ಲಿದೆ ಎಂಬ ಅಭಿಪ್ರಾಯದಿಂದಲೇ, ಅಥವಾ (೩) ಪ್ರಯತ್ನಾಶ್ರಯರೂಪಕರ್ತೃತ್ವವೆಲ್ಲಿಯದು, ಅದು ಜ್ಞಾತೃತ್ವಮಾತ್ರವಾಗಿರುವದರಿಂದಲೇ, ಎಂದು ವಿಕಲ್ಪಿಸಿ, ಎರಡು ಸಂದರ್ಭಗಳಲ್ಲೂ ಉಂಟಾಗುವ ಅಸಾಮಂಜಸ್ಯವನ್ನು ಪ್ರದರ್ಶಿಸಿ ಮೂರನೆಯ ವಿಕಲ್ಪವನ್ನು ದೂಷಿಸುತ್ತಾರೆ — (೧) ನೆಯ ವಿಕಲ್ಪದಲ್ಲಿ ಚೇತನನಿಗೆ ಕರ್ತೃತ್ವವಿಲ್ಲದಿದ್ದರೆ ಆತನೊಂದಿಗೆ ಇರುವ ದೇಹರೂಪ ಪ್ರಕೃತಿಗೆ ಕರ್ತೃತ್ವವನ್ನು ಸಾಂಖ್ಯರಹಾಗೆ ಹೇಳಬೇಕಾಗುತ್ತದೆ ಅಥವಾ ಮಾಯಾವಾದಿಗಳಹಾಗೆ ಅವಿದ್ಯೆಗೆ ಕರ್ತೃತ್ವವನ್ನು ಹೇಳಬೇಕಾಗುತ್ತದೆ ಇವೆರಡೂ ಅಪಸಿದ್ಧಾಂತಗಳೆನ್ನುತ್ತಾರೆ—**ಇವನುಕ್ಕು** - ಈ ಚೇತನನಿಗೆ, **ಒರು ವಳಿಯಾಲುಮ್** - ಒಂದು ಮಾರ್ಗದಿಂದಲೂ, ಒಂದು ಪ್ರಕಾರವಾಗಿಯಾಗಲಿ ಎಂದರೆ ಸ್ವಾಧೀನವಾಗಿಯಾಗಲಿ ಅಥವಾ ಸ್ವತಂತ್ರವಾಗಿಯಾಗಲಿ ಎಂಬರ್ಥವು **ಕರ್ತೃತ್ವಮಿಲ್ಲೈ ಎನ್ರಿಲ್** - ಕರ್ತೃತ್ವವೇವಿಲ್ಲವೆಂದರೆ, **ಪ್ರಕೃತ್ಯ ವಿದ್ಯಾದಿಗಳುಕ್ಕು** - ಸಾಂಖ್ಯರಹಾಗೆ ದೇಹಕ್ಕೂ, ಶಾಂಕರರಹಾಗೆ ಅವಿದ್ಯೆಗೂ, **ಕರ್ತೃತ್ವಂ ಶೊಲ್ಲುಗಿರ**-ಕರ್ತೃತ್ವವನ್ನು ಹೇಳುವ, **ಸಿದ್ಧಾಂತತುಲ್ಯಮಾಂಮ್**-ಸಿದ್ಧಾಂತಗಳಿಗೆ ಸಮಾನವಾಗುತ್ತದೆ ಎಂದರೆ ಅಪಸಿದ್ಧಾಂತವಾಗುತ್ತದೆಂಬ ಭಾವವು ಸಾಂಖ್ಯರಿಗೆ ವೇದವು ಪ್ರಮಾಣವಲ್ಲವು ಆ ಕಾಪಿಲ ಸಿದ್ಧಾಂತಪ್ರಕಾರವಾಗಿ ಪ್ರಕೃತಿಗೇ ಎಲ್ಲಾ ಕರ್ತೃತ್ವವು ಚೈತನ್ಯಮಾತ್ರವುಳ್ಳ ಜೀವನು ಪಾಷಾಣದಹಾಗೆ ಏನುಮಾಡಲು ಶಕ್ತಿಯಿಲ್ಲದಿರುವನು ಪ್ರವೃತ್ತಿಯೆಲ್ಲಾ ದೇಹದಿಂದುಂಟಾಗಿ ದೇಹವೇ ಮಾಡುತ್ತದೆ ಜೀವನು ತಾನು ಮಾಡಿದೆನೆಂದು ಆರೋಪಿ

ಸಿಕೊಳ್ಳುವನು. ಈ ಸಿದ್ಧಾನ್ತವನ್ನೇ ಗೀತೆಯು **"ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ। ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ"** ಗೀ ೩ ೨೭ ಎಂಬ ಶ್ಲೋಕದಲ್ಲಿ ಹೇಳಿರುತ್ತದೆಂದು ಭ್ರಮಿಸುವನು" ಈ ಶ್ಲೋಕದ ಸರಿಯಾದ ಅರ್ಥಕ್ಕೆ ದಾಸನು ಬರೆದಿರುವ ಗೀತಾರ್ಥವಾದ ಆಚಾರ್ಯ ಹೃದಯಾನ್ವೇಷಿಯ ೧೩೫ ನೆಯ ಪುಟವನ್ನು ನೋಡಿ ಸ್ಫಟಿಕದ ಹತ್ತಿರ ಕೆಂಪು ದಾಸವಾಳ ಹೂವನ್ನಿಟ್ಟರೆ, ಸ್ಫಟಿಕದಲ್ಲಿ ಕೆಂಪು ಬಣ್ಣವು ತೋರುವ ಹಾಗೆ, ಆತ್ಮನ ಕರ್ತೃತ್ವವು ಭ್ರಮರೂಪವೇ ವಿನಾ ಯಥಾರ್ಥವಾದುದಲ್ಲವೆಂಬುದು ಅವರ ಮತವು ಅದು ಹೇಗೆ ಅಪಸಿದ್ಧಾನ್ತವೆಂದರೆ, ಜೀವಾತ್ಮನು ಅಣುವು; ಆತನಿಗೆ ಶರೀರವಿಲ್ಲದಿದ್ದರೆ ಏನೊಂದು ಕಾರ್ಯವನ್ನೂ ಮಾಡಲಾರನು ಕರ್ಮಾನು ಗುಣವಾಗಿ ಪ್ರಾಪ್ತವಾದ ಶರೀರದ ಮೂಲಕವಾಗಿಯೇ ಕರ್ತೃತ್ವವು ಬರೀ ಶರೀರಕ್ಕೆ ಕರ್ತೃತ್ವವಿಲ್ಲವೆಂಬುದು ಆತ್ಮನು ದೇಹಾವಸಾನಕಾಲದಲ್ಲಿ ದೇಹವನ್ನು ತ್ಯಜಿಸಿ ಹೋಗಿ ಶರೀರವು ಪ್ರೇತವಾದಾಗ ಯಾವ ಪ್ರವೃತ್ತಿಯೂ ಇಲ್ಲವೆಂಬುದು ವ್ಯಕ್ತವು. ಅದು ಪರಮಾತ್ಮಾಧೀನವಾಗಿ ಕರ್ಮಾನುಗುಣವಾಗಿ ಉಂಟಾದ ಶರೀರ ಮೂಲಕವಾಗಿ ಆತನು ಪ್ರೇರಕನಾಗಿ ನಡೆಯುತ್ತದೆಂಬುದು ಸಿದ್ಧಾನ್ತವು ಇದರಿಂದ ಅವಿದ್ಯೆಗೇ ಕರ್ತೃತ್ವವೆಂಬ ಶಾಂಕರ ಸಿದ್ಧಾನ್ತವು ನಿರಸ್ತವು. ಯದ್ಯಪಿ ಕರ್ತೃತ್ವವು ಅವಿದ್ಯಾದಿ ಪ್ರಾರಬ್ಧ ಕರ್ಮಾನುಸಾರವಾಗಿ ಗೀತೆಯಲ್ಲಿ **"ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇ ಜ್ಞಾನವಾನಪಿ। ಪ್ರಕೃತಿಂಯಾನ್ತಿ ಭೂತಾನಿ ನಿಗ್ರಹಂ ಕಿಂಕರಿಷ್ಯತಿ"** ಎಂಬಲ್ಲಿ ಹೇಳಿರುವಹಾಗೆ ನಡೆಯುತ್ತದೆ ಇದಕ್ಕೆ ಅಪಾರ್ಥವನ್ನು ಹೇಳಿ ಅವಿದ್ಯೆಯೇ ಕರ್ತೃತ್ವಕ್ಕೆ ಕಾರಣವೆಂಬ ಅಭಿಪ್ರಾಯವು ಶಾಸ್ತ್ರಸಮ್ಮತಿಯಿಲ್ಲದುದು ಅದ್ವೈತಿಗಳು ಹೇಳುವಹಾಗೆ ಆತ್ಮಾ ಜ್ಞಾನ ಮಾತ್ರವಲ್ಲವು ಆತನಿಗೆ ಜ್ಞಾತೃತ್ವವೂ ಉಂಟು ಅಂತಹ ಜ್ಞಾನ ಚಿಕೀರ್ಷಾ ಪ್ರಯತ್ನಗಳಿರುವದರಿಂದ, ಈ ಚೇತನನಿಗೆ ಪರಾಧೀನ ಕರ್ತೃತ್ವವೂ ಸಲ್ಲುತ್ತದೆ ಜ್ಞಾನ ಚಿಕೀರ್ಷಾ ಪ್ರಯತ್ನಗಳಲ್ಲಿ ಸರ್ವೇಶ್ವರನಿಂದ ದಯಪಾಲಿಸಲ್ಪಟ್ಟ ಸ್ವಾತಂತ್ರ್ಯವು ಈ ಅಧಿಕಾರಿಗೆ ಉಂಟೆಂದು ಮುಂದ ಹೇಳುತ್ತಾರೆ **ಪ್ರಕೃತ್ಯವಿದ್ಯಾದಿ** - ಎಂಬಲ್ಲಿ ಆದಿ ಪದದಿಂದ ಬೌದ್ಧರ ಅಭಿಪ್ರಾಯವೂ ಸಙ್ಗ್ರಹೀತವು ಸಾಂಖ್ಯ ಮಾಯಾವಾದಿಗಳ ಅಭಿಪ್ರಾಯದ ಪ್ರಕಾರ ಜೀವಾತ್ಮ ಪರಮಾತ್ಮ ಭೇದವಿಲ್ಲದೆ ಪರಬ್ರಹ್ಮಕ್ಕೇನೇ ಅವಿದ್ಯಾ ಸಂಬಂಧದಿಂದ ಸೃಷ್ಟಿರೂಪ ಕರ್ತೃತ್ವದಲ್ಲಿ ಅನ್ವಯಉಂಟೆಂದು ಹೇಳುತ್ತಾರೆ ತಮ್ಮ ಅಭಿಪ್ರಾಯಕ್ಕೆ **"ಆನೀತವಾದಗ್ಂ ಸ್ವಧಯಾ ತದೇಕಂ"** ಎಂಬ ಶ್ರುತಿಯನ್ನು ಉದಾಹರಿಸಿ, **ಸ್ವಧಯಾ** ಎಂಬ ಶಬ್ದಕ್ಕೆ ರೂಢಿಯಲ್ಲಿರುವ ಲಕ್ಷ್ಮಿಯೊಂದಿಗೆ ಎಂಬ ಅರ್ಥವನ್ನು ತ್ಯಜಿಸಿ, **ಸ್ವಧಯಾ** ಎಂದರೆ ಅವಿದ್ಯೆಯಿಂದ

**ಮೆನ್ನಿಲ್ ಸರ್ವಾತ್ಮನಿ ಯನ್ತಾವೊರುವನೆನ್ಗಿರವರ್ಥಂ ಕಿಡೈಯಾವೈಯಾಲೇ ನಿರೀಶ್ವರ ಸಿದ್ಧಾನ್ತಪ್ಪಡಿಯಾಮ್.**

ಎಂಬ ಅರ್ಥವನ್ನು ಹೇಳುತ್ತಾರೆ ಆದುದರಿಂದ ಪರಮಾತ್ಮನ ಸೃಷ್ಟ್ಯಾದಿ ಕರ್ತೃತ್ವಕ್ಕೆ ಅವಿದ್ಯೆಯೇ ಕಾರಣವೆಂಬುದು ಅವರುಗಳ ಅಭಿಪ್ರಾಯ

ಆಗಲಿ ಕರ್ತೃತ್ವವು ಪರಾಧೀನವಲ್ಲವು, ತನಗೇ ಅಧೀನವಾದುದು ಎಂದರೆ ಆಗ ಸರ್ವ ಚೇತನರಿಗೂ ಸ್ವತಂತ್ರವಾದುದು ಈ ಕರ್ತೃತ್ವವು ಎಂದು ಏರ್ಪಡುವದರಿಂದ, ಸಮಸ್ತ ಆತ್ಮಾವಿಗೂ ನಿಯನ್ತಾವಾಗಿ ಪ್ರೇರಕನಾಗಿ ಈಶ್ವರನೊಬ್ಬನಿದ್ದಾನೆಂಬುದು ಇಲ್ಲದಾಗುವದರಿಂದ ನಿರೀಶ್ವರವಾದವಾಗುತ್ತದೆಂದು ತಿಳಿಸುತ್ತಾರೆ **"ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ" "ಆತ್ಮಾನಮನ್ತರೋ ಯಮಯತಿ"** ಇತ್ಯಾದ್ಯನೇಕ ಶ್ರುತಿವಾಕ್ಯಗಳಿಗೂ ವಿರೋಧವಾಗುತ್ತದೆಂಬ ಭಾವವೂ ಸೂಚಿತವು ಇದನ್ನೇ ಮುಂದಿನ **"ಕರ್ತೃತ್ವಂ ಸ್ವಾಧೀನಮೆನ್ರಿಲ್"** ಎಂಬ ವಾಕ್ಯದ ಮೂಲಕ ತಿಳಿಸುತ್ತಾರೆ—**ಕರ್ತೃತ್ವಂ ಸ್ವಾಧೀನಮೆನ್ರಿಲ್**-ಕರ್ತೃತ್ವವು ಚೇತನನಾದ ತನಗೇ ಅಧೀನವಾದುದು ಎಂದರೆ, **ಸರ್ವಾತ್ಮನಿಯನ್ತಾವೊರುವನ್** - ಸರ್ವಾತ್ಮರುಗಳಿಗೂ ನಿಯನ್ತಾನಾಗಿ ಎಂದರೆ ಪ್ರೇರಕನಾಗಿರುವದಕ್ಕೆ ಅಂತರ್ಯಾಮಿಯಾಗಿ, ಒಬ್ಬ ಪರಮಾತ್ಮನು ಇದ್ದಾನೆ, **ಎನ್ಗಿರ ಅರ್ಥಮ್** - ಎಂಬ ಅಭಿಪ್ರಾಯವು, **ಕಿಡಯಾಮೆಯಾಲೇ** - ಉಂಟಾಗದೇ ಇರುವದರಿಂದ, **ನಿರೀಶ್ವರ ಸಿದ್ಧಾನ್ತಪ್ಪಡಿಯಾಮ್**-ಈಶ್ವರನಿಲ್ಲವೆಂಬ ಚಾರ್ವಾಕಾದಿ ಸಿದ್ಧಾನ್ತಗಳಿಗೆ ಸಮವಾಗುತ್ತದೆ

ಮುಂದೆ ಮೂರನೆಯ ವಿಕಲ್ಪವನ್ನು ದೂಷಿಸುತ್ತಾರೆ ಚೇತನನ ಕರ್ತೃತ್ವವು ಪ್ರಯತ್ನಾಶ್ರಯರೂಪವಾದುದಲ್ಲವು, ಜ್ಞಾತೃತ್ವಮಾತ್ರವೇ ಅದರ ಕರ್ತೃತ್ವವು; ಮಿಕ್ಕಿದ್ದೆಲ್ಲಾ ಪ್ರಕೃತಿಯನ್ನು ಕುರಿತದ್ದು ಎಂಬುದು ೩ ನೆಯ ವಿಕಲ್ಪವು. ಈ ಸಂದರ್ಭದಲ್ಲಿ ಈಶ್ವರಾಧೀನ ಕರ್ತೃತ್ವವನ್ನು ಒಪ್ಪಿಕೊಂಡು ಮಾಡುವ ಪೂರ್ವಪಕ್ಷವು ಎರಡು ವಿಧವಾಗಿ ಪೂರ್ವಪಕ್ಷವನ್ನು ತರಬಹುದು (೧) ಕರ್ತೃತ್ವವು ಕೇವಲ ಜ್ಞಾತೃತ್ವರೂಪವಾದುದು (೨) ಕೇವಲ ಇಚ್ಛಾಶ್ರಯತ್ವರೂಪವಾದುದು ಎಂಬುದಾಗಿ ಜ್ಞಾತೃತ್ವರೂಪವಾದುದು ಮಾತ್ರವೇ ಎಂದರೆ ದೂಷಣೆಯನ್ನು ಹೇಳುತ್ತಾರೆ—ಚೇತನನಿಗೆ ಸರ್ವಶ್ರೇಯಸ್ಕರವಾದ ಪುರುಷಾರ್ಥವನ್ನು ಸಂಪಾದಿಸಬೇಕೆಂಬ ಇಚ್ಛೆಯೂ ಇಲ್ಲವೆಂದೂ ಅದನ್ನು ಸಂಪಾದಿಸುವದಕ್ಕೆ ಬೇಕಾದ ಸಾಧನಗಳನ್ನು ಅನುಷ್ಠಿಸುವ ಶಕ್ತಿಯೂ ಇಲ್ಲವೆಂದು ಹೇಳಬೇಕಾಗುತ್ತದೆ ಏಕೆಂದರೆ ಆತನಿಗೆ ಜ್ಞಾತೃತ್ವಮಾತ್ರವೇ ಉಂಟು, ಇನ್ನು ಯಾವುದೂ ಇಲ್ಲವೆಂಬುದು ನಿಮ್ಮ ಸಿದ್ಧಾನ್ತವಾದುದರಿಂದ ಆ ಅಭಿಪ್ರಾಯವನ್ನು **"ಈಶ್ವರಾಧೀನ**

**ಈಶ್ವರಾಧೀನ ಮಾಗವರುಮ್ ಕರ್ತೃತ್ವಂ ತಾನುಮ್ ಜ್ಞಾತೃತ್ವಮೆನ್ರಿಲ್ ಪುರುಷಾರ್ಥ ಸಂಪಾದನರುಚಿಯುಮ್, ತದುಪಾಯ ಪ್ರವೃತ್ತಿಯುಮ್ ತವಿರಪ್ರಸಙ್ಗಿಕ್ಕುಮ್.**

**ಜ್ಞಾನಮುಂ ಅದಿನ್ ಅವಸ್ಥಾವಿಶೇಷಮಾನಇಚ್ಛೈಯುಮೇಉಳ್ಳದು, ವೇರೂರು ವ್ಯಾಪಾರಮಿಲ್ಲೈಯೆನ್ರಿಲುಂ ದೃಷ್ಟಾದೃಷ್ಟಾರ್ಥಙ್ಗಳಾನ ಪೊರು ಉಪಾಯಙ್ಗಳೈಯುಂ ಸ್ವಯಂಪ್ರಯೋಜನಮಾನ ಕೈಙ್ಕರ್ಯಙ್ಗಳೈಯುಮ್ ಅನುಷ್ಠಿಕ್ಕ ವಿರಗಿಲ್ಲೈ. ಆಗೈಯಾಲ್ ಜ್ಞಾನಚಿಕೀರ್ಷಾ ಪ್ರಯತ್ನಙ್ಗಳ್**

**ಮಾಗ”** ಎಂಬ ವಾಕ್ಯದ ಮೂಲಕವಾಗಿ ದೂಷಿಸುತ್ತಾರೆ **ಈಶ್ವರಾಧೀನಮಾಗ ವರುಂ ಕರ್ತೃತ್ವಂ** - ಈಶ್ವರಾಧೀನವಾಗಿ ಉಂಟಾಗುವ ಕರ್ತೃತ್ವವೂ ಕೂಡ, **ಜ್ಞಾತೃತ್ವಮೆನ್ರಿಲ್** - ಬರೀ ಜ್ಞಾನತ್ವರೂಪವಾದುದು ಎಂದರೆ, **ಪುರುಷಾರ್ಥ ಸಂಪಾದನರುಚಿಯುಮ್** - ಪುರುಷಾರ್ಥಗಳನ್ನು ಸಂಪಾದಿಸುವದರಲ್ಲಿ ಆಸಕ್ತಿಯೂ, **ತದುಪಾಯ ಪ್ರವೃತ್ತಿಯುಮ್** - ಅಂತಹ ಪುರುಷಾರ್ಥವನ್ನು ಹೊಂದುವ ಸಾಧನದಲ್ಲಿ ಪ್ರವೃತ್ತಿಯೂ, **ತವಿರಪ್ರಸಂಗಿಕ್ಕುಂ** - ಬೇಕಾಗಿಲ್ಲವೆಂದು ಹೇಳಬೇಕಾಗಿ ಬರುತ್ತದೆ (೨) ನೆಯ ವಿಕಲ್ಪವಾದ ಕರ್ತೃತ್ವವು ಇಚ್ಛಾರೂಪ ಮಾತ್ರವೇ ಎಂದರೆ ಉಂಟಾಗುವ ಅನುಪಪತ್ತಿಯನ್ನು ತಿಳಿಸುತ್ತಾರೆ ಆಗ, **ಜ್ಞಾನಮುಮ್** - ಜ್ಞಾನವನ್ನು ಮತ್ತು **ಅದಿನ್ ಅವಸ್ಥಾ ವಿಶೇಷಮಾನ,** - ಅದರ ಅವಸ್ಥಾವಿಶೇಷವಾದ, **ಇಚ್ಛೈಯುಮೇಉಳ್ಳದು**-ಇಚ್ಛೆಯನ್ನೂ ಉಳ್ಳದ್ದು, ಆದುದರಿಂದ, ಇದಲ್ಲದೆ, **ವೇರೊರುವ್ಯಾಪಾರವಿಲ್ಲೈ** - ಬೇರೊಂದು ವ್ಯಾಪಾರವೂ ಈ ಚೇತನನಿಗಿಲ್ಲವೆಂದು, **ಎನ್ರಿಲುಮ್** - ಎಂದು ಹೇಳಿದರೂ, **ದೃಷ್ಟಾದೃಷ್ಟಾರ್ಥ ಙ್ಗಳಾನ ಪೊರು ಉಪಾಯಙ್ಗಳೈಯುಂ - ದೃಷ್ಟಾರ್ಥ** ವೆಂದರೆ ಪ್ರತ್ಯಕ್ಷಕ್ಕೆ ವಿಷಯವಾಗುವ ಪ್ರಯೋಜನಗಳು, ದಾರ, ಪುತ್ರಧನಕ್ಷೇತ್ರಪ್ರಾಪ್ತಿಯೇ ಮೊದಲಾದವು, **ಅದೃಷ್ಟಾರ್ಥವು** - ಪ್ರತ್ಯಕ್ಷಗೋಚರವಲ್ಲದಿರುವ, ಸ್ವರ್ಗ ಕೈವಲ್ಯ ಮೋಕ್ಷಪ್ರಾಪ್ತಿ, ಇಂತವುಗಳನ್ನೇ ಪ್ರಯೋಜನಗಳಾಗಿವುಳ್ಳ ಸಾಧನಗಳನ್ನೂ, ಮತ್ತು **ಸ್ವಯಂಪ್ರಯೋಜನಮಾನ ಕೈಂಕರ್ಯಂಗಳೈಯುಂ** - ಕರ್ತೃತ್ವ, ಮಮತಾ, ಫಲತ್ಯಾಗ ಪೂರ್ವಕವಾಗಿ ಸರ್ವೇಶ್ವರಪ್ರೀತಿಗೋಸ್ಕರ ಮಾಡುವ ಕೈಂಕರ್ಯಗಳು ಸ್ವಯಂಪ್ರಯೋಜನ ಕೈಂಙ್ಕರ್ಯಗಳು, ಅಂತಹ ಕೈಙ್ಕರ್ಯಗಳನ್ನೂ, **ಅನುಷ್ಠಿಕ್ಕವಿರಗಿಲ್ಲೈ** - ಅನುಷ್ಠಿಸಲು ಮಾರ್ಗವಿಲ್ಲದೇ ಹೋಗುತ್ತದೆ ಆದುದರಿಂದ ಎಲ್ಲರೂ ಒಪ್ಪತಕ್ಕ ಅಭಿಪ್ರಾಯವೇನೆಂದರೆ ; **ಆಗೈಯಾಲ್** - ಆದುದರಿಂದ, **ಜ್ಞಾನಚಿಕೀರ್ಷಾ ಪ್ರಯತ್ನಙ್ಗಳ್ ಮೂನ್ರುಮ್ ಆತ್ಮಾವುಕ್ಕುಣ್ಡು** -

**ಮೂನ್ರುಮ್ ಆತ್ಮಾವುಕ್ಕುಣ್ಡು ಇದಿಲ್ ಚಿಕೀರ್ಷಾ ಪ್ರಯತ್ನಙ್ಗಳ್ ಜ್ಞಾನತ್ತಿನುಡೈಯ ಅವಸ್ಥಾವಿಶೇಷಙ್ಗಳೆನ್ರುಮಿಡತ್ತೈ ವೇದಾರ್ಥಸಙ್ಗ್ರಹತ್ತಿಲ್ ಅರುಳಿಚ್ಚೈಯ್ದ ಲಾಘವನಯುಕ್ತಿಯಾಲೇ ಕಂಡುಕೊಳ್ವದು.**

ಜ್ಞಾನವೂ ಅದರ ಅವಸ್ಥಾ ಭೇದಗಳಾದ ಇಚ್ಛೆಯೂ ಪ್ರಯತ್ನವೂ, ಹೀಗೆ ಈ ಮೂರು ಆತ್ಮನಿಗೆ ಉಂಟು ಇವು ಆತ್ಮಧರ್ಮಗಳೆಂಬ ಭಾವವು

ನೈಯಾಯಿಕನು **ಚಿಕೀರ್ಷಾ** ಎಂದರೆ ಮಾಡಬೇಕೆಂಬ ಇಚ್ಛೆಯೂ ಅದಕ್ಕಾಗಿ ಪ್ರಯತ್ನವೂ ಇವೆರಡೂ ಜ್ಞಾನಕ್ಕಿಂತ ಬೇರೆಯಾದುದು ಎಂದು ಹೇಳುವನು ಅದು ಸರಿಯಲ್ಲವೆಂದು ಪ್ರಾಸಙ್ಗಿಕವಾಗಿ ಹೇಳಿ, ಅದನ್ನು ನಿರಾಕರಿಸುತ್ತಾರೆ — **ಇದಿಲ್** - ಈ ಮೂರರಲ್ಲಿ, **ಚಿಕೀರ್ಷಾ ಪ್ರಯತ್ನಙ್ಗಳ್** - ಮಾಡಬೇಕೆಂಬ ಸಙ್ಕಲ್ಪ ಮತ್ತು ಪ್ರಯತ್ನಗಳು **ಜ್ಞಾನತ್ತಿನುಡೈಯ** - ಜ್ಞಾನದ, **ಅವಸ್ಥಾ ವಿಶೇಷಗಳು, ಎನ್ರುಮಿಡತ್ತೈ** - ಎಂಬುವ ಸಂದರ್ಭವನ್ನು, **ವೇದಾರ್ಥಸಙ್ಗ್ರಹತ್ತಿಲೇ** - ಶ್ರೀ ಭಾಷ್ಯಕಾರರವರು ರಚಿಸಿರುವ ವೇದಾರ್ಥ ಸಙ್ಗ್ರಹದಲ್ಲಿ, **ಅರುಳಿಚ್ಚೈಯ್ದ** - ಕೃಪೆಯಿಟ್ಟು ಹೇಳಿದ, **ಲಾಘವನಯುಕ್ತಿಯಾಲೇ** - ಗುರುವಾದ ವಿಷಯವನ್ನು ತ್ಯಜಿಸಿ ಲಾಘವವಿಷಯವನ್ನೇ ಅವಲಂಬಿಸತಕ್ಕದ್ದೆಂಬ ನ್ಯಾಯ ಶಾಸ್ತ್ರದಯುಕ್ತಿಯಿಂದ, **ಕಂಡುಕೊಳ್ವದು** - ತಿಳಿದುಕೊಳ್ಳುವದು

ವೇದಾರ್ಥಸಙ್ಗ್ರಹದಲ್ಲಿ ಹೇಳಿರುವದೇನೆಂದರೆ — **"ವಿಷಯಜ್ಞಾನಾನಿ ಸುಖದುಃಖ ಮಧ್ಯಸ್ಥಸಾಧಾರಣಾನಿ; ತಾನಿಚ ವಿಷಯವಿಶೇಷಾಧೀನ ವಿಶೇಷಣಾನಿ ಭವನ್ತಿ; ಯೇನವಿಶೇಷಣ ವಿಶೇಷಿತಂಜ್ಞಾನಂ ಸುಖಸ್ಯಜನಕ ಮಿತ್ಯಭಿಮತಂ ತದ್ವಿಷಯ ಜ್ಞಾನಸುಖಂ, ತದತಿರೇಕಿ ಪದಾರ್ಥಾಂತರಂ ನೋಪಲಭ್ಯತೇ ; ತೇನೈವ ಸುಖಿತ್ವವ್ಯವಹಾರೋ ಪಪತ್ತೇಶ್ಚ"**—ಎಂದರೆ ವಿಷಯ ಜ್ಞಾನದಿಂದುಂಟಾಗುವುವು—ಸುಖ, ದುಃಖ, ಮತ್ತು ಇವೆರಡೂ ಇಲ್ಲದವು ಇವುಗಳುಂಟಾಗುವದು ವಿಷಯ ವಿಶೇಷಗಳಿಗೆ ಅಧೀನವಾದ ಗುಣಗಳಿಂದುಂಟಾಗುವುವು ಯಾವುದರಿಂದ ಈ ಗುಣದಿಂದ ಯುಕ್ತವಾಗಿ ಸುಖವನ್ನುಂಟುಮಾಡುತ್ತದೆಂದು ತೋರಿಬರುತ್ತದೋ ಅಂತಹ ವಿಷಯದಜ್ಞಾನದಿಂದುಂಟಾಗುವದೇ ಸುಖವು ಆ ವಿಷಯಕ್ಕಿಂತ ಬೇರೆಯಾಗಿ ಇನ್ನೊಂದು ಪದಾರ್ಥವು ಸುಖವನ್ನು ಕೊಡುತ್ತದೆಂದು ತೋರಿಬರುವದಿಲ್ಲವು ಸಕ್ಕರೆಯನ್ನು ತಿಂದರೆ ರುಚಿಕರವಾಗಿ ಸುಖವುಂಟಾಗುತ್ತವೆ ಮಾಧುರ್ಯವು ಸಕ್ಕರೆಯಗುಣವು ಈ ಮಾಧುರ್ಯವನ್ನುಂಟು ಮಾಡುವದು ಸಕ್ಕರೆಯ ಗುಣವೇ ವಿನಾ, ಸಕ್ಕರೆಗಿಂತ ಇನ್ನೊಂದು ದ್ರವ್ಯವು ಉಂಟಾಗುತ್ತದೆಂದು ತೋರಿಬರುವದಿಲ್ಲವು ಬೇರೆ ಇನ್ನೊಂದು ದ್ರವ್ಯಉಂಟಾಗಿ ಅದೇ ಮಾಧುರ್ಯರೂಪ ಸುಖವನ್ನುಂಟುಮಾಡುತ್ತದೆಂಬ ಕಲ್ಪನೆಯು ಅನಾವಶ್ಯ

ಕವು, **"ಧರ್ಮಿಕಲ್ಪನಾತೋ ವರಂಧರ್ಮಕಲ್ಪನವ್"** ಬೇರೇ ಧರ್ಮಿಯು ಉತ್ಪನ್ನ ವಾಗಿ ಮಾಧುರ್ಯವನ್ನುಂಟುಮಾಡುತ್ತದೆಂಬುದು ನೈಯಾಯಿಕನ ಮತವು ಇದು ಗೌರವ ವಿಷಯವು ಲಘುವಿಷಯವು ಯಾವುದೆಂದರೆ, ಸಕ್ಕರೆಗೇ ಆ ಮಾಧುರ್ಯವ ನ್ನುಂಟುಮಾಡುವ ಶಕ್ತಿಯುಂಟೆಂಬುದು ಆದುದರಿಂದ ಧರ್ಮಭೂತ ಜ್ಞಾನವೂ ಕೂಡ ಧರ್ಮಿಯು, ಅದರ ಗುಣಗಳು ಚಿಕೀರ್ಷಾಪ್ರಯತ್ನವೆಂದು ಹೇಳುವದು ಯುಕ್ತವೇ ವಿನಾ, ಜ್ಞಾನಕ್ಕಿಂತ ಭಿನ್ನವಾದುವು ಎಂದು ಹೇಳುವದು ಯುಕ್ತವಲ್ಲವು ಆದುದ ರಿಂದ ಚಿಕೀರ್ಷಾಪ್ರಯತ್ನಗಳು ಜ್ಞಾನದ ಅವಸ್ಥಾಂತರಗಳೆಂದು ಭಾವಿಸತಕ್ಕ ದ್ದೆಂದು ಹೇಳಿದರು ಇಲ್ಲಿ ಮುಖ್ಯವಾಗಿ ಜ್ಞಾಪಕದಲ್ಲಿಡತಕ್ಕದ್ದು ಆತ್ಮಾವಿನ ಜ್ಞಾನವೂ ; ಆತನ ಗುಣವೂ ದ್ರವ್ಯವು ಹೇಗೆಂದರೆ ಸೂರ್ಯನೂ ದ್ರವ್ಯವಾಗಿ, ಸೂರ್ಯಕಿರಣಗಳೂ ಹೇಗೆ ದ್ರವ್ಯವೋ ಹಾಗೆ ಎಂಬ ಭಾವವು ಈ ವೇದಾಂತ ಸಙ್ಗ್ರಹದಲ್ಲಿ ಮುಖ್ಯವಾಗಿ ಹೇಳಿರುವದು ಏನೆಂದರೆ ಪ್ರಮಾಣರಹಿತವಾಗಿರುವಾಗ ಹೊಸ ಧರ್ಮಿಕಲ್ಪನೆಗಿಂತ ಇರುವದರ ಗುಣವೆಂಬ ಭಾವನೆಯು ಲಘುತರವಾಗು ವದರಿಂದ ಅದೇ ಉಪಾದೇಯವೆಂಬುದು ಇದಕ್ಕೆ ಸರಿಯಾದ ಪ್ರಮಾಣವಿಲ್ಲ ದಿದ್ದರೂ ಉಚಿತತರ್ಕವಾಗಿ ಗ್ರಾಹ್ಯವಾಗಿರುವದರಿಂದ **"ಲಾಘವಯುಕ್ತಿಯಾಲೇ ಕೆಂಡುಕೊಳ್ಳದು.** ಹೀಗೆ ಅನೇಕ ಯುಕ್ತಿವಾಕ್ಯಗಳು ಗ್ರಾಹ್ಯವು ಹೇಗೆಂದರೆ—

(೧) ಅದ್ವೈತಿಯು ತಾನೇ ಪರಮಾತ್ಮನೆನ್ನುವನು ನಾವು ಆತನಿಗೆ ದಾಸರೆಂದು ಹೇಳುವೆವು ನಮ್ಮ ಯುಕ್ತಿವಾದವೇನೆಂದರೆ, ಒಂದು ವೇಳೆ ನಿಮ್ಮ ಅಭಿಪ್ರಾಯವೇ ಸತ್ಯವಾಗಿದ್ದರೂ, ನಮ್ಮ ಅಭಿಪ್ರಾಯದ ಹಾಗೆ ಪರಮಾತ್ಮನಿಗೆ ದಾಸನೆಂದು ಭಾವನೆ ಇದ್ದರೂ ನಿಮಗೇನೂ ನಷ್ಟವಿಲ್ಲವು ಆದುದರಿಂದ ನಮ್ಮ ಸಿದ್ಧಾನ್ತವನ್ನ ನೀವು ಪರಿಗ್ರಹಿಸಿದರೆ, ನಿಮಗೇನೂ ತೊಂದರೆಯಿಲ್ಲವು ಹಾಗಲ್ಲದೆ ನಮ್ಮ ಅಭಿಪ್ರಾಯವಾದ ಪರಮಾತ್ಮನಿಗೆ ನಾವು ದಾಸರೆಂಬುದು ಸತ್ಯವಾಗಿದ್ದ ಪಕ್ಷದಲ್ಲಿ ನಾನೇ ಪರಮಾತ್ಮನೆಂದು ಹೇಳಿಕೊಳ್ಳುವದರಿಂದ ಭಗವನ್ನಿಗ್ರಹಕ್ಕೆ ಪಾತ್ರರಾಗುತ್ತೀರಿ, ಇದು ಯುಕ್ತವಾದವಾದರೂ, ಅದ್ವೈತಿಗೆ ಪರಮಹಿತವಾದು ದರಿಂದ ಅವರು ನಿಷ್ಪಕ್ಷಪಾತದಿಂದ ವಿಮರ್ಶಿಸಿದರೆ ಉಪಾದೇಯವೇ ಹಾಗೆಯೇ,

(೨) ನಮ್ಮಲ್ಲೇ ಕೆಲವರು ಲಕ್ಷ್ಮಿಯು ಜೀವಕೋಟಿಗೆ ಸೇರಿದವಳೆನ್ನು ವರು ನಾವು ಈಶ್ವರಕೋಟಿಗೆ ಸೇರಿದವಳೆನ್ನುವೆವು, ಅವರೂ ನಮ್ಮ ಜೊತೆಗೆ ಸೇರಿ ಈಶ್ವರಕೋಟಿಗೆ ಸೇರಿದವಳೆಂಬ ಭಾವನೆಯನ್ನು ಹೊಂದಿದ್ದರೂ, ಆಕೆಯು ವಾಸ್ತವವಾಗಿ ಜೀವಕೋಟಿಗೆ ಸೇರಿದ್ದರೂ, ಏನೊಂದೂ ಪ್ರತ್ಯವಾಯವಿಲ್ಲವು ಆದರೆ ಆಕೆಯು ವಾಸ್ತವವಾಗಿ ಈಶ್ವರಕೋಟಿಗೆ ಸೇರಿದ್ದ ಪಕ್ಷದಲ್ಲಿ, ಅವರಿಗೆ ಆಕೆಯ ನಿಗ್ರಹರೂಪ ಪ್ರತ್ಯವಾಯುವು ಉಂಟಾಗುತ್ತದೆಂಬುದು, ಪರಮಹಿತ

ವನ್ನು ಬೋಧಿಸುವ ಯುಕ್ತಿವಾದವು, ಆದುದರಿಂದ ಅಂತಹ ವಾದವು ತಮ್ಮವರ ಅಭಿಪ್ರಾಯವೆಂಬ ಮಮತೆಯನ್ನು ಬಿಟ್ಟು ಚನ್ನಾಗಿ ವಿಮರ್ಶಿಸಿ ತಿಳಿಯುವವರಿಗೆ ಉಪಾದೇಯವೇ,

(೩) ಸರ್ವೇಶ್ವರನು ನಮಗೆ ತಂದೆಯು ಮತ್ತು ಸ್ವಾಮಿಯು ತನ್ನ ಪುತ್ರನ ಅಥವಾ ದಾಸನ ಹಿತಚಿನ್ತನೆಯು ಆತನಿಗಿಲ್ಲವೇ? ಆತನೇ ತಾನಾಗಿಯೇ ರಕ್ಷಿಸುವನು ಹೀಗಿರುವಾಗ ನಾವು ಮಾಡತಕ್ಕದ್ದೇನಿದೆ? ಎಂದು ಹೇಳಿ ಭರನ್ಯಾಸ ಮಾಡುವದು ಅನುಪಯುಕ್ತವಾದುದು, ಎನ್ನುವದು. ಈ ಸಂದರ್ಭದಲ್ಲಿ ಯುಕ್ತಿವಾದ ವೇನೆಂದರೆ ಒಂದು ವೇಳೆ ಹಾಗೆ ಭರನ್ಯಾಸನನ್ನು ಅನುಷ್ಠಿಸಿದರೇನೇ ಆತನು ರಕ್ಷಿತವ್ಯನು, ಅನ್ಯಥಾ ಇಲ್ಲವೆಂಬ ಭಾವನೆಯು ಸರ್ವೇಶ್ವರನಿಗೆ ಒಂದು ವೇಳೆ ಇದ್ದುದಾದರೆ ನೀವು ಕೆಟ್ಟುಹೋಗುವಿರಿ, ಆದುದರಿಂದ ಸಂಪೂರ್ಣ ವಿಶ್ವಾಸದಿಂದ ಸಂಶಯವೇನೂ ಇಟ್ಟುಕೊಳ್ಳದೇ ನಮ್ಮ ಹಾಗ ಅನುಷ್ಠಿಸಿಬಿಡು ಎಂಬುದು ಪರಮ ಹಿತಭಾವನೆಯಿಂದ ಮಾಡಿದ ಯುಕ್ತಿವಾದವಾಗುವದರಿಂದ ಉಪಾದೇಯವು

ಹೀಗೆಯೇ ಇನ್ನೂ ಅನೇಕ ಯುಕ್ತಿವಾದಗಳು ಪರಮಹಿತರೂಪವಾಗಿದ್ದರೆ ಉಪಾದೇಯವು ಇಲ್ಲಿ ಗುರುವಾದುದನ್ನು ತ್ಯಜಿಸಿ ಲಘುವಾದುದನ್ನು ಅವ ಲಂಬಿಸಿ ಹೀಗೆಯೇ ಅದ್ವೈತಿಯ ನಿರ್ಗುಣಬ್ರಹ್ಮವಾದವನ್ನೂ, ಜಗನ್ಮಿಥ್ಯಾವಾದ ವನ್ನೂ, ಜೀವನ್ಮುಕ್ತಿವಾದವನ್ನೂ ಉಚಿತವಾದ ಯುಕ್ತಿವಾದದಿಂದ ಸರಿಯಲ್ಲ ವೆಂದು ತೋರಿಸಬಹುದು ಗ್ರಂಥವಿಸ್ತರ ಭಯದಿಂದ ಇಲ್ಲಿಗೆ ನಿಲ್ಲಿಸಿರುವೆವು

ಹಿಂದೆ ಜ್ಞಾನವು ಚೇತನಧರ್ಮವೆಂದೂ, ಚಿಕೀರ್ಷಾಪ್ರಯತ್ನಗಳು ಧರ್ಮಭೂತ ಜ್ಞಾನದ ಅವಸ್ಥಾವಿಶೇಷಣಗಳೆಂದೂ ಹೇಳಲ್ಪಟ್ಟುದುದರಿಂದ ಕರ್ತೃತ್ವವೂ ಚೇತನ ಧರ್ಮವೆಂದೂ ಭಾವಿಸತಕ್ಕದ್ದಾಯಿತು. ಹಾಗಾದರೆ ಅಚೇತನಕ್ಕೆ ಕರ್ತೃತ್ವವಿಲ್ಲವೋ? ಗೀತೆಯಲ್ಲಿ **"ಕಾರ್ಯತೇಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ" (೩-೫)** ಮತ್ತು **"ಪ್ರಕೃತೇಃ ಕ್ರಿಯಮಾಣಾನಿಗುಣೈಃ ಕರ್ಮಾಣಿಸರ್ವಶಃ । ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿಮನ್ಯತೇ"** ಎಂಬಲ್ಲಿ ಅಚೇತನವಾದ ಪ್ರಕೃತಿಗೂ ಕರ್ತೃತ್ವ ಉಂಟೆಂದು ತೋರಿಬರುತ್ತದಲ್ಲಾ? ಮತ್ತು ನದಿಯಲ್ಲಿ ಜಲಪ್ರವಾಹವು ಹೋಗುತ್ತಲೇ ಇರುತ್ತದೆ ಮೇಘಗಳಲ್ಲಿ ವಿದ್ಯುತ್ತಿನ ವಿಜೃಂಭಣೆಯು ತೋರಿ ಬರುತ್ತದೆ ಬಾಣವು ಆಕಾಶದಲ್ಲಿ ಬಹು ವೇಗದಿಂದ ಹೋಗುತ್ತದೆ ಮೋಟಾರ್ ಕಾರನ್ನು ಸ್ವಿಚ್ಚುಹಾಕಿಬಿಟ್ಟರೆ ತಾನಾಗಿಯೇ ಹೊರಟುಹೋಗುತ್ತದೆ ಈ ಸಂದರ್ಭ ದಲ್ಲೆಲ್ಲಾ ಜಡಪ್ರಕೃತಿಗೂ ಕರ್ತೃತ್ವ ಉಂಟೆಂದು ತೋರಿಬರುತ್ತದಲ್ಲಾ, ಚೇತನ ಧರ್ಮವೆಂದು ಹೇಳಿದುದು ಹೇಗೆ? ಎಂದರೆ, ಕರ್ತೃತ್ವವು ಎರಡು ವಿಧವೆಂದೂ,

## ಕರ್ತೃತ್ವಂ ದ್ವಿವಿಧಮ್

## ಕ್ರಿಯಾಶ್ರಯತ್ವರೂಪ ಕರ್ತೃತ್ವಂ ಚೇತನಾ ಚೇತನ ಸಾಧರಣಮ್ ಪ್ರಯತ್ನಾಶ್ರಯತ್ವರೂಪಮಾನ ಕರ್ತೃತ್ವಂ ಚೇತನೈಕಾಂತ್ಯಮ್.

ಅಚೇತನ ಕರ್ತೃತ್ವಕ್ಕೂ ಚೇತನ ಕರ್ತೃತ್ವಕ್ಕೂ ಇರುವ ವ್ಯತ್ಯಾಸವನ್ನು ಉಪದೇಶಿಸುತ್ತಾರೆ

### ಕರ್ತೃತ್ವವು ಎರಡು ವಿಧವು.

ಮುಂದಿನ ವಾಕ್ಯಗಳಿಂದ ಕರ್ತೃತ್ವವು ಎರಡು ವಿಧವಾಗಿ (೧) ಕ್ರಿಯಾಶ್ರಯತ್ವರೂಪವಾದುವೆಂದೂ (೨) ಪ್ರಯತ್ನಾಶ್ರಯತ್ವರೂಪವಾದುದೆಂದೂ ಹೇಳಿ, ಕ್ರಿಯಾಶ್ರಯತ್ವರೂಪವಾದುದು ಮಾತ್ರವೇ ಅಚೇತನದಲ್ಲಿ ಉಂಟೆಂದೂ, ಆದುದರಿಂದ ಅದು ಜ್ಞಾನಾವಸ್ಥಾರೂಪವಾದುದಲ್ಲವೆಂದೂ, ಪ್ರಯತ್ನಾಶ್ರಯರೂಪ ಕರ್ತೃತ್ವವು ಚೇತನನಿಗೆ ಮಾತ್ರವೇ ಅಸಾಧಾರಣವಾದುದೆಂದೂ ಹೇಳುತ್ತಾರೆ ಇದರಿಂದ ಚೇತನನಲ್ಲಿ ಈ ಎರಡು ವಿಧ ಕರ್ತೃತ್ವವೂ ಉಂಟೆಂದು ಹೇಳಿ, ಪ್ರಯತ್ನವು ಜ್ಞಾನದ ಅವಸ್ಥಾಭೇದವೆಂದು ಹೇಳುವದರಲ್ಲೇನೂ ಅಸಾಮಂಜಸ್ಯವಿಲ್ಲವೆಂದು ಹೇಳುತ್ತಾರೆ—(೧) **ಕ್ರಿಯಾಶ್ರಯತ್ವರೂಪಕರ್ತೃತ್ವಂ** - ಕ್ರಿಯೆಗೆ ಮಾತ್ರವೇ ಆಶ್ರಯವಾಗಿರುವ ಕರ್ತೃತ್ವವು, ಎಂದರೆ ಕ್ರಿಯಾರೂಪದಲ್ಲಿ ತೋರಿಬರುವ ಕರ್ತೃತ್ವವು, **ಚೇತನಾ ಚೇತನ ಸಾಧಾರಣಮ್** - ಅದು ಸ್ವಾಮಿದತ್ತವಾದುದಾಗಿ ಎಲ್ಲಾ ನಿಯಾಮ್ಯವರ್ಗವಾದ ಚೇತನ ಮತ್ತು ಅಚೇತನಗಳಿಗೂ ಸಾಧಾರಣವಾದುದು **ಪ್ರಯತ್ನಾಶ್ರಯತ್ವ ರೂಪಮಾನಕರ್ತೃತ್ವಂ** - ಜ್ಞಾನಮೂಲಕ ಉಂಟಾದ ಪ್ರಯತ್ನಕ್ಕೆ ಆಶ್ರಯವಾಗಿರುವ ಕರ್ತೃತ್ವವು, **ಚೇತನೈಕಾಂತ್ಯಮ್** - ಚೇತನಿಗೆ ಮಾತ್ರವೇ ಮುಖ್ಯವಾಗಿ ಅಸಾಧಾರಣವಾಗಿರುವದು , ಅದು ಬೇರೇ ಕಡೆಯಾದ ಅಚೇತನದಲ್ಲಿ ತೋರಿಬರುವದಲ್ಲವಾಗಿ ಅವ್ಯಭಿಚರಿತವು ತತ್ವತ್ರಯ ಉಂಟೆಂದು ಹಿಂದೆಯೇ ಉಪಪಾದಿತವು ಅದರಲ್ಲಿ ಈಶ್ವರನು ನಿಯಾಮಕನು ; ಚೇತನಾಚೇತನಗಳೆರಡೂ ಸತ್ಯವಾಗಿರುವ ನಿಯಾಮ್ಯವರ್ಗವು , ಇವುಗಳಿಗೆ ಕ್ರಿಯಾರೂಪವಾದ ಸತ್ತೆಯು ಸ್ವಾಮಿದತ್ತವಾಗಿ ಎಲ್ಲಾ ಚೇತನಾಚೇತನಗಳಿಗೂ ಉಂಟು ಇದಕ್ಕೆ ಇಂಗ್ಲೀಷ್‌ನಲ್ಲಿ (energy) ಎಂದರೆ ಶಕ್ತಿ ಎಂದು ಹೇಳುವರು ಆದುದರಿಂದ ನಮಗೂ, ಭೌತಿಕಶಾಸ್ತ್ರಜ್ಞರಿಗೂ, ಪ್ರಪಂಚದಲ್ಲಿರುವ ಚೇತನಾಚೇತನವೆಲ್ಲಾ ಪರಮಾತ್ಮ ದತ್ತಶಕ್ತಿಯುಳ್ಳವುಗಳಾಗಿ ಸತ್ಯವು ಈ ಶಕ್ತಿ ಇರುವದರಿಂದ ಚೇತನಾಚೇತನಗಳೆರಡಕ್ಕೂ ಕ್ರಿಯಾಶ್ರಯತ್ವರೂಪ ಶಕ್ತಿಯುಂಟು ಯಾವಾಗ ಚೇತನಾಚೇತನಗಳಿಗೆ ನಿತ್ಯತ್ವವನ್ನು ಗೀತೆಯಲ್ಲಿ ಹೇಳಿರುವಹಾಗೆ **“ಪ್ರಕೃತಿಂಪುರುಷಂ ಚೈವವಿದ್ಧ್ಯಸಾದೀ ಉಭಾವಪಿ”** ಸ್ಥಾಪಿತವೋ, ಅದರಲ್ಲಿರುವ ಶಕ್ತಿಯೂ

**ಪ್ರಯತ್ನಮಾವದು ? ಶರೀರಾದಿಪ್ರೇರಣ ಹೇತುವಾನ ಬುದ್ಧಿವಿಶೇಷಮ್, ಜ್ಞಾನಮಾತ್ರತ್ತುಕ್ಕು ಆಶ್ರಯಮಾನಪೋದುಮ್, ಭೋಗಮಾತ್ರತ್ತುಕ್ಕು**

(energy) ನಿತ್ಯವು ಹಾಗೆ ದ್ರವ್ಯಮಾತ್ರಕ್ಕೆ ಶಕ್ತಿಯುಂಟೆಂದು ಭೌತಿಕ ಶಾಸ್ತ್ರಜ್ಞರು ರೇಡಿಯೊ ಸ್ಕೋಪ್ ಮೊದಲಾದ ಯಂತ್ರಗಳ ಮೂಲಕ ಪ್ರತ್ಯಕ್ಷವಾಗಿ ತೋರಿಸುವರು ಈ ಪ್ರಕೃತಿಯ ಕ್ರಿಯಾಶ್ರಯತ್ವರೂಪ ಶಕ್ತಿಯೇ ಪ್ರಪಂಚಕ್ಕೆ ಸುಖಕರವಾಗಿ ವಿಮಾನದಲ್ಲಿ ಗಮನಕ್ಕೂ ರೈಲ್ವೆಯಲ್ಲಿ ಗಮನಕ್ಕೂ ಇತರ ಕಡೆಯಲ್ಲಿರುವ ಸಂಗೀತವನ್ನು ಅನುಭವಿಸುವವರ ಜೊತೆಗೆ ಪ್ರಾಣ ಹಾನಿಗೂ ಕಾರಣವಾಗಿ ಬಾಂಬಾಗಿ ಪರಿಣಮಿಸುತ್ತದೆ ವಿದ್ಯುಚ್ಛಕ್ತಿಯು, ನಮಗೆ ಒಳ್ಳೆ ಬೆಳಕನ್ನೂ, ಸೆಖೆಯಕಾಲದಲ್ಲಿ ತಂಪಾಗಿ ಗಾಳಿಯು ಬೀಸೋಣವೂ, ಮೋಟಾರ್ ವಾಹನಕ್ಕೆ ಅನುಕೂಲವೂ, ದೇಹದ ಒಳಗೆ ಇರುವ ವ್ಯತ್ಯಾಸಗಳ ಮೂಲಕ ಉಂಟಾಗುವ ರೋಗಗಳನ್ನು ವ್ಯಕ್ತಪಡಿಸೋಣವೇ ಮೊದಲಾದ ಸೌಕರ್ಯಗಳ ಜೊತೆಯಲ್ಲಿ ಪ್ರಾಣಹರಣವನ್ನೂ ಉಂಟು ಮಾಡುತ್ತದೆ ಇಂತಹ ಕ್ರಿಯಾಶ್ರಯತ್ವ ರೂಪ ಕರ್ತೃತ್ವವು ಅಚೇತನಕ್ಕೆ ಉಂಟು ಇದನ್ನೇ ಶ್ರೀ ಪರಾಶರು ನಿಪುಣತರ ವಾಗಿ ವಿಷ್ಣುಪುರಾಣದಲ್ಲಿ ಹೇಳಿರುತ್ತಾರ —**"ಏತತ್ಸರ್ವಮಿದಂ ವಿಶ್ವಂ ಜಗದೇತಚ್ಚರಾಚರಮ್। ಪರಬ್ರಹ್ಮಸ್ವರೂಪಸ್ಯ ವಿಷ್ಣೋಃಶಕ್ತಿ ಸಮನ್ವಿತಮ್"** ಎಂಬದಾಗಿ ಮಿಂಚು, ಗಾಳಿ, ಅಲೆಗಳೂ, ಭೂಕಂಪ ಮೊದಲಾದವುಗಳೂ ನಿದರ್ಶನವು

ಚೇತನನಿಗೆ, ಈ ಕ್ರಿಯಾಶ್ರಯತ್ವರೂಪ ಕರ್ತೃತ್ವವಲ್ಲದೆ ಇನ್ನೊಂದು ವಿಧವಾದ ಕರ್ತೃತ್ವವೂ ಉಂಟೆಂದು ಹೇಳಿದರು ಅದು ಯಾವುದೆಂದರೆ ಜ್ಞಾನಾಶ್ರಯತ್ವರೂಪಕರ್ತೃತ್ವವು, ಆಜ್ಞಾನವು ಅವಸ್ಥಾವಿಶೇಷಣಗಳನ್ನು ಹೊಂದಿ ಚಿಕೀರ್ಷಾ ಪ್ರಯತ್ನಾದಿರೂಪದಲ್ಲಿ ತೋರಿಬರುತ್ತದೆಂದು ಇಲ್ಲಿ ಹೇಳಲ್ಪಟ್ಟಿತು ಆತನು ಜ್ಞಾನಸ್ವರೂಪನಾಗಿ ಜ್ಞಾನಗುಣಕನಾಗಿ ಇರುವದರಿಂದ ಚಿಕೀರ್ಷಾ ಪ್ರಯತ್ನಗಳು ಅದರ ಮಹಿಮೆಯಿಂದೇ ಭಾವಿಸತಕ್ಕದ್ದಾಗಿರುತ್ತದೆ

ಮುಂದೆ ಪ್ರಯತ್ನವೆಂದರೇನುಂಬದನ್ನು ತಿಳಿಸುತ್ತಾರೆ ಹಾಗೆ ತಿಳಿಸುವದರಲ್ಲಿ ಚೇತನನಿಗೆ ಉಭಯವಿಧಕರ್ತೃತ್ವವೂ ಹೇಗೆ ಉಂಟೆಂಬುದನ್ನು ಉಪಪಾದಿಸುತ್ತಾರೆ,—**ಪ್ರಯತ್ನಮಾವದು ?** - ಪ್ರಯತ್ನವೆಂದರೇನು ? **ಶರೀರಾದಿಪ್ರೇರಣಹೇತುವಾನ** - ಶರೀರವೇ ಮೊದಲಾದ ಇಲ್ಲಿ ಆದಿ ಪದದಿಂದ ಮನಸ್ಸೂ ಇಂದ್ರಿಯಗಳೂ ಬೋಧಿಸಲ್ಪಟ್ಟವು, ಇವುಗಳು, **ಪ್ರೇರಣಹೇತುವಾನ**-ಪ್ರೇರಣೆಗೆ ಕಾರಣಭೂತವಾದ, **ಬುದ್ಧಿವಿಶೇಷವು** - ಜ್ಞಾನವಿಶೇಷವು ಹೀಗೆ **ಜ್ಞಾನಮಾತ್ರತ್ತುಕ್ಕು ಆಶ್ರಯಮಾನಪೋದುಮ್** - ಕೇವಲ ಜ್ಞಾನಕ್ಕೆ ಮಾತ್ರಕ್ಕೆ ಆಶ್ರಯವಾಗುವಾಗಲೂ, ಮತ್ತು **ಭೋಗಮಾತ್ರತ್ತುಕ್ಕು ಆಶ್ರಯಮಾನಪೋದುಮ್**

**ಆಶ್ರಯಮಾನಪೋದುಮ್ ಕ್ರಿಯಾಶ್ರಯತ್ವಮಾತ್ರಮಾನ ಸಾಮಾನ್ಯಕರ್ತೃತ್ವಮೇ ಉಳ್ಳದು ಒನ್ರೈತ್ತನ್ಬುದ್ಧಿಯಾಲೇ ಉತ್ಪಾದಿಕ್ಕುಂಪೋದು ಪ್ರಯತ್ನಾಶಯತ್ವರೂಪಮಾನಕರ್ತೃತ್ವಮ್**

ಕೇವಲ ಭೋಗಕ್ಕೆ ಮಾತ್ರ ಆಶ್ರಯವಾದಗಲೂ, **ಕ್ರಿಯಾಶ್ರಯತ್ವಮಾತ್ರಮಾನ** - ಕ್ರಿಯಾಶ್ರಯತ್ವರೂಪವಾದ, **ಸಾಮಾನ್ಯ ಕರ್ತೃತ್ವಉಳ್ಳದು**-ಸಾಮಾನ್ಯವಾದ ಕರ್ತೃತ್ವವನ್ನೇ ಹೊಂದಿರುತ್ತದೆ ಅಚೇತನಕ್ಕೂ ಸಾಮಾನ್ಯವಾದ ಕರ್ತೃತ್ವವನ್ನೇ ಈ ಚೇತನನೂ ಸಹ ಹೊಂದಿರುವನು ಯಾವಾಗ ಎಂದರೆ— (೧) ಕೇವಲ ಜ್ಞಾನಮಾತ್ರ ಉಂಟಾದಾಗ ಮತ್ತು (೨) ಭೋಗರೂಪವಾದ ಅನುಭವ ಉಂಟಾದಾಗ ಆ ಜ್ಞಾನಮೂಲಕವಾಗಿ ಯಾವುದನ್ನಾದರೂ ಉಂಟು ಮಾಡುವಾಗ ಪ್ರಯತ್ನಾಶ್ರಯರೂಪವಾದ ಕರ್ತೃತ್ವವು ಉಂಟಾಗುತ್ತದೆ ಇದಕ್ಕೆ ನಿದರ್ಶನವಾಗಿ ಒಂದು ಹಣ್ಣನ್ನು ಚೇತನನು ನೋಡುತ್ತಾನೆಂದು ಭಾವಿಸೋಣ ಇದರಿಂದ ಹಣ್ಣಿನಜ್ಞಾನ ಉಂಟಾಯಿತು ಇದು ಜ್ಞಾನಮಾತ್ರಕ್ಕೆ ಆಶ್ರಯವಾದ ಕರ್ತೃತ್ವವು ಅದನ್ನು ತಿನ್ನಬೇಕೆಂಬ ಇಚ್ಛಾಪ್ರಯತ್ನಗಳನ್ನು ಮಾಡುತ್ತಾನೆ ಅದನ್ನು ಹೆಚ್ಚಿತಿನ್ನುತ್ತಾನೆ ಇದು ಪ್ರಯತ್ನಾಶ್ರಯರೂಪ ಕರ್ತೃತ್ವವು, ಇದರಿಂದ ಬಹುರುಚಿಯಾಗಿದೆ ಎಂಬ ಜ್ಞಾನವುಂಟಾಗುತ್ತದೆ ಇದು ಭೋಗಾಶ್ರಯರೂಪವಾದ ಕರ್ತೃತ್ವವು ಪುನಃ ಇನ್ನೊಂದು ಹಣ್ಣನ್ನು ತಿನ್ನಬೇಕೆಂದು ಅದನ್ನು ತಂದು ಹಚ್ಚಿತಿನ್ನಲು ಚಿಕೀರ್ಷಾ ಪ್ರಯತ್ನಗಳುಂಟಾಗಿ ತಿನ್ನುತ್ತಾನೆ ಇದು ಪುನಃ ಪ್ರಯತ್ನಾಶ್ರಯವಾದ ಕರ್ತೃತ್ವವಾಗುತ್ತದೆ ಹೀಗೆ ಎರಡುವಿಧ ಕರ್ತೃತ್ವವೂ ಚೇತನನಿಗೆ ಉಂಟೆಂದು ಚಿಕೀರ್ಷಾ ಪ್ರಯತ್ನಗಳು ಜ್ಞಾನದ ಅವಸ್ಥೆಯೆಂದೂ ಹೇಳಿದರು **ಒನ್ರೈ** - ಒಂದನ್ನು **ತನ್ ಬುದ್ಧಿಯಾಲೇ** - ತನ್ನ ಜ್ಞಾನದಮೂಲಕವಾಗಿ, **ಉತ್ಪಾದಿಕ್ಕುಂಪೋದು** - ಉಂಟುಮಾಡುವಾಗ, **ಪ್ರಯತ್ನಾಶ್ರಯತ್ವರೂಪವಾದ ಕರ್ತೃತ್ವಮ್** - ಕರ್ತೃತ್ವವಾಗುತ್ತದೆ ತನ್ನ ಜ್ಞಾನಮೂಲಕವಾಗಿ, ಸಙ್ಕಲ್ಪಿಸಿ ಪ್ರಯತ್ನಪಟ್ಟು ಒಂದು ಘಟ ಮೊದಲಾದವುಗಳನ್ನುಂಟುಮಾಡಿದರೆ, ಆಗ ಜ್ಞಾನವು ಪ್ರಯತ್ನಾಶ್ರಯರೂಪವಾಗಿರುವ ಚೇತನನಿಗೆ ಮಾತ್ರವೇ ಅಸಾಧಾರಣವಾಗಿರುವ ಕರ್ತೃತ್ವವಾಗುತ್ತದೆಂಬ ಭಾವವು

ಈ ಪ್ರಯತ್ನಾಶ್ರಯರೂಪವಾದ ಕರ್ತೃತ್ವವು ಸರ್ವೇಶ್ವರನಿಗೆ ಕೈಙ್ಕರ್ಯಾದಿಗಳನ್ನ ನಡೆಸುವ ಮುಕ್ತದೆಶೆಯಲ್ಲಿ ಉಂಟೇ ವಿನಾ, ಉಪಾಯಾನುಷ್ಠಾನವನ್ನು ಮಾಡುವಾಗ ಇಲ್ಲವೆಂಬುದು ಕೆಲವರ ಅಭಿಪ್ರಾಯವು ಏಕೆಂದರೆ ? ಮುಮುಕ್ಷುವು ಹಾಗೆ ಸ್ವತಂತ್ರಿಸಿ ಉಪಾಯಾನುಷ್ಠಾನವನ್ನು ಮಾಡುವುದು ತನ್ನ ಪರಾಧೀನ ಸ್ವರೂಪಕ್ಕೆ ವಿರುದ್ಧವೆನ್ನುವರು ಅದು ಸರಿಯಾದ ಅಭಿಪ್ರಾಯವಲ್ಲವೆಂದು ಮುಂದಿನ ಎರಡು ವಾಕ್ಯಗಳಿಂದ ತಿಳಿಸುತ್ತಾರೆ—

**ಉಪಾಯಾನುಷ್ಠಾನೇಪಿ ಪ್ರಯತ್ನಾಶ್ರಯರೂಪಕರ್ತೃತ್ವಮಸ್ತಿ**

**ಇಪ್ಪಡಿ ಪಟ್ಟ ಕರ್ತೃತ್ವಂ ಕೈಙ್ಕರ್ಯಮಾತ್ರತ್ತಿಲೇ ಯೆನ್ನೈಯುಮ್ ಉಚಿತ ಮೆನ್ರು, ಅಙ್ಗಂ ಭಗವತ್ಪ್ರೀತಿಯೆನ್ರೊರು ಪ್ರಯೋಜನತ್ತೈ ಉದ್ದೇಶಿತ್ತು ಉಪಾಯಾನುಷ್ಠಾನಂ ಪಣ್ಣಿನಾನಾಯಿರೇ ಯಿರುಪ್ಪದು.**

**ಉಪಾಯಾನುಷ್ಠಾನದಲ್ಲೂ ಕೂಡ ಪ್ರಯತ್ನಾಶ್ರಯರೂಪಕರ್ತೃತ್ವ ಉಂಟು**

**ಇಪ್ಪಡಿ ಪಟ್ಟ ಕರ್ತೃತ್ವಂ** - ಈ ಪ್ರಯತ್ನಾಶ್ರಯರೂಪಕರ್ತೃತ್ವವು, **ಕೈಙ್ಕರ್ಯಮಾತ್ರತ್ತಿಲೇ** - ಪರಮಾತ್ಮನಿಗೆ ಸ್ವತಂತ್ರಿಸಿ ಕೈಙ್ಕರ್ಯಮಾಡುವ ಸಂದರ್ಭ ದಲ್ಲಿ ಮಾತ್ರವೇ, **ಯೆನ್ನೈಯುಮ್** - ಎಂದು ಹೇಳುವದು, **ಉಚಿತಮನ್ರು** - ಸರಿಯಾದ ಅಭಿಪ್ರಾಯವಲ್ಲವು **ಅಙ್ಗಂ**-ಭಗವಂತನಿಗೆ ಕೈಙ್ಕರ್ಯವನ್ನೆಸಗುವ ದಶೆಯಲ್ಲಿ - ಹೇಗೋ, ಹಾಗೆಯೇ ಉಪಾಯಾನುಷ್ಠಾನದಲ್ಲೂ **ಭಗವತ್ಪ್ರೀತಿ ಯೆನ್ರೊರುಪ್ರಯೋಜನತ್ತೈ ಉದ್ದೇಶಿತ್ತು** - ಭಗವಂತನ ಪ್ರೀತಿಯುಂಟಾಗ ಬೇಕೆಂಬ ಒಂದು ಪ್ರಯೋಜನವನ್ನು ಉದ್ದೇಶಿಸಿಯಲ್ಲವೇ, **ಉಪಾಯಾನು ಷ್ಠಾನವನ್ನು, ಪಣ್ಣಿನಾನಾಯಿರೇ ಯಿರುಪ್ಪದು** - ಮಾಡುತ್ತಾನೆಂದಲ್ಲವೇ ಇರುವಂತಾದ್ದು ಇದರ ಅಭಿಪ್ರಾಯವು ಇಷ್ಟೇ—ಈ ಪ್ರಯತ್ನಾಶ್ರಯರೂಪ ಕರ್ತೃತ್ವವು, ಭಗವಂತನ ಪ್ರೀತಿ ಸಂಪಾದಿಸುವ ಸಂದರ್ಭದಲ್ಲಿ ಉಚಿತವೇ ವಿನಾ, ಅನ್ಯಥಾ ಉಪಾಯಾನುಷ್ಠಾನ ಸಂದರ್ಭದಲ್ಲಿ ಯೋಗ್ಯವಲ್ಲವೆಂದು ಕೆಲವರು ಹೇಳಿ ದರು ಹಾಗಾದರೆ ಉಪಾಯಾನುಷ್ಠಾನವು ಭಗವಂತನ ಪ್ರೀತಿಸಂಪಾದಕವಲ್ಲ ವೆಂದು ಏರ್ಪಡುತ್ತದೆಯಾದುದರಿಂದ ಸರಿಯಲ್ಲವು ಉಪಾಯಾನುಷ್ಠಾನವೂ ಭಗವಂತನ ಪ್ರೀತಿಯನ್ನೂ ತನ್ಮೂಲಕ ಪ್ರಸನ್ನತೆಯನ್ನೂ ಉಂಟುಮಾಡುತ್ತ ದೆಂಬ ಭಾವವು ಆದುದರಿಂದ ಭಗವಂತನ ಪ್ರೀತಿಜನಕವಾಗಿಯೂ ತನ್ಮೂಲಕ ವಾಗಿ ಫಲಪ್ರಯೋಜನಕವಾಗಿಯೂ **"ವ್ರಜ"** ಎಂಬ ವಿಧಿಯು

ಆಗಲಿ, ಗೀತೆಯ ೫ ನೆಯ ಅಧ್ಯಾಯದಲ್ಲಿ, (೧) **ನೈವ ಕಿಂಚಿತ್ಕರೋ ಮೀತಿ ಯುಕ್ತೋ ಮನ್ಯೇತ ತತ್ವವಿತ್ । ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ಗಚ್ಛನ್ ಸ್ವಪನ್ ಸ್ಪೃಶನ್ । ಪ್ರಲಪನ್ ವಿಸೃಜನ್ ಗೃಹ್ಣನ್, ಉನ್ಮಿಷನ್ ನಿಮಿಷನ್ನಪಿ । ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ।"** ಆತ್ಮ ತತ್ವವನ್ನರಿತ ಕರ್ಮಯೋಗನಿಷ್ಠನು, ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ, ಪ್ರಾಣಗಳೂ ತಮ್ಮ ತಮ್ಮ ವಿಷಯ ಗಳಲ್ಲಿ ಪ್ರವರ್ತಿಸುತ್ತವೆ, ಎಂದು ಅನುಸಂಧಾನದಿಂದ ಕೂಡಿದವನಾಗಿ, ತಾನಾಗಿಯೇ ಏನನ್ನೂ ಮಾಡುವದೂ ಇಲ್ಲವು, ಅದಕ್ಕೆ ಶಕ್ತಿಯೂ ಸ್ವಾತಂತ್ರ್ಯವೂ ತನಗಿಲ್ಲ

(೧) ಗೀ ೫ ೮ ೯ (೨) ಗೀ ೫ ೧೩

**ಪ್ರಯತ್ನಾಶ್ರಯರೂಪ ಕರ್ತೃತ್ವಂ ಬಂಧ ಹೇತುತ್ವೇ ಸತಿತ್ಯಾಜ್ಯಮ್**

ವೆಂದು ತಿಳಿಯತಕ್ಕದೆಂದು ಹೇಳಲ್ಪಟ್ಟಿರುತ್ತದೆ ಹಾಗೆಯೇ (೨) **"ಸರ್ವಕರ್ಮಾಣಿ ಮನಸಾನ್ಯಸ್ಯಾಸ್ತೇ ಸುಖಂ ವಶೀ। ನವದ್ವಾರೇ ಪುರೇದೇಹೇ ನೈವಕುರ್ವ್ವ ನಕಾರಯನ್"** ಇದರ ವ್ಯಾಖ್ಯಾನದಲ್ಲಿ ಶ್ರೀ ಯತಿವರ್ಯರೇ ಹೇಳುತ್ತಾರೇನೆಂದರೆ- ಆತ್ಮನ ಪ್ರಾಚೀನ ಕರ್ಮದ ಮೂಲಕವಾಗಿ ಉಂಟಾದ ದೇಹಸಂಬಧದಿಂದುಂಟಾ ಮದು ಈ ಕರ್ಮಗಳ ಕರ್ತೃತ್ವವು ಎಂಬ ವಿವೇಕದಿಂದ ಸಮಸ್ತ ಕರ್ಮಗಳನ್ನೂ ಈ ಒಂಬತ್ತು ದ್ವಾರಗಳಿರುವ ಶರೀರದಲ್ಲಿ ಸಮರ್ಪಿಸಿ ಬಿಟ್ಟು, ತಾನು ಜಿತೇಂದ್ರಿಯನಾಗಿ ದೇಹಕ್ಕೆ ನೇರಿದುದರ ವಿಷಯವಾಗಿ ಯಾವ ಪ್ರಯತ್ನವನ್ನೂ ಮಾಡದೇ, ದೇಹ ದಿಂದ ಮಾಡಿಸದೆಯೂ ಸುಖದಿಂದಿರುವನು" ಎಂಬುದಾಗಿ ಹೀಗಿರುವಾಗ ಆತ್ಮಾ ವಿಗೆ ಪ್ರಯತ್ನಾಶ್ರಯರೂಪ ಕರ್ತೃತ್ವವನ್ನು ಹೇಳುವದು ವಿರುದ್ಧವಲ್ಲವೋ ? ಎಂದು ಆಕ್ಷೇಪ ತಂದರೆ ಅದಕ್ಕೆ ಸಮಾಧಾನವಾಗಿ, ಮುಂದಿನ ವಾಕ್ಯದಿಂದ ಹೇಳು ತ್ತಾರೇನೆಂದರೆ—ಬಂಧಕವನ್ನುಂಟುಮಾಡುವ ಇಂತಹ ಪ್ರಯತ್ನಾಶ್ರಯರೂಪ ಕರ್ತೃತ್ವದ ತ್ಯಾಗವು ಇಲ್ಲಿ ಹೇಳಲ್ಪಟ್ಟಿತೇ ವಿನಾ, ನಶ್ರ್ರೇಯಸ್ಸನ್ನುಂಟು ಮಾಡುವ ಕರ್ತೃತ್ವವು ನಿಷೇಧಿಸಲ್ಪಡಲಿಲ್ಲವೆನ್ನುತ್ತಾರೆ ಮೇಲೆ ಪೂರ್ವಪಕ್ಷಿಯು ಉದಾಹರಿಸಿದ **"ನೈವಕಿಂಚಿತ್"** ಇತ್ಯಾದಿ ಶ್ಲೋಕಗಳ ಅಭಿಪ್ರಾಯವೇನೆಂದರೆ ಆ ಶ್ಲೋಕಗಳು ಕರ್ತೃತ್ವವನ್ನು ನಿಷೇಧಿಸಿ ಹೇಳಲಿಲ್ಲವು ತಾನು ದೇಹಸಂಬಧ ವಾಗಿ ಇಂದ್ರಿಯ ಮೂಲಕವಾಗಿ ನಡೆಯುವ ಕರ್ಮಗಳನ್ನು ತಾನು ನಡೆಸಿದೆನೆಂಬ ಅಭಿಪ್ರಾಯವಾದರೆ, ಅದರ ಫಲವು ಅವನನ್ನು ಸೇರಿ ಬಂಧಕವಾಗುವದರಿಂದ ಶರೀರ ಮೂಲಕ ನಡೆದವು ಎಂಬ ಅನುಸಂಧಾನ ಪೂರ್ವಕವಾದ ಕರ್ಮಸನ್ಯಾಸ ವಿರತಕ್ಕದೆಂದು ಬೋಧಿಸಿದವೆಂಬ ತಾತ್ಪರ್ಯವು

**ಆದರೆ ಪ್ರಯತ್ನಾಶ್ರಯ ಕರ್ತೃತ್ವವು ಬಂಧಹೇತುವಾದರೆ ತ್ಯಾಜ್ಯವು**

ಪರಾಧೀನ ಕರ್ತೃತ್ವವು ಮನುಷ್ಯನಿಗೆ ಉಂಟೆಂಬುದನ್ನೇನೋ ಒಪ್ಪಿದೆವು ಆದರೆ ವಿವೇಕಿಯಾದ ಮುಮುಕ್ಷುವಿಗೆ ಸ್ವೇಚ್ಛೆಯಿಂದ ಪ್ರವೃತ್ತಿಯು ಸರಿಯಿಲ್ಲ ವಾದುದರಿಂದ ಶರಣಾಗತಿಯೂ ಕೂಡ ತ್ಯಾಜ್ಯವಲ್ಲವೋ ? ಎಂದಾಕ್ಷೇಪತಂದರೆ ಎಂತಹ ಪ್ರವೃತ್ತಿಯು ತ್ಯಾಜ್ಯವು, ಎಂತವು ಅಲ್ಲವೆಂಬುದನ್ನು ಉಪದೇಶಿಸುತ್ತಾರೆ ಈತನ ಪುನಃ ಪುನಃ ಸಂಸಾರ ಬಂಧಕ್ಕೆ ಹೇತುವಾದ ಪ್ರವೃತ್ತಿಗಳೆಲ್ಲಾ ತ್ಯಾಜ್ಯ ಗಳೆಂದೂ, ಪರಮ ನಿಶ್ರೇಯಸ್ಸಿಗೆ ಹೇತುವಾದ ಪ್ರವೃತ್ತಿಯು ಅವಶ್ಯಾನುಷ್ಠೇಯ ವೆಂದೂ ತಿಳಿಸುತ್ತಾರೆ —

**ಅನಪಿನ್ನು** - ಹೀಗಾದನಂತರವೆಂದರೆ ಪ್ರಯತ್ನಾಶ್ರಯರೂಪ ಕರ್ತೃತ್ವವು ಕೈಂಕರ್ಯಮಾತ್ರದಲ್ಲೇ ಇರಬೇಕೆಂಬ ನಿಯಮವಿಲ್ಲದೆ, ಭಗವತ್ಪ್ರೀತಿಯನ್ನುಂಟು

**ಆನಪಿನ್ಬು ಕರ್ತ್ತೃತ್ವತ್ತಿಲ್ ಬಂಧಹೇತುವಾನ ವಾಕಾರಮೇ ತ್ಯಾಜ್ಯಮ್ ಅದೇ ದೆನ್ನಿಲ್ ಈಶ್ವರ್ರ ಕೊಡುತ್ತ ಜ್ಞಾನಶಕ್ತ್ಯಾದಿಗಳ್ಳೈಯುಮ್ ಕರಣ ಕಳೇಬರಾದಿಗಳ್ಳೈಕೊಂಡು ಅವನ್ ಪ್ರೇರಕನುಮಾಯ್ ಧಾರಕನು ಮಾಯ್, ಫಲಿಯುಮಾಯ್ಕ್ಕೊಂಡು ಸಹಕರಿಕ್ಕ ಪ್ರವರ್ತ್ತಿಕ್ಕಿರ ತನ್ನೈ, ಇದುಕ್ಕು ವಿಪರೀತಮಾಗ ಅನುಸಂಧಿತ್ತಿರುಕ್ಕೈಯುಮ್, ಇವ್ವನು ಸಂಧಾನತ್ತಿಲ್ ತಿರುತ್ತ ಮುಣ್ಣ್ಡೇಯಾಗಿಲುಮ್, ಇದಿಲೇ ಪ್ರಯೋಜನಾಂತ**

ಮಾಡಿ ನಿಶ್ರೇಯಸ್ಸನ್ನುಂಟುಮಾಡುವದರಲ್ಲೂ ಕರ್ತೃತ್ವವು ಇರುವದರಿಂದ, **ಕರ್ತ್ತೃತ್ವತ್ತಿಲ್ ಬಂಧಹೇತುವಾನ** - ಕರ್ತೃತ್ವದಲ್ಲಿ ಬಂಧಕ್ಕೆ ಕಾರಣಭೂತವಾದ -**ಆಕಾರಮೇತ್ಯಾಜ್ಯಮ್**-ರೂಪವೇ ತ್ಯಾಜ್ಯವಾದುದು ಅದು ಯಾವುದೆಂದರೆ ಇಂದ್ರಿಯಗಳ ಮೂಲಕ ಉಪಭೋಗ ಕಾಮಿಯಾಗಿ ಪ್ರವೃತ್ತಿಯು ದೇಹಯಾತ್ರಾ ದಿಗಳೂ ಕೂಡ ಇಂದ್ರಿಯಗಳ ಮೂಲಕವಾಗಿ ನಡೆಯಬೇಕಲ್ಲವೇ ಅವುಗಳು ಹೇಗೆ ತ್ಯಾಜ್ಯವು? ಅಗತ್ಯ ಅವು ನಡೆಯತಕ್ಕವುಗಳೇ ಆದರೆ ಅವುಗಳಲ್ಲೇ ಲಿಪ್ತನಾಗಿರಕೂಡದು ಎಂಬ ಅಭಿಪ್ರಾಯವು

ಮುಂದೆ ಅದನ್ನೇ ವಿಶದೀಕರಿಸುತ್ತಾರೆ -ಅದೇದೆನ್ನಿಲ್?-ಇದರ ಅಭಿಪ್ರಾಯ ವೇನು ಎಂದರೆ, **ಈಶ್ವರ್ರಕೊಡುತ್ತ** - ಸರ್ವೇಶ್ವರನು ದಯಪಾಲಿಸಿರುವ, **ಜ್ಞಾನ ಶಕ್ತ್ಯಾದಿಗಳ್ಳೈಯುಮ್ ಕೊಂಡು**-ಜ್ಞಾನ ಶಕ್ತಿಗಳನ್ನೂ, ಮತ್ತು **ಕರಣ ಕಳೇಬ ರಾದಿಗಳ್ಳೈಯುಮ್**-ಇಂದ್ರಿಯ ಶರೀರಾದಿಗಳ ಮೂಲಕ **ಪ್ರೇರಕನುಮಾಯ್**- ಹೃಷೀಕೇಶನೆಂದೂ **ಭೋಕ್ತಾ ಭೋಗ್ಯಂ ಪ್ರೇರತಾರಂಚ ಮತ್ವಾ** ಎಂದೂ ಹೇಳಿರುವಹಾಗೆ ಪ್ರೇರಕನಾಗಿ, **ಧಾರಕನುಮಾಯ್ಕ್ಕೊಂಡು** - ಸತ್ತಾದಾಯ ಕನೂ ಆಗಿ, **ಫಲಿಯುಮಾಯ್**-ಸರ್ವಕ್ಕೂ ಭೋಗ್ಯಭೂತನಾಗಿ ಎಂದರೆ ತಾನೇ ಲೀಲಾರಸವನ್ನೆಲ್ಲಾ ಅನುಭವಿಸುವವನಾಗಿ, **ಸಹಕರಿಕ್ಕ** - ಸಹಾಯ ಮಾಡಲಾಗಿ **ಪ್ರವರ್ತಿಕ್ಕಿರ** - ಪ್ರವರ್ತಿಸುವ, **ತನ್ನೈ** - ತನ್ನನ್ನೂ, **ಇದುಕ್ಕು ವಿಪರೀತ ಮಾಗ** - ಇದಕ್ಕೆ ವಿರೋಧವಾಗಿ, **ಅನುಸಂಧಿಕ್ಕೈಯುಮ್** - ಅನುಸಂಧಾನ ಮಾಡೋಣವೂ, ಎಂದರೆ ಪರಮಪುರುಷನಿಗೆ ಅಧೀನವಾದುದು ತನ್ನ ಪ್ರವೃತ್ತಿಯು ಎಂದು ಭಾವಿಸದೆ, ತಾನೇ ಸ್ವತಂತ್ರನು, ತಾನೇ ಪ್ರವೃತ್ತಿಗೆಲ್ಲಾ ಫಲಿಯು, ತನ್ನ ಉಪಭೋಗಗಳೇ ಮುಖ್ಯವು, ಎಂದು ಹೀಗೆಲ್ಲಾ ವಿಪರೀತವಾಗಿ ಅನುಸಂಧಾನವೂ, ಮತ್ತು **ಇವ್ವನುಸಂಧಾನತ್ತಿಲ್** - ಹೀಗೆ ಸ್ವಾಮಿಯೇ ಪ್ರೇರಕನಾಗಿ, ಧಾರಕ ನಾಗಿ, ಫಲಿಯಾಗಿ, ಪ್ರವರ್ತಿಸುವ ಹಾಗೆ ಮಾಡುತ್ತಾನೆಂಬ ಅನುಸಂಧಾನದಲ್ಲಿ, **ತಿರುತ್ತಂ ಉಂಡೇಯಾಗಿಲುಮ್** - ವಿಶದವಾದ ಜ್ಞಾನವಿದ್ದರೂ ಕೂಡ (ಸಾರಸಙ್ಗ್ರಹ ವ್ಯಾಖ್ಯಾನವು) ಗುರೂಪದೇಶವೇ ಹಾಗಿದ್ದರೂ (ಸಾರ ವಿವರಣಿ

**ರತ್ತೈ ಯಿಡುಕ್ಕಿ ಅನುಷ್ಠಿಕ್ಕೈಯುಮ್ ಬಂಧಕಮ್. ಭಕ್ತಿಪ್ರಪತ್ತಿಗಳ್ ತಾನುಮ್ ಪ್ರಯೋಜನಾನ್ತರ ಪರನುಕ್ಕು ಬಂಧಕನ್ನಾಯಿರೇ ಇರುಪ್ಪದು.**

ವ್ಯಾಖ್ಯಾನವು) ಎರಡಕ್ಕೂ ಏನೂ ವ್ಯತ್ಯಾಸವಿಲ್ಲವು, **ಇದಿಲೇ** - ಈ ಅನುಸಂಧಾನದಲ್ಲೇ, **ಪ್ರಯೋಜನಾನ್ತರತ್ತೈ** - ಐಹಿಕ ಭೋಗ ಮತ್ತು ಸ್ವರ್ಗಾದಿ ಭೋಗಗಳನ್ನು, **ಇಡುಕ್ಕಿ** - ಉದ್ದೇಶಿಸಿ, **ಅನುಷ್ಠಿಕ್ಕೈಯುಮ್** - ಅನುಷ್ಠಿಸೋಣವು, ಪ್ರವೃತ್ತಿಯು, **ಬಂಧಕಮ್** - ಬಂಧಕವಾಗುತ್ತಿದೆ. ಆದುದರಿಂದ ಅಂತಹ ಕರ್ತೃತ್ವವೀಗ ವಿಪರೀತವಾದುದಾಗಿ ತ್ಯಾಜ್ಯವೆಂಬ ಭಾವವು ಜ್ಞಾನಶಕ್ತಿ ವಿವೇಕ ಕಳೇಬರಾದಿಗಳನ್ನು ಅನುಗ್ರಹಿಸಿದ ಕೃಪಾಸಾಗರನು ತನ್ನ ಮೂಲಕವಾಗಿ ತಾನೇ ಪ್ರೇರಕನಾಗಿ ಸತ್ತಾದಾಯಕನಾಗಿ, ನಾವು ಮಾಡುವ ಪ್ರವೃತ್ತಿಗಳಿಗೂ ತಾನೇ ಫಲಾನುಭವ ಮಾಡುವನಾಗಿದ್ದುಕೊಂಡು ತಾನೇ ನಡೆಸುತ್ತಾನೆಂಬ ಅನುಸಂಧಾನವಿರತಕ್ಕದ್ದೂ ನ್ಯಾಯವು, ಅವರೊಂದಿಗೆ ಅಲ್ಪಾಸ್ಥಿರ ಫಲಗಳಿಗೆ ಆಶೆಪಟ್ಟು ಅವುಗಳಲ್ಲಿ ಪ್ರವೃತ್ತಿಯು ಆ ಅನುಸಂಧಾನದೊಂದಿಗೆ ಯುಕ್ತವಲ್ಲವು ಅಂತಹ ಕರ್ತೃತ್ವವು ತ್ಯಾಜ್ಯವು ಇಲ್ಲಿ **ಪ್ರೇರಕನುಮಾಯ್ ಧಾರಕನುಮಾಯ್ ಫಲಿಯುಮಾಯ್** ಸರ್ವೇಶ್ವರನು ಇದ್ದಾನೆಂಬ ಪ್ರಯೋಗದಿಂದ ನಾವು ತಿಳಿಯತಕ್ಕ ವಿಷಯವೇನೆಂದರೆ-ಗೀತಾ ೧೮-ಶ್ಲೋಕದಲ್ಲಿ

**"ಅಧಿಷ್ಠಾನಂ ತಥಾಕರ್ತಾ ಕರಣಂಚ ಪೃಥಗ್ವಿಧಂ**
**ವಿವಿಧಾಚ ಪೃಥಕ್ಚೇಷ್ಟಾ ದೈವಂಚೈವಾತ್ರಪಂಚಮಮ್"**

ಎಂದು ಒಂದು ಕರ್ಮವು ಸಿದ್ಧಿಸಬೇಕಾದರೆ ಐದು ಕಾರಣಗಳಿದ್ದೇ ಇರಬೇಕೆಂದು ಶ್ರೀ ಕೃಷ್ಣಭಗವಾನರವರು ಅರ್ಜುನನಿಗೆ ಉಪದೇಶಿಸಿರುತ್ತಾರೆ—ಈ ಚೇತನನಿಂದ ಒಂದು ಕರ್ಮವು ನಡೆಯಬೇಕಾದರೆ (೧) ಅಣುವಾದ ಜೀವನಿಗೆ ಶರೀರಬೇಕು, ಇಲ್ಲದೆ ಆಗುವದಿಲ್ಲವು ಬರೀ ದೇಹಮಾತ್ರವೇ ನಾಲದು (೨)ಇಂದ್ರಿಯಗಳು ಸರಿಯಾದ ಸ್ಥಿತಿಯಲ್ಲಿರಬೇಕು (೩)ಒಬ್ಬಕರ್ತಾ ಆ ಶರೀರದಲ್ಲಿರಬೇಕು, ಪ್ರೇತವು ಏನನ್ನೂ ಮಾಡಲಾರದು, (೪) ಆತನು ಸುಮ್ಮನೆ ಇದ್ದು ಬಿಟ್ಟರೆ ಏನೂ ನಡೆಯುವದಿಲ್ಲವು ಜ್ಞಾನ ಚಿಕೀರ್ಷಾಪ್ರಯತ್ನಗಳು ಆವಶ್ಯಕವು (೫) ಇವುಗಳೊಂದಿಗೆ ಪ್ರೇರಕನಾಗಿ ಸತ್ತಾದಾಯಕನಾಗಿ ಫಲಿಯಾಗಿರುವವನ ಸಙ್ಕಲ್ಪಾದಿಗಳೂ ಆವಶ್ಯಕವು ಇವು ಐದೂ ನೇರವೆ ಹೋದರೆ ಕರ್ಮಪ್ರವೃತ್ತಿಯಿಲ್ಲವು, ಹಾಗೆ ಜೀವಾತ್ಮನ ಜ್ಞಾನ ಚಿಕೀರ್ಷಾದಿಗಳೂ ಪರಮಾತ್ಮ ಸಂಕಲ್ಪವೂ ಇಲ್ಲದೆ ಕರ್ಮವು ನಡೆಯಲಾರದಾದುದರಿಂದ ಜೀವಾತ್ಮನಿಗೆ ಪರಾಧೀನಕರ್ತೃತ್ವ, ಸರ್ವೇಶ್ವರನಿಗೆ ಅಧೀನಪಾದಕರ್ತೃತ್ವ ಉಂಟೆಂದು ಹೇಳಲ್ಪಟ್ಟಿತು ಮತ್ತು ಈ ಮೇಲಿನ ವಾಕ್ಯದಲ್ಲಿ **ಜ್ಞಾನ ಶಕ್ತ್ಯಾದಿಗಳೈಯುಂ ಕರಣ ಕಳೇಬರಾದಿಗಳೈ ಕೊಂಡು** ಎಂಬುದರಿಂದ **ಅಧಿಷ್ಠಾನಂ, ಕರಣಂಚ**

**ಆಗೈಯಾಲ್ ಸ್ವಾಭಾವಿಕ ಕೈಂಕರ್ಯಾರ್ಥಿಯಾಯ್ ಅನನ್ಯಪ್ರಯೋಜನನಾಯಿರುಕ್ಕು ಮವನುಕ್ಕು, ಫಲದಶೈಯಿಲ್ ಕರ್ತೃತ್ವಂಪೋಲೇ, ಉಪಾಯದ**

---

**ಪೃಥಗ್ವಿಧಂ, ವಿವಿಧಾಚ ಪೃಥಕ್ಚೇಷ್ಟಾ** ಎಂಬವು ವ್ಯಾಖ್ಯಾನಮಾಡಲ್ಪಟ್ಟವು **ಅವರ್ಗ್ಗ ಪ್ರೇರಕನುಮಾಯ್** ಇತ್ಯಾದಿಯಿಂದ **ದೈವಂಚೈವಾತ್ರ ಪಂಚಮಂ** ಎಂಬುದು ಉಪಪಾದಿಸಲ್ಪಟ್ಟಿತು" ಆದುದರಿಂದ ಈ ಮೇಲಿನ ವಾಕ್ಯವು ಗೀತಾ ಶ್ಲೋಕದ ಉಪಪಾದನೆಯು ಈ ಶ್ಲೋಕದ ಅಂತ್ಯಭಾಗವನ್ನು ಮುಂದೆ ಶ್ರೀ ದೇಶಿಕರವರೇ ಉದಾಹರಿಸುತ್ತಾರೆ ಮಹಾಕೃಪಾಳುವಾದ ಭಗವಂತನು ಈತನಿಗೆ ಶಾಸ್ತ್ರಜನ್ಯ ಜ್ಞಾನಕ್ಕೂ ವಿವೇಕಜನ್ಯ ಜ್ಞಾನಕ್ಕೂ ಅನುಕೂಲವನ್ನು ಒದಗಿಸಿ ಕೊಟ್ಟಿರುವಾಗ, ಅಲ್ಪಾಸ್ಥಿರಫಲಗಳನ್ನುಂಟುಮಾಡುವ ಪ್ರವೃತ್ತಿಗಳಲ್ಲಿ ಕರ್ತೃತ್ವವು ಈ ಪ್ರಪನ್ನನಿಗೆ ಸರ್ವಥಾ ತ್ಯಾಜ್ಯವೆಂದು ಈಗ ಉಪದೇಶಿಸಿದರು ಆದುದರಿಂದ ಪ್ರಪನ್ನನಿಗೆ ವೈರಾಗ್ಯವು ಅವಶ್ಯಕವು ಹಾಗೆ ವೈರಾಗ್ಯವಿಲ್ಲದೆ ಅಂತಹ ಪ್ರವೃತ್ತಿಗಳನ್ನು ತ್ಯಾಗಮಾಡದೆ, ಅಂತಹ ಪ್ರಯೋಜನಾಂತರಗಳಾಗಿ ಉಪಾಯಾನುಷ್ಠಾನಮಾಡಿದರೆ, ಅದು ಬಂಧಕವೇ ಆಗುತ್ತದೆಂದು ಮುಂದಿನ **"ಭಕ್ತಿಪ್ರಪತ್ತಿಗಳ್"** ಎಂಬ ವಾಕ್ಯದಿಂದ ತಿಳಿಸುತ್ತಾರೆ—**ಭಕ್ತಿಪ್ರಪತ್ತಿಗಳ್ತಾನುಂ** - ಉಪಾಸನ ಮತ್ತು ಭರನ್ಯಾಸವಾದ ಎರಡು ವಿಧ ಸಾಕ್ಷಾದುಪಾಯಗಳೂ ಸಹ, **ಪ್ರಯೋಜನಾನ್ತರಪರನುಕ್ಕು** - ಅಲ್ಪಾಸ್ಥಿರ ಫಲಾಕಾಂಕ್ಷೆಯಿಂದ ಉಪಾಯಾನುಷ್ಠಾನವನ್ನು ಮಾಡುವವನಿಗೆ, **ಬಂಧಕಮಾಯಿರೇ ಇರುಪ್ಪದು** - ಬಂಧಕವಾಗಿಯೇ ಇರುತ್ತವೆ ಆದುದರಿಂದ ಇಂತಹ ಅಮೋಘಗಳಾದ ಎರಡು ಉಪಾಯಗಳನ್ನೂ ಅಲ್ಪಾಸ್ಥಿರ ಫಲಗಳಾದ ಪ್ರಯೋಜನಾಂತರಗಳಿಗಾಗ ಅನುಷ್ಠಿಸುವದು ವಿವೇಕಿಗೆ ಯುಕ್ತವಲ್ಲವೆಂಬ ಭಾವವೂ ಇದರಿಂದ ತೋರಿಬರುತ್ತದೆ ಗುಬ್ಬಿಯನ್ನು ಹೊಡೆಯುವದಕ್ಕಾಗಿ ಬ್ರಹ್ಮಾಸ್ತ್ರವೇ ಈ ಆತ್ಮಾ ಎಂಬ ಶರವನ್ನು ಪ್ರಣವವೆಂಬ ಧನುಸ್ಸಿನಲ್ಲಿಟ್ಟು, ಪರಬ್ರಹ್ಮನಪಾದವೆಂಬ ಗುರಿಯಮೇಲಿಟ್ಟು ಬಿಟ್ಟರೆ, ಪರಿಪೂರ್ಣಬ್ರಹ್ಮಾನುಭವವು ದೊರೆಯುವ ಹಾಗೆ ಮಾಡತಕ್ಕದ್ದೇ ಉಚಿತವು ಎಂಬ ಭಾವವು ಇದನ್ನೇ ಮುಂದಿನ ವಾಕ್ಯದಿಂದ ಹೇಳುತ್ತಾರೆ—ಅಲ್ಪಾಸಿರಫಲದಾಯಕದಲ್ಲಿ ಕರ್ತೃತ್ವವು ತ್ಯಾಜ್ಯವಾದರೆ, ಇನ್ನು ಯಾವುದರಲ್ಲಿ ಉಪಾದೇಯವೆಂದರೆ ತಿಳಿಸುತ್ತಾರೆ **"ಆಗೈಯಾಲ್"** ಎಂದಾರಂಭಿಸಿದ ವಾಕ್ಯಮೂಲಕವಾಗಿ

**ಆಗೈಯಾಲ್** - ಹಾಗಾದುದರಿಂದ, **ಸ್ವಾಭಾವಿಕಕೈಂಕರ್ಯಾರ್ಥಿಯಾಯ್** - ಶೇಷಭೂತನಾದ ಚೇತನನಾದ ತನಗೆ ಸ್ವಾಭಾವಿಕವಾಗಿ ತನ್ನ ಶೇಷಿಯಾದ ಭಗವಂತನಿಗೆ ಕೈಂಕರ್ಯಮಾಡುವದರಲ್ಲೇ ಅಪೇಕ್ಷೆಯುಳ್ಳವನಾಗಿ, **ಅನನ್ಯಪ್ರಯೋಜನನಾಯಿರುಕ್ಕು ಮವನುಕ್ಕು** - ಅದಲ್ಲದೆ ಇನ್ನು ಯಾವ ಪ್ರಯೋಜನದಲ್ಲೂ

**ಶೈಯಿಲ್ ಕರ್ತೃತ್ವಮುಮ್ ವಿರುದ್ಧಮನ್ರು.**

**ಫಲದಶಾ ಸಂಸಾರದಶಾ ಕರ್ತೃತ್ವಯೋಃ ತಾರತಮ್ಯಕಥನಮ್**

**ಫಲದಶೈಯಿಲ್ ವಿವಿಧ ವಿಚಿತ್ರ ಕೈಂಕರ್ಯ ಕರ್ತೃತ್ವಮ್ ಕೇವಲಂ ಈಶ್ವರೇಚ್ಛಾವೈಚಿತ್ರಿಯೋಡೆ ಪೊರುನ್ದಿನ ಸ್ವೇಚ್ಛೈಯಾಲೇ ಯಾಯಿರುಕ್ಕುಮ್. ಸಂಸಾರ ದಶೈಯಿಲುಳ್ಳ ಕರ್ತೃತ್ವಮೆಲ್ಲಾಮ್ ಕರ್ಮಾನುರೂಪಮಾಗ**

ಆಶೆಯಿಲ್ಲದಿರುವ ಈ ಮುಮುಕ್ಷುವಿಗೆ, **ಫಲದಶೈಯಿಲ್ ಕರ್ತೃತ್ವಂ ಪೋಲೇ** - ಪೂರ್ವಪಕ್ಷಿಗಳು ಫಲದಶೈಯಲ್ಲಿ ಮಾತ್ರ ಪ್ರಯತ್ನರೂಪಕರ್ತೃತ್ವವು ಉಚಿತವೆಂದು ಒಪ್ಪಿಕೊಂಡಹಾಗೆ, **ಉಪಾಯದಶೈಯಿಲುಂ** - ಭರನ್ಯಾಸಾದಿ ಉಪಾಯಗಳನ್ನು ಅನುಷ್ಠಿಸುವ ದಶೈಯಲ್ಲಿಯೂ, **ಕರ್ತೃತ್ವಮುಮ್** - ಈ ಪ್ರಯತ್ನಾಶ್ರಯ ರೂಪ ಕರ್ತೃತ್ವವು, **ವಿರುದ್ಧಮನ್ರು** - ವಿರುದ್ಧವಲ್ಲವು, ಎಂದರೆ ನೀವು ಭಾವಿಸಿದ ಹಾಗೆ ತ್ಯಾಜ್ಯವಲ್ಲವು ಅವಶ್ಯಾನುಷ್ಠೇಯವೆಂಬ ತಾತ್ಪರ್ಯವು ಇಂತಹ ಪೂರ್ವ ಪಕ್ಷವನ್ನು ಮನಸ್ಸಿನಲ್ಲಿಟ್ಟೇ **"ಫಲದಶೈಯಿಲ್ ಕರ್ತೃತ್ವಂ ಪೋಲೇ"** ಎಂಬ ಪ್ರಯೋಗವು ಉಪಾಯದಶೈಯಲ್ಲಿ ಪ್ರಯತ್ನಾಶ್ರಯರೂಪ ಕರ್ತೃತ್ವವು ಬೇಕಿಲ್ಲವೆಂದು, ಪರಮಾತ್ಮನನ್ನು ಸಂಬಿದವನನ್ನು ಆತನೇ ಕರುಣಿಸಿ ರಕ್ಷಿಸುವನು, ಭರನ್ಯಾಸಾದಿಗಳ ಆವಶ್ಯಕತೆಯು ಇಲ್ಲವೆಂಬ ವಾದವನ್ನು ಇಲ್ಲಿ ನಿರಾಕರಿಸುತ್ತಾರೆ. ಆದುದರಿಂದ ಈತನ ಕರ್ತೃತ್ವವು ಈಗ ಬದ್ಧನಾಗಿದ್ದರೂ ಉಪಾಯದಶೈಯಲ್ಲೂ ಹಾಗೆಯೇ ಮುಕ್ತನಾಗಿರುವ ದಶೈಯಲ್ಲೂ ಆವಶ್ಯಕವೆಂದು ಉಪಪಾದಿಸಲ್ಪಟ್ಟಿತು. ಮೋಕ್ಷದಶೆಯಲ್ಲಿ ಕರ್ತೃತ್ವವು ನೀವು ಒಪ್ಪುವ ಪ್ರಕಾರ ಹೇಗೆ ಸ್ವರೂಪ ವಿರುದ್ಧವಲ್ಲವೋ ಹಾಗೆಯೇ ಇಲ್ಲಿಯೂ ಈ ಉಪಾಯದಶೆಯಲ್ಲಿಯೂ ವಿಶೇಷ ಸತ್ವಗುಣಾಧಿಕ್ಯದಿಂದುಂಟಾದವನಿಗೇನೇ ಲಭಿಸುವ ಮೋಕ್ಷೋಪಾಯ ಕರ್ತೃತ್ವವೂ ಸಹ ಸ್ವರೂಪವಿರುದ್ಧವಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯವನ್ನು ನಿರಾಕರಿಸಿರುತ್ತಾರೆ.

ಆದರೆ ಈ ಎರಡು ವಿಧ ಕರ್ತೃತ್ವವೂ ಪ್ರಯತ್ನಾಶ್ರಯರೂಪವಾದುದಾಗಿ ಎರಡೂ ಸಮಾನವಾದುದೋ ಎಂದರೆ ಮುಂದಿನ ಎರಡು ವಾಕ್ಯಗಳಿಂದ ಅವುಗಳಿಗಿರುವ ತಾರತಮ್ಯವನ್ನು ತಿಳಿಸುತ್ತಾರೆ —

**ಫಲ ಮತ್ತು ಸಂಸಾರದಶೆಗಳ ಕರ್ತೃತ್ವಗಳ ತಾರತಮ್ಯವು**

**ಫಲದಶೈಯಿಲ್** - ಫಲವಾದ ಪರಿಪೂರ್ಣಬ್ರಹ್ಮಾನುಭವ ಮಾಡುವ ಮೋಕ್ಷದಶೆಯಲ್ಲಿ, **ವಿವಿಧ ವಿಚಿತ್ರ ಕೈಂಕರ್ಯ ಕರ್ತೃತ್ವಮ್** - ನಾನಾ ವಿಧವಾಗಿ ವಿಚಿತ್ರವಾಗಿರುವ, ಪರಮಪುರುಷನಿಗೆ ಕೈಂಕರ್ಯದಲ್ಲಿ ಕರ್ತೃತ್ವವು, ಕೇವಲ **ಈಶ್ವರೇಚ್ಛಾವೈಚಿತ್ರಿಯೋಡೇ ಪೊರುಂದಿನ** - ಸರ್ವೇಶ್ವರನ ಸಂಕಲ್ಪದ ವೈಚಿತ್ರ್ಯದೊಂದಿಗೆ ಸೇರಿರುವ, **ಸ್ವೇಚ್ಛೈಯಾಲೇ ಯಿರುಕ್ಕುಮ್** - ಈ ಮುಕ್ತನ ಇಚ್ಛಾನುಗುಣವಾಗಿ

**ಈಶ್ವರರ್ ಪರಿಣಮಿಪ್ಪಿತ್ತ ಸತ್ವರಜಸ್ತಮಸ್ಸುಕ್ಕಳೈ ಉಪಾಧಿಯಾಗಕ್ಕೊಂಡು ಬಹುವಿಧಮಾಯಿರುಕ್ಕುಮ್.**

---

ಇರುವಂತಾದ್ದು, ಸಂಸಾರ ದಶೈಯಲ್ಲುಂಟಾಗುವ, **ಕರ್ತೃತ್ವಮೆಲ್ಲಾಮ್** - ಕರ್ತೃತ್ವವೆಲ್ಲವೂ, **ಕರ್ಮಾನುರೂಪಮಾಗ** - ಈ ಬದ್ಧಾತ್ಮನ ಪ್ರಾರಬ್ಧಕರ್ಮಾನು ರೂಪವಾಗಿ, ಸರ್ವೇಶ್ವರನು, **ಪರಿಣಮಿಪ್ಪಿತ್ತ ಸತ್ವರಜಸ್ತಮಸ್ಸುಕ್ಕಳೈ ಉಪಾಧಿ ಯಾಗಕ್ಕೊಂಡು** - ಪ್ರೇರಕನಾಗಿ ಪರಿಣಾಮವನ್ನು ಹೊಂದುವಹಾಗೆ ಮಾಡಿದ ಸತ್ವರಜಸ್ತಮಸ್ಸುಗಳ ಉಪಾಧಿ ಎಂದರೆ ಕಾರಣಮೂಲಕವಾಗಿ, **ಬಹುವಿಧಮಾ ಯಿರುಕ್ಕುಮ್** - ನಾನಾ ವಿಧವಾಗಿರುತ್ತದೆ, ಎರಡು ಅವಸ್ಥೆಗಳಲ್ಲೂ ಕರ್ತೃತ್ವವು ನಾನಾಬಗೆಯಾಗಿರುತ್ತದೆಂದು ಹೇಳಿ, ಮೋಕ್ಷದಶೆಯಲ್ಲಿ ಕರ್ತೃತ್ವವು ವಿವಿಧ ವಿಚಿತ್ರ ವಾಗಿರುವದು ಪರಮಪುರುಷನ ಇಚ್ಛಾದೊಂದಿಗೆ ಸೇರಿದ ಸ್ವೇಚ್ಛಾಸಿದ್ಧವಾದುದು ಎಂದೂ, ಸಂಸಾರದಶೆಯಲ್ಲಾದರೋ ಈತನಿಗೆ ಪ್ರಾರಬ್ಧಕರ್ಮಾನುಗುಣವಾಗಿ ಉಂ ಟಾದ ಸತ್ವರಜಸ್ತಮಸ್ಸುಗಳ ಆಧಿಕ್ಯರೂಪವಾದ ಉಪಾಧಿಯ ಮೂಲಕ ಬಹುವಿಧ ವಾಗಿರುತ್ತದೆಂದೂ, ಹೇಳಿದರು ಮುಕ್ತದಶೆಯಲ್ಲಿ ಈ ಕರ್ತೃತ್ವ ವಿವಿಧ ವೈಚಿತ್ರ್ಯ ತೆಯು ಹೇಗೆ ಎಂದರೆ ಛತ್ರ, ಚಾಮರ, ಸಾಮವೇದಗಾನ, ಸರಾಕ್ ಹೇಳುವದು ಮೊದಲಾದ ಕೈಂಕರ್ಯಗಳೂ ಮತ್ತು ಈಶ್ವರನ ಸಙ್ಕಲ್ಪಾನುಸಾರವಾಗಿ ಆಳ್ವಾರುಗಳಾ ಗಿಯೂ, ಆಚಾರ್ಯರುಗಳಾಗಿಯೂ ಅವತರಿಸಿ ವಿವಿಧ ವಿಚಿತ್ರ ಕೈಂಕರ್ಯಗಳನ್ನು ಆತನ ಸಂಕಲ್ಪಾನುಸಾರ ನಡೆಸೋಣವು ಇಲ್ಲಿ ಬದ್ಧ ಜೀವಾತ್ಮರುಗಳ, ಕರ್ತೃತ್ವದಲ್ಲಿ ವೈವಿ ಧ್ಯವು ಹೇಗೆ ? ಎಂದರೆ ಪ್ರಾರಬ್ಧಕರ್ಮಾನುಗುಣವಾಗಿ ತುಂಬಾ ಸತ್ವಗುಣಾಧಿಕ್ಯವಿದ್ದ ಪಕ್ಷದಲ್ಲಿ ಜನ್ಮಕಾಲದಲ್ಲಿ ಪರಮಪುರುಷನಿಂದ ಕಟಾಕ್ಷಿಸಲ್ಪಟ್ಟವನಾಗಿ, ಸಾತ್ವಿಕ ಸಂಭಾಷಣೆ, ಗುರೂಪಸದನ, ಉಪಾಯಾನುಷ್ಠಾನಗಳು ಒದಗಿ ಹೀಗೆ ಬಹುವಿಧ ವಾದ ಕರ್ಮಗಳಲ್ಲಿ ಕರ್ತೃತ್ವ ಉಂಟಾಗುತ್ತದೆ ಇದಕ್ಕೆ ನಿದರ್ಶನಗಳು.-ಅಂಬರೀಷ, ಪ್ರಹ್ಲಾದ, ವಿಭೀಷಣ ಉದ್ಧವ ಸಂಜಯಾದಿಗಳು ರಜಸ್ಸು ತಮಸ್ಸುಗಳ ಆಧಿಕ್ಯ ಉಂಟಾಗಿದ್ದರೆ ಆ ಉಪಾಧಿಗಳಿಗನುಗುಣವಾದ ನಾನಾ ವಿಧವಾಗಿ ಬಂಧಕ ವನ್ನುಂಟುಮಾಡುವ ಕರ್ಮಗಳಲ್ಲಿ ಕರ್ತೃತ್ವ ಉಂಟಾಗುತ್ತದೆ ಇದಕ್ಕೆ ನಿದರ್ಶನಗಳು ದುಷ್ಟಚತುಷ್ಟಗಳೆಂದು ಹೇಳಲ್ಪಟ್ಟ ದುರ್ಯೋಧನ, ದುಶ್ಶಾಸನ, ಶಕುನಿ, ಕರ್ಣ ಮತ್ತು ಕಂಸ, ಖರ, ದೂಷಣತಾಟಕಿ ಮೊದಲಾದವರು ಈ ಎರಡು ವಿಧ ಕರ್ತೃ ತ್ವವೂ ಪರಮಪುರುಷಾಧೀನವಾಗಿರುತ್ತದೆ ಫಲದಶೈಯಲ್ಲಿ, ಕರ್ಮಾನುಗುಣವಾಗಿ ಯಲ್ಲದೆ ಸುಮ್ಮನೆ ಪರಮಪುರುಷೇಚ್ಛಾನುಗುಣ ಸ್ವಸಂಕಲ್ಪಾಯುಕ್ತವಾಗಿ ಕರ್ತೃತ್ವ ವಿರುತ್ತದೆ ಸಂಸಾರದಶೈಯಲ್ಲಾದರೋ ಕರ್ಮಾನುಗುಣವಾಗಿ ಪರಮಪುರುಷನ ಪ್ರೇರಕತ್ವಾಧೀನವಾಗಿರುತ್ತದೆ ಹೀಗೆ ಈ ಎರಡು ಅವಸ್ಥೆಯಲ್ಲಿರುವ ಕರ್ತೃತ್ವ

**ಸಂಸಾರದಶಾಯಾಂಕರ್ತೃತ್ವಂ ಕದಾಬಂಧಕಂ,ಕದಾಮೋಕ್ಷಹೇತುಕಮ್**

**ಇದಿಲ್ ರಜಸ್ಸಾಲುಮ್, ತಮಸ್ಸಾಲುಮ್, ಪ್ರಯೋಜನಾಂತ ಸಂಗಹೇತುವಾನ ಸತ್ವತ್ತಾಲುಮ್, ವರುಮ್ ಕರ್ತೃತ್ವಮ್, ಬಂಧಕಮ್ ಭಗವತ್ಪ್ರಾಪ್ತಿಯಿಲೇ ಸಂಗತ್ತೈ (ಯುಂಡಾಕ್ಕುಮ್) ಪುಣರ್ಕ್ಕುಮ್ ಪ್ರಕೃಷ್ಟ ಸರ್ವವಿಶೇಷ ಮುಡಿಯಾಗ ವರುಮ್ ಕರ್ತೃತ್ವಂ ಮೋಕ್ಷಕಾರಣಮ್.**

ಗಳಿಗೆ ತಾರತಮ್ಯ ಉಂಟೆಂದು ಹೇಳಿದರು ಮುಂದೆ ಈ ಬದ್ಧದಶೆಯಲ್ಲಿ ಪ್ರಾಪ್ತ ವಾಗುವ ಕರ್ತೃತ್ವವು ಯಾವ ಸಂದರ್ಭದಲ್ಲಿ ಬಂಧಕವು, ಯಾವ ಸಂದರ್ಭದಲ್ಲಿ ಮೋಕ್ಷಹೇತುವೆಂಬುದನ್ನು ತಿಳಿಸುತ್ತಾರೆ —

## ಸಂಸಾರದಶೆಯ ಕರ್ತೃತ್ವವು ಯಾವಾಗ ಬಂಧಕವು ? ಯಾವಾಗ ಮೋಕ್ಷಹೇತುವು ?

**ಇದಿಲ್**-ಈ ಬದ್ಧದಶೆಯ ಕರ್ತೃತ್ವದಲ್ಲಿ, **ರಜಸ್ಸಾಲುಮ್ ತಮಸ್ಸಾಲುಮ್** ರಜೋಗುಣ ತಮೋಗುಣಗಳಿಂದಲೂ ಎಂದರೆ ಅವುಗಳ ಆಧಿಕ್ಯದಿಂದಲೂ, ಮತ್ತು **ಪ್ರಯೋಜನಾನ್ತರಸಂಗಹೇತುವಾನ ಸತ್ವತ್ತಾಲುಮ್** - ಅಲ್ಪಗಳಾದ ಅಶಾಶ್ವತಗಳಾದ, ಐಹಿಕ ಸ್ವರ್ಗಾದಿ ಉಪಭೋಗರೂಪಗಳಾದ ಬೇರೆ ಪ್ರಯೋಜನಗಳ ಸಂಗಕ್ಕೆ ಕಾರಣ ಭೂತವಾದ ಸತ್ವಗುಣದಿಂದಲೂ, **ವರುಮ್ ಕರ್ತೃತ್ವಂ** ಬರುವ ಕರ್ತೃತ್ವವು, ಇಂತಹ ಕರ್ತೃತ್ವಗಳೆಲ್ಲಾ **ಬಂಧಕಮ್** - ಪುನಃ ಪುನಃ ಸಂಸಾರ ಬಂಧಕ್ಕೆ ಕಾರಣವು ಅಧಿಕಾರಿಯಲ್ಲಿ ರಜೋಗುಣ, ತಮೋಗುಣಗ ಆಧಿಕ್ಯವಿದ್ದರೆ ಆತನ ಕರ್ತೃತ್ವವು ಬಂಧಕವನ್ನುಂಟುಮಾಡುತ್ತವೆ ಒಂದು ವೇಳೆ ಸತ್ವ ಗುಣಾಧಿಕ್ಯವಿದ್ದರೂ, ಅದು ಸೌಭರಿ ಜಡಭರಿತ ಮೊದಲಾದವರಿಗೆ ಪ್ರಾಪ್ತವಾ ಹಾಗೆ, ಐಹಿಕ ಉಪಭೋಗಗಳಲ್ಲಿ ಸಂಗಉಂಟಾದರೆ, ಅದೂ ಕೂಡ ಬಂಧಕವೆ ಆಗುತ್ತದೆ ಯಾವಾಗ ಮೋಕ್ಷಕ್ಕೆ ಕಾರಣವಾಗುತ್ತದೆಂಬುದನ್ನು ಹೇಳುತ್ತಾರೆ — **ಭಗವತ್ಪ್ರಾಪ್ತಿಯಿಲೇ** - ಭಗವಂತನ ಪ್ರಾಪ್ತಿಯನ್ನುಂಟುಮಾಡುವ, **ಸಂಗತ್ತೆ ಪುಣರ್ಕ್ಕುಮ್** - ಸಂಗದಲ್ಲಿ ಅಭಿನಿವೇಶನವನ್ನುಂಟುಮಾಡುವ, **ಪ್ರಕೃಷ್ಟ ಸತ್ವವಿಶೇಷಮುಡಿಯಾಗ** - ಸ್ವಲ್ಪ ಸ್ವಲ್ಪ ರಜೋಗುಣ ತಮೋಗುಣಗಳಿದ್ದರು ಸರ್ವೋತ್ಕೃಷ್ಟ ಸಾತ್ವಿಕಗುಣಾಧಿಕ್ಯ ವಿಶೇಷ ಮೂಲಕವಾಗಿ, **ವರುಮ್ ಕರ್ತೃತ್ವಂ** ಬರುವ ಕರ್ತೃತ್ವವು, **ಮೋಕ್ಷಕಾರಣಮ್** - ಮೋಕ್ಷಕ್ಕೆ ಕಾರಣವಾಗುತ್ತದೆ ಪ್ರಕೃತಿರೂಪವಾದ ನಮ್ಮ ದೇಹಗಳೆಲ್ಲಾ ಸತ್ವರಜಸ್ತಮೋಗುಣಗಳಾದ ಮೂ ರಿಂದಲೂ ಕೂಡಿದುದು ರಜಸ್ತಮೋಗುಣಗಳ ಆಧಿಕ್ಯವಿದ್ದುದಾದರೆ ಈತ ಕರ್ತೃತ್ವವು ಬಂಧಕವಾಗಿಯೇ ಪರಿಣಮಿಸುತ್ತದೆ ಸತ್ವಗುಣಾಧಿಕ್ಯವಿದ್ದರು ಅದು ಐಹಿಕಾದಿ ಉಪಭೋಗಗಳಲ್ಲಿ ಅನ್ವಯಿಸಿದರೆ ಆಗಲೂ ಬಂಧಕವೆ

**ಇಗ್ಗುಣ ತ್ರಯತ್ತೋಡು ತುವಕ್ಕತ್ತಿರುಕ್ಕುಮ್ ಮುಕ್ತದಶೈಯಿಲ್ ಕರ್ತೃತ್ವಮ್.**

ಆಗುತ್ತದೆ ಅಂತಹ ಪುನರ್ಜನ್ಮದಲ್ಲಿ ಹೆಚ್ಚಿನ ಸುಖಾನುಭವದಲ್ಲಿ ಅವಕಾಶ ದೊರೆಯಬಹುದು ಆದರೆ ಸರ್ವೋತ್ಕೃಷ್ಟವಾದ ಸತ್ವಾಧಿಕ್ಯವು ಸುಕೃತ ಪರಿಪಾಕದಿಂದ ಇದ್ದುದಾದರೆ ಆಗ ಅದು ಮೋಕ್ಷಪ್ರಾಪ್ತಿಯನ್ನುಂಟು ಮಾಡುವ ಕರ್ತೃತ್ವವಾಗುತ್ತದೆಂದು ಹೇಳಲ್ಪಟ್ಟಿತು ಇದನ್ನು ಕುಚೇಲ, ಉದ್ಧವ, ವಿದುರ, ಶಬರಾದಿಗಳಲ್ಲಿ ಕಾಣಬಹುದು

ಇಂತಹ ರಾಜಸ, ತಾಮಸ, ಸಾತ್ವಿಕ ಕರ್ತೃತ್ವದಿಂದ ಮಾಡಲ್ಪಡುವ ಕರ್ಮಗಳು ಎಂತವು ಎಂಬುದು ಗೀ ೧೮ ನೇ ಅಧ್ಯಾಯದ ೨೪, ೨೫, ನೆಯ ಶ್ಲೋಕಗಳಲ್ಲಿ ಹೇಳಲ್ಪಟ್ಟಿವೆ, ಅವು ಯಾವುವೆಂದರೆ—

**ನಿಯತಂ ಸಂಗ ರಹಿತಂ ಅರಾಗ ದ್ವೇಷತಃ ಕೃತಮ್ ।**
**ಅಫಲ ಪ್ರೇಪ್ಸುನಾ ಕರ್ಮಯತ್ತತ್ಸಾತ್ವಿಕ ಮುಚ್ಯತೇ** ॥ ೨೩ ॥
**ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾಪುನಃ ।**
**ಕ್ರಿಯತೇ ಬಹುಲಾಯಾಸಂ ತದ್ರಾಜಸ ಮುದಾಹೃತಮ್** ॥ ೨೪ ॥
**ಅನುಬಂಧಂಕ್ಷಯಂ ಹಿಂಸಾ ಮನಪೇಕ್ಷ್ಯಚ ಪೌರುಷಮ್ ।**
**ಮೋಹಾದಾರಭ್ಯತೇ ಕರ್ಮ ಯತ್ತತ್ತಾಮಸ ಮುಚ್ಯತೇ ॥** ॥ ೨೫ ॥
**ಮುಕ್ತ ಸಂಗೋಽನಹಂವಾದೀ ಧೃತ್ಯುತ್ಸಾಹ ಸಮನ್ವಿತಃ ।**

ಆದುದರಿಂದ ೨೪, ೨೫ ರಲ್ಲಿ ಹೇಳಲ್ಪಟ್ಟ ಕರ್ಮಗಳನ್ನು ತ್ಯಜಿಸಿ, ೨೩ ರಲ್ಲಿ ಹೇಳಲ್ಪಟ್ಟ ಕರ್ಮಗಳಲ್ಲಿ ಕರ್ತೃತ್ವವು ಮೋಕ್ಷಾರ್ಥಿಗೆ ಇರತಕ್ಕದ್ದು. ಹಾಗೇಯೇ ಮುಂದಿನ ಮೂರು ಶ್ಲೋಕಗಳಿಂದ ಕರ್ತಾವು—ಸಾತ್ವಿಕ ರಾಜಸ ತಾಮಸರೆಂದು ವಿಭಾಗಿಸಿ ಹೇಳಲ್ಪಟ್ಟಿರುತ್ತದೆ

ಮುಂದೆ ಮೋಕ್ಷದಶೆಯಲ್ಲಿ ಉಂಟಾಗುವ ಕರ್ತೃತ್ವಕ್ಕೆ ಇಂತಹ ಮೂರು ಗುಣಗಳ ಸಮ್ಮೇಳನವು ಉಂಟೋ ಎಂದರೆ ಇಲ್ಲವೆಂದು ಹೇಳುತ್ತಾರೆ—**ಇಗ್ಗುಣ ತ್ರಯತ್ತೋಡು**—ಈ ಸತ್ವರಜಸ್ತಮಸ್ಸುಗಳಾದ ಮೂರು ಗುಣಗಳಿಂದಲೂ, **ತುವಕ್ಕತ್ತಿರುಕ್ಕುಮ್** — ಸಂಬಂಧವೇ ಇಲ್ಲದಿರುವಂತಾದ್ದು ಯಾವುದೆಂದರೆ ಮುಕ್ತದಶೆಯಲ್ಲಿರುವ, ಕರ್ತೃತ್ವವು

**ಪೂರ್ವಪಕ್ಷಿಗಳು** ಪುನಃ ಆಕ್ಷೇಪಿಸಬಹುದು ; ಏನೆಂದರೆ ಬಂಧದಶೆಯ ಉಪಾಯಾವಸ್ಥೆಯಲ್ಲೂ, ಮೋಕ್ಷದಶೈಯಲ್ಲಿ ಹೇಗೋ ಹಾಗೇ, ಉಂಟೆಂದು ಹೇಳಿದರೆ ಮೋಕ್ಷದಶೈಯಲ್ಲಿ ಕರ್ತೃತ್ವವು ಎಂದಿಗೂ ಬಂಧಕವಾಗದೆ ಇಲ್ಲಿ ಯಾದರೋ ಸಂದರ್ಭಗಳಲ್ಲಿ ಬಂಧಕ್ಕೊಳ್ಳಗಾಗುವುದು ಏತಕ್ಕೆ ? ಆದುದರಿಂದ

**ಕರ್ತೃತ್ವಸ್ಯ ಭಾವಾಭಾವ ಬೋಧಕಪ್ರಮಾಣಾನಾಂ ವಿರೋಧೋನಾಸ್ತಿ**

ಇಂತಹ ಕರ್ತೃತ್ವವು ರಜಸ್ತಮೋ ಗುಣಗಳ ಸಂಬಂಧವು ಎಂದಿಗೂ ತಪ್ಪಿದ್ದಲ್ಲವಾಗಿರುವಾಗ, ಇಂತಹ ಕರ್ತೃತ್ವವು ಹೇಗೆ ಉಪಾಯವಾದೀತು ' ಸರ್ವೇಶ್ವರನ ನಿರ್ಹೇತುಕ ಕೃಪೆಯಲ್ಲವೇ ಉತ್ತಾರಕವು ಹೀಗಿರುವಾಗ, ನಮ್ಮ ಪ್ರಯತ್ನವು ವಿತಥವಲ್ಲವೋ ? ಯಾವಾಗಲೂ ಈ ಚೇತನನ ಕರ್ತೃತ್ವವು ಮೂರು ಗುಣಗಳ ಸಂಕರವಾಗಿರುವವರಿಂದ ದೋಷಾಪಹತ್ವವು ಎಂದಿಗೂ ತಪ್ಪಿದ್ದಲ್ಲವು, ಗೀತೆಯಲ್ಲಿ ಹೇಳಿರುವದೇನೆಂದರೆ —

**ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ**
**ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ ||** (೩. ೨೭)
**ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇ ಜ್ಞಾನವಾನಪಿ ।**
**ಪ್ರಕೃತಿಂಯಾನ್ತಿ ಭೂತಾನಿ ನಿಗ್ರಹಃ ಕಿಂಕರಿಷ್ಯತಿ** (೩. ೩೩)
**ನಾನ್ಯಂ ಗುಣೇಭ್ಯಃ ಕರ್ತಾರಂ ಯದಾದ್ರಷ್ಟಾನುಪಶ್ಯತಿ** (೧೪. ೧೯)
**ಕಾರ್ಯಕಾರಣ ಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।**
**ಪುರುಷಸ್ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ** (೧೩.೨೦)

ಪ್ರಕೃತಿಯು ಸತ್ವರಜಸ್ತಮೋಗುಣಗಳ ಮೂಲಕವಾಗಿ ಮಾಡುವ ಕರ್ಮಗಳನ್ನೆಲ್ಲಾ ಅಹಂಕಾರದಿಂದ ಕೂಡಿದ ಅಜ್ಞಾನಿಯು ತಾನು ಮಾಡಿದನೆಂದು ತಿಳಿಯುವನು, ಅಥವಾ ಅಜ್ಞಾನಿಯಲ್ಲದೆ ಜ್ಞಾನವಾನ್ ಆಗಿದ್ದರೂ ಕೂಡ ಕರ್ಮಾನುಸಾರವಾಗಿ ದೇಹವು ಕರ್ಮವನ್ನು ನಡೆಸುತ್ತದೆ, ನಿಗ್ರಹವು ನಿರರ್ಥಕವು, ಶರೀರೇಂದ್ರಿಯಗಳು ನಡೆಸುವ ಕಾರ್ಯದ ಕರ್ತೃತ್ವಕ್ಕೆ ಪ್ರಕೃತಿಯು ಕಾರಣವು ಪುರುಷನು ಆಕಾರಣಗಳಿಂದುಂಟಾದ ಸುಖ ದುಃಖಗಳಿಗೆ ಆಶ್ರಯವು " ಹೀಗೆ ಶಾಸ್ತ್ರಪ್ರಮಾಣಗಳಿರುವಾಗ ಕ್ರಿಯಾಶ್ರಯರೂಪ ಕರ್ತೃತ್ವವು ಚೇತನಾಚೇತನಗಳೆರಡಕ್ಕೂ ಉಂಟೆಂದೂ ಪ್ರಯತ್ನಾಶ್ರಯರೂಪ ಕರ್ತೃತ್ವ ಮಾತ್ರ ಚೇತನನಿಗುಂಟೆಂದು ಹೇಳುವದು ಹೇಗೆ ? ಶ್ರುತಿಯೇ **"ಕರ್ತಾಭೋಕ್ತಾ ವಿಜ್ಞಾನಾತ್ಮಾ ಪುರುಷಃ"** ಎಂದು ಜೀವಾತ್ಮನಿಗೆ ಕರ್ತೃತ್ವ ಭೋಕ್ತೃತ್ವ, ಜ್ಞಾತೃತ್ವಗಳುಂಟೆಂದು ಹೇಳುತ್ತದೆ ಹಾಗೆಯೇ ಬ್ರಹ್ಮಸೂತ್ರಗಳೂ ಹೇಳುತ್ತವೆ ಹೀಗೆ ಆತ್ಮನಿಗೆ ಕರ್ತೃತ್ವವಿಲ್ಲವೆಂದೂ, ಕರ್ತೃತ್ವ ಉಂಟೆಂದೂ ಹೇಳುವ ಪ್ರಮಾಣಗಳು ಪರಸ್ಪರ ವಿರುದ್ಧವಲ್ಲವೇ ' ಇಲ್ಲವೆಂದರೆ ಅವುಗಳಿಗೆ ಸಮನ್ವಯವು ಹೇಗೆ ? ಎಂಬ ಶಂಕಾದಲ್ಲಿ ವ್ಯವಸ್ಥೆ ಮಾಡಿ ವಿರೋಧವೇನೂವಿಲ್ಲವೆಂದು ವ್ಯಕ್ತಪಡಿಸುತ್ತಾರೆ

**ಕರ್ತೃತ್ವವು ಉಂಟು ಇಲ್ಲವೆಂಬ ಪ್ರಮಾಣಗಳಿಗೆ ವಿರೋಧವಿಲ್ಲವು. ತಾತ್ಪರ್ಯದಲ್ಲಿ ಬೇಧವು**

**ಇಪ್ಪಡಿ ಇರುಕ್ಕೈಯಾಲೇ ಆತ್ಮಾವುಕ್ಕು ಕರ್ತೃತ್ವಮಿಲ್ಲೈ ಎನ್ಗಿರ ವಾಕ್ಯಙ್ಗಳುಕ್ಕುಮ್, ಕರ್ತೃತ್ವ ಮುಂಡೆನ್ಗಿರ ವಾಕ್ಯಙ್ಗಳುಕ್ಕುಮ್, ವಿಷಯವ್ಯವಸ್ಥೆಯುಂಡಾಗೈಯಾಲೇ ವಿರೋಧಮಿಲ್ಲೈ. ಅದೆಙ್ಗನೇ ಎನ್ನಿಲ್ ? ಕರ್ತೃತ್ವಮಿಲ್ಲೈ ಎನ್ಗಿರವಾಕ್ಯಙ್ಗಳ್ ಈಶ್ವರಾಧೀನನಾಯುಮ್, ತದಾಯತ್ತ ಪ್ರಕೃತಿಗುಣಾಧೀನನಾಯುಮ್, ವರುಮ್ ಕರ್ತೃತ್ವತ್ತೈ**

**ಇಪ್ಪಡಿ ಇರುಕ್ಕೈಯಾಲೇ** - ಹೀಗೆ ಚೇತನನಿಗೆ ಪ್ರಯತ್ನಾಶ್ರಯರೂಪ ಕರ್ತೃತ್ವವು ಸಂಸಾರದಲ್ಲಿಯಲ್ಲಿ ಬಂಧಕವಾಗಿಯೂ ಮೋಕ್ಷಹೇತುವಾಗಿಯೂ ಕರ್ಮಾನುಗುಣವಾಗಿ ಸರ್ವೇಶ್ವರನ ಪ್ರೇರಕತ್ವಕ್ಕಧೀನವಾಗಿಯೂ, ಫಲದಶೆಯಲ್ಲಿ ಕರ್ಮಾಧೀನವಲ್ಲದ ಪರಮಪುರುಷ ಸಂಕಲ್ಪಾಧೀನವಾಗಿಯೂ ಹೀಗೆ ವ್ಯತ್ಯಾಸವಾಗಿ ಇರುವದರಿಂದ, **ಆತ್ಮಾವುಕ್ಕು** - ಜೀವಾತ್ಮನಿಗೆ, **ಕರ್ತೃತ್ವಮಿಲ್ಲೈ ಎನ್ಗಿರವಾಕ್ಯಙ್ಗಳುಕ್ಕುಮ್ - ನಕರ್ತೃತ್ವಂ ನಕರ್ಮಾಣಿಲೋಕಸ್ಯ ಸೃಜತಿಪ್ರಭುಃ"** ಇತ್ಯಾದಿ ಚೇತನನಿಗೆ ಕರ್ತೃತ್ವವಿಲ್ಲವೆಂದು ಹೇಳುವ ಪ್ರಮಾಣಗಳಿಗೂ, **ಕರ್ತೃತ್ವಮುಂಡೆನ್ಗಿರ ವಾಕ್ಯಙ್ಗಳುಕ್ಕುಮ್-"ಕರ್ತಾ ಭೋಕ್ತಾ ವಿಜ್ಞಾನಾತ್ಮಾ" "ಕರ್ತಾ ಶಾಸ್ತ್ರಾರ್ಥವತ್ತ್ವಾತ್"** ಇತ್ಯಾದಿ ಕರ್ತೃತ್ವ ಉಂಟೆಂದು ಹೇಳುವ ಪ್ರಮಾಣಗಳಿಗೂ, **ವಿಷಯವ್ಯವಸ್ಥೈಯುಂಡಾಗೈಯಾಲೇ**- ಬೋಧಿಸುವ ವಿಷಯದಲ್ಲಿರುವವ್ಯತ್ಯಾಸ ಮಾತ್ರವೇ ಇರುವದರಿಂದ, **ವಿರೋಧಮಿಲ್ಲೈ** - ಪರಸ್ಪರ ವಿರುದ್ಧಾರ್ಥಗಳುಳ್ಳವಲ್ಲವು ಆ ಪ್ರಮಾಣಗಳು ಉಪದೇಶಿಸುವ ವಿಷಯವೇ ಬೇರೆ, ಈ ಪ್ರಮಾಣಗಳು ಬೋಧಿಸುವ ವಿಷಯವೇ ಬೇರೆಯಾದುದರಿಂದ ಪರಸ್ಪರ ವಿರುದ್ಧ ಪ್ರಮಾಣಗಳಲ್ಲವು, ಎಂದು ಪ್ರತಿಜ್ಞಾವಾಕ್ಯವನ್ನು ಹೇಳಿ, ಅದು ಹೇಗೆ ಎಂಬುದನ್ನು ಮುಂದಿನ ವಾಕ್ಯಗಳಿಂದ ಪ್ರತಿಪಾದಿಸುತ್ತಾರೆ —**ಅದೆಙ್ಗನೇ ಎನ್ನಿಲ್ ?**—ಅದು ಹೇಗೆ ವಿರುದ್ಧವಲ್ಲವೆಂದರೆ ? **ಕರ್ತೃತ್ವಮಿಲ್ಲೈ ಎನ್ಗಿರವಾಕ್ಯಂಗಳ್**—ಕರ್ತೃತ್ವವು ಇಲ್ಲವೆಂದು ಮೇಲೆ ಉದಾಹರಿಸಿದ ವಾಕ್ಯಗಳು, **ಈಶ್ವರಾಧೀನವಾಗಿಯೂ, ತದಾಯತ್ತ ಪ್ರಕೃತಿಗುಣಾಧೀನನಾಯುಮ್** - ಸರ್ವೇಶ್ವರನಿಂದ ಸತ್ತೆಯನ್ನು ಹೊಂದಿ, ಈತನ ಪ್ರಾರಬ್ಧ ಕರ್ಮಾನುಗುಣವಾಗಿ ಉಂಟಾದ ಶರೀರಕ್ಕೆ ಪ್ರೇರಕನಾಗಿರುವದರಿಂದ, ದೇಹಮೂಲಕವಾಗಿಯೂ ನಡೆಯುವದರಿಂದಲೂ, **ವರುಮ್ ಕರ್ತೃತ್ವತ್ತೈ** - ಉಂಟಾದ ಕರ್ತೃತ್ವವಾದುದರಿಂದ, ಇದು ಹೇತು ಗರ್ಭವು, **ನಿರಪೇಕ್ಷಮೆನ್ರು** - ಈ ಹೇತುಗಳ ಅಪೇಕ್ಷೆಯಿಲ್ಲದೆ ನೀನೇ ಸ್ವತಂತ್ರನಿ ನಡೆಸುವ ಸಮರ್ಥನೆಂದು, **ನಿನೈಕ್ಕುಲಾಗಾದೆನ್ಗಿರನ**-ಭಾವಿಸಕೂಡದೆಂದು ಬೋಧಿಸುತ್ತವೆ

ನಾನೇ ಸ್ವತಂತ್ರನಿ ನಡೆಸಿದನೆಂಬ ಕರ್ತೃತ್ವವು ಜೀವಾತ್ಮನಿಗಿಲ್ಲವೆಂದು ಆ ಕರ್ತೃತ್ವವಿಲ್ಲವೆಂದು ಹೇಳುವ ಪ್ರಮಾಣಗಳು ತಿಳಿಸುತ್ತವೆಂದು ಉಪದೇಶಿಸಿದರು

**ನಿರಪೇಕ್ಷನೆನ್ರು ನಿನ್ಯೈಕ್ಕಲಾಗಾದೆನ್ಗಿರನ. ಕರ್ತೃತ್ವಮುಣ್ಡೆನ್ಗಿರ ವಾಕ್ಯ ಙ್ಗಳ್ ಈಶ್ವರೇಚ್ಛಾದಿಗಳ್ ಅಡಿಯಾಗವನ್ದ ಜ್ಞಾನತ್ತುಕ್ಕುಮ್, ತದ್ವಿಶೇಷಙ್ಗಳಾನ ಚಿಕೀರ್ಷಾಪ್ರಯತ್ನಙ್ಗಳುಕ್ಕುಮ್ ಇವನೇ ಆಶ್ರಯಮೆನ್ರು ಮಿಡತ್ತೈ ಚೊಲ್ಲುಗಿರನ.**

ಆ ಕರ್ತೃತ್ವವು ನೀನು ಮಾತ್ರವೇ ಅಲ್ಲದ ಇನ್ನು ಎರಡಕ್ಕೂ ಅಧೀನವಾದುದೆಂಬ ಭಾವನೆ ಇರತಕ್ಕದ್ದು —(೧) ಈಶ್ವರನಿಗೆ ಅಧೀನವಾದುದು ಮತ್ತು (೨) ತನ್ನ ಪ್ರಾರಬ್ಧಕರ್ಮಾನುಗುಣವಾದ ಸರ್ವೇಶ್ವರನಿಂದ ಪ್ರಾಪ್ತವಾಗಿ ಆತನಿಂದ ಪ್ರೇರಿಸಲ್ಪಟ್ಟ ದೇಹಕ್ಕೂ ಅಧೀನವಾದುದು ಎಂಬ ಭಾವನೆಯು ಈ ಕಾರಣಗಳಿಂದ ಕರ್ತೃತ್ವವನ್ನು ಈ ಮೇಲಿನವುಗಳ ನಿರಪೇಕ್ಷವಾಗಿ ನಿನ್ನಲ್ಲೇ ಕರ್ತೃತ್ವವನ್ನು ಆರೋಪಿಸಿಕ್ಕೊಳ್ಳುವದು ಯುಕ್ತವಲ್ಲವೆಂದು ಆ ಪ್ರಮಾಣಗಳು ಬೋಧಿಸುತ್ತವೆಂಬುದು ತಾತ್ಪರ್ಯವು ನೀನು ಈ ಕರ್ತೃತ್ವಕ್ಕೆ ಸ್ವತಂತ್ರನೆಂದು ಭಾವಿಸತಕ್ಕದ್ದಲ್ಲವು ಅದು ಪರಮಾತ್ಮನ ಸಂಕಲ್ಪಕ್ಕೂ ಆತನ ಸಙ್ಕಲ್ಪಾನುಸಾರ ಪ್ರಾರಬ್ಧಕರ್ಮಾನುಗುಣವಾಗಿ ಸುಖದುಃಖೋಪಭೋಗಗಳಿಗೆ ಸಾಧನವಾಗಿರುವ ಶರೀರಕ್ಕೂ ಸಹ ಅಧೀನವೆಂದು ತಿಳಿಯತಕ್ಕದ್ದು ಕರ್ತೃತ್ವವು ಚೇತನನಿಗೆ ಉಂಟೆಂದು ಹೇಳುವ ಪ್ರಮಾಣಗಳ ತಾತ್ಪರ್ಯವೇನೆಂದರೆ ತಿಳಿಸುತ್ತಾರೆ —**ಕರ್ತೃತ್ವಮುಂಡೆಙ್ಗಿರವಾಕ್ಯಙ್ಗಳ್**-ಚೇತನನಿಗೆ ಕರ್ತೃತ್ವ ಉಂಟೆಂದು ಹೇಳುವ "**ಕರ್ತಾ ಭೋಕ್ತಾ ವಿಜ್ಞಾನಾತ್ಮಾ**" ಇತ್ಯಾದಿ ಪ್ರಮಾಣಗಳು, **ಈಶ್ವರೇಚ್ಛಾದಿಗಳ್ ಅಡಿಯಾಗ** - ಈಶ್ವರನ ಇಷ್ಟಾನುಸಾರವಾಗಿ, ಇಲ್ಲಿನ ಆದಿಪದದಿಂದ ನಿಗ್ರಹಾನುಗ್ರಹ ಸಙ್ಕಲ್ಪ ವಿವಕ್ಷೆಯು ಬೋಧಿತವು, **ವಂದ** - ಪ್ರಾಪ್ತವಾದ, **ಜ್ಞಾನತ್ತುಕ್ಕುಮ್** - ಜ್ಞಾನಕ್ಕೂ ಎಂದರೆ ಜ್ಞಾನತಿರೋಹಿತಗೂ, ವಿಕಾಸಕ್ಕೂ ಎಂಬ ಭಾವವು, **ತದ್ವಿಶೇಷಙ್ಗಳಾನ** - ಆ ಜ್ಞಾನ ಅವಸ್ಥಾಭೇದಗಳಾದ, **ಚಿಕೀರ್ಷಾಪ್ರಯತ್ನಙ್ಗಳುಕ್ಕುಮ್** - ಮಾಡಬೇಕೆಂಬ ಸಙ್ಕಲ್ಪಪ್ರಯತ್ನಗಳಿಗೂ **ಇವನೇ** - ಈ ಕ್ಷೇತ್ರಜ್ಞನೇ, **ಆಶ್ರಯಮೆನ್ರುಮಿಡತ್ತೈ** - ಆಶ್ರಯನು ಎಂಬ ಸಂದರ್ಭವನ್ನು **ಚೊಲ್ಲುಗಿರನ**-ಹೇಳುತ್ತವೆ ಚೇತನನಿಗೆ ಕರ್ತೃತ್ವವನ್ನು ಹೇಳುವ ಪ್ರಮಾಣಗಳು ಆ ಕರ್ತೃತ್ವವು ಸ್ವಾಮಿ ಸಙ್ಕಲ್ಪಾನುಗುಣವಾಗಿ ಪ್ರಾಪ್ತವಾದ ದೇಹಮೂಲಕವಾಗಿ ಆತನ ಜ್ಞಾನಸಂಕಲ್ಪ ಪ್ರಯತ್ನಗಳಿಗೆ ಆಶ್ರಯವಾದುದೆಂದು ಬೋಧಿಸುತ್ತವೆ ಎಂಬ ತಾತ್ಪರ್ಯವು ಹೀಗೆ ಕರ್ತೃತ್ವದ ಅಭಾವ ಸದ್ಭಾವಗಳನ್ನು ಹೇಳುವ ಪ್ರಮಾಣಗಳಿಗೆ ತಾತ್ಪರ್ಯವೆಂಬ ನಿಷ್ಕರ್ಷೆಯನ್ನು ತಾವು ಹೇಳಿದುದು ಎಂದು ನಂಬಬೇಕಾದುದಿಲ್ಲವು ಅದಕ್ಕೆ ಗೀತಾಚಾರ್ಯರಾದ ಶ್ರೀ ಕೃಷ್ಣಭಗವಾನರವರ ಸ್ವಂತ ಹೇಳಿಕೆಯೇ ಇದೆ ಎಂದು ತಿಳಿಸುತ್ತಾರೆ — **ಇನ್ನಿಷ್ಕರ್ಷತ್ತೈ** - ಈ ಮೇಲೆ ಉಪಪಾದಿಸಿದ

**ಇನ್ನಿಷ್ಕರ್ಷತ್ತೈ (ಪ್ರಕಾರತ್ತೈ) (೧) "ಶರೀರವಾಙ್ಮನೋಭಿರ್ಯತ್" ಎನ್ರು ತುಡಙ್ಗಗೀತಾಚಾರ್ಯ್ಗ ತಾನೇ ಅರುದಿಯಿಟ್ಟಾನ್, ಅ (ಇ) ನ್ನಿಡತ್ತಿಲ್**

ಕರ್ತೃತ್ವದ ಅಭಾವ ಮತ್ತು ಕರ್ತೃತ್ವದ ಸದ್ಭಾವಗಳನ್ನು ಹೇಳುವ ಪ್ರಮಾಣಗಳಿಗೆ ತಾತ್ಪರ್ಯದ ನಿಷ್ಕರ್ಷವನ್ನು, (೧) **"ಶರೀರವಾಙ್ಮನೋಭಿರ್ಯತ್" ಎನ್ರುತುಡಙ್ಗಿ** - ಎಂದು ಆರಂಭಿಸಿ **ಗೀತಾಚಾರ್ಯ್ಗ** - ಲೀಲಾಸಾರಥಿಯಾಗಿ ಗೀತೋಪದೇಶ ವನ್ನು ಮಾಡಿದ ಲೋಕಗುರುವು, **ತಾನೇ** - ಸ್ವತಃ, **ಅರುದಿಯಿಟ್ಟಾನ್** - ಹಿತೋ ಪದೇಶವನ್ನು ಮಾಡಿರುತ್ತಾರೆ ಈ **ಶರೀರವಾಙ್ಮನೋಭಿಃ"** ಎಂಬುದು ಹಿಂದಿನ ಶ್ಲೋಕದೊಂದಿಗೆ ಒಂದೇ ವಾಕ್ಯವಾದುದರಿಂದ ಒಟ್ಟಿಗೇ ಅನ್ವಯಿಸತಕ್ಕದ್ದಾಗಿರುತ್ತದೆ ಅವು ಯಾವುವೆಂದರೆ —

**ಅಧಿಷ್ಠಾನಂ ತಥಾಕರ್ತಾ ಕರಣಂಚ ಪೃಥಗ್ವಿಧಮ್ ।**
**ವಿವಿಧಾಚ ಪೃಥಕ್ಚೇಷ್ಟಾ ದೈವಂಚೈವಾತ್ರಪಂಚಮಮ್ ॥ ॥ ೧೪ ॥**
**ಶರೀರವಾಙ್ಮನೋಭಿರ್ಯತ್ ಕರ್ಮಪ್ರಾರಭತೇನರಃ ।**
**ನ್ಯಾಯ್ಯಂವಾ ವಿಪರೀತಂವಾ ಪಞ್ಚೈತೇ ತಸ್ಯಹೇತವಃ ॥ ॥ ೧೫ ॥**

ಇದರ ಸಙ್ಗ್ರಹಾರ್ಥವೇನೆಂದರೆ — ಮನುಷ್ಯನು ಒಂದು ಕರ್ಮವನ್ನು, ಅದು ಶಾಸ್ತ್ರವಿಹಿತವಾಗಿರಲಿ ಅಥವಾ ಶಾಸ್ತ್ರವಿರುದ್ಧವೇ ಆಗಿರಲಿ, ಶರೀರ ಮೂಲಕ ವಾಗಿಯಾಗಲಿ, ವಾಕ್ಕಿನಮೂಲಕವಾಗಲಿ, ಮನಸ್ಸಿನ ಮೂಲಕವಾಗಲಿ ಯಾವ ದೊಂದು ಕರ್ಮವನ್ನು ಆರಂಭಿಸಿದರ, ಅದಕ್ಕೆ ಐದು ಕಾರಣಗಳುಂಟೆಂದು ತಿಳಿಯ ತಕ್ಕದ್ದು ಇವು ಐದೂ ಇದ್ದರೇನೇ ಕಾರ್ಯೋತ್ಪತ್ತಿಯು, ಅವು ಯಾವವೆಂದರೆ (೧) ಆತನ ಶರೀರವು ಆವಶ್ಯಕವು, (೨) ಆ ಶರೀರದಲ್ಲಿ ಆತ್ಮಾವಾದ ಕ್ಷೇತ್ರಜ್ಞ ನಿರಬೇಕು ಆತ್ಮವಿಲ್ಲದ ಪ್ರೇತದಿಂದ ಕಾರ್ಯವಾಗುವುದಿಲ್ಲವು (೩) ದೇಹವಿದ್ದರೂ, ೧೦ ಜ್ಞಾನ ಕರ್ಮೇಂದ್ರಿಯಗಳೂ ಮನಸ್ಸೂ ಸರಿಯಾದ ಸ್ಥಿತಿಯಲ್ಲಿ ಆವಶ್ಯಕವು ಇವುಗಳಿಲ್ಲದಿದ್ದರೆ ಕಾರ್ಯ ನಡೆಯುವದಿಲ್ಲವು (೪) ಪಂಚವೃತ್ತಿಪ್ರಾಣ ವಾಯು ಚಲನಯಿಂದುಂಟಾಗುವ ಚೇಷ್ಟೆಗಳೂ ಆವಶ್ಯಕವು, ಹೀಗೆ ಐದು ಹೇತುಗಳಲ್ಲಿ ಯಾವುದು ಒಂದು ಇಲ್ಲದಿದ್ದರೆ ಕಾರ್ಯವು ನಡೆಯುವದಿಲ್ಲವು, ಆದುದರಿಂದ ಅಧಿ ಷ್ಠಾನವೂ ಕರಣಾದಿಗಳು ಸಹ ಹೇತುಗಳಾದುದರಿಂದ ಕೆಲವು ಪ್ರಮಾಣಗಳು ಇವುಗಳಿಗೆ ಎಂದರೆ ಪ್ರಕೃತಿಗೆ ಪ್ರಾಮುಖ್ಯತೆಯನ್ನು ಕೊಟ್ಟು, ಅವುಗಳಿಗೇ ಕರ್ತೃ ತ್ವವನ್ನು ಹೇಳಿದವು ಇನ್ನು ಕೆಲವು, **ಕರ್ತಾ ದೈವಂ** ಇವುಗಳಿಗೆ ಪ್ರಾಮುಖ್ಯತೆ ಯನ್ನು ಕೊಟ್ಟು ಕರ್ತೃತ್ವವು ಪರಾಯತ್ತವಾಗಿ ಕರ್ತಾವಾದ ಜೀವಾತ್ಮನಲ್ಲುಂಟೆಂದು ಹೇಳಿದವು ಸರಿಯಾಗಿ ನೋಡಿದರೆ ಈ ಐದೂ ಕಾರಣಗಳೂ ಒಂದು ಕಾರ್ಯಾ

(೧) ಗೀ ೧೮ ೧೪—೧೫

**"ದೈವಂಚೈವಾತ್ರಪಂಚಮುಮ್" ಎನ್ರು ಪುರುಷೋತ್ತಮನ್ನೈ ಚೊಲ್ಲುಗಿರದು ಇವರ್‌ ಜೀವನ್ನೈಯೊರುಕಾರ್ಯತ್ತಿಲ್ ಪ್ರವರ್ತ್ತಿಕ್ಕುಮ್ಪೋದು ಇಕ್ಕಾರ್ಯತ್ತೈ ಪತ್ತ ಕಾರಯಿತಾವೆನ್ರು ಶೊಲ್ಲಪ್ಪಡುಮ್.**

ರಂಭಕ್ಕೆ ಹೇತುಗಳೆಂದು ಗೀತಾಚಾರ್ಯರು ಸ್ಪಷ್ಟವಾಗಿ ಉಪದೇಶಿಸಿರುತ್ತಾರೆಂಬ ತಾತ್ಪರ್ಯವು ಈ ಶ್ಲೋಕಗಳ-ಇನ್ನು ಹೆಚ್ಚು ತಾತ್ಪರ್ಯಗಳನ್ನು ಗ್ರಹಿಸಬೇಕೆಂಬ ಇಷ್ಟವಿದ್ದರೆ ನಾನು ಬರೆದಿರುವ ಭಗವದ್ಗೀತೆಯ ತೃತೀಯ ಷಟ್ಕದಲ್ಲಿ ಅವ ಲೋಕಿಸಬಹುದು.

ಇವ್ವಿಡತ್ತಿಲ್ - ಈ **"ಶರೀರವಾಙ್ಮನೋಭಿಃ"** ಎಂಬ ಗೀತಾಶ್ಲೋಕದಲ್ಲಿ, **"ದೈವಂಚೈವಾತ್ರಪಂಚಮುಮ್"** ಐದನೆಯ ಹೇತುವು ದೈವವು, **ಎನ್ರು** - ಎಂಬ ದಾಗಿ, ಪುರುಷೋತ್ತಮನನ್ನು, **ಶೊಲ್ಲುಗಿರದು**-ಹೇಳುತ್ತದೆ ಹೀಗೆ ದೈವ ಶಬ್ದಕ್ಕೆ ಪುರುಷೋತ್ತಮನೆಂಬ ಅರ್ಥವು ವ್ಯಕ್ತವಾಗಿದ್ದರೂ, ಹಾಗೆ ವ್ಯಾಖ್ಯಾನವನ್ನು ಮಾಡಲು ಕಾರಣವೇನೆಂದರೆ **"ದೈವಂ ದಿಷ್ಟಂ ಭಾಗಧೇಯಂ"** ಎಂಬ ಅಮರ ನಿಘಂಟಿನ ಪ್ರಕಾರ ಪ್ರಾರಬ್ಧ ಕರ್ಮಫಲವೆಂಬ ಅರ್ಥವು ಸರಿಯಲ್ಲವೆಂದು ತೋರಿಸು ವದಕ್ಕಾಗಿ ಹಾಗೆ ವ್ಯಾಖ್ಯಾನವು ಕರ್ತಾನಂತೂ ಜೀವಾತ್ಮನಾದರೆ, ಪರಮಪುರುಷ ನಿಗೆ ಕಾರ್ಯದಲ್ಲ ಹೇಗೆ ಸಂಬಂಧವೆಂದರೆ, ಈತನು ಕಾರಯಿತಾ ಎಂದು ಮುಂದ ಹೇಳುತ್ತಾರೆ — **ಇವರ್‌ ಜೀವನ್ನೈಯೊರುಕಾರ್ಯತ್ತಿಲ್ ಪ್ರವರ್ತ್ತಿಕ್ಕುಂಪೋದು** - ಈ ಪುರುಷೋತ್ತಮನು ಈ ಜೀವಾತ್ಮನನ್ನು ಒಂದು ಕಾರ್ಯದಲ್ಲಿ ಪ್ರವರ್ತಿಸುವ ಹಾಗೆ ಮಾಡುವಾಗ, **ಅಕ್ಕಾರ್ಯತ್ತೈಪ್ಪತ್ತ** - ಆ ಜೀವಾತ್ಮನು ಪ್ರಥಮದಲ್ಲಿ ಸಙ್ಕಲ್ಪಿಸಿ ತಾನೇ ಪ್ರಯತ್ನಿಸಿದ ಆಕಾರ್ಯವನ್ನು ಕುರಿತು, **ಕಾರಯಿತಾವೆನ್ರು** - ಮಾಡಿಸುವ ವನೆಂದು, **ಶೊಲ್ಲುಪ್ಪಡುಮ್** - ಹೇಳಲ್ಪಡುವುದು, ಜೀವನು ಕರ್ತಾ ಸರ್ವೇಶ್ವರನು ಕಾರಯಿತಾ ಹೀಗೆ ಇಬ್ಬರೂ ಸೇರಿಯೇ ಕಾರ್ಯವು, ಆಗಲಿ ಪರಮಪುರುಷನಿಗೆ ಕರ್ತೃತ್ವವಿಲ್ಲವೋ ? ಎಂದರೆ, ಈ ಜೀವಾತ್ಮನು ತನಗೆ ಸ್ವಾಮಿಯು ಕರ್ಮಾನುಗುಣ ವಾಗಿ ದಯಪಾಲಿಸಿದ ಜ್ಞಾನಚಿಕೀರ್ಷಾ-ಪ್ರಯತ್ನಗಳ ಮೂಲಕ ನಡೆಸಿದ ಕಾರ್ಯಕ್ಕೆ ತಾನು ಪ್ರೇರಕನಾಗಿ ಕಾರಯಿತಾ ಎನೋ ಹೌದು, ಮತ್ತು ಈ ಜೀವಾತ್ಮನು ಉದ್ದೇಶಿಸಿದ ಕಾರ್ಯದ ಔಚಿತ್ಯ ಅನೌಚಿತ್ಯಾನುಗುಣವಾಗಿ ದಯಪಾಲಿಸುವ ನಿಗ್ರ ಹಾನುಗ್ರಹಗಳಲ್ಲೂ ಪರಮಪುರುಷನಿಗೆ ಕರ್ತೃತ್ವವೂ ಉಂಟೇ ಉಂಟೆಂದೂ ಮತ್ತು ತನಗೆ ಇಷ್ಟನಾದ ಸೃಷ್ಟ್ಯಾದಿಕ್ರಮಗಳಲ್ಲೂ, ಅವತಾರ ಸಮಯಗಳಲ್ಲಿ ದುಷ್ಟನಿರಾಸ, ಶಿಷ್ಟಪರಿಪಾಲನ ಧರ್ಮ ಸಂಸ್ಥಾಪನಾದಿಗಳಲ್ಲೂ ಆತನಿಗೆ ಕರ್ತೃ ತ್ವವೂ ಉಂಟೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ —

**ಪರಮ ಪುರುಷಸ್ಯ, ಕಾರಯಿತೃತ್ವ, ಕರ್ತೃತ್ವ, ಉಪೇಕ್ಷಕತ್ವ, ಅನುಮಂತೃತ್ವ, ಸಹಕಾರಿತ್ವಾದಿಮುಖೇನ, ಕರ್ತೃತ್ವಂ ಈಶ್ವರಾಧೀನಮ್.**

ತಾನೇ ಪ್ರವೃತ್ತಿಕ್ಕುಮ್ ಫಲಪ್ರದಾನಾದಿಗಳಿಲುಮ್, ಸೃಷ್ಟ್ಯಾದಿಗಳಿಲುಮ್, ಕರ್ತಾವೆನ್ರು ಶೊಲ್ಲಪ್ಪಡುಮ್. ಒನ್ರಿಲೇ ಪ್ರವೃತ್ತನಾನ ಚೇತನನ್ನೈ ವಿಲಕ್ಕಾದವಳವಿಲ್ ಉಪೇಕ್ಷಕರ್. ಅಪ್ಪೋದಿಶೈದ್ದಿರುಕ್ಕೈಯಾಲೇ ಅನುಮನ್ತಾ. ಇಳನ್ತಲೈ ಶುಮಕ್ಕುಮವನುಕ್ಕು ಪ್ರಬಲರ್ ಪೆರನ್ತಲೈ ಶುಮಕ್ಕುಮಾಪ್ಪೋಲೆ ಕೂಡ ಪ್ರವರ್ತಿಕ್ಕೈಯಾಲ್ ಸಹಕಾರಿ.

**ಪರಮಪುರುಷನಿಗೆ ಕಾರಯಿತೃತ್ವ. ಕರ್ತೃತ್ವ, ಉಪೇಕ್ಷಕತ್ವ, ಅನುಮಂತೃತ್ವ ಸಹಕಾರಿತ್ವಾದಿಗಳ ಮೂಲಕ ಜೀವಾತ್ಮ ಕರ್ತೃತ್ವವು ಈಶ್ವರಾಧೀನವು**

**ತಾನೇ ಪ್ರವೃತ್ತಿಕ್ಕುಮ್**-ತಾನೇ ಉಂಟುಮಾಡುವ, **ಫಲಪ್ರದಾನಾದಿಗಳಿಲುಮ್** - ಶಿಕ್ಷೆ ರಕ್ಷೆಯ ರೂಪವಲ್ಲಿ ಫಲಗಳನ್ನು ಕೊಡುವದರಲ್ಲೂ, **ಸೃಷ್ಟ್ಯಾದಿಗಳಿಲುಮ್** - ಸೃಷ್ಟಿ ಸ್ಥಿತಿಲಯಗಳಲ್ಲೂ ಪರಮ ಪುರುಷನು, **ಕರ್ತಾವೆನ್ರು** - ಕರ್ತಾವೆಂಬುದಾಗಿಯೂ, **ಶೊಲ್ಲಪ್ಪಡುಮ್** - ಹೇಳಲ್ಪಡುವದು, **ಒನ್ರಿಲೇ ಪ್ರವೃತ್ತನಾನ ಚೇತನನ್ನೈ** - ಒಂದರಲ್ಲಿ ಪ್ರವೃತ್ತಿಸಿರುವ ಚೇತನನನ್ನು, **ವಿಲಕ್ಕಾದವಳವಿಲ್** - ಶಿಕ್ಷಿಸದೇ ಇರುವ ಸಂದರ್ಭದಲ್ಲಿ ಉಪೇಕ್ಷಕನೆಂದು ಹೇಳಲ್ಪಡುವನು **ಅಪ್ಪೋದು** - ಹಾಗೆ ಚೇತನನು ಪ್ರವರ್ತಿಸಿರುವ ಸಂದರ್ಭದಲ್ಲಿ, **ಇಶೈನ್ದು ಇರುಕ್ಕೈಯಾಲೇ** - ಆತನ ಕಾರ್ಯವನ್ನು ಅನುಮೋದಿಸಿರುವದರಿಂದ, **ಅನುಮನ್ತಾ** ಎಂದು ಹೇಳಲ್ಪಡುವನು **ಇಳನ್ತಲೈ ಶುಮಕ್ಕುಮವನುಕ್ಕುಮ್** - ಒಂದು ಮರದ ತೊಲೆಯ ಒಂದು ಕಡೆ ಸಣ್ಣದಾಗಿಯೂ ಇನ್ನೊಂದು ಕಡೆ ದಪ್ಪದಾಗಿಯೂ ಇದ್ದು ಈ ಚೇತನನು, **ಇಳನ್ತಲೈ** - ಸೂಕ್ಷ್ಮ ಭಾಗವನ್ನೂ, ತಲೆ **ಶುಮಕ್ಕುಮವನುಕ್ಕುಮ್** - ತಲೆಯ ಮೇಲೆ ಹೊತ್ತಿರುವವನಿಗೆ, ಪ್ರಬಲನಾದವನು **ಪೆರುಂ** - ದಪ್ಪನಾಗಿ ಭಾರವಾದ ಭಾಗವನ್ನು, **ತಲೈಶುಮಕ್ಕುಮಾಪ್ಪೋಲೆ** - ತಲೆಯ ಮೇಲೆ ಹೊತ್ತಿರುವಹಾಗೆ, **ಕೂಡಪ್ರವರ್ತಿಕ್ಕೈಯಾಲೇ** - ಜೊತೆಯಲ್ಲಿ ಸೇರಿ ಪ್ರವರ್ತಿಸುವದರಿಂದ ಪರಮ ಪುರುಷನು ಸಹಕಾರಿ ಎಂದೆನಿಸುವನು ಸ್ವಾಮಿ ದೇಶಿಕರವರ ಕುಮಾರರಾದ ವರದಾಚಾರ್ಯರವರು (ಶ್ರೀ ನಯನಾಚಾರ್ಯರವರು) ಅವರು ಅನುಗ್ರಹಿಸಿರುವ ಶ್ರೀಮದ್ರಹಸ್ಯ ತ್ರಯಸಾರ ಚುಳಕದಲ್ಲಿ ಈ ಅಭಿಪ್ರಾಯಗಳನ್ನೆಲ್ಲಾ ಸಙ್ಗ್ರಹವಾಗಿ ಹೇಳಿ, ಇವುಗಳೆಲ್ಲಾ ಪರಮ ಪುರುಷನಿಗೆ ಹೇಗೆ ಉಪಪನ್ನವೆಂಬುದನ್ನು ತಿಳಿಸಿರುತ್ತಾರೆ ಹೇಗೆಂದರೆ-"**ವ್ಯಾಪಾರಾಶ್ರಯಮಾತ್ರಂತು ಕರ್ತೃತ್ವಮ್, ಅಚೇತನೇಪ್ಯುಪಚರತೇ, ರಥೋಗಚ್ಛತೀತಿ. ಏವಂಚ ಕರ್ತೃತ್ವಮ್ ಪ್ರೇರಕತ್ವಂ, ಅನುಮಂತೃತ್ವಂ, ಉದಾಸೀನತ್ವಂ,**

**ಸಾಕ್ಷಿತ್ವಂ, ಸಹಕಾರಿತ್ವಂ, ಫಲಿತ್ವಂ, ಫಲಪ್ರದಾತೃತ್ವಂ, ಇತ್ಯೇತೇ ಅರ್ಥಾಃ ಭಗವಂತಃ ಪ್ರತಿಪನ್ನಾಃ ಭವಂತಿ"** ಈ ಮೇಲಿನ ಅಭಿಪ್ರಾಯಗಳೆಲ್ಲಾ ಭಗವಂತನಿಗೆ ಸಂಗತವಾದುವೆಂದು ಹೇಳಿರುತ್ತಾರೆ **ತತ್ರಜಗದುತ್ಪತ್ತ್ಯಾದಿಷು ಸರ್ವೇಷ್ವಪಿ ಕಾರ್ಯೇಷು ಜ್ಞಾನಚಿಕೀರ್ಷಾಪ್ರಯತ್ನಾತ್ವಾತ್ ಕರ್ತೃತ್ವಮ್, ಕರ್ತೃಭೂತ ಜೀವಪ್ರೇರಕತ್ವಾತ್ ಪ್ರೇರಕತ್ವಂ"** ಆ ಸಂದರ್ಭದಲ್ಲಿ ಜಗತ್ತಿನ ಉತ್ಪತ್ತಿ ಮೊದಲಾದವುಗಳಾದ ಸಮಸ್ತ ಕಾರ್ಯಗಳಲ್ಲೂ ಸರ್ವೇಶ್ವರನಿಗೆ ಜ್ಞಾನ, ಇಚ್ಛಾ, ಪ್ರಯತ್ನಗಳು ಇರುವದರಿಂದ ಕರ್ತೃತ್ವವು ಉಂಟು ಕರ್ತೃವಾದ ಜೀವಾತ್ಮನನ್ನು ಪ್ರವೃತ್ತಿಯಲ್ಲಿ ಪ್ರೇರಕನಾದುದರಿಂದ ಪ್ರೇರಕತ್ವವು ಉಂಟು **"ಕರ್ಮಾನುರೂಪಂ ಪ್ರವೃತ್ತಾನಾಂ ಜೀವಾನಾಂ ಉತ್ತರೋತ್ತರ ಪ್ರವರ್ತಕತ್ವಾತ್ ಅನುಮಂತೃತ್ವಂ"** ಪ್ರಾರಬ್ಧ ಕರ್ಮಾನುಗುಣವಾಗಿ ಪ್ರವೃತ್ತಿಯುಳ್ಳ ಜೀವಾತ್ಮರನ್ನು ಉತ್ತರೋತ್ತರ ಪ್ರವರ್ತನುವಹಾಗ ಮಾಡಿ ಅದನ್ನು ಅನುಮೋದಿಸುವದರಿಂದ ಆತನಿಗೆ ಅನುಮಂತೃತ್ವವುಂಟು **" ಏತೇಷ್ವೇವ ಸ್ವಕರ್ಮಾನುರೂಪೇಷು ಸುಖದುಃಖಾದಿ ಕಾರ್ಯೇಷು ಬೀಜಾನುಗುಣ ಮುತ್ಪದ್ಯಮಾನೇಷು ಅಂಕುರೇಷು ಜಲಸ್ಯೇವ ಸಾಮಾನ್ಯ ಕಾರಣತ್ವೇಪಿ ವಿಶೇಷಕಾರಣತ್ವಾಭಾವಾತ್ ಉದಾಸೀನತ್ವಮ್"**-ತನ್ನ ಪ್ರಾರಬ್ಧ ಕರ್ಮಾನುಗುಣಗಳಾದ ಸುಖದುಃಖಗಳನ್ನುಂಟು ಮಾಡುವ ಕಾರ್ಯಗಳು, ಬೀಜದಿಂದ ಮೊಳಕೆ ಉಂಟಾಗಲು ಹೇಗೆ ನೀರು ಸಾಮಾನ್ಯವಾಗಿ ಎಲ್ಲಾ ಬೀಜಗಳು ಅಂಕುರಿಸುವದಕ್ಕೆ ವಿಶೇಷವೇನೂ ಇಲ್ಲದ ಹೇತುವೋ ಹಾಗೆ ಭಗವಂತನು ಉದಾಸೀನನಾಗಿರುವದರಿಂದ ಉದಾಸೀನತ್ವವೂ ಉಂಟು. **"ಸರ್ವಸಾಕ್ಷಾದ್ದ್ರಷ್ಟೃತ್ವಾತ್"** ಸರ್ವವನ್ನು ಸಾಕ್ಷಾತ್ತಾಗಿಯೇ ನೋಡುವ ಶಕ್ತಿಯುಳ್ಳುದರಿಂದ ಆತನಿಗೆ ಸಾಕ್ಷಿತ್ವವೂ ಉಂಟು **"ಸಾನುಗ್ರಹ್ಯಾನು ಪ್ರವಿಷ್ಟೈಶ್ಚೇತನಾಚೇತನಾತ್ಮಕೈಸ್ಸಹಕಾರಿವರ್ಗೈಸ್ಸಹ ಸ್ವಯಮೇವ ಸರ್ವಕಾರ್ಯ ಕರ್ತೃತತ್ವಾತ್ ಸಹಕಾರಿತ್ವಮ್"** ಚೇತನಾ ಚೇತನಾತ್ಮಕವಾದ ವಿಭೂತಿಗಳನ್ನು ಅನುಪ್ರವೇಶಮಾಡಿ, ಅವುಗಳನ್ನೇ ಸಹಕಾರಿವರ್ಗವನ್ನಾಗಿಟ್ಟುಕೊಂಡು ತಾನೇ ಸರ್ವಕಾರ್ಯಗಳನ್ನು ನಡೆಸುವದರಿಂದ ಆತನಿಗೆ ಸಹಕಾರಿತ್ವವೂ ಉಂಟು **"ಸರ್ವಶೇಷಿತ್ವೇನ ಸರ್ವಸ್ಯಾಪಿ ಫಲಸ್ಯ ಭೃತ್ಯಸಂರಕ್ಷಣಾದಿನ್ಯಾಯೇನ ಸ್ವಪರ್ಯವಸಾನಾತ್ಫಲಿತ್ವಂ"** - "ಸಮಸ್ತ ಚೇತನವರ್ಗಕ್ಕೂ ತಾನೇ ಶೇಷಿಯಾಗಿರುವದರಿಂದ ಸರ್ವಫಲಪ್ರದಾನಕ್ಕೂ ಸ್ವಾಮಿಯು ತನ್ನ ಭೃತ್ಯವನ್ನು ಸಂರಕ್ಷಿಸಿ ಹೇಗೆ ಆನಂದಿಸುವನೋ ಹಾಗೆ ಸರ್ವೇಶ್ವರನೂ ಆನಂದಿಸುವದರಿಂದ ಆತನಿಗೆ ಫಲಿತ್ವವೂ ಉಂಟು" ಎಂದು ಹೀಗಲ್ಲಾ ಉಪಪಾದಿಸಲ್ಪಟ್ಟಿರುತ್ತವೆ ಸಹಕಾರಿಯು ಹೇಗೆ ' ಎಂದರೆ ಈತನ ಪ್ರಾರಬ್ಧ ಕರ್ಮಾನುಗುಣವಾಗಿ ಪ್ರೇರಿಸಿ ಸಹಕರಿಸುವದರಿಂದ ಸಹಕಾರಿಯು

## ಈಶ್ವರಸ್ಯ ಕರ್ತ್ರ್ಯಕರ್ತೃತ್ವ ಬೋಧಕ ಪ್ರಮಾಣೇಷು ನವಿರೋಧಃ

**ಸೃಷ್ಟ್ಯಾದಿಗಳಿಲ್ ದೇವ ಮನುಷ್ಯಾದಿ ವೈಷಮ್ಯಮ್ ಜೀವಕರ್ಮ ವಿಶೇಷೋ**

ಒಳ್ಳೇವನಾಗಿ ಧರ್ಮಪ್ರವೃತ್ತಿಯಿದ್ದುದಾದರೆ ಆತನಿಗೆ **"ದದಾಮಿಬುದ್ಧಿಯೋಗಂತಂ"** ಎಂಬಲ್ಲಿ ಹೇಳಿರುವಹಾಗೆ ಆತನಿಗೆ ಒಳ್ಳೇ ಬುದ್ಧಿಯೋಗವನ್ನು ಕೊಟ್ಟು ಒಳ್ಳೇ ಸದಾಚಾರ್ಯನನ್ನು ಸೇರಿ, ಉಪಾಯಾನುಷ್ಠಾನವನ್ನು ಮಾಡುವಹಾ ಸಹಕರಿಸುವನಾದುದರಿಂದ ಸಹಕಾರಿತ್ವವು ಹಾಗಲ್ಲದೆ ವಿಪರೀತ ಪ್ರವೃ ಯುಳ್ಳವನಾದರೆ **"ಕ್ಷಿಪಾಮ್ಯ ಜಸ್ರಂ"** ಎಂಬಲ್ಲಿ ಹೇಳಿರುವಹಾಗ ದುರ್ಗ ಯನ್ನು ಹೊಂದಿಸುವುದರಲ್ಲೂ ಸಹಕಾರಿತ್ವವು

ಮುಂದ ಜೀವಾತ್ಮನಿಗೆ ಕರ್ತೃತ್ವಸದ್ಭಾವ ಕರ್ತೃತ್ವ ಭಾವನೆಗಳುಂಟೆಂ ಹೇಳುವ ಪ್ರಮಾಣಗಳುಂಟೆಂದೂ, ಅವುಗಳಿಗೆ ಪರಸ್ಪರ ವಿರೋಧವಿಲ್ಲವೆಂದೂ ತಾತ್ಪರ್ಯ ವಿಷಯದಲ್ಲಿ ವ್ಯತ್ಯಾಸವೆಂದೂ ಉಪಪಾದಿಸುವಹಾಗೆ, ಭಗವಂತನಿ ಕರ್ತೃತ್ವಾಭಾವ ಸದ್ಭಾವಗಳನ್ನು ಹೇಳುವ ಪ್ರಮಾಣಗಳುಂಟೆಂದೂ, ಅವುಗಳಿ ಪರಸ್ಪರ ವಿರೋಧವಿಲ್ಲವೆಂದೂ, ತಾತ್ಪರ್ಯ ವಿಷಯದಲ್ಲಿ ವ್ಯತ್ಯಾಸಮಾತ್ರವೆಂದ ಉಪಪಾದಿಸುತ್ತಾರೆ —

**ಈಶ್ವರನ ಕರ್ತೃತ್ವ ಮತ್ತು ಆ ಕರ್ತೃತ್ವವನ್ನು ಬೋಧಿಸುವ ಪ್ರಮಾಣಗಳಿ ಪರಸ್ಪರ ವಿರೋಧವಿಲ್ಲವು.**

ಸರ್ವೇಶ್ವರನು, **"ನಮೇಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋಕೇಷುಕಿಂಚನ ನಾನವಾಪ್ತಮವಾಪ್ತವ್ಯಂ ವರ್ತಏವ ಚ ಕರ್ಮಣಿ"** ಎಂಬಲ್ಲಿ ತನಗೆ ಕರ್ಮವ ತೆಯೂ, ಶಾಸ್ತ್ರವಶ್ಯತೆಯೂ ಇಲ್ಲದ, ತನಗೆ ಬೇಕಾದುದು ಯಾವುದೂ ಇಲ್ಲದೆ ಪ ಪೂರ್ಣನಾಗಿದ್ದರೂ ನಾನು ಯಾವಾಗಲು ಕರ್ಮಮಾಡುತ್ತಲೇ ಇದ್ದೇನೆಂದು ತನ ಕರ್ತೃತ್ವ ಉಂಟೆಂದು ಹೇಳಿರುತ್ತಾರೆ ಪೂರ್ವಾರ್ಧದಲ್ಲಿ ನಾನು ಮಾಡತಕ್ಕದ್ದೇನು ಇಲ್ಲವೆಂದು ಹೇಳಿರುತ್ತಾರೆ ಹಾಗೆಯೇ ಮುಂದೆ **"ವಿದ್ಧ್ಯಕರ್ತಾರಮವ್ಯಯಮ್"** ತಾನು ಕರ್ತಾವಲ್ಲವೆಂದು ಹೇಳಿಕೊಂಡಿರುತ್ತಾರೆ ಇವೆರಡಕ್ಕೂ ವಿರೋಧವೇನು ಇಲ್ಲವು ಸರ್ವೇಶ್ವರನಿಗೆ ಸೃಷ್ಟ್ಯಾದಿಗಳಿರುವುದರಿಂದ ಕರ್ತೃತ್ವವೇನೋ ಸ್ಥಾಪಿತವು ಆ ಕರ್ತೃತ್ವವನ್ನು ಹೇಳುವ ಪ್ರಮಾಣದ ಅಭಿಪ್ರಾಯವೇನೆಂಬುದನ್ನು ತಿಳಿಸ ತ್ತಾರೆ — ಈ ಶ್ಲೋಕದಲ್ಲೂ ಶ್ರೀಕೃಷ್ಣಭಗವಾನ್‌ರವರು ತಮ್ಮನ್ನು ಕರ್ತಾ ಎಂದು ಅಕರ್ತಾ ಎಂದು ಹೇಳಿಕೊಂಡಿರುತ್ತಾರೆ **ಸೃಷ್ಟ್ಯಾದಿಗಳಿಲ್** – ಸೃಷ್ಟಿಸ್ಥಿತಿ ಯಗಳಲ್ಲಿ, **ದೇವಮನುಷ್ಯಾದಿ ವೈಷಮ್ಯಮ್** – ದೇವಮನುಷ್ಯ, ತಿರ್ಯಕ್ ಸ್ಥಾವರರೂಪದಲ್ಲಿ ತೋರುವ ಜೀವಾತ್ಮ ಶರೀರಭೇದವು, **ಜೀವಕರ್ಮವಿಶೇಷೋ**

**ಪಾಧಿಕ ಮಾರ್ಗೈಯಾಲೇ; (೧) "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ । ತಸ್ಯಕರ್ತಾರಮಪಿಮಾಂ ವಿದ್ಧ್ಯಕರ್ತಾರಮ್ಯವಯಮ್**

**ಪಾಧಿಕಮಾರ್ಗೈಯಾಲೇ** ಜೀವಾತ್ಮರುಗಳ ವಿವಿಧ ಕರ್ಮವಿಶೇಷಕ್ಕಾಗಿ ಉಂಟಾದು ಮಾಡುವದರಿಂದ (೧) **ಗುಣಕರ್ಮವಿಭಾಗಶಃ** - ಚೇತನರುಗಳ ಸತ್ವರಜಸ್ತಮೋ ಗುಣಗಳ ನ್ಯೂನಾಧಿಕ್ಯದಿಂದಲೂ, ಒಂದೆ ಮಾಡಿದ ಸುಕೃತ ದುಷ್ಕೃತ ವ್ಯತ್ಯಾಸಗ್ಳ ಳಿಂದಲೂ, ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಾದಿ ಜನ್ಮಭೇದಗಳು ನನ್ನಿಂದ ಸೃಷಿ ಸಲ್ಪಟ್ಟವು ಹೀಗೆ **ತಸ್ಯ** - ವಿವಿಧ ಭೇದವುಳ್ಳ ಸೃಷ್ಟಿಗೆ ನಾನು ಕರ್ತಾವಾದರೂ ಕೂಡ ಅವರುಗಳಲ್ಲಿ ತೋರುವ ವ್ಯತ್ಯಾಸಗಳಿಗೆ ಮಾತ್ರ, **ಮಾಂ** - ನನ್ನನ್ನು, **ಅವ್ಯಯಂ** - ನಾಶರಹಿತನಾದ **ಅಕರ್ತಾರಂ** - ಅಕರ್ತಾವೆಂದೂ ನನ್ನನ್ನು ತಿಳಿ ಇಂಥಂಥಾ ಸುಕೃತ ದುಷ್ಕೃತಿಗಳಿಗೆ ಇಂಥಂಥಾ ಜನ್ಮವೆಂದು ಭೇದವನ್ನು ಕಲ್ಪಿಸಿ ದ್ದೇನೋ ನಾನೇ ಆದರೆ ಜೀವಾತ್ಮರುಗಳ ಅಂತಹ ವ್ಯತ್ಯಸ್ತ ಜನ್ಮಗಳಿಗೆ ನಾನು ಕಾರಣನಲ್ಲವು ಅವರವರು ಮಾಡಿದ ಸುಕೃತ ದುಷ್ಕೃತ ಪರಿಪಾಕನಾದುದರಿಂದ ಅದಕ್ಕೆ ಮಾತ್ರ ಕಾರಣನಲ್ಲವು ಜೈಲಿನ ನಿರ್ಮಾಣಕ್ಕೂ ಒಳ್ಳೇ ಬಿರುದುಗಳನ್ನು ಕೊಡುವದಕ್ಕೂ ರಾಜನು ಕಾರಣನಾದರೂ, ಅವುಗಳ ಪ್ರಾಪ್ತಿಗೆ ಪ್ರಜೆಗಳ ದುಷ್ಕೃತ ಸುಕೃತಗಳು ಹೇಗೆ ಕಾರಣವೋ, ಹಾಗೆಯೇ ಇಲ್ಲಿಯೂ ಎಂದು ಭಾವಿಸ ತಕ್ಕದ್ದು ಸುಕೃತಿಗೆ ಸ್ವರ್ಗಮೋಕ್ಷಗಳೂ, ದುಷ್ಕೃತಿಗೆ ನೀಚಜನ್ಮ, ನರಕಾದಿಗಳು ಹೇಗೋ ಹಾಗೆ, ಸ್ವರ್ಗಾದಿಗಳನ್ನು ನಿರ್ಮಿಸುವದರಲ್ಲಿ ನಾನು ಕರ್ತಾ ಚೇತನರು ಅವುಗಳ ವ್ಯತ್ಯಸ್ತ ವ್ಯತ್ಯಸ್ತಗಳಾದ ಪ್ರಾಪ್ತಿಗೆ ಅವರೇ ಕಾರಣಗಳು ನಾನಲ್ಲವು ಎಂಬ ಭಾವವು ಈಸಂದರ್ಭದಲ್ಲಿ ರಣರಂಗದಲ್ಲಿ ಹತವಾಗಿ ಬಿದ್ದಿರುವ ತನ್ನ ಗಂಡನನ್ನು ಕುರಿತುಹೇಳುವ ಸಾಧ್ವಿಯಾದ ಮಂಡೋದರಿಯ ವಾಕ್ಯವು ಅನುಸಂಧೇಯವು.—

**ಶುಭಕೃಚ್ಛುಭ ಮಾಪ್ನೋತಿ ಪಾಪಕೃತ್ಪಾಪ ಮಶ್ನುತೇ.**
**ವಿಭೀಷಣ ಸ್ಸುಖಂ ಪ್ರಾಪ್ತಸ್ತ್ವಂ ಪ್ರಾಪ್ತಃ ಪಾಪ ಮೀದೃಶಮ್ ॥"**

ಹಾಗೆಯೇ ಶ್ರುತಿಯೂ ಇವ - **ಸಾಧುಕಾರೀಸಾಧುರ್ಭವತಿ; ಪಾಪಕಾರೀ ಪಾಪೋಭವತಿ"** (ಬೃ ೬ ೮ ೨) ಮತ್ತು **"ಪುಣ್ಯಃ ಪುಣ್ಯೇನ ಕರ್ಮಣಾ, ಪಾಪಃ ಪಾಪೇನ ಕರ್ಮಣಾ** (ಬೃ. ೫) ಎಂಬ ವಾಕ್ಯವೂ ಅಲ್ಲಿಯೇ ಉಂಟು ಶ್ರೀ ಪರಾಶರರು ವಿಷ್ಣು ಪುರಾಣದಲ್ಲಿ ಇದು ನಿಪುಣತರವಾಗಿ ಇದನ್ನೇ ಉಪಪಾದಿ ಸಿರುತ್ತಾರೆ ವಿ ಪು ೧ ೮ ೫೦ ೧—

**ನಿಮಿತ್ತ ಮಾತ್ರಮೇವಾಸೌ ಸೃಜ್ಯಾನಾಂಸರಕರ್ಮಣಿ ।**
**ಪ್ರಧಾನ ಕಾರಣೀ ಭೂತಾ ಯತೋ ವೈಸೃಜ್ಯ ಶಕ್ತಯಃ ॥ ೫೦ ॥**

(೧) ಗೀ ೪ ೧೩

**ಎನ್ರು ಈಶ್ವರನುಕ್ಕು ಕರ್ತೃತ್ವ ನಿಷೇಧಮ್ ಪಣ್ಣುಗಿರದು. ಇಪ್ಪಡಿ**

**ನಿಮಿತ್ತ ಮಾತ್ರಂ ಮುಕ್ತ್ವೈವನಾನ್ಯತ್ಕಿಂಚಿದ ಪೇಕ್ಷತೇ ।**

**ನೀಯತೇ ತಪತಾಂ ಶ್ರೇಷ್ಠ ಸ್ವಶಕ್ತ್ಯಾವಸ್ತು ವಸ್ತುತಾಮ್ ॥ ೩೧ ॥**

ಈ ಪರಮಾತ್ಮನಾದರೋ ಚತುರ್ಮುಖ ಮೊದಲುಗೊಂಡು ಸ್ತಂಬಪರ್ಯಂತವಾದ ಪ್ರಾಣಿಗಳ ಸೃಷ್ಟಿಕ್ರಮದಲ್ಲಿ, ಅಪ್ರಧಾನ ಕಾರಣನು ಎಂದರ ಸಾಮಾನ್ಯ ಕಾರಣನು, ಏಕೆಂದರೆ ಪ್ರಾಣಿಗಳ ಕರ್ಮವಾಸನೆಯೇ ಅಂತಹ ಸೃಷ್ಟಿಯಲ್ಲಿ ಪ್ರಧಾನ ಕಾರಣವಾದುದರಿಂದ, ಓ ತಪೋನಿಷ್ಠರಾದ ಮೈತ್ರೇಯರೇ, ವಸ್ತುವು ಈ ಜಗತ್ತಿನಲ್ಲಿ ತೋರುವ ವಿವಿಧ ವೈಚಿತ್ರ್ಯಕ್ಕೆ ಪರಮಾತ್ಮನ ಸಾಧಾರಣ ಕಾರಣತ್ವವನ್ನು ಮಾತ್ರ ಅಪೇಕ್ಷಿಸುವದಲ್ಲದ ಇನ್ನೇನನ್ನೂ ಅಪೇಕ್ಷಿಸುವದಿಲ್ಲವು ಅದಕ್ಕೆ ಮುಖ್ಯ ಕಾರಣವು ಜೀವಾತ್ಮನ ಪ್ರಾರಬ್ಧ ಕರ್ಮ ಶಕ್ತಿಯೇ ಎಂದು ಹೇಳಲ್ಪಟ್ಟಿರುತ್ತದೆ. ನಾನಾ ವಿಧ ಸಸ್ಯ ಬೆಳೆಗಳಿಗೆ ನೀರು ಹೇಗ ಸಾಧಾರಣವಾಗಿ ಎಲ್ಲಕ್ಕೂ ಬೇಕೋ ಹಾಗೆ ಪರಮಾತ್ಮನು ಆ ಸಸ್ಯಗಳ ವೈವಿಧ್ಯ ವೈಚಿತ್ರ್ಯಕ್ಕೆ ಹಿಂದಿನ ಸಂಸ್ಕಾರದಿಂದುಂಟಾದ ಬೀಜಗಳೇ ಹೇಗೆ ಪ್ರಧಾನಕಾರಣವೋ, ಹಾಗೆ ಚೇತನರ ಕರ್ಮಶಕ್ತಿಯು, ಈ ವೈಸಿಷ್ಯಾದಿಗಳಿಗೆ ಪರಮಾತ್ಮನು ಕಾರಣನು ಹಾಗೆ ಭಗವಂತನು ಕರ್ತಾ ಎಂದು ಹೇಳುವಾಗ ಸಾಧಾರಣಕಾರಣನು, ಬ್ರಹ್ಮಾದಿ ವರ್ಣಭೇದಕ್ಕೂ ಮೃಗಾದಿ ಜನ್ಮಭೇದಕ್ಕೂ ಕಾರಣವು ಅವರವರ ಕರ್ಮವಿಶೇಷವಾದುದರಿಂದ ಪರಮಾತ್ಮನು ತಾನು ಅಕರ್ತಾ ಎಂದು ಹೇಳಿಕೊಂಡಿರುತ್ತಾನೆ ಇದರಿಂದ ಒಬ್ಬನನ್ನು ಸುಕೃತಿಯಾಗಿಯೂ ಒಬ್ಬನನ್ನು ದುಷ್ಕೃತಿಯಾಗಿಯೂ, ಒಬ್ಬನನ್ನು ಧನಿಕನನ್ನಾಗಿಯೂ, ಇನ್ನೊಬ್ಬನನ್ನು ದರಿದ್ರನಾಗಿಯೂ ಒಬ್ಬನನ್ನು ಆರೋಗ್ಯಭಾಗ್ಯವುಳ್ಳವನಾಗಿಯೂ ಇನ್ನೊಬ್ಬನನ್ನು ರೋಗಿಷ್ಠನಾಗಿಯೂ ಇರುವದರಲ್ಲಿ ತಾನು ಕಾರಣನಲ್ಲವು ಆದುದರಿಂದ ತನಗೆ ವೈಷಮ್ಯ ನೈರ್ಘೃಣ್ಯಾಗಳಿಲ್ಲವೆಂದು ತಿಳಿಸುವದಕ್ಕಾಗಿ ತಾನು ಅಕರ್ತಾ ಎಂದು ಹೇಳಿಕೊಂಡಿರುತ್ತಾನೆ" **ಎನ್ರು** - ಎಂಬುದಾಗಿ, **ಈಶ್ವರನಿಗೆ, ಕರ್ತೃತ್ವನಿಷೇಧಮ್ ಪಣ್ಣುಗಿರದು** - ಕರ್ತೃತ್ವನಿಷೇಧವನ್ನು ಮಾಡುತ್ತದೆ ಕರ್ತೃತ್ವ ನಿಷೇಧವೆಂಬುದರಿಂದ ಸರ್ವ ಕರ್ತೃತ್ವವಿಲ್ಲವೆಂಬ ಅಭಿಪ್ರಾಯವಲ್ಲವು ಸಾಧಾರಣ ಕರ್ತೃತ್ವ ಉಂಟೇ ಉಂಟು ಅಸಾಧಾರಣವಾಗಿ ಪ್ರಧಾನವಾಗಿ ವ್ಯತ್ಯಾಸವನ್ನುಂಟುಮಾಡುವ ಕರ್ತೃತ್ವವು ಪರಮಪುರುಷನಾದ ತನಗೆ ಇಲ್ಲವೆಂದು ಹೇಳಿಕೊಂಡರು ಆದುದರಿಂದ ತಮಗೆ ವೈಷಮ್ಯಾದಿಗಳಿಲ್ಲದೆ **"ಸಮೋಽಹಂ ಸರ್ವಭೂತೇಷು"** ಎಂದು ಇನ್ನೊಂದು ಕಡೆ ಹೇಳಿಕೊಂಡಿರುತ್ತಾರೆ —

ಇಂತಹ ಸುಕೃತ ದುಷ್ಕೃತಗಳನ್ನು ಎಸಗುವದರಲ್ಲಿ, ಜ್ಞಾನಚಿಕೀರ್ಷಾಪ್ರಯತ್ನರೂಪ ಕ್ರಿಯಾಶ್ರಯತ್ವವು ನರರಿಗೆಲ್ಲಾ ಇರುವದರಿಂದ, **ವ್ರಜ** - ಎಂದು

**ವ್ರಜ ಶಬ್ದೇನ ಮುಮುಕ್ಷೋಃ ವಿಧಿಯೋಗ್ಯತ್ವಂ ಸಿದ್ಧಮಿತಿನಿಗಮಯತಿ.**

**ಸರ್ವವಿಷಯ ಸಾಧಾರಣ ಕರ್ತೃತ್ವಮುಡೈಯ ಈಶ್ವರನಡಿಯಾಗ ಜೀವನುಕ್ಕು ಸ್ವಬುದ್ಧಿ ಪೂರ್ವ ಪ್ರವೃತ್ತಿ ಶಕ್ತಿರೂಪಮಾನ ನಿಯೋಗ ಯೋಗ್ಯತ್ವಮ್ ಸಿದ್ಧಮ್ ಆಗೈಯಾಲೇ ಇಙ್ಗು "ವ್ರಜ" ಎನ್ರು ವಿಧಿಕ್ಕಕ್ಕುರೈಯಿಲ್ಲೈ.**

ಎಂದು ವಿಧಿಸುವದರಲ್ಲೇನೂ ಅಸಾಮಂಜಸ್ಯವಿಲ್ಲವಾಮುದೆಂದು ನಿಗಮನ ಮಾಡುತ್ತಾರೆ ಆದುದರಿಂದ ಸದ್ಗುರುವಿನ ಮೂಲಕ ಶರಣಾಗತಿಯನ್ನು ಮುಮುಕ್ಷುವು ಅನುಷ್ಠಿಸಲೇಬೇಕು ಹಾಗೆ ಅನುಷ್ಠಿಸದಿದ್ದರೆ ಮುಕ್ತಿಯೇ ಇಲ್ಲವೆಂದು ಓಂದೆಯೇ **'ಪ್ರಪನ್ನಾದನ್ಯೇಷಾಂ ನದಿಶತಿ ಮುಕುಂದೋ ನಿಜ ಪದಮ್"** ಎಂಬಲ್ಲಿ ಉಪದೇಶಿಸಿದರು ಪರಮಾತ್ಮನು ತಾನೇ ರಕ್ಷಿಸುವನೆಂದು ತಟಸ್ಥರಾಗಿರಕೂಡದು ಮಾಡುವದನ್ನು ಮಾಡಿ ಆತನಲ್ಲಿ ಸರ್ವಭರವನ್ನೂ ಸಮರ್ಪಿಸಿ ಕೃತಕೃತ್ಯನಾಗತಕ್ಕದ್ದೆಂಬ ನಿಗಮನವು

**"ವ್ರಜ" ಎಂಬ ಶಬ್ದದಿಂದ ಮೋಕ್ಷಾರ್ಥಿಗೆ ವಿಧಿವಾಕ್ಯಕ್ಕೆ ಯೋಗ್ಯತೆಯುಂಟೆಂದು ನಿಗಮನವು.**

**ಸಾಧಾರಣ ಕರ್ತೃತ್ವಮುಡೈಯ** - ಸಾಧಾರಣವಾದ ಕರ್ತೃತ್ವವನ್ನುಳ್ಳ, ಇದರಿಂದ ಕರ್ಮಮೂಲಕವಾಗಿ ಉಂಟಾಗುವ ಚೇತನನಿಗಿರುವ ಅಸಾಧಾರಣ ಕರ್ತೃತ್ವವು ಈಶ್ವರನಿಗಿಲ್ಲವೆಂದು ಹೇಳಿದಂತಾಯಿತು, **ಈಶ್ವರನಡಿಯಾಗ** - ಇಂತಹ ಸಾಧಾರಣ ಕರ್ತಾವಾದ ಈಶ್ವರನ ಮೂಲಕವಾಗಿ, **ಜೀವನುಕ್ಕು** - ಜೀವಾತ್ಮನಿಗೆ, ಈ ಸಂದರ್ಭದಲ್ಲಿ ಮುಖ್ಯವಾಗಿರುವ ಮೋಕ್ಷಾರ್ಥಿಯನ್ನು ಕುರಿತು ಹೇಳುವ ವಿಷಯವು, **ಸ್ವಬುದ್ಧಿಪೂರ್ವಕ ಶಕ್ತಿರೂಪಮಾನ** - ತನ್ನ ವಿವೇಕಜ್ಞಾನ ಚಿಕೀರ್ಷಾ ಪ್ರಯತ್ನಗಳಲ್ಲಿರುವ ಶಕ್ತಿರೂಪವಾದ, **ನಿಯೋಗಯೋಗ್ಯತ್ವಮ್** - ವಿಧಿವಾಕ್ಯಕ್ಕನುಗುಣವಾಗಿ ನಡೆಯುವ ಯೋಗ್ಯತೆಯು, **ಸಿದ್ಧಮ್** - ಈಗ ನಾವು ಮಾಡಿದ ಉಪಪಾದನೆಯಿಂದ ಸ್ಥಾಪಿತವು **ಆಗೈಯಾಲೇ** - ಹೀಗೆ ಇತರರ ಪೂರ್ವಪಕ್ಷಕ್ಕೆಲ್ಲಾ ಸಮಾಧಾನವನ್ನು ಶಾಸ್ತ್ರಮುಖೇನ ಹೇಳಿ ವಿಧಿವಾಕ್ಯಕ್ಕೆ ಯೋಗ್ಯತೆಯು ಈ ಜೀವನಿಗೆ ಉಂಟೆಂದು ಸ್ಥಾಪಿತವಾದುದರಿಂದ, **ಇಙ್ಗು** - ಈ ಚರಮ ಶ್ಲೋಕದಲ್ಲಿ, **ವ್ರಜ ಎನ್ರು ವಿಧಿಕ್ಕಕ್ಕುರಿಯಿಲ್ಲೈ** - ವ್ರಜ ಎಂದು ವಿಧಿಸುವದರಲ್ಲೇನೂ ವಿರೋಧವಿಲ್ಲವು, **"ಕೃತಪ್ರಯತ್ನಾಪೇಕ್ಷಸ್ತು"** ಎಂಬ ಸೂತ್ರದ ಪ್ರಕಾರ ಜೀವಾತ್ಮನಿಗಿರುವ ಪರಾಯತ್ತ ಕರ್ತೃತ್ವವು ಸ್ವಾಮಿದತ್ತವಾದ ವಿವೇಕಜ್ಞಾನ, ಚಿಕೀರ್ಷಾಪ್ರಯತ್ನಗಳಲ್ಲಿ ಸ್ವಾಮಿಯು ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆಂಬುದು

ಶ್ರೀ ಭಾಷ್ಯದಲ್ಲಿ ಸುವ್ಯಕ್ತವಾಗಿರುವದರಿಂದ ವಿಧಿವಾಕ್ಯಗಳಿಗನುಸರಿಸಿ ನಡೆಸತ ಕ್ಕದ್ದು ಈ ಜೀವಾತ್ಮನ ಕರ್ತವ್ಯವಾಗಿರುತ್ತದೆಂಬುದು ಸಾರಭೂತವಾಗಿ ಈ ವಾಕ್ಯ ಗಳ ತಾತ್ಪರ್ಯವು ಆದುದರಿಂದ ಪ್ರಪತ್ತಿಯು ಆವಶ್ಯಕವಿಲ್ಲದೆ ಪರಮಪುರುಷನು ರಕ್ಷಿಸುವನೆಂಬ ವಾದವು ಇದರಿಂದ ನಿರಾಕರಿಸಲ್ಪಟ್ಟಿತು

ಮುಂದೆ ಮುಖ್ಯವಾಗಿ ಶ್ರೀ ಯತಿವರ್ಯರ ಶಿಷ್ಯರಾಗಿ, ಶ್ರೀ ಭಾಷ್ಯಪ್ರವರ್ತಕ ರಾಗಿಯೂ, ಇರುವ ಶ್ರೀ ತಿರುಕುರುಕೈಪಿರಾನ್‌ಪಿಳ್ಳಾನ್‌ಬುವರ ದಿವ್ಯ ಸೂಕ್ತಿಯನ್ನು ಸರಿಯಾಗಿ ಗ್ರಹಿಸದ ಮಹಾನುಭಾವರಾದ ಶ್ರೀ ಲೋಕಾಚಾರ್ಯರ ಅಭಿಪ್ರಾಯ ವನ್ನು ನಿರಾಕರಿಸಿ ಮುಂದಿನ ವಾಕ್ಯಗಳಿಂದ ತಿಳಿಸುತ್ತಾರೆ ಶ್ರೀ ತಿರುಕುರುಕೈ ಪಿರಾನ್‌ಪಿಳ್ಳಾನರವರು ಶ್ರೀ ಯತಿವರ್ಯರ ಪ್ರಿಯಶಿಷ್ಯರು ಇವರ ಮೂಲಕ ಶ್ರೀ ಯತಿವರ್ಯರು ನಮ್ಮಾಳ್ವಾರವರ ತಿರುವಾಯ್‌ಮೊಳಿಗೆ ಆರಾಯಿರಪ್ಪಡಿ ಎಂಬ ತಾತ್ಪರ್ಯಾರ್ಥವನ್ನು ಬರಸಿರುತ್ತಾರೆ ಶ್ರೀ ಯತಿವರ್ಯರ ಮೂಲಕ ಶ್ರೀ ಭಾಷ್ಯಾದಿ ಕಾಲಕ್ಷೇಪವನ್ನು ಮಾಡಿದ ಮಹನೀಯರು ಇವರು ಹೇಳಿರುವುದೇನೆಂದರೆ ' ತಾನೇ ಸಾಧನಾನುಷ್ಠಾನವನ್ನು ಮಾಡುವದು ಅಹಂಕಾರಗರ್ಭಿತವಾಗಿ ಸರಿಯಲ್ಲವೆಂದೂ, ಅದು ಭಗವತ್ಕೃಪೆಯಾಲಭಿಸತಕ್ಕದ್ದೆಂದೂ, ಸದೃಷ್ಟಾಂತವಾಗಿ ಹೇಳಿದರು ಆ ದೃಷ್ಟಾಂತವು **"ತನ್ನಾಲ್ ವರುಮ್ ನನ್ಮೈ ವಿಲೈಪ್ಪಾಲ್ ಪೋಲೇ, ಈಶ್ವರ ನಾಲೇ ವರುಮ್ ನನ್ಮೈ ಮುಲೈಪ್ಪಾಲ್ ಪೋಲೆ"** ಎಂಬುದು ತಾನೇ ಸಂಪಾದಿ ಸಿಕೊಳ್ಳುವ ಹಿತವು, ಕೊಂಡ ನೀರುಹಾಲಿನಹಾಗೆ , ಈಶ್ವರನಿಂದ ಬರುವ ಹಿತವು ತಾಯಿಯಸ್ತನ್ಯದ ಹಾಲಿನಹಾಗೆ ಎಂಬರ್ಥವು , ಎಂದರೆ ತನ್ನ ಸ್ವಂತ ಪ್ರವೃತ್ತಿಯು ಧಾರಕಪೋಷಕಭೋಗ್ಯವಲ್ಲವೆಂದೂ ಈಶ್ವರನಿಂದ ಬಂದುದು ಧಾರಕಪೋಷಕ ಭೋಗ್ಯವಾದುದು ಎಂಬ ತಾತ್ಪರ್ಯವು ಶ್ರೀ ಪಿಳ್ಳೈ ಲೋಕಾಚಾರ್ಯರವರು ಅನು ಗ್ರಹಿಸಿರುವ ಶ್ರೀ ವಚನ ಭೂಷಣದಲ್ಲಿ ಇರುವವೇನೆಂದರೆ —**"ಸುದಿರಾಬಿಂದು ಮಿಶ್ರಮಾನ ಶಾತಕುಂಭಗತ ತೀರ್ಥ ಸಲಿಲಂ ಪೋಲೇ ಅಹಂಕಾರ ಮಿಶ್ರಮಾನ ಉಪಾಯಾಂತರಮ್"** ಎಂಬುದಾಗಿ ದೃಷ್ಟಾಂತವು ಹೀಗೆ ಶ್ರೀ ವಚನ ಭೂಷಣದಲ್ಲಿ ಹೇಳಿರುವದು ಎರಡು ದೃಷ್ಟಾಂತಗಳು, ಇವುಗಳಲ್ಲಿ ಶ್ರೀ ನಿಗಮಾಂತದೇಶಿಕರವರು ಒಂದನ್ನು ಮಾತ್ರ ಉದಾಹರಿಸುತ್ತಾರೆ ಮುಂದ ನೆಯ ಕಾರಿಕೆಯಲ್ಲಿ ಎರಡನೆಯ ದೃಷ್ಟಾಂತವನ್ನು ಹೇಳುತ್ತಾರೆ --ಇದರಿಂದ, ಉಪಾಯಾಂತರವಾದ ಭಕ್ತಿಯೋಗವು ಜ್ಞಾನಿಗಳಿಗೆ ಸ್ವರೂಪನಾಶಕವೆಂದೂ' ಭಯಜನಕವೆಂದೂ ಹೀಗೆಲ್ಲಾ ನಿಂದಿಸಿರುತ್ತಾರೆ, ಹಾಗೆಯೇ ಇನ್ನೊಂದು ಕಡೆ ಯಲ್ಲಿ' ಬಹಳ ಕಾಲ ತನ್ನ ಭಾರ್ಯೆಯು ಅನ್ಯಪುರುಷನೊಂದಿಗೆ ಸೇರಿಕೊಂಡಿದ್ದು, ಈಗ ಆಕೆಯು, ತಾನು ಮಾಡಿದ್ದು ತಪ್ಪಾಯಿತು, ನನ್ನನ್ನು ಸ್ವೀಕರಿಸು ಎಂದು

ಬೇಡಿದಹಾಗೆ ಈತನು ಮಾಡುವ ಪ್ರವೃತ್ತಿಯು ಎಂದು ಹೇಳಲ್ಪಟ್ಟಿರುತ್ತದೆ. ಅನಂತರ **"ಪ್ರಪತ್ತ್ಯುಪಾಯತ್ತುಕ್ಕು ಇಕ್ಕುತ್ತಙ್ಗಳೊನ್ರುಮಿಲ್ಲೈ"** ಎಂದು ಹೇಳಿ, ಅನಂತರ **"ಇವರ್ಗೆ ಅವನಪ್ಪೆರ ನಿನ್ನೆಂಕ್ಕುಂ ಪೋದು ಇಂದು ಪ್ರಪತ್ತಿಯುಮ್ ಉಪಾಯಮನ್ರು" "ಅವನಿವನೈ ಪ್ಪೆರ ನಿನ್ನೈಕ್ಕುಂ ಪೋದು ಪಾತಕಮುಮ್ ವಿಲಕ್ಕನ್ರು"** ಎಂದರೆ ಆ ಪರಮಪುರುಷನ ಸಂಕಲ್ಪವಿಲ್ಲದೆ ಹೋದರೆ, ಆತನಿಗೆ ಈ ಪ್ರಪತ್ತಿಯು ವಿಫಲವಾಗಬಹುದು, ಆದುದರಿಂದ ಅದು ಉಪಾಯವಲ್ಲವು ಹಾಗೆಯೇ ಸರ್ವೇಶ್ವರನು ಇವನಿಗೆ ತಾನು ಪ್ರಾಪ್ಯನಾಗಬೇಕೆಂದು, ಸಂಕಲ್ಪಿಸಿದರೆ ಈತನ ಪಾತಕಗಳು ಯಾವುವು ಪ್ರತಿಬಂಧಕಗಳಲ್ಲವು" ಎಂಬುದು ಈ ಮೇಲಿನ ವಾಕ್ಯಗಳ ಅರ್ಥವು ಇದಕ್ಕೆ ನಿದರ್ಶನಗಳಾಗಿ ಶ್ರೀ ಭರತಾಳ್ವಾನರವರು ಮಾಡಿದ ಶರಣಾಗತಿಯು ಅನುಪಾಯವಾಗಿ ಫಲಿಸಿತೆಂದೂ, ಶ್ರೀ ಗುಹನಿಗೆ ಶ್ರೀರಾಮಸಂಕಲ್ಪವಿದ್ದುದರಿಂದ, ಆತನ ಅಪರಾಧಗಳೊಂದೂ ಫಲಪ್ರಾಪ್ತಿಗೆ ವಿರೋಧನಾಗಲಿಲ್ಲವೆಂದೂ ಹೇಳಿರುತ್ತಾರೆ ಈ ವಾದಗಳು ಸರಿಯಲ್ಲವು, ಏಕೆಂದರೆ ಶ್ರೀ ಭರತರ ಶರಣಾಗತಿಯು ಎಂದಿಗೂ ಫಲಿಸದೇ ಇರಲು ಕಾರಣವಿಲ್ಲವು ಸ್ವಾಮಿಯು ದೇವತೆಗಳಿಗೆ ರಾಕ್ಷಸವಧೆಯನ್ನು ಮಾಡುವೆನೆಂದು ಕೊಟ್ಟ ಅಭಯವೂ, ಪಿತೃವಾಕ್ಯಪರಿಪಾಲನೆ ಎಂಬ ಉಪಾಧಿಗಳು (ಹೀಗೆ ನೋಡಿದರೆ ಎರಡೇ ಒಂದೇ, ರಾಕ್ಷಸವಧೆಗಾಗಿಯೇ ಪಿತೃವಾಕ್ಯಪರಿಪಾಲನೆಯೂ ಸಹ) ಇದ್ದುದರಿಂದ ೧೪ ವರ್ಷದವರೆಗೆ ಸಿದ್ಧಿಸಲಿಲ್ಲವು ಯಾವಾಗ ೧೪ ವರ್ಷಗಳು ಕಳೆಯಿತೋ ಆಗ ಆ ಶರಣಾಗತನ ಪ್ರಾರ್ಥನೆಯನ್ನು ನೆರವೇರಿಸುವದಕ್ಕಾಗಿ, ಒಂದು ದಿನವಿದ್ದು ಶ್ರಮ ಪರಿಹಾರ ಮಾಡಿಕೊಂಡು ಅಯೋಧ್ಯೆಗೆ ತೆರಳಬಹುದೆಂದು ಯೋಚಿಸಿದ ವಿಭೀಷಣನನ್ನು ಕುರಿತು ಹೇಳುತ್ತಾರೇನೆಂದರೆ—**"ಮಾಂ ನಿವರ್ತಯಿತುಂ ಯೋಽಸೌ ಚಿತ್ರಕೂಟ ಮುಪಾಗತಃ। ಶಿರಸಾಯಾಚಿತಸ್ತಸ್ಯ ವಚನಂ ನಕೃತಂ ಮಯಾ"** ಆ ಉಪಾಧಿಯು ಅಡ್ಡಿಯಾಗಿದ್ದುದಕ್ಕಾಗಿ ಪರಿತಾಪಪಟ್ಟು, ಶರಣಾಗತನ ಕೋರಿಕೆಯನ್ನು ಸಲ್ಲಿಸಲಿಲ್ಲವೇ ಎಂಬ ಖೇದದಿಂದ **"ತಂತು ಮೇಭ್ರಾತರಂ ದ್ರಷ್ಟುಂ, ಭರತಂ ತ್ವರತೇಮನಃ"** ಎಂದು ಹೇಳಿ ಒಡನೆಯೇ ಹೊರಟಿರುತ್ತಾರೆ—ಹೀಗಿರುವಾಗ ಪ್ರಪತ್ತಿಯು ಹೇಗೆ ವಿಫಲವಾಯಿತು? ಶ್ರೀ ಗುಹನು ನಿಕೃಷ್ಟ ಜನ್ಮವನ್ನು ಹೊಂದಿದವನಾದುದರಿಂದ ಆತನಿಗೆ ಭಾಗವತ ಸಂಶ್ರಯಣವೇ ಉಪಾಯವು, **ಶೂದ್ರಸ್ಸಾಧುಃ** ಎಂಬಲ್ಲಿ ಇದು ವಿದಿತವು ಭಗವದ್ಭಾಗವತಾನುಗ್ರಹಗಳಿಂದಲೇ ಅವರುಗಳಿಗೆ ಮೋಕ್ಷವಾದುದರಿಂದ ಈ ಮೇಲಿನ ವಾಕ್ಯಗಳಲ್ಲಿ ಸಾಮಂಜಸ್ಯವಿಲ್ಲವೆಂಬ ಅಭಿಪ್ರಾಯದಿಂದ ಅವುಗಳನ್ನು ಸ್ವಾಮಿ ದೇಶಿಕರವರು ಮುಂದಿನ ವಾಕ್ಯಗಳಿಂದ ನಿರಾಕರಿಸುತ್ತಾರೆ—

## ಶ್ರೀ ಪಿಳ್ಳೈ ವಾರ್ತ್ತಾಯಾಃ ವಿಶ್ವಾಸ ಜನನದ್ವಾರಾ ಪರಾಧೀನ ಕರ್ತೃತ್ವೇತಾತ್ಪರ್ಯಮ್

**ಇಪ್ಪಡಿ ಭಕ್ತ್ಯಾದಿಗಳ್ ಪೋಲೇ ಶರಣಾಗತಿಧರ್ಮಮುಮ್ ಕರ್ತ್ತವ್ಯಮಾಗ ವಿಧಿಕ್ಕಪಡುಗೈಯಾಲ್ (೧) "ತನ್ನಾಲ್ ವರುಮ್ ನನ್ಮೈ ವಿಲೈಪ್ಪಾಲ್ ಪೋಲೇ, ಈಶ್ವರನಾಲ್ ವರುಮ್ ನನ್ಮೈ ಮುಲೈಪ್ಪಾಲ್ ಪೋಲೇ" ಎನ್ರು ಪಿಳ್ಳೈ ವಾರ್ತ್ತೈಕ್ಕು ಭಕ್ತಿ ಪ್ರಪತ್ತ್ಯಾದಿಗಳಲ್ಲಾಮ್ ಅವನಾಲೇ ವರುಗಿತೆನ್ರು (ನಿನೈಕ್ಕವೇಣುಮೆನ್ರು) ತನ್ನುಡೈಯ ಪರಾಧೀನಕರ್ತೃತ್ವತ್ತಿಲೇ ತಾತ್ಪರ್ಯಮ್**

---

**ಶ್ರೀ ಪಿಳ್ಳೈರವರ ವಾಕ್ಯಕ್ಕೆ ವಿಶ್ವಾಸವನ್ನುಂಟುಮಾಡುವದರ ಮೂಲಕ ಪರಾಧೀನಕರ್ತೃತ್ವದಲ್ಲಿ ತಾತ್ಪರ್ಯವು.**

---

**ಇಪ್ಪಡಿ**-ಮೇಲೆ ವ್ರಜ ಎಂಬುದು ವಿಧಿವಾಕ್ಯವಾಗಿರಲು ಔಚಿತ್ಯವನ್ನು ಸ್ಥಾಪಿಸಿದರೀತಿಯಲ್ಲಿ, **ಭಕ್ತ್ಯಾದಿಗಳ್‌ಪೋಲೇ** - ಕರ್ಮಯೋಗಾದಿ ಅನುಷ್ಠಾನಗಳಿಂದ ಕೂಡಿದ ಭಕ್ತಿಯೋಗದ ಹಾಗೆ, **ಶರಣಾಗತಿಧರ್ಮಮುಮ್** - ಶರಣಾಗತಿರೂಪಾನುಷ್ಠಾನವೂ, **ಕರ್ತ್ತವ್ಯಮಾಗ** - ಅವಶ್ಯಕವಾಗಿ ಮಾಡತಕ್ಕದ್ದೆಂದು, **ವಿಧಿಕ್ಕಪಡುಗೈಯಾಲ್** - **"ಉಪಾಸೀತ" "ಧ್ಯಾಯೀತ"** ಎಂದು ವಿಧಿಸಲ್ಪಟ್ಟಹಾಗೆ, ಇಲ್ಲಿಯೂ **ಶರಣಂವ್ರಜ** ಎಂದೂ ಇತರ ಸ್ಥಳಗಳಲ್ಲಿ **"ಆತ್ಮಾನಂ ಯುಂಜೀತ" "ಮಯಿನಿಕ್ಷಪೇತ್"** ಎಂದೂ, ವಿಧಿಸಲ್ಪಟ್ಟಿರುವದರಿಂದ **(೧) "ತನ್ನಾಲ್ ವರುಮ್** - ಸ್ವಸ್ವಾತಂತ್ರ್ಯದಿಂದ ಬರುವ, **ನನ್ಮೈ** - ಒಳ್ಳೇ ಸಾಧನವು, **ವಿಲೈಪ್ಪಾಲ್‌ಪೋಲೇ** - ಮಗುವಿಗೆ ಕೊಂಡ ಹಾಲಿನ ಹಾಗೆ ಅಷ್ಟು ಪುಷ್ಟಿಕೊಡುವದಾಗಿ ಪರಿಣಮಿಸುವದಿಲ್ಲವೆಂಬ ಭಾವವು ಆತ್ಮರಕ್ಷಣೆಯು ಸಿದ್ಧಿಸಿದರೂ ಸಿದ್ಧಿಸಬಹುದು, ಅಲ್ಲದೆ ತಪ್ಪಿದರೂ ತಪ್ಪಬಹುದು, **ಈಶ್ವರನಾಲ್‌ವರುಮ್‌ನನ್ಮೈ** - ಸರ್ವೇಶ್ವರನನ್ನು ಸಿದ್ಧೋಪಾಯನನ್ನಾಗಿ ವರಿಸಿ ಬರುವ ಒಳ್ಳೆಯ ಸಾಧನೆಯಾದರೋ, **ಮುಲೈಪ್ಪಾಲ್‌ಪೋಲೇ** - ಶಿಶುವಿಗೆಸ್ತನ್ಯದ ಹಾಲು ಹೇಗೆ ನಿಸ್ಸಂದೇಹವಾಗಿ ರಕ್ಷಕಕವು ಹೇಗೋ ಹಾಗೆ ಎಂಬ ತಾತ್ಪರ್ಯವು" **ಎನ್ರು** - ಎಂಬುದಾಗಿ, **ಪಿಳ್ಳೈವಾರ್ತ್ತೈಕ್ಕು**-ಪಿಳ್ಳೈರವರ ದಿವ್ಯಸೂಕ್ತಿಗೆ, **ಭಕ್ತಿಪ್ರಪತ್ತ್ಯಾದಿಗಳೆಲ್ಲಾಮ್** ಭಕ್ತಿಪ್ರಪತ್ತಿಸಾಧನಗಳಾಗಲಿ, ಆದಿ ಶಬ್ದದಿಂದ ಅವುಗಳಿಗೆ ಹೇತುಭೂತವಾದ ಪರಿಕರಗಳೇ ಆಗಲಿ, ಇವೆಲ್ಲವೂ, **ಅವನಾಲೇವರುಗಿರದೆನ್ರು** - ಸಿದ್ಧೋಪಾಯನಾದ ಅವನ ಕೃಪೆಯಿಂದುಂಟಾಗುತ್ತದೆಂಬದಾಗಿ, **ನಿನೈಕ್ಕವೇಣುಮೆನ್ರು**- ತಿಳಿಯತಕ್ಕದ್ದೆಂದು, **ತನ್ನುಡೈಯ** - ಈ ಅಧಿಕಾರಿಯ, **ಪರಾಧೀನಕರ್ತೃತ್ವತ್ತಿಲೇ ತಾತ್ಪ**

**ಅನ್ಯವಿಶ್ವಾಸಸಿದ್ಧ್ಯರ್ಥಂ ಭಕ್ತ್ಯುಪಾಯ ವಿಧಿಂವರ್ದ |**
**ಸರ್ವಶಾರಿಸ್ತ್ರೇಷ್ವವಿಶ್ವಾಸ ಮಾಧತ್ತೇ ಮುಖಭೇದತಃ ||೧೫೭||**

**ರ್ಯರ್**-ಪರಾಧೀನಕರ್ತೃತ್ವದಲ್ಲಿ ಅಭಿಪ್ರಾಯವು ಸಿದ್ಧೋಪಾಯನ ಕೃಪೆಯಿಂದಲೇ ತುಂಬಾ ಗುರುತರವಾದ ದುಸ್ತರವಾದ ಉಪಾಯದಲ್ಲೇಯಾಗಲಿ, ಲಘುತರವಾಗಿ ಸುಲಭಸಾಧ್ಯವಾದ ಉಪಾಯದಲ್ಲೇಯಾಗಲಿ ಈತನಿಗೆ ಪ್ರವೇಶ ಉಂಟಾಗುವದಕ್ಕೆ ಸಿದ್ಧೋಪಾಯನಾದ ಸರ್ವೇಶ್ವರನೇ ಕಾರಣವೆಂಬ ಭಾವವು ಶ್ರೀ ಆಳ್ವಾರ್ ದಿವ್ಯ ಸೂಕ್ತಿಯಿಂದ ತೋರಿಬರುತ್ತದೆ ಆ ಎರಡು ಉಪಾಯಗಳಿಗೂ ಇರುವ ವ್ಯತ್ಯಾಸ ವನ್ನು **ವೆಲೆಪ್ಪಾಲ್, ಮುಲೈಪ್ಪಾಲ್** ದೃಷ್ಟಾಂತದಿಂದ ವ್ಯಕ್ತಪಡಿಸಿದರು ಭಕ್ತಿ ಯೋಗಾನುಷ್ಠಾನವು ವೆಲೆಪ್ಪಾಲಿನ ಹಾಗೆ, ವೆಲೆಪ್ಪಾಲಿಗೆ ದ್ರವ್ಯವೂ ಬೇಕಾಗಿ, ಅಪವಿತ್ರ ನೀರು ಬೆರೆಯದೇ ಇರುವದನ್ನು ಸಂಪಾದಿಸುವದು ಹೇಗೆ ಕಷ್ಟವೋ ಹಾಗೆ ಕಷ್ಟವು, ಅದು ದೇಹಪೋಷಣೆಗೆ ಅಪಾಯವಾದರೂ ಆಗಬಹುದು ಅಥವಾ ಶಿಶುವಿನ ದೇಹಕ್ಕೆ ಬಾಧಕವಾಗಬಹುದು ಹೀಗೆ ಭಕ್ತಿಯೋಗದಲ್ಲಿ ಅನೇಕ ತೊಂದರೆಗಳು, ಆದುದರಿಂದ ಸಾಧಿಸುವದು ಕಷ್ಟತರವು **ಮುಲೈಪ್ಪಾಲ್**-ಆದರೋ ಶಿಶುವಿಗೆ ಆಪ್ಯಾಯನವು, ಆದುದರಿಂದ ದೇಹ ಪೋಷಣೆಯು ನಿಸ್ಸಂದೇಹವು ಹೀಗೆ ಹೇಳಿರುವದರಿಂದ ಪ್ರಪತ್ತಿಯಲ್ಲಿ ಮಹಾ ವಿಶ್ವಾಸವುಂಟಾಗಲೆಂದು ಅಪ್ಪಣೆಕೊಡಿಸಿದ ದೃಷ್ಟಾಂತವು ಇದನ್ನೇ ಮುಂದಿನ ಕಾರಿಕೆಗಳಿಂದ ಹೇಳುತ್ತಾರೆ:

ಈ ಪಿಳ್ಳಾನ್ರವರ ದಿವ್ಯಸೂಕ್ತಿವ್ಯಾಖ್ಯಾನಮಾಡಿದುದರಿಂದ ಎರಡು ಅಭಿಪ್ರಾಯಗಳು ಏರ್ಪಟ್ಟವು - (೧) ಭಕ್ತ್ಯುಪಾಯವನ್ನು **"ಉಪಾಸೀತ" "ಧ್ಯಾಯಿಥ"** ಎಂದು ವಿಧಿವಾಕ್ಯಗಳಿದ್ದರೂ, ಅದು ವಿಧಿಯಲ್ಲವು, ಇದು ಗುರುತರವಾಗಿ ಕಷ್ಟತರ ವಾದುದರಿಂದ ಇದು ಬೇಡ, ಇದಕ್ಕೆ ನಿನಗೆ ಶಕ್ತಿಯಿಲ್ಲವು ಬೇರೆ ಲಘುತರವಾದ ಉಪಾಯವನ್ನು ಹೇಳುತ್ತೇನೆ ಕೇಳು ಎಂದು ವಿಶ್ವಾಸವನ್ನುಂಟುಮಾಡುವದಕ್ಕಾಗಿ ಮಾತ್ರವೇ, (೨) ಭಕ್ತಿಯೋಗವು ಮಹತ್ತಾದ ಉಪಾಯವೆಂದು ಹೇಳಿರುವದರಿಂದ, ಕರ್ಮಯೋಗ ಭಕ್ತಿಯೋಗಾದಿಗಳನ್ನೆಲ್ಲಾ ನಾನೇ ಅನುಷ್ಠಿಸುತ್ತೇನೆಂದು ಅಹಂಕಾರ ಭಾವದಿಂದ ಸ್ವತಂತ್ರಿಸಿ ನಡೆಸುವದರಿಂದ ಅಹಂಕಾರ ಮಿಶ್ರವು; ಹೇಗೆಂದರೆ ಅಮೋಘವಾಗಿ ತೋರುವ ಸ್ವರ್ಣಮಯವಾದ ಘಟದಲ್ಲಿ, ಸ್ವಲ್ಪ ಮದ್ಯದ ಸಂಬಂಧದಿಂದ ಅಪವಿತ್ರವಾಗಿರುವದರಲ್ಲಿ, ಪವಿತ್ರವಾದ ಗಂಗಾ ಜಲವನ್ನು ಇಟ್ಟರೆ ಅದು ಹೇಗೆ ಅನುಪಾದೇಯವೋ, ಹಾಗೆಯೇ ಈ ಭಕ್ತಿಯೋಗವು ಅನುಪಾದೇಯ ವೆಂಬುದು ಈ ಎರಡು ಅಭಿಪ್ರಾಯಗಳೂ ಶಾಸ್ತ್ರಸಮ್ಮತವಲ್ಲವೆಂದು ತಿಳಿಸುತ್ತಾರೆ - **ಅರ್ಥವು ಅನ್ಯ ವಿಶ್ವಾಸಸಿದ್ಧ್ಯರ್ಥಂ** - ಭಕ್ತಿಗಿಂತ ಬೇರೆಯಾದ ಉಪಾಯದಲ್ಲಿ ವಿಶ್ವಾಸವು ಸಿದ್ಧಿಸುವದಕ್ಕಾಗಿ, **ಭಕ್ತ್ಯುಪಾಯವಿಧಿಂವರ್ದ** - ಭಕ್ತ್ಯುಪಾಯ

**ಮದ್ಯೋಪಹತ ಬಾಂಡಸ್ಥ ತೀರ್ಥದೃಷ್ಟಾಂತವರ್ಣನಮ್ ।**
**ಅಹಂಕಾರಾ ನ್ವಯೇತು ಸ್ಯಾತ್ಪ್ರಪತ್ತಾವಪಿ ಭಕ್ತಿವತ್ ॥ ೧೫೮ ॥**

ವಿಧಿಯು, ಇಷ್ಟು ಮಾತ್ರಕ್ಕಾಗಿಯೇ ವಿಧಿವಾಕ್ಯವೇ ವಿನಾ ವಾಸ್ತವವಾಗಿಯೂ ವಿಧಿಯಲ್ಲವು ಎಂದು ಹೇಳುವವರು, ಎಂದರೆ ಭಕ್ತಿಯೋಗದಲ್ಲಿ ವಿಶ್ವಾಸವನ್ನು ಬಿಟ್ಟು ಪ್ರಪತ್ತಿಯಲ್ಲಿ ವಿಶ್ವಾಸವನ್ನುಂಟುಮಾಡುವದಕ್ಕಾಗಿ ಆ ವಿಧಿಯು ಎಂಬ ತಾತ್ಪರ್ಯವು ಇಂತಹ ಅಭಿಪ್ರಾಯದಿಂದುಂಟಾಗುವ ಅನಿಷ್ಟಾಂಶವನ್ನು ಉತ್ತರಾರ್ಧದಿಂದ ಉಪಪಾದಿಸುತ್ತಾರೆ---ಹಾಗಾದರೆ, **ಸರ್ವಶಾಸ್ತ್ರೇಷು** - ಸಮಸ್ತ ಶಾಸ್ತ್ರವಾಕ್ಯಗಳಲ್ಲೂ, ಎಂದರೆ ಪ್ರಕರಣಾನುಗುಣವಾಗಿ ಪ್ರಪತ್ತಿಯನ್ನು ಬೋಧಿಸುವ ಸರ್ವಶಾಸ್ತ್ರವಿಧಿಗಳಲ್ಲೂ, **ಮುಖಭೇದತಃ** - ಸ್ವಲ್ಪ ತಾರತಮ್ಯದಿಂದ, **ಅವಿಶ್ವಾಸಂ** ಅದು ವಿಧಿಯಲ್ಲವೆಂಬ ಅವಿಶ್ವಾಸವನ್ನು, **ಆಧತ್ತೇ** - ಪಟಿಸುತ್ತದೆ ಎಂದರೆ ಉಂಟುಮಾಡುತ್ತದೆ ಭಕ್ತಿಯೋಗವನ್ನು ವಿಧಿಯನ್ನು ಬೋಧಿಸುವ ಶಾಸ್ತ್ರವನ್ನು ವಿಧಿಯಲ್ಲವೆಂದೂ ಇನ್ನೊಂದರಲ್ಲಿ ವಿಶ್ವಾಸಉಂಟಾಗುವದಕ್ಕಾಗಿ ಎಂದೂ ಅಭಿಪ್ರಾಯಪಟ್ಟರೆ, ಪ್ರಪತ್ತಿಶಾಸ್ತ್ರದ **ಶರಣಂ ವ್ರಜ** ಎಂಬುದೂ ವಿಧಿಯಲ್ಲವು ; ಇನ್ನು ಯಾವುದೋ ಒಂದರಲ್ಲಿ ವಿಶ್ವಾಸ ಉಂಟಾಗುವದಕ್ಕಾಗಿ ಈ ವಿಧಿಯೂ ಎಂದು ಹೇಳಬೇಕಾಗುತ್ತದೆ ಇದರಿಂದ ಶಾಸ್ತ್ರವಿಧಿಗಳೆಲ್ಲಾ ಅದರವು ಹೊರಟು ಹೋಗುತ್ತದೆಂಬ ಭಾವವು **"ಅಹರ ಹಸ್ಸಂಧ್ಯಾಮುಪಾಸೀತ"** ಎಂಬುದೂ ವಿಧಿವಾಕ್ಯವಾಗುವದಲ್ಲವಂದು ಹೇಳಬೇಕಾಗುತ್ತದಂಬ ಭಾವವೂ ತೋರಿಬರುತ್ತದೆ ಯಾವ ಶಾಸ್ತ್ರದ ವಿಧಿವಾಕ್ಯವೂ ಆಗ ವಿಧಿಯಲ್ಲವೆಂದು ಹೇಳಬೇಕಾಗುತ್ತದೆಂಬ ತಾತ್ಪರ್ಯವು

ಮುಂದೆ ಭಕ್ತಿಯೋಗವು ಅಹಂಕಾರಮಿಶ್ರವೆಂದು ಪ್ರಪನ್ನನಿಗೆ ಸ್ವರೂಪವಿರೋಧವಾದುದೆಂದು ಹೇಳಿದ ದೋಷವನ್ನು ಇನ್ನೊಂದು ಕಾರಿಕೆಯ ಮೂಲಕ ನಿರಾಕರಿಸುತ್ತಾರೆ—**ಮದ್ಯೋಪಹತ ಬಾಂಡಸ್ಥ ತೀರ್ಥ ದೃಷ್ಟಾಂತವರ್ಣನಮ್ - ಮದ್ಯ** - ಹೆಂಡದಿಂದ, **ಉಪಹತ** - ದೋಷಿತವಾದ, **ಬಾಂಡಸ್ಥ** - ಅಲ್ಲಿ ಹೇಳಿರುವದು ಸುವರ್ಣಕುಂಭದಲ್ಲಿರುವ, **ತೀರ್ಥ** - ಪವಿತ್ರವಾದ ಜಲದ (ಗಂಗಾದಿ ನದಿಯ) **ದೃಷ್ಟಾಂತ ವರ್ಣನಮ್** - ಭಕ್ತಿಯೋಗಕ್ಕೆ ಇಂತಹ ದೃಷ್ಟಾಂತವನ್ನು ವರ್ಣಿಸಿರುವದು, **ಅಹಂಕಾರಾ ನ್ವಯೇತು** - ಅಹಂಕಾರದಿಂದ ಕೂಡಿದುದು ಆ ಕಾರಣದಿಂದ ಮುಮುಕ್ಷುವಿನ ಸ್ವರೂಪಕ್ಕೆ ಯೋಗ್ಯವಲ್ಲವೆಂದು ಹೇಳುವದೂ, **ಭಕ್ತಿವತ್** - ಭಕ್ತಿಯು ಹೇಗೆ ಅಹಂಕಾರಗರ್ಭಿತವಾದುದರಿಂದ ತ್ಯಾಜ್ಯವೋ, ಹಾಗೆಯೇ **ಪ್ರಪತ್ತಾವಪಿ** ಪ್ರಪತ್ತಿಯಲ್ಲಿಯೂ ಕೂಡವೆಂದು ತಿಳಿಯತಕ್ಕದ್ದು ಭಕ್ತಿಯೋಗವು ಅಹಂಕಾರಯುತವಾಗಿ ಸ್ವರೂಪವಿರುದ್ಧವೆಂದು ಹೇಗೆ ಹೇಳುವಿರೋ, ಹಾಗೆಯೇ ಪ್ರಪತ್ತಿಯೂ ಕೂಡ ಅಹಂಕಾರಯುತವಾಗಿ ಸ್ವರೂಪ

ವಿರುದ್ಧವೇ ಆಗಲೂ ಎಂಬ ಭಾವವು ಭಕ್ತಿಯೋಗವೇ ಆಗಲಿ ಭರನ್ಯಾಸವೇ ಆಗಲಿ ಅಹಂಭಾವದಿಂದ ಅನುಷ್ಠಿಸತಕ್ಕದ್ದಲ್ಲವು ಆದುದರಿಂದಲೇ ಎರಡು ಅನುಷ್ಠಾನಗಳಲ್ಲೂ ತ್ಯಾಗವನ್ನು ಹೇಳತಕ್ಕದ್ದು **"ಮಯಿ ಸರ್ವಾಣಿ ಕರ್ಮಾಣಿ ಸನ್ನಸ್ಯಾಧ್ಯಾತ್ಮಚೇತಸಾ"** (ಗೀತಾ III ೩೦) ಎಂದೂ ಗೀತಾಚಾರ್ಯರು ಪ್ರಥಮದಲ್ಲೇ ಹೇಳಿ ಬಿಟ್ಟು, ಪುನಃ ೧೮ ನೆಯ ಅಧ್ಯಾಯದ ೬ ನೆಯ ಶ್ಲೋಕದಲ್ಲಿ **"ಏತಾನ್ಯಪಿ ತು ಕರ್ಮಾಣಿ ಸಂಗಂತ್ಯಕ್ತ್ವಾಫಲಾನಿಚ। ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂಮತ ಮುತ್ತಮಮ್"** ಎಂದು ಅನುವದಿಸಿ ಭಕ್ತಿಯೋಗವನ್ನು, ಅಹಂಭಾವವನ್ನು ತ್ಯಜಿಸಿ, ಕರ್ತೃತ್ವಮಮತಾ, ಫಲಗಳನ್ನು ತ್ಯಾಗ ಮಾಡಿ, ಅನುಷ್ಠಿಸತಕ್ಕದ್ದೆಂದು ಹೇಳಿರುವಾಗ ಭಕ್ತಿಯೋಗವು ಹೇಗೆ ಅಹಂಕಾರ ಗರ್ಭಿತವಾದೀತು? ದುಷ್ಕರತ್ವದಿಂದ ಅಶಕ್ತನು ಬಿಡಬಹುದೆಂಬ ಮಾತೀಗ ಒಪ್ಪತಕ್ಕದ್ದಾಗಿರುತ್ತದೆ ಎಂಬ ಭಾವವು ಇಲ್ಲಿ ಪೂರ್ವಾರ್ಧದಿಂದ, ಆಳ್ವಾರ್ಸೂಕ್ತಿಯಾದ **"ಮದಿರಾಬಿನ್ದು ಮಿಶ್ರಮಾನ ಶಾತಕುಂಭಮಯ ಕುಂಭಗತ ತೀರ್ಥಸಲಿಲಂಪೋಲೆ ಅಹಂಕಾರಮಿಶ್ರಮಾನ ಉಪಾಯಾನ್ತರಮ್"** ಎಂಬುದನ್ನೂ, ವ್ಯಾಖ್ಯಾನವನ್ನೂ ಮನಸ್ಸಿನಲ್ಲಿಟ್ಟು ಹೇಳಲ್ಪಟ್ಟಿತು ಮದಿರಾವೆಂದರೆ ಹೆಂಡವು, **ಶಾತಕುಂಭಮಯಕುಂಭ** ವೆಂದರೆ ಸುವರ್ಣಕುಂಭವು, **ತೀರ್ಥಸಲಿಲಂ** - ಗಂಗಾದಿಜಲದ ಹಾಗೆ ಪವಿತ್ರವಾದ ಉದಕವು

ಆದುದರಿಂದ ಉಪಾಸನವೇ ಆಗಲಿ ಪ್ರಪದನವೇ ಆಗಲಿ, ಎರಡೂ ವಿಧಿವಾಕ್ಯಗಳ ಮೂಲಕ ಹೇಳಲ್ಪಟ್ಟಿರುವದರಿಂದ ಯಥಾಶಕ್ತಿ ಯಥಾಧಿಕಾರ ಅನುಷ್ಠಿಸಲ್ಪಡತಕ್ಕವುಗಳೆಂಬುದೇ ಸಿದ್ಧಾನ್ತಾರ್ಥವೆಂಬ ಭಾವವು

ಪೂರ್ವಪಕ್ಷಿಗಳು ಇನ್ನೊಂದು ವಾದವನ್ನು ತರಬಹುದು —ಏನೆಂದರೆ, ಪ್ರಾಜ್ಞರಾದ ಶ್ರೀ ಯಾಮುನಮುನಿಗಳು ತಮ್ಮ ಸ್ತೋತ್ರರತ್ನದ ಅಂತ್ಯದಲ್ಲಿ **"ಪಿತಾಮಹಂ ನಾಥ ಮುನಿಂ ವಿಲೋಕ್ಯ ಪ್ರಸೀದ ಮದ್ವೃತ್ತ ಮಚಿನ್ತಯಿತ್ವಾ"** ಎಂದು ಹೇಳಿರುವದರಲ್ಲಿ (ಶ್ಲೋ ೬೫) ತಮ್ಮ ಪೂರ್ವ ಪ್ರವೃತ್ತಿಗೆ ಮನಗೊಡದೆ ಪ್ರಸನ್ನರಾಗಿ ಎಂದು ಪ್ರಾರ್ಥಿಸಿರುವದು ನೋಡಿದರೆ, ಪೂರ್ವದಲ್ಲಿ **ತ್ವತ್ಪಾದಮೂಲಂಶರಣಂ ಪ್ರಪದ್ಯೇ"** (೨೧ ನೆಯ ಶ್ಲೋಕ) ಎಂದು ಯಥಾಶಾಸ್ತ್ರವಾಗಿ ಅನುಷ್ಠಿಸಿದ ಪ್ರಪತ್ತಿಯುಸರಿಯಲ್ಲವೆಂದು ಭಾವಿಸಿ, ಅದಕ್ಕಾಗಿ ಅದೂ ಅಹಂಕಾರಗರ್ಭಿತವೇ ಎಂದು ಲಜ್ಜಿಸಿ ಅಪರಾಧಕ್ಷಮಾಪಣೆಯನ್ನು ಪ್ರಾರ್ಥಿಸಿರುತ್ತಾರೆಂದು ಕೆಲವರು ಹೇಳುತ್ತಾರೆ ಇನ್ನು ಕೆಲವರು ಹಿಂದೆ ಸ್ವತಂತ್ರಿಸಿ ಶರಣಾಗತಿಯನ್ನು ಮಾಡಿದುದು ಸರಿಯಲ್ಲವಾಗಿ ಒಂದು ವೇಳೆ ವಿಕಲವಾದರೆ, ನಿನ್ನ ಕೃಪೆಗೆ ಪಾತ್ರರಾದ ಮಹಾನುಭಾವರಾಗಿ ನನಗೆ ಆಚಾರ್ಯರಾಗಿರುವ ನಾಥಮುನಿಗಳ ಮೂಲಕ ಪುನ

**ಆಗ್ನೈಯಾಲೇ (೧) "ಪ್ರಸೀದ ಮದ್ವೃತ್ತಮಚಿಂತಯಿತ್ವಾ"**

ಶರಣಾಗತಿಯನ್ನು ಮಾಡುವಾಗ ಪ್ರಸನ್ನನಾಗು ಎಂದು ಪ್ರಾರ್ಥಿಸಿದರೆಂದು ಹೇಳು
ವರು ಈ ಅರ್ಥಗಳೆಲ್ಲಾ ಸರಿಯಲ್ಲವೆಂದು ಮುಂದೆ ಉಪಪಾದಿಸುತ್ತಾರೆ ಹಾಗೆ
ಸರಿಯಲ್ಲದ ಶರಣಾಗತ್ಯನುಷ್ಠಾನವು ಎಂದು ತೋರಿದ ಬಳಿಕ, ಆ ೨೧ನೆಯ ಶ್ಲೋಕ
ವನ್ನು ಸ್ತೋತ್ರರತ್ನದಲ್ಲಿ ಏಕೆ ಸೇರಿಸಿದರು ? ಅದನ್ನು ಹೊಡೆದು ಹಾಕಬೇಕಲ್ಲವೋ ?
ಇತರರಿಗೆ ಬುದ್ಧಿಭ್ರಂಶವನ್ನುಂಟು ಮಾಡುವದು ಏತಕ್ಕೆ? ಅದನ್ನು ಅನಂತರ
ಹೋಗಲಾಡಿಸುವದು ಏತಕ್ಕೆ ? **"ಪ್ರಕ್ಷಾಳನಾದ್ಧಿ ಪಙ್ಕಸ್ಯ ದೂರಾದಸ್ಪರ್ಶ
ನಂವರಮ್"** ಎಂಬ ಹೇಳಿಕೆಯ ಪ್ರಕಾರ, ಕಾಲನ್ನು ಕೆಸರುಮಾಡಿಕೊಂಡು,
ಅದನ್ನು ತೊಳೆಯುವದು ಏತಕ್ಕೆ ? ಎಂಬೀ ವಾದಗಳಿಗೆ ಉತ್ತರವಿಲ್ಲದೆ ಹೋಗು
ತ್ತದೆ ಶ್ರೀ ನಿಗಮಾಂತದೇಶಿಕರವರು ಶ್ರೀ ಸ್ತೋತ್ರರತ್ನ ವ್ಯಾಖ್ಯಾನದಲ್ಲಿ, **"ವೃತ್ತಿಂ
ಅಚಿನ್ತಯಿತ್ವಾ"** ಎಂಬಲ್ಲಿರುವ ವೃತ್ತಶಬ್ದಕ್ಕೆ, ಶ್ರೀಯಾಮುನಮುನಿಗಳು ಅನೇಕ
ಕಡೆಗಳಲ್ಲಿ **"ಅಪರಾಧ ಸಹಸ್ರಭಾಜನಂ"** ಎಂದೂ, **"ದಿಗಶುಚಿ ಮವಿನೀತಂ"**
ಎಂದೂ, **"ಅಮರ್ಯಾದಃಕ್ಷುದ್ರಶ್ಚಲಮತಿಃ"** ಎಂದೂ ಹೀಗೆಲ್ಲಾ ಹೇಳಿಕೊಂಡಿ
ರುವ **"ಪ್ರತಿಕೂಲವೃತ್ತಿ"** ಎಂದು ಭಾಷ್ಯವನ್ನು ಬರೆದಿರುತ್ತಾರೆ ಅದು ಶರಣಾ
ಗತಿ ವಿಷಯವೇ ಪ್ರಥಮತಃ ಅಲ್ಲವು ಶರಣಾಗತಿ ವಿಷಯವೇ ಎಂದು ವಾದಿಸಿದರೆ
ಅದಕ್ಕೂ ಸರಿಯಾದ ಉತ್ತರವನ್ನು ದಯಪಾಲಿಸಿರುತ್ತಾರೆ ಇಲ್ಲಿ **ನಾಥಮುನಿಂ
ವಿಲೋಕ್ಯ**ವೆಂದು ತಮ್ಮ ಪರಮಾಚಾರ್ಯರ ವಿಷಯವನ್ನು ತಂದಿರುವದು ಏತಕ್ಕೆಂ
ದರೆ ಹೇಳುತ್ತಾರೆ ಹಿಂದ ಮಾಡಿದ ಸ್ವತಂತ್ರ ಪ್ರಪತ್ತಿಯು ಅವರಿಗೆ ಅಪರಾಧ
ಕೋಟಿಯಲ್ಲಿ ಸೇರಿತಾದುದರಿಂದ, ತಮ್ಮ ಪ್ರಾಚಾರ್ಯರ ಮೂಲಕ ಪುನಃಶರಣಾಗತಿ
ಯನ್ನು ಮಾಡಿದರೆಂದು ವಾದಿಸಿದರೂ, ಆಗಲೂ ಆಚಾರ್ಯ ಸಂಬಂಧಕ್ಕೆ ಪ್ರಾಧಾನ್ಯ
ವನ್ನು ಕೊಟ್ಟಾಂತಾಗುತ್ತದ ಆದರೆ ಅದು ಸಕೃತ್ ಅನುಷ್ಠೇಯವೆಂದು ಹೇಳುವ
ಶಾಸ್ತ್ರಕ್ಕೆ ವಿರುದ್ಧವಾಗುತ್ತದೆ ಭಗವತ್ಕಟಾಕ್ಷ ಲಬ್ಧವಾದ ಸದಾಚಾರ್ಯ ಸಂಬಂ
ಧವು, ಪ್ರಧಾನತಮವೆಂದೂ, ಅಂತಹ ಸುಕೃತವಿರುವ ತಮಗೆ ತಾವು ಅನುಷ್ಠಿಸಿದ
ಪ್ರಪತ್ತಿಯು ಫಲಕಾರಿಯಾಗುವದರಲ್ಲಿ ನಿಸ್ಸಂಶಯವು ತಾನು ನಿರ್ಭಯನು ಎಂಬ
ಅಭಿಪ್ರಾಯದಿಂದ **"ನಾಥಮುನಿಂವಿಲೋಕ್ಯ"** ಎಂದು ಹೇಳಿದರೆಂದು ಅರ್ಥ
ಮಾಡುವದು ಸರ್ವಶಾಸ್ತ್ರ ಸಮ್ಮತವಾದ ಅರ್ಥವೆಂದೂ ಹೇಳಿರುತ್ತಾರೆ —

**ಅಗ್ನೈಯಾಲ್** - ವಿಧಿವಾಕ್ಯಗಳೆಲ್ಲಾ ಸಮಂಜಸವಾಗಿ **"ಉಪಾಸೀತ"**
**"ಶರಣಂವ್ರಜ"** ಇತ್ಯಾದಿಗಳು ತತ್ತದಧಿಕಾರಿಗಳು ಅವಶ್ಯ ಅನುಷ್ಠಿಸತಕ್ಕವು
ಗಳೆಂದು ಈಗ ಸ್ಥಾಪಿತವಾದುದರಿಂದ, **"ಪ್ರಸೀದ ಮದ್ವೃತ್ತ ಮಚಿಂತ
ಯಿತ್ವಾ"** "ನನ್ನ ಹಿಂದಿನ ಪ್ರವೃತ್ತಿಯನ್ನು ಗಮನಿಸದೆ" **ಇತ್ಯಾದಿಗಳ್** - ಇವೇ

**ಇತ್ಯಾದಿಗಳ್ ಮುನ್ಬುತಾಮ್ ಪಣ್ಣಿನಪ್ರಪತ್ತಿಕ್ಕು ಕ್ಷಮೈಕೊಳ್ಳುಗಿರಪಡಿ ಎನ್ರು ಶಿಲರ್ ಶೊಲ್ಲುವದುಮ್, ಅಹಂಕಾರ ಸ್ಪರ್ಶಾದಿ ಶಂಕೈಯೈಪ್ಪತ್ತ ನಾಮ್ ಅತ್ತನ್ನೈ ; ಅಲ್ಲದು ಯಥಾಶಾಸ್ತ್ರಮನುಷ್ಠಿತ್ತ ಪ್ರಪತ್ತಿ ಅಪರಾಧ ಮಾಯ್ ಅದುಕ್ಕು ಕ್ಷಮೈಕೊಳ್ಳುಕಿರ ಪಡಿಯುನ್ರು ಅಪ್ಪಡಿಯಾಗಿಲ್ "ಪಿತಾ**

---

ಮೊದಲಾದವು, **ಮುನ್ಬುತಾನ್ ಪಣ್ಣಿನಪ್ರಪತ್ತಿಕ್ಕು - ನಧರ್ಮನಿಷ್ಠೋಸ್ಮಿ"** ಎಂದಾರಂಭಿಸಿ, **"ಅಕಿಂಚನೋನ್ಯಗತಿಃ"** ಎಂದು ಹೇಳಿಕೊಂಡು ಮಾಡಿದ ಶರಣಾಗತಿಗಾಗಿ, **ಕ್ಷಮೈಕೊಳ್ಳುಗಿರಪಡಿ - ಪ್ರಸೀದ** ಎಂಬುವರಿಂದ ಆ ಶರಣಾಗತಿಯನ್ನು ಮಾಡಿದುದು ಅಪರಾಧವೆಂದು ಭಾಸಿಸಿ ಕ್ಷಮೆಯನ್ನು ಪ್ರಾರ್ಥಿಸೋಣವೆಂದು **ಶಿಲರ್ ಶೊಲ್ಲುವದುಮ್** - ಕೆಲವರು ಹೇಳುವದು ಕೂಡ, ಯಾವ ತಾತ್ಪರ್ಯದಿಂದ ಹಾಗೆ ಹೇಳುತ್ತಾರೆಂಬುದನ್ನು ತಿಳಿಸುತ್ತಾರೆ -- **ಅಹಂಕಾರ ಸ್ಪರ್ಶಾದಿಶಂಕೈಪ್ಪತ್ತ ನಾಮ್ ಅತ್ತನ್ನೈ** - ಸ್ವತಂತ್ರ ಪ್ರಪತ್ತಿಯನ್ನು ತಾವು ಅನುಷ್ಠಿಸಿದುದು ಅಹಂಕಾರ ಸಂಬಂಧ ಉಂಟಾಯಿತೋ ಎಂಬ ಶಂಕಾವನ್ನುದ್ದೇಶಿಸಿ ಹೇಳುವದರಲ್ಲಿ ಮಾತ್ರವೇ ಅಭಿಪ್ರಾಯವು ತಾವು ಸ್ವತಂತ್ರಿಸಿ ಶರಣಾಗತಿಯನ್ನು ಮಾಡಿದುದು ಎಲ್ಲಿ ಅಹಂಕಾರದಿಂದ ಕೂಡಿದುದಾಯಿತೋ ಎಂಬ ಶಂಕಾದಿಂದ ಶ್ರೀ ಯಾಮುನಮುನಿಗಳು ಹಾಗೆ ಹೇಳಿದರೆಂಬುದು ಅವರ ತಾತ್ಪರ್ಯವು ಇಷ್ಟು ಮಾತ್ರ ಅಭಿಪ್ರಾಯವೆಂದು ಹಾಗೆ ಅರ್ಥಮಾಡಿದವರು ಹೇಳಿದರೂ, ಒಂದು ವೇಳೆ ಒಪ್ಪಿದರೂ ಒಪ್ಪಬಹುದು ಏಕೆಂದರೆ ಯಾವ ಕರ್ಮದಲ್ಲೂ ಅಹಂಭಾವವು ಕೂಡದಷ್ಟೇ, ಆದರೆ **"ಮಮನಾಥ ಯದಸ್ತಿ ಯೋಸ್ಮ್ಯಹಂ"** ಎಂಬ ಶ್ಲೋಕದಿಂದ ಅಹಂಕಾರಾಭಿಪ್ರಾಯದಿಂದಮಾಡಿದುದಾಗಿ ತೋರಿಬರುವದಿಲ್ಲ ತಾವು ಶಾಸ್ತ್ರಾನುಗುಣ ನಡೆಯುವರಾದುದರಿಂದ ಆತ್ಮಸಮರ್ಪಣೆಯನ್ನು ಮಾಡಿರುತ್ತೇನೆಂದು ಹೇಳಿಕ್ಕೊಂಡಿರುತ್ತಾರೆ **"ಪ್ರಬುದ್ಧಧೀಃ"** ಎಂದು ಆ ಶ್ಲೋಕದಲ್ಲಿರುವದರಿಂದ ಪ್ರಬುದ್ಧಧೀಯಾದವರಿಗೆ ಅಹಂಕಾರವೆಲ್ಲಿಯದು ' ಆದರೂ ಅಹಂಕಾರ ಶಂಕಾದಿಂದ ಹಾಗೆ ಹೇಳಿದರೂ ಒಪ್ಪಬಹುದು. ಇನ್ನು ಹೇಗೆ ಅಭಿಪ್ರಾಯವಾದರೆ ಒಪ್ಪತಕ್ಕದ್ದಲ್ಲವೆಂದರೆ ಹೇಳುತ್ತಾರೆ - **ಅದಿಲ್**- ಈ ಮೇಲಿನ ಅಭಿಪ್ರಾಯದಲ್ಲಿ, **ಅದು** - ಕ್ಷಮಾಪಣೆಯನ್ನು ಪ್ರಾರ್ಥಿಸಿದರೆಂಬುದು, **ಯಥಾಶಾಸ್ತ್ರಮನುಷ್ಠಿತ್ತಪ್ರಪತ್ತಿ** - ಪರಿಕರಗಳೊಂದಿಗೆ ಹೇಗೆ ಶಾಸ್ತ್ರದಲ್ಲಿ ಅನುಷ್ಠಿಸಬಹುದೆಂದು ವಿಹಿತವೋ ಹಾಗೆ ಅನುಷ್ಠಿಸಲ್ಪಟ್ಟ ಪ್ರಪತ್ತಿಯು, **ಅಪರಾಧ ಮಾಯ್** - ಅದೂ ಅಹಂಕಾರ ಗರ್ಭಿತವಾದುದರಿಂದ ಅಪರಾಧವಾಗಿ, ಹೇಗೆ ಅಪರಾಧವೆಂದರೆ ಎಲ್ಲಾ ಸ್ವತಂತ್ರಿಸಿ ನಡೆಸುವ ಅನುಷ್ಠಾನವೆಲ್ಲಾ ಅಹಂಕಾರ ಗರ್ಭಿತವಾಗಿ ಅಪರಾಧವಾಗಿ, **ಅದಕ್ಕು ಕ್ಷಮೈಕೊಳ್ಳಗಿರಪಡಿಯುನ್ರು**- ಅದಕ್ಕಾಗಿ ಕ್ಷಮೆಯನ್ನು ಪ್ರಾರ್ಥಿಸುತ್ತಾರೆಂದು ಹೇಳುವ ಅರ್ಥವಲ್ಲವು, ಆ ಅಭಿಪ್ರಾಯವು

**ಮಹಂ ಸಾಥಮುನಿಂವಿಲೋಕ್ಯ ಪ್ರಸೀದ" ಎನ್ಗಿರ ಪೂರ್ವಾಚಾರ್ಯ ಪುರಸ್ಕಾರಾದಿಗಳುಮ್ ತಾಮ್ ಶೆಯ್‌ಗಿರದಾಗೈಯಾಲೇಯದುಕ್ಕುಮ್ ಕ್ಷಮೈಕೊಳ್ಳವೇಣ್ಡಿ ಅನವಸ್ಥೈಯಾಮ್. ಇದು ಸ್ವಪರ ನಿರ್ವಾಹಕವಾಗಿಲ್**

ಸರಿಯಲ್ಲವೆಂಬ ತಾತ್ಪರ್ಯವು, ಹಾಗೆ ಅಭಿಪ್ರಾಯಪಟ್ಟರೆ ವಾದವಲ್ಲುಂಟಾಗುವ ಒಂದು ದೋಷವನ್ನು ತಿಳಿಸುತ್ತಾರೆ- **ಅಪ್ಪಡಿಯಾಗಿಲ್** - ಪ್ರಪತ್ತಿಯನ್ನು ಅನುಷ್ಠಿಸಿದುದು ಅಪರಾಧವಾಗಿ, ಆ ಅಪರಾಧಕ್ಕಾಗಿ ಕ್ಷಮೆಯನ್ನು ಪ್ರಾರ್ಥಿಸುತ್ತಾರೆಂಬ ಅಭಿಪ್ರಾಯವಾದರೆ ಶ್ರೀ ಯಾಮುನಿಮುನಿಗಳು ಸ್ತೋತ್ರರತ್ನಾಂತ್ಯದಲ್ಲಿ, "ಪಿತಾಮಹರಾದ ನಾಥಮುನಿಗಳನ್ನು ನೋಡಿಯಾದರೂ, ಪ್ರಸನ್ನನಾಗು" **ಎನ್ಗಿರ**-ಎಂದು ಭಗವಂತನನ್ನು ಪ್ರಾರ್ಥಿಸಿರುವ, **ಪೂರ್ವಾಚಾರ್ಯ ಪುರಸ್ಕಾರಾದಿಗಳುಮ್** - ಹೀಗೆ ಪೂರ್ವಾಚಾರ್ಯರುಗಳ ಅನುಗ್ರಹ ಪ್ರಾರ್ಥನೆಯೂ, **ತಾನ್ ಶೆಯ್‌ಗಿರದಾಗೈಯಾಲ್** - ತಾನು ಸ್ವತಂತ್ರಿಸಿ ಮಾಡುವುದಾದುದರಿಂದ, **ಅದಕ್ಕುಮ್ ಕ್ಷಮೈಕೊಳ್ಳವೇಂಡಿ** - ಅದೂ ಅಪರಾಧವಾಗಿ ಅದಕ್ಕೂ ಕ್ಷಮೆಯನ್ನು ಪ್ರಾರ್ಥಿಸಬೇಕಾಗಿ ಒಂದು. **ಅನವಸ್ಥೈಯಾಮ್** - ಅಭಿಪ್ರಾಯವು ಅನವಸ್ಥಾದೋಷಯುಕ್ತವಾಗುತ್ತದೆ ಹೇಗೆಂದರೆ—ಪ್ರಪತ್ತಿಯು ಸ್ವತಂತ್ರಿಸಿ ಶ್ರೀ ಯಾಮುನಾಚಾರ್ಯರು **"ವಪುರಾದಿಷುಯೋಽಪಿಕೋಽಪಿವಾ"** ಎಂಬ ಶ್ಲೋಕದಲ್ಲಿ **"ಅಹಮದ್ಯೈವಮಯಾಸಮರ್ಪಿತಃ"** ಎಂದು ಆತ್ಮನಿಕ್ಷೇಪರೂಪ ಭರಸಮರ್ಪಣೆಯನ್ನು ಸ್ವತಂತ್ರಿಸಿ ನಡೆಸಿದ ಅಪರಾಧಕ್ಕಾಗಿ ಸ್ವಾಚಾರ್ಯರಾದ ನಾಥಮುನಿಗಳನ್ನು ಪುರಸ್ಕರಿಸಿ ಅಪರಾಧಕ್ಷಮಾಪಣವನ್ನು ಮಾಡಿಕೊಂಡರು, ಆದರೆ ಈ ಪ್ರಪತ್ತಿಯು ಹೇಗೆ ಅಪರಾಧರೂಪವೆಂದರೆ ಅದಕ್ಕೆ ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾರೆ ಬಹುಕಾಲ ವ್ಯಭಿಚಾರಿಯಾದ ಹೆಂಡತಿಯು ಬೇರೆ ಕಡೆ ಇದ್ದು, ಅನಂತರ ತನ್ನ ಗಂಡನನ್ನು ಸ್ವೀಕರಿಸು ಎಂಬ ಪ್ರಾರ್ಥನೆಯ ಹಾಗೆ, ಈ ಪ್ರಪತ್ತಿಯು ಆದುದರಿಂದ ಅದೂ ಅಪರಾಧವೇ ಎಂದು ಕೆಲವರು ಹೇಳುವರು ಆಗಲಿ, ಹೀಗೆ ಅಪರಾಧಕ್ಷಮಾಪಣೆಯೂ ಸ್ವತಂತ್ರಿಸಿ ನಡೆಸಿದುದರಿಂದ ಅದು ಅಪರಾಧವಾಗಿ ಅದಕ್ಕಾಗಿ ಇನ್ನೊಂದು ಪ್ರಪತ್ತಿಯು ಅದೂ ಅಪರಾಧವಾಗಿ ಇನ್ನೊಂದು ಹೀಗೆ ಅಂತ್ಯವಿಲ್ಲದೆ ಅಪರಾಧ ನಿವೃತ್ತಿಗಾಗಿ ಪ್ರಪತ್ತಿಗಳನ್ನು ಮಾಡಬೇಕಾಗಿ ಬರುತ್ತದೆ ಇಂತಹ ಕೊನೆಗಾಣದ ವಾದವು ಅನವಸ್ಥಾದೋಷಯುಕ್ತವಾದುದೆಂದು ಹೇಳಲ್ಪಡುತ್ತದಾದುದರಿಂದ ಅಂತಹ ವಾದವು ಸರಿಯಲ್ಲವೆಂಬ ತಾತ್ಪರ್ಯವು ಇಂತಹ ವಾದಗಳೆಲ್ಲಾ ಕುತರ್ಕಗಳೆಂದು ಹೇಳಲ್ಪಡುವುವು

ಇನ್ನೊಂದು ವಾದವನ್ನೂ ತರಬಹುದು ಏನೆಂದರೆ ಈಗ ಸ್ವಾಚಾರ್ಯಮೂಲಕ ಮಾಡಿದ ಪ್ರಾರ್ಥನೆಗೆ ಸ್ವತಂತ್ರಿಸಿ ಮಾಡಿದ ಅಪರಾಧವನ್ನೂ, ಇತರ

**ಇದುಪ್ಪೊಲೇ ಮುನ್ಬು ಪಣ್ಣಿನ ಪ್ರಪದನಮುಮ್ ಸ್ವಪರ ನಿರ್ವಾಹಕಮೆನ್ನ ಲಾಮ್ ಇಜ್ಙ್ಗ ಶೊಲ್ಲುಮ್ ಕುತರ್ಕಙ್ಗಳಾಲೇ ಪೂರ್ವರ್ಗಳ್ ಪಣ್ಣಿನ ಪ್ರಪದ ನಮುಮ್ ಅಪರಾಧಮಾಯರು ಆಗೈಯಾಲೇ ಪೂರ್ವರ್ಗಳೈಮುನ್ನಿಡವು ಮೊಣ್ಣಾ ದೊಳಿಯುಮ್**—

ಅಪರಾಧಗಳನ್ನೂ ಹೋಗಲಾಡಿಸುವ ಶಕ್ತಿಯುಂಟು ಎಂದರೆ ಹಿಂದೆ ಮಾಡಿದ ತನ್ನ ಪ್ರಪತ್ತಿಗೆ ಅಂತಹ ಶಕ್ತಿಯುಂಟು ಎಂದು ಏಕೆ ಭಾವಿಸಕೂಡದು ಎಂದು ಕೇಳುತ್ತಾರ —**ಇದು**-ಈಗ **ನಾಥಮುನಿಂವಿಲೋಕ್ಯ ಪ್ರಸೀದ** ಎಂದು ಹೇಳಿದ ಪ್ರಾರ್ಥನೆಯು, **ಸ್ವಪರ ನಿರ್ವಾಹಕ** - ಸ್ವತಂತ್ರಿಸಿ ಮಾಡಿದುದರ ಅಪರಾಧವನ್ನೂ ಮತ್ತೂ ಇತರ ಅಪರಾಧಗಳನ್ನೂ ಹೋಗಲಾಡಿಸುವ ನಿರ್ವಾಹವುಳ್ಳದಾದರೆ, **ಮುನ್ಬು** - ಇದಕ್ಕೆ ಮುಂಚೆಯೇ ಎಂದರೆ ಹಿಂದ **"ಶರಣಮಹಂಪ್ರಪದ್ಯೇ"** ಎಂದೂ **"ಅಹಮದ್ಯೈವಮಾಯಾ ಸಮರ್ಪಿತಃ"** ಎಂದೂ, **ಪಣ್ಣಿನಪ್ರಪದ ನಮುಮ್** - ಮಾಡಿದ ಪ್ರಪದನವೂ ಸಹ, **ಸ್ವಪರ ನಿರ್ವಾಹಕಮೆನ್ನಲಾಮ್** - ಸ್ವತಂತ್ರಿಸಿ ನಡೆದ ಅಪರಾಧವನ್ನೂ, ಇತರ ಅಪರಾಧಗಳನ್ನೂ ಹೋಗಲಾಡಿಸುತ್ತ ದೆಂದು ಹೇಳಬಹುದಲ್ಲವೇ; ಹಾಗೆ ಹೇಳಲು ಪ್ರತಿಬಂಧಕವೇನಿದೆ? ಎರಡೂ ಸಮವೇ, ಇದಕ್ಕೆ ಯಾವ ಮಹಿಮೆಯನ್ನ ಹೇಳುತ್ತಿರೋ ಅದನ್ನೇ ಅದಕ್ಕೂ ಹೇಳ ಬಹುದಲ್ಲವೇ ಎಂಬ ತಾತ್ಪರ್ಯವು ಪೂರ್ವಾಚಾರ್ಯ ಪುರಸ್ಕಾರವು ಸ್ವಪರ ನಿರ್ವಾಹಕ ವೆಂದು ನೀವು ಭಾವಿಸುವದಾದರೆ ಯಥಾಶಾಸ್ತ್ರ ಅನುಷ್ಠಿಸಲ್ಪಟ್ಟ ಪ್ರಪದನವೂ ಹಾಗೆ ಎಂದು ಏಕೆ ಭಾವಿಸಕೂಡದೆಂಬ ಭಾವವು **ಇಜ್ಙ್ಗ** - ಈ ಪ್ರಪದನದ ವಿಷಯದಲ್ಲಿ, **ಶೊಲ್ಲುಮ್ ಕುತರ್ಕಙ್ಗಳಾಲೇ** - ಹೇಳುವ ಕುವಾದಗಳಿಂದ, **ಪೂರ್ವರ್ಗಳ್ ಪಣ್ಣಿನಪ್ರಪದನಮುಮ್** - ಹಿಂದಿನ ಆಳ್ವಾರಾಚಾರ್ಯರುಗಳಾದ ನಮ್ಮಾಳ್ವಾರ್, ಯಾಮುನಮುನಿ, ಭಾಷ್ಯಕಾರ ಪ್ರಭೃತಿಗಳಿಂದ ಮಾಡಲ್ಪಟ್ಟ ಪ್ರಪದನವೂ, **ಅಪರಾಧಮಾಯರುಗೈಯಾಲ್**-ನಿಮ್ಮ ಆ ವಾದಗಳ ಪ್ರಕಾರ ಅಪ ರಾಧವಾಗುವದರಿಂದ, **ಪೂರ್ವರ್ಗಳೈಮುನ್ನಿಡುವುಮ್**-ಅಂತಹ ಪೂರ್ವರುಗಳಾದ ಆಳ್ವಾರಾಚಾರ್ಯರುಗಳನ್ನು ಪುರಸ್ಕರಿಸಿ ಈ ಪ್ರಪದನಾನುಷ್ಠಾನವನ್ನು, ಇದರ ಉಪಲಕ್ಷಣವಾಗಿ ಇವರುಗಳನ್ನು ಪುರಸ್ಕರಿಸಿ ಇತರ ಭಾಗವತಾರಾಧನೆಗಳನ್ನೂ, **ಒಣ್ಣಾ ದೊಳಿಯುಮ್** - ಕೂಡದೆಂದು ತ್ಯಜಿಸಬೇಕಾಗುತ್ತದೆ, ಇದು ನಿಮಗೆ ಇಷ್ಟವಿಲ್ಲದ ವಿಷಯವೆಂಬ ತಾತ್ಪರ್ಯವು ಕುತರ್ಕವೆಂದರೆ ಶಾಸ್ತ್ರವನ್ನು ದೂರೀ ಕರಿಸಿ ಮಾಡುವ ವಾದವು ಸತ್ತರ್ಕವೆಂದರೆ ಶಾಸ್ತ್ರವನ್ನು ಮೂಲಮಾಡಿಕೊಂಡು ಮಾಡುವ ವಾದವು ಈ ಪ್ರಪದನವೂ ಅಹಂಕಾರಗರ್ಭಿತವೆಂದು ಹೇಳುವ ವಾದವು, **"ಶರಣಂವ್ರಜ** (ಗೀ)**" "ಓಮಿತ್ಯಾತ್ಮಾನಂಯುಂಜೀತ"** (**ತೈತ್ತಿ**

**“ಆಚಾರ್ಯಾನುಜ್ಞಯಾಕುರ್ಯಾತ್” ಇತಿ ತತ್ಪುರಸ್ಕಾರಃ ಪ್ರಪತ್ತ್ಯ**
**ಪೇಕ್ಷಿತ ಇತಿನಿಗಮಯತಿ.**

---

ರೀಯ) “**ಮಾಂನಮಸ್ಕುರು** (ಗೀ)” “**ಭಜಸ್ವಮಾಮ್** (ಗೀ)” “**ಗಚ್ಛಧ್ವಮೇನಂ ಶರಣಂಶರಣ್ಯಂಪುರುಷರ್ಷಭಾಃ** ’(ಭಾರ ವನ) “**ಲಬ್ಧ್ವೈವಂ ಮನ್ತ್ರರಾಜಾನಂ ಮಾಂಗಚ್ಛೇಚ್ಛರಣಂನರಃ** (ನಾತ್ಯಕಿತನ್ತ್ರ) “**ಕುಯೋನಿಷ್ವಪಿಸಂಜಾತೋಯಸ್ಸಕೃಚ್ಛರಣಂಗತಃ ತಂಮಾತಾಪಿತೃಹಂತಾರಮಪಿಪಾತಿಭವಾರ್ತಿಹಾ**” ‖ (ಸನತ್ಕುಮಾರಸಂಹಿತಾ) “**ತಾವದಾರ್ತಿಸ್ತಥಾವಾಂಛಾ ತಾವನ್ಮೋಹ ಸ್ತಥಾಸುಖಮ್। ಯಾವ ನ್ನಯಾತಿ ಶರಣಂತ್ವಾ ಮಶೇಷಾಘನಾಶನಮ್**” (ವಿ ಪು)” **ನಿವೇದಯೀತ ಸ್ವಾತ್ಮಾನಂ ವಿಷ್ಣಾವಮಲತೇಜಸಿ**” (ವ್ಯಾಸಸ್ಮೃತಿ) “**ವಾಚಃಪರಂಪ್ರಾರ್ಥಯಿತಾ ಪ್ರಪದ್ಯೇಗ್ನಿಯುತಂಶ್ರಿಯಮ್**”(ಶೌನಕಸ್ಮೃತಿ)“**ಮತ್ಪದದ್ವಂದ್ವಮೇವಯೇ ಪ್ರಪದ್ಯನ್ತೇ ಪರಾಯಣಾಮ್।ಉದ್ಧರಿಷ್ಯಾಮ್ಯಹಂ ದೇವಿಸಂಸಾರಾತ್ಸ್ವಯ ಮಾದರಾತ್**” (ವರಾಹಪುರಾಣ) “**ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾಮತಿಃ। ಶರಣಾಗತಿ ರಿತ್ಯುಕ್ತಾ ಸಾ ದೇವೇಸ್ಮಿ ಪ್ರಯುಜ್ಯತಾಮ್**” (ಅಹಿಸಂಹಿತಾ) “**ಶರಣಂತ್ವಾಂ ಪ್ರಪನ್ನಾಯೇ ಧ್ಯಾನಯೋಗವಿವರ್ಜಿತಾಃ। ತೇಪಿಮೃತ್ಯುಮತಿಕ್ರಮ್ಯಯಾನ್ತಿ ತದ್ವೈಷ್ಣವಂಪದಮ್** ” (ಬ್ರಾಹ್ಮಪುರಾಣ), “**ಭಕ್ತ್ಯಾಪರಮಯಾ ವಾಪಿ ಪ್ರಪತ್ತ್ಯಾವಾ ಮಹಾಮತೇ। ಪ್ರಾಪ್ಯೋಹಂನಾನ್ಯಥಾ ಪ್ರಾಪ್ಯೋಮಮಕೈಂಕರ್ಯಲಿಪ್ಸುಭಿಃ**” ಇತ್ಯಾದಿ ಪ್ರಮಾಣಶತಗಳಿಗೆ ವಿರುದ್ಧವಾಗಿರುವದರಿಂದ ಕುತರ್ಕವೆಂದು ಹೇಳಿದರು. ಅದೂ ಅಲ್ಲದೆ, ಈ ಪ್ರಪದನಕ್ಕೆ ಕಾರ್ಪಣ್ಯ ಮಹಾವಿಶ್ವಾಸಗಳು ಅಂಗಗಳು, ಹೀಗಿರುವಾಗ ಅಹಂಕಾರಗರ್ಭಿತವಾದುದು ಹೇಗೆ ? ಅಹಂಕಾರಗರ್ಭಿತವಾದರೆ ಆಕಿಂಚನ್ಯವೇ ಇಲ್ಲದೆ, ಅದು ಶರಣಾಗತಿಯೇ ಆಗುವದಿಲ್ಲವು ಹಾಗಲ್ಲವು ಸ್ವತಂತ್ರಿಸಿ ನಡೆಸಿದುದು ಅಪರಾಧವು ಎಂದರೆ, “**ಕೃತಪ್ರಯತ್ನಾಪೇಕ್ಷಸ್ತು........**” ಎಂಬ ಸೂತ್ರದಲ್ಲಿ ಪ್ರಥಮಸಙ್ಕಲ್ಪಯತನಗಳಲ್ಲಿ ಸರ್ವೇಶ್ವರನೇ ವಿಧಿವಾಕ್ಯಗಳಿಗೂ ಶಾಸ್ತ್ರೋಪದೇಶ, ಮಹರ್ಗಳ ಉಪದೇಶ ಇವುಗಳಿಗೆ ವೈಯರ್ಥ್ಯ ಉಂಟಾಗದಿರುವದಕ್ಕಾಗಿ ಸ್ವತಂತ್ರನಾಗಿ ತಾನೇ ಬಿಟ್ಟಿರುತ್ತಾನೆಂದು ಶಾಸ್ತ್ರ ಹೇಳಿರುತ್ತದೆ. ಆ ಪ್ರಮಾಣಕ್ಕೂ ವಿರುದ್ಧವಾದ ಅಭಿಪ್ರಾಯವಾಗುತ್ತದೆ ಕುತರ್ಕ ಸತ್ತರ್ಕಗಳ ವಿಷಯವು “**ಆರ್ಷಂಧರ್ಮೋಪದೇಶಂಚ ವೇದಶಾಸ್ತ್ರಾವಿರೋಧಿನಾ। ಯಸ್ತರ್ಕೇಣಾ ನುಸಂಧತ್ತೇ ಸ ಧರ್ಮಂ ವೇದ ನೇತರಃ**” ಎಂಬ ಶ್ಲೋಕದಿಂದ ಗ್ರಹಿಸತಕ್ಕದ್ದಾಗಿರುತ್ತದೆ.

**ಆಗೈಯಾಲ್ ಇಸ್ತೋತ್ರತ್ತಿಲ್ ಆದ್ಯನ್ತಙ್ಗಳಿಲ್ ಪಣ್ಣಿನ ಪೂರ್ವಾಚಾರ್ಯ ಪುರಸ್ಕಾರಮ್ ಇಙ್ಗು ಅರುಳಿಚ್ಚೈಯ್‌ಗಿರ ಪ್ರಪತ್ತಿಕ್ಕು ಅಪೇಕ್ಷಿತಮಾಯಾದಲ್, ವೈಕಲ್ಯಪರಿಹಾರಾರ್ಥಮಾಯಾದಲ್ ಉಪಯುಕ್ತಮಾಯ್**

## ಆಚಾರ್ಯಾನುಜ್ಞೆಯಿಂದಲೇ ನಡೆಸತಕ್ಕದ್ದೆಂದಿರುವದರಿಂದ ಅವರ ಪುರಸ್ಕಾರವು ಪ್ರಪತ್ತಿಗೆ ಆವಶ್ಯಕಬೇಕಾದುದು

ಶ್ರೀ ಯಾಮುನಮುನಿಗಳು ಸ್ವತಂತ್ರಿಸಿ ಪ್ರಪದನವನ್ನು ಅನುಷ್ಠಿಸಿದುದರಿಂದ ಅಹಂಕಾರಯುಕ್ತವಾಯಿತೇ ಎಂದು ಲಜ್ಜಿಸಿ, ಅದು ಉಪಾಯವೇ ಅಲ್ಲವೆಂಬ ಭಾವನೆಯಿಂದ ತಮ್ಮ ಆಚಾರ್ಯರಾದ ನಾಥಮುನಿಗಳ ಮೂಲಕ ಕ್ಷಮಾಪಣೆಯನ್ನು ಪ್ರಾರ್ಥಿಸಿದರೆಂಬ ವಾದವು ಸರಿಯಲ್ಲವೆಂದು ಇಷ್ಟುದೂರ ಚರ್ಚಿಸಿದರು. ಹಾಗಾದರೆ ಅವರ ಅಭಿಪ್ರಾಯವೇನು ? ನಾಥಮುನಿಗಳನ್ನು ಪುರಸ್ಕರಿಸಿ ಹೇಳಿದುದು ಯಾವ ಅಭಿಪ್ರಾಯದಿಂದ ? ಎಂದರೆ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಆಚಾರ್ಯ ಪುರಸ್ಕಾರಾಭಿಪ್ರಾಯವನ್ನು ಎರಡು ವಿಧವಾಗಿ ಹೇಳುತ್ತಾರೆ—**ಆಗೈಯಾಲ್** - ಅವರುಗಳ ಅಭಿಪ್ರಾಯಗಳು ಸರಿಯಲ್ಲವಾದುದರಿಂದ, **ಇಸ್ತೋತ್ರತ್ತಿಲ್** - ಈ ಸ್ತೋತ್ರರತ್ನದಲ್ಲಿ, **ಆದ್ಯನ್ತಙ್ಗಳಿಲ್** - ಗ್ರಂಥದ ಆದಿ ಮತ್ತು ಅಂತ್ಯದಲ್ಲೂ, **ಪಣ್ಣಿನ ಪೂರ್ವಾಚಾರ್ಯಪುರಸ್ಕಾರಮ್** - ಮಾಡಿದ ತಮ್ಮ ಪೂರ್ವಾಚಾರ್ಯರಾದ ನಾಥಮುನಿಗಳನ್ನು ಸ್ತುತಿಸಿ ಪುರಸ್ಕರಿಸಿರುವದು, (೧) **ಇಙ್ಗು** - ಈ ಸ್ತೋತ್ರರತ್ನ ದಲ್ಲಿ, **ಅರುಳಿಚ್ಚೈಯ್‌ಗಿರಪ್ರಪತ್ತಿಕ್ಕು "ಅಹಮದ್ಯೈವ ಮಯಾ ಸಮರ್ಪಿತಃ"** ಎಂದು ಹೇಳಿರುವ ಪ್ರಪದನಕ್ಕೆ ಅಪೇಕ್ಷಿತವಾದುದಾಗಿಯಾದರೂ, ಅಥವಾ (೨) **ವೈಕಲ್ಯಪರಿಹಾರಾರ್ಥಮಾಯಾದಲ್** - ಅಜ್ಞಾನದಿಂದಾಗಲಿ, ಅಪರಾಧ ದಿಂದಾಗಲಿ ಉಂಟಾಗುವ ನ್ಯೂನತೆಯ ಪರಿಹಾರಕ್ಕಾಗಿಯಾಗಲಿ ಎಂದರೆ ಆಚಾರ ರನ್ನು ಈ ವಿಷಯದಲ್ಲಿ ಪ್ರಾರ್ಥಿಸಿದರೆ ಅಂತಹ ವೈಕಲ್ಯವು ಪರಿಹಾರವಾಗುತ್ತದೆಂಬ ಭಾವದಿಂದಾಗಲಿ, **ಉಪಯುಕ್ತಮಾಯ್ ವಂದದಿತ್ತನೇ** - ಪ್ರಯೋಜನಕಾರಿ ಯಾಗಿ ಬಂದುದಾಗಿ ಭಾವಿಸಬಹುದು. ಇಷ್ಟೇ ಅದರ ಪ್ರಯೋಜನವು, ಯಾವ ಮಹತ್ತಾದ ಅನುಷ್ಠಾನ ಸಙ್ಕಲ್ಪದಲ್ಲೂ ಆಚಾರ್ಯರನ್ನೂ ಭಗವಂತನನ್ನೂ ಪುರಸ್ಕರಿ ಸಿಯೇ ಮಾಡತಕ್ಕದ್ದಾಗಿರುತ್ತದೆ. ಆದುದರಿಂದಲೇ ನಾವುಗಳು **"ಶ್ರೀಮಾನ್ವೇ ಙ್ಕಟಸಾಥಾರ್ಯಃ"** ಎಂದೂ **"ಶುಕ್ಲಾಂಬರಧರಂ ವಿಷ್ಣುಂ"** ಎಂದೂ ಸ್ತುತಿಸಿ ಕರ್ಮಾನುಷ್ಠಾನಗಳನ್ನೆಲ್ಲಾ ನಡೆಸುತ್ತೇವೆ. ಇದರಿಂದ ಸರ್ವ ವಿಘ್ನಗಳ ಪರಿಹಾರವು ಮತ್ತು ಶ್ರೀ ಮಹಾಚಾರ್ಯರು ಪುರುಷಕಾರದಲ್ಲೂ ಉಪಯುಕ್ತರು. ಹೀಗೆ **ಈತನ** ಕರ್ತೃತ್ವವು ಇಬ್ಬರಿಗೂ ಅಧೀನವಾಗಿ ಪರಾಧೀನವಾದುದು. ಇದನ್ನನುಸರಿಸಿಯೇ

**ನಂದ ದಿತ್ತನೇ. ಇವ್ವಾಚಾರ್ಯ ಪುರಸ್ಕಾರತ್ತಿಲ್ ಪೋಲೇ ಪ್ರಪತ್ಯಾದಿಗಳಿಲುಮ್ ಪರಾಧೀನಕರ್ತೃತ್ವಮ್ ದೋಷಮನ್ರು.**

ಸ್ವಾಮಿ ಯಾಮುನಮುನಿಗಳು ಆದಿಯಲ್ಲಿ ಒಂದನೆಯ ಮತ್ತು ಎರಡನೆಯ ಶ್ಲೋಕಗಳಾದ **"ನಮೋಚಿಂತ್ಯ"** ಎಂಬ **"ತಸ್ಮೈನಮೋ"** ಎಂಬಲ್ಲಿ ತಮ್ಮ ಆಚಾರ್ಯರನ್ನು ಸ್ತುತಿಸಿ, ಸ್ತೋತ್ರವು ಅವರ ಕೃಪೆಯಿಂದ ಪೂರೈಸಿದುದರಿಂದ ಅವರನ್ನು ನಿಗಮನದಲ್ಲೂ ಸ್ತುತಿಸಬೇಕೆಂಬ ಅಪೇಕ್ಷೆಯಿಂದ ಅಂತಹ ಮಹನೀಯರೂ ತಮಗೆ ಪುರುಷಕಾರಭೂತರಾದುದರಿಂದ ತಮ್ಮ ಆತ್ಮೋಜ್ಜೀವನದಲ್ಲಿ ಏನೊಂದೂ ಸಂದೇಹವಿಲ್ಲವೆಂಬ ಭಾವವನ್ನು ಶಿಕ್ಷಿಸುವದಕ್ಕಾಗಿ **"ನಾಥಮುನಿಂ ವಿಲೋಕ್ಯ ಪ್ರಸೀದ"** ಎಂದು ಹೇಳಿರಬಹುದು ಅಥವಾ ತಾವು ಈ ಸ್ತೋತ್ರದಲ್ಲಿ ಉಪಪಾದಿಸಿರುವ ಶರಣಾಗತಿಯೂ ಮತ್ತು ಈ ಸ್ತೋತ್ರರೂಪಕೈಂಕರ್ಯವೂ ತಮ್ಮ ಸದ್ಗುರುವಾದ ನಾಥಮುನಿ ಪುರಸ್ಸರವಾಗಿಯೇ ನಡೆಸಿದುದರಿಂದ, ಇತರರೂ ಇದೇ ಮಾರ್ಗವನ್ನೇ ಅವಲಂಬಿಸಿ ತಮ್ಮ ತಮ್ಮ ಸದಾಚಾರ್ಯರ ಮೂಲಕವೇ ನಡೆಸತಕ್ಕದ್ದೆಂಬುದನ್ನು ಶಿಕ್ಷಿಸುವದಕ್ಕಾಂದಾಗಲಿ ಹೇಳಬಹುದು ಅಥವಾ ತಮ್ಮ ಸ್ತೋತ್ರದಲ್ಲೇಯಾಗಲಿ ಅಥವಾ ಪ್ರಪದನಾನುಷ್ಠಾನದ ಉತ್ತರ ಕಾಲದಲ್ಲಿ ಏನಾದರೂ ಅಜ್ಞಾನ ಅಥವಾ ಅಪರಾಧ ಪ್ರಾಪ್ತಿರೂಪ ವೈಕಲ್ಯಉಂಟಾಗಿ ಅದರ ಪರಿಹಾರಕ್ಕೆಂದಾಗಲಿ ಭಾವಿಸಬಹುದು. ಅಥವಾ ತಮ್ಮ ಸರ್ವಾನುಷ್ಠಾನಗಳೆಲ್ಲಾ ಭಗವಂತನಿಗೆ ಹೇಗೆ ಪರಾಧೀನ ಕರ್ತೃತ್ವಉಳ್ಳದ್ದೋ, ಹಾಗೆ ಸದಾಚಾರ್ಯರಿಗೂ ಪರಾಧೀನ ಕರ್ತೃತ್ವಉಳ್ಳದೆಂದು ತಿಳಿಸುವದಕ್ಕಾಗಿ ಆಗಲಿ ಆಗಬಹುದು ಆದರೆ ಕೆಲವರು ಹೇಳುವಹಾಗೆ ತಾವು ಅನುಷ್ಠಿಸಿದ ಪ್ರಪತ್ತಿಗೆ ಅಹಂಕಾರ ಸ್ಪರ್ಶ ಉಂಟಾಯಿತೆಂದೂ ಅದರ ಪರಿಹಾರರೂಪವಾಗಿ ಆಚಾರ್ಯ ಪುರಸ್ಕಾರವೆಂಬ ಭಾವನೆಯು, ಸರ್ವಾತ್ಮನಾ ಅಲ್ಲವು, ಏಕೆಂದರೆ ಆ ಅಭಿಪ್ರಾಯವು ಶಾಸ್ತ್ರವಿರುದ್ಧವಾಗುವದರಿಂದ

**ಇವ್ವಾಚಾರ್ಯ ಪುರಸ್ಕಾರತ್ತಿಲ್ ಪೋಲೇ** - ಈ ಮೇಲೆ ಹೇಳಲ್ಪಟ್ಟ ಆಚಾರ್ಯ ಪುರಸ್ಕಾರವು, ಪರಾಧೀನ ಕರ್ತೃತ್ವವುಳ್ಳದ್ದಾಗಿ ಹೇಗೆ ದೋಷವಲ್ಲವೋ ಹಾಗೆ, **ಪ್ರಪತ್ತ್ಯಾದಿಗಳಿಲುಮ್** - ಪ್ರಪದನಾನುಷ್ಠಾನದಲ್ಲೂ, ಆದಿಪದದಿಂದ ಇನ್ನೊಂದು ಉಪಾಯವಾದ ಭಕ್ತಿಯೋಗದಲ್ಲೂ, **ಪರಾಧೀನಕರ್ತೃತ್ವಮ್** - ಭಗವಂತನಿಗೆ ಅಧೀನವಾಗಿ ತಾನು ನಡೆಸಿದ ಕರ್ತೃತ್ವವೂ, **ದೋಷಮನ್ರು** - ಕೆಲವರು ಅಹಂಕಾರಗರ್ಭವೆಂದು ಹೇಳುವ ದೋಷಯುಕ್ತವಾದುದಲ್ಲವು ಆಚಾರ್ಯನಿಗೆ ಅಧೀನವಾಗಿ ಮಾಡುವಕರ್ತೃತ್ವದಲ್ಲಿ ದೋಷವಿಲ್ಲವೆಂದು ಈ ಆಚಾರ್ಯ ಪುರಸ್ಕಾರವು ಮಾಡಲ್ಪಟ್ಟಿತು ಎಂದರೆ, ಭಗವಂತನಿಗೆ ಅಧೀನವಾಗಿ ನಡೆಸಿದ ಪ್ರಪದನವೂ ದೋಷವಲ್ಲವು ಎಂಬ ತಾತ್ಪರ್ಯವು.

## ಪರಾಧೀನಕರ್ತೃತ್ವೇ, ಸ್ವಾತಂತ್ರ್ಯಾಭಾವಾತ್ ನಿಷಿದ್ಧಕರ್ಮಣಾ ಲೇಪಪಕ್ಷನಿರಾಸಃ

**ಇಪ್ಪಡಿ ಪರಾಧೀನಕರ್ತೃತ್ವಮ್ ಪ್ರಾಮಾಣಿಕಮಾಗೈಯಾಲೇ ಆತ್ಮಾವುಕ್ಕು ಕರ್ತೃತ್ವಮಿಲ್ಲಾಮೈಯಾಲೇ ಸ್ವರೂಪಮ್ ತೆಳಿನ್ದವನೈನಿಷಿದ್ಧಕರ್ಮಙ್ಗಳಿಲೊನ್ರುಮ್ ಲೇಪಿಯಾದೆನ್ಗಿರಪಕ್ಷಮುಮ್ ನಿರಸ್ತಮ್.**

ಇವರ ಮೇಲೆ ಇನ್ನೊಂದು ಪೂರ್ವಪಕ್ಷವನ್ನು ತರಬಹುದು ಹೇಗೆಂದರೆ ಈತನಿಗೆ ಸ್ವತಃಕರ್ತೃತ್ವವಿಲ್ಲದೆ ಪರಾಧೀನ ಕರ್ತೃತ್ವವಿರುವದರಿಂದ, ಪಾಪಗಳು ಉಂಟಾದರ ಅವರಲ್ಲೂ ಕರ್ತೃತ್ವವಿಲ್ಲದುದರಿಂದ, ಉತ್ತರಾಘಗಳು ಒಂದು ವೇಳೆ ಪ್ರಾಪ್ತವಾದರೂ ದೋಷವಿಲ್ಲವೆಂದು ಹೇಳುತ್ತೇವೆ, ಹಾಗೆಯೇ ಶ್ರುತಿಯಲ್ಲೂ, **"ತಸ್ಮಾದ್ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯಬಾಲ್ಯೇನತಿಷ್ಠಾಸೇತ್"** ಎಂದು ಹೇಳಿರುತ್ತವೆ ಆದುದರಿಂದ ಉತ್ತರಾಘಗಳ ಲೇಪವಿಲ್ಲವೆನ್ನುತ್ತಾರೆ ಇದರಲ್ಲಿ ಅಬುದ್ಧಿ ಪೂರ್ವಕವಾದ ಉತ್ತರಾಘಕ್ಕೆ ಲೇಪವಿಲ್ಲವೆಂದು ಶ್ರೀಯತಿವರ್ಯರು **"ತದಧಿಗಮ ಉತ್ತರಪೂರ್ವಾಘಯೋಃ ಅಶ್ಲೇಷವಿನಾಶೌ ತದ್ವ್ಯಪದೇಶಾತ್"** ಎಂಬ ಸೂತ್ರದ (೪ ೧ ೧೩) ಭಾಷ್ಯದಲ್ಲಿ ಉತ್ತರಾಘದ ಅಶ್ಲೇಷವಚನವು ಅಬುದ್ಧಿ ಪೂರ್ವಕವಾದುದು ಎಂದು ಹೇಳಿರುವದರಿಂದ, ಬುದ್ಧಿಪೂರ್ವಕವಾದುದರ ಅಶ್ಲೇಷವಲ್ಲವೆಂದು ವ್ಯಕ್ತಪಡಿಸಿರುತ್ತಾರ ಈ ಮೇಲಿನ ಕೆಲವರ ಅಭಿಪ್ರಾಯವು ಶ್ರೀಯತಿವರ್ಯರ ಉಪದೇಶಕ್ಕೆ ವಿರುದ್ಧವು ಪ್ರಾಸಙ್ಗಿಕವಾಗಿ ಹೀಗೆ ಪ್ರಪನ್ನನ ಎಲ್ಲಾ ಉತ್ತರಾಘಗಳೂ ಲೇಪಿಸುವದಿಲ್ಲವೆಂಬ ವಾದವನ್ನು ನಿರಾಕರಿಸುತ್ತಾರೆ.—

## ಪರಾಧೀನಕರ್ತೃತ್ವಮಾತ್ರವಿರುವದರಿಂದ ನಿಷಿದ್ಧಕರ್ಮಗಳೂ ಲೇಪಿಸುವದಿಲ್ಲವೆಂಬ ಪಕ್ಷದನಿರಾಸವು

**ಇಪ್ಪಡಿ**-ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಪರಾಧೀನಕರ್ತೃತ್ವಮ್**-ಭಗವಂತನಿಗೂ ಆಚಾರ್ಯರಿಗೂ ಅಧೀನವಾದ ಕರ್ತೃತ್ವವು, **ಪ್ರಾಮಾಣಿಕಮಾಗೈಯಾಲೇ** - ಸತ್ಯವಾಗಿ ಸ್ಥಾಪಿತವಾದುದರಿಂದ, ಆತ್ಮಾವಿಗೆ, **ಕರ್ತೃತ್ವಮಿಲ್ಲಾಮೈಯಾಲೇ** - ಸ್ವತಂತ್ರ ಕರ್ತೃತ್ವವಿಲ್ಲದುದರಿಂದ, **ಸ್ವರೂಪಮ್ ತೆಳಿನ್ದವನೈ** - ತನ್ನ ಸ್ವರೂಪವನ್ನೂ ಭಗವಂತನ ಸ್ವರೂಪವನ್ನೂ ತಿಳಿದು ಶೇಷ ಶೇಷಿಭಾವವನು ತಿಳಿದ ಪ್ರಾಜ್ಞನಾದ ಪ್ರಪನ್ನನಿಗೆ, **ನಿಷಿದ್ಧಕರ್ಮಗಳೊನ್ರುಮ್** - ಅಪರಾಧರೂಪಗಳಾದ ಯಾವ ನಿಷಿದ್ಧಕರ್ಮಗಳಲ್ಲಿ ಒಂದೂ, **ಲೇಪಿಯಾದೆನ್ಗಿರಪಕ್ಷಮುಮ್ ನಿರಸ್ತಮ್** - ಲೇಪಿಸುವದಿಲ್ಲವೆಂದು ಹೇಳುವವಾದವೂ ಕೂಡ ನಿರಸನಮಾಡಲ್ಪ

**ಮುಮುಕ್ಷುವುಕ್ಕು ಚೊನ್ನಬಾಲ್ಯಂ ಬಾಲಕೃತ್ಯಙ್ಗಳಾನ ಕಾಮಚಾರಾದಿ ಗಳನ್ರು ; ಸ್ವಮಾಹಾತ್ಮ್ಯಾನಾವಿಷ್ಕಾರ ಮಾತ್ರಮೆನ್ರುಮಿಡಮ್ (೧)**

ಟ್ಟಿತು ಅದು ಬುದ್ಧಿ ಪೂರ್ವಕವಾಗಿದ್ದರೂ ಮುಮುಕ್ಷುವನ್ನು ಲೇಪಿಸುವದಿಲ್ಲವೆಂಬುದು ಪೂರ್ವಪಕ್ಷಾಭಿಪ್ರಾಯವು ಈ ಅಭಿಪ್ರಾಯವು ಹೇಗೆ ನಿರಸ್ತವು ಎಂದರೆ ಪ್ರಥಮಸಙ್ಕಲ್ಪದಲ್ಲಿ ಮಾತ್ರ ಜ್ಞಾನ ಚಿಕೀರ್ಷಾಪ್ರಯತ್ನರೂಪ ಸ್ವತಂತ್ರವಾದ ಕರ್ತೃತ್ವವೂ, ಅನಂತರ ಪರಾಧೀನ ಕರ್ತೃತ್ವವೂ ಇರುವದರಿಂದ ಕರ್ತೃತ್ವವಿಲ್ಲವು ಎಂಬ ವಾದವು ಅಪ್ರಾಮಾಣಿಕವು, ಪರಾಧೀನ ಕರ್ತೃತ್ವವು ಉಂಟೇ ಉಂಟು ಯಾವಾಗ ಪ್ರಸನ್ನನಾಗಿಯೂ ಸ್ವರೂಪವನ್ನು ತಿಳಿದ ಪ್ರಾಜ್ಞನಾದನೋ ಆಗ ಅವನಿಗೆ ಯುಕ್ತಾಯುಕ್ತತೆಯನ್ನು ತಿಳಿಯುವ ಶಕ್ತಿಯುಂಟಾಗಿ ನಿಷಿದ್ಧಕರ್ಮಗಳನ್ನು ತ್ಯಾಗಮಾಡಬೇಕೆಂಬುದು ತನ್ನ ಶಾಸ್ತ್ರಜನ್ಯಜ್ಞಾನ ವಿವೇಕಜನ್ಯಜ್ಞಾನಗಳಿಂದ ಉಂಟಾಗುತ್ತದೆ ಹೀಗೆ ತಿಳಿದೂ ನಿಷಿದ್ಧವನ್ನು ಆಚರಿಸಿದರೆ, ಅದು ಮಹಾಪರಾಧವಾಗುತ್ತದೆ ಅಂತಹ ಸಂದರ್ಭದಲ್ಲಿ ಪ್ರಾಯಶ್ಚಿತ್ತವು ಆವಶ್ಯಕವು ಇವೆಲ್ಲಾ ಹಿಂದೆಯೇ ಉಪಪಾದಿತವು ಆದರೆ ಇಲ್ಲಿ ಪ್ರಾಸಂಗಿಕವಾಗಿ ಹೇಳಬೇಕಾಗಿರುವದರಿಂದ ಅವುಗಳ ಅನುವಾದವೆಂದು ಭಾವಿಸತಕ್ಕದ್ದು ಅಪರಾಧ ಪರಿಹಾರಾಧಿಕಾರವನ್ನು ಪರಾಂಬರಿಸಿ, **"ಶಿಕ್ಷಯಾಸ್ಯನ ಘುರ್ಯತ್ಕ್ರೋಡೀಕರೋತಿಪ್ರಭುಃ"** ಎಂಬಲ್ಲಿ ಸುವ್ಯಕ್ತವು ಅದರ ಉಪಪಾದನೆಯಲ್ಲಿ ಉದಾಹರಿಸಿರುವ ಪ್ರಮಾಣಗಳನ್ನೂ ಕಟಾಕ್ಷಿಸಬಹುದು

ಆಗಲಿ, ಶ್ರುತಿಯೇ **"ತಸ್ಮಾದ್ಬ್ರಾಹ್ಮಣಃ ಬಾಲ್ಯೇನತಿಷ್ಠಾಸೇತ್"** ಬ್ರಹ್ಮಜ್ಞಾನವುಳ್ಳವನು ಬಾಲನಹಾಗೆ ಇದ್ದುಬಿಡಬಹುದು, ಬಾಲನು ಹೇಗೆ ವಿಹಿತನಿಷಿದ್ಧಕರ್ಮಗಳನ್ನು ಮಾಡುತ್ತಾ ಇರುತ್ತಾನೋ, ಹಾಗೆ ಇದ್ದುಬಿಡಬಹುದು ದೋಷವಿಲ್ಲವೆಂದು ಹೇಳಿದೆಯಲ್ಲಾ ಎಂದರೆ ಅದಕ್ಕೆ ಹಾಗೆ ಅರ್ಥವಲ್ಲವೆಂದು ಬ್ರಹ್ಮಸೂತ್ರದಲ್ಲೇ ಹೇಳಿರುವದರಿಂದ, ಅದರ ಶಾಸ್ತ್ರಾನುಮತಿಯಿರುವ ಅರ್ಥವನ್ನು ತಿಳಿಸುತ್ತಾರೆ **ಮುಮುಕ್ಷುವಿಕ್ಕುಚ್ಚೊನ್ನ** - ಮೋಕ್ಷಾರ್ಥಿಯಾದ ಪಂಡಿತನಿಗೆ ಹೇಳಲ್ಪಟ್ಟ **ಬಾಲ್ಯಮ್** - ಎಂದರೆ ಬಾಲಭಾವ ಅಥವಾ ಬಾಲನಕರ್ಮವು, **ಬಾಲಕೃತ್ಯಙ್ಗಳಾನ** - ಬಾಲನು ಮಾಡುವ **ಕಾಮಚಾರಾದಿಗಳನ್ನು** - ನೀವು ಹೇಳಿದಹಾಗೆ ಆ ಬಾಲನು ಮಾಡುವ ನಿಷಿದ್ಧವೇ ಮೊದಲಾದ ಇಷ್ಟಬಂದ ಪ್ರವೃತ್ತಿಗಳಲ್ಲವು ಹಾಗಾದರೆ ಅದರ ಅರ್ಥವೇನು ಎಂದರೆ ಹೇಳುತ್ತಾರೆ — **ಸ್ವಮಾಹಾತ್ಮ್ಯಾನಾವಿಷ್ಕಾರಮ್ ಮಾತ್ರಮ್** - ಮುಮುಕ್ಷುವಾದ ತನಗೆ ಮಹಾತ್ಮ್ಯೆಯುಂಟೆಂಬುದನ್ನು ಆರೋಪಿಸಿಕೊಳ್ಳದೆ, ಬಾಲನು ಹೇಗೆ ತನ್ನ ಮಾಹಾತ್ಮ್ಯೆಯನ್ನು ಪ್ರಕಟಿಕೊಳ್ಳದೇ ಇರುವನೋ ಹಾಗೆ ಇರತಕ್ಕದ್ದೆಂಬ ಮಾತ್ರವಲ್ಲೇ, **ಎನ್ರುಮಿಡಮ್** - ಎಂಬುದಕ್ಕೆ ಪ್ರಮಾಣ

**(೧)" ಅನಾವಿಷ್ಕುರ್ವನ್ನನ್ವಯಾತ್ " ಎಜ್ಞ್ಗರಸೂತ್ರತ್ತಿಲೇ ಸಮರ್ಥಿತಮ್.**

ವಾಗಿ, **"ಅನಾವಿಷ್ಕುರನ್ನನ್ವಯಾತ್"** ಎಜ್ಞರಸೂತ್ರತ್ತಿಲೇ - ಎಂಬುವ ಬ್ರಹ್ಮ ಸೂತ್ರದಲ್ಲಿ, **ಸಮರ್ಥಿತಮ್** - ಸಮರ್ಥಿಸಲ್ಪಟ್ಟಿರುತ್ತದೆ ಶ್ರೀನಿಗಮಾಂತ ದೇಶಿಕರವರು ಪ್ರಮಾಣವಿಲ್ಲದೆ ಯಾವುದನ್ನೂ ಸಿದ್ಧಾಂತಿಸಿ ಹೇಳುವದಿಲ್ಲವು, ಈ ಶ್ರುತಿಗೆ ಪೂರ್ವಪಕ್ಷದ ಅರ್ಥವಲ್ಲವು ಸಿದ್ಧಾಂತಾರ್ಥವು, ಬಾಲನು ಹೇಗೆ ತನ್ನ ಮಹಾತ್ಮ್ಯೆಯನ್ನು ತೋರಿಸಲಾರನೋ, ಹಾಗೆಯೇ ಈ ಬ್ರಹ್ಮವಿತ್ತಾಗುವ ಯೋಗಿಯೂ ಇರತಕ್ಕದ್ದೆಂದು ಹೇಳಲ್ಪಟ್ಟಿತು ಈ ಸೂತ್ರಾಭಿಪ್ರಾಯವೇನೆಂದರೆ, **ಬಾಲ್ಯೇನತಿಷ್ಠಾಸೇತ್** - ಎಂಬ ಶ್ರುತಿವಾಕ್ಯಾರ್ಥವು ಬಾಲನ ಹಾಗೆ ಕಾಮಚಾರ ನಾಗಿರಬಹುದು ಎಂದಲ್ಲವು, ತನ್ನ ಮಹಾತ್ಮ್ಯೆಯ ಆವಿಷ್ಕಾರವಿಲ್ಲದೆ ಯೋಗಿ ಯಾದವನು ಬಾಲನಹಾಗೆ ಇರತಕ್ಕದ್ದು ಎಂಬರ್ಥವು ಏತಕ್ಕೆಂದರೆ **ಅನ್ವಯಾತ್**- ಬ್ರಹ್ಮವಿದ್ಯೆಗೆ ವಿಷಯಸಂಬನ್ನತೆಯೇ ಮುಖ್ಯವಾಗಿ, ಅಹಂಕಾರವು ಕೂಡದಾಗಿ, ಪಾಂಡಿತ್ಯ ಪ್ರಯುಕ್ತವಾದ ಸ್ವಮಾಹಾತ್ಮ್ಯೆಯ ಪ್ರಕಾಶವು ಯೋಗನಿಷ್ಪತ್ತಿಗೆ ಕೂಡದಾದುದರಿಂದ, ಬ್ರಹ್ಮವಿದ್ಯೆಗೆ ಮೇಲೆ ಹೇಳಿದಹಾಗೆಯೇ ಅನ್ವಯಿಸತಕ್ಕದ್ದಾ ದುದರಿಂದ ಇದೂ ಅಲ್ಲದೆ **"ನಾವಿರತೋದುಶ್ಚರಿತಾತ್ ನಾಶಾನ್ತೋ ನಾಸ ಮಾಹಿತಃ। ನಾಶಾನ್ತಮಾನಸೋವಾಪಿ ಪ್ರಜ್ಞಾನೇನೈ ನಮಾಪ್ನುಯಾತ್"** ಎಂದು ಬ್ರಹ್ಮವಿದ್ಯೆಗೆ ಕಾಮಚಾರಾದಿಗಳು ಪ್ರತಿಬಂಧಕಗಳೆಂದೂ ಹೇಳಿರುವದ ರಿಂದಲೂ ಮೇಲೆ ಹೇಳಿದುದೇ ಸಿದ್ಧಾಂತಾರ್ಥವು, ಈ ಮೇಲಿನ ಶ್ರುತಿಯಾದ **"ತಸ್ಮಾದ್ಬ್ರಾಹ್ಮಣಃ ಪಾಂಡಿತ್ಯಂನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್, ಬಾಲ್ಯಂಚ ಪಾಂಡಿತ್ಯಂಚ ನಿರ್ವಿದ್ಯಾಥಮುನಿಃ"** ಎಂಬ ಬ್ರಹ್ಮವಿದ್ಯೆಯ ಮೂಲಕ ಯೋಗ ನಿಷ್ಪತ್ತಿಯನ್ನು ಹೊಂದಬೇಕೆಂದು ಹೇಳಲ್ಪಟ್ಟಿತು —ಅವು ಯಾವುವೆಂದರೆ **ಪಾಂಡಿತ್ಯ, ಬಾಲ್ಯ, ಮುನಿಯಭಾವವಾದ ಮೌನವು (೧) ಪಾಂಡಿತ್ಯ** - ವೆಂದರೆ ಉಪಾಸ್ಯನಾದ ಪರಮಪುರುಷನ ಸ್ವರೂಪರೂಪಗುಣ ವಿಭಾದಿಗಳ ಜ್ಞಾನವು, ಇದು ತನ್ನ ಸ್ವರೂಪಾದಿಗಳ ಜ್ಞಾನದಿಂದ ಕೂಡಿದುದು ; (೨) ಬಾಲ್ಯ ವೆಂದರೆ ಮೇಲೆ ಹೇಳಿದಹಾಗೆ ಮುಮುಕ್ಷುವಾದ ತನ್ನ ಮಹಾತ್ಮ್ಯೆಯನ್ನು ಪ್ರಕಟಿಸದೇ ಇರೋಣವು , ಅಹಂಕಾರವು ಕೂಡದು , (೩) ಮೌನವೆಂದರೆ ಪರಮ ಪುರುಷನ ದಿವ್ಯಮಙ್ಗಳ ವಿಗ್ರಹದ ಚಿನ್ತನವು , ಇದೇ ಉಪಾಸನವು ಆದುದರಿಂದ ಸದಾಚಾರ್ಯರ ಮೂಲಕ ವೇದಾನ್ತಕಾಲಕ್ಷೇಪವನ್ನು ಮಾಡಿ, ಉಪದಿಷ್ಟಾರ್ಥ ಗಳನ್ನು ಮನನ ಮಾಡಿ ಪರಮಪುರುಷನ ಸ್ವರೂಪರೂಪಾದಿಗಳ ಯಥಾರ್ಥಜ್ಞಾನ ಮೂಲಕ ಪಾಂಡಿತ್ಯವನ್ನು ಸಂಪಾದಿಸಿಕೊಂಡು, ಅದರಿಂದುಂಟಾದ ಮಹಾತ್ಮ್ಯೆ

(೧) ಬ್ರ ಸೂ ೩ ೪ ೪೯

ಯಲ್ಲಿ ಅಹಂಭಾವವನ್ನು ನೀಗಿ ಪರಮಪುರುಷನನ್ನು ಧ್ಯಾನಿಸತಕ್ಕದ್ದು ಇದು ಭಕ್ತಿಯೋಗದಲ್ಲಿ ಉಪಾಸನರೂಪದಲ್ಲಿ ನಡೆಸತಕ್ಕದ್ದು ಪ್ರಪತ್ತಿಮಾರ್ಗದಲ್ಲಿ ಪರಮಾತ್ಮನನ್ನು ಧ್ಯಾನಿಸತಕ್ಕದ್ದು ಮಿಕ್ಕಿದ್ದೆಲ್ಲವೂ ಎರಡಕ್ಕೂ ಸಮವೇ

ಮುಂದೆ ಪೂರ್ವಪಕ್ಷಿಯು ಗೀತೆಯ ೧೮ ನೆಯ ಅಧ್ಯಾಯದ **"ಅನಿಷ್ಟ ಮಿಷ್ಟಂ ಮಿಶ್ರಂಚ"** ಎಂಬ ಮತ್ತು **"ಯಸ್ಯನಾಹಂಕೃತೋಭಾವಃ"** ಎಂಬೆರಡು ಶ್ಲೋಕಗಳಲ್ಲೂ ಬುದ್ಧಿ ಪೂರ್ವಕವಾಗಿ ಮಾಡಿದರೂ ಅದು ಲೇಪಿಸುವದಿಲ್ಲವೆಂದು ಹೇಳಿದೆಯಲ್ಲಾ ಎಂದರೆ ಅದು ಬುದ್ಧಿ ಪೂರ್ವಕವಾಗಿ ಕುರಿತದ್ದಲ್ಲವೆಂದೂ ಅಬುದ್ಧಿಪೂರ್ವಕವಾಗಿ ಮಾಡಲ್ಪಟ್ಟವೆಂದೂ ಸಮಾಧಾನವನ್ನು ಹೇಳುತ್ತಾರೆ ಆ ಶ್ಲೋಕಗಳು ಯಾವುದಂದರ—

**ಅನಿಷ್ಟ ಮಿಷ್ಟಂ ಮಿಶ್ರಂಚ ತ್ರಿವಿಧಂಕರ್ಮಣಃಫಲಮ್**
**ಭವತ್ಯತ್ಯಾಗಿನಾಂಪ್ರೇತ್ಯ ನತುಸನ್ಯಾಸಿನಾಂಕ್ವಚಿತ್ ||**

ಇದಕ್ಕೆ ಪೂರ್ವಪಕ್ಷಿಗಳು ಹೀಗೆ ಅರ್ಥಮಾಡಿದರು ಎಂದರೆ ಅತ್ಯಾಗಿನಾಂ— ಫಲಾಕಾಂಕ್ಷಿಗಳಾದ ಸಂಸಾರಿಗಳಿಗೆ ಅವರು ಮಾಡುವ ಕರ್ಮಗಳಿಗೆ ಮೂರು ವಿಧವಾದ ಫಲಗಳುಂಟು— (೧) ನರಕಾದಿಗಳನ್ನುಂಟು ಮಾಡುವ ಅನಿಷ್ಟಫಲವು (೨) ಐಹಿಕೈಶ್ವರ್ಯ ಸುಖ ಮತ್ತು ಸ್ವರ್ಗಾದ್ಯುಪಭೋಗಗಳಾದ ಇಷ್ಟವಾದ ಫಲವು (೩) ಪುತ್ರಕ್ಷೇತ್ರ ಮೊದಲಾದವುಗಳನ್ನುಂಟುಮಾಡುವ ಸುಖ ದುಃಖ ಮಿಶ್ರಫಲವು ಆದರೆ ಮೋಕ್ಷಾರ್ಥಿಗಳಿಗಾದರೆ ಇಂತಹ ಮೂರುವಿಧ ಕರ್ಮಗಳನ್ನು ಮಾಡಿದರೂ ಅವರು ಕರ್ಮ ಮಮತೆ ಫಲಗಳನ್ನು ತ್ಯಾಗಮಾಡಿ ನಡಸುವದರಿಂದ ಅವುಗಳಿಗೆ ಫಲ ಉಂಟಾಗುವದಿಲ್ಲವು ಇಲ್ಲಿ ಅನಿಷ್ಟಫಲ ಉಂಟಾಗುವ ನಿಷಿದ್ಧಕರ್ಮಗಳನ್ನು ಮಾಡಿದರೂ ಅವು ಲೇಪಿಸುವದಿಲ್ಲವು ಎಂದು ಹೇಳುವದು ಅಪಸಿದ್ಧಾಂತವು ಏಕೆಂದರ ಒಂದು ವೇಳೆ ಅಬುದ್ಧಿ ಪೂರ್ವಕವಾಗಿ ನಡೆದರೆ ಲೇಪಿಸುವದಿಲ್ಲವೆಂದಾದರೂ ಒಪ್ಪಬಹುದು ಬುದ್ಧಿಪೂರ್ವಕವಾಗಿ ನಡೆದರೂ ಅಂತಹ ಉತ್ತರಾಘವೂ ಲೇಪಿಸುವದಿಲ್ಲವೆಂಬುದು ಅಪಸಿದ್ಧಾಂತವೆಂದೂ ಅದಕ್ಕೆ ಪ್ರಾಯಶ್ಚಿತ್ತವು ಆವಶ್ಯಕವೆಂದೂ ಹೇಳುವದರ ಉದ್ದಿಶ್ಯವಾಗಿ, ಈ ಶ್ಲೋಕದಲ್ಲಿ ಹೇಳಿರುವದು ಅಬುದ್ಧಿಪೂರ್ವಕ ನಡೆದ ಕರ್ಮವಿಷಯವೆಂದು ಹೇಳುತ್ತಾರೆ ಹಾಗೆಯೇ **"ಯಸ್ಯನಾಹಂಕೃತೋಭಾವಃ"** ಎಂಬ ಶ್ಲೋಕವು ಯಾವುದೆಂದರೆ—

**ಯಸ್ಯನಾಹಂಕೃತೋಭಾವೋ ಬುದ್ಧಿರ್ಯಸ್ಯನಲಿಪ್ಯತೇ |**
**ಹತ್ವಾಪಿಸ ಇಮಾಲ್ಲೋಕಾನ್ನ ಹನ್ತಿನನಿಬಧ್ಯತೇ || ೧೭ ||**

ಹಿಂದಿನ ಶ್ಲೋಕದಲ್ಲಿ ಪರಮಪುರುಷಾಯತ್ತವಾಗಿಯೇ ಕರ್ಮಗಳೆಲ್ಲಾ ನಡೆಯುವದರಿಂದ, ಯಾವನು ತಾನೇ ಸ್ವತಂತ್ರಿಸಿ ಮಾಡಿದೆನೆಂದ ತಿಳಿಯುವನೋ

**(೧) "ಅನಿಷ್ಟಂ ಮಿಷ್ಟಂ ಮಿಶ್ರಂಚ" "ಯಸ್ಯನಾಹಂಕೃತೋಭಾವಃ" ಇತ್ಯಾದಿವಚನಂಗಳ್ ಬುದ್ಧಿಪೂರ್ವೋತ್ತರಾಘ ವಿಷಯಙ್ಗಳಮೆನ್ರುಮಿಡಂ**

ಆತನನ್ನು ದುರ್ಮತಿ ಎಂದು ನಿಂದಿಸಿ, ಈ ಶ್ಲೋಕದಲ್ಲಿ ಯಾವನು ಸುಕೃತಿ ಎಂಬುದನ್ನು ಹೇಳುತ್ತಾರೆ ಯಾವನಿಗೆ ಅಹಂಭಾವವಿಲ್ಲದೆ ಎಂದರೆ ತನಗೆ ಪರಾಧೀನತ್ವವಾದುದರಿಂದ ತಾನು ಈ ಕರ್ಮವನ್ನು ಮಾಡಲಿಲ್ಲವೆಂಬ ಅಭಿಪ್ರಾಯವನ್ನುಳ್ಳವನೋ ಯಾವನಿಗೆ ಈ ಕರ್ಮವನ್ನು ತಾನು ಮಾಡಲಿಲ್ಲವಾದುದರಿಂದ ಅದರ ಫಲವೂ ತನಗೆ ಸಂಬಂಧಿಸುವದಿಲ್ಲವೆಂಬ ಬುದ್ಧಿಯುಳ್ಳವನೋ, ಅವನು ಯುದ್ಧದಲ್ಲಿ ದುರ್ಯೋಧನಾದಿಗಳನ್ನು ಮಾತ್ರವಲ್ಲದ ಸರ್ವಲೋಕವನ್ನು ಹೊಡೆದರೂ, ಅವನು ಹೊಡೆದವನೂ ಆಗುವದಿಲ್ಲವು, ಅದರ ಫಲದಿಂದ ಅವನಿಗೂ ಬಂಧನವೂ ಇಲ್ಲವು ಎಂಬುದು ಅರ್ಥವು ಇದರಿಂದ ಪೂರ್ವಪಕ್ಷ್ಯಭಿಪ್ರಾಯವೇನೆಂದರೆ, ಹೀಗೆ ಜ್ಞಾನಿಯಾಗಿ ಪರಾಧೀನ ಕರ್ತೃತ್ವನೆಂದು ಚನ್ನಾಗಿ ತಿಳಿದವನು ಯಾವ ಹನನವೇ ಮೊದಲಾದ ಅಧರ್ಮಗಳನ್ನು ಮಾಡಿದರೂ ಅವುಗಳ ಫಲವು ಆತನನ್ನು ಬಂಧಿಸುವದಿಲ್ಲವು ಎಂಬುದು, ಇದು ಅಶಾಸ್ತ್ರೀಯಾರ್ಥವು ಏಕೆಂದರೆ ಬುದ್ಧಿಪೂರ್ವಕವಾಗಿ ಅಧರ ಪ್ರವರ್ತನೆಯು ದಂಡಾರ್ಹವು, ಅದಕ್ಕೆ ಶಿಕ್ಷೆಯುಂಟು, ಆದುದರಿಂದ ಅದಕ್ಕಾಗಿ ಪ್ರಾಯಶ್ಚಿತ್ತವನ್ನೂ ಅನುಷ್ಠಿಸತಕ್ಕದ್ದು ಹಾಗಾದರೆ ಇಲ್ಲಿ ಹೇಳಿರುವದರ ಅಭಿಪ್ರಾಯವೇನೆಂದರೆ ಪರಾಯತ್ತ ಕರ್ತೃತ್ವ ಈತನಿಗೆ ಇರುವದರಿಂದ, ತನಗೆ ವಿಹಿತಗಳಾದ ಕರ್ಮಗಳಲ್ಲಿ ತಾನು ಮಾಡಿದೆನೆಂಬ ಅಹಂಭಾವವನ್ನು ತೊರೆದು, ಕರ್ತೃತ್ವ ಮಮತಾ ಫಲಗಳಲ್ಲಿ ಸಂಬಂಧವಿಲ್ಲದೆ ತ್ಯಾಗ ಹೇಳುವದರಿಂದ, ಅದು ಬಂಧಕವಾಗುವದಿಲ್ಲವೆಂದು ಸಾಮಾನ್ಯವಾಗಿ ಎಲ್ಲರಿಗೂ ಅನ್ವಯಿಸುವ ಹಾಗೆ ಪೂರ್ವಾರ್ಧದಲ್ಲಿ ಹೇಳಲ್ಪಟ್ಟಿತು ಉತ್ತರಾರ್ಧದಲ್ಲ ಅದನ್ನು ಅರ್ಜುನನಿಗೆ ಅನ್ವಯಿಸುತ್ತಾರೆ ಯುದ್ಧಮಾಡುವದು ಅಧರ್ಮವೆಂದು ಅರ್ಜುನನು ಮೊದಲೇ ಹೇಳಿದ್ದನು ಧರ್ಮಯುದ್ಧದಲ್ಲಿ ಪ್ರವೃತ್ತಿಯೂ, ಅಧರ್ಮನಿರಸನಕ್ಕಾಗಿ ಕ್ಷತ್ರಿಯನಿಗೆ ವಿಹಿತಕರ್ಮವು ಒಂದು ವೇಳೆ ಅಧರ್ಮ ನಿರ್ಮೂಲಕ್ಕಾಗಿ, ಈ ದುರ್ಯೋಧನಾದಿಗಳ ಮಾತು ಹಾಗಿರಲಿ, ಒಂದು ವೇಳೆ ಲೋಕವನ್ನೆಲ್ಲಾ ನಾಶಮಾಡಬೇಕಾಗಿ ಒಂದರೂ ನೀನು ವಿಹಿತಕರವನ್ನು ಪರಾಯತ್ತವಾಗಿ ನಡೆಸುವದರಿಂದ ಅದು ನಿನಗೆ ಬಂಧಕವಾಗುವದಿಲ್ಲವೆಂಬುದು ಸಿದ್ಧಾನ್ತಾರ್ಥವು ಸರಿಯಾಗಿ ಈ ಶ್ಲೋಕಗಳೆರಡಕ್ಕೂ ಅರ್ಥಮಾಡಿಕ್ಕೊಳ್ಳದೆ ಅಪಾರ್ಥವನ್ನು ಮಾಡಿಕೊಳ್ಳುವವರ ಅಭಿಪ್ರಾಯವನ್ನು ಮುಂದಿನ **"ಅನಿಷ್ಟಮಿಷ್ಟಂ"** ಎಂಬ ವಾಕ್ಯದಮೂಲಕ ನಿರಾಕರಿಸುತ್ತಾರೆ— **"ಅನಿಷ್ಟ ಮಿಷ್ಟಂ ಮಿಶ್ರಂಚ"** ಎಂದೂ **"ಯಸ್ಯನಾಹಂಕೃತೋಭಾವಃ"** ಎಂದೂ, ಇತ್ಯಾದಿವಚ

(೧) ಗೀ ೧೮ ೧೭

**ಬಹುಶಾಸ್ತ್ರವಿರೋಧಮ್ ವಾರಾನ್ಮೈಕ್ಕಾಹ ಭಾಷ್ಯಾದಿಗಳಿಲೇ ಸಮರ್ಥಿಕ್ಕಪಟ್ಟದು.**

**ನಙ್ಗಳ್** - ಇವೇ ಮೊದಲಾದ ವಾಕ್ಯಗಳು, **ಬುದ್ಧಿಪೂರ್ವೋತ್ತರಾಘವಿಷಯಙ್ಗಳೆನ್ರುಮಿಡಮ್** - ಒಂದು ವೇಳೆ ಅವುಗಳನ್ನು ಪ್ರಪನ್ನನಿಗೂ ಅನ್ವಯಿಸುವ ಸಂದರ್ಭದಲ್ಲಿ, ಬುದ್ಧಿಪೂರ್ವಕವಾಗಿ ಪ್ರಪದನದ ಉತ್ತರಕಾಲದ ಪಾಪಗಳೆಂದು ಭಾವಿಸತಕ್ಕದ್ದೆನ್ನುವ ಸಂದರ್ಭವೆಂದರೆ, **ಬಹುಶಾಸ್ತ್ರವಿರೋಧಮ್ ವಾರಾನ್ಮೈಕ್ಕಾಕ** - ಅನೇಕ ಶಾಸ್ತ್ರಗಳಿಗೆ ವಿರೋಧ ಉಂಟಾಗುತ್ತದೆ ಅದು ಬಾರದೇ ಇರುವದಕ್ಕಾಗಿ, **ಭಾಷ್ಯಾದಿಗಳಿಲೇ** - ಶ್ರೀಭಾಷ್ಯ ಮೊದಲಾವುಗಳಲ್ಲಿ, **ಸಮರ್ಥಿಕ್ಕಪ್ಪಟ್ಟದು** – ಸಮರ್ಥನೆಮಾಡಲ್ಪಟ್ಟಿತು **ಯಸ್ಯನಾಹಂಕೃತೋಭಾವಃ** ಎಂಬ ಶ್ಲೋಕದ ಉತ್ತರಾರ್ಧದಲ್ಲಿ ಹೇಳಿರುವ **ಹತ್ವಾಪಿಸನಿಬಧ್ಯತೇ, ಎನ್ರುದುವುಮ್** – ಎಂದು ಹೇಳಿರುವದೂ, **ಧರ್ಮಯುದ್ಧಾದಿವಿಷಯಮ್** - ಅಧರ್ಮಿಗಳಾದ ಲೋಕಕಂಟಕರನ್ನು ಕೊಲ್ಲುವದು ಕ್ಷತ್ರಿಯನಿಗೆ ಧರ್ಮವಾದುದರಿಂದ, ಧರ್ಮಯುದ್ಧವೇ ಮೊದಲಾದವುಗಳ ವಿಷಯವು ಅರ್ಜುನನ ವರ್ಣಾಶ್ರಮಧರ್ಮವಾಗಿ ಅದರಲ್ಲಿ ಆವಶ್ಯಕವಾಗಿ ಮಾಡತಕ್ಕ ಇತಿ ಕರ್ತವ್ಯತೆಯುಂಟೆಂಬ ಭಾವವು ಆದುದರಿಂದ ಇಲ್ಲಿ ಹನನವು ಅಪರಾಧವಲ್ಲವು, ಶ್ರೀಯೋಗನವಾದುದು ಹಾಗೆಯೇ ಧರ್ಮಜ್ಞನಾದ ಆಂಜನೇಯನಿಗೂ ರಾಕ್ಷಸ ಹನನವು ಅಪರಾಧವಾಗುವದಿಲ್ಲವು, ಆದುದರಿಂದ ಇವೆಲ್ಲಾ ಅಪರಾಧಕೋಟಿಯಲ್ಲಿ ಸೇರಲೇ ಇಲ್ಲವೆಂಬ ತಾತ್ಪರ್ಯವು, ಆತತಾಯಿಗಳನ್ನು ತಾನಾಗಿಯೇ ಕೊಲ್ಲಬೇಕು ಇಂತಾದ್ದನ್ನು ಅರ್ಜುನನು ಸರಿಯಾದ ಜ್ಞಾನವಿಲ್ಲದೆ ಅಧರ್ಮವೆಂದು ಭಾವಿಸೋಣವೇ ಧರ್ಮವಲ್ಲವು ಧರ್ಮವೇ ಎಂದು ಹಾಗೆ ಮಾಡದಿರುವದೇ ಇನ್ನು ಅಧರ್ಮವೆಂದೂ ಉಪದೇಶಿಸಬೇಕಾಗಿ ಬಂತು ಎಂಬುದು ತಾತ್ಪರ್ಯವು

ಮೇಲಿನ ಶ್ಲೋಕದಲ್ಲಿ ಅಬುದ್ಧಿ ಪೂರ್ವಕವೆಂದು ಅರ್ಥಮಾಡದೆ, ಬುದ್ಧಿಪೂರ್ವಕವಾಗಿಯೂ ಮೋಕ್ಷಾರ್ಥಿಯು ಅನಿಷ್ಟಾದಿ ಫಲವನ್ನು ಕೊಡುವ ಕರ್ಮವನ್ನು ಮಾಡಬಹುದೆಂದು ಅಭಿಪ್ರಾಯಪಟ್ಟರೆ, ಬಹು ಶಾಸ್ತ್ರವಿರೋಧ ಉಂಟಾಗುತ್ತದೆಂದು ಹೇಳಿರುತ್ತಾರೆ ಹೇಗೆಂದರೆ ಪ್ರಥಮತಃ ಬ್ರಹ್ಮಸೂತ್ರವಾದ **"ತದಧಿಗಮ ಉತ್ತರಪೂರ್ವಾಘಯೋರಶ್ಲೇಷ ವಿನಾಶೌತದ್ವ್ಯಪದೇಶಾತ್"** ವೆಂಬುದಕ್ಕೂ ಅದರ ಭಾಷ್ಯದಲ್ಲಿ ಬರೆದಿರುವ ಶ್ರೀ ಯತಿವರ್ಯರ **"ತದಿದಂ ಅಶ್ಲೇಷವಚನಂ ಪ್ರಾಮಾದಿಕ ವಿಷಯಂ ಮನ್ತವ್ಯಮ್"** ಎಂಬ ದಿವ್ಯ ಸೂಕ್ತಿಗೂ ವಿರೋಧವು ಮತ್ತು ಅಬುದ್ಧಿ ಪೂರ್ವಾಘಗಳಿಗೂ ವಿಧಿಸಿರುವ ಅನೇಕ ಪ್ರಾಯಶ್ಚಿತ್ತ ಶಾಸ್ತ್ರಗಳಿಗೂ ವಿರೋಧವಾಗುತ್ತದೆಂಬ ಭಾವವು

**ಕಾ॥ ಉಪಭುಕ್ತೌಷಧನ್ಯಾಯಾದುತ್ತರಾಪಥ್ಯಮರ್ದನಮ್ ।**
**ಅನನ್ಯಪರ ನಿರ್ಬಾಧ ಶ್ರುತಿ ಸ್ಮೃತಿಶತೈರ್ಹತಮ್ ॥ ॥೧೩೯॥**

ಬುದ್ಧಿಪೂರ್ವಕನಾದ ಉತ್ತರಾಘಗಳೂ ಪ್ರಪತ್ತಿಯ ಮಹಾತ್ಮ್ಯೆಯಿಂದ ಲೇಪಿಸುವದಿಲ್ಲವೆಂಬುದನ್ನು ಹಿಂದೆ ಅಪರಾಧ ಪರಿಹಾರಾಧಿಕಾರದಲ್ಲೇ ಖಂಡಿಸಿದ್ದರು ಅಂತಹ ಅಪರಾಧಗಳನ್ನು ಪ್ರಜ್ಞಾವಂತನಾದ ಪ್ರಪನ್ನನು ಮಾಡುವದೇ ಇಲ್ಲವೆಂದೂ ಒಂದು ವೇಳೆ ಅಚಾತುರ್ಯದಿಂದ ನಡೆದುಹೋದರೆ ಅದಕ್ಕಾಗಿ ಆತನಿಗೆ ಅಲ್ಪದಂಡನೆಯನ್ನು ಕೊಟ್ಟು ರಕ್ಷಿಸುವನೆಂದೂ, ಅಬುದ್ಧಿಪೂರ್ವಕಪರಾಧಕ್ಕಾಗಿ ಪ್ರಾಯಶ್ಚಿತ್ತರೂಪವಲ್ಲಿ ಪುನಃ ಪ್ರಪದನವನ್ನು ಅನುಷ್ಠಿಸಿದರೆ, ಆಗ ಆತನ ಅಪರಾಧವನ್ನು ಕ್ಷಮಿಸಿ ಕಾಪಾಡುವನೆಂದು ಹೇಳಿದ್ದರು ಈಗ ಪ್ರಾಸಂಗಿಕವಾಗಿ ಆ ಅಭಿಪ್ರಾಯಗಳನ್ನೇ ಸಮರ್ಥನೆಮಾಡಿ ಒಂದು ಕಾರಿಕೆಯ ಮೂಲಕ ಪೂರ್ವಪಕ್ಷವನ್ನುಪಪಾದಿಸಿ ನಿರಾಕರಿಸುತ್ತಾರೆ ಹೇಗೆಂದರೆ ಪೂರ್ವದಲ್ಲಿ ಸೇವನೆಮಾಡಿದ ಒಳ್ಳೇ ಔಷಧಿಯ ಮಹಾತ್ಮ್ಯೆಗೆ, ಅನಂತರ ಮಾಡುವ ಅಪಥ್ಯಗಳನ್ನು ಹೋಗಲಾಡಿಸುವ ಶಕ್ತಿಯು ಹೇಗಿದೆಯೋ, ಅದೇ ನ್ಯಾಯದ ಪ್ರಕಾರ, ಪೂರ್ವದಲ್ಲಿ ಅನುಷ್ಠಿಸಿದ ಪ್ರಪದನವೂ ಉತ್ತರಕಾಲದಲ್ಲಿ ಮಾಡಿದ ಪಾಪಗಳನ್ನೂ ಪರಿಹರಿಸುತ್ತದೆಂದು ಏಕೆ ಒಪ್ಪಕೂಡದು ಎಂಬುದು ಆಕ್ಷೇಪವು ಇದನ್ನು ಒಂದುಕಾರಿಕೆಯ ಮೂಲಕ ಉಪಪಾದಿಸಿ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ ಸರಿಯಾದ ಅನೇಕ ಪ್ರಮಾಣಗಳಿಂದಲೇ ಬುದ್ಧಿಪೂರ್ವೋತ್ತರರಾಘಗಳು ಹಾಗೆ ಲೇಪಿಸದೆ ಇರುವದಿಲ್ಲವೆಂಬುದು ಸಿದ್ಧವಾದರ ಆ ಸಂದರ್ಭದಲ್ಲಿ ಈ ನ್ಯಾಯವಾದದ ಉಪಯೋಗವೇ ಇಲ್ಲವೆನ್ನುತ್ತಾರೆ —**ಉಪಭುಕ್ತೌಷಧನ್ಯಾಯಾತ್** - ಸೇವಿಸಲ್ಪಟ್ಟ ಸಿದ್ಧೌಷಧಿಯ ನ್ಯಾಯದಿಂದ, **ಉತ್ತರಾಪಥ್ಯಮರ್ದನಮ್** - ಸೇವಿಸಿದ ಉತ್ತರಕಾಲದಲ್ಲಿ ಮಾಡುವ ಅಪಥ್ಯವು ಹೇಗೆ ತೊಲಗುತ್ತದೋ, ಹಾಗೆಯೇ ಪ್ರಪದನವೂ ಕೂಡ, ಬುದ್ಧಿಪೂರ್ವಕಗಳಾದ ಅಪರಾಧಗಳ ನಿರ್ಲೇಪ ಉಂಟಾಗುತ್ತದೆ ಎಂಬುದು. **ಅನನ್ಯಪರನಿರ್ಬಾಧಶ್ರುತಿ ಸ್ಮೃತಿಶತೈಃ** - ಬೇರೆಯನ್ನು ಕುರಿತದ್ದಲ್ಲದೆ ಪ್ರಪನ್ನನಾದವನನ್ನು ಸ್ವತಃ ಕುರಿತದ್ದಾಗಿ, ವಿರೋಧವು ಸ್ವಲ್ಪವೂ ಇಲ್ಲದ ಅನೇಕ ಶ್ರುತಿಸ್ಮೃತಿಗಳಿಂದ, **ಹತಮ್** - ಆ ಅಭಿಪ್ರಾಯವು ನಿರಸನಮಾಡಲ್ಪಟ್ಟಿರುತ್ತದೆ ಸಿದ್ಧೌಷಧಿಯ ಸೇವನೆಯು ಉತ್ತರಕಾಲದ ಅಪಥ್ಯಪರಿಹಾರವನ್ನು ಕಂಡಿರುವೆವು. ಈ ನ್ಯಾಯದ ಪ್ರಕಾರ ಭರನ್ಯಾಸವೂ ಉತ್ತರ ಕಾಲೀನವಾದ ಮಹಾಪರಾಧಗಳನ್ನು ಹೋಗಲಾಡಿಸುತ್ತವೆ ಎಂಬುದು ನ್ಯಾಯವು **"ನಹಿ ವಚನ ವಿರೋಧೇನ್ಯಾಯಃ ಪ್ರವರ್ತತೇ"** ಈ ಮೇಲಿನ ಅಭಿಪ್ರಾಯಕ್ಕೆ ವಿರೋಧವಾಗಿ ಸಾಕ್ಷಾತ್ ಪ್ರಮಾಣಗಳೇ ಇದ್ದರೆ, ಆಗ ಈ ಸಿದ್ಧೌಷಧಿ ನ್ಯಾಯವು ಏನು ಪ್ರಯೋಜನಕ್ಕೆ ಬಂದೀತು

ಬುದ್ಧಿ ಪೂರ್ವೋತ್ತರಾಘಗಳು ಪೂರ್ವದಲ್ಲಿ ಮಾಡಿದ ಪ್ರಪದನದಿಂದಲೇ ಹೋಗುವ ದಿಲ್ಲವೆಂದೂ, ಅದಕ್ಕೆ ಪ್ರಾಯಶ್ಚಿತ್ತಗಳೂ ಆವಶ್ಯಕವೆಂದೂ ಅನೇಕ ಪ್ರಮಾಣ ಗಳಿದ್ದರೆ ಆಗ ಈ ನ್ಯಾಯವು ನಿಷ್ಪ್ರಯೋಜನವಾದುದು ಎಂಬ ಭಾವವು. **ಶ್ರುತಿ ಪ್ರಮಾಣಗಳು** - ಯಾವುವು ? ಎಂದರೆ— **"ಯಾನ್ಯನವದ್ಯಾನಿ ತಾನಿ ಸೇವಿತ ವ್ಯಾನಿ । ನೋಇತರಾಣಿ । ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿತ್ವಯೋಪಾಸ್ಯಾನಿ ॥ "ಸಾಧುಕಾರೀಸಾಧುರ್ಭವತಿ, ಪಾಪಕಾರೀಪಾಪೋಭವತಿ" ಸ್ಮೃತಿಪ್ರಮಾಣಗಳು—"ಮನೀಷೀವೈದಿಕಾಚಾರಂ ಮನಸಾಪಿ ನಲಂಘಯೇತ್ । "ಏವಂ ವಿಲಂಘಯನ್ಮರ್ತ್ಯೋ ಮರ್ಯಾದಾಂ ವೇದನಿರ್ಮಿತಾಮ್" ಪ್ರಿಯೋಹಿನಪ್ರಿಯೋಽಸೌಮೇ ಮದಾಜ್ಞಾ ವ್ಯತಿವರ್ತನಾತ್" "ಶ್ರುತಿಸ್ಸ್ಮೃತಿರ್ಮಮೈವಾಜ್ಞಾಯಸ್ತಾಮುಲ್ಲಂಘ್ಯ ವರ್ತತೇ । ಆಜ್ಞಾಚ್ಛೇದೀ ಮಮದ್ರೋಹೀ ಮದ್ಭಕ್ತೋಪಿನವೈಷ್ಣವಃ"** ಪ್ರಪನ್ನನ ವಿಷಯದಲ್ಲೀ ಶ್ರೀಕೃಷ್ಣಭಗವಾನರವರು ಹೇಳಿರುತ್ತಾರೇನಂದರೆ —**"ಯಶ್ಶಾಸ್ತ್ರವಿಧಿಮುತ್ಸೃಜ್ಯ ವರ್ತತೇಕಾಮಕಾರತಃ । ನಸಸಿದ್ಧಿಮವಾಪ್ನೋತಿನಸುಖಂ ನಪರಾಂಗತಿಮ್ "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇಕಾರ್ಯಕಾರ್ಯವ್ಯವಸ್ಥಿತೌ"** (ಗೀ ೧೬ ೨೪) **"ಜಹಿಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್"**(ಗೀ ೪ ೪೩) **"ಅಪಾಯಸಂಪ್ಲವೇಸದ್ಯಃ ಪ್ರಾಯಶ್ಚಿತ್ತಂ ಸಮಾಚರೇತ್ । ಪ್ರಾಯಶ್ಚಿತ್ತಿರಿಯಂ ಸಾತ್ರಯತ್ಪುನ ಶ್ಶರಣಂವ್ರಜೇತ್" "ಅಹೋಬತಮಹತ್ಕಷ್ಟಂ ವಿಪರೀತ ಮಿದಂಜಗತ್ । ಯೇನಾಪತ್ರಪತೇ ಸಾಧುರಸಾಧುಸ್ತೇನತುಷ್ಯತಿ"** (ಭಾರ ಆರಣ್ಯ ೨. ೬೪) ಇತ್ಯಾದ್ಯನೇಕ**ಪ್ರಮಾಣಗಳು.** ಈ ವಾದವು ಹಿಂದೆಯೇ ಪ್ರಭಾವವ್ಯವಸ್ಥಾಧಿಕಾರದಲ್ಲ ಉಪಪಾದಿತವು ೨೬೮ ನೆಯ ಪುಟದ ಮೊದಲು ಗೊಂಡು ಪರಾಂಬರಿಸಿ ಇದೇ ವಿಷಯದಲ್ಲಿ ಆಳ್ವಾರಾಚಾರ್ಯಸೂಕ್ತಿಗಳನ್ನೂ ಉದಾಹರಿಸುತ್ತಾರೆ ಹಾಗಾದರೆ ಇಲ್ಲಿ ಪುನಃ ಈ ವಾದವು ಏಕೆ ? ಎಂದರೆ ಪ್ರಾಸಙ್ಗಿಕವಾಗಿ ಹೇಳಬೇಕಾಗಿರುವದರಿಂದ ಅನುವಾದ ಮಾಡಿ ಹೇಳಿರುತ್ತಾರೆ —

ಆದುದರಿಂದ ಇಷ್ಟು ಪ್ರಮಾಣಗಳಿಗೆ ವಿರೋಧವಾಗಿ ಪ್ರಪನ್ನನು ಬುದ್ಧಿ ಪೂರ್ವಕವಾಗಿ ಅಪರಾಧಗಳನ್ನಗಿದರೂ ಪ್ರಪದನ ಮಹಾತ್ಮ್ಯೆಯಿಂದ ಅದು ಲೇಪಿಸುವದಿಲ್ಲವೆಂದು ಹೇಳುವದು ಸರಿಯಲ್ಲವೆಂಬುದು ತಾತ್ಪರ್ಯವು.

ಆದರೆ ಮನು ವೆದಲಾದ ಸ್ಮೃತಿಕರ್ತೃರುಗಳು **"ಲಿಪ್ಯತೇನಸಪಾಪೇನ"** ಎಂದು ಹೇಳಿರುತ್ತಾರಲ್ಲಾ ? ಬುದ್ಧಿ ಪೂರ್ವೋತ್ತರಾಘವು ಸರ್ವಾತ್ಮನಾ ಕೂಡದು ಎಂದಾದರೆ, ಆಪತ್ಕಾಲದಲ್ಲಿ ಆಗಬಹುದೆಂದು ಹೇಳಿರುವದು ಹೇಗೆ ? ಎಂದರೆ ಹಾಗೆ ಆಪತ್ಕಾಲದಲ್ಲಿ ಆಗಬಹುದೆಂಬ ಪ್ರಮಾಣವಿರುವದರಿಂದ ಶಾಸ್ತ್ರಾತಿಕ್ರಮವು

**ಮನ್ವಾದಿಗಳುಮ್ (೧) "ಜೀವಿತಾತ್ಯಯಮಾಪನ್ನೋ ಯೋನ್ನಮತ್ತಿ ಯತಸ್ತತಃ । ಆಕಾಶ ಇವ ಪಂಕೇನ ನಸಪಾಪೇನ ಲಿಪ್ಯತೇ (೨) "ಪ್ರಾಣ ಸಂಶಯಮಾಪನ್ನೋ ಯೋನ್ನಮತ್ತಿ ಯತಸ್ತತಃ । ಲಿಪ್ಯತೇ ನ ಸ ಪಾಪೇನ ಪದ್ಮಪತ್ರ ಮಿವಾಂಭಸಾ ॥ ಎನ್ರುನಿಯಮಿತ್ತಾರ್‌ಗಳ್ ॥ ಇದು ಬ್ರಹ್ಮವಿತ್ತು**

ಆಗಬಹುದು ಶಾಸ್ತ್ರವೇ ಆ ಅಪರಾಧಕ್ಕೆ ಅನುಮತಿಯನ್ನು ಕೊಟ್ಟಿರುತ್ತದೆ ಆದುದರಿಂದ ಅಲ್ಲಿ ದೋಷವಿಲ್ಲವೆಂದು ಹೇಳುತ್ತಾರೆ— **ಮನ್ವಾದಿಗಳುಮ್** - ಮನುವೇ ಮೊದಲಾದ ಇತರ ಸ್ಮೃತಿಕರ್ತೃಗಳೂ ಕೂಡ (೧) **ಜೀವಿತಾತ್ಯಯ ಮಾಪನ್ನಃ** - ದೇಹಾವಸಾನದ ಅವಸ್ಥೆಯನ್ನು ಹೊಂದಿದಯಃ - ಯಾವನು, **ಯತಸ್ತತಃ**-ಯಾವುದಾದರೂ ಒಂದು ಕಡೆಯಿಂದ, ಆಹಾರ ನಿಯಮವಿಲ್ಲದೆ, **ಅನ್ನ ಮತ್ತಿ** - ಆಹಾರವನ್ನು ತಿನ್ನುವನೋ, **ಸಃ** - ಅವನು, **ಪಂಕೇನ** - ಕೆಸರಿನಿಂದ, **ಆಕಾಶಇವ** - ಆಕಾಶದ ಹಾಗೆ ಎಂದರೆ ಕೆಸರನ್ನು ತೆಗೆದು ಆಕಾಶದಲ್ಲಿ ಎಸೆದರೆ, ಆಕಾಶವು ಹೇಗೆ ದೂಷಿತವಾಗುವುದಿಲ್ಲವೋ ಅದರ ಹಾಗೆ **ಪಾಪೇನ** - ಶೂದ್ರಾದಿ ಗಳ ಆಹಾರವನ್ನು ತಿಂದ ಪಾಪದಿಂದ, ನಲಿಪ್ಯತೇ - ಲೇಪಿಸಲ್ಪಡುವದಿಲ್ಲವು । ಅದನ್ನೇ ವಿಶದೀಕರಿಸಿ ಹೇಳುತ್ತಾರೆ—**ಪ್ರಾಣ ಸಂಶಯಮಾಪನ್ನ** — ಬಹು ಕಾಲ ಆಹಾರಕ್ಕೆ ಮಾರ್ಗವಿಲ್ಲದೆ ಉಪವಾಸದಿಂದ ಪ್ರಾಣವು ಉಳಿಯುತ್ತದೋ ಇಲ್ಲವೋ ಎಂಬ ಸಂಶಯವನ್ನು ಹೊಂದಿದ, **ಯಃ** - ಯಾವನು, **ಯತಸ್ತತಃ**- ಎಲ್ಲಿಂದಲೇಯಾಗಲಿ ಎಂದರೆ ಶೂದ್ರಸಮನೆಯಿಂದಲೇ ಆಗಲಿ, **ಅನ್ನಮತ್ತಿ** - ಅನ್ನವನ್ನು ಸ್ವೀಕರಿಸುವನೋ, **ಸಃ** - ಅವನು, **ಅಂಭಸಾ** - ಉದಕದಲ್ಲೇ ಇದ್ದರೂ ಉದಕದಿಂದ, **ಪದ್ಮಪುತ್ರಮಿವ** - ಕಮಲಪುಷ್ಪದ ಎಲೆಯ ಹಾಗೆ **ಪಾಪೇನ ನ ಲಿಪ್ಯತೇ** - ಪಾಪದಿಂದ ಲೇಪಿಸಲ್ಪಡುವದಿಲ್ಲವು" **ಎನ್ರು** - ಎಂಬ ದಾಗಿ, **ನಿಯಮಿತ್ತಾರ್‌ಗಳ್** - ಶಾಸ್ತ್ರಾನುಮತಿ ಇರುವದರಿಂದ ಆಜ್ಞಾಪಿಸಿದರು ಶ್ರುತಿಯು ಹಾಗೆ ಅವಕಾಶ ಕೊಟ್ಟದುದರಿಂದ ಹಾಗೆ ಅನುಮತಿಯನ್ನು ಕೊಟ್ಟರು ಎಂಬ ಭಾವವು ಶ್ರುತಿಯಲ್ಲಿ ಎಲ್ಲಿ ಹಾಗೆ ಉಪಾದಿತವೆಂಬುದನ್ನು ಮುಂದೆ ಉಪ ಪಾದಿಸುತ್ತಾರೆ—ಹೀಗೆ ಮೇಲೆ ಹೇಳಿದ, ಯಾವ ಅನ್ನವನ್ನಾದರೂ ಊಟ ಮಾಡಬಹುದೆಂಬ ಅನುಮತಿಯು ಬ್ರಹ್ಮವಿತ್ತುಗಳಿಗೂ ಉಂಟೋ; ಇಲ್ಲವೇ ಅಬ್ರಹ್ಮ ವಿತ್ತುಗಳಿಗೆ ಮಾತ್ರವೇ ಎಂಬ ಸಂದರ್ಭದಲ್ಲಿ ಬ್ರಹ್ಮವಿತ್ತುಗಳಿಗೂ ಕೂಡ ಪ್ರಾಣ ಹೋಗುವ ಸಂದರ್ಭದಲ್ಲಿ ಆಹಾರ ಪಾರಿಶುದ್ಧ್ಯವನ್ನು ಪರಿಗಣಿಸದೆ ಯಾವ ಅನ್ನ ವನ್ನಾದರೂ ಸ್ವೀಕರಿಸಬಹುದೆಂದು ಛಾಂಧೋಗ್ಯದ ಪ್ರಥಮ ಪ್ರಪಾಠಕದ ೧೦ ನೆಯ ಖಂಡದಲ್ಲಿ ಉಪಪಾದಿತವೆಂದು ಹೇಳುವ ಬ್ರಹ್ಮಸೂತ್ರವನ್ನು ಉದಾಹರಿ

(೧) ಮನುಸ್ಮೃತಿ, ೫ ೧೦೪ (೨)

**ಕ್ಕುಮ್ ತುಲ್ಯಮೆನ್ನುಮಿಡಮ್, (೨) "ಸರ್ವಾನ್ನಾನುಮತಿಶ್ಚ ಪ್ರಾಣಾತ್ಯಯೇತದ್ದರ್ಶನಾತ್" ಎಙ್ಗರ ಸೂತ್ರತ್ತಿಲೇ ದೃಷ್ಟಾಂತರೂಪೇಣ ಸಾಧಿತಮಾಯಿತ್ತು.**

---

ಸುತ್ತಾರೆ ಆಪತ್ತಿನಲ್ಲಿ ಶೂದ್ರಾನ್ನವಾದರೂ ದೋಷವಿಲ್ಲವೆಂದು ಯಾವಾಗ ಹೇಳಿತೋ ಆಗ ಅನಾಪತ್ತಿನಲ್ಲಿ ದೋಷವೆಂದೇ ಏರ್ಪಟ್ಟಿತು ಇದು ಬ್ರಹ್ಮವಿತ್ತಿಗೂ ಬ್ರಹ್ಮವಿತ್ತಲ್ಲದವನಿಗೂ ಸಮವು ಆಪತ್ತಿನಲ್ಲೂ ಸಹ ಇಬ್ಬರಿಗೂ ತುಲ್ಯವೇ ಇದನ್ನು ಉಪಪಾದಿಸುತ್ತಾರೆ—**ಇದು** - ಪ್ರಾಣಹೋಗುವ ಸಮಯದಲ್ಲಿ ಸಮಸ್ತ ಶಾಸ್ತ್ರದ ಅನುಮತಿಯೂ, ಅಂತಹ ಸಂದರ್ಭವಿಲ್ಲದಿದ್ದರೆ ಅಂತಹ ಅನುಮತಿಯು ದೋಷಾವಹವೆಂಬುದು, **ಬ್ರಹ್ಮವಿತ್ತುಕ್ಕುಮ್** - ಬ್ರಹ್ಮವಿತ್ತಲ್ಲದವನಿಗೆ ಹೇಗೋ ಹಾಗೆಯೇ ಬ್ರಹ್ಮವಿತ್ತಿಗೂ, **ತುಲ್ಯಮೆನ್ನುಮಿಡಮ್** - ಸಮವೆಂಬ ಸಂದರ್ಭವು, (೨) **ಸರ್ವಾನ್ನಾನುಮತಿಶ್ಚ ಪ್ರಾಣಾತ್ಯಯೇ ತದ್ದರ್ಶನಾತ್" ಎಙ್ಗರಸೂತ್ರತ್ತಿಲೇ** ಎನ್ನುವ ಸೂತ್ರದಲ್ಲಿ, **ದೃಷ್ಟಾಂತರೂಪೇಣ** - ಒಂದು ಶ್ರುತಿಯಲ್ಲಿ ಹೇಳಿದ ದೃಷ್ಟಾಂತ ಮೂಲಕವಾಗಿ, **ಸಾಧಿತಮಾಯಿತ್ತು** - ಉಪಪಾದಿಸಲ್ಪಟ್ಟಿತು, ಸ್ಥಾಪಿಸಲ್ಪಟ್ಟಿತು ಎಂಬ ಭಾವವು ಪ್ರಾಣ ವಿದ್ಯೆಯಲ್ಲಿ ಛಾಂದೋಗ್ಯದಲ್ಲಿ ಸರ್ವಾನ್ನಾನುಮತಿಯು ಎಂದರೆ ಯಾವ ಅನ್ನವನ್ನಾದರೂ ಸ್ವೀಕರಿಸಬಹುದೆಂದು ಹೇಳಿರುವದೇನು ಎಲ್ಲಾ ಕಾಲದಲ್ಲೇ ಅಥವಾ ಪ್ರಾಣ ಹೋಗುವ ಕಾಲದಲ್ಲೇ ಎಂಬ ಸಂದೇಹದಲ್ಲಿ ಈ ಮೇಲಿನ ಸೂತ್ರವು ಹೇಳುತ್ತದೆ. ಏನೆಂದರೆ —"**ಸರ್ವಾನ್ನಾನುಮತಿಶ್ಚ**" - ಒಂದೂ ವಿವೇಚನೆಯಿಲ್ಲದೆ ಎಲ್ಲಾ ಅನ್ನವನ್ನು ತಿನ್ನಬಹುದೆಂಬ ಅನುಮತಿಯಾದರೋ ಸರ್ವಕಾಲದಲ್ಲಲ್ಲವು, **ಪ್ರಾಣಾತ್ಯಯೇ** - ಪ್ರಾಣ ಅತ್ಯಯವೆಂದರೆ ನಾಶ, ಪ್ರಾಣಹೋಗುವ ಸಂದರ್ಭದಲ್ಲಿ ಮಾತ್ರವೇ, ಏಕೆಂದರೆ **ತದ್ದರ್ಶನಾತ್** - ಹಾಗೆಯೇ ಶ್ರುತಿಯಲ್ಲಿ ದೃಷ್ಟಾಂತವಿರುವದರಿಂದ ಅದು ಯಾವುದೆಂದರೆ .—ಉಷಸ್ತಿ ಎನ್ನುವ ಮಹರ್ಷಿಯು, ಬ್ರಹ್ಮವಿದ್ಯೆಯ ಸಂಪಾದನಕ್ಕೆ ಬೇಕಾದ ದ್ರವ್ಯಾರ್ಜನೆಗಾಗಿ ರಾಜಯಜ್ಞ ಪಾಟವನ್ನು ಸೇರಬೇಕೆಂದು ಹೊರಟು ರಾಜನ ಆನೆಗಳನ್ನು ಕಟ್ಟುವ ಸ್ಥಳಕ್ಕೆ ಬರುವಕಾಲದಲ್ಲಿ ಬಹುಕಾಲ ಆಹಾರವಿಲ್ಲದುದರಿಂದ ದೇಹದಲ್ಲಿ ಪ್ರಾಣವು ನಿಲ್ಲದ ಅವಸ್ಥೆಯು ಒದಗಲು; ಆಗ ಅವರು ಆನೆಯ ಮಾವಟಿಗನಾದ ಇಭ್ಯನೆಂಬುವನು ಆನೆಗಾಗಿ ಬೇಯಿಸಿದ ಹುರುಳಿಯನ್ನು ತಿನ್ನುತ್ತಿದ್ದುದನ್ನು ಕಂಡು ನನಗೂ ಸ್ವಲ್ಪ ಹುರುಳಿಯನ್ನು ಕೊಡು ಎಂದು ಬೇಡಿದರು ನಾನು ತಿಂದ ಉಚ್ಚಿಷ್ಟವೇ ಹೇಗೆ ಕೊಡಲಿ ಎಂದು ಇಭ್ಯನು ಹೇಳಿದರೂ, ಚಿಂತೆಯಿಲ್ಲವು ಸ್ವಲ್ಪ ಮಾತ್ರ ಕೊಡು ಎಂದು

---

(೧) ಶಾ ಸೂ ೩ ೪. ೨೭.

## ಅಥಬುದ್ಧಿಪೂರ್ವೋತ್ತರಾಘಾ ಶ್ಲೇಷವಾದ ನಿರಸನಂ ನಿಗಮಯತಿ.

**ಆಗೈಯಾಲ್, ಕರ್ತೃತ್ವಮಾತ್ಮಾವುಕ್ಕಿಲ್ಲೈ ಎನ್ರಾದಲ್, ಪಾರತಂತ್ರ್ಯಜ್ಞಾನ ಮಾತ್ರತ್ತೈಕೊಂಡಾದಲ್, ಬುದ್ಧಿಪೂರ್ವೋತ್ತರಾಘಮ್ ಒರುಪಡಿಕ್ಕುಮ್**

ತೆಗೆದುಕೊಂಡು ಪ್ರಾಣವುಳಿಯುದಕ್ಕೆ ಎಷ್ಟು ಮಾತ್ರ ಬೇಕೋ ಅಷ್ಟು ಮಾತ್ರವೇ ತಿಂದು ತಮ್ಮ ಪತ್ನಿಯ ಕೈಗೆ ಮಿಕ್ಕಿದನ್ನು ಕೊಟ್ಟರು ಆಕೆಗೆ ಅಂತಹ ಪ್ರಾಣಾತ್ಯ ಯಾವಸ್ಥೆ ಒದಗಿರಲಿಲ್ಲವಾದುದರಿಂದ ಅದನ್ನು ಶರಗಿನಲ್ಲಿ ಕಟ್ಟಿಕೊಂಡಳು ಇದರ ಜೊತೆಯಲ್ಲಿ ಸ್ವಲ್ಪ ನೀರನ್ನು ಕುಡಿದರೆ ಒಳ್ಳೇದೆಂದು ಭಾವಿಸಿ ನೀರನ್ನು ಕೊಡಲೇ ಎಂದು ಇಭ್ಯಸು ಕೇಳಿದನು ಅದನ್ನು ಕುಡಿದರೆ ಉಚ್ಛಿಷ್ಟವಾಗುತ್ತದೆ ; ಈಗ ಪ್ರಾಣ ಉಳಿಯಿತು ಮುಂದಕ್ಕೆ ಏನನ್ನು ತಿಂದರೂ ಬುದ್ಧಿಪೂರ್ವಕವಾಗಿ ಕಾಮನೆಯಿಂದ ಸ್ವೀಕರಿಸಿದುದಾಗುವದರಿಂದ, ಉಚ್ಛಿಷ್ಟವಾಗಿ ದೋಷಾವಹವೆಂದು ಹೇಳಿ, ಮುಂದಕ್ಕೆ ರಾಜಧಾನಿಗೆ ಹೊರಟು, ಮಾರನೆಯ ದಿನವೂ ಹೀಗೆಯೇ ಪ್ರಾಣ ಹೋಗುವ ಅವಸ್ಥೆಯುಂಟಾಗಿದ್ದುದರಿಂದ ತನ್ನ ಹೆಂಡತಿಯ ಶರಗಿನಲ್ಲಿ ಕಟ್ಟಿದ್ದ ಆ ಉಚ್ಛಿಷ್ಟ ಹುರುಳಿಯನ್ನೇ ತಿಂದು ರಾಜನ ಯಜ್ಞಸದಸ್ಸನ್ನು ನೇರಿ ಯಜ್ಞಾದಿ ಗಳನ್ನು ಋತ್ವಿಕ್ಕಾಗಿ ನಡೆಸಿಕೊಟ್ಟು, ಹೀಗೆ ನ್ಯಾಯಾರ್ಜಿತ ದ್ರವ್ಯದಿಂದ ದೇಹ ಧಾರಣೆಯನ್ನೂ ಮಾಡಿ ಬ್ರಹ್ಮವಿದ್ಯಾ ಪಾರಂಗತರೂ ಆದರೆಂದು ಛಾಂದೋಗ್ಯದ ಇತಿಹಾಸವಿರುತ್ತದೆ ಇದರಿಂದ ಪ್ರಾಣಾಪತ್ತು ಉಂಟಾದಾಗ ದೋಷವಿಲ್ಲವೆಂದು ಹೇಳಲ್ಪಟ್ಟಿತೇ ವಿನಾ ಬುದ್ಧಿಪೂರ್ವಕವಾಗಿ ಕೂಡದೆಂದು ಮಹರ್ಷಿಯೇ **"ಉಚ್ಛಿಷ್ಟಂಮೇ ಪೀತಂಸ್ಯಾತ್, ಕಾಮೋಮೇ ಉಪಪಾನೇ"** ಎಂದು ಹೇಳಿ ಉದಕ ಪಾನವನ್ನು ತ್ಯಜಿಸಿರುತ್ತಾರೆ—

## ಮುಂದೆ ಬುದ್ಧಿಪೂರ್ವೋತ್ತರಾಘವು ಲೇಪಿಸುವದಿಲ್ಲವೆಂಬ ವಾದವನ್ನು ಮುಗಿಸುತ್ತಾರೆ.

**ಆಗೈಯಾಲ್** - ಆ ಕಾರಣದಿಂದ ಎಂದರೆ ಪರಾಧೀನ ಕರ್ತೃತ್ವವು ಆತ್ಮನಿ ಗುಂಟು ಎಂದು ಹೇಳಿದ ಹಾಗೆ ಸ್ಥಾಪಿತವಾದುದರಿಂದ, ಬುದ್ಧಿ ಪೂರ್ವೋತ್ತರಾಘವು ಲೇಪಿಸುವದಿಲ್ಲವೆಂಬ ವಾದಗಳು ಶಾಸ್ತ್ರವಿರುದ್ಧವಾದುವಾದುದರಿಂದ (೧) **ಕರ್ತೃತ್ವಮ್ ಆತ್ಮಾವಕ್ಕಿಲ್ಲೈ ಎನ್ರಾದಲ್** - ಮಾಡುವದೆಲ್ಲಾ ದೇಹವೇಯಾದುದರಿಂದ ಆತ್ಮನಿಗೆ ಕರ್ತೃತ್ವವೇ ಇಲ್ಲವೆಂದಾಗಲಿ, (೨) **ಅಥವಾ ಪಾರತಂತ್ರ ಜ್ಞಾನ ಮಾತ್ರತ್ತೈಕೊಂಡಾದಲ್** - ತಾನು ಪರತಂತ್ರನು ಎಂಬ ಜ್ಞಾನ ಮಾತ್ರ ಮೂಲಕವಾಗಿಯೇ ಆಗಲಿ, **ಬುದ್ಧಿಪೂರ್ವೋತ್ತರಾಘಮ್** - ಪ್ರಪದನೋತ್ತರ ಕಾಲದಲ್ಲಿ ಬುದ್ಧಿಪೂರ್ವಕವಾಗಿ ಮಾಡುವ ಅಪರಾಧವು, **ಒರುಪ್ಪಡಿಕ್ಕುಮ್** -

## ಸಂಬಂಧಜ್ಞಾನಮೇವೋಪಾಯಃ, "ವ್ರಜೇ"ತ್ಯಸ್ಯವಿಧೌ ತಾತ್ಪರ್ಯಂ ನಾಸ್ತೀತಿವಾದಂ ನಿರಾಕರೋತಿ.

**ಲೇಪಿಯಾದೆನ್ಗೈಯುಮ್, ಇತ್ತೈಪ್ಪತ್ತ ಪುನಃ ಪ್ರಪದನಂವೇಂಡಾ ಎನ್ಗೈಯುಂ ಪರಪಕ್ಷಮಾಮ್.**

ಸರ್ವಾತ್ಮನಾ, **ಲೇಪಿಯಾದೆನ್ಗೈಯುಮ್** - ಲೇಪಿಸುವದಿಲ್ಲವೆಂದು ಹೇಳೋಣವೂ ಮತ್ತು **ಇತ್ತೈಪ್ಪತ್ತ** - ಈ ಅಪರಾಧವನ್ನು ಕುರಿತು, **ಪುನಃ ಪ್ರಪದನವು, ವೇಣ್ಡಾ ಎನ್ಗೈಯುಮ್** - ಬೇಡವೆಂದು ಹೇಳೋಣವೂ ಸಹ, **ಪರಪಕ್ಷಮ್** - ಇತರರಾದ ಕರ್ಮಸ್ವರೂಪತ್ಯಾಗವನ್ನು ಹೇಳುವ ಶಂಕರಾದಿಗಳ ಅಭಿಪ್ರಾಯಗಳಾಗುವುವು; ಶ್ರೀ ಭಾಷ್ಯಕಾರ ಸಿದ್ಧಾಂತವಾಗುವದಿಲ್ಲವೆಂಬ ಭಾವವು ಶಾಂಕರಾದಿಗಳ ಅಭಿಪ್ರಾಯವು ಸರ್ವಕರ್ಮಗಳ ಸ್ವರೂಪತ್ಯಾಗವಾದುದರಿಂದ, **"ದಗ್ಧಾಖಿಲಾಧಿಕಾರತ್ವಾತ್"** - ಸಮಸ್ತಾಧಿಕಾರವೂ ಹೋಗುತ್ತದೆಂಬ ಭಾವವು **"ಕರ್ತೃತ್ವಮ್ ಆತ್ಮಾವಿಕ್ಕು ಇಲ್ಲೈ"** ಎಂದು ಹೇಳಿದರೆ ಸಾಂಖ್ಯಮತ ಸಿದ್ಧಾಂತವಾಯಿತು ಪರಾಧೀನ ಕರ್ತೃತ್ವದ ಜ್ಞಾನವಿರುವದರಿಂದಲೇ **"ಸರ್ವಧರ್ಮಾನ್ ಪರಿತ್ಯಜ್ಯ"** ವೆಂದು ಹೇಳಲ್ಪಟ್ಟಿರುವದರಿಂದ, ಈತನಿಗೆ ಯಾವುದಕ್ಕೂ ಅಧಿಕಾರವೇ ಇಲ್ಲವೆಂಬ ಶಂಕರ ಮತಾಭಿಪ್ರಾಯವೆಂಬ ಭಾವವು ಆದುದರಿಂದಲೇ **"ಪರಪಕ್ಷಮಾಮ್"** ಎಂಬ ಪ್ರಯೋಗವು.

## ಶೇಷ ಶೇಷಿ ಜ್ಞಾನವೇ ಮೋಕ್ಷೋಪಾಯವು; ವ್ರಜವೆಂಬಲ್ಲಿ ವಿಧಿ ತಾತ್ಪರ್ಯವಿಲ್ಲವೆಂಬ ವಾದವನ್ನು ನಿರಾಕರಿಸುತ್ತಾರೆ—

ಕೆಲವರು ಶೇಷ ಶೇಷಿ ಸಂಬಂಧ ಜ್ಞಾನವೇ ಮೋಕ್ಷದಾಯಿಕವು; ಆದುದರಿಂದ ವ್ರಜವೆಂದು ಇಲ್ಲಿ ಹೇಳಿದ್ದರೂ ವಿಧಿಯ ಅಭಿಪ್ರಾಯದಲ್ಲಿ ಹೇಳಲ್ಪಡಲಿಲ್ಲವು. ಆದುದರಿಂದ ಸರಿಯಾದ ಶಾಸ್ತ್ರಜ್ಞಾನವೇ ಮೋಕ್ಷಹೇತುವಾದುದರಿಂದ ಅದಕ್ಕಾಗಿ ಏನನ್ನೂ ಮಾಡುವ ಆವಶ್ಯಕವಿಲ್ಲವೆನ್ನುವರು ಮೊದಲು ಅವರ ವಾದವನ್ನುಪಪಾದಿಸಿ, ಅದನ್ನು ನಿರಾಕರಿಸುತ್ತಾರೆ ಅದಕ್ಕೇನೂ ವಾದಬೇಕಾಗಿಲ್ಲವು **ಉಪಾಸೀತ ಶರಣಂವ್ರಜ, "ಓಮಿತ್ಯಾತ್ಮಾನಂಯುಂಜೀತ"** ಇತ್ಯಾದಿ ಸ್ಪಷ್ಟವಾದ ವಿಧಿವಾಕ್ಯಗಳೇ ಇರುವಾಗ ಅವು ವಿಧಿಯಲ್ಲವೆಂದು ಹೇಳುವವರಿಗೆ ಏನು ಸಮಾಧಾನವನ್ನು ಹೇಳಲಾಗುತ್ತದೆ; "ವಿಧಿ ಸ್ವಾರಸ್ಯಕ್ಕೆ ವಿರುದ್ಧ" ವೆಂದು ಅಷ್ಟು ಮಾತ್ರವೇ ಹೇಳಬಹುದು. ಆದರೂ ಈ ಅಭಿಪ್ರಾಯವನ್ನು ವಾದ ಮೂಲಕ

**ಇವ್ವಿಡತ್ತಿಲೇ ಶಿಲರ್ "ವ್ರಜ" ಇತ್ಯಾದಿ ವಿಧಿಗಳ್ಳೈ ಅನ್ಯಪರಙ್ಗಳಾಕ್ಕಿ, (೧) "ಯೋನ್ಯಥಾ ಸಂತಮಾತ್ಮಾನಮನ್ಯಥಾ ಪ್ರತಿಪದ್ಯತೇ। ಕಿಂತೇನ ನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ||" (೨) "ಯಮೋ**

ವಾಗಿಯೂ ನಿರಾಕರಿಸುತ್ತಾರೆ—**ಇವ್ವಿಡತ್ತಿಲೇ** - ಈ "ವ್ರಜ" ವೆಂಬ ಶಬ್ದಾರ್ಥ ನಿರ್ಣಯದಲ್ಲಿ, **ಶಿಲರ್** - ಕೆಲವರು, **"ವ್ರಜ" ಇತ್ಯಾದಿವಿಧಿಗಳ್ಳೈ** - "ವ್ರಜ" ವೆಂಬವೇ ಮೊದಲಾದ ವಿಧಿವಾಕ್ಯಗಳನ್ನೂ, **ಅನ್ಯಪರಂಗಳಾಕ್ಕಿ** - ಬೇರೆ ಅರ್ಥಗಳುಳ್ಳವೆಂದು ಬಲಾತ್ಕರಿಸಿ ಹೇಳಿ, ಅವುಗಳ ಯಥಾರ್ಥಭಿಪ್ರಾಯಗಳನ್ನು ಬಿಟ್ಟು ಬೇರೇ ತಾತ್ಪರ್ಯವುಳ್ಳವೆಂದು ಹೇಳಿ, (೧) **ಯಃ** - ಯಾವನು, **ಅನ್ಯಥಾಸಂತಮಾತ್ಮಾನಂ** - ಯಾವುದೋ ಒಂದು ವಿಧವಾಗಿ ಯಥಾರ್ಥರೀತಿಯಲ್ಲಿರುವ ಜೀವಾತ್ಮನನ್ನು **ಅನ್ಯಥಾ** - ಬೇರೇ ವಿಧವಾಗಿ, **ಪ್ರತಿಪದ್ಯತೇ** - ತಿಳಿಯುವನೋ **ಆತ್ಮಾಪಹಾರಿಣಾ** - ಪರಮಾತ್ಮನಿಗೆ ಶೇಷಭೂತನಾದವನನ್ನು ತನ್ನದೆಂದು ತಿಳಿದ ಆತ್ಮಾಪಹಾರವನ್ನು ಮಾಡಿದ **ಚೋರೇಣ** - ಕಳ್ಳನಂತಿರುವ, ತೇನ - ಅಂತಹ ಭ್ರಮಜ್ಞಾನವುಳ್ಳವನಿಂದ, **ಕಿಂಪಾಪಂ ನಕೃತಮ್** - ಯಾವ ಅಪರಾಧವನ್ನು ತಾನೇ ಮಾಡಲ್ಪಡುವದಿಲ್ಲವು ಅವರುಗಳ ಅಭಿಪ್ರಾಯವೇನೆಂದರೆ ಪರಮಾತ್ಮನಿಗೆ ತಾನು ಶೇಷಭೂತನು, ದಾಸನು, ಈ ಜ್ಞಾನವಿದ್ದುದಾದರೆ ಆತನೇ ರಕ್ಷಿಸುವನು. ಇಂತವನು ಇರುವಾಗ ತಾನು ಉಪಾಯಾನುಷ್ಠಾನವನ್ನು ಸ್ವತಂತ್ರಿಸಿ ಮಾಡುವೆನೆಂದು ಹೊರಡುವುದು ಅಹಂಭಾವವು, ಹಾಸ್ಯಾಸ್ಪದವು. ಪರಮಾತ್ಮನಿಗೆ ಶೇಷಭೂತವಾದುದು ತನ್ನ ಆತ್ಮಾ, ಅದನ್ನು ತನ್ನದೆಂದು ಭ್ರಮಿಸಿ ಚೋರಕೃತ್ಯ ಮಾಡಿರುವನೆಂಬುದು ಅವರ ಅಭಿಪ್ರಾಯವು ಸರಿಯಾದ ಅಭಿಪ್ರಾಯವು ಯಾವುದು; ಎಂದರೆ, ಇಷ್ಟುದಿನವೂ ಈ ಶೇಷತ್ವ ಜ್ಞಾನವಿಲ್ಲದೆ ಸ್ವಾಮಿಯ ಸ್ವತ್ತಾದ ಈ ಆತ್ಮವನ್ನು ತನ್ನದೇ ಎಂದು ಭಾವಿಸಿಸ್ವತಂತ್ರಾತ್ಮಭ್ರಮೆಯುಳ್ಳವನಾಗಿ ಚೋರಕೃತ್ಯವನ್ನು ಮಾಡಿದ್ದೆನು ಈಗ ಶೇಷತ್ವಜ್ಞಾನ ಪ್ರಾಪ್ತವಾದುದರಿಂದ ಆತನ ಸ್ವತ್ತನ್ನು ಆತನಲ್ಲೇ ಸಮರ್ಪಿಸಿ ಭರನ್ಯಾಸ ಮಾಡತಕ್ಕದ್ದೆಂಬ ಜ್ಞಾನ ಉಂಟಾಯಿತೆಂಬುದು ತಾತ್ಪರ್ಯವು (೨) **ಯಮಃ** - ಸರ್ವಕ್ಕೂ ನಿಯಾಮಕನಾಗಿ, ದುಷ್ಕೃತಿಗೆ ಸರ್ವ ಶಾಸ್ತಾವಾಗಿರುವ ನಮ್ಮ ಹೃದಯದಲ್ಲೇ ಇದ್ದುಕೊಂಡು ಪ್ರೇರಿತವಾದ, **ವೈವಸ್ವತಃ** - ಸಮಸ್ತವನ್ನು ಮರೆಸುವ ಹಾಗೆ ಮಹಾ ತೇಜಸ್ಸನ್ನುಳ್ಳ ಅಥವಾ ಅದಿತ್ಯ ವಿದ್ಯೆಯಲ್ಲಿ ಹೇಳಿರುವ ಹಾಗೆ ಸೂರ್ಯಾಂತರ್ಯಾಮಿಯಾಗಿರುವ, **ರಾಜಾ**-ಸುಕೃತಿಯನ್ನೂ ರಂಜಿಸುವ ಹಾಗೆ ಮಾಡುವ ಸತ್ಪುರುಷರನ್ನು ಮನ್ನಿಸಿ ದುಷ್ಟರನ್ನು ನಿಗ್ರಹಿಸುವ ರಾಜನಾಗಿ

(೧) ಭಾರತ, ಉದ್ಯೋಗ ೪೨ ೩೫. (೨) ಮನು ೮ ೯೨.

**ವೈವಸ್ವತೋರಾಜಾಯಸ್ತ ವೇಷ ಹೃದಿಸ್ಥಿತಃ। ತೇನ ಚೇದ ವಿವಾದಸ್ತೇಮಾ ಗಂಗಾಂ ಮಾಕುರೂನ್ ಗಮಃ" (೧) "ಆತ್ಮದಾಸ್ಯಂ ಹರೇಸ್ಸ್ವಾಮ್ಯಂ ಸ್ವಭಾವಂಚ ಸದಾಸ್ಮರ" ಇತ್ಯಾದಿಗಳಿಲ್ ತಾತ್ಪರ್ಯ ಗತಿ ಗಳೈಯುಮ್ ಪರಾಮರ್ಶಿಯಾದೇ ಇವತ್ತೈಕ್ಕೊಂಡು, ಶಾಸ್ತ್ರ ಜನ ಸಂಬಂಧ ಜ್ಞಾನವೊಳಿಯ ವೇರು ಮುಮುಕ್ಷುಕ್ಕು ಅನುಷ್ಠೇಯಮಾಯ್ ಇರುಪ್ಪದೊರು ಉಪಾಯಮಿಲ್ಲೈ**

ರುವ ಪರಮ ಪುರುಷನು **ಏಷಃ** - ಇಂತಹ, **ಯಃ** - ಪ್ರಸಿದ್ಧನಾದ ಯಾವ ಪರಮ ಪುರುಷನು, **ತವ** - ನಿನ್ನ, **ಹೃದಿ** - ಹೃದಯದಲ್ಲಿ, **ಸ್ಥಿತಃ** - ಇರುವನೋ, **ತೇನಚೇದವಿವಾದಃ** - ಸರ್ವ ನಿಯಾಮಕನೊಂದಿಗೆ ವಿವಾದವಿಲ್ಲದೆ ಪಾಪಭೀರುವಾಗಿದ್ದರೆ, **ಗಂಗಾಂ** ಪಾಪಪರಿಹಾರಕ್ಕಾಗಿ ಗಂಗೆಯನ್ನು ಕುರಿತಾಗಲಿ, **ಕುರೂನ್**-ಪುಣ್ಯಕ್ಷೇತ್ರವಾದ ಕುರುಕ್ಷೇತ್ರವನ್ನಾಗಲಿ, **ಮಾಗಮಃ**-ಕುರಿತು ಹೋಗಬೇಕಾದುದಿಲ್ಲವು ಇದರಿಂದ ಏನು ಮಾಡಬೇಕಾದುದಿಲ್ಲವು, ಆತನು ಶೇಷಿ ಎಂದೂ ಅವನೇ ಸರಿಯಾಗಿ ನಿಯಮಿಸುವನು ಎಂಬ ಭಾವನೆಯು ಇದ್ದರೆ, ಸಾಲದೇ? ಈತನು ಸ್ವತಂತ್ರಿಸಿ, ಪುಣ್ಯಕ್ಷೇತ್ರಗಳಿಗೂ ಪುಣ್ಯತೀರ್ಥಗಳಿಗೂ ಹೋಗಬೇಕಾದುದಿಲ್ಲವೆಂದು ಅರ್ಥ ಮಾಡಿ ಹಾಗೆಯೇ ಸ್ವತಂತ್ರಿಸಿ ಪ್ರಪದನಾನುಷ್ಠಾನವೂ ಬೇಕಾಗಿಲ್ಲವೆಂದು ಅರ್ಥ ಮಾಡಿದರು (೧) **ಆತ್ಮದಾಸ್ಯಂ** - ಜೀವಾತ್ಮನು ಪರಮಾತ್ಮನಿಗೆ ಸ್ವರೂಪಸಿದ್ಧವಾದ ದಾಸಭೂತನಾಗಿರೋಣವನ್ನೂ, **ಹರೇಸ್ಸ್ವಾಮ್ಯಂ** - ಶ್ರೀಹರಿಯು ನಮಗೆ ಸ್ವಾಮಿಯಾಗಿರುವ ಭಾವವನ್ನೂ, **ಸ್ವಭಾವಂಚ** - ಆತನು ನಮ್ಮ ವಿಷಯದಲ್ಲಿ ಕೃಪಾ, ವಾತ್ಸಲ್ಯಾದಿ ಕಲ್ಯಾಣ ಗುಣಗಳುಳ್ಳವೆಂಬುದನ್ನೂ ಸಹ, **ಸದಾಸ್ಮರ** - ಯಾವಾಗಲೂ ಸ್ಮರಿಸುತ್ತಿರು; ಇಷ್ಟುಮಾತ್ರ ಹೇಳಲ್ಪಟ್ಟಿತೇ ವಿನಾ ಉಪಾಯಾನುಷ್ಠಾನವನ್ನು ಮಾಡು ಎಂದು ಹೇಳಲಿಲ್ಲವೆಂಬುದೇ ಅವರ ತಾತ್ಪರ್ಯವು" **ಇತ್ಯಾದಿಗಳಿಲ್** - ಇವೇ ಮೊದಲಾದ ಪ್ರಮಾಣಗಳಲ್ಲಿರುವ, **ತಾತ್ಪರ್ಯ ಗತಿ ಗಳೈಯುಂ** - ತಾತ್ಪರ್ಯದ ಮಾರ್ಗಗಳನ್ನೂ **ಪರಾಮರ್ಶಿಯಾದೆ** - ವಿಚಾರ ಮಾಡಿ ತಿಳಿಯದೇ, **ಇವತ್ತೈಕ್ಕೊಂಡು** - ಈ ಪ್ರಮಾಣಗಳನ್ನು ಮೂಲ ಮಾಡಿಕ್ಕೊಂಡು, **ಶಾಸ್ತ್ರ ಜನ್ಯಸಂಬಂಧ ಜ್ಞಾನವೊಳಿಯ** - ಶಾಸ್ತ್ರದಿಂದುಂಟಾಗುವ ನಮಗೂ ಪರಮ ಪುರುಷನಿಗೂ ಇರುವ ಶೇಷ ಶೇಷೀ ಜ್ಞಾನವಲ್ಲದೆ, **ವೇರು** - ಬೇರೆಯಾಗಿ, **ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ, **ಅನುಷ್ಠೇಯಮಾಯ್** - ಅನುಷ್ಠಿಸತಕ್ಕದ್ದಾಗಿ, **ಇರುಪ್ಪದೊರು ಉಪಾಯಮಿಲ್ಲೈ** - ಇರುವ ಯಾವುದೊಂದೂ ಉಪಾಯವು ಬೇಕಿಲ್ಲವೆಂದು, **ಎನ್ಬರ್ಗಳ್** - ಅಭಿಪ್ರಾಯ ಪಡುವರು, ಹೇಳುವರು ಎಂಬರ್ಥವು ಶೇಷ ಶೇಷಿ ಜ್ಞಾನ ಮಾತ್ರ ಶಾಸ್ತ್ರದಿಂದುಂಟಾದರೆ ಸಾಕು, ಸ್ವಾಮಿಯು

(೧) ವಿಷ್ಣು ತತ್ವಸಾರಸಂಹಿತೆ

**ಯೆನ್ ಬರ್‌ಗಳ್ ಇದು ಭಕ್ತಿ ಪ್ರಪತ್ತ್ಯಾದಿ ವಿಧಿ ಸ್ವಾರಸ್ಯ ವಿರುದ್ಧಮ್. ರಾಗ**

ತನ್ನ ಕೃಪಾ ಮಾಹಾತ್ಮ್ಯೆಯಿಂದ ಮೋಕ್ಷಾರ್ಥಿಯನ್ನು ರಕ್ಷಿಸಿಬಿಡುವನು; ಉಪಾಯ ಗಳೇನೂ ಅವಶ್ಯಕವಿಲ್ಲವು, ಅವುಗಳನ್ನು ಸ್ವತಂತ್ರನಾಗಿ ಅನುಷ್ಠಿಸುತ್ತೇನೆಂಬುದು ಅಹಂಭಾವವಾಗುತ್ತದೆ ಆದುದರಿಂದ ಯಾವುದೂ ಬೇಕಿಲ್ಲವೆಂಬುದು ಅವರುಗಳ ಅಭಿಪ್ರಾಯವು. ಆ ಪ್ರಮಾಣಗಳನ್ನು ಹೇಳಿದುದು ಯಾವ ತಾತ್ಪರ್ಯದಿಂದ, ಎಂದು ವಿಮರ್ಶಿಸಿ ತಿಳಿಯದೆ, ತಮ್ಮ ಮನಸ ಬಂದಂತೆ ಅರ್ಥ ಮಾಡುವುದು ಉಚಿತವಲ್ಲ ವೆಂಬ ಭಾವದಿಂದ ಹೇಳುತ್ತಾರೆ - ಭಾರತ ವಾಕ್ಯದಿಂದ ಮುಖ್ಯವಾಗಿ ತಿಳಿಯತಕ್ಕ ವಿಷಯವು, ಈ ಆತ್ಮನು ಪರಮಾತ್ಮನ ಸ್ವತ್ತು, ಆದುದರಿಂದ ತಾನು ಸ್ವತಂತ್ರ ನೆಂಬ ಭ್ರಮೆಯು ಕೂಡದು, ಆಗ ಅದು ಚೋರಕೃತ್ಯವಾಗುತ್ತದ ಎಂದು ಹೇಳ ಲ್ಪಟ್ಟಿತು ಇದು ಉದ್ಯೋಗಪರ್ವದಲ್ಲಿ ಅಲ್ಲದೆ, ಆದಿಪರ್ವದಲ್ಲಿ ಶಕುಂತಳೆಯು ದುಷ್ಯಂತನನ್ನು ಆತನ ಸಭೆಯಲ್ಲಿ ಮೂದಲಿಸುವ ಸಂದರ್ಭದಲ್ಲೂ ಹೇಳಿಲ್ಪಟ್ಟಿರು ತ್ತದೆ ವಿವಾಹವನ್ನು ಮಾಡಿಕೊಂಡು ಬಿಟ್ಟು ಬಿಡಲು ನೀನು ಸ್ವತಂತ್ರನೆಂದು ಭಾವಿಸಬೇಡ ಎಂದು ಹೇಳುವ ಸಂದರ್ಭದಲ್ಲಿ ಪ್ರಯೋಗವು ಈ ಎಲ್ಲಾ ಪ್ರಮಾಣ ಗಳಲ್ಲೂ ಮುಖ್ಯವಾಗಿ ಉಪಪಾದಿಸತಕ್ಕದ್ದು ನಮಗೂ ಪರಮಾತ್ಮನಿಗೂ ಇರುವ ಶೇಷ ಶೇಷಿ ಸಂಬಂಧವು, ಇಷ್ಟೇ ಮಾತ್ರವೇ, ಹೀಗಿರುವಾಗ ಉಪಾಯಾನುಷ್ಠಾ ನದ ನಿಷೇಧದಲ್ಲಿ ತಾತ್ಪರ್ಯವು ಹೇಗೆ? ಇಲ್ಲದಿರುವ ಅರ್ಥಗಳನ್ನು ಮಾಡುವುದು ಸರಿಯೇ? ಎಂಬ ಭಾವವು, ಅವುಗಳಲ್ಲಿ ಉಪಾಯಾನುಷ್ಠಾನವು ನಿಷೇಧಿಸಲ್ಪಡ ಲಿಲ್ಲವು ಉಪಾಯಾನುಷ್ಠಾನವನ್ನು ಮಾಡತಕ್ಕದ್ದೆಂದು ಬೇರೆ ವಿಧಿ ವಾಕ್ಯಗಳೇ ಇರುವಾಗ, ಆ ವಿಧಿ ವಾಕ್ಯಗಳಿಗೆ ವಿರುದ್ಧವಾಗಿ ಅರ್ಥ ಮಾಡುವುದು ಯುಕ್ತವಲ್ಲ ವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ —

**ಇದು** - ಇಂತಹವಾದವು, **ಭಕ್ತಿ ಪ್ರಪತ್ತ್ಯಾದಿ ವಿಧಿ ಸ್ವಾರಸ್ಯ ವಿರುದ್ಧಮ್** - ಭಕ್ತಿಯೋಗ, ಪ್ರಪದನ ಇವೇ ಮೊದಲಾದುವುಗಳನ್ನು ಹೇಳುವ ವಿಧಿವಾಕ್ಯದ ಸ್ವಾರಸ್ಯಕ್ಕೆ ವಿರುದ್ಧವು ಆದಿಶಬ್ದದಿಂದ ಇತರ ವಿಧಿವಾಕ್ಯಗಳಾದ **"ತಸ್ಮಾದಸಕ್ತ ಸ್ಸತತಂ ಕಾರ್ಯಂ ಕರ್ಮ ಸಮಾಚರ" "ಪಾಪ್ಮಾನಂ ಪ್ರಜಹಿ" "ಜಹಿಶತ್ರುಂ" "ತಸ್ಮಾತ್ಸರ್ವೇಷು ಕಾಲೇಷು ಯೋಗ ಯುಕ್ತೋಭವ" "ಮಾಂನಮಸ್ಕುರು" "ತಮೇವಂ ಶರಣಂ ಗಚ್ಛ"** ಇತ್ಯಾದಿ ವಿಧಿವಾಕ್ಯಗಳು ಸಂಗ್ರಹಿಸಲ್ಪಟ್ಟವು **ಉಪಾಸೀತ** ಎಂದು ಭಕ್ತಿಯೋಗ ವಿಧಿಯೂ **ಶರಣಂ ವ್ರಜ** ಎಂದು ಪ್ರಪತ್ತಿ ವಿಧಿಯೂ ಉಂಟು; ಇವುಗಳ ಸ್ವಾರಸ್ಯವನ್ನೆಲ್ಲಾ ಅವರು ತಿಳಿದವರಲ್ಲವೆಂದು ಹೇಳಿ ದರು. ಹಾಗೆ ವಿಧಿಗಳ ಮೂಲಕ ಅನುಗ್ರಹ ಸಂಕಲ್ಪವನ್ನು ಸ್ವಾಮಿಯು ಇಟ್ಟು ಕೊಳ್ಳದೆ ಇದಕ್ಕೆ ಸರ್ವೇಶ್ವರನು, ವೈಷಮ್ಯ ನೈರ್ಘೃಣ್ಯಗಳುಂಟೆಂಬ ಅಪವಾದಕ್ಕೆ

ಗುರಿಯಾಗುವನು ಒಬ್ಬ ಉಪನ್ಯಾಸಕರು, ಭಗವಂತನ ನಿಗ್ರಹಾನುಗ್ರಹಗಳು ಆತನ ಸ್ವೇಚ್ಛಾನುಸಾರ ನಡೆಯುತ್ತದೆಂದು ಹೇಳಿ, ಶೂದ್ರನಾದ ಶಂಭುಕನು ಉಪಾಸನ ವನ್ನು ಮಾಡಿದನೆಂದು ಆತನ ಶಿರಚ್ಛೇದನವನ್ನೂ, ಶೂದ್ರಳಾಗಿಯೂ, ಸ್ತ್ರೀಯಾ ಗಿಯೂ, ಶಬರಿಯು ಉಪಾಸನೆಯನ್ನು ಮಾಡಿದಳೆಂದು ತಪ್ಪಾಗಿ ಅರ್ಥ ಮಾಡಿ. ಅವಳಿಗೆ ಮೋಕ್ಷವನ್ನೂ ಕೊಟ್ಟನು ಶ್ರೀರಾಮಚಂದ್ರ ಪ್ರಭುವು ಎಂದು ಹೇಳಿದುದು ಜ್ಞಾಪಕಕ್ಕೆ ಬರುತ್ತದೆ ಹೀಗೆ ಸ್ತ್ರೀ ಶೂದ್ರಾದಿಗಳಿಗೆ ಭಾಗವತ ಸಂಶ್ರಯಣವೇ ವಿಧಿಸಲ್ಪಟ್ಟಿರುವಾಗ, ತದನುಗುಣವಾಗಿ ಪರಮಪುರುಷನ ಅನುಗ್ರಹವಾದುದರಿಂದ ಶಂಭುಕನು ವಧಿಸಲ್ಪಟ್ಟನು ಶಬರಿಯಾದರೋ, ಮಹಾನುಭಾವರಾದ ಮತಂಗ ರುಷಿಯನ್ನಾಶ್ರಯಿಸಿ, ಅವರಿಗೆ ಕೈಂಕರ್ಯವನ್ನು ಮಾಡಿದುದರಿಂದ ವಿಧಿವಾಕ್ಯಕ್ಕನು ಸಾರವಾಗಿ ನಡೆದುದರಿಂದ ರಕ್ಷಿಸಲ್ಪಟ್ಟಳು ನೀನು ಯಾರು ? ಎಂದು ಶ್ರೀರಾಮ ಚಂದ್ರನು ಕೇಳಿದುದಕ್ಕೆ ಮತಂಗ ಋಷಿಗೆ **"ಅಹಂತು ಪರಿಚಾರಿಣೀ"** ಎಂದು ಹೇಳಿಕೊಂಡಿರುತ್ತಾಳೆ ಆದುದರಿಂದ ವಿಧಿವಾಕ್ಯ ಸ್ವಾರಸ್ಯವನ್ನು ಗ್ರಹಿಸಿ ನಡೆಸಿದವ ರಿಗೇನೆ ಭಗವದನುಗ್ರಹವು ವಿಪರೀತಾಚರಣೆಯುಳ್ಳವರಿಗೆ ಅನುಗ್ರಹವಿಲ್ಲವು ಉಪಾ ಯಾನುಷ್ಠಾನವನ್ನು ಮಾಡಿ ಪ್ರಪನ್ನನಾಗದವನಿಗೆ ಮೋಕ್ಷವೇ ಇಲ್ಲವೆಂದು ಹಿಂದೆಯೇ **"ಪ್ರಪನ್ನಾದನ್ಯೇಷಾಂ ನದಿಶತಿ ಮುಕುಂದೋ ನಿಜಪದಮ್"** ಹೀಗೆ ವಿಧಿವಾಕ್ಯಕ್ಕನುಸಾರವಾಗಿ ತನಗೆ ಶಕ್ತಿಯೂ ಅಧಿಕಾರವೂ ಇರುವ ಉಪಾ ಯಾನುಷ್ಠಾನವನ್ನು ಅನುಷ್ಠಿಸಲೇಬೇಕು ಎಂಬುದು ಮುಖ್ಯ ತಾತ್ಪರ್ಯವು. ಶೇಷತ್ವ ಜ್ಞಾನವೇ ಸಾಕೆಂದು ಹೇಳಿದರೆ ಶ್ರೀ ಶಂಕರಾದಿಗಳು ಹೇಳುವ **"ತತ್ವಮಸಿ"** ಜ್ಞಾನದಿಂದಲೇ ಮೋಕ್ಷವೆಂಬ ಉಕ್ತಿಗೆ ಸಮಾನವಾಗಿ, ಶ್ರೀ ಭಾಷ್ಯಕಾರ ಸಿದ್ಧಾ ನ್ತಕ್ಕೆ ವಿರುದ್ಧವಾಗುತ್ತದೆ ಅವರೇ **"ಶರಣ ಮಹಂ ಪ್ರಪದ್ಯೇ"** ಎಂದು ಉಪಾ ಯಾನುಷ್ಠಾನವನ್ನು ಮಾಡಿರುತ್ತಾರೆ :—

ಇಲ್ಲಿ **ವಿಧಿಸ್ವಾರಸ್ಯ ವಿರುದ್ಧಮ್** ಎಂದು ಹೇಳಿರುವುದು **"ಶರಣಂ ವ್ರಜ" "ತಮೇವ ಶರಣಂ ಗಚ್ಛ"** (ಗೀ ೧೮ ೬೨) **"ಯಾಹಿ ಸರ್ವಾತ್ಮಭಾವೇನ"** (ಭಾಗ, ) **ಗಚ್ಛಧ್ವಮೇನ ಶರಣಂ"** (ಭಾರ) **"ತೇನ ಮೈತ್ರೀ ಭವತು ತೇಯದಿಜೀವತು ಮಿಚ್ಛಸಿ । ಪ್ರಸಾದ ಯಸ್ವತ್ವಂಚೈನಂ ಶರಣಾಗತ ವತ್ಸ ಲಮ್** (ರಾಮಾ ಸುಂದರ) ಇಂತಹ ವಿಧಿಗಳ ಸ್ವಾರಸ್ಯಗಳಿಗೆ ವಿರುದ್ಧವೆಂದು ತಿಳಿಸುವುದಕ್ಕಾಗಿ, ಎಂಬ ಭಾವವು

ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಸಂಬಂಧ ಜ್ಞಾನವೇ ಮೋಕ್ಷ ದಾಯಕವೆಂದು ವಾದಿಸುವವರನ್ನು ಕುರಿತು ಹೇಳುತ್ತಾರೇನೆಂದರೆ, ಅಂತಹ ಸಂಬಂಧ ಜ್ಞಾನವನ್ನು ಸಂಪಾದಿಸತಕ್ಕದ್ದೆನೋ ನ್ಯಾಯವು ; ಆದಕ್ಕಾಗಿ **"ಶರ**

**ಪ್ರಾಪ್ತಶ್ರವಣಮನನಜ್ಗಳಾಲೇ ಸಿದ್ಧಮಾನ ಶಾಸ್ತ್ರ ಜನ್ಯಜ್ಞಾನತ್ತೈವಿಧಿಕ್ಕು ಣಂ ವ್ರಜ"** ಎಂದು ವಿಧಿಸಬೇಕಾದುದು ಏತಕ್ಕೆ ? ಆಗ ಇಂತಹ ವಿಧಿ ಬೇಕಾಗಿಲ್ಲ ವೆಂದು ಹೇಳುತ್ತಾರೆ — **ರಾಗಪ್ರಾಪ್ತ -** ಸುಕೃತ ವಾಸನಾಪರಿಪಾಕದಿಂದುಂ ಟಾದ ಆಶೆಯಿಂದ ಪ್ರಾಪ್ತವಾದ, **"ಶ್ರವಣ ಮನನಜ್ಗಳಾಲೇ - "ಶ್ರೋತವ್ಯೋ ಮನ್ತವ್ಯೋನಿದಿಧ್ಯಾಸಿತವ್ಯಃ"** (ಬೃಹ, ೬, ೫, ೬) ಪರಮಾತ್ಮ ವಿಷಯವಾದ ಶ್ರವಣ ಮನನಗಳಿಂದಲೇ, **ಸಿದ್ಧಮಾನ**-ಪ್ರಾಪ್ತವಾದ, **ಶಾಸ್ತ್ರಜನ್ಯ ಜ್ಞಾನತ್ತೈ**-ಶಾಸ್ತ್ರದಿಂದುಂಟಾಗುವ ಜ್ಞಾನವನ್ನು, ಉಪನಿಷತ್ತುಗಳಿಂದಲೂ, ಮೂಲಮಂತ್ರಾದಿ ಗಳಿಂದಲೂ ಉಂಟಾಗುವ ಶೇಷ ಶೇಷಿ ಸಂಬಂಧ ಜ್ಞಾನವನ್ನು, **ವಿಧಿಕ್ಕವೇಣ್ಡಾ** - ವಿಧಿಸೋಣವು ಬೇಕಾಗಿಲ್ಲವು. ಅಂತಹ ಜ್ಞಾನವನ್ನು ವಿಧಿಸುವುದು ಏತಕ್ಕೆ ? ಇಂತಹ ಸಂಬಂಧ ಜ್ಞಾನದಿಂದಲೇ ಮೋಕ್ಷ ಸಿದ್ಧಿಯಾಗುವಾಗ, **"ಶರಣಂ ವ್ರಜ" "ಉಪಾಸೀತ"** ಇತ್ಯಾದಿ ವಿಧಿಗಳು ಆಗ ಏತಕ್ಕೆ ? **ಓಮಿತ್ಯಾತ್ಮಾನಂ ಯುಂಜೀತ** ಇತ್ಯಾದಿ ವಿಧಿವಾಕ್ಯಗಳು ನಿರರ್ಥಕವಲ್ಲವೋ ? ಸಂಬಂಧ ಜ್ಞಾನ ಮಾತ್ರ ಆವಶ್ಯಕವೆಂದು ಇಷ್ಟು ಮಾತ್ರ ಅವಶ್ಯಕವೆಂದು ಹೇಳಬೇಕಾಗಿತ್ತಲ್ಲವೇ ? ಎಂಬ ತಾತ್ಪರ್ಯವು ಹಾಗೆ ಸಂಬಂಧ ಜ್ಞಾನವೇ ಮೋಕ್ಷದಾಯಕವಾಗಿದ್ದ ಪಕ್ಷದಲ್ಲಿ ಹೇಗೆ ಶಾಸ್ತ್ರವು ಹೇಳಬೇಕಾಗಿತ್ತು ? ಎಂದರೆ **"ಮಹ್ಯತ್ವಂ ಭವಸಿ"** ನೀನು ನನ್ನವನಾಗು ಎಂದು ಹೇಳ ಬೇಕಾಗಿತ್ತು ಆಗಲೂ ವಿಧಿಯೇ ಆಗುತ್ತದೆ ಚರಮ ಶ್ಲೋಕದಲ್ಲೂ **"ಶರಣಂ ವ್ರಜ"** ಎಂಬುದನ್ನು ಬಿಟ್ಟು ಬಿಟ್ಟು **"ಅಹಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ"** ಎಂಬುದನ್ನು **"ಮಹ್ಯಂ ತ್ವಂಭವಸಿ"** ಎಂದು ಹೇಳಿದನಂತರ ಇರಬೇಕಾಗಿತ್ತು ಹಾಗಿಲ್ಲವೆಂಬ ಭಾವವು ಶಂಕರಾದಿಗಳು **ತತ್ವಮಸಿ** ಜ್ಞಾನವೇ ಮುಕ್ತಿಹೇತುವು ಎಂದು ಹೇಳಿದುದನ್ನು ನಿರಾಕರಿಸಿದ ವಾದವೇ ಇಲ್ಲಿಯೂ ಹೇಳಬೇಕಾಗುತ್ತದೆ ಆಗ ಭಕ್ತಿ ಮಾರ್ಗದಲ್ಲಿ **"ಉಪಾಸೀತ"** ಎಂಬ ವಿಧಿಗೆ ನೈರರ್ಥ್ಯಕ್ಯ ಉಂಟಾಗುತ್ತದೆ ಅದೂ ಅಲ್ಲದೆ ಅಂತಹ ಜ್ಞಾನವೇ ಸಾಧನವಾದರೆ ಅದಕ್ಕೂ ಕೂಡ ಚಿತ್ತಸಮಾಧಾನವು ಅವಶ್ಯಕವಾಗಿ ಪ್ರತ್ಯರ್ಥಕ್ಕೆ ಭಾಷ್ಯವನ್ನು ಶ್ರೀಯತಿವರ್ಯರು ಬರೆದಿರುತ್ತಾರೆ ಏನೆಂದರೆ, **"ಶ್ರೋತವ್ಯೋ ಮನ್ತವ್ಯೋ" ಇತ್ಯತ್ರ ನಿದಿಧ್ಯಾಸನ ಮೇವ ವಿಧೀಯತೇ, ನಶ್ರವಣಂ ; ಅರ್ಥಪರತ್ವಾದ್ವೇದಸ್ಯಾಧೀತವೇದಃ ಪುರುಷೋ ವಾಕ್ಯಾರ್ಥ ಶ್ರವಣೇ ರಾಗ ಪ್ರಾಪ್ತತ್ವಾದೇವ ತದಪಿನ ವಿಧೇಯಂ"** ಎಂದು ಹೀಗೆ ಶ್ರೀ ಭಾಷ್ಯಕಾರರ ಭಾಷ್ಯವಿರುತ್ತದೆಂದು ಸಾರ ವಿವರಣೆ ವ್ಯಾಖ್ಯಾತೃವು ಹೇಳಿರುತ್ತಾರೆ ವಿಧಿ ಶಾಸ್ತ್ರ ನೈರರ್ಥ್ಯಕ್ಯ ಮಾತ್ರವೇ ಅಲ್ಲದೆ, ವಿಧಿ ಪರಿತ್ಯಾಗ ಮಾಡಿದ ದೋಷ ಪ್ರಾಪ್ತಿಯೂ ಉಂಟೆಂದು **"ಅವಿಧೇಯ ಜ್ಞಾನತ್ತೈ"** ಎಂದಾರಂಭಿಸಿದ ವಾಕ್ಯ ಮೂಲಕವಾಗಿ

**ವುಮ್ ವೇಣ್ಡಾ, ಅವಿಧೇಯಜ್ಞಾನತ್ತೈ ಮೋಕ್ಷಸಾಧನಮಾಗಚ್ಚೊಲ್ಲುವಾರ್ಕ್ಕು ವಿಧಿವಿರೋಧಾದಿದೋಷಙ್ಗಳುಮ್ ವರುಮೆನ್ರು ಸಾಧಿತ್ತದಿರೇ.**

**ಕೇವಲ ಸಂಬಂಧ ಜ್ಞಾನಮೇವ ಮೋಕ್ಷಹೇತುರಿತಿವಾದ ನಿರಾಸನಮ್ ನಿಗಮಯತಿ**

---

**ಆನಪಿನ್ಬು ಸರ್ವವಿದ್ಯಾನಿಷ್ಠರಾನ ಮುಮುಕ್ಷುಕ್ಕಳುಕುಮ್ ಪೊದುವಾಯ್,**

ಹೇಳುತ್ತಾರೆ— **ಅವಿಧೇಯ ಜ್ಞಾನತ್ತೈ** - ವಿಧಿರೂಪದಲ್ಲಿ ಹೇಳಬೇಕಾಗಿಲ್ಲದಿರುವ ಜ್ಞಾನವನ್ನು, **ಮೋಕ್ಷ ಸಾಧನ ಮಾಗಚ್ಚೊಲ್ಲುವಾರ್ಕ್ಕು** - ಮೋಕ್ಷಸಾಧನವೆಂದು ಹೇಳುವವರಿಗೆ, **ವಿಧಿವಿರೋಧಾದಿ ದೋಷಙ್ಗಳುಮ್ ವರುಮ್**-ವಿಧಿವಾಕ್ಯಗಳನ್ನು ಉಲ್ಲಂಘಿಸಿ ನಡೆದು ಭಗವಂತನ ನಿಗ್ರಹಕ್ಕೆ ಪಾತ್ರರಾದ ದೋಷಗಳೂ ಸಹ ಉಂಟಾಗುವುವು **ಎನ್ರು ಸಾಧಿತ್ತದಿರೇ** - ಎಂದು ಹಿಂದೆಯೇ ಸಾಧಿಸಲ್ಪಟ್ಟಿರುತ್ತದೆಯಷ್ಟೇ ? ವಿಧಿಯೇ ಬೇಕಾಗಿಲ್ಲವಾಗಿ ಜ್ಞಾನಮಾತ್ರದಿಂದಲೇ ಮೋಕ್ಷವಾದರೆ **ಅಹರಹಸ್ಸಂಧ್ಯಾಮುಪಾಸೀತ** ಇತ್ಯಾದಿ ವಿಧಿವಾಕ್ಯಗಳೂ ಅಂತವರಿಗೆ ವಿಧಿಗಳಲ್ಲದೆ, ಆಜ್ಞೋಲ್ಲಂಘನ ದೋಷಕ್ಕೆ ಪಾತ್ರರಾಗುವರೆಂಬ ಭಾವವು

ಹಾಗಾದರೆ ಮೋಕ್ಷಾರ್ಥಿಗೆ ಸಂಬಂಧಜ್ಞಾನ ಬೇಕಾಗಿಲ್ಲವೋ ? ನಾವು ಹಿಂದೆ ಪೂರ್ವ ಪಕ್ಷ ಕ್ರಮದಲ್ಲಿ ಉದಾಹರಿಸಿದ **"ಯೋನ್ಯಥಾ ಸಂತಮಾತ್ಮಾನಂ"** ಇತ್ಯಾದಿ ಮೂರು ಪ್ರಮಾಣಗಳೂ ಈ ಶೇಷ ಶೇಷೀ ಜ್ಞಾನದ ಪ್ರಾಮುಖ್ಯತೆಯನ್ನು ಹೇಳುವುದರ ಅಭಿಪ್ರಾಯವೇನು ? ಎಂದು ಪ್ರಶ್ನಿಸಿದರೆ, ಅವುಗಳೂ ಅವಶ್ಯಕವೇ ಎಂದು ಹೇಳಿ, ಆ ಜ್ಞಾನಕ್ಕೂ ಪ್ರಪತ್ತಿ ಭಕ್ತಿಗಳೂ ಜ್ಞಾನರೂಪವಾದ ಅನುಷ್ಠಾನಗಳಾಗಿ ಇರುವುದರಿಂದ, ಈ ಜ್ಞಾನಕ್ಕೂ ಇರುವ ಅಂಗಾಂಗಿ ರೂಪ ವೈಲಕ್ಷಣ್ಯವನ್ನು ತಿಳಿಸಿ ಸಾರಭೂತವಾದ ಉಪದೇಶವನ್ನು ಮಾಡುತ್ತಾರೆ —

**ಕೇವಲ ಸಂಬಂಧ ಜ್ಞಾನವೇ ಮೋಕ್ಷ ಹೇತುವೆಂಬ ವಾದ ನಿರಾಸನವನ್ನು ನಿಗಮನ ಮಾಡುತ್ತಾರೆ.**

---

**ಆನಪಿನ್ಬು**-ಹೀಗಾದನಂತರ, ವಿಧಿವಾಕ್ಯಗಳು ನಿರರ್ಥಕವಾದುದಲ್ಲದೆ ಅವಶ್ಯಕವಾಗಿ ಅನುಷ್ಠೇಯಗಳೆಂದೂ, ಜ್ಞಾನ ಮಾತ್ರವೇ ಸಾಲದೆಂದೂ, ಆದನಂತರ, **ಸರ್ವವಿದ್ಯಾನಿಷ್ಠರಾದ**-ನ್ಯಾಸೋಪಾಸನ ಪ್ರಭೇದಗಳನ್ನೂ ಒಳಗೊಂಡ ಸಮಸ್ತ ಬ್ರಹ್ಮವಿದ್ಯೆಗಳಲ್ಲಿ ನಿಷ್ಠರಾದ, **ಮುಮುಕ್ಷುಗಳುಕ್ಕುಮ್** - ಮೋಕ್ಷಾರ್ಥಿಗಳಿಗೂ, **ಪೊದುವಾಯ್** - ಸಮವಾಗಿ, **ಪರಂಪರಯೋಪಕಾರಕಮಾನ** - ಪೂರ್ವ

**ಪರಮ್ಪರಯೋಪ ತಾರಕಮಾನ ಜೀವ ಪರಮಾತ್ಮ ಸಮ್ಬನ್ಧ ಜ್ಞಾನಮ್ ಶಾಸ್ತ್ರತ್ತಾಲೇ ಪಿರನ್ದವನುಕ್ಕು ನಮ್ಮುಡೈಯಸ್ವಾಮಿಯಾಯ್ ನಿರತಿಶಯ ಭೋಗ್ಯನಾನಶ್ರಿಯಃಪತಿಯೈ ಪ್ರಾಪಿಕ್ಕೈಕ್ಕುವಿರಕೇದೆನ್ಗಿರ ಉಪಾಯಾಕಾಂಕ್ಷೈಪಿರನ್ದವಳವಿಲ್ ಇಙ್ಗು ಅಪ್ಪೋಅಧಿಕಾರಿವಿಶೇಷಾನುರೂಪಮಾಗ ವಿಧಿಕ್ಕಪ್ಪಡುಕಿರಜ್ಞಾನಾನ್ತರಙ್ಗಳ್ ಭಕ್ತಿಪ್ರಪತ್ತಿಗಳ್. ಅವತ್ತಿಲ್ ಪ್ರಪತ್ತಿ**

---

ಪಕ್ಷಿಗಳು ಹೇಳಿದ ಹಾಗೆ ಸಾಕ್ಷತ್ತಾಗಿಯಲ್ಲದೆ ಪರಂಪರೆಯಾಗಿ ಉಪಯೋಗವಾದ **ಜೀವ ಪರಮಾತ್ಮರಿಗಿರುವ ಸಂಬಂಧ ಜ್ಞಾನಂ** – ಶೇಷ ಶೇಷೀರೂಪ ಸಂಬಂಧ ಜ್ಞಾನವು, **ಶಾಸ್ತ್ರತ್ತಾಲೇ ಪಿರಂದವನುಕ್ಕು** – ಉಪನಿಷತ್ತುಗಳು ಮೂಲ ಮನ್ತ್ರವು ಇತ್ಯಾದಿ ಶಾಸ್ತ್ರ ಮುಖ್ಯವಾಗಿ ಹುಟ್ಟಿದವನಿಗೆ, **ನಮ್ಮುಡೈಯ ಸ್ವಾಮಿಯಾಯ್** - ನಮಗೆಲ್ಲಾ ಶೇಷಿಯಾಗಿ, ನಾವೂ ಕೂಡ ಅವನ ಸ್ವತ್ತಾಗಿ ಸ್ವಾಮಿಯಾಗಿರುವ, **ನಿರತಿಶಯ ಭೋಗ್ಯನಾದ ಶ್ರೀಯಃ ಪತಿಯನ್ನು ಪ್ರಾಪಿಕ್ಕೈಕ್ಕು** - ಹೋಗಿ ಸೇರುವುದಕ್ಕೆ, **ವಿರುಗೆದೆನ್ಗಿರ** – ಮಾರ್ಗವೇನೆಂದು **ಉಪಾಯಾಕಾಂಕ್ಷೆ** - ಉಪಾಯವನ್ನು ತಿಳಿಯಬೇಕೆಂಬ ಆಶೆಯು, **ಪಿರನ್ದವಳ ವಿಲ್** – ಹುಟ್ಟಿದುದಾಗಲಾಗಿ, **ಇಙ್ಗು** – ಇಂತಹ ಸಂಧರ್ಭದಲ್ಲಿ, **ಅಪ್ಪೋ ಅಧಿ ಕಾರಿ ವಿಶೇಷಾನುರೂಪಮಾಗ** – ಆ ಮೋಕ್ಷಾಧಿಕಾರಿಯ ಶಕ್ತಾಶಕ್ತತೆಗಳಿಗೆ ಅನುಗುಣವಾಗಿ **ವಿಧಿಕ್ಕ ಪಡುಗರ ಜ್ಞಾನಾಂತರಙ್ಗಳ್** – ವಿಧಿಸಲ್ಪಟ್ಟ ಅನುಷ್ಠೇಯಗಳಾಗಿರುವ, ಬೇರೆ ಜ್ಞಾನರೂಪವಾಗಿರುವ, ಭಕ್ತಿ ಪ್ರಪತ್ತಿಗಳು ಈ ಮೇಲಿನ ವಾಕ್ಯದ ತಾತ್ಪರ್ಯವೇನೆಂದರೆ, ಈ ಶೇಷಶೇಷೀ ಜ್ಞಾನವನ್ನು ನಾವು ಬೇಡ ವೆಂದು ನಿರಾಕರಿಸಲಿಲ್ಲವು ಮುಖ್ಯವಾಗಿ ಎಲ್ಲಾ ನ್ಯಾಸಾದಿ ಬ್ರಹ್ಮ ವಿದ್ಯೆಗಳಿಗೂ, ಅಜ್ಞಾನವು ಅವಶ್ಯಕವೆಂಬುದನ್ನು ಖಂಡಿತವಾಗಿಯೂ ಒಪ್ಪುವೆವು ಅದು ಮೋಕ್ಷ ಪ್ರಾಪ್ತಿಗೆ ನೀವು ಹೇಳುವ ಹಾಗೆ ಸಾಕ್ಷಾತ್ ಉಪಾಯವಲ್ಲವು ಪರಂಪರಯಾ ಸಹಾಯವು, ಅದರಿಂದ ತನ್ನ ಸ್ವರೂಪವನ್ನು ತಿಳಿದು, ನಿರತಿಶಯ ಭೋಗ್ಯಭೂತ ನಾದ ಶ್ರೀಯಃ ಪತಿಯೇ ರಕ್ಷಕನೂ ಮತ್ತು ಪ್ರಾಪ್ಯವೂ ಎಂದು ಇದರಿಂದ ಅರಿತ ವನಾಗಿ, ಒಬ್ಬ ಆಚಾರ್ಯನನ್ನು ಆಶ್ರಯಿಸಿ, ಸಾಕ್ಷಾದುಪಾಯವು ಯಾವುದೆಂದು ಕೇಳಿ ತಿಳಿದು, ತಾನು ಶಕ್ತನಾದರೆ ಉಪಾಯವು ತನಗೆ ಬ್ರಹ್ಮ ವಿದ್ಯೆಗಳಲ್ಲಿ ಒಂ ದಾದ ಉಪಾಸನವೂ, ಅಶಕ್ತನಾದರೆ ಪ್ರಪದನವೂ, ಎಂಬ ಜ್ಞಾನವನ್ನು ಹೊಂದಿ, ಅವುಗಳಲ್ಲೊಂದನ್ನು ಅನುಷ್ಠಿಸತಕ್ಕದ್ದು ಎಂಬುದು ಮುಖ್ಯ ತಾತ್ಪರ್ಯವು ಆಗಲಿ ಆ ಉಪಾಯಾನುಷ್ಠಾನಗಳೂ ಜ್ಞಾನರೂಪವಾದುವು ಅಲ್ಲವೋ? ಎಂದರೆ ಹೌದು, ನೀವು ಹೇಳಿದ ಜ್ಞಾನಕ್ಕೂ ಈ ಜ್ಞಾನಕ್ಕೂ ವೈಲಕ್ಷಣ್ಯ ಉಂಟೆಂದು ತಿಳಿಸುವುದ ಕ್ಕಾಗಿ **ಜ್ಞಾನಾಂತರಙ್ಗಳ್** – ಎಂದು ಹೇಳಿದರು. ಇವುಗಳೂ ಜ್ಞಾನರೂಪವಾದು

**ಯಾವದು ? (೧) "ಯತ್ಸಂರಕ್ಷತಯಾರ್ಪ್ಯತೇ" ಇತ್ಯಾದಿ ಗಳಿರ್ ಪಡಿಯೇ ಸಪರಿಕರಮಾನ ರಕ್ಷಾಭರ ಸಮರ್ಪಣಮ್, ಇದು ಸಂಬಂಧಾನು ಸಂಧಾನ ಗರ್ಭಮಾಗವೇಣುಮೆನ್ಗೈಕ್ಕಾಗ ಸಂಬಂಧ ಜ್ಞಾನಮ್ ಪ್ರಪತ್ತಿ ಎನ್ರು** ವುಗಳು ಎಂಬುದಕ್ಕೆ ಉಪಾಯ ವಿಭಾಗಾಧಿಕಾರದ ೮೫೭ ನೆಯ ಪುಟವನ್ನು ಪರಾಂಬರಿಸಿ

ಪೂರ್ವಪಕ್ಷಿಯು ಶೇಷ ಶೇಷಿ ಸಂಬಂಧಜ್ಞಾನವೇ ಪ್ರಪದನವೆಂದು ಭಾವಿಸಿದ್ದರು ಅದು ಸರಿಯಾದ ಅಭಿಪ್ರಾಯವಲ್ಲವೆಂದೂ ಹಾಗೆ ಕೆಲವರಾದ ಪೂರ್ವಾಚಾರ್ಯರೂ ಸಹ ಅಭಿಪ್ರಾಯ ಪಡುವುದಕ್ಕೆ ಕಾರಣವೇನೆಂಬುದನ್ನು **"ಅವತ್ತಿಲ್"** ಎಂದಾರಂಭಿಸಿದ ವಾಕ್ಯದ ಮೂಲಕ ತಿಳಿಸುತ್ತಾರೆ **ಅವತ್ತಿಲ್** - ಉಪಾಯಗಳಾದ ಆಭಕ್ತಿಪ್ರಪತ್ತಿಗಳಲ್ಲಿ, **ಪ್ರಪತ್ತಿಯಾವುದು** - ಪ್ರಪತ್ತಿ ಎಂಬುದು ಯಾವುದು ? ಅದಕ್ಕೆ ಉತ್ತರವನ್ನು ಹೇಳುತ್ತಾರೆ—**"ಯತ್ಸಂರಕ್ಷತಯಾರ್ಪ್ಯತೇ"** "ಯಾವ ನನ್ನ ಆತ್ಮವು ಸಂರಕ್ಷಿಸಲ್ಪಡುಲು ಯೋಗ್ಯವೆಂದು ಪರಮಾತ್ಮನ ಪಾದದಲ್ಲಿ ಸಮರ್ಪಿಸಲ್ಪಡುವದೋ" ಎಂದು ಸಂಹಿತೆಯೇ, **ಇತ್ಯಾದಿಗಳಿರ್ ಪಡಿಯೇ** - ಮೊದಲಾದ ಪ್ರಮಾಗಳಲ್ಲಿ ಹೇಳಿರುವ ಹಾಗೆ, ಆದಿಶಬ್ದದಿಂದ ಶ್ರುತಿಯೂ ಭರತಮುನಿ ಮೊದಲಾದ ಪ್ರಮಾಣಗಳೂ ಬೋಧಿತವು, **ಸಪರಿಕರಮಾನ** ಆನುಕೂಲ್ಯಸ್ಯ ಸಙ್ಕಲ್ಪವೇ ಮೊದಲಾದ ಐದು ಅಂಗಗಳಿಂದ ಕೂಡಿದ, **ರಕ್ಷಾಭರಸಮರ್ಪಣಮ್** - ತನ್ನದಾಗಿ ರಕ್ಷ್ಯವಸ್ತುವಾದ ಈ ಆತ್ಮನ ಸಂರಕ್ಷಣದ ಭರವನ್ನು ಸ್ವಾಮಿಯ ಪಾದದಲ್ಲಿ ಸಮರ್ಪಿಸೋಣವು ಐದು ಅಂಗಗಳಿಂದ ಕೂಡಿದ ಆತ್ಮರಕ್ಷಾಭರಸಮರ್ಪಣವೇ ಪ್ರಪತ್ತಿ ಎಂದು ಹೇಳಿದರು

ಹೀಗಿರುವಾಗ ಪೂರ್ವಾಚಾರ್ಯರುಗಳು ಶೇಷ ಶೇಷಿ ಸಂಬಂಧಜ್ಞಾನವೇ ಪ್ರಪದನವೆಂದು ಹೇಳುವುದರಲ್ಲಿ ಅವರ ಆಶಯವೇನು ? ಎಂದರೆ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ—**ಇದು** - ಈ ಪ್ರಪತ್ತಿ ಎಂಬುವ ಆತ್ಮರಕ್ಷಾಭರಸಮರ್ಪಣವು **ಸಂಬಂಧಾನುಸಂಧಾನ ಗರ್ಭಮಾಗ ವೇಣುಮ್ಮೆನ್ಗೈಕ್ಕಾಕ** - ಶೇಷ ಶೇಷಿ ಸಂಬಂಧದ ಅನುಸಂಧಾನವುಳ್ಳದ್ದಾಗ ಬೇಕೆಂಬುದುಕ್ಕಾಗಿ, ಎಂದರೆ ಈ ಭರಸಮರ್ಪಣೆಗೆ ತಾನು ಶೇಷಭೂತನು ಪರಮಾತ್ಮನೇ ಶೇಷಿಯಾದುದರಿಂದ ಆತನು ತನ್ನ ಪರಮ ವಾತ್ಸಲ್ಯ ಕಾರುಣ್ಯಾದಿಗಳ ಮೂಲಕ ಆ ಭರಸಮರ್ಪಣೆಯನ್ನು ಸ್ವೀಕರಿಸುವನೆಂಬ ಮಹಾವಿಶ್ವಾಸಕ್ಕೆ ಈ ಶೇಷ ಶೇಷೀ ಜ್ಞಾನವು ತುಂಬಾ ಪ್ರಧಾನವಾದುದರಿಂದ ಎಂಬ ಭಾವವು. **ಸಂಬಂಧಜ್ಞಾನವೇ ಪ್ರಪತ್ತಿ, ಎನ್ರು** - ಎಂಬುದಾಗಿ, **ಶೊನ್ನಾರ್‌ಗಳ್ ಅತ್ತನೈ** - ಹೇಳಿದರು ಅಷ್ಟುಮಾತ್ರವೇ ಪ್ರಪತ್ತಿಗೆ ಸಂಬಂಧ

(೧) ಅಹಿಬುಧ್ನಸಂಹಿತೆ, ೫೨ ೩೬.

**ಶೊನ್ನಾರ್ ಗಳ್ ಅತ್ತ ನ್ಯೆ - ಇಬ್ಭ ರ ನ್ಯಾ ಸ ರೂ ಪ ಪ್ರಪತ್ತಿಯಿನ್ ಸ್ವರೂಪ ಪರಿಕರಾದಿಗಳೈ ಮುನ್ಬೇ ಪರಕ್ಕಚ್ಚೊನ್ನೋಮ್.**

**ದ್ವಿತೀಯಪಾದಾರ್ಥಂ ಸ್ತ್ರೀಶೂದ್ರಾದೀನಾಂ ಸುಖಾನುಸಂಧಾನಾಯ ದ್ರಾಮಿಡಗಾಥಯಾ ಸಂಗೃಹ್ಣಾತಿ.**

---

**ಶಾದನಮು ನರ್ಪ್ಪಯನು ನಾನೇಯಾವ‌ರ್, ಶಾತಕನುಮ್ಎವಶಮಾಯೆನ್ನೈ**

ಜ್ಞಾನವು ಪ್ರಧಾನವು ಎಂಬ ಅಭಿಪ್ರಾಯದಿಂದ ಹಾಗೇ ಹೇಳಿದರೇ ವಿನಾ, ಆ ಆಚಾರ್ಯರಗಳು ಏನೂ ತಿಳಿಯದವರಲ್ಲವು ಕರ್ಮಯೋಗವು ಭಕ್ತಿಯೋಗಕ್ಕೆ ಪ್ರಧಾನಾಂಗವಾಗಿರುವದರಿಂದ, ಕರ್ಮಯೋಗವೇ ಮೋಕ್ಷವು ಎನ್ನುವಹಾಗೆ. ಬೀಗರ ಊಟವೇ ಸಕ್ಕರೆ ಎಂದರೆ ಸಕ್ಕರೆಯು ಆ ಊಟಕ್ಕೆ ಪ್ರಧಾನಾಂಗವೆಂಬ ಭಾವವು ಹೇಗೋ ಹಾಗೆ .

ಮುಂದಿನ ವಾಕ್ಯವಾದ "ಇಬ್ಭರನ್ಯಾಸ" ಎಂಬುದರಿಂದ ಈ ಭರನ್ಯಾಸಕ್ಕೆ ಪರಿಕರಗಳಾವವು ಎಂಬುದನ್ನು ಹಿಂದೆಯೇ ಪರಿಕರ ವಿಭಾಗಾಧಿಕಾರ ಮತ್ತು ನಾಜ್ಞಪ್ರಪದನಕಾರದಲ್ಲಿ ವಿಸ್ತರಿಸಿ ಚನ್ನಾಗಿ ಹೇಳಿರುತ್ತೇವೆಂದು ತಿಳಿಸುತ್ತಾರೆ.— **ಈಭ್ಭರನ್ಯಾಸರೂಪವಾದ ಪ್ರಪತ್ತಿಯ, ಸ್ವರೂಪ ಪರಿಕರಾದಿಗಳನ್ನು** ಪರಕ್ಕ-ವಿಸ್ತರಿಸಿ ಚೆನ್ನಾಗಿ ವಿಮರ್ಶಿಸಿ, **ಚೊನ್ನೋಮ್** - ಹೇಳಿರುವೆವು.

**ಚರಮಶ್ಲೋಕ ದ್ವಿತೀಯ ಪಾದಾರ್ಥವು ಎಲ್ಲರಿಗೂ ಚೆನ್ನಾಗಿ ತಿಳಿಯುವುದಕ್ಕಾಗಿ ಒಂದು ಪಾಶುರ ಮೂಲಕ ತಿಳಿಸುತ್ತಾರೆ.**

---

**ಅರ್ಥವು** - ಎರಡನೆಯ ಪಾದವು **ಮಾಮೇಕಂ ಶರಣವ್ರಜ** ವಾಗುದದರಿಂದ, ಈ ನಾಲ್ಕು ಪದಗಳ ಅರ್ಥಗಳನ್ನು ವಿವರಿಸುತ್ತಾರೆ—

(೧) **ಶಾದನಮ್ ನರ್ಪ್ಪಯನು ನಾನೇಯಾವ‌ರ್** - ಶಾದನಮುಮ್ ಎಂದರೆ ಸಾಧನವು ಉಪಾಯಭೂತನು, **ನರ್ಪ್ಪಯನ್** ಎಂದರೆ ಒಳ್ಳೇ, ಉತ್ಕೃಷ್ಟವಾದ ಫಲವೂ, ಉಪೇಯನು, ಪ್ರಾಪ್ಯನು, **ನಾನೇಯಾವ‌ರ್** - ನಾನೇಯಾಗುವೆನು; ನಾನೇ ನಿರಪೇಕ್ಷ ಸಿದ್ಧೋಪಾಯನಾಗಿಯೂ ಇದ್ದುಕೊಂಡು, ನಾಧ್ಯೋಪಾಯವನ್ನುಷ್ಠಿಸುವ ಹಾಗೆ ಮಾಡಿ ನನ್ನಲ್ಲೇ ಸೇರಿಸಿಕ್ಕೊಂಡು ಪರಮಾನಂದವನ್ನೂ ಹೊಂದಿಸುವೆನೆಂಬ ಭಾವವು ಇದರಿಂದ ಹಿಂದೆ ಕಾರಿಕೆಯಲ್ಲಿ ಹೇಳಲ್ಪ **"ಪ್ರಾಪ್ಯಸ್ಯೇವ ಪ್ರಾಪಕತ್ವಮ್"** ಎಂಬರ್ಥವು ಉಪಪಾದಿತವು.

(೨) **"ಶಾತಕನುಮ್ಎವಶಮಾಯ್ಪ್ಪತ್ತುಮ್"** ಶಾತಕನುಮ್ ಎಂದರೆ ಸಾಧಕನುಮ್ **ಪ್ರಪದನಾನುಷ್ಠಾತೃವು, ಎವಶಮಾಯ್** - ನನಗೆ

**ಪ್ಪತ್ತುವುಮ್ । ಶಾದನಮುಮ್ ಶರಣನೆರಿಯುನ್ರುಮುಕ್ಕು, ಚ್ಚಾತನಙ್ಗಳಿನ್ನಿಲೈಕ್ಕೋರಿಡ್ಡೈಯಿನ್ನಿಲ್ಲಾ। ವೇತನೈಶೇರ್ ವೇರಙ್ಗಮಿದನಿಲ್ ವೇಣ್ಡಾ, ವೇರೆಲ್ಲಾ ನಿರ್ಕುಮ್ ನಿಲೈ ನಾನೇ ನಿರ್ಪೆ ತೂತನುಮೂನಾತನುಮಾ ಮೆನ್ನೈಪತ್ತಿ ಚ್ಚೋಕಂತೀರೆನ ಉರೈತ್ತಾರ್ ಶೂಳ್ ಗಿನ್ರಾನೇ**

ಅಧೀನವಾಗಿ, **ಎನ್ನೈಪ್ಪತ್ತುಮ್** - ನನ್ನನ್ನೇ ಸಿದ್ಧೋಪಾಯನನ್ನಾಗಿ ವರಿಸುವನು ; ಶ್ರಿಯಃಪ್ರತಿಯೇ ಇದರಲ್ಲಿ ಪ್ರಧಾನನಾಗಿರುವದರಿಂದ, ತನ್ನ ಪ್ರಾಧಾನ್ಯವೇನೂ ಇಲ್ಲವೆಂಬ ಅನುಸಂಧಾನವು ಬೋಧಿತವು ಇದರಿಂದ **"ಸ್ವಪ್ರಾಧಾನ್ಯ ನಿವಾರಣವು"** ಹೇಳಲ್ಪಟ್ಟಿತು

(೩) **ಶಾದನಮುಮ್ ಶರಣನೆರಿಯುನ್ರುಮುಕ್ಕು** - ಶರಣನೆರಿ ಎಂದರೆ ಶರಣಾಗತಿ ಮಾರ್ಗವೂ, **ಉಮುಕ್ಕು** - ನಿಮಗೆ, **ಶಾತನಂ** - ಸಾಧನವು, **ಅನ್ರು** - ಅಲ್ಲವು, ಶರಣಾಗತಿಯೇ ನಿಮಗೆ ಸಾಕ್ಷಾತ್ತಾಗಿ ಫಲವನ್ನು ಕೊಡುವ ಶಕ್ತಿಯಿಲ್ಲವಾದುದುರಿಂದ ಸರಿಯಾಗಿ ನೋಡಿದರೆ ಅದು ಪ್ರಧಾನ ಸಾಧನವಲ್ಲವು , ವ್ಯಾಜಮಾತ್ರವೇ ಎಂಬ ಭಾವವು ಇದರಿಂದ ಪ್ರಪತ್ತೇರ್ವ್ಯಾಜ ಮಾತ್ರತ್ವಮ್" ಎಂಬ **ಮಾನೋಕಂ** ಎಂಬುದರ ಮೂರನೆಯ ಅರ್ಥವು ಹೇಳಲ್ಪಟ್ಟಿತು

(೪) **ಶಾದನಙ್ಗಳ್ ಇನಿಲೈಕ್ಕು ಓರ್ ಇಡ್ಡೈಯಿಲ್ ನಿಲ್ಲಾ** - ಶಾದನಙ್ಗಳ್ ಎಂದರೆ ಭಕ್ತಿಯೋಗವೇ ಮೊದಲಾದ ಸಾಧನಗಳು, **ಇನ್ನಿಲೈಯುಕ್ಕು** - ಈ ಭರನ್ಯಾಸದ ಸ್ಥಿತಿಗೆ, ಓರ್-ಯಾವುದೊಂದು, **ಇಡ್ಡೈಯಲ್** - ಮಧ್ಯದಲ್ಲಿ ಸಹಕಾರಿ ರೂಪದಲ್ಲಿ, **ನಿಲ್ಲಾ** - ಇರುವದಿಲ್ಲವು ಇದರಿಂದ **"ಅನ್ಯೋಪಾಯೈರನನ್ವಯಃ"** ಎಂದು ಹಿಂದೆ ಹೇಳಿದುದು ಸಙ್ಗ್ರಹಿಸಲ್ಪಟ್ಟಿತು

(೫) **ವೇದನೈಶೇರ್ ವೇರಙ್ಗಮಿದನಿಲ್ ವೇಂಡಾ** - ವೇದನೈಶೇರ್ - ದುಃಖಸಾಧ್ಯಗಳಾದ, **ವೇರಙ್ಗಮ್** - ಬೇರೆ ಅಂಗವು, **ಇದನಿಲ್ ವೇಂಡಾ** - ಈ ಭರನ್ಯಾಸಕ್ಕೆ ಬೇಕಾಗಿಲ್ಲವು ಭರನ್ಯಾಸಕ್ಕೆ ಬೇಕಾದ ಐದು ಅಂಗಗಳ ಹೊರತು ಇನ್ನು ಕಷ್ಟಸಾಧ್ಯ ಯಾವುವೂ ಅಂಗವಾಗಿ ಬೇಕಾಗಿಲ್ಲವೆಂಬ ಭಾವವು **"ತದಂಗೈರಷ್ಯಸಂಬಂಧಃ"** ಎಂಬರ್ಥವು ಇದರಿಂದ ಹೇಳಲ್ಪಟ್ಟಿತು ಸಾರ ವಿವರಣೆಯವರು **ವೇದನೈಶೇರ್** ಎಂದರೆ ವೇದನಯುಕ್ತವಾದ, ಉಪಾಸನಕ್ಕೆ ಅಂಗವಾಗಿರುವ ಕರ್ಮಯೋಗಗತಿ ಚಿಂತನಾದಿಗಳೆಂದು ಅರ್ಥಮಾಡಿರುತ್ತಾರೆ

(೬) **ವೇರೆಲ್ಲಾ ನಿರ್ಕುಮ್ ನಿಲೈ ನಾನೇನಿರ್ಪೆ** - ವೇರೆಲ್ಲಾಮ್ ಎಂದರೆ ಭರನ್ಯಾಸವಲ್ಲದ ಇತರ ಸಾಧನಗಳು ಎಲ್ಲವೂ, ಯಾವ ಯಾವ ಫಲಗಳಿಗೆ ಸಾಧನವಾಗಿ ಯಾವುವು ಇವೆಯೋ ಅವೆಲ್ಲವೂ, **ನಿರ್ಕುಮ್ ನಿಲೈ** - ಇರುವ ಪ್ರಕಾರವು. **ನಾನೇನಿರ್ಪೆ** - ನಾನೇಯಾಗಿ ಇರುವೆನು ; ಭರನ್ಯಾಸದಿಂದ ವಶೀಕೃತನಾದ

ನಾನೇ, ಆ ಆ ಫಲ ಸಾಧನಗಳ ಸ್ಥಾನದಲ್ಲಿ ನಾನೇ ನಿಂತು ಅವುಗಳು ಕೊಡುವ ಫಲವನ್ನೆಲ್ಲಾ ನಾನೇ ಕೊಡುವೆನು, ಇದರಿಂದ **"ಸರ್ವಸಾಧ್ಯೇಷ್ವಭಿನ್ನತಾ"** ಎಂಬ ಅರ್ಥವು ಹೇಳಲ್ಪಟ್ಟಿತು

**ತೂತನುಮಾ ಸಾತನುಮಾಮ್ ಎನ್ನೈಪ್ಪತ್ತಿ** - ಭಕ್ತರ ವಿಷಯದಲ್ಲಿ **ತೂತನನಾಯ್** - ದೂತನಾಗಿಯೂ, ದುರ್ಯೋಧನನ ಸಭೆಗೆ ಪಾಂಡವರಿಗೆ ಅವರ ರಾಜ್ಯಪ್ರಾರ್ಥನೆಗಾಗಿ ದೂತನಾಗಿ ಹೋಗಿದ್ದುದನ್ನು ಬೋಧಿಸುತ್ತದೆ ಇಲ್ಲಿ ದೂತನೆಂದು ಹೇಳಿದುದು, ಅವರಿಗೆ ಸಾರಥಿಯಾಗಿ ಇದ್ದುದಕ್ಕೂ ಉಪ ಲಕ್ಷಣವು ; ಅದೂ ದೌತ್ಯವೇ , **ಸಾತನುಮಾಮ್** - ಸರ್ವಸ್ವಾಮಿಯೂ ಶೇಷಿಯೂ ಆಗಿರುವ, **ಎನ್ನೈಪ್ಪತ್ತ್** - ನನ್ನನ್ನು ಆಶ್ರಯಿಸಿ, (ಇದರಿಂದ **ಮಾಂ** ಎಂಬ ಶಬ್ದಾರ್ಥವು ಬೋಧಿತವು)

**ಶೋಕಂ ತೀರೆನ** - ಅರ್ಜುನನಿಗೆ, ಇದ್ದ ಪಾಪಗಳು ಹೋಗುವ ಬಗೆ ಹೇಗೆ ? ಉಪಾಸನ ಮಾಡಲು ಶಕ್ತಿ ಇಲ್ಲವಲ್ಲಾ ಎಂಬ ಶೋಕವು ಹೋಗುವ ಹಾಗೆ, ಇತರರಿಗೆ ಅನ್ವಯಿಸುವಾಗ ಅವರವರಿಗೆ ಇದ್ದ ಶೋಕವು ಹೋಗುವ ಹಾಗೆ, **ಮಾಶುಚಃ** ಎಂಬುದರ ಅರ್ಥವು, **ಉರೈತ್ತಾ್ನ** - ಉಪದೇಶಿಸಿದ ಲೀಲಾ ಸಾರಥಿ ಶ್ರೀ ಕೃಷ್ಣನು, **ಶೂಳ್ ಗಿನ್ರಾನೇ** - ತಾನೇ ತನ್ನ ಕೈಂಕರ್ಯಕ್ಕಾಗಿ ಸ್ವೀಕರಿ ಸುವನು ಎಂಬರ್ಥವು ತಾನೇ ತನ್ನ ಪ್ರಯೋಜನಕ್ಕಾಗಿ ನಮ್ಮನ್ನು ರಕ್ಷಿಸುವನು ಎಂಬರ್ಥವು **ಶೂಳ್ ಗಿನ್ರಾನೇ** ಎಂಬ ಪ್ರಯೋಗವು **ಶೂಳ್ ದಗಿನ್ರು** ಎಂಬ ತಿರುವಾಯ್ ಮೊಳಿಶಾತ್ತುಮುರೈಪಾಶುರವನ್ನೂ ಸೂಚಿಸುತ್ತದೆ ಶೂಳ್ದು ಎಂಬು ದರಿಂದ ವ್ಯಾಪನೆಯು ಹೇಳಲ್ಪಟ್ಟಿತು ಪರಮಪದ ಸಾಯುಜ್ಯವು ಇದರಿಂದ ಬೋಧಿತವು ಮಹಾಪ್ರಾಜ್ಞರಾದ ವ್ಯಾಖ್ಯಾತೃಗಳು **"ಅಂಕೇ ಭರತಮಾ ರೋಪ್ಯ ಮುದಿತಃ ಪರಿಷಸ್ವಜೇ"** ಎಂದರೆ ಶ್ರೀರಾಮನು ಭರತಾಳ್ವಾರನ್ನು ತೊಡೆಯಲ್ಲಿ ಕೂಡಿಸಿಕೊಂಡು ಸಂತೋಷಚಿತ್ತನ ಗಿ ಆತನನ್ನು ಆಲಂಗಿಸಿದನು ಎಂಬುದನ್ನು ಈ ಸಂದರ್ಭದಲ್ಲಿ ಉದಾಹರಿಸಿರುತ್ತಾರೆ. ಇದೇ ಸಾಯುಜ್ಯವು.